START

START

ROLLNO 168

MICROFILMED BY

KARNATAKA STATE

ARCHIVES

1983

"ವಿಜಯ"

ದಿನ ಪತ್ರಿಕೆ

1922 ರಿಂದ 1935

ಕಡತಗ ಸಂಖ್ಯೆ

ಎಚ್ಆರ್ಎಸ್ 75 ಎಪಿಪಿ 82

ನೋಟೀಸು

ಮ|| ರಾ|| ರಾ|| ನಾಗಪ್ಪಾ ಬಿನ್ನ ಹೊನ್ನಪ್ಪಾ ಅಂಬ್ಲಿಯವರು ಜಾತಿ ಕುಂಬರ ಸಾ|| ರಂಗೋಲಿ ಸ್ಟೂರ ಇವರಿಗೆ-

ಕೆಳಗೆ ಸಹಿ ಮಾಡಿದವರ ಕಡೆಯಿಂದಾ ಈ ನೋಟೀಸಿನ ಮೂಲಕ ತಿಳಿಸುವದೇನಂದರೆ- ಈಗ ೨-೩ ವರ್ಷದ ಕೆಳಗೆ ನಿಮ್ಮ ಖಾಸ ಮಗಳು ಲಕ್ಷ್ಮವ್ವಾ ಎಂಬವಳನ್ನು ನನ್ನ ಖಾಸ ಮಗ [illegible] ಎಂಬವನಿಗೆ ಕೊಡುವದು ನಿಶ್ಚಯ ಮಾಡಿ ನಮ್ಮ ಜಾತಿ ರಿವಾಜ ಪ್ರಕಾರ ನಮ್ಮ ದೈವಕ್ಕೆಲ್ಲಾ ಆಮಂತ್ರಣ ಕೊಟ್ಟು ಅವರ ಸಮಕ್ಷಮ ಮತ್ತು ನಿಮ್ಮ ಊರ ಬುದ್ಧಿವಂತರ ಮತ್ತು ನಮ್ಮ ಊರ ಬುದ್ಧಿವಂತರ ಸಮಕ್ಷಮ ಹಸರು ವೀಳ್ಯೆಯ ಕಾರಣವನ್ನು ನೆರವೇರಿಸಿ ಎಲ್ಲರ ವಿದ್ಯಮಾನ ನಿಮ್ಮ ಚಿ|| ಲಕ್ಷ್ಮವ್ವನಿಗೆ ಹಾಕಿದ ಆಭರಣಗಳ ವಿವರ- ಭಂಗಾರ ಬಳೆಜೋಡು ೧ ತೊಲಿ ೫ ವರಿ ಜೊಕ್ಕ ಮತ್ತು ಭಂಗಾರದ ಸರಿಗಿ ೧ ತೊಲಿ ೮|| ಜೊಕ್ಕ, ಭಂಗಾರದ ಉಂಗುರದ ಟೀಕಿ ೧ ತೊಲಿ ೩|| ಇಕ್ಕೇರಿ ಬೆಂಡವಾಲಿ ಜೋಡು ೧ ಭಂಗಾರದವು ತೊಲಿ || ವರಿ ಇಕ್ಕೇರಿ ಬೆಳ್ಳಿಯ ಪಟ್ಟಿ [illegible] ಜೋಡು ೧ ತೊಲಿ ೪೦ ಬೆಳ್ಳಿಯ ಬಂದಿ ೩ ತೊಲಿ ಅಜಮಾಸ ೩೦ ನಡುವಿನ ಡಾಬು ಬೆಳ್ಳಿಯದು ೧ ಅಜಮಾಸ ೧೩ ತೊಲಿ ಬೆಳ್ಳಿಯ ಪಾಟಂಗ ಜೋಡು ೧ ಅಜಮಾಸ ತೊಲಿ ೧೭ ಮತ್ತು ಕಾರಣದ ಸಲುವಾಗಿ ತಂದ ಪಟ್ಟೆ ೧ ಮೊಳ ೧೪ ಕಿಮ್ಮತ್ತು ೧೦ ರೂಪಾಯಿ ೨ ಖಣ್ಣಗಳು ಕಿ|| ೩ ರೂಪಾಯಿ ಈ ಪ್ರಕಾರ ಆಭರಣಗಳನ್ನು ನಮ್ಮ ಊರ ವ ನಿಮ್ಮ ಊರ ದೈವದ ವಿದ್ಯಮಾನ ನಿಮ್ಮ ಮಗಳಿಗೆ ತೊಡಿಸಿ ಕಾರಣವನ್ನು ಸಾಂಗಗೊಳಿಸಿದ್ದು ಅಂದಿನಿಂದ ನಮ್ಮ ನಿಮ್ಮ ಸಂಬಂಧವು ಸರಿಯಾಗಿ ಪರಸ್ಪರ ಹಿತಾಪೇಕ್ಷೆಯಿಂದ ಬರುತ್ತ ಇಂತು ಆದರೆ ನಾವು ಈಗ ಅಜಮಾಸ ೨ ತಿಂಗಳ ಕೆಳಗೆ ಈ ವರ್ಷ ನಮಗೆ ಲಗ್ನ ಮಾಡಿ ಕೊಡಿರೆಂದು ಕೇಳಿದ್ದಕ್ಕೆ ನೀವು ಹೇಳಿದ್ದೇನಂದರೆ ಈಗ ಮನಿಯಲ್ಲಿ ಅನಾನುಕೂಲತೆ ಇರುವ ಕಾಲಕ್ಕ ಮುಂದಿನ ಕಾರ್ತಿಕ ಮಾಸಕ್ಕೆ ಮಾಡಿಕೊಡುತ್ತೇವ ಅಂತಾ ಹೇಳಿದಿರಿ ನಿಮ್ಮ ಅಡಚಣೆಯು ಯೋಗ್ಯ[illegible] ಕಂಡುಬಂದದ್ದರಿಂದಾ ನಾವಾದರೂ ಹಾಗೇ ಆಗಲಿ ಅಂತಾ ಹೇಳಿದೆವು ಆದರೆ ಈಗ ನೀವು ನಮ್ಮ ಕನ್ಯೆಯನ್ನು ಎರಡನೇ ಕಡಿಗೆ ಕೊಡುವ ಹಂಚಿಕೆಯಲ್ಲಿ ಇದ್ದೀರಿ ಅಂತಾ ನಮಗೆ ತಿಳಿದು ಬಂದಿದೆ ಕಾರಣವೇನೋ ನಮಗೆ ತಿಳಿಯದು ಒಮ್ಮೆ ನಿಶ್ಚಯ ಮಾಡಿ ಹಸರು ವೀಳ್ಯೆಯ ಕಾರಣವನ್ನು ತೀರಿಸಿ ಮೇಲ್ಕಂಡ ದಾಗೀನೆಗಳನ್ನು ಹಾಕಿಸಿಕೊಂಡು ಈಗ ೨-೩ ವರ್ಷ ನಡೆಕೊಂಡು ಈ ಕನ್ಯೆಯನ್ನು ಎರಡನೇ ಕಡಿಗೆ ಕೊಡುವದೆಂದರೆ ನಮ್ಮ ಜಾತಿ ರಿವಾಜ ವಿರುದ್ಧ ನಡೆದಂತಾಗುವದಲ್ಲದೆ ನಮ್ಮ ಅಪಮಾನವು ಮಾಡಿದಂತಾಗುವದು ಆದ ಕಾರಣ ಈ ನೋಟೀಸು ಮುಟ್ಟಿದ ೮ ದಿವಸದೊಳಗಾಗಿಯೇ ನಮ್ಮಲ್ಲಿಗೆ ಬಂದು ನಿಮ್ಮ ಮನಸ್ಸಿದ್ದರೆ ಲಗ್ನ ಮಾಡಿಕೊಡಬೇಕು ಇಲ್ಲವೆ ಏನೆಂಬದರ ಬಗ್ಗೆ ಬುದ್ಧಿವಂತರ ವ ದೈವದವರ ಸಮಕ್ಷಮ ಪೂರ್ಣ ನಿಕಾಲಿ ಮಾಡಿಕೊಂಡು ಹೋಗುವವರೆಗೆ ಕನ್ಯೆಯನ್ನು ಎರಡನೇ ಕಡಿಗೆ ಕೊಡಲಿಕ್ಕೆ ಧರ್ಮದೃಷ್ಟಿಯಿಂದಲೂ ವ ವ್ಯಾವಹಾರಿಕ ದೃಷ್ಟಿಯಿಂದಲೂ ಬರುವಂತೆ ಇಲ್ಲ ಯಾವದೆಂಬುವದಕ್ಕಾ ತೀವ್ರ ನೋಟೀಸು ಮುದ್ದತಿನ ಒಳಗಾಗಿಯೇ ಬಂದು ತೀರಿಸಿಕೊಂಡು ಹೋಗಬೇಕು ಜರ ನೀವು ಬಾರದಿದ್ದರೆ ಅಪಮಾನ ಮಾಡಿದ ಬಗ್ಗೆ ವ ನಮ್ಮ ಆಭರಣಗಳ ಬಗ್ಗೆ ಮತ್ತು ಕಾರಣತ್ವಾಗಿ ಆದ ಖರ್ಚಿನ ಬಗ್ಗೆ ನಿಮ್ಮ ಮೇಲೆ ಸೂಕ್ತ ಪ್ರಕಾರ ಕೊರ್ಟಿನಲ್ಲಿ ದಾವಾ ಮಾಡುವದಲ್ಲಿ ಬರುವದು ತಿಳಿಯುವದು ಈ ನೋಟೀಸಿನ ಖರ್ಚು ನಿಮ್ಮ ತಲೆಯ ಮೇಲೆ ಆದೆ ತಾ|| ೩[illegible]-೭-[illegible] ನೇ ಇಸ್ವಿ

ಭೀಮಪ್ಪಾ ಬಿನ್ನ ಹನಮಂತಪ್ಪ ಆಮಾತಿ ಸಾಕೀನ ಮಾಗೋಡ ಹುಬ್ಬೇರಿ

ಶ್ರೀ ಮೃಣಿಕಪ್ರಭು ಪ್ರಸಾದಿತ

ಗಾಯನ ವಾದನ ವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಗಾಯನ, ಹಾರ್ಮೋನಿಯಮ್, ತಬಲಾ, ಸತಾರ ವಗೈರೆ ಸಶಾಸ್ತ್ರ ರೀತಿಯಿಂದ ಕಲಿಸಲ್ಪಡುವದು.

ಈ ವಿದ್ಯಾಲಯವನ್ನು ಕೇವಲ ಸಂಗೀತ ಪ್ರಿಯರ ಸಲುವಾಗಿ ವ್ಯವಸ್ಥೆ ಮಾಡಿರುತ್ತೇವೆ ಕಾರಣ ಯಾವತ್ತು ಸಂಗೀತ ಪ್ರಿಯರು ಈ ಒಳ್ಳೆ ಸಂಧಿಯನ್ನು ಕಳೆದುಕೊಳ್ಳಬಾರದು. ವಿಶೇಷ ಮಾಹಿತಿಯ ಸಲುವಾಗಿ ಸಮಕ್ಷಮ ಭೆಟ್ಟಿಯಾಗಬೇಕು

ಪತ್ತೆ
ಶ್ರೀ ಮೃ ಪ್ರ ಪ್ರ
ಗಾಯನ ವಾದನ ವಿದ್ಯಾಲಯ
ಗಾಂಧಿಚೌಕ ಕೊಲ್ಹಾಪೂರಕರ ಸ್ಟೇಶನರಿ ಅಂಗಡಿ
ಎದುರಿಗೆ ಕಾಮನಕಟ್ಟಿಗಲ್ಲಿ, ಧಾರವಾಡ.

[illegible]
ಪ್ರಿನ್ಸಿಪಾಲ,
ಲಕ್ಷ್ಮಣಸಿಂಗ ಗವಾಯಿ,
ಮಾರ್ತಿಕಪೂರ.

ನೋಟೀಸು

ಫಕೀರಾ ತಂದಿ ಭರಮಪ್ಪಾ ಭೋಯಿಯವರ ಸಾಕೀನ ನವಲೂರ ಭೋಯಿಗಲ್ಲಿ ಈತನಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತು ಮಾಡುವ ಭೀಮವ್ವಾ ಕೋಮ ಫಕೀರಾ ಭೋಯಿಯವರ ಹಾಲಿವಸ್ತಿ ಲಕ್ಷ್ಮೇಶ್ವರ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಋತುಕಿಯ ಗಂಡನಾಗಬೇಕು ನನ್ನ ಕೂಡ ನೆರೆದು ಸುಮಾರು ನಾಲ್ಕು ವರ್ಷ [illegible] ಮಾಡಿ ಅನಂತರ ಕೆಟ್ಟ ಹಾದಿಗೆ ಬಿದ್ದು [illegible] ಕೇಳದೆ [illegible] ತಿಂಗಳು ಗರ್ಭ [illegible] ಹಾಕಿದಿ ಅಲ್ಲಿಂದ ತವರು ಮನಿಗೆ ಬಂದೆನು ಅವರು ಬಡವರಿದ್ದುದರಿಂದ ನಾನು ಕೂಲಿ ಮಾಡಿ ಜೀವನ [illegible] ಮಾಡಿಸಿಕೊಂಡೆನು. ಹೆಣ್ಣು ಕೂಸು ಹುಟ್ಟಿದ ಈಗ ಒಂದು ವರ್ಷದ್ದಾಗಿದೆ ಈ ದೇಮವ್ವಾನ ನಿನಗೆ ಅನೇಕ ಸಾರೆ ಹೇಳಿ ಕಳಿಸಿದರೂ, ನೀನು ಬಂದು ಕರಕೊಂಡು ಹೋಗಲಿಲ್ಲ ನನಗಾದ ಸಾಲವನ್ನೂ ತೀರಿಸಲಿಲ್ಲ ಆದ್ದರಿಂದ ನಿರುಪಾಯವಾಗಿ ಈ ನೋಟೀಸು ಕೊಡುವ ಅಗತ್ಯವಾಯಿತು ನೀನು ಮನೆಬಿಟ್ಟು ಹೊರಗೆ ಹಾಕುವಾಗ ನನ್ನ ಮೈಮೇಲಿನ ಬಾಳವತ್ತು ದಾಗೀನೆ ಕಸಕೊಂಡಿ ಈಗ ಆ ದಾಗೀನೆ ಮತ್ತು ನನ್ನ ಹೊಟ್ಟೆ ಹಾಗು ಕೂಸಿನ [illegible] ರಕಮು [illegible] ರೂಪಾಯಿ ಕೊಟ್ಟು [illegible] ನನ್ನನ್ನು ಕರಕೊಂಡು ಹೋಗಿ ಸರಳಿತ ರೀತಿಯಿಂದ ಬಾಳಿಸಬೇಕು [illegible] ತಪ್ಪಿದರೆ ನಾನು ಎರಡನೆಯವನನ್ನು ಉಡಿಕೆ ಮಾಡಿಕೊಳ್ಳುವೆನು ಅನಂತರ ನಿನ್ನ ಒತ್ತ ನನ್ನ ಮೇಲೆ ಮತ್ತು ನನ್ನ ಉಡಿಕೆ ಗಂಡನ ಮೇಲೆ ಬಿಲಕೂಲ ನಡಿಯಲಾರದು ಮತ್ತು ಕೂಸಿನ ಮೇಲೂ ನಿನ್ನ ಹಕ್ಕು ಉಳಿಯಲಾರದು ಮತ್ತು ಈಗಾದ ಸಾಲ ಮತ್ತು ಈ ನೋಟೀಸಿನ ಖರ್ಚಿನ ಬಾಬತು ನಿನ್ನ ಮೇಲೆ ಆದೆ ಕಾಯದೆ ಪ್ರಕಾರ ಇಲಾಜ ಮಾಡುವೆನು ಅಂತಾ ಕೊಟ್ಟ ನೋಟೀಸಪತ್ರದ ನೋಟೀಸು ತಿಳಿಯುವದು

ತಾ|| ೨೯-೭-೧೯೩೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಭೀಮವ್ವಾ ಕೋಮ ಫಕೀರಾ ಭೋಯಿಯವರ ಹಾಲಿವಸ್ತಿ ಲಕ್ಷ್ಮೇಶ್ವರ ಇವಳದು ಇರುತ್ತದೆ

ಈ ಪತ್ರವನ್ನು [illegible] ಇವರು ಧಾರವಾಡದಲ್ಲಿರುವ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಸೋಮವಾರ ತಾರೀಖು ೧ನೇ ಆಗಸ್ಟ ೧೯೨೭ (ಸಂಚಿಕೆ ೧೭೬

ಕಿರ್ಲೋಸ್ಕರರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅದು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಕಸು ಗಳುಂಟು. ಗಾಲಿಯ ವ್ಯಾಸವು ೪೭ ಇಂಚು ಇರುತ್ತದೆ. ಆದ್ದರಿಂದ ಜಾಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರವಾಗಿ ಒಯ್ಯುತ್ತದೆ. ಇದಕ್ಕೆ ನೀರಿನ ಕೊರ ತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರಬೇಕಾದವರಿಗೆ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೩೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ ಸಾತಾರಾ

ದಿ ಧಾರವಾಡ ಅರ್ಬನ ಕೋ.

ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ವಿಠಂಗೇಶನಾರಾಯಣ ಧಾರವಾಡ.

ಈ ಬ್ಯಾಂಕಿನ ಶ್ರೀಮತಿ ಸೊಸಾಯಟಿಯ ಅನ್ನು

ಪ್ರಕಾರ ... ಪಡಲ್ಪಟ್ಟಿದೆ.

ಕೋಆಪರೇಟಿವ್ಹ ಬ್ಯಾಂಕಿನ ವ್ಯವಹಾರದಲ್ಲಿ

... ...

... ...

... ...

... ...

... ...

... ...

...

... ಜಿ. ...

... ...

ನೋಟೀಸು.

— ೧ —

ಹುಸೇನಸಾಬ ಹವಾಲದಾರಸಾಹೇಬ ಸಾ

ನ ಬಾಡ ಹಾಲಿವಸ್ತಿ ನಾರಾಯಣಪುರ

ಶ ಬಂಕಾಪುರ ಇವರಿಗೆ-

ಕೆಳಗೆ ಸಹಿ ಮಾಡಿದವಳ

ಈ ನೋಟೀಸ ದ್ವಾರ ತಿಳಿಸುವದು.

ನೀನು ನನ್ನ ತಾಯಿಗೆ ಅಪ್ಪಾ ಸೇವೆಸವಡ್ಡು ಲಕ ಮತ್ತು ನೀನು ಸ್ವಂತ ಖರ್ಚಿನಿಂದಾ ಲ... ಮಾಡಿಕೊಳ್ಳುವ ಯೋಗ್ಯತಾ ಇಲ್ಲದ್ದರಿಂದಾ ನಿ ನ್ನ ಅಕ್ಕನ ಗಂಡನಾದ ಫಕೀರಸಾಬನ ಮಧ್ಯಸ್ತಿ ಗಿಯಿಂದ ನನ್ನು ತಾಯಿಗೆ ಬಹಳೇ ಥಡೆ ಹಾಕಿ ಮನಿ ಅಳಿಯತನಕ್ಕ ನಿಂಮ ಹತ್ತರ ಇರುತ್ತೇನೆ ನಿಮ್ಮ ಆಜ್ಞೆ ಪ್ರಕಾರಾ ನಡಿಯುತ್ತೇನೆಂತಾ ಪಗ್ಗರ ಕರಾರ ಮಾಡಿ ಇದ್ದ ವೇಳೆಗೆ ನನ್ನ ತಾಯಿ ಯು ತನ್ನ ಸ್ವಂತ ಖರ್ಚಿನಿಂದಾ ನನ್ನನ್ನು ನಿನಗೆ ಕೊಟ್ಟು ಲಗ್ನ ಮಾಡಿಕೊಟ್ಟಳು ನೀನಾದರೂ ವಂ ದು ವರ್ಷದ ವರೆಗೆ ನನ್ನ ಕೂಡ ...

...ಯಿಂದ ಬಾಳ್ವೆ ಮಾಡಿ

...ತಸಿದ ದುರ್ನಡತೆ ಸೇ

...ರಾಂಡಬಾಜಿ ಮಾಡ...

...ಸ ವಿನಹಾ ಕಾರಣಾ

...ಡದು ಒಹಳೇ

...ಸ್ಣ ಸಹಾ ಕೆ

...ರ ನಮ್ಮ ಗ್ಯ...

...ಳಸಿದರೂ ಸಹ

...ಲಗ್ನ ಕಾಲಕ್ಕೆ

...ನೆಗಳು ಕಸಕೊ

...ನಾನು ಸೇ

...ದ್ದ ಮಾಲ

...ಡೇಗ ವ

...ಮಾತ

...ಪತ್ಯವಾ

...ವಂದು ಪೈ

...ದಕ್ಕೆ

...ನಿ

...ಸ್ತ ಮಾ...

...ಹಕ್ಕು ನನ್ನ

...ಸಹಾ ಯ

...ತಿಳಿಯುವದು.

... ಬಿ ...

ಹುಸೇನಸಾಬ ಹವಾಲದಾರರ ಸಾಕೆ

ದ ತಾ. ಹಾನ... ಇತ ... ...

ವಿಜಯ.

ಧಾರವಾಡ ತಾ-೧ ೮-೨೭ ನೇ ಇಸ್ವಿ

ಅಹಮದಾಬಾದಿನಲ್ಲಿ ಹಾಹಾಕಾರ.

ಎರಡು ಸಾವಿರ ಮನೆಗಳು ಬಿದ್ದವು.

ಹಾನಿಯು.

ನಿರಾಶ್ರಿತರಾದರು.

...ಮಯವಾಯಿತು.

ಮೇಘರಾಜನೇ
ಸಹ ಆಗದಂ
ದೀಪಿನಿಂದ ತಿಲ
. ಇಂಜು ಮಳೆ
...ಸುಗಳಲ್ಲಿ ...
ಕೊಳೆಯು ಪ
ಹಾಹಾಕಾರ
ಮನೆಗಳು
...ಷ್ಟು ಬಿ
...ಳೆ ನಿಂ
...ನಿಯು ಹ
...ಲ್ಲಲಿಕ್ಕೆ
...ಂತ

ದು ವೃಷಭ...
...ಹರಂತೆ
...ಳ್ಳಿ ಹ್ವದ
...ದೇವರೇ-
... ಮಹಾ...

ದು ಜನರು ಸಾಬರಮತಿಯು ಪೂಜೆ ಮಾಡಿ, ಫಲ ಪುಷ್ಪ ಸಮರ್ಪಣ ಮಾಡುತ್ತಿದ್ದಾರೆ.

ಬಡೋದೆಯ ದುರ್ದಶೆಯು-

ಬಡೋದೆಯಲ್ಲಿ ಮೇಘರಾಜನ ಕೋಪವು ಹದಿನೈದು ದಿವಸಗಳ ಹಿಂದೆಯೇ ಆಗಿತ್ತು. ಆ ಕೋಪವು ಮುಗಳಿಸಿರುತ್ತದೆ. ಪಟ್ಟಣಕ್ಕೆ ನೀರನ್ನು ಪೂರೈಸುವ ನಳದ ಕೆರೆಗೆ ನದಿಯು ಕಾಲುವೆ ತ ದಿದ್ದಾರೆ. ಈ ಕಾಲುವೆಯಿಂದ ಕೆರೆಯು ತುಂಬಿ ಒಡೆದು, ನೀರು ಪಟ್ಟಣವನ್ನು ಸುತ್ತುಹಾಕಿದೆ. ಊರ ಸುತ್ತಲು ಒಂದೊಂದು ಕಡೆಗೆ ಹತ್ತತ್ತು ಫೂಟು ಎತ್ತರ ನೀರು ನಿಂತದೆ ಎಲ್ಲ ವ್ಯವಹಾರ ಬಂದಾಗಿದೆಂದು ಹೇಳಲಿಕ್ಕೆ ಬೇಡ. ಭಯಂಕರವಾದ ಪ್ರಾಣಹಾನಿಯಾಗಿದೆಂದು ವರ್ತಮಾನವಾಗಿದೆ ತಾರಿನ ವ್ಯವಹಾರವು ಕಟ್ಟಾದ್ದರಿಂದ ನಿಜಸ್ಥಿತಿಯು ತಿಳಿಯುವದು ಕಠಿಣವಾಗಿದೆ. ದೋಹಾದದಲ್ಲಿಯೂ ಕರೆಯು ಒಡೆ ಒಡೆದು ಹಾಹಾಕಾರವಾಗಿದೆ

ಐವತ್ತು ಸಾವಿರ ಜನರು ನಿರಾಶ್ರಿತರಾದರು.

[—[o] —]

ಅಹಮದಾಬಾದಿನಿಂದ ನಿನ್ನೆ ಸಾಯಂಕಾಲದಲ್ಲಿ ಬಂದ ಸುದ್ದಿಯು ಮುಂದೆ ಕೊಟ್ಟಂತಿರುತ್ತದೆ.

೧ ಮನೆಯು ಬೀಳದಂಥ ಒಂದೂ ಬೀದಿಯಿಲ್ಲ. ಶ್ರೀಮಂತರ ಮನೆಗಳೂ ಭೂದೇವಿಗೆ ಉದ್ದಕ್ಕೆ ನಮಸ್ಕಾರ ಹಾಕಿವೆ.

೨ ಗಿರಣಿಗಳಿರುವ ಭಾಗದಲ್ಲಿ ಗಿರಣಿಗಳ ಕೂಲಿಕಾರರು ವಾಸವಾಗಿರುವ ಮನೆಗಳು ಬಹು ಶೀಘ್ರವಾಗಿ ಮಣ್ಣಿನವಿದ್ದು, ಅವೆಲ್ಲ ಉಸ್ತರಿಸಿ ಹೋಗಿವೆ ಮನೆಗಳ ಕೂಡ ಇವರ ಪಾತ್ರೆಗಳು, ಹಾಸಿಗೆಗಳು ತುಸುಮಟ್ಟಿದ್ದ ಒಡವೆಗಳೆಲ್ಲ ಪ್ರವಾಹದಗುಂಟ ತೇಲಿ ಹೋಗಿವೆ. ಇವರಿಗೆ ನಿಲ್ಲಲಿಕ್ಕೆ ಸ್ಥಳವಿಲ್ಲ, ಅಡಿಗೆ ಮಾಡಿಕೊಳ್ಳಲಿಕ್ಕೆ ಪಾತ್ರೆಯಿಲ್ಲ ಚಳಿಮಳೆಯಿಂದ ಆಚ್ಛಾದನ ಮಾಡಿಕೊಳ್ಳುವ ಬಟ್ಟೆಗಳಿಲ್ಲ. ಶ್ರೀರ ಸುದಾಮ ದರಿದ್ರರಾ

ನಿರಾಶ್ರಿತರ ಸಹಾಯಕ್ಕಾಗಿ ಕಾಂಗ್ರೆಸದವರು ಫಂಡು ಕೂಡಿಸಲಿಕ್ಕೆ ಹತ್ತಿದ್ದಾರೆ ...ಮು ಸಾವಿರ ರೂಪಾಯಿಗಳು ಆಗಲೇ ಕೂಡಿವೆ. ಇದೇ ಪ್ರಕಾರ ಕೂಲಿಕಾರರ ಸಂಘದವರೂ ಸ್ವತಂತ್ರ ಫಂಡಿನ ಏರ್ಪಾಡು ಮಾಡುತ್ತಿದ್ದಾರೆ,

೪ ಮುಂಬಯಿ ಸರಕಾರದವರು ಬಡೋದಾ ...

ರಲೀಫ ಕಾಮಗಾರಿಗಳನ್ನು ಪ್ರಾರಂಭಿಸಬೇಕೆಂದು ತಾರಿನಿಂದ ತಿಳಿಸಿದ್ದಾರೆ.

ಶಾಲೆ ಬಿದ್ದು ವಿದ್ಯಾರ್ಥಿಗಳು ಸತ್ತರು.

ಗುಜರಾಥದಂತೆ ಖಾನದೇಶದ ಪೂರ್ವ ಭಾಗದ ಮುಖ್ಯ ಪಟ್ಟಣವಾದ ಜಳಗಾವಿಯಲ್ಲಿ ಮಳೆಯು ಸುರಿಯುತ್ತಿತ್ತು. ಆಗ ಒಂದು ಶಾಲೆಯ ಇಡೀ ಕಟ್ಟಡವು ಬಿದ್ದು ಡಬಾಸ ಹಾಕಿತು. ನೂರಾರು ವಿದ್ಯಾರ್ಥಿಗಳಿದ್ದರು. ಹತ್ತರವೇ ಇದ್ದ ಇನ್ನೂರು ಪೋಲೀಸರು ಬಂದು, ಇಮಲಾ ತೆರೆದರು. ಕಲೆಕ್ಟರ, ಇಂಜನಿಯರ ಮೊದಲಾದ ಅಧಿಕಾರಿಗಳೂ ಬಂದು ಪೋಲೀಸರಿಗೆ ನೆರವಾದರು ಉಸುರುಗಟ್ಟಿದವರನ್ನು ಆಸ್ಪತ್ರೆಗೆ ಸಾಗಿಸಿದರು. ಅಲ್ಲಿ ಮೂವರು ಸತ್ತರು. ಮತ್ತು ನಾಲ್ವರು ಮನೆಯಲ್ಲಿಯೇ ಸತ್ತದ್ದು ಕಂಡು ಬಂತು

ಈ ಶಾಲೆಯು ಬೀಳಲಿಕ್ಕಾಗಿದೆ ಬೇರೆ ಸ್ಥಳದಲ್ಲಿ ಶಾಲೆ ಹಾಕಬೇಕೆಂದು ಹೆಡ್ಡ ಮಾಸ್ತರನು ೧೫ ದಿವಸ ಮುಂಚಿತವಾಗಿ ಸ್ಕೂಲ ಬೋರ್ಡಿಗೆ ತಿಳಿಸಿದ್ದನು. ಬೋರ್ಡ ಏನೂ ವ್ಯವಸ್ಥೆ ಮಾಡದ್ದಕ್ಕಾಗಿ ನಾಗರಿಕರು ಅದನ್ನು ಹಳಿಯುತ್ತಿದ್ದಾರೆ.

ಬ್ರಾಹ್ಮಣನಿಗೆ ಮುಸಲಮಾನರಿಂದ ಅಂತ್ಯಸಂಸ್ಕಾರ.

— o —

ನಿಜಾಮ ಹೈದರಾಬಾದಿನಲ್ಲಿ ರಾಜೇಶ್ವರರಾಯನೆಂಬ ಜಹಾಗಿರದಾರನು ಕಳೆದ ವಾರದಲ್ಲಿ ತೀರಿಕೊಂಡನು. ತನ್ನ ಜಡದೇಹಕ್ಕೆ ಮುಸಲಮಾನ ಧರ್ಮ ಪ್ರಕಾರ ಅಂತ್ಯಸಂಸ್ಕಾರವಾಗಬೇಕೆಂದು ಮೃತ್ಯುಪತ್ರ ಮಾಡಿಟ್ಟಿದ್ದನು, ಹಾಗು ಆ ಪ್ರಕಾರ ಅನೇಕ ಮುಸಲಮಾನ ಸ್ನೇಹಿತರ ಮುಂದೆ ಹೇಳಿದ್ದನು. ಈತನು ಸತ್ತಕೂಡಲೆ ಈ ಗೆಳೆಯರು ಕಾಜೀ ಖತೀಬರ ಕಡೆಗೆ ಹೋಗಿ, ಅಂತ್ಯ ಸಂಸ್ಕಾರಕ್ಕೆ ಕರೆದರು. ಆದರೆ ಅವರು ಮೊದಲು ಒಪ್ಪಲಿಲ್ಲ. ಏಕೆಂದರೆ ರಾಜೇಶ್ವರರಾಯನ ಕೊರಳಲ್ಲಿ ಯಜ್ಞೋಪವೀತವೂ ತಲೆಯ ಮೇಲೆ ಜುಟ್ಟವೂ ಇದ್ದವು. ಇವನ್ನು ತೆಗೆದ ಹೊರತು ಸಂಸ್ಕಾರವಾಗಲಾರದೆಂದು ಖಾಜಿಯು ಆಗ್ರಹತೊಟ್ಟನು. ಮುಂದೆ ಹೇಗೋ ವಿಚಾರ ಬದಲಾಗಿ ಖಾಜಿಯು ಪ್ರೇತಕ್ಕೆ ಇಸ್ಲಾಮ ಧರ್ಮ ದೀಕ್ಷೆ ಕೊಟ್ಟನು. ಬಳಿಕ ಒಂದು ಸಾವಿರ ಮುಸಲಮಾನರ ಮೆರವಣಿಗೆಯಲ್ಲಿ ರಾಜೇಶ್ವರರಾಯನನ್ನು ಕಬರಸ್ಥಾನಕ್ಕೆ ಒಯ್ದು ಧಫನ ಮಾಡಿದರು.

ರಾಜೇಶ್ವರನ ಪತ್ನಿಯು ಮತ್ತು ಅಂತ್ಯಕಾಲದ ವಿಧಿಯ ವರ್ತಮಾನವು ...

ಲ್ಲಿ ದೊಡ್ಡ ಹಳವಳಿ ಹುಟ್ಟಿಸಿದೆ. ಈತನೊಬ್ಬನೇ ಅಲ್ಲ; ನಾಲ್ಕು ನೂರು ಜನರು ಈತನ ಪಂಥದವರಾಗಿದ್ದಾರೆ. ಹಿಂದೂ ಮುಖಂಡರು ಈ ರಾಯನ ಹೆಂಡತಿ ಮತ್ತು ತಮ್ಮನಿಗೆ ೧೪ ಪ್ರಶ್ನಗಳ ಒಂದು ಪತ್ರ ಬರೆದು ಜವಾಬ ಕೇಳಿದ್ದಾರೆ. ಸರಿಯಾಗಿ ಉತ್ತರ ಕೊಟ್ಟು ಯೋಗ್ಯ ಪ್ರಾಯಶ್ಚಿತ್ತ ತಕ್ಕೊಳ್ಳದಿದ್ದರೆ ಇವರನ್ನು ಕುಲದ ಹೊರಗೆ ಇಡುವರು.

ಹುಬ್ಬಳ್ಳಿಯಲ್ಲಿ ಡಾಕ್ಟರ ಹರ್ಡೀಕರರ ಕಚೇರಿಯ ಝಡತಿಯು.

ಮುಂಬಯಿಯಲ್ಲಿ ಹೊರಡುವ ನ್ಯಾಶನಲ ಹೆರಾಲ್ಡ ಪತ್ರಿಕೆಯಲ್ಲಿ ಹೋದ ಜನವರಿ ತಿಂಗಳ ೨೪, ೨೫, ೨೬, ೨೭, ೨೯ ಮತ್ತು ಫೇಬ್ರುವರಿ ತಿಂಗಳ ೧, ೨ನೆಯ ತಾರೀಖಿನ ಪತ್ರದಲ್ಲಿ ಹಿಂದು ಸ್ಥಾನ ಮತ್ತು ಚೀನವೆಂಬ ಶಿರೋಲೇಖದಲ್ಲಿ ಏಳು ಲೇಖಗಳು ಕ್ರಮವಾಗಿ ಬಂದವು. ಈ ಲೇಖಗಳು ಸಾರ್ವಜನಿಕ ಶಾಂತತೆಗೆ ಭಂಗ ತರುವಂಥವಾಗಿವೆಂದು ಸರಕಾರಕ್ಕೆ ಆಗ ತೋಳಿಯಲೂ ಇಲ್ಲ. ಈ ಪರ್ಯಂತರ ಶಾಂತತಾ ಭಂಗವಾಗಲೂ ಇಲ್ಲ. ಮುಂಬಯಿಯಲ್ಲಿ ಮಿ. ಶಾಂತಾರಾಮ ಮಿರಜಕರರೆಂಬವರು ಕೂಲಿಕಾರರ ಹಿತ ಸಂಬಂಧವಾಗಿ ಕ್ರಾಂತಿ ಎಂಬ ವರ್ತಮಾನಪತ್ರವನ್ನು ತೆಗೆಯುತ್ತಾರೆ. ಇವರು ಈ ಲೇಖಗಳನ್ನು ಪುಸ್ತಕ ರೂಪದಿಂದ ಮುದ್ರಿಸಿದರು. ಪುಸ್ತಕಗಳು ಮದ್ರಾಸಕ್ಕೆ ಹೋದವು. ಆ ಸರಕಾರಕ್ಕೆ ಇವು ಆಕ್ಷೇಪಾರ್ಹವೆಂದು ಕಂಡು ಬಂದು, ಅವರು ಇವುಗಳ ಜಪ್ತಿಯ ಹುಕುಮು ತೆಗೆದರು. ಮದ್ರಾಸದಂತೆ ಮುಂಬಯಿ ಸರಕಾರವೂ ಎಚ್ಚತ್ತು, ತನ್ನ ಇಲಾಖೆಯಲ್ಲಿಯೂ ಜಪ್ತಿಯ ವಾರಂಟು ಪೋಲೀಸರ ವಶ ಮಾಡಿತು. ಪೋಲೀಸರು ಮುಂಬಯಿಯಲ್ಲಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಹೆರಾಲ್ಡ ಮತ್ತು ಕ್ರಾಂತಿಯ ಕಚೇರಿಯ ಝಡತಿಗೆ ಸಹೀ ಮಾಡಿದರು. ಹುಬ್ಬಳ್ಳಿಯಲ್ಲಿ ಡಾಕ್ಟರ ಹರ್ಡೀಕರರ ಆಫೀಸಿನ ಝಡತಿಗೆ ಅಲ್ಲಿಯ ಮ್ಯಾಜಿಸ್ಟ್ರೇಟರರು ಸಹೀ ಕೊಟ್ಟರು. ಡಾಕ್ಟರ ಹರ್ಡೀಕರರು ಈ ಪುಸ್ತಕದ ಆರವತ್ತು ಪ್ರತಿಗಳನ್ನು ಬೇಡಿದ್ದರು. ಬಹಳ ಪ್ರತಿಗಳು ಸಿಲುಕು ಇಲ್ಲದ್ದರಿಂದ ೪೪ ಪ್ರತಿಗಳೇ ಬಂದವು. ಇವು ಹತ್ತೇ ದಿನಸಗಳ ಹಿಂದೆ ಬಂದಿದ್ದವು. ಇವನ್ನು ಪೋಲೀಸರು ಜಪ್ತ ಮಾಡಿದ್ದರು. ಮುಂಬಯಿಯಲ್ಲಿಯೂ ಇವರಿಗೆ ಹೆರಾಲ್ಡ ಕಚೇರಿಯಲ್ಲಿ ೧೫ ಮತ್ತು ಕ್ರಾಂತಿಯ ಆಫೀಸಿನಲ್ಲಿ ೫೫ ಪ್ರತಿಗಳು ದೊರೆತವು. "ಈ ಪುಸ್ತಕಗಳನ್ನು ಪ್ರೊಸ್ಕ್ರಾಯಿಬ ಮಾಡಿದೆಂದು ಸರಕಾರದಿಂದ ಜಾಹೀರ ಮಾಡದೆ, ಜಪ್ತಿಯನ್ನು ಮಾಡಿದ್ದು, ಲೇಖ ಮತ್ತು ಪುಸ್ತಕ ಮುದ್ರಿತವಾಗಿ ಮೂರು ತಿಂಗಳಾದ ಬಳಿಕ ಸರಕಾರವು ಈ ಪ್ರಕಾರದ ಕೃತ್ಯ ಮಾಡುವದೂ ಆಶ್ಚರ್ಯಚಕಿತವಾಗುವಂಥಾದ್ದಾಗಿರುತ್ತದೆಂದು" ಡಾಕ್ಟರ ಹರ್ಡೀಕರರು ಝಡತಿಯಾದ ನಂತರ ತಮ್ಮ ಅಭಿಪ್ರಾಯವನ್ನು ಜಾಹೀರ ಮಾಡಿದ್ದಾರೆ.

ತಣ್ಣೀರು ಬಿಸನೀರಿನ ಝರಿಗಳು.

—೦—

ಗುಜರಾಥ ಪ್ರಾಂತಕ್ಕೆ ಸೇರಿದ ಬಾನಸಾಡಾ ಪಟ್ಟಣದಿಂದ ಹತ್ತು ಮೈಲುಗಳ ಮೇಲೆ ಒಂದು ಗುಡ್ಡದ ಓರೆಯಲ್ಲಿ ತಣ್ಣೀರು ಬಿಸನೀರಿನ ಎರಡು ಝರಿಗಳು ಅವಳಿ ಜವಳಿಯಂತೆ ಹುಟ್ಟಿರುತ್ತವೆ. ಇವು ಬಹಳ ದಿನ ಕಾಲದಿಂದ ಹುಟ್ಟಿದಂಥವು. ಬಿಸಿನೀರು ಕೈ ಹಾಕದಷ್ಟು ಕಾದೇ ಹೊರಗೆ ಬರುತ್ತದೆ, ತ್ವಚಸಂಬಂಧದ ರೋಗಿಗಳು ಈ ನೀರಲ್ಲಿ ಸ್ನಾನ ಮಾಡಿ, ರೋಗ ಕಳಕೊಳ್ಳುವರು. ಈ ನೀರಲ್ಲಿ ಒಂದು ವಿಚಿತ್ರ ಮತ್ತು ಆಶ್ಚರ್ಯಕರವಾದ ಸೋಜಿಗವುಂಟು. ಪ್ರತಿ ವರ್ಷ ಶ್ರಾವಣದ ಹುಣ್ಣಿವೆಯ ಮೊದಲು ಮತ್ತು ಮರು ದಿವಸ ಮೂರು ದಿವಸ ಈ ನೀರು ಒಮ್ಮಿಂದೊಮ್ಮೆ ತಣ್ಣಗಾಗುತ್ತವೆ. ಆಗ ಬೇಕಾದವರು ಸ್ವೇಚ್ಛೆಯಿಂದ ಇದರಲ್ಲಿ ಸ್ನಾನ ಮಾಡಬಹುದು. ಈ ಮೂರು ದಿವಸ ಮಹಾ ಪರ್ವಣಿ ಎಂದು ಭಾವಿಸಿ ಸಾವಿರಾರು ಜನರು ಸ್ನಾನಕ್ಕೆ ಹೋಗುವರು.

ಬದಮಾಷನಾಗುದದಕ್ಕಿಂತ ತುರಂಗವಾಸವೇ ಲೇಸು.

—೦೦—

ಬ್ಯಾರಿಸಾಲದ ಪ್ರಸಿದ್ಧ ಗೃಹಸ್ಥರಾದ ಶ್ರೀ. ಸತ್ಯೇಂದ್ರನಾಥ ಸೇನರ ಮೇಲೆ ಪೋಲೀಸರು ಸಾರ್ವಜನಿಕ ಶಾಂತತೆಯನ್ನು ಭಂಗಪಡಿಸುವ ಆರೋಪ ಹೊರಿಸಿ, ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು ಮ್ಯಾಜಿಸ್ಟ್ರೇಟರು ಇವರಿಗೆ ೫೦೦೦ ರೂಪಾಯಿಗಳ ಜಾಮೀನು ಕೊಡಬೇಕು. ಇಲ್ಲವೆ ಒಂದು ವರ್ಷ ಸಾದಾ ಕೈದಿನ ಶಿಕ್ಷೆ ಅನುಭವಿಸಬೇಕೆಂದು ತೀರ್ಪು ಹೇಳಿದರು. ಶ್ರೀ. ಸತ್ಯೇಂದ್ರರು ಸತ್ಯವಂತರೇ ಆಗಿ, ಜಾಮೀನು ಕೊಟ್ಟು, ಬದಮಾಷವೆನಿಸಿಕೊಳ್ಳುವದಕ್ಕಿಂತ ತುರಂಗವಾಸವೇ ಲೇಸೆಂದು ತುರಂಗದ ದಾರೀ ಹಿಡಿದರು. ನಾಗರಿಕರು ವಂದೇ ಮಾತರಂ ದ ಜಯಘೋಷದಿಂದ ಇವರಿಗೆ ನಿರೋಪ ಕೊಟ್ಟರು.

ರಾ. ಬ. ಕಂಬಳಿಯವರಿಗೆ ಸೂಚನೆ

ಟ್ರೇನಿಂಗ ಕಾಲೇಜವನ್ನು ಪುನಃ ಪ್ರಾರಂಭಿಸುವ ವಿಷಯವಾಗಿ ಶ್ರೀ. ಜೋಗರಂತೆ ರಾ. ಬ. ಕಂಬಳಿಯವರೂ ಠರಾವು ಕಳಿಸಿದ್ದಾರೆ. ಇದರ ಕೂಡ ರಾ. ಬ. ರವರ ಬೇರೆ ಠರಾವುಗಳೂ ಉಂಟು ರಾ. ಬ. ರವರು ಕಾಲೇಜದ ಮಹತ್ವವನ್ನು ಲಕ್ಷ್ಯಕ್ಕೆ ತಂದು, ಉಳಿದ ಠರಾವುಗಳನ್ನು ಬದಿಗೆ ಮಾಡಿ, ಇದನ್ನೇ ಕೌನ್ಸಿಲದ ಮುಂದೆ ತರಬೇಕೆಂದು ಆಗತ್ಯಪೂರ್ವಕವಾಗಿ ಸೂಚಿಸುತ್ತೇವೆ. ಮತ್ತು ಇವರಿಗೆ ಕರ್ನಾಟಕದ ಬೇರೆ ಮೆಂಬರರೂ ನೆರವಾಗಬೇಕೆಂದು ಆಗ್ರಹಪೂರ್ವಕವಾಗಿ ಹೇಳುತ್ತೇವೆ. ಹೀಗೆ ಮಾಡುವದರಿಂದ ಮೆಂಬರರು ತಮ್ಮ ಕರ್ತವ್ಯ ಮಾಡಿದಂತಾಗುತ್ತದೆ.

ಮದಿವೆಯಾದ ಹುಡಿಗೆಯನ್ನು ಮಾರಿದ ಬಗ್ಗೆ ಒಬ್ಬ ಮ್ಯಾಜಿಸ್ಟ್ರೇಟರ ಮೇಲೆ ಫಿರ್ಯಾದಿ

—(೦)—

ಸಿಂಧ ಪ್ರಾಂತಕ್ಕೆ ಸೇರಿದ ಥಾರ ಪಾರ್ಕರದ ಒಬ್ಬ ಶ್ರೀಮಂತ ಜಮೀನದಾರರೂ ಆನರರಿ ಮ್ಯಾಜಿಸ್ಟ್ರೇಟರೂ ಆದಂಥ ಇಲಾಹಿ ಬಕ್ಷರೆಂಬವರು ಮದಿವೆಯಾದಂಥ ಅಲಿಶಾನನೆಂಬವಳನ್ನು ಮದಿವೆಯಾಗಿಲ್ಲೆಂದು ಹೇಳಿ ಎರಡನೆಯವನಿಗೆ ೨೦೦ ರೂಪಾಯಕ್ಕೆ ಮಾರಿದ ಬಗ್ಗೆ ಫಿರ್ಯಾದಿಯಾಗಿ, ಪೂರ್ವ ವಿಚಾರಣೆಯಾಗಿ, ಈಗ ಸೆಶನ ಕಮಿಟ ಮಾಡಲ್ಪಟ್ಟಿದ್ದಾರೆ. ಜಮೀನದಾರರಿಗೆ ಸಹಾಯವಾಗಿ ಆರು ಜನ ಮುಸಲಮಾನರಿದ್ದು ಇವರೂ ಸೆಶನ ಕಮಿಟ ಮಾಡಲ್ಪಟ್ಟಿದ್ದಾರೆ.

ವನಹಳ್ಳಿಯಲ್ಲಿ ಪಂಜಗಳ್ಳರ ದರೋಡೆ.

ಕೊಲ್ಹಾಪೂರ ಸಂಸ್ಥಾನದಲ್ಲಿ ಉಪಸಂಸ್ಥಾನವಾದ ಕಾಗಲದ ಒಂದು ಗ್ರಾಮವಾದ ವನಹಳ್ಳಿಯ ಗೌಡರ ಮನೆಗೆ ೩೦-೪೦ ಜನ ದರೋಡೆಗಾರರು ಕತ್ತಿ, ಬಂದೂಕು, ಬರ್ಚಿಗಳಲ್ಲದೆ ಪಂಜಗಳನ್ನು ತಕ್ಕೊಂಡು ಹೋಗಿ, ಭಯಂಕರ ಅತ್ಯಾಚಾರ ಮಾಡಿ, ಆರು ಸಾವಿರ ರೂಪಾಯಿ ತಕ್ಕೊಂಡು ಹೋದರು. ಮನೆಯ ಮಾಲೀಕನಾದ ರಾವಜಿ ಪಾಟೀಲನು ಆಸ್ತಿಯನ್ನು ಇಟ್ಟ ಸ್ಥಳ ತೋರಿಸದ್ದರಿಂದ, ಕಳ್ಳರು ಈತನ ಮೋತೆ ಮತ್ತು ಹೊಟ್ಟೆಯನ್ನು ಸುಟ್ಟಿದ್ದಾರೆ. ಈತನ ತಮ್ಮನಾದ ಬಾಳಾ ಪಾಟೀಲನ ಎದೆಗೆ ಬರ್ಚಿಯಿಂದ ಚುಚ್ಚಿದ್ದಾರೆ.

ಬುಧವಾರದ ರಜೆ-

ನಾಗಪಂಚಮಿಯ ದೆಸೆಯಿಂದ ನಾಳಿನ ದಿವಸ ಮುದ್ರಾಲಯಕ್ಕೆ ರಜೆ ಇರುವದರಿಂದ ನಾಡಿದ ನಿತ್ಯ ಪತ್ರವು ಪ್ರಕಟಿಸಲ್ಪಡಲಾರದು.

ಹೋದಂತಾಗುವದು. ಒಂದು ವರ್ಷದ ಅವಧಿಯೆಂದರೆ ಸ್ವಲ್ಪವಲ್ಲ. ಅಷ್ಟು ಅವಧಿಯಲ್ಲಿ ಎಷ್ಟೆಷ್ಟು ರೀತಿಯಿಂದ ರಾಜಕಾರಣಗಳಲ್ಲಿಯು ಜನತೆಯ ಹಿತೈಕ್ಯಗಳ ದೃಷ್ಟಿಯಲ್ಲಿಯು ಬದಲಾವಣೆಗಳಾಗುವವೋ ಯಾರು ಬಲ್ಲರು? ಮತ್ತು ಈ ತರದ ಕಾಲವಿಲಂಬದಿಂದ ಆಳರಸರಿಗೆ ಇಲ್ಲದ್ದೊಂದು ನೆವವನ್ನು ಮುಂದೊಡ್ಡುವದಕ್ಕೆ ಅನುವು ದೊರೆಯುವದು ಸದ್ಯಕ್ಕೆ ಧಾ. ಟ್ರೆ. ಕಾಲೇಜಕ್ಕೆ ವಿದ್ಯಾರ್ಥಿಗಳನ್ನು ಆರಿಸುವ ಅಧಿಕಾರವು ಸ್ಥಾನಿಕ ಸಂಘಗಳ ಕೈಯಲ್ಲಿರುವದು ಮೇಲಾಗಿ ಸರಕಾರವು ಕೂಡ ತಕ್ಕ ನಿಯಮಗಳನ್ನು ಹಾಕಿ ಕೊಟ್ಟು ಬ್ರಾಹ್ಮಣೇತರರಿಗೆ ತುಂಬಾ ಅನುಕೂಲತೆಯನ್ನು ಕಲ್ಪಿಸಿಕೊಟ್ಟಿರುವದು. ಇದರಿಂದ ನೋಡಿದರೆ ಟ್ರೇ. ಕಾ. ವನ್ನು ನಿಲ್ಲಿಸಿದ್ದರಿಂದ ಬ್ರಾಹ್ಮಣೇತರರಿಗಾಗುವಷ್ಟು ಹಾನಿಯು ಬ್ರಾಹ್ಮಣರಿಗಾಗುವದಿಲ್ಲ. ಈ ಎಲ್ಲ ಸಂಗತಿಗಳನ್ನು ವಿಚಾರ ಮಾಡಿ ಬ್ರಾಹ್ಮಣೇತರರ ಹಿತಚಿಂತಕರೂ ಪುರಸ್ಕರ್ತರೂ ಎನಿಸಿಕೊಳ್ಳಬೇಕೆಂದಿರುವ ರಾ. ಬ. ಕಂಬಳಿಯವರು ಟ್ರೆ॥ ಕಾ॥ ದ ಸಂಬಂಧದ ಠರಾವನ್ನು ಹೆಚ್ಚು ಉತ್ಸಾಹದಿಂದ ಮಂಡಿಸಿ ಜನ್ನಾಗಿ ಪರಿಶ್ರಮ ಮಾಡಿ ಪಾಸು ಮಾಡಿಕೊಳ್ಳದೆ ಬಿಡಲಿಕ್ಕಿಲ್ಲೆಂದು ನಮ್ಮ ಬಲವಾದ ಆಶೆಯಿದೆ. ಕರ್ನಾಟಕದ ಏಕೀಕರಣದ ಠರಾವನ್ನಂತೂ ಅವರು ತಮ್ಮ ಎಲ್ಲ ಬಲ ಸಾಹಸಗಳನ್ನು ಉಪಯೋಗಿಸಿ ಪಾಸು ಮಾಡಿಕೊಳ್ಳಲಿಕ್ಕೆ ಬದ್ಧರೇ ಇರುವರು.

ಶ್ರೀ. ಶಿವಾಜಿ ಮಹಾರಾಜನು ತಿರಿಗಿ ಹುಟ್ಟಿ ಬಂದರೆ

—o—

ಶ್ರೀ ಶಿವಾಜಿ ಮಹಾರಾಜರು ಈಗ ಹುಟ್ಟಿ ಬಂದರೆ- ನಾನು ಆತನನ್ನು ಹಿಂಬಾಲಿಸಿ, ಸ್ವರಾಜ್ಯವನ್ನು ಸಂಪಾದಿಸುವನೆಂದು ಮೌಲಾನಾ ಶೌಕತಲ್ಲಿಯವರು ಮುಂಬಯಿಯಲ್ಲಿ ಒಂದು ಸಭೆಯಲ್ಲಿ ಭಾಷಣ ಮಾಡುವಾಗ ನುಡಿಯುತ್ತಿರುವಾಗ ಒಬ್ಬ ಪ್ರೇಕ್ಷಕನು ಶಿವಾಜಿಯು ಬರುವನೆಂದು ಉತ್ತರ ಕೊಟ್ಟನು. ಇದಕ್ಕೆ ಮೌಲಾನಾನವರು- ಆತ್ಯಾನಂದ. ಆತನ ಸಹಾಯದಿಂದ ನಾವು ಸ್ವರಾಜ್ಯ ಸಂಪಾದಿಸುವೆವು. ನಾನು ಮುಸಲಮಾನನಾದರೂ ಆತನನ್ನು ಹಿಂಬಾಲಿಸುವೆನು. ಏಕೆಂದರೆ- ನನ್ನ ಮೊದಲನೆಯ ಧರ್ಮವು ಮಾತೃಭೂಮಿಯನ್ನು ಪ್ರೀತಿಸುವದಾಗಿದೆ [illegible] ಉದ್ಗಾರ ತೆಗದ [illegible] ಮುಸಲಮಾನರ ದ್ವೇಷಿಕ [illegible], ಆತನನ್ನು ಮತ್ತು ಆ [illegible] ಯರ್ನಗಳನ್ನು ಹಿಂಬಾಲಿಸ ಧಾರವಾಡ [illegible] ಹೇಳುವದನ್ನು ಮು

ಶ್ರೀ ಮಾಣಿಕಪ್ರಭು ಪ್ರಸಾದಿತ

ಗಾಯನ ವಾದನ ವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಗಾಯನ, ಹಾರ್ಮೋನಿಯಮ್, ತಬಲಾ, ಸತಾರ ವಗೈರೆ ಸಶಾಸ್ತ್ರ ರೀತಿಯಿಂದ ಕಲಿಸಲ್ಪಡುವದು.

ಈ ವಿದ್ಯಾಲಯವನ್ನು ಕೇವಲ ಸಂಗೀತ ಪ್ರಿಯರ ಸಲುವಾಗಿ ಮುದ್ದಾಮ ಸುರುವು ಮಾಡಿರುತ್ತೇವೆ. ಕಾರಣ ಯಾವತ್ತು ಸಂಗೀತ ಪ್ರಿಯರು ಈ ಸುಯೋಗ್ಯ ಸಂಧಿಯನ್ನು ಕಳೆದುಕೊಳಬಾರದು. ವಿಶೇಷ ಮಾಹಿತಿಯ ಸಲುವಾಗಿ ಪ್ರತ್ಯಕ್ಷವು ಭೆಟ್ಟಿಯಾಗಬೇಕು.

ಪತ್ತೆ	ತಮ್ಮ,
ಶ್ರೀ ಮಾ. ಪ್ರ. ಪ್ರಾ. ಗಾಯನ ವಾದನ ವಿದ್ಯಾಲಯ ಗಾಂಧಿಚೌಕ ಕೊಲ್ಲಾಪೂರರ ಸ್ಟೇಶನರಿ ಅಂಗಡಿ ಎದುರಿಗೆ ತಹಶೀಲದಾರಗಲ್ಲಿ, ಧಾರವಾಡ.	ಪ್ರಿನ್ಸಿಪಾಲ, ಲಕ್ಷ್ಮಣಸಿಂಗ ಗವಾಯಿ, ನಾಗೇಶಿಪೂರ.

ಸಲಮಾನರು ಹೃತ್ಪಟಲದಲ್ಲಿ ಬರೆದಿಟ್ಟುಕೊಳ್ಳುವಂಥ ಮುತ್ತಿನಂಥ ಉಪದೇಶವು.

ಮುಂಬಯಿಯಲ್ಲಿ ಘಣಸವಾಡಿಯಲ್ಲಿ ಶ್ರೀ ವೆಂಕಟೇಶ ದೇವರ ಪ್ರತಿಸ್ಥಾಪನೆ ಮಾಡಿದ್ದಾರೆಷ್ಟೇ; ಘಣಸವಾಡಿ ಎಂಬ ಹೆಸರು ತೆಗೆದು, ಶ್ರೀ ವೆಂಕಟಪುರವೆಂಬ ಹೆಸರಿಡಬೇಕೆಂದು ಆ ಭಾಗದವರು ಮ್ಯುನಿಸಿಪಾಲಿಟಿಗೆ ಅರ್ಜಿ ಮಾಡಿದ್ದಾರೆ.

ಟೆಂಡರ ಜಾಹೀರ ನೋಟೀಸ

ಧಾರವಾಡ ಮ್ಯುನಿಸಿಪಾಲಿಟಿ ಕಚೇರಿಯಿಂದ –

ಯಾವತ್ತೂ ಕಾಂಟ್ರ್ಯಾಕ್ಟರ ಜನರಿಗೆ ಈ ನೋಟೀಸಿನಿಂದ ತಿಳಿಸುವದೇನಂದರೆ ಚಾಲು ವರ್ಷದಲ್ಲಿ ಕೆಳಗೆ ಕಾಣಿಸಿದ ಕಾಮುಗಾರಿಗಳನ್ನು ಮಾಡಿಸುವದಿದ್ದು ಆ ಬಾಬತ್ತ ಪೀಸವರ್ಕ್ ಕಾಂಟ್ರ್ಯಾಕ್ಟರ ಜನರ ಕಡೆಯಿಂದ ಟೆಂಡರುಗಳನ್ನು ಕರೆಯಲಿಕ್ಕೆ ಸ್ಟ್ಯಾಂಡಿಂಗ ಕಮಿಟಿಯವರು ಠರಾವ ಮಾಡಿದ್ದಾರೆ. ಆದ್ದರಿಂದ ಸದರಿ ಕೆಲಸಗಳನ್ನು ಕಾಂಟ್ರ್ಯಾಕ್ಟದಿಂದ ಹಿಡಿಯತಕ್ಕವರು ಪ್ರತಿಯೊಂದು ಕೆಲಸದ ಬಗ್ಗೆ ಯೋಗ್ಯ ದರಗಳನ್ನು ಹಾಕಿ ತಾರೀಖು ೧೦ ಅಗಸ್ಟ ೧೯೩೭ನೇ ಇಸ್ವಿ ದಿವಸದೊಳಗಾಗಿ ತಮ್ಮ ಮೊಹರುಬಂದ ಟೆಂಡರುಗಳನ್ನು ಕೆಳಗೆ ಸಹಿ ಮಾಡಿದವರ ಕಡೆಗೆ ಕಳಿಸಿಕೊಡಬೇಕು ಲಕೋಟೆಯ ಮೇಲೆ "ಇಂಥಾ ಕೆಲಸದ ಬಗ್ಗೆ ಟೆಂಡರು" ಅಂತ ಸ್ಪಷ್ಟವಾಗಿ ಬರೆಯಬೇಕು ಮುದ್ದತ್ತು ಮೀರಿ ಬಂದ ಟೆಂಡರಗಳನ್ನು ಸ್ವೀಕರಿಸುವದಿಲ್ಲ ಬರಲರದು. ಕಡಿಮೆ ದರದ ಟೆಂಡರು ಮಂಜೂರ ಮಾಡಲೇ ಬೇಕೆಂಬ ಬಂಧನವಿರುವದಿಲ್ಲ. ಈ ಸವ್ಯಂಧಿ ಹೆಚ್ಚಿನ ಮಾಹಿತಿಯು ಬೇಕಾದರೆ ಆಫೀಸಿನ ಹೊತ್ತಿನಲ್ಲಿ ಮ್ಯುನಿಸಿಪಾಲಿಟಿ ಕಚೇರಿಗೆ ಬಂದು ಪಡೆಯಬಹುದು.

ಕೆಲಸಗಳ ತಪಶೀಲು

೧ ಸಾರ್ವಜನಿಕ ಭಾವಿಗಳನ್ನು ಕಡಿಸುವದು ಮತ್ತು ರಿಪೇರಿ ಮಾಡುವದು (೨) ಗಟರಗಳನ್ನು ಕಟ್ಟಿಸುವದು (೩) ಮಾರ್ಕೆಟ್ಟಿನಲ್ಲಿ ಕಾತೆಸಅಂ ಡಿಗಳನ್ನು ಕಟ್ಟಿಸುವದು (೪) ಸಾರ್ವಜನಿಕ ರೆಸ್ಟ ಹೌಸ ಕಟ್ಟಿಸುವದು (೫) ರಸ್ತೆಗಳ ಮೇಲಿನ ಕಲ್ವರ್ಟ್ಗಳನ್ನು ಕಟ್ಟಿಸುವದು ರಿಪೇರಿ ವಗೈರೆ ಕಾಮುಗಾರಿಗಳು.

ಧಾರವಾಡ ತಾ. ೧-೮-೩೭

K. P. KALAPPA.
ಚೀಫ ಆಫೀಸರ
ಧಾರವಾಡ ಮ್ಯುನಿಸಿಪಾಲಿಟಿ.

ಚಂದಾದಾರರಿಗೆ ಸೂಚನೆ.

ಅಗಸ್ಟ ೧೦ರಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ರೂ. ಪಿ. ಯ. ನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ಪಿಚಾರವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಪಾಠಕರು ಹೊಸಕೇರಿ ಇವರು ಧಾರವಾಡದಲ್ಲಿರುವ ಹನುಮಂತ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಗುರುವಾರ ತಾರೀಖು ೪ನೇ ಆಗಸ್ಟ ೧೯೨೭ (ಸಂಚಿಕೆ ೧೬೬

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಹಸು ಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಒಯ್ಯು ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರ ತೆಯು ಎಲ್ಲಾ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೩೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ನೋಟೀಸು.

ಮಿ. ರಜಿಸ್ಟ್ರಾರ ಸಾ. ಒಹಾದ್ದೂರ ಕೋ. ಸೊಸಾಯಟೀಜ್ ಪುಣೆ ಇವರು ಕಬಜಗಿ ತಾಲೂಕ ಪೈಕಿ ಪುರದೂರ ಸಹಕಾರಿ ಸಂಘವನ್ನು ರದ್ದು ಮಾಡಿದ ಬಗ್ಗೆ ಹಾಗು ಕೆಳಗೆ ಸಹಿ ಮಾಡಿದವರನ್ನು ಸದರ ಸಂಘದ ಲಿಕ್ವಿಡೇಟರನ್ನಾಗಿ ನೇಮಿಸಿದ ಬಗ್ಗೆ ಮುಂಬಯಿ ಸರಕಾರಿ ಗ್ಯಾಝೇಟಿನಲ್ಲಿ ಪ್ರಸಿದ್ಧ ಮಾಡಿರುತ್ತಾರೆ. ಕಾರಣ ಸದರ ಸಂಘದಿಂದ ಯಾರಿಗಾದರೂ ಏನಾದರೂ ಸಲ್ಲತಕ್ಕದಿದ್ದರೆ ಆಬಗ್ಗೆ ನಮ್ಮ ಕಡೆಗೆ ಈ ಹೊತ್ತಿನಿಂದ ಎರಡು ತಿಂಗಳೊಳಗಾಗಿ ಲೇಖಿಯಿಂದ ತಿಳಿಸಬೇಕಾಗಿ ವಿನಂತಿಯದೆ.

ತಾ॥ ೨-೮-೧೯೨೭

Sd/ R. B. Khedanpur
ಆಡಿಟರ, [illegible]

ವಿಜಯದ ವರ್ಗಣೀ ದರ ರೂ

ನಿತ್ಯ ಪತ್ರಕ್ಕೆ	ರೂ
೧೨ ತಿಂಗಳಿಗೆ	
೬ ,,	
೪ ,,	
ವಾರ ಪತ್ರ	೧೦ ಆಣೆ,
ವಿಶೇಷ ಮಾ	,,

ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಬಡ್ಡಿ ಲಾಭ ಕೂಡುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಯುತ್ತದೆ [illegible] ಮತ್ತು ಬೇರೆ ತರದ [illegible]ಗಳಿಗೆ [illegible] ದೊರೆಯುವವು.

ವಿಶೇಷ [illegible] ಸಹಿ ಮಾಡಿದವರ ಕೇಳಿ ತಿಳಿಕೊಳ್ಳಬಹುದು.

[illegible] ಮ. ಪಡಕಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟು ಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ [illegible] ಇರುವಂತಿರುತ್ತದೆ.

ವಿ. ಆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

೨೦ನೇ ಶತಮಾನದ ಗೋ[illegible]
ವಿಚಿತ್ರ ಸಂಶಯ
ಲೋಕಮಾನ್ಯ ಟಿಳಕರ ಚರಿತ್ರೆ
ದೇಶಬಂಧು ದಾಸರ ಚರಿತ್ರೆ ೨ ,,
ದೇಶಭಕ್ತರ ಸಂದೇಶ ೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿ ಕಡಿಮೆಯಾಗುವುದು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪ್ರೆಸ್

ವಿಜಯ.

ಧಾರವಾಡ ತಾ-೪-೮-೨೭ ನೇ ಇಸ್ವಿ

ಬಡೋದೆಯಲ್ಲಿ ಹಾಹಾಕಾರ.

ಸಾವಿರಾರು ಮನೆಗಳು ಬಿದ್ದವು ಎರಡು ಕೋಟಿಯ ಹಾನಿಯು!

ಬಿಂದಿಗುಂಟ ಹೊಳೆಗಳು ಬಿದ್ದವು

ಅಹಮದಬಾದ, ಬಡೋದೆಕ್ಕಿಂತ ಬಡೋದೆಯಲ್ಲಾದ ಹಾನಿಯು ಕಲ್ಪನಾತೀತವಾಗಿರುತ್ತದೆ ಮಳೆಯಿಂದ ಈ ಮೊದಲು ಹಿಂದುಸ್ಥಾನದಲ್ಲಿ ಇಂಥ ಹಾನಿಯು ಎಲ್ಲಿಯೂ ಆಗಿರಲಿಕ್ಕಿಲ್ಲ. ಅಹಮದಾಬಾದ ಮತ್ತು ಭಡೋಚ ಪಟ್ಟಣಗಳಲ್ಲಿ ಮಹಾನದಿಗಳುಂಟು. ಬಡೋದೆಯಲ್ಲಿ ನದಿಯು ಇರುವದಿಲ್ಲ. ಆದರೂ ಇವೆರಡೂ ಪಟ್ಟಣಗಳಲ್ಲಾದ ಹಾನಿಗಿಂತ ಭಯಂಕರ ಹಾನಿಯು ಇಲ್ಲಾಯಿತು ಶೇಡಿಗೆ ಊರಿಗೆ ನೀರಿನ ನಳದ ಕೆರೆಯು ಕಾರಣವಾಯಿತು ಇದು ಸ... ಸಯಾಜಿ ಸರೋವರವೆಂದು ಹೆಸರಿಟ್ಟಿದ್ದಾರೆ. ಇ... ದೊಡ್ಡ ಕಾಲುವೆ ತಂದು ...ರೆ. ...ರಾತ್ರಿಗೆ ಮಹಾಪೂರು ಬಂ... ದೆಯು ಒಡೆದು ಹತ್ತಿಪ್ಪತ್ತು ಆನೆಗಳು ತಂಡವಾಗಿ ... ಕಿರಬಿಟ್ಟು. ಮಳೆಯೋ ಕೊಳೆಯೂ ಎಂದು ಆಕಾಶ ಹರಿದು ನೀರು ಸುರಿಯುತ್ತಿತ್ತು. ಪಟ್ಟಣದ ಮೇಲೆ ದೇವತಾ ಕ್ಷೋಭೆಯೇ ಆಯಿತು.

ಒಂದೂವರೆ ಲಕ್ಷ ಜನಸಂಖ್ಯೆಯ ಪಟ್ಟಣ. ರಾಜಧಾನಿಯು. ಹತ್ತರವೇ ಇಂಗ್ಲಿಷ ಸರಕಾರ ರೆಸಿಡೆನ್ಸಿಯು. ಹೀಗಾಗಿ ವಿಸ್ತಾರವಾದ ಪಟ್ಟ... ನೈಲು ಸುತ್ತಳತೆ. ಇಂಥ ದೊಡ್ಡ ಪಟ್ಟಣದ ಸುತ್ತಲು ಹದಿನಾರು ಮೈಲುಗಳ ತನಕ ಮಳೆಯಿಂದ ನೀರೇ ನೀರಾಗಿತ್ತು. ಸಮುದ್ರದಂತೆ ತೋರುತ್ತಿತ್ತು. ಅದರಲ್ಲಿ ಊರಲ್ಲಿ ಒಂದೊಂದೆಡೆಯಲ್ಲಿ ಎರಡಾಳೆತ್ತರ ನೀರು ನಿಂತಿತು. ದೊಡ್ಡ ದೊಡ್ಡ ಕಟ್ಟಡಗಳು ಸಮುದ್ರದಲ್ಲಿ ದೂರ ಬಿರುಗಾಳಿಯಲ್ಲಿ ಹೊಯ್ದಾಡುವ ಹಡಗಗಳಂತೆ ಕಾಣುತ್ತಿದ್ದವು. ಒಂದು ಓಣಿಯಿಂದ ಮತ್ತೊಂದು ಓಣಿಗೆ ಹೋಗುವದು; ಒಂದು ಮನೆಯಿಂದ ಮತ್ತೊಂದು ಮನೆಗೆ ಹೋಗುವದು ಕೂಡ ದುಸ್ತರವಾಯಿತು.

ಸೋಮವಾರ ಪ್ರಾರಂಭವಾದ ಮಳೆಯು ಶುಕ್ರವಾರ ರಾತ್ರಿಯಲ್ಲಿ ನಿಂತಿತು ನಾಲ್ಕು ದಿವಸ ಎಲ್ಲ ವ್ಯವಹಾರ ಬಂದಾಯಿತು ಆಸ್ಪತ್ರೆಗಳಲ್ಲಿದ್ದ ರೋಗಿಗಳಿಗೆ ಎರಡು ದಿವಸ ಔಷಧ ಪಥ್ಯ ದೊರೆಯದಾಯಿತು. ದಿವಾನರ ಬಂಗ್ಲೆಯು ಎತ್ತರದ ಮೇಲಿದ್ದರೂ, ಬಂಗ್ಲೆಯ ಸುತ್ತಲು ಹತ್ತು ಫೂಟು ಎತ್ತರ ನೀರು ನಿಂತಿತು. ಆದ್ದರಿಂದ ಇವರಿಗೆ ಪ್ರಜಾಸಂರಕ್ಷಣೋಪಾಯ ಕೈಕೊಳ್ಳುವದು ಶಕ್ಯವೇ ಆಗಲಿಲ್ಲ. ಪಟ್ಟಣದಲ್ಲಿ ಮನೆಗಳಂತೂ ಧಡಧಡನೆ ಬೀಳಲಾರಂಭಿಸಿದವು ಮಣ್ಣಿನ ಮನೆಗಳು ಭೂದೇವಿಗೆ ಶರಣು ಹೋದವು ಬಡವರ ಗುಡಿಸಲುಗಳು ತೆಪ್ಪದಂತೆ ತೇಲಿ ಹೋದವು ನಿರಾಶ್ರಿತರು ಗಿಡಗಳ ಆಶ್ರಯ ಮಾಡಿದರು ಎರಡೆರಡು ದಿವಸ ಹಗಲಿರುಳು ಗಾಳಿ ಮಳೆಯ ಹೊಡತವನ್ನು ಸಹಿಸಿದರು ಇವನ್ನು ಸಹಿಸದವರು ಕೆಳಗೆ ಬಿದ್ದು, ಪ್ರವಾಹದಗುಂಟ ಹರಿದು ಹೋದರು.

ಪ್ರಾಣಹಾನಿಯಂತೂ ಭಯಂಕರವಾಯಿತು. ದನಗಳು ಕಟ್ಟಿದಲ್ಲಿಯೇ ಸತ್ತು ಬಿದ್ದವು ಸರಕಾರದ ಪಶುಪಕ್ಷಿ ಸಂಗ್ರಹಾಲಯದಲ್ಲಾದ ಪ್ರಾಣಹಾನಿಯು ಅತ್ಯಂತ ಹೃದಯುದ್ರಾವಕವಾಯಿತು ಹುಲಿ, ಸಿಂಹಗಳ ಪಂಜರಗಳ ಮೇಲೆ ನೀರು ನಿಂತು, ಅವು ಪಂಜರಗಳಲ್ಲಿಯೇ ನೀರು ಕುಡಿದು, ಉಸುರುಗಟ್ಟಿ ಸತ್ತು ಬಿದ್ದವು ದೊಡ್ಡ ದೊಡ್ಡ ವನ್ಯಪಶುಗಳದ್ದೇ ಈ ತೆರ ಹಾದಾದ ಬಳಿಕ ಪಕ್ಷಿಗಳು ಯಾವ ಗಿಡದ ತಪ್ಪಲು. ಇತ್ತ ಇದ್ದಲ್ಲಿಯೇ ಸೆಟೆದು ಬಿದ್ದವು ಅನೇಕ ವರ್ಷಗಳಿಂದ ದೇಶ ದೇಶಾಂತರದಿಂದ ಬೇಡಿದ ಬೆಲೆಗೊಟ್ಟು ತರಿಸಿದ ಪಶು ಪಕ್ಷಿಗಳನ್ನು ಯಮರಾಜನು ಒಂದೇ ತುತ್ತಿನಿಂದ ನುಂಗಿದನು. ಈ ಹಾನಿಯು ಅಪರಿಮಿತವಾದದ್ದಿರುತ್ತದೆ.

ಮಳೆಯು ತುಸು ಕಡಿಮೆಯಾದ ಬಳಿಕ ದಿವಾನರೇ ಮೊದಲಾದ ಉದ್ಯೋಗಸ್ಥರೂ, ರಾಜಸಿಂಡೆಯರೂ ಆನೆಗಳನ್ನು ತಕ್ಕೊಂಡು ಜನರನ್ನು ಸಂಕಟದೊಳಗಿಂದ ಮುಕ್ತಮಾಡಲು ಊರತುಂಬ ತಿರುಗಾಡ ಹತ್ತಿದರು ಮಾಳಿಗೆ ಮತ್ತು ಎರಡನೆಯ ಅಂತಸ್ಥಿನ ಮೇಲೆ ಜೀವವನ್ನು ಕಯ್ಯಲ್ಲಿ ಹಿಡಕೊಂಡು ಕೂತುಕೊಂಡವರನ್ನು ಆನೆಗಳ ಮೇಲೆ ಹತ್ತಿಸಿಕೊಂಡು, ಸುರಕ್ಷಿತ ಸ್ಥಳಕ್ಕೆ ಮುಟ್ಟಿಸಲಾರಂಭಿಸಿದರು. ಹಾಯಕೋರ್ಟ, ಶಾಲೆ, ರಾಜವಾಡೆ, ಮುಂತಾದ ಎಲ್ಲ ಸ್ಥಳಗಳಲ್ಲಿ ನಿರಾಶ್ರಿತರಿಗೆ ವಾಸವಾಗಿರಲು ಅನುಕೂಲ ಮಾಡಿಕೊಟ್ಟರು, ಜನರನ್ನು ಕುತ್ತು ದಾಟಿಸುವಾಗ ಅಲ್ಲಲ್ಲಿ ಭಯಾನಕ ನೋಟವನ್ನು ನೋಡುತ್ತಿದ್ದರು. ಗಂಡಸರು, ಹೆಂಗಸರು, ಹುಡುಗರು ಸತ್ತು ಬಿಟ್ಟಿದ್ದನ್ನು ದನಗಳು ಕೊಳೆತು, ದುರ್ಗಂಧ ವಾಸನೆ ಇದ್ದದ್ದನ್ನು ನೋಡುವದೂ, ಸಹಿಸುವದೂ ಕಠಿಣವಾಗಿತ್ತು.

ರೇಲ್ವೆಯು ಹರಿದು ಹೋಗಿದೆ ಪಟ್ಟಣದ ಸುತ್ತಲು ಆಳೆತ್ತರ ನೀರು ನಿಂತದೆ. ಪರಸ್ಥಳದಿಂದ ಯಾವ ಪದಾರ್ಥವೂ ಬರುವಂತಿಲ್ಲ. ಇಂಥ ದುರ್ಧರ ಪ್ರಸಂಗದಲ್ಲಿ ಜೀನಸುಗಳ ಧಾರಣೆಯು ಏರಬಾರದೆಂದು ಸರಕಾರದವರು ಧಾರಣೆಯನ್ನು ನಿರ್ಬಂಧ ಮಾಡಿದ್ದಲ್ಲದೆ ಯಾವತ್ತು ಜನರಿಗೆ ಜೀವನಕ್ಕೆ ಅವಶ್ಯವಾದ ಪದಾರ್ಥಗಳು ದೊರೆಯುವಂತೆ ರೇಶನದ ಏರ್ಪಾಡು ಮಾಡಿದ್ದಾರೆ ಅನಾಥ ಮತ್ತು ನಿರಾಶ್ರಿತರ ದೆಸೆಯಿಂದ ದನಿಕರೂ ಸರಕಾರದವರೂ ಅನ್ನ ವಸ್ತ್ರದ ವ್ಯವಸ್ಥೆ ಮಾಡುತ್ತಿದ್ದಾರೆ

ನಿರಾಶ್ರಿತರಿಗೆ ಸಹಾಯ -

ಮುಂಬಯಿಯ ... ಮತ್ತು ... ರಾಧಿ ವರ್ತಕರು ರೇಲ್ವೆ ... ಒಂದಾದ ... ಹಡಗದಲ್ಲಿ ಸಾಹಿತ್ಯ ... ಕಳಿಸಿದರು. ಅನೇಕ ಸ್ವಯಂಸೇವಕರೂ ಹೋಗಿದ್ದಾರೆ ಹಡಗದಲ್ಲಿ ಅಕ್ಕಿಯ ... ಗಳೇ ... ಸಾವಿರವುಂಟು. ಇದರಂತೆ ಉಳಿದ ಪದಾರ್ಥ ... ವು

ಮುಂಬಯಿಯಲ್ಲಿ ... ಕಳಿಸುವ ... ವು ಒಕ್ಕಟದಿಂದ ನಡೆದಿದ್ದು ೫೨೦೧ ರೂಪಾಯಿಯಂತೆ ವರ್ಗಣಿ ಕೇಳಿವರು. ಅನೇಕರಾಗಿದ್ದಾರೆ ಇವರ ಹೊರ್ತು ಅನೇಕ ಶ್ರೀಮಂತರು ತಮ್ಮ ವಿಚಾರದಿಂದ ಕಷ್ಟ ಪೀಡಿತರಿಗೆ ಅಕನವಶನಗಳ ದಾನ ಮಾಡಿ, ಪುಣ್ಯ ಭಾಗಿಗಳಾಗಲುಪಕ್ರಮಿಸಿದ್ದಾರೆ.

ಬೆಳೆಯ ಹಾನಿಯು-

ಮಳೆಯಾದ ಪ್ರಾಂತದಲ್ಲಿಯ ಎಲ್ಲ ಬೆಳೆಗಳು ನಾಶವಾದವು ಗುಜರಾಥದ ಹತ್ತಿಯು ಪ್ರಸಿದ್ಧ ಈಗಾಗಲೆ ಅಲ್ಲಿಯ ಬೆಳೆಯು ಹೂವಿಗೆ ಬಂದಿತ್ತು. ಅದೆಲ್ಲ ನಾಶವಾಯಿತು. ಹತ್ತಿಯ ಆಶೆ ಮಾಡುವಂತಿಲ್ಲ.

ಅಹಮದಾಬಾದಿನ ಗಿರಣಿಗಳಲ್ಲಿಯೂ ನೀರು ಹೊಕ್ಕು ವಿಪರೀತ ಕೇಡಾಗಿದೆ ಕಟ್ಟಡ, ಇಂಜನು ಸರಿಯಾಗಿದ್ದ ಹೊರ್ತು ಗಿರಣಿಗಳನ್ನು ನಡಿಸಬಾರದೆಂದು ಬಾಯಲರ ಇನ್ಸಪೇಕ್ಟರರು ಹುಕುಮು ಮಾಡಿದ್ದಾರೆ.

ಬೇರೆ ಸ್ಥಳಗಳ ಸುದ್ದಿಗಳು,

ಅಹಮದಾಬಾದ- ೫೨೯೩ ಮನೆಗಳು ಬಿದ್ದವು ೨೨ ಲಕ್ಷದ ಹಾನಿಯಾಗಿದೆ ಒಟ್ಟು ೩೫ ಇಂಚು ಮಳೆ ಬಿತು.

ಬಡೋಚ- ಆಮೋದ ತಾಲೂಕಿನಲ್ಲಿ ಹೃದಯದ್ರಾವಕ ಕೇಡಾಯಿತು ೧೨೦ ಹಳ್ಳಿಗಳು ಕೇಡಿಗೊಳಗಾದವು. ೩೦ ಸಾವಿರ ಜನರು ನಿರಾಶ್ರಿತರಾಗಿದ್ದಾರೆ. ಹತ್ತು ಸಾವಿರ ದನಗಳು ಸತ್ತವು ೧೫ ಲಕ್ಷದ ಹಾನಿಯಾಗಿದೆ. ಅನ್ನವಿಲ್ಲದವರಿಗೆ ಸಂಕಾರೀ ವೆಚ್ಚದಿಂದ ಅನ್ನ ಹಾಕುವಂತೆ ಕಲೆಕ್ಟರರು ಮಾಮಲೇದಾರರಿಗೆ ಹುಕುಮು ಮಾಡಿದ್ದಾರೆ.

ಪ್ರವಾಹದಗುಂಟ ಹೆಣಗಳು- ವಿಶ್ವಾಮಿತ್ರಿ ನದಿಯ ಕೆಳವಿನಗುಂಟ ಅನೇಕ ಹೆಣಗಳು ಒಂದು ಪ್ರನಾರ್ಮವೆಂಬ ಹಳ್ಳಿಗೆ ಹತ್ತಿರುತ್ತವೆಂದು ಸುದ್ದಿ ಬಂದಿದೆ.

ರೇಲ್ವೆಯ ಹಾನಿಯು-

ಮಳೆಯಿಂದ ಬಿ ಬಿ. ಸಿ. ಆಯ ರೇಲ್ವೆಯ ಹಾನಿಯೂ ಬಹಳಾಗಿದೆ. ದಾರಿಯನ್ನು ನೆಟ್ಟಗೆ ಮಾಡಲಿಕ್ಕೆ ಕನಿಷ್ಠ ೧೫ ದಿವಸಗಳು ಬೇಕು ರಿಪೇರಿ ಮತ್ತು ಸಂಚಾರದ ಪ್ರತಿಬಂಧದ ಮೂಲಕ ಕಂಪನಿಗೆ ಮೂವತ್ತು ಲಕ್ಷದ ಹಾನಿ ತಟ್ಟುವದೆಂದು ಅಂದಾಜು ಮಾಡಲ್ಪಟ್ಟಿದೆ.

ಹತ್ತು ಸಾವಿರ ಜನರು ಮುಣುಗಿದರು.

—o—

ಲಕ್ಷ ಜನರು ದೆಸೆಗೇಡಾದರು.

—o—

ಚೀನ ದೇಶದಲ್ಲಿಯೂ ಗುಜರಾಥದಂತೆ ಅತಿವೃಷ್ಟಿಯಾಯಿತು. ಪ್ರೂಕಿನ ಪ್ರಾಂತದಲ್ಲಿ ಹುಯಿಲಿಂಗ ನದಿಗೆ ಮಹಾಪೂರ ಬಂದು ಹತ್ತು ಸಾವಿರ ಜನರು ಜಲ ಸಮಾಧಿ ಹೊಂದಿದರು. ಮತ್ತು ಒಂದು ಲಕ್ಷ ಜನರು ದೆಸೆಗೇಡಾದರು. ದನಕರ ಹಾಗು ಆಸ್ತಿಯ ಹಾನಿಯಂತೂ ಎಣಿಕೆ ಇಲ್ಲದಷ್ಟು ಆಗಿದೆ

ಕೌನ್ಸಿಲದ ಮೆಂಬರನಿಗೆ ಶಿಕ್ಷೆ—

ಬಂಗಾಲದಲ್ಲಿ ಫೆನಿ ಲೋಕಲಬೋರ್ಡಿನ ವ್ಹಾಯಿಸ ಪ್ರೆಸಿಡೆಂಟರಾದ ಮೌಲಾನಾ ಸಿದ್ದಿಕ ಸಾಹೇಬರು ಕೌನ್ಸಿಲದ ಮುಸಲಮಾನ ನಿಯುಕ್ತ ಮೆಂಬರರೂ ಆಗಿದ್ದಾರೆ ತಮ್ಮ ಬೋರ್ಡಿನ ದ್ರವ್ಯ ದುರುಪಯೋಗ ಮಾಡಿದರೆಂಬ ಆರೋಪದಿಂದ ಮ್ಯಾಜಿಸ್ಟ್ರೇಟರು ಇವರಿಗೆ ಎರಡು ವರ್ಷಗಳ ಸಕ್ರಮ ಶಿಕ್ಷೆ ವಿಧಿಸಿದರು.

ಹಿಂದೂ, ಮುಸಲಮಾನರಲ್ಲಿ ಐಕ್ಯವನ್ನು ಹುಟ್ಟಿಸಬೇಕೆಂದು ಪಂಜಾಬದಲ್ಲಿ ಡಾಕ್ಟರ ಕಿಚಲು, ಸರದಾರ ಖರಗಸಿಂಹ, ಸರದಾರ ಮಂಗಳಸಿಂಗ ಮೊದಲಾದವರು ಉಪಕ್ರಮಿಸಿದ್ದಾರೆ.

ಆಳರಸರು ಸ್ವರಾಜ್ಯ ಕೊಡುವರೇ?

—o—

ಮೃಗಜಲದ ಬೆನ್ನು ಹತ್ತಬೇಡಿರಿ.

—o—

ಹಿಂದುಸ್ಥಾನಕ್ಕೆ ರಾಯಲ ಕಮೀಶನ ಬರುವದು. ಅದರ ಪೂರ್ವ ಸಿದ್ಧತೆ ಬಿತ್ತರದಿಂದ ನಡೆದಿದೆ. ಲಾರ್ಡ ಆಯರ್ವಿನಸಾಹೇಬರು ೧೯ ನೆಯ ತಾರೀಖಿನ ದಿವಸ ಇದರ ದಿಗ್ದರ್ಶನ ಮಾಡುವರು. ಇವನ್ನೆಲ್ಲ ನೋಡಿ, ರಾಯಲ ಕಮೀಶನದಿಂದ ಸ್ವರಾಜ್ಯ ಸ್ವಾತಂತ್ರ್ಯ ದೊರೆಯುವದೆಂದು ಪವಾಳರಂಧರು ಆಶಾಧರಿತರಾಗಿದ್ದಾರೆ. ಇಂಥವರನ್ನುದ್ದೇಶಿಸಿ, ಶ್ರೀ ಭಾರ.ದಾಸಸಾಹೇಬರು ಒಂದು ಲೇಖ ಪ್ರಸಿದ್ಧ ಮಾಡಿ, ಸ್ವರಾಜ್ಯದ ಮೃಗಜಲದ ಬೆನ್ನು ಹತ್ತಬೇಡಿರೆಂದು ಮುಂಜಾಗ್ರತೆ ಹೇಳಿದ್ದಾರೆ.

೧ ಇಜಿಪ್ತಕ್ಕೆ ಕೊಟ್ಟ ವಚನವನ್ನು ಇಂದು ನಾಳೆಂದು ಮುಂದೆ ಹಾಕುವ ಮತ್ತು ಅಲೇಕಝಾಂಡ್ರಾ ಬಂದರಕ್ಕೆ ಯುದ್ಧದ ಹಡಗಗಳ ಹೆದರಿಕೆ ತೋರಿಸುವ

೨ ವಿಮಾನಗಳ ಹಾಗು ತೋಫುಗಳ ಭಯ ತೋರಿಸಿ, ಮೆಸಾಪೋಟೆಮಿಯಾವನ್ನು ತನ್ನ ಹಿತಕದಕ್ಕೆ ಹಿಡಿದಿರುವ

೩ ತನ್ನ ವ್ಯಾಪಾರಕ್ಕೇ ಗುತ್ತಿಗೆ ಇರಬೇಕೆಂದು ಚೀನದ ಮೇಲೆ ದಂಡಯಾತ್ರೆ ಮಾಡಿದ

೪ ತನ್ನ ದೇಶದಲ್ಲಿಯೇ ಕೂಲಿಕಾರರ ಸಂಘಶಕ್ತಿಯನ್ನು ಮುರಿಯಲೆತ್ನಿಸಿರುವ

೫ ತನ್ನ ದೇಶದಲ್ಲಿ ಲಾರ್ಡರ ವರ್ಚಸ್ಸನ್ನು ಹೆಚ್ಚಿಸಿ, ಕಾಮನ್ಸರ ಮಹತ್ವವನ್ನು ಕಡಿಮೆ ಮಾಡುವ

ಆಳರಸರಿಂದ ಸ್ವರಾಜ್ಯ ದೊರೆಯುವದುಂಟೇ? ಸ್ವರಾಜ್ಯ ದೊರೆಯಬೇಕಾದರೆ- ರಾಮಬಾಣ- ಉಪಾಯ ವೊಂದೇ ಉಂಟು- ಅದು

ಅಸಹಕಾರ

ಈಶ್ವರನ ಪಿಂಡಿಯನ್ನು ಕಿತ್ತಿದ ಬಗ್ಗೆ

ಕಲಕತ್ತೆಯಲ್ಲಿ ಹರತಾಳ.

ಸ್ಥಳದ ಅತಿಕ್ರಮಣ ಮಾಡಿರುತ್ತಾರೆಂದು ಕಲಕತ್ತೆಯ ಪೋಲೀಸರು ಶಿವನ ಪಿಂಡಿಯನ್ನು ಕಿತ್ತಿ ಹಾಕಿಸಿದರಷ್ಟೇ; ಈ ಕೃತ್ಯದ ಬಗ್ಗೆ ಹಿಂದೂ ಜನಾಂಗವು ಕ್ಷೋಭೆಗೊಂಡಿದೆ. ಈ ಕೃತ್ಯ ನಿಷೇಧಿಸುವದಕ್ಕಾಗಿ ಹಿಂದೂ ಜನರು ಹರತಾಳ ಮಾಡಿ, ಎಲ್ಲ ವ್ಯವಹಾರವನ್ನು ಬಂದು ಮಾಡಿದರು. ಮತ್ತು ಪ್ರಮುಖರು ಪಿಂಡಿಯನ್ನು ಕಿತ್ತಿದ ಸ್ಥಳಕ್ಕೆ ಹೋಗಿ ತಾತ್ಕಾಲಿಕ ಲಿಂಗಸ್ಥಾಪನೆ ಮಾಡಿ, ಅರ್ಚನೆ ಮಾಡಿ, ಮಂತ್ರ ಪಠಣ ಮಾಡಿದರು. ಇದೇ ವಿಷಯವಾಗಿ ಗವ್ಹರ್ನರಸಾಹೇಬರ ಕಡೆಗೆ ಡೆಪ್ಯುಟೇಶನ ಹೋಗತಕ್ಕದ್ದುಂಟು.

ರಾ. ಬ. ಕಂಬಳಿ ಮತ್ತು ಟ್ರೇನಿಂಗ ಕಾಲೇಜ

[illegible]

(ಬರೆದು ಬಂದದ್ದು)

ಕಳೆದ ೧೮ನೇ ತಾರೀಖಿನಿಂದ ಮುಂಬಯಿಯ ಕೌನ್ಸಿಲಿನ ಅಧಿವೇಶನವು ಆರಂಭವಾಗಿದ್ದು ಇನ್ನು ೧೫ ದಿನಗಳ ವರೆಗೆ ನಡೆಯುವದೆಂದು ಗೊತ್ತಾಗಿದೆ. ಅಗಸ್ಟ ೩ನೇ ತಾರೀಖಿಗೆ ಮುಗಿಯುವದೆಂದು ಮೊದಲು ಗೊತ್ತಾಗಿದ್ದರೂ ಸರಕಾರದ ಠರಾವು ಮುಂತಾದ ಕಾರ್ಯಕ್ರಮಗಳ ಸಲುವಾಗಿಯೇ ಹೆಚ್ಚು ದಿನಗಳು ಬೇಕಾಗುವದರಿಂದ ಮತ್ತೊಂದು ವಾರ ಹೆಚ್ಚಿಗೆ ಬೆಳಿಸುವರೆಂದು ಕೇಳುತ್ತೇವೆ.

ಈ ಸಾರಿನ ಅಧಿವೇಶನದಲ್ಲಿ ರಾ. ಬ. ಕಂಬಳಿಯವರು ಕರ್ನಾಟಕದ ಹಿತ ಸಂಬಂಧವಾಗಿ ಎರಡು ಮಹತ್ವದ ಠರಾವುಗಳನ್ನು ತರತಕ್ಕವರು ಇದ್ದರೆಂದು ನಮ್ಮ ಕೇಳಿಕೆಯುಂಟು. ಮೊದಲನೆಯದು ಅಖಿಲ ಕರ್ನಾಟಕವನ್ನು ಒಂದುಗೂಡಿಸಿ ಒಂದು ಸ್ವತಂತ್ರ ಪ್ರಾಂತವನ್ನು ಮಾಡಬೇಕೆಂಬುದು. ಧಾರವಾಡದ ಟ್ರೇನಿಂಗ ಕಾಲೇಜವನ್ನು ನಿಲ್ಲಿಸಿದ್ದು ಅದನ್ನು ಪುನಃ ಆರಂಭಿಸಬೇಕೆನ್ನುವದು ಎರಡನೆಯದು. ಕರ್ನಾಟಕದ ಉತ್ಕರ್ಷದ ದೃಷ್ಟಿಯಿಂದ ವಿಚಾರ ಮಾಡುವವರಿಗೆ ಮೊದಲನೆಯ ಠರಾವು ಅತಿ ಮಹತ್ವದ್ದೆನಿಸುವಂತೆ ಎರಡನೆಯದು ಅತಿ ಅಗತ್ಯದ್ದೆನಿಸುವದು. ಕರ್ನಾಟಕದ ಏಕೀಕರಣದ ಪ್ರಶ್ನೆಯು ಠರಾವು ಒಂದು ವೇಳೆ ಪಾಸಾದರೂ ಅದು ನಮ್ಮ ಇಚ್ಛೆಯಂತೆಯೇ ಮದ್ರಾಸ ಮುಂತಾದ ಪ್ರಾಂತಿಕ ಸರಕಾರಗಳ ಹಾಗೂ ಹಿಂದುಸ್ಥಾನ ಸರಕಾರದ ವಿಚಾರಕ್ಕೆ ಸಂಬಂಧಿಸಿದ ಮಾತಾಗುವದರಿಂದ ಅವರೆಲ್ಲರ ಅನುಮತಿಯು ದೊರೆದು ಜನ್ಯ "ಮುತ್ತ್ಯಾವದ ಒಳಿತ ಪಾರ್ಲಮೆಂಟ" ವರೆಗೂ ಹೋಗಬೇಕಾಗಬಹುದು ಇದಕ್ಕಾಗಿ ಅದು ಹೊಸದಾಗಿ ಆಗಬೇಕಾದ ಮಾತು ಆದರೆ ಎರಡನೆಯದು ಹಾಗಲ್ಲ. ಇದ್ದದ್ದನ್ನು ಕಳೆದುಕೊಳ್ಳುವ ವಿಷಯವು. ಕಳೆದುಕೊಂಡ ವಸ್ತುವನ್ನು ಆಗಿಂದಾಗ ದೊರೆಕಿಸುವದೇ ಪ್ರಶಸ್ತವು ಸರಕಾರದವರು ನಿಶ್ಚಯ ಮಾಡಿದರೆಂದರೆ ಅದು ಸದ್ಯದಲ್ಲಿ ಪುನಃ ಪ್ರಾರಂಭವಾಗುವ ಸಂಭವವು ತೀರ ಕಡಿಮೆ. ಯಾಕಂದರೆ ಹಣ ಉಳಿಸುವ ಸರಕಾರದ ಯೋಜನೆಯು ಕಾಲದಲ್ಲಿ ಈ ತರದ ಕಾಲ ವಿಳಂಬವು ದೊರೆತರೆ ಅದನ್ನು ಅದಷ್ಟು ರೀತಿಯಿಂದ ಹಿಂದೂಡಲಿಕ್ಕೆ ಯ... ...ಬೇ ಹೊರ ...ಟ್ಟಾಗಿ ಕೊಳ್ಳುವವರು ಮುಂದೆ ಬರಲಿಕ್ಕೆ ಎಷ್ಟು ... ... ಡಿ ಕೊಡಲಿಕ್ಕಿಲ್ಲ ಅದ್ದರಿಂದ ಈ ... ಅಧಿವೇಶನದಲ್ಲಿಯೇ ಮುಂದು... ...ದ ವಿಚಾರ ಪುಸ್ತಕಾಲಯ ... ನಮ್ಮ ಆಗ್ರಹದ ವಿನಂತಿಯಿದೆ.

ಹ್ವಿ. ಸಿ. ಮ.

ಧಾರವಾಡ

ಮುಂದೆ ಬರಿದೆ ಹೋದರೆ

ವಿಜ್ಞಾಪನೆ.

—೦—

ನಿರಾಶ್ರಿತರಾದ ಗುಜರಾಥದವರಿಗೆ ಸಹಾಯ ಮಾಡಿರಿ.

—೦—

ಹಿಂದ ಸ್ವಾಮಿ ಸೇವಾದಳದ ಕಾರ್ಯದರ್ಶಿಗಳಾದ ಡಾ|| ನಾರಾಯಣ ಸುಬ್ಬಾರಾವ ಹರಡೀಕರ ಇವರು ಗುಜರಾಥದಲ್ಲಿ ನೆರೆ ಬಂದ ಸ್ಥಳಗಳಿಗೆ ಸಹಾಯಾರ್ಥವಾಗಿ ೧೦ ಜನ ಸ್ವಯಂಸೇವಕರನ್ನು ಕಳಿಸಬೇಕೆಂದು ನಿಶ್ಚಯಿಸಿರುತ್ತಾರೆ. ನರ್ಮದಾ, ಸಾಬರಮತಿ, ವಿಶ್ವಮಿತ್ರ ಮೊದಲಾದ ನದಿಗಳಿಗೆ ಬಂದ ನೆರೆಯಿಂದ ಸುಮಾರು ೧೦೦ ಜನರು ಜಲಸಮಾಧಿಯನ್ನು ಹೊಂದಿದ್ದಲ್ಲದೆ ೪೦೦೦ ಜನರು ನಿರಾಶ್ರಿತರಾಗಿ ನಿಲ್ಲಲು ಮನೆಮಾರುಗಳಿಲ್ಲದವರಾಗಿರುತ್ತಾರೆ.

ಈ ನಿರಾಶ್ರಿತರಾದ ಜನರ ಸಹಾಯಕ್ಕೋಸ್ಕರ ಮುಂಬಯಿಯಲ್ಲಿ ಹಣ ಕೂಡಿಸುವ ಕಾರ್ಯವು ನಡೆದಿರುವದಲ್ಲದೆ ಅಲ್ಲಿಂದ ಸುಮಾರು ೨೦೦ ಜನ ಸ್ವಯಂಸೇವಕರು ನೆರೆ ಬಂದ ಸ್ಥಳಗಳಿಗೆ ಕೆಲಸ ಮಾಡಲು ಹೋಗಿರುತ್ತಾರೆ.

ಡಾ|| ಹರಡೀಕರ ಕೈಕೊಂಡ ಕಾರ್ಯವು ಸ್ತುತ್ಯವಾದದ್ದೂ ಅಗತ್ಯವಾದದ್ದೂ ಇರುತ್ತದೆ. ಆದಕಾರಣ ನಾವು ಈ ವಿನಂತಿಯನ್ನು ಮಾಡಿಕೊಳ್ಳುತ್ತೇವೆ. ಈ ನಿರಾಶ್ರಿತ ಜನರ ಸೇವೆಗೋಸ್ಕರ ಗುಜರಾಥಕ್ಕೆ ಹೋಗುವ ಕರ್ನಾಟಕ ಸ್ವಯಂಸೇವಕರ ಹೋಗುಬರುವ ಪ್ರವಾಸದ ವೆಚ್ಚದ ವ್ಯವಸ್ಥೆಯನ್ನು ಮಾಡುವದಕ್ಕೋಸುಗ ಹಣದ ಆವಶ್ಯಕತೆಯು ಬಹಳೇ ಅಗತ್ಯವಿರುತ್ತದೆ. ಇದರಲ್ಲಿ ಜಾತಿಮತಗಳ ಹಾಗೂ ರಾಜಕೀಯ ಸಂಬಂಧಗಳೇನೂ ಇರುವದಿಲ್ಲ. ಪ್ರಸ್ತುತ ಕೋಪಕ್ಕೆ ಗುರಿಯಾದ ನಿರಾಶ್ರಿತ ಜನರ ಸೇವೆ ಇರುವದು.

ಹಿಂದಕ್ಕೆ ಕರ್ನಾಟಕದಲ್ಲಿ ನೆರೆ ಬಂದ ಕಾಲಕ್ಕೆ ಗುಜರಾಥ ಹಾಗೂ ಮುಂಬಯಿ ಪ್ರಾಂತದವರು ಸಹಾಯ ಮಾಡಿರುವರು. ಈ ಸಮಯದಲ್ಲಿ ಕನ್ನಡಿಗರು ಗುಜರಾಥದವರಿಗೆ ಸಹಾಯ ಮಾಡುವದು ಅವಶ್ಯಕವಿರುತ್ತದೆ.

ತಾ|| ೫—೮—೧೯೩೭

ಶಿಕ್ಷಣ(?) ರಾಜ್ಯದ ಕಮೀಶನದ ಅಧ್ಯಕ್ಷರಾಗಿ [illegible] ಲಾರ್ಡ ಬರ್ನಹೆಡ್ಡ ಸಾಹೇಬರು [illegible] ಮೆಂಬರರಾಗಿ ಮಿಸೆಸ್ಸ ಬೆನ್ನ ಸ್ಕ್ಯಾರ ಮತ್ತು [illegible] ಸ್ಕೆಲ್ಲ ಸಾಹೇಬರನ್ನು ನೇಮಿಸಿದ್ದಾರೆ.

ಧಾರವಾಡ-

ಗುಜರಾಥದ ನೆರೆ ಹಾವಳಿಗೆ ಸಿಕ್ಕ ಜನರ ಸಹಾಯಕ್ಕಾಗಿ ಧಾರವಾಡ, ಹುಬ್ಬಳ್ಳಿ ಮತ್ತು ಗದಗಿನಲ್ಲಿ ಫಂಡು ಕೂಡಿಸುವ ಕೆಲಸ ನಡಿದಿದೆ.

ಇವತ್ತಿನ ದಿವಸ ಸಾಯಂಕಾಲದಲ್ಲಿ ಇಲ್ಲಿಯ ಹಾಲಗೇರಿಯ ಮೇಲಿರುವ ಮಿಶನಶಾಲೆಯಲ್ಲಿ ಧಾರವಾಡಕ್ಕೆ ನಳವು ಅಪರಿಹಾರ್ಯವಿಲ್ಲವೇ ಎಂಬ ವಿಷಯವನ್ನು ಕುರಿತು ರಾ ಬ ಪಿ. ಎಲ್. ಪಾಟೀಲರ ವ್ಯಾಖ್ಯಾನವಾಗುವದು. ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಮಿ. ಪರಾಣಸಾಹೇಬರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವರು.

ಶ್ರೀ ಮಾಣಿಕಪ್ರಭು ಪ್ರಾಸಾದಿಕ

ಗಾಯನ ವಾದನ ವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಗಾಯನ, ಹಾರ್ಮೋನಿಯಮ್, ತಬಲಾ, ಸತಾರ ವಗೈರೆ ಶಾಸ್ತ್ರ ರೀತಿಯಿಂದ ಕಲಿಸಲ್ಪಡುವದು.

ಈ ವಿದ್ಯಾಲಯವನ್ನು ಕೇವಲ ಸಂಗೀತ ಪ್ರಸಾರದ ಸಲುವಾಗಿ ಪ್ರಾರಂಭ ಮಾಡಿರುತ್ತೇವೆ. ಕಾರಣ ಯಾವತ್ತು ಸಂಗೀತ ಪ್ರೇಮಿಗಳು [illegible] ಕೂಡಬಾರದು. ವಿಶೇಷ ಮಾಹಿತಿಯ ಸಲುವಾಗಿ ಸಂಸ್ಥೆಗೆ ಭೆಟ್ಟಿಯಾಗಬೇಕು.

ಪತ್ತೆ:
ಶ್ರೀ ಮಾಣಿಕಪ್ರಭು
ಗಾಯನ ವಾದನ ವಿದ್ಯಾಲಯ
[illegible] ಅಂಗಡಿ
ಎದುರಿಗೆ [illegible], ಧಾರವಾಡ

ತಮ್ಮ,
[illegible],
ಅಣ್ಣ ಬಸಲಿಂಗ ಗವಾಯಿ.
ಮಾಣಿಕಪೂರ.

ಟೆಂಡರ ಜಾಹೀರ ನೋಟೀಸು

ಧಾರವಾಡ ಮ್ಯುನಸಿಪಾಲಿಟಿ ಕಚೇರಿಯಿಂದ —

ಯಾವತ್ತು ಕಾಂಟ್ರ್ಯಾಕ್ಟರ ಜನರಿಗೆ ಈ ನೋಟೀಸಿನಿಂದ ತಿಳಿಸುವದೇನಂದರೆ ಚಾಲು ವರ್ಷದಲ್ಲಿ ಕೆಳಗೆ ಕಾಣಿಸಿದ ಕಾಮಗಾರಿಗಳನ್ನು ಮಾಡಿಸುವದಿದ್ದು ಆ ಬಾಬತ್ತು ಪೀಸವರ್ಕ ಕಾಂಟ್ರ್ಯಾಕ್ಟರ ಜನರ ಕಡೆಯಿಂದ ಟೆಂಡರುಗಳನ್ನು ಕರೆಯಲಿಕ್ಕೆ ಸ್ಟ್ಯಾಂಡಿಂಗ ಕಮಿಟಿಯವರು ಠರಾವ ಮಾಡಿದ್ದಾರೆ. ಆದ್ದರಿಂದ ಸದರಿ ಕೆಲಸಗಳನ್ನು ಕಾಂಟ್ರ್ಯಾಕ್ಟದಿಂದ ಹಿಡಿಯತಕ್ಕವರು ಪ್ರತಿಯೊಂದು ಕೆಲಸದ ಬಗ್ಗೆ ಯೋಗ್ಯ ದರಗಳನ್ನು ಹಾಕಿ ತಾರೀಖು ೧೦ ಅಗಸ್ಟ ೧೯೩೭ನೇ ಇಸ್ವಿ ದಿವಸದೊಳಗಾಗಿ ತಮ್ಮ ಮೊಹರುಬಂದ ಟೆಂಡರುಗಳನ್ನು ಕೆಳಗೆ ಸಹಿ ಮಾಡಿದವರ ಕಡೆಗೆ ಕಳಿಸಿಕೊಡತಕ್ಕದ್ದು. ಲಕೋಟಿಯ ಮೇಲೆ "ಇಂಥಾ ಕೆಲಸದ ಬಗ್ಗೆ ಟೆಂಡರು" ಅಂತ ಸ್ಪಷ್ಟವಾಗಿ ಬರೆಯಬೇಕು. ಮುದ್ದತ್ತು [illegible] ಬಂದ ಟೆಂಡರಗಳನ್ನು ಸ್ವೀಕರಿಸಲಾಗುವದಿಲ್ಲ. ಕಡಿಮೇ ದರದ ಟೆಂಡರು [illegible] ಸ್ವೀಕರಿಸಲೇ ಬೇಕೆಂಬ ಬಂಧನವಿರುವದಿಲ್ಲ. [illegible] ಹೆಚ್ಚಿನ ಮಾಹಿತಿಯು ಬೇಕಾದರೆ ಆಫೀಸಿನ ಹೊತ್ತಿನಲ್ಲಿ ಮ್ಯುನಿಸಿಪಾಲಿಟಿ ಕಚೇರಿಯಲ್ಲಿ [illegible] ಪಡೆಯಬಹುದು.

ಕೆಲಸಗಳ ತಪಶೀಲು

(೧) ಸಾರ್ವಜನಿಕ ಬಾವಿಗಳನ್ನು ಕಡಿಸುವದು ಮತ್ತು ರಿಪೇರಿ ಮಾಡಿಸುವದು (೨) ಗಟಾರಗಳನ್ನು ಕಟ್ಟಿಸುವದು (೩) ಮಾರ್ಕೆಟಿನಲ್ಲಿ ಕಾಳಿನ ಅಂಗಡಿಗಳನ್ನು ಕಟ್ಟಿಸುವದು. (೪) ಸಾರ್ವಜನಿಕ [illegible] ಮಂಡಿಗಳನ್ನು ಕಟ್ಟಿಸುವದು (೫) ರಸ್ತೆಗಳ ಮೇಲಿನ ಕಲ್ವರ್ಟುಗಳನ್ನು ಕಟ್ಟಿಸುವದು ವಗೈರೆ ಕಾಮಗಾರಿಗಳು.

ಧಾರವಾಡ ತಾ. ೧-೮-೩೭

K. P. KALAPPA.
ಚೀಫ ಆಫೀಸರ
ಧಾರವಾಡ ಮ್ಯುನಿಸಿಪಾಲಿಟಿ.

ಚಂದಾದಾರರಿಗೆ ಸೂಚನೆ.

ಅಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ಶ್ರೀ. ಪಿ. [illegible] ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು [illegible] ಇವರು ಧಾರವಾಡದಲ್ಲಿರುವ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಶುಕ್ರವಾರ ತಾರೀಖು ೫ನೇ ಅಗಸ್ಟ ೧೯೨೭ | ಸಂಚಿಕೆ ೧೬೭

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು [illegible]ಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಒಬ್ಬ ಹಗುರವಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೩೯|| ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ನೋಟೀಸು.

ಮೆ. ರಜಿಸ್ಟ್ರಾರ ಸಾ. ಬಹಾದೂರ ಕೋ. ಸೊಸಾಯಟೀ ಪುಣೆ ಇವರು ಕಲಘಟಗಿ ತಾಲೂಕ ಪೈಕಿ ಮರದೂರ ಸಹಕಾರಿ ಸಂಘವನ್ನು ರದ್ದು ಮಾಡಿದ ಬಗ್ಗೆ ಹಾಗು ಕೆಳಗೆ ಸಹಿ ಮಾಡಿದವರನ್ನು ಸದರ ಸಂಘದ ಲಿಕ್ವಿಡೇಟರನ್ನಾಗಿ ನೇಮಿಸಿದ ಬಗ್ಗೆ ಮುಂಬಯಿ ಸರಕಾರಿ ಗ್ಯಾಝೆಟಿನಲ್ಲಿ ಪ್ರಸಿದ್ಧ ಮಾಡಿರುತ್ತಾರೆ. ಕಾರಣ ಸದರ ಸಂಘದಿಂದ ಯಾರಿಗಾದರೂ ಏನಾದರೂ ಸಲ್ಲತಕ್ಕದ್ದಿದ್ದರೆ ಅದರ ಬಗ್ಗೆ ನಮ್ಮ ಕಡೆಗೆ ಈ ಹೊತ್ತಿನಿಂದ ಎರಡು ತಿಂಗಳೊಳಗಾಗಿ ಲೇಖಿಯಿಂದ ತಿಳಿಸಬೇಕಾಗಿ ವಿನಂತಿಯದೆ.

ತಾ|| ೨-೮-೧೯೨೭

Sd/ R. B. Khudanpur.
ಆಡಿಟರ, ಸಹಕಾರಿ ಸಂಘ, ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ
೧೨ ತಿಂಗಳಿಗೆ
೬ ,,
೪ ,,
ವಾರ ಪತ್ರಕ್ಕೆ ೧ ವರ್ಷ
ವಿಶೇಷ ಮಾಹಿತಿ ಕೇಳಿ.

ಮ್ಯಾನೇಜರ.

ವಿಜಯ ಪುಸ್ತಕ.

೫ನೇ ಶತಮಾನದ ಗೊಂದಲ
ವಿಚಿತ್ರ ಸಂಶಯ
ಲೋಕಮಾನ್ಯ ಟಿಳಕರ ಚರಿತ್ರೆ
ದೇಶಬಂಧು ದಾಸರ ಚರಿತ್ರೆ ,,
ದೇಶಭಕ್ತರ ಸಂದೇಶ ೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಸಾ ತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ.
ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಹೊಂದಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವವು. [illegible] ಸುತ್ತು ಬೇರೆ ತರದ ಠೇವುಗಳನ್ನು [illegible] ತೆಗೆದುಕೊಳ್ಳುವದು.

ವಿಶೇಷ ಸಂಗತಿಗಳನ್ನು [illegible] ಸಹಿ ಮಾಡಿದವರಿಂದ ತಿಳಕೊಳ್ಳಬಹುದು.

[illegible] [illegible]
[illegible]

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವಸ್ತ್ರೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒಪ್ಪರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೩೧ ಆ ೨೭ ನೇ ಇಸ್ವಿ

ಮೈಸೂರ ಸರಕಾರದ ಹತ್ತು ಲಕ್ಷದ ಗಳಿಕೆ.

ಹೋದ ವಾರದಲ್ಲಿ ಲಾರ್ಡ ಆಯುರ್ವಿನಸಾಹೇಬರು ಮೈಸೂರಿಗೆ ಬಂದು ಉತ್ತಕಮಂಡಲಕ್ಕೆ ಪ್ರಯಾಣ ಬೆಳೆಸಿದರು. ಸಾಹೇಬರು ಮುಂಬಯಿಯಿಂದ ಬೆಂಗಳೂರಿಗೆ ಹೋಗುವಾಗ ನಿಜಾಮ ರಾಜ್ಯದಲ್ಲಿ ಹಾಯ್ದು ಹೋದರೂ, ಹೈದರಾಬಾದಿಗೆ ಹೋಗುವ ಮನಸ್ಸು ಮಾಡಲಿಲ್ಲ. ಅಲ್ಲಿಯ ಆಡಳಿತೆಯು ತೃಪ್ತಿಕರವಾಗಿದ್ದರಿಂದಲೇ ಅವರು ಹೈದರಾಬಾದಿಗಾಗಿ ಅಡ್ಡ ಒಡೆಯಲಿಲ್ಲೆಂದು ಸ್ಪಷ್ಟವಾಗುತ್ತದೆ. ಸಾಹೇಬರು ಮೈಸೂರಿಗೆ ಹೋದಾಗ ಪದ್ಧತಿ ಪ್ರಕಾರ ಮೇಜವಾನಿಯಾಯಿತು. ಆ ಪ್ರಸಂಗದಲ್ಲಿ ಲಾರ್ಡ ಆಯುರ್ವಿನಸಾಹೇಬರು ಮೈಸೂರ ದರಬಾರದ ಹತ್ತು ಲಕ್ಷದ ಪೊಗದಿಯನ್ನು ನಿರಂತರವಾಗಿ ಬಿಟ್ಟುಕೊಟ್ಟಿರುವ ಘೋಷಿತ ಮಾಡಿದರು. ಈ ವರ್ತಮಾನ ಕೇಳಿ, ಸಂಸ್ಥಾನದ ಪ್ರಜೆರಿಗೆ ಮಹಾದಾನಂದವಾಗಿರುತ್ತದೆ.

[illegible]ರದವರು ಶ್ರೀರಂಗಪಟ್ಟಣವ[illegible]ರಾಜರಿಗೆ ರಾಜ್ಯ ಕೊ[illegible] ೧೦ ಲಕ್ಷ ರೂಪಾ[illegible]ಬೇಕೆಂದು ಇವರಿಂದ [illegible] ಉತ್ತರ ಹಿಂದು[illegible]ನನ್ನೂ ಕೊಡುವದಿ[illegible] ನಿಜಾಮ ಸಾಹೇಬರೂ[illegible]ಂದ ಈ ಅನ್ಯಾಯ ಮಾತ್ರ [illegible] ಒಂದು ಪ್ರಕಾರದ ಅ[illegible]ಬೇಕೆಂದು ಮಹಾರಾ[illegible] ಅನೇಕ ವರ್ಷಗಳಿಂದ ಹಿಂ[illegible]ವಾಯಿತು ಸರಕಾರದವಲ್ಲಿ ಸ[illegible]ತ್ರವ್ಯವಹಾರ ನಡೆಸಿದರು. ಇದೇ ಉದ್ದೇಶವಾಗಿ [illegible]ರಾಜರು ಎರಡುಸಾರೆ ವಿಲಾಯತಿಗೆ ಹೋಗಿ[illegible]ದ್ದರು. ಅದರ ಫಲವು ಈ ಸಾಲ[illegible] ದವಷ್ಟು [illegible]

[illegible]ರಬಾರದವರು ಈ ಹತ್ತು ಲಕ್ಷ ರೂಪಾಯಿ[illegible]ಕ್ಕೆಗೆ [illegible]ವಿನಿಯೋಗಿಸಬೇಕೆಂಬುದಾಗಿ ಸಂಸ್ಥಾನದ ಪ್ರಜರೂ ಹೊರಗಿನವರೂ ತಮಗೆ ಉಚಿತ ತೋರಿದಂಥ ಸೂಚನೆಗಳನ್ನು ಮಾಡುತ್ತಿದ್ದಾರೆ. ಮುಖ್ಯವಾಗಿ ದೇಶದ ಸಂಪತ್ತಿನ ಅಭಿವೃದ್ಧಿಯಾಗಿ ಪ್ರಜಾ ಸೌಖ್ಯವಾಗಬೇಕೆಂಬ ಉದ್ದೇಶವನ್ನಿಟ್ಟುಕೊಳ್ಳಬೇಕೆಂದೇ ಎಲ್ಲರ ಮತವಾಗಿರುತ್ತದೆ. ಶಿಕ್ಷಣ, ಒಕ್ಕಲತನದ ಅಭಿವೃದ್ಧಿಯಾಗುವದರಿಂದ ಸಾಮಾನ್ಯವಾಗಿ ಎಲ್ಲರಿಗೂ ಲಾಭವಾಗುವದು. ಈ ಕೆಲಸವನ್ನು ದರಬಾರದವರು ಈ ಮೊದಲಿನಿಂದ ಮಾಡುತ್ತಾ ಬಂದಿದ್ದಾರೆ. ಮುಂಬಾದರೂ ಇನ್ನೊಂದು ಮುಖ್ಯ ಕರ್ತವ್ಯವಾಗಿರುತ್ತದೆ. ದೇಶದ ತುಂಬ ಗಿರಣಿ ಕಾರಖಾನೆಗಳಾದರೆ ದೇಶದ ಸಂಪತ್ತು ನಾನಾ ಪ್ರಕಾರವಾಗಿ ಬೆಳೆಯುವದು. ಬೆಲಜಿಯಮದ ಬೆಳಗಿಯನ್ನು ಮುಂದಿಟ್ಟುಕೊಂಡು, ಆ ಪ್ರಕಾರ ನಾವು ಒಳಿಯ ಕಾರಖಾನೆಗಳನ್ನಿಡಲು ಈ ದ್ರವ್ಯವನ್ನು ವಿನಿಯೋಗಿಸುತ್ತಾ ಹೋಗುವದು ಹೆಚ್ಚು ಪ್ರಶಂಸನೀಯವಾಗುತ್ತದೆ. ದಾವಣಗೇರಿಯಲ್ಲಿ ಗಿರಣಿಯನ್ನು ಕಟ್ಟಬೇಕೆಂದು ಅನೇಕ ವರ್ಷಗಳಿಂದ ವಿಚಾರ ನಡೆದಿದೆ. ಆ ವಿಚಾರಕ್ಕೆ ಆನಾಯಾಸವಾಗಿ ಮೂರ್ತ ಸ್ವರೂಪ ಬರಲು ದ್ರವ್ಯಾನುಕೂಲತೆಯಾಗಿದೆ. ಮೊದಲನೆಯದು ಹತ್ತು ಲಕ್ಷದಿಂದ ಗಿರಣಿ ಕಟ್ಟಬೇಕೆಂದು ನಮ್ಮ ಸೂಚನೆಯುಂಟು.

— —

ಸ್ವಾಣಿಪತದ ಕಾಳಗ ಸಾಕು ಮಾಡಿರಿ.

ಪ್ಲಾಸಿಯ ಮುಯ್ಯ ತೀರಿಸಿಕೊಳ್ಳಿರಿ.

ಶ್ರೀ ಶೌಕತಅಲ್ಲಿಯವರು ಮುಂಬಯಿಯಲ್ಲಿ ಮುಂದೆ ಕೊಟ್ಟಂತೆ ಭಾಷಣ ಮಾಡಿದ್ದಾರೆ.

ನಾನು ಸರಕಾರೀ ಕೆಲಸದಲ್ಲಿದ್ದಾಗ ಕೂಡ ಲೋಕಮಾನ್ಯರ ಭಕ್ತನಾಗಿದ್ದೆನು. ಗಾಂಧಿಯವರಂತೂ ಅವರ ನಿಸ್ಸೀಮ ಭಕ್ತನಾಗಿದೆನು. ನಾನು ಯೌವನಾಗಲು ಟಿಳಕರನ್ನು ಅನುಸರಿಸತಕ್ಕವನೆಂದು ತಿಳಕೊಂಡಿದ್ದೇನೆ. ಸದ್ಯದಲ್ಲಿ ಮಹಾತ್ಮರ ಅಹಿಂಸೆಯ ಅನುಯಾಯಿಯಾಗಿದ್ದೇನೆ. ಆದರೆ ನಾನು ಯಾವದೊಂದು ರಾಜಕೀಯ ಪದ್ಧತಿಯ ಗುಲಾಮನಾಗಿದ್ದೇನೆಂದು ಮಾತ್ರ ತಿಳಿಯಬೇಡಿರಿ. ಹಿಂದುಸ್ಥಾನವು ಪರದಾಸ್ಯ ಶೃಂಖಲೆಯಿಂದ ಮುಕ್ತವಾಗುವಂಥ ಯಾವದೊಂದು ಕೃತ್ಯ ಕರ್ತವ್ಯವನ್ನು ನಾವು ಈಗ ಮಾಡುತ್ತಿದ್ದೇವೇನು? ನಾನು ಸಾಯುವ ಪೂರ್ವದಲ್ಲಿ ಸ್ವರಾಜ್ಯ ದೊರತದ್ದನ್ನು ಕಣ್ಣಿನಿಂದ ನೋಡಬೇಕೆಂದು ಮಹತ್ವಾಕಾಂಕ್ಷೆಯುಳ್ಳವನಾಗಿದ್ದೇನೆ. ಆದರೆ ನಾವು ಈಗೇನು ಮಾಡುತ್ತಿರುವೆವು? ಕಾಳಕಲ್ಲಿ, ಮಹದ ಪಲ್ಲಿ ಬಡಿದಾಡುತ್ತಿರುವರು. ಕೇಳ ಕರ-ಮಾಡಿಲಕರರು ಹೊಡದಾಡುತ್ತಿರುವರು. ಹಿಂದೂ ಮುಸಲಮಾನರು ತಲೆಗೆ ತಲೆಗೆ ತಕ್ಕೊಳ್ಳುತ್ತಾರೆ. ಹೀಗಾಗಿ ರಾಷ್ಟ್ರೀಯ ಚಳವಳಿಯು ಹಿಂದೆ ಬಿದ್ದು, ಆಳರಸರಿಗೆ ಚಲ್ಲಾಟವಾಗಿದೆ. ಇದು ಪರೀಕ್ಷೆಯ ಕಾಲ ಸರಕಾರದ ಕೂಡ ಸ್ಪರ್ಧೆಯಿಂದ ಹೋರಾಡುವ ನಮಯ ನಾವು ಜಾತಿ ಕಲಹಕ್ಕಾಗಿ ಸೋನಪತ ಪಾಣಿಪತ ಮಾಡಿದೆ, ಪ್ಲಾಸಿಯ ಮುಯ್ಯ ತೀರಿಸಿಕೊಳ್ಳಲೋಸುಗ ಆಳರಸರ ಕೂಡ ಹೋರಾಡಲು ಸಜ್ಜಾಗತಕ್ಕದ್ದು.

— —

ಕಳ್ಳನ ಕಯ್ಯಲ್ಲಿ ಕೀಲೀ ಕೈ

ಬೆಳಗಾವಿಯ [illegible] ರ ಗೊಂದಲ.

— o —

ಬೆಳಗಾವಿಯ ಖಜೀನ[illegible]ಲ್ಲಿ[illegible] ಎಂಬವನು ೫೦ ಸಾವಿರ ರೂಪಾಯಿಗ[illegible] ಕೃಷ್ಣಮುಖ ಮಾಡಿ, ಎರಡು [illegible] ಈ ಪರ್ಯಂತರ ಆತನ ತಪಾಸು [illegible] ಸರಕಾರದವರು ತಮ್ಮ ಹಣದ [illegible]ಟ್ರೇಜರರ, ಹುಜೂರ ಡಿಪುಟಿ ಕಲೆ[illegible]ನಕೂಲ ಮಾಡಿಕೊಂಡರು. ಇದರಲ್ಲಿ ಸ[illegible]ದೋಷವೂ ಉಂಟು. ಸರಕಾರೀ ಅ[illegible]ಗೆ ಹೋದಾಗ ಅವರಿಗೆ ದಪ್ತ[illegible] ಗೊತ್ತಾಗಲಿಲ್ಲ. ಇದು ನಿಜ[illegible] ಜನ ಹು. ಡಿ. ಕಲೆಕ್ಟರರಿಂದ ಭ[illegible]ವದು ನ್ಯಾಯವಾಗಲಾರದು [illegible]ರವೆಂದರೆ- ಭಟ್ಟಯು ಜ[illegible] ಈ ಅಪರಾಧಕ್ಕಾಗಿ ದಂಡ[illegible]ಟ್ಟಿದ್ದಾರೆ. ಈ ಶಿಕ್ಷೆ ೧೯೨೩[illegible] ಗಿದೆ. ಆದರೂ ಈತನ [illegible] ಸರಕಾರೀ ಕೆಲಸದಲ್ಲಿಡ[illegible] ಒನ್ನು ಕೆಲಸದಲ್ಲಿಟ್ಟದ್ದು [illegible]? ಈ ತಪ್ಪಿಗಾಗಿ ಟ್ರೇಜರರ [illegible] ಎಕೆ ಕಯ್ಯಿಂದ ಹಣ ತೆ[illegible] ಕಳ್ಳನ ಕಯ್ಯಲ್ಲಿ ಕೀಲೀ ಕೈ ಕೊಟ್ಟರೆ [illegible] ಬಿಡುವನೇ?

— —

ಸರಗ್ವಾನ [illegible] ನಾಡಿನಿಂದ [illegible] ತೆ[illegible] ಸ್ವೈನ್ಯ [illegible] ದಿಲ್ಲಿಯ ಹಿಂದೂ [illegible]ವರು ಸರಕಾರಕ್ಕೆ ಅರ್ಜೀ ಮಾಡಿಕೊಂಡಿದ್ದಾರೆ.

— —

[illegible] ಪದಲ್ಲಿ ಹಿಂದೂ ಮಹಾಸಭೆ ಕೂಡುವದು. [illegible]ಕರರ ನಾಯುಡರು ಅಧ್ಯಕ್ಷರಾಗುವರು

ಟ್ರೇನಿಂಗ ಕಾಲೇಜಗಳ ಕೇಲ್ಗಣ್ಣು ಮೇಲ್ಗಣ್ಣು.

—೦—

ಮುಂಬಯಿಯ ವಿದ್ಯಾಖಾತೆಯವರು ಧಾರವಾಡದಂತೆ ಅಹಮದಾಬಾದಿನ ಟ್ರೇನಿಂಗ ಸ್ಕೂಲನ್ನು ಬಂದು ಮಾಡುವ ಆಪ್ಪಣೆ ಕೊಟ್ಟಿದ್ದಾರೆ. ಈ ಸ್ಕೂಲನ್ನು ಬಂದು ಮಾಡುವಾಗ ಸ್ಥಾನಿಕ ಅಧಿಕಾರಿಗಳ ಅಭಿಪ್ರಾಯವನ್ನು ಕೇಳಿಕೊಂಡಿದ್ದರೋ ಎಂಬುದಾಗಿ ಕೌನ್ಸಿಲದಲ್ಲಿ ದಿವಾನರಿಗೆ ಪ್ರಶ್ನೆ ಕೇಳಲ್ಪಟ್ಟಿತು. ಇದಕ್ಕೆ ಇವರು ಎಲ್ಲ ಟ್ರೇನಿಂಗ ಸ್ಕೂಲ ಮತ್ತು ಕಾಲೇಜಗಳಿಗೆ ಯಾವ ಪ್ರಮಾಣದ ಶಿಕ್ಷಕರು ಬೇಕಾಗುವರೆಂಬ ವಿಚಾರ ನಡೆಸಿದ್ದೇವೆ. ಆ ವಿಚಾರ ಮುಗಿಯುವ ತನಕ ನಾಲ್ಕು ಭಾಗಗಳ ಶಾಲೆಗಳು ಅವ್ಯವಸ್ಥೆಯನ್ನು ಅನುಭವಿಸುವವೆಂದು ದಿವಾನರು ಉತ್ತರ ಕೊಟ್ಟಿದ್ದಾರೆ.

—

ಒಬ್ಬ ರಾಣಿಯ ಆಸ್ತಿಗಾಗಿ ಇಬ್ಬರು ರಾಣಿಯರ ಹೋರಾಟ.

—೦—

ತ್ರಾವಣಕೋರದ ಸ್ವರ್ಗವಾಸಿ ಅರಸರ ತಂಗಿಯು ಪರಲೋಕವಾಸಿಯಾದಳು. ಇವಳಿಗೆ ಇಬ್ಬರು ಗಂಡರಿದ್ದಾರೆ. ಇಬ್ಬರೂ ಜೀವಂತರಿದ್ದಾರೆ. ತಂಗಿಯು ಪರಲೋಕವಾಸಿಯಾದಳು. ಇಬ್ಬರು ಮಕ್ಕಳಿದ್ದಾರೆ. ಜಂಡತಿಯ ಆಸ್ತಿಯನ್ನು ಯಾರು ವ್ಯವಸ್ಥೆ ಮಾಡಬೇಕೆಂಬ ದೊಡ್ಡ ಜಗಳವೆದ್ದಿದೆ. ಆಸ್ತಿಯು ೫೦ ಲಕ್ಷದ್ದಿದೆ. ಮಹಾರಾಜರು ಕೊಟ್ಟದ್ದು. ಇಬ್ಬರಿಂದ ಜೇಡ ಸರಕಾರದವರೇ ವಾರಸುದಾರರಾಗಬೇಕೆಂದು ಕೆಲವರು ಅನ್ನುತ್ತಾರೆ.

—

ಬಾಡಿಗೆಯ ಮೋಟಾರಗಳ ಮೇಲೆ ರೇಲ್ವೆಗಳ ಸಿಟ್ಟು ಕಿಡಿ!!

—೦—

ಇಂಗ್ಲಂಡದಲ್ಲಿ ರೇಲ್ವೆಯ ದರಕ್ಕಿಂತ ಅಗ್ಗವಾಗಿ ಮತ್ತು ಬೇಗನೆ ಮೋಟಾರಗಳು ಪ್ರಯಾಣಿಕರನ್ನು ಊರಿಂದೂರಿಗೆ ಮುಟ್ಟಿಸುತ್ತವೆ. ಹೀಗಾಗಿ ರೇಲ್ವೆಗಳ ಆದಾಯವು ಕಡಿಮೆಯಾಗುತ್ತಿರುವದು. ಕಂಪನಿಗಳು ಅಲ್ಲಲ್ಲಿ ಸ್ವಂತದ ಮೋಟಾರ ಸರ್ವೀಸ ಇಟ್ಟಿರುತ್ತವೆ. ಆದರೆ ಎಲ್ಲ ಸ್ಥಳಗಳಲ್ಲಿಯೂ ಇಲ್ಲ. ರೇಲ್ವೆಯು ಹಾನಿಯಾಗುವಂಥ ಮೋಟಾರಗಳ ಬಗ್ಗೆ ಪಾರ್ಲಮೆಂಟ ಸಭೆಯು ತನಕ ದೂರು ಹೋದವು. ತಾವೂ ದೇಶದ ತುಂಬ ಮೋಟಾರ ಸರ್ವೀಸ ಇಟ್ಟು, ಈಗಿನ ಬಾಡಿಗೆಯ ಕಂಪನಿಗಳನ್ನು ಮುಳುಗಿಸುವ ಮಾಡುವ ಹುಯುಕ್ತಿ ನಡೆಸಿವೆ.

—

ಕಲಿಯುಗದ ಭೀಮಸೇನನಾದ ರಾಮಮೂರ್ತಿಯ ಮೇಲೆ ದಾವೆ ಮತ್ತು ಫಿರ್ಯಾದಿ-

—೦—

ಮದ್ರಾಸದಲ್ಲಿ ಪ್ರೊಫೇಸರ ರಾಮಮೂರ್ತಿಯ ಕಸರತ್ತಿನ ಆಟಗಳು ನಡೆದಿವೆ. ಮೂರ್ತಿಯು ಒಬ್ಬನಿಗೆ ನಾಲ್ಕು ಆಟಗಳ ಗುತ್ತಿಗೆ ಕೊಟ್ಟನು. ಮತ್ತು ಕರಾರಿನಂತೆ ನಡೆಯಲಿಲ್ಲ. ಆದ್ದರಿಂದ ಗುತ್ತಿಗೆದಾರನು ಇವರ ಮೇಲೆ ದಾವೆ ಮಾಡಿ, ಜಂಗಮ ಆಸ್ತಿಯ ಜಪ್ತಿಯನ್ನು ತಂದನು. ಜಪ್ತಿಯ ವಾರಂಟು ಪೈಡ ಬೇಲಿಫನನ್ನು ಮೂರ್ತಿಯು ಹೊಡೆದು, ಅತನನ್ನು ಹೊರಗೆ ದೂಕಿದನು. ಈ ಆರೋಪದ ದೆಸೆಯಿಂದ ಇವರ ಮೇಲೆ ಫಿರ್ಯಾದಿಯಾಗಿದೆ.

—

ಖಾದಿಯ ಮೇಲೆ ಮಾನಪತ್ರ ಕೊಟ್ಟರೆ ಅಪಮಾನವೇ?

—೦—

ಮಂಗಳೂರಿನ ಡಿಸ್ಟ್ರಿಕ್ಟ ಲೋಕಲಬೋರ್ಡಿನವರು ಗವ್ಹರ್ನರಸಾಹೇಬರಿಗೆ ಖಾದಿಯ ಮೇಲೆ ಮಾನಪತ್ರ ಮುದ್ರಿಸಿ ಕೊಡಬೇಕೆಂದು ಬಹುಮತದಿಂದ ಮಾಡಿದ ಠರಾವು ಕೆಲ ಮೆಂಬರರಿಗೆ ಸರಿದೋರಲಿಲ್ಲ. ಆದ್ದರಿಂದ ಇವರು ಈ ಠರಾವಿನ ಪುನರ್ವಿಚಾರಣೆ ಮಾಡಬೇಕೆಂಬ ವಿನಂತಿ ಅರ್ಜಿಯನ್ನು ಅಧ್ಯಕ್ಷರ ಕಡೆಗೆ ಕಳಿಸಿದ್ದಾರೆ.

—

ರೀಲೀಫ ಫಂಡಿನ ಏರ್ಪಾಡು-

ಗುಜರಾಥ, ಕಾಠೇವಾಡ ಪ್ರಾಂತದಲ್ಲಿಯ ಅನಾವೃಷ್ಟಿಯಲ್ಲಿ ಸಿಕ್ಕಿದ ಜನರ ಪೋಷಣೆಗಾಗಿ ಫಂಡು ಕೂಡಿಸುವದಕ್ಕಾಗಿ ಮುಂಬಯಿಯಲ್ಲಿ ನಾಮದಾರ ಗವ್ಹರ್ನರಸಾಹೇಬರ ಅಧ್ಯಕ್ಷತೆಯಲ್ಲಿ ನಾಗರಿಕರ ಜಾಹೀರ ಸಭೆಯು ಕೂಡಿತ್ತು. ಸಭೆಯಲ್ಲಿ ಎರಡು ಲಕ್ಷ ಇಪ್ಪತ್ತೈದು ಸಾವಿರದ ಅಂಕಿಗಳು ಬಿದ್ದವು. ಕಾಂಗ್ರೆಸ ಕಮಿಟಿಯವರು ಪತ್ತು ಸಾವಿರ ರೂಪಾಯಿಗಳನ್ನು ಕೊಟ್ಟರು. ಉಳಿದ ದಾತಾರರಲ್ಲಿ ಲೇಡಿ ಆಯರ್ವಿನ ೧೦೦೦, ಮುಂಬಯಿಯ ಗವ್ಹರ್ನರಸಾಹೇಬರು ೧೦೦೦, ಅವರ ಪತ್ನಿಯವರು ೧೦೦೦, ಸಸೂನ ಕಂಪನಿ ೧೫೦೦೦, ಪ್ರಮುಖರಾಗಿದ್ದಾರೆ.

—

ಕಳ್ಳದಿಯ ಕಲೆಕ್ಟರರು-

ಗುಜರಾಥದ ಕೇಡಿನ ಚರ್ಚೆಯು ಕ್ಷಣದಲ್ಲಿ ಕೌನ್ಸಿಲ ಸಭೆಯಲ್ಲಿ ನಡೆಯಿತು. ಶ್ರೀ ನರಿಮನ್ನರು ಭಡೋಚದ ಕಲೆಕ್ಟರರು ಕಳ್ಳದೆಯವರಾಗಿದ್ದಾರೆಂದೂ, ಅವರು ಪ್ರಜಾ ರಕ್ಷಣೆಯ ಕರ್ತವ್ಯದಲ್ಲಿ ಮುಗ್ಧರಾಗಿದ್ದಾರೆಂದೂ ಟೀಕೆ ಮಾಡಿದರು. ಇದಕ್ಕೆ ಸರಕಾರದ ಪತಿಯಿಂದ ಸಮಾಧಾನದ ಉತ್ತರ ಕೊಡಲ್ಪಟ್ಟಿತು. ಬೇಕಾದಷ್ಟು ದ್ರವ್ಯ ವೆಚ್ಚ ಮಾಡಬೇಕು. ಬೇಕಾದ ಹಾಗೆ ಅನ್ನ ವಸ್ತ್ರ ಖೈರಾತ ಮಾಡಬೇಕೆಂದು ಸರಕಾರದಿಂದ ಕಲೆಕ್ಟರರಿಗೆ ಹುಕುಮು ಹೋಗಿದೆಂದು ಹೇಳಲ್ಪಟ್ಟಿತು.

—

ಹಾಪ್ಪಾಯಿಸರಾಯರಿಗೆ ತಾರು-

ಲಾರ್ಡ ಆಯರ್ವಿನಸಾಹೇಬರು ನವ್ಹಂಬರ ತಿಂಗಳಲ್ಲಿ ಗುಜರಾಥ, ಕಾಠೇವಾಡದ ಪ್ರವಾಸಕ್ಕೆ ಹೊರಡುವ ನಿಶ್ಚಯ ಮಾಡಿದ್ದಾರೆ. ಸಾಹೇಬರು ದಯವಿಟ್ಟು ಬರಬಾರದು. ತಮ್ಮ ಅತಿಥ್ಯ ಸತ್ಕಾರಕ್ಕಾಗಿ ವ್ಯಯವಾಗುವಂಥ ಲಕ್ಷೋಪಲಕ್ಷ ರೂಪಾಯಿಗಳನ್ನು ವಿಪದ್ಗ್ರಸ್ತರಿಗೆ ಸಹಾಯ ಮಾಡಲು ಸಂಸ್ಥಾನಿಕರಿಗೆ ಅಪ್ಪಣೆ ಕೊಡಬೇಕೆಂದು ಶ್ರೀ ಜೈನಸಿ.ಮೋರ್ವರ ಗೃಹಸ್ಥರು ಸಾಹೇಬರಿಗೆ ತಾರಿನಿಂದ ವಿನಂತಿ ಮಾಡಿಕೊಂಡಿದ್ದಾರೆ.

—

ಕೈದಿಯ ಧೈರ್ಯ ಸ್ಥೈರ್ಯ-

ಬರೋಡೆಯ ತುರಂಗದಲ್ಲಿದ್ದ ಒಬ್ಬ ಕೈದಿಯು ಅನೇಕ ಜನರು ಸಾಯುವದನ್ನು ದೂರಿಂದ ಕಂಡನು. ಕೂಡಲೆ ಈತನು ತಾರಿನ ಕಂಬವನ್ನೇರಿ, ಕಂತಿಗುಂಟ ಎರಡು ಫರ್ಲಾಂಗಿನ ತನಕ ಹೋಗಿ, ಆ ಎಲ್ಲ ಜನರನ್ನು ಬದುಕಿಸಿದನು. ರಾಜಪುತ್ರ ಧೈರ್ಯಸಿಂಹರಾಯರೂ, ದಿವಾನರೂ ಈತನ ಧೈರ್ಯಸ್ಥೈರ್ಯವನ್ನು ಪ್ರಶಂಸಿಸಿ, ಈತನ ಉಳಿದ ಶಿಕ್ಷೆಯನ್ನು ಈಗಿಂದಾಗ ಮಾಫ ಮಾಡಿದರು.

—

ಶಿವಪಟ್ಟಿಯ ಸುದ್ದಿಯು-

ಹೋದ ವಾರದಲ್ಲಿ ನಾಲ್ಕು ದಿವಸ ಶಿವಪಟ್ಟಿಯಲ್ಲಿ ಲೋಕಮಾನ್ಯರ ಪುಣ್ಯಸ್ಮರಣೋತ್ಸವವು ಬಹು ಸಮಾರಂಭದಿಂದ ನೆರವೇರಿತು. ಆಗ ಕರ್ನಾಟಕ ಇತಿಹಾಸ ಮಂಡಳಕ್ಕೆ, ಶ್ರೀ. ರಾಮರಾವ ಮಂಗಸೂಳಿಯವರು ೧೦೦, ಅಪ್ಪಾಸಾಹೇಬ ದೇಶಪಾಂಡೆಯವರು ೫೦ ಹೀಗೆ ಅನೇಕರು ಚಿಕ್ಕ ದೊಡ್ಡ ರಕಮುಗಳನ್ನು ಕೊಟ್ಟಂತೆ ತಿಳಿಯುತ್ತದೆ.

—

ಕಲಕತ್ತೆಯಲ್ಲಿ ಪೋಲೀಸರು ಕಿತ್ತಿ ಹಾಕಿದ ಶಿವನ ಪಿಂಡಿಯ ಸ್ಥಳದಲ್ಲಿ ಭಕ್ತ ಜನ ಸನ್ಯಾಸಿಗಳು ಸತ್ಯಾಗ್ರಹ ಮಾಡಿ ಕೂತಿದ್ದಾರೆ. ಇವರು ಬೇರೊಂದು ಲಿಂಗಸ್ಥಾಪನೆ ಮಾಡಿ, ನಿತ್ಯ ತ್ರಿಕಾಲ ಪೂಜೆ ಪ್ರಾರಂಭಿಸಿದ್ದಾರೆ.

—

THE DHARWAR BANK LTD. DHARWAR.

NOTICE.

A Special General Meeting of the shareholders will be held at the Bank office on Sunday the 7th August 1927 at 4 P M to confirm the following resolution passed in the Special General Meeting held on the 17th July 1927.

"That the authorised capital of the Bank be increased to Rs 2 lacs (Rs. 200,000) by issue of four thousand shares of the value of Rs 5 ach"

DHARWAR
21-7-1927

A. K. KATTI,
Managing Director.

ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ನೋಟೀಸು.

ಧಾರವಾಡ ಬ್ಯಾಂಕಿನ ಪಾಲಗಾರರ ವಿಶಿಷ್ಟ ಸಾಧಾರಣ ಸಭೆಯು ಬ್ಯಾಂಕ ಆಫೀಸಿನಲ್ಲಿ ಸನ್ ೧೯೨೭ ನೇ ಇಸ್ವಿಯ ತಾರೀಖು ೭ ನೇ ಅಗಸ್ಟ ರವಿವಾರ ದಿವಸ ಸಾಯಂಕಾಲದ ೪ ಘಂಟೆಗೆ ಸನ್ ೧೯೨೭ ನೇ ಇಸ್ವಿಯ ತಾರೀಖು ೧೭ ನೇ ಜುಲೈ ದಿವಸ ನೆರೆದಂಥ ವಿಶಿಷ್ಟ ಸಾಧಾರಣ ಸಭೆಯಲ್ಲಿ ಪಾಸಾದ ಕೆಳಗೆ ಬರೆದ ಠರಾವನ್ನು ಕಾಯಮ ಮಾಡುವದಕ್ಕಾಗಿ ಕೂಡುವದು. ಆ ಠರಾವು ಯಾವದೆಂದರೆ:—

"ಬ್ಯಾಂಕಿನ ಮಂಜೂರಾದ ಭಾಂಡವಲವನ್ನು ಪ್ರತಿಯೊಂದು ಪಾಲಿನ ಪೇಸ್ ಕಿಂಮತಿಯು ೫೦ ರೂಪಾಯಿಗಳು ಇರುವಂಥ ನಾಲ್ಕು ಸಾವಿರ ಪಾಲುಗಳನ್ನು ಹೊರಡಿಸಿ ೨ ಲಕ್ಷ ರೂಪಾಯಿ (೨೦೦,೦೦೦ ರೂ.) ಗಳ ವರೆಗೆ ಹೆಚ್ಚಿಸತಕ್ಕದ್ದು."

ಧಾರವಾಡ
ತಾ॥ ೨೧—೭—೧೯೨೭

ಅಣ್ಣಾಚಾರ್ಯ ಕಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ.

ಶ್ರೀ ಮಾಣಿಕಪ್ರಭು ಪ್ರಾಸಾದಿಕ

ಗಾಯನ ವಾದನ ವಿದ್ಯಾಲಯ
ಧಾರವಾಡ.

ಈ ವಿದ್ಯಾಲಯದಲ್ಲಿ ಗಾಯನ, ಹಾರ್ಮೋನಿಯಮ್, ತಬಲಾ, ಸತಾರ ವಗೈರೆ ಸಶಾಸ್ತ್ರ ರೀತಿಯಿಂದ ಕಲಿಸಲ್ಪಡುವದು.

ಈ ವಿದ್ಯಾಲಯವನ್ನು ಕೇವಲ ಸಂಗೀತ ಪ್ರಿಯರ ಸಲುವಾಗಿ ಮುದ್ದಾಮ ಸುರುವು ಮಾಡಿರುತ್ತೇವೆ. ಕಾರಣ ಯಾವತ್ತು ಸಂಗೀತ ಪ್ರಿಯರು ಈ ಅಪೂರ್ವ ಸಂಧಿಯನ್ನು ಕಳೆದುಕೊಳಬಾರದು. ವಿಶೇಷ ಮಾಹಿತಿಯ ಸಲುವಾಗಿ ಸಮಕ್ಷಮ ಭೆಟ್ಟಿಯಾಗಬೇಕು.

ಪತ್ತೆ
ಶ್ರೀ ಮಾ. ಪ್ರ. ಪ್ರಾ.
ಗಾಯನ ವಾದನ ವಿದ್ಯಾಲಯ
ಗಂ. ಭಿ. ಚೌಕ ಕೊಲ್ಹಾಪೂರದರ ಸ್ಟೇಶನರಿ ಅಂಗಡಿ
ಎದುರಿಗೆ ಕಾಮನಕಟ್ಟಿ ಓಣಿ, ಧಾರವಾಡ.

ತಮ್ಮ,
ಪ್ರೊಪ್ರಾಯಟರ,
ಲಕ್ಷ್ಮಣಸಿಂಗ ಗವಾಯಿ,
ಮಾಣಿಕಪೂರ.

ದುರಸ್ತಿ ನೋಟೀಸು

ಈಶ್ವರಪ್ಪಾ ಧರ್ಮಪ್ಪಾ ರಾಜಮನಿ ಸಾ॥ ಮಿತ್ರಿಕೋಟಿ ತಾಲ್ಲೂಕ ಕಲಘಟಗಿ ಇವರಿಗೆ-

ಕೆಳಗೆ ಸಹಿ ಮಾಡಿದವನು ಈ ನೋಟೀಸಿನ ಮೂಲಕ ನಿನಗೆ ತಿಳಿಸುವದೇನಂದರೆ- ನೀನು ತಾರೀಖು ೭-೭-೧೯೨೭ ನೇ ದಿವಸ ರಾಜಹಂಸ ವರ್ತಮಾನಪತ್ರದಲ್ಲಿ ನಿನ್ನ ಹೆಂಡತಿ ವ ನನ್ನ ಮಗಳಾದ ಬಾಯವ್ವಾ ಈಕೆ ಮೇಲೆ ಸುಳ್ಳು ವ ಅವಮಾನದ ಜಗವ ಮತ್ತು ಮಾಕಲಬೀ ನೋಟೀಸು ಕೊಟ್ಟಿರುತ್ತೀ.

ಹೋದ ಕಾರಹುಣ್ಣಿವಿ ಬಗ್ಗೆ ಮಗಳನ್ನು ನಾನು ಕರಿಯಲಿಕ್ಕೆ ಬಂದಾಗ್ಗೆ ಹಳ್ಳೀ ಊರಿಗೆ ಕರಕೊಂಡು ಹೋಗುವ ಕಾಲಕ್ಕೆ, ದಾಗೀನೆ ವಸ್ತ್ರಾ ಬೇರೆ ಇರಿ ಅಂತಾ ಹೇಳಿ ಪತ್ರ ಬರೆ ಮೇಲೆ ೧೫ ದಿವಸದಲ್ಲಿ ಮರಳಿ ಕಳಿಸಬೇಕು ಅಂತಾ ಹೇಳಿ ಕಳಿಸಿ ಕೊಟ್ಟಿರುತ್ತೆ. ನಾನು ಮಗಳಿಗೆ ಅಂತಾ ಕೊಟ್ಟ ಬಂಗಾರದ ಟಿಕಿ, ಸರಾ ಮತ್ತು ಮುತ್ತಿನ ಬುಗಡಿ ವ ಪಾಟಲಿ ಮತ್ತು ಒಂದು ನತ್ತು ಈ ಪ್ರಕಾರ ೫೦೦ ರೂಪಾಯಿ ಕಿಮ್ಮತ್ತಿಯ ದಾಗೀನೆ ಸಹಾ ಹಳ್ಳೀಪೂರ ಕೆಲಸ ಸಿಕ್ಕಲ್ಲೀ ವರಲಿ ಅಂತಾ ಬಿಟ್ಟು ಫಕ್ತ ಮಗಳನ್ನು ಕರಕೊಂಡು ಹೋದೆ ಬಂದು ಕಣ್ಣು ಆದವು ಇದ್ದ ಮಗಳನ್ನು ನೀವು ಒಳ್ಳೇ ರೀತಿಯಿಂದಾ ಇಟಗೋಳ್ಳಬೇಕು ಅಂತಾ ನನ್ನ ಯೋಗ್ಯತಾ ಮೀರಿ ಇಷ್ಟು ದಾಗೀನೆ ಕೊಟ್ಟಿರುತ್ತೇನೆ.

ಹೀಗಿದ್ದು ಆಕಿಯ ಮೇಲೆ ವ್ಯಭಿಚಾರ ದೋಷ ವಗೈರೆ ಹೊರಿಸಿ ನನ್ನ ಮನೆತನದ ಮರ್ಯಾದೆ ತೆಗದುಕೊಂಡಿ ನನ್ನ ಬೀಗರ ಮತ್ತು ದೈವದವರ ಮುಂದೆ ಖೊಟ್ಟಿ ನೋಟೀಸು ಕೊಟ್ಟು ನನ್ನ ಬೇಅಬರು ಮಾಡಿದಿ ಈ ಬಗ್ಗೆ ನೀನು ಈ ನೋಟೀಸು ಮುಟ್ಟಿದ ೭ ದಿವಸಗಳಲ್ಲಿ ಉಘಡ ರೀತಿಯಿಂದ ನನ್ನ ಮಗಳ ವ ನನ್ನ ಕ್ಷಮಾ ಬೇಡಿಕೊಳ್ಳಬೇಕು. ತಪ್ಪಿದರೆ ನಿನ್ನ ಮೇಲೆ ಇಂಡಿಯನ್ ಪಿನಲ್ ಕೋಡ ಕಲಂ ... ಪ್ರಕಾರ ಫಿರ್ಯಾದಿ ಮಾಡುವದಲ್ಲದೆ ೧೦೦೦ ಸಾವಿರ ರೂಪಾಯಿದ ಅಬರೂ ಲುಕ್ಸಾನ ದಾವೆ ದಿವಾಣಿ ಕೋರ್ಟಿನಲ್ಲಿ ಮಾಡುವದರಲ್ಲಿ ಬರುವದು ತಿಳಿಯುವದು.

ತಾ॥ ೩೧-೭-೧೯೨೭

ಈ ಎಡಗೈ ಹೆಬ್ಬೆಟ್ಟಿನ ಗುರ್ತ ದೇವೇಂದ್ರಪ್ಪಾ ಮಲ್ಲಪ್ಪಾ ಶೀಗಳ್ಳಿಯವರ ಸಾ॥ ಕಾಮಧೇನು ತಾ॥ ಕಲಘಟಗಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮] ಧಾರವಾಡ ಶನಿವಾರ ತಾರೀಖು ೭ನೇ ಆಗಸ್ಟ ೧೯೩೭ [ಸಂಚಿಕೆ ೧೭೮

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅದು ನೀರಿನ ದಬ್ಬಿಗಳನ್ನು ... ಗಾಡಿ ... ಗಾಲಿಯ ... ಗ್ಯಾಲನ ನೀರಿನ ಭಾರವನ್ನು ಒಯ್ದು ಹಾಗೆ ತರುತ್ತದೆ. ... ನೀರಿನ ... ನಮ್ಮ ಗಾಡಿಯು ... ಉಪಯೋಗಕ್ಕೆ ಬರುವದು. ...

ಹೆಚ್ಚಿನ ಸಂಗತಿ ಬಗ್ಗೆ ನಮ್ಮ ಧಾರವಾಡ ಶಾಖೆಯಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಿಂದ ... ಅಥವಾ ... ಬರೆದಾಗಲೀ ತಿಳಿದುಕೊಳ್ಳಬಹುದು

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ... ಸಾತಾರಾ

ನೋಟೀಸು

... ಸಾ ... ಕೋ. ... ಗದಗ ತಾಲೂಕ ... ನರ್ಣಯದ ... ಸಂಘವನ್ನು ರದ್ದು ಮಾಡಿದ ಬಗ್ಗೆ ಹಾಗು ಕೆಳಗೆ ಸಹಿ ಮಾಡಿದವನನ್ನು ಸದರ ಸಂಘದ ಲಿಕ್ವಿಡೇಟರನ್ನಾಗಿ ನೇಮಿಸಿದ ಬಗ್ಗೆ ಮುಂಬಯಿ ಸರಕಾರಿ ಗ್ಯಾಝೇಟಿನಲ್ಲಿ ಪ್ರಸಿದ್ಧ ಮಾಡಿರುತ್ತಾರೆ. ಕಾರಣ ಸದರ ಸಂಘದ ಯಾರಿಗಾದರೂ ಏನಾದರೂ ಸಲ್ಲತಕ್ಕದಿದ್ದರೆ ಅದರ ಬಗ್ಗೆ ನಮ್ಮ ಕಡೆಗೆ ಈ ಹೊತ್ತಿನಿಂದ ಎರಡು ತಿಂಗಳೊಳಗಾಗಿ ಲೇಖಿಯಿಂದ ತಿಳಿಸಬೇಕಾಗಿ ವಿನಂತಿ ಇದೆ.

ತಾ|| ೩-೮-೧೯೩೭

Sd/ R B Khudanpur.

ಆಡಿಟರ, ಸಹಕಾರಿ ಸಂಘ, ಹಾವೇರಿ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೦—೦ ರೂ.
೬ "	೬—೦—೦ ರೂ.
೪ "	೪—೦—೦ ರೂ.
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ.

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ

೨೦ನೇ ಶತಮಾನದ ಗೊಂದಲ ೧೫

ವಿಚಿತ್ರ ಸಂಕೆಯು

ಲೋಕಮಾನ್ಯ ಟಿಳಕರ ಚರಿತ್ರೆ

ದೇಶಬಂಧು ದಾಸರ ಚರಿತ್ರೆ

ದೇಶಭಕ್ತರ ಸಂದೇಶ

ಈ ಪುಸ್ತಕಗಳನ್ನು ಒಟ್ಟಾಗಿ ಗೆ ೧ ರೂಪಾಯಿಗೆ ಕೊಡುವೆವು. ಟಪಾಲ ಖರ್ಚು ಬೇರೆ.

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೋಸಾಯಟೀಸ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರ ಬಂಡಿಗೆಯು ಆರು ಲಕ್ಷದ ಮೇಲುಂಟು. ಚಾಲು ಖಾತೆ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಸಲ್ಪಡುವವು. ಕ್ಯಾಶ ಮತ್ತು ಬೇರೆ ತರದ ... ಗಳಿಗೆ ಚನ್ನಾಗಿ ಬಡ್ಡಿ ದೊರೆಯುವವು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು,

ವೆಂಕಟರಾವ ಬಿ. ಜಹಾಗೀ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಡಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳ ... ಅಣೆಯಂತಿರುತ್ತದೆ.

ಎ. ಜಿ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ಕರ್ನಾಟಕ ಏಕೀಕರಣ ಸಂಘದವರು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರಿಗೆ
ರಜತೋತ್ಸವದ ಸುಸಂಧಿಯಲ್ಲಿ ಕೊಡಬೇಕೆಂದಿದ್ದ

ಮಾನಪತ್ರದ ಪ್ರತಿಯು.

ಪ್ರಜಾವತ್ಸಲರಾದ ಮಹಾ ಪ್ರಭುಗಳೇ

"ಶ್ರೀಮತ್ ಕರ್ನಾಟಕ ಸಿಂಹಾಸನ" ವೆಂಬ ಗೌರವದ ಹೆಸರಿನಿಂದ ಒಪ್ಪುತ್ತಿರುವ ಮೈಸೂರು ರಾಜ್ಯದ ಆಡಳಿತೆಯ ಸೂತ್ರಗಳನ್ನು ತಾವು ಪ್ರತ್ಯಕ್ಷ ಕೈಕೊಂಡಂದಿನಿಂದ ಇಂದಿನ ವರೆಗಿನ ೨೫ ವರ್ಷಗಳ ಕಾಲಾವಧಿಯಲ್ಲಿ ತಮ್ಮ ಪ್ರಜೆಗಳ ವಿಷಯವಾಗಿ ತಮ್ಮ ಅಂತಃಕರಣದಲ್ಲಿದ್ದ ಪಿತೃ ಪ್ರೇಮವು ಅನೇಕ ವಿಧವಾಗಿ ಬಹಿರಂಗಕ್ಕೆ ಬಂದುದರಿಂದ ಅತ್ಯಂತ ಸಂತುಷ್ಟರಾದ ಮೈಸೂರು ರಾಜ್ಯದ ಮಹಾ ಜನರು ಮಾಡುತ್ತಿರುವ ಈ ರಜತ ಪೂಜಾ ಮಹೋತ್ಸವದಲ್ಲಿ ಮೈಸೂರು ಸೀಮೆಯ ಹೊರಗಿನ ಕನ್ನಡಿಗರೆಲ್ಲರೂ ಭಾಗಿಗಳಾಗಿರುವರೆಂಬುದನ್ನು ತಮ್ಮ ದಿವ್ಯ ಸನ್ನಿಧಿಯಲ್ಲಿ ಬಿನ್ನವಿಸಲು ನಮಗೆ ಅತ್ಯಂತ ಆನಂದವಾಗುತ್ತದೆ.

ಭರತಖಂಡದ ಇತಿಹಾಸದಲ್ಲಿ ಸುಪ್ರಸಿದ್ಧವಾಗಿರುವ ಕದಂಬ, ಚಾಲುಕ್ಯ, ಹೊಯಿಸಳ, ಬಳ್ಳಾಳ ಮೊದಲಾದವರಿಂದಾರಂಭ ಮಾಡಿಕೊಂಡು ವಿಜಯನಗರದ ನರಪತಿಗಳವರೆಗಿನ ಕರ್ನಾಟಕದ ರಾಜಮನೆತನಗಳು ಸಾರ್ವಭೌಮತ್ವದ ವೈಭವವನ್ನು ಸಂಭೋಗಿಸಿದ ಒಂದು ಸಾವಿರ ವರ್ಷಕ್ಕಿಂತ ಹೆಚ್ಚಾದ ಕನ್ನಡ ಜನಾಂಗದ ಉತ್ಕರ್ಷಕಾಲವನ್ನು ತಮ್ಮ ರಜತ ಪೂಜಾ ಮಹೋತ್ಸವ ಪ್ರಸಂಗವು ನಮ್ಮೆಲ್ಲರ ಕಣ್ಮುಂದೆ ತಂದು ಕಟ್ಟುತ್ತದೆ. "ಕನ್ನಡ ರಾಜ್ಯ ರಮಾರಮಣ" ರೆಂಬ ಬಿರುದಾಂಕಿತ ವಿಜಯನಗರ ಅರಸರ ತರುವಾಯದಲ್ಲಿ ಕರ್ನಾಟಕ ಸಂಸ್ಕೃತಿ ಸಂರಕ್ಷಣ ಸಂವರ್ಧನ ಕಾರ್ಯವು ಅದೇ ಯದುವಂಶ ಸಮುದ್ಭವವಾದ ತಮ್ಮ ಮನೆತನದಿಂದಲೇ ಇಂದಿನ ವರೆಗೆ ಅವ್ಯಾಹತವಾಗಿ ನಡೆಯುತ್ತ ಬಂದಿರುವದು ಕನ್ನಡಿಗರೆಲ್ಲರಿಗೂ ಅತ್ಯಂತ ಅಭಿಮಾನದ ಸಂಗತಿಯಾಗಿರುವುದನ್ನು ತಮ್ಮ ಸನ್ನಿಧಾನದಲ್ಲಿ ಅರಿಕೆ ಮಾಡಿದಲ್ಲದೆ ನಮ್ಮ ದೇಶದ ಐತಿಹಾಸಿಕ ಕಾಲವು ರಿಂದ ಗೋದಾವರಿಯವರೆಗೆ ಹಬ್ಬಿಕೊಂಡಿರುವ ಕರ್ನಾಟಕ ರಾಜ್ಯವು ಪ್ರಕೃತದ ರಾಜಕೀಯ ಪರಿಸ್ಥಿತಿಯ ಮೂಲಕ ಬೇರೆ ಬೇರೆ ಆಡಳಿತೆಗೆ ಒಳಪಟ್ಟಾಗಿರಬೇಕಾಗಿ ಬಂದುದರಿಂದ ಕನ್ನಡಿಗರೊಳಗಿನ ಪರಸ್ಪರ ಐಕ್ಯತೆ ಹೋಗಿ ಮೂಲಕ ಕನ್ನಡ ಜನಾಂಗದಲ್ಲಿ ಒಂದೇ ಬಗೆಯ ದೇಶಾಭಿಮಾನದ ಭಾವನೆಗೆ ಕುಂದು ಹುಟ್ಟಿಗೆ ತಾವು ಎರವಾಗುವ ಹೊರಗೆ ಇವರ ಶಕ್ತಿಯಿಗೆ ಕುಂದೃವದಿಂದ ಈ ಕುಂದು ದೂರವಾಗಿ ಕನ್ನಡಿಗರೆಲ್ಲರಲ್ಲಿ ತಮ್ಮ ನಾಡು, ತಮ್ಮ ಇತಿಹಾಸ, ತಮ್ಮ ಲಲಿತ ಕಲೆಗಳು ಇವೇ ಮೊದಲಾದ ತಮ್ಮ ವಿಶಿಷ್ಟ ಸಂಸ್ಕೃತಿಯ ಕುರುಹುಗಳ ವಿಷಯವಾಗಿ ಸದಭಿಮಾನವು ಉಂಟಾಗಿ ತಮ್ಮ ನಾಡಿನ ಹೆಚ್ಚಳದ ಬಲವತ್ತರವಾದ ಲವಲವಿಕೆಯು ಅವರ ಅಂತರಂಗದಲ್ಲಿ ಒಡಮೂಡಿದ್ದು ಕಂಡು ಬರುತ್ತದೆ. ಇದರ ಪ್ರತ್ಯಕ್ಷ ಪ್ರಮಾಣವೇ ಕರ್ನಾಟಕದ ಏಕೀಕರಣದ ಚಳವಳಿಯಾಗಿದೆ. ಪ್ರಕೃತದಲ್ಲಿ ರಾಜಕೀಯ ಆಡಳಿತೆಯ ಮಟ್ಟಿಗೆ ಬ್ರಿಟಿಶ ಸರಕಾರಕ್ಕೆ ಅಧೀನವಾದ ಮುಂಬಯಿ, ಮದ್ರಾಸ, ಕೊಡಗು ಸೀಮೆಗಳಲ್ಲಿ ಬೇರೆ ಬೇರೆಯಾಗಿ ವಿಂಗಡಿಸಲ್ಪಟ್ಟಿರುವ ಕರ್ನಾಟಕದ ವಿಭಾಗಗಳನ್ನು ಒಂದುಗೂಡಿಸಿ ಒಂದು ಪ್ರತ್ಯೇಕ ಪ್ರಾಂತವನ್ನು ಪಡೆಯಲೋಸುಗ "ಕರ್ನಾಟಕ ಏಕೀಕರಣ ಸಂಘ"ವು ಸ್ಥಾಪಿತವಾಗಿದೆ. ಹಿಂದುಸ್ಥಾನದ ರಾಜಕೀಯ ಸುಧಾರಣೆಗಳ ಸಂಬಂಧದ ತಮ್ಮ ವರದಿಯಲ್ಲಿಯೂ ಮಾಂಟೆಗ್ಯೂ ಚೆಮ್ಸಫರ್ಡ ದೊರೆಗಳು ಭಾಷಾನುರೋಧವಾದ ಪ್ರಾಂತರಚನೆಯೇ ಹಿತಕರವಾದುದೆಂಬ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿರುವದರಿಂದ ಕನ್ನಡಿಗರ ಏಕ ರಾಷ್ಟ್ರೀಯತ್ವದ ಭಾವನೆಯ ಬೀಜವು ಮೊಳೆತು ಸಸಿಯಾಗತೊಡಗಿದೆ. ಯೋಗ್ಯ ಕಾಲದಲ್ಲಿ ಈ ಸಸಿಯು ದೊಡ್ಡ ಮರವಾಗುವದೆಂದು ಬಯಸಲೂ ಅಡ್ಡಿಯಿಲ್ಲ.

ಈ ರಾಜಕೀಯ ಪರಿಸ್ಥಿತಿಯಲ್ಲಿ ಕನ್ನಡಿಗರು ಬೇರೆ ಬೇರೆಯಾಗಿರುವ ಅವಸ್ಥೆಯು ಒದಗಿದ್ದರೂ ಸಂಸ್ಕೃತಿಕ ದೃಷ್ಟಿಯಿಂದ ಕನ್ನಡಿಗರೆಲ್ಲರೂ ಒಂದೇ ಎಂಬ ಭಾವನೆಯು ಕನ್ನಡ ಜನಾಂಗದಲ್ಲಿ ಉಂಟಾದುದರಿಂದಲೂ "ಮೈಸೂರೊಡೆಯರು ನಮ್ಮರಸರು" ಎಂಬ ಭಕ್ತಿಯುಕ್ತ ಪೂಜ್ಯಭಾವವು ಕನ್ನಡಿಗರೆಲ್ಲರಲ್ಲಿಯೂ ಪ್ರಾದುರ್ಭಾವ ಹೊಂದಿರುವಂತೆಯೇ ಅಖಿಲ ಕರ್ನಾಟಕದ ವಿಷಯವಾಗಿ ಒಂದು ಬಗೆಯ ಸ್ವಕೀಯ ಭಾವನೆಯು ಕರ್ನಾಟಕ ಸಂಸ್ಕೃತಿ ರಕ್ಷಣ ದೀಕ್ಷಾಬದ್ಧರಾದ ತಮಗೆ ಅಸುಸಂಗತವಾಗಿರುವದೆಂಬುದು ಪರಮ ಪೂಜ್ಯ ಪಿತಾಮಹರಾದ ಮುಮ್ಮಡಿ ಕೃಷ್ಣರಾಜ ಒಡೆಯರವರು ಹಾಗು ತಮ್ಮ ಪರಮ ಪೂಜ್ಯ ಪಿತೃಗಳಾದ ಶ್ರೀ ಚಾಮರಾಜೇಂದ್ರ ಒಡೆಯರವರ ಚಾರಿತ್ರ್ಯಗಳನ್ನು ಬಲ್ಲವರಿಗೆ ಅರಿಯದ ವಿಷಯವಲ್ಲ. ಅದುದರಿಂದಲೇ ಮಾನವ ಶಕ್ತಿಗೆ ಮೀರಿದ ವಿಧಿಕೃತಿಯಿಂದ ಮೈಸೂರ ಸೀಮೆಯ ಹೊರಗೆ ಇದ್ದೆಯುಳ್ಳವರಾದ ಕರ್ನಾಟಕಸ್ಥರಾದ ನಾವು ಕರ್ನಾಟಕ ಸಂಸ್ಕೃತಿ ಸಂರಕ್ಷಣದ ದೃಷ್ಟಿಯಿಂದ ತಮ್ಮ ಪೂಜ್ಯ ಮನೆತನವು ನಮ್ಮ ಅರಸು ಮನೆತನವೆಂದೂ ತಾವು ನಮ್ಮ ಅರಸರೆಂದೂ ಅತ್ಯಂತ ಪೂಜ್ಯ ಭಾವದಿಂದಲೂ ಭಕ್ತಿ ವಿಶ್ವಾಸಗಳಿಂದಲೂ ಭಾವಿಸುತ್ತಿರುವೆವು. ತಮ್ಮ ಮನೆತನವು ಅಪ್ಪಟ ಕನ್ನಡಿಗರದು. ತಾವು ಹುಟ್ಟುಗನ್ನಡಿಗರು. ತಮಗೂ ನಮಗೂ ಸಾಮಾನ್ಯವಾದ ತಾಯ್ನುಡಿಗೆ ತಮ್ಮನ್ನು ಬಿಟ್ಟು ಉದ್ಧಾರಕರಾರು? ಇತಿಹಾಸಕ್ಕೆ ಪೋಷಕರಾರು? ಲಲಿತ ಕಲೆಗಳಿಗೆ ತವರಕರಾರು? ಮುಖ್ಯವಾಗಿ ನಮ್ಮ ಕರ್ನಾಟಕ ಸಂಸ್ಕೃತಿಗೆ ಸಂರಕ್ಷಕರಾರು?

ಈ ತಾವು ಮೈಸೂರಿನ ಪಟ್ಟವನ್ನೇರಿದಂದಿನಿಂದಲೂ ತಮ್ಮ ಪ್ರಜೆಗಳ ವಿಷಯವಾಗಿ ವ್ಯಕ್ತಪಡಿಸುತ್ತ ಬಂದಿರುವ ಅಸಾಧಾರಣ ಪ್ರೇಮವೂ ತಮ್ಮ ವಿಷಯವಾಗಿ ಅವರಲ್ಲಿ ನಿರತಿಶಯವಾದ ರಾಜಭಕ್ತಿಯನ್ನುಂಟು ಮಾಡಿರುವಂತೆಯೇ ತಮ್ಮ ಆತ್ಮ ವಿಶುದ್ಧಿಯ ದೈವ ಭಕ್ತಿ, ಉಜ್ವಲ ದೇಶಭಕ್ತಿ, ಪ್ರತಿಭಾಯುತ ರಾಜನೀತಿ ನಿಪುಣತೆ, ಮೊದಲಾದ ದಿವ್ಯ ಗುಣಗಳ ಮೂಲಕ ನಮ್ಮೆಲ್ಲರಲ್ಲಿಯೂ ಅದೇ ಬಗೆಯ ರಾಜಭಕ್ತಿಯು ನೆಲಿಸಿಕೊಂಡಿರುವದೆಂಬುದು ನಿರ್ವಿವಾದವಾಗಿದೆ. ಹೀಗೆ ತಾವು ಮೈಸೂರ ರಾಜ್ಯವನ್ನು ಹೆಸರಿಗೆ ಮಾತ್ರ ಆಳುತ್ತಿರುವರಾದರೂ ವಸ್ತುತಃ ಎಲ್ಲ ಕನ್ನಡಿಗರ ಮನೋರಾಜ್ಯವನ್ನು ಆಳುತ್ತಿರುವಿರೆಂದು ಹೇಳಲು ನಮಗೆ ಯಾವ ಅಭ್ಯಂತರವೂ ತೋರುವದಿಲ್ಲ. ಭರತಖಂಡದ ಪ್ರಾಚೀನ ಪುಣ್ಯಶ್ಲೋಕ ರಾಜರ್ಷಿಗಳಿಗೆ ಒಪ್ಪುವಂಥ ಸಚ್ಚಾರಿತ್ರ್ಯಶೀಲ ಸಮನ್ವಿತರಾದ ತಮ್ಮಗಳಿಗೆ ವಿಶ್ವ ಪ್ರಭುತ್ವವನ್ನು ವಹಿಸಿದ ಆ ಜಗನ್ನಿಯಾಮಕ ಶಕ್ತಿಯು ದೀರ್ಘಾಯುರಾರೋಗ್ಯಗಳನ್ನು ದಯಪಾಲಿಸಿ ಕನ್ನಡ ಜನಾಂಗದ ಉನ್ನತಿಯನ್ನು ಶಕ್ಯವಾದ ಪ್ರತಿಯೊಂದು ಮಾರ್ಗದಿಂದಲೂ ಸಾಧಿಸುವ ಸತ್ಕಾರ್ಯದಲ್ಲಿ ತಮಗೆ ಯಾವಾಗಲೂ ಯಶಸ್ಸನ್ನೇ ಕೊಡಬೇಕೆಂಬುದಾಗಿ ನಾವೆಲ್ಲರೂ ಅನನ್ಯ ಭಾವದಿಂದ ಪ್ರಾರ್ಥಿಸುತ್ತೇವೆ.

ನವಾಬಸಾಹೇಬರ ಕಿವಿ ಕೊಯ್ದರು.

—೦—

ನಿಜಾಮ ಹೈದರಾಬಾದಿನ ಸಾಯಗಾಂವ ಜಹಾಗಿರಿಗೆ ಸೇರಿದ ಒಬ್ಬ ನವಾಬಸಾಹೇಬರು ಮೋಟಾರದಲ್ಲಿ ಕೂತು ಹೋಗುತ್ತಿದ್ದಾಗ ದಾರಿಯಲ್ಲಿ ಇವರ ವೈರಿಗಳೇ? ಇನ್ನಾರೋ ಇವರ ಮೋಟಾರನ್ನು ತರುಬಿ, ನವಾಬಸಾಹೇಬರ ಕಿವಿ ಕೊಯ್ದು ಅವರನ್ನು ಬಹುವಾಗಿ ಹೊಡೆದಿರುತ್ತಾರೆ. ನವಾಬರು ಸಿಕಂದರಾಬಾದಿನ ಆಸ್ಪತ್ರೆಯಲ್ಲಿ ನೆಲಸುತ್ತಾ ಆಸ್ಥೆ ಹೊಂದುತ್ತಿದ್ದಾರೆ.

ಬಡೋಜದ ಕಲ್ಲೆದೆಯ ಕಲೆಕ್ಟರ.

ಕೌನ್ಸಿಲದಲ್ಲಿ ವೀರ ಭಾಷಣಗಳು.

ಕೌನ್ಸಿಲ ಮೆಂಬರರಾದ ಮಿ. ಗುಜರಾದವರವರು ಕೌನ್ಸಿಲದಲ್ಲಿ ಮುಂದೆ ಕೊಟ್ಟಂತೆ ಭಾಷಣ ಮಾಡಿದ್ದಾರೆ—

ಬಡೋಜದ ಕಲೆಕ್ಟರರು ಮಳೆಯಿಂದ ದೇಶ ಹಾಳಾಗುತ್ತಿದ್ದಾಗ ನಿದ್ದೆ ಮಾಡುತ್ತಿದ್ದರು. ನಾನು ಇಲ್ಲಿ ಸಭಾಸನದ ಮೇಲೆ ಕೂತು ಕೇಳಿಕೆಯ ಮಾತು ಹೇಳುವದಿಲ್ಲ. ನಿನ್ನೆ ಅಲ್ಲಿಂದ ಇಲ್ಲಿಗೆ ಬಂದೆನು. ಪ್ರತ್ಯಕ್ಷ ಸ್ಥಿತಿ ನೋಡಿದ್ದೇನೆ. ಕಲೆಕ್ಟರನನ್ನು ಕಂಡು ಮಾತಾಡಿಸಿ ಬಂದವನಾಗಿದ್ದೇನೆ. ಸಾಹೇಬರು ಮೂರು ದಿವಸ ಸ್ವಸ್ಥ ಮಲಗಿದ್ದರು. ಸಾಹೇಬರಾಗಲಿ, ಇವರ ಕೈ ಕೆಳಗಿನವರಾಗಲಿ ತಮ್ಮ ಕರ್ತವ್ಯವನ್ನು ಮಾಡಲೇ ಇಲ್ಲ. ನಾನು ಇಲ್ಲಿ ಹೇಳುವ ಪ್ರತಿಯೊಂದು ಅಕ್ಷರವನ್ನು ಪುರಾವೆ ಸಹಿತ ಸಿದ್ಧ ಮಾಡುವೆನು. ೨೬ನೆಯ ತಾರೀಖಿನಿಂದ ಮೂರು ದಿವಸಗಳ ಪರ್ಯಂತರ ಅಲ್ಲಿಯ ಸ್ಟೇಶನದಲ್ಲಿ ಪ್ರಯಾಣಿಕರ ಬಂಡಿಯು ಹಿಂದು ಮುಂದಾಗದೆ ನಿಂತಿತು. ಪ್ರಯಾಣಿಕರ ಭವಣಿಗೆ ಕಡೆಯೇ ಇರಲಿಲ್ಲ. ಕಲೆಕ್ಟರರು ಹೋಗಿ, ಇವರ ಸುಖಸೋಯಿ ದೆಸೆಯಿಂದ ಯಾವ ಉಪಾಯ ಕೈಕೊಳ್ಳಲಿಲ್ಲ. ೨೮ನೆಯ ಸಾಯಂಕಾಲದಲ್ಲಿ ಹೋಗಿದ್ದೇನೆಂದು ಸಾಹೇಬರು ನನ್ನ ಮುಂದೆ ಹೇಳಿದರು. ಆವೇಳೆಯಲ್ಲಿ ನೆರೆಬಂದಿದ್ದು ಊರು ಲಯವಾಗುತ್ತಿರುವದೆಂದು ಅಲ್ಲಿಂದ ತಾರು ಬರಲು ಸಾಹೇಬರು ಲೋಕಲಬೋರ್ಡಿನ ಪ್ರೆಸಿಡೆಂಟರಿಗೆ ಅಲ್ಲಿಗೆ ಎರಡು ದೋಣಿಗಳನ್ನು ಕಳಿಸಲಿಕ್ಕೆ ಹೇಳಿ, ನಿಶ್ಚಿಂತೆಯ ಪುರುಷರಂತೆ ವರ್ತಿಸಿದರು. ಸಾಹೇಬರಿಗೆ ಗಣಿತೆಯಾಗಿದ್ದೀತು. ನಾವು ಒಂದು ತಿಂಗಳ ಕೊಟ್ಟದ್ದಕ್ಕಾಗಿ ಕ್ಷಮಿಸಬೇಕೆಂದು ಅನ್ನಲು ಸಾಹೇಬರು ತಾವೆಲ್ಲಿಯೂ ಹೋಗಲಿಲ್ಲೆಂದು ಸ್ಪಷ್ಟವಾಗಿ ಉತ್ತರ ಕೊಟ್ಟರು.

ಇನ್ನೊಬ್ಬ ಮೆಂಬರರಾದ ಅಮೀನರು ಅಂದದ್ದು–

ಆವೇಳೆಯಲ್ಲಿಯ ದುಃಸ್ಥಿತಿಯು ವರ್ಣನಾತೀತ ಮತ್ತು ಅಸಹ್ಯವಾಗಿದೆ. ಆವೇಳೆ ಮನುಷ್ಯ ಧನದೋರದ ಪಶು ಪಿನ ತಾರು– ಟೆಲಿಫೋನಿನ ದಾರಿಯು ಬಂದಾಗಿತ್ತೆಂದು ಕಲೆಕ್ಟರರು ಹೇಳುವದು ಸುಳ್ಳೆ ಮಾಡಿದ ಸುಳ್ಳು ಇರುತ್ತದೆ.

ಅಧ್ಯಕ್ಷ– ಸುಳ್ಳು ಎಂಬ ಶಬ್ದವನ್ನು ಹಿಂದಕ್ಕೆ ತಕ್ಕೊಂಡು ಬರೋಬರಿ ಅಲ್ಲವೆಂಬ ಶಬ್ದ ಹಾಕಿರಿ.

ಮಿ. ಅಮೀನ– ನಾನೇನು ಹಾಗೆ ಬುದ್ಧಿಪೂರ್ವಕವಾಗಿ ಹೇಳಲಿಲ್ಲ. ಈ ಶಬ್ದವು ನನ್ನ ಅಂತಃಕರಣದಲ್ಲಾದ ವೇದನೆಯಿಂದ ಬಂದದ್ದಿರುತ್ತದೆ. ಹ್ವಾಲಂಟಿಯರರು ಮೋಟಾರದಿಂದ ಅಲ್ಲಿಗೆ ಹೋದರು. ಅದೇ ಪ್ರಕಾರ ಕಲೆಕ್ಟರರು ಅನೇಕ ದೋಣಿಗಳನ್ನು ಕಳಿಸಬಹುದಾಗಿತ್ತು. ನದಿಯ ದಂಡೆಗುಂಟ ನೂರಾರು ದನಗಳು ಸತ್ತವು. ಇದಕ್ಕೆ ಪೆಟ್ಟಿಗೆ ಸಾಯುತ್ತಿದ್ದವು. ಆದರೆ ರಾಕಜರ ಪುಣ್ಯದಿಂದ ಜೀವಹಾನಿಯಾಗಲಿಲ್ಲ. ಅಲ್ಲಿಯ ಜನರ ರಕ್ಷಣೆಗಾಗಿ ಕಲೆಕ್ಟರರು ಒಂದೇ ಸಾವಿರ ರೂಪಾಯಿ ಮಂಜೂರ ಮಾಡಿದ್ದಾರೆ. ನಾಲ್ಕು ಲಕ್ಷವಾದರೂ ಸಾಲದು. ಧರ್ಮವಂತರು ಅನ್ನಛತ್ರ ಬಿಟ್ಟು ಅನೇಕರಿಗೆ ಅನ್ನದಾನ ಮಾಡುತ್ತಿದ್ದಾರೆ

ಸ್ವದೇಶಿ ಸಂಸ್ಥಾನದಲ್ಲಿ ಇಂಗ್ರೇಜಿ ಅರಸರು!!

ಮದ್ರಾಸ ಇಲಾಖೆಗೆ ಸೇರಿದ ಪುದುಕೋಟಿಯ ಸಂಸ್ಥಾನದಲ್ಲಿ ಒಂದು ವಿಚಿತ್ರ ಕೃತ್ಯವು ಸಂಭವಿಸತೊಡಗಿದೆ. ಅಲ್ಲಿಯ ಮಹಾರಾಜರು ಆಸ್ಟ್ರೇಲಿಯಾದ ಒಬ್ಬ ಸುಂದರ ತರುಣಿಗೆ ಮೋಹಿತರಾಗಿ, ಆಕೆಯನ್ನು ಮದುವೆ ಮಾಡಿಕೊಂಡು, ಪರದೇಶದಲ್ಲಿಯೇ ವಾಸವಾಗಿದ್ದಾರೆ. ರೀಜಂಟರ ವಿದ್ಯಮಾನವಾಗಿ ರಾಜ್ಯಕಾರಭಾರ ನಡೆದಿದೆ. ರಾಜರು ಒಮ್ಮೆಯಲೆ ಇಪ್ಪತ್ತು ಲಕ್ಷ ರೂಪಾಯಿಗಳನ್ನು ತಕ್ಕೊಂಡು ನೇಮಕನ ಗೊತ್ತು ಮಾಡಿಕೊಂಡು, ಸಂಸ್ಥಾನದ ಮೇಲಿನ ಹಕ್ಕನ್ನು ಬಿಟ್ಟುಕೊಟ್ಟಿದ್ದಾರೆ. ಇವರ ದಾಯಾದಿಗಳಲ್ಲಿ ಅನೇಕರು ವಾರಸದಾರರಾಗಿದ್ದಾರೆ. ಆದರೂ ಆಡಳಿತೆಯು ರೀಜಂಟರಿಂದ ನಡೆದಿರುವದು ಆಶ್ಚರ್ಯವು. ಈ ಆಶ್ಚರ್ಯದ ಕೂಡ ಇನ್ನೊಂದು ಆಶ್ಚರ್ಯವು ಆಗ ತೊಡಗಿದೆ. ರಾಜರಿಗೆ ಗೌರಾಂಗನೆಯು ಹೆಂಡತಿಯು ಹೊಟ್ಟೆಯಿಂದ ಒಬ್ಬ ಮಗನು ಹುಟ್ಟಿದ್ದಾನೆ. ಈತನಿಗೆ ಜಾತಿ ವಿಜಾತಿಯು ಹೆಸರಿಟ್ಟಿದ್ದಾರೆ. ಸಿಂಹಾಸನೆ ಮಾತ್ರಾರ್ಹನಂತೆ!! ಈ ಸಿಂಹಾಸನೆ ಮಾತ್ರಾರ್ಹನಂತೆಗೆ ಉತ್ತರಾಧಿಕಾರಿಯಾಗಬೇಕೆಂದು ಪ್ರಸ್ತುತದಲ್ಲಿ ಕೃಷ್ಣ ಕಾರಸ್ಥಾನ ನಡೆದಿದೆ. ಇದಕ್ಕೆ ಪ್ರಜಾ ಸಮ್ಮತಿಯೂ ಉಂಟೆಂದು ತೋರಿಸುವದಕ್ಕಾಗಿ ರೀಜಂಟರು ಯುವರು ಪೋಲಿಸ ಹಾಗು ಬೇರೆ ಅಧಿಕಾರಸ್ಥರ ಮುಖಾಂತರದಿಂದ ರೈತರ ಸಹಿಗಳನ್ನು ತಕ್ಕೊಳ್ಳ ಲಾರಂಭಿಸಿದ್ದಾರೆ, ಈ ಕೆಲಸವಾಗಿ ರೈತರನ್ನು ಒತ್ತಾಯ ಮಾಡುವ ಮತ್ತು ಅವರಿಂದ ಸತ್ತೋಷದ ಸಹಿ ತಕ್ಕೊಂಡಿದೆಂದು ಹೇಳಿಕೊಳ್ಳುವರ ವಿರುದ್ಧ ಸಂಸ್ಥಾನಾಭಿಮಾನಿಗಳು ಚಳವಳಿ ಪ್ರಾರಂಭಿಸಿದ್ದಾರೆ. ಸಂಸ್ಥಾನದ ಪ್ರಜಾ ಪರಿಷತ್ತು ಕೂಡಿಸಿ; ಅಲ್ಲಿ ರೀಜಂಟ ಮತ್ತು ಪ್ರತಿನಿಧಿಗಳ ಪ್ರತಿನಿಧಿಗಳ ಭಾಷಣಗಳು ... ಬರು–

ವಾದಂತೆ ಶುದ್ಧ ಹಿಂದೂ ರಕ್ತದ ಅಥವಾ ಜಾತಿ ವಿಜಾತಿ ಮಿಶ್ರ ರಕ್ತದಿಂದ ಹುಟ್ಟಿದವನು ಗಾದಿಯಾಗಲೆಂದು ಇವರು ರೀಜಂಟರಿಗೆ ಅಹವಾಲ ಮಾಡಿದ್ದಾರೆ.

ಸ್ವರಾಜ್ಯ ದೊರೆಯುವ ತನಕ ನಾಗಪೂರದಲ್ಲಿಯ ಶಸ್ತ್ರದ ಕಟ್ಟಳೆಯನ್ನು ಮುರಿಯುವ ಕಾಯದೆಭಂಗ ನಡೆಯುವದು. ೫೦ ಜನರು ಕತ್ತಿ ಕರಾರಿ ಹಿಡಕೊಂಡು ಮೆರೆದರು. ಪೋಲೀಸರು ಇವರನ್ನು ಹಿಡಿಯಲಿಲ್ಲ.

ಗುಜರಾಥಕ್ಕೆ ಸೇರಿದ ವೇಣ ಜಿಲ್ಹೆಯಲ್ಲಿ ನೂರು ಇಂಚು ಮಳೆಯಾಯಿತು.

ಬಂಗಾಲದಲ್ಲಿಯೂ ಅತಿವೃಷ್ಟಿಯಾಗಿ, ರೇಲ್ವೆಯದಾರಿಯು ಕಟ್ಟು ಹೋಗಿದೆ. ಆದರೆ ಗುಜರಾಥದಂಥ ಕೇಡಾಗಿಲ್ಲ.

ಧಾರವಾಡ–

ಗದಗಿನ ಪ್ರಸಿದ್ಧ ಶಾಹುಕಾರರಾದ ಶ್ರೀ ಶಿವಪ್ಪಾ ಮಾನವಿಯವರು ಕೈಲಾಸವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಇದೇ ತಿಂಗಳ ೧೪ನೆಯ ತಾರೀಖಿನ ದಿವಸ ನವ್ನಾಪೂರದಲ್ಲಿ ಶ್ರೀಚಿದಾನಂದಾಶ್ರಮದ ವರ್ಷಾಂತ್ಯುತ್ಸವವಾಗತಕ್ಕದ್ದಿರುತ್ತದೆ.

ಗುಜರಾಥಕ್ಕೆ ಹೋದ ಕರ್ನಾಟಕದ ಸ್ವಯಂ ಸೇವಕರು ಸರ್ವೆಂಟ ಆಫ ಇಂಡಿಯಾ ಸೊಸಾಯಿಟಿಯ ನೇತೃತ್ವದಲ್ಲಿ ಕೆಲಸ ಮಾಡುವರೆಂದು ತಿಳಿಯುತ್ತದೆ.

ಬಾಗಲಕೋಟೆಯಲ್ಲಿ ವೈಕುಂಠವಾಸಿ ಶೇಷಗಿರಿ ವಾಸುದೇವ ಆಚಾರ್ಯರ ಫೋಟೋವನ್ನು ತೆರೆಯುವ ಸಮಾರಂಭವಾಯಿತು. ಪಠನನ್ನು ಅಲ್ಲಿಯ ಹಾಯಸ್ಕೂಲದಲ್ಲಿ ... ಇದೇ ಕೆಲಸವು ಕರ್ನಾಟಕ ವಿದ್ಯಾವರ್ಧಕ ಸಂಘದವರಿಂದ ಆಗತಕ್ಕದ್ದಲ್ಲವೇ?

ಮಂತ್ರಾಲಯದಲ್ಲಿ ಮಹಾಮಾರಿಯು ನಡೆದಿರುವದರಿಂದ, ಅಲ್ಲಿಗೆ ಯಾರೂ ಹೋಗಬಾರದೆಂದು ಮದ್ರಾಸ ಸರಕಾರದವರು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ನೆ ಬಂದಿತ್ತು. ಆದರೆ ಸಧ್ಯದಲ್ಲಿ ಈ ವಿಚಾರವು ರಹಿತ ಮಾಡಲ್ಪಟ್ಟಿತು.

ಮುಂಬಯಿಯಲ್ಲಿ ಹೆರಾಲ್ಡ ಕಚೇರಿಗೆ ಹೋದಾಗ, ವರ್ಗಣಿದಾರರ ಸಂಖ್ಯೆ ಎಷ್ಟೆಂದು ಪ್ರಶ್ನೆ ಮಾಡಿದ್ದರು. ಈ ಪ್ರಕಾರವುಂಟೇ ಎಂದು ಕೌನ್ಸಿಲದಲ್ಲಿ ಪ್ರಶ್ನೆ ಕೇಳಲಾಯಿತು. ಅಧಿಕಾರವಿಲ್ಲ; ಈ ಅಧಿಕ ಪ್ರಸಂಗತನಕ್ಕಾಗಿ ಪೋಲೀಸರಿಗೆ ಶಾಸನ ಮಾಡಲಾರೆವೆಂದು ಅಧಿಕಾರಿಗಳು ಉತ್ತರ ಕೊಟ್ಟರು.

ಧಾರವಾಡ-

ಹುಬ್ಬಳ್ಳಿಯಲ್ಲಿ ಲೋಕಮಾನ್ಯರ ಸಂಸ್ಮರಣೆಯ ಸಭೆಗೆ ಒಡ್ಡರಾದ ಮೆ|| ಘರಾರ್ಪಸಾಹೇಬರು ಹೋಗಿದ್ದರೆಂದು ತಿಳಿಯುತ್ತದೆ.

ನವಲಗುಂದ ತಾಲೂಕಿನಲ್ಲಿ ಶಲವಾಡ, ಕುರಟ್ಟಿ, ಯಮನೂರ, ಪಡೇಸೂರ, ಗುಡಿಸಾಗರ, ನಾಗನೂರ ಈ ಭಾಗದಲ್ಲಿ ಮಳೆಯಿಲ್ಲ. ಮುಂಗಾರಿಯು ಹೋದಂತಾಯಿತು. ಒಟ್ಟಿನಿಂದ ರೈತರ ಸ್ಥಿತಿಯು ಕಠಿಣವಾಗಿರುತ್ತದೆ.

ಇಲ್ಲಿಯ ಕಲೆಕ್ಟರರಾದ ಮೆ|| ಮಾಸ್ತರಸಾಹೇಬರು ರಜೆಯಿಂದ ಮರಳಿ ಬಂದ ಬಳಿಕ ಅಕ್ಟಿಂಗ ಕಲೆಕ್ಟರರಾದ ಮೆ|| ವೈದ್ಯಸಾಹೇಬರು ಬೆಳಗಾವಿಯ ಕಲೆಕ್ಟರರಾಗಿ ವರ್ಗ ಮಾಡಲ್ಪಟ್ಟಿದ್ದಾರೆ.

ನೂರು ರೂಪಾಯಿ ಇನಾಮು.

ಕೆಳಗಿನ ಪ್ರಶ್ನೆಗಳಿಗೆ ಸಶಾಸ್ತ್ರ ಉತ್ತರ ಕೊಟ್ಟವರಿಗೆ ಮೇಲೆ ಬರೆದ ಇನಾಮು ಸಿಗುವದು.

೧ ಹಿಂದು ಧರ್ಮಶಾಸ್ತ್ರ ಅಂದರೇನು?

೨ ನಮ್ಮ ಪೂರ್ವಜರು ಧರ್ಮಶಾಸ್ತ್ರಗಳನ್ನ್ಯಾಕೆ ಮಾಡಿರುವರು?

೩ ಈ ಧರ್ಮಶಾಸ್ತ್ರಗಳಂತೆ ಯಾಕೆ ನಡಿಯಬೇಕು?

೪ ಬ್ರಾಹ್ಮಣರು ಧರ್ಮಶಾಸ್ತ್ರದಂತೆ ನಡಿಯಲಿಕ್ಕೇಬೇಕಂತ- ಪತ್ತಾಯ ಯಾಕೆ?

೫ ಹಿಂದು ಧರ್ಮಶಾಸ್ತ್ರದ ಬಂಧನಗಳು ಬ್ರಾಹ್ಮಣ ಸ್ತ್ರೀಯರಿಗೆನೇ ಯಲ್ಲರಕಿಂತ ವಿಶೇಷ ಯಾಕೆ?

ತಮ್ಮ ಯಲ್ಲರ ಸೇವಕ
ಗೋವಿಂದ ಕೃಷ್ಣ ಜುವೇಕ.
ಗೋಖಲವಾಡಿ- ಕೇಳಕರಬಾಗ
ಬೆಳಗಾಂವ

(ಮುಂದಿನ ಸಂಗತಿಗಳ ಮುದ್ರಣ ಆಗದ)

ಶ್ರೀ ಮಾಣಿಕಪ್ರಭು ಪ್ರಾಸಾದಿಕ

ಗಾಯನ ವಾದನ ವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಗಾಯನ, ಹಾರ್ಮೋನಿಯಮ್, ತಬಲಾ, ಸತಾರ ಇವು ಶಾಸ್ತ್ರೀಯರೀತಿಯಿಂದ ಕಲಿಸಲ್ಪಡುವವು.

ಈ ವಿದ್ಯಾಲಯವು ಕೇವಲ ಸಂಗೀತ ಪ್ರಚಾರ ಸಲುವಾಗಿ ವಿದ್ಯಾರ್ಥಿಗಳಿಗೆ ಅನುಕೂಲ ಕರವಾಗುವಂತೆ ಸಂಗೀತ ಪ್ರಿಯರ ಸಹಾಯದಿಂದ ಕಳೆದ ... ನಡೆಸಲ್ಪಡುತ್ತಿರುವದು.

ಪತ್ತೆ

ಶ್ರೀ ಮಾ. ಪ್ರ. ಪ್ರಾ.
ಗಾಯನ ವಾದನ ವಿದ್ಯಾಲಯ
ಗಾಂಧಿಚೌಕ ... ಅಂಗಡಿ
ಎದುರಿಗೆ ... ಧಾರವಾಡ

ತಮ್ಮ,
...
ಲಕ್ಷ್ಮಣರಾವ ಗ. ಗವಾಯಿ,
ಮಾಣಿಕನಗರ

ನೋಟೀಸಿನ ಉತ್ತರ

ಸಾತಿ ಕೋಮ ವೀರಪ್ಪಾ ಕೊಂಡವಾಡ ಉರ್ಫ ಹೊಂಗಲದವರ ಸಾಕೀನ ಉಪ್ಪಿನಬೆಟಗೇರಿ ಇವರಿಗೆ—

ಕೆಳಗೆ ಸಹೀ ಮಾಡುವ ಈರಪ್ಪಾ ಬಿನ್ನ ಗುರುಸಿದ್ದಪ್ಪಾ ಕೊಂಡವಾಡ ಸಾ. ದೊಡವಾಡ ಇವರು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ಧಾರವಾಡ ರಾಜಹಂಸ ಪತ್ರದಲ್ಲಿ ತಾ|| ೩-೬-೧೯೨೭ನೇ ದಿವಸ ಕೊಟ್ಟ ನೋಟೀಸು ಅಕಸ್ಮಾತ್ತಾಗಿ ನಿನ್ನಿನ ದಿವಸ ನನ್ನ ಕಣ್ಣಿಗೆ ಬಿತ್ತು. ನಾನು ಊರಲ್ಲಿರದಾಗ ನಿನ್ನ ರಜಿಸ್ಟರದ ನೋಟೀಸು ಹಿಂದಿರುಗಿ ಹೋಯಿತೆಂದು ನನಗೆ ತಿಳಿಯಿತು. ಆದ್ದರಿಂದ ಇಷ್ಟು ತಡಮಾಡಿ, ನಿನಗೆ ಉತ್ತರ ಕೊಡಬೇಕಾಯಿತು.

ನೀನು ನನ್ನ ಮನೆ ಬಿಟ್ಟು ಹೋಗುವ ಮೊದಲು ನಿನ್ನ ತಾಯಿಯ ಮತ್ತು ನಿನ್ನ ಜವಾಬು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಾಗಿರುತ್ತದೆ. ಅಲ್ಲಿ ನಾನು ಗಂಡನ ಕೂಡ ಸುಖಿತ ಪ್ರಪಂಚ ಮಾಡುತ್ತೇನೆ. ಗಂಡನ ಮನೆಯ ದಾಗೀನೆಗಳು ನನ್ನ ಹತ್ತರ ಇರುತ್ತವೆಂದು ಜವಾಬು ಬರಿಸಿದ್ದೀದಿ ಮತ್ತು ನನಗೂ ನಿನಗೂ ಯಾವ ಜಗಳ ಇಲ್ಲೆಂದು ನನ್ನ ಜವಾಬು ಸಹ ಅದೇ ಮ್ಯಾಜಿಸ್ಟ್ರೇಟರ ಮುಂದೆ ಆಗಿರುತ್ತದೆ. ಮತ್ತು ನಿನ್ನ ತಾಯಿಯ ಜವಾಬು ನನ್ನ ಮನೆತನದ ಖರ್ಚು ತಾನೇ ನಡಿಸುತ್ತೇನೆಂದು ಆಗಿರುತದೆ.

ವಾಸ್ತವಿಕವಾದ ಸ್ಥಿತಿಯು ಹೀಗಿರಲಾಗಿ, ನೀನು ಮೊದಲಿನಿಂದ ಕಡೆತನಕ ಸುಳ್ಳು ಮತ್ತು ಮತಲಬಿ ನೋಟೀಸು ಕೊಟ್ಟಿರುತ್ತೀ. ನಾನು ನಿನ್ನನ್ನು ಕೆಟ್ಟ ರೀತಿಯಿಂದ ನಡಿಸಿಕೊಂಡಿಲ್ಲೆಂದು ಮ್ಯಾಜಿಸ್ಟ್ರೇಟರ ಮುಂದೆ ಪ್ರತಿಜ್ಞೆಯ ಮೇಲೆ ಜವಾಬು ಕೊಟ್ಟವಳು, ನಾನು ನಿನ್ನನ್ನು ಹರಿ ಹರಿ ಉರಿಸಿ ಕೊಂಡೆನೆಂದು ಬರೆದಿದ್ದೀದಿ. ಇದಲ್ಲದೆ ನಿನ್ನ ಹೊಟ್ಟೆ ಬಟ್ಟೆಯಿಂದ ಸಾವಾಗಲಿಕ್ಕೆ ಯಾವ ಕಾರಣ ಇರುವದಿಲ್ಲ.

ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ- ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ಮಾಲಕಿಯ ಯಚ್ಚಾವತ್ತ ದಾಗೀನೆ ತಕ್ಕೊಂಡು ನನ್ನ ಮನೆಗೆ ಬಂದು ಸುಖಿತ ಪ್ರಪಂಚ ಮಾಡಬೇಕು. ಜರ ಇದಕ್ಕೆ ತಪ್ಪಿದರೆ- ನಿನ್ನ ಮೇಲೆ ಕಾಯದೆಶೀರ ಫೌಜದಾರಿಯಲ್ಲಿ ಫಿರ್ಯಾದಿ ಮಾಡುವೆನು.

ನೀನು ಈ ನೋಟೀಸಿನ ವಿರುದ್ಧ ಯಾವದನ್ನಾದರೂ ಉಡಿಕೆ ಮಾಡಿಕೊಂಡರೆ ನಿನ್ನ ಮೇಲೂ ಆತನ ಮೇಲೂ ವ್ಯಭಿಚಾರದ ಆರೋಪವಿಟ್ಟು ಕೇಲಸ ನಡಿಸುವೆನು. ಗಂಡನಾದ ನಾನು ನಿನಗೆ ಸೋಡಪತ್ರ ಕೊಟ್ಟ ಹೊರತು ನಿನಗೆ ಉಡಕಿಯ ಹಕ್ಕು ಇರುವದಿಲ್ಲೆಂದು ಕಾಯದೆಯ ಕಲಮನ್ನು ಈ ನೋಟೀಸಿನಿಂದ ನಿನಗೆ ತಿಳಿಸುತ್ತೇನೆ.

ಅಂತಾ ಕೊಟ್ಟ ನೋಟೀಸು ತಿಳಿಯುವದು. ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲುಂಟು ತಿಳಿಯುವದು ತಾ. ೬-೮-೨೭

ವೀರಪ್ಪಾ ಗುರಸಿದ್ಧಪ್ಪಾ ಹೂಂಗಲ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ಕರ್ನಾಟಕ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬಿಡಿ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ರವಿವಾರ ತಾರೀಖು ೭ನೇ ಆಗಸ್ಟ ೧೯೩೭ | ಸಂಚಿಕೆ ೧೬೯

ಕಿರ್ಲೋಸ್ಕರರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಇದು ನೀರಿನ ಹಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಈಸು ಗಳುಂಟು. ಗಾಲಿಯ ವ್ಯಾಸವು ೪೭ ಇಂಚು ಇರುತ್ತದೆ. ಇದ್ದರಿಂದ ಇದಕ್ಕೆ ೨೪ ಗ್ಯಾಲನ್ ನೀರಿನ ಭಾರವನ್ನು ಒಯ್ದು ಹಾಗಾಗಿ ತರುತ್ತದೆ. ನಳಕ್ಕೆ ನೀರಿನ ಕೊರ ತೆಯು ಎಲ್ಲ ಕಡೆಗೂ ಉಂಟು. ಇದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೩೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸಧ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರ್ಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ನೋಟೀಸು

ಮೆ. ರಜಿಸ್ಟ್ರಾರ ಸಾ. ಒಹಾದ್ದೂರ ಕೋ. ಸೊಸಾಯಿಟೀಜ ಪುಣೆ ಇವರು ಕಲಘಟಗಿ ತಾಲೂಕ ಸ್ತೆ ಮುರಗೂರ ಸಹಕಾರಿ ಸಂಘವನ್ನು ರದ್ದು ಪಡಿಸಿದ ಬಗ್ಗೆ ಹಾಗು ಕೆಳಗೆ ಸಹಿ ಮಾಡಿದವನ್ನು ಸದರ ಸಂಘದ ಲಿಕ್ವಿಡೇಟರನ್ನಾಗಿ ನೇಮಿಸಿದ ಬಗ್ಗೆ ಮುಂಬಯಿ ಸರಕಾರಿ ಗ್ಯಾಝೆಟಿನಲ್ಲಿ ಪ್ರಸಿದ್ಧ ಮಾಡಿರುತ್ತಾರೆ. ಕಾರಣ ಸದರ ಸಂಘದಿಂದ ಯಾರಿಗಾದರೂ ಏನಾದರೂ ಸಲ್ಲತಕ್ಕದಿದ್ದರೆ ಅದರ ಬಗ್ಗೆ ನಮ್ಮ ಕಡೆಗೆ ಈ ಹೊತ್ತಿನಿಂದ ಎರಡು ತಿಂಗಳೊಳಗಾಗಿ ಲೇಖಿಯಿಂದ ತಿಳಿಸಬೇಕಾಗಿ ವಿನಂತಿಯಿದೆ.

ತಾ॥ ೨-೮-೧೯೩೭

Sd/ R B. Khudanpur.
ಲಿಕ್ವಿಡೇಟರ್ ಸಹಕಾರಿ ಸಂಘ, ಮುರಗೋಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

೨೦ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಶಯ	೫ ,,
ಲೋಕಮಾನ್ಯ ಟಿಳಕರ ಚರಿತ್ರೆ	೪ ,,
ದೇಶಬಂಧು ದಾಸರ ಚರಿತ್ರೆ	೩ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ಟ್ಪಾ. ಪೋ. ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿ, ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಈ ಬ್ಯಾಂಕಿನ ತಿಜೋರಿ ಸಂದುಗೆಯು ಬಹು ಉತ್ತಮ ಮಾದರಿಯದುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ನಡೆಯುವದು. ಆಭರಣ ಮತ್ತು ಬೇರೆ ಕಪ್ಪದ ಬಾಬತುಗಳಿಗೆ ಸಾಲವನ್ನು ಕೊಡುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬಹುದು.

ಮಲ್ಲಪ್ಪನವರ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೧—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ಬಡ್ಡಿ ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒಂದರ ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ. ಡಾಯರೆಕ್ಟರ

ವಿಜಯ.

ಧಾರವಾಡ ತಾ-೭ ಆ ೨೭ ನೇ ಇಸ್ವಿ

ಧಾರವಾಡಕ್ಕೆ ನಳವು ಬೇಕೇ ಬೇಕು?

ರಾ. ಬ. ಬಿ ಎಲ್. ಪಾಟೀಲ

ಮತ್ತು

ಮೆ. ಪರಾಣ ಸಾಹೇಬರ ಭಾಷಣಗಳು.

ಇಂಗ್ಲಿಷ ಜನರಲ್ಲಿ ಒಂದು ಗಾದೆಯು ಮಾತುಂಟು. ಒಂದಾನೊಂದು ದಿವಸ ಲಂಡನ ನಗರದ ಮೂವರು ಸಿಂಪಿಗರು ಒಂದು ಸಭೆ ಮಾಡಿ, ಅದರಲ್ಲಿ ಜಗತ್ತಿನ ಆಗುಹೋಗನ್ನು ನಿರ್ಣಯಿಸಿದರು. ಈ ನಿರ್ಣಯದ ನುಡಿಯು ಉಪಯೋಗವನ್ನು ಯಾವದೊಂದು ಮಾತಿನ ಉಪಹಾಸ್ಯ ಮಾಡುವಾಗ ಉಪಯೋಗಿಸುವರು. ಅಂಥ ಉಪಹಾಸ್ಯಕರವಾದ ಒಂದು ಕೃತ್ಯವನ್ನು ಇಲ್ಲಿ ಕೆಲವರು ಪ್ರಾರಂಭಿಸಿದರು. ಆದರೆ ಮುಂದೆ ಬುದ್ಧಿ ಬಂದವರಾಗಿ ಬಿಬ್ಬರ ಹೊರ್ತು ಎಲ್ಲರೂ ನಳಬೇಕೆಂದು ಕೊನೆಯಲ್ಲಿ ಕಬೂಲಿ ಕೊಟ್ಟರು ಶ್ರೀ ನರಶಿಂಗ ನಾರಾಯಣ ಭಿಸೆ, ಶ್ರೀ. ಶಿವಲಿಂಗಶಾಸ್ತ್ರಿ ಮತ್ತು ಶ್ರೀ. ಕೃಷ್ಣರಾವ ಮುದವೇಡಕರರು ನಳದ ವಿರೋಧಿಗಳಾಗಿದ್ದರು. ಇವರಲ್ಲಿ ಮೊದಲಿನ ಇಬ್ಬರು ನಳಬೇಕೆಂದು ಒಪ್ಪಿದರು. ಮೂರನೆಯವರು ಮಾತ್ರ ತ್ರಿಶಂಕುರಾಯನಂತೆ ಅಂತರಾಳದಲ್ಲಿ ನೇತಾಡುತ್ತಿದ್ದಾರೆ.

ಧಾರವಾಡವಾಗಲಿ ಇನ್ನಾವ ದೊಡ್ಡ ಪಟ್ಟಣವಾಗಲಿ, ಕಾಲಪರಿಸ್ಥಿತಿಗನುಸರಿಸಿ, ನಳವಿದ್ದ ಹೊರ್ತು ಅದರ ಬೆಳೆಗೆಯು ಆಗಲಾರದೆಂದು ರಾ. ಬ. ಪಾಟೀಲರು ಅರ್ಥರಹಿತವಾಗಿ ಸಿದ್ಧ ಮಾಡಬಲ್ಲರವರೆ ಹಾಕಿದರು ಮತ್ತು ಊರೊಳಗಿನ ಮೂರ್ಖ ಹುಚ್ಚು ಕಲ್ಪನೆಗಳನ್ನು ತೆಗೆದು ಹಾಕಲು. ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಮೆ. ಪರಾಣ ಸಾಹೇಬರು ಸಿದ್ಧರಾದರು. ರಾ. ಬ. ಪಾಟೀಲರು ಮ್ಯುನಿಸಿಪಾಲಿಟಿಯ ಹಳೇ ಅಧ್ಯಕ್ಷರು, ಮೆ ಪರಾಣಸಾಹೇಬರು ಈಗಿನ ಅಧ್ಯಕ್ಷರು. ಇವರಿಬ್ಬರೂ ಕೂಡಿ, ನಳದ ನೀರಿನ ವ್ಯವಸ್ಥೆಯ ವಿಷಯವಾಗಿ ತಂತಮ್ಮ ವಿಚಾರವಾಗಿ ಪ್ರಯುಕ್ತಿ, ಅನುಭವಗೊಂಡಿದೆ. ಅದ್ದರಿಂದ ಇವರೀರ್ವರ ಭಾಷಣಗಳನ್ನು ಕೇಳಲು ನಾಗರಿಕರು ಕುತೂಹಲವುಳ್ಳವರಾಗುವದು ಸ್ವಾಭಾವಿಕವಾದದ್ದು.

ರಾ. ಬ. ಪಾಟೀಲರು ತಮ್ಮ ಭಾಷಣದಲ್ಲಿ ಹೇಳಿದ್ದೇನಂದರೆ-

ಪೂರ್ವಕಾಲದಲ್ಲಿ ಹಳ್ಳಿಗಳೇ ಬಹಳವಾಗಿದ್ದವು ಈಗಿನಂತೆ ಅಲ್ಲಲ್ಲಿ ದೊಡ್ಡ ದೊಡ್ಡ ಪಟ್ಟಣಗಳ ಬೆಳೆಗೆಯಾಗಿದ್ದಿಲ್ಲ ವಿಜಯನಗರ ಸಾಮ್ರಾಜ್ಯದಲ್ಲಿ ಅದೊಂದೇ ದೊಡ್ಡ ಪಟ್ಟಣವಾಗಿತ್ತು. ಆದಿಲಶಾಹಿಯಲ್ಲಿ ವಿಜಾಪೂರವೊಂದೇ ದೊಡ್ಡ ಪಟ್ಟಣವಾಗಿತ್ತು. ಅದಕ್ಕೆ ಸಹ ರಾಜರು ನೀರಿನ ವ್ಯವಸ್ಥೆ ಮಾಡಿದರು. ಪುಣೆಯಲ್ಲಿ ಜಲಾಶಯವನ್ನು ಹಿಡಿದು, ಕೊಳವಿಯಿಂದ ನೀರು ತಂದರು ಹುಕ್ಕೇರಿಯಲ್ಲಿಯೂ ಹಾಗುಂಟು. ಆದರೆ ಇದು ಎಲ್ಲ ಸ್ಥಳಗಳಲ್ಲಿಯೂ ಶಕ್ಯವಲ್ಲ ಆದುದರಿಂದ ಈಗಿನ ದೊಡ್ಡ ಪಟ್ಟಣಗಳಿಗೆ ನಳ ಹಾಕಿದ ಹೊರ್ತು ಸಾಗುವದೇ ಇಲ್ಲ.

ಧಾರವಾಡ ಪಟ್ಟಣವು ಏರಿಯ ಮೇಲುಂಟು. ಸಮುದ್ರದ ಪೃಷ್ಠಭಾಗದಿಂದ ೨೪೭೦ ಅಡಿ ಎತ್ತರದ ಮೇಲುಂಟು. ಈ ಊರು ಮೊದಲು ಏಳು ಹಳ್ಳಿಗಳಿಂದ ಆಗಿತ್ತು. ಈ ಹಳ್ಳಿಗಳಾದರೂ ಈಗಿನಂತೆ ಒಂದಕ್ಕೊಂದು ಕೂಡಿರಲಿಲ್ಲ. ಈಗಿನ ಪಟ್ಟಣದ ಮುಖ್ಯ ಭಾಗದಲ್ಲಿ ಜವಳಿಪೇಟೆಯಲ್ಲಿ ಒಂದು ಸಾಲು- ಕಾಮನಕಟ್ಟಿಯಲ್ಲಿ ಒಂದು ಸಾಲು- ಹೊಸ ಎಲ್ಲಾಪೂರದಲ್ಲಿ ಒಂದು ಬೀದಿ ಇಷ್ಟೇ ಊರಾಗಿತ್ತು. ಈಗ ಇವೆಲ್ಲ ಕೂಡಿ ಹೋಗಿವೆ ಊರೊಳಗೆ ಸವಿನೀರಿನ ಬಾವಿಗಳಿಲ್ಲವೇ ಇಲ್ಲ. ನೀರಿನ ಅರಬು ಮೇಲಿಂದ ಮೇಲೆ ಆಗುತ್ತಿದ್ದರಿಂದ ನಮ್ಮ ಹಿರಿಯರು ಎರಡು ಯೋಜನೆಗಳಲ್ಲಿ ಕೆಲಗೇರಿಯ ಕೆರೆಯ ಯೋಜನೆ ಮಾಡಿದರು ಆದರೆ ಮಳೆಯು ಆಗದ್ದರಿಂದ ಬರಬಿದ್ದಿದೆ ಹಿಂದಕ್ಕೆ ನೀರು ಇಲ್ಲದಂತಾಯಿತೆಂದರೆ- ಜನರು ಅನೇಕ ತಂಡವಾಗಿ ಪಡಿಬಾಲ್ಟ ಬಗುತ್ತಿದ್ದರು. ಹಿಂದೊಂದು ಮೈಲಿನ ತನಕ ನೀರಿಗ ಗಿ ಹೋಗುತ್ತಿದ್ದರು. ಮುದಿಹಾಳವು ಜಲಸಮೃದ್ಧಿಯಾದರೂ, ಅಲ್ಲಿ ಕೂಡ ನೀರಿನ ಅರಬಾಯಿತು ಆದ್ದರಿಂದ ಹೇಗಾದರೂ ಮಾಡಿ, ನಳದ ವ್ಯವಸ್ಥೆ ಮಾಡಿದರು.

ಧಾರವಾಡ ಪಟ್ಟಣವು ಈಗ ಬಹಳ ಬೆಳೆದಿದೆ. ಮನೆಗಳನ್ನು ಕಟ್ಟುವಂಥ ಎರಡು ಸೊಸಾಯಿಟಿಗಳಿವೆ ಮಾಳಗುಡ್ಡ ಆಳವೀ ಬಸಪ್ಪನ ಗುಡ್ಡದ ಮೇಲೂ ಮನೆಗಳಾಗಿವೆ ಇವೆಲ್ಲಕ್ಕೂ ನಳದಿಂದ ನೀರಿನ ಪೂರೈಕೆಯಾಗುತ್ತದೆ ನಳ ಕೂಡದಿದ್ದರೆ ಇಲ್ಲಿ ವಾಸವಾಗಿರುವಂಥವರೆಲ್ಲರೂ ಊರೊಳಗೆ ಬರುವರು, ಮಾಳಮಡ್ಡಿದಲ್ಲಿ ಬಾವಿಗಳುಂಟು, ನೀರುಂಟು, ಅವು ಮೇಲ್ಮೆ ಬರವಾದರೆ- ಕಣ್ಣೀರು ಕವಳಕ್ಕೆ ಬರುತ್ತವೆ, ಅಕ್ಕರಿಂದ ಅವರಿಗೆ ನಳವು ಉಪಕಾರವಾಗಿರುತ್ತದೆ. ನಳ ಬಂದಾಗಿ ಹೋಗಿನವರು ಊರೊಳಗೆ ಬಂದರೆ- ಜನದಟ್ಟಣೆಯಾಗಿ, ಆರೋಗ್ಯ ಕೆಡುವದಕ್ಕೆ ಕಾರಣವಾಗುವದು.

ಧಾರವಾಡದ ನಳದ ಕೆರೆಯು ಮಳೆಯನ್ನು ಅವಲಂಬಿಸಿರುತ್ತದೆ. ಮಳೆಯಾಗದಿದ್ದರೆ- ನೀರು ಇಲ್ಲದಂತಾಗುತ್ತದೆ ಈಗಿನ ಕೆರೆಗೆ ಮತ್ತೊಂದು ಸಹಾಯಕ ಕೆರೆಯಾಗಿ ನಾಲ್ಕು ಲಕ್ಷ ರೂಪಾಯಿ ವೆಚ್ಚ ಮಾಡಿ, ಕೆರೆ ಕಟ್ಟಬೇಕೆಂದು ಸರ ವಿಶ್ವೇಶ್ವರಯ್ಯನವರು ಒಂದು ಯೋಜನೆ ಹೇಳಿದ್ದಾರೆ ಈ ಕೆರೆಯಾದರೆ- ನೂರಾರು ವರ್ಷ ನೀರಿನ ಕೊರತೆಯಾಗಲಾರದು.

ಅನೇಕ ಬಾವಿಗಳನ್ನು ಕಡಿದು, ನೀರಿನ ಸಂಗ್ರಹ ಮಾಡಬೇಕೆಂದು ನಳದ ದ್ವೇಷಿಗಳು ಅನ್ನುತ್ತಾರೆ. ಎಷ್ಟು ಕೆರೆ ಕಡಿಸಿದರೇನು? ಬಾವಿ ಅಗಿಸಿದರೇನು? ಮಳೆ ಹೋದ ಕೂಡಲೆ, ಎಲ್ಲ ಕೆರೆ ಬಾವಿಗಳು ಬತ್ತುತ್ತವೆ ಅಂದ ಬಳಿಕ ಇವುಗಳಿಗೆ ಎಷ್ಟು ದ್ರವ್ಯ ವ್ಯಯ ಮಾಡಿದರೂ ಫಲ ನಿಷ್ಪತ್ತಿಯಾಗಲಾರದು. ಕಾರಣ ಸರ ವಿಶ್ವೇಶ್ವರಯ್ಯನವರು ತೋರಿಸಿದ ಹಾದಿಯಿಂದಲೇ ನೀರಿನ ಸಂಗ್ರಹ ಮಾಡಿಕೊಳ್ಳಬೇಕು.

ನಳವಾಗುವದರಿಂದ ಜನರ ತ್ರಾಸವೆಷ್ಟು ಉಳಿಯುತ್ತದೆ ಹೊತ್ತು ಎಷ್ಟು ಉಳಿಯುತ್ತದೆಂಬದನ್ನು ಯಾರೂ ಲಕ್ಷಿಸುವದಿಲ್ಲ. ದಿನಾಲು ಮೂರು ನಾಲ್ಕು ತಾಸು ನೀರಿನ ಸಾರಿಗೆ ಇಟ್ಟರೆ- ರೈತನು ದನಕರಗಳಿಗೆ ನೀರನ್ನು ಪೂರೈಸಲು ಶಕ್ತನಾಗುವನು. ನಳದಿಂದ ಈ ಕ್ರಮದ ತಾಸು ಹೊತ್ತಿನ ಉಳಿತಾಯವಾಗುತ್ತದೆ ಕೆರೆಗೆ ಬರುವ ನೀರು ಗಲೀಜ ಸ್ಥಳದಿಂದ ಬರುತ್ತಿರುವದರಿಂದ ರೋಗರೋಜಿನದ ಭಯವೂ ಉಂಟು. ಈ ಭಯವು ನಳದಿಂದ ತಪ್ಪುವದು ಈ ನೀರನ್ನು ಒಂದೇ ಸ್ಥಳದಲ್ಲಿ ಸಂಗ್ರಹಿಸಿ, ಅದನ್ನು ಶುದ್ಧ ಮಾಡಿ, ಊರೊಳಗೆ ಬಿಡುವದರಿಂದ ರೋಗಬಾಧೆಯಾಗಲಾರದು,

ನಳವಾದಂದಿನಿಂದ ಮನೆ ಪಟ್ಟಿ ಹೆಚ್ಚಿತು, ನೀರಿನ ಪಟ್ಟಿ ಬೆಳೆಯಿತು. ಜನರ ಮೇಲೆ ನೀಗಲಾರದ ಕರ ಬಿದ್ದಿತು ಕಡಿತೆಂದು ಶ್ರೀ ಭಿಸೆಯವರು ಹೇಳುತ್ತಾರೆ ತಿಳಿದು ನೋಡಿದರೆ- ಇದು ನಿಜವಲ್ಲೆಂಬ. ನಾನು ಇನ್ನೊಂದಾವರ್ತಿ ಸಭೆ ಮಾಡಿ, ಸಿದ್ಧ ಮಾಡುವೆನು. ಜನರ ಸಂಬಳ ಬೆಳೆದಿದೆ. ಕೂಲಿಕಾರರ ಕೂಲಿ ಬೆಳೆದಿದೆ. ಸಾಮಾನುಗಳ ಧಾರಣೆ ಹೆಚ್ಚಿದೆ. ಶಾಲೆಯ ಮಾಸ್ತರರಿಗೆ ಏಳೆಂಟು ರೂಪಾಯಿ ಸಂಬಳವಿತ್ತು. ಸ್ಕೂಲಬೋರ್ಡಿನ ವೆಚ್ಚವು ವರ್ಷಕ್ಕೆ ೧೬೦೦೦ ಇತ್ತು. ಈಗ ೭೦ ಸಾವಿರ ಆಗಿರುತ್ತದೆ. ಜನರ ಉತ್ಪನ್ನ ಬೆಳೆದಂತೆ, ಅದರ ವೆಚ್ಚವೂ ಬೆಳೆದಿರುವದು. ಗಳಿಕೆಗೆ ತಕ್ಕಂತೆ

ಸರಕಾರದವರಲೇ ಬೇಕಾಗುತ್ತದೆ. ಇತ್ತಾಗಿಯೂ ನಾವು ಬಡವರ ಮೇಲೆ ಭಾರ ಬೀಳದಂತೆ ವ್ಯವಸ್ಥೆ ಮಾಡಿದ್ದೇವೆ. ಈನಂತರವೂ ಅದೇ ವಿಚಾರವುಂಟು.

ಶ್ರೀ ಮುದವೇಡಕರ ಕೃಷ್ಣರಾಯರು ತಮ್ಮ ಹಿರಿಯರು ಮಾಡಿದ ಯೋಜನೆಯು ಮೂರಲಾಬಟ್ಟೆ ಮಾಡಬೇಕೆಂದಿದ್ದಾರೆ. ಇದರಲ್ಲಿ ಪಿತೃಭಕ್ತಿ, ಗುರುಭಕ್ತಿ ಇದ್ದಂತೆ ತೋರುವದಿಲ್ಲ. ದೇವಲಂತೆ, ದೈವಲಂಡ, ಪಿತೃಲಂಡರಂತೆ ವರ್ತಿಸಿದಂಥ ಭಾಷಣ ಮಾಡಿದ್ದಾರೆ.

ಮ್ಯುನಿಸಿಪಾಲಿಟಿ ಬೇರೆ; ನಾವು ಬೇರೆ ಎಂದು ಇವತ್ತಿನ ಸಭೆಯಲ್ಲಿ ಭಾಷಣವಾದದ್ದನ್ನು ಕೇಳಿ ಆಶ್ಚರ್ಯವಾಯಿತು. ನಾಗರಿಕರೂ ಮೆಂಬರರೂ ಒಂದೇ ಆಗಿದ್ದಾರೆ. ನಾಗರಿಕರಿಂದ ಆರಿಸಲ್ಪಟ್ಟವರೇ ಮೆಂಬರರಾಗಿದ್ದವರ ಕೂಡ ಸಹಕಾರಿತೆಯಿಂದ ನಡೆಯುವದಕ್ಕಾಗಿ ರೇಟ ಪೇಯರ್ಸ ಅಸೋಸಿಯೇಶನ ಸ್ಥಾಪಿಸಬೇಕೆಂದೂ ಸೂಚಿಸುತ್ತೇನೆ.

ಅಧ್ಯಕ್ಷ ಮಿ. ಜವಾಣಸಾಹೇಬರ ಭಾಷಣ-

ಧಾರವಾಡದಲ್ಲಿ ನಳವಾಗುವ ಮೊದಲು ಜನರು ಕೆರೆಯ ನೀರು ಕುಡಿಯುತ್ತಿದ್ದರು. ಈ ನೀರಿನಿಂದ ನಾರು ಆಗುವದು ತಪ್ಪುತ್ತಿದ್ದಿಲ್ಲ. ಜನರು ನಾರಬೇನೆಯಿಂದ ಒದ್ದಾಡುತ್ತಿದ್ದರು. ಆಗ ನಾವು ಲೈನ ಬಝಾರದಲ್ಲಿರುತ್ತಿದ್ದೆವು. ನಮ್ಮ ತಂದೆಯವರು ಕೆರೆಯ ನೀರಿನ ಬದಲಾಗಿ ಬಾವಿಯ ನೀರು ಕುಡಿಯಲಿಕ್ಕೆ ನಮಗೆ ಹೇಳುತ್ತಿದ್ದರು. ನಳವಾದ ಬಳಿಕ ನಾರಿನ ಉಪದ್ರವ ಹೋಗಿದೆ. ನೀರಿನಿಂದಲೇ ಕಾಲರಾ, ಸನ್ನಿಪಾತ ಜ್ವರ, ಆಮಾಂಶ ವಾಗುತ್ತದೆಂದು ಈಗಿನ ಶೋಧವಾಗಿದೆ. ನೀರು ಶುದ್ಧವಿದ್ದಷ್ಟು ಆರೋಗ್ಯವು. ಆ ಪ್ರಕಾರದ ವ್ಯವಸ್ಥೆಯನ್ನು ನಳದ ಕರದಿಂದಲೇ ಮಾಡಲಿಕ್ಕೆ ಬರುತ್ತದೆ.

ಈಗ ಬಿದ್ದ ಅಬರಿನಿಂದ ಜನರು ನೀರಿಗಾಗಿ ಎಷ್ಟು ಕಷ್ಟಪಡುತ್ತಾರೆಂಬದನ್ನು ನಾನು ದಿನಾಲು ನೋಡುತ್ತೇನೆ. ರಾತ್ರಿ ಹನ್ನೆರಡು ತನಕ ಬಾಜಿಲಿಬಾವಿಗೆ ರೇಜಿಸುತ್ತಾರೆ. ನೀರು ಒಂದಿಡೆ ಯಾವಾಗ ನಳಬಿಡುವರೆಂದು ಜನರು ನನ್ನನ್ನು ಪದೇ ಪದೇ ಕೇಳುತ್ತಾರೆ. ಪತ್ರ ಬರೆಯುತ್ತಾರೆ. ಶ್ರೀಮಂತರು ಆಳುಗಳಿಂದ ನೀರು ತರಿಸಿಕೊಳ್ಳುತ್ತಾರೆ. ಆದರೂ ಅವರಿಗೆ ನಳದಷ್ಟು ಸೋಯಿ ಮತ್ತು ಸೌಖ್ಯವೆನಿಸುವದಿಲ್ಲ.

ರಾ. ಬ. ಪಾಟೀಲರು ಸರ ವಿಶ್ವೇಶ್ವರಯ್ಯನವರ ಯೋಜನೆ ಹೇಳಿದ್ದಾರೆ. ಇದರ ಹೊರ್ತು ಮಲಪ್ರಭೆಯಿಂದ ನೀರು ತರುವ ವಿಚಾರವುಂಟು. ಇದರಿಂದ ಧಾರವಾಡ, ಹುಬ್ಬಳ್ಳಿ ಮತ್ತು ಯಮ್ಮನೂರ ಗುಡ್ಡಕ್ಕೆ ನೀರು ಪೂರೈಸುವದು. ಕಲೆಕ್ಟರರಾಗಿರುವ ಮಿ. ಮಾಸ್ತರ ಸಾಹೇಬರು ರಜೆಯಿಂದ ಮರಳಿ ಬಂದ ಬಳಿಕ, ಈ ಬಗ್ಗೆ ಸರಕಾರ ಮತ್ತು ಮೂರೂ ಮ್ಯುನಿಸಿಪಾಲಿಟಿಗಳ ಒಂದು ಪರಿಷತ್ತು ಕೂಡಿಸುವೆವು.

ಈ ಪ್ರಕಾರ ಅಧ್ಯಕ್ಷರ ಭಾಷಣವಾದ ನಂತರ ಪುನಃ ಇದೇ ವಿಷಯವಾಗಿ ರಾ. ಬ. ಪಾಟೀಲರು ಬೇಗನೆ ವ್ಯಾಖ್ಯಾನ ಕೊಡುವದು ಗೊತ್ತಾಗಿ, ಸಭಾ ವಿಸರ್ಜನೆಯಾಯಿತು.

ಸಹಕಾರಿ ಸಂಘಗಳಲ್ಲಿ ರಾಜಕೀಯ ಪ್ರವೇಶ

—o—

ಮುಂಬಯಿ ಕೌನ್ಸಿಲದಲ್ಲಿ ಸಹಕಾರಿ ಸಂಘಗಳ ಕಾಯದೆಯಲ್ಲಿ ಕೆಲವು ಕಲಮುಗಳ ದುರಸ್ತಿಯ ಪ್ರಶ್ನ ಹೊರಟಿತು. ಇದರಲ್ಲಿ ಈ ಸಂಘಗಳಲ್ಲಿ ರಾಜಕೀಯ ವಿಷಯದ ಚರ್ಚೆಯು ನಡೆಯಬಾರದೆಂಬ ಶರ್ತನ್ನು ಹಾಕಿದ್ದರು. ರಾಷ್ಟ್ರೀಯ ಪಕ್ಷದ ಮೆಂಬರರು ಈ ಚರ್ಚೆ ಇರಬೇಕೆಂದು ವಾದಿಸಿದರು. ದಿವಾನರು ಸ್ವತಂತ್ರ ವೃತ್ತಿಯವರಾದರೂ ಸರಕಾರದ ಧೋರಣದ ಪ್ರಕಾರ ರಾಜಕೀಯವಿರಕೂಡದೆಂಬುದಾಗಿ ಸಾಧಿಸತೊಡಗಿದರು. ದಿವಾನರು ಸರಕಾರೀ ಕಾಮದಾರರಲ್ಲ; ಪ್ರಜಾಪಕ್ಷೀಯರು; ಪ್ರಜರಿಂದ ಆರಿಸಲ್ಪಟ್ಟಂಥವರು; ಆದರೂ ಇವುಗಳ ಕಮಿಟಿಗಳಲ್ಲಿ ರಾಜಕೀಯ ವಿಷಯಗಳ ಚರ್ಚೆಯಾಗಬಾರದೆಂದು ಸಮರ್ಥಿಸಿದ್ದು ಖೇದಾಶ್ಚರ್ಯವೇ ಸರಿ. ಕುರಡೀ ಕಾರಭಾರವು ಯಾವದೊಂದು ಮುಳವನ್ನು ತನ್ನಂತೆ ಮಾಡಿಕೊಳ್ಳುವ ಪ್ರಕಾರ ಸರಕಾರವು ಲೋಕಪಕ್ಷೀಯರಾಗಿ, ಲೋಕಸೇವೆಯನ್ನು ಮಾಡುವಂಥವರನ್ನು ತನ್ನಂತೆ ಹೇಗೆ ಮಾಡಿಕೊಳ್ಳುತ್ತದೆ, ಅಥವಾ ಸಂಗತಿ ಗುಣದಿಂದ ಜನರೇ ಹೇಗೆ ಅವರ ಬಲೆಯೊಳಗೆ ಸೇರುತ್ತಾರೆಂಬುದು ಈ ಸಂಗತಿಯಿಂದ ಧ್ವನಿತವಾಗುತ್ತದೆ.

ಒಂದೇ ಸ್ಥಳದಲ್ಲಿ ಹಾವು ಮತ್ತು ಮನುಷ್ಯರು ಮಿತ್ರರಂತೆ ಮೂರು ರಾತ್ರಿ ಕಳೆದರು.

ಕಾಠೇವಾಡ ಸಂಸ್ಥಾನಕ್ಕೆ ಸೇರಿದ ಧ್ರಾಂಗಧ್ರಾ ಸಂಸ್ಥಾನದಲ್ಲಿಯೂ ಅತಿವೃಷ್ಟಿಯಿಂದ ಕಲ್ಪನಾಬಾಹ್ಯವಾದ ಕೇಡಾಯಿತು. ಜೀವದಾಶೆಯಿಂದ ಹಾವೂ ಜನರೂ ಗಿಡಗಳ ಮೇಲೆ ಕೂತರು. ಮೂರು ದಿವಸ ಹಗಲು ರಾತ್ರಿ ಒಂದೆಡೆಯಲ್ಲಿದ್ದರೂ, ಮನುಷ್ಯರು ಹಾವನ್ನು ಕಡವಲಿಲ್ಲ, ಹಾವು ಮನುಷ್ಯರನ್ನು ಕಚ್ಚಲಿಲ್ಲ. ಇಬ್ಬರೂ ಸಮದುಃಖಿಗಳಾಗಿ, ಜೀವ ಉಳಿದ ಬಳಿಕ ಮುಂದಿನ ವಿಚಾರವೆಂಬ ಚಿಂತೆಯಲ್ಲಿ ತೊಡಗಿದ್ದರು.

ಮುಂಬಯಿ ಇಲಾಖೆಯ ಬ್ರಾಹ್ಮಣೇತರರು ಕಾಂಗ್ರೆಸ ಸೇರುವ ವಿಚಾರ.

—೧—

ಮದ್ರಾಸದ ಬ್ರಾಹ್ಮಣೇತರರಂತೆ ಮುಂಬಯಿ ಇಲಾಖೆಯ ಬ್ರಾಹ್ಮಣೇತರರೂ ಕಾಂಗ್ರೆಸ ಸಭೆಯನ್ನು ಸೇರಬೇಕೆಂಬ ವಿಚಾರ ನಡೆದಿದೆ. ಈ ವಿಚಾರವನ್ನು ನಿರ್ಣಯಿಸುವದಕ್ಕಾಗಿ ಬ್ರಾಹ್ಮಣೇತರರದೊಂದು ಪರಿಷತ್ತನ್ನು ಕೂಡಿಸುವರು. ಈಗಾಗಲೆ ೫೦ ಜನ ಪ್ರಮುಖರು ಸ್ವಾಗತ ಕಮಿಟಿಯ ಮೆಂಬರರಾಗಿದ್ದಾರೆ. ಈ ಸಭೆಯಲ್ಲಿ ಬ್ರಾಹ್ಮಣೇತರರು ಕಾಂಗ್ರೆಸದ ಮೆಂಬರರಾಗಬೇಕೆಂದು ಠರಾವು ಪಾಸಾದರೆ- ಕರ್ನಾಟಕದಲ್ಲಿ ಲಿಂಗಾಯತ, ರಡ್ಡಿ ಮೊದಲಾದವರು ಕಾಂಗ್ರೆಸದ ಮೆಂಬರರಾಗುವರು. ಮತ್ತು ಈ ಪರ್ಯಂತರ ಆಳರಸರ ಕಂಕುಳದೊಳಗಿನ ಕೂಸೆಂದೆನಿಸಿಕೊಳ್ಳುತ್ತಿದ್ದ ಕಲಂಕ ಹೋಗುವದು.

ಲೋಕಲಬೋರ್ಡ ಮತ್ತು ಮುನಿಸಿಪಾಲಿಟಿಯ ಬಂಟತನವು.

—೨—

ಗುಜರಾಥದಲ್ಲಿರುವ ಬೋರಸಾದ ಮ್ಯುನಿಸಿಪಾಲಿಟಿಯೂ, ಖೇಡದ ಡಿ॥ ಲೋ॥ ಬೋರ್ಡಿನವರೂ ಅಹಮದಾಬಾದಿನಲ್ಲಿ ಕೂಡಬೇಕೆಂದಿರುವ ಇಲಾಖೆಯ ಶಿಕ್ಷಣದ ಪ್ರದರ್ಶನಕ್ಕಾಗಿ ಯಾವ ಪ್ರಕಾರದ ದ್ರವ್ಯ ಸಹಾಯ ಮಾಡಬಾರದೆಂಬ ಠರಾವು ಮಾಡಿದ್ದಾರೆ. ಪುಣೆಯಲ್ಲಾದ ಪ್ರದರ್ಶನವನ್ನು ನೋಡಿದ್ದರಿಂದ, ರೈತರಿಗೆ ಇಂಥ ಪ್ರದರ್ಶನದಿಂದ ಯಾವ ಲಾಭವೂ ಆಗಲಾರದೆಂದು ತಮ್ಮ ಮನಸಂಬಿಗೆಯಾಗಿದೆಂದು ಇವೆರಡೂ ಸ್ಥಾನಿಕ ಸಂಸ್ಥೆಗಳು ಸ್ಪಷ್ಟವಾಗಿ ಹೇಳಿ, ವರ್ಗಣಿ ಕೊಡತಕ್ಕದಲ್ಲೆಂದು ಠರಾವು ಮಾಡಿರುತ್ತವೆ.

ಕಲಕತ್ತೆಯಲ್ಲಿ ಹಿಂದೂ ಜನರು ಪೋಲೀಸರ ಮೇಲೆ ಗೆದ್ದರು. ಗವರ್ನರಸಾಹೇಬರು ಪೋಲಿಸ ಪಹರೆಯಿಂದ ಲಿಂಗಸ್ಥಾಪನೆ ಮಾಡಬೇಕೆಂದು ಹುಕುಮು ಮಾಡಿದ್ದಾರೆ.

ಬಂಗಾಲದಲ್ಲಿಯ ನೆರೆಯಿಂದ ಒಂದು ಕೋಟಿಯ ಹಾನಿಯಾಗಿದೆ. ರೇಲ್ವೆ ದಾರಿಯು ದುರಸ್ತಾಗಲಿಕ್ಕೆ ೧೫ ದಿವಸ ಬೇಕು

ಲೋಕಲಬೋರ್ಡಿನ ಚುನಾವಣೆಯಲ್ಲಿ ಎಂಟು ರೂಪಾಯಿ, ತೆರಿಗೆ ಕೊಡುವಂಥವನೂ ಮತದಾರನಾಗಬೇಕೆಂದು ಮುಂಬಯಿ ಕೌನ್ಸಿಲದಲ್ಲಿ ಸೂಚ

ಪತ್ರವ್ಯವಹಾರ.

—೦—

ಕಳೆದ ತಿಂಗಳ ಅಖೈರದಲ್ಲಿ ಈ ತಾಲೂಕಿನ (ಕಲಘಟಗಿ) ಮಾಮಲೇದಾರಸಾಹೇಬ ಎ. ಬಿ. ಕಾಜಿ ಯವರ ಮುಕ್ಕಾಮು ಕಲ್ಘಟ್ಗಿಯಲ್ಲಿ ೩-೪ ದಿವಸ ಇದ್ದಿತು. ಕಡೆಯ ದಿವಸ ಅಂದರೆ ತಾರೀಖು ೩೧-೭-೨೭ ನೇ ದಿವಸ ಮುಂಜಾನೆ ೮ ಘಂಟೆಗೆ ಇಲ್ಲಿಯ ಕನ್ನಡ ಶಾಲೆಗೆ ಸಾಹೇಬರು ದಯಮಾಡಿಸಿದ್ದರು. ೭ ನೇ ಇಯತ್ತೆಯ ವರ್ಗಕ್ಕೆ ಕೆಲವು ವಿಷಯಗಳನ್ನು ಕೇಳಿದರು. ಹುಡುಗರು ಚನ್ನಾಗಿ ಉತ್ತರ ಕೊಟ್ಟದ್ದನ್ನು ನೋಡಿ ಆನಂದಭರಿತರಾದರು. ಆ ಕಾಲಕ್ಕೆ ಶಾಲೆಯ ಎಲ್ಲ ಪಂಚರೂ ಬಂದಿದ್ದರು. ನಂತರ ಹೆ. ಮಾ. ಆರ್. ಡಿ. ಕುಲಕರ್ಣಿ ಇವರು ಬಹಳ ಉತ್ಸಾಹದಿಂದ ತಾವು ತಯಾರಿಸಿದ ಒಂದು ಸಂಭಾಷಣವನ್ನು ವಿದ್ಯಾರ್ಥಿಗಳಿಂದ ಮಾಡಿಸಿದರು.

ಮಿ. ದಾನಪ್ಪಾ ಮೂಳಪ್ಪಾ ದಿಡ್ಡಿಮನಿ ಇವರು ಪೂವರ ಫಂಡಿನ ಸಲುವಾಗಿ ೩ ರೂಪಾಯಿ ವರ್ಗಣಿ ಕೊಟ್ಟರು. ಮಿ ರವರು ಯಾವತ್ತೂ ಮಾಸ್ತರ ಮಂಡಳಿಗೆ ಕಲಿಸುವ ವಿಷಯಗಳಲ್ಲಿ ಅನೇಕ ಉತ್ತಮ ತರದ ಉಪಯುಕ್ತ ಸೂಚನಗಳನ್ನು ಮಾಡಿದ್ದಲ್ಲದೆ ವಿದ್ಯಾರ್ಥಿಗಳು ಗುರುಗಳ ಕೂಡ ಹ್ಯಾಗ ವರ್ತಿಸಬೇಕೆಂಬುದನ್ನೂ ಮತ್ತು ಅವರು ವಿದ್ಯಾಭ್ಯಾಸದ ಕಡೆಗೆ ಎಷ್ಟು ಲಕ್ಷ್ಯಗೊಡಬೇಕೆಂಬ ಮಾತಗಳನ್ನೂ ತಮ್ಮ ಅನುಭವದ ಉದಾಹರಣೆಗಳನ್ನು ಕೊಟ್ಟು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸರಿಯಾಗಿ ಬಿಂಬಿಸುವಂತೆ ಅತಿಶಯ ಮಧುರವಾಗಿ ವಿವರಿಸಿದರು.

ಈಗಿನ ಹೆ ಮಾ. ರರು ಹೆಚ್ಚು ಶ್ರಮಗೊಟ್ಟು ಕೆಲಸ ಮಾಡುವದರಿಂದ ಶಾಲೆಯು ಈ ರೀತಿ ಸುಧಾರಿಸುತ್ತ ನಡೆದರೆ ಇದು ಅವರಿಗೆ ಶ್ರೇಯಸ್ಕರವಾದದ್ದು. ಶಾಲೆಯ ಪಂಚರೂ ಮತ್ತು ಮಿ ಬಿ ಡಿ. ಕುಲಕರ್ಣಿ ಸಾಕೀನ ಕಲ್ಘಟ್ಗಿರ ಶಾಲೆಯ ಕೆಲಸಕ್ಕೆ ವಿಶೇಷ ಸಹಾಯ ಮಾಡುತ್ತಲಿದ್ದಾರೆ ಎಂದು ಶರಾ ಬರೆದದ್ದರ ಸಾರಾಂಶವು. ಇಷ್ಟಾದ ಬಳಿಕ ರಾಷ್ಟ್ರಗೀತವಾಗಿ ಸಭೆಯು ವಿಸರ್ಜನೆಯಾಯಿತು.

ವೆ ದೇ. ಕುಲಕರ್ಣಿ.
ಸಾಕೀನ ಕಿರಿಮತ್ತಿಹಳ್ಳಿ

ಮುಂಬಯ ಮ್ಯುನಿಸಿಪಾಲಿಟಿಯ ಚುನಾವಣೆಯಲ್ಲಿ ಉಮೇದವಾರರಾಗುವಂಥವರು ೨೫೦ ರೂಪಾಯಿ ಡಿಪಾಜಿಟ್ಟು ಇಡಬೇಕೆಂದು ಗೊತ್ತಾಯಿತು, ಧಾರವಾಡ ಮ್ಯುನಿಸಿಪಾಲಿಟಿಯಲ್ಲಿಯೂ ಹಾಗೆ ಮಾಡಿದ್ದಕ್ಕೆ ಉಪಯೋಗಿ ಜನರು ಉಮೇದವಾರರಾಗಬಹುದು.

ಶ್ರೀ ನಾಣಿಕಪ್ರಭು ಪ್ರಾಸಾದಿಕ

ಗಾಯನ ವಾದನ ವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಗಾಯನ, ಹಾರ್ಮೋನಿಯಮ್, ತಬಲಾ, ಸತಾರ ಕಲಿಸುವ [illegible]

[illegible] ಸುರುವು [illegible] ಕಳೆದು [illegible]

ಪತ್ತೆ
ಶ್ರೀ ನಾ. ಪ್ರ. ಪ್ರಾ.
ಗಾಯನ ವಾದನ ವಿದ್ಯಾಲಯ
[illegible] ಸ್ಟೇಶನರಿ ಅಂಗಡಿ
ಮಾರ್ಕೆಟ ಶಿವಾಚಾರಗಲ್ಲಿ, ಧಾರವಾಡ

ತಮ್ಮ,
ಪ್ರೊಪ್ರಾಯಿಟರ,
ಲಕ್ಷ್ಮಣ ಸಿಂಗ ಗವಾಯಿ,
ನಾರಾಯಣಪೂರ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ಕ್ಕೆ ೩ ರೂಪಾಯಿ.

೨-೩ ಗುಳಿಗೆ ಸೇವಿಸಿ ಬಂದು ಪ್ರಾಣ ಉಳಿಯುವದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಬಾರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ ಕಿತ್ತೂರ, ಜಿಲ್ಹಾ ಬೆಳಗಾವ

ಲಾರ್ಡ ಆಯವಿನ ಸಾಹೇಬರು ಬೆಂಗಳೂರಲ್ಲಿದ್ದಾಗ ಮಹಾತ್ಮರನ್ನು ಕರೆಸಿಕೊಂಡು, ಅವರ ಸಂಗಡ ಎರಡು ತಾಸುಗಳವರೆಗೆ ಭಾಷಣ ಮಾಡಿದರು.

ಬಡೋದೆಯ ಮಹಾರಾಣಿಯವರು ತಮ್ಮ ಸ್ವಂತದ ಹತ್ತು ಸಾವಿರ ರೂಪಾಯಿಗಳನ್ನು ನಿರಾಶ್ರಿತರ ಸಹಾಯಕ್ಕಾಗಿ ಕೊಟ್ಟಿರುತ್ತಾರೆ.

ಚಂದಾದಾರರಿಗೆ ಸೂಚನೆ.

—೦—

ಅಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ, ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಜಗತ್ ಪ್ರಸಿದ್ಧವಾದ

ಊದು ಬತ್ತಿಗಳು

ನಮ್ಮಲ್ಲಿ ಎಲ್ಲ ವಿಧವಾದ ಊದುಬತ್ತಿಗಳು ಸೇರ, ೧ಕ್ಕೆ ೧-೦-೦ ಲಾಗಾಯಿತ ಕಳರೂ ಮಲ್ಲಿಗೆ ಅರಗಜ ಬಿಲ್ವ, ಪನ್ನಿರು, ಭೃಂಗರಾಜ ತೈಲ, ದಶಾಂಗ, ಇವೇ ಮುಂತಾದ ಸುಗಂಧ ದ್ರವ್ಯಗಳು ಸುಲಭ ಕ್ರಯಕ್ಕೆ ದೊರೆಯುತ್ತ ಬೇಕಾದವರು ನಮಗೆ ಆರ್ಡರ್ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿ. ಎಲ್. ಉಪಾಧ್ಯಾಯ ಆಂಡ ಸನ್ಸ
ಸುಗಂಧದ್ರವ್ಯ ವ್ಯಾಪಾರಿ ಮೈಸೂರು

ಈ ಪತ್ರವನ್ನು ಅಣ್ಣಾಚಾರ್ಯ ಎಂಬುವರ ಮನೆ ಹೊಸಕೇರಿ ಇವರು ಧಾರವಾಡದಲ್ಲಿರುವ ವ್ಯವಹಾರಿ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧಪಡಿಸಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮: ಧಾರವಾಡ ಸೋಮವಾರ ತಾರೀಖು ೬ನೇ ಆಗಸ್ಟ ೧೯೨೭ (ಸಂಚಿಕೆ ೧೭೦

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅದು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಈಸುಗಳುಂಟು. ಗಾಲಿಯ ವ್ಯಾಸವು ೩೬ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ನಿಮ್ಮಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೨೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಅಪರೇಟಿವ್ಹ ಬ್ಯಾಂಕ ಲಿಮಿಟೆಡ

—o—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರ ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಯಲ್ಪಡುವದು. ಠೇವಿಗಳು ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ರಂಗರಾವ ಜಿ. ಜಹಾಗೀರದಾರ
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೇ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳ ಒಂದರ ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

—o—

ತಿಂಗಳ ಕಾಲದ ಪತ್ರ, ಪಳಗಳಿಗೆ ಒಂದು ರೂಪಾಯಿ ಮುಂಡೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ೫ರ ಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಆ— ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರೆ ಆಣೆ ಬಹುಕಾಲದ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

——

ವಿಜಯದ ವರ್ಗಣೀ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	೧೨—೮—೦ ರೂ
೬ ”	೬—೦—೦ ರೂ
೪ ”	೪—೦—೦ ರೂ
ವಾರ ಪತ್ರಿಕೆಗೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

——

ವಿಜಯ ಪುಸ್ತಕಾಲಯ.

—o—

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ಲೋಕಮಾನ್ಯ ಟಿಳಕರ ಚರಿತ್ರೆ	೪ ,,
ದೇಶಬಂಧು ದಾಸರ ಚರಿತ್ರೆ	೨
ದೇಶಭಕ್ತರ ಸಂದೇಶ	

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ವಿಜಯ.

ಧಾರವಾಡ ತಾ-೩೦-೮-೩೭ ನೇ ಇಸ್ವಿ

ಗದಗ ಕಾಟನ ಸೇಲ ಸೊಸಾಯಟಿ

ಲಿಂಗಾಯಿತ ರಡ್ಡಿ ಜಬ್ಬಣ.

ಬ್ರಾಹ್ಮಣೇತರ ಚಳವಳಿಯ ಪ್ರಾರಂಭದಲ್ಲಿ ಲಿಂಗಾಯಿತರೂ, ರಡ್ಡೀ ಜನರೂ ಚಳವಳಿಯ ಪತಾಕಿ ಹಿಡಿದಿದ್ದರು. ಆದರೆ ಆರೇ ವರ್ಷಗಳಲ್ಲಿ ಇವರ ನಡುವೆ ಜಬ್ಬಣವಾಗಿ, ಇವರೊಳಗೆ ಒಡಂಬಡಿಕೆಯಾಗ ವದು ಶಕ್ಯವೇ ಅಲ್ಲೆನಿಸುವಷ್ಟು ಬಣವಾಗಿರುತ್ತದೆ. ಲೋಕಲಬೋರ್ಡ ಮ್ಯುನಿಸಿಪಾಲಟಿಗಳಲ್ಲಿ ಲಿಂಗಾಯಿತರು ಬಹುಮತದಿಂದ ಸಿಂಹಸಭಾಗವು ತಮಗೇ ಇರಬೇಕೆಂದೂ, ತಮ್ಮಂತೆ ನಡಿಯುವಂಥವರಿಗೆ ಮಾತ್ರ ಬೀಕಲನ್ನು ಕೊಡುವೆವೆಂದೂ ಹೇಳುವದೂ, ಆ ಪ್ರಕಾರ ಪ್ರತ್ಯಕ್ಷ ಕೃತಿ ಮಾಡಿ ತೋರಿಸುವದೂ ಲಿಂಗಾಯಿತೇತರರ ಅಸೂಯಕ್ಕೂ ಮತ್ಸರಕ್ಕೂ ಕಾರಣವಾಗಿರುತ್ತವೆ. ಈ ಬಗ್ಗೆ ಎಷ್ಟು ಬರೆದರೂ ಸ್ವಲ್ಪವೇ ಆಗುತ್ತದೆ.

ವ್ಯಾಪಾರ ವಿಷಯದಲ್ಲಿಯೂ ಇದೇ ಕುಹಕತನವನ್ನು ಮಾಡುವದು ತೀರ ಅನುಚಿತವಾಗುತ್ತದೆಂದು ಯಾರೊಬ್ಬರು ಹೇಳದಿರಲಾರರು. ಸಹಕಾರ ಮಾಡುವಂಥಲ್ಲಿ ಅಸಹಕಾರ ಮಾಡುವ ಮ್ಯಾನೇ ಜ ಂ ವ ಲ್ಲ ವೇ? ಗದಗ ಕಾಟನ ಸೇಲ ಸೊಸಾಯಿಟಿಯಲ್ಲಿ ೧೫ ದಿವಸಗಳ ಹಿಂದೆ ಚೇರಮನ್ನ ಮೊದಲಾದ ಮಹತ್ವದ ನೇಮಣೂಕುಗಳಾದವು ಇದರಲ್ಲಿ ರಡ್ಡೀ ಮತ್ತು ಲಿಂಗಾಯಿತರೇ ಪ್ರಮುಖ ಮೆಂಬರರಾಗಿದ್ದಾರೆ. ಚುನಾವಣೆಯಲ್ಲಿ ಒಂಭತ್ತು ಜನ ಲಿಂಗಾಯಿತರನ್ನು, ನಾಲ್ವರು ರಡ್ಡಿಗಳನ್ನು ಆರಿಸಿದರು. ಮತ್ತು ಚೇರಮನ್ನ ಮ್ಯಾನೇಜಿಂಗ ಏಜಂಟ ಮೊದಲಾದ ದ್ರವ್ಯ ಪ್ರಾಪ್ತಿಯ ಅಧಿಕಾರಗಳನ್ನು ಲಿಂಗಾಯಿತರು ತಾವೇ ಇಟ್ಟುಕೊಂಡರು. ಮ್ಯಾನೇಜಿಂಗ ಏಜಂಟನ ಸಂಬಳವು ೧೫೦ ರೂಪಾಯಿಯುಂಟು. ಈ ಪ್ರಕಾ [illegible] ಮತ್ತು ಪಕ್ಷಪಾತವೆನಿಸುವಂಥ ಕೃತ್ಯ ಅಸಿಸ್ಟಂಟ ರಜಿಸ್ಟ್ರಾರರಾದ ಮಿ. ಹೂಲೀ ಇವರೆದುರಿನಲ್ಲಿಯೇ ಜರಗಿತು.

ಗದಗ ಕಾಟನ ಸೇಲ ಸೊಸಾಯಿಟಿಗೆ ಮಾರಾಟ ವಾಗುವಂಥ ಅರಳೆಯ ಅಂಡಿಗೆಗಳು ಹುಬ್ಬಳ್ಳಿ ಸೋಸಾಯಿಟಿಯ ಯೂನಿಯನ್ನಿಂದಲೇ ಬಹವಾಗಿ ಹೋಗುತ್ತವೆ. ಒಂಭತ್ತು ಸಾವಿರ ಅಂಡಿಗೆಗಳಲ್ಲಿ ಏಳು ಸಾವಿರ ಅಂಡಿಗೆಗಳು ಇಲ್ಲಿಂದಲೇ ಬರುವವು. ಹಾಗು ಇವನ್ನು ಕಳಿಸುವಂಥವರು ರಡ್ಡೀ ಜನರೇ ಆಗಿದ್ದಾರೆ ಲಿಂಗಾಯಿತರ ಒಂಭತ್ತು ಜನ ಮೆಂಬರರಲ್ಲಿ ಒಬ್ಬರೇ ವ್ಯಾಪಾರಸ್ಥರೆಂದೆನಿಸಿಕೊಳ್ಳುವಂಥವರೂ ಇಬ್ಬರು ಹಾಗೂ ಹೀಗೂ ವ್ಯಾಪಾರಸ್ಥರಾಗಿಯೂ ಆಗಿದ್ದಾರೆ. ಈ ಚುನಾವಣೆಯ ಮೊದಲು ರಡ್ಡೀ ಗೃಹಸ್ಥರೇ ಚೇರಮನ್ನ ಅಥವಾ ಮ್ಯಾನೆಜಿಂಗ ಡಾಯರೆಕ್ಟರರಾಗಿದ್ದರು. ಇವರನ್ನು ಹಾರಿಸಿ, ಬಹುಮತದಿಂದ ವೀರಶೈವರು ತಮ್ಮವರಿಗೇ ಅಧಿಕಾರದ ಸ್ಥಳಕೊಟ್ಟದ್ದರಿಂದ, ರಡ್ಡೀ ಜನರು ಲಿಂಗಾಯಿತರ ವಿರುದ್ಧ ಬಹಳವಾಗಿ ಸಂತಾಪಗೊಂಡಿದ್ದಾರೆ.

ಈ ಅನ್ಯಾಯದ ವಿರುದ್ಧವಾಗಿ ರಾವಸಾಹೇಬ ಲಿಂಗನಗೌಡರೇ ಮೊದಲಾದ ಪ್ರಮುಖರು ಮಿ ರಜಿಸ್ಟ್ರಾರಸಾಹೇಬರ ತನಕ ದೂರು ಒಯ್ದರು. ಸಾಹೇಬರು ಈ ಬಗ್ಗೆ ವಿಚಾರ ಮಾಡುವೆವೆಂದು ಇವರಿಗೆ ಅಭಿವಚನವಿತ್ತಿದ್ದಾರೆ. ಲಿಂಗಾಯಿತರಿಗೂ ತಮಗೂ ಬಣಹರಿಯುವದಿಲ್ಲೆಂದು ರಡ್ಡೀ ಜನರು ಸ್ಪಷ್ಟವಾಗಿ ತಿಳಕೊಂಡಿದ್ದಾರೆ ಈ ವಿಚಾರವನ್ನು ಮರೆ ಮುಚ್ಚಿಲ್ಲದೆ ಹೇಳುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಮ. ರಜಿಸ್ಟ್ರಾರಸಾಹೇಬರು ರಡ್ಡೀ ಜನರಿಗೆ ಸ್ವತಂತ್ರವಾದ ಕಾಟನ ಸೇಲ ಸೊಸಾಯಿಟಿ ಸ್ಥಾಪಿಸುವ ಅಧಿಕಾರ ಕೊಡುವದೇ ಉತ್ತಮ ಪಕ್ಷವು

ನವಲಗುಂದ ಮ್ಯುನಿಸಿಪಾಲಿಟಿಯಲ್ಲಿ ಅಧ್ಯಕ್ಷ ಪದದ ಜಗಳವು.

ಪ್ರಕರಣವು ಕೋರ್ಟಿನ ಕಟ್ಟೇ ಏರುವದೇ?

— ೧ —

ನವಲಗುಂದ ಮ್ಯುನಿಸಿಪಾಲಿಟಿಯಲ್ಲಿ ಸೂರ್ಯೋದಯದ ಪೂರ್ವದಲ್ಲಿಯೇ ಜನರಲ ಕಮಿಟಿ ಕೂಡಿಸುವ ಘಾಸಿ ಮಾಡಿ, ಅಧ್ಯಕ್ಷನನ್ನು ಆರಿಸಿದ ಸುದ್ಧಿಯನ್ನು ಈ ಮೊದಲು ಬರೆದಿದ್ದೇವಷ್ಟೇ; ತಮಗೆ ಬಹುಮತ ದೊರೆಯಲಾರದೆಂಬ ಹೆದರಿಕೆಯಿಂದಲೇ ಇವರು ಇಷ್ಟು ಅವಸರಬಟ್ಟು, ತಮ್ಮ ಮೋರೆಗೆ ತಾವೇ ಅರುತಿ ಬೆಳಗಿಕೊಂಡಿರುತ್ತಾರೆಂಬದಕ್ಕೆ ಬೇರೊಂದು ದೃಷ್ಟಾಂತವೇ ಬೇಕಾಗಿಲ್ಲ. ಇವರು ಕಮೀಟಿಯ ಪ್ರೊಸಿಡೆಂಗ್ಸವನ್ನು ಒಂದು ಕಾಗದದ ಮೇಲೆ ಸೀಸಪೆನ್ಸಿಲದಿಂದ ಬರೆದಿರುತ್ತಾರೆಂದು ತಿಳಿಯುತ್ತದೆ. ಇದೂ ಅಕ್ರಮವೇ. ಇದರ ಮೇಲೆ ಕಮಿಶನರ ಮತ್ತು ಕಲೆಕ್ಟರರ ಕಡಿಗೆ ಅರ್ಜಿಯಾಗಿಯುತು. ಆದರೆ ಇವರಿಬ್ಬರೂ ಮಿ. ಬಸನಗೌಡರ ಚುನಾವಣೆಯನ್ನೇ ಮಂಜೂರ ಮಾಡಿದ್ದಾರೆ ಇಂಥ ಹಗಲು ಅನ್ಯಾಯದ ವಿರುದ್ಧ ದಿವಾಣಿ ಕೋರ್ಟಿನ ಕಟ್ಟೆ ಹತ್ತಿದ ಹೊರತು ಸಾಗುವಂತಿಲ್ಲ. ಆದರೆ ಇದಕ್ಕೆ ಪುನಃ ಕಮಿಶನರಸಾಹೇಬರ ಕಡಿಗೆ ಅರ್ಜಿ ಮಾಡಬೇಕಾಗುತ್ತದೆ. ಸಾಹೇಬರು ಈ ಅರ್ಜಿಯ ಯೋಗ್ಯ ನಿರ್ಣಯ ಮಾಡದಿದ್ದರೆ- ಪ್ರಕರಣವು ದಿವಾಣಿ ಕೋರ್ಟಿನ ಕಟ್ಟೇ ಹತ್ತುವದು. ಮತ್ತು ಬೆಳಗಾವಿ ಡಿಸ್ಟ್ರಿಕ್ಟ ಲೋಕಲ ಬೋರ್ಡಿನಂತೆ ಇದೊಂದು ಈ ಜಿಲ್ಲೆಯಲ್ಲಿ ಚರ್ಚೆಯ ವಿಷಯವಾಗುವದು

ಬ್ರಾಹ್ಮಣರ ವಿರುದ್ಧ ಬ್ರಾಹ್ಮಣೇತರರು

ಆಕ್ಷೇಪಣೆ ತರ್ಕ್ಯಾಂಶ ಭಾಗ

ಬೆಳಗಾವಿಯಲ್ಲಿ ನಾಗರಿಕರು ಧರ್ಮವೀರ ರಾಜೇ ಲಕ್ಷ್ಮಣರಾವ ಸಾಹೇಬ ಭೋಸಲೆ ಇವರಿಗೆ ಕೊಟ್ಟ ಮಾನಪ [illegible] ಯ ಪ್ರಸಂಗದ ಬಗ್ಗೆ ಬ್ರಾಹ್ಮಣೇತರರು ಆಕ್ಷೇಪಗೊಂಡ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಆ ಕಲವು ಮುಂದೆ ಕೊಟ್ಟಿರುತ್ತೇವೆ.

ಮಹಾಶಯರೇ-

ನೀವು ಗೋಬ್ರಾಹ್ಮಣ ಪ್ರತಿಪಾಲಕರಾದಂಥ ಪವಿತ್ರ ಭೋಸಲೆ ಕುಲೋದ್ಭವರಾಗಿದ್ದೀರಿ ಆ ಕುಲ- ಕೀರ್ತಿಯನ್ನು ಅವಿರತವಾಗಿ ಪ್ರಕಾಶಿತವಾಗಿಸುವಂತೆ ತಮ್ಮ ಧರ್ಮಾಚರಣೆಯುಂಟು. ಆಕಳದ ಪವಿತ್ರ ಹಾಲಿನಿಂದ ಪ್ರತಿಯೊಬ್ಬ ಹಿಂದುವಿನ ಶಾರೀರಿಕ ಮತ್ತು ಐಹಿಕ ತೇಜವೂ ಬ್ರಾಹ್ಮಣರ ಪವಿತ್ರ ತಪಸ್ಸಿನಿಂದ ಪ್ರತಿಯೊಬ್ಬ ಹಿಂದುವಿನ ಮಾನಸಿಕ ಅಥವಾ ಪಾರಮಾರ್ಥಿಕ ತೇಜವೂ ನಮ್ಮ ಭರತ ಖಂಡದಲ್ಲಿ ಪೂರ್ಣವಾಗಿ ಪ್ರಕಾಶಿಸುತ್ತಿತ್ತು ಅದೇ ತೇಜಸ್ಸು ಈಗ್ಯೂ ಹಿಂದೂ ಸಮಾಜದಲ್ಲಿ ಪ್ರಕಾಶಮಾನವಾಗಿರುವಂತೆ ಗೋಕ್ಷೀರದ ಹಾಗು ಬ್ರಾಹ್ಮಣರ ತಪಃಶರಣೆಯ ಸಂರಕ್ಷಣೆಯನ್ನು ಮಾಡುವದು ಕ್ಷತ್ರಿಯರ ಪರಂಪರಾಗತವಾದ ಕರ್ತವ್ಯವಿದ್ದು, ಅದನ್ನು ನೀವು ಮಾಡುತ್ತಿದ್ದೀರಿ ಪವಿತ್ರ ಆಚರಣೆಯಲ್ಲಿ ಹಿಂಗೂ ಸಮಾಜವು ಒಗತ್ತಿಗೆ ಆದರ್ಶ ಭೂತವಾಗಿತ್ತು. ಮುಂದಾದರೂ ಹೀಗಾಗಿಯೇ ಇರಬೇಕಾದದ್ದು. ಆಕಳ ಮತ್ತು ಬ್ರಾಹ್ಮಣನು ಹಿಂದೂ ಧರ್ಮರಹಸ್ಯದ ನಿಶಾನೆಗಳಾಗಿದ್ದಾರೆ. ಈ ರಹಸ್ಯವನ್ನು ಲಕ್ಷಿಸಿದರೆ- ಗೋಬ್ರಾಹ್ಮಣ ಪ್ರತಿಪಾಲಕವೆಂಬದು ಐಹಿಕ ಮತ್ತು ಪಾರಮಾರ್ಥಿಕ ಪರಮ ಕಲ್ಯಾಣಪ್ರದ ಪರಮೋಚ್ಚ ತತ್ವದ ಪ್ರತಿಪಾಲನ ಮಾಡುವದೇ ಆಗುತ್ತದೆ. ಮಹಾರಾಜರೇ- ಇದೇ ದೃಷ್ಟಿಯಿಂದ ನೀವು ಧರ್ಮ ಕಾರ್ಯ ಮಾಡುತ್ತಿದ್ದೀರೆಂದು ನಮಗೆ ಪೂರ್ಣ ನಂಬಿಗೆಯುಂಟು.

ಒಬ್ಬ ಮಾಸ್ತರ ಸುಪರವಾಯಜರರ ಒಳಗಾಪನ ಮಾನ.

—೦—

ಬೆಳಗಾವಿ ಜಿಲ್ಲೆಯ ಭಾಗದಲ್ಲಿ ಸಾಳಾದ ಶೆಯ ಸುಪರವಾಯಜರರಾದ ಮಿ. ರಾ ಬಿ. ಪಾಟೀಲರು ಒಂದು ಸರಕ್ಯೂಲರ ತೆಗೆದು ತಮಗೆ ಪತ್ರ ಬರೆಯುವಾಗ "ಮೆಹರ್ಬಾನ ನಾಲ್ಕನೇ ಸುಪರವಾಯಜರ ಸ್ಕೂಲಬೋರ್ಡ ಜಿಲ್ಲಾ ಧಾರವಾಡ" ಎಂಬದಾಗಿ ಬರೆಯಬೇಕೆಂದು ಮಾಸ್ತರ ಜನರಿಗೆ ಹುಕುಮ ಮಾಡಿದ್ದಾರೆ. ಮೆಹರ್ಬಾನನೆಂಬುದು ಕಲೆಕ್ಟರ ಕಮೀಶನರ, ಡಿಪುಟಿ, ಎಜ್ಯುಕೇಶನ ಇನ್ಸಪೇಕ್ಟರ್, ಮೊದಲಾದವರ ದೆಶೆಯಿಂದ ಉಪಯೋಗ ಮಾಡುವ ಗೌರವದ ಶಬ್ದವು ಮೊದಲು ಡಿ. ಡಿ. ಕಲೆಕ್ಟರರಿಗೆ ರಾ. ಬ. ಪದವಿ ಇತ್ತು. ಸರಕಾರದವರು ಇದನ್ನು ತೆಗೆದು ಹಾಕಿದಾಗ, ಇವರಿಗೆ ಮೆಹರ್ಬಾನವೆನ್ನಬೇಕೆಂದು ಠರಾವು ಮಾಡಿದ್ದಾರೆ ಈ ಬಹುಮಾನವಾಚಕ ಶಬ್ದದ ಉಪಯೋಗವನ್ನು ಮೆಹರ್ಬಾನ ಪಾಟೀಲ ಸಾಹೇಬರು ತಮಗೂ ಅಭಿಸಬೇಕೆಂದು ತಾವಾಗಿ ಹಿಂದು ಮುಂದಿನ ಜ್ಞಾನವಿಲ್ಲದೆ ಬರಕೊಂಡದ್ದು ಬಳಗಾದನು ತನ್ನ ಮಾನವನ್ನು ತಾನೇ ಮಾಡಿಕೊಳ್ಳುವಂತಾಗಿರುತ್ತದೆ. ಇಂಥವರಿಗೆ ಅಜ್ಞಸುಮೊದು ಬರಿಯಬೇಕೆಂದೂ ಸರಕಾರದ ಸರಕ್ಯೂಲರ ಉಂಟು.

ಗುಜರಾಥದಂತೆ ಸಿಂಧದಲ್ಲಿಯೂ ಹಾಹಾಕಾರ.

—೦—

ಅಧಿಕಾರಸ್ಥರ ಉದಾಸೀನವೃತ್ತಿ.

—೦—

ಕೌನ್ಸಿಲದ ಮೆಂಬರರಾದ ಶ್ರೀ. ಜಯರಾಮದಾಸರಿಗೆ ಮಿರಪುರಖಾಸದಿಂದ ಕೆಳಗಿನ ಅಭಿಪ್ರಾಯದ ತಾರು ಬಂದಿರುತ್ತದೆ.

ಅಪಾರ ಹಾನಿಯು ಆಗಿದೆ. ಮೂರು ದಿವಸಗಳಲ್ಲಿ ೩೦ ಇಂಚು ಮಳೆಯಾಗಿದೆ. ಗುಡ್ಡದ ನೀರು ಊರೊಳಗೆ ಬರುತ್ತಿರುವದು ಇಳಿವರಿಯಲ್ಲಿದ್ದ ಊರಲ್ಲಿ ಮೂರು ಫೂಟು ನೀರು ಹೊಕ್ಕಿದೆ. ಮಣ್ಣಿನ ಮನೆಗಳೆಲ್ಲ ಬಿದ್ದವ. ದೊಡ್ಡ ದೊಡ್ಡ ಕಟ್ಟಡಗಳೂ ಉರುಳಿವೆ. ಐದು ಲಕ್ಷದಷ್ಟು ಹಾನಿಯಾಗಿದೆ. ಜನರು ಮನೆಗಳನ್ನು ಬಿಟ್ಟಿದ್ದಾರೆ. ರೇಲ್ವೆ ಪ್ರವಾಸವು ನಿಂತು ಹೋಗಿದೆ ಜನರು ಸ್ಟೇಶನದ ಪ್ಲ್ಯಾಟಫಾರ್ಮದ ಮೇಲೆ ಕಾಲಹರಣ ಮಾಡುತ್ತಿದ್ದಾರೆ. ರೇಲ್ವೆಯ ದಾರಿಯನ್ನು ಅಲ್ಲಲ್ಲಿ ಒಡೆದು, ನೀರಿಗೆ ದಾರಿ ಕೊಟ್ಟ ಹೊರತು ಊರು ಉಳಿಯುವಂತಿಲ್ಲ. ದಾರಿ ಒಡೆದರೆ- ಮೂರೇ ದಿವಸಗಳಲ್ಲಿ ನೀರು ಇಲ್ಲದಂತಾಗುತ್ತದೆ. ಇಲ್ಲವಾದರೆ- ಒಂದು ತಿಂಗಳು ಬೇಕಾಗುವದು. ಕಾಮದಾರರು ಪ್ರಜರ ಕೂಡ ಸಹಕಾರ ಮಾಡುವದಿಲ್ಲ. ಅವರ ವರ್ತನವು ಬಹುವಾಗಿ ನಿರಾಶಾದಾಯಕವಾಗಿರುತ್ತದೆ."

ಗಲ್ಲಿನ ಕಂಬದ ಮುಂದೆ ನಿಲ್ಲಿಸಿದಾಗ ಮದುವೆ !!

—೦—

ಅಮೇರಿಕೆಯಲ್ಲಿ ಒಬ್ಬನು ಒಬ್ಬಳನ್ನು ಗುಪ್ತರೀತಿಯಿಂದ ಮದುವೆಯಾಗಿದ್ದನು. ಒಬ್ಬ ಹುಡುಗನು ಹುಟ್ಟಿದನು. ಕರ್ಮ ಧರ್ಮ ಸಂಯೋಗದಿಂದ ಇವನ ಮೇಲೆ ಕೊಲೆಯ ಆರೋಪ ಬಂದು ಗಲ್ಲಿನ ಶಿಕ್ಷೆಯಾಯಿತು. ಈತನ ಆಸ್ತಿಯು ದೊಡ್ಡದು. ಸ್ತ್ರೀ ಮತ್ತು ಹುಡುಗನು ವಾರಸದಾರರು. ಆದರೆ ಸಾಕ್ಷ್ಯವಿದ್ದಿಲ್ಲ. ಆದ್ದರಿಂದ ಈತನು ತನ್ನನ್ನು ಶೂಲಕ್ಕೇರುವಾಗ ಇವರನ್ನು ಪಾದ್ರಿಯನ್ನೂ ಕರಿಸಿಕೊಂಡು, ವಿವಾಹ ವಿಧಿಯನ್ನು ತೀರಿಸಿದನು. ಮತ್ತು ಹೆಂಡತಿ ಮತ್ತು ಕೂಸಿನ ಎದುರಿಗೆ ಮುಂದೆ ಎರಡೇ ಮಿನಿಟುಗಳ ನಂತರ ಶೂಲಾರೋಹಣ ಮಾಡಿದನು.

ಒಂದೇ ಆಖ್ಯಾನಕ್ಕೆ ೬೧ ಸಾವಿರದ ಪ್ರಾಪ್ತಿಯು.

—೦—

ಗುಜರಾಥದ ರಿಲೀಫ ಫಂಡಿಗಾಗಿ ಮುಂಬಯಿಯಲ್ಲಿ ದೇಶೀ ನಾಟಕ ಸಮಾಜದವರು ಒಂದು ಪ್ರಯೋಗ ಮಾಡಿದರು. ಟಿಕೇಟಿನ ದರ ೧೫, ೩೫, ಮತ್ತು ೫೦ ರೂಪಾಯಿಯಾಗಿತ್ತು ಇದರ ಆದಾಯವು ೩೩ ಸಾವಿರವಾಯಿತು. ಒಳಕ ಪ್ರೇಕ್ಷಕರು ೩೫೦೦ ರೂಪಾಯಿಗಳನ್ನು ಅಲ್ಲಿಂದಲ್ಲೇ ಕೊಟ್ಟರು. ಇದಲ್ಲದೆ ಜನರು ಕೂತ ಸ್ಥಳದಿಂದ ಸ್ಟೇಜದ ಮೇಲೆ ತೂರಿದ ರೂಪಾಯಿಗಳು ಒಂದು ಸಾವಿರವಾದವು ಈ ಸಂಪಾದನೆಗೆ ಕಾಂಗ್ರೆಸ ಕಮೀಟಿಯವರದೇ ಮುಖ್ಯವಾದ ಉತ್ತೇಜನವು.

ಇರಾಣದಲ್ಲಿ ರೇಲ್ವೆ-

ಇರಾಣ ಸರಕಾರದವರು ತಮ್ಮ ರಾಜ್ಯದಲ್ಲಿ ರೇಲ್ವೆಗಳನ್ನು ಹಾಕಿಸುವರು. ಈ ಕೆಲಸಕ್ಕಾಗಿ ಪರದೇಶದಿಂದ ೩೪ ಜನ ತಜ್ಞರನ್ನು ಕರಿಸುವರು. ಮತ್ತು ಅವರು ಬೇಡಿದ ಸಂಬಳ ಕೊಡಲು ಸಿದ್ಧರಿದ್ದಾರೆ. ಪರದೇಶಿಯರಲ್ಲಿ ೧೧ ಅಮೇರಿಕೆ, ೭ ಜರ್ಮನರಾಗಿದ್ದಾರೆ. ಉಳಿದವರಲ್ಲಿ ಫ್ರೆಂಚ, ಜರ್ಮನ, ಸ್ವಿಸ ಮತ್ತು ಬೆಲಜಿಯಮರನ್ನು ತೆಕ್ಕೊಳ್ಳುವರು ಇಂಗ್ಲಿಷರ ಹೆಸರೇ ಇರುವದಿಲ್ಲ.

ವಿವಿಧ ವರ್ತಮಾನಗಳು.

ಬಡೋದೆಯಲ್ಲಿ ರಾಜಕುಮಾರ ಧೈರ್ಯಶೀಲರು ಸ್ವತಃ ಕಯ್ಯಲ್ಲಿ ಸಲಿಕೆ ತಕ್ಕೊಂಡು ಜನರ ಮೇಲೆ ದಬಾಸು ಹಾಕಿದ ಮನೆಗಳನ್ನು ಅಗಿಯುತ್ತಿದ್ದಾರೆ. ಮತ್ತು ವಸ್ತ್ರಹೀನರಾದ ಗಂಡಸರಿಗೆ ಎರಡು ಪೈರಣ, ಒಂದು ಜಣ್ಣಾ ಒಂದು ಟೊಪ್ಪಿಗೆ ಮತ್ತು ಒಂದು ಪಟ್ಟಡ ಕೊಡುವರು. ಸ್ತ್ರೀಯರಿಗೆ ಎರಡು ಸೀರೆ, ಎರಡು ರವಿಕೆ ಮತ್ತು ಒಂದು ಪಟ್ಟಡ ಕೊಡುವರು ಮಿಕ್ಕಿಯು ಅನ್ನಛತ್ರವಂತೂ ಮುಕ್ತದ್ವಾರವುಂಟು.

ಸುಹೃದಯ ಮತ್ತು ಸೂಜ್ಞತೆಯಿಂದ ನಡೆದಿರುವ ಮೈಸೂರ ನಾಡಿನ ರಾಜ್ಯಕಾರಭಾರ ನೋಡಿ, ತಮಗೆ ಆನಂದವಾಯಿತೆಂದು ಲಾರ್ಡ ಆಯರ್ವಿನಸಾಹೇಬರು ಸಿಮ್ಲಾದಿಂದ ಶ್ರೀಮನ್ಮಹಾರಾಜರಿಗೆ ತಾರಿನ ಸಂದೇಶ ಕಳಿಸಿದ್ದಾರೆ.

ಬಂಗಾಲದಲ್ಲಿಯೂ ದ್ವಿದಳ ದೊರೆತನ ನಿರೋಧಿಸಿ, ಮಂತ್ರಿಗಳಲ್ಲಿ ವಿಶ್ವಾಸವಿಲ್ಲೆಂಬ ಠರಾವು ಬರುವದು. ಸರ ಅಬ್ದುಲ ರಹಿಮಾನರು ಸ್ವಜನದೊಂದಿಗೆ ಸ್ವರಾಜ್ಯ ಪಕ್ಷೀಯರಿಗೆ ಸಹಾಯ ಮಾಡುವರು.

೧೯೨೮ನೆಯ ಇಸವಿಯು ಫೆಬ್ರುವರಿ ತಿಂಗಳಲ್ಲಾಗುವ ಹಾಯಕೋರ್ಟ ವಕೀಲಿಯ ಪರೀಕ್ಷೆಯು ಆಗಲಾರದೆಂದು ಹಾಯಕೋರ್ಟಿನಿಂದ ಪ್ರಸಿದ್ಧ ಮಾಡಲ್ಪಟ್ಟಿದೆ.

ಬಂಗಾಲ ಸರಕಾರದವರು ದಬ್ಬಾಳಿಕೆಯ ಕಾಯದೆಯಿಂದ ಹಿಡಿದು ಹಾಕಿದ್ದ ಕೌನ್ಸಿಲ ಮೆಂಬರರಾದ ಮಿ. ಮಿತ್ರರನ್ನು ತಾವಾಗಿ ಬಂಧಮುಕ್ತ ಮಾಡಿದರು.

ಬೆಜವಾಡದ ಬದಲು ರಾಜಮಹೇಂದ್ರಿಯನ್ನು ಆಂಧ್ರ ಶಿಕ್ಷಣ ವಿದ್ಯಾಲಯದ ಮುಖ್ಯ ಸ್ಥಳ ಮಾಡಬೇಕೆಂಬದಾಗಿ ಆ ಪ್ರಾಂತದಲ್ಲಿ ಚಳವಳಿ ನಡೆದಿದೆ.

ಧಾರವಾಡ-

ಈ ದಿನದ ಪತ್ರದ ಕೂಡ ಹುನಸನಹಳ್ಳಿಯ ಭಾರತ ಜ್ಯೋತಿಷ್ಯ ವಿದ್ಯಾಲಯದ ವಿಭವ ಸಂವತ್ಸರದ ಪಂಚಾಂಗದ ಪ್ರಕಟನೆಯನ್ನು ಉಪಪತ್ರಿಕೆಯಾಗಿ ಹಂಚಿರುತ್ತೇವೆ.

"ಲಾವಣ್ಯ" ಈ ವಿಷಯವಾಗಿ ವಿಶೇಷ ಪ್ರಸಂಗ ಹೇಳಿದರು. ಹಲಕೆಲವು ಅನುಭವಿಕ ಸಂಗತಿಗಳೊಡನೆ ವಿಷಯವು ಅಡಕವಾಗಿದ್ದದರಿಂದ ಸಭಿಕರ ಮನಸಿನ ಮೇಲೆ ಚನ್ನಾಗಿ ಪರಿಣಾಮವಾಯಿತು. ತರುವಾಯ ಸಿ. ಎಸ್. ರಾವ್. ಇವರು ಈ ಲಾಯಬ್ರರಿಯಿಂದ ತರುಣ ವಿದ್ಯಾರ್ಥಿಗಳಿಗೆ ಬಹಳ ಉಪಯೋಗವಾಗಿರುವದೆಂಬ ಸಂಗತಿಯನ್ನು ಹೇಳಿದರು.

ಆಮೇಲೆ ಮುಂದಿನ ವರ್ಷದ ಪಾಲಕರ ಚುನಾವಣೆಯು ಕೆಲಸವು ಮುಗಿದ ಬಳಿಕ ಅಧ್ಯಕ್ಷ ಸಾಹೇಬರ ಅಸ್ಖಲಿತವಾದ ಪ್ರಾಸ್ತಾವಿಕ ಭಾಷಣವಾಯಿತು ಇವರ ಸೊಗಸಾದ ಭಾಷಣದಿಂದ ಸಭಿಕರ ಮನಸಿನ ಮೇಲೆ ಪರಿಣಾಮವಾಗಿ ಕೆಳಗೆ ಕಾಣಿಸಿದ ಮೇರೆ ಆಯಾ ಜನರು ದಾನ ದೇಣಿಗಿಯನ್ನು ಕೊಡಲೊಪ್ಪಿದರು. ಹಾಗೂ ಇಬ್ಬರು ಸದ್ಗೃಹಸ್ಥರು ಸಭೆಯಲ್ಲಿಯೇ ಗ್ರಂಥಗಳನ್ನರ್ಪಿಸಿದರು.

೧ ಶ್ರೀ. ಮರಿಸ್ವಾಮಿ ಸಾ|| ಕೆಟ್ಟಿರ ೩೫ ರೂ (ಗ್ರಂಥ ಸಂಗ್ರಹಕ್ಕೆ ೨ ಮಿ, ಎಸ್. ಎನ್ ಗುಳವಾಣಿ ಇಂಗ್ಲೀಷ ಗ್ರಂಥಗಳು ಹಾಗೂ ೧ ವೇದಾಂತಗ್ರಂಥ ಇವುಗಳನ್ನು ಅರ್ಪಿಸಿದರು ೩ ವಿ. ಸಂಗಪ್ಪನವರು ಯಡ್ರಾವಿ (೬೪೦) ಗೀತಾರಹಸ್ಯ ವನ್ನರ್ಪಿಸಿದರು. ೪ ಮಿ. ಸಿ ಎಸ್. ರಾವ ಪ್ರತಿವರ್ಷ ೬ರೂ ೫ ಮಿ. ವರ್ಧಮಾನ್ ಪ್ರತಿವರ್ಷ ೬ರೂ. ೬ ವೇ. ಅಂದಾನಯ್ಯನವರು ದಾ. ಹಿರೇಮಠ ಪ್ರತಿವರ್ಷ ೬ರೂ. ಹಾಗು ಪಂಡಿತಾರಾಧ್ಯ ಚರಿತ್ರೆ ೭ ಮಿ. ಕೊಟ್ರಪ್ಪ ವೇಲ್ಯುಮ ೫ರೂ ಬೆಲೆ ಬಾಳುವ ೧ ಗ್ರಂಥ ೮ ಮಿ ಮುರಿಗೆಪ್ಪ ಕಲಘಟ್ಟಿ. ಪ್ರತಿವರ್ಷ ೬ರೂ ೯ ಮಿ ಫಕೀರಗೌಡ ಪಾಟೀಲ ಕರಿಕೊಳ್ಳ ಪ್ರತಿವರ್ಷ ೬ರೂ. ೧೦ ಸಿದ್ದಪ್ಪ ಸಾತೇನಹಳ್ಳಿ ಪ್ರತಿವರ್ಷ ೩ರೂ ೧೧ ಮಿ. ಮುರಿಗೆಪ್ಪ ಮೋಟೆಬೆನ್ನೂರ ಪ್ರತಿವರ್ಷ ೩ರೂ. ೧೨ ಮಿ. ವಿರೂಪಾಕ್ಷಪ್ಪ ಕಳಸದ ಪ್ರತಿವರ್ಷ ೩ರೂ ೧೩ ಮಿ. ಮುಳ್ಳಾರಾಧ್ಯರ ಭಾಸ್ಕರಾಚಾರ್ಯ ದೀಕ್ಷಿತ ಪ್ರತಿವರ್ಷ ೩ರೂ ೧೪ ಮಿ ವೀರನಗೌಡ ಪಾಟೀಲ ಬ್ಯಾಹಟ್ಟಿ ೧೦ರೂ ಗಳು ಗ್ರಂಥ ಸಂಗ್ರಹಕ್ಕೆ

ಈ ಪ್ರಕಾರ ವ್ಯಾಖ್ಯಾನ ಮಾಡಿದ ಬಳಿಕ ಶ್ರೀ. ಕೊಣ್ಣೂರ ಮಾಮಲೇದಾರ ಸಾಹೇಬರವರು ಈ ಲಾಯಬ್ರರಿಯ ಸುವ್ಯವಸ್ಥೆಯನ್ನು ಕಂಡು ತಮಗಾಗಿರುವ ಆನಂದವನ್ನು ಪುನಃ ಭಾಷಣ ಮಾಡಿ ವ್ಯಕ್ತಪಡಿಸಿದರು ತರುವಾಯ ಅಧ್ಯಕ್ಷರ ಹಾಗೂ ಸಭಿಕರ ಆಭಾರ ಮನ್ನಣೆಯಾಗಿ ಹಾರ ತುರಾಯಿ ತಾಂಬೂಲ ಮುಂತಾದವುಗಳೊಡನೆ ಸಭಾವಿಸರ್ಜನೆಯಾಯಿತು.

ಸೆಕ್ರೆಟರಿ

ಶ್ರೀ ಮಾಣಿಕಪ್ರಭು ಪ್ರಾಸಾದಿಕ

ಗಾಯನ ವಾದನ ವಿದ್ಯಾಲಯ

ಧಾರವಾಡ

ಈ ವಿದ್ಯಾಲಯದಲ್ಲಿ ಗಾಯನ, ಹಾರ್ಮೋನಿಯಮ್, ತಬಲಾ, ಸತಾರ ವಗೈರೆ ಸಶಾಸ್ತ್ರ ರೀತಿಯಿಂದ ಕಲಿಸಲ್ಪಡುವವು.

ಈ ವಿದ್ಯಾಲಯವನ್ನು ಕೇವಲ ಸಂಗೀತ ಪ್ರಸಾರ ಸಲುವಾಗಿ ನಡೆಸುತ್ತಿದ್ದೇವೆ. ಕಾರಣ ಆಸಕ್ತ ಸಂಗೀತ ಪ್ರಿಯರು ಈ ಅಪೂರ್ವ ಸಂಧಿಯನ್ನು ಕಳೆದುಕೊಳ್ಳಬಾರದು ವಿಶೇಷ ಮಾಹಿತಿಯ ಸಲುವಾಗಿ ಸಮಕ್ಷಮ ಭೆಟ್ಟಿಯಾಗಬೇಕು.

ಪತ್ತೆ
ಶ್ರೀ ಮಾ ಪ್ರ ಪ್ರಾ
ಗಾಯನ ವಾದನ ವಿದ್ಯಾಲಯ
ಗಾಂಧಿ ಚೌಕ ಕೊಲ್ಹಾಪುರೆರ ಸ್ಟೇಶನರಿ ಅಂಗಡಿ
ಎದುರಿಗೆ ಕಂಚಗಾರಗಲ್ಲಿ, ಧಾರವಾಡ

ತಮ್ಮ,
ಪ್ರಿನ್ಸಿಪಾಲ,
ಲಕ್ಷ್ಮಣಸಿಂಗ ಗವಾಯಿ,
ಕಾಶೀಪುರ.

ತ್ವರೆ ಮಾಡಿರಿ. **ಮೂರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ಕ್ಕೆ ೩ ರೂಪಾಯಿ.
೨-೩ ಗುಳಿಗೆ ಸೇವಿಸಿ ಬಂದು ಪ್ರಾಣ ಉಳಿಸಿರುವರು
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವ

ನೋಟೀಸಿನ ಉತ್ತರ

ರಾ. ರಾ. ಭೀಮಪ್ಪಾ ಬಿನ್ನ ಹನುಮಪ್ಪಾ ಅಮಾತಿ ಹಲಗೇರಿ ಸಾ|| ಮಾಗೋಡ ತಾ|| ರಾಣೇಬೆನ್ನೂರ ಇವರಿಗೆ

ಕೆಳಗೆ ಸಹಿ ಮಾಡಿದವರ ಕಡೆಯಿಂದಾ ಉತ್ತರಾ ಕೊಡುವದೇನಂದರೆ- ನಿನ್ನ ನೋಟೀಸು ತಾ|| ೩೧-೭-೧೯೩೭ ನೇ ಇಸ್ವಿ ದಿವಸ ಪ್ರಸಿದ್ಧ ಮಾಡಿದ್ದು ಮುಟ್ಟಿತು ನಿನ್ನ ಮಗ ಮರಿಬಸಪ್ಪನಿಗೆ ೮-೯ ವರ್ಷದ ಹಿಂದೆ ಲಗ್ನವಾಗಿ ಆತನ ಹೆಂಡತಿಯು ಈಗ ೨-೩ ಮಕ್ಕಳನ್ನು ಹಡೆದಿರುವುದು ೨ ೩ ವರ್ಷದ ಹಿಂದೆ ನನ್ನ ಮಗಳು ಲಕ್ಷ್ಮವ್ವಾ ಹತ್ತು ವರ್ಷದಾಕೆ ಇದ್ದು ನಿನ್ನ ಮಗನಿಗೆ ಹೆಂಡತಿಯ ಮೇಲೆ ಕೊಡಲಿಕ್ಕೆ ಕಾರಣ ಇಲ್ಲ ನೀನು ಮ ನಿನ್ನ ಮಕ್ಕಳು ಕಂಡೆಂದು ಬಸದ್ದು ನಮ್ಮ ಕಾರಣ ನನ್ನ ಆರಬಾಂದವರ ಮಾತು ಕೇಳಿಕೊಂಡು ನನ್ನ ಮಗಳ ಮೇಲೆ ದಾಗೀನೆ ಇಟ್ಟು ಹೆಸರು ವಿಸ್ತೃ ಮಾಡಿಕೊಂಡೇನಿ ಅಂತಾ ಸುಳ್ಳು ಮದಕೂನ ಮತಲಬಿಯು ನೋಟೀಸು ಕೊಟ್ಟಿದ್ದೀದಿ ಈ ಪ್ರಕಾರ ನೀನು ವರ್ತಮಾನ ಪತ್ರದಲ್ಲಿ ಹೆಸರು ಪಿಕ್ಕಿ ಮಾಡಿ ದಾಗೀನೆ ಇಟ್ಟುಕೊಂಡು ಕನ್ಯೆ ಕೊಡಲಿಲ್ಲ ಅಂತ ನನ್ನ ಕುಲಾಚಾರ ವ್ಯವಹಾರ ಸಮಾಜಿಕ ಜನರಲ್ಲಿ ನನ್ನನ್ನು ಸುಮಾರ ಮಾಡೀದಿ ಈ ಪ್ರಕಾರ ಮಾಡಿದ ಬಗ್ಗೆ ನೀನು ಕ್ಷಮಾ ಬೇಡಿಕೊಳ್ಳಬೇಕು ಇಲ್ಲವಾದರೆ- ನಿನ್ನ ಮೇಲೆ ರೀತಿ ಪ್ರಕಾರ ಕೆಲಸ ನಡಿಸುವದರಲ್ಲಿ ಬರುವದು ತಿಳಿಯಬೇಕು ತಾ|| ೬-೮-೧೯೩೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರುತು ನಾಗಪ್ಪಾ ಬಿನ್ನ ಹೊನ್ನಪ್ಪಾ ಅಂಬಲಿಯವರ ಸಾ|| ರಾಣೇಬೆನ್ನೂರ ಇದು ಮಾಡಿದ್ದು ಅದೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಕೆ...... ಇವರು ಧಾರವಾಡದಲ್ಲಿರುವ ತಮ್ಮ ...... ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

R. N. B. 1443

ನಿತ್ಯ ಪತ್ರ — ವಿಜಯ — ಬಿಡಿ ಪ್ರತಿ ಅರ್ಧ ಆಣೆ

ಸಂಪಾದಕರು:— ಆಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೪ | ಧಾರವಾಡ ಬುಧವಾರ ತಾರೀಖು ೧೦ನೇ ಆಗಸ್ಟ ೧೯೨೭ | ಸಂಚಿಕೆ ೧೭೭

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಈಸುಗಳುಂಟು. ಗಾಲಿಯ ವ್ಯಾಸವು ೩೦ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಒಯ್ಯ ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೩೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ಪೋಸ್ಟೇಜಿನ ದರಗಳು.

—೦—

ತಿಂಗಳು ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದಾವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೀತಿ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಆಣೆ— ಇಂಗಿಷದಿಂದ ಅನಕರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರು ಆಣೆ ದಬಲ್ ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೩—೮—೦ ರೂ
೬ ”	೭—೪—೦ ರೂ
೪ ”	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೨೦ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಶಯ	[illegible]
ಲೋಕಮಾನ್ಯ ಟಿಳಕರ ಚರಿತ್ರೆ	[illegible]
ದೇಶಬಂಧು ದಾಸರ ಚರಿತ್ರೆ	
ದೇಶಭಕ್ತರ ಸಂದೇಶ	[illegible]

ಈ ಪುಸ್ತಕಗಳನ್ನು [illegible] ಕೊಳ್ಳುವವರಿಗೆ ೧ ರೂಪಾಯಿಗೆ [illegible]. ಪೋಸ್ಟೇಜ [illegible]

[illegible]

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟಿಡ

…—೦—…

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ವಂತಿಗೆಯು ಅರು ಲಕ್ಷದ ಮೇಲುಂಟು. ಚಾಲು ಖಾತೆ [illegible] ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible]ವದು. ಕಾಯಿದೆ ಮತ್ತು ಬೇರೆ ತರದ [illegible]ಗಳಿಗೆ [illegible] ಬರೆದು [illegible].

[illegible]

ಮಾಧವರಾವ ಬಿ. [illegible],

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಅರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ [illegible] ಆಗಿರುತ್ತದೆ.

ಎ. ಕೆ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

ಆಗಸ್ಟ ೩೦ [illegible] ಹೊಸ ವರ್ಷ ಪ್ರಾರಂಭವಾಗುವ [illegible]

[illegible]

[illegible]

[illegible]

ಶ್ರೀ ನಾಲ್ಮಡಿ ಕೃಷ್ಣರಾಜ ಬಹದ್ದೂರರವರ

ರಜತೋತ್ಸವ ಸಮಾರಂಭ.

ಶ್ರೀ ಮನ್ಮಹೀಸೂರು ಮಹಾರಾಜರು ಮೊನ್ನಿನ ದಿವಸ ಆದಂಥ ರಜತೋತ್ಸವ ಶುಭ ಪ್ರಸಂಗವನ್ನುದ್ದೇಶಿಸಿ ಮುಂದೆ ಕೊಟ್ಟಂತೆ ತಮ್ಮ ಪ್ರಜರಿಗಾಗಿ ಸಂದೇಶವನ್ನು ಕಳಿಸಿದ್ದಾರೆ. ಈ ಸಂದೇಶವನ್ನು ಮಹಾರಾಜರು ಸ್ವತಃ ಕನ್ನಡದಲ್ಲಿ ಬರೆದು ಕೆಳಗೆ ಶ್ರೀ ಕೃಷ್ಣವೆಂದು ಸಹೀ ಮಾಡಿದ್ದಾರೆ.

ಸಂದೇಶ.

"ನಮ್ಮ ರಾಜ್ಯ ಭಾರವು ಪ್ರಾರಂಭವಾಗಿ ೨೫ ವರ್ಷಗಳು ಪೂರ್ಣವಾದ ಈ ದಿನ ನಾವು ನಮ್ಮ ಪ್ರೀತಿಗೆ ಪಾತ್ರರಾದ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಸುಖವಾಗಿರಬೇಕೆಂದು ಹೃದಯದಲ್ಲಿ ಹಾರೈಸುತ್ತ ಈ ಶುಭಾಭಿಕಾಂಕ್ಷೆಯನ್ನು ಪ್ರೇಮ ಪುರಸ್ಸರವಾಗಿ ಪ್ರಕಾಶಗೊಳಿಸುವೆವು. ನಮ್ಮ ಪ್ರಜೆಗಳ ಸುಖ ಸಂಪತ್ತುಗಳನ್ನು ಅಭಿವೃದ್ಧಿಗೊಳಿಸಲು ಯಾವಾಗಲೂ ಸಂತತವಾದ ಪ್ರಯತ್ನ ಮಾಡುವೆವು.

ನಮ್ಮ ಜೀವಿತ ಕಾಲದಲ್ಲಿಯೂ ರಾಜ್ಯಭಾರದಲ್ಲಿಯೂ ಪರಮ ಧ್ಯೇಯವಾದ ಈ ಪ್ರಯತ್ನವನ್ನು ಕೈಗೂಡಿಸಲು ತಕ್ಕ ಬುದ್ಧಿ ಶಕ್ತಿಯನ್ನೂ ಕಾಯ ಶಕ್ತಿಯನ್ನೂ ನಮಗೆ ದಯಪಾಲಿಸಲೆಂದು ಸರ್ವಶಕ್ತನಾದ ಭಗವಂತನನ್ನು ಪ್ರಾರ್ಥಿಸುವೆವು."

ಶ್ರೀ ಕೃಷ್ಣ.

ಮೈಸೂರಿನ ಬೆಡಗು.

ಚಿನ್ನದ ನಾಡದು,
ಮೈಸೂರು.
ಗಂಧದ ಗುಡಿಯದು
ಮೈಸೂರು,
ವೀಣೆಯ ಬೆಡಗದು
ಮೈಸೂರು,
ನಾಲುಮಡಿ ಕೃಷ್ಣನ
ಮೈಸೂರು,

ಬೆಳೆಯುವ ನಾಡದು
ಮೈಸೂರು.
ಇಳೆಯ ಮಾದರಿಯದು
ಮೈಸೂರು,
ಕನ್ನಡಿಗನುಸಿರದು
ಮೈಸೂರು,
ನಾಲುಮಡಿ ಕೃಷ್ಣನ
ಮೈಸೂರು,

—ಶ್ರೀ

ಅಲ್ಲೊಬ್ಬ ನಮಗಿಹನು ನಾಯಕನು, ಭಕ್ತಿಯಲಿ ನಿಲುನಿಲುಕಿ ಕಣ್ತುಂಬ ನೋಡುತಿರಲು
ಆನೆಯಂಬಾರಿಯಲಿ ನಸುನಗೆಯನಿಕ್ಕೆಲಕೆ ಬೀರಿ, ಜನಸ್ಕರಿಯನುಕ್ಕಿಸುವನು,
ಧೀರನಾತನು; ತುಂಬುಗಾಂಭೀರ್ಯದಲಿ ಸತ್ಯವನೆ ಎತ್ತಿ ನಿಲಿಸುವನು ಪ್ರಜೆಯ ತಂದೆ,
ಮರೆತು ತನ್ನನು ರಾಜ್ಯಸೇವೆಯಲಿ, ಸಲಿಸುವನು ಧರ್ಮವನು ರಾಜರ್ಷಿ ಕರ್ಮಯೋಗಿ,
ಬನ್ನಿ ಕೆಳೆಯರ, ನಮ್ಮ ಬಾಳಿಕೆಯ ಕಾಣಿಕೆಯನೊಪ್ಪಿಸುವ, ಕೈಕೊಳುವ ದೊರೆಯು ಗೌರವ;
ನೇಹಿಯಾತನದು- ತನ್ನರಮನೆಯ ಹಸಗೆಯ್ದು ಬೆಳಗಿದಂತೆಯೆ., ಬೆಳಗಿ ಊರ, ನಾಡ,
ಹಸಗೆಯ್ವ, ಹೊಸಗೆಯ್ವನೆಂದೊಲುಮೆ; ನಾವೆಲ್ಲರಾ ನಾಯಕನ ದಳವಿ ದೀಕ್ಷೆ ಪಡೆದು,
ಮಾಡಿ ಬೆಳಸುವ ಬನ್ನಿ ಬುದ್ಧಿಯನು ಶ್ರದ್ಧೆಯನು, ಕನ್ನಡಿಗರೈಸಿರಿಯ ಬೆಳೆಯ ಬೆಳಸಿ,

ಬಿ. ಎಂ. ಶ್ರೀಕಂಠಯ್ಯಾ
ಎಂ. ಎ. ಬಿ. ಎಲ್.
ಅಧ್ಯಾಪಕರ ಮೈಸೂರು ವಿಶ್ವವಿದ್ಯಾಲಯ

ಮೈಸೂರ ರಾಜ್ಯದಲ್ಲಿ ಕಾಯದೆಭಂಗ.

ಮೈಸೂರ ರಾಜ್ಯದಲ್ಲಿ ಕಣಿಯರರೆಂಬ ಜನಾಂಗದವರಿದ್ದಾರೆ. ಇವರ ಹಿತಕ್ಕಾಗಿ ಶ್ರೀ. ತಗಡೂರ ರಾಮಚಂದ್ರರಾಯರೆಂಬವರು ಒಂದು ಪತ್ರಿಕೆಯನ್ನು ಹೊರಡಿಸಬೇಕೆಂದು ಸರಕಾರದಲ್ಲಿ ಪದ್ಧತಿ ಪ್ರಕಾರ ಡಿಕ್ಲೇರೇಶನ ಮಾಡಿದರು. ಆದರೆ ಸರಕಾರದವರು ಇವರಿಗೆ ಪತ್ರ ಪ್ರಕಟಿಸಲು ಅಪ್ಪಣೆ ಕೊಡಲಿಲ್ಲ. ಈ ರಾಜ್ಯದ ದೀವಾನರು ಪ್ರತಿಯೊಂದು ರೀತಿಯಿಂದಲೂ ಬ್ರಿಟಿಶ ಪದ್ಧತಿಯನ್ನು ಅನುಕರಿಸುವರು. ಅದರ ವರ್ತಮಾನ ಪತ್ರಗಳ ಮುದ್ರಣದ ಮಟ್ಟಿಗೆ ನಿಜಾಮ ರಾಜ್ಯವನ್ನು ಹೋಲುತ್ತದೆ.

ಶ್ರೀ ರಾಮಚಂದ್ರರಾಯರು ತಮಗೆ ಅಪ್ಪಣೆ ದೊರೆಯಬೇಕೆಂದು ದಿವಾನರನ್ನು ಎರಡಾವರ್ತಿ ಕಂಡರು. ದಿವಾನರು ಇವರ ವಿಜ್ಞಾಪನವನ್ನು ಕೇಳಲೇ ಇಲ್ಲ. ಬಳಿಕ ರಾಮಚಂದ್ರರಾಯರು ಸ್ಟೈಲೊಸ್ಟ್ಯಾಯಿಲ ಮೇಲೆ ಕೈಬರಹದ ಪ್ರತಿಗಳನ್ನು ತೆಗೆದು, ಊರ ತುಂಬ ಹಂಚಿದರು ಕಾಂಗ್ರೆಸ ಕಮೀಟಿಯಲ್ಲಿ ಇವು ಮುದ್ರಿಸಲ್ಪಟ್ಟವು. ಕೂಡಲೆ ಅಧಿಕಾರಿಗಳು ಕಾಂಗ್ರೆಸ ಕಮೀಟಿಗೆ "ನೀವು ಈ ನಂತರ ರಾಮಚಂದ್ರರಾಯರ ಕಣಿಯರ ಪತ್ರಿಕೆಯನ್ನು ಮುದ್ರಿಸುವದಾದರೆ- ನಿಮ್ಮ ಮುದ್ರಣಾಲಯವನ್ನು ಜಪ್ತ ಮಾಡಿ, ಸರಕಾರ ಜಮಾ ಮಾಡಲಾಗುವದೆಂದು" ಬೆದರಿಕೆ ಹಾಕಿದರು. ಕಾಂಗ್ರೆಸ ಕಮೀಟಿಯನ್ನು ಗೋಳಿಗೆ ಹಾಕುವದರ ಬದಲು ರಾಮಚಂದ್ರರಾಯರು ತಾವೇ ಸ್ವಂತವಾಗಿ ಒಂದು ಸ್ಟ್ಯಾಯಿಲೋಸ್ಟ್ಯಾಯಿಲ ಯಂತ್ರ ತಂದು, ಅದರ ಮೇಲೆ ಕೆಲ ಪ್ರತಿಗಳನ್ನು ತೆಗೆದು ಅವನ್ನು ಬೀದಿಗಳಲ್ಲಿ ಹಂಚಿದರು. ಈ ಅಪರಾಧಕ್ಕಾಗಿ ಸರಕಾರದವರು ರಾಮಚಂದ್ರರಾಯರ ಮೇಲೆ ಗಡೀಪಾರ ಹುಕುಮ ಮಾಡುವ ಪಂಥ ಕೊಟ್ಟಿದ್ದಾರೆ. ನೀವು ಪುನಃ ನಿಮ್ಮ ಪತ್ರಿಕೆಯನ್ನು ಮುದ್ರಿಸುವದಾದರೆ- ನಿಮ್ಮ ಮುದ್ರಣಾಲಯ ಜಪ್ತ ಮಾಡುವೆವು. ನಿಮ್ಮ ಜಂಗಮ ಆಸ್ತಿಯನ್ನು ಜಪ್ತ ಮಾಡುವೆವು. ಮತ್ತು ನಿಮ್ಮನ್ನು ಮೈಸೂರ ರಾಜ್ಯದ ಹೊರಗೆ ಹಾಕಿ ಹದ್ದುಪಾರ ಮಾಡುವೆವೆಂದು ಕಡ್ಡಾಯವಾಗಿ ಹೇಳಿದ್ದಾರೆ. ಶ್ರೀ ರಾಮಚಂದ್ರರಾಯರು ತಮ್ಮ ಮೇಲೆ ಒದಗಿದ ಗಂಡಾಂತರಕ್ಕೆ ಹುಸುವರಾದರೂ ಹೆದರದೆ, ತಾವು ಕಾಯದೆಭಂಗ ಮಾಡಿ, ಬರುವ ಸೋಮವಾರ ಅಂದರೆ ೧೫ನೆಯ ತಾರೀಖಿನ ದಿವಸ ಪತ್ರಿಕೆಯನ್ನು ಹೊರಡಿಸತಕ್ಕವರೇ ಎಂಬದಾಗಿ ಸರಕಾರಕ್ಕೆ ಒಂದುವಾರ ಮುಂದಾಗಿ ಸೂಚನೆ ಕೊಟ್ಟಿದ್ದಾರೆ. ರಾಯರು ಸರಕಾರದ ಅನ್ಯಾಯದ ಕೃತ್ಯವನ್ನು ನಿಷೇಧಿಸುವದಕ್ಕಾಗಿ ಕಾಯದೆಭಂಗ ಮಾಡುವದೂ, ಸಂಸ್ಥಾನದ ಹೊರಗೆ ಹಾಕಿದ ಕೂಡಲೆ ಪುನಃ ಪ್ರವೇಶ ಮಾಡಿ, ಸತ್ಯಾಗ್ರಹ

ಮಾಡುವದೂ ಶಕ್ಯವೇ ಸರಿ. ಆದರೆ ಒಬ್ಬೊಂಟಿಗರಾದವರಿಂದ ಈ ಕಾರ್ಯದಲ್ಲಿ ಯಶ ದೊರೆಯದು. ವ್ಯರ್ಥ ತ್ರಾಸ ಮಾತ್ರವಾಗುವದು. ಹಿಂಬಲವಿದ್ದರೇ ಯಶ ದೊರೆಯುವದುಂಟು. ಅಸಹಕಾರದ ಚಳವಳಿಯಲ್ಲಿ ಸಿಂಧ ಹೈದರಾಬಾದಿನಲ್ಲಿ ಪ್ರಸಿದ್ಧವಾಗುತ್ತಿರುವ ಹಿಂದೂ ಪತ್ರಿಕೆಯ ದೆಸೆಯಿಂದ ೧೪ ಜನರು ಒಬ್ಬರ ಹಿಂದೊಬ್ಬರಂತೆ ತುರಂಗವಾಸಿಯಾದರು. ಅದೇ ಪ್ರಕಾರ ಶ್ರೀ. ರಾಮಚಂದ್ರರಾಯರಿಗೆ ಹಿಂಬಲವಿದ್ದರೇ ನಿಹಿತವು. ಇಲ್ಲವಾದರೆ ನದಿಯು ತಾನು ಮುಣುಗುವಾಗ ಜಗತ್ತು ಮುಣುಗಿತೆಂದು ಹೇಳುವ ಪ್ರಕಾರ ರಾಮಚಂದ್ರರಾಯರು ವ್ಯರ್ಥವಾಗಿ ತ್ರಾಸ ಪಡಬೇಕಾಗುವದು.

ಸರಹದ್ದಿನ ಮುಸಲಮಾನರು ಹಿಂದೂ ಜನರಿಗೆ ಹೇರುವ ಶರ್ತುಗಳು.

[—[೦]—]

ವಾಯವ್ಯ ಸರಹದ್ದಿನ ಇಂಗ್ಲಿಷ ಹದ್ದು ದಾಟಿ ಇರುವಂಥ ಅಫ್ರಿದಿಜರ ದೇಶದಲ್ಲಿಯೂ ಹಿಂದೂ ಮತ್ತು ಶೀಖರಿದ್ದಾರೆ. ಅಲ್ಲಿನ ರಂಗೀಲ ರಸೂಲ ಪ್ರಕರಣದಿಂದ ಕೋಪಗೊಂಡ ಅಫ್ರಿದಿಜರು ಮುಯ್ಯ ತೀರಿಸಿಕೊಳ್ಳುವದಕ್ಕಾಗಿ ಇವರನ್ನು ತಮ್ಮ ದೇಶಬಿಟ್ಟು ಹೊರಗೆ ಹಾಕಿದ್ದಾರೆ. ತಿರಿಗಿ ತಮ್ಮ ದೇಶದಲ್ಲಿ ಬರಬೇಕಾದರೆ ಕೆಳಗಿನ ಶರ್ತುಗಳಂತೆ ವರ್ತಿಸಬೇಕೆಂದು ಇವರಿಗೆ ಕಟ್ಟಪ್ಪಣೆ ವಿಧಿಸಿದ್ದಾರೆ.

೧ ಹಿಂದೂ ಮತ್ತು ಶೀಖರು ಕೆಂಪ ರುಮಾಲ ಸುತ್ತಬೇಕು.

೨ ಜೀನು ಅಥವಾ ಗಾದಿ ಇಲ್ಲದೆ ಕುದುರೆಯ ಮೇಲೆ ಹತ್ತಬೇಕು.

೩ ಯಾವನೊಬ್ಬ ಮುಸಲಮಾನನು ಮನೆಗೆ ಬಂದರೆ ಆತನಿಗೆ ಮರ್ಯಾದೆ ಮಾಡುವದಕ್ಕಾಗಿ ಮಂಚದಿಂದ ಕೆಳಗಿಳಿದು ನೆಲದ ಮೇಲೆ ಕೂಡ್ರಬೇಕು.

೪ ಜನರಿಂದ ಬಡ್ಡೀ ತಕ್ಕೊಳ್ಳಬಾರದು.

ಹಿಂದೂ ಜನರು ಬಿಳಿಯ ಮತ್ತು ಶೀಖರು ಕರಿಯ ಬಣ್ಣದ ರುಮಾಲು ಸುತ್ತುವರು. ಇವೆರಡನ್ನೂ ಬಿಟ್ಟು, ಕೆಂಪ ಬಣ್ಣದ ರುಮಾಲು ಸುತ್ತಬೇಕೆಂದಿದ್ದಾರೆ. ಯಾವನೊಬ್ಬ ಮುಸಲಮಾನನು ತನ್ನ ಮನೆಗೆ ಬಂದರೆ ಆತನ ಮರ್ಯಾದೆಗಾಗಿ ಮಂಚ ಬಿಟ್ಟು ಕೆಳಗಿಳಿದು ನೆಲದ ಮೇಲೆ ಕೂಡ್ರುವದೆಂದರೆ ತನ್ನ ಯೋಗ್ಯತೆ ಮತ್ತು ಮರ್ಯಾದೆಗೆ ಭಂಗ ತಂದುಕೊಂಡಂತಾಗುತ್ತದೆ. ಮುಸಲಮಾನ ಧರ್ಮದಲ್ಲಿ ಬಡ್ಡೀ ತಕ್ಕೊಳ್ಳುವದಿಲ್ಲ. ಆದ್ದರಿಂದ ಹಿಂದೂ ಜನರೂ ಸಾಲ ಕೊಟ್ಟ ರಕಮಿನ ಮೇಲೆ ಬಡ್ಡೀ ತಕ್ಕೊಳ್ಳಬಾರದೆಂದು ಅನ್ನುವರು. ಇವೆಲ್ಲ ಬಲಾತ್ಕಾರ ಮತ್ತು ಹಿಂಸೆಯ ಕೃತ್ಯಗಳಾಗಿರುವದರಿಂದ, ಹಿಂದೂ ಮತ್ತು ಶೀಖರು ಆ ದೇಶಕ್ಕೆ ಶರಣು ಹೊಡೆದು ಬ್ರಿಟಿಶ ಹದ್ದಿನಲ್ಲಿ ಬರುತ್ತಿದ್ದಾರೆ. ಹೀಗೆ ಬಂದವರ ಸಂಖ್ಯೆಯು ಮುನ್ನೂರು ಆಗಿರುತ್ತದೆ.

ವಿವಿಧ ವರ್ತಮಾನಗಳು.

—೦—

ವಿಲಾಯತಿಯಲ್ಲಿ ಒಂದು ರಾಜ್ಯದ ಟಪಾಲನ್ನು ಮತ್ತೊಂದು ರಾಜ್ಯಕ್ಕೆ ವಿಮಾನಗಳಿಂದ ಕಳಿಸುವ ವಿಚಾರ ನಡೆದಿದೆ. ಇದೇ ವಿಷಯವಾಗಿ ಹಾಲಂಡದಲ್ಲಿರುವ ಹೇಗ ಪಟ್ಟಣದಲ್ಲಿ ಒಂದು ಪರಿಷತ್ತು ಕೂಡತಕ್ಕದ್ದಿದೆ. ಈ ಪರಿಷತ್ತಿನ ದೆಸೆಯಿಂದ ಹಿಂದುಸ್ಥಾನದ ವತಿಯಿಂದ ಶ್ರೀ ಗುರುರಾವ ಜೇವೂರ ಇವರನ್ನು ಕಳಿಸಿದ್ದಾರೆ. ಶ್ರೀ ಗುರುರಾಯರು ನಾಗಪೂರ ಇಲಾಖೆಯಲ್ಲಿ ಪೋಸ್ಟ ಮಾಸ್ತರ ಜನರಲರಾಗಿದ್ದಾರೆ.

ಪಂಜಾಬ ಕೌನ್ಸಿಲದ ಅಧ್ಯಕ್ಷರಾದ ಖಾನಬಹಾದ್ದೂರ ಶಹಾಬುದ್ದೀನಸಾಹೇಬರು ಮಸೂರಿಯ ಗುಡ್ಡದಲ್ಲಿ ಮೋಟಾರದಿಂದ ಪ್ರವಾಸ ಮಾಡುತ್ತಿದ್ದಾಗ, ಕೊಳ್ಳದಲ್ಲಿ ಮೋಟಾರ ಬಿತ್ತು. ಖಾನಬಹಾದ್ದೂರರು ಸಿಡಿದು ೬೪ ಫೂಟು ಆಳವಾದ ಕೊನ್ನಾರದಲ್ಲಿ ಬಿದ್ದರು. ಆದರೂ ಜೀವಕ್ಕೆ ಅಪಾಯವಾಗಲಿಲ್ಲ.

ಕರಾಚಿ ಪಟ್ಟಣಕ್ಕೆ ಈಗಿನ ನಳದ ನೀರಿನ ಸಂಗ್ರಹದಿಂದ ನೀರಿನ ಪೂರೈಕೆಯಾಗುವದಿಲ್ಲ. ೭೮ ಲಕ್ಷ ರೂಪಾಯಿ ವೆಚ್ಚ ಮಾಡಿ, ಬೇರೊಂದು ಪ್ರಚಂಡ ಜಲಾಶಯ ಕಟ್ಟುವರು. ಕೆಲಗೇರಿಯ ಕೆರೆಗೆ ಹೆಸರಿಡುವ ಅಣ್ಣಾ ಪಂಡಿತರು ಬುದ್ಧಿಗಲಿಯುವಂಥ ಸಂಗತಿಯು.

ರಜತೋತ್ಸವದ ನಿತ್ಯ ಸ್ಮರಣೆಗಾಗಿ ಮೈಸೂರಲ್ಲಿ ಒಂದು ಎತ್ತರವಾದ ಗೋಡೆ ಕಟ್ಟಿ ಅದರ ಮೇಲೆ ದೊಡ್ಡ ಗಡಿಯಾರ ಕೂಡ್ರಿಸಿದ್ದಾರೆ. ಇದು ಸುತ್ತಲು ಮೂರು ಮೈಲು ಕಾಣಿಸುವದು. ರಾತ್ರಿಯಲ್ಲಿ ವಿದ್ಯುದ್ದೀಪದಿಂದ ಕಾಣಿಸುವಂತೆಯೂ ವ್ಯವಸ್ಥೆ ಮಾಡಿದ್ದಾರೆ. ವಿಶೇಷವೇನಂದರೆ ಗಡಿಯಾರವು ವಿದ್ಯುತ್ತಿನ ಶಕ್ತಿಯಿಂದಲೇ ನಡೆಯುವದು.

ವಿಜಾಪೂರ ಜಿಲ್ಹೆಯಲ್ಲಿ ಮಳೆಯಿಲ್ಲ; ಒಂದು ವಾರ ಮಳೆಯಾಗದಿದ್ದರೆ ಮುಂಗಾರಿಯು ಒಣಗಲಿಕ್ಕೆ ಹತ್ತುವದು.

ಧಾರವಾಡ—

ಮಂತ್ರಾಲಯದಲ್ಲಿ ಮಾರಿಕಾಬೇನೆಯು ಹೆಚ್ಚಿಗೆ ಇರುವದರಿಂದ, ಅಲ್ಲಿಗೆ ಯಾರೂ ಹೋಗಬಾರದೆಂದು ಮದ್ರಾಸ ಸರಕಾರದವರು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ. ಆದರೆ ಹೋಗದಿಲ್ಲ ಕಾರಣವೇನಿಲ್ಲ. ಯಾತ್ರಿಕರು ಅವಶ್ಯ ಬರಬೇಕೆಂದು ಶ್ರೀ. ಮಠದ ದಿವಾನರು ಪ್ರಸಿದ್ಧ ಮಾಡಲಿಕ್ಕೆ ನಮಗೆ ತಿಳಿಸಿದ್ದಾರೆ.

ಬ್ಯಾಡಗಿ ಶ್ರೀ ಲಿಂಗರಾಜ ಲಾಯಬ್ರರಿಯ ೭ನೇ ವರ್ಷದ ವಾರ್ಷಿಕ ಸಮಾರಂಭವು.

—೦—

ಪ್ರತಿ ವರ್ಷದ ಪದ್ಧತಿಯಂತೆ ಕಳೆದ ಮಂಗಳವಾರ ತಾ. ೩-೮-೩೭ನೇ ದಿವಸ ಇಲ್ಲಿಯ ಶ್ರೀ ಲಿಂಗರಾಜ ಲಾಯಬ್ರರಿಯ ೭ನೇ ವರ್ಷದ (ವಾರ್ಷಿಕ) ಸಮಾರಂಭವು ಬಹು ವಿಜೃಂಭಣೆಯಿಂದ ನೆರವೇರಿತು.

ಅಂದು ಸಾಯಂಕಾಲ ೫ ಘಂಟೆಗೆ ಶ್ರೀ ಅಥಣೀ ಶಿವಯೋಗಿಗಳವರ ಹಾಗೂ ಶಿರಸಂಗೀ ಶ್ರೀ ಲಿಂಗರಾಜರವರ ಭಾವ ಚಿತ್ರದ ಮೆರವಣಿಗೆಯು ಭಜನೆ, ಬ್ಯಾಂಡ ವಾದ್ಯಗಳೊಡನೆ ಹೊರಟು ಪುರಪ್ರದಕ್ಷಿಣೆ ಮಾಡಿಕೊಂಡು ೬|| ಘಂಟೆಗೆ ಪ್ರಭು ಶ್ರೀಗಳವರ ಮಠವನ್ನು ಸೇರಿತು. ಕೂಡಲೆ ಕಾರ್ಯಕ್ರಮದ ಮೇರೆಗೆ ಸಭೆಯ ಕೆಲಸವು ನಡೆಯಿತು. ಮೊದಲೇ ಗೊತ್ತು ಮಾಡಿಕೊಂಡ ಮೇರೆಗೆ ಧಾರವಾಡ ಲಿಂಗಾಯತ ಹಾಯಸ್ಕೂಲಿನ ಪ್ರಿನ್ಸಿಪಾಲರಾಗಿರುವ ಶ್ರೀ ಬಸವನಾಳ ಎಮ್. ಎ. ಈ ಮಹನೀಯರು ಅಧ್ಯಕ್ಷಸ್ಥಾನವನ್ನು ವಹಿಸಿದರು.

ಮೊದಲು ಮಿ. ಸಿದ್ದಪ್ಪ ಹುಂಬಿ ಇವರು ೬ನೇ ವರ್ಷದ ರಿಪೋರ್ಟು ಓದಿದರು. ಅದು ಸರ್ವಾನುಮತದಿಂದ ಪಾಸ ಮಾಡಲ್ಪಟ್ಟಿತು. ತರುವಾಯ ಮೇ॥ ಇಂಡೀಕರ ಇವರು ವಾಚನಾಲಯದ ಆವಶ್ಯಕತೆಯನ್ನು ಕುರಿತು ಸರಳವಾಗಿ ಭಾಷಣ ಮಾಡಿದರು. ಮಿ|| ಕ್ಯಾತನಾಳ ಇವರು ತಮ್ಮ ಭಾಷಣದಲ್ಲಿ ಸಭಿಕರಿಗೆ ಶ್ರೀಯುತ ಬಸವನಾಳರವರ ಪರಿಚಯವನ್ನು ಚನ್ನಾಗಿ ಮಾಡಿಕೊಟ್ಟರು. ಶ್ರೀಯುತ ಕೊಣ್ಣೂರ ಮಾಮಲೇದಾರ ಸಾಹೇಬರವರು

ನೆರೆಹಾವಳಿಯ ಸುದ್ದಿಗಳು.

—೦—

ಖೇಡ ಜಿಲ್ಲೆಯಲ್ಲಿಯೇ ಒಂದು ಕೋಟಿಯ ಹಾನಿಯಾಗಿರುತ್ತದೆ.

ಅಹಮದಾಬಾದಿನಲ್ಲಿ ರಿಲೀಫ ಫಂಡು ಆರು ಲಕ್ಷವಾಗಿದೆ. ಅಧ್ಯಕ್ಷರಾದ ಮಿ. ಪಟೇಲರು ೫೦ ಸಾವಿರ ರೂಪಾಯಿ ಕೊಟ್ಟಿದ್ದಾರೆ.

ಗಿರಣಿಯವರು ೪೪ ಗಂಟೆ ಬಿಟ್ಟು ಕೊಟ್ಟರು. ಇನ್ನೂರು ರೂಪಾಯಿ ಅಥವಾ ಅದಕ್ಕೂ ಹೆಚ್ಚು ಸಂಬಳವಿದ್ದ ಗಿರಣಿಗಳ ಕಾಮದಾರರು ೧/೪ ಸಂಬಳವನ್ನು ರಿಲೀಫ ಫಂಡಿಗೆ ಕೊಡುವರು

ಶಾಲೆಯ ವಿದ್ಯಾರ್ಥಿಗಳು ಆಹಾರಗಳ ಭಿಕ್ಷೆ ಬೇಡುವರು ಮತ್ತು ಒಂಗಂತೆ ಹೊಲದು ವಸ್ತ್ರಹೀನರಿಗೆ ದಾನ ಕೊಡುವರು.

ಬಡೋದೆಯಲ್ಲಿ ಯುವರಾಜ ಶ್ರೀಮಂತ ಧೈರ್ಯಶೀಲರು ಸ್ವಯಂಸೇವಕರನ್ನು ಸಂಗಡ ಕರಕೊಂಡು ರಾತ್ರಿಯಲ್ಲಿ ಸ್ವತಃ ಗಸ್ತಿ ತಿರುಗುವರು.

ಮುಂಬಯಿಯಲ್ಲಿ ನಡೆದ ರಿಲೀಫ ಫಂಡು ಮೂರು ಲಕ್ಷವಾಗಿದೆ.

ಪುಣೆಯಲ್ಲಿ ಗವ್ಹರನಸಾಹೇಬರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ೩೬೦೦೦ ಅಂಕಿಗಳು ಬಿದ್ದವು. ಕೊಲ್ಹಾಪೂರ, ಸಾಂಗಲಿ, ಜಮಖಂಡಿ ಮುಂತಾದ ಸಂಸ್ಥಾನಿಕರೆಲ್ಲರೂ ವರ್ಗಣಿ ಕೊಟ್ಟಿದ್ದಾರೆ.

ರೇಲ್ವೆಯ ದಾರಿಯು ನೆಟ್ಟಗಾಗಿ, ಪ್ರಯಾಣಿಕರ ಬಂಡಿಗಳು ಓಡಾಡಲಾರಂಭಿಸಿವೆ.

ನೋಟೀಸು

ಯಲ್ಲಪ್ಪಾ ತಂದಿ ರಾಮಪ್ಪಾ ಕಂಬಾರ ಸಾ|| ತೇಗೂರ ಇವನಿಗೆ-

ಕಳಗೆ ಹೆಬ್ಬಟ್ಟಿನ ಗುರುತಾ ಮಾಡುವವಳು ಈ ನೋಟೀಸಿನ ಮೂಲಕ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಗಂಡನಿದ್ದು ನಿನ್ನ ಕೂಡ ಪ್ರಪಂಚ ಮಾಡಿಕೋತಾ ಇರತಿಂಲಿಕ್ಕೆ ನೀನು ನಿನ್ನ ಸಂಗಿಸಿನ ವಾಕು ಕೇಳಿ ನನಗೆ ಬಹಳೇ ತ್ರಾಸ ಕೊಡ ಹತ್ತಿದಿ ಕಾರಣ ನಿನ್ನ ತಂದಿಯು ನನ್ನನ್ನು ಶ್ರೇವಂದಿರಿಸಿಂದ ನನ್ನ ತವರ ಮನೆಗೆ ಕಳಿಸಿ ಕೊಟ್ಟಿದ್ದನು ಅನಂತರ ನೀನು ಈಗ ಎರಡು ವರ್ಷ ಯಾವ ಉಸಾಬರಿಗೂ ಬರದಲೆ ಈಗ ನನ್ನ ಮೇಲೆ ವ್ಯಭಿಚಾರ ಮತ್ತು ದಾಗೀನೆ ತಗೊಂಡು ಓಡಿ ಹೋದ ಆರೋಪ ಹೊರಿಸಿ ಸುಳ್ಳು ನೋಟೀಸು ಮಾಡಿದ್ದೀ ಅದರಲ್ಲಿಯ ಯಾವತ್ತು ಮಜಕೂರು ಸುಳ್ಳಿವ ಮತಲಬೀದು ಇರುತ್ತದೆ ಈಗ ನೀನು ಎರಡನೇಯವಳನ್ನು ಉಡಿಕಿಯಾಗಿ ಚಾಲಿಸಿ ಮಾಡಿಕೋತಾ ಇರುತ್ತೀ ಇದರ ಮೇಲಿಂದ ನನ್ನ ಮೇಲೆ ನಿನ್ನದು ಏನೂ ಲಕ್ಷವಿದ್ದಂತೆ ತೋರುವದಿಲ್ಲ ನಿನ್ನ ಮನೆಯಿಂದ ಬಿಟ್ಟು ಬಂದ ಲಾಗಾಯಿತು ಈ ವರೆಗೂ ನನಗೆ ಹೊಟ್ಟೆ ಬಟ್ಟೆಯ ಸಲುವಾಗಿ ೨೦೦ ರೂಪಾಯಿ ಸಾಲ ಆಗಿರುತ್ತದೆ. ಸಾಲಗಾರರ ತಗಾದಿ ಬಹಳೇ ಆಗಿರುತ್ತದೆ ಕಾರಣ ಈ ನೋಟೀಸು ಕೊಡುವ ಭಾಗ ಬಿತ್ತು ಈ ನೋಟೀಸು ಮುಟ್ಟಿದ ೮ ದಿವಸದಲ್ಲಿ ಬಂದು ನನ್ನ ಸಾಲ ತೀರಿಸಿ ನನ್ನನ್ನು ಕರಕೊಂಡು ಹೋಗಬೇಕು ಇದಕ್ಕೆ ತಪ್ಪಿದರೆ ನಾನು ನನ್ನ ಸಾಲದ ಸಲುವಾಗಿ ಮತ್ತು ಹೊಟ್ಟೆ ಬಟ್ಟೆಯ ಸಲುವಾಗಿ ಎರಡನೇಯವನನ್ನು ಉಡಿಕಿಯಾಗಿ ಹೋಗುವೆನು ಅನಂತರ ನಿನ್ನದು ನನ್ನ ಮೇಲೆ ಮತ್ತು ನನ್ನ ಉಡಿಕಿ ಗಂಡನ ಮೇಲೆ ಯಾವ ತರದ ಹಕ್ಕು ಉಳಿಯಲಾರದು ಇದೇ ಸೋಡಪತ್ರ ಅಂತಾ ತಿಳಿಯತಕ್ಕದ್ದು ತಿಳಿಯುವದು ತಾ|| ೯-೮-೨೭ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರುತಾ ದ್ಯಾಮವ್ವಾ ಕೋಂ ಯಲ್ಲಪ್ಪಾ ಕಂಬಾರ ಸಾ|| ಗಳಗಿ ತಾ|| ಕಲಘಟಗಿ ಈಕೇದು ಅದೆ

ನೋಟೀಸಿನ ಉತ್ತರಾ

ವೆ.|| ಮಹಮ್ಮದಸಾಹೇಬ ವ|| ಉಸ್ಮಾನಸಾಹೇಬ ಮುಜಾಹಿದ ಸಾ|| ಹುಬ್ಬಳ್ಳಿ ಇವರಿಗೆ-

ಕೆಳಗೆ ಸಹಿ ಮಾಡಿದವರ ಕಡೆಯಿಂದ ಈ ನೋಟೀಸಿನ ದ್ವಾರಾ ಉತ್ತರಾ ಕೊಡುವದೇನಂದರೆ- ನೀವು ವಿಜಯ ಪತ್ರದಲ್ಲಿ ನನಗೆ ಕೊಟ್ಟ ನೋಟೀಸು ಮುಟ್ಟಿ ಮಜಕೂರು ತಿಳಿಯಿತು ಅದು ಯೋಗ್ಯ ಇರದೆ ಬನಾವಟಿ ಮತಲಬೀದು ಅದೆ ಅದರಿಂದ ನಾನು ಏನೂ ಜವಾಬದಾರನಾಗಲಾರೆನು

ನಿಮ್ಮ ಮಗಳಾದ ಫಾತುಮಾ ಎಂಬವಳನ್ನು ನನ್ನ ಮಗನಾದ ಅಬ್ದುಲಮಜೀದ ಎಂಬವನಿಗೆ ಲಗ್ನ ಮಾಡಿ ಕೊಡಲಿಕ್ಕೆ ಒಪ್ಪಿ ವಿಳ್ಯದ ಕಾರ್ಯ ಮಾಡಿ ಸದರಿಯವಳ ಮೈಮೇಲೆ ದಾಗೀನೆಗಳು ಸಹ ಇಟ್ಟಿರುತ್ತದೆ ಆ ಪ್ರಕಾರ ಲಗ್ನ ಮಾಡಿ ಕೊಡಲಿಕ್ಕೆ ನಿಮಗೆ ಕೇಳಿದರೆ- ಮಾಡಿ ಕೊಡತೇನೆ ಮನೆಯಲ್ಲಿ ಸ್ವಲ್ಪ ಅಡಚಣಿ ಅದೆ ಅಂತಾ ಹೇಳಿಕೋತಾ ಬಂದಿರಿ ಹೀಗಿದ್ದು ದುಷ್ಟ ಜನರ ಚಿತಾವಣಿಯಿಂದ ಸುಳ್ಳು ನೋಟೀಸು ಕೊಟ್ಟಿರುತ್ತೀರಿ ಆದ್ದರಿಂದ ಈ ನೋಟೀಸಿನಿಂದ ನಿಮಗೆ ತಿಳಿಸುವದೇನಂದರೆ- ಈ ನೋಟೀಸು ಮುಟ್ಟಿದ ೭ ದಿವಸದಲ್ಲಿ ಲಗ್ನ ಮಾಡಿ ಕೊಡುವ ಬಗ್ಗೆ ಮುದ್ದತು ನೇಮಿಸಿಕೊಂಡು ಆ ಪ್ರಕಾರ ಲಗ್ನ ಮಾಡಿಕೊಟ್ಟು ನಮ್ಮ ದಾಗೀನೆ ಸಹಿತ ನಿಮ್ಮ ಮಗಳಿಗೆ ಕಳಿಸಿಕೊಡಬೇಕು ಈ ಪ್ರಕಾರ ಮಾಡಲಿಕ್ಕೆ ತಪ್ಪಿದರೆ ದಿವಾಣಿಯಲ್ಲಿ ಅಗರ ಫೌಜದಾರಿಯಲ್ಲಿ ನಿಮ್ಮ ಮೇಲೆ ಇಲಾಜ ನಡಿಸುವದರಲ್ಲಿ ಬಂದೀತು ವಿನಹಾ ಕಾರಣ ಲುಕ್ಸಾನ ಆಗಬಾರದೆಂತಾ ಈ ನೋಟೀಸ ಮೂಲಕ ತಿಳಿಸಿದ್ದು ಅದೆ. ಈ ನೋಟೀಸಿನ ಖರ್ಚು ನಿಮ್ಮ ತಲೆಯ ಮೇಲೆ ಅದೆ ತಿಳಿಯುವದು ತಾ|| ೯-೮-೧೯೨೭ ನೇ ಇಸ್ವಿ

ಸಹಿ- ಅಬ್ದುಲಕರೀಮಸಾಬ ವ|| ಅಬ್ದುಲ್ಲಾಸಾಹೇಬ ಜಮಾದಾರ

ಶ್ರೀ ಮಾಣಿಕಪ್ರಭು ಪ್ರಾಸಾದಿಕ

ಗಾಯನ ವಾದನ ವಿದ್ಯಾಲಯ

ಧಾರವಾಡ.

ಶ್ರೀ ವಿದ್ಯಾಲಯದಲ್ಲಿ ಗಾಯನ, ಹಾರ್ಮೋನಿಯಮ್, ತಬಲಾ, ಸತಾರ ಇವುಗಳ ಶಿಕ್ಷಣವನ್ನು [illegible] ಕಲಿಸಲಾಗುವದು.

ಈ [illegible] ಮಾಡಿದ್ದೇವೆ. [illegible] ಕಲಿಯ ಬಯಸುವವರು ವಿಶೇಷ ಮಾಹಿತಿಗಾಗಿ [illegible] ಭೆಟ್ಟಿಯಾಗಬೇಕು.

ಪತ್ತೆ
[illegible]

ತಮ್ಮ
[illegible]
ಲಕ್ಷ್ಮಣಸಿಂಗ ಗವಾಯಿ,
ನಾಗಠಾಣ(?).

ಈ ಪತ್ರವನ್ನು [illegible] ಇವರು ಧಾರವಾಡದಲ್ಲಿರುವ ತಮ್ಮ [illegible] ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮] ಧಾರವಾಡ ಗುರುವಾರ ತಾರೀಖು ೧೯ ಸ[illegible] [ಸಂಚಿಕೆ ೧೭೨

ಕಿರ್ಲೋಸ್ಕರರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅದು ನೀರಿನ ಪಿಪ್ಪಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು [illegible]ಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಒಯ್ಯು ಹಗುರವಾಗಿ ತರುತ್ತದೆ. ಸದ್ಯಕ್ಕೆ ನೀರಿನ [illegible]ತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ [illegible] ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೨೯॥ ರೂಪಾಯಿ

ವಿಸ್ತಾರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ [illegible] ಕೇಳಿಕೊಳ್ಳಬಹುದು.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

— o —

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರ ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ನಡೆಯುತ್ತಿರುವವು. ಸೇವಿಂಗ್ಸ ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ಆರು, [illegible] ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ [illegible] ಇರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

ಆಗಸ್ಟ್ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ [illegible] ವರ್ಷದ ಚಂದಾ [illegible] ವ್ಹಿ. ಪಿ. [illegible]

ಮ್ಯಾನೇಜರ ವಿಜಯ ಧಾರವಾಡ

ಜಾಹೀರಾತಿನ ದರಗಳು.

— o —

[illegible] ಇಂಚಿನ [illegible] ಪಂಕ್ತಿಗಳಿಗೆ [illegible] ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದಾವರ್ತಿ [illegible] ಪ್ರತಿಯೊಂದು ಒಳಿಗೆ ಐದು ಆಣೆ ಸಲ [illegible], ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮೊದಲಾದ ಸಾರ್ವಜನಿಕ ನೋಟೀಸುಗಳಿಗೆ [illegible] ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

— o —

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ಲೋಕಮಾನ್ಯ ಟಿಳಕರ ಚರಿತ್ರೆ	೪ ,,
ದೇಶಬಂಧು ದಾಸರ ಚರಿತ್ರೆ	೩ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ವಿಜಯ.

ಧಾರವಾಡ ತಾ- ೧೧-೮-೨೭ ನೇ ಇಸ್ವಿ

ಮುಂಬಯಿ ಗವ್ಹರ್ನರಸಾಹೇಬರ ಸನ್ನಿಧಿಯಲ್ಲಿ ಬ್ರಾಹ್ಮಣೇತರರ ಡೆಪ್ಯುಟೇಶನವು.

ಮುಂಬಯಿ ಕೌನ್ಸಿಲದಲ್ಲಿ ಬ್ರಾಹ್ಮಣೇತರ ಪಕ್ಷಕ್ಕೆ ಸೇರಿದ ಮೆಂಬರರು ಹೋದ ಶನಿವಾರದ ದಿವಸ ಪುಣೆಯಲ್ಲಿ ನಾಮದಾರ ಗವ್ಹರ್ನರಸಾಹೇಬರನ್ನು ಕಾಣಲಿಕ್ಕೆ ಹೋಗಿದ್ದರು. ಆಗ ಇವರು ಸ್ವಹಿತ ಸಂಬಂಧವಾಗಿ ಅನೇಕ ವಿನಂತಿಗಳನ್ನು ಸಾಹೇಬರ ಮುಂದೆ ಮಾಡಿಕೊಂಡರು. ಒಂದು ತಾಸಿನ ತನಕ ಚರ್ಚೆಯಾಯಿತು. ಮಾಜಿ ದಿವಾನ ಜಾಧವರಾಯರು ಮರಾಠರ ವಿಷಯವಾಗಿ ಮುಂದೆ ಕೊಟ್ಟಂತೆ ಹೇಳಿಕೊಂಡಿದ್ದಾರೆ-

ಸರಕಾರದವರು ಮುಸಲಮಾನರಿಗೆ ಕೊಟ್ಟಷ್ಟು ಸವಲತ್ತುಗಳನ್ನು ಮರಾಠರಿಗೆ ಕೊಟ್ಟಿಲ್ಲ. ಯಾವ ಪ್ರಮಾಣದಿಂದ ಹಿಂದುಳಿದವರಿಗೆ ಸರಕಾರೀ ಕೆಲಸಗಳು ದೊರೆಯಬೇಕೋ? ಆ ಪ್ರಮಾಣದಿಂದ ದೊರೆತಿಲ್ಲ. ಸರಕಾರದ ಠರಾವು ಕಾಗದದಲ್ಲಿಯೇ ಉಳಿದದೆ. ವಿದ್ಯಾಖಾತೆಯಲ್ಲಿ ಗುಜರಾಥವು ಮುಂದೆ ಹೋಗಿದೆ. ಮಹಾರಾಷ್ಟ್ರ ಮತ್ತು ಕರ್ನಾಟಕವು ಹಿಂದಿರುವವು. ಗುಜರಾಥಕ್ಕೆ ಹೆಚ್ಚಿಗೆ ಗ್ರಾಂಟು ದೊರೆಯುತ್ತಿರುವದರಿಂದ, ಅದು ಪ್ರಾಥಮಿಕ ಶಿಕ್ಷಣದ ಕಾಯದೆಯ ಪ್ರಕಾರ ಲೋಕಲಬೋರ್ಡನ್ನು ಬೆಳೆಸಿ, ಸಕ್ತಿ ಶಿಕ್ಷಣ ಬೇಕೆಂದು ಗುರುಗುಟ್ಟುತ್ತಿರುವವು. ಸಕ್ತಿಯ ಶಿಕ್ಷಣ ಪ್ರಾರಂಭಿಸಿದರೆ ೨/೩ ದಷ್ಟೇ ಗ್ರಾಂಟು ಕೊಡುವವು. ಅದಕ್ಕೂ ಹೆಚ್ಚಿಗೆ ದೊರೆಯಲಾರದೆಂದು ಸರಕಾರದವರು ಈ ಕಾಯದೆಯ ಜೊತೆಗೆ ನಿಂತು ಹೇಳುತ್ತಿದ್ದಾರೆ. ೧೯೨೧ ನೆಯ ಇಸವಿಯಿಂದ ಶಾಲೆಗಳನ್ನು ಬೆಳೆಸುವದು ನಿಂತು ಹೋಗಿದೆ. ಜನರ ಬೇಡಿಕೆಯಿದ್ದರೂ, ಸರಕಾರವು ಮುಂದೊರೆಯಗೊಡಲೊಲ್ಲದು. ಈ ಮೂಲಕ ಹಿಂದುಳಿದವರೇ ಹಾನಿ ಹೊಂದುತ್ತಿದ್ದಾರೆ. ಖಾಸಗೀ ಶಾಲೆಗಳನ್ನು ತೆಗೆಯಲು ಸರಕಾರವು ಉತ್ತೇಜನ ಕೊಡಬೇಕು.

ಟ್ರೇನಿಂಗ ಕಾಲೇಜುಗಳಲ್ಲಿ ನೋಡಲಿಕ್ಕಂತೂ ಬ್ರಾಹ್ಮಣೇತರರ ಸಂಖ್ಯೆಯು ಹೆಚ್ಚಾಗಿದ್ದರೂ, ಬ್ರಾಹ್ಮಣರೇ ಹೆಚ್ಚಾಗಿದ್ದಾರೆ. ಬ್ರಾಹ್ಮಣರು ಶಾಕಾಹಾರಿಗಳು; ಬ್ರಾಹ್ಮಣೇತರರಲ್ಲಿ ಹೆಚ್ಚಾದವರು ಮಾಂಸಾಹಾರಿಗಳು ಆದರೂ ಬ್ರಾಹ್ಮಣೇತರರಿಗೆ ಬ್ರಾಹ್ಮಣರ ಪಾಕಶಾಲೆಯಲ್ಲಿಯೇ ಊಟ ಮಾಡಲಿಕ್ಕೆ ಒತ್ತಾಯಪಡಿಸುವರು. ಎಲ್ಲಾದರೂ ಮಾಂಸಾಹಾರಿಗಳ ಅಡಿಗೆಯಾಗುತ್ತಿತ್ತು. ಅದನ್ನು ಬಂದು ಮಾಡಿ, ಬ್ರಾಹ್ಮಣರ ಶಾಕಾಹಾರವನ್ನೇ ತಿನ್ನಲಿಕ್ಕೆ ಹೇಳುವರು. ಪುಣೆಯ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲನು ಬ್ರಾಹ್ಮಣೇತರನೇ ಇರಬೇಕು. ಮರಾಠರಿಗಿಂತ ಮುಸಲಮಾನರು ಕಡಿಮೆಯಿದ್ದರೂ, ಅವರಿಗಾಗಿ ಸ್ವತಂತ್ರವಾದ ಟ್ರೇನಿಂಗ ಸ್ಕೂಲುಂಟು. ಆದರೆ ಮರಾಠರ ದೆಸೆಯಿಂದಿರುವದಿಲ್ಲ. ಮುಸಲಮಾನರಿಗೆ ಕೊಡುವಂಥ ಸ್ಪೇಶಲ ಗ್ರಾಂಟುಗಳು ಮರಾಠರ ಶಾಲೆಗಳಿಗಿರುವದಿಲ್ಲ. ಮುಖ್ಯವಾಗಿ ಎರಡನೆಯ ಜಾತಿಗಳ ಹಾನಿಯಾಗಿ ಮುಸಲಮಾನರಿಗೆ ಹೆಚ್ಚಿಗೆ ಸವಲತ್ತುಗಳು ದೊರೆಯುತ್ತಿರುವವು. ವಿದ್ಯಾಖಾತೆಯ ಡಾಯರೆಕ್ಟರ ಸಾಹೇಬರ ಕಚೇರಿಯಲ್ಲಿರುವ ಕಾರಕೂನರೆಲ್ಲರೂ ಬ್ರಾಹ್ಮಣರಾಗಿದ್ದಾರೆ. ಈ ಸ್ಟಾಫ ಬದಲು ಮಾಡಿದ ವಿನಹ ಶಿಕ್ಷಣ ಕಾರ್ಯದಲ್ಲಿ ಪ್ರಗತಿಯಾಗಲಾರದು.

ವೈದ್ಯಕಿ, ಪ್ವೋಲಿ, ಇರಿಗೇಶನ, ಸಹಕಾರ ಸಂಘ ಮುಂತಾದ ಎಲ್ಲ ಖಾತೆಗಳಲ್ಲಿ ಬ್ರಾಹ್ಮಣರೇ ಇದ್ದಾರೆ. ರಜಿಸ್ಟ್ರೇಶನ ಖಾತೆಯಲ್ಲಿ ಬ್ರಾಹ್ಮಣರ ಸಂಖ್ಯೆಯೇ ದೊಡ್ಡದಾಗಿ ಅವರ ವರ್ಚಸ್ಸೇ ಹೆಚ್ಚಿರುವದರಿಂದ ಬಹುವಾಗಿ ಹಾನಿತಟ್ಟುತ್ತಿರುವದು. ಒಕ್ಕಲತನದ ಖಾತೆ ನೋಡಿರಿ. ಅದು ಕೃಷಿಕರದು. ಆದರೂ ಅಲ್ಲಿಯೂ ಬ್ರಾಹ್ಮಣರೇ ಅದರ ಫಲ ಪಡಕೊಳ್ಳುತ್ತಿದ್ದಾರೆ. ಪೋಲೀಸ ಖಾತೆಯ ಇನ್ಸಪೆಕ್ಟರ ಜನರಲಸಾಹೇಬರು ಮರಾಠರನ್ನು ತಿರಸ್ಕರಿಸಿ, ಬ್ರಾಹ್ಮಣರಿಗೂ ಮುಸಲಮಾನರಿಗೂ ಕೆಲಸ ಕೊಡುತ್ತಿದ್ದಾರೆ. ಮುಲಕೀ ಖಾತೆಯಲ್ಲಿ ಕಾರಕೂನ ಕೆಲಸ ಕೊಡುವಾಗ ಸಹ ಮರಾಠರ ಹಕ್ಕು ಮುಣುಗಿಸಿ, ಬ್ರಾಹ್ಮಣರಿಗೇ ಕೆಲಸ ಕೊಡುತ್ತಿದ್ದಾರೆ. ಸರಕಾರದ ಠರಾವು ಎಲ್ಲಿಯೋ ಮೂಲೆ ಹಿಡಿದು ಕೂತಿರುತ್ತದೆ.

ಈ ಪ್ರಕಾರ ದಿವಾನ ಜಾಧವರಾಯರು ದೂರಿಕೊಂಡನಂತರ ನಾಮದಾರ ಗವ್ಹರ್ನರಸಾಹೇಬರು ನಾಲ್ಕೇ ಮಾತುಗಳನ್ನು ಇವರನ್ನು ಸಮಾಧಾನ ಪಡಿಸಲುಬ್ಬಿಗಿಸಿದರು. "ನಿಮ್ಮ ತಕರಾರುಗಳ ವಿಚಾರ ಮಾಡುವೆವು. ಸರಕಾರೀ ಕೆಲಸಗಳು ಬರೇ ಜಾತಿಯ ಮೇಲೆ ಸಿಗಲಾರವು. ಅವಕ್ಕೆ ಬುದ್ಧಿಯೂ, ಕೆಲಸ ನಿರ್ವಹಿಸುವ ಶಕ್ತಿಯೂ ಬೇಕು. ತಮಗೆ ಕೆಲಸಗಳು ದೊರೆಯಬೇಕಾದರೆ- ಮರಾಠರು ಮೊದಲು ಇವೆರಡೂ ಯೋಗ್ಯತೆಗಳ ಸಂಪಾದನೆ ಮಾಡಿ, ತೃಪ್ತಿಕರವಾಗಿ ಕೆಲಸ ಮಾಡತಕ್ಕದ್ದು" ಎಂಬದಾಗಿ ಸಾಹೇಬರು ಉತ್ತರ ಕೊಟ್ಟಿದ್ದಾರೆ. ಲಿಂಗಾಯತರ ವಿಷಯವಾಗಿ ರಾ. ಬ. ಕಂಬಳಿ ಅಥವಾ ಬೇರೆ ಮೆಂಬರರು ಯಾವ ಬೇಡಿಕೆಗಳನ್ನು ಬೇಡಿಕೊಂಡರೆಂಬದು ಇನ್ನೂ ಪ್ರಸಿದ್ಧವಾಗಿಲ್ಲ.

ವಕೀಲನಾಗುವಂಥವನಲ್ಲಿ ಎಂಥ ಗುಣಗಳಿರಬೇಕು.

[—[०]—]

ಸ್ತ್ರೀಯರೂ ವಕೀಲರಾಗಬಹುದು.

—०—

ಪುಣೆಯ ಫರ್ಗ್ಯೂಸನ್ನ ಕಾಲೇಜಿನಲ್ಲಿ ಬ್ಯಾರಿಸ್ಟರ ಜಯಕರರ ಭಾಷಣವಾಯಿತು. ಅವರು ವಕೀಲನಾಗತಕ್ಕಂಥವನಲ್ಲಿ ನೆಲಸಿದ ಗುಣಗಳು ಅವಶ್ಯವಾಗಿದ್ದರೇ, ಅವನು ತನ್ನ ವ್ಯವಸಾಯದಲ್ಲಿ ಯಶ ಹೊಂದುವನೆಂದು ಹೇಳಿದ್ದಾರೆ.

೧ ಮುಖ್ಯವಾಗಿ ಸ್ಮರಣಶಕ್ತಿ ಮತ್ತು ಸಮಯಸೂಚಕತೆ ಇರಬೇಕು. ಇದು ಸ್ವಧನೆಯಿಂದ ಸಾಧಿಸುವಂಥ ವಿಷಯವು.

೨ ನ್ಯಾಯ ನಿರ್ಣಯವಾಗುವ ರೀತಿಯಿಂದಲೇ ಜಡ್ಜರಿಗೆ ಸಹಾಯ ಮಾಡತಕ್ಕದ್ದು. ಅನವಶ್ಯಕ ಮತ್ತು ಅಧಿಕ ಪ್ರಸಂಗವೆನಿಸುವ ಯಾವ ಸಂಗತಿಗಳನ್ನೂ ಹೇಳಿ, ತಮ್ಮ ಪಾಂಡಿತ್ಯ ಪ್ರದರ್ಶನ ಮಾಡಿಕೊಳ್ಳಲಿಕ್ಕಾಗದು.

೩ ವಿಚಾರಣೆಯ ಜವದಲ್ಲಿ ಸಿಟ್ಟಿಗೇಳುವದೂ, ವಾಗ್ವಾದಿಸುವದೂ ಕೆಟ್ಟದ್ದು. ಅಗ್ನಿ ತಾಳ್ಮೆಯುಳ್ಳವನಾದರೇ ಮೇಲು ಇಲ್ಲವಾದರೆ- ಕೆಲಸ ಕೆಡುವದು.

೪ ಸ್ತ್ರೀಯರೂ ವಕೀಲರಾಗಬಹುದು. ಅವರ ಯೋಗ್ಯತೆ ಹೆಚ್ಚುವದು. ಸ್ತ್ರೀಯರು ಮದುವೆ ಮಾಡಿಕೊಳ್ಳದೆ ವಕೀಲ ಅಥವಾ ಬೇರೆ ವ್ಯವಸಾಯ ಮಾಡಿದರೆ- ಅವರಿಗೆ ಅನೇಕ ಮಹತ್ವದ ಕೆಲಸಗಳನ್ನು ಮಾಡಲಿಕ್ಕೆ ಬಾರದುಂಟು. ಮದುವೆ ಮಾಡಿಕೊಂಡು ವಕೀಲಿ ಮಾಡುವವರಾದರೆ- ಚೇಂಬರ್ಸದಲ್ಲಿ ಕೆಲಸ ಮಾಡಬೇಕಾದೀತು. ದತ್ತಕ ಮುಂತಾದ ಹಿಂದೂ ಧರ್ಮಶಾಸ್ತ್ರದ ಪ್ರಕರಣಗಳಲ್ಲಿ ವಕಾಲತಿ ಹಿಡಿಯಬಹುದು.

ತಾರಿನ ವ್ಯವಹಾರ ಕಟ್ಟಾದ್ದರಿಂದ ಆಸ ಮದ್ರಾಸಿನಲ್ಲಿ ತಾರ ಆಫೀಸಿನಲ್ಲಿ ತಾರುಗಳ ರಾಶಿ ಬಿದ್ದಿತ್ತು. ಒಂದೊಂದು ದಿವಸ ೪೫೦೦ ತಾರುಗಳನ್ನು ಪರಸ್ಥಳಕ್ಕೆ ಕಳಿಸಿದರು. ಯೋಗ್ಯತೆಗೂಡಿ ಕೆಲಸ ಮಾಡಿದ್ದಕ್ಕಾಗಿ ತಾರಖಾತೆಯ ಡಾಯರೆಕ್ಟರರು ಇವರ ಅಭಿನಂದನ ಮಾಡಿದ್ದಾರೆ.

ಗಲ್ಲಿನ ಶೀಕ್ಷೆಯ ವಿರುದ್ಧ ಬಾಂಬು ಹಾರಿದವು.

ಜಗತ್ತೇ ಕಂಪಿಸಿದೆ.

ಅಮೇರಿಕೆಗೆ ಸೇರಿದ ಬೊಸ್ಟನ ಪಟ್ಟಣದಲ್ಲಿರುವ ಈರ್ವರು ಸೋಸಿಯಾಲಿಸ್ಟ ಪಂಥದ ಪ್ರಮುಖರಾದ ಸಕೊ ಮತ್ತು ವ್ಹೆಂಜಾಟಿ ಎಂಬವರ ಮೇಲೆ ಕೊಲೆಯ ಆರೋಪ ಬಂದು, ಸೆಶನ ಕೋರ್ಟಿನಲ್ಲಿ ವಿಚಾರಣೆಯು ಮುಗಿದು, ಜಡ್ಜರು ತೀರ್ಪು ಹೇಳುವಾಗ ಇವರು ನಿರಪರಾಧಿಯಾಗಿದ್ದಾರೆಂದು ಪುರಾವೆ ತಂದರು. ಜಡ್ಜರು ಈ ಪುರಾವೆ ತಕ್ಕೊಳ್ಳದೆ, ಇವರಿಗೆ ಗಲ್ಲಿನ ಶೀಕ್ಷೆ ವಿಧಿಸಿದರು. ಈ ಶೀಕ್ಷೆಯ ವಿರುದ್ಧ ಅಮೇರಿಕೆಯು ಮಾತ್ರವಲ್ಲ; [illegible]ಯು ಕೂಡ ಕಂಪಿಸಿ, ಇವರನ್ನು ಯಮದೂತರ ಕಯ್ಯಲ್ಲಿ ಕೊಡಬಾರದೆಂದು ಚಳವಳಿ ನಡೆದಿದೆ.

ಶಿಕ್ಷಾ [illegible] ಅಥವಾ ದರಬಾರದ ಪದ್ಧತಿಯ ಪ್ರಕಾರ ಅಧ್ಯಕ್ಷರಿಗೆ ಅಪೀಲು ಮಾಡಿಕೊಂಡದ್ದಲ್ಲದೆ, ತಮಗಿಂಥ ತ್ರಾಸವಾಗಿರುತ್ತದೆಂದು ತೋರಿಸುವದಕ್ಕಾಗಿ ಸೋಸಿಯಾಲಿಸ್ಟ ಪಂಥದವರು ರಾಕ್ಷಸೋಪಮ ಉಪಾಯಗಳನ್ನು ಕೈಕೊಂಡಿದ್ದಾರೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮೆರವಣಿಗೆ ತೆಗೆದು ಜಡ್ಜರ ಕೃತ್ಯವನ್ನು ನಿಷೇಧಿಸುತ್ತಿದ್ದಾರೆ. ಬಾಂಬು ಹಾರಿಸಿ ಜನರನ್ನು, ದೊಡ್ಡ ದೊಡ್ಡ ಕಟ್ಟಡಗಳನ್ನು ನಾಶ ಮಾಡುತ್ತಿದ್ದಾರೆ. ಫಿಲಡೆಲ್ಫಿಯಾದಲ್ಲಿ ಕ್ರಿಸ್ತರ ದೇವಾಲಯಗಳಲ್ಲಿಯೇ ಬಾಂಬು ಹಾರಿಸಿದರು. ಏಕೆಂದರೆ ಪಾದ್ರಿಯು ಸಕೊ ಮತ್ತು ವ್ಹೆಂಜಾಟಿಯು [illegible]ರಾಗಿದ್ದಾರೆಂದು ಆಡಿ ತೋರಿಸಿದ್ದನು. ಬಾಲ್ಟಿಮೋರದಲ್ಲಿ ಪಟ್ಟಣ ಕಟ್ಟೆಯ ಮೇಲೆ ಬಾಂಬು ಚಲ್ಲಿದರು. ಆತನು ಬೇಪಡ ಮೇಲೆ ಒಂದದ್ದು ಬಾಗಿಲ ನೋಡಿ ಹೋಯಿತೆನ್ನುವಂತೆ ಸಾಧಾರಣ ಘಾಯ ಹೊಂದಿ ಉತ್ತ, ದಾಟಿದನು. ಸಂಘಗಳಿಗಂತೂ ಸುಗ್ಗಿ ಎದ್ದಿದೆ. ಎರಡು ಉಗಿಬಂಡಿಗಳನ್ನು ಹಾರಿಸಬೇಕೆಂದು ಹಳಿಯ ಬುಡದಲ್ಲಿ ಬಾಂಬು ಹೂಳಿದ್ದರು. ಆದರೆ ಅದು ಬಂಡಿ ಬರುವ ಮುಂಚೆ ಹಾರಿ, ಎರಡೂ ಪಾರಾದವು.

ಇವೆಲ್ಲ ಅನಾಯಕಗಳನ್ನು ನೋಡಿ, ಸರಕಾರದವರು ಭದ್ರತೋಪಾಯಗಳನ್ನು ಕೈಕೊಂಡಿದ್ದಾರೆ. ಹೆಸರಾದ ಕಟ್ಟಡಗಳ ಸುತ್ತಲು ಪೋಲೀಸ ಮತ್ತು ದಂಡಿನ ಕಾವಲಿಟ್ಟು, ಅವನ್ನು ಸಂರಕ್ಷಿಸುತ್ತಿದ್ದಾರೆ. ಕೈದಿಗಳಿದ್ದ ತುರಂಗದ ಸುತ್ತಲೂ ವಿಶೇಷವಾದ ಬಂದೋಬಸ್ತು ಇಟ್ಟಿದ್ದಾರೆ. ಒಂದು ನ್ಯೂಯಾರ್ಕ ಪಟ್ಟಣದಲ್ಲಿ ೧೪೦೦೦ ಪೋಲೀಸರು ಹಗಲು ರಾತ್ರಿ ಎಂಬ ಪರಿವೆ ಇಲ್ಲದೆ ರೇಲ್ವೆ ಸ್ಟೇಶನ, ಟ್ರಾಮ, ಬ್ಯಾಂಕು, ವಿವಿಧ ವಸ್ತು ಸಂಗ್ರಹಾಲಯ ಮತ್ತು ಕೋರ್ಟು ಕಚೇರಿಗಳ ಸಂರಕ್ಷಣೆ ಮಾಡುತ್ತಿದ್ದಾರೆ. ಇದೊಂದೇ ಸಂಗತಿಯಿಂದ ಶೀಕ್ಷೆಯ ವಿರುದ್ಧ ಕೂಲಿಕಾರರು ಎಂಥ ಚಳವಳಿ ಹುಟ್ಟಿಸಿದ್ದಾರೆಂಬುದನ್ನು ಊಹಿಸಬಹುದು. ಇವರಿಗೆ ಹಿಂಬಲವಾಗಿ ವಿಲಾಯತಿಯ ಕೂಲಿಕಾರರೂ ಇವರು ಕೈಕೊಂಡ ಕೆಲಸದಲ್ಲಿ ಪೂರ್ಣ ಸಹಾನುಭೂತಿಯುಳ್ಳವರಾಗಿದ್ದಾರೆ.

ಪೇಶ್ವೆಯ ಎಡಿಟರನನ್ನು ಜೀವಂತ ಸುಡಬೇಕು.

ಶ್ರೀ ಶಿವಾಜಿ ಮಹಾರಾಜನು ಇರಾಣಿ ರಕ್ತದವನಾಗಿದ್ದಾನೆಂದು ಅತ್ಯಂತ ಹೀನೋಕ್ತಿಯನ್ನು ಬರೆದ ದಿಲ್ಲಿಯ ಪೇಶ್ವೆಯ ಪತ್ರದ ಮುಸಲಮಾನ ಸಂಪಾದಕನನ್ನು ದೂಷಿಸಿ, ಆತನ ದೆಸೆಯಿಂದ ಸರಕಾರವು ಯೋಗ್ಯ ಉಪಾಯ ಕೈಕೊಳ್ಳಬೇಕೆಂದು ಸೂಚಿಸುವದಕ್ಕಾಗಿ ಪುಣೆಯಲ್ಲಿ ಒಂದು ಸಭೆ ಕೂಡಿತ್ತು. ಬ್ರಾಹ್ಮಣ ಬ್ರಾಹ್ಮಣೇತರರೆಲ್ಲರೂ ಒಮ್ಮತಿಸಿಂದ ಸಭೆಗೆ ಬಂದಿದ್ದರು. ಸಭೆಯ ಕೆಲಸ ನಡೆದಾಗ ಒಬ್ಬನು ಎಡಿಟರನನ್ನು ಜೀವಂತ ಸುಡಬೇಕೆಂದು ಉದ್ಗಾರ ತೆಗೆದನು. !!

ಸುನ್ನಿ-ಶಿಯಾ ಕಲಹ-

ಮೆಸಾಪೊಟೆಮಿಯಾದ ಮಂತ್ರಿಮಂಡಲದಲ್ಲಿ ಶಿಯಾ ಮತ್ತು ಸುನ್ನೀ ಜನರಿದ್ದಾರೆ. ಅಲ್ಲಿಯ ಪ್ರಜರು ವಿಶೇಷವಾಗಿ ಸುನ್ನಿ ಪಂಥದವರಾಗಿ, ಅವರದೇ ಬಹುಮತವುಂಟು. ಈ ಬಗ್ಗೆ ಶಿಯಾ ಜನರಲ್ಲಿ ಅಸಂತೋಷ ಹುಟ್ಟಿದೆ. ಅವಿರ ಹೈಕ-ಸಾಹೇಬರು ಶಿಯಾ ಜನರನ್ನು ಸಮಾಧಾನಪಡಿಸುವದಕ್ಕಾಗಿ ಇಬ್ಬರು ಶಿಯ್ಯಾಗಳನ್ನು ಮಂಡಲದಲ್ಲಿ ನೇಮಿಸಿಕೊಂಡರು. ಆದರೂ ಇವರು ತೃಪ್ತರಾಗದೆ, ಬಹುಮತವುಳ್ಳ ಸುನ್ನಿಗಳ ಕೂಡ ಗೂರೆತನ ಮಾಡದೆ, ಅಸಹಕಾರ ಮಾಡಿದ್ದಾರೆ.

ರಾಯಲ ಕಮೀಶನ-

ಹಿಂದುಸ್ಥಾನಕ್ಕೆ ಬರುವ ರಾಯಲ ಕಮೀಶನದ ಮೆಂಬರರ ಹೆಸರು ಈಗ ಪ್ರಸಿದ್ಧವಾದರೂ ಅದು ಹಿಂದ ಸ್ಥಾನಕ್ಕೆ ಮುಂದಿನ ವರ್ಷದ ಚಳಿಗಾಲದಲ್ಲಿ ಬರುವದು. ಇದರ ಮೆಂಬರರು ೧೧ ಜನರಾಗಿ ಮೂವರು ಮಾತ್ರ ಹಿಂದೀ ಜನರು. ತಾವು ಈ ವಿಷಯವಾಗಿ ಮುಖ್ಯ ಪ್ರಧಾನ, ಭಾರತ ಮಂತ್ರಿ ಮೊದಲಾದವರ ಕೂಡ ಮಾಡಿದ ಭಾಷಣವನ್ನು ಹೇಳಲಿಕ್ಕಾಗುವದಿಲ್ಲೆಂದು ವಿಲಾಯತಿಯಿಂದ ಮರಳಿ ಬಂದ ಅಸೆಂಬ್ಲಿಯ ಅಧ್ಯಕ್ಷರಾದ ಶ್ರೀ ಪಟೇಲರು ಹೇಳುತ್ತಾರೆ.

ಜುಬಿಲಿಯ ಸುದ್ದಿಗಳು.

—:೦:—

ಸೋಮವಾರ ಎಂಟನೆಯ ತಾರೀಖಿನ ದಿವಸ ರಾಜಧಾನಿಯಲ್ಲಿ ಮೈಸೂರ ನಾಡಿನ ಸಮಸ್ತ ಪ್ರಜರ ವತಿಯಿಂದ ಶ್ರೀ ಮನ್ಮಹಾರಾಜರಿಗೆ ಮಾನಪತ್ರ ಕೊಡುವ ಸಮಾರಂಭವಾಯಿತು. ಸ್ಥಳ, ಪರಸ್ಥಳದ ೧೫೦೦ ಪ್ರತಿನಿಧಿಗಳೂ, ಅತಿಥಿ ಅಭ್ಯಾಗತರೂ ಬಂದಿದ್ದರು. ಇವರಲ್ಲಿ ಪಂಡಿತ ಮೋತಿಲಾಲ ನೆಹರು ಮತ್ತು ಶ್ರೀ. ದೇವದಾಸ ಗಾಂಧಿಯವರೂ ವಿಶೇಷವಾಗಿ ಜನರ ಆದರಕ್ಕೆ ಪಾತ್ರರಾಗಿದ್ದರು.

ಮಾನಪತ್ರ ಸ್ವೀಕರಿಸುವಾಗ ಮಹಾರಾಜರು ದರಬಾರದ ಉಡುಪು ಧರಿಸಿದ್ದರು. ದಿವಾನಬಹಾದ್ದೂರ ಸರ ಪುಟ್ಟಣಶೆಟ್ಟರು ಮಾನಪತ್ರ ಓದಿದರು. ಮಾನಪತ್ರವನ್ನು ಚಿನ್ನ ಬೆಳ್ಳಿಯಿಂದ ಮನೋಹರವಾಗಿ ಕುಸುರಿ ಕೆಲಸ ಮಾಡಿದಂಥ ಪೆಟ್ಟಿಗೆಯಲ್ಲಿ ಹಾಕಿ ಕೊಟ್ಟರು. ಸಮಾರಂಭ ಮುಗಿದ ಕೂಡಲೆ ೨೧ ಸಾರೆ ತೋಫಿನ ಗುಂಡು ಹಾರಿಸಲ್ಪಟ್ಟಿತು.

ಇದೇ ಸಮಯದಲ್ಲಿ ಸಂಸ್ಥಾನದ ಪ್ರತಿಯೊಂದು ಊರಲ್ಲಿ ಮೂರು [illegible] ಸಭೆಯಾಗಿ ದೇವತಾರಾಧನೆಯಾಯಿತು. ಶ್ರೀಮನ್ಮಹಾರಾಜರ ಸಂದೇಶ ಓದಲ್ಪಟ್ಟಿತು. ಮತ್ತು ಜುಬಿಲಿಯ ಸ್ಮರಣೆಯೆಂದು ೨೬ ಗಿಡಗಳು ನೆಡಲ್ಪಟ್ಟವು.

ಸಮಾರಂಭವಾಗುವ ಪೂರ್ವದಲ್ಲಿ ದಿವಾನರವರು ಪಂಡಿತ ಮೋತಿಲಾಲರನ್ನು ಕರಕೊಂಡು ಹೋಗಿ ಮಹಾರಾಜರ ಭೆಟ್ಟಿ ಮಾಡಿಸಿದರು.

ಶ್ರೀ ಮೊಸಕೊಪ್ಪದ ಕೃಷ್ಣರಾಯರು ಮಹಾರಾಜರಿಗೆ ಒಂದು ಪತ್ರ ಬರೆದು, ಪ್ರಜರಿಗೆ ಸಂಘಟನಾ ಯುಕ್ತವಾದ ಅಧಿಕಾರವನ್ನು ಒಪ್ಪಿಸಬೇಕೆಂಬ ವಿನಂತಿ ಮಾಡಿಕೊಂಡಿದ್ದಾರೆ.

ಜ್ಯುಬಿಲಿಯ ಜ್ಞಾಪಕಕ್ಕಾಗಿ ಕೆಲವು ಶೀಕ್ಷೆ ಹೊಂದಿದ ಕೈದಿಗಳನ್ನು ಬಂಧಮುಕ್ತ ಮಾಡಿದರು. ದೊಡ್ಡ ಶೀಕ್ಷೆಯಾದವರಿಗೆ ವರ್ಷಕ್ಕೆ ಒಂದು ತಿಂಗಳಂತೆ ಮಾಫೀ ಕೊಟ್ಟರು. ಐನೂರು ರೂಪಾಯಿಯೊಳಗಿದ್ದ ದಿವಾಣಿ ಕೈದಿಗಳ ಸಾಲ ಮುಟ್ಟಿಸಿ ಅವರನ್ನು ಮುಕ್ತ ಮಾಡಿದರು.

ನೋಟೀಸು

ವೈಜು ತಂದಿ ಮಹದು ಕಾಲಕುಂದ್ರಿಕರ ಸಾ|| ಆತವಾಡ ಹಾಲಿವಸ್ತಿ ಹೊಸೂರ ಬಸವಣ್ಣನ ಗಲ್ಲಿ ಬೆಳಗಾವಿ ಇವರಿಗೆ-

ಕೆಳಗೆ ಹೆಬ್ಬೆಟ್ಟಿನ ಗುರ್ತು ಮಾಡುವ ರಾಣವ್ವಾ ಕೋಂ ವೈಜು ಕಾಲಕುಂದ್ರಿಯವರ ಹಾಲಿವಸ್ತಿ ಧಾರವಾಡ ಇವಳು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಲಗ್ನದ ಗಂಡನಿದ್ದು ನನ್ನನ್ನು ಕೆಟ್ಟ ರೀತಿಯಿಂದ ನಡಿಸಿಕೊಂಡು ಬಹಳೇ ತ್ರಾಸ ಕೊಟ್ಟಿ ನೀನು ನನ್ನ ಸಂಗಡ ನೆಟ್ಟಗೆ ಇರಬೇಕೆಂದು ನನ್ನ ತಾಯಿ ದುಡಿದು ಗಳಿಸಿದ್ದ ೧೫೦ ರೂಪಾಯಿಗಳನ್ನು ನಿನಗೆ ಕೊಟ್ಟು ಎತ್ತು ಒಂದಿ ಮಾಡಿಕೊಟ್ಟು ನಿನಗೆ ಬಾಳುವೆಗೆ ಹಚ್ಚಿದಳು ಕೆಲವು ದಿವಸ ನನ್ನ ಕೂಡ ನೆಟ್ಟಗೆ ಇಟ್ಟುಕೊಂಡೆ, ಪುನಃ ದುಷ್ಟತನದಿಂದ ನನ್ನನ್ನು ನಡಿಸಿಕೊಂಡಿ ನಿನ್ನ ಬಾಬಾಜಿ ದುಷ್ಟತನದಿಂದ ನನ್ನನ್ನು ಪರಪರಿ ಪೀಡಿಸಿ, ಮೈಮೇಲಿನ ದಾಗೀನೆ ಕಸಕೊಂಡು ಹೊರಗೆ ಹಾಕಿದಿ ಆ ಮಾತಿಗೆ ಆರು ತಿಂಗಳಾಯಿತು ನೀನು ಈ ಪರ್ಯಂತರ ಒಂದು ನನ್ನನ್ನು ಕರಕೊಂಡು ಹೋಗಲಿಲ್ಲ ನನ್ನ ತಾಯಿಯು ಕೊಟ್ಟ ೧೫೦ ರೂಪಾಯಿಗಳನ್ನು ಕೊಡಲಿಲ್ಲ ತಾಯಿಯು ತನ್ನ ಹತ್ತರಿದ್ದ ಎಲ್ಲ ಗಂಟನ್ನು ನಿನಗೇ ಕೊಟ್ಟದ್ದರಿಂದ ಆಕೆಗೆ ನನ್ನನ್ನು ಹಿಡಿಯುವದಾಗಲಿಲ್ಲ ಆದ್ದರಿಂದ ನಾನು ಸಾವಕಾರರಲ್ಲಿ ಸಾಲಾ ಮಾಡಿ ಹೊಟ್ಟೆ ತುಂಬಿಕೊಳ್ಳುತ್ತ ಇದ್ದೇನೆ ಆ ರಕಮು ಈಗ ೭೫ ರೂಪಾಯಿ ಆಗಿದೆ ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನಗಾದ ಸಾಲಾ, ಮತ್ತು ನನ್ನ ತಾಯಿಯ ಸಾಲ ತೀರಿಸಿ, ನನ್ನ ದಾಗೀನೆ ನನಗೆ ಪರತ ಕೊಟ್ಟು ನನ್ನನ್ನು ಕರಕೊಂಡು ಹೋಗಿ ನಿನ್ನ ಬಾಬಾಜಿ ದುಷ್ಟ ಸೋಬತಿ ವಗೈರೆ ಬಿಟ್ಟು ಸುರಳಿತ ರೀತಿಯಿಂದ ಬಾಳುವೆ ಮಾಡಬೇಕು ಇದರ ಹಾಗೆ ತಪ್ಪಿದರೆ- ನಾನು ಎರಡನೆಯವನನ್ನು ಉಡಿಕೆ ಮಾಡಿಕೊಳ್ಳುವೆನು ಅನಂತರ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಿಕೆ ಗಂಡನ ಮೇಲೆ ಬಿಲಕೂಲ ನಡೆಯಲಾರದು ಮತ್ತು ಈಗ ನಿನ್ನ ದೆಸೆಯಿಂದಾದ ಸಾಲ, ತಾಯಿಯ ಸಾಲ ಮತ್ತು ದಾಗೀನೆಗಳ ಬಾಬತು ನಿನ್ನ ಮೇಲೆ ಕಾಯದೆ ಪ್ರಕಾರ ಇಲಾಜ ಮಾಡುವೆನು ಆ ಬಾ|| ಆಗುವ ಯಾವತ್ತು ಖರ್ಚಿನ ಬೋಜಾ ನಿನ್ನ ಮೇಲುಂಟು ಈ ನೋಟೀಸಿನ ಖರ್ಚು ಸಹ ನಿನ್ನ ತಲೆಯ ಮೇಲೆ ಬೀಳುವದು ಅಂತಾ ಕೊಟ್ಟ ನೋಟಪತ್ರದ ನೋಟೀಸು

ತಾ|| ೧೦ ಆಗಸ್ಟ ೧೯೨೭ ನೆಯ ಇಸವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತು ರಾಣವ್ವಾ ಕೋಂ ವೈಜು ಕಾಲಕುಂದ್ರಿಯವರ ಇವರ ಕೈದು ಇರುತ್ತದೆ.

ಶ್ರೀ ಮಾಣಿಕಪ್ರಭು ಪ್ರಾಸಾದಿಕ

ಗಾಯನ ವಾದನ ವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಗಾಯನ, ಹಾರ್ಮೋನಿಯಮ್, ತಬಲಾ, ಸತಾರ ವಗೈರೆ ಶಾಸ್ತ್ರ ರೀತಿಯಿಂದ ಕಲಿಸಲ್ಪಡುವದು.

ಈ ವಿದ್ಯಾಲಯವು ಕೇವಲ ಸಂಗೀತ ಪ್ರೀತಿಯ ಸಲುವಾಗಿ ನಡೆಸಲ್ಪಡುವದು. [illegible] ಸಂಗೀತ ಪ್ರೇಮಿಗಳು ಈ ವಿದ್ಯಾಲಯದ ಲಾಭವನ್ನು ಪಡೆದು ಕೊಳ್ಳಬೇಕು. ವಿಶೇಷ ಮಾಹಿತಿಯ ಸಲುವಾಗಿ ಸಮಕ್ಷಮ ಭೆಟ್ಟಿಯಾಗಬೇಕು.

ಪತ್ತೆ, [illegible]
[illegible] ಸ್ಟೇಶನ ಹತ್ತರ [illegible], ಧಾರವಾಡ.

ತಮ್ಮ, [illegible]
ಲಕ್ಷ್ಮಣಸಿಂಗ [illegible],
[illegible]ಪೂರ.

ನೋಟೀಸು

—೦—

ರಾ|| ರಾ|| ಗಿರಿ ಕೋಂ ರಾಮಪ್ಪಾ ವ್ಯಾಪಾರ ಸಾ|| ನೀಲಗುಂದ ಇರೋದು ಹಾಳಕೇರಿ ತಾಲ್ಕು ರೋಣ (ಮಾಜಿ ಪೋಲೀಸ ಪೆಟ್ಟೆಗಾರರ ಮನಿಯಲ್ಲಿ) ಇವರಿಗೆ—

ಕೆಳಗೆ ಸಹಿ ಮಾಡಿದವನಿಂದ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಹೆಂಡತಿ ಇದ್ದು ಹಾಳಕೇರಿಗೆ ಹೋಗಿ ಬರತೇನಂತಾ ಹೇಳಿ ಭಂಗಾರದ ಬಳಿಯರಡು ವ ಯರಡು ಬೆಳ್ಳಿ ತೋಳಬಂದಿ ಬೆಳ್ಳಿ ನಡುವಿನ ಪಟ್ಟಿ ವಂದು ಭಂಗಾರದ ಬೆಂಡವಲಿ ಜೋಡು ವಂದು ಈ ಪ್ರಕಾರ ಮಾಲು ಮೈಮೇಲೆ ಇಟ್ಟುಕೊಂಡು ಹೋದಾಕಿ ಇವರೆಗೂ ಬರಲಿಲ್ಲಾ ನಾನು ಮುದ್ದಾಂ ಬಂದರೂ ಜನರ ಸಂಗಡ ಹೇಳಿ ಕಳಿಸಿದರೂ ದಾದ ಮಾಡದೆ ಬರಲಿಲ್ಲಾ ಇದರಿಂದ ನನ್ನ ನಿನ್ನ ವೈಮನಸ್ಸುಂಟಾಗಿ ತಿರಾಯತರ ಮಾರಿಫತ ದಾಗೀನೆ ವ ಲಗ್ನದ ಖರ್ಚು ಕೊಟ್ಟ ಸೋಡಚೀಟಿ ಕೊಡತೇನಂತಾ ಹೇಳಿ ಇವರಿಗೂ ಯಾವ ವ್ಯವಸ್ಥೆಯೂ ಮಾಡಲಿಲ್ಲ ಕಾರಣ ನೋಟೀಸು ಮುಟ್ಟಿದ ೧೫ ದಿವಸದಲ್ಲಿ ದಾಗೀನೆ ವ ಲಗ್ನದ ಖರ್ಚು ಕೊಟ್ಟು ಪಾವತಿ ಪಡಿಬೇಕು ಕಾಯದೆಶೀರ ಸೋಡಚೀಟಿ ಕೊಟ್ಟು ಹೋಗಬೇಕು ಇಲ್ಲದಿದ್ದರೆ ರೀತಿಪ್ರಕಾರ ಇಲಾಜ ಮಾಡಲಾದೀತು ಈ ನೋಟೀಸು ವಗೈರೆ ಖರ್ಚು ನಿನ್ನ ಮೇಲೆ ತಿಳಿಯೋದು

ತಾ|| ೬—೮—೧೯೨೭ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತು ರಾಮಪ್ಪಾ ಬಿನ್ನ ಹನಮಪ್ಪಾ ಪೂಜಾರ ಸಾಕೀನ ನೀಲಗುಂದ ತಾಲ್ಕು ಬದಾಮಿ ಇವನದು ಅದೆ.

ಜಾಹೀರ ನೋಟೀಸು

ಹಾನಗಲ್ಲ ತಾಲೂಕ ಇನಾಮಗ್ರಾಮ ಅಲದಕಟ್ಟಿಯಲ್ಲಿರುವ ಮಲ್ಲಪ್ಪಾ ತಂದಿ ಮ. ಗಣಪ್ಪಾ ಕುರಬರ ಇವರಿಗೆ—

ಯಲ್ಲವ್ವಾ ಕೋಂ ಮಲ್ಲಪ್ಪಾ ಕುರುಬರ ಸಾಕೀನ ಇನಾಮಗ್ರಾಮ ಅಲದಕಟ್ಟಿ ತಾಲೂಕ ಹಾನಗಲ್ಲ ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ ಈಗ ಅಜಮಾಸ ವರ್ಷ ದೀಢ ವರ್ಷದಿಂದ ನಮ್ಮ ನಮ್ಮೊಳಗೆ ಮನೆತನದ ಕೆಲವು ವಿಷಯಗಳ ಬಗ್ಗೆ ವೈಮನಸ್ಸು ಆಗಿ ಒಬ್ಬರಿಗೊಬ್ಬರಿಗೆ ನೇರಿಕೆ ಇಲ್ಲದೆ ಈಗ ಅಜಮಾಸು ಹತ್ತು ಹನ್ನೊಂದು ತಿಂಗಳ ಹಾಗಾಯಿತ ನಾನು ನನ್ನ ಹೊಟ್ಟೆಕ್ಕೆ ಬೇರೆ ಇದ್ದು ಉಪಜೀವನ ಮಾಡತೇನೆ ನೀನು ನನ್ನ ಮೇಲೆ ಅಪವಾದಗಳನ್ನು ಹೊರಿಸಿದ್ದರಿಂದ ನಾನು ಮನೆ ಬಿಟ್ಟು ಬರಬೇಕಾಯಿತು. ಇನ್ನು ಮುಂದೆ ನನಗೂ ನಿಮಗೂ ಕೂಡುವಂತೆ ಇಲ್ಲ ಆದ್ದರಿಂದ ಇದೆ ಪಾರಿಕತ್ತ ಅಂತಾ ತಿಳಿದು ನಿಮ್ಮ ಮೇಲೆ ಇದ್ದ ನನ್ನ ಲಗ್ನದ ಸಂಬಂಧ ಯಾವತ್ತು ಹಕ್ಕು ಬಿಟ್ಟುಕೊಟ್ಟಿದ್ದೇನೆ ನಿಮ್ಮ ಮೇಲೆ ನನ್ನದು ಯಾವತರದ ಹಕ್ಕು ಇಲ್ಲಾ ನನ್ನ ಮರ್ಜಿ ಬಂದಂತೆ ಮುಂದಿನ ವ್ಯವಸ್ಥೆ ಮಾಡುತ್ತೇನೆ ಅಂತಾ ಈ ನೋಟೀಸಿನಿ ದ ಜಾಹೀರ ಮಾಡಿಯತ್ತೆನೆ

ತಾ|| ೪-೮-೧೯೨೭ ಇಸ್ವಿ

ಎಡಗೈ ಹೆಬ್ಬೆಟ್ಟಿನ ಗುರ್ತು ಯಲ್ಲವ್ವಾ ಕೋಂ ಮಲ್ಲಪ್ಪಾ ಕುರುಬರ ಇಕಿ ಮಾಡಿದ್ದು ಅದು.

ಈ ಪತ್ರವನ್ನು ಆನ್ಯಾಚಾರ್ಯ ಮುಳಗಾಚಾರ್ಯ ಜೋಶಿ ಇವರು ಧಾರವಾಡದಲ್ಲಿಯ ತಮ್ಮ [illegible] ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು. [illegible]

R. N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೪। ಧಾರವಾಡ ಶುಕ್ರವಾರ ತಾರೀಖು ೧೨ನೇ ಆಗಸ್ಟ ೧೯೨೨ ।ಸಂಚಿಕೆ ೧೭೩

ಕಿರ್ಲೋಸ್ಕರ ಶೇಂಗಾ [ಭೈಮೂಗು] ಒಡೆಯುವ ಯಂತ್ರಗಳು

ಈ ಯಂತ್ರಗಳು ಎರಡು ಮಾದರಿಯವು ನಮ್ಮ ಮಾದರಿಯವು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಅಗ್ಗವಾದವು. ಪ್ಪೊಟ್ಟು ಕಬ್ಬಿಣದ್ದು. ಹೊಟ್ಟನ್ನು ಗುಡಿಸಲು ಯಂತ್ರದಲ್ಲಿ ಬೀಸಣಿಕೆಯನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳ ಕಳೆದ ಹಂಗಾಮುದಲ್ಲಿ ಬಹು ಪ್ರಚಾರಗಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಯಣ್ಣಿ ಮಾಡತಕ್ಕವರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಜಾಹೀರ ನೋಟೀಸು

—o—

ಯಲ್ಲಿ ಕೋಂ ಮಲ್ಲಪ್ಪಾ ಕುರಬರ ಸಾ॥ ಕೀನ ಇನಾಮಗ್ರಾಮ ಅಲದಕಟ್ಟಿ ತಾಲೂಕ ಹಾನಗಲ್ಲ ಇವಳಿಗೆ—

ಮಲ್ಲಪ್ಪಾ ತಂದಿ ದುಂಡಪ್ಪಾ ಕುರಬರ ಸಾಕೀನ ಅಲದಕಟ್ಟಿ ತಾಲೂಕ ಹಾನಗಲ್ಲ ನಾನು ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ—

ನೀನು ನನ್ನ ಲಗ್ನದ ಹೆಂಡತಿ ಇದ್ದು ಈಗ ಅಜಮಾಸ ವರ್ಷ ದೀಡವರ್ಷದ ಹಿಂದೆ ಕೆಟ್ಟ ಜನರ ದುರ್ಬೋಧದಿಂದ ನಿನ್ನ ಮನಸ್ಸಿಗೆ ಬಂದಂತೆ ನಡೆದದ್ದರಿಂದ ನನ್ನ ನಿನ್ನೊಳಗೆ ವೈಮನಸ್ಸು ಆಗಿ ಈಗ ಹತ್ತು ತಿಂಗಳ ಆಗಿಹೋಯಿತು. ನನ್ನಲ್ಲಿ ಇರದೆ ನೀನು ಸ್ವತಂತ್ರ ರೀತಿಯಿಂದ ನಿನ್ನ ಮನಸ್ಸಿಗೆ ಬಂದಂತೆ ಇರುತ್ತಿ ಆದ್ದರಿಂದ ನಿನ್ನ ಮೇಲೆ ಲಗ್ನದ ಸಂಬಂಧಿ ಇರತಕ್ಕ ಯಾವತ್ತು ಹಕ್ಕು ನನ್ನ ಸಂತೋಷದಿಂದ ಬಿಟ್ಟುಕೊಟ್ಟಿರುತ್ತೇನೆ. ನಿನ್ನ ಮರಜಿ ಬಂದ ಪ್ರಕಾರ ನೀನು ಮಾಡಿಕೊಳ್ಳಬಹುದು ಇನ್ನು ನಿನ್ನ ಮೇಲೆ ನನ್ನದು ಯಾವ ತರದ್ದು ಹಕ್ಕು ಇಲ್ಲಾ ಅಂತಾ ನನ್ನ ಸಂತೋಷದಿಂದ ಬರಕೊಟ್ಟ ನೋಟೀಸು

ತಾ॥ ೪—೮—೧೯೨೨ ಇಸ್ವಿ

ಈ ಎಸಗ್ಯೆ ಹೆಬ್ಬಟ್ಟಿನ ಗುರ್ತಾ ಮಲ್ಲಪ್ಪಾ ತಂದಿ ದುಂಡಪ್ಪಾ ಕುರಬರ ಸಾಕೀನ ಇನಾಮಗ್ರಾಮ ಅಲದಕಟ್ಟಿ ಈತನು ಮಾಡಿದ್ದು ಅದೆ.

———

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೮—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	[illegible]—೧೪—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—o—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಶೇರು ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ನಡಿಸಲ್ಪಡುವವು. ಕಾಯಂ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ಕೊಡಲ್ಪಡುವದು.

ವಿಶೇಷ ಸಂಗತಿ ತಮ್ಮ ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವಿಷ್ಣು ರಾವ ಬಿ. ಜತಾತಿ,
ಮ್ಯಾನೇಜಿಂಗ ಡೈರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಎನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

ಆಗಸ್ಟ ೨೦-ರಲ್ಲಿ ಹೊಸ ವರ್ಷ ಆರಂಭವಾಗುವ ನಿಮಿತ್ತ, ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. [illegible] ಕಳಿಸುವೆವು. ಚಂದಾದಾರರು ವ್ಹಿ. ಪಿ. [illegible] ಮಾಡಿ ವಿಜಯವನ್ನು [illegible] [illegible]

...ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೧೨-೮-೨೭ ನೇ ಇಸ್ವಿ

ಧಾರವಾಡದ ನಳದ ವಿಚಾರ.

ಹೆಬ್ಬೊಟ್ಟಿನ ಗುರ್ತಿನವರ ಹಾಗು ಹೆಬ್ಬೆಟ್ಟಿಗೆ ಓದಿದವರ ಅರ್ಜಿಯು.

ಧಾರವಾಡಕ್ಕೆ ನಳವೇ ಬೇಡೆಂಬ ಚಳವಳಿಯನ್ನು ಒಂದು ತಿಂಗಳ ಹಿಂದೆ ಎಬ್ಬಿಸಿದಂಥವರು ನಳವಾಗಲಿ; ಒಡವರ ಮೇಲೆ ಬಹಳ ಭಾರಬೀಳಬಾರದೆಂದು ಸ್ವಸಂತೋಷದಿಂದ ಕಳುಹಿ ಹೋದ ವಾರದಲ್ಲಿ ಕೊಟ್ಟರು ಇದರಲ್ಲಿ ಕೆಲವರು ಇನ್ನೊಂದು ಕಿಡಿಗೇಡಿತನ ಪ್ರಾರಂಭಿಸಿದ್ದಾರೆ. ಕೆಲಗೆರೆಯ ಕೆರೆಗೆ ಈಗ ಬಂದಷ್ಟು ನೀರನ್ನು ಕಾದಿಡಿರಿ; ಬೇಸಿಗೆಯಲ್ಲಿ ಈ ನೀರನ್ನು ಊರೊಳಗೆ ಬಿಡಿರೆಂದು ಮ್ಯುನಿಸಿಪಾಲಿಟಿಗೆ ಅರ್ಜಿಯನ್ನು ಮಾಡಬೇಕೆಂದಿದ್ದಾರೆ. ಈ ಅರ್ಜಿಯ ಮೇಲೆ ಸುಮಾರು ನೂರು ಜನರ ಸಹಿಗಳಾಗಿವೆ ಹೆಚ್ಚು ಜನರು ಸಹೀ ಮಾಡಬಹುದು. ಇದರಲ್ಲಿ ಆದರೆ ಗುಂಚಿಯ ದೊಡ್ಡಪ್ಪನ ಹಣೆಯ ಮೇಲಿನ ಗಂಧದಷ್ಟು ದೊಡ್ಡವಾದ ಹೆಬ್ಬೆಟ್ಟಿನ ಗುರ್ತುಗಳೂ, ಹೆಬ್ಬೆಟ್ಟಿಗೆಯನ್ನೋದಿದಂಥವರ ಚಿನಗು ಸಹಿಗಳೂ ಉಂಟು. ಮಳೆಗಾಲದಲ್ಲಿ ಹೇಗಾದರೂ ನೀರು ಸಿಗುವದು. ಬೇಸಿಗೆಯಲ್ಲಿ ಸಿಗಲಾರದು. ಆದ್ದರಿಂದ ಈಗ ನೀರು ಬಿಡಬಾರದೆಂದು ಇವರ ಸದ್ವಿಚಾರವುಂಟು.

ಮಳೆಗಾಲ ಅರ್ಧಗಳಿದದೆ. ಮುಖ್ಯ ಪಂಚಾಂಗದ ದೊಡ್ಡ ಮಳೆಗಳು ಮುಂದಿವೆ. ಇವುಗಳಿಂದ ವಿಪುಲ ನೀರು ಬರುವ ನಂಬಿಗೆಯುಂಟು. ಈಗಿನ ನೀರು ಕನಿಷ್ಠ ಎರಡು ತಿಂಗಳಾಗುವದು. ಮುಂದೆ ಆರೇಳು ತಿಂಗಳ ನೀರು ಬರದೇ ಬರುವದೆಂಬ ಭಯಪಡುವಂಥ ಮ್ಯುನಿಸಿಪಾಲಿಟಿಯವರು ಬರುವ ಹೋಳಿಹುಣ್ಣಿಮೆಯವರೆಗೆ ನಳ ಬಿಡಬೇಕೆಂಬ ಸಲ್ಲಯು ಮಾಡಿದ್ದಾರೆ. ಇವರಿಗೆ ನಳಗಳಲ್ಲಿ ಕಟಾಕ್ಷ [illegible] ತ್ರಿ [illegible] ಎಲ್ಲೆಲ್ಲಿ ದಾರಿ [illegible] ಬೇಕಾಗುತ್ತದೆಂಬುದನ್ನು ಕಂಡು [illegible] ಗಿ ಎರಡು ಬಾರಿ ನೀರು ಬಿಟ್ಟಿದ್ದಾರೆ. ಮಳೆಗಾಲದಲ್ಲಿ ಹೇಗಾದರೂ ನೀರು ಸಿಗು [illegible] ಅದೇ ನೀರು [illegible] ಸಿಗುವಂಥವರಿಗೆ ಎಷ್ಟು ಕಷ್ಟವಾಗುತ್ತದೆಂಬುದನ್ನು ಹೆಬ್ಬೆಟ್ಟಿನವರಿಗಿಂತ ಹೆಬ್ಬೆಟ್ಟಿಗೆ ಹೊತ್ತವರು ವಿಚಾರ ಮಾಡಬೇಕಾಗಿತ್ತು. ಬೀದಿಗಳಲ್ಲಿ ರಮುರಾಡಿ, ಜಾರಿಕೊಂಡು ಬಿದ್ದು ಮೈ ತುಂಬ ಪೆಟ್ಟು ಹಚ್ಚಿಕೊಳ್ಳುವಂಥ ಅವಸ್ಥೆ, ತಲೆಯ ಮೇಲೆ ಮಳೆ, ತೊಯಿಸಿಕೊಂಡು ಒದ್ದೆಯಾಗಿ ನಡುಗುವದು, ಅದಕ್ಕೆ ವಿಷಮವಾಗಿ ಭೋರ್ಗರೆಟ್ಟುವ ವಿಷಗಾಳಿಯು ಇಂಥ ದುಷ್ಟ ಹವೆ ಮತ್ತು ಸ್ಥಿತಿಯಲ್ಲಿ ಪಡುವ ಪಡಿಪಾಟ್ಲ ತಪ್ಪುವದನ್ನು ಶ್ಲಾಘನೆ ಮಾಡದೆ, ಅದಕ್ಕೆ ಹೆಸರಿಡುವದು ಯಾವ ಬುದ್ಧಿವಂತಿಕೆಯ ಲಕ್ಷಣವು?

ಬೇಸಿಗೆಯಲ್ಲಿ ಅರಬು ಬೀಳದಷ್ಟು ಹಳೇ ಕೆರೆಗಳಲ್ಲಿಯೂ ಬಾವಿಗಳಲ್ಲಿಯೂ ನೀರುಂಟು. ಆಗ ರಾತ್ರಿ ಮತ್ತು ನಸುಕು ಮನೋಲ್ಲಾಸವಾಗಿರುವದರಿಂದ ಜನರು ಆನಂದದಿಂದ ಕೆರೆಬಾವಿಗಳಿಗೆ ಹೋಗುವರು. ಮಳೆಗಾಲ ಮತ್ತು ಬೇಸಿಗೆಗಾಲದಲ್ಲಿ ಇಷ್ಟು ಅಂತರವಿರುತ್ತದೆಂಬುದು ಅರ್ಜಿಯ ಮೇಲೆ ಸಹೀ ಮಾಡಿದವರಿಗೆ ತಿಳಿಸಿ ಹೇಳಿದರೆ ಅನೇಕರು ತಮ್ಮ ಸಹಿಗಳನ್ನು ಹಿಂದಕ್ಕೆ ತಕ್ಕೊಳ್ಳುವರೆಂದು ಹೇಳಬಹುದಾಗಿರುತ್ತದೆ.

ಮುಂಬಯಿ ಪುಣೆಯು ಮಳೆಯಿಂದ ಮುಣುಗುವವಂತೆ !!

ಜನರು ಎದೆಯೊಡೆಕೊಂಡಿದ್ದಾರೆ

— ೧ —

ಅಹಮುದಾಬಾದ, ಒಡೋದೆ, ಸೂರತಾದ ಪಟ್ಟಣಗಳ ಮೇಲೆ ಅಸ್ಮಾನಿ ಕೆಶ್ವೇಭಿಯಾಗಿ ಅನರ್ಥವಾಗುವದೆಂದು ಭವಿಷ್ಯ ಹೇಳಿದ ಜೋಯಿಸನೇ ಮುಂಬಯಿ ಪುಣೆಯ ಮೇಲೂ ಈ ವಾರದಲ್ಲಿ ಮಹಾಪ್ರಳಯ ಕೋಪವಾಗುವದೆಂದು ಪಂಚಾಂಗ ಹೇಳಿದ್ದಾನೆ. ಈ ವರ್ತಮಾನ ಕೇಳಿ, ಎರಡೂ ಪಟ್ಟಣಗಳ ಜನರು ಹೌಹಾರಿದ್ದಾರೆ. ಅತಿವೃಷ್ಟಿಯಿಂದ ಮುಳಗಿ ಕೆರೆಯು ಒಡ್ಡು ಒಡೆಯುವದೆಂದೂ ಊಹಿಸಿದ್ದಾನೆ. ಇದು ಕೆರೆಯಲ್ಲ. ದೊಡ್ಡ ಸರೋವರವೇ ಆಗಿದೆ. ಇದು ಒಡೆದರೆ ಒಡೋದೆಯಂತೆ ಅನೇಕ ಗ್ರಾಮಗಳು ತೇಲಿ ಹೋಗುವವು. ಮುಂಬಯಿಯಂಥ ಐಶ್ವರ್ಯದ ಪಟ್ಟಣ ಅಂತಸ್ತಿನ ಮನೆಗಳ ಮೇಲೆ ಸಂತತ ಧಾರೆಯಾಗಿ ಮಳೆ ಸುರಿದರೆ ಜನಪ್ರಳಯವಾಗಿ, ಅರ್ಥ ಹಾನಿಯಾಗುವದು ಸಹಜವಿದೆ. ಆದುದರಿಂದ ಜನರು ತಮ್ಮ ಜೀವದ ಬಗ್ಗೆ ಮತ್ತು ಬಂಡಿಗೆಯನ್ನು ಎಲ್ಲಿ ಸಂರಕ್ಷಿತವಾಗಿಡಬೇಕೆಂಬ ಬಗ್ಗೆ ಚಿಂತಾಗ್ರಸ್ತರಾಗಿದ್ದಾರೆ ಅಲ್ಲಿ ಮನೆ ಎಂದರೇ ಘೋಟವು ಮನೆ ಮಾ ಬಿದ್ದರೆ ಮುಂದೇನು ಗತಿಯೆಂದು ತಿಂಗಳಿನಷ್ಟಿನ ಮುಷ್ಟಿಗೆ ಮನೆಗಳ ವಿಮೆ ಇಳಿಸುತ್ತಿದ್ದಾರೆ.

ಸಾದರ ಮತ್ತು ಪಂಚಾಚಾರ್ಯರ ಕಲಹ.

— ೦ —

ಬಳ್ಳಾರಿ ಜಿಲ್ಹೆಗೆ ಸೇರಿದ ಉಚ್ಚಂಗಿ ಗ್ರಾಮದಲ್ಲಿ ಸಾದರಿಗೂ ಪಂಚಾಚಾರ್ಯರಿಗೂ ಮೆರವಣಿಗೆಯ ದೆಸೆಯಿಂದ ಜಗಳ ಬಂದು ದಂಗೆಯಾಯಿತು ಪೋಲೀಸರು ದಂಗೆಗಾರರೆಂದು ೧೧೬ ಜನರನ್ನು ಹಿಡಿದಿದ್ದರು. ಸೆಶನ ಕೋರ್ಟಿನಲ್ಲಿ ೩೨ ಜನರಿಗೆ ಶಿಕ್ಷೆಯಾಗಿ, ಉಳಿದವರು ಬಂಧಮುಕ್ತರಾದರು. ಶಿಕ್ಷೆಯಾದವರು ಮದ್ರಾಸದ ಹಾಯಕೋರ್ಟಿಗೆ ಅಪೀಲು ಮಾಡಿದ್ದರು. ಅಪೀಲು ನಾಮಂಜೂರಾಗಿ ಶಿಕ್ಷೆ ಕಾಯಮವಾಯಿತು.

ಶ್ರೀ. ಸಾಂಬಮೂರ್ತಿಯ ಸತ್ಯಾಗ್ರಹ ಮತ್ತು ಕಾಯದೆಭಂಗ

— ೦ —

ಆಂಧ್ರ ದೇಶದ ಪ್ರಸಿದ್ಧ ಅಸಹಕಾರಿ ಮತ್ತು ಅಖಿಲ ಇಂಡಿಯಾ ಕಾಂಗ್ರೆಸ ಕಮೀಟಿಯ ಮೆಂಬರರಾದ ಶ್ರೀ. ಸಾಂಬಮೂರ್ತಿಯವರು ೫೦ ಜನ ಸ್ವಯಂಸೇವಕರೊಂದಿಗೆ ನಾಗಪೂರದಲ್ಲಿ ಶಸ್ತ್ರದ ಕಟ್ಟಳೆ ಮುರಿದ ಕಾಯದೆಭಂಗ ಮಾಡಿದರು. ಮೂರ್ತಿಯವರೊಡನೆ ಪ್ರತಿಯೊಬ್ಬನು ಬಿಚ್ಚು ಮತ್ತು ಕೃಪಾಣ ಕಠಾರಿ, ಬರ್ಚಿಗಳನ್ನು ಹಿಡಕೊಂಡು ಮೆರವಣಿಗೆ ತೆಗೆದರು. ಸಾವಿರಾರು ಜನರು ಇವರನ್ನು ಹಿಂಬಾಲಿಸಿದ್ದರು. ಮೆರವಣಿಗೆಯು ನಿರ್ವಿಘ್ನವಾಗಿ ತನ್ನ ಸ್ಥಳಕ್ಕೆ ಬಂತು. ಪೋಲೀಸರು ಇದನ್ನು ತಡವಲಿಲ್ಲ. ಯಾರನ್ನೂ ದಸ್ತಗಿರ ಮಾಡಲಿಲ್ಲ.

ಲಂಡನದಲ್ಲಿ ಬಹಿಷ್ಕಾರ ಹಾರಿತು.

ಸಕೂ ಮತ್ತು ವ್ಹಂಜಾಟಿಯನ್ನು ಗಲ್ಲಿಗೆ ಹಾಕಬಾರದೆಂದು ಅಮೇರಿಕೆ ಮತ್ತು ವಿಲಾಯತಿಯಲ್ಲಿನ ಚಳವಳಿಯು ದಿನದಿನಕ್ಕೆ ಭಯಂಕರವಾಗುತ್ತಿರುವದು. ಅಮೇರಿಕೆಯ ಕೆಲವು ತಂಬ ಕೂಲಿಕಾರರು ಒಂದು ದಿವಸ ಹರತಾಳ ಮಾಡಬೇಕೆಂದಿದ್ದಾರೆ. ನ್ಯೂಯಾರ್ಕ ಪಟ್ಟಣದಲ್ಲಿಯೇ ಐದು ಲಕ್ಷ ಕೂಲಿಕಾರರಿದ್ದಾರೆ.

ಅಮೇರಿಕೆಯ ಸಂಗತಿಗೆ ಬಹಿಷ್ಕಾರ ಹಾಕಿ ಅದನ್ನು ಹಣ್ಣಿಗೆ ತರಬೇಕೆಂದು ಫ್ರಾನ್ಸದ ಕೂಲಿಕಾರರು ವಿಚಾರ ನಡೆಸಿದ್ದಾರೆ.

ಇದೇ ಉದ್ದೇಶ್ಯವಾಗಿ ಲಂಡನದಲ್ಲಿ ಬಾಂಬು ಹಾರಿತು ಒಂದು ಕಟ್ಟಡಕ್ಕೆ ಅಷ್ಟು ಧಕ್ಕಾ ಹೇಳುವಂಥ ಕೇಡಾಗಲಿಲ್ಲ.

ಕೈದಿಗಳನ್ನು ವಿಮಾನಗಳಿಂದ ಒಯಿಕೊಂಡು ಹೋಗಬಾರದೆಂದು ಸರಕಾರದವರು ಇವರಿಬ್ಬರ ಕೋಣೆಗಳ ಮೇಲೂ ಕಾವಲಿಟ್ಟಿದ್ದಾರೆ.

ಜುಬಿಲಿಯ ಸುದ್ದಿಗಳು.

—೦—

ಶ್ರೀಮನ್ಮಹಾರಾಜರು ದರಬಾರಕ್ಕೆ ಬರುವ ಮುಂಚೆ ಅಭ್ಯಂಗಸ್ನಾನಮಾಡಿಕೊಂಡು, ರೇಶ್ಮೆಯ ಮಡಿ ವಸ್ತ್ರಗಳನುಟ್ಟು ಗಂಧ ಲೇಪನ ಮಾಡಿಕೊಂಡು, ವಿದ್ವಾಂಸರು ಕೂತ ಸ್ಥಳಕ್ಕೆ ಬಂದು, ಸಂಸ್ಕೃತದಲ್ಲಿ ಭಾಷಣ ಮಾಡಿ, ತಮಗೆ ಪ್ರಜಾ ಪರಿಪಾಲನ ಕಾರ್ಯದಲ್ಲಿ ಆಶೀರ್ವಾದ ಮಾಡಬೇಕೆಂದು ಬಿನ್ನಹ ಮಾಡಿಕೊಂಡರು. ಬಳಿಕ ಪಂಡಿತ ಮಹಾಶಯರು ವೇದ ಪಠಣ ಮಾಡಿ ಆಶೀರ್ವಾದ ಸೂಕ್ತ ಹೇಳಿ, ಮಹಾರಾಜರ ಮೇಲೆ ಅಕ್ಷತೆಯ ವೃಷ್ಟಿ ಗೈದರು. ಆಗ ಮಹಾರಾಜರು ವೈದಿಕ ಮಂಡಲಿಗೆ ಶಿರಸಾಷ್ಟಾಂಗ ನಮಸ್ಕಾರ ಹಾಕಿ, ಭಕ್ತಿಪೂರ್ವಕವಾಗಿ ಪುಷ್ಪಫಲ ಗ್ರಹಣ ಮಾಡಿದರು.

ಮೈಸೂರ ಇಲಾಖೆಯ ಮುಸಲಮಾನರು ಸಭೆ ಮಾಡಿ ಮಹಾರಾಜರ ಆಳಿಕೆಯಲ್ಲಿ ತಮ್ಮ ಧರ್ಮ ಕಾರ್ಯದಲ್ಲಿ ವಿಘ್ನವಿಲ್ಲೆಂದೂ, ಇವರ ಆಳಿಕೆಯು ಯುಧಿಷ್ಠಿರ, ಜನಕರಾಜರಂತಿರುತ್ತದೆಂದೂ ಠರಾವು ಮಾಡಿದ್ದಾರೆ

ಮೂರು ಮೈಲು ದೂರ ಕಾಣಿಸುವಂಥ ಮತ್ತು [illegible]ಟ ಕೇಳಿಸುವಂಥ ಪ್ರಚಂಡ ಗಡಿಯಾರವನ್ನು ನಡೆಸುವ ಸಮಾರಂಭವು ಮಹಾರಾಜರಿಂದಲೇ ನೆರವೇರಿಸಲ್ಪಟ್ಟಿತು. ಮಹಾರಾಜರು ನಾಲ್ಕು ಕುದುರೆ ಹೂಡಿದ ರಥದಲ್ಲಿ ಕೂತು ಚತುರಂಗ ಸೇನಾ ಪರಿವೃತರಾಗಿ ಇಲ್ಲಿಗೆ ಬಂದರು. ಮತ್ತು ಜನಸ್ತೋಮದ ಜಯಘೋಷದಲ್ಲಿ ವಿದ್ಯುತ್ತಿನ ಗುಂಡಿಯನ್ನೊತ್ತಿದರು. ಮಹಾರಾಜರು ೨೫ ವರ್ಷ ರಾಜ್ಯವಾಳಿದರೆಂಬ ಸೂಚಕವಾಗಿ ಗಡಿಯಾರವು ೨೫ ಸಾರೆ ಘಂಟಾತ್ಕಾರ ಮಾಡಿತು.

ಸ್ತ್ರೀಯರು ಸಭೆಮಾಡಿ, ಮಹಾರಾಜರ ಆಳಿಕೆಯಲ್ಲಾದ ಸ್ತ್ರೀ ಶಿಕ್ಷಣದ ಪ್ರಗತಿಯನ್ನು ಪ್ರಶಂಸಿಸಿ, ಈ ದೇಶದಲ್ಲಾದ ಶಿಕ್ಷಣ ಪ್ರಸಾರವು ಅನ್ಯ ದೇಶಿಯರಿಗೆ ಅನುಕರಣ ಮಾಡುವಂಥ ಮೇಲ್ಪಂಕ್ತಿಯಾಗಿರುತ್ತದೆಂದು ನಿರ್ಣಯಿಸಿ, ಆ ಪ್ರಕಾರ ಮಾನಪತ್ರಿಕೆಯನ್ನು ಶ್ರೀಮನ್ಮಹಾರಾಜರಿಗೆ ಅರ್ಪಿಸಿದರು.

ಉತ್ಸವ ಕಾಲದಲ್ಲಿ ದಂಡಿನ ಕವಾಯಿತು ನಡೆಯಿತು ಕುಸ್ತಿಗಳಾದವು. ಕುರುಡ ಹುಡುಗರ ಗಾಯನವಾಯಿತು ಮದ್ದು ಬಾಣ ಮತ್ತು ಕಾಲದ ವಿನೋದಕ ಆಟ ನಾಟಕಗಳೂ ನಡೆದವು

ಬೆಂಗಳೂರಲ್ಲಿ ಆ ಪಟ್ಟಣಕ್ಕೆ ಗೌರವ ಬರುವಂಥ ಸಮಾರಂಭವಾಯಿತು. ಬಡ ಜನರಿಗೆ ಅನ್ನದಾನ ಮಾಡಿದರು. ಕೃಷ್ಣರಾಜೇಂದ್ರ ಸರಕಲ ಮತ್ತು ಜುಬಿಲಿ ಪಾರ್ಕ ತೆರೆಯುವ ಸಮಾರಂಭವಾಯಿತು ದಂಡು ಮತ್ತು ಪೋಲೀಸರ ಕವಾಯಿತಗಳಾದವು.

ಹಿಂದೂ ಮುಸಲಮಾನ ಕಲಹಗಳು.

—೦—

ಬಂಗಾಲ ಇಲಾಖೆಗೆ ಸೇರಿದ ಮುಹರಪೂರ ಗ್ರಾಮದಲ್ಲಿ ಹಿಂದೂ ಮುಸಲಮಾನ ದಂಗೆಯಾಯಿತು. ೧೩ ಜನರು ಸತ್ತರು. ಅನೇಕರು ಘಾಯವಾದರು.

ದಂಗೆಯಾದನಂತರ ಅಲ್ಲಿಯ ಜಮೀನದಾರರ ಒಬ್ಬ ಹಿಂದೂ ಸಿಪಾಯಿಯು ಪೋಲೀಸರಿಗೆ ಸಹಾಯ ಮಾಡುತ್ತಿದ್ದನು. ಮುಸಲಮಾನರು ಈತನನ್ನು ರಾತ್ರಿಯಲ್ಲಿ ಹಿಡಿದು, ಹೊಡೆದು, ಕೊಂದು, ಹೆಣವನ್ನು ನದಿಯಲ್ಲಿ ಒಗೆದರು.

ಅಕೋಲೆ ಜಿಲ್ಹೆಯಲ್ಲಿರುವ ಬಾಜಿಮುವೆಂಬ ಹಳ್ಳಿಯಲ್ಲಿ ಹಿಂದೂ ಮುಸಲಮಾನ ದಂಗೆಯಾಗಿ ಒಬ್ಬನು ಸತ್ತನು ೧೩ ಜನರು ಘಾಯವಾದರು.

ಅಕೋಲೆಯಲ್ಲಿಯೇ ಹಿಂದೂ ಜನರ ವಸತಿಯ ಹತ್ತರ ಮುಸಲಮಾನರು ಬೇಕೆಂದು ಗೋಹತ್ಯ ಮಾಡಿದರು. ಭಯಂಕರ ದಂಗೆಯಾಗುತ್ತಿತ್ತು. ಕಲೆಕ್ಟರರೂ ಪೋಲೀಸರೂ ಬಂದು ಬೇಗೆಯನ್ನು ಆರಿಸಿದರು.

ಲಾಹೋರಿನಲ್ಲಿ ಶನಿವಾರ ಒಬ್ಬಳು ಮುಸಲಮಾನಳಾದಳು. ಆದಿತ್ಯವಾರ ತೀರಿಕೊಂಡಳು. ಈಕೆಯ ಅಂತ್ಯ ಸಂಸ್ಕಾರಕ್ಕಾಗಿ ಎರಡೂ ಜನಾಂಗಗಳ ನಡುವೆ ವಾದವೆದ್ದಿತು. ಕಲೆಕ್ಟರರು ಬಂದರು. ರಾಜಿಯ ಸಂಧಾನ ನಡಿಯಿತು. ಮುಸಲಮಾನರು ಪ್ರೇತಸಂಸ್ಕಾರ ಮಾಡಬೇಕು; ಹಿಂದೂ ಜನರು ಆಕೆಯ ಮೂರು ವರ್ಷದ ಹುಡಿಗೆಯ ಬಾಲನ ಪೋಷಣ ಮಾಡಬೇಕೆಂದು ಗೊತ್ತಾಗಿ, ಜಗಳ ನಿಂದಿತು.

ಮದ್ರಾಸದಲ್ಲಿ ಒಬ್ಬಳು ಮುಸಲಮಾನಳಾದಳು. ಈಕೆಯ ಒಬ್ಬ ಮಗಳು ಪ್ರಬುದ್ಧಳಾದಳು. ಆಕೆ ಮುಸಲಮಾನನ ಬದಲಾಗಿ ಹಿಂದುವಿನನ್ನು ಮದುವೆಯಾಗಬೇಕೆಂದಳು. ಮುಸಲಮಾನನನ್ನೇ ಅಂಗೀಕರಿಸಬೇಕೆಂದು ತಾಯಿಯು ಆಗ್ರಹಬಿತ್ತು. ಇದಕ್ಕೆ ಇವಳು ಒಪ್ಪದೆ, ಆತ್ಮಹತ್ಯ ಮಾಡಿಕೊಳ್ಳಲುದ್ಯುಕ್ತಳಾದಳು. ಜನರು ಇವಳ ಈ ಕೃತ್ಯ ಕಂಡು, ಬುದ್ಧೀ ಹೇಳಿ ಉಳಿಸಿಕೊಂಡರು.

ಕರ್ನಾಟಕ ಪ್ರಾಂತಿಕ ಸೇವಾದಲ ಹುಬ್ಬಳ್ಳಿ.

ನಿರಾಶ್ರಿತ ಜನರಿಗೆ ಬಟ್ಟೆಗಳನ್ನು ಕೂಡಿಸಿರಿ.

ಗುಜರಾಥ ಕಾಠೇವಾಡಗಳಲ್ಲಾದ ಅತಿವೃಷ್ಟಿಯಿಂದ ಎಷ್ಟೋ ಸಾವಿರ ಮನೆಗಳೂ ನೂರಾರು ಜನರು ಜಲಸಮಾಧಿಯನ್ನೈದಿರುವರು ಊರಲ್ಲಿ ಹತ್ತು ಪೂಟುಗಳ ವರೆಗೆ ನೀರು ನಿಂತದ್ದರಿಂದ ಎಷ್ಟೋ ಸಾವಿರ ಜನರೂ ನಿಲ್ಲಲು ಮನೆಗಳಿಲ್ಲದೆಯೂ ಉಣ್ಣಲಿಕ್ಕೆ ಅನ್ನವಿಲ್ಲದೆಯೂ ಹೊದಿಯಲಿಕ್ಕೆ ಬಟ್ಟೆಗಳಿಲ್ಲದೆಯೂ ಪೇಚಾಡುತ್ತಿರುವರು ಇಂಥ ಕಠಿಣ ಸ್ಥಿತಿಯಲ್ಲಿರುವ ಜನರಿಗೆ ಒಂದಿಲ್ಲೊಂದು ಬಗೆಯಿಂದ "ಅಳಲಿಭಕ್ತಿ ಮಳಲ ಸೇವೆ ಎಂಬಂತೆ ಸಹಾಯ ಮಾಡುವದು ಕನ್ನಡಿಗರಾದ ನಮ್ಮ ಕರ್ತವ್ಯವಾಗಿರುತ್ತದೆ. ಕರ್ನಾಟಕ ದಳದ ವತಿಯಿಂದ ೧೦ ಜನ ಸ್ವಯಂಸೇವಕರು ಗುಜರಾಥ ಕಾಠೇವಾಡಗಳಲ್ಲಿ ನೆರೆ ಬಂದ ಸ್ಥಳಗಳಿಗೆ ಹೋಗಿ ಸಹಾಯ ಮಾಡಲು ಸಿದ್ಧರಾಗಿರುವರು ಇದೇ ತರಹದ ಕಠಿಣತರ ಸ್ಥಿತಿಯು ನೆರೆಹಾವಳಿಯಿಂದ ನಾಲ್ಕು ವರ್ಷಗಳಾಗಿ ಕನ್ನಡ ನಾಡಿನಲ್ಲಿ ಬಂದಾಗ್ಗೆ ಗುಜರಾಥದವರು ಮಾಡಿದ ಸಹಾಯವನ್ನು ಕನ್ನಡಿಗರು ಮರೆತಿರಲಿಕ್ಕಿಲ್ಲ. ಆದ್ದರಿಂದ ಪ್ರತಿಯೊಬ್ಬರು ತಮ್ಮ ತಮ್ಮ ಊರುಗಳಲ್ಲಿ ಆ ನಿರಾಶ್ರಿತ ಜನರ ಸಹಾಯಕ್ಕಾಗಿ ಬಟ್ಟೆಗಳನ್ನು ಕೂಡಿಸಬೇಕೆಂದು ನಮ್ಮ ನಮ್ರ ಬಿನ್ನಹವು.

ಧಾರವಾಡ, ಹುಬ್ಬಳ್ಳಿ, ಗದಗುಗಳಲ್ಲಿ ಈ ಕಾರ್ಯವು ಪ್ರಾರಂಭವಾಗಿ ೩-೪ ದಿವಸಗಳಾದವು ಉಳಿದ ಊರವರು ತಮ್ಮ ತಮ್ಮ ಊರುಗಳಲ್ಲಿ ಜೋರಿನಿಂದ ಕಾರ್ಯವನ್ನು ಪ್ರಾರಂಭಿಸಿ ತಮ್ಮ ಕರ್ತವ್ಯವನ್ನು ಪಾಲಿಸುವರೆಂದು ಬಯಸುವೆನು ಈ ಕಾರ್ಯವನ್ನು ಪ್ರಾರಂಭಿಸಿದ ಕೂಡಲೆ ನಮಗೆ ತಿಳಿಸಬೇಕು ಕೂಡಿದ ಬಟ್ಟೆಗಳನ್ನು ಎಲ್ಲಿಗೆ ಮತ್ತು ಹ್ಯಾಗೆ ಕಳಿಸಬೇಕೆಂಬವನ್ನು ಹಿಂದುಗಡೆ ತಿಳಿಸುವೆವು.

ತಮ್ಮ ಬಂಧು
ನಾ. ಸು. ಹರ್ಡೀಕರ.
ಕಾ. ಕ. ಪ್ರಾ. ದಲ

ಧಾರವಾಡ–

ಇವತ್ತಿನ ದಿವಸ ಶ್ರಾವಣ ೩ ದೆಸೆಯಿಂದ ಮುದ್ರಾಲಯಕ್ಕೆ ರಜೆ ಇರುವದರಿಂದ ನಾಟಕ ಶಿಕ್ಷದ ವಿಜಯವು ಪ್ರಕಟಿಸಲ್ಪಡಲಾರದು.

ನೋಟೀಸು

ಭೀಮಾ ತಂದಿ ಚನ್ನಬಸಪ್ಪಾ ನಾವಲಗಿ ಸಾ|| ಬಿನಕನಹಳ್ಳಿ ತಾಲ್ಲೂಕ ಕುಂದಗೋಳ ಈತನಿಗೆ-

ಕೆಳಗೆ ಹೆಬ್ಬೆಟ್ಟಿನ ಗುರ್ತು ಮಾಡುವಂಥ ಹನಮವ್ವಾ ಕೋಂ ಭೀಮಾ ನಾವಲಗಿ ಸಾಕಿನ ಬಿನಕನಹಳ್ಳಿ ಹಾಲಿವಸ್ತಿ ಒಕ್ಕರಿಗಿ ತಾಲೂಕ ಪರಸಗಡ ಪೋಸ್ಟ ಮುನವಳ್ಳಿ ಇಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ —

ನೀನು ನನ್ನ ಮದುವೆಯ ಗಂಡನಾಗಬೇಕು ಮದುವೆಯಾಗಿ ೧೦-೧೨ ವರ್ಷವಾಯಿತು ಪ್ರಬುದ್ಧಳಾದ ಬಳಿಕ ನಿನ್ನ ಕೂಡ ನಾನು ನಾಲ್ಕು ವರ್ಷ ಬಾಳವೆ ಮಾಡಿದೆನು ಮುಂದೆ ನೀನು ನನ್ನನ್ನು ಸೇರದೆ ಹೊಡಿದು ಬಡಿದು ಮಾಡಿ ಸ್ವೈರವರ್ತನ ಮಾಡಿಕೊಂಡು, ನನ್ನ ಮೈಮೇಲಿನ ಯಾವತ್ತು ದಾಗೀನೆ ಕಸಕೊಂಡು ಹಂಚ ಕೇರಿಯ ಮೇಲೆ ಮನೀ ಬಿಟ್ಟು ಹೊರಗ ಹಾಕಿದಿ ಆ ಮಾತಿಗೆ ಎರಡು ವರ್ಷವಾಯಿತು ನೀನು ನನ್ನನು ಕರಕೊಂಡು ಹೋಗಿ ಬಾಳವೆ ಮಾಡುವ ಆಲೋಚನೆ ಮಾಡಲಿಲ್ಲ ಮತ್ತು ನಾನು ಎರಡನೆಯವರ ಕಡೆಯಿಂದ ಎಷ್ಟು ಸಾರೆ ಹೇಳಿ ಕಳಿಸಿದರೂ ಹಾದಿಸಿಕೊಳ್ಳುವ ಉತ್ತರ ಕೊಡಲಿಲ್ಲ ಒಂದಿ ಕಾರಣ ಈಗ ಎರಡನೇ ಉಪಾಯ ಕಾಣದೆ ಈ ನೋಟೀಸು ಕೊಡುವ ಅಗತ್ಯಪ್ರಾಪ್ತವಾಯಿತು ನನಗೆ ಈಗ ಉಪಜೀವನದ ದೆಸೆಯಿಂದ ಸಾಲ ತಿಂಗಳಲ್ಲಿ ಮುನ್ನೂರು ರೂಪಾಯಿ ಸಾಲವಾಗಿದೆ ಸಾಹುಕಾರರ ತಗಾದಿಯೂ ಆಗಿದೆ ಇಂದಿ ಸಾಲ ಹುಟ್ಟುವಲ್ಲದು ಕಾರಣ ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನಗಾದ ಸಾಲ ತೀರಿಸಿ, ನನ್ನ ದಾಗೀನೆ ನನಗೆ ಕೊಟ್ಟು ಯೋಗ್ಯ ರೀತಿಯಿಂದ ಬಾಳವೆ ಮಾಡಬೇಕೆಂದು ಪಂಚರ ಬಾಮೀನು ಕೊಟ್ಟು ಕರಕೊಂಡು ಹೋಗಬೇಕು ಇರ ಅದಕ್ಕೆ ತಪ್ಪಿದರೆ- ನನ್ನ ಮೇಲೆ ನಿನ್ನ ಹಕ್ಕು ಯಾವದೂ ಇಲ್ಲೆಂದು ತಿಳಕೊಂಡು ಈ ನೋಟೀಸೇ ಸೋಡಪತ್ರವೆಂದು ನಾನು ಎರಡನೆಯವನನ್ನು ಉಡಿಕೆ ಮಾಡಿಕೊಳ್ಳುವೆನು ಅನಂತರ ನಿನ್ನ ಹಕ್ಕು ಸಂಬಂಧ ನನ್ನ ಹಾಗು ನಾನು ಮಾಡಿಕೊಂಡ ಉಡಕಿ ಗಂಡನ ಮೇಲೆ ಬಿಲಕೂಲ ನಡೆಯಲಾರದು ಮತ್ತು ಈಗಿನ ಸಾಲ ಮತ್ತು ನನ್ನ ದಾಗೀನೆಗಳ ದೆಸೆಯಿಂದ ನಿನ್ನ ಮೇಲೆ ಕಾಯದೆಶೀರ ಇಲಾಜ ಮಾಡುವೆನು ಈ ಬಾಬು ಆಗುವ ಯಾವತ್ತು ಖರ್ಚಿನ ಬೋಜಾ ನಿನ್ನ ತಲೆಯ ಮೇಲೆ ಬಿರುತ್ತದೆ ಈ ನೋಟೀಸಿನ ಖರ್ಚು ಸಹ ನಿನ್ನ ಮೇಲುಂಟು ತಿಳಿಯುವದು

ತಾ|| ೧೨ ಅಗಸ್ಟ ೧೯೩೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಹನಮವ್ವಾ ಕೋಂ ಭೀಮಾ ನಾವಲಗಿ ಈಕಿ ಸ್ವತಾ ಇರುತ್ತದ

ಶ್ರೀ ಮಾಣಿಕಪ್ರಭು ಪ್ರಾಸಾದಿಕ

ಗಾಯನ ವಾದನ ವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಗಾಯನ, ಹಾರ್ಮೋನಿಯಮ್, ತಬಲಾ, ಸತಾರ ಮೊದಲಾದವು ಶಾಸ್ತ್ರೀಯ ರೀತಿಯಿಂದ ಕಲಿಸಲಾಗುವವು.

ಈ ವಿದ್ಯಾಲಯದ [illegible] ಕಲಿಸುವ [illegible] ತಿಳಿಯಬೇಕು [illegible] ಕೂಡಲೆ ಸಂಪೂರ್ಣ ಮಾಹಿತಿಯು ಸಿಗುವಾಗಿ [illegible].

ಪತ್ತೆ

ಶ್ರೀ [illegible]
ಗಾಯನ ವಾದನ ವಿದ್ಯಾಲಯ
[illegible] ಸ್ಟೇಷನರಿ ಅಂಗಡಿ
[illegible], ಧಾರವಾಡ

[illegible],
ಲಕ್ಷ್ಮಣಸಿಂಗ ಗವಾಯಿ,
ನಾಗಲಾಪೂರ.

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಕ್ಷ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೧೦ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಬಂದು ಪ್ರಾಣ ಉಳಿಸಿರುವದು.

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೊಂದಿದ ರೋಗಕ್ಕೆ ಹರಿದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವ.

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕ ಲಿಮಿಟೆಡ ಧಾರವಾಡ

—೦—

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ೬ರು ತಿಂಗಳು, ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲಪರ್ಯಂತರ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಆರು ರೂಪಾಯಿ ಮತ್ತು ವರ್ಷಕ್ಕೆ ಆರುವರಿ ರೂಪಾಯಿ ಬಡ್ಡಿ ದೊರೆಯುವದು ಹೆಚ್ಚು ಕಾಲದ ಠೇವಿಯಿಂದ ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನೆಗಳೂ ಪತ್ರೀಕ ಇಟ್ಟುಕೊಳ್ಳಲ್ಪಡುವವು ಚಕ್ಕ ವ ಹುಂಡಿಯ ವ್ಯವಹಾರ ಮಾಡಲ್ಪಡುವದು

ಮೆಸರ್ಸ ದೇಶಪಾಂಡೆ ಮತ್ತು ಅಣ್ಣಾಚಾರ್ಯ ಕಟ್ಟಿ

ಕಂಪನಿ ಮ್ಯಾನೇಜಿಂಗ ಏಜಂಟ್ಸ

ಜೇರಮನ.

ಜಗತ್ ಪ್ರಸಿದ್ಧವಾದ

ಊದು ಬತ್ತಿಗಳು

ನಮ್ಮಲ್ಲಿ ಎಲ್ಲಾ ವಿಧವಾದ ಊದುಬತ್ತಿಗಳು ಸೇರು ೧ಕ್ಕೆ ೧-೦-೦ ಲಾಗಾಯಿತ ತಿಳಿದ ಮಾಪಿಗೆ ಅಡಗಬತ್ತಿ, ಪನ್ನಿರು, ಶೃಂಗಾರುಲಕ ತೈಲ, ದಶಾಂಗ, ಇವೇ ಮುಂತಾದ ಸುಗಂಧ ದ್ರವ್ಯಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ ಬೇಕಾದವರು ನಮಗೆ ಆರ್ಡರ್ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಬಿ. ಎಲ್. ಉಪಾಧ್ಯಾಯ ಅಂಡ ಸನ್ಸ

ಸುಗಂಧಾಧಿಕಾರಿ ಮೈಸೂರ

ಈ ಪತ್ರಿಕೆಯನ್ನು ಅಣ್ಣಾಚಾರ್ಯ ಪಾಂಡುರಂಗಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ರವಿವಾರ ತಾರೀಖು ೧೯ನೇ ಆಗಸ್ಟ ೧೯೨೭ (ಸಂಚಿಕೆ ೧೭೪

ಕಿರ್ಲೋಸ್ಕರ ಶೇಂಗಾ [ಭೂಮೂಗು] ಒಡೆಯುವ ಯಂತ್ರಗಳು

ಈ ಯಂತ್ರಗಳು ಎರಡು ಮಾದರಿಯವು ನಮ್ಮ ಮಾದರಿಯವು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತವೆ ಇವು ಕೈಯಿಂದ ಎಳೆಯುವ ಒಂದು ಹುಟ್ಟನ್ನು ತಿರುಗಿಸಲು ಯಂತ್ರದಲ್ಲಿ ಶೇಂಗಾಯನ್ನು ಕೊಟ್ಟರೆ ಅದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳ ಕೆಳವು ಹೆಚ್ಚಿನದಲ್ಲಿ ಬಹು ಖಾತರಾಗಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ ಶೇಂಗಾ ಒಡೆದು ಮಾರುವ ವ್ಯಾಪಾರಸ್ಥರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಕೇಳಿ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಅಪರೆಟಿವ್ಹ ಬ್ಯಾಂಕ ಲಿಮಿಟೆಡ

--- o ---

ಮಂಗಳವಾರ ಪೇಟೆ ಧಾರವಾಡ.

ಕೋ. ಅಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ದುಡಿಯುವ ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಪಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನ್ನ ನಡಿಸಲ್ಪಡುವವು. ಠೇವು ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ಕೊಡುವೆವು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವ ರಿಂದ ತಿಳಕೊಳ್ಳಬೇಕು.

ಸೆಕ್ರೆಟರಿ ವಿ. ಜಿ. ಜಕಾತಿ,
ಮ್ಯಾನೇಜಿಂಗ ಡೈರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠಿವಾಣಿ ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿ ಗೆ ಒಂದು ಆಣೆಯಂತಿರುತ್ತದೆ.

ಎ. ಕ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

ಆಗಸ್ಟ ೩೦-ರಲ್ಲಿ ಹೊಸ ವರ್ಷ ಪ್ರಾರಂಭವಾ ಗುವ ನಿತ್ಯ ಮತ್ತು ವಾರ ಪತ್ರದ ಚಂದ ಬಾಕಿ ಹಾಗು ರಿಸೀವ ವ್ಹಿ. ಪಿ. ಯನ್ನು ಕಳಿಸವೆವು. ಚಂದಾದಾ ರರು ವ್ಹಿ ಪಿ ಸ್ವೀಕರಿಸಿ ವಿಜಯವನ್ನು ಪ್ರೋ ತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ನೋಟೀಸಿನ ದರಗಳು.

— o —

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದಾವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಗೀತಿ ಬ್ಯಾಂಕ ನ ಅಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

— o —

೨ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ಲೋಕಮಾನ್ಯ ಟಿಳಕರ ಚರಿತ್ರೆ	೪ ,,
ದೇಶಬಂಧು ದಾಸರ ಚರಿತ್ರೆ	೩ ,,
ದೇಹಿಸ್ವರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿ ಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮ ತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೩—೦—೦ ರೂ
೬ ,,	೭—೧—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೧೪-೮-೨೭ ನೇ ಇಸ್ವಿ

ರಾಯಲ ಕಮಿಶನ.

ವಿಲಾಯತಿಯಲ್ಲಿ ರಾಯಲ ಕಮಿಶನ ನೇಮಿಸುವ ಪೂರ್ಣ ಸಿದ್ಧತೆಯಾಗಿದೆ. ೧೯ನೆಯ ತಾರೀಖಿನ ದಿವಸ ಲಾರ್ಡ ಯರ್ವಿನಸಾಹೇಬರು ಕಮಿಶನದ ಮೆಂಬರರ ಹೆಸರುಗಳನ್ನು ಜಾಹೀರ ಮಾಡಬಹುದಾಗಿರುತ್ತದೆ. ಅದೇ ವೇಳೆಯಲ್ಲಿ ವಿಲಾಯತಿಯಲ್ಲಿಯೂ ಈ ಹೆಸರುಗಳನ್ನು ಜಾಹೀರ ಮಾಡುವರು. ಕಮಿಶನದಲ್ಲಿ ಯಾವ ಹಿಂದೀ ಗೃಹಸ್ಥರ ಹೆಸರುಗಳು ಬರುವವೆಂಬದು ಮುಂಬಯಿಯ ಹಿಂದುಸ್ಥಾನವೆಂಬ ಪತ್ರಕ್ಕೆ ಒಂದು ಸ್ಪೇಶಲ ತಾರು ಬಂದಿದೆ. ಆದರೆ ಈ ಹೆಸರುಗಳೇ ಬರುವವೆಂಬ ನಂಬಿಗೆಯಿಲ್ಲ.

ಕಮಿಶನದಲ್ಲಿ ೧೧ ಜನ ಮೆಂಬರರಾಗುವರೆಂದು ಅಸೆಂಬ್ಲಿಯ ಅಧ್ಯಕ್ಷರಾದ ಮಿ. ಪಟೇಲ ಸಾಹೇಬರು ಸುದ್ದಿ ತಂದಿದ್ದಾರೆ. ಇದೇ ವಿಷಯವಾಗಿ ಇವರು ಮುಖ್ಯ ಮಂತ್ರಿ ಮತ್ತು ಭಾರತ ಮಂತ್ರಿಯ ಕೂಡ ಏಕಾಂತದಲ್ಲಿ ಭಾಷಣ ಮಾಡಿದ್ದರಿಂದ, ಅವರಿಗೆ ಈ ವಿಷಯವು ಹೆಚ್ಚು ಗೊತ್ತುಂಟು. ಆದರೆ ಈ ಬಗ್ಗೆ ಇವರೇನೂ ಹೇಳದಾಗಿದ್ದಾರೆ.

ಸರಕಾರದವರು ರಾಯಲ ಕಮಿಶನ ನೇಮಿಸುವರು; ಹೊಸ ಆಡಳಿತೆಯಲ್ಲಿ ಗವ್ಹರ್ನರರು ಹೋಗಿ, ಎಲ್ಲರೂ ಡಿಪುಟಿ ಗವ್ಹರ್ನರರಾಗುವರು. ಹಿಂದುಸ್ಥಾನ ಸರಕಾರದ ಹಸ್ತಕರಾಗುವರು. ಕಾಬಿನೆ ಕೌನ್ಸಿಲಗಳಿಗೆ ಜವಾಬದಾರರಾಗಲಾರರು. ಕಮಿಶನದ ಮೆಂಬರರಾಗತಕ್ಕವರು ಬಹುತೇಕ ಯುರೋಪಿಯನ್ನರೇ ಆಗುವರೆಂದು ಲಂಡನ ಟಾಯಿಮ್ಸ ಪತ್ರ ಅಂದಾಜು ಹೇಳಿದೆ.

ಈ ಕಮಿಶನಕ್ಕೆ ಯಾವ ಪ್ರಕಾರದ ಸ್ವಾಗತ ಮಾಡಬೇಕೆಂಬ ಬಲವಾದ ಚರ್ಚೆಯು ನಡೆದಿದೆ. ಲಂಡನದ ಟಾಯಿಮ್ಸದಂತೆ ಇದರ ರಚನೆಯಾದರೆ [illegible]ಹಕಾರಿಗಳಿಗೆ ಉತ್ತೇಜನ ಕೊಟ್ಟಂತಾಗುವದೆಂದು [illegible] ಕಲಕತ್ತೆಯ ಸ್ಟೇಟ್ಸಮನ್ನ ಪತ್ರವು ಮುಂದಾ[illegible]ಸರಕಾರಕ್ಕೆ ಎಚ್ಚರಿಕೆ ಹೇಳಿದೆ. ಕಮಿಶನಕ್ಕೆ [illegible] ಹಾಕಬೇಕು ರಾಷ್ಟ್ರೀಯರು ಆದರ [illegible] ಹೊಕ್ಕಗೊಡಬಾರದೆಂದು ಡಾಕ್ಟರ ವರದರಾಜರು ಅನ್ನುತ್ತಿದ್ದಾರೆ. ಇದರ ಮುಂದೆ ತಾವೆಷ್ಟು ಮಾತ್ರಕ್ಕೂ ಸಾಕ್ಷೀ ನುಡಿಯತಕ್ಕವರಲ್ಲೆಂದು ಪಂಡಿತ ಮೋತಿಲಾಲರು ಈ ಮೊದಲೇ ಜಾಹೀರ ಮಾಡಿದ್ದಾರೆ.

ಇದೇ ವಿಷಯವಾಗಿ ಬೆಂಗಳೂರಲ್ಲಿ ಮಹಾತ್ಮರ ಎದುರಿಗಲ್ಲಿ ಪಂಡಿತ ಮೋತಿಲಾಲ ಶ್ರೀ. ಸತ್ಯಮೂರ್ತಿ, ಶ್ರೀ. ಷಣ್ಮುಖಚೆಟ್ಟಿ ಮೊದಲಾದ ಕಾಂಗ್ರೆಸದ ವೀರರು ಆಲೋಚನೆ ಮಾಡಿದರು. ಕೌನ್ಸಿಲ ಪ್ರವೇಶದಿಂದ ಯಾವ ಪುರುಷಾರ್ಥ ದೊರೆಯಲಾರದೆಂತಲೇ ಇಂದಿಗೂ ಮಹಾತ್ಮರ ಮತವು. ಕಾಂಗ್ರೆಸ ಮತ್ತು ಮುಸಲಮಾನ ಲೀಗದ ಒಗ್ಗಟ್ಟಾಗಿ, ಒಂದೇ ಪ್ರಕಾರದ ಹಕ್ಕು ಸ್ವಾತಂತ್ರ್ಯದ ಲೇಖವನ್ನು ಈ ಕಮಿಶನದ ಮುಂದಿಡಬೇಕೆಂದು ಗೊತ್ತಾಗಿದೆ. ಪಂಡಿತ ಮೋತಿಲಾಲರು ಅಸೆಂಬ್ಲಿಯಲ್ಲಿ ಇದೇ ಅಭಿಪ್ರಾಯದ ಮತವನ್ನುಂಟು ಮಾಡಿಕೊಂಡು ವಿಲಾಯತಿಗೆ ಹೋಗುವರು. ಅಲ್ಲಿಂದ ಕಾಂಗ್ರೆಸದ ವೇಳೆಗೆ ಮರಳಿ ಹಿಂದುಸ್ಥಾನಕ್ಕೆ ಬರುವರು.

ಡಾಕ್ಟರ ಹರ್ಡೀಕರರ ಪ್ರಯತ್ನವು ನೀರೊಳಗೆ ಹೋಮ ಮಾಡಿದಂತಾಯಿತು.

ಡಾಕ್ಟರ ಹರ್ಡೀಕರರು ಚೀನ ದೇಶಕ್ಕೆ ಡಾಕ್ಟರ ಹಾಗು ಪರಿಚಾರಕರ ಒಂದು ಪಥಕವನ್ನು ಕಳಿಸಬೇಕೆಂದು ಮಾಡಿದ್ದರಷ್ಟೇ; ಅದಕ್ಕೆ ಸರಕಾರದವರು ಇಲ್ಲದ್ದೊಂದು ನೆವನ ಹೇಳಿ, ಬೆಸರಾ ನಿನ್ನ ಮದಿವೆ ಎಂದೆಂದು ಮುಂಗೆ ಹಾಕುತ್ತಾ ಬಂದರು. ಈಗ ಅದಕ್ಕೆ ಪೂರಾ ಅರ್ಧಚಂದ್ರ ತೋರಿಸಿ ಡಾಕ್ಟರರ ಸಂಪೂರ್ಣ ಆಶಾಭಂಗ ಮಾಡಿದರು. ಚೀನರು ತಂತಮ್ಮೊಳಗೆ ಯಾದವರಂತೆ ಹೊಡೆದಾಡಿ ಸಾಯುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ತಟಸ್ಥರಾದ ಪಂಕ್ತೀಯರು ಯಾವ ಪಕ್ಷವನ್ನೂ ವಹಿಸುವದು ಉಚಿತವಲ್ಲ. ಆದುದರಿಂದ ಆಕ್ಸಿಕೆಯ ಪಥಕಕ್ಕೆ ಪಾಸಪೋರ್ಟ ಕೊಡಲಿಕ್ಕಾಗದೆಂದು ಸರಕಾರದವರು ಕಾರಣ ಹೇಳಿದ್ದಾರೆ. ಯಾವದೊಂದು ಕಾರಣದಿಂದ ಈ ಪಥಕಕ್ಕೆ ಮನ್ನಣೆ ದೊರೆಯಲಾರದೆಂದು ಅನೇಕರು ಭಾವಿಸಿದ್ದರು. ಡಾಕ್ಟರರ ಕಚೇರಿಯಲ್ಲಾದ ಘೋಷಣೆಯು ಅದಕ್ಕೆ ಮತ್ತಷ್ಟು ಬಲಕೊಟ್ಟಿತು. ಕೊನೆಯಲ್ಲಿ ಅದು ನಿಜವಾಯಿತು.

ಅಫ್ರಿಡಿ ದೇಶದಿಂದ ಪೇಶಾವರಕ್ಕೆ ಗುಳೇ ಬಂದಂಥ ಹಿಂದೂ [illegible] ಸಹಾಯಕ್ಕಾಗಿ ದಿಲ್ಲಿಯಲ್ಲಿ ೮೦೦೦ ಹಿಂದೂ ಜನರ ಸಭೆ ಕೂಡಿತ್ತು. ಸಭೆಯಲ್ಲಿಯೇ ಐದು ಸಾವಿರ ರೂಪಾಯಿ ಕೂಡಿತು.

ಜಮಖಂಡಿಯ ಪ್ರಜಾ ಪರಿಷತ್ತು.

ಪುಣೆಯ ಶ್ರೀ. ನರಸಿಂಹ ಚಿಂತಾಮಣಿ ಕೇಳಕರರ ಅಧ್ಯಕ್ಷತೆಯಲ್ಲಿ ಜಮಖಂಡಿಯಲ್ಲಿ ಆ ಸಂಸ್ಥಾನದ ಪ್ರಜಾಪರಿಷತ್ತು ಕೂಡಿತ್ತು. ಪರಿಷತ್ತಿನಲ್ಲಿ ಕೆಳಗಿನ ಮಹತ್ವದ ಠರಾವುಗಳು ಪಾಸು ಮಾಡಲ್ಪಟ್ಟವೆ.

೧ ಸಂಸ್ಥಾನದ ಪ್ರಜರಿಗೆ ಜವಾಬದಾರ ರಾಜ್ಯಪದ್ಧತಿಯ ಅಧಿಕಾರ ಕೊಡಬೇಕು.

೨ ಕಾಯದೆ ಕೌನ್ಸಿಲ ಸಭೆಯನ್ನು ಸ್ಥಾಪಿಸಬೇಕು.

೩ ಮಾಧ್ಯಮಿಕ ಶಾಲೆಗಳಲ್ಲಿ ಕನ್ನಡದಲ್ಲಿಯೇ ಶಿಕ್ಷಣ ಕೊಡಬೇಕು.

೪ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಸಕ್ತಿಯ ಶಾರೀರಿಕ ಶಿಕ್ಷಣ ಕೊಡಬೇಕು. ಈ ಶಿಕ್ಷಣವನ್ನು ಪ್ರತಿಯೊಬ್ಬನ ವಯಸ್ಸು [illegible] ವರ್ಷಗಳ ಪರ್ಯಂತ ಕೊಡಬೇಕು.

೫ ಪ್ರೆಸ ಆಕ್ಟ ರದ್ದ ಮಾಡಬೇಕು. ಸ್ವಾರಿ ಬಂದಿ ಕಾಯದೆ ತೆಗೆದು ಹಾಕಬೇಕು.

೬ ಬೆಳೆಗಳ ಸಂರಕ್ಷಣೆಗಾಗಿ ಸರಕಾರದ ಪರವಾನಿಗಿ ಇಲ್ಲದೆ ಕತ್ತಿ ಬಂದೂಕು ಇಡುವ ಸ್ವಾತಂತ್ರ್ಯ ಕೊಡಬೇಕು

೭ ಮ್ಯುನಿಸಿಪಾಲಿಟಿಗಳಿಗೆ ಅಧ್ಯಕ್ಷರನ್ನು ಆರಿಸಿಕೊಳ್ಳುವ ಅಧಿಕಾರ ದೊರೆಯಬೇಕು.

೮ ಸಂಸ್ಥಾನಕ್ಕಾಗಿ ಹಾಯಕೋರ್ಟ ಸ್ಥಾಪಿಸಬೇಕು.

೯ ಸ್ವದೇಶಿ ಮತ್ತು ಸ್ಥಳದ ಉದ್ಯೋಗ ವ್ಯವಸಾಯಗಳಿಗೆ ಉತ್ತೇಜನ ಕೊಡಬೇಕು.

೧೦ ಮದ್ಯಪಾನವನ್ನು ನಿಲ್ಲಿಸಬೇಕು.

ನೇಗಿನಹಾಳದ ಖಟ್ಲೆ-

ಬೈಲಹೊಂಗಲ ತಾಲೂಕಿನಲ್ಲಾದ ಭಾರಿ ದಂಗೆಯ ವಿಚಾರಣೆಯು ಬೆಳಗಾವಿಯ ಸೆಶನದಲ್ಲಿ ನಡೆದು ಮುಂದೆ ಹೇಳಿದ ಆರೋಪಿಗಳಿಗೆ ಮೂರು ಮೂರು ವರ್ಷದ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತು. ೧ ನಿಂಗ್ಯಾ ೨ ಮಲ್ಯಾ ೩ ಫಕೀರ್ಯಾ ೪ ಬಸಪ್ಪಾ ಹಸ್ಬಿ ೫ ಗುರುಸ್ವಾಮೀ ಮತ್ತು ಇಬ್ಬರು ಬೇಡರು.

ಈ ದಂಗೆಯಲ್ಲಿ ಬೆಳಗಾವಿಯ ಬಾಳಪ್ಪನನ್ನು ಕೊಂದ ಪ್ರಕರಣದ ತೀರ್ಪು ನಾಳಿನ ದಿವಸ ಹೇಳಲ್ಪಡುವದು.

ಮೋಟಾರಗಳು ಸಾಕು ಸಾಕಾದವು-

ಮದ್ರಾಸ ಮತ್ತು ಚಿಂಗಲಪೇಟ ಜಿಲ್ಲೆಗಳಲ್ಲಿ ಬಾಡಿಗೆಯ ದಿನದಿಂದ ಸಾಕು ಸಾಕೆನಿಸುವಷ್ಟು

ಮೋಟಾರಗಳಾದವು. ಈ ನಂತರ ಹೊಸದಾಗಿ ಬಾಡಿಯುವರಿಗೆ ಲಾಯಸೆನ್ಸ ದೊರೆಯಲಾರದೆಂದು ಮುದ್ರಾಸದ ಪೋಲೀಸ ಕಮಿಶನರಸಾಹೇಬರು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ. ಧಾರವಾಡದ ಪೋಲೀಸ ಅಧಿಕಾರಿಗಳೂ ಇದೇ ರೀತಿಯಾಗಿ ಅವಶ್ಯವಾಗಿ ವಿಚಾರ ಮಾಡಬೇಕೆಂದು ಸೂಚಿಸುತ್ತೇವೆ.

ರಜತೋತ್ಸವ.

ಮಹಾತ್ಮಾಜಿಯವರ ಸಂದೇಶ-

ಮಹಾರಾಜಾ ಸಾಹೇಬರಿಗೆ ವಿರೋಧವಾಗಿ ಒಂದು ಮಾತನ್ನು ಯಾರೂ ಎಂದೂ ಆಡಲಾಸ್ಪದವಿಲ್ಲದಂತಿರುವದನ್ನು ಕಂಡು, ನನ್ನ ಮನಸ್ಸಿಗೆ ಬಹು ತೃಪ್ತಿಯುಂಟಾಗಿದೆ. ನನ್ನ ಸುತ್ತಮುತ್ತಿರುವ ಮಿತ್ರರು ಅವರ ವಿಚಾರವಾಗಿ ಕಸ್ತೂರಿ ರಂಗನಾಥರ ಒಂದೂ ನನ್ನ ಕಿವಿಗೆ ಬೀಳದಂತೆ ಸಂಧಾನ ಮಾಡಿದ್ದಾರೋ ಏನೋ ಎನ್ನುವಷ್ಟು ಸೋಜಿಗವಾಗುತ್ತದೆ. ನಾನು ಮಹಾರಾಜರ ವಿಷಯವಾಗಿ ಕೇಳಿರುವ ಸದ್ವಿವಿವರವೆಲ್ಲವೂ ಪೂರ್ಣ ಸತ್ಯ ಶೋಧಿತವಾಗಿರಲಿ, ಮತ್ತು ಹಾಗೆಯೇ ಶಾಸ್ವತವಾಗಿ ನಿಲ್ಲಲಿ. ಶ್ರೀಮನ್ಮಹಾರಾಜರವರು ರಾಜ್ಯದ ಮತ್ತು ಪ್ರಜೆಗಳ ಸತ್ಸೇವೆಯಲ್ಲಿ ನಿರತರಾಗಿ ದೀರ್ಘಕಾಲ ಬಿರಲೆಂಬ ಮೈಸೂರಿನ ಪ್ರಜೆಗಳ ಹಾರೈಕೆಯಲ್ಲಿ ನಾನೂ ಒಂದುಗೂಡುತ್ತೇನೆ.

ಎಮ್. ಕೆ. ಗಾಂಧಿ

ಶ್ರೇಷ್ಠ ನರಪತಿಗಳು.

ಪಂಡಿತ ಮಾಳವಿಯಾಜಿಯವರು-

ಮೈಸೂರಿನ ಪ್ರಜೆಗಳೇ ನಿಮ್ಮದೇ ಭಾಗ್ಯ! ಎಂತಹ ಅಂದವಾದ ನಾಡು ನಿಮ್ಮದು. ೨-೩ ಸಾವಿರ ಅಡಿ ಸಮುದ್ರ ಮಟ್ಟಕ್ಕೆ ಮೇಲಿದೆ. ಅಷ್ಟು ಚಳಿಯೂ ಇಲ್ಲ. ಅಷ್ಟು ಶಕೆಯೂ ಇಲ್ಲ. ಆರೋಗ್ಯಕರವಾದ, ಆಲ್ಹಾದಕರವಾದ ವಾಯುಗುಣ. ಮಿತಿಯಿಲ್ಲದ ಪ್ರಕೃತಿ ಸೌಭಾಗ್ಯ! ಇದರ ಜೊತೆಗೆ ಶ್ರೀ. ಕೃಷ್ಣರಾಜ ಒಡೆಯರನ್ನು ಮಹಾರಾಜರನ್ನಾಗಿ ಪಡೆದಿರುವಿರಿ. ಇದಕ್ಕಿಂತಲೂ ಪರಮ ಭಾಗ್ಯವಿನ್ನಾವದುಂಟು.

ಮಹಾರಾಜರ ವಿಶುದ್ಧವಾದ ಅಂತರಂಗ ಜೀವನ; ಅದರೊಂದಿಗೆ ತಮ್ಮ ಪ್ರಜೆಗಳಲ್ಲಿ ಅವರಿಗಿರುವ ಹಿತಚಿಂತನೆ; ಹಿರಿಯರಿಟ್ಟ ಹೆಜ್ಜೆಯಲ್ಲಿಯೇ ಹೆಜ್ಜೆ ಇಟ್ಟು ನಡೆಯುವದರಲ್ಲಿ ಅವರಿಗಿರುವ ಅನನ್ಯವಾದ ಭಕ್ತಿ ಮತ್ತು ತಮ್ಮ ನಂಬಿಗೆಯೊಳಗಿನವರಿಗಿರುವ ದೃಢವಾದ ಶ್ರದ್ಧೆ. ಅದರೊಂದಿಗೆ ಆಧುನಿಕ ಪ್ರಗತಿಗೆ ಅತ್ಯಗತ್ಯವಾದ ಸಾಧನಗಳ ಬೆಲೆಯನ್ನು ಕಟ್ಟುವದರಲ್ಲಿ ಅವರಿಗಿರುವ ಬುದ್ಧಿ ಚಾತುರ್ಯ ಮತ್ತು ಬಯ್ಯಾರವಿಲ್ಲದ ನಿಷ್ಕಪಟವಾದ ಸರಮತ ಸಹಿಷ್ಣುತೆ- ಈ ಗುಣ ವಿಶೇಷಗಳಿಂದ ಮೈಸೂರಿನ ಶ್ರೀಮನ್ಮಹಾರಾಜರವರು ನರಪತಿಗಳಲ್ಲೆಲ್ಲ ಶ್ರೇಷ್ಠರೆನಿಸಿರುವರು. ಅಷ್ಟು ಮಾತ್ರ, ತ್ರಿಕರಣಪೂರ್ವಕವಾದ ಗೌರವಕ್ಕೆ ಪಾತ್ರರಾಗಿರುವರು.

ಇದು ರಾಮರಾಜ್ಯ.

ಸರ ವಿಶ್ವೇಶ್ವರಯ್ಯನವರು-

ಇಂತಹ ರಾಜರನ್ನು ಪಡೆದ ಮೈಸೂರಿನ ಪುಣ್ಯಕ್ಕೆ ಎಣೆಯುಂಟೆ? ಮಹಾರಾಜರ ಘನತೆ, ಆಳಿತ ಶಕ್ತಿ, ಸುಜ್ಞಾನ ಮತ್ತು ಶ್ರೇಷ್ಠವಾದ ವಿಶುದ್ಧ ನೀತಿ ಇವೆಲ್ಲವೂ ಅವರ ಪ್ರಜೆಗಳ ಆಸ್ತಿಯು. ಅವರ ಜೀವನವು ಪರಿಶುದ್ಧವಾದದ್ದು; ಶ್ರೇಷ್ಠ ಆದರ್ಶಪ್ರಾಯವಾದದ್ದು. ಪ್ರಜೆಗಳ ಹಿತ ಸಾಧನೆಯಲ್ಲಿ ನೆಲೆಸಿ ಸ್ಥಿರವಾಗಿ ಉಳ್ಳದ್ದು. ಅದ್ದೇಕೆ ಅವರು ಜನರೊಳಗೆ ಬೆರೆತು ಮಿಳಿತು ಜೀವಿಸುವರು.

ಮೈಸೂರಿನ ಹೊರಗಿಂದರೋ ಅಲ್ಲಿನ ಜನರು ಶ್ರೀ ಮನ್ಮಹಾರಾಜರ ಆಡಳಿತದ ಕೀರ್ತಿಯನ್ನೇ ಹಾಡುವರು. ಭರತಖಂಡದ ರಾಷ್ಟ್ರೀಯ ಪಕ್ಷದವರೂ ಇವರ ರಾಜ್ಯಭಾರವು ನೀತಿಯುತವಾದುದು. ಪ್ರತಿಸೂಚಕವಾಗಿದುದು ಎಂದು ಒಪ್ಪುವರು. ಶ್ರೀ ಗಾಂಧಿಯವರು ಕೂಡ ಇದು ರಾಮರಾಜ್ಯ ಎಂದೊಮ್ಮೆ ವರ್ಣಿಸಿದ್ದಾರೆ.

ಇದೇನು ಕುನುಸೋ? ನ್ಯಾಯದ ಮಾದರಿಯೋ?

ಸಿಂದಿಗಿ ತಾಲೂಕದ ಮಾಮಲೇದಾರರು ಹೋದ ವರುಷ ಕೋರವಾರದ ನಾಡಗೌಡರಾದ ಹನುಮಂತರಾಯರ ಕುದುರೆಯನ್ನು ಅವರ ಭಾವುಬಂದರ ಕಡೆಯಿಂದ ಬರತಕ್ಕ ೧೧ ರೂಪಾಯಿ ಜೂಡಿ ಹಣದ ಸಲುವಾಗಿ ಜಪ್ತ ಮಾಡಿದರು. ಆ ಪದಿಮೂರು ರೂಪಾಯಿಗಳನ್ನು ಕೊಡಲಿಕ್ಕೆ ಬಾಧ್ಯನಲ್ಲ. ನನ್ನ ಭಾವುಬಂದರ ಕಡೆಯಿಂದ ವಸೂಲ ಮಾಡಿಕೊಳ್ಳಬೇಕೆಂದು ಎಷ್ಟು ಹೇಳಿದರೂ ಕೇಳಲಿಲ್ಲ. ಆ ಕುದುರೆಯನ್ನು ಲಿಲಾವ ಮಾಡಲಿಕ್ಕೆ ಮುದ್ದತ ನೇಮಿಸಿದರು. ಹನುಮಂತರಾಯರು ತಮ್ಮ ಕುದುರೆಯನ್ನು ಜಪ್ತ ಮಾಡಿದ್ದು ಅನ್ಯಾಯವೆಂದು ಅಸಿಸ್ಟಂಟ ಕಲೆಕ್ಟರಸಾಹೇಬರ ಕಡೆಗೆ ಅರ್ಜಿ ಮಾಡಿಕೊಂಡರು. ಅಸಿಸ್ಟಂಟ ಕಲೆಕ್ಟರಸಾಹೇಬರು ಕುದುರೆಯನ್ನು ಸಧ್ಯಕ್ಕೆ ಲಿಲಾವ ಮಾಡಬಾರದೆಂದು ಕೂಡಲೇ ಹುಕುಂ ಕಳಿಸಿದರು. ಮುಂದೆ ಆ ಪ್ರಕರ್ಣದ ಪೂರ್ಣ ವಿಚಾರವಾಗಿ ಜಪ್ತಿಯನ್ನು ರದ್ದ ಮಾಡಿ ಅವರ ಕುದುರೆಯನ್ನು ಅವರಿಗೆ ತಿರುಗಿ ಕೊಡಿಸಬೇಕೆಂದು ಮೇಲಧಿಕಾರಿಗಳ ಹುಕುಂ ಆಯಿತು. ಸದರಿ ೧೩ ರೂಪಾಯಿಗಳನ್ನು ಅವರ ಭಾವುಬಂದರ ಕಡೆಯಿಂದ ವಸೂಲ ಮಾಡಿಕೊಳ್ಳಲಾಯಿತು. ಹನುಮಂತರಾಯರು ದೊಡ್ಡ ಜಮೀನದಾರರೂ ಸಭ್ಯಗೃಹಸ್ಥರು ಇದ್ದಾರೆ. ಸರಕಾರಕ್ಕೆ ಅವರು ಕೊಡತಕ್ಕ ಹಣದ ವಿಷಯವಾಗಿ ಎಂದೂ ತಕರಾರ ಬಂದಿಲ್ಲ. ಇಷ್ಟಕ್ಕೇ ಇದು ಮುಗಿಯಲಿಲ್ಲ. ಈ ವರುಷ ಮೇ ತಿಂಗಳ ಕೊನೆಗೆ ಅದೇ ಮಾಮಲೇದಾರರು ಹನುಮಂತರಾಯರ ಕಡೆಯಿಂದ ಏನಾದರೂ ಬಾಕಿ ಬರುವದೇ ಹೇಗೆ ಎಂದು ಕೋರವಾರ ಗ್ರಾಮಸ್ಥರಿಗೆ ಹುಕುಂ ಕಳಿಸಿದರು. ಸರಕಾರಿ ಜಮೀನದ ಬಾಬತು ೫ ರೂ. ೪ ಆಣೆ ಮಾತ್ರ ಬರತಕ್ಕದ್ದಿರುತ್ತದೆಂದು ಅವರು ತಿಳಿಸಿದರು. ಆ ವೇಳೆಯಲ್ಲಿ ಹನುಮಂತರಾಯರು ಊರಲ್ಲಿ ಇದ್ದಿಲ್ಲ. ಮತ್ತು ೨ ಗ್ರಾಮದ ನೂರಿನ್ನೂರು ರೂಪಾಯಿ ತೆರಿಗೆಯನ್ನು ಕೊಡುವರು ಎಷ್ಟೋ ಜನರಿದ್ದರು. ಅವರು ಇನ್ನೂ ಕೊಟ್ಟಿದ್ದಿಲ್ಲವೆಂದು ಗ್ರಾಮ ಖಾತೆಯಿಂದ ಇವತ್ತಿಗೂ ಸಿದ್ಧವಾಗುತ್ತದೆ. ಹೀಗಿದ್ದರೂ ಹನುಮಂತರಾಯರಿಗೆ ಚೌಥಾಯಿ ದಂಡ ಮಾಡಿ ಹಣವನ್ನು ಹಾಜರ ಮಾಡಬೇಕು. ಇಲ್ಲದಿದ್ದರೆ ಜಪ್ತಿ ಮಾಡಬೇಕೆಂದು ಮಾಮಲೇದಾರ ಸಾಹೇಬರು ನೋಟೀಸು ಕೊಟ್ಟರು. ಅದೇ ತಾಲೂಕದಲ್ಲಿ ಅಲಗೂಡದ ಇನಾಮದಾರರಾದ ರಾಮಸಾಹೇಬ ದೇಶಮುಖ ಇವರ ಹೆಸರಿಗೆ ಜುಲೈ ತಿಂಗಳ ವರೆಗೆ ೧೩೭೭ ರೂಪಾಯಿ ಬಾಕಿ ಇತ್ತು. ಸಿಂದಿಗಿ ಮಾಮಲೇದಾರರು ತಮ್ಮ ಅಧಿಕಾರದ ಉಪಯೋಗವನ್ನು ಯಾವ ರೀತಿಯಿಂದ ಮಾಡುತ್ತಾರೆಂಬದು ಇದರ ಮೇಲಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಕಲೆಕ್ಟರಸಾಹೇಬರಂತೂ ಕಣ್ಣು ಮುಚ್ಚಿದ್ದಾರೆ. ಅಂಧ ಒಳಿತ ಕೇಳುವರಾರು?

ಓರ್ವ

ಗಂಡನು ಹೆಂಡತಿಯನ್ನು ಗುಂಡು ಹಾಕಿ ಕೊಂದನು.

—೦—

ಹಿಂದೂಸ್ಥಾನದಲ್ಲಿ ಜೆ ಆಯ್ ಪಿ. ರೇಲ್ವೆಯ ಓರ್ವ ಕಾವಲುದಾರನಾದ ಮ್ಯಾಥ್ಯೂ ಎಂಬ ಹೆಸರಿನ ಸಾಹೇಬನು ಹೋದ ಬುಧವಾರ ರಾತ್ರಿಯಲ್ಲಿ ತನ್ನ ಹೆಂಡತಿಗೆ ಗುಂಡು ಹಾಕಿ ಕೊಂದನು. ಆ ನಂತರ ತಾನೂ ಗುಂಡು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡು ಸರಕಾರದಿಂದ ಗಲ್ಲಿಗೆ ಹಾಕಿಸಿಕೊಳ್ಳುವ ತ್ರಾಸ ಉಳಿಸಿಕೊಂಡನು.

ಬುದ್ಧಿಯುಳ್ಳ ಹಲಕೆಲವು ಸಭ್ಯ ಗೃಹಸ್ಥರು ಕೆಳಗೆ ಕಾಣಿಸಿದ ಮೇರೆಗೆ ರಾಟಿ ದಾನಗೂ ಹದಿ ಪೂರೈಸು ವದರ ಸಲುವಾಗಿ ವಾಗ್ದಾನ ಮಾಡಿದರು

ರಾಟೀ ಕೊಟ್ಟವರು.

೧ ಮಿ. ಬಸಟ್ಟೆಪ್ಪ ಹುಂಬಿ ೫ ವಿದ್ಯಾರ್ಥಿಗಳಿಗೆ ಸಾತಲವಪ್ಪ ೨ ಮಿ. ರಾಮಪ್ಪ ಬೆಟಗೇರಿ ೫ ಸದರ ೩ ವೆ. ರಡ್ಡಿಯವರು ಹುಸಗೋಡಿಮಠ ೫ ಸದರ ೪ ಮಿ ಮಲ್ಲಪ್ಪ ಉಪಾಸಿ ೫ ಸದರ ೫ ಮಿ. [illegible]ಗೆಪ್ಪ [illegible] ೨ ಸದರ ೬ ಮಿ ಕೊಟ್ರಪ್ಪ [illegible] ೨ ಸದರ ೭ ಮಿ. [illegible] ೨ ಸದರ ೮ ಮಿ. ಮುರಿಗೆಪ್ಪ [illegible] ೨ ಸದರ ೯ ಮಿ. ಸಿದ್ರಾಮಪ್ಪ [illegible] ೨ ಸದರ ೧೦ ಮಿ. ಕರಪತ್ರೆಪ್ಪ [illegible] ೫ ಸದರ

ರಾಟೀ ಕೊಟ್ಟವರು.

೧ ಮಿ. [illegible]ಪ್ಪ [illegible]ಪ್ಪ ಸಂಕಣ್ಣನವರ ೧ ರಾಟಿ ೨ ಮಿ. [illegible]ಪ್ಪ [illegible] ೨ ಸದರ ೩ ಮಿ. [illegible]ಪ್ಪ [illegible] ೨ ಸದರ ೪ ಮಿ [illegible]ಪ್ಪ [illegible] ೨ ಸದರ ೫ ಮಿ. ಮುರಿಗೆಪ್ಪ [illegible] ೧ ಸದರ ೬ ಮಿ. ಬಸಪ್ಪ [illegible] ೧ ಸದರ ೭ ಮಿ. [illegible]ಪ್ಪ [illegible] ೧ ಸದರ

ಈ ಪ್ರಕಾರ ವಾಗ್ದಾನದ ಕೆಲಸ ಮುಗಿದ ಬಳಿಕ ಅಧ್ಯಕ್ಷರ ಹಾಗೂ ಸಭಿಕರ ಆಭಾರ ಮನ್ನಣೆ ಹಾರ ತುರಾಯಿ [illegible] ಮಂಗಲಗಳೊಡನೆ ಸಭಾ ವಿಸರ್ಜನೆಯಾಯಿತು.

ಸಿ. ಎಸ್. ಹುಂಬಿ,
ಸೆಕ್ರೆಟರಿ.

[illegible] ಗಾಯಕವಾಡ ಮಹಾರಾಜರು ತಮ್ಮ ಸ್ವಂತ ದ್ರವ್ಯದಿಂದ ಒಂದು ಲಕ್ಷ ರೂಪಾಯಿಗಳನ್ನು [illegible] ಫಂಡಿಗೆ ಕೊಟ್ಟಿದ್ದಾರೆ. ರಾಜಮನೆತನದ ಉಳಿದ ಜನರು ಸೇರಿ ಒಂದು ಲಕ್ಷ ಕೊಟ್ಟಿದ್ದಾರೆ.

ಧಾರವಾಡ–

ಇತ್ತಿಗೆ ಹೊಸ ಪ್ರಚಾರಕರಾದ ಶ್ರೀಯುತ [illegible]ವರು ಇಲ್ಲಿಗೆ ಒಂದು [illegible] ತಿಂಗಳಾಯಿತು. ಇಷ್ಟೇ ಸ್ವಲ್ಪ ಅವಧಿಯಲ್ಲಿ ಅವರ ಪ್ರಯತ್ನದಿಂದ [illegible] ಕ್ಲಾಸುಗಳು ನಡೆ[illegible] ಇಂಗ್ಲೀಷ ಸ್ಕೂಲು, ಕರ್ನಾಟಕ [illegible] ವರ್ಗಗಳನ್ನು ನಡೆಸುತ್ತಿರುವರು. ಈಗಿನ ವರೆಗೆ ವಿದ್ಯಾರ್ಥಿಗಳ [illegible] ೧೦೦ ಇರುತ್ತದೆ. [illegible]

ಶ್ರೀ ಮಹಾಶಿಕಪ್ರಭು ಪ್ರಸಾದಿತ
ಗಾಯನ ವಾದನ ವಿದ್ಯಾಲಯ
ಧಾರವಾಡ.

ಶ್ರೀ ವಿದ್ಯಾಲಯದಲ್ಲಿ ಗಾಯನ, [illegible], ತಬಲಾ, ಸತಾರ [illegible] ಕಲಿಸಲಾಗುತ್ತದೆ.

[illegible]

ಪತ್ತೆ
[illegible]
ಗಾಯನ ವಾದನ ವಿದ್ಯಾಲಯ
[illegible]
[illegible], ಧಾರವಾಡ.

ಅಧ್ಯಕ್ಷ [illegible]
[illegible]

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** [illegible]

ಅತ್ಯಂತ ಖಾತ್ರಿಯಾದ ಗುಳಿಗೆ ೧೦ ಕ್ಕೆ [illegible] ರೂಪಾಯಿ.
೨–೩ ಗುಳಿಗೆ ಸೇವಿಸಿ ಬಂದು [illegible]
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ [illegible]
ಅಸಂಖ್ಯ [illegible] ಗುಳಿಗೆ ಸೇವಿಸುತ್ತ [illegible]
[illegible] ಸುರಕ್ಷಿತರಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. [illegible], ಜಿಲ್ಲಾ ಬೆಳಗಾವ.

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕ ಲಿಮಿಟೆಡ ಧಾರವಾಡ

—೦—

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ಆರು ತಿಂಗಳು, ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲಾವಧಿವರೆಗೆ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಆರು ರೂಪಾಯಿ ಮತ್ತು ವರ್ಷಕ್ಕೆ ಆರುವರಿ ರೂಪಾಯಿ ಬಡ್ಡಿ ದೊರೆಯುವದು ಹೆಚ್ಚು ಕಾಲಾವಧಿಯಿಂದ ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನೆಗಳೂ ಪತ್ರೀಕ ಇಟ್ಟುಕೊಳ್ಳಲ್ಪಡುವವು ಚಕ್ಕ ವ ಹುಂಡಿಯ ವ್ಯವಹಾರ ಮಾಡಲ್ಪಡುವದು

ಮೆಸರ್ಸ ದೇಶಪಾಂಡೆ ಮತ್ತು ಅಕ್ಕಾಚಾರ್ಯ ಶೆಟ್ಟಿ
ಕಂಪನಿ ಮ್ಯಾನೇಜಿಂಗ ಏಜಂಟ್ಸ.
[illegible]

ಜಗತ್ಪ್ರಸಿದ್ಧವಾದ
ಊದು ಬತ್ತಿಗಳು

ನಮ್ಮಲ್ಲಿ ಎಲ್ಲಕ್ಕೂ ಉತ್ತಮವಾದ ಊದುಬತ್ತಿ [illegible] ಸೇರು ೧ಕ್ಕೆ ೧–೦–೦ ಅಂತಾಯಿತ [illegible] ವಿವಿಧ [illegible] ಬಿಲ್ಲೆ, ಪನ್ನಿರು, ಶೃಂಗಾರಮೂಲಕ ತೈಲ, ದಶಾಂಗ, ಇವೇ ಮೊದಲಾದ ಸುಗಂಧ ದ್ರವ್ಯಗಳು [illegible] ಕ್ರಿಯೆಕ್ಕೆ ದೊರೆಯುತ್ತ ಬೇಕಾದವರು ನಮಗೆ ಆರ್ಡರ್ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿ. ಎಲ್. ಉಪಾಧ್ಯಾಯ ಅಂಡ ಸನ್ಸ
ಸುಗಂಧಾಧಿಕಾರಿ ಮೈಸೂರು

ಈ ಪತ್ರವನ್ನು [illegible] ಅವರು ಧಾರವಾಡದಲ್ಲಿರುವ ತಮ್ಮ [illegible] ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ | ಬಿಡಿ ಅರ್ಧ ಆಣೆ

ಸಂಪಾದಕರು:— [illegible]

ಸಂ. [illegible] ಧಾರವಾಡ ಸೋಮವಾರ ತಾರೀಖು [illegible]ನೇ ಆಗಸ್ಟ ೧೯೨೭ | ಸಂಚಿಕೆ [illegible]

ಕಿರ್ಲೋಸ್ಕರ ಶೇಂಗಾ [ಭೂಮೂಗು] ಒಡೆಯುವ ಯಂತ್ರಗಳು

ಈ ಯಂತ್ರಗಳು ಎರಡು ಮಾದರಿಯವು ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಕಬ್ಬಿಣದವು. ಜಾಳಿಗೆ ಕಬ್ಬಿಣದ್ದು. ಶೇಂಗಾ ಒಡೆಯಲು ಯಂತ್ರದಲ್ಲಿ [illegible] ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳ ರಚನೆ [illegible] ಇಂಜಿನದಿಂದ ನಡೆಸುವದೊಂದು ಹಾಗು ಕೈಯಿಂದ ತಿರುಗಿಸುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು [illegible] ಮಾರಾಟಗಾರರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ಕೇಳಿಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ವರ್ಯಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—o—

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಆರು ಪ್ರತಿಶತ [illegible] ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ [illegible] ಮಾಡಲ್ಪಡುವವು. [illegible] ಜಾಮೀನು ಮತ್ತು ಬೇರೆ [illegible] ಜಿನುಗಳಿಗೆ [illegible] ಕೊಡುವರು.

[illegible] ಮಾಹಿತಿಗಳನ್ನು [illegible] ತಿಳಿಯಬಹುದು.

[illegible]
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಒಳ್ಳೆಯ ದರವು ನೂರಕ್ಕೆ [illegible] ತಿಂಗಳಿಗೆ [illegible] ಆಣೆಯಂತಿರುತ್ತದೆ.

ಎ. ಬಿ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ [illegible] ವರ್ಷದ ಚಂದಾದಾರರ [illegible] ವ್ಹಿ. ಪಿ. [illegible] ಕಳಿಸುವೆವು. ಚಂದಾದಾರರು ವ್ಹಿ. ಪಿ. [illegible] ವಿಜಯವನ್ನು [illegible]

ಮ್ಯಾನೇಜರ ವಿಜಯ ಧಾರವಾಡ

[illegible]

—o—

[illegible] ತಿಂಗಳು ಕಾಲಾವಧಿಯ [illegible] ವರ್ಗಣಿ [illegible] ಮುಂದೆ ಪ್ರತಿಯೊಂದು [illegible] ಇಂಗ್ಲಿಷ ಪ್ರತಿಯೊಂದು [illegible] ಬ್ಯಾಂಕ [illegible] ಸಾರ್ವಜನಿಕ [illegible] ಕನ್ನಡದಲ್ಲಿ [illegible] ಕಳಿಸಿ [illegible] ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ,

—o—

೨೦ನೇ ಶತಮಾನದ ಗೊಂದಲ	೧೦ ಆಣೆ,
ವಿಚಿತ್ರ ಸಂಶಯ	೫ ,,
ಲೋಕಮಾನ್ಯ ಟಿಳಕರ ಚರಿತ್ರೆ	೪ ,,
[illegible] ದಾಸರ ಚರಿತ್ರೆ	೩ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೮ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೧೫-೮-೨೭ ನೇ ಇಸ್ವಿ

ಮುಸಲಮಾನರ ಕೋಪ ಶಾಂತವಾಯಿತು

ಲಾಹೋರಿನ ರಂಗಿಲ ರಸೂಲ ಅಂದರೆ ವಿಲಾಸಿ ಪೈಗಂಬರನೆಂದು ಬರೆದ ಲೇಖದಲ್ಲಿ ಕಾಯದಯಲ್ಲಿ ಕಂಡುಬಂದ ನ್ಯೂನತೆಗಾಗಿ ನ್ಯಾಯಮೂರ್ತಿ ದಿಲೀಪಸಿಂಗರು ಆರೋಪಿಗಳನ್ನು ದೋಷಮುಕ್ತ ಮಾಡಿದ್ದರಿಂದ, ಮುಸಲಮಾನರು ಸತ್ಯಾಗ್ರಹ, ಕಾಯದಭಂಗ ಮಾಡಲುದ್ಯುಕ್ತರಾದುದಲ್ಲದೆ, ತೀರ್ಪು ಹೇಳಿದ ನ್ಯಾಯಮೂರ್ತಿ ದಿಲೀಪಸಿಂಗರಿಗೆ ರಾಜೀನಾಮೆ ಕೊಡಲು ಒತ್ತಾಯಪಡಿಸಬೇಕೆಂದು ದುರಾಗ್ರಹ ತೊಟ್ಟರು. ಇದೇ ಸಮಯದಲ್ಲಿ ರಿಸಾಲಾ ವರ್ತಮಾನವೆಂಬ ಪತ್ರಿಕೆಯಲ್ಲಿ ಪೈಗಂಬರ ವಿರುದ್ಧವಾಗಿ ಒಂದ ಲೇಖವು ಮುಸಲಮಾನರನ್ನು ಸಂತೋಷಪಡಿಸಲು ಪಂಜಾಬ ಸರಕಾರಕ್ಕೆ ಅನುಕೂಲಿಸಿತು. ಈ ಪತ್ರ ಸಂಪಾದಕ ಮತ್ತು ಮುದ್ರಕರನ್ನು ಹಿಡಿದು ತುರಂಗದಲ್ಲಿ ಹಾಕಿದರು. ಜಾಮೀನದಷ್ಟು ದೊಡ್ಡ ರಕಮಿನ ಮುಚ್ಚಳಿಕೆ ಕೊಡುತ್ತೇನೆಂದರೂ ಜಾಮೀನದ ಮೇಲೆ ಬಿಡಲಿಲ್ಲ. ಹಿಂದೂ, ಮುಸಲಮಾನರಾದಂಥ ಜಡ್ಜಿಗಳ ಬದಲಾಗಿ ಇಬ್ಬರು ಗೌರಕಾಯ ಜಡ್ಜರನ್ನೇ ವಿಚಾರಣೆಗಾಗಿ ನೇಮಿಸಿದರು. ಜಡ್ಜರು ಇಬ್ಬರಿಗೂ ಆರಾರು ತಿಂಗಳ ಸಕ್ತ ಮಜೂರಿಯ ಶಿಕ್ಷೆ ವಿಧಿಸಿದರು. ಈ ಶಿಕ್ಷೆಯಿಂದ ಮುಸಲಮಾನರಿಗೆ ತಮ್ಮ ಪೈಗಂಬರ ಸಂರಕ್ಷಣೆ ಮಾಡಿದಷ್ಟು ಆನಂದವಾಗಿರುತ್ತದೆ. ಪಂಜಾಬ ಸರಕಾರದ ವಿರುದ್ಧ ಎಬ್ಬಿಸಿದ ಕೋಲಾಹಲವೆಲ್ಲ ಶಾಂತವಾಯಿತು. ಈನಂತರ ಹಿಂದೂ ಬಾಂಧವರ ಕೂಡ ಸ್ನೇಹವಾಗಿರಬೇಕೆಂದು ಸರಕಾರ ಹೇಳುವರು ತಮ್ಮ ಮುಸಲಮಾನ ಬಾಂಧವರನ್ನು ದ್ದೇಶಿಸಿ ವಿನಂತಿಯ ಕಾರನ್ನು ಪ್ರಸಿದ್ಧ ಮಾಡಿದ್ದಾರೆ.

ಒಬ್ಬರ ಅನ್ನ, ಮತ್ತೊಬ್ಬರ ವಿಷವೆನ್ನುವಂತೆ ಪ್ರಸ್ತುತದಲ್ಲಿ ಹಿಂದೂ ಮುಸಲಮಾನ ಕಲಹದ ಪರಿಸ್ಥಿತಿಯಾಗಿದೆ. ನ್ಯಾಯಮೂರ್ತಿ ದಿಲೀಪಸಿಂಗರಿಗೆ ಯಾವ ಲೇಖವು ಕಾಯದೆಯ ದೃಷ್ಟಿಯಿಂದ ಶಿಕ್ಷೆಗೆ ಪಾತ್ರವೆನಿಸಲಿಲ್ಲವೋ? ಅದೇ ಮಾದರಿಯ ಲೇಖವು ಇಬ್ಬರು ಯುರೋಪಿಯನ ಜಡ್ಜರಿಗೆ ಅಪರಾಧವೆನಿಸಿ, ಆ ಬಗ್ಗೆ ಅವರು ಸಕ್ತ ಮಜೂರಿಯ ಶಿಕ್ಷೆ ವಿಧಿಸಿದ್ದು ತೀರ ಅನ್ಯಾಯವೆಂದೂ, ಮುಸಲಮಾನರನ್ನು ಸಮಾಧಾನಪಡಿಸುವದಕ್ಕಾಗಿಯೇ ಈ ಪ್ರಕಾರದ ನಿರ್ಣಯ ಹೇಳಲ್ಪಟ್ಟಿರುತ್ತದೆಂದೂ ಹಿಂದೂ ಜನರಿಗೆ ಅನಿಸುವದು ಸಹಜವಾಗುತ್ತದೆ ರಿಸಾಲಾವರ್ತಮಾನದ ದೆಸೆಯಿಂದ ಮುಸಲಮಾನರ ಕೋಪಾಗ್ನಿಯಲ್ಲಿ ಆಹುತಿಬಿದ್ದಂಥವರಿಗಾಗಿ ಉತ್ತರ ದೇಶದ ಹಿಂದೂ ಜನರು ಸಂತಾಪಗೊಂಡು, ಹರತಾಳ, ಸತ್ಯಾಗ್ರಹ ಮಾಡಿದ್ದಾರೆ ಹಿಂದೂ ಜನರ ಅಂತಃಕರಣದಲ್ಲಿ ವಿಷದ ಮುಳ್ಳಿನಂತೆ ಚುಚ್ಚಿದ ಈ ತೀರ್ಮಾನದ ಬಗ್ಗೆ ಪಂಜಾಬ ಅಥವಾ ಹಿಂದುಸ್ಥಾನ ಸರಕಾರದ ಮೇಲೆ ಎಷ್ಟರಮಟ್ಟಿಗೆ ಪರಿಣಾಮವಾಗುವಂತೆ ತೋರುವದಿಲ್ಲೆಂಬದು ಅತ್ಯಂತ ದುಃಖದ ಸಂಗತಿಯು.

ವಾಸ್ತವಿಕವಾಗಿ- ಸರಕಾರದವರು ರಿಸಾಲಾ ವರ್ತಮಾನದ ಆರೋಪಿಗಳನ್ನು ದೋಷಮುಕ್ತ ಮಾಡಿ, ಯಾವದೇ ಜಾತಿಯ ದ್ವೇಷಾಂಶ ಸಂಭೂತದ, ನಾಡುಸಂತರು ಇವರ ಮೇಲೆ ದರ್ಜನಿಂದ್ಯ ಎನಿಸುವಂಥ ಲೇಖ ಬರೆಯುವರು ಅವರ ದಮಾಗುತ್ತದೆಂದು ಪಿನಲಕೋಡಿನಲ್ಲಿ ದುರಸ್ತ ಮಾಡಬೇಕಿದ್ದು. ರಂಗಿಲ ರಸೂಲ ಅಥವಾ ರಿಸಾಲಾ ವರ್ತಮಾನದ ಸಂಪಾದಕರಂಥ ಅಥವಾ ಅದಕ್ಕೂ ಭಯಂಕರವಾದ ಮತ್ತು ಅಸಹ್ಯವಾದ ಅಪರಾಧ ಮಾಡಿದಂಥ ಮುಸಲಮಾನ ಲೇಖಕರು ಇದ್ದಾರೆ ಅಂಥ ಬರಹಗಳನ್ನು ಬರೆದು ಪ್ರಸಿದ್ಧ ಮಾಡಿದ ಚಿಕ್ಕ ದೊಡ್ಡ ಪುಸ್ತಕಗಳೂ ಉಂಟು. ಇವರಿಗೂ ಸರಕಾರದವರು ಶಿಕ್ಷೆ ವಿಧಿಸದೆ, ಹಿಂದೂ ಜನರಿಗೆ ಶಿಕ್ಷೆ ಮಾಡಿದ್ದು ಸಂಪೂರ್ಣ ಪಕ್ಷಪಾತವೆನಿಸುತ್ತದೆ. ರಾಯಲ ಕಮೀಶನ ಬರುವದು. ಅದಕ್ಕೆ ಅನುಕೂಲವಾಗಿ ಮುಸಲಮಾನರನ್ನು ಒಲಿಸಿಕೊಳ್ಳುವದಕ್ಕಾಗಿ ಅಧಿಕಾರಿಗಳು ರಿಸಾಲಾ ವರ್ತಮಾನದ ಎಡಿಟರರನ್ನು ಬಲಿಕೊಟ್ಟರೆಂದು ಹಿಂದೂ ಲೋಕಮತವಾಗಿದೆ. ಅನ್ಯರ ಮಕ್ಕಳನ್ನು ಬಾವಿಯಲ್ಲಿ ನೂಗಿಸಿ ನೀರು ಎಷ್ಟು ಆಳ ನೋಡುವ ಮಾದರಿಯೇ ಸೈ!!

ಅಸೆಂಬ್ಲಿಯಲ್ಲಿ ಬರುವ ಠರಾವುಗಳು.

—o—

ಅಸೆಂಬ್ಲಿಯಲ್ಲಿ ಅನೇಕ ಠರಾವುಗಳು ಬಂದಿವೆ ಇವನ್ನೆಲ್ಲ ಸಾನ- ಅಂತಿಯಲ್ಲಿಯೇ ಕಳಿಸಿದ್ದಾರೆ. ಇವುಗಳ ಬ್ಯಾಲಟ ಅಂದರೆ ಚೀಟಿ ಹಾಕಲಾಗಿ ಕೆಳಗಿನ ಠರಾವುಗಳು ಹೊರಬೀಳುತ್ತವೆ.

೧ ಡಾಕ್ಟರ ಮುಂಜೆಯವರ ಠರಾವು- ಸ್ಕೀನ ಕಮಿಟಿಯ ರಿಪೋರ್ಟಿನ ಪ್ರಕಾರ ಹಿಂದೀ ಸೈನ್ಯದಲ್ಲಿ ಅರ್ಧದಷ್ಟು ಕಾಮದಾರರನ್ನು ಹಿಂದೀ ಮಾಡಬೇಕು ಮತ್ತು ಶಿಕ್ಷಣಕ್ಕಾಗಿ ದಂಡಿನ ಕಾಲೇಜವನ್ನು ಸ್ಥಾಪಿಸಬೇಕು

೨ ಶ್ರೀ ಗಯಾ ಪ್ರಸಾದಸಿಂಗ- ನ್ಯಾಯ ವಿಧಾಯಕ ಮತ್ತು ನ್ಯಾಯ ಪ್ರವರ್ತಕ ಖಾತೆಗಳನ್ನು ಬೇರೆ ಮಾಡಬೇಕು.

೩ ಪಂಡಿತ ರಾಕಧರದಾಸ ಭಾರ್ಗವ- ಪೋಸ್ಟಕಾರ್ಡ ಮತ್ತು ಪಾಕೀಟಿನ ದರವು ಮೊದಲಿನಂತೆ ಮುಕ್ಕಾಲು ಆಣೆ ಆಗಬೇಕು.

೪ ಡಾಕ್ಟರ ಗೌರ- ಪ್ರಿವ್ಹಿ ಕೌನ್ಸಿಲಿಕ್ಕೆ ಬದಲಾಗಿ ಹಿಂದುಸ್ಥಾನದ ದೆಸೆಯಿಂದ ದಿಲ್ಲಿಯಲ್ಲಿ ಸುಪ್ರೀಮ ಕೋರ್ಟ ಆಗಬೇಕು.

೫ ಮಿ ನಿಯೋಗಿ- ಕಲ್ಲಿದ್ದಲಿನ ಖಾಣಿಗಳಿಂದ ಕೆಲಸಗಾರ ಮಜೂರಿಗಳ ಮಟ್ಟಿಗಾದರೂ ಕಾಯಿದೆಯಿಂದ ರಕ್ಷಣೆ ಕೊಡಬೇಕು.

೬ ಶ್ರೀ. ಮಾಧವರಾವ ಅಣೆ ದಂಡಿನ ಬಲಗಳಲ್ಲಿ ಇದ್ದು ಹಿಂದೀ ಗೃಹಸ್ಥರು ರಾಯಲ ರಿಕ್ರುಟರಾಗಿರತಕ್ಕದ್ದು

೭ ಮಿ ಜೋಶಿ ಗಿರಣಿ, ಕಾರಖಾನೆಗಳಲ್ಲಿ ಕೆಲಸ ಮಾಡುವಂಥವರ ಸಾಂಪತ್ತಿಕ ಸ್ಥಿತಿಯ ಒಂದು ಕಮಿಶನ ನೇಮಿಸಿ ವಿಚಾರ ಮಾಡತಕ್ಕದ್ದು.

ಕಲ್ಲಿದೆಯ ಕಲೆಕ್ಟರರ ಉದಾಸೀನತೆ.

—o—

ಒಡಿಸ್ಸಾದ ಕಲೆಕ್ಟರರು ಹೇಗೆ ಕಲ್ಲೆದೆಯವರಾಗಿದ್ದಾರೆಂಬದನ್ನು ಕೌನ್ಸಿಲದಲ್ಲಿ ಇಬ್ಬರು ಮೆಂಬರರು ಜಾಹೀರ ಮಾಡಿದ್ದಾರೆ ಶ್ರೀ ಭಾರತಿ ಸಾಹೇಬರು ಆ ಜಿಲ್ಹೆಯಲ್ಲಿ ತಿರುಗಾಡಿ ಬಂದು, ಮುಂದೆ ಕೊಟ್ಟಂತೆ ಜಾಹೀರ ಮಾಡಿದ್ದಾರೆ.

ಅವಧಿದದಲ್ಲಿ ಎರಡು ಸಾವಿರ ಮತ್ತು ಜಂಬುಸರದಲ್ಲಿ ಮೂರು ಸಾವಿರ ಗುಡಿಸಲುಗಳು ಬಿದ್ದವೆ ಇವನ್ನು ಕೂಡಲೆ ಕಟ್ಟಬೇಕಾಗಿದೆ ೨೦ ಸಾವಿರ ಜನರಿಗೆ ನೆರಳು ಇಲ್ಲ. ಸರಕಾರವು ಎಳೆ, ಗಳ, ಸೀಬು, ಹಗ್ಗ, ಮುಂತಾದ್ದನ್ನು ಪೂರೈಸಬೇಕು ನಿರಾಶ್ರಿತರ ದೆಸೆಯಿಂದ ಸಧ್ಯದ ಮಟ್ಟಿಗೆ ಗುಡಿಸಲುಗಳನ್ನು ಕಟ್ಟಿಸುತ್ತಿದ್ದೇವೆಂದು ಕಲೆಕ್ಟರರು ಕೌನ್ಸಿಲಕ್ಕೆ ತಿಳಿಸಿದ ಸುದ್ದಿಯು ಸುಳ್ಳು. ಅವಧಿದದಲ್ಲಿ ಈಗೀಗ ಮೂರು ವ್ಯಾಗನ ಡವಿಗೆಗಳು ಬಂದಿವೆ ಆದರೆ ಅವನ್ನು ಜನರಿಗೆ ಹಂಚಿಕೊಟ್ಟಿಲ್ಲ ಕಾಂಗ್ರೆಸದ ಸ್ವಾಲಂಟಿಯರರು ಹಳ್ಳಿಯಿಂದ ಹಳ್ಳಿಗೆ ಹೋಗಿ ಜನರಿಗೆ ಅನ್ನವಸ್ತ್ರಗಳನ್ನು ಹಂಚುತ್ತಿದ್ದಾರೆ.

ಆನಂದದ ಸುದ್ದಿ!

ಟ್ರೇನಿಂಗ ಕಾಲೇಜವು ಪುನಃ ಪ್ರಾರಂಭವಾಯಿತು.

ಕನ್ನಡ ಶಾಲಾ ಪತ್ರದ ಸಂಪಾದಕರು ಕೆಳಗಿನ ಲೇಖವನ್ನು ಸ್ಪೇಶಲ್ಲಾಗಿ ವಿಜಯದಲ್ಲಿ ಪ್ರಕಟವಾಗಬೇಕೆಂದು ಕಳಿಸಿಕೊಟ್ಟಿದ್ದಾರೆ.

ಧಾರವಾಡ ಟ್ರೇನಿಂಗ ಸ್ಕೂಲು ನಿಂತುಹೋದ ವಾರ್ತೆಯನ್ನು ಪ್ರಕಟಿಸಿದ ಕೆಲವು ದಿನಗಳಲ್ಲಿಯೇ ಅದು ಪುನಃ ಪ್ರಾರಂಭವಾಯಿತೆಂದು ಬರೆಯುವ ಸುಯೋಗವು ಒಂದದ್ದಕ್ಕಾಗಿ ನಾವು ಆನಂದಪಡಬೇಕಾಗಿದೆ. ಕರ್ನಾಟಕದ ವೃದ್ಧಪಿತಾಮಹರಾದ ದಿ. ಬ. ರೊದ್ದರಾಯರು ನಮ್ಮ ಭಾಗದ ಎಮ್. ಎಲ್. ಸಿ. ಒಬ್ಬರು, ಅವರಲ್ಲಿ ಮುಖ್ಯವಾಗಿ ಮಿ. ಜೋಗ ಬಂಡೋಪಂತರು, ರಾ. ಬ. ಕಂಬಳಿಯವರು, ಮಿ. ಚಿಕ್ಕೋಡಿಯವರು, ಕರ್ನಾಟಕದ ಎಲ್ಲ ವರ್ತಮಾನಪತ್ರಕಾರರು, ಮುಂತಾದ ಮುಂದಾಳುಗಳ ಪ್ರಯತ್ನದಿಂದಲೇ ೬೭-೬೮ ವರ್ಷಗಳ ವಯೋವೃದ್ಧ ಟ್ರೇನಿಂಗ ಕಾಲೇಜದ ವ್ಯತ್ಯರೀರದಲ್ಲಿ ಪುನಃ ಜೀವಕಳೆ ತುಂಬಿತೆನ್ನಬೇಕಾಗುವದು. ಪುನರ್ಜನ್ಮಕ್ಕೆ ಬಂದ ಟ್ರೇನಿಂಗ ಸ್ಕೂಲು ದಿನದಿನಕ್ಕೆ ಹೆಚ್ಚು ಹೆಚ್ಚಾಗಿ ಬೆಳೆದು ಮೊದಲಿನ ಟ್ರೇನಿಂಗ ಕಾಲೇಜಿನಂತೆ ಅಭಿವೃದ್ಧಿ ಹೊಂದಿ ಕರ್ನಾಟಕ ಜನತೆಗೆ ವಿದ್ಯಾದಾನ ಮಾಡಿ ಶ್ರೇಯಸ್ಸು ಪಡೆದು ಬಾಳಲೆಂದು ಹಾರೈಸುವೆವು.

ಕೆಳಗೆ ಬರೆದಂತೆ ಬೇರೆ ಬೇರೆ ಬೋರ್ಡುಗಳಿಂದಲೂ ಸಂಸ್ಥಾನಗಳಿಂದಲೂ ಕೂಡಿ ಒಟ್ಟಿಗೆ ೩೩ ಜನರನ್ನು ಈ ವರ್ಷ ಆರಿಸಿರುವರು ಟ್ರೇನಿಂಗ ಸ್ಕೂಲಿಗೆ ಆರಿಸಿದ ಶಿಕ್ಷಕರು ತಮಗೆ ಬೇಕಾಗುವ ಹಾಸಿಗೆ ಹೊದಿಕೆ ಆವೆ ಬಂಚಡಿ ಎಲ್ಲ ಕ್ರಮಿಕ ಪುಸ್ತಕಗಳು, ೧೨ ರೂಪಾಯಿ ಅಡ್ಮಿಸನ ಹಣ ಮುಂತಾದ ಎಲ್ಲ ಸಾಮುಗ್ರಿಗಳನ್ನು ತೆಗೆದುಕೊಂಡು ಬರತಕ್ಕದ್ದು. ಈಗಾಗಲೇ ಎರಡು ತಿಂಗಳ ಕಾಲವು ಕಳೆದು ಹೋಗಿರುವದರಿಂದ ವಿದ್ಯಾರ್ಥಿಗಳು ಆದಷ್ಟು ಬೇಗನೆ ಬಂದು ಹಾಜರಾಗುವದು ತೀರ ಅವಶ್ಯಕ ಮಾತಾಗಿರುವದೆಂಬುದನ್ನು ಮರೆಯಕೂಡದು.

ಬೆಳಗಾವ ಜಿಲ್ಹೆಯ ೧೦ ಜನ ಉಮೇದವಾರರಿಗೆ ಮಾತ್ರ ಸರಕಾರೀ ಸ್ಕಾಲರಶಿಪ್ಪು ದೊರೆಯುವದು. ಉಳಿದವರು ಬಿನ್ ಪಗಾರಿಯಿಂದ ಉಳಿಯಬೇಕಾಗುವದರಿಂದ ತಮಗೆ ಬೇಕಾಗುವ ಹಣವನ್ನು ಸಂಗಡ ತರತಕ್ಕದ್ದು.

ಬೆಳಗಾವ ಜಿಲ್ಹೆ	೧೦
ಹುಬ್ಬಳ್ಳಿ ಮ್ಯುನಿಸಿಪಾಲಿಟಿ	೨
ಗದಗ ಮ್ಯುನಿಸಿಪಾಲಿಟಿ	೨
ವಿಜಾಪೂರ ಮ್ಯುನಿಸಿಪಾಲಿಟಿ	೧
ನಿಪ್ಪಾಣಿ ಮ್ಯುನಿಸಿಪಾಲಿಟಿ	೧
ರಾಮದುರ್ಗ ಸಂಸ್ಥಾನ	೪
ಮಿರಜ (ಜುನಿಯರ) ಸಂಸ್ಥಾನ	೧
ಜಮಖಂಡಿ ಸಂಸ್ಥಾನ	೧
ಅಥಣಿ ಏಡೆಡ್‌ಸ್ಕೂಲು	೧
	೩೩

ಡಾಕ್ಟರ ಅನಸಾರಿಯವರ ಎಂಜತುಂಡಿನ ವಿಚಾರ,

ಡಾಕ್ಟರ ಅನಸಾರಿಯವರನ್ನು ಅನೇಕ ಕಾಂಗ್ರೆಸ ಸಭಾಸದರು ಮದ್ರಾಸದ ಕಾಂಗ್ರೆಸದ ಅಧ್ಯಕ್ಷರಾಗಿ ಸೂಚಿಸುತ್ತಿದ್ದಾರೆ. ತಾವು ಅಧ್ಯಕ್ಷರಾಗುವ ವಿಷಯವಾಗಿ ಪೂರ್ವಾಲೋಚನೆ ಮಾಡುವ ಕುರಿತು ಡಾಕ್ಟರರು ಮುಂಬಯಿಗೆ ಬಂದು, ಪಂಡಿತ ಮೋತಿಲಾಲ, ದೇವಿ ಸರೋಜನಿ, ಮೌಲಾನಾ ಶೌಕತಲ್ಲಿಯವರ ಕೂಡ ಪ್ರಸ್ತಾಪ ಮಾಡಿದರು. ಕೌನ್ಸಿಲ ಪ್ರವೇಶ ಮಾಡದೆ, ಅವಕ್ಕೆ ಬಹಿಷ್ಕಾರ ಹಾಕಿ, ಅಸಹಕಾರ ಮಾಡಬೇಕೆಂದೇ ತಮ್ಮ ಮತವಿದಾಗಿದೆ, ಕೌನ್ಸಿಲ ಪ್ರವೇಶ ಮಾಡುವದಾದರೆ-ಪ್ರತಿಯೋಗಿ ಸಹಕಾರಿಗಳಾಗಿ, ಮಂತ್ರಿ ಮೊದಲಾದ ಅಧಿಕಾರಗಳನ್ನು ಪಡೆಯಬೇಕು ಎಂಬದಾಗಿ ತಮ್ಮ ಅಭಿಪ್ರಾಯವಾಗಿ ಹೇಳಿದ್ದಾರೆ. ಇವರ ವಿಚಾರವು ಕಾಂಗ್ರೆಸ ಸದಸ್ಯರಲ್ಲಿ ಬಹಳ ಚಳವಳಿಕಾರಕವಾಗಿರುತ್ತದೆ.

ಶ್ರೀ ಮಂಗಲಮೂರ್ತಯೇ ನಮಃ

ಹೋದ ವರ್ಷದಂತೆ ಈ ಸಾರೆಯೂ ಶ್ರೀ ಗಣೇಶೋತ್ಸವವನ್ನು ಜರಗಿಸುವದಕ್ಕಾಗಿ ಸದರ್ನ ಮರಾಠಾ ಬ್ಯಾಂಕಿನವರಿಗೆ ತಮ್ಮ ಅಟ್ಟವನ್ನು ಕೊಡಲು ಕೇಳಿಕೊಂಡಿದ್ದೆವು. ಅಟ್ಟವು ಸಿಗಲಾರದೆಂದು ತಿಳಿಸಿರುವರು. ಕಾರಣವೇನೂ ತಿಳಿಯದು.

ಉತ್ಸವ ಕಾಲದಲ್ಲಿ ವೆ. ಗಲಗಲಿ ಕೂರ್ಮಾಚಾರ್ಯ, ನಾಗೇಶಶಾಸ್ತ್ರಿ ಇವರ ಪ್ರವಚನ ಹಾಗು ದೇಶಭಕ್ತ ಕೌಜಲಗಿ ಶ್ರೀನಿವಾಸರಾವ ಶ್ರೀಮತಿ ಅರ್. ಕಲ್ಯಾಣಮ್ಮಾ ಸಂಪಾದಕಿ ಸರಸ್ವತಿ ಬೆಂಗಳೂರು ಇವರ ಉಪನ್ಯಾಸಗಳಾಗುವವು. ಇನ್ನು ಕೆಲವರ ಕಡೆಯಿಂದ ಉತ್ತರಗಳು ಬರುವ ಅವಕಾಶವಿದೆ. ಬಂದಮೇಲೆ ಕಾರ್ಯಕ್ರಮವನ್ನು ಪ್ರಸಿದ್ಧಿಸುವೆವು.

೧೧-೮-೩೭ ಧಾರವಾಡ } ಕಾರ್ಯದರ್ಶಿ ಸಾ. ಗ. ಉ. ಮಂಡಳಿ

ಬ್ಯಾಡಿಗಿ ಶ್ರೀ ಶಿವಯೋಗೀಶ್ವರ ವೀರಶೈವ ಬೋರ್ಡಿಂಗಿನ ಎರಡನೇ ವರ್ಷದ ವಾರ್ಷಿಕ ಸಮಾರಂಭವು.

ಪದ್ಧತಿಯಂತೆ ಇಲ್ಲಿಯ ಶ್ರೀ ಶಿವಯೋಗೀಶ್ವರ ವೀರಶೈವ ಬೋರ್ಡಿಂಗಿನ ೨ನೇ ವರ್ಷದ ವಾರ್ಷಿಕ ಸಮಾರಂಭವು ಕಳೆದ ಮಂಗಳವಾರ-ಬುಧವಾರ (ತಾ. ೩-೪ನೇ) ದಿವಸಗಳಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು.

ಕಾರ್ಯಕ್ರಮದ ಮೇರೆಗೆ ತಾ. ೩-೮-೩೭ ನೇ ಮಂಗಳವಾರ ದಿವಸ ಸಾಯಂಕಾಲ ೫ ಘಂಟೆಗೆ ಶ್ರೀ ಅಥಣಿ ಶಿವಯೋಗಿಗಳವರ ಭಾವಚಿತ್ರದ ಮೆರವಣಿಗೆಯು ಭಜನಾ ಬ್ಯಾಂಡ ವಾದ್ಯಗಳೊಡನೆ ಹೊರಟು ಪುರಪ್ರದಕ್ಷಿಣೆ ಮಾಡಿಕೊಂಡು ೭|| ಘಂಟೆಗೆ ಪುನಃ ಶ್ರೀಗಳವರ ಮಠವನ್ನು ಸೇರಿತು.

ಮರುದಿವಸ ಪ್ರಾತಃಕಾಲ ೭ರಿಂದ ೧೦ರವರೆಗೆ ಶ್ರೀ ಶಿವಯೋಗೀಶ್ವರ ಪೂಜಾ ಸಮಾರಂಭವೂ ತರುವಾಯ ಸಮಾರಾಧನೆಯೂ ನಡೆಯಿತು. ೪ರಿಂದ ೫ರ ವರೆಗೆ ಪುರಾಣ ಶ್ರವಣ ನಡೆದು, ಬಳಿಕ ಸಭಾಕಾರ್ಯವು ಪ್ರಾರಂಭವಾಯಿತು.

ಮೊದಲೇ ಗೊತ್ತು ಮಾಡಿಕೊಂಡ ಮೇರೆಗೆ ವೇ|| ಶಿವಮೂರ್ತಿಸ್ವಾಮಿ ಹಿರೇಮಠ ಬಿ. ಎ. ಎಲ್ ಎಲ್. ಬಿ. ವಕೀಲ ಹಾವೇರಿ ಈ ಮಹನೀಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮೊದಲು ಸಿದ್ದಪ್ಪ ಹುಂಬಿ ಇವರು ೨ನೇ ವರ್ಷದ ರಿಪೋರ್ಟು ಓದಿದರು. ಅದು ಸರ್ವಾನುಮತದಿಂದ ಪಾಸಾಯಿತು. ತರುವಾಯ ಬೋರ್ಡಿಂಗಿನ ಮುಂದಿನ ವರ್ಷದ ಪ್ರೆಸಿಡೆಂಟ, ಚೇರಮನ್ ಮೊದಲಾದ ಚಾಲಕರ ಚುನಾವಣೆಯು ಮುಗಿದು ಈವರೆಗೂ ಬೋರ್ಡಿಂಗಿನಲ್ಲಿ ೩೦ ವಿದ್ಯಾರ್ಥಿಗಳಿದ್ದು ಇನ್ನು ಮುಂದೆ ೫೦ ಹುಡುಗರನ್ನು ಹೆಚ್ಚಿಗೆ ತೆಗೆದುಕೊಳ್ಳಬೇಕೆಂಬ ಠರಾವ ಪಾಸಾಯಿತು. ಆ ಮೇಲೆ ಮಿ|| ಪ್ರಭುಗೌಡರ (ಬೋರ್ಡಿಂಗಿನ ವಿದ್ಯಾರ್ಥಿ) ಮಿ|| ಕ್ಯಾತನಗಿ ಶ್ರೀಯುತ ಬಸವನಾಳ, ಎಮ್. ಎ. ಮಿ|| ಗೋದಿ, ಮಿ|| ರಾಮಪ್ಪಾ ಬೆಟಗೇರಿ ಮಿ|| ವೀರಪ್ಪ ನೆಲವಗಿ ಹಾಂಸಭಾವಿ ಇವರ ಸ್ಫೂರ್ತಿದಾಯಕ ಭಾಷಣಗಳಾದವು ಮಿ|| ಗೋಧಿ ಇವರು ತಮ್ಮ ಭಾಷಣದಲ್ಲಿ ಈ ಬೋರ್ಡಿಂಗಿನ ವಿದ್ಯಾರ್ಥಿಗಳಿಗೆಲ್ಲರಿಗೂ ತುಂಬಾ ಖಾದಿ ಪ್ರೆಸ್ ಮಾಡಿಸುವದು ಅವಶ್ಯವೆಂದೂ ಹಾಗೂ ಪ್ರತಿ ದಿವಸ ಅರ್ಧ ತಾಸು ಇವರಿಗೆ ನೂಲುವ ಶಿಕ್ಷಣ ಕೊಡಬೇಕೆಂದೂ ಹೇಳಿದರು.

ಬಳಿಕ ಅಧ್ಯಕ್ಷರು ಮಹತ್ವದ ಭಾಷಣ ಮಾಡಿ ೫ ವಿದ್ಯಾರ್ಥಿಗಳಿಗೆ ರಾಟಿ ಗಳನ್ನು ಕೊಡಲು ಮಾಗ್ದಾನ ಮಾಡಿದರು. ಕೂಡಲೇ ಉದಾರ

ಪುಣೆಗೆ ತೆರಳು ಮಾಡಿ, ಮಹಾರಾಷ್ಟ್ರದ ಕ್ಷಮೆ ಬೇಡಿಕೊಂಡಿದ್ದಾನೆ.

ಶ್ರೀ ಶಿವಾಜಿ ಮಹಾರಾಜರ ತಾಯಿ ಜೀಜಾಬಾಯಿಯ ಸಂಸ್ಮರಣೋತ್ಸವವನ್ನು ಪುಣೆಯ ಸ್ತ್ರೀಯರು ಮಾಡಿದರು. ಶ್ರೀ ಶಿವಾಜಿಯಂಥ ವೀರಪುತ್ರನು ತಮ್ಮ ಉದರದಿಂದ ಜನಿಸಲೆಂದು ದೇವರನ್ನು ಪ್ರಾರ್ಥಿಸಿದರು.

ಧಾರವಾಡ-

ಕರ್ನಾಟಕ ಪ್ರಾಂತದಿಂದ ಗುಜರಾಥದ ನೆರೆ ಹಾವಳಿಯ ಪೀಡಿತರಿಗೆ ಸಹಾಯವಾಗಿ ಹೋಗುವ ಪ್ರಾಲಂಟಿಯರರನ್ನು ಆದಿವೆಗಳ ಗಂಟುಗಳನ್ನು ಉಚಿತವಾಗಿ ಕಳಿಸಬೇಕೆಂದು ಡಾಕ್ಟರ ಹರ್ಡೀಕರರು ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆಯ ಟ್ರಾಫಿಕ ಮ್ಯಾನೇಜರರಿಗೆ ವಿನಂತಿ ಮಾಡಿಕೊಂಡಿದ್ದರು. ಹೀಗಾಗಲಾರದೆಂದು ಅವರಿಂದ ಉತ್ತರ ಬಂದಿದೆ. ಇದರ ಮೇಲೆ ಡಾಕ್ಟರರು ಏಜಂಟರ ಕಡೆಗೆ ತಾರಿನಿಂದ ಜಿಸ್ತಾಗ ಅರ್ಜಿ ಕಳಿಸಿದ್ದಾರೆಂದು ತಿಳಿಯುತ್ತದೆ.

ಶ್ರೀ ಮಾಣಿಕಪ್ರಭು ಪ್ರಾಸಾದಿಕ

ಗಾಯನ ವಾದನ ವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಗಾಯನ, ಹಾರ್ಮೋನಿಯಮ್, ತಬಲಾ, ಸತಾರ ವಗೈರೆ ಸಶಾಸ್ತ್ರ ರೀತಿಯಿಂದ ಕಲಿಸಲ್ಪಡುವವು.

ಈ ವಿದ್ಯಾಲಯವನ್ನು ಕೇವಲ ಸಂಗೀತ ಪ್ರಸಾರ ಸಲುವಾಗಿ ಸುರುವು ಮಾಡಿದ್ದೇವೆ. ಕಾರಣ ಯಾವತ್ತು ಸಂಗೀತ ಪ್ರೇಮಿಗಳು ಈ ಲಾಭವನ್ನು ಪಡೆಯುವದು ಕಳೆದು ಕೊಳ್ಳಬಾರದು ... ವಿಶೇಷ ಮಾಹಿತಿ ಸಲುವಾಗಿ ಪ್ರಾಸ್ಪೆಕ್ಟಸ ತರಿಸಿಕೊಳ್ಳಬೇಕು.

ಪತ್ತೆ

ಶ್ರೀ ಮಾ ಪ್ರ ಪ್ರ
ಗಾಯನ ವಾದನ ವಿದ್ಯಾಲಯ
... ಸ್ಟೇಶನ ಹತ್ತಿರ
... ಧಾರವಾಡ

ತಮ್ಮ,
ಪ್ರಿನ್ಸಿಪಾಲ,
ಲಕ್ಷ್ಮಣಸಿಂಗ ಗವಾಯಿ,
ನಾಗಠಾಣ.

ತ್ವರೆ ಮಾಡಿರಿ.

ಮಾರಿಕಾ ಬೇನೆಗೆ

ಅಲಕ್ಷ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೧೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಬಂದು ಪ್ರಾಣ ಉಳಿಸುವದು.

ಇದೇ ತಿಂಗಳಲ್ಲಿ ನೂರಾರು ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೂಬಿತ ರೋಗಕ್ಕೆ ತೆರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ-ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವ.

ಜಾಹೀರ ನೋಟೀಸು.

—o—

ಕೆಳಗೆ ಹೆಬ್ಬಟ್ಟಿನ ಗುರ್ತು ಮಾಡುವಂಥ ಪಾರ್ವತೆವ್ವಾ ಕೋಮ ವಿಷ್ಣು ಅರೇರ ಹಾಲಿವಸ್ತಿ ಹಿರೇ ಮರಳಿಹಳ್ಳಿ ತಾಲೂಕ ಕರಜಗಿ ಈಕೆಯು ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ-

ನಾನು ಧಾರವಾಡ ವಿಜಯ ವರ್ತಮಾನ ಪತ್ರದ ತಾರೀಖು ೨೩ ಜುಲೈ ಸನ್ನ ೧೯೩೭ನೆಯ ಇಸವಿಯ ನಿಕ್ಕ ಸಂಚಿಕೆಯಲ್ಲಿ ನನ್ನ ಗಂಡನಾದ ತಿಪ್ಪಾ ತಂದಿ ಮಲ್ಲಪ್ಪಾ ಆರೇರ ಈತನ ಮೇಲೆ ಒಂದು ನೋಟೀಸ ಕೊಟ್ಟಿದ್ದೇನೆ ಸದರ ನೋಟೀಸು ಪ್ರಸಿದ್ಧವಾಗಿ ನೂರು ವಾರವಾಯಿತು ಪೋಸ್ಟ ಮಾರ್ಫತ ರಜಿಸ್ಟರ ಆಗಿ ಹೋಗಿರತದೆ ಆದರೆ ಇವತ್ತಿನ ವರೆಗೆ ಆ ನೋಟೀಸನ್ನು ನನ್ನ ಗಂಡನು ಸ್ವೀಕಾರ ಮಾಡಿದನೋ? ಪರತ ಮಾಡಿದನೋ ಎಂಬುದು ಈ ಪರ್ಯಂತರ ತಿಳಿಯಲಿಲ್ಲ. ಆದ್ದರಿಂದ ಅದು ಯಾವಾಗ ತಿರಿಗಿ ಬಂದೀತೆಂಬ ಭರವಸೆ ಉಳಿದಿಲ್ಲ. ಆದ್ದರಿಂದ ಇವತ್ತಿನ ದಿವಸ ಈ ಜಾಹೀರ ನೋಟೀಸು ಜಾಹೀರ ಮಾಡುವ ಪ್ರಸಂಗ ಬಂದಿರುತ್ತದೆ. ಸದರ ನೋಟೀಸು ನನ್ನ ಗಂಡನಿಗೆ ಮುಟ್ಟಲಿ; ಮುಟ್ಟದಿರಲಿ; ಈ ವರ್ತಮಾನ ಪತ್ರದ ... ಮಾರ್ಫತ ತಿಳಿಯಲೆಂದು ಆಲ್ಲಿಯ ಪ್ರಮಾಣದ ಮನಸಿನಿಂದ ನೋಟೀಸಿನ ಪ್ರತಿಗಳನ್ನು ಕಳಿಸಿದ್ದೇನೆ ಮತ್ತು ಈ ಮೊದಲು ರಾಜಿಯ ಮಧ್ಯಸ್ಥಿಯಾದಂಥ ಮತ್ತು ನನ್ನ ಗಂಡನ ಹಾಗು ನನ್ನ ಹಿತ ಕರ್ತರಾಗಿದ್ದಂಥವರ ಹೆಸರಿನಿಂದಲೂ ನೋಟೀಸಿನ ಪ್ರತಿಗಳನ್ನು ಕಳಿಸಿದ್ದೇನೆ ಯಾರ ಮಾರಫತಿದಿಂದಾದರೂ ನನ್ನ ಗಂಡನಿಗೆ ನನ್ನ ನೋಟೀಸಿನ ಮತಲಬು ತಿಳಿದರೆ ಸಾಕು. ಈಗ ಸದರ ನನ್ನ ಗಂಡನಿಗೆ ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ- ಈತನು ಈ ಜಾಹೀರಾತು ಪ್ರಸಿದ್ಧವಾದ ಎಂಟು ದಿವಸಗಳಲ್ಲಿ ನಾನು ಇದ್ದಲ್ಲಿಗೆ ಬಂದು, ಮೊದಲಿನ ನೋಟೀಸಿದಲ್ಲಿ ಬರೆದ ಯಾವತ್ತು ಶರ್ತುಗಳನ್ನು ಪೂರೈಸಿ, ನನ್ನ ಕೂಡ ಸುರಳಿತ ರೀತಿಯಿಂದ ಬಾಳವೆ ಮಾಡಬೇಕು. ಜರ ಆತನು ಈ ಪ್ರಕಾರ ಮಾಡದಿದ್ದರೆ- ಆತನ ಮನಸ್ಸಿನಲ್ಲಿ ನನ್ನೊಂದಿಗೆ ಪ್ರಪಂಚ ಮಾಡುವದಿಲ್ಲೆಂದು ಪೂರಾ ತಿಳಕೊಂಡು, ನಾನು ಎರಡನೇಯವನನ್ನು ಉಡಿಕೆ ಮಾಡಿಕೊಳ್ಳುವೆನು. ಆನಂತರ ಆತನ ಹಕ್ಕು ನನ್ನ ಮೇಲೆ ಏನೊಂದೂ ನಡೆಯಲಾರದು. ಮತ್ತು ಈ ಜಾಹೀರ ನೋಟೀಸೇ ಸೋಡಪತ್ರವೆಂದು ತಿಳಿಯಬೇಕು. ಅದಲ್ಲದೆ ಈ ಒಳಗಾಗಿ ಸದರ ನನ್ನ ಗಂಡನ ದೆಸೆಯಿಂದ ಆದ ಸಾಲದ ರಕಮಿನ ದೆಸೆಯಿಂದ ಮತ್ತು ಈ ಎರಡೂ ನೋಟೀಸುಗಳ ಖರ್ಚಿನ ದೆಸೆಯಿಂದ ಸದರ ಮಲ್ಲನ ಮೇಲೆ ಕಾಯದೆಶೀರ ದಿವಾಣಿಯಲ್ಲಿ ಇಲಾಜ ಮಾಡಿ, ಕೋರ್ಟ ಖರ್ಚ ಸಹಿತ ವಸೂಲ ಮಾಡುವೆನು ಅಂತಾ ಜಾಹೀರ ಮಾಡಿದ ಸೋಡಪತ್ರದ ನೋಟೀಸು ತಾ. ೧೫ ಆಗಸ್ಟ ೧೯೩೭ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಪಾರ್ವತೆವ್ವಾ ಕೋಮ ವಿಷ್ಣು ಅರೇರ ಈಕಿಯ ಕೈದು ಇರುತ್ತದೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಮುಖ್ಯ ಸಂಪಾದಕರು:- ಲಕ್ಷ್ಮಣರಾವ ಬಾಳಾಜಿ ಹೊಸಕೇರಿ.

ವರ್ಷ ೪] ಧಾರವಾಡ ಬುಧವಾರ ತಾರೀಖು ೧೭ನೇ ಅಗಸ್ಟ ೧೯೨೭ [ಸಂಚಿಕೆ ೧೭೩

ಕಿರ್ಲೋಸ್ಕರರ ಶೇಂಗಾ [ಭೂಶೇಂಗಾ] ಒಡೆಯುವ ಯಂತ್ರಗಳು

ಈ ಯಂತ್ರಗಳು ಎರಡು ಆಕಾರದಲ್ಲಿ ಸಿದ್ಧವಾಗಿದ್ದು ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಕಡಿಮೆ ಬೆಲೆಯವಿದ್ದು ಹೆಚ್ಚು ಕೆಲಸ ಮಾಡುತ್ತವೆ. ಈ ಯಂತ್ರಗಳ ಕಡಿದು ಹೆಂಗಸರೂ ಸಹ ಉಪಯೋಗಿಸುತ್ತಾರೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಶೇಂಗಾ ಬೆಳೆಯುವ ಒಕ್ಕಲಿಗರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯಂತ ಉಪಯುಕ್ತವಾಗಿರುತ್ತವೆ.

ಬೆಲೆಯ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ನೋಟೀಸಿನ ದರಗಳು.

—o—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದಾಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ದರ ಬೀಳುವದು. ಮುನಿಸಿಪಾಲಿಟಿ ಲೋಕಲಬೋರ್ಡ ಕೋರ್ಟು ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದ್ದಿಂದ ಅನವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರು ಆಣೆ ಒಬ್ಬರ ಕಾಲಮಿನ ಒಳಗಳಿಗೆ ಇನ್ನುಳಿದ ಜಾಹೀರಾತು ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—o—

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ಲೋಕಮಾನ್ಯ ಟಿಳಕರ ಚರಿತ್ರೆ	೪ ,,
ದೇಶಬಂಧು ದಾಸರ ಚರಿತ್ರೆ	೨ ,,
ಬೇಂದ್ರೆ ಕರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ವ ತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೇಳಿಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಹಣವು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಿಯಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಶ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಸುದ್ದು, ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸಲಿದ್ದು ಚಂದಾದಾರರು ವ್ಹಿ. ಪಿ ಸ್ವೀಕರಿಸಿ ಉಪಕಾರ ಮಾಡಬೇಕೆಂದು ಪ್ರಾರ್ಥನೆ.

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

—o—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರುದಾರರು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಸಲ್ಪಡುವದು. ಕಾಯಿನ, ಮುತ್ತು, ಬೇರೆ ಕಂದ ಬೆಲೆಯುಳ್ಳವುಗಳನ್ನು ಚನ್ನಾಗಿ ಕಾಯ್ದುಕೊಡುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಿಕೊಳ್ಳಬೇಕು.

ಮಾಧವರಾವ ಜಿ. ಜಠಾರ,
ಮ್ಯಾನೇಜಿಂಗ ಡಾಯರೆಕ್ಟರ

ಪುಣೆಗೆ ತೆರಳು ಮಾಡಿ, ಮಹಾರಾಷ್ಟ್ರದ ಕ್ಷೇಮ ನೋಡಿಕೊಂಡಿದ್ದಾನೆ.

ಶ್ರೀ ಶಿವಾಜಿ ಮಹಾರಾಜರ ತಾಯಿ ಜೀಜಾಬಾಯಿಯ ಸಂಸ್ಮರಣೋತ್ಸವವನ್ನು ಪುಣೆಯ ಸ್ತ್ರೀಯರು ಮಾಡಿದರು. ಶ್ರೀ ಶಿವಾಜಿಯಂಥ ವೀರಪುತ್ರನು ತಮ್ಮ ಉದರದಿಂದ ಜನಿಸಲೆಂದು ದೇವರನ್ನು ಪ್ರಾರ್ಥಿಸಿದರು.

ಧಾರವಾಡ-

ಕರ್ನಾಟಕ ಪ್ರಾಂತದಿಂದ ಗುಜರಾಥದ ನೆರೆ ಹಾವಳಿಯ ಪೀಡಿತರಿಗೆ ಸಹಾಯವಾಗಿ ಹೋಗುವ ಪಾರ್ಸಲ್‌ಗಳನ್ನೂ ಆರಿವೆಗಳ ಗಂಟುಗಳನ್ನೂ ಉಚಿತವಾಗಿ ಕಳಿಸಬೇಕೆಂದು ಡಾಕ್ಟರ ಹರ್ಡೀಕರರು ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆಯ ಟ್ರಾಫಿಕ ಮ್ಯಾನೇಜರರಿಗೆ ವಿನಂತಿ ಮಾಡಿಕೊಂಡಿದ್ದರು. ಹೀಗಾಗಲಾರದೆಂದು ಅವರಿಂದ ಉತ್ತರ ಬಂದಿದೆ. ಇದರ ಮೇಲೆ ಡಾಕ್ಟರರು ಏಜಂಟರ ಕಡೆಗೆ ತಾರಿನಿಂದ ಮನ್ನಣೆಯ ಅರ್ಜಿ ಕಳಿಸಿದ್ದಾರೆಂದು ತಿಳಿಯುತ್ತದೆ.

ಜಾಹೀರ ನೋಟೀಸು.

ಕೆಳಗೆ ಹೆಚ್ಚಟ್ಟಿನ ಗುಜರಾ ಮಾಡುವಂಥ ಶಾಮರಾವ ತಿಮ್ಮಾ ಕೋಮು ತಿಪ್ಪಾ ಆರೇರ ಹಾಲಿವಸ್ತಿ ಏರೇ ಮರಳಿಸ್ಕ ಈ ಊರ ಕರಜಗಿ ಈಕೆಯು ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ-

ನಾನು ಧಾರವಾಡ ವಿಜಯ ವರ್ತಮಾನ ಪತ್ರದ ತಾರೀಖು ೨೩ ಜುಲೈ ಸನ್ನ ೧೯೨೭ನೆಯ ಇಸವಿಯ ಪತ್ರ್ಯ ಸಂಚಿಕೆಯಲ್ಲಿ ನನ್ನ ಗಂಡನಾದ ತಿಪ್ಪಾ ತಂದಿ ಮಲ್ಲಪ್ಪಾ ಆರೇರ ಈತನ ಮೇಲೆ ಒಂದು ನೋಟೀಸ ಕೊಟ್ಟಿದ್ದೇನೆ ಸದರ ನೋಟೀಸು ಪ್ರಸಿದ್ಧವಾಗಿ ಮೂರು ವಾರವಾಯಿತು ಪೋಸ್ಟ ಮಾರ್ಫತ ರಜಿಸ್ಟರ ಆಗಿ ಹೋಗಿರತಕ್ಕದ್ದು ಆದರೆ ಇವತ್ತಿನ ತನಕ ಆ ನೋಟೀಸನ್ನು ನನ್ನ ಗಂಡನು ಸ್ವೀಕಾರ ಮಾಡಿದನೋ? ಪರತ ಮಾಡಿದನೋ ಎಂಬುದು ಈ ಪರ್ಯಂತರ ತಿಳಿಯಲಿಲ್ಲ. ಆದ್ದರಿಂದ ಅದು ಯಾವಾಗ ತಿರಿಗಿ ಬಂದೀತೆಂಬ ಭರವಸೆ ಉಳಿದಿಲ್ಲ. ಆದ್ದರಿಂದ ಇವತ್ತಿನ ದಿವಸ ಈ ಜಾಹೀರ ನೋಟೀಸು ಜಾಹೀರ ಮಾಡುವ ಪ್ರಸಂಗ ಒದಗಿರುತ್ತದೆ. ಸದರ ನೋಟೀಸು ನನ್ನ ಗಂಡನಿಗೆ ಮುಟ್ಟಲಿ; ಮುಟ್ಟದಿರಲಿ; ಈ ಪತ್ರದ ಮುಖಾಂತರ ಮುಟ್ಟಿದ ಹಾಗೆ ತಿಳಿಯುವೆನು ಅಲ್ಲದೆ ಪ್ರಸ್ತುತದ ನೋಟೀಸಿನಿಂದ ನೋಟೀಸಿನ ಪ್ರತಿಗಳನ್ನು ಕಳಿಸಿದ್ದೇನೆ ಮತ್ತು ಈ ಮೊದಲು ರಾಜಿಯ ಮಧ್ಯಸ್ಥಿಯಾದಂಥ ಮತ್ತು ನನ್ನ ಗಂಡನ ಹಾಗು ನನ್ನ ಹಿತ ಚಿಂತಕರಾಗಿದ್ದಂಥವರ ಹೆಸರಿನಿಂದಲೂ ನೋಟೀಸಿನ ಪ್ರತಿಗಳನ್ನು ಕಳಿಸಿದ್ದೇನೆ ಯಾರ ಮಾರಫತಿಯಿಂದಾದರೂ ನನ್ನ ಗಂಡನಿಗೆ ನನ್ನ ನೋಟೀಸಿನ ಮುತಲಬು ತಿಳಿದರೆ ಸಾಕು. ಈಗ ಸದರ ನನ್ನ ಗಂಡನಿಗೆ ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ- ಈತನು ಈ ಜಾಹೀರಾತು ಪ್ರಸಿದ್ಧವಾದ ಎಂಟು ದಿವಸಗಳಲ್ಲಿ ನಾನು ಇದ್ದಲ್ಲಿಗೆ ಬಂದು, ಮೊದಲಿನ ನೋಟೀಸಿನಲ್ಲಿ ಬರೆದ ಯಾವತ್ತು ಶರ್ತುಗಳನ್ನು ಪೂರೈಸಿ, ನನ್ನ ಕೂಡ ಸುರಳಿತ ರೀತಿಯಿಂದ ಬಾಳುವೆ ಮಾಡಬೇಕು. ಜರ ಆತನು ಈ ಪ್ರಕಾರ ಮಾಡದಿದ್ದರೆ- ಆತನ ಮನಸ್ಸಿನಲ್ಲಿ ನನ್ನೊಂದಿಗೆ ಪ್ರಪಂಚ ಮಾಡುವದಿಲ್ಲೆಂದು ಪೂರಾ ತಿಳಕೊಂಡು, ನಾನು ಎರಡನೇಯವನನ್ನು ಉಡಿಕೆ ಮಾಡಿಕೊಳ್ಳುವೆನು. ಆ ನಂತರ ಆತನ ಪಕ್ಕಾ ನನ್ನ ಮೇಲೆ ಬಿಲಕೂಲ ನಡೆಯಲಾರದು. ಮತ್ತು ಈ ಜಾಹೀರ ನೋಟೀಸೇ ಸೋಡಪತ್ರವೆಂದು ತಿಳಿಯಬೇಕು. ಇದಲ್ಲದೆ ಈ ಒಳಗಾಗಿ ಸದರ ನನ್ನ ಗಂಡನ ದೆಸೆಯಿಂದ ಆದ ಸಾಲದ ರಕಮಿನ ದೆಸೆಯಿಂದ ಮತ್ತು ಈ ಎರಡೂ ನೋಟೀಸುಗಳ ಖರ್ಚಿನ ದೆಸೆಯಿಂದ ಸದರ ಮಲ್ಲನ ಮೇಲೆ ಕಾಯದೆಶೀರ ದಿವಾಣಿಯಲ್ಲಿ ಇಲಾಜ ಮಾಡಿ, ಕೋರ್ಟ ಖರ್ಚು ಸಹಿತ ವಸೂಲ ಮಾಡುವೆನು ಅಂತಾ ಜಾಹೀರ ಮಾಡಿದ ಸೋಡಪತ್ರದ ನೋಟೀಸು ತಾ. ೧೫ ಅಗಸ್ಟ ೧೯೨೭ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುಜರಾ ಶಾಮರಾವ ತಿಮ್ಮಾ ಕೋಮು ಮಲ್ಲಾ ಆರೇರ ಈಕೆ ಕೈರು ಇರುತ್ತದೆ.

ಶ್ರೀ ಮಾಣಿಕಪ್ರಭು ಪ್ರಸಾದಿತ

ಗಾಯನ ವಾದನ ವಿದ್ಯಾಲಯ

ಧಾರವಾಡ.

ಈ ವಿದ್ಯಾಲಯದಲ್ಲಿ ಗಾಯನ, ಹಾರ್ಮೋನಿಯಮ್, ತಬಲಾ, ಸತಾರ ಗಳಿಗೆ ಶಾಸ್ತ್ರ ರೀತಿಯಿಂದ ಕಲಿಸಲ್ಪಡುವದು.

ಈ ವಿದ್ಯಾಲಯವನ್ನು ಕೇವಲ ಸಂಗೀತ ಪ್ರಸಾರದ ಸಲುವಾಗಿ ಪ್ರಯತ್ನಪೂರ್ವಕ ಮಾಡಿರುತ್ತೇವೆ. ಕಾರಣ ಎಲ್ಲ ಸಂಗೀತ ಪ್ರೇಮಿಗಳು ಈ ಅವಕಾಶವನ್ನು ಕಳೆದುಕೊಳ್ಳಬಾರದು, ವಿಶೇಷ ಮಾಹಿತಿಯ ಸಲುವಾಗಿ ಸಂಬಂಧಪಟ್ಟವರಿಗೆ ಕೇಳಿಕೊಳ್ಳಬೇಕು.

ಪತ್ತೆ	ತಮ್ಮ.
[illegible]	ಪ್ರಿನ್ಸಿಪಾಲ,
ಗಾಯನ ವಾದನ ವಿದ್ಯಾಲಯ	ಲಕ್ಷ್ಮಣಸಿಂಗ ಗಾಯಿ,
[illegible]	ಶಹಾಪೂರ.

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨-೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸಿರುವದು.

ಇದೇ ತಿಂಗಳಲ್ಲಿ ನೂರಾರು ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅನೇಕ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಒಳಗಾಗದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಣೀವಿಲಾಸ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1448

ನಿತ್ಯ ಪತ್ರ ವಿಜಯ ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮} ಧಾರವಾಡ ಬುಧವಾರ ತಾರೀಖು ೧೭ನೇ ಅಗಸ್ಟ ೧೯೨೭ {ಸಂಚಿಕೆ ೧೭೬

ಕಿರ್ಲೋಸ್ಕರರ ರೇಗಾ [ಕೈಮಗ್ಗ] ಒಡೆಯುವ ಯಂತ್ರಗಳು

ಈ ಯಂತ್ರಗಳು ಎರಡು ಮಾದರಿಯವು ನಮ್ಮ ಮಾದರಿಯವು ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಬಹಳ ಗಟ್ಟಿ ಇದ್ದು, ಹೊಟ್ಟು ಬೀಜಗಳನ್ನು ಒಡೆಯುವ ಯಂತ್ರದಲ್ಲಿ ಬೀಜವನ್ನು ಹಾಕಿದರೆ ಕಾಳುಗಳು ಸರಿಯಾಗಿ ಬೇರೆ ಆಗುತ್ತವೆ. ಈ ಯಂತ್ರಗಳ ಕಳದು ರೇಗಾ ಮಗ್ಗಲು ಒಡೆಯ ಬೇಕಾಗಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಮಾರಾಟ ಮಾಡತಕ್ಕವರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯಾವಶ್ಯಕವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ದರ ನಾಲ್ಕಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಕೋರ್ಟ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ನಾಲ್ಕನೆ ಸೂಚನೆ— ಇಂಗ್ಲಿಷ ದ್ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಬಾಬು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೩ನೇ ರಹಮಾನದ ಗೊಂಚಲು	೧೦ ಆಣೆ.
ವಿಚಿತ್ರ ಸಂಸಾರ	೫ ,,
ಲೋಕಮಾನ್ಯ ಟಿಳಕರ ಚರಿತ್ರೆ	೪ ,,
ದೇಶಬಂಧು ದಾಸರ ಚರಿತ್ರೆ	೩ ,,
ದೇವಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ವ ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೇಳಿದ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಬಿ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಕಳಿಸಲಾಗುವದು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿ.

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಅಪರೇಟಿವ್ಹ ಬ್ಯಾಂಕ ಲಿಮಿಟೆಡ

—೦—

ಮಂಗಳವಾರ ಪೇಟೆ ಧಾರವಾಡ.

ಕೋ. ಅಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೊತೆಗೆಯು ಅದು ಲಕ್ಷದ ಮೇಲುಂಟು. ಚೆಕ ಕರಂಟ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು, ಡಿಪಾಜಿಟ ಮತ್ತು ಬೇರೆ ಬಗೆ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ಕೊಡುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು

ಮಾಧವರಾವ ಜಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೧೭-೮-೨೭ ನೇ ಇಸ್ವಿ

ಧಾರವಾಡ ಡಿಸ್ಟ್ರಿಕ್ಟ ಸ್ಕೂಲ ಕಮಿಟಿಯ ಆ್ಯಡಮಿನಿಸ್ಟ್ರೇಟರ ನೇಮಣೂಕಿಯ ಆಗ್ರಹ.

ಮೂಗು ಹೋದರೂ, ಹೊಳ್ಳಿ ಎಲ್ಲಿ ಹೋಗಿದೆ?

ಧಾರವಾಡ ಜಿಲ್ಹೆಯ ಡಿಸ್ಟ್ರಿಕ್ಟ ಲೋಕಲಬೋರ್ಡಿನ ಸ್ಕೂಲ ಕಮಿಟಿಯು ದೆಸೆಯಿಂದ ಮಿ. ಬೆಟಗೇರಿ ಎಂಬ ಹೆಸರಿನ ಗೃಹಸ್ಥರನ್ನು ಆ್ಯಡಮಿನಿಸ್ಟ್ರೇಟರರಾಗಿ ಮಾಡಿಕೊಂಡಿದ್ದು, ನೇಮಣೂಕಿಗೆ ವಿದ್ಯಾಖಾತೆಯ ಮಂತ್ರಿಯವರು ಒಪ್ಪಿಗೆ ಕೊಡದ ಸಮಾಚಾರವು ಈ ಮೊದಲೇ ವಿಜಯದಲ್ಲಿ ಪ್ರಕಟವಾಗಿದೆ. ಈ ಮಂತ್ರಿಯವರು ಕೌನ್ಸಿಲದಲ್ಲಿ ಲೋಕಲಬೋರ್ಡಿನ ಬಿಲ್ಲಿನ ದುರಸ್ತಿಯನ್ನು ಕುರಿತು ನಡೆದ ಚರ್ಚೆಯಲ್ಲಿ, ಲೋಕಲಬೋರ್ಡಿನ ಸೂಚನೆ- ನೇಮಣೂಕಿಯ ಶಿಫಾರಸ್ಸುಗಳಲ್ಲಿ ಒಂದನ್ನಾದರೂ ಬೇಕಂತ ನಾಮಂಜೂರ ಮಾಡಿದ್ದನ್ನು ತೋರಿಸಿರೆಂದು ಭಾಷಣ ಮಾಡಿದ್ದಾರೆ. ಇವರು ಈ ಪ್ರಕಾರ ಲೋಕಲಬೋರ್ಡುಗಳ ಇಚ್ಛಾನುಸಾರವಾಗಿ ನಡೆಯಲಿಕ್ಕೆ ಸಿದ್ಧರಿದ್ದರೂ, ಮಿ ಬೆಟಗೇರಿಯವರ ನೇಮಣೂಕಿಗೆ ಮಾತ್ರ ಮಂಜೂರಿ ಕೊಡಲಿಲ್ಲ. ಅಂಥ ಮಹತ್ವದ ಕಾರಣದ ಹೊರತು ನಾಮಂಜೂರ ಮಾಡುವ ಧೈರ್ಯವು ಅವರಿಗಾಗಲಾರದೆಂಬದು ಸಹಜವಾದದ್ದು. ಸ್ಕೂಲಕಮಿಟಿಯವರು ಈ ಸಮಯದಲ್ಲಿ ಬರೇ ಕುಲಾಭಿಮಾನವನ್ನು ಹಿಡಿಯದೆ, ಸ್ವಜನಾಭಿಮಾನ ಹಿಡಿದು, ಮಾಡಿದ ನೇಮಣೂಕಿಯೇ ನಾಮಂಜೂರಿಯ ಶಿಕ್ಕೆ ಬಡಿಸಿಕೊಂಡಿತು. ಆದರೂ ಸ್ಕೂಲ ಕಮಿಟಿಯವರೂ, ಇದಕ್ಕೆ ಬೆಂಬಲವಿತ್ತ ಡಿಸ್ಟ್ರಿಕ್ಟ ಲೋಕಲಬೋರ್ಡಿನವರೂ ಮೂಗು ಹೋದರೂ ಮೂಗಿನ ಹೊಳ್ಳಿ ಎಲ್ಲಿ ಹೋಗಿದೆಂದು ಪುನಃ ಮಿ. ಬೆಟಗೇರಿಯವರನ್ನೇ ಶಿಫಾರಸ್ಸು ಮಾಡಿದ್ದನ್ನು ಕೇಳಿ ಆಶ್ಚರ್ಯವೆನಿಸುತ್ತದೆ.

ಆ್ಯಡಮಿನಿಸ್ಟ್ರೇಟರನಾಗತಕ್ಕವನು ಗ್ರ್ಯಾಜ್ಯುಏಟನಿರಬೇಕೆಂದು ಪ್ರಾಥಮಿಕ ಶಾಲಾ ಕೋಡಿನಲ್ಲಿ ನಿರ್ಬಂಧನೆಯುಂಟು. ಇದರಿಂದ ಗ್ರ್ಯಾಜ್ಯುಏಟನಾದವರ ಆವಶ್ಯಕತೆ ಆದ್ದರಿಂದ ಸ್ಕೂಲ ಕಮಿಟಿಯವರೂ ಬೋರ್ಡಿನವರೂ ಈ ನೇಮಣೂಕಿ ಮಾಡಿಕೊಂಡಿದ್ದಾರೆ. ಇದು ತೀರ ಅವಿಚಾರದ ಕೃತ್ಯವಾಗಿರುವದರಿಂದಲೇ ವರ್ತಮಾನ ಪತ್ರಗಳಲ್ಲಿ ಟೀಕೆ ನಡೆದಿದೆ. ಏನೂ ಅನುಭವವಿಲ್ಲದವರಿಗೆ ಯಾವದೊಂದು ಹಿರಿಯತನ ಕೊಡುವದೆಂದರೆ- ಉಪಾಧ್ಯಾಯನು ಮಗನ ಕೈಯಲ್ಲಿ ಕುಡಗೋಲು ಕೊಡುವಂತಾಗುತ್ತದೆ. ಹೊಸದಾಗಿ ಎಲ್. ಎಲ್. ಬಿ. ಆದವರು ವಕೀಲರಾಗಿ ಕೋರ್ಟಿಗೆ ಹೋಗಲು ಅಧಿಕಾರ ಪಡೆಯುವದು ನಿಜ. ಆದರೆ ಇವರಿಗೆ ವಕೀಲಿ ಬರುವಂಥ ದಾವೆ ಫಿರ್ಯಾದಿಗಳೇ,ಥವಾ ಪ್ರಾಮಿಸರೀ ನೋಟಿನವು, ಮತ್ತು ಹಲಕಿ ಮಾರಾಮಾರಿಯವು. ಇವಕ್ಕೂ ಕೂಡ ಅನುಭವಿಕನಾದ ಕಾರಕೂನನ ಜೋಡು ಬೇಕಾಗುತ್ತದೆ. ಅಂದರೇ ಪಾಡ!! ಸ್ಕೂಲಕಮಿಟಿಯಲ್ಲಿ ನೋಡಿರಿ. ಆ್ಯಡಮಿನಿಸ್ಟ್ರೇಟರನಾಗತಕ್ಕವನೂ ಹೊಸಬನು. ಕಾರಕೂನರೂ ಹೊಸಬರು. ಇಂಥವರ ದರಬಾರವೆಂದರೆ- ಮಡುಗನು ಅರಸನಾಗುವಂತಾಗುತ್ತದೆ. ವಕೀಲನು ಅನುಭವಿಕನಿದ್ದರೆ- ಫಸ್ಟ್ ಕ್ಲಾಸ ದಾವೆಗಳೂ, ಸೆಶನದ ಖಟ್ಲೆಗಳೂ ಬರುತ್ತವ. ಕೆಲವು ವರ್ಷ ಹೊಸ ವಕೀಲರಿಗೆ ಸ್ವತಂತ್ರವಾಗಿ ಸೆಶನ್ಸದಲ್ಲಿ ಕೆಲಸ ಸಹ ನಡಿಸಗೊಡುವದಿಲ್ಲ. ಎಲ್ಲಾದರೂ ವಿದ್ಯೆಯ ಕೂಡ ಅನುಭವವು ಮುಖ್ಯವಾಗಿ ಬೇಕಾಗುತ್ತದೆ. ಇಂಥ ಅನುಭವವು ಮಿ. ಬೆಟಗೇರಿಯವರಿಗೆ ಇದ್ದರೆ- ಯಾರೂ ಚಕಾರ ತೆಗೆಯುತ್ತಿದ್ದಿಲ್ಲ. ಅಕ್ಷೇಪಣೆ ತೆಗೆದದ್ದರಿಂದಲೇ ಕುಂದು ಕೊರತೆಯುಂಟೆಂದು ಧ್ವನಿತವಾಗುತ್ತದೆ.

ಯಾವ ಕಾರಣದಿಂದ ಮಂತ್ರಿಗಳು ಮಿ ಬೆಟಗೇರಿಯವರ ನೇಮಣೂಕಿಗೆ ಮಂಜೂರಿ ಕೊಡಲಿಲ್ಲವೋ? ಅದೇ ಕಾರಣಕ್ಕಾಗಿ ಈಗ ಲೋಕಲಬೋರ್ಡಿನ ಶಿಫಾರಸ್ಸ ಪ್ರಕಾರ ಮಂಜೂರಿ ಕೊಡುವದಿಲ್ಲೆಂದು ಭಾವಿಸುವದು ತೀರ ಹುಚ್ಚುತನವು. ತಮ್ಮ ಮಾತು ಗೆದೆಯಬೇಕು. ಮಿ. ಬೆಟಗೇರಿಯವರ ನೇಮಣೂಕೇ ಆಗಬೇಕೆಂದು ಡಿಸ್ಟ್ರಿಕ್ಟ ಲೋಕಲಬೋರ್ಡಿನವರು ಆಗ್ರಹತೊಟ್ಟದ್ದು, ದುರಾಗ್ರಹವಾಗುತ್ತದೆಂದು ದಿವಾನರಿಗೇಕೆ ಅನಿಸಬಾರದು? ಈ ನೇಮಣೂಕಿಗೆ ನಾಮಂಜೂರಿಯು ಹುಕುಮು ಬಂದನಂತರ ಗದಗ ಮ್ಯುನಿಸಿಪಾಲಿಟಿಯವರು ತಮ್ಮ ಬೋರ್ಡಿಗಾಗಿ ಕೆಲಸದಲ್ಲಿ ಪೂರ್ಣ ಅನುಭವಿಕರಾದಂಥವರನ್ನೇ ನೇಮಿಸಿಕೊಂಡಿದ್ದಾರೆ. ವಿಜಾಪೂರದ ಡಿಸ್ಟ್ರಿಕ್ಟ ಲೋಕಲಬೋರ್ಡಿನವರೂ ಜಿ ಟಿ ಅಥವಾ ಶಿಕ್ಷಣದಲ್ಲಿ ಹತ್ತಾರು ವರ್ಷ ಅನುಭವಿಕರಿದ್ದಂಥವರನ್ನೇ ನೇಮಿಸಿಕೊಳ್ಳುವ ವಿಚಾರ ಮಾಡಿ, ಆ ಪ್ರಕಾರ ವರ್ತಮಾನಪತ್ರಗಳಲ್ಲಿ ಜಾಹೀರಾತುಗಳನ್ನು ಪ್ರಸಿದ್ಧ ಮಾಡಿದ್ದಾರೆ. ಮುಂದಿನವರಿಗೆ ಕೂತ ನೆಟ್ಟಿನಿಂದ ಹಿಂದಿನವನು ಎಚ್ಚರಾದನೆಂಬಂತೆ, ಧಾರವಾಡದಂತೆ ತಮ್ಮ ಹಣೆಗೂ ನಾಮಂಜೂರಿಯ ಪಟ್ಟಿ ಹತ್ತಬಾರದೆಂದು ಇವರು ಯೋಗ್ಯ ಗೃಹಸ್ಥರನ್ನೇ ನೇಮಿಸಿಕೊಳ್ಳುವ ಬಗ್ಗೆ ಕರ್ತವ್ಯನಿರತರಾಗಿದ್ದಾರೆಂದು ಸ್ಪಷ್ಟವಾಗುತ್ತದೆ. ಸ್ಕೂಲ ಕಮಿಟಿಯವರೂ ಅದಕ್ಕೆ ಪುಸಲತ್ತ ಕೊಟ್ಟಂಥ ಡಿಸ್ಟ್ರಿಕ್ಟ ಲೋಕಲಬೋರ್ಡಿನವರೂ ಈ ತೆರವಾಗಿ ಸರಳ ಮಾರ್ಗ ಹಿಡಿಯದಿದ್ದದ್ದು ನಗುವವರ ಮುಂದೆ ಎಡವಿ ಬಿದ್ದಂತಾಗಿರುತ್ತದೆ.

ದಿವಾನ ಬಹಾದ್ದೂರ ರೊದ್ದರಾಯರ ವಿಚಿತ್ರ ವಿಚಾರಗಳು.

ಧಾರವಾಡದಲ್ಲಿ ಟ್ರೇನಿಂಗ ಕಾಲೇಜಕ್ಕೆ ಪುನರ್ಜನ್ಮ ಕೊಡತಕ್ಕ [illegible] ದಿವಾನ ಬಹಾದ್ದೂರ ರೊದ್ದ ಶ್ರೀನಿವಾಸರಾಯರು ಮುಂಬಯಿ ಸರಕಾರಕ್ಕೆ ಒಂದು ಪತ್ರ ಬರೆದಿದ್ದಾರೆ. ಅದರಲ್ಲಿ ವಿದ್ಯೆಯ ಉಳಿತಾಯ ತೋರಿಸುವದಕ್ಕಾಗಿ ಶಿಕ್ಷಕರ ಸಂಬಳವನ್ನು ಕಡಿಮೆ ಮಾಡಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಅಭಿಪ್ರಾಯವು ಸಾರ್ವ[illegible] ತೀರ ವಿರುದ್ಧವಾದದ್ದು. ಈ ವಿಚಾರಕ್ಕೆ ಯಾವ ಶಿಕ್ಷಕನೂ [illegible]. ಇದು [illegible] ಮುಂದೆ [illegible] ಕುಂಟು.

" ಪ್ರಾಥಮಿಕ ಶಿಕ್ಷಕರ ಪಗಾರದ ವಿಷಯವಾಗಿ [illegible] ಅವರಿಗೆ [illegible] ಅವರ ಯೋಗ್ಯತೆಗೆ [illegible] ಪಗಾರ ಕೊಡಲ್ಪಡುವದೆಂದು ಹೇಳಬೇಕಾಗುವದು. ತೀರ ಕಡಿಮೆ ಪಗಾರವನ್ನು [illegible] ರೂ. ಇಟ್ಟಿದ್ದು ಬಹಳ ಹೆಚ್ಚಾಗಿದೆ. ಇನ್ನು [illegible] ವರ್ಷದ ಟ್ರೇಂಡರ ಆರಂಭದ ಪಗಾರ [illegible] ರೂ. ಇದ್ದರೆ ಸಾಕು. ಸ್ಥಾಪಿತ ಸಂಸ್ಥೆಗಳು [illegible] ಗಳವೇ ಅಂಟ್ರೇಂಡ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳುವದು. ಎರಡನೇ ಮೂರನೇ ವರ್ಷಗಳ ಟ್ರೇಂಡ ಶಿಕ್ಷಕರ ಆರಂಭದ ಪಗಾರವು ಕ್ರಮವಾಗಿ [illegible]. ಇರಬಹುದು. ೧ನೇ ೨ನೇ ೩ನೇ ವರ್ಗಗಳ ಟ್ರೇಂಡ ಶಿಕ್ಷಕರ ಕೂನೆಯ ಪಗಾರ ಕ್ರಮವಾಗಿ [illegible] ಇದ್ದರೆ ಸಾಕು. ವರ್ಷಂಪ್ರತಿ ಬಡತಿಯ ಸ್ಕೇಲಿನಂತೆ ಪಗಾರ ಕೊಡುವ ಪದ್ಧತಿಯು ಪ್ರಾಥಮಿಕ ಶಿಕ್ಷಕರಿಗೆ ತಕ್ಕದ್ದಲ್ಲ. ಈ ತರದ ರೂಢಿಯು ಪ್ರ[illegible]ದಲ್ಲಿ ಬಂದಂದಿನಿಂದಲೂ ಶಿಕ್ಷಕರು ತಮ್ಮ ಕೆಲಸದಲ್ಲಿ ಸತ್ಯ ಕಾರ್ಯಸ್ಫೂರ್ತಿಯನ್ನು [illegible]ವದಿಲ್ಲ. ಮತ್ತು ಬಹುಜನ ಶಿಕ್ಷಕರು ತಮ್ಮ [illegible] ಶಿಕ್ಷಕರಂತೆ ಸ್ಫೂರ್ತಿಯಿಂದ [illegible] ಪಡೆಯುತ್ತಿ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ
ಮುರುಘರಾಜೇಂದ್ರ ಮಹಾಸ್ವಾಮಿಗಳವರ
ಸಂಪೂರ್ಣಾಶೀರ್ವಾದ ಬಲದಿಂದುಂಟಾದ
ಶ್ರೀ ಲಿಂಗರಾಜ ಲಾಯಬ್ರರಿಯು
ವಿಜಯ ದುಂದುಭಿಯು.

—೦—

ಚಿತ್ರದುರ್ಗ ಮಹಾ ಸಂಸ್ಥಾನದ ಮಹಾಪಾದದ ಖಾಸಾ ಸ್ವಾರಿಯು ಮಠ್ಠಾಮು ಸದ್ಯಕ್ಕೆ ನಮ್ಮ ಪಟ್ಟಣದಲ್ಲಿಯೇ ಇರುತ್ತಿದ್ದು "ವಿದ್ಯೆ" ಯ ವಿಷಯವಾಗಿ ವ್ಯಾಖ್ಯಾನರೂಪದಿಂದ ಅಪ್ಪಣೆ ಕೊಡಿಸಿ ಕೃತಾರ್ಥರನ್ನಾಗಿ ಮಾಡೋಣವಾಗಬೇಕೆಂದು ನಮ್ಮ ಲಾಯಬ್ರರಿಯ ಮಂಡಳಿಯವರು ಸನ್ನಿಧಿಗೆ ಅರಿಕೆ ಮಾಡಿಕೊಂಡರು. ಅದನ್ನು ಚಿತ್ತೈಸಿ ಮಹಾಸ್ವಾಮಿಗಳವರು ನಿನ್ನೆ ಸಾಯಂಕಾಲ ೭ರಿಂದ ೯ರ ವರೆಗೆ ತಮ್ಮ ಆಶೀರ್ವಾದ ರೂಪದ ಅಮೃತ ವಾಣಿಯಿಂದ ಸಕಲ ಸದ್ಭಕ್ತರನ್ನು ಸಂತುಷ್ಟಗೊಳಿಸಿದ್ದಲ್ಲದ ನಮ್ಮ ಲಾಯಬ್ರರಿಯ ಉತ್ತರೋತ್ತರ ಅಭಿವೃದ್ಧಿಗಾಗಿ ೭೦೭ ರೂಪಾಯಿಗಳನ್ನು ಅತ್ಯಾನಂದಗಿಂದ ಆಶೀರ್ವದಿಸಿದರು ಹಾಗೂ ಇನ್ನುಳಿದ ಸದ್ಗೃಹಸ್ಥರಾದರೂ ಸಹಾಯ ಮಾಡತಕ್ಕದ್ದೆಂದು ಅಪ್ಪಣೆ ಕೊಡಿಸಿದರು. ಕೂಡಲೆ ಕೆಳಗೆ ಕಾಣಿಸಿದ ಮೇರೆಗೆ ಅಯಾ ಜನರು ತಮ್ಮ ತಮ್ಮ ಶಕ್ತ್ಯನುಸಾರವಾಗಿ ಹಣವನ್ನು ಕೊಡಲೊಡಂಬಟ್ಟರು.

ಶ್ರೀ. ಮುರಿಗೆಪ್ಪಾ ಶೆಟ್ಟರ ೧೦೧ರೂ. ಶ್ರೀ. ಶಿವಲಿಂಗಪ್ಪ ಸಜ್ಜನಶೆಟ್ಟರ ೧೦೧ರೂ. ಶ್ರೀ. ಬಸಪ್ಪ ಶೆಟ್ಟರ (ನಿಂಗಪ್ಪ ಶೆಟ್ಟರ ಹೆಸರಿನಿಂದ) ೫೧ರೂ. ಶ್ರೀ. ಫಕೀರಪ್ಪ ಕಬ್ಬೂರ ೫೧ರೂ. ಶ್ರೀ. ಕಾಶೀಗೌಡಾ ಪಾಟೀಲ ೧೦೧ರೂ. ಶ್ರೀ, ಸಿದ್ದಪ್ಪ ಸೋಗಿ ೭ರೂ. ಮಿ. ಹನುಮಂತಪ್ಪಯ್ಯಾ ಲಿಂಗಣ್ಣನವರ ೬ರೂ, ಮಿ. ನಾಗಪ್ಪಾ ತಿರೂರ ೫ರೂ. ಮಿ. ವೀರಭದ್ರಪ್ಪ ಜೋಣ ೫ರೂ. ಮಿ. ಚನಬಸಪ್ಪ ಮಾಳೇನಹಳ್ಳಿ ೫ರೂ. ಮಿ ಮಡಿವಳೆಪ್ಪನವರು ಯರೇನಹಳ್ಳಿ ತಾ. ಅರಸೀಕೇರಿ ೫ರೂ. ಮಿ. ಗುರುಬಸಪ್ಪ ಬೇವಿನಮರ ೫ರೂ. ಮಿ, ಪುಟ್ಟರಾಮಪ್ಪ ಹಳ್ಳದರಾಮಪ್ಪನವರು ಹಿರೇನಾದರಹಳ್ಳಿ ೫ರೂ. ಮಿ. ಸಂಗಪ್ಪ ಅಬ್ಬಿಗೇರಿ ೩ರೂ. ಮಿ. ಕುರುವತ್ತೆಪ್ಪ ಮೋಟೆಬೆನ್ನೂರ ೩ರೂ. (ಪ್ರತಿವರ್ಷ)

ಈ ಪ್ರಕಾರ ಒಟ್ಟು ೯೭೦ ರೂಪಾಯಿಗಳ ವ್ಯಾಖ್ಯಾನದ ಕೆಲಸವು ಮುಗಿದ ಬಳಿಕ ಮಂಗಲಾಶೀರ್ವಾದಂಗಳೊಡನೆ ಸಭಾವಿಸರ್ಜನೆಯಾಯಿತು.

ಪ್ರಿಯ ಬಾಂಧವರೇ! ಮೇಲಿಂದ ಮೇಲೆ ಇಂಥ ದಾತೃತ್ವಶಾಲಿಗಳು ನಮ್ಮ ಸಂಸ್ಥೆಗೆ ದೊರಕಲೆಂದೂ, ನಿತ್ಯಾನಂದರೆನಿಸಿದ ಈ ನಿರ್ಗುಣ ತಪೋನಿಧಿಗಳ ಅನುಗ್ರಹದಿಂದ ವಾತಾವರಣದ ತರಂಗದಲ್ಲಿ ನಮ್ಮ ಲಾಯಬ್ರರಿಯ ವಿಜಯ ಪತಾಕೆಯು ಅತ್ಯಾನಂದದಿಂದ ಸಂಚರಿಸುತ್ತಿರಲೆಂದೂ ನಾವೆಲ್ಲರೂ ಮಹಾ ಸನ್ನಿಧಿಯನ್ನು ಕುರಿತು ಅನನ್ಯ ಭಾವದಿಂದ ಪ್ರಾರ್ಥಿಸತಕ್ಕದ್ದಾಗಿದೆ.

ಆರ್. ವ್ಹಿ. ವಾಲಿಶೆಟ್ಟರ,
ಸೆಕ್ರೆಟರಿ
ಶ್ರೀ ಲಿಂಗರಾಜ ಲಾಯಬ್ರರಿ

ಶ್ರೀ ಮಾಣಿಕಪ್ರಭು ಪ್ರಾಸಾದಿಕ
ಗಾಯನ ವಾದನ ವಿದ್ಯಾಲಯ
ಧಾರವಾಡ.

ಈ ವಿದ್ಯಾಲಯದಲ್ಲಿ ಗಾಯನ, ಹಾರ್ಮೋನಿಯಮ್, ತಬಲಾ, ಸತಾರ ವಗೈರೆ ಸಹಿತ [illegible]

ಈ ವಿದ್ಯಾಲಯದ [illegible] ಮಾಡಿಸಲ್ಪಡು [illegible] ಕೊಳ್ಳಬಾರದು [illegible]

[illegible] ಅಪ್ಪಯ್ಯ ಲಿಂಗ ಗವಾಯಿ. ನಾಗಲೋಟಿಪುರ.

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ಕ್ಕೆ ೩ ರೂಪಾಯಿ.
[illegible] ಗುಳಿಗೆ ಸೇವಿಸಿ ಬಂದು ಪ್ರಾಣ ಉಳಿಸುವವು.
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತರಾಗಿರುವರು.

ಬೇಗ ಸಂಗ್ರಹಿಸಿರಿ
ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವಿ.

ವಿವಿಧ ವರ್ತಮಾನಗಳು,

ನಾಗಪೂರಿನಲ್ಲಿ ಹತ್ತು ಜನ ಸ್ವಯಂಸೇವಕರು ಬಿಚ್ಚುಗತ್ತಿಯನ್ನು ಹಿಡಕೊಂಡು ಮೆರವಣಿಗೆ ತೆಗೆದರು. ಪೋಲೀಸರು ಇವನ್ನು ದಾರಿಯಲ್ಲಿಯೇ ಕಸಕೊಂಡು ಸತ್ಯಾಗ್ರಹಿಗಳನ್ನು ಹಾಗೇ ಹೋಗಗೊಟ್ಟರು.

—

ವರ್ಧಾದಲ್ಲಿ ಶ್ರೀ. ತಿಜಾರೆಯವರ ಸಂಗಡ ಹೋಗಿದ್ದ ಹ್ಯಾಲಂಟಿಯರ ಮುಂಜೆ ಎಂಬವನು ಬಿಚ್ಚುಗತ್ತಿ ಹಿಡಕೊಂಡು ಮೆರವಣಿಗೆ ತೆಗೆದಿದ್ದನು. ಪೋಲೀಸರು ಈತನ ಕತ್ತಿಯನ್ನು ಕಸಕೊಂಡು, ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದ್ದಾರೆ.

—

ಮಹಾತ್ಮರು ಆರನೆಯ ಸಪ್ಟಂಬರದ ದಿವಸ ಮದ್ರಾಸಕ್ಕೆ ಹೋಗುವರು. ಅಲ್ಲಿ ಆರು ದಿವಸ ಇದ್ದು, ಅನಂತರ ತಮಿಳ ನಾಡಿನ ಪ್ರವಾಸಕ್ಕೆ ಹೊರಡುವರು.

—

ಕಲಕತ್ತೆಯಲ್ಲಿ ಪೋಲೀಸರು ಕಿತ್ತಿ ಹಾಕಿಸಿದ್ದ ಲಿಂಗನ ಪ್ರತಿಸ್ಥಾಪನೆಯಾಯಿತು. ಅಗ್ಗಿ ಪೋಲೀಸ ಕಮೀಶನರಸಾಹೇಬರು ಸ್ವತಃ ಹಾಜರಿದ್ದರು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ಸಾತಳ್ವಾಪಂ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಸತ್ಯ **ವಿಜಯ** ಬಲ ಅರ್ಥ ಆಣಿ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಗುರುವಾರ ತಾರೀಖು ೧೫ನೇ ಆಗಸ್ಟ ೧೯೨೨ (ಸಂಚಿಕೆ ೧೭೨

ಕಿರ್ಲೋಸ್ಕರ ಪ್ಲೋಗಾ [ಬೈಮೂಗು] ಒಡೆಯುವ ಯಂತ್ರಗಳು

ಈ ಯಂತ್ರಗಳು ಎರಡು ವಾದರಿಯವ ನಮ್ಮ ಪಾದರಿಯವು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಬಳ್ಳಾರಿಯವು. ಬಾಂಟ್ಸ ಚಪ್ಪಿಣವು. ಹೊಟ್ಟನ್ನು ಬೂಡಿಸಲು ಯಂತ್ರದಲ್ಲಿ ಒಣಗಿಸಿದನ್ನು ಶೂತ್ರಿಸಿರುವದರಿಂದ ಕಾಳುಗಳು ಹಸನಾಗಿ ಜಾರಿ ಬೀಳುತ್ತವೆ. ಈ ಯಂತ್ರಗಳ ಕಳವು ಹಂಗಾಮುದಲ್ಲಿ ಒಮ್ಮೆ ಓತಾರಗಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರಗುವದೊಂದು ಹೀಂಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಯಣ್ಣಿ ಮಾಡತಕ್ಕವರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಸಂಗೀತದ ಪರಿಣಾಮ.

—೦—

ಸಂಗೀತ ಕಲಿಯುವ ಪತ್ರ ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವರಗೆ ಒಂದು ಪಾಠ ಇಂಗ್ಲಿಷ ಪ್ರತಿಯೊಂದು ಒಳಗೆ ಐದು ಆಣೆ ಸಲ ಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಕೆ. ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಆಣೆ ತಿಂಗಳ ದಿಂದ ಆರಂಭಿಸಿ ... ಹಾಕುವದಿದ್ದರೆ ಅದು ಅಣ ... ಜಾಹೀರಾತುಗಳಿಗೆ ... ಕಾಯಂ ... ಕೊಡುವವರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬೇಕು

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ಲೋಕಮಾನ್ಯ ಟಿಳಕರ ಚರಿತ್ರೆ	೪ ,,
ದೇಶಬಂಧು ದಾಸರ ಚರಿತ್ರೆ	೩ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಖರ್ಚು ಟಪಾಲ ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಿದುಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಇಟ್ಟುಕೊಳ್ಳುವ ಬಗ್ಗೆಯ ಪೆಟ್ಟಿಗೆ ತಿಂಗಳ ಬಾಡಿಗೆಗೆ ಅನುಕೂಲವಿರುತ್ತದೆ.

ಎ. ಕೆ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

ಆಗಸ್ಟ ೧೦ರಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ಸಹಾಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಸುತ್ತೇವೆ.

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—೦—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹೆಂಡಿಗೆಯು ಅರು ಲಕ್ಷದ ಮೇಲಿಂದೆ. ಪೇಟೆ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರಗಳು ನಡೆಯುವವು. ಕ್ವಾರ್ಟರ ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಭೆಟ್ಟಿ ಆಗಿ ಮಾಡಿದರೆ ತಿಳಿಸಲ್ಪಡುವವು.

ಮ. ಕೃಷ್ಣರಾವ ಬಿ. ಜಹಾಗೀರದಾರ,

ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೧೮-೮-೨೭ ನೇ ಇಸ್ವಿ

ಡಾಕ್ಟರ ಮುಂಜೆಯವರ ಗೌರವ ಮತ್ತು ಧನಸಹಾಯ.

[—[೦]—]

ಡಾಕ್ಟರ ಮುಂಜೆಯವರ ಹೆಸರನ್ನು ಕೇಳದಂಥ ಹಿಂದೀ ಗೃಹಸ್ಥನೇ ಇಲ್ಲ. ಡಾಕ್ಟರರ ಕಯ್ಯಲ್ಲಿ ನಾಗಪೂರಿನ ಸೂತ್ರಗಳೆಲ್ಲ ಆಡುತ್ತಿರುವವು. ಇವರು ಅಲ್ಲಿಯ ಅನಭಿಷಕ್ತ ರಾಜರಾಗಿದ್ದಾರೆಂದರೂ ಸಲ್ಲುವದು. ಇವರು ಯಾವಾಗಲು ರಾಷ್ಟ್ರೀಯ ಪಕ್ಷದವರು; ಹೆಸರಾದ ಅಸಹಕಾರಿಗಳಾಗಿದ್ದರು. ಈಗ ಪ್ರತಿಯೋಗಿ ಸಹಕಾರಿಗಳಾಗಿದ್ದಾರೆ. ಆಳರಸರ ಕಣ್ಣೊಳಗೆ ಹಗಲೆಂಳು ಒತ್ತುತ್ತಿರುವಂಥವರು. ಗುಪ್ತ ಪೋಲಿಸರ ಪ್ರೇಮವಂತೂ ಬಹಳ.ಹೋಗುವಲ್ಲೆಲ್ಲ ಇವರನ್ನು ಹಿಂಬಾಲಿಸುವರು. ಅಂಥ ಕರ್ತೃತ್ವವೂ ಡಾಕ್ಟರರಲ್ಲುಂಟು ಇವರ ಕಲಕತ್ತೆ ಮತ್ತು ಸುರತದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಹುಕುಮನ್ನು ವೀರಭಟರಂತೆ ಮುರಿದರು. ಮುಂದೆ ಕಾಯದೆಭಂಗ ಮಾಡುವಂಥ ಹಲವು ಸುಪ್ರಸಂಗಗಳು ಕುತ್ತಿನಂತೆ ಉಂಟಾಗುವವು.

ಡಾಕ್ಟರರು ಪ್ರತ್ಯಕ್ಷದಲ್ಲಿ ಹಿಂದೂ ಸಂಘಟನ ಮತ್ತು ಶುದ್ಧಿಯನ್ನು ತಮ್ಮ ಧ್ಯೆಯವಾಗಿಟ್ಟುಕೊಂಡು, ದೇಶಸಂಚಾರ ಮಾಡುತ್ತಿದ್ದಾರೆ. ಮನೆಮಾರು ತೊರೆದಿದ್ದಾರೆಂದರೂ ಸಲ್ಲುವದು. ಈ ಪ್ರಕಾರ ದೇಶ ಹಿತಕ್ಕಾಗಿ, ಸ್ವಂತ ಗಳಿಕೆಯ ಮೇಲೆ ತುಳಸೀ ಪತ್ರವಿಟ್ಟಂಥ ಡಾಕ್ಟರರಿಗೆ ಪ್ರಪಂಚದ ಚಿಂತೆ ಹುಟ್ಟುವಂತೆ ದ್ರವ್ಯದ ಕೊರತೆಯಾಗಬಾರದೆಂದು ನಾಗಪೂರಿನ ಪ್ರಮುಖ ಹಿಂದೂ ಗೃಹಸ್ಥರು ವಿಚಾರ ಮಾಡಿ, ಹತ್ತು ಸಾವಿರ ರೂಪಾಯಿಗಳನ್ನು ಕೂಡಿಸಿ, ಇವನ್ನು ಅವರಿಗೆ ಸಾರ್ವಜನಿಕ ಸಭೆಯಲ್ಲಿ ಬಹುಮಾನವಾಗಿ ಕೊಟ್ಟಿರುತ್ತಾರೆ. ಈ ಕಲಸವು ನಿಜವಾಗಿ ಪ್ರಶಂಸನೀಯವಾಗಿರುತ್ತದೆ.

ಮಹಾರಾಷ್ಟ್ರ ಪ್ರಾಂತದವರು ಲೋಕಮಾನ್ಯ ಟಿಳಕರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟರು. ಲೋಕಮಾನ್ಯರು ಇದನ್ನು ಹೋಮ ರೂಲ ಫಂಡಿಗೆ ಕೊಟ್ಟರು. ಆ ಪ್ರಕಾರ ಡಾಕ್ಟರ ಮುಂಜೆಯವರೂ ಮಾಡಬಹುದಾಗಿತ್ತೆಂಧು ಕೆಲವರು ಆಕ್ಷೇಪನೆ ತಕೊಳ್ಳಬಹುದು. ಲೋಕಮಾನ್ಯರಿಗೆ ಕೇಸರಿ ಪತ್ರದಿಂದ ದೊಡ್ಡ ಪ್ರಾಪ್ತಿ ಇತ್ತು. ಆದರಿಂದ ಅವರಿಗೆ ದ್ರವ್ಯದ ಕೊರತೆ ಇರಲಿಲ್ಲ. ಡಾಕ್ಟರ ಮುಂಜೆಯವರಿಗೆ ವೈದ್ಯಕಿಯಿಂದಲೇ ಉಪಜೀವನ. ಅದನ್ನು ಬಿಟ್ಟರೆ- ಭಿಕ್ಷಾಪಾತ್ರೆಯೇ ಬರುವದು. ಇವರಂಥ ದೇಶಕಾರ್ಯಸಮರ್ಥರು ಈ ದೇಶದಲ್ಲಿ ಬಹಳ ಕಡಿಮೆ ಜನರಿದ್ದಾರೆ. ವಿಲಾಯತಿಯಲ್ಲಿ ದೇಶಹಿತ ಅಥವಾ ಪರಹಿತ ಬುದ್ಧಿಯಿಂದ ಸ್ವಾರ್ಥತ್ಯಾಗ ಮಾಡಿದಂಥವರಿಗೆ ದ್ರವ್ಯ ಸಹಾಯ ಮಾಡುವ ಪದ್ಧತಿಯುಂಟು. ಅದೇ ತೆರವಾಗಿ ನಾಗಪೂರ ನಿವಾಸಿಗಳು ಇವರ ಗೌರವ ಮಾಡಿ, ದ್ರವ್ಯ ಸಹಾಯ ಮಾಡಿದ್ದಾರೆ. ನಾಗಪೂರ ಮಾತ್ರವಲ್ಲ, ಇವರು ಹಿಂದೂ ಸಭೆಯ ಕೆಲಸಕ್ಕಾಗಿ ಹೋಗುವಂಥ ಊರವರು ಇದೇ ರೀತಿಯಾಗಿ ದ್ರವ್ಯರೂಪದಿಂದ ಇವರ ಬಹುಮಾನ ಮಾಡುವದು ಕರ್ತವ್ಯವಾಗುತ್ತದೆ.

ವಿಭೂತಿ ನಿಂದೆಗೆ ಶಿಕ್ಷೆ.

—೦೦—

ಪೈಗಂಬರರನ್ನು ನಿಂದಿಸಿದಂಥ ಲೇಖ ಬರೆದ ಬಗ್ಗೆ ರಿಸಾಲಾ ವರ್ತಮಾನ ಪತ್ರದ ಸಂಪಾದಕರಿಗೆ ಶಿಕ್ಷೆಯಾಯಿತಷ್ಟೇ; ಇದು ಜಸ್ಟಿಸ ದಲೀಪಸಿಂಗರಂತೆ ಅರೋಪಿಯನ್ನು ದೋಷಮುಕ್ತ ಮಾಡಬಹುದು. ಕಾಯದೆಯಲ್ಲಿ ದೋಷವುಳಿಯಬಾರದೆಂದು ಇದರಲ್ಲಿ ದುರಸ್ತಿ ಮಾಡಬೇಕೆಂಬ ಬಿಲ್ಲನ್ನು ಅಥವಾ ಹಿಸಲ ಕೋಡಿನ ಈ ವಿಷಯಕವಾದ ಕಲಮನ್ನು ದುರಸ್ತ ಮಾಡಿಸುವದಕ್ಕಾಗಿಯೂ, ತಿದ್ದಿ ಬೆಳಿಸುವದಕ್ಕಾಗಿಯೂ ಮೌಲಾನಾ ಮಹಮದಲ್ಲಿಯವರು ಒಂದು ಕಲಮು ಬರೆದಿದ್ದಾರೆ. ಈ ಕಲಮಿನ ಬಗ್ಗೆ ಪೂರ್ವ ವಿಚಾರ ಮಾಡಲು ಈ ಮೂರು ದಿವಸಗಳಲ್ಲಿ ದಿಲ್ಲಿಯ ಮಾರ್ಗವಾಗಿ ಸಿಮಲಾದಲ್ಲಿ ಕೂಡುವ ಅಸೆಂಬ್ಲಿಯ ಸಭೆಗಾಗಿ ಹೋಗುವಂಥ ಮುಸಲಮಾನ ಮೆಂಬರರು ದಿಲ್ಲಿಯಲ್ಲಿಳಿಯಬೇಕೆಂದು ಇವರು ಒಂದು ವಿನಂತಿ ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ.

ಸಾಧು ಸಂತರು ದೇವಾಂಶ ಸಂಭೂತರು ಯಾವದೇ ಮತ ಅಥವಾ ಪಂಥದವರಿದ್ದರೂ, ಪೂಜ್ಯರೇ ಆಗುತ್ತಾರೆ. ಇವರು ಹಿಂದೂ ಇರಲಿ; ಕ್ರಿಶ್ಚನ್ನರಿರಲಿ; ಮುಸಲಮಾನರಿರಲಿ; ಯಾವನೊಬ್ಬನು ಇವರ ಅವಹೇಲನೆ ಮಾಡುವದೆಂದರೆ- ಆ ಮತದ ಸಮಸ್ತ ಜನರ ಧಾರ್ಮಿಕ ತಿಳುವಳಿಕೆಗೆ ನೋವು ಮಾಡಿದಂತಾಗುತ್ತದೆ. ಕಾರಣ ಮೌಲಾನಾ ಸಾಹೇಬರು ಈ ವಿಷಯವಾಗಿ ಬರೇ ಮುಸಲಮಾನರ ಕೂಡ ವಿಚಾರ ಮಾಡದೆ, ಹಿಂದೂ, ಬೌದ್ಧ, ಕ್ರಿಶ್ಚನ್ನ ಮೊದಲಾದವರ ಕೂಡ ವಿಚಾರ ಮಾಡುವದೂ ಅವಶ್ಯವಾಗುತ್ತದೆ.

ನೆರೆಹಾವಳಿಯಿಂದ ಹೊಲಮನೆಗಳ ಕಲ್ಪನಾತೀತ ಕೇಡು.

ಗುಜರಾಥವು ಸಂಪನ್ನ ದೇಶವು. ಪರಪ್ರಾಂತಗಳಿಗೆ ವಿಪತ್ತು ಒದಗಿದಾಗ, ಕರ್ಣಾಂಶಸಂಭೂತವಾಗಿ ದ್ರವ್ಯ ಸಹಾಯ ಮಾಡುವಂಥಾದ್ದು. ಇಂಥ ಐಶ್ವರ್ಯ ಸಂಪನ್ನವಾದಂಥ ಪ್ರಾಂತವು ತನಗೆ ಸಹಾಯ ಮಾಡಬೇಕೆಂದು ಅನ್ಯರಿಗೆ ಯಾಚನೆ ಮಾಡುವದುರ್ಧರ ಪ್ರಸಂಗ ಬಂದಿರುತ್ತದೆ. ಸರಕಾರದಲ್ಲಿ ದುಷ್ಕಾಳ ನಿವಾರಣ ಫಂಡುಂಟು. ಈ ಫಂಡಿನಿಂದ ಒಂದು ಕೋಟಿ ರೂಪಾಯಿ ಕೊಡಬೇಕೆಂದು ರಿಲೀಫ ಕಮಿಟಿಯವರು ಸರಕಾರಕ್ಕೆ ತಿಳಿಸಿದರು. ಆದರೆ ಈ ತೆರವಾಗಿ ಸಹಾಯ ಮಾಡಲು ಸರಕಾರವು ಸಿದ್ಧವಿಲ್ಲ. ಗವ್ಹರ್ನರಸಾಹೇಬರ ಕೌನ್ಸಿಲ ಮೆಂಬರರಾದ ಸರ ಚುನಿಲಾಲ ಮೆಹತಾ-ಹೇಜರು ಇದೇ ಉಪ್ಪಿನ್ಯವಾಗಿ ನಡಿಯಾದಕ್ಕೆ ಹೋಗಿ, ಕಾಂಗ್ರೆಸದ ಪ್ರಮುಖ ಗೃಹಸ್ಥರ ಕೂಡ ಸಂಭಾಷಣೆ ಮಾಡಿದರು, ರೈತರಿಗೆ ತಗಾವಿ ಕೊಡುವದು, ಬೀಜ ಕೊಡುವದು, ದನಗಳನ್ನೊದಗಿಸಿ ಕೊಡುವದು ಇವೇ ಮುಂತಾದ ವಿಷಯಗಳ ವಿಚಾರವು ಸಾಮಾನ್ಯವಾಗಿ ನಡೆಯಿತು. ಮನೆಗಳು ಹಾಳಾದಂಥವರ ವಿಚಾರವು ಸಾಮಾನ್ಯವಾಗಿ ನಡೆಯಿತು ಈ ವಿಚಾರವನ್ನು ಶ್ರೀ, ಪಟೇಲರು ಮುಂದೆ ಕೊಟ್ಟಂತೆ ಹೇಳಿದ್ದಾರೆ.

೧ ಹೊಲವಿಲ್ಲದಂಥವರ ಹಾಗು ಅಸ್ಪೃಶ್ಯರ ದೆಸೆಯಿಂದ ೨೦ ಸಾವಿರ ಗುಡಿಸಲುಗಳನ್ನು ಕಟ್ಟಬೇಕು. ಒಂದೊಂದಕ್ಕೆ ೫೦ ರೂಪಾಯಿ ವೆಚ್ಚ ಬರುವದು. ಒಟ್ಟು ವೆಚ್ಚವು ಹತ್ತು ಲಕ್ಷವಾಗುವದು ಇದನ್ನು ಸರಕಾರವು ಉಚಿತವಾಗಿ ಪರೋಪಕಾರ ಬುದ್ಧಿಯಿಂದಲೇ ಕೊಡಬೇಕು.

೨. ೭೦ ಸಾವಿರ ಮನೆಗಳ ಅರ್ಧಮರ್ಧ ರಿಪೇರಿಯಾಗಬೇಕಾಗಿದೆ ಒಂದೊಂದಕ್ಕೆ ೧೫೦ ರೂಪಾಯಿ ಬೇಕಾಗುವದು. ಇದರ ವೆಚ್ಚವು ಒಂದು ಕೋಟಿ ಐದು ಲಕ್ಷವಾಗುವದು ಐದು ವರ್ಷಗಳಲ್ಲಿ ಈ ರಕಮನ್ನು ತಿರಿಗಿ ಮುಟ್ಟಿಸುವ ಕರಾರಿನಿಂದ ಸಾಲವಾಗಿ ಕೊಡಬೇಕು ಮೊದಲನೆಯ ವರ್ಷ ಬಡ್ಡೀ ತಕ್ಕೊಳ್ಳಬಾರದು. ಮುಂದಿನ ವರ್ಷಗಳಲ್ಲಿ ತೀರ ಕಡಿಮೆ ಬಡ್ಡೀ ಆಕಾರ ಮಾಡಬೇಕು.

೩ ಶ್ರೀಮಂತರ ಎರಡು ಸಾವಿರ ಮನೆಗಳಿಗೆ ಕೇಡೊದಗಿದೆ. ಒಂದೊಂದು ಸಾವಿರದಿಂದ ಎರಡು ಸಾವಿರದ ತನಕ ವೆಚ್ಚ ಬರುವದು. ಇವುಗಳ ವೆಚ್ಚವು ಇಪ್ಪತ್ತು ಲಕ್ಷಕ್ಕಿಂತ ಹೆಚ್ಚಾಗಲಾರದು.

ಸರಕಾರದವರು ಈ ತರದ ಸಹಾಯವನ್ನು

ಮ್ಯುನಿಸಿಪಾಲಿಟಿಗಳ ಹದ್ದಿನಲ್ಲಿರುವ ಜನರಿಗಾಗಿಯೂ ಮಾಡಬೇಕು.

ಈ ಪ್ರಕಾರ ಶ್ರೀ. ಪಟೇಲರು ಸೂಚಿಸಿದ್ದಕ್ಕೆ ಸರಕಾರದ ವತಿಯಿಂದ ಸರ ಚುನಿಲಾಲರು ಯಾವ ಪ್ರಕಾರದ ಆಶ್ವಾಸನ ಕೊಡಲಿಲ್ಲ. ಕೌನ್ಸಿಲದ ಮುಂದೆ ಈ ವಿಷಯವಿಡುವೆವೆಂದಿಷ್ಟೇ ಆಶ್ವಾಸನ ಕೊಟ್ಟಿದ್ದಾರೆ.

ಇಂಗ್ಲಂಡದಲ್ಲಿ ಬಂಡಾಯದ ಹೆದರಿಕೆಯೇ ಇಲ್ಲ!!

— o —

ಬೋಲ್ಶೆವಿಕ ತತ್ವದ ದೆಸೆಯಿಂದ ಇಂಗ್ಲಿಷ ಕೂಲಿಕಾರರು ಬಂಡಾಯ ಮಾಡುವರೆಂದು ಅಮೇರಿಕೆಯಲ್ಲಿ ಆಗಾಗ್ಗೆ ಸಂಶಯದ ಸುದ್ದಿಯು ಹಬ್ಬುತ್ತಿರುವದು. ಪ್ರತ್ಯಕ್ಷದಲ್ಲಿ ಕಾನಡಾಕ್ಕೆ ಹೋಗಿರುವ ಮುಖ್ಯ ಪ್ರಧಾನರಾದ ಮಿ. ಬಾಲ್ಡವಿನಸಾಹೇಬರು ಈ ಸುದ್ದಿಯು ತೀರಾ ಸುಳ್ಳಿಗೆಟ್ಟಿದ್ದು. ಇದನ್ನು ಯಾರೂ ನಂಬಬೇಡಿರೆಂದು ಎಚ್ಚರಿಕೆ ಹೇಳಿರುತ್ತಾರೆ. ಇಂಗ್ಲಿಷ ಕೂಲಿಕಾರರಿಗೆ ಕಷ್ಟನಷ್ಟಗಳು ಬಂದದ್ದು ನಿಜ. ಆದರೂ ಇವನ್ನು ಬಹುವಾದ ಧೈರ್ಯದಿಂದಲೂ ವಿಕಾರವಶರಾಗದೆ ಆತ್ಮಸಂಯಮನದಿಂದಲೂ ಸಹಿಸಿದ್ದಾರೆ. ಎಲ್ಲಾದರೂ ಒಂದೆರಡು ಕಡೆಗೆ ವಿಚಾರಾಚಾರಗಳ ಅತಿರೇಕವಾಗಿದ್ದರೆ ಆಶ್ಚರ್ಯವಲ್ಲ. ಇವರ ಇಂದ್ರಿಯ ನಿಗ್ರಹವೂ ಧೈರ್ಯವೂ ಜಗತ್ತಿಗೇ ಅನುಕರಣ ಮಾಡುವಂಥ ಉದಾಹರಣೆಗಳಾಗಿವೆಂದು ಸಾರಿಸಾರಿ ಹೇಳುತ್ತೇನೆಂದು ಕೊನೆಯಲ್ಲಿ ಭರತ ವಾಕ್ಯವನ್ನು ನುಡಿದಿದ್ದಾರೆ.

ನಂಬುದ್ರಿಗಳ ವಿಚಿತ್ರ ರೀತಿಯು.

— o —

ನೀತಿ ಭ್ರಷ್ಟರಾದಂಥವರಿಗೆ ಶಾಸನ ಮಾಡುವಂಥ ವಿಚಿತ್ರ ವಿಧಿಯು ಮಲಬಾರದಲ್ಲುಂಟು. ಯಾವಳೊಬ್ಬಳ ತಪ್ಪು ಹೆಚ್ಚಿ ಇಟ್ಟದ್ದು ಸಿದ್ಧವಾಯಿತೆಂದರೆ ಇವಳನ್ನು ಬ್ರಾಹ್ಮಣ ನ್ಯಾಯದ ಮುಂದೆ ನಿಲ್ಲಿಸುವರು. ಆಗ ಈಕೆಯು ತನಗೆ ಶಕ್ಯವಾದಷ್ಟು ರೀತಿಯಿಂದ ಶೃಂಗಾರವಾಗುವಳು. ಮೈಮೇಲೆ ತನ್ನ ಒಡವೆಗಳನ್ನಿಟ್ಟುಕೊಳ್ಳುವಳು. ಮತ್ತು ಕಯ್ಯಲ್ಲಿ ತಾಳಪಾವಲಿಯ ಕೊಡೆ ಹಿಡಕೊಂಡು ನಿಲ್ಲುವಳು. ಬ್ರಾಹ್ಮಣರೂ ಬೇರೆ ಈಕೆಗೆ ಜನರೂ ವ್ಯಭಿಚಾರದ ದೆಸೆಯಿಂದ ಮನದಣಿ ಬಯ್ಯುವರು. ಬಳಿಕ ಇವರು ತನ್ನ ಕಯ್ಯಲ್ಲಿ ಹಿಡಿದ ಕೊಡೆಯನ್ನು ನೆಲಕ್ಕೆ ಅಪ್ಪಳಿಸಿ, ಮುರಿದು ಆ ಊರು ಬಿಟ್ಟು ಹೋಗುವಳು. ವ್ಯಭಿಚಾರದ ದೆಸೆಯಿಂದ ಈಕೆಗೆ ಬಹಿಷ್ಕಾರ ಹಾಕಿದಂತೆ ಬ್ರಾಹ್ಮಣರು ಜಾಹೀರ ಮಾಡುವರು. ಮತ್ತು ಈಕೆಯು ಪಿತ್ರಾರ್ಜಿತ ಸ್ಥಾವರ ಆಸ್ತಿಯನ್ನು ಕಳಕೊಳ್ಳುವಳು.

ಗುಪ್ತ ಪೋಲೀಸರ ಕಚೇರಿಯು ಸುರಂಗದಿಂದ ಹಾರಿತು.

— o —

ವಿಲಾಯತಿಯಲ್ಲಿರುವ ಬ್ರಿಸಬೇನ ಪಟ್ಟಣದಲ್ಲಿರುವ ಗುಪ್ತ ಪೋಲೀಸರ ಕಚೇರಿಯು ಗುಪ್ತವಾಗಿ ಮಧ್ಯರಾತ್ರಿಯ ಸಮಯದಲ್ಲಿ ಸುರಂಗದಿಂದ ಹಾರಿತು. ಕಟ್ಟಡದ ದೊಡ್ಡ ದೊಡ್ಡ ಕಲ್ಲುಗಳು ಸಿಡಿದು ಹಾರಿಬಿದ್ದವು. ಡಸ್ತರವು ಪೂರ್ಣ ಪ್ರತಿಯಾಗಿ ಬಿತ್ತು. ಸುರಂಗ ಹಾರಿದ ಸಪ್ಪಳ ಕೇಳಿ, ಇಡೀ ಪಟ್ಟಣವೇ ಎಚ್ಚತ್ತು ಗಾಬರಿಯಾಯಿತು.

ಮುಹಕ್ಕದ ಸಭೆ-

ಪಂಡಿತ ಮೋತಿಲಾಲರು ಇದೇ ತಿಂಗಳ ಕೊನೆಯ ತಾರೀಖಿನ ದಿವಸ ವಿಲಾಯತಿಗೆ ಪ್ರಯಾಣ ಮಾಡುವರು. ತತ್ಪೂರ್ವದಲ್ಲಿ ರಾಜಕೀಯ ವಾದಂಥ ಮುಹಕ್ಕದ ವಿಷಯಗಳ ವಿಚಾರ ಮಾಡಲೋಸುಗ ಸಿಮಲಾದಲ್ಲಿ ಮೂರು ದಿವಸ ವಾಸವಾಗಿರುವರು. ಆಗ ಕಾಂಗ್ರೆಸದ ಮೆಂಬರರ ಕೂಡ ಚರ್ಚೆ ಮಾಡುವದಂತೂ ಸರಿ; ಉಳಿದ ಪಕ್ಷದವರ ಕೂಡ ಸಹ ಚರ್ಚೆ ಮಾಡುವರು.

ಪ್ರಾಥಮಿಕ ಶಾಲೆಗಳ ಕಾಯದೆಯಲ್ಲಿ ದೋಷ-

ಮುಂಬಯಿ ಸರಕಾರದವರು ಮಾಡಿದ ಪ್ರಾಥಮಿಕ ಶಾಲೆಗಳ ಕಾಯದೆಯಲ್ಲಿ ಅನೇಕ ಕೊರತೆಗಳೂ ದೋಷಗಳೂ ಕಂಡು ಬಂದಿವೆ. ಇವುಗಳ ದುರಸ್ತಿಯಾಗಬೇಕೆಂದು ಮುಸಲಮಾನರು ಮುಂದೊರೆದಿದ್ದಾರೆ. ಪುಣೆಯಲ್ಲಿ ಅಕ್ಟೋಬರ ತಿಂಗಳಲ್ಲಿ ಮುಸಲಮಾನರ ಶಿಕ್ಷಣ ಪರಿಷತ್ತು ಕೂಡುವಂತೆ ಏರ್ಪಾಡಾಗಿದೆ. ಅಲ್ಲಿ ಇವುಗಳ ಬಗ್ಗೆ ಚರ್ಚೆ ಮಾಡುವರು.

ಜಾರ್ಡನ ನದಿಯಿಂದ ವಿದ್ಯುತ್ತು-

ಕ್ರಿಸ್ತರ ಪವಿತ್ರವಾದ ಜಾರ್ಡನ ಹೊಳೆಗೆ ೧೩೦ ಫೂಟು ಎತ್ತರದಿಂದ ನೀರು ಬೀಳುವಂಥ ತಡಸಲವುಂಟು. ಇದರಿಂದ ವಿದ್ಯುತ್ತನ್ನು ಹುಟ್ಟಿಸಿ, ರೇಲ್ವೆ, ಗಿರಣಿ- ಕಾರಖಾನೆಗಳನ್ನು ನಡಿಸುವರು. ಮತ್ತು ಅಲ್ಲಲ್ಲಿ ಇರಿಗೇಶನಕ್ಕಾಗಿ ಬೇಕಾಗುವ ನೀರನ್ನು ಏರಿಸುವ ಪಂಪಿಗೆ ಇದರ ಉಪಯೋಗ ಮಾಡುವರು.

ಕರ್ನಾಟಕದ ದೇಶಾಭಿಮಾನಿಗಳಿಗೆ:

ಬಂಧು ಭಗಿನಿಯರೇ—

ಮದ್ರಾಸ ಬ್ರಾಹ್ಮಣೇತರ ಪಕ್ಷದವರು ಕಾಂಗ್ರೆಸ ಸಭೆಯನ್ನು ಸೇರಬೇಕೆಂದಿದ್ದು ಬಹಳೇ ಇಷ್ಟವೂ ಯೋಗ್ಯವೂ ಇರುವದು. ಕರ್ನಾಟಕವು ಕಾಂಗ್ರೆಸದ ಸ್ವತಂತ್ರ ಪ್ರಾಂತವಾದಂದಿನಿಂದ ಎಲ್ಲ ಜಾತಿಪಕ್ಷ ಪಂಗಡದವರು ಕಾಂಗ್ರೆಸದಲ್ಲಿ ಸಮಾವಿಷ್ಟವಾಗಬೇಕೆಂದು ನಾವು ಬಿನ್ನವಿಸುತ್ತ ಬಂದಿರುವೆವು. ಅದಕ್ಕೆ ಯಾವ ಪ್ರಸ್ನೆ ದೊರೆಯಬೇಕೋ ಅದು ಇದುವರೆಗೆ ದೊರೆತಿಲ್ಲ. ರಾಷ್ಟ್ರದ ಭವಿಷ್ಯದ ವಿಚಾರವು ಎಲ್ಲ ಕಡೆಗೂ ಒಳ್ಳೇ ಆಸ್ಥೆಯಿಂದ ನಡೆದಿರುವಾಗ ನಾವೆಲ್ಲರೂ ನಮ್ಮ ರಾಷ್ಟ್ರದ ಎಲ್ಲಕ್ಕೂ ಶ್ರೇಷ್ಠವಾದ ರಾಜಕೀಯ ಸಂಸ್ಥೆಯಲ್ಲಿ ಸೇರುವದು ಅವಶ್ಯವೆಂದು ನಾನು ಪುನಃ ಹೇಳಿಕೊಳ್ಳುವೆನು. ನಾವೆಲ್ಲರೂ ಕಾಂಗ್ರೆಸ ಸಭೆಯಲ್ಲಿ ಕೂಡುವಾ, ನಮ್ಮ ಮತಭೇದಗಳನ್ನು ಸರ್ವರಿಗೆ ಸಮಾಧಾನವಾಗುವಂತೆ ಅಳಿಸಿಬಿಡುವಾ, ಮತ್ತು ಎಲ್ಲ ರಾಜಕೀಯ ಚಳವಳಿಗಳ ಧ್ಯೇಯವಾದ ಸ್ವರಾಜ್ಯವನ್ನು ಏಕಕಂಠದಿಂದ ಪ್ರತಿಪಾದಿಸುವಾ.

ಮುಸಲಮಾನ ಬಂಧುಗಳು ತಮ್ಮ ಬೇಡಿಕೆಗಳನ್ನು ಮುಂದಿಡುತ್ತಿರುತ್ತಾರೆ. ಹಿಂದೂ ಮುಸಲಮಾನರ ಐಕ್ಯವನ್ನು ಮಾಡುವ ಯತ್ನಗಳೂ ನಡೆದಿವೆ. ಈ ಸಮಯದಲ್ಲಿ ಹಿಂದುಗಳು ತಮ್ಮ ಕಿರುಕುಳ ಮತಭೇದಗಳನ್ನು ಅಳಿಸಿಬಿಡದಿದ್ದರೆ, ಸ್ವಾತಂತ್ರ್ಯ- ಕಾರ್ಯವು ಹಾಳಾಗುವದು. ನಮ್ಮ ಬ್ರಾಹ್ಮಣ ಬ್ರಾಹ್ಮಣೇತರ ಮತಭೇದಗಳು ಕರ್ನಾಟಕದ ಪ್ರಗತಿಪಥದಲ್ಲಿ ತೊಡಕುಗಳಾಗಿವೆ. ಈ ಜಡಕಿನ ಮೂಲಕವೇ ಏಕೀಕರಣ ಪ್ರಶ್ನೆಯು ಪ್ರೋತ್ಸಾಹವಿಲ್ಲದಾಗಿದೆ. ಈ ವಿಷಯದಲ್ಲಿ ಪ್ರಯತ್ನಿಸುತ್ತಿರುವ ಕಾಂಗ್ರೆಸಕ್ಕೆ ಎಲ್ಲ ಪಕ್ಷದವರ ಬೆಂಬಲವು ಅವಶ್ಯವು. ಬ್ರಾಹ್ಮಣೇತರ ಪಕ್ಷದವರು ಕಾಂಗ್ರೆಸ ಸಭೆಯನ್ನು ಅಂತಃಕರಣಪೂರ್ವಕವಾಗಿ ಸೇರಿ ಭಾರತದ ಸ್ವರಾಜ್ಯ ಯುದ್ಧದಲ್ಲಿ ಕರ್ನಾಟಕವಾದರೂ ಸಹ ಭಾಗಿಯಾಗುವಂತೆ ಮಾಡುವರೋ?

ಸತ್ಕರ್ಮದಿಗರೇ, ಕೂಡಿದರೆ ಗೆಲ್ಲುವೆವು, ಒಡೆದರೆ ಸೋಲುವೆವೆಂಬದನ್ನು ಮರೆಯಬೇಡಿ. ಒಂದಾಗಿರಿ. ಮತಭೇದಗಳನ್ನು ಮರೆಯಿರಿ. ಮದ್ರಾಸ ಬ್ರಾಹ್ಮಣೇತರ ಬಂಧುಗಳು ಹಾಕಿಕೊಟ್ಟ ಮೇಲುಪಂಕ್ತಿಯನ್ನು ತಿಳಿದು ಕಾಂಗ್ರೆಸ ಸಭೆಯನ್ನು ಸೇರಿರಿ. ನಿಮ್ಮ ಸಾಮರ್ಥ್ಯ ಮತ್ತು ಕಾರ್ಯ ಇವುಗಳನ್ನು ತಿಳಿದು ನೋಡಿದರೆ ಧನ್ಯ ಕಾಲವು ನಿಮ್ಮದೇ ಇರುವದು. ಜಾತಿಮತ್ಸರದ ಭೂತವು ಬಿಟ್ಟು ಹೋದ ಮೇಲೆ ಆಗುವ ನಮ್ಮ ಮಾತೃಭೂಮಿಯ ಘನತೆಯ ದಿವ್ಯಚಿತ್ರವನ್ನು ಕಾಣುವ ಸ್ಫೂರ್ತಿಯನ್ನು ದೇವರು ನಿಮಗೆ ದಯಪಾಲಿಸಲಿ.

ನಿಮ್ಮ ಸಹೋದರ

ಅ ಲ–೨೭ ಕೌಜಲಗಿ ಶ್ರೀನಿವಾಸರಾವ

ವಿಜಾಪೂರ ಕ. ಪ್ರಾಂ. ಕಾಂ. ಸಮಿತಿ.

ನೋಟೀಸು.

—o—

ಉಳವಪ್ಪಾ ಈರಪ್ಪಾ ಜಾಡ್ರ ಸಾ. ಬೆಳವಟಗಿ ತಾಲೂಕ ನವಲಗುಂದ ಇವರಿಗೆ

ಕೆಳಗೆ ಸಹಿ ಮಾಡಿದವರ ಕಡಿಂದಾ ಜಾಹೀರ ನೋಟೀಸು ಕೊಡುವದು ಏನಂದರೆ ನೀನು ನನ್ನ ಲಗ್ನದ ಗಂಡನಿದ್ದು ನೀನು ಇವತ್ತಿನ ವರೆಗೆ ನನ್ನನ್ನು ಕರಕೊಂಡು ಹೋಗಲಿಲ್ಲಾ ನೀನು ೫-೬ ವರ್ಷದ ಲಾಗಾಯ್ತು ನಿನ್ನ ಊರಲ್ಲಿ ಇಲ್ಲಾ ಅಂತಾ ಕೇಳಿದ್ದೆ ಈಗ ಎರಡು ವರ್ಷದ ಹಿಂದೆ ನೀನು ಊರಿಗೆ ಬಂದಿ ಅಂತಾ ಕೇಳಿದ್ದೆ ಆಗ್ಗೆ ನಾನು ವ ನನ್ನ ತಾಯಿ ಈರವ್ವಾ ಇಬ್ಬರು ಕೂಡಿ ನಿಮ್ಮಲ್ಲಿಗೆ ಬಂದಿದ್ವಿ ಆಗ್ಗೆ ಚಲೋ ರೀತಿಯಿಂದ ಬಾಳ್ವೆ ಮಾಡಲಿಕ್ಕೆ ನಿನಗೆ ನನ್ನ ತಾಯಿ ಹೇಳಿದಳು ಹಾಂಗು ನಾಲ್ಕು ಮಂದಿ ಸಂಭಾವಿತರು ಸಹಾ ಹೇಳಿದರು ಅದಕ್ಕೆ ನೀನು ನನಗೆ ಹೇಳ್ಲಿ ಬೇಕಾಗಿಲ್ಲಾ ಹೇಳಿದಿ ಆದರೆ ಈಗ ನನ್ನ ತಾಯಿ ನನ್ನ ಲಗ್ನ ಆದ ಲಾಗಾಯಿತು ಅಂದರೆ ಹತ್ತು ವರ್ಷದ ಲಾಗಾಯಿತು ಇವತ್ತಿನ ವರೆಗೆ ನನ್ನ ತಾಯಿ ನನ್ನ ಹೊಟ್ಟಿದತಿಂದಾ ತನ್ನ ವಿಶ್ವಾಸಿಕರ ಹತ್ತರಾ ಮೂರುನೂರು ರೂಪಾಯಿ ಸಾಲಾ ಮಾಡಿದ್ದಾಳೆ. ಆ ಸಾಲಗಾರರ ತ್ರಾಸು ಬಹಳ ಆಗಿದೆ. ಈಗ ವಂದು ವರ್ಷದ ಲಾಗಾಯಿತು ಬೆಳವಟಗಿಯಲ್ಲಿ ಇಲ್ಲಾ ಹಾ ಯಾವ ಊರಲ್ಲಿ ಅದೀಯೋ ಅಂಬುವದು ನನಗೆ ಗೊತ್ತಾಗಲಿಲ್ಲಾ ಈಗ ೧೫ ದಿವಸದ ಹಿಂದೆ ಮಾತ್ರ ಹಾವೇರಿಯಲ್ಲಿ ವಂದು ಲಿಂಗಾಯಿತ್ತ ಜಹಾದ ಅಂಗಡಿಯಲ್ಲಿ ಇದ್ದೀ ಅಂತಾ ಬಾತಮಿ ಅದೆ ಮತ್ತು ಅಲ್ಲಿ ಅದೀಯೋ ಇಲ್ಲೋ ಇದು ಸಹಾ ಖಾತ್ರಿ ಹೇಳಲಾರದ ಕಾರಣಾ ಈ ಜಾಹೀರ ನೋಟೀಸು ಕೊಡೋ ಭಾಗಬಿತ್ತು ಜಾಹೀರ ನೋಟೀಸಿನಿಂದ ನಿನಗೆ ತಿಳಿಸುವದು ಯೇನಂದರೆ ಇವತ್ತಿನಿಂದ ಹದಿನೈದು ದಿವಸದೊಳಗೆ ಹದ್ಲಿಗೆ ಬಂದು ನನ್ನ ದಶಿಂದಾ ನನ್ನ ತಾಯಿ ಸಾಲಾ ಮಾಡಿದ ಮೂರುನೂರು ರೂಪಾಯಿ ಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು ಒರ್ಕ ನೀನು ಬಾರದಿದ್ದರೆ ನಾನು ಯಾರದನೆ ಗಂಡನನ್ನು ಉಡಿಕೆ ಮಾಡಿಕೊಂಡು ಹೋಗುತ್ತೇನೆ ಆ ಮೇಲೆ ನನ್ನ ವ ನನ್ನ ಉಡಿಕೆ ಗಂಡನ ಮೇಲೆ ನಿಮ್ಮದು ಯಾವದೆ ತರದ್ದು ಹಕ್ಕು ನಡಿಯಲಿಕ್ಕಿಲ್ಲಾ ಇದೇ ನೋಡಪತ್ರ ಚೀಟಿ ಅಂತಾ ತಿಳಿಯಬೇಕು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಅದೆ ಅಂತಾ ಕೊಟ್ಟ ಜಾಹೀರ ನೋಟೀಸು ತಾ. ೧೫-೮-೨೭

ಈ ಯಡಗೈ ಹೆಬ್ಬಟ್ಟಿನ ಗುರ್ತ ಬಸವ್ವಾ ಗಂಡಾ ಉಳವಪ್ಪಾ ಜಾಡ್ರ ಸಾ. ಹದ್ಲಿ ಈಕಿಯದು ಅದೆ

ಖಾತ್ರಿ ಮಾಡಿರಿ. **ಮಾರಿಕಾ ಬೇನೆಗೆ** ಅತ್ಯಂತ ಅನರ್ಘ್ಯ ಔಷಧವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸಿರುವದು.

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವ.

ನೋಟೀಸು.

ಮಲ್ಲಪ್ಪಾ ಬಸಪ್ಪಾ ಜಾಡ್ರ ಸಾ. ಬೆಳವಟಗಿ ತಾ. ನವಲಗುಂದ ಇವರಿಗೆ—

ಕೆಳಗೆ ಸಹಿ ಮಾಡಿದವರ ಕಡಿಂದಾ ನೋಟೀಸು ಕೊಡುವದು ಏನಂದರೆ ನೀನು ನನ್ನ ಲಗ್ನದ ಗಂಡನಿದ್ದು ನನ್ನ ಲಗ್ನ ಆದ ಲಾಗಾಯಿತು ಕರಕೊಂಡು ಹೋಗಲಿಲ್ಲ ಹೋದ ವರ್ಷ ನನ್ನ ತಾಯಿ ಇರವ್ವಾ ಈಕಿನ್ನ ನಾಲ್ಕು ಮಂದಿ ಸಮಕ್ಷಮ ನಿಮ್ಮಲ್ಲಿಗೆ ನನ್ನನ್ನು ಕರಕೊಂಡು ಹೋಗಿ ಚಲೋ ರೀತಿಯಿಂದಾ ಇಟ್ಟಕೊಂಡು ಬಾಳ್ವೆ ಮಾಡ್ರಿ ಅಂತಾ ಹೇಳಿದ್ದಕ್ಕೆ ನೀನು ಆ ಮಾತಿಗೆ ಕಬೂಲ ಮಾಡಿದ್ದರಿಂದಾ ನಿನ್ನ ಸ್ವಾಧೀನ ಮಾಡಿ ನನ್ನ ತಾಯಿ ಊರಿಗೆ ಹೋದಳು ಆ ಮೇಲೆ ಎರಡು ಮೂರು ತಿಂಗಳು ನೀನು ಚಲೋ ರೀತಿಯಿಂದಾ ಇಟ್ಟಕೊಂಡು ಬಾಳ್ವೆ ಮಾಡಿದಿ ಆ ನಂತರಾ ನಾನು ಗರ್ಭಿಣಿ ಇದ್ದದ್ದು ನಿನಗೆ ತಿಳಿಯಿತು. ನನಗೆ ಕೂಳು ಹಾಕಲಾರದೆ ಹೊಡದು ಬಡದು ಮಾಡಿ ನನ್ನನ್ನು ಹೊರಗೆ ಹಾಕಿ ಬಿಟ್ಟಿ ನಾನು ನನ್ನ ತವರ ಮನಿಗೆ ಹೋದೆ ನನ್ನ ತಾಯಿ ನನ್ನನ್ನು ಇಟ್ಟಕೊಳ್ಳಲಿಲ್ಲಾ ಆನಂತರಾ ನಾನು ನರಗುಂದದಲ್ಲಿ ನನ್ನ ವಿಶ್ವಾಸಿಕರ ಕಡಿಂದಾ ದೆಣೆ ಮಾಡಿ ಹದ್ಲಿಯಲ್ಲಿ ನನ್ನ ಉಪಜೀವನ ಹಾಂಗು ನನ್ನ ಬಾಣಂತಿತಾನ ಮಾಡಿಕೊಂಡೆನಿ ಈಗ ವಟ್ಟು ದೆಣೆ ವಂದುನೂರಾ ಐವತ್ತು ರೂಪಾಯಿ ದೆಣೆ ಇದ್ದು ದೆಣೆದವರ ತ್ರಾಸು ಬಹಳ ಆಗಿದೆ. ಕಾರಣಾ ನಾನು ೧೫ ದಿವಸದ ಹಿಂದೆ ನನ್ನನ್ನು ಚಲೋ ರೀತಿಯಿಂದಾ ಇಟಕೊಂಡು ಸಾಲಾ ತೀರಿಸುವದಕ್ಕೆ ಸಹಾ ನಾಲ್ಕು ಮಂದಿ ಸಂಭಾವಿತರ ಸಮಕ್ಷಮ ಹೇಳಿದೆ ನೀನು ಅದಕ್ಕೆ ಒಡಂಬಡಲಿಲ್ಲ ಕಾರಣ ಈ ನೋಟೀಸು ಕೊಡುವ ಪ್ರಸಂಗ ಬಂತು ಈ ನೋಟೀಸು ಮುಟ್ಟಿದ ಏಳು ದಿವಸದಲ್ಲಿ ನನ್ನನ್ನು ಸಾಲದವರ ತಗಾದಿಯಿಂದ ಮುಕ್ತ ಮಾಡಿ ಕರಕೊಂಡು ಹೋಗದಿದ್ದರೆ ನಾನು ಯಾರದನೆ ಗಂಡನನ್ನು ಉಡಿಕೆ ಮಾಡಿಕೊಂಡು ಹೋಗುತ್ತೇನೆ ಆ ಮೇಲೆ ನನ್ನ ವ ನನ್ನ ಮಗಳ ಮತ್ತು ಉಡಿಕೆ ಗಂಡನ ಮೇಲೆ ನಿನ್ನದು ಯಾವ ತರದ ಹಕ್ಕು ಇರುವದಿಲ್ಲಾ ಇದೇ ನೋಡಪತ್ರ ಚೀಟಿ ಅಂತಾ ತಿಳಿಯಬೇಕು. ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಅದೆ ತಾ. ೧೫-೮-೨೭

ಈ ಎಡಗೈ ಹೆಬ್ಬಟ್ಟಿನ ಗುರ್ತ ಮಹಾಂತವ್ವಾ ಗಂಡಾ ಮಲ್ಲಪ್ಪಾ ಜಾಡ್ರ ಸಾ॥ ಹದ್ಲಿ ಈಕಿದು ಅದೆ.

ಜಾಹೀರ ನೋಟೀಸು.

— o —

ಕೆಳಗೆ ಸಹಿ ಮಾಡಿದವರು ಈ ಜಾಹೀರ ನೋಟೀಸಿನಿಂದಾ ಯಾವತ್ತೂ ಜನರಿಗೆ ತಿಳಿಸುವದೇನಂದರೆ— ಚಂದೂಬಾಯಿ ಕೋಮ ನಾಗೇಂದ್ರಸಾ ಪಿಟವಟಿ ಈಕೆಯು ಮತ್ತು ಸದ್ರಿ ಚಂದೂಬಾಯಿಯು ಮಕ್ಕಳು ಅಂದರೆ ವಿಠ್ಠಲಸಾ ವ ವಿಶ್ವನಾಥಸಾ ವ ತಕಾರಾಮಸಾ ವ ರಾಮಕೃಷ್ಣಸಾ ಬಿನ್ನ ನಾಗೇಂದ್ರಸಾ ಪಿಟವಟಿ ಇವರು ಯಾವತ್ತೂ ತಮ್ಮ ಮನಿಯಲ್ಲಿಯೇ ಇದ್ದಾರೆ ಮತ್ತು ತಮ್ಮ ಮನೆತನವನ್ನು ತಾವೇ ಸಾಗಿಸುತಾರೆ. ನಮಗೆ ಈ ಯಾವತ್ತರೂ ಯೆಷ್ಟು ಮಾತ್ರವೂ ಸಬಂಧ ಇರುವದಿಲ್ಲಾ ಇವರ ಪೈಕಿ ಯಾರಾದರೂ ನಮ್ಮ ನಾಮೇನಿಂದಾ ಸಾಲಾ ವಗೈರೆ ಬೇಡಿದರೆ ಕೊಡಬಾರದು ಒರ ಕೊಟ್ಟರೆ ನಮ್ಮ ಜವಾಬದಾರಿ ಇರುವದಿಲ್ಲಾ ತಾ. ೧೬-೮-೨೭

ಸಹಿ ರಾಮನಾಥಸಾ ಬಿನ್ನ ನರಸಿಂಗಸಾ ಪಿಟವಟಿ

ಸಹಿ ಹಣಮಂತಸಾ ಬಿನ್ನ ನರಸಿಂಗಸಾ ಪಿಟವಟಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬಿಡಿ ಅರ್ಧ ಆಣೆ

ಸಂಪಾದಕರು:— ಆನಂದ ಆಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಶುಕ್ರವಾರ ತಾರೀಖು ೧೯ನೇ ಅಗಸ್ಟ ೧೯೨೭ (ಸಂಚಿಕೆ ೧೭೪

ಕಿರ್ಲೋಸ್ಕರ ಶೇಂಗಾ [ಭೂಶೇಂಗಾ] ಒಡೆಯುವ ಯಂತ್ರಗಳು

ಈ ಯಂತ್ರಗಳು ಎರಡು ಮಾದರಿಯವು ನಮ್ಮ ಮಾದರಿಯವು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಕಬ್ಬಿಣದವು. ಬೌಂಟ್ಸು ಕಬ್ಬಿಣದ್ದು. ಹೊಟ್ಟನ್ನು ಹೊಡಿಸಲು ಯಂತ್ರದಲ್ಲಿ ಜೀರಣಿಕೆಯನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳ ಕಳೆದ ಹಂಗಾಮದಲ್ಲಿ ಒಳ್ಳೇ ಉಪಯೋಗಿಸಿತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಮಾರುವ ವ್ಯಾಪಾರಸ್ಥರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯವಶ್ಯಕವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ಆರು, ಒಂದು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

ಅಗಸ್ಟ ೧೯ರಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸಿದೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ಉಪಕರಿಸುವರೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರಿನಿಂದ ಆರು ಲಕ್ಷದ ಮೇಲುಂಟು. ಚೇಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಠೇವಣಿ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಂಡಗಾವ ಬಿ. ಜಕಾತಿ,
ಮ: ನೇಮಿಂಗ ಡಾಯರೆಕ್ಟರ

ಜಾಹೀರಾತಿನ ದರಗಳು.

ಒಂದು ಕಾಲಮಿನ ಹತ್ತು ಸಾಲುಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದಾಣೆ ಇಂಗ್ಲೀಷ ಪ್ರತಿಯೊಂದು ಸಾಲಿಗೆ ಎರಡು ಆಣೆ ಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಇತ್ಯಾದಿ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ... ಕನ್ನಡದಲ್ಲಿ ಹಾಕುವದಿದ್ದರೆ ... ಕಾಲಮಿನ ಸಾಲುಗಳಿಗೆ ... ಜಾಹಿರಾತುಗಳನ್ನು ಕೊಡುವವರು ಕೆಳಗಿನವರ ಕಡೆಗೆ ಪತ್ರವ್ಯವಹಾರ ಮಾಡಬೇಕು

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

ಒಂದನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ಲೋಕಮಾನ್ಯ ಟಿಳಕರ ಚರಿತ್ರೆ	४ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ವೆಚ್ಚ ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
४ ,,	४—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೧೯-೮-೨೭ ನೇ ಇಸ್ವಿ

ವಾಯುವ್ಯ ಗಡಿನಾಡಿನ ದುರ್ದೈವಿ ಹಿಂದೂ ಜನರು!!

ಒಂದು ಸಾವಿರ ವರ್ಷಗಳ ಹಿಂದೆ ಕಾಬೂಲ ಕಂದಹಾರ ಪ್ರಾಂತವು ಹಿಂದೂ ರಾಜ್ಯವಾಗಿತ್ತು. ಮುಸಲಮಾನರ ದಾಳಿಯಿಂದ ಅವು ಮುಸಲಮಾನ ಮಯವಾಗಿವೆ. ಅವುಗಳ ಕಳೆಯು ಸಿಂಧ ಪಂಜಾಬಗಳಿಗೂ ಬಡಿಕೊಂಡಿದೆ. ಕಾಬೂಲ ಮತ್ತು ಪಂಜಾಬದ ನಡುವೆ ವೀರ್ಯಕ್ಕೆ ಪ್ರಸಿದ್ಧಂಥ ಅಫ್ರಿದಿ ಮೊದಲಾದ ಗುಡ್ಡಗಾಡಿನ ಪ್ರದೇಶಗಳುಂಟು. ಕಾಡು ಜನರು ಇಂಗ್ಲಿಷ ಸರಕಾರಕ್ಕೆ ಪರಿಪರಿಯಾಗಿ ತ್ರಾಸ ಕೊಟ್ಟು, ಗಡಿನಾಡನ್ನು ಸುರಕ್ಷಿತವಾಗಿಡಲೇ ಇಲ್ಲ. ಕೊಳ್ಳೆ ಕೊಲೆಗಳು ಆಗಾಗ್ಗೆ ಆಗುತ್ತಿದ್ದವು. ಇವನ್ನು ನಿಲ್ಲಿಸುವದಕ್ಕಾಗಿ ಬಲಿಷ್ಠರಾದ ಇಂಗ್ಲಿಷರು ಈ ಜನರಿಗೆ ವರ್ಷಾಶನ ಮಾಡಿಕೊಟ್ಟು, ಅಂದರೆ ದುಡ್ಡಿನ ಆಶೆ ತೋರಿಸಿ, ಅತ್ಯಾಚಾರಗಳನ್ನು ನಿಲ್ಲಿಸಿದಂತೆ ಮಾಡಿದ್ದಾರೆ.

ಕಾಬೂಲ, ಕಂದಹಾರ, ಅಫ್ರಿದಿಯರ ದೇಶಗಳಲ್ಲಿ ಇಂದಿಗೂ ಹಿಂದೂ ಜನರು ಅಂತ ಮಾತ್ರವಾಗಿ ಉಳಿದಿದ್ದಾರೆ. ಇವರು ಕೃಷಿ ವಾಣಿಜ್ಯ ಮಾಡಿಕೊಂಡು ಕಾಲಕ್ಷೇಪ ಮಾಡುತ್ತಿದ್ದಾರೆ. ಒಬ್ಬರ ಗೊಡವೆಗೆ ಹೋಗದೆ ತಾವಾಯಿತು; ತಮ್ಮ ಗಳಿಕೆಯಾಯಿತೆನ್ನುವಂಥ ವ್ಯಾಪಾರವಾದಿಗಳೇ ಸ್ವಸ್ಥ ಇಂಥ ಶಾಂತವೃತ್ತಿಯಿಂದಿರುವ ಸಜ್ಜನಸ್ತುಗಳ ಮೇಲೆ ರಂಗೀಲ ರಸೂಲ ಪ್ರಕರಣವು ಎದ್ದಲಗಾಟ ತಂದ ಸುದ್ದಿಯನ್ನು ಈ ಮೊದಲು ಬರೆದಿದ್ದೇವೆ. ಮುಸಲಮಾನರ ಕೋಪಕ್ಕೆ ಗುರಿಯಾದಂಥ ೬೦೦ ಹಿಂದೂ ಶೀಖ ಜನರು ಗುಳೇ ಕಟ್ಟಿಕೊಂಡು ಪೇಶಾವರಕ್ಕೆ ಬಂದಿದ್ದಾರೆ. ಇವರಲ್ಲಿ ಕೆಲವರು ಸಧನರಿದ್ದಾರೆ. ಅನೇಕರು ಸುದಾಮರಾಗಿದ್ದಾರೆ. ಇಂಥವರ ಯೋಗಕ್ಷೇಮ ನೋಡುವದು ಸರಕಾರದ ಅವಶ್ಯವಾದ ಕರ್ತವ್ಯ ಕರ್ಮವು. ಆದರೆ ಈ ಬಗ್ಗೆ ಸರಕಾರವು ಯಾವ ಆಲೋಚನೆ ಮಾಡಿದಂತೆ ಪ್ರಸಿದ್ಧವಾಗಿಲ್ಲ. [illegible] ಎಲಿಸಳೆಂಬ ಗೌರಕಾಯ ಸ್ತ್ರೀಯನ್ನು ಇದೇ ಅಫ್ರಿದಿಯರು ಎತ್ತಿಕೊಂಡು ಹೋಗಿದ್ದರು. ಆಕೆಯ ತಪಾಸಕ್ಕಾಗಿ ದಂಡು ಮಾರ್ಚು ಕಳಿಸಿದರು. ಅನೇಕ ಪ್ರಮುಖ ಅಫ್ರಿದಿಯರನ್ನು ಜವಾಬದಾರರಾಗಿ ಹಿಡಿದರು. ಈ ಪ್ರಕಾರ ಹುಲಿಯ ಟ್ರೀಟ್ರಿಯು ಸಿದ್ಧತೆ ಮಾಡಿದ್ದನ್ನು ಕಂಡು, ಆ ಜನರು ಎಲಿಸಳನ್ನು ತಂದು ಒಪ್ಪಿಸಿದರು. ಸರಕಾರದ ಆಗಿನ ಜಾಗರೂಕತೆ, ಶಾಸನದ ನೃಸಿಂಹಾವತಾರವೆಲ್ಲಿ? ಈಗಿನ ಉದಾಸೀನವೃತ್ತಿ ಎಲ್ಲಿ? ವಿಲಾಸಿ ಪೈಗಂಬರರ ಪ್ರಕರಣವನ್ನು ಶಾಂತಪಡಿಸುವದಕ್ಕಾಗಿ ರಿಸಾಲಾ ವರ್ತಮಾನದ ಸಂಪಾದಕರಿಗೆ ಶಿಕ್ಷೆ ಕೊಡಿಸಲು ಅವಸರಪಟ್ಟ ಸರಕಾರವು ಹಿಂದೂ ಜನರಿಗೆ ನ್ಯಾಯ ದೊರೆಯುವಂಥ ಯಾವದೊಂದು ಉಪಾಯ ಕೈಕೊಳ್ಳದಿರುವದು ಸಖೇದಾಶ್ಚರ್ಯವಾದದ್ದು.

ಬಂಗಾಲಿಗಳು ತಮ್ಮಲ್ಲಿಯ ಮುಸಲಮಾನರನ್ನು ಹೊರಗೆ ಹಾಕಲುಪ್ರಕಮಿಸಿದ್ದರೆ- ಸರಕಾರವು ಸುಮ್ಮನೇ ಕೂಡ್ರುತ್ತಿತ್ತೇ? ವಾದ್ಯದ ನೆಪದಿಂದಲೇ ಮುಸಲಮಾನರು ರಕ್ತಪಾತ ಮಾಡುತ್ತಿರುವರು. ಪುಣಾ ಜಿಲ್ಲೆಯಲ್ಲಿಂತೂ ಬಂಡಾಯದ ಸ್ವರೂಪ ತಂದರು. ಸರಕಾರವು ಅದನ್ನು ಬಗೆಯಾಗಿ ಮುಸಲಮಾನರ ಪಕ್ಷಗಟ್ಟುತ್ತಾರೆಂದು ಉತ್ತರ ದೇಶದ ಹಿಂದೂ ಜನರ ದೃಢವಾದ ತಿಳುವಳಿಕೆಯಾಗಿದೆ. ಈ ತಿಳುವಳಿಕೆಯ ದೆಸೆಯಿಂದಲೇ ಆ ಪ್ರಾಂತಗಳಲ್ಲಿ ದೊಡ್ಡ ದೊಡ್ಡ ಜಾಹೀರ ಸಭೆಗಳಾಗಿ ಸರಕಾರದ ಕೃತ್ಯವು ನಿಷೇಧಿಸಲ್ಪಡತ್ತಿರುವದು.

ಮೌಲಾನಾ ಮಹಮುದಲ್ಲಿಯವರು ಪೈಗಂಬರರ ವಿರುದ್ಧ ಯಾರೂ ಲೇಖ ಬರೆಯಬಾರದೆಂದು ಕಾಯದೆ ಮಾಡಿಸಲು ಚಿಂತಾತುರರಾಗಿದ್ದಾರೆ. ಆದರೆ ಗಡಿನಾಡಿನಿಂದ ಗುಳೇ ಬಂದವರ ವಿಷಯವಾಗಿ ಸುತರಾಂ ಸುದ್ದಿಯನ್ನೇ ಎತ್ತುವದಿಲ್ಲ. ಇವರಂತೆ ಯಾವ ಪ್ರತಿಷ್ಠಿತ ಮುಸಲಮಾನನೂ ಅಫ್ರಿದಿಜರ ಕೃತ್ಯವನ್ನು ನಿಷೇಧಿಸಿಲ್ಲ. ಅಪವಾದವೆನ್ನುವಂತೆ ಅಸೆಂಬ್ಲಿಯ ಮೆಂಬರರಾದ ಮಿ. ಫರೂಕಿಯವರು ಮಾತ್ರ ಒಬ್ಬನ ಅಪರಾಧಕ್ಕಾಗಿ ನಿರಪರಾಧಿಯಾದಂಥವರನ್ನು ದೇಶಬಿಟ್ಟು ಹೊರಗೆ ಹಾಕುವದು ನಿರ್ದಯತನದ ಕೃತ್ಯವೆಂದು ಹೇಳುತ್ತಿದ್ದಾರೆ. ಇವರೊಬ್ಬರ ಬುದ್ಧಿವಾದದಿಂದ ಆ ಕಾಡು ಜನರ ಮೇಲೆ ಆಗುವ ಪರಿಣಾಮವೇನು? ದಂಡೋಪಾಯವೇ ಉಪಾಯವು

ಒಕ್ಕಲತನದ ರಾಯಲ ಕಮಿಶನದ ಒಬ್ಬ ಮೆಂಬರರಾಗಿದ್ದ ಸ್ವರ್ಗವಾಸಿ ಸರ ಗಂಗಾರಾಮರ ಮೃತ್ಯುಪತ್ರವನ್ನು ಲಾಹೋರನಲ್ಲಿ ಅವರ ಚಿರಂಜೀವರ ಮುಂದೆ ಒಡೆದರು. ಸರರು ೧೪ ಲಕ್ಷದ ನಗದನ್ನೂ ಎರಡು ಲಕ್ಷದ ಸ್ಥಾವರಾಸ್ತಿಯನ್ನೂ ಸಾರ್ವಜನಿಕ ಹಿತಕಾರ್ಯಕ್ಕಾಗಿ ಬಿಟ್ಟುಗೊಟ್ಟಿರುವಂತೆ ಅದರಲ್ಲಿ ಬರೆದಿದ್ದಾರೆ.

ಕ್ರಮಿಕ ಪುಸ್ತಕಗಳಲ್ಲಿ ಲೋಕಮಾನ್ಯರ ಚರಿತ್ರೆ.

ಸ್ವರಾಜ್ಯ ಪಕ್ಷೀಯರು ಕೌನ್ಸಿಲ ಸೇರಿದ ಬಳಿಕ ಇವರಲ್ಲಿ ಕೆಲವರು ಪ್ರತಿಯೋಗಿ ಸಹಕಾರಿಯಾದ ಬಳಿಕ ಒಂದು ಕಸರತ್ತು ಮಾಡಿದರು. ನಾಗಪೂರ ಸರಕಾರ ಮಾತ್ರವಲ್ಲ; ಹಿಂದುಸ್ಥಾನದ ಯಾವದೊಂದು ಇಲಾಖೆ ಸರಕಾರವೂ ಈ ದೇಶದ ರಾಷ್ಟ್ರೀಯ ವಿಭೂತಿಗಳ ಚರಿತ್ರೆಯು ಕ್ರಮಿಕ ಪುಸ್ತಕಗಳಲ್ಲಾಗಲಿ ಪರೀಕ್ಷೆಯ ಪುಸ್ತಗಳಲ್ಲಾಗಲಿ ಬರದಂತೆ ಸೂಕ್ಷ್ಮರೀತಿಯಿಂದ ನಿಗಾ ನೋಡುವರು. ಅದೇ ಪ್ರಕಾರ ನಾಗಪೂರ ಇಲಾಖೆಯ ಕರ್ಮ ಕಥೆಯು. ಹಿಂದೆ ಒಮ್ಮೆ ಕ್ರಮಿಕ ಪುಸ್ತಕಗಳಲ್ಲಿ ವಿದ್ಯಾರ್ಥಿಗಳ ಮುಂದೆ ರಾಷ್ಟ್ರೀಯತ್ವದ ಆದರ್ಶವಾಗಿ ಲೋಕಮಾನ್ಯರ ಚರಿತ್ರೆಯೊಳಗಿನ ಕೆಲ ಸಂಗತಿಗಳಾದರೂ ಇರಬೇಕೆಂಬುದಾಗಿ ಬಂದ ಠರಾವನ್ನು ಮಂತ್ರಿಗಳಿಲ್ಲದೆ ಬೋಳಾಗಿ ರಾಜ್ಯಭಾರ ಮಾಡಿದ ಆಳರಸರು ಅಂಗೀಕರಿಸಲಿಲ್ಲ. ಅದೇ ಠರಾವು ಪ್ರಕೃತದಲ್ಲಿ ಸ್ವರಾಜ್ಯ ಪಕ್ಷದ ಮಂತ್ರಿಗಳ ಆಳಿಕೆಯಲ್ಲಿ ಬಂತು. ಮಂತ್ರಿಗಳೆಲ್ಲರೂ ಲೋಕಮಾನ್ಯರ ಭಕ್ತರು ಮತ್ತು ಶಿಷ್ಯರು ಆದ್ದರಿಂದ ಇವರು ರಾಷ್ಟ್ರೀಯತ್ವದ ಧ್ಯೇಯವನ್ನು ಮುಂದಿಟ್ಟುಕೊಂಡು, ಕ್ರಮಿಕ ಪುಸ್ತಕಗಳಲ್ಲಿ ಲೋಕಮಾನ್ಯರ ಚರಿತ್ರಾಂಶವನ್ನು ಹಾಕಬೇಕೆಂದು ಒಪ್ಪಿಗೆ ಕೊಟ್ಟಿದ್ದಾರೆ.

ಶ್ರೀ ಶಿವಾಜಿಮಹಾರಾಜರು ಬಂಡುಗಾರರಾಗಿದ್ದರು. ಅಂಥವರು ಅಸಹಕಾರದ ವೇಳೆಯಲ್ಲಿ ರಾಷ್ಟ್ರೀಯ ವಿಭೂತಿಯಾದರು. ಇಷ್ಟೇ ಅಲ್ಲದೆ, ಇಂಗ್ರೇಜಿ ಸರಕಾರದವರು ಪ್ರಿನ್ಸ ಆಫ ವೇಲ್ಸರಿಂದ ಮಹಾರಾಜರ ಸ್ಮಾರಕದ ಕಟ್ಟಡದ ತಳಗಲ್ಲನ್ನು ಕೂಡಿಸುವ ಸಮಾರಂಭ ಮಾಡಿಸಿದರು. ಅಸಹಕಾರದಿಂದ ಸ್ವರಾಜ್ಯದ ದುಂದುಭಿಯು ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ ಮೊಳಗಲಾರಂಭಿಸಿ, ರಾಷ್ಟ್ರೀಯ ವಿಭೂತಿಗಳು ಸರ್ವ ಪುಸ್ತಕಗಳಲ್ಲಿ ಪ್ರಕಾಶಿಸುವದು ಭಾವೀ ಸುಚಿನ್ಹವೇ ಸರಿ. ಹೋಮರೂಲವೆಂದ ಕೂಡಲೆ ಜಾಮೀನು ಮುಚ್ಚಳಿಕೆ ಕೊಡಬೇಕೆಂದು ಲೋಕಮಾನ್ಯರ ಮೇಲೆ ಕೆಲಸ ನಡಿಸಿದ ಕಾಲವನ್ನೂ, ಈಗಿನ ಕಾಲವನ್ನೂ ಸ್ಮರಣೆಗೆ ತಂದರೆ- ರಾಷ್ಟ್ರೀಯ ವಿಚಾರದಲ್ಲಿ ಹಿಂದುಸ್ಥಾನವು ಬಹಳ ಪ್ರಗತಿ ಹೊಂದಿರುತ್ತದೆಂದೂ, ಆಳರಸರು ಕಾಲಕ್ಕೆ ನಮಸ್ಕಾರ ಹಾಕಿ, ಬಾಗಿ ನಡೆಯುತ್ತಾರೆಂದೂ ಧ್ವನಿತವಾಗುತ್ತದೆ. ಜಾರ್ಜ ವಾಶಿಂಗಟನ್ನ, ನೆಲಸನ ಮೊದಲಾದವರ ಚರಿತ್ರಗಳನ್ನು ಈ ದೇಶದ ಚಿಕ್ಕಚಿಕ್ಕ ಬಾಲಕರು ಓದಬೇಕು. ತನ್ನವರೇ ಆದಂಥ ಶ್ರೀ ಶಿವಾಜಿ, ಟಿಳಕ ಮೊದಲಾದವರ ಚರಿತ್ರಗಳನ್ನು ಓದಬಾರದೆಂಬುದು ಚಮತ್ಕಾರ

ವಲ್ಲವೇ! ಈ ದೇಶಕ್ಕೆ ಹತ್ತಿದ್ದ ಈ ಕಲಂಕವನ್ನು ನಾಗಪೂರದ ಸ್ವರಾಜ್ಯ ಮಂತ್ರಿಗಳು ತೆಗೆದು ಹಾಕಿಸಿದ್ದು ನಿಜವಾಗಿ ಸಂತೋಷದ ಸಂಗತಿಯು.

ಒಬ್ಬ ನವಾಬರ ನವಾಬಶಾಹಿಯು!

[—[0]—]

ಮಿಯ್ಯಾ ಬೋಲೆ ದಾಡಿ ಹಲೆ!!

—o—

ಸಿಂಧ ದೇಶದಲ್ಲಿರುವ ಖೈರಪೂರ ಸಂಸ್ಥಾನದ ಆಡಳಿತೆಯು ಪೂರಾ ಕೆಟ್ಟು ಹೋಗಿತ್ತು. ನಿಜಾಮ ಹೈದರಾಬಾದನೇ ಆಗಿತ್ತು. ಮುಂಬಯಿ ಸರಕಾರದವರು ಒಬ್ಬ ಯುರೋಪಿಯನನ್ನೂ ಇಬ್ಬರು ಎತದ್ದೇಶಿಯರನ್ನೂ ಅಲ್ಲಿಗೆ ಕಳಿಸಿ ರಾಜ್ಯ ಕಾರಭಾರದಲ್ಲಿ ತಿದ್ದುಪಡಿ ಮಾಡಲು ಹಚ್ಚಿಗಿಸಿದರು.

ಆದರೆ ನವಾಬರು ನವಾಬರಾಗಿಯೇ ಇದ್ದಾರೆ. ಮಿಯ್ಯಾ ಬೋಲೆ ದಾಡೀ ಹಲೆ ಎಂಬಂತೆಯೂ ರೀತಿನ ನಡೆಯಬೇಕೆಂದು ಇವರ ಹುಡುಗಾಟಿಕೆಯು ಆದರಂತೆ ಫರ್ಮಾನು ತೆಗೆದು, ಪರಸ್ಥಳದಿಂದ ಮುಸಲಕ್ತುಗಾರರಾಗಿ ಬಂದವರಿಗೆ ಎದ್ದಲಗಾಟ ಕೊಟ್ಟಿದ್ದಾರೆ.

ಅನೇಕವಾಗಿ ದರೋಡೆ, ಕೊಲೆ ದನಗಳ ಲೂಟಿ ಮಾಡಿದಂಥ ಜಲಾಲನೆಂಬವನ ಮೇಲೆ ವಾರಂಟು ಹುಟ್ಟಿತ್ತು. ಪೋಲೀಸರು ಪುಷ್ಕಳ ಪ್ರಯತ್ನ ಮಾಡಿ ಈತನನ್ನು ಹಿಡಿದು, ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಈತನನ್ನು ಜಾಮೀನದ ಮೇಲೆ ಬಿಡಬೇಕೆಂದು ನವಾಬಸಾಹೇಬರು ಇವರಿಗೆ ಹೇಳಿಕಳಿಸಿದರು ಆದರೆ ಇವರು ನವಾಬರ ಹುಕುಮನ್ನು ಮನ್ನಿಸಲಿಲ್ಲ. ಮುಂದೆ ವಿಚಾರ ನಡೆದಾಗ ನವಾಬರ ಅನೇಕ ಭೃತ್ಯರು ಫರಮಾನ ತಕ್ಕೊಂಡು ಬಂದು, ಜಲಾಲನನ್ನು ವಜ್ಞಾಳಿಕೆಯ ಮೇಲೆ ಬಿಡುವಂತೆ ಮ್ಯಾಜಿಸ್ಟ್ರೇಟರನ್ನು ಒತ್ತಾಯಪಡಿಸಿದರು. ಆಗ ಇವರು ದುಂದುಗಾಣದ, ಜಲಾಲನನ್ನು ಬಿಟ್ಟು ಎಲ್ಲಾ ಕಾಗದ ಪತ್ರಗಳನ್ನು ಕೌನ್ಸಿಲ ಮೆಂಬರರಾದ ಮಿ. ಕಾಜಿಯವರ ಕಡೆಗೆ ಕಳಿಸಿದರು.

ಇಂಥ ಅನೇಕವಾದ ಅನ್ಯಾಯದ ಹುಕುಮುಗಳ ಪ್ರತಿಕೆ ಕಟ್ಟಿಕೊಂಡು ಹೊರಗಿನಿಂದ ಹೋದ ಕಾರ್ಯಚಾರರು ಕಮೀಶನರ ಮುಖಾಂತ್ರ ಗವರ್ನರಸಾಹೇಬರ ಮುಂದೆ ಸ್ವತಃ ಕಥನ ಮಾಡಲು ಹೊರಟಿರತ್ತಾರೆ.

ಮುಂಬಯಿಯಲ್ಲಿ ಒಬ್ಬ ವ್ಹಾಲಂಟಿಯರನು ಗುಜರಾಥ ರಿಲೀಫ ಫಂಡಿಗಾಗಿ ವರ್ಗಣಿ ಕೊಡೆಂದು ಒಬ್ಬ ಯುರೋಪಿಯನನ್ನು ಕೇಳಲು- ಆ ಸಾಹೇಬನು ನೀವೂ ಹಾಳಾಗಿರಿ; ನಿಮ್ಮ ಹಿಂದುಸ್ಥಾನವೂ ಹಾಳಾಗಲೆಂದು ಬೈದದ್ದಲ್ಲದೆ, ವ್ಹಾಲಂಟಿಯರನಿಗೆ ರಕ್ತ ಬರುವಂತೆ ಹೊಡೆದಿರುತ್ತಾನೆ.

ಸಂಗರಕ್ಕೆ ಭೀತಿಗೊಳ್ಳುವ ಬಂಟನಿರ್ದೇನು ಫಲ.

—o—

ನಾಗಪೂರದ ಕಾಯದೆಭಂಗದ ಸತ್ಯಾಗ್ರಹಿಗಳು ಮೇಲಿನ ನುಡಿಯನ್ನು ಮುಖಸಾರ ಮಾಡಿದ್ದಾರೆ. ಇವರು ಬಿಚ್ಚುಗತ್ತಿಯನ್ನು ಹಿಡಕೊಂಡು ಊರ ತುಂಬ ಮೆರೆದ ಬಳಿಕ ಪೋಲಿಸರು ಇವನ್ನು ಕಸಗೊಂಡು, ಇವರನ್ನು ಹಾಗೇ ಹೋಗಗೊಟ್ಟರು. ಕತ್ತಿ ಹೋಗಿ ಫಲವೇನು? ಸರಕಾರವು ಶಮುಗಾವ ಶಾಸನ ಮಾಡದಿದ್ದರೆ ಪರಿಣಾಮವೇನು? ಎಂಬೆರಡೂ ವಿಚಾರದಿಂದ ಈ ಒಂಟರು ಹೊಸದೊಂದು ಯುಕ್ತೀ ಹೂಡಿದ್ದಾರೆ. ಇವರು ನಾಲ್ಕು ಬೀದಿಗಳು ಕೂಡುವ ಕೂಟಿನ ನಟ್ಟನಡುವೆ ನೆಲವಿಡಿದು ಕೂಡುವರು. ಪೋಲೀಸರು ಬಂದು ಏಳಿರೆಂದು ಹುಕುಮು ಮಾಡಿದರೆ- ನಾವು ಏಳತಕ್ಕವರಲ್ಲ. ಜಪ್ತ ಮಾಡಿದ ನಮ್ಮ ಕತ್ತಿ ಕಠಾರಿಗಳನ್ನು ಕೊಡಿರಿ; ಇಲ್ಲವಾದರೆ ಹಿಡಕೊಂಡು ಹೋಗಿ ತುರಂಗದಲ್ಲಿ ಹಾಕಿರೆನ್ನುವರು. ಸರಕಾರದವರಿಗೆ ಈ ವಿಷಯವು ಬಿಸಿ ತುಪ್ಪದಂತಾಗಿರುತ್ತದೆ.

ಖಾದೀ ಕಾರ್ಯಕ್ಕೆ ಒಂದು ಕೋಟಿಯು ಸಹಾಯ.

—o—

ರಾಟಿಯ ಮೇಲೆ ನೂಲುವದು ಮತ್ತು ದೇಶಿಯ ಮಗ್ಗದ ಮೇಲೆ ನೆಯುವದು ಹಳ್ಳಿಗಳ ಜನರಿಗೆ ಒಂದು ವ್ಯವಸಾಯವಾಗಿ ಅವರ ಆರ್ಥಿಕ ಸ್ಥಿತಿಯು ಸುಧಾರಿಸುವದೆಂದು ರಾಜಾ ಪ್ರಜರೀರ್ವರಿಗೂ ಮನದಟ್ಟಾದಂಥ ವಿಷಯವಾಗಿರುತ್ತದೆ. ಮೂರು ದಿವಸಗಳ ಹಿಂದೆ ಮೈಸೂರಿನಲ್ಲಿ ನೆರೆದ ಸಂವರ್ಧನಿಯ ಸಭೆಯಲ್ಲಿ ದಿವಾನರವರು ರಾಟಿಯು ಹಳ್ಳಿಗಳಲ್ಲಿ ರೈತರ ಒಂದು ಜೀವನಾಂಶವಾಗುವದೆಂಬ ಅಭಿಪ್ರಾಯಪಟ್ಟಿರುತ್ತಾರೆ. ರಾಟಿಯ ಪ್ರಸಾರದ ಬಗ್ಗೆ ಮೈಸೂರ ದರಬಾರವು ಹಿಂದುಸ್ಥಾನದಲ್ಲಿ ಒಂದನೆಯ ನಂಬರು ಪಡೆದು ಅನ್ಯರಿಗೆ ಮೇಲ್ಪಂಕ್ತಿಯಾಗಿರುತ್ತದೆ. ಇದೇ ರಾಟಿಯು ಹಿಂದುಸ್ಥಾನದ ತುಂಬ ಹಬ್ಬಬೇಕೆಂದು ಅಸೆಂಬ್ಲಿಯ ಮೆಂಬರರಾದ ಶ್ರೀ. ರಾಮನಾರಾಯಣಶಿಂಗರು ಬಜೆಟ್ಟಿನಲ್ಲಿ ಒಂದು ಕೋಟಿ ರೂಪಾಯಿಯನ್ನು ತೆಗೆದಿಡುವ ಉಚಿತ ಠರಾವು ತರುವ ಸೂಚನೆ ಕಳಿಸಿದ್ದಾರೆ.

ಹಿಮಾಲಯದಲ್ಲಿ ಅತಿ ವೃಷ್ಟಿಯಾಗಿ ಯಮುನಾ ನದಿಗೆ ಮಹಾಪೂರು ಬರುತ್ತಿರುವದು. ದಂಡೆಯ ಮೇಲಿರುವ ಹಳ್ಳಿಗಳ ಜನರಿಗೆ ಸರಕಾರದವರು ಮುಂಜಾಗ್ರತೆಯ ಸೂಚನೆ ಕೊಟ್ಟಿದ್ದಾರೆ.

ಗಂಡಭೇರುಂಡಕೆ ಜಯ

—o—

ರನ್ನದಾಕಾಶದಲ್ಲಿ ಚಿನ್ನ ದಾಸೂರ್ಯತಾ
ಮುನ್ನ ಉದಯಿಸುವಂತೆ ಕಾಣುವಂತೆ
ಗಂಡಭೇರುಂಡಕೆ ಜಯ! ||
ಮಹಿಯನೆಲ್ಲವ ಪೊರೆವ ಮೈಸೂರರಾಜರ
ಮಹಿಮೆಯಂಗಳ ಕಳಸದಂತೆ ಮೆರೆವ
ಗಂಡಭೇರುಂಡಕೆ ಜಯ! ||
ಹಾರಲೆಂದಿಗು ನಮ್ಮ ಧರೆಯಮೇಲೆ|
ಹಾರಲೆಂದೆಂದಿಗೂ ಈ ಧ್ವಜವಿದು|
ಗಂಡಭೇರುಂಡಕೆ ಜಯ! ||
ಏರಲೀ ಧ್ವಜಕೀರ್ತಿ ಸೂರ್ಯಚಂದ್ರರವರೆಗೆ|
ಹಾರಲೀ ಧ್ವಜ ಸೂರ್ಯಚಂದ್ರವಿರುವಪರ್ಯಂತ|
ಗಂಡಭೇರುಂಡಕೆ ಜಯ! ||
ನಮ್ಮ ದೇಶದ ಮಾನ, ನಮ್ಮ ದೇಶದ ಕೀರ್ತಿ,
ನಮದಾಗಿಹುದೆಲ್ಲವೀ ಧ್ವಜದೊಳಡಗಿಹುದು;
ಗಂಡಭೇರುಂಡಕೆ ಜಯ|

ಮಕ್ಕಳಪತ್ರ

ಮಳೆಯ ಮೇಲೆ ಕೊಳೆ.

ಮಳೆಯ ಮೇಲೆ ಕೊಳೆ ಎನ್ನುವಂತೆ ಗರಾಥದಲ್ಲಿ ಪುನಃ ಮಳೆಯು ಸುರಿಯಲಾರಂಭಿಸಿದೆ. ಸಾಬರಮತಿ ನದಿಗೆ ಮಹಾಪೂರು ಬರುತ್ತಿರುವದು. ರೈತರು ಹೌಹಾರಿದ್ದಾರೆ. ರೇಲ್ವೆಯ ದಾರಿಯು ಪುನಃ ಒಡೆದು ದುರಸ್ತಿಗೆ ವಿಘ್ನವುಂಟಾಗಿರುತ್ತದೆ.

ವಿವಿಧ ವರ್ತಮಾನಗಳು.

—o—

ಪುಣೆಯ ಹತ್ತಿರುವ ವನವಾಡಿಯಲ್ಲಿ ಒಂದು ಅರಳೀ ಗಿಡದ ಕೆಳಗೆ ಕಾಲಕ್ಷೇಪ ಮಾಡಿಕೊಂಡಿರುವ ಜೇಮ್ಸ ಬ್ರ್ಯಾಂಡನನೆಂಬ ಅಮೇರಿಕೆಯ ಸನ್ಯಾಸಿಯನ್ನು ದರೋಡೆಗಾರರು ಹೊಡೆದು, ಆತನ ಹತ್ತರಿದ್ದ ೪೦ ರೂಪಾಯಿ ತಕ್ಕೊಂಡು ಪಲಾಯನ ಹೇಳಿಸಿದ್ದಾರೆ.

ಮದ್ರಾಸದ ಪೂರ್ವ ಮಂತ್ರಿಯಾದ ಡಾಕ್ಟರ ಸುಬ್ಬರಾಯನ್ನರಿಗೆ ಮಾನಪತ್ರ ಕೊಡುವ ವಿಚಾರ ಮಾಡಬೇಕೆಂದು ಕುಂಭಕೋಣೆಯಲ್ಲಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಜನರಲ ಕಮಿಟಿ ಕರೆದರು. ಆದರೆ ಕಮಿಟಿಗೆ ಕೋರಮ ಕೂಡುವಷ್ಟು ಮೆಂಬರರೇ ಬರಲಿಲ್ಲ.

ಕಂಚಿಯಲ್ಲಿ ಮ್ಯುನಿಸಿಪಾಲಿಟಿಯು ಸ್ಥಾಪನೆಯಾಗಿ ಅರವತ್ತು ವರ್ಷವಾಯಿತು. ಪಟ್ಟಣಿಗರು ಅದರ ಸುವರ್ಣ ಜ್ಯುಬಿಲಿ ಮಾಡತೊಡಗಿದ್ದಾರೆ.

ನೋಟೀಸು

—೦—

ರಾ. ರಾ ಪುಟ್ಟಪ್ಪಾ ಬಸಪ್ಪಾ ಚಕ್ಕ ಸಾಕೀನ ಆಲೂರ ತಾಲ್ಲೂಕ ಹಾನಗಲ್ಲ ಇವನಿಗೆ-

ಕೆಳಗೆ ಸಹೀ ಮಾಡುವ ಸಾವಂತ್ರೆವ್ವಾ ಕೋಮ ರಾಜಪ್ಪಾ ಕಂಬಾಳಿ ಸಾಕೀನ ಆಲೂರ ತಾಲ್ಲೂಕ ಹಾನಗಲ್ಲ ಇವರ ಕಡೆಯಿಂದಾ ನೋಟೀಸು ಕೊಡುವದರಲ್ಲಿ ಬರುತ್ತದಲ್ಲಾ-

ಈಗ ನೀವು ಆಲೂರ ಗ್ರಾಮದಲ್ಲಿ ನಮ್ಮ ಮನೀ ಹತ್ತರಾ ಇರುವ ನಿಮ್ಮ ಮನೀ ದುರಸ್ತ ಕಟ್ಟಿಸುವ ಕೆಲಸದಲ್ಲಿ ಮಾಮೂಲ ವಹಿವಾಟ ಬಿಟ್ಟು ಇಮಲಾ ಕಟ್ಟಿಸುವ ಕೆಲಸ ನಡಿಸೀರಿ ನನ್ನ ಗೈರ ಹಾಜರಿಯಲ್ಲಿ ಕೆಲವು ಕಾಮಗಾರಿ ಮಾಡಿಸಿದಿರಿ ಇದು ನನ್ನ ಸಹಿಗೆ ಒಂದ ಕೂಡಲೆ ರೀತಿ ಬಿಟ್ಟು ಕೆಲಸ ಮಾಡಕೂಡದೆಂದು ಒಂದ ಮಾಡಿದೆನು ಈಗ ನೀವು ಅನಧಿಕಾರದಿಂದ ಕಟ್ಟಿಸಿದ ಇಮಲಾದಿಂದ ನಮ್ಮ ಮನಿಗೆ ಬಹಳ ಧಕ್ಕೆ ಬಗಸತ್ತಿದೆ ಮತ್ತು ನೀವು ಕಟ್ಟಿಸಿದ ಇಮಲಾ ಕಾಯಿದೆಶೀರ ಮತ್ತು ರೀತಿಪ್ರಕಾರ ಕಟ್ಟಿದ್ದು ಇದ್ದರಿಂದ ಅಂದರೆ ಪಾಯಾ ಸಣ್ಣದಾಗಿದ್ದು ಮೇಲಿನ ಗೋಡೆ ಹೆಚ್ಚು ಅಗಲವಾಗುತ್ತಾ ಹೋಗಿದ್ದರಿಂದ ಮತ್ತು ಈ ಪ್ರಕಾರ ನಿರಾಶ್ರಿತವಾದ ಗೋಡೆಗಳ ಮೇಲೆ ವಜನದಾರ ತೊಲಿಗಳು ಕೊಡ್ರಬೇಕಾದ್ದರಿಂದ ಸಹಜವಾಗಿ ಇಮಲಾ ಬಿದ್ದು ನಮ್ಮ ಮನೆಗೆ ಇದರಲ್ಲಿಂತಕ್ಕ ನಮ್ಮ ಜೀವಕ್ಕೆ ಅಪಾಯವಾಗುವ ಸಂಭವವಿರುತದೆ ಆದ್ದರಿಂದ ನೀವು ಈ ನೋಟೀಸು ಮುಟ್ಟಿದ ಏಳು ದಿವಸಗಳಲ್ಲಿ ಅನಧಿಕಾರದಿಂದ ಕಟ್ಟಿದ ಇಮಲಾ ತೆಗೆದು ಬಿಡಬೇಕು ವ ಮುಂದೆ ಮಾಮೂಲ ವಹಿವಾಟ ಬಿಟ್ಟು ಇಮಲಾ ವಗೈರೆ ಹಾಕಬಾರದು.

ಜರ ಈ ಪ್ರಕಾರ ಮಾಡಲಿಕ್ಕೆ ತಪ್ಪಿದರೆ- ನಮ್ಮ ಮನೆಗೆ ವ ಜೀವಕ್ಕೆ ಆಗಬಹುದಾದ ಅಪಾಯದ ಬಗ್ಗೆ ನಿಮ್ಮ ಮೇಲೆ ಫೌಜದಾರಿಯಲ್ಲಿ ವ ದಿವಾಣಿಯಲ್ಲಿ ಕೆಲಸ ನಡಿಸಲಾದೀತು.

ಇಮಾರತಕ್ಕೆ ವ ಜೀವಕ್ಕೆ ತುರ್ತ ಅಪಾಯವುಂಟಾಗುವ ಸಂಭವವಿದ್ದದರಿಂದ ಈ ಬಗ್ಗೆ ರೀತಿಪ್ರಕಾರ ಬಂದೋಬಸ್ತು ಮಾಡಲಿಕ್ಕೆ ತಾಲೂಕಿನ ವ ಮುಲಕೀ ಅಮಲದಾರರ ಕಡೆಗೆ ಪ್ರತ್ಯೇಕವಾಗಿ ಅರ್ಜಿ ಕೊಟ್ಟಿರುತ್ತದೆ. ತಿಳಿಯುವದು

ತಾ|| ೧೨—೮—೧೯೨೭

ಸಹಿ- ಸಾವಂತ್ರೆವ್ವಾ ಕೋಮ ರಾಜಪ್ಪಾ ಕಂಬಾಳಿ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೧೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸಿರಿ

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅನೇಕ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೊಂದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಚಿತ್ತೂರ, ಜಿಲ್ಲಾ ಬೆಳಗಾವ

ಆರ್ಯೌಷಧಿ ಕಾರಖಾನಾ ಚಿತ್ತೂರ

ಮನ್ಮಥವಿಲಾಸ— ಈ ಗುಳಿಗೆಯ ಸೇವನೆಯಿಂದ ಅತ್ಯಂತ ಕಾಮೋದ್ದೀಪಕ ಮತ್ತು ವೀರ್ಯವರ್ಧಕ ಮನೋಲ್ಲಾಸವಾಗಿ ಶಕ್ತಿ ಬರುತ್ತದೆ. ೨೦ ಗುಳಿಗೆಗಳಿಗೆ ೧ ರೂ. ೧೦೦ ಕ್ಕೆ ೪ ರೂ.

ಹುರುಕಿನ ಔಷಧ- ಚೀಟು ೧ ಕ್ಕೆ ೧ ಆಣೆ ೧೦೦ ೩ ರೂ ೮ ಆಣೆ.

ಕಣ್ಣಿನ ಔಷಧ ಚೀಟು ೧ ಕ್ಕೆ ೩ ಪೈ ೧೦೦ ೧ ರೂ.

ಹೇನಿನ ಔಷಧ ಚೀಟು ೧ ಕ್ಕೆ ೬ ಪೈ. ೧೦೦ ಕ್ಕೆ ೨ ರೂ.

ಜ್ವರದ ಗುಳಿಗೆ ಈ ಗುಳಿಗೆಗಳು ದೂಷಿತ ಜ್ವರ, ಮಲೇರಿಯಾ ಇನ್‌ಫ್ಲ್ಯುಯೆಂಝಾ, ಸನ್ನಿಪಾತ, ಮುಂತಾದ ಜ್ವರಗಳಿಗೆ ಅತ್ಯಂತ ಗುಣಕಾರಿಯಾಗಿರುವ ಮತ್ತು ಪ್ರವಾಸಕರಿಗೆ ಉಪಯುಕ್ತವಾದವುಗಳಿರುತ್ತವೆ. ೪೦ ಕ್ಕೆ ೧ ರೂ. ೧೦೦ ಕ್ಕೆ ೨ ರೂ.

ಸೂಚನಾ— ಒಂದು ಆಣೆ ಟಿಕೀಟು ಕಳಿಸಿದಲ್ಲಿ ನಮ್ಮ ಸುಲಸಂಜೀವಿನಿಯೆಂಬ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಆರ್ಯೌಷಧಿ ಕಾರಖಾನಾ ಪೋ|| ಚಿತ್ತೂರ ಜಿಲ್ಲಾ ಬೆಳಗಾವ

ಶ್ರೀ ವಿದ್ಯಾರಣ್ಯ ಪ್ರಕಾಶನ ಸಂಸ್ಥೆಯೂ
ಶ್ರೀ. ಶಂಕರ ಕರ್ನಾಟಕ ಪುಸ್ತಕ ಭಂಡಾರವೂ

ಶ್ರೀ ಶಾಕಾಂಬರೀ ನಿಧಿಯೂ

೧ ಶ್ರೀ. ವಿ. ಪ್ರ. ಸಂಸ್ಥೆಯಿಂದ (೧) ಕರ್ನಾಟಕ ಸಿಂಹಾಸನ ಸ್ಥಾಪನೆ [೨] ಕಥೆಗಳನ್ನೊಳಗೊಂಡ ವೀರಬಲ್ಲಾಳನ ಚರಿತ್ರೆ (೩) ಛತ್ರಪತಿ ಶಿವಾಜೀ ಮಹಾರಾಜ (೪) ಕರ್ನಾಟಕ ಸಾಮ್ರಾಜ್ಯ ಸ. ೧ ಭಾ. ೧. [೫ ಕರ್ನಾಟಕ ಸಾಮ್ರಾಜ್ಯ ಸ. ೧. ಭಾಗ ೨ ಹೊರಬಿದ್ದಿದೆ. ಮಾಲೆಗೆ ಚಂದಾದಾರರಾಗುವವರು ೧ ರೂ ಪ್ರವೇಶ ಫಿಯನ್ನು ಕಳಿಸಿ ಬರೆಯತಕ್ಕದ್ದು. ಅವರಿಗೆ ಈ ಪುಸ್ತಕಗಳು ಕಡಿಮೆ ಬೆಲೆಗೆ ದೊರೆಯುವವು,

೨ ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರದಲ್ಲಿ ಎಲ್ಲ ಬಗೆಯ ಕನ್ನಡ ಪುಸ್ತಕಗಳು ಶಾಲೋಪಯೋಗಿ ಕಾಯಿದೆ) ನಕಾಶೆ ಚಿತ್ರಗಳೂ ಬರೆವಣಿಗಳೂ ದೊರೆಯುವವು ಬೆಲೆ ಪಟ್ಟಿ ಬೇಕಾದವರು ೧ ಆಣೆಯ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು

೩ ಶ್ರೀ ಶಾಕಂಭರೀ ನಿಧಿಯು ಮುದ್ದತಿ ಠೇವುಗಳನ್ನಿಟ್ಟುಕೊಳ್ಳುವದಲ್ಲದೆ ಆಭರಣಗಳ ಬೆಲೆ ಮತ್ತು ಧಾರವಾಡದ ಬ್ಯಾಂಕುಗಳ ಶೇರು ಸರ್ಟಿಫಿಕೇಟುಗಳ ಮೇಲೆ ಸಾಲ ಕೊಡುವದು ಸರಕಾರದ ಕಂತ್ರಗಳನ್ನೂ ಬ್ಯಾಂಕಿನ ಪಾಲುಗಳನ್ನೂ ಮಾರಾಟ ಮಾಡಿ ಕೊಡುವದು ಚಕ್ರಹುಂಡಿ ವ್ಯವಹಾರ ಮುಂತಾದ ಎಲ್ಲ ತರದ ಬ್ಯಾಂಕಿನ ಕೆಲಸಗಳ ಮಾಡುವದು ಹೆಚ್ಚಿನ ಮಾಹಿತಿ ಬೇಕಾದರೆ ಕೆಳಗಿನ ವಿಳಾಸಕ್ಕೆ ಬರೆಯ ಬಹುದ

ಮಾಳಮಡ್ಡಿ ಧಾರವಾಡ. ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.
ಮಾರ್ಗಶೀರ್ಷ ಶು. ೬ ಶಕೆ ೧೮೪೮ ಆಡಳಿತಗಾರರು

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಎಂಬುವರು ಧಾರವಾಡದಲ್ಲಿಯ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಿಸಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಆಲ್ಲಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಶನಿವಾರ ತಾರೀಖು ೨೦ನೇ ಅಗಸ್ಟ ೧೯೨೨ | ಸಂಚಿಕೆ ೧೭೯

ಕಿರ್ಲೋಸ್ಕರರ ಶೇಂಗಾ [ಭೂಶೇಂಗಾ] ಒಡೆಯುವ ಯಂತ್ರಗಳು

ಈ ಯಂತ್ರಗಳು ಎರಡು ವರ್ಷದಿಂದ ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತ್ತವೆ. [illegible] ಈ ಯಂತ್ರಗಳು [illegible] ಯಂತ್ರಗಳು ತಯಾರಾಗುತ್ತವೆ. [illegible] ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ [illegible]

ಈ ಬ್ಯಾಂಕಿನಲ್ಲಿ [illegible]

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

[illegible]

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋಂ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

[illegible] ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible]

ಸಂಭಾಜಿರಾವ ಬಿ. [illegible]
ಮ್ಯಾನೇಜಿಂಗ ಡಾಯರೆಕ್ಟರ

[illegible]

ಸಿಂಗಲ [illegible]

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ಲೋಕಮಾನ್ಯ ಟಿಳಕರ ಚರಿತ್ರೆ	೪ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಖರ್ಚು ಟಪಾಲ ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೩ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೇಳಬೇಕಾದರೆ [illegible]

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೨೦-೮-೨೭ ನೇ ಇಸ್ವಿ

ಕರ್ನಾಟಕ ಏಕೀಕರಣ.

ಕರ್ನಾಟಕ ಪ್ರಾಂತವು ಸ್ವತಂತ್ರ ಪ್ರಾಂತ ವಾಗಬೇಕೆಂಬ ಚಳವಳಿಯು ಹೊಸದಲ್ಲ. ಆಂಧ್ರ ತಮಿಳ, ಓಡಿಸಾಗಳಂತೆ ಕರ್ನಾಟಕವೂ ತನಗೆ ಸ್ವತಂತ್ರ ಪ್ರಾಂತ ಬೇಕೆಂದು ಪ್ರಯತ್ನಿಸುತ್ತಾ ಬಂದಿದೆ. ಡಾಕ್ಟರ ಯು. ರಾಮರಾಯರು ಕೌನ್ಸಿಲ ಆಫ ಸ್ಟೇಟದಲ್ಲಿ ಇದೇ ವಿಷಯವಾಗಿ ಠರಾವು ತಂದಿದ್ದರು. ಅನಂತರ ಸರಕಾರ ಕೂಡ ಲೋಕಮತ ಹೇಗುಂಟೆಂಬ ಶೋಧವನ್ನು ಗುಪ್ತ ರೀತಿಯಿಂದ ಮಾಡಿಸಿರುತ್ತದೆಂದು ತಿಳಿಯಲು ಅವಕಾಶವುಂಟು.

ಕರ್ನಾಟಕದ ಏಕೀಕರಣದ ಚಳವಳಿಯು ಪ್ರಾರಂಭವಾಗಿ ಐದು ವರ್ಷದ ಮೇಲಾಯಿತು. ಬೆಳಗಾವಿಯ ಕಾಂಗ್ರೆಸ ಸಭೆಯಲ್ಲಿ ಸಹ ಇದರದೊಂದು ಪರಿಷತ್ತು ಕೂಡಿತ್ತು. ಆಗಿನಿಂದ ಈ ಚಳವಳಿಯು ಒಂದಿಲ್ಲೊಂದು ರೀತಿಯಿಂದ ಸತತವಾಗಿ ನಡೆದಿರುತ್ತದೆ

ಮುಂಬಯಿ ಕರ್ನಾಟಕ, ಮದ್ರಾಸದ ಕರ್ನಾಟಕ, ನಿಜಾಮ ಹಾಗು ಮೈಸೂರಿನ ಕರ್ನಾಟಕಸ್ಥರೆಲ್ಲರೂ ಈ ಚಳವಳಿಗೆ ಸಹಾನುಭೂತಿಯುಳ್ಳವರಾಗಿದ್ದಾರೆ. ಜ್ಯುಬಿಲಿಯ ಮಹೋತ್ಸವದಲ್ಲಿ ಏಕೀಕರಣ ಸಭೆಯವರು ಶ್ರೀಮನ್ಮಹಾರಾಜರಿಗೆ ಮಾನಪತ್ರ ಕೊಟ್ಟದ್ದು ತೀರ ಹೊಸದಾದ ಪ್ರತ್ಯಕ್ಷ ಪ್ರಮಾಣವಾಗಿರುತ್ತದೆ.

ಈ ಪ್ರಕಾರ ಕರ್ನಾಟಕ ನಾಡಿನ ದಿಕ್ಕು ಚತುಷ್ಟಯದಲ್ಲಿ ಏಕೀಕರಣದ ಚಳವಳಿ ನಡೆದಿದ್ದರೂ ಮುಂಬಯಿಯ ಟಾಯಿಮ್ಸ ಪತ್ರವು ಈ ಬಗ್ಗೆ ಒಂದು ಲೇಖ ಸಹ ಬರೆಯಲಿಲ್ಲ. ಯಾವ ಬುದ್ಧಿಯಿಂದಲೋ ಹೋದ ವಾರದಲ್ಲಿ ಈ ಏಕೀಕರಣವು ಶಕ್ಯವಾದುದಲ್ಲೆಂದು ಒಂದು ಲೇಖ ಬರೆದಿದೆ. ಈ ಲೇಖವು ಸರಕಾರಕ್ಕೆ ಒಂದು ಆಧಾರವೇ ಆಗುವದು

ಈ ಲೇಖ ಬರೆಯುವಾಗ ಟಾಯಿಮ್ಸ ಕರ್ತರು ಒಂದು ಮಾತನ್ನು ಸಹಜವಾಗಿ ಹೇಳಿದ್ದಾರೆ. ಇಂಗ್ರೇಜಿ ಸರಕಾರದವರು ಮುಂಬಯಿಯನ್ನು ಜೋಡಿಸಿದಾಗ, ಜಾಡು ದಸ್ತಾವೇಗಳನ್ನೆಲ್ಲ ಕನ್ನಡದಲ್ಲಿ ಬರೆಯುತ್ತಿದ್ದರೆಂದು ಕಬೂಲಿ ಜವಾಬು ಕೊಟ್ಟಿದ್ದಾರೆ. ನಾಲ್ಕು ನೂರು ವರ್ಷಗಳ ಹಿಂದೆ ಮುಂಬಯಿಯಲ್ಲಿ ಕನ್ನಡವೇ ಮೂಲ ಭಾಷೆಯಾಗಿತ್ತೆಂದು ತಾನಾಗಿ ಸಿದ್ಧವಾಗುತ್ತದೆ. ಇಂಗ್ಲಿಷರಂತೆ ಗೋವೆ ಸರಕಾರದವರೂ ಕನ್ನಡದಲ್ಲಿಯೇ ಹುಕುಮುಗಳನ್ನೂ ಜಾಹೀರನಾಮೆಗಳನ್ನೂ ತೆಗೆಯುತ್ತಿದ್ದರು. ಮಹಾರಾಷ್ಟ್ರದ ಅಭ್ಯುದಯದಿಂದ ಕೊಂಕಣ ಮಾತ್ರವಲ್ಲ; ದೇಶದಲ್ಲಿ ಸಾಂಗಲಿ, ಮಿರಜೆಯ ತನಕ ಕರ್ನಾಟಕವು ಮಹಾರಾಷ್ಟ್ರವಾಗಿದೆ

ಕನ್ನಡಿಗರ ಉಡಿಗೆ ತೊಡಿಗೆ, ತಿನಸು, ಉಚ್ಚಾರ ಮೊದಲಾದವುಗಳಿಂದ ಇವರೆಂದೂ ಒಂದೇ ಜನಾಂಗದವರಾಗಲಿಲ್ಲೆಂದು ಟಾಯಿಮ್ಸ ಕರ್ತರು ಆಡುವ ನುಡಿ ಕೇಳಿ ನಮಗೆ ಕೌತುಕವೆನಿಸಿದೆ ಇಂಗ್ಲಂಡವನ್ನು ನಾಲ್ಕು ಭಾಗ ಮಾಡಿ, ಫ್ರಾನ್ಸ, ಜರ್ಮನಿ, ಆಯರ್ಲಂಡ ಮತ್ತು ರಶಿಯಾಕ್ಕೆ ಕೊಟ್ಟು ನೋಡಲಿ, ಇನ್ನೊಂದು ಮುನ್ನೂರು ವರ್ಷಗಳಾದ ನಂತರ ಈಗಿನಂತೆ ಇಂಗ್ಲಂಡದಲ್ಲಿ ಏಕ ಭಾಷೆ, ಏಕ ವಿಚಾರ, ಏಕ ಆಚಾರವುಂಟಾಗುತ್ತದೇನೆಂಬದು ತಾನಾಗಿ ತಿಳಿಯುವದು.

ಮುಂಬಯಿ ಇಲಾಖೆಯ ಉತ್ತರ ಕರ್ನಾಟಕದ ಮೇಲೆ ಮರಾಠಿ, ನಿಜಾಮ ರಾಜ್ಯದಲ್ಲಿ ಉರ್ದು, ಮದ್ರಾಸ ಇಲಾಖೆಯ ಒಂದು ಭಾಗದಲ್ಲಿ ತಮಿಳು ಮತ್ತು ಮಲಿಯಾಳಿ ಮತ್ತು ಇನ್ನೊಂದು ಭಾಗದಲ್ಲಿ ತೆಲಗಿನ ವರ್ಚಸ್ಸಿರುವಾಗಿ, ಕನ್ನಡಿಗರ ನಡೆನುಡಿಗಳಲ್ಲಿ ಭೇದವಾಗಿರುವದು. ಕೊಂಕಣದ ಮರಾಠಿ ಮತ್ತು ದೇಶದ ಮರಾಠಿಯಲ್ಲಿ ಹೆಚ್ಚು ಕಡಿಮೆಯುಂಟು. ಹಂ ಹುದ್ದಾರಿಗೊಮ್ಮೆ ಭಾಷೆಯ ಉಚ್ಚಾರದಲ್ಲಿ ಬದಲಾಗುವದುಂಟು. ಇಂಗ್ಲಂಡ ಕೂಡ ಇದಕ್ಕೆ ಅಪವಾದವಿಲ್ಲ ಅಲ್ಲಿ ಮನೆಯಲ್ಲಿ ಮಾತಾಡುವ ಭಾಷೆ ಬೇರೆ, ವ್ಯವಹಾರದಲ್ಲಿ ಆಡುವ ಭಾಷೆ ಬೇರೆಯಾಗಿರುತ್ತದೆ. ಅದೇ ಪ್ರಕಾರ ಕರ್ನಾಟಕದಲ್ಲಿಯೂ ಬೇರೆ ಬೇರೆಯಾಗಿ ಕಂಡು ಬಂದರೆ ಆಶ್ಚರ್ಯವಿಲ್ಲ.

ಗುಲಾಮಗಿರಿಯಲ್ಲಿರುವ ದೇಶವು ಹೇಗೆ ಅಭ್ಯುದಯ ಹೊಂದಲಾರದೋ? ಹಾಗೆಯೇ ಪರಭಾಷೆಯ ವರ್ಚಸ್ಸಿದ್ದ ಯಾವದೊಂದು ನುಡಿಯು ಪ್ರತಿಷ್ಠೆ ಹೊಂದಲಾರದು. ಭಾಷೆಯು ಸ್ವತಂತ್ರವಾಗಬೇಕಾದರೆ ದೇಶವು ಸ್ವತಂತ್ರವಾಗಬೇಕು. ಆದುದರಿಂದಲೇ ಆಂಧ್ರರೂ, ಓರಿಸಾದವರೂ ಸ್ವತಂತ್ರ ಪ್ರಾಂತ ಬೇಡಿದ್ದಾರೆ ವಂಗಭಂಗವಂತೂ ಒಂದು ಉದಾಹರಣೆಯಾಗಿರುತ್ತದೆ. ಸರಕಾರದವರು ಕರ್ನಾಟಕವನ್ನು ಸ್ವತಂತ್ರ ಮಾಡಿ, ಅದಕ್ಕೆ ಪ್ರಾಂತಿಕ ಸ್ವಾತಂತ್ರ್ಯ ಕೊಟ್ಟು ನೋಡಲಿ, ಕೆಲವು ವರ್ಷಗಳಲ್ಲಿ ಟಾಯಿಮ್ಸವು ಬರೆದ ಲೇಖವು ತಪ್ಪು ತಿಳುವಳಿಕೆಯಿಂದಾಗಿತ್ತೆಂದು ಪ್ರತ್ಯಕ್ಷವಾಗಿ ನಿದರ್ಶನಕ್ಕೆ ಬರುವದು.

ಅಂತೆಯ ಮೇಲೆ ಅಂತೆ!!

—೦—

ಯಾವದಾದರೊಂದು ಸುದ್ದಿಯ ಜವಾಬದಾರಿಯನ್ನು ಹಾರಿಸಿಕೊಳ್ಳುವದಕ್ಕಾಗಿ ತಿಳಗೇಡಿಗಳು ವಾಕ್ಯ ಮುಗಿಸುವಾಗ ಅಂತೆ ಎಂಬ ಶಬ್ದ ಪ್ರಯೋಗ ಮಾಡುತ್ತಾರೆ ಇಂಥದೊಂದು ಪ್ರಯೋಗದಿಂದ ಲೇಖಕರ ಹಾಗು ಮುದ್ರಕರ ಜವಾಬದಾರಿಯು ತಪ್ಪಿತೆಂದು ಮಾತ್ರ ತಿಳಿಯಲಿಕ್ಕಾಗದು. ರಾಮದುರ್ಗ ಸಂಸ್ಥಾನಕ್ಕೆ ಸೇರಿದ ಹಳ್ಳಿಯ ಗೌಡ ... ನುದವರು ಬರಗಾಲದಲ್ಲಿ ಹ... ಕಳವ ... ಲಾರೆ, ತುರಂಗಕ್ಕೆ ಹೋಗಲು ಸಿದ್ಧರಾದರು. ಇವರನ್ನು ಹೆದರಿಸುವದಕ್ಕಾಗಿ ... ರನ್ನು ... ದಲ್ಲಿ ಹಾಕಿ, ... ಮುಂದೆ ಇವರಿಗೆ ಅನ್ನ ಹಾಕಲಾರದೆ, ... ರೆಂಬ ಸುದ್ದಿಯು ... ಬರೆಯುವಾಗ ಕಾಗ್ರೆಸ ... ವಿ. ಕರಗುದರಿಯವರು ಅಂತೆ! ಅಂತೆ!! ... ಬರುವದಕ್ಕೆ ... ವಾಗುವಂತೆ ವಾಕ್ಯ ... ಕಷ್ಟ ಅಂತೆಯನ್ನು ಉಪಯೋಗಿಸಿ ... ಇದರಿಂದ ಇವರಲ್ಲಿ ನಿಜ ಸಂಗತಿಯನ್ನು ಹೇಳುವ ಧೈರ್ಯವೇ ಇಲ್ಲೆಂದು ವ್ಯಕ್ತವಾಗುತ್ತದೆ. ಬರೆದರೆ ಒಂದು ಕಡೆ, ಎರಡು ತುಂಡಿನಂಥ ಲೇಖ ... ಬೇಕು; ಇಲ್ಲವಾದರೆ ಅದರ ಗೊಡವಿಗೇ ಹೋಗಬಾರದು ಕಾಂಗ್ರೆಸ ಕಾರ್ಯದಲ್ಲಿ ಇಂಥ ಸುಧಾರಕರು ಬೇಕಾಗಿರುವದಿಲ್ಲ.

ಗುಂಡಿನಿಂದ ಇಬ್ಬರನ್ನು ನಿಗಚದರು.

—೦—

ಅಮೇರಿಕೆಯಲ್ಲಿಯೇ ಮದ್ಯಪಾನ ಪ್ರತಿಬಂಧಕ ಕಾಯದೆಯ ಅಮಲದಾರನು ತನ್ನ ಮಗ ಮತ್ತು ತಮ್ಮನೊಂದಿಗೆ ಪ್ರವಾಸ ಮಾಡುತ್ತಿದ್ದಾಗ ಇವರ ಮೇಲೆ ಮರೆಮೋಸದಿಂದ ಗುಂಡು ಹಾಕಿದರು. ಅಮಲದಾರನು, ಮಗನೂ ಗುಂಡಿನ ಬಾಯಿಗೆ ಬಿದ್ದು ಪರಲೋಕವಾಸಿಯಾದರು ತಮ್ಮನು ಪಾರಾಗಿ, ಗಳ ... ಲು ನಡೆದು ಬಂದು ಪೋಲೀಸ ವರ್ತಮಾನವನ್ನು ಹೇಳಿದನು.

ಸುರಂಗ ಹಾರಿ ಜನರನ್ನು ಹೌಹಾರಿಸಿತು.

—೦—

ಅಮೇರಿಕೆಗೆ ಸೇರಿದ ವಿಯೋರಿಯಾ ಎಂಬ ಪಟ್ಟಣದಲ್ಲಿ ಮಧ್ಯರಾತ್ರಿಯಲ್ಲಿ ಸುರಂಗ ಹಾರಿತು. ಮಲಗಿದ್ದ ಜನರು ಹೌಹಾರಿ ಪಲಂಗಗಳಿಂದ ಕೆಳಗೆ ಬಿದ್ದರು.

ಗುಳೇ ಬಂದವರ ವ್ಯವಸ್ಥೆ.

—o—

ವಾಯುವ್ಯ ಗಡಿನಾಡಿನಿಂದ ಗುಳೇ ಬಂದಂಥ ಹಿಂದೂ ಮತ್ತು ಶೀಖ ಜನರ ದೆಸೆಯಿಂದ ನವಶಹರದ ಹತ್ತರ ಒಂದು ವಸಾಹತು ಸ್ಥಾಪಿಸುವ ಏರ್ಪಾಡನ್ನು ಹಿಂದೂ ಜನರೇ ಮಾಡಿದ್ದಾರೆ. ಇವರ ಒಟ್ಟು ೧೫೦ ಕುಟುಂಬಗಳಿದ್ದು, ಇಲ್ಲಿ ಸಧರು ಕುಟುಂಬಗಳಿಗೆ ಸಾಲುವಷ್ಟು ಭೂಮಿಯುಂಟು.

———

ಶ್ರೀ ಕೇಳಕರರ ಮತ-

ಶ್ರೀ. ಕೇಳಕರರು ಆಫ್ರಿದಿಜರ ಅತ್ಯಾಚಾರದ ವಿಷಯವಾಗಿ ಮುಂದೆ ಕೊಟ್ಟಂತೆ ಅಭಿಪ್ರಾಯ ಪಟ್ಟಿರುತ್ತಾರೆ —

ಆಫ್ರಿದಿ ಜನರು ಅಲ್ಪ ಸಂಖ್ಯಾಕರಾದಂಥ ಹಿಂದೂ ಜನರನ್ನು ಸೂರೆಗೆ ಹಾಕಿ, ಅಲ್ಪ ಸಂಖ್ಯಾಕರಾಗುವಂಥ ಮುಸಲಮಾನರ ಕೂಡ ಹಿಂದೂ ಜನರು ಹೇಗೆ ವರ್ತಿಸಬೇಕೆಂಬದನ್ನು ಕಲಿಸಿದಂತಾಗುತ್ತದೆ. ಮುಸಲಮಾನರಂತೆ ಹಿಂದೂ ಜನರೂ ಅಪವಿತ್ರವೆನಿಸುವಂಥ ಕೃತ್ಯ ಮಾಡಬೇಕೆಂದು ನಾನು ಹೇಳುವದಿಲ್ಲ. ಆಫ್ರಿದಿಜರ ಕೃತ್ಯದಿಂದ ಹಿಂದೂ ಮುಸಲಮಾನರ ಪರಸ್ಪರ ಸಂಬಂಧ ಹೇಗಿರಬೇಕೆಂಬದನ್ನು ಕಣ್ಣು ತೆರೆಸಿ, ತೋರಿಸುತ್ತದೆ.

———

ದಿಲ್ಲಿಯಲ್ಲಿ ಸಭೆ-

ದಿಲ್ಲಿಯಲ್ಲಿ ಆಫ್ರಿದಿಜರ ಕೃತ್ಯ ನಿಷೇಧಿಸುವದಕ್ಕಾಗಿ ಹಿಂದೂ ಜನರ ಸಭೆ ಕೂಡಿತ್ತು. ಮುಸಲಮಾನರು ಅತಿರೇಕ ಮಾಡುವದನ್ನು ನಿಲ್ಲಿಸಬೇಕು. ಅವರು ಯೋಗ್ಯ ಸವಲತ್ತುಗಳ ಅತಿಕ್ರಮಣ ಮಾಡಬಾರದು. ಈ ಪ್ರಕಾರ ಸರಕಾರವು ಬಂದೋಬಸ್ತು ಮಾಡಬೇಕೆಂಬ ಠರಾವು ಮಾಡಿದ್ದಾರೆ.

———

ಡಾಕ್ಟರರಿಗೆ ಚಾಕ-

ನಿಜಾಮ ರಾಜ್ಯದಲ್ಲಿ ನಾಂದೇಡ ಜಿಲ್ಹೆಗೆ ಸೇರಿದ ಮಹಿಷ ತಾಲೂಕಿನಲ್ಲಿರುವ ಸಬ್ ಅಸಿಸ್ಟಂಟ ಸರ್ಜನರಾದ ಡಾಕ್ಟರ ಗಾಡಗೀಳರು ಮಧ್ಯಾಹ್ನದಲ್ಲಿ ಆಸ್ಪತ್ರಿಯ ಕೆಲಸ ತೀರಿಸಿಕೊಂಡು ಮನೆಗೆ ಹೋಗುತ್ತಿದ್ದಾಗ, ದಾರಿಯಲ್ಲಿ ಕೆಲ ಮುಸಲಮಾನರು ಇವರನ್ನು ಚೂರಿ ಹೊಡೆದಿರುತ್ತಾರೆಂದು ನಿಜಾಮ ವಿಜಯ ಪತ್ರವು ಹೇಳುತ್ತದೆ.

ಅತಿವೃಷ್ಟಿಯು ಮೂಲಕ ಪುಣೆಯಂತೆ ಅಹಮದಾಬಾದಿನಲ್ಲಿಯೂ ಕೂಡಬೇಕಾಗಿದ್ದ ಒಕ್ಕಲತನದ ಪ್ರಚಂಡ ಪ್ರದರ್ಶನವು ಮುಂದೆ ಹಾಕಲ್ಪಟ್ಟಿತು.

ಅಸ್ಮಾನಿಯು ಕೆಟ್ಟದ್ದನ್ನು ಸುಲ್ತಾನಿಯು ಅಡುವದು.

—o—

ಗುಜರಾಥದಲ್ಲಾದ ಕೇಡಿನ ವಿಚಾರ ಮಾಡಿ ಎಲ್ಲ ಪ್ರಕಾರದ ನಷ್ಟವನ್ನು ತುಂಬಿ ಕೊಡುವಂತೆ ಮುಂಬಯಿಯ ಗವ್ಹರ್ನರಸಾಹೇಬರು ವಾಗ್ದಾನ ಮಾಡಿ, ಅಲ್ಲಿಯ ಸ್ಥಿತಿಯನ್ನು ಪ್ರತ್ಯಕ್ಷ ನೋಡಲು ಸ್ವತಃ ಅಲ್ಲಿಗೆ ಪ್ರಯಾಣ ಬೆಳೆಸುವರು. ಇವರಂತೆ ಮಂತ್ರಿತ್ರಯರೂ ಹೋಗತಕ್ಕವರಿದ್ದಾರೆ.

———

ಶೀಕ್ಷೆ ಅನುಭೋಗಿಸಿದವರ ಸಭೆ.

—o—

ಅಸಹಕಾರದ ಚಳವಳಿಯಲ್ಲಿ ೪೦ ಸಾವಿರ ಜನರು ಶ್ರೀ ಕೃಷ್ಣ ಜನ್ಮಸ್ಥಾನವನ್ನು ಕಂಡು ಬಂದರು. ಇವರೆಲ್ಲ ಒಂದು ಸಂಘವನ್ನು ಕಲಕತ್ತೆಯಲ್ಲಿ ಸ್ಥಾಪಿಸಿದ್ದಾರೆ. ಶ್ರೀ. ಸಾಂಬಮೂರ್ತಿಯವರು ಇದರ ಅಧ್ಯಕ್ಷರಾಗಿದ್ದಾರೆ. ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರಕಿಸುವದೇ ಇವರ ಧ್ಯೇಯವು. ಈ ಸಭೆಗೆ ಸ್ವಾಧೀನ ಭಾರತವೆಂಬ ಹೆಸರು.

———

ತುರ್ಕಸ್ಥಾನದಲ್ಲಿ ಭೂಕಂಪ!!

—o—

ಯುರೋಪದ ತುರ್ಕಸ್ಥಾನದಲ್ಲಿ ಪೆಟ್ಟಿನ ಮೇಲೆ ಪೆಟ್ಟೆನ್ನುವಂತೆ ೩೪ ಸಾರೆ ಭೂಮಿಯು ನಡುಗಿ, ಬಹುವಾಗಿ ಕೇಡಾಗಿದೆ. ೧೫೦೦ ಮನೆಗಳು ಬಿದ್ದವು. ೨೫೦೦ ಮನೆಗಳು ಕುಸಿದವು. ದ್ರವ್ಯ ಹಾನಿಯು ಕೋಟ್ಯವಧಿ ರೂಪಾಯಿಯಾಗಿದೆ. ೩೪ ಜನರು ಸತ್ತರು. ೭೩ ಜನರು ಘಾಯವಾಗಿದ್ದಾರೆ.

———

ಜೂರಿಯ ಮನೆಯನ್ನು ಬಾಂಬಿನಿಂದ ಹಾರಿಸಿದರು.

—o—

ಅಮೇರಿಕೆಯ ಸಕೊ ಮತ್ತು ವ್ಹಂಜೆಟಿಯ ವಿಚಾರಣೆಯಲ್ಲಿ ಮುಖ್ಯ ಜೂರಿಯಾಗಿದ್ದವನ ಮನೆಯನ್ನು ಬಾಂಬಿನಿಂದ ಹಾರಿಸಿದರು. ಜೂರಿಯು ಮನೆಯಲ್ಲಿದ್ದಿಲ್ಲ. ಹೆಂಡರು ಮಕ್ಕಳಿದ್ದರು. ಮನೆಯು ಬಿದ್ದು ಅವರೆಲ್ಲರು ಬುಡಕ್ಕೆ ಸಿಕ್ಕರು. ಮಣ್ಣು ಎಳೆದು ಇವರನ್ನು ಹೊರಗೆ ತೆಗೆದರು. ದೈವಯೋಗದಿಂದ ಬಹಳ ಅಪಾಯವಾಗದೆ, ಬದುಕಿಕೊಂಡರು.

ವಿಲಾಯತಿಯ ಯುದ್ಧಖಾತೆಯ ಮಂತ್ರಿಯಾದ ಮಿ. ಈವ್ಹನ್ಸಸಾಹೇಬರು ಹಿಂದುಸ್ಥಾನಕ್ಕೆ ಬರುವರು. ಸರಹದ್ದಿನಲ್ಲಿರುವ ದಂಡಿನ ಭದ್ರೋಪಾಯಗಳನ್ನು ನೋಡುವರು.

ವಿವಿಧ ವರ್ತಮಾನಗಳು.

—o—

ಮಹಾತ್ಮರು ಹೋದ ವಾರದಲ್ಲಿ ದಾವಣಗೇರಿಗೆ ಬಂದು ಹೋದರು. ಅಲ್ಲಿಯ ನಾಗರಿಕರು ನಾಲ್ಕು ಸಾವಿರ ರೂಪಾಯಿ ಕೊಟ್ಟರು. ಉಳಿದವರಲ್ಲಿ ಅಸ್ಪೃಶ್ಯರು ೩೫ ಅಧಿಕಾರಿಗಳು ೨೦೦, ಮಹಿಳೆಯರು ೫೦೦ ಮತ್ತು ವಿದ್ಯಾರ್ಥಿಗಳು ೩೫೦ ರೂಪಾಯಿ ಕೊಟ್ಟಿದ್ದಾರೆ.

———

ಗುಜರಾಥದ ನೆರೆ ಹಾವಳಿಯ ರಿಲೀಫ ಫಂಡಿಗಾಗಿ ಹುಬ್ಬಳ್ಳಿಯಲ್ಲಿ ೧೪೬೦, ಧಾರವಾಡದಲ್ಲಿ ೧೯೪ ಮತ್ತು ಗದಗಿನಲ್ಲಿ ೯೦೫ ರೂಪಾಯಿ ಈವರೆಗೆ ಜಮೆಯಾಗಿವೆಂದು ಡಾಕ್ಟರ ಹರ್ಡೀಕರರು ತಿಳಿಸುತ್ತಾರೆ.

———

ಗೋರಖಪೂರ ಜಿಲ್ಹೆಯಲ್ಲಿ ಕೋಶಿ ನದಿಗೆ ನೆರೆ ಬಂದು, ರೇಲ್ವೆಯ ಸೇತುವೆಯು ಕುಸಕೊಂಡು ಬಿತ್ತು. ದಾರಿಯೂ ಅನೇಕ ಸ್ಥಳಗಳಲ್ಲಿ ಕೆಟ್ಟದ್ದರಿಂದ, ರೇಲ್ವೆಯ ಎಲ್ಲ ವ್ಯವಹಾರ ಬಂದಾಗಿರುತ್ತದೆ.

———

ಸ್ವಾಮೀ ಶ್ರದ್ಧಾನಂದರ ಕೊಲೆ ಮಾಡಿದ ಅಬ್ದುಲ ರಶೀದನ ಅಪೀಲ ಅರ್ಜಿಯು ಪ್ರೀವ್ಹಿ ಕೌನ್ಸಿಲದಲ್ಲಿ ಕೊಡಲ್ಪಟ್ಟಿತು. ಈತನ ಪರಿಯಿಂದ ಮೂವರು ಬ್ಯಾರಿಸ್ಟರರಿದ್ದಾರೆ. ಇವರಲ್ಲಿ ಪ್ರಿನ್ಸ ಆಫ ವೇಲ್ಸರ ಕಾಯದೆ-ಪಂಡಿತನಾದ ಹಾಕೆನಸನ್ ಸಾಹೇಬನೂ ಒಬ್ಬನಾಗಿದ್ದಾರೆ.

———

ದಿಲ್ಲಿಯ ಕಾಂಗ್ರೆಸ ಸರಕಲ್ಲಿನವರೂ ಡಾಕ್ಟರ ಅನಸಾರಿಯವರು ಕಾಂಗ್ರೆಸದ ಅಧ್ಯಕ್ಷರಾಗಬೇಕೆಂದು ಸೂಚಿಸಿದ್ದಾರೆ. ಈ ಸಾರೆ ಇವರ ಹೊರತು ಎಲ್ಲಿಯೂ ಎರಡನೆಯ ಹೆಸರನ್ನು ಸೂಚಿಸಿಲ್ಲ.

———

ಧಾರವಾಡ-

ನಾಳಿನ ದಿವಸ ಸಾಯಂಕಾಲದಲ್ಲಿ ಗುಜರಾಥ ರಿಲೀಫ ಫಂಡಿನ ದೆಸೆಯಿಂದ ಅನ್ನಪೂರ್ಣ ಥಿಯಟರದಲ್ಲಿ ಮಿ. ಕಬೆಕ್ಕರ ಮತ್ತು [illegible] ಆಶ್ರಯದಲ್ಲಿ ಜಾಹೀರ ಸಭೆಯು ಕೂಡತಕ್ಕದ್ದಿರುತ್ತದೆ.

———

ನಾಳಿನ ರಜೆ-

ಗೋಕುಲ ಅಷ್ಟಮಿಯ ರಜೆಯ ದೆಸೆಯಿಂದ ಒಂದು ಮುದ್ರಾಲಯಕ್ಕೆ ರಜೆ ಇರುವದರಿಂದ ನಾಳಿನ ನಿತ್ಯದ ವಿಜಯವು ಪ್ರಕಟಿಸಲ್ಪಡಲಾರದು.

———

ಕೊಡಬೇಕು. ಅವರು ತಮ್ಮ ಮನೆ ಪೌರುಗಳ ದುರಸ್ತೀ ಮಾಡಿಕೊಳ್ಳಬೇಕೆಂದು ದರಬಾರಿನವರು ಆಜ್ಞಾಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ.

ಧಾರವಾಡ—

ನಿನ್ನಿನ ದಿವಸ ಈ ಊರಲ್ಲಿ ಕೂಡಿದ್ದ ಗುಜರಾಥ ರಿಲೀಫ ಫಂಡಿನ ಸಭೆಯಲ್ಲಿ ಸುಮಾರು ೨೦೦೦ ರೂಪಾಯಿಗಳು ಕೂಡಿದವು. ಸವಣೂರಿನ ಮ ನವಾಬಸಾಹೇಬರು ಐನೂರು ರೂಪಾಯಿ ಕೊಟ್ಟಿದ್ದಾರೆ.

ನೋಟೀಸು

—೦—

ಬಸ್ಸಿ ಕೋಂ ತಿಪ್ಪಣ್ಣಾ ಬೆಸಕನಹಾಳ ಸಾ ಮುಂಡರಗಿ ತಾ. ಗದಗ ಇವಳಿಗೆ—

ಕೆಳಗೆ ಸಹಿ ಮಾಡುವವನ ಕಡಿಯಿಂದಾ ನಿನಗೆ ತಿಳಿಸುವದೇನಂದರೆ ಹೋದ ಕ್ಷಯನಾಮ ಸಂ॥ ಶ್ರಾವಣಮಾಸದಲ್ಲಿ ಯರಡನೆಯವನ ಬುಲ ತಾಪದಿಂದ ಓಡಿ ಹೋಗಿ ವಿಂಬಸಪಾ ಅಡಿವೆಪ್ಪ ಪಾಲಿ ರ ಪವದ್ರಿ ಇವನ ಹೇಳ್ಕಿ ಪ್ರಕಾರ ಭಾವ ಮನಿಯಲ್ಲಿ ಇದ್ದು ಕೊಂಡಿದಿ ನೀನು ವಬ ಕಾರದಿಂದ ಬಸ್ಸು ಲಗಿ ಊಗ ಹಡಿಯುವ ಕಾಲ ಆದೆ ಅಂತಾ ಕೇಳುತ್ತೇನೆ ನೀನು ಹಡದ ಯಾವದೆ ಕೂಸಿಗೆ ನಾನು ಭಾದ್ಯನಲ್ಲಾ ನೀನು ನನ್ನ ಮನಿಯಿಂದಾ ಹೋಗುವಾಗ್ಗೆ ಕೆಳಗೆ ಕಾಣಿಸಿದ ಸ್ತ್ರಾವಾನ ತಕ್ಕೊಂಡು ಹೋಗಿರುತ್ತೀ ಅವುಗಳ ವಿವರಾ

೧ ಭಂಗಾರ ಬಳಿ ಜತಿ ೧ ತೊಲಿ ೬ ಕಿಮ್ಮತ್ತು ರೂ ೧೨೦ ೧ ಬೆಳ್ಳಿ ಪಟ್ಟ ತೊಲಿ ೧೦ ಕಿ॥ ೮ ರೂ. ೧ ಬೆಳ್ಳಿ ಚವಕಾ ತೊಲಿ ೧೨ ಕಿ॥ ೧೦ ರೂ. ೧ ಬುಗಡಿ ಖಡ್ಡಿ ಜತಿ ೧ ತೊಲಿ ೧/೨ ಕಿ॥ ೧೨ ರೂ. ೧ ಬೆಂಡವಾಲಿ ಜತಿ ೧ ತೊಲಿ ೧/೨ ಕಿ॥ ೧೨ ರೂ. ಅಂತೂ ೧೬೨ ರೂ.

ಈ ಪ್ರಕಾರ ಸಾಮಾನ ಈ ನೋಟೀಸು ಮುಟ್ಟಿದ ೮ ದಿವಸದಲ್ಲಿ ತಂದು ಕೊಟ್ಟು ಪಾವತಿ ತಗೋಬೇಕು ಜರ ಹಾಗೆ ಮಾಡದಿದ್ದರೆ ಕಾಯಿದೆ ಪ್ರಕಾರ ಇಲಾಜ ಮಾಡಿ ವಸೂಲ ಮಾಡುವದಲ್ಲದೆ ಬರುವದು ಈ ನೋಟೀಸ ಖರ್ಚು ನಿನ್ನ ಮೇಲೆ ಆದ ಇದೇ ಸೋಡಚೀಟಿ ಅಂತಾ ತಿಳಿಯಬೇಕು ತಾರೀಖು ೨೧-೮-೩೭

ಸಹಿ ತಿಪ್ಪಣ್ಣ ಬಿನ್ನ ಬಸಪ್ಪ ದೆ॥ ಸಾಕೀನ ಮುಂಡರಗಿ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಗಿರುವದು.

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು.

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ.

ಆಯುರ್ವೇದೌಷಧಿ ಕಾರಖಾನಾ ಕಿತ್ತೂರ

ಮನ್ಮಥವಿಲಾಸ— ಈ ಗುಳಿಗೆಯ ಸೇವನೆಯಿಂದ ಅತ್ಯಂತ ಕಾಮೋದ್ದೀಪಕ ಮತ್ತು, ವೀರ್ಯವರ್ಧಕ ಮನೋಲ್ಹಾಸವಾಗಿ ಶಕ್ತಿ ಬರುತ್ತದೆ. ೩೦ ಗುಳಿಗೆಗಳಿಗೆ ೧ ರೂ. ೧೦೦ ಕ್ಕೆ ೪ ರೂ.

ಹುರುಕಿನ ಔಷಧ— ಚೀಟು ೧ ಕ್ಕೆ ೧ ಆಣೆ ೧೦೦ ಕ್ಕೆ ೩ ರೂ ೮ ಆಣೆ.

ಕಣ್ಣಿನ ಔಷಧ ಚೀಟು ೧ ಕ್ಕೆ ೩ ಪೈ ೧೦೦ ೧ ರೂ.

ಹೇನಿನ ಔಷಧ ಚೀಟು ೧ ಕ್ಕೆ ೬ ಪೈ. ೧೦೦ ಕ್ಕೆ ೨ ರೂ.

ಜ್ವರದ ಗುಳಿಗೆ - ಈ ಗುಳಿಗೆಗಳು ದೂಷಿತ ಜ್ವರ, ಮಲೇರಿಯಾ ಇನ್‌ಫ್ಲ್ಯುಯೆಂಝಾ, ಸನ್ನಿಪಾತ, ಮುಂತಾದ ಜ್ವರಗಳಿಗೆ ಅತ್ಯಂತ ಗುಣ—ಕಾರಿಯಾಗಿರುವ ಮತ್ತು ಪ್ರವಾಸಕರಿಗೆ ಉಪಯುಕ್ತವೆಂದು ಸಿದ್ಧವಾಗಿವೆ. ೪೦ ಕ್ಕೆ ೧ ರೂ. ೧೦೦ಕ್ಕೆ ೨ ರೂ.

ಸೂಚನಾ— ಒಂದು ಆಣೆ ಟಿಕೀಟು ಕಳಿಸಿದಲ್ಲಿ ನಮ್ಮ ಸುಖಸಂಜೀವಿನಿಯೆಂಬ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಆಯುರ್ವೇದೌಷಧಿ ಕಾರಖಾನಾ ಪೋ ಕಿತ್ತೂರ ಜಿಲ್ಹಾ ಬೆಳಗಾವ

ಶ್ರೀ. ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ

ಶ್ರೀ. ಶಂಕರ ಕರ್ನಾಟಕ ಪುಸ್ತಕ ಭಾಂಡಾರವೂ

ಶ್ರೀ ಶಾಕಾಂಭರೀ ನಿಧಿಯೂ

೧ **ಶ್ರೀ. ವಿ. ಪ್ರ. ಸಂಸ್ಥೆಯಿಂದ** (೧) ಕರ್ನಾಟಕ ಸಿಂಹಾಸನ ಸ್ಥಾಪನೆ [೨] ಕಥೆಗಳನ್ನೊಳಗೊಂಡ ಬೀರಬಲ್ಲನ ಚರಿತ್ರೆ (೩) ಛತ್ರಪತಿ ಶಿವಾಜಿ ಮಹಾರಾಜ (೪) ಕರ್ನಾಟಕ ಸಾಮ್ರಾಜ್ಯ ಸ. ೧, ಭಾ. ೧, [೫ ಕರ್ನಾಟಕ ಸಾಮ್ರಾಜ್ಯ ಸ ೧, ಭಾಗ ೨ ಹೊರಬಿದ್ದಿದೆ. ಮಾಲೆಗೆ ಚಂದಾದಾರರಾಗುವವರು ೧ ರೂ. ಪ್ರವೇಶ ಫಿಯನ್ನು ಕಳಿಸಿ ಬರೆಯುತಕ್ಕದ್ದು. ಅವರಿಗೆ ಈ ಪುಸ್ತಕಗಳು ಕಡಿಮೆ ಬೆಲೆಗೆ ದೊರೆಯುವವು,

೨ **ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರದಲ್ಲಿ** ಎಲ್ಲ ಬಗೆಯ ಕನ್ನಡ ಪುಸ್ತಕಗಳು (ಶಾಲೋಪಯೋಗಿ ಕಾಯಿದೆ) ನಕಾಶೆ ಚಿತ್ರಗಳೂ ಬರೆವಣಿಗಳೂ ದೊರೆಯುವವು ಬೆಲೆ ಪಟ್ಟಿ ಬೇಕಾದವರು ೧ ೨ ಆಣೆಯ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು

೩ **ಶ್ರೀ ಶಾಕಾಂಭರೀ ನಿಧಿಯು ಮುದ್ದತಿ ಠೇವಗಳನ್ನಿಟ್ಟುಕೊಳ್ಳುವದಲ್ಲದೆ ಆಭರಣಗಳ ಬೆಲೆ** ಮತ್ತು ಧಾರವಾಡದ ಬ್ಯಾಂಕುಗಳ ಶೇರು ಸರ್ಟಿಫಿಕೇಟುಗಳ ಮೇಲೆ ಸಾಲ ಕೊಡುವದು ಸರಕಾರದ ಕಂತಗಳನ್ನೂ ಬ್ಯಾಂಕಿನ ಸಾಲುಗಳನ್ನೂ ಮಾರಾಟ ಮಾಡಿ ಕೊಡುವದು ಚಕ್ರಹುಂಡಿ ವ್ಯವಹಾರ ಮುಂತಾದ ಎಲ್ಲ ತರದ ಬ್ಯಾಂಕಿನ ಕೆಲಸಗಳ ಮಾಡುವದು ಹೆಚ್ಚಿನ ಮಾಹಿತಿ ಬೇಕಾದರೆ ಕೆಳಗಿನ ವಿಳಾಸಕ್ಕೆ ಬರೆಯ ಬಹುದು

ಮಾಳಮಡ್ಡಿ ಧಾರವಾಡ. — ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.
ಮಾರ್ಗಶೀರ್ಷ ಶು. ೬ ಶಕೆ ೧೮೪೮ — ಅಡವತಿಗಾರರು

ಈ ಪತ್ರವನ್ನು ಆಚಾರ್ಯ ಬಾಳಾಚಾರ್ಯ ಪೂಜಾರ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ — ಬಿಡಿ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಸೋಮವಾರ ತಾರೀಖು ೩೦ನೇ ಆಗಸ್ಟ ೧೯೨೬ (ಸಂಚಿಕೆ ೧೮೦

ಕಿರ್ಲೋಸ್ಕರ ಕಂಪನಿಯ [ಬೈ ಮೂಗು] ಒಡೆಯುವ ಯಂತ್ರಗಳು

ಈ ಯಂತ್ರಗಳು [illegible] ನಮ್ಮ ಕಾರಖಾನೆಯಲ್ಲಿ ತಯಾರಾಗುತ್ತವೆ. ಇವು ಕಬ್ಬಿಣದವು. [illegible] ಯಂತ್ರದಲ್ಲಿ [illegible] ಹಸನಾಗಿ [illegible] ಈ ಯಂತ್ರಗಳ [illegible] ಉಪಯೋಗಿಸುತ್ತವೆ. [illegible] ಹಾಗು [illegible] ಯಂತ್ರಗಳು ತಯಾರಾಗುತ್ತವೆ. [illegible] ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು [illegible] ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷ [illegible] ತಿಳಿದುಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು [illegible] ಬಡ್ಡಿಯ ದರವು ನೂರಕ್ಕೆ [illegible] ತಿಂಗಳಿಗೆ [illegible].

ಎ. ಕ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

ಆಗಸ್ಟ ೩೧ರಲ್ಲಿ [illegible] ಪೂರ್ತಿಯಾಗುವ [illegible] ಚಂದಾದಾರರ [illegible] ವ್ಹಿ. ಪಿ. [illegible]. ಚಂದಾದಾರರು ವ್ಹಿ. ಪಿ. [illegible] ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗೆಯು ಆರು ಲಕ್ಷದ ಮೇಲುಂಟು. ಚೆಕ [illegible] ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ [illegible]. ಕಾರ್ಖಾನೆ ಮತ್ತು ಬೇರೆ [illegible] ಜನಕ್ಕಾಗಿ [illegible].

[illegible] ಸಂಗತಿಗಳನ್ನು ಕೆಳಗೆ ಸಹಿ ಮಾಡಿದವ [illegible] ತಿಳಕೊಳ್ಳಬೇಕು.

ಮಾಧ್ವ ವರಾವ ಬಿ. [illegible]
ಮ್ಯಾನೇಜಿಂಗ ಡಾಯರೆಕ್ಟರ

ಜಾಹಿರಾತಿನ ದರಗಳು.

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ [illegible] ಅರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಗೌ. [illegible] ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳು [illegible] ದಿಂದ ಆವರಿಸಿ [illegible] ದಲ್ಲಿ ಹಾಕಲ್ಪಡಿದ್ದರೆ ಆರು ಆಣೆ [illegible] ಕಾಲಮಿನ ಒಳಿಗಳಿಗೆ ಇಪ್ಪತ್ತು ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ಲೋಕಮಾನ್ಯ ಟಿಳಕರ ಚರಿತ್ರೆ	೪ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೪ ,,	೪—೦—೦ ರೂ
[illegible] ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ [illegible]
ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೨೨ ಆ ೯೭ ನೇ ಇಸ್ವಿ

ಧಾರವಾಡದಲ್ಲಿ ಒಕ್ಕಲತನದ ತನ್ನದ ಕಾಲೇಜದ ಅವಶ್ಯಕತೆ.

ಹುಬ್ಬಳ್ಳಿಯ ರಾವಸಾಹೇಬ ಶಿರಹಟ್ಟಿಯ ಚನ್ನಬಸವಪ್ಪನವರು ಧಾರವಾಡದಲ್ಲಿ ಕನ್ನಡದಲ್ಲಿಯೇ ಒಕ್ಕಲತನದ ವೇತ್ರದ ಶಿಕ್ಷಣ ಕೊಡುವ ಕಾಲೇಜವನ್ನು ಸ್ಥಾಪಿಸಬೇಕೆಂದು ಸರಕಾರಕ್ಕೆ ಬರೆದು ಕಳಿಸಿರುವ ಪತ್ರದ ಒಂದು ಪ್ರತಿಯನ್ನು ನಮ್ಮ ಕಡೆಗೆ ಕಳಿಸಿದ್ದಾರೆ. ರಾವಸಾಹೇಬ ಚನ್ನಬಸವಪ್ಪನವರ ಪ್ರಾರಂಭಿಸಿದ ಈ ಕೆಲಸವು ಸ್ತುತ್ಯವಿದ್ದು, ಇದಕ್ಕೆ ಕರ್ನಾಟಕದ ಎಲ್ಲ ವಿಚಾರಗಳ ಮುಖಂಡರು ಅವಶ್ಯವಾಗಿ ಬೆಂಬಲ ಕೊಡುವರೆಂದು ನಾವು ಹೇಳುತ್ತೇವೆ.

ಯಾವದೊಂದು ವಿಷಯದ ಜ್ಞಾನವನ್ನು ಆಯಾ ದೇಶಭಾಷೆಗಳಲ್ಲಿ ಕೊಡುವದರಿಂದ ಮತ್ತು ಅವುಗಳಿಗಾಗಿ ಬೇಕಾಗುವ ಗ್ರಂಥಗಳನ್ನು ಆಯಾ ಭಾಷೆಗಳಲ್ಲಿ ಪ್ರಸಿದ್ಧಿಗೊಳಿಸಿದ ಆಗುವಂಥ ಜ್ಞಾನವು ಪರಕೀಯ ಭಾಷೆಗಳಿಂದಾಗುವದಿಲ್ಲ. ಆದುದರಿಂದಲೇ ಪ್ರತಿಯೊಂದು ದೇಶದವರು ತಮ್ಮ ದೇಶಿಯರ ಜ್ಞಾನಾರ್ಜನೆಗಾಗಿ ಪರಕೀಯ ಭಾಷೆಗಳಲ್ಲಿರುವ ಉತ್ತಮೋತ್ತಮ ಗ್ರಂಥಗಳನ್ನು ತಮ್ಮ ನುಡಿಯಲ್ಲಿ ತರ್ಜುಮೆ ಮಾಡಿಸುವರು. ಸರ ರವೀಂದ್ರನಾಥ ಟಾಗೋರರ ಅನೇಕ ಗ್ರಂಥಗಳು ವಿಲಾಯತಿಯ ಬೇರೆ ದೇಶಗಳ ಭಾಷೆಗಳಲ್ಲಿಯೂ ಭಾಷಾಂತರ ಮಾಡಲ್ಪಟ್ಟಿವೆ. ಪ್ರತಿಯೊಂದು ದೇಶದವರು ಬಂಗಾಲಿಯಲ್ಲಿಯೇ ಇವನ್ನು ಓದಬೇಕೆಂದು ಕಟ್ಟು ಮಾಡಿದರೆ ಎಂದೆಂದೂ ಶಕ್ಯವಾದೀತೆ?

ಹಿಂದುಸ್ಥಾನದಲ್ಲಿ ಮಾತ್ರ ಸರ್ವ ಸಾಮಾನ್ಯವಾದ ಈ ತತ್ವಕ್ಕೆ ತೀರ ವಿರುದ್ಧವಾದ ಕೃತ್ಯ ನಡೆಯುತ್ತದೆ. ಉಚ್ಚ ಪ್ರತಿಯ ಶಿಕ್ಷಣವೆಲ್ಲ ಇಂಗ್ಲಿಷದಲ್ಲಿಯೇ ಆಗಬೇಕೆಂಬದಾಗಿ ಸರಕಾರದ ಧೋರಣವು. ಎಲ್ಲವೂ ಇಂಗ್ಲೀಷಮಯವಾಗಿ, ಇತರರು ಇಂಗ್ಲಿಷವನ್ನೇ ಅನುವರ್ತಿಸಬೇಕೆಂಬದಾಗಿರುತ್ತದೆ. ಆದರೆ ಈ ಪ್ರಯತ್ನವು ಅಧವಾ ಪಕ್ಷವು ಎಂದಿಗೂ ಯಶಸ್ವಿಯಾಗಲಾರದು.

ಇಂಗ್ಲಿಷ ರಾಜ್ಯವಾಗಿ ನೂರು ವರ್ಷದ ಮೇಲಾಯಿತು. ಆದರೂ ಇಂಗ್ಲಿಷ ಕಲಿತಂಥ ಜನರ ಪ್ರಮಾಣವು ನೂರಕ್ಕೆ ಒಂದು ಸಹ ಬೀಳುವದಿಲ್ಲ. ಈ ದೇಶದಲ್ಲಿ ನೂರಕ್ಕೆ ೮೦ ಜನರು ಒಕ್ಕಲಿಗರಿದ್ದಾರೆ. ಹಳ್ಳಿಯ ಜನರಿಗೆ ಇಂದಿಗೂ ಇಂಗ್ರೇಜಿ ಎ ಬಿ ಸಿ ಡಿ ಎಂಬದನ್ನು ಹೇಗೆ ಬರೆಯುತ್ತಾರೆಂಬದು ಗೊತ್ತಿಲ್ಲ, ಪಕ್ತಿಯ ಒಕ್ಕಲಿಯದ ಶಿಕ್ಷಣವಾದರೂ ದೇಶಭಾಷೆಯಲ್ಲಿಯೇ ಕೊಡುವದು ಇಂಗ್ರೇಜಿಯು ಅವರ ಅಂಗಸ್ಪರ್ಶ ಮಾಡಲಾರದು. ರೈತರ ಉತ್ಕರ್ಷಕ್ಕಾಗಿಯೇ ಒಕ್ಕಲತನದ ಕಲಿಕೆಯ ಕಾಲೇಜು. ಈ ಕಲಿಕೆಯು ನಿಜವಾಗಿ ರೈತರ ಹಿತವಾಗುವದಾದರೆ ಇವರಿಗೆ ಅವಶ್ಯವಾದ ಶಿಕ್ಷಣ ಕೊಡುವ ಕಾರ್ಯವು ದೇಶಭಾಷೆಯಲ್ಲಿಯೇ ಆಗತಕ್ಕ ವಿಚಾರದ ಮಾಡುವದು ಅವಶ್ಯವಾದ ಕರ್ತವ್ಯ ಕರ್ಮವಾಗುತ್ತದೆ.

ಸರಕಾರದವರು ಒಕ್ಕಲತನದ ಕಾಲೇಜವನ್ನು ಸ್ಥಾಪಿಸಿ ಮೂವತ್ತು ವರ್ಷವಾಯಿತು. ಈ ೩೦ ವರ್ಷಗಳಲ್ಲಿ ಒಕ್ಕಲತನದ ಅಭ್ಯಾಸವೆಲ್ಲವೂ ಇಂಗ್ಲಿಷದಲ್ಲಿಯೇ. ಇದರ ಉಪಯೋಗವು ವಿಶೇಷವಾಗಿ ಪ್ರತ್ಯಕ್ಷವಾಗಿ ಸರಕಾರೀ ಖಾತೆಗಳಿಗೂ, ಅಪ್ರತ್ಯಕ್ಷವಾಗಿ ರೈತರಿಗೂ ಆಗಿದೆ. ರೈತರು ಈ ತೆರವಾಗಿ ಅನ್ಯರ ಮೂಗಿನಿಂದಲೇ ನೀರು ಕುಡಿಯುತ್ತಿದ್ದಾರೆ. ಈ ಪರಾವಲಂಬನ ತಪ್ಪಿ, ಸ್ವಾವಲಂಬಿಗಳಾಗಬೇಕಾದರೆ ಒಕ್ಕಲತನದ ಉಚ್ಚ ಪ್ರತಿಯ ಶಿಕ್ಷಣವು ದೇಶಭಾಷೆಯಲ್ಲಿಯೇ ಆಗಬೇಕಾಗುತ್ತದೆ. ಈ ಜಿಲ್ಲೆಯಲ್ಲಿ ದೇವಿಹಾಳ ಮತ್ತು ಇಲ್ಲಿ ಮಾತ್ರ ಒಕ್ಕಲತನದ ಶಾಲೆಯುಂಟು. ಮತ್ತು ಇಲ್ಲಿ ಪ್ರಾಥಮಿಕ ಶಾಲೆಗಳ ಏಳೆಂಟು ಜನ ಶಿಕ್ಷಕರು ಪ್ರತಿವರ್ಷ ಶಿಕ್ಷಣ ಹೊಂದುತ್ತಿದ್ದಾರೆ. ಈ ತಾಲೀಮಿನಿಂದ ಮತ್ತು ಅಲ್ಪಸ್ವಲ್ಪ ಜನರು ದೊರೆತ ಸದ ಶಿಕ್ಷಣದಿಂದ ನಾಲ್ಕು ಜಿಲ್ಲೆಗಳ ಜನರ ನೀರಡಿಕೆಯು ಹಿಂಗಲಾರದು.

ಆದದರಿಂದ ಕನ್ನಡದಲ್ಲಿ ಕಾಲೇಜದ ಉಚ್ಚ ಪ್ರತಿಯ ಶಿಕ್ಷಣ ಬೇಕೆನಿಸುವಂಥ ಕಾಲವು ಈಗ ಬಂದಿದೆ. ಅದಕ್ಕೆ ಧಾರವಾಡವು ಮಧ್ಯಸ್ಥಳ ಮಾತ್ರವಲ್ಲ; ಅನುಕೂಲ ಪರಿಸ್ಥಿತಿಯುಳ್ಳದ್ದೂ ಇರುತ್ತದೆ. ಇಲ್ಲಿಯ ಟ್ರೇನಿಂಗ ಕಾಲೇಜವು ಹಾಳು ಸುರಿಯುತ್ತಿರುವದು. ಅಲ್ಲಿ ಕಾಲೇಜದ ಅಭ್ಯಾಸ ಕಕ್ಷೆ, ವಿದ್ಯಾರ್ಥಿಗಳ ವಸತಿಗೂ ಬೇಕಾದಷ್ಟು ಸ್ಥಳವುಂಟು. ಈಮೂರು ಒಕ್ಕಲತನದ ಹೆಚ್ಚು ಕ್ಷೇತ್ರ ಇಲ್ಲಿರುವದರಿಂದ, ಇಂಗ್ಲಿಷದಲ್ಲಿ ಶಿಕ್ಷಣ ಹೊಂದಿದ ಅನೇಕ ಗ್ರ್ಯಾಜ್ಯುಯೇಟರು ದೊರೆಯುವ ಸಂಭವ ಉಂಟಾದರೆ ಪ್ರೊಫೇಸರರಾಗಿ ಕಲಿಸುವಂತೆ ವ್ಯವಸ್ಥೆಗೊಳಿಸಬಹುದು. ಟ್ರೇನಿಂಗ ಕಾಲೇಜ ಮತ್ತು ಈ ಕಾಲೇಜ ಒಂದು ಮಾಡಿ, ಎರಡು ವಿಷಯಗಳಲ್ಲಿ ಅನೇಕ ಜನ ಶಿಕ್ಷಕರನ್ನು ಪ್ರತಿವರ್ಷ ಸಿದ್ಧ ಮಾಡಬಹುದು.

ಶಿರಸಂಗಿಯ ದೇಸಾಯರು ತಮ್ಮ ಮೃತ್ಯುಪತ್ರದಲ್ಲಿ ಒಕ್ಕಲತನದ ಶಿಕ್ಷಣಕ್ಕೆ ಮಹತ್ವ ಕೊಟ್ಟಿದ್ದಾರೆ. ಇಲ್ಲಿ ಮಾರಾಟ ಧಾಡಿಸ ಕೆಲ ಭಾಗವು ಉಳಿದಿದೆ. ಮತ್ತು ನಾಲ್ಕು ಜಿಲ್ಲೆಗಳ ಲೋಕಲ ಬೋರ್ಡಿನವರೂ ದ್ರವ್ಯಸಹಾಯ ಮಾಡಬಹುದು. ಈ ರೀತಿಯಾಗಿ ಕಾಲೇಜ ಸ್ಥಾಪನೆಗೆ ಸರಕಾರಕ್ಕೆ ದುಡ್ಡಿನ ಅಡಚಣೆಯುಂಟಾಗಲಾರದು.

ರಾವಸಾಹೇಬ ಶಿರಹಟ್ಟಿಯವರು ಕನ್ನಡ ಕಾಲೇಜ ಸ್ಥಾಪನೆಯ ವಿಷಯದಲ್ಲಿ ಸರಕಾರವು ಜಾಗ್ರತವಾಗುವಂತೆ ಪ್ರಯತ್ನ ಮಾಡಿದ್ದು ರಾವಸಾಹೇಬರ ದೇವಪ್ಪ ಶ್ರೀನಿವಾಸರಾಯರು ಮುಂತಾದವರು ಸಹ ಹೀಗಲ್ಲದೆ, ಕರ್ನಾಟಕ ಕಾಲೇಜದ ಮುಂದೆ ಪ್ರಸ್ತಾಪ ಮಾಡಿ, ಯಶಸ್ವಿ ದಿವಾನಬಹಾದ್ದೂರರಿಗಿಂತ ರಾವಸಾಹೇಬರಿಗೆ ವಿಶೇಷ ಅನುಕೂಲ ಪರಿಸ್ಥಿತಿಯುಂಟು ಅವರು ಕೊನೆಗಾಣಿಸುವ ಧೈರ್ಯ ಸಿದ್ಧತಾಹಿಯಾಗತಕ್ಕದ್ದೆಂದು ಸೂಚಿಸುತ್ತೇವೆ.

ವ್ಯಸನಗಕ್ಕೆ ಎರಡು ಕಡೆಯಿಂದ ಪೆಟ್ಟು.

ಉದ್ವೇಶ ಬೇಡ, ಸಿಟ್ಟಿನಿಂದ!!

[—[೧] –]

ಬಂಗಾಲದಲ್ಲಿ ಹಿಂದಿನ ಎರಡು ಕೌನ್ಸಿಲಗಳಲ್ಲಿ ಮಂತ್ರಿಗಳಲ್ಲಿ ವಿಶ್ವಾಸವಿಲ್ಲೆಂದು ಬಹುಮತದಿಂದ ಠರಾವು ಪಾಸಾಗಿ, ಸರಕಾರದ ಸುಧಾರಣೆಗಳಿಗೆ ತಿಲಾಂಜಲಿ ಕೊಟ್ಟಿತು. ಮೂರನೆಯ ಅಂದರೆ ಈಗ ನಡೆದಿರುವ ಕೌನ್ಸಿಲದಲ್ಲಿ ಸ್ವರಾಜ್ಯ ಪಕ್ಷದ ಬಹುಮತವಾಗಿ, ಮಂತ್ರಿಗಳು ರಾಜೀನಾಮೆ ಕೊಡುತ್ತಿದ್ದಾರೆ, ಇವರಿಗೂ ಎಷ್ಟು ಬೇಗ ಎಂತೆನಿಸುತ್ತದೆಂದು, ಹೀಗಾಗಿ ಇವರಿಗೆ ಹಾಳ ವೆ ಕಷ್ಟಕಾಲ ಬಂದಿದೆ.

ಸರ ಅಬ್ದುಲ ರಹಿಮಾನಸಾಹೇಬರು ತಮಗೆ ಬಹುಮತವಿಲ್ಲದಿದ್ದರೆ, ಬಹುಮತ ಮಾಡಿಕೊಳ್ಳುತ್ತೇನೆಂದು ದಿವಾನಗಿರಿಯನ್ನು ಅಂಗೀಕರಿಸಿ, ಮೂರೇ ದಿವಸ ಆಳಿ, ರಾಜೀನಾಮೆ ಕೊಟ್ಟುಬಿಟ್ಟರು. ಇಂಗು ಇವರು ಪಾಣಿಗಳಲ್ಲಿನ ರಾಜಕೀಯ ಮಂತ್ರಿಮಂಡಲದ ಮರಿಯಾದೆ ಹಿಂಥ ತೊಟ್ಟಿದ್ದಾರೆ.

ಪೋಲೀಸರು ಕಾಲಕಟ್ಟೆಯಲ್ಲಿ ಮುಸಲ್ಮಾನರ ಮೇಲೆ ಗುಂಡು ಹಾಕಿ, ಅನೇಕರನ್ನು ಯಮಸದನಕ್ಕೆ ಅಟ್ಟಿದ್ದಾರೆ. ಅನೇಕರನ್ನು ಸೆರೆಗಾಯ

ಮಾಡಿ ಕೆಡವಿದರು. ಈ ಬಗ್ಗೆ ಕಮೀಶನ ನೇಮಿಸಿ ವಿಚಾರಣೆ ಮಾಡಬೇಕೆಂದು ಸರಕಾರಕ್ಕೆ ಅರ್ಜಿಯನ್ನು ಮಾಡಿದರು. ಕೌನ್ಸಿಲದಲ್ಲಿ ಠರಾವು ತಂದರು. ಆದರೆ ಸರಕಾರವು ಇವರ ಬೇಡಿಕೆಗೆ ಮಂಪ್ರೂ ಕೊಡಲಿಲ್ಲ. ಉತ್ತರವನ್ನೂ ಕೊಡಲಿಲ್ಲ. ಸರಕಾರವು ತನ್ನ ಠರಾವನ್ನು ಉಪೇಕ್ಷೆ ಮಾಡಿದ್ದರ ಮುಯ್ಯ ತೀರಿಸಿಕೊಳ್ಳಬೇಕೆಂದು ಮುಸಲಮಾನರು ಮಂತ್ರಿಗಳಲ್ಲಿ ವಿಶ್ವಾಸವಿಲ್ಲೆಂದು ಸ್ವರಾಜ್ಯ ಪಕ್ಷೀಯರಿಗೆ ಅನುಕೂಲವಾಗಿ ಮತ ಕೊಡಬೇಕೆಂಬ ನಿರ್ಧಾರ ಮಾಡಿದ್ದಾರೆ.

ಸ್ವರಾಜ್ಯವಾದಿಗಳ ಮುಖ್ಯ ವಿಚಾರವು ಮಂತ್ರಿಗಳನ್ನು ಮನೆಗೆ ಅಟ್ಟುವದುಂಟು. ಅದು ಯಾವ ರೀತಿಯಿಂದಾದರೂ ಅಡ್ಡಿಯಿಲ್ಲ. ಮುಸಲಮಾನರು ಸರಕಾರದ ಮೇಲೆ ಕೋಪಿಸಿದ್ದು ಇವರಿಗೆ ಪಥ್ಯವಾಗಿದೆ. ಕೌನ್ಸಿಲ ಕೂಡಿದ ಕೂಡಲೆ ಮಂತ್ರಿಗಳಲ್ಲಿ ವಿಶ್ವಾಸವಿಲ್ಲ; ಅವರನ್ನು ಮನೆಗೆ ಅಟ್ಟಬೇಕೆಂಬ ಠರಾವ ಬರುವದು. ಇದರ ಪರಿಣಾಮವನ್ನು ಬರುವ ವಾರದಲ್ಲಿ ಕೇಳಬಹುದು.

ವಕೀಲರ ಮೇಲೆ ನೋಟೀಸು.

—o—

ಹತ್ತಿಕಟ್ಟಿ ಸಾವಿರದ ಜವಾಬು.

—o—

ಅಕೋಲೆ ಜಿಲ್ಹೆಗೆ ಸೇರಿದ ಸಾಂಗವಿ ಎಂಬ ಗ್ರಾಮದಲ್ಲಿ ಹಿಂದೂ ಮುಸಲಮಾನರ ದಂಗೆಯಾಯಿತು. ದಂಗೆಯಲ್ಲಿ ಒಬ್ಬ ಮುಸಲಮಾನನು ಸತ್ತಿದ್ದಾನೆ. ಈತನ ಮರಣಕ್ಕೆ ಅಪ್ರತ್ಯಕ್ಷವಾಗಿ ಕಾರಣರೆಂದು ಸರಕಾರದವರು ಮೂವರು ವಕೀಲರ ಮೇಲೆ ಸಾರ್ವಜನಿಕ ಶಾಂತತಾಭಂಗದ ಆರೋಪ ಹೊರಿಸಿ, ಹತ್ತಿಕಟ್ಟಿ ಸಾವಿರದ ಜಾಮೀನು ಮುಚ್ಚಳಿಕೆ ಕೇಳಿದ್ದಾರೆ. ಕೊಲೆಯ ಆರೋಪದಿಂದ ಕೆಲವರನ್ನು ಹಿಡಿದಿದ್ದಾರೆ. ಇವರಲ್ಲಿ ಒಬ್ಬರು ಕೌನ್ಸಿಲದ ಮಾಜೀ ಮೆಂಬರರಾಗಿದ್ದಾರೆ.

ಇಂಗ್ಲಂಡ- ಜರ್ಮನಿ ಮತ್ತು ಅಮೇರಿಕೆಯ ಒಪ್ಪಂದ.

—o—

ಇನ್ನು ಮುಂದೆ ಜಗತ್ತಿನಲ್ಲಿ ಬಲಾಬಲ ಕಾಯ್ದುಕೊಳ್ಳುವ ಕೃತ್ಯದಲ್ಲಿ ಇಂಗ್ಲಂಡ, ಜರ್ಮನಿ ಮತ್ತು ಅಮೇರಿಕೆಯು ಸೇರಿ ಸಂಘಶಕ್ತಿಯನ್ನು ಒಟ್ಟು ಮಾಡಿಕೊಳ್ಳುವವೆಂದು ಆಸ್ಟಿನ ಚೆಂಬರ್ಲೇನರು ಲಂಡನದಲ್ಲಿ ಭಾಷಣ ಮಾಡಿದ್ದಾರೆ. ಇವರು ಇಷ್ಟು ಬಲಿಷ್ಠರಾದರೂ ಪ್ರೀತಿ ಮತ್ತು ಸಹೋದರ ಭಾವದಿಂದಲೇ ಜಗತ್ತಿನಲ್ಲಿ ನಡೆಯುವರೆಂದು ಹೇಳುತ್ತಾರೆ. ಇದು ಮಾತ್ರ ಶಕ್ಯವಲ್ಲ. ಪ್ರೀತಿ ಮತ್ತು ಬಂಧುಭಾವದ ಉಪದೇಶವು ಗುರುವಿನ ಕೆಲಸವು. ಬಲವಂತಿಕೆಯಿಂದ ಬೇರೆಯವರನ್ನು ಹಂಗಿನಲ್ಲಿಯೂ ಅಧೀನದಲ್ಲಿಯೂ ಇಟ್ಟುಕೊಳ್ಳುವದು ರಾಜರ ಕೆಲಸವು. ರಾಜರು ಪ್ರೀತಿ ಮತ್ತು ಬಂಧುತ್ವದ ಉಪದೇಶದಿಂದ ಜಗತ್ತಿನಲ್ಲಿ ಮೆರೆಯುವವರಾದರೆ- ದಂಡು ಮಾರ್ಬಲವೇತಕ್ಕೆ ಬೇಕು?

ಸಿಂಧದಲ್ಲಾದ ಹಾನಿಯು-

ಸಿಂಧು ದೇಶದಲ್ಲಿ ಅತಿವೃಷ್ಟಿಯಿಂದ ಗುಜರಾಥದಂತೆಯೇ ಕೇಡಾಗಿದೆ. ೨೨ ಸಾವಿರ ದನಗಳು ಸತ್ತವು. ಇವುಗಳ ಬೆಲೆಯು ೧೦ ಲಕ್ಷವಾಗುತ್ತದೆ. ಬೆಳೆಯ ಹಾನಿಯೂ ಇಷ್ಟೇ ಆಗಿದೆ. ಮನೆ ಬಿಗಾಡ ಕೇಡಿನ ಅಂದಾಜು ೧೫ ಲಕ್ಷ ಮಾಡಲ್ಪಟ್ಟಿದೆ ವಿರಸೂರಜಾಗದಲ್ಲಿ ಐದು ಲಕ್ಷದ ಹಾನಿಯಾಗಿದೆ. ಆಗಳಿಯ ಅನೇಕ ಜಿಲ್ಹೆಗಳೂ ಪ್ರಾಂತಗಳೂ ಹಾನಿಗೆ ಗುರಿಯಾಗಿವೆ. ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಕಲೆಕ್ಟರ ಮತ್ತು ಇಂಜಿನಿಯರನ ಹುಕುಮನ್ನು ಅಮಾನ್ಯ ಮಾಡಿ, ರೇಲ್ವೆಯ ದಾರಿಯನ್ನು ಒಡೆಸಿದ್ದರಿಂದ ಊರು ಉಳಿಯಿತು. ಇಲ್ಲವಾದರೆ- ಇಡೀ ಊರು ನಾಶವಾಗುತ್ತಿತ್ತು.

ಒಳಸಂಚು ಹೊರಬಿತ್ತು-

ಮೊರೋಕೊತ್ತೆ ದಂಡು ಮದ್ದು ಗುಂಡು ಕಳಿಸಿ, ಫ್ರಾನ್ಸದ ವಸಾಹತುಗಳನ್ನು ಕಳೆಯಬೇಕೆಂದು, ಪಾರೀಸ, ಬರ್ಲಿನದಲ್ಲಿರುವ ರಶಿಯಾದ ರಾಯಭಾರಿಗಳೂ, ಇಂಗ್ಲಂಡದಲ್ಲಿರುವ ಒಬ್ಬ ಪ್ರಸಿದ್ಧ ಬೊಲ್ಶೆವಿಕನೂ ಒಳಸಂಚು ಮಾಡಿದ್ದಾರೆಂಬ ಗುಪ್ತ ಸಂಗತಿಯನ್ನು ಪಾರೀಸದ ಒಂದು ಪತ್ರವು ಪ್ರಕಟಮಾಡಿದೆ.

ಜಸ್ಟಿಸ ಪಕ್ಷ ಒಡೆಯಿತು-

ಮದ್ರಾಸದ ಬ್ರಾಹ್ಮಣೇತರ ಪಕ್ಷಕ್ಕೆ ಸೇರಿದ್ದ ಮೂವರು ಕೌನ್ಸಿಲ ಮೆಂಬರರಾದ ಮೆಸರ್ಸ ರಾಮಚಂದ್ರ ಪಂಡ್ಯಾಜಿ, ಕುಪ್ಪುಸ್ವಾಮಿ ಐಯ್ಯರ, ದೊರೆಯುರಾಜಾ ಇವರು ಈ ಪಕ್ಷ ಬಿಟ್ಟು, ಮಂತ್ರಿಗಳ ಸ್ವತಂತ್ರ ಪಕ್ಷ ಸೇರಿದರು. ಹೀಗೆಯೇ ಜಸ್ಟಿಸ ಪಕ್ಷವು ಕರಗಿ, ಹೇಳಿಕೆ ಹೆಸರಿಲ್ಲದೆ ಹೋಗುವದೆಂದು ನಿರೀಕ್ಷಿಸಬಹುದಾಗಿದೆ.

ಬರೆದು ಬಂದದ್ದು-

ನವಲಗುಂದ ತಾಲೂಕ ಕಾಲವಾಡದಲ್ಲಿ ಬಡ ವಿದ್ಯಾರ್ಥಿಗಳಿಗಾಗಿ ಫ್ರೀ ಬೋರ್ಡಿಂಗವುಂಟು. ಉತ್ತಮ ರೀತಿಯಿಂದ ನಡೆಸ ವಾಚನಾಲಯವುಂಟು. ಈ ಊರು ನೋಡತಕ್ಕಂಥದ್ದಾಗಿದೆ. ಮಿ. ನಾಗನಗೌಡಾ ಪಾಟೀಲ ಮತ್ತು ಹೆ|| ಮಾ|| ಮಿ. ತಿಮ್ಮಾಜಿ ಕುಲಕರ್ಣಿ ಇವರು ಇವುಗಳ ಮೂಲ ಉತ್ಪಾದಕರಾಗಿದ್ದಾರೆ. ಈ ಊರ ಶಾಲೆಯಲ್ಲಿ ಇನಾಮು ಕೊಡುವ ಸಮಾರಂಭವಾಯಿತು. ಶ್ರೀ ನಾಗನಗೌಡರು ಅಧ್ಯಕ್ಷರಾಗಿದ್ದರು. ಅಗ್ಗಿ ಐವನೇ ಸುಪರಿಂಟೆಂಡೆಂಟರಾದ ಮಿ. ಮುಂಡೂರ ಇವರ ಸಮಯೋಚಿತ ಭಾಷಣವಾಯಿತು. ವೆ|| ತಿಪ್ಪಣ್ಣಯ್ಯಾ ಹಿರೇಮಠ ಇವರು ಇನಾಮು ಹಂಚಿದರು ಅಲ್ಲಿಂದ ಬಂದ ಪತ್ರದ ಸಾರಾಂಶವಾಗುತ್ತಿದೆ.

ವಿವಿಧ ವರ್ತಮಾನಗಳು.

ಹಾಯಿನ್ನ ಗನಿಹಾಡಿಯಿಂದ ಹೊರಗೆ ಹತ್ತಿದಂಥ ಹಿಂದೂ ಜನರ ವಿಷಯವಾಗಿ ವಿಚಾರ ಮಾಡಲು- ಆ ಗಡಿಯ ಅಧಿಕಾರಿಯಾದ ಸರ ನಾರಾಯಣರಾವ ಪಂಡಿತರು ಪ್ರಮುಖರನ್ನು ಪೇಶಾವರಕ್ಕೆ ಕರಿಸಿದ್ದಾರೆ.

ಫಜಲಲ್ಲಿ ಕುರಬಾನನೆಂಬವನು ಮುಹಾಜಿರ ಮಾಡಿ, ಕಾಬೂಲ ಮಾರ್ಗವಾಗಿ ಮಾಸ್ಕೋ ಪಟ್ಟಣಕ್ಕೆ ಹೋಗಿ, ಅಲ್ಲಿಯ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಹೊಂದಿ ಹಿಂದುಸ್ಥಾನಕ್ಕೆ ಬಂದನು ಈತನ ಮೇಲೆ ರಾಜದ್ರೋಹದ ಆರೋಪ ಹೊರಿಸಿ, ಅಬಟಾಬಾದಿನ ಜಡ್ಜರು ಈತನಿಗೆ ಐದು ವರ್ಷಗಳ ಶಿಕ್ಷೆ ವಿಧಿಸಿದರು.

ಬಡೋದೆಯ ಗಾಯಕವಾಡ ಮಹಾರಾಜರವರು ರಿಲೀಫ ಫಂಡಿಗಾಗಿ ಈ ಮೊದಲು ಕೊಟ್ಟ ಹತ್ತು ಸಾವಿರವಲ್ಲದೆ, ಪುನಃ ೫೦,೦೦೦ ರೂಪಾಯಿ ಕೊಟ್ಟಿದ್ದಾರೆ.

ಒರ್ವ ಬಂಗಾಲ ರಾಜಕೀಯ ಕೈದಿಯನ್ನು ಪಂಜಾಬದ ಮಿಯಾನವಾಲಿಗೆ ಕಳುಹಿದ್ದಾರೆ. ಈತನ ಮೇಲಿನ ವಾರ್ತೆಗಳ ಕಾರಣವಾಗಿ ದ್ದಾರೆ. ತಮ್ಮ ಭಾಷೆಯ ಹೊರತು ಯಾವ ಭಾಷೆಯೂ ಬರುವದಿಲ್ಲ. ಕೈದಿಯು ಇತರ ಕೂಡ ಕೈಸನ್ನೆ- ಬಾಯಿ ಸೊನ್ನೆಯಿಂದಲೇ ಎಲ್ಲ ವ್ಯವಹಾರ ಮಾಡಬೇಕಾಗಿದೆ. ಬಂಧಿಯಿದ್ದವನು ಮೂಕನಾಗಿದ್ದಾನೆ.

---

೫೦ ರೂಪಾಯಿ ಸಂಬಳದೊಳಗಿನ ಎಲ್ಲ ಸರಕಾರೀ ಕಾಮದಾರರಿಗೆ ಬಡ್ತಿಯನ್ನು ಕೊಡ

ಸೆಯಿಂದ ಒಬ್ಬ ಹುಡಿಗೆಯ ಕೊಲೆ ಮಾಡಿದ ಅಪ ರಾಧಕ್ಕಾಗಿ ಧಾರವಾಡದ ಸೆಶನದಲ್ಲಿ ಗಲ್ಲಿನ ಶೀಕ್ಷೆ ಯಾಗಿತ್ತು. ಇದರ ಮೇಲೆ ಹಾಯಕೋರ್ಟಿಗೆ ಅ ಪೀಲು ಮಾಡಿದನು. ಬ್ರಮ್ಹಲಿಂಗಪ್ಪನು ೨೦ ವ ರ್ಷದವನು. ಈತನ ಪ್ರಾಯದ ಕಡೆಗೆ ಲಕ್ಷ್ಯಗೊ ಟ್ಟು ನ್ಯಾಯಮೂರ್ತಿಗಳು ಗಲ್ಲಿನ ಶೀಕ್ಷೆ ರದ್ದು ಮಾಡಿ, ಆಜನ್ಮ ಕರೇ ನೀರಿನ ಶೀಕ್ಷೆ ವಿಧಿಸಿದ್ದಾರೆ.

ವಿವಿಧ ವರ್ತಮಾನಗಳು.

—೦—

ಬಂಗಾಲ ಇಲಾಖೆಗೆ ಸೇರಿದ ಕೊಮಿಲಾ ಪ ಟ್ಟಣದ ಹತ್ತರಿರುವ ರಾಜಪಾರಾ ಎಂಬ ಗ್ರಾಮ ದಲ್ಲಿ ಗೋಕುಲಷ್ಟಮಿಯ ದಿವಸ ಹಿಂದೂ ಮುಸಲ ಮಾನ ದಂಗೆಯಾಗಿ, ಒಬ್ಬ ಮುಸಲಮಾನನು ಸತ್ತ ನು. ಇಬ್ಬರು ಮುಸಲಮಾನರು ಭಯಂಕರವಾಗಿ ಪೆಟ್ಟು ತಿಂದಿದ್ದಾರೆ.

ಪ್ಯೊಲಾನಾ ಅಕ್ತಬಂಧು ದ್ಯಯರು ಕಲಕ ತ್ತೆಗೆ ಹೋಗಿದ್ದಾರೆ.

ಶ್ರೀರಂಗಪಟ್ಟಣಕ್ಕೆ ಒಂದು ಹುಲಿಯು ಬಂ ದು ಬೋಳದ ನಿಲುವಿನಲ್ಲಿ ಅಡಗಿಕೊಂಡು, ಒಬ್ಬನ ನ್ನು ಕೊಂದಿತು. ಅನೇಕರನ್ನು ಘಾಯಪಡಿಸಿದೆ

ಮುಂಬಯಿಯ ಸಕ್ಕರೆಯ ದೊಡ್ಡ ವ್ಯಾಪಾ ರಿಯಾಗಿದ್ದ ಮಿ. ಯುಸುಫ ಅಜಮಾಲೆಂಬವರು ಮೂ ರು ಲಕ್ಷದ ದಿವಾಳಿ ತೆಗೆದಿದ್ದಾರೆ.

ಮುಂಬಯಿಯಲ್ಲಿ ಕೂಡುತ್ತಿರುವ ಗುಜರಾಥ ರಿಲೀಫ ಫಂಡು ಏಡು ಲಕ್ಷದ ಮೇಲೆ ಹೋಗಿದೆ.

ಮುಂಬಯಿ ಪ್ರಾಂತದ ಬ್ರಾಹ್ಮಣೇತರರ ಪರಿ ಷತ್ತು ಇದೇ ತಿಂಗಳ ೨೭ನೆಯ ತಾರೀಖಿನ ದಿವಸ ಮುಂಬಯಿಯಲ್ಲಿ ಬೆಳಗಾವಿಯ ಮಿ. ದಳವಿಯವರ ಅಧ್ಯಕ್ಷತೆಯಲ್ಲಿ ಸೇರುವದು.

ಕಾನ್ಸ್ಟಂಟಿನೋಪಲ ಮಾರ್ಗವಾಗಿ ಲಂಡನ ದಿಂದ ಹಿಂದುಸ್ಥಾನಕ್ಕೆ ಬರುವ ವಿಮಾನಗಳ ದಾರಿ ಮಾಡುವರು. ಇದರಿಂದ ಪ್ರವಾಸವು ೪೮ ತಾ ಸು ಕಡಿಮೆಯಾಗುವದು.

ನೋಟೀಸಿನ ಉತ್ತರ

ಶಿದ್ದ ಸೋಮ ರುದ್ರಪ್ಪ ಬಾಣಿಯವರ ಸಾಕೀನ ಕಾಮಲಾಪೂರ ತಾಲೂಕ ಧಾರವಾಡ ಇವ ರಿಗೆ—

ಕಳಿಗೆ ಸಹೀ ಮಾಡುವ ರುದ್ರಪ್ಪಾ ತಂದಿ ಚನ್ನಬಸಪ್ಪಾ ಬಾಣಿಯವರ ಸಾಕೀನ ಚಾವಡಿ ಪೇಟ ಈತನು ನಿನಗೆ ಈ ನೋಟೀಸಿನಿಂದ ಉತ್ತರ ಕೊಡುವದೇನಂದರೆ—

ನೀನು ಕೊಟ್ಟ ನೋಟೀಸು ಮುಟ್ಟಿತು ಅ ದರೊಳಗೆ ಬರೆದ ಮಜಕೂರು ಸುಳ್ಳು ಅದೆ ನಾನು ಎರಡನೆಯವಳನ್ನು ಉಡಿಕೆ ಮಾಡಿ ಕೊಂಡದ್ದು ಖರೆ. ನೀನು ಸರಿಯಾಗಿ ಬಾಳವೆ ಮಾ ಡದ್ದರಿಂದ ಅನಿವಾರ್ಯವಾಗಿ ಉಡಿಕೆ ಮಾಡಿಕೊಂ ಡೆನು. ನಾನು ಯಾವಾಗಲು ನಿನ್ನ ಕೂಡ ಪ್ರ ಪಂಚ ಮಾಡಲಿಕ್ಕೆ ಸಿದ್ಧನಿದ್ದೇನೆ ಪತ್ನಿವ್ರತ್ತ ನಾ ರಿ ಈ ಮಜಕೂರು ನಿನಗೆ ಹೇಳಿದ್ದೇನೆ ನಿನ್ನ ತಾ ಯಿತಂದಿಗೆ ಹೇಳಿದ್ದೇನೆ ಗಂಡನಿಗೆ ಎರಡನೆ ಮದಿ ವೆ ಮಾಡಿಕೊಳ್ಳುವಂತೆ ಧರ್ಮಶಾಸ್ತ್ರದಿಂದ ಅಧಿ ಕಾರವುಂಟು. ಇದಕ್ಕೆ ನೀನು ತಕರಾರ ಮಾಡಲಿ ಕ್ಕ ಕಾರಣವಿಲ್ಲ ನಿನ್ನ ಕೂಡಾ ಸುರಳೀತ ರೀತಿ ಯಿಂದ ನಡೆದಂತಾಯಿತು ನೀನು ನನ್ನ ಮನಿಗೆ ಬಂದು ಬಾಳವೆಯಂತಿಯಾಗಿರಬೇಕು ನಿನಗೆ ನಾನು ನೋಟ ಪತ್ರ ಕೊಟ್ಟ ತರುವಾಯ ಉಡಿಕೆ ಮಾಡಿಕೊಳ್ಳಲಿಕ್ಕೆ ಅಧಿಕಾರವಿಲ್ಲ ಕಾಯದೆ ಬಲ್ಲವರನ್ನು ಕೇಳಿಕೊ ಬರ ನೀನು ನನ್ನ ಮನೆಗೆ ಬರದೆ, ಎರಡನೆಯವನ ನ್ನು ಉಡಿಕೆ ಮಾಡಿಕೊಂಡರೆ ನಿನ್ನ ಮೇಲೂ ನಿ ನ್ನ ಉಡಿಕೆಯ ಗಂಡನ ಮೇಲೂ ವ್ಯಭಿಚಾರದ ಆ ರೋಪವಿಟ್ಟು, ಫೌಜದಾರಿಯಲ್ಲಿ ಫಿರ್ಯಾದಿ ಮಾಡು ವೆನು ಅಂತಾ ಕೊಟ್ಟ ಉತ್ತರಾ

ತಾ|| ೨೨ ಆಗಸ್ಟ ೧೯೨೭ ನೇ ಇಸವಿ

ಸಹಿ— ರುದ್ರಪ್ಪಾ ಚನ್ನಬಸಪ್ಪಾ ಬಾಣಿ

ಧಾರವಾಡ ಡಿಸ್ಟ್ರಿಕ್ಟ ಲೋಕಲಬೋರ್ಡ ಕಚೇರಿಯಿಂದಾ

ನೋಟೀಸು.

(೧) ನವಲಗುಂದ ತಾಲೂಕ ಕಲವಡಿ ಹೆಣ್ಣು ಮಕ್ಕಳ ಶಾಲೆಯ ಸ್ಪೇಶಲ್ ರಿಪೇರಿ ಕೆಲಸವನ್ನು ಇದೇ ವರ್ಷ ಮಾಡಿಸತಕ್ಕದ್ದದೆ. ಈ ಕೆಲಸದ ಕಂಟ್ರ್ಯಾಕ್ಟ ಹಿಡಿಯತಕ್ಕವರು ಮಿ|| ಇಂಜನಿಯರ ಸಾಹೇಬ ಡಿಸ್ಟ್ರಿಕ್ಟ ಲೋಕಲಬೋರ್ಡ ಧಾರವಾಡ ಇವರ ಕಡೆಗೆ ಮೋಹರ ಬಂದ ಟೆಂಡರ ಅರ್ಜಿಯನ್ನು ಇದೇ ತಿಂ ಗಳ ತಾರೀಖು ೩೧ ರ ವಳಗಾಗಿ ಬಂದು ಮುಟ್ಟುವಂತೆ ಕಳಿಸಿ ಕೊಡಬೇಕು. ಟೆಂಡರ ಮಂಜೂರ ಆದ ಕೂಡಲೆ ಒಂದು ರೂಪಾಯಿ ಸ್ಟಾಂಪಿನ ಮೇಲೆ ಬಾಂಡ ಬರಕೊಡಬೇಕು ನ ಅಗ್ಗಾನೆ ೧೦೦ಕ್ಕೆ ೧ ರ ಪ್ರಮಾಣದಂತೆ ಡಿಪಾಜಿಟ್ ಇಡಬೇಕು. ಈ ಕೆಲಸದ ಬಾಬತು ಪ್ಲ್ಯಾನ್ ಎಸ್ಟಿಮೇಟ ಇಂಜನಿಯರ ಕಚೇ ರಿಯಲ್ಲಿ ಆಫೀಸ ವೇಳೆಯಲ್ಲಿ ನೋಡಲಿಕ್ಕೆ ಸಿಗುವವು ಕೆಲಸವು ೧೩೦೩ ರೂಪಾಯಿದ್ದು ಇರುತ್ತದೆ.

ಧಾರವಾಡ
ತಾರೀಖು ೧೬-೮-೧೯೨೭

C. C. HULKOTI.
ಪ್ರೆಸಿಡೆಂಟ ಡಿ. ಎಲ್ ಬಿ.

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥ ಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಬಂದು ಪ್ರಾಣ ಉಳಿದಿರುವರು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗ ಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಚಿತ್ತೂರ, ಜಿಲ್ಲಾ ಬೆಳಗಾವ.

NATIONAL TELEGRAPH SCHOOL.

2 Club Road, DELHI

Conducted by R. . larke M. B. E

Dy. Postmaster General [Retd

Results Guaranteed.

Prospectus for 2 annas Stamps.

[Quote No. 1831]

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾ ಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರು ವ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿ ಮು ದ್ರಿಸಿ ಪ್ರಸಿದ್ಧ ಮಾಡಿದನು.

R. N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮} ಧಾರವಾಡ ಬುಧವಾರ ತಾರೀಖು ೨೪ ನೇ ಆಗಸ್ಟ ೧೯೨೭ {ಸಂಚಿಕೆ ೧೬೧

ಕಿರ್ಲೋಸ್ಕರ ಶೇಂಗಾ [ಭೈಮೂಗು] ಒಡೆಯುವ ಯಂತ್ರಗಳು

ಈ ಯಂತ್ರಗಳು ಎರಡು ವಾದರಿಯವು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಸಣ್ಣಾದವು. ಚೌಟ್ಟು ಗಟ್ಟಿಯವು. ಕೊಟ್ಟನ್ನು ಘೂಡಿಸಲು ಯಂತ್ರದಲ್ಲಿ ಜಾಳಿಗೆಯನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿಬೇರೆ ಬೀಳುತ್ತವೆ. ಈ ಯಂತ್ರಗಳು ಕಳೆದ ಹಂಗಾಮದಲ್ಲಿ ಬಹು ಉಪಯೋಗಿಯಾಗಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಶೇಂಗಾ ಒಡೆದು ಮಾರಾಟ ಮಾಡತಕ್ಕವರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯವಶ್ಯಕವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ವಿಜಯ ಪುಸ್ತಕಾಲಯ.

—೦—

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ಲೋಕಮಾನ್ಯ ಟಿಳಕರ ಚರಿತ್ರೆ	೪ ,,
ದೇಶಬಂಧು ದಾಸರ ಚರಿತ್ರೆ	೩ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ವ ಸ್ತು ಟಪಾಲ ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೀತಿ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ೮ ಗೆ ಮೂ ೧೨ ರ— ೪೦ ಗ ಪ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಖಾಯಮ್ ಕಾಲಿಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಿದುಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೇ ಇಟ್ಟುಕೊಳ್ಳುವ ಒಡ್ಡಿಯ ದರವು ನೂರಕ್ಕೆ ತಿಂಗಳ ಹನ್ನೆರಡು ಆಣೆಯಿಂದ ಇರುತ್ತದೆ.

ಎ. ಕ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಸಂದಾದಾರರಿಗೆ ಸೂಚನೆ.

ಆಗಸ್ಟ ೧೫ರಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮ್ಮ ಕಾಣ್ಕೆ ಕಾರಣ ಬಾಕೀದ ಸಂದಾದಾರರ ಹೆಸರಿಗೆ ವ್ಹಿ. ಪಿ. ಯನ್ನು ಕಳಿಸುವೆವು. ಸಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ಹಣವನ್ನು ಪೂರೈಸಬೇಕೆಂದು ವಿನಂತಿ

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

—೦—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಸಹಕಾರಿ ಕಂಪನಿಗಳಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೇಂದಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುತ್ತಿರುವದು. ಕರಾರಿನ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಿಕೊಳ್ಳಬೇಕು

ಪಾಂಡುರಂಗರಾವ ಬಿ. ಜಠಾರ,
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೨೪-೮-೩೨ ನೇ ಇಸ್ವಿ

ಮುದುಕನ ಮದಿವೆಯ ಮೋಜು!!

ಮೊನ್ನೆ ಸೋಮವಾರ ಪ್ರಾತಃಕಾಲದ ಹತ್ತು ಗಂಟೆಯ ಸಮಯದಲ್ಲಿ ಧಾರವಾಡ ಮಂಗಳವಾರಪೇಟೆಯಲ್ಲಿರುವ ಶ್ರೀ ವೆಂಕಟೇಶದೇವರ ಗುಡಿಯಲ್ಲಿ ಒಂದು ಜರಠ ಬಾಲಿಕಾ ವಿವಾಹವಾಯಿತು. ಈ ಮದಿವೆಯು ಸಂದಿಗೊಂದಿಯಲ್ಲಿ ಅಪ್ರಸಿದ್ಧ ಕುಟುಂಬದಲ್ಲಾಗಲಿಲ್ಲೆಂದು ಯಾರಿಗೆ ತಾನೆ ಅನಿಸುವದು. ಏಕಂದರೆ- ಜರಠ ಬಾಲಿಕಾ ವಿವಾಹವು ದೈವಜ್ಞರಲ್ಲಿಯೇ ಆಗುವದುಂಟು. ವರನ ಹೆಸರು ಭೀಮಾಚಾರ್ಯ ವೇದಶಾಸ್ತ್ರ ಸಂಪನ್ನರಾದ ಪಂಡಿತ ರಂಗಾಚಾರ್ಯ ಪಾಂಡುರಂಗಿಯವರ ಜಿರಂಜೀವರು ಈ ಆಚಾರ್ಯರು ಶ್ರೀ ವ್ಯಾಸರಾಜ ಮಠದ ದಿವಾನರಾಗಿದ್ದಾರೆ. ದಿವಾನರು ಶ್ರೀಗಳವರ ಬೀಗರು. ವರನು ಶ್ರೀಗಳವರ ಸೋದರಳಿಯನು. ಅಂದರೆ ಅಕ್ಕನ ಮಗನು. ಈ ಪ್ರಕಾರ ವರ ಪಕ್ಷದವರು ಶ್ರೀಮಂತರು ಮತ್ತು ಪ್ರಸಿದ್ಧ ಮನೆತನದವರು. ವಧು ಪಕ್ಷದವರು ತೀರ ಬಡವರು. ಎಲ್ಲಾದರೂ ಭಾಗ್ಯವಂತರ ಮನೆ ದೊರೆತರಾಯಿತೆನ್ನುವಂಥವರು. ಮಗಳ ಬಡತನ ಹಿಂಗಿದರೆ ಸಾಕೆನ್ನುವಂಥವರು.

ವರನ ವಯಸ್ಸು ೪೦ ಮೀರಿದೆಂದು ಹೇಳುವರು. ನೋಡಿದರೆ ಅದಕ್ಕೂ ಹೆಚ್ಚಿರಬೇಕೆಂದೆನಿಸುವದು. ಇಷ್ಟೇ ಎಂದು ಹೇಳಲಿಕ್ಕೆ ಸದ್ಯದಲ್ಲಿ ಆಧಾರ ದೊರೆಯಲಾರದು. ಏಕಂದರೆ- ಇಮನೆ ವರನ ವಯಸ್ಸನ್ನು ಮುಚ್ಚಿಡುವದು ಒಂದು ಕೆಟ್ಟ ಸಾಂಪ್ರದಾಯವಾಗಿದೆ. ಜನನದ ರಜಿಸ್ಟರದೊಳಗಿಂದ ಉತಾರ ತೆಗೆದುಕೊಂಡು ಹೇಳುವಷ್ಟು ಅವಕಾಶವಿಲ್ಲ. ಮೈಸೂರ ಮತ್ತು ಬಡೋದೆ ರಾಜ್ಯದಲ್ಲಿ ಇಂತಿಷ್ಟು ವಯಸ್ಸು ಮೀರಿದವರು ಮದಿವೆಯಾಗಬಾರದೆಂದು ಕಾಯದೆಯುಂಟು. ಆ ಕಾಯದೆಯ ಸಂತತಿಯ ಕಾಯದೆಯನ್ನು ಲೋಕಪಕ್ಷೀಯರು ಸದ್ಯದಲ್ಲಿ ಹೊರಸಿಗೆ ಕೊಡಬೇಕು. ಬೇಕಾದವರು " ಮುದುಕರಾದರೇನು ಬದುಕಿಲೆ ಸಂಪನ್ನ, ಮಗಳೇ ನಿನ್ನ ಬಡತನ ಹಿಂಗುವದೆಂದು " ಗಿರಿಯಮ್ಮನವರ ಮೇಲಿನ ಹಾಡನ್ನು ಹಾಡುತ್ತಾ ಸಂತೋಷಪಡಬಹುದು.

ವರನಿಗೆ ಆರು ಮಂದಿ ಹೆಣ್ಣು ಮಕ್ಕಳಿದ್ದಾರೆ ಒಬ್ಬಳು ಎರಡನೆಯ ಸಾರೆ ಹಡೆದು, ಒಂದು. ಒಂದೂವರೇ ತಿಂಗಳಾಗಿದೆ. ಇನ್ನೊಬ್ಬಳು ದಿನ ತುಂಬಿದವಳಾಗಿದ್ದಾಳೆ. ಮೂರನೆಯವಳು ಗಂಡನ ಮನೆಗೆ ಹೋಗುವ ಕಾಲನಿರೀಕ್ಷಣೆ ಮಾಡುತ್ತಿದ್ದಾಳೆ. ಉಳಿದ ಮೂವರು ಅಪ್ಪನ ತಲೆಯ ಮೇಲೆ ಅಕ್ಷತೆ ಬೀಳುತ್ತಿರುವಾಗ ಅಪ್ಪನನ್ನು ಅಡರಿಕೊಂಡು ಅಪ್ಪನ ಮದಿವೆಯ ಮೋಜು ನೋಡುತ್ತಿದ್ದವು ಇವರಲ್ಲಿ ಒಬ್ಬಳಂತೂ ತನ್ನ ಹೊಸ ತಾಯಿಯು- ಮಲತಾಯಿಯಷ್ಟೇ ವಯಸ್ಸಿನವಳಿರಬೇಕೆಂದು ಕಂಡುಬಂತು.

ಮದಿವೆಯು ಚುಟಕಿಯ ಸಮಾರಾಧನೆಯಷ್ಟು ಅವಸರದಿಂದಾಯಿತು. ಈ ಪ್ರಾಂತದಲ್ಲಿ ಶ್ರಾವಣಮಾಸದಲ್ಲಿ ಮದಿವೆ ಮಾಡುವ ಸಾಂಪ್ರದಾಯವಿಲ್ಲ. ಆದರೂ ಉತಾವಳಿಯಾದ ಅಳಿಯದೇವರು- ಮೊಣಕಾಲಿಗೆ ಬಾಸಿಂಗವೆನ್ನುವಷ್ಟು ಅವಸರವಾಯಿತು. ಒಮ್ಮೆ ಭೋಜನಗಲಿಯ ಮುಂದೆ ಕೂತಂಥ ವಧೂವರರು ನಾಗೋಲಿಯ ನಗ ಹೊರುವ ಮಂತ್ರ ಹೇಳಿಸಿಕೊಂಡೇ ಸ್ಥಳಾಂತರ ಮಾಡಿದರು. ಸಾಯಂಕಾಲದಲ್ಲಾಗಬೇಕಾಗಿರುವ ನಕ್ಷತ್ರದ, ಸಪ್ತರ್ಷಿ, ಅರುಂಧತಿಯ ದರ್ಶನವು ಹಗಲು ಹನ್ನೆರಡು ಗಂಟೆಯಲ್ಲಿ ಆಕಾಶದಲ್ಲಿ ಹಾಕಿದ ಗಡರು ಮೋಡಿನಲ್ಲಿಯೇ ಆಯಿತು.

ಧರ್ಮಶಾಸ್ತ್ರಕಾರರು ವಿವಾಹದ ಹಲವು ಪ್ರಕಾರಗಳನ್ನು ಹೇಳಿದ್ದಾರೆ. ವಧುವರರಿಬ್ಬರೂ ಬ್ರಾಹ್ಮಣರಾದ್ದರಿಂದ ಬ್ರಾಹ್ಮ್ಯ ವಿವಾಹವೆನ್ನಬೇಕು ಆದರೆ ವಿವಾಹದ ಮುಖ್ಯಭಾಗವಾದ ಸಪ್ತಪದಿಯು ಕ್ರಮವರಿತು ಆಗಲಿಲ್ಲ. ಸ್ವಯಂವರವೆನ್ನಬೇಕೆಂದರೆ- ಕ್ಷತ್ರಿಯರಲ್ಲ. ಪ್ರೀತಿ ವಿವಾಹವೆನ್ನಬೇಕೆಂದರೆ- ಮಾಲಿನಿಯಷ್ಟು ವಧುವು ಕಲಿತವಳಲ್ಲ. ದೊಡ್ಡವಳಲ್ಲ. ಪೈಶಾಚವೆನ್ನುವಂತಿಲ್ಲ. ಏಕಂದರೆ ತಾಯಿಯು ಒಪ್ಪಿಗೆ ಕೊಟ್ಟಿದ್ದಾಳೆ. ಗಾಂಧರ್ವವೆನ್ನಬೇಕಾದರೆ- ಹುಡುಗಿಯು ತೀರ ಚಿಕ್ಕವಳು. ಪಾಪ!! ಇನ್ನೂ ಸಮ್ಮತಿವಯದ ಕಾಯದೆಯಲ್ಲಿ ಬಂದಿಲ್ಲ. ಶಾಸ್ತ್ರೋಕ್ತವಾಗಿ ಯಾವ ವಿಧಿಗೆ ಹೊಂದಿದ ವಿವಾಹವೆಂಬದನ್ನು ಯಾರಾದರೂ ಚತುಃಶಾಸ್ತ್ರ ಪಂಡಿತರು ಹೇಳಿದರೆ- ಅನ ದವಾಗುತ್ತದೆ

ಗದಗಿನ ರಾಯಚೂರ ವಕೀಲರ ಮನೆಯಲ್ಲಿದ್ದ ಉಪವಟಳ ದೆಸೆಯಿಂದ ಆಕಾಂಡ ತಾಂಡವವಾದ ಸುದ್ದಿಯು ದೇಶದ ತುಂಬ ಹಬ್ಬಲಿಕ್ಕೆ ಕಾರಣವಾಯಿತು. ' ಆದರೆ ಈ ಇಜ್ಜೋಡು ವೃದ್ಧ ಬಾಲಿಕಾ ವಿವಾಹವು ಸಪ್ಪಳಿಲ್ಲದೆ ಆದ್ದನ್ನು ಕಂಡು ನಮಗೆ ಖೇದಾಶ್ಚರ್ಯವಾಗುತ್ತದೆ. ಶ್ರೇಷ್ಠ ಜನರು ಆಚರಿಸುವಂತೆ ಕನಿಷ್ಠರು ನಡೆಯಬೇಕೆಂದು ರೂಢಿಯು ಅನುಕೂಲ ಸಿಂಧವು. ಶ್ರೀಗಳವರ ಮನೆತನಸಲ್ಲಾದ ವಿವಾಹವೆಂದು ಎಲ್ಲರೂ ಇದೇ ರೀತಿಯನ್ನು ಅನುಸರಿಸಬೇಕೇ? ಚಿಕ್ಕ ಮಕ್ಕಳ ಪ್ರಪಂಚಕ್ಕೆ ವ್ಯತ್ಯಯ ತರುವ ವಿಧಿಯು ಅತ್ಯಂತ ಗರ್ಹಣೀಯವಾಗಿದೆಂದು ಯಾರೊಬ್ಬರು ಅನ್ನದಿರಲಾರರೆಂದು ವಿಜಯದ ಮತವು.

ನಿಜಾಮ ಹೈದರಾಬಾದಿನಲ್ಲಿ ಹಿಂದೂ ಜನರ ಚಳವಳಿಯು

ಹಿಂದೂ ಸಂಘಟನೆ ಮತ್ತು ಶುದ್ಧಿಯ ವಿರಾಟ ಚಳವಳಿಯಲ್ಲಿ ಹೈದರಾಬಾದಿನಲ್ಲಿ ಪೆಟ್ಟಿನಲ್ಲಿಯ ಜಮೀನದಾರನಾಗಿದ್ದ ವೆಂಕಟ ರಾಜೇಶ್ವರರಾಯನ ಮೃತ ಶರೀರಕ್ಕೆ ಮುಸಲಮಾನರು ಅಂತ್ಯಸಂಸ್ಕಾರ ಮಾಡಿದ ವರ್ತಮಾನವನ್ನು ಈ ಮೊದಲು ಬರೆದಿದ್ದೇವೆ. ವೆಂಕಟರಾಯನು ಗುಪ್ತವಾಗಿ ಅಬ್ದುಲ ಜಲೀಲನೆಂಬ ಹೆಸರನ್ನು ಇಟ್ಟುಕೊಂಡಿದ್ದನು. ಒಬ್ಬ ದೊಡ್ಡ ಜಮೀನದಾರನು ಮುಸಲಮಾನ ಧರ್ಮಪ್ರಕಾರ ಅಂತ್ಯ ಸಂಸ್ಕಾರ ಹೊಂದಿದ ಆನಂದದಿಂದ ಮುಸಲಮಾನರು ಹೈದರಾಬಾದ ರಾಜ್ಯದ ತುಂಬ ಮಸೀದೆಗಳಲ್ಲಿ ಪ್ರಾರ್ಥನೆ ಮಾಡಿದರು.

ಸಾಯುವತನಕ ಹಿಂದೂ ಇದ್ದ, ಮೃತ್ಯುಪತ್ರದಲ್ಲಿ ಮಾತ್ರ ಮುಸಲಮಾನರಂತೆ ದಫನವಿಧಿಯಾಗಬೇಕೆಂದು ಬರೆದಿಟ್ಟ ವೆಂಕಟರಾಜೇಶ್ವರರಾಯನ ಕೃತ್ಯವನ್ನು ನಿಷೇಧಿಸುವದಕ್ಕಾಗಿಯೂ ಇಂಥ ಕೃತ್ಯಕ್ಕೆ ನಿಜಾಮ ದರಬಾರಿನವರು ಆಸ್ಪದ ಕೊಡಬಾರದೆಂಬದಾಗಿಯೂ ಅಲ್ಲಿಯ ಹಿಂದೂ ಜನರು ಶ್ರೀ. ವಾಮನನಾಯಕರ ಅಧ್ಯಕ್ಷತೆಯಲ್ಲಿ ಪ್ರಚಂಡ ಜಾಹೀರ ಸಭೆ ಕೂಡಿಸಿದ್ದರು. ಹಾಯಕೋರ್ಟಿನ ಜಡ್ಜರಾಗಿದ್ದ ಶ್ರೀ. ಕೇಶವರಾವ ಮೊದಲಾದ ಪ್ರತಿಷ್ಠಿತ ಗೃಹಸ್ಥರು ಸಭೆಗೆ ಬಂದಿದ್ದರು. ಯಾವನೊಬ್ಬನು ಅನ್ಯ ಮತ ಸ್ವೀಕಾರ ಮಾಡಿದನೆಂದು ಒಪ್ಪಬೇಕಾದರೆ- ಆ ಪ್ರಕಾರ ರಜಿಸ್ಟರವಾಗಬೇಕು. ಇಲ್ಲವಾದರೆ ಅದನ್ನು ಒಪ್ಪಬಾರದು; ಈ ನಿಯಮದ ವಿರುದ್ಧ ಆಗುವ ವರ್ತನದಿಂದ ಹಿಂದೂ ಜನರಲ್ಲಿ ತೀವ್ರ ಅಸಂತೋಷವನ್ನು ಹುಟ್ಟಿಸಲು ಕಾರಣವಾಗಿ, ಅದರಿಂದ ಕೆಟ್ಟ ಪರಿಣಾಮವಾಗುವದೆಂದು ಸಭೆಯಲ್ಲಿ ಸರ್ವಾನುಮತದಿಂದ ಠರಾವು ಮಾಡಲ್ಪಟ್ಟಿತು.

ಎರಡು ದೊಡ್ಡ ದಿವಾಳಿಗಳು.

ಕರಾಚಿಯಲ್ಲಿ ಖುಶಾಲದಾಸ ಮುಕುಂದರಾಮ ಮತ್ತು ಪಧುಮಲ್ಲ ಛತ್ರೆಜಂದ ಎಂಬೆರಡು ವರ್ತಕ ಸಂಘಗಳು ದಿವಾಳಿ ತೆಗೆದವು. ಇವುಗಳ ದಿವಾಳಿಯಿಂದ ಅನೇಕ ಚಿಕ್ಕ ದೊಡ್ಡ ಉದ್ಯೋಗದಾರರಿಗೆ ಹೊಡತ ತಾಕು, ಅವರು ಕೋರ್ಟಿನಲ್ಲಿ ನಾದಾರಿಯ ಅರ್ಜಿಗಳನ್ನು ಮಾಡಿದ್ದಾರೆ.

ಒಂದು ಜಿಲ್ಹೆಯಲ್ಲಿ ಕರೆಗೆ ಶರಣು.

—o—

ಮದ್ರಾಸದ ಸ್ವತಂತ್ರ ಪಕ್ಷದ ಮಂತ್ರಿಯಾದ ಶ್ರೀ ಆರೋಗ್ಯಸ್ವಾಮಿ ಮೊದ್ಲಿಯಾರರವರು ಮದ್ಯಪಾನವನ್ನು ಪೂರಾ ನಿಲ್ಲಿಸುವದರಿಂದಾಗುವ ಇಷ್ಟಾನಿಷ್ಟ ಪರಿಣಾಮವನ್ನು ಪ್ರತ್ಯಕ್ಷವಾಗಿ ನೋಡುವ ವಿಚಾರದಿಂದ ನೆಲ್ಲೂರ ಜಿಲ್ಹೆಯಲ್ಲಿ ಕರೆ ಶೇಂದಿಯ ಮಾರಾಟವನ್ನು ಪೂರಾ ನಿಲ್ಲಿಸುವ ನಿಶ್ಚಯ ಮಾಡಿದ್ದಾರೆ. ಈ ವಿಷಯವಾಗಿ ಇವರು ಲೋಕಪಕ್ಷದ ವತಿಯಿಂದ ಬೇಡಿದ ಸಹಾಯವು ಮಾತ್ರ ಲೋಕ ವಿಚಿತ್ರವಾಗಿರುತ್ತದೆ. ಕರೆಯ ಅಂಗಡಿಗಳು ಒಂದಾವೇಳೆ- ಜನರು ಕದ್ದು ಕರೆ ಮಾಡುವರು ಮತ್ತು ಕುಡಿಯುವರು. ಇಂಥವರನ್ನೆಲ್ಲ ಜನರು ಹಿಡಿದುಕೊಡತಕ್ಕದ್ದು, ಅಂದರೇ ಉತ್ತಮ ಪರಿಣಾಮವಾಗುವದೆಂದು ದಿವಾನರ ಮತವು. ಕೋರಿಕೆಯಲ್ಲಿ ಈ ಪ್ರಾರ್ಥನೆಯು ಯಾವ ಕಂಡರೂ ವ್ಯವಹಾರ ದೃಷ್ಟಿಯಿಂದ ಸಮಂಜಸವಾಗುವದಿಲ್ಲ. ಯಾವನು ಮನೆಯಲ್ಲಿ ಕರೆಯ ಭಟ್ಟಿಯನ್ನಿಟ್ಟಿದ್ದಾನೆ. ಯಾವನು ಕುಡಿದು ಉರುಳಾಡುತ್ತಾನೆಂಬುದನ್ನು ಮನೆ ಮನೆಗೆ ಹೋಗಿ ತಪಾಸು ಮಾಡುವದು ಅಸಂಭವನೀಯ ಹಾದ್ದು. ಈ ವ್ಯಸನವು ಪೂರಾ ನಿಲ್ಲಬೇಕೆಂದು ಮಂತ್ರಿಯ ಮನಸ್ಸಿನಲ್ಲಿದ್ದರೆ- ಪಿಕೆಟಿಂಗಕ್ಕೆ ಉತ್ತೇಜನ ಕೊಡಬೇಕು ಅಂದರೆ- ಒಂದು ನೆಲ್ಲೂರ ಜಿಲ್ಹೆ ಏಕೆ ಮದ್ರಾಸ ಇಲಾಖೆಯು ತುಂಬ ಮದ್ಯಪಾನವು ಹೇಳಹೆಸರಿಲ್ಲದೆ ಹೋಗುವದು.

ಬಡೋದೆಯ ಯುವರಾಜರ ವಿನಂತಿ ಪತ್ರಿಕೆ.

—o—

ಬಡೋದೆ ರಾಜ್ಯದಲ್ಲಿಯ ನೆರೆಹಾವಳಿಯ ಕೇಡಿನ ದೆಸೆಯಿಂದ ಸ್ವಂತದ ಬೊಕ್ಕಸದಿಂದ ಮಹಾರಾಜರು ಲಕ್ಷ ಮತ್ತು ಮಹಾರಾಣಿಯವರು ೫೦ ಸಾವಿರ ರೂಪಾಯಿ ಕೊಟ್ಟಿದ್ದಾರೆ. ಇದರ ಹೊರ್ತು ಬೇರೆ ರೀತಿಯಾಗಿ ವರ್ಗಣೀ ಕೂಡಿಸುವ ಕೆಲಸ ನಡೆದಿದೆ. ದರಬಾರದಿಂದ ವಿವಿಧ ರೀತಿಯಿಂದ ಸಹಾಯ ಮಾಡಲ್ಪಡುತ್ತಿರುವದು. ಆದರೂ ಇದರಿಂದ ದರಿದ್ರನಾರಾಯಣರಿಗೆ ಆವಶ್ಯಕತೆಯನ್ನು ಪೂರೈಸುವದಾಗುವದಿಲ್ಲ. ಆದ್ದರಿಂದ ಯುವರಾಜರು ಮಹಾರಾಷ್ಟ್ರದ ಎಲ್ಲ ಸಂಸ್ಥಾನಿಕರಿಗೂ ಜಹಾಗೀರದಾರರಿಗೂ ಧನಸಹಾಯ ಮಾಡಿರೆಂದು ಯುವರಾಜ ಶ್ರೀ ಫತ್ತೆಸಿಂಹರು ವಿನಂತಿ ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ.

ಲಾರ್ಡ ಆಯರ್ವಿನಸಾಹೇಬರನ್ನು ನಂಬಿರಿ.

—o—

ಅಸೆಂಬ್ಲಿಯ ಮೆಂಬರರಾದ ಶ್ರೀ. ರಂಗಯ್ಯಂಗಾರರು ಲಂಡನದಲ್ಲಿದ್ದಾರೆ. ಇವರು ಯುದ್ಧಕಾಲದಲ್ಲಿ ಮುಖ್ಯಾಮಾತ್ಯರಾಗಿದ್ದ ಮಿ. ಲಾಯಿಡಜಾರ್ಜಸಾಹೇಬರನ್ನು ಕಾಣಲಿಕ್ಕೆ ಹೋಗಿದ್ದರು. ನಿಮಗೆ ಸ್ವರಾಜ್ಯದ ಹೆಚ್ಚಿನ ಅಧಿಕಾರಗಳು ಬೇಕಾದರೆ- ಲಾರ್ಡ ಆಯರ್ವಿನಸಾಹೇಬರಲ್ಲಿ ವಿಶ್ವಾಸವಿಡಿರಿ. ಅವರು ಸದ್ಗೃಹಸ್ಥರಾಗಿದ್ದಾರೆ. ಮಂತ್ರಿಮಂಡಲದಲ್ಲಿ ಅವರಿಗೆ ಗೌರವವುಂಟು. ಅವರು ಹೇಳಿದ ಮಾತನ್ನು ಮಂತ್ರಿಗಳು ಮನ್ನಿಸುವರೆಂದು ಲಾಯಿಡಸಾಹೇಬರು ಅಯ್ಯಂಗಾರರಿಗೆ ಹೇಳಿದ್ದಾರೆ.

ಮದ್ದಿನ ಶಾಲೆ ಮತ್ತು ಮನೆಗಳು ಹಾರಿದವು.

—o—

ಇಂಗ್ಲಂಡದಲ್ಲಿ ಕೋಬರ್ನಸವೆಂಬಲ್ಲಿ ಮದ್ದುಗುಂಡು ಮಾಡುವ ಶಿಕ್ಷಣ ಕೊಡುವ ಶಾಲೆಯುಂಟು. ಇದರ ಹತ್ತರವೇ ಸೋಲ್ಜರು ವಾಸವಾಗಿರಲು ಬ್ಯಾರಾಕುಗಳುಂಟು. ಶಿಕ್ಷಣದ ದೆಸೆಯಿಂದ ಅನೇಕ ಪ್ರಕಾರದ ಜ್ವಾಲಾಗ್ರಾಹಿ ಪದಾರ್ಥಗಳುಂಟು. ಇವಕ್ಕೆ ಬೆಂಕಿ ಹತ್ತಿ, ಭೂಮಿಯೇ ಹಾರಿ ಬೀಳುವಷ್ಟು ಭಯಂಕರವಾಗಿ ಪದಾರ್ಥಗಳು ಹಾರ ಹತ್ತಿದವು. ಬೆಂಕಿಯ ಅನಾಹುತದ ಭಯ ಸೂಚಕ ಸೀಟಿಯನ್ನು ಒಂದೇ ಸವನೆ ಅರ್ಧ ತಾಸಿನ ತನಕ ಹೊಡೆದರು. ದಂಡಿನ ಕಾಮದಾರರು ಬಂದು ಬಹಳ ಪ್ರಯತ್ನದಿಂದ ಉರಿಯನ್ನು ಆರಿಸಿದರು. ಲಕ್ಷಾವಧಿಯ ಹಾನಿಯಾಯಿತು. ಬೆಂಕಿಯಲ್ಲಿ ಒಂದು ಹೆಣ ಹೊರಟಿತು. ಅದರ ಮೈಮೇಲೆ ರಿವಾಲ್ವರವಿತ್ತು. ಈತನಿಂದಲೇ ಬೆಂಕಿ ಹತ್ತಿರಬೇಕೆಂಬ ಸಂಶಯವುಂಟಾಗಿರುತ್ತದೆ.

ಕುದುರೆಗಳ ಅಗಾಡಿ, ಪಿಛಾಡಿ ಕೊಯ್ದು ಹಾಕಿದರು.

—o—

ಹಾಂಗಕಾಂಗದಲ್ಲಿ ಬಲವಾಗಿ ಬಿರುಗಾಳಿ ಬೀಸಲಾರಂಭಿಸಿತು. ಕುದುರೆ- ಹೇಸರಗತ್ತೆಗಳ ಲಾಯಗಳು ಕಡಕೊಂಡು ಬೀಳುವ ಭಯವಾಯಿತು. ಅಧಿಕಾರಿಗಳು ಇವುಗಳ ಅಗಾಡಿ, ಪಿಛಾಡಿಯನ್ನು ಕೊಯ್ದು ಇವನ್ನು ಹೊರದೂಡಿದರು. ಇವು ಮನಬಲ್ಲಂತೆ ಊರ ತುಂಬ ಓಡುತ್ತಾ ತಿರುಗಾಡತೊಡಗಿದವು. ಇವುಗಳ ಹಾವಳಿಯಿಂದ ಪುಷ್ಕಳ ಕೇಡಾಯಿತು. ಗಾಳಿಯು ಹೊಡತಕ್ಕೆ ಒಂದು ಮೋಟಾರು ಗಗನಮಂಡಲದಲ್ಲಿ ಹಾರಿ ನೆಲಕ್ಕೆ ಬಿದ್ದು ಪುಡಿ ಪುಡಿಯಾಯಿತು.

ಸಬ್ಬರಜಿಸ್ಟ್ರಾರ, ಕಾರಕೂನ ಮತ್ತು ಸಿಪಾಯಿಗೆ ಸಸ್ಪೆಂಡ!!!

—o—

ಮೈಸೂರಿನ ಡಿಪುಟಿ ಕಮಿಶನರರು ಮಂಡ್ಯಕ್ಕೆ ಹೋದರು. ನೊಂದಣಿ ಕಚೇರಿಯಲ್ಲಿ ಕೂಡಿದ ಪಕ್ಷಕಾರರು ಇವರ ಮುಂದೆ ಸಬ್ಬರಜಿಸ್ಟ್ರಾರರ ಅನೇಕ ದೂರುಗಳನ್ನು ಹೇಳಿಕೊಂಡರು. ಕೂಡಲೆ ಕಮೀಶನರರು ಕಚೇರಿಯಲ್ಲಿ ತಪಾಸ ಮಾಡಲಾಗಿ, ಅನವಶ್ಯಕವೆನಿಸುವಷ್ಟು ದ್ರವ್ಯ ಹೊರಟಿತು. ಸಾಹೇಬರು ಕೂಡಲೇ, ಸಬ್ಬರಜಿಸ್ಟ್ರಾರ, ಕಾರಕೂನ ಮತ್ತು ಸಿಪಾಯಿಯನ್ನು ಸಸ್ಪೆಂಡ ಮಾಡಿ, ಆ ದಿನದ ಕೆಲಸವನ್ನು ತಾವೇ ಸಾಗಿಸಿದರು.

ದುಂದುಗಾರಿಕೆ-

ಖೈರಪೂರದ ನವಾಬಸಾಹೇಬರು ದುಂದುಗಾರರಾಗಿದ್ದಾರೆ. ಸಂಸ್ಥಾನದ ಆದಾಯ ೩೪ ಲಕ್ಷ. ಇದರಲ್ಲಿ ಎಂಟು ಲಕ್ಷ ತಮಗೆ ಮತ್ತು ಉಳಿದ ಬಂಧುಬಳಗದವರಿಗೆ ಎರಡು ಲಕ್ಷ ಬೇಕೆಂದಿದ್ದಾರೆ. ಸಾಹೇಬಜಾದಾನ ಸುನತಿ ಕಾರ್ಯಕ್ಕೆ ಒಂದು ಲಕ್ಷ ರೂಪಾಯಿ ವೆಚ್ಚ ಮಾಡಿದರು. ಇದರ ಹೊರ್ತು ಸಂಸ್ಥಾನದ ಮೇಲೆ ೧೨ ಲಕ್ಷದ ಸಾಲ ಹೊರಿಸಿದ್ದಾರೆ. ಗಳಿಕೆಯಲ್ಲ ತಮ್ಮದೇ ಆದ ಬಳಿಕ, ಪ್ರಜಾಹಿತಕಾರ್ಯಗಳಾಗುವದೆಂತು?

ಪರೀಕ್ಷೆಯ ಸಮಯ-

ಮುಂಬಯಿಯಲ್ಲಿ ಸೆಕ್ರೆಟರಿಯೇಟದಲ್ಲಿ ಒಬ್ಬ ಫಾರ್ಸಿಯು ೮೭೦೦ ರೂಪಾಯಿಗಳನ್ನು ನುಂಗಿ ಕೃಷ್ಣಮುಖ ಮಾಡಿದ ಸುದ್ದಿಯನ್ನು ಈ ಮೊದಲು ಬರೆದಿದ್ದೇವೆ. ಈತನ ಸ್ನೇಹಿ ಒಬ್ಬ ಯುರೋಪಿಯನ್ನ ಕಾಮದಾರನಿರುವನು. ಸರಕಾರದವರು ಬೆಳಗಾವಿಯ ಹು. ಡಿ. ಕಲೆಕ್ಟರರಿಂದ ದುಡ್ಡು ಭರತಿ ಮಾಡಿಸಿಕೊಂಡಂತೆ, ಸ್ನೇಹಿತರಿಂದಲೂ ಮಾಡಿಸಿಕೊಳ್ಳುತ್ತಾರೇನೆಂಬುದನ್ನು ನೋಡಬೇಕಾಗಿದೆ.

ಗಲ್ಲಿನ ಬದಲು ಕರೆನೀರು-

ಬ್ಯಾಡಗಿಯ ಹತ್ತಿರದ ಕಾಟೇನಹಳ್ಳಿಯ ಬ್ರಹ್ಮಲಿಂಗಪ್ಪನೆಂಬವನು ಎರಡು ರೂಪಾಯಿಗಳ ಬೆ

ಇಂಥ ಸಹಕಾರ-

ಗುಜರಾಥಕ್ಕೆ ಸೇರಿದ ಮಾತಾರವೆಂಬ ಗ್ರಾಮದಲ್ಲಿ ಅತಿವೃಷ್ಟಿಯಿಂದ ಒಬ್ಬ ರೈತನ ಮನೆ ಬಿತ್ತು. ಇದ್ದಬಿದ್ದ ಜಿನಿಗೆ ನಾಶವಾಯಿತು. ನೇವು ಹಿಡಿಚಿ ಪ್ರವಾಹದಗುಂಟ ತೆಪ್ಪದಂತೆ ತೇಲಿ ಹೋಯಿತು. ಎರಡು ಎತ್ತುಗಳು ಮಾತ್ರ ಉಳಿದವು. ದುರ್ದೈವದಿಂದ ಇದೇ ಹೊತ್ತಿನಲ್ಲಿ ಸಹಕಾರ ಸಂಘವು ಸಾಲದ ಕಿಸ್ತಿ ವಸೂಲಿಗೆ ಒತ್ತಿಬಂದು, ಎರಡೂ ಎತ್ತುಗಳನ್ನು ಹಿಡಿಸಿತು. ಸಹಕಾರ ತತ್ವದಿಂದ ನಡೆದು, ರೈತರ ಉದ್ಧಾರಕ್ಕೆ ಹೊರಟಿದ್ದರ ಫಲವೆಷ್ಟು ಅಂದಚಂದವಾಗಿರುತ್ತದಲ್ಲ?

ರೇಲ್ವೆಯ ಸುದ್ದಿಗಳು-

ಸದರ್ನ ಮರಾಠಾ ರೇಲ್ವೆ ಕಂಪನಿಯವರು ಬೆಳಗೂರ ದಂಡಿನ ಸ್ಟೇಶನವನ್ನು ಹೊಸದಾಗಿ ಕಟ್ಟುವರು. ಇದರಲ್ಲಿ ಅನೇಕ ಸುಧಾರಣೆಗಳಾಗುವವು.

ಬೆಂಗಳೂರಿಯಿಂದ ಪೂನೆಯ ತನಕ ಮೇಲ ಗಾಡಿಯಲ್ಲಿ - ಎರಡನೇ ವರ್ಗದ ಪ್ರಯಾಣಿಕರ ಒಗ್ಗಳ ದಟ್ಟಣೆಯಾಗುತ್ತಿರುವದರಿಂದ, ೧ನೇ ಅಕ್ಟೋಬರದಿಂದ ಮೂರನೇ ವರ್ಗದ ಹೆಚ್ಚಿನ ಒಂದು ಬೋಗಿಯನ್ನು ಹಚ್ಚುವರು.

ಇದೇ ಅಕ್ಟೋಬರ ತಿಂಗಳ ೧ನೆಯ ತಾರೀಖಿನಿಂದ ಬಂಡಿಗಳ ವೇಳೆಯಲ್ಲಿ ಹೆಚ್ಚು ಕಡಿಮೆಯಾಗುವದು.

ಕಡಪಿ ಮತ್ತು ರೇಣಿಗುಂಟಾ ಸ್ಟೇಶನಗಳಲ್ಲಿ ಘೋಷಾದ ಸ್ತ್ರೀಯರ ದೆಸೆಯಿಂದ ಪ್ಲಾಟಫಾರ್ಮಗಳಲ್ಲಿ ಕೂಡ್ರುವ ಸ್ಪೇಶಲ ವ್ಯವಸ್ಥೆ ಮಾಡುವರು.

ವಿವಿಧ ವರ್ತಮಾನಗಳು

ಹೈದರಾಬಾದಿನ ರೆಸಿಡೆಂಟಸಾಹೇಬರು ಮೈಸೂರ ದೇಶಕ್ಕೆ ಮಹತ್ವದ ಸ್ಥಳಗಳನ್ನು ನೋಡುವದಕ್ಕಾಗಿ ದಯಮಾಡಿಸಿದ್ದಾರೆ!

ಬೆಳಗಾವಿಯಲ್ಲಿ ಪ್ಲೇಗ ಬೇನೆ ಪ್ರಾರಂಭವಾಗಿದೆ.

[illegible]ಲಂಕೆಯಲ್ಲಿ ಈ ವರ್ಷ ೫೦ ಸಾವಿರ ಟನ್ ಉಪ್ಪಿನ ಹುಟ್ಟುವಳಿಯಾಗಿರುತ್ತದೆ.

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅಸಡ್ಡೆ ಕಾರಣವು

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ಕ್ಕೆ ೧ ರೂಪಾಯಿ.

೨-೩ ಗುಳಿಗೆ ಸೇವಿಸಿ ಬಂದು ಜ್ವರ ಇಳಿದಿರುವದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ೧ ರಂತೆ ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. ಚಿತ್ತೂರ, ಜಿಲ್ಲಾ ಬೆಳಗಾವ.

ಪಾಟಣಾದ ಕೌನ್ಸಿಲ ಮೆಂಬರರಾದ ಶ್ರೀ ಜಗತ ನಾರಾಯಣ ಲಾಲರು ತಮ್ಮ ಮಹಾವೀರ ವರ್ತಮಾನ ಪತ್ರದಲ್ಲಿ ಬಿಭತ್ಸ ಚಿತ್ರಗಳನ್ನು ಮುದ್ರಿಸಿದ್ದಕ್ಕಾಗಿ, ಮ್ಯಾಜಿಸ್ಟ್ರೇಟರು ಇವರಿಗೆ ನೂರು ರೂಪಾಯಿ ದಂಡ ಅಥವಾ ಒಂದು ತಿಂಗಳ ಶಿಕ್ಷೆ ವಿಧಿಸಿದ್ದಾರೆ.

ನೋಟೀಸು

—೦—

ಮುನ್ನಿ ವಿ ಕೋಂ ಇಮಾಮ ಸಾಬ ಬಾಗವಾನರ ಸಾ. ನವಲಗುಂದ ತಾಲೂಕ ಧಾರವಾಡ ಇವರಿಗೆ-

ಕೆಳಗೆ ಸಹಿ ಮಾಡುವವನ ಕಡೆಯಿಂದಾ ತಿಳಿಸುವದರಲ್ಲಿ ಬರುತ್ತದೆನಂದ್ರೆ ಈಗ ರಾಜದಂಡದಲ್ಲಿ ನೀನು ನೋಟೀಸು ಕೊಟ್ಟದ್ದು ಮುಟ್ಟಿತು ಮಜಕೂರು ತಿಳಿಯಿತು ನಾನು ಮನಿ ತೊರವತ್ತಿ ಬರಕೊಟ್ಟದ್ದು ಖರೆ ಅದೆ ಮತ್ತು ನಮ್ಮ ತಂದೆ ರಾಮಿ ನಿಂದಾ ತಗೊಂಡೆನಂತಾ ಅಂಬೊ ಬಗ್ಗೆ ಮತ್ತು ೬-೭ ವರ್ಷದಿಂದಾ ೫೦೦ ರೂಪಾಯಿ ಸಾಲ ತಂದ ಬಗ್ಗೆ ಮತ್ತು ಮಜಕೂರಿನ ಹಾಗೆ ನಮೂದ ನಿನ್ನ ಯಲ್ಲಾ ಮಾತಿನ ತಕರಾರ ಬಗ್ಗೆ ಕೋರ್ಟ ಮಾಡಿಪತ್ತ ನನ್ನ ಮೇಲೆ ಇಲಾಜ ನಡಿಸಿ ನಿನ್ನ ತಕರಾರ ಎಂಟ ದಿವಸದಲ್ಲಿ ಖುಲಾಸಾ ಮಾಡಿಕೊಳ್ಳಬೇಕು ಇಲ್ಲದಿದ್ದರೆ ನಿನ್ನ ಕೈಯಲ್ಲಿ ೨೦೦೦ ರೂಪಾಯಿ ಇತ್ತಿ ಅಂದರೆ ಬಾಗಿನ ರೂಪಾಯಿ ನಿನ್ನ ಕೈಯಲ್ಲಿ ಕೊಟ್ಟದ್ದು ನನಗೆ ಕೊಡಬೇಕು ಚಲೋ ರೀತಿಯಿಂದ ಪ್ರಪಂಚ ಮಾಡಬೇಕು ನಂತರ ನಿನ್ನ ಯಾವ ಮಾತಿನ ತಕರಾರಗಳು ಸುಳ್ಳು ಅಂತ ಖಾತ್ರಿ ಆಗಿ ನಿನ್ನ ಯಾಕಂದರ ತಕರಾರ ನಡಿಸಿಕ್ಕಿಲ್ಲಾ ಯಂಟ ದಿವಸದಲ್ಲಿ ಖುಲಾಸಾ ಮಾಡಿಕೊಳ್ಳಬೇಕು ನೀನು ೨೦೦೦ ರೂಪಾಯಿ ಬಗ್ಗೆ ಏನಾದರೂ ತಪಸಿಲ ಹೇಳಿದರೆ ಕೇಳಲಿಕ್ಕಿಲ್ಲಾ ಅಂತಾ ಕೊಟ್ಟ ನೋಟೀಸ ಸಹಿ ತಾ. ೨೪-೮-೧೯೨೭ ಇಸ್ವಿ

ಈ ಖಾಸಾ ಹೆಬ್ಬಟ್ಟಿನ ಗುರ್ತ ಇಮಾಮ

ಮುಸಲ್ಮಾನ ಜಾತಿ ಮತ್ತು ನಮ್ಮ ಸಾಹೇಬ ಬಾಗವಾನರ ಹಕ್ಕಿನ ಕ್ಕದು ಅದೆ.

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕ ಲಿಮಿಟೆಡ ಧಾರವಾಡ

—೦—

ಈ ಬ್ಯಾಂಕಿನಲ್ಲಿ ಮುದ್ದತಿ ಠೇವಣಿಗಳನ್ನು ಆರು ತಿಂಗಳ, ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲ [illegible] ಒಪ್ಪಿಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಐದು ರೂಪಾಯಿ ಮತ್ತು ವರ್ಷಕ್ಕೆ ಆರುವರಿ ರೂಪಾಯಿ ಬಡ್ಡಿ ಕೊಡಲಾಗುವದು. ಹೆಚ್ಚು ಕಾಲದ ಠೇವಣಿಯ ಬಗ್ಗೆ ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನೆಗಳೂ ವಸ್ತ್ರೀಖ್ಯುಕೊಳ್ಳಲ್ಪಡುವವು ಚಕ್ಕ ಹುಂಡಿಯ ವ್ಯವಹಾರ ಮಾಡಲ್ಪಡುವದು

ಮೆಸರ್ಸ ದೇಶಪಾಂಡೆ ಮತ್ತು ಅಣ್ಣಾಚಾರ್ಯ ಕಟ್ಟಿ

ಕಂಪನಿ ಮ್ಯಾನೇಜಿಂಗ [illegible]

ಏಜಂಟ್ಸ

NATIONAL TELEGRAPH SCHOOL.

2 Club Road, DELHI

Conducted by R. . Jerko M. B. E

Dy. Postmaster General [Retd

Results Guaranteed.

Prospectus for 2 annas Stamps.

[Quote No. 1831]

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1445

ವಿಜಯ

ಸತ್ಯ ನಿತ್ಯ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಗುರುವಾರ ತಾರೀಖು ೨೫ ನೇ ಅಗಸ್ಟ ೧೯೨೭ (ಸಂಚಿಕೆ ೧೮೩

ಕಿರ್ಲೋಸ್ಕರ ಹಿಂಡಿ [illegible] ಒಡೆಯುವ ಯಂತ್ರಗಳು

ಈ ಯಂತ್ರಗಳು [illegible]

[illegible]

ಹೆಚ್ಚಿನ ಸಂಗತಿ ಬಗ್ಗೆ ಬರೆದು ಕೇಳಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ ಸಾತಾರಾ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ [illegible]

ಈ ಬ್ಯಾಂಕಿನಲ್ಲಿ [illegible]

[illegible]

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಾಂಗನವಾರ ಪೇಟೆ ಧಾರವಾಡ.

[illegible]

[illegible]

ವಿಜಯ ಪುಸ್ತಕಾಲಯ.

[illegible]	೧೧ ಆಣೆ
ಪವಿತ್ರ ಸಂಗತಿ	೫ ,,
[illegible]	೪ ,,
[illegible]	೨ ,,
ದೇಶಪ್ರೇಮ ಸಂದೇಶ	೧ ,,

ಈ ಪುಸ್ತಕಗಳನ್ನು [illegible]

ವ್ಯವಸ್ಥಾಪಕರು ವಿಜಯ ಪುಸ್ತಕಾಲಯ ಧಾರವಾಡ

[illegible]

[illegible]

ವಿಜಯದ ವರ್ಗಣೀ ದರ

[illegible]

ವಿಜಯ.

ಧಾರವಾಡ ತಾ- ೨೫ ಆ-೨೭ ನೇ ಇಸ್ವಿ

ರಾಜಪಕ್ಷಕ್ಕಿಂತ ಲೋಕಪಕ್ಷವೇ ಮೇಲು!!

ರಾಜಶಕ್ತಿಗಿಂತ ಪ್ರಜಾಶಕ್ತಿಯೇ ದೊಡ್ಡದೆಂದು ಪುರಾಣಗಳಲ್ಲಿ ಹೇಳಿದೆ. ವಿಲಾಯತಿ ಅಮೇರಿಕೆಯಲ್ಲಿ ಎರಡೂ ಶಕ್ತಿಗಳ ನಡುವೆ ಸಮರವಾಗಿ, ಪ್ರಜಾಶಕ್ತಿಯೇ ದೊಡ್ಡದೆಂದು ಪ್ರಮಾಣ ಸಿದ್ಧವಾಗಿರುತ್ತದೆ. ಹಿಂದುಸ್ಥಾನದಲ್ಲಿ ಅಸಹಕಾರದ ದುಂದುಭಿಯು ದಿಗ್ಮಂಡಲವನ್ನು ವ್ಯಾಪಿಸಿದಾಗ, ಲಾರ್ಡ ರೀಡಿಂಗಸಾಹೇಬರು ಮಹಾತ್ಮರ ಕೂಡ ಕೌಲಿಗೆ ಬಂದ ಸಂಗತಿಯಿಂದಲೂ ಈ ದೇಶೀಯರಿಗೂ ಪ್ರಜಾಶಕ್ತಿಯೇ ದೊಡ್ಡದೆಂದೆನಿಸಲು ಆಧಾರವಾಗಿದೆ.

ರಾಜಶಕ್ತಿಯು ಪ್ರಜರಿಗೆ ಮಾಡಬೇಕೆಂಬ ಉಪಕಾರಕ್ಕಿಂತ ಪ್ರಜಾಶಕ್ತಿಯು ಎಷ್ಟೋ ಪಾಲು ಹೆಚ್ಚಿಗೆ ಮಾಡಬಹುದೆಂದು ಸಹಜವಾಗಿ ಹೇಳುವಂತಿದೆ. ಆದಾಯಕ್ಕೆ ಕಕ್ಕಸ್ಸು ಪೆಸ್ತದ ಬಾಬು ಸರಕಾರದ ಕೈ ಕಟ್ಟುತ್ತಿರುವದರಿಂದ, ಸರಕಾರಕ್ಕೆ ಕರ್ಣನಂತೆ ದಾನಧರ್ಮ ಮಾಡಲಿಕ್ಕೆ ಬರುವದೇ ಇಲ್ಲ. ಮೈ ಮೇಲೆ ಮರ ಕಡಕೊಂಡು ಬಿತ್ತೆಂದರೆ ಸಾಯುಕಾರನ ಬಾಗಿಲು ಕಾಯಬೇಕಾಗುತ್ತದೆ. ಹೀಗೆ ಪ್ರಜಾಶಕ್ತಿಯ ಪರಿಪಾಟವಿರುವದಿಲ್ಲ. ಕೆಸಿ ಕೆಸಿ ಕೂಡಿ ರಾಸಿ ಎನ್ನುವಂತೆ ಪ್ರಜರು ದ್ರವ್ಯ ಸಂಗ್ರಹ ಮಾಡಿ ಆಪತ್ತು ವಿಪತ್ತಿನಿಂದ ಪಾರಾಗಬಹುದು. ಇದರ ಪ್ರತ್ಯಕ್ಷ ಅನುಭವವು ಸದ್ಯದಲ್ಲಿ ಗುಜರಾಥದಲ್ಲಿ ಬರುತ್ತಿರುವದು.

ನೆರೆಹಾವಳಿಯಿಂದ ದೇಶವೆಲ್ಲ ನಾಶವಾದ ವರ್ತಮಾನ ಕೇಳಿದ ಕೂಡಲೆ, ಅಂದರೆ ತಮ್ಮ ಕೋಶಗಳ ಬಾಗಿಲ ತೆರೆಯಬೇಕಾಗಿತ್ತು. ಕೋಶದಲ್ಲಿ ಅವಕಾಶ ಉಳಿದರೆ ಮುಂದೇನು ಗತಿಯೆಂದು ಇವರು ಇಂದಿಗೂ ಚಿಂತಿಸುತ್ತಿರುವರು. ಇವರ ಹಸ್ತಕರೆಲ್ಲರು ಅಧಿಕಾರದ ದರ್ಪದಲ್ಲಿ ಬೆಳದದ್ದರಿಂದ, ಕಲ್ಲೆದೆಯ ಕಲೆಕ್ಟರರಂಥವರೂ ಹೊರಬಿದ್ದು, ಮುಗಿಲು ಹರಿದು, ಹಾಳಾದದ್ದನ್ನು ತ[illegible] ಮಂಡಲಾಧಿಪತಿಗಳು ನೆಟ್ಟಗೆ ನೋಡುವಂತೆ [illegible]ಯಿಯು ಗವ್ಹರ್ನರಸಾಹೇಬರು ನಂಬಿಗೆಯ ಮಾತು ಹೇಳಿರುವದು ನಿಜ. ದೈವುಳ್ಳವನು ಹಗೆ ತೆರೆಯುವದರೊಳಗಾಗಿ ಬಡವನ ಹಲ್ಲಣ ಹಾರಿತೆನ್ನುವಂತೆ ಪ್ರತ್ಯಕ್ಷದ ಸ್ಥಿತಿಯಾಗಿದೆ. ಗವ್ಹರ್ನರರಿಂದ ಫ್ಯಾಮಿನ ಫಂಡಿನ ಒಂದು ಕೋಟಿ ರೂಪಾಯಿ ಬೇಡುವದಕ್ಕಾಗಿ ಶ್ರೀ. ಪಟೇಲರು ಸದ್ಯದಲ್ಲಿ ಪುಣೆಗೆ ಬಂದಿದ್ದಾರೆ

ಮಳೆಯು ನಿಂತ ಕೂಡಲೆ ಅನಾಥರ ಹಾಗು ವಿಪದ್ಗ್ರಸ್ತರ ಕಷ್ಟ ವಿಮೋಚನೆಗಾಗಿ ಮುಂದೊದವರು ಪ್ರಜರು. ವರ್ಗಣಿಯಿಂದ ಅನ್ನವಸ್ತ್ರದ ಪೂರೈಕೆ ಮಾಡಿದವರು ಪ್ರಜರು. ಈ ವರೆಗೆ ಸುಮಾರು ಹತ್ತು ಲಕ್ಷ ರೂಪಾಯಿ ಕೂಡಿದ್ದು ಅದನ್ನೆಲ್ಲ ಕೊಟ್ಟವರು ಪ್ರಜರು. ಊರೂರಿಗೆ ಹೋಗಿ ಅನ್ನ ಅರಿವೆ ಕೊಟ್ಟವರು ಪ್ರಜಾ ಪಕ್ಷದ ವ್ಹಾಲಂಟಿಯರರು. ಸಾವಿರಾರು ಜನರಿಗೆ ಜೀವದಾನ ಮಾಡಿದವರೂ ಇವರೇ. ತಾಲೂಕಿನಲ್ಲಿ ಒಬ್ಬ ಮಾಮಲೇದಾರನಿರುತ್ತಾರೆ. ಹತ್ತಿಪ್ಪತ್ತು ಜನ ಕಾರಕೂನರಿರುತ್ತಾರೆ. ಇವರೆಲ್ಲರೂ ಸರಾಸರಿ ಲಕ್ಷ ಜನ ಸಂಖ್ಯೆಯಾಗುವಂಥ ತಾಲೂಕಿಗೆ ಸಹಾಯ ಮಾಡುವ ಬಗೆಯೇ ಇಲ್ಲ, ಪ್ರಜರನ್ನು ನಂಬಿದ ಹೊರ್ತು ಇವರಿಗೆ ಗತ್ಯಂತರವೇ ಇಲ್ಲ. ಪ್ರಜಾ ಪಕ್ಷದ ಸಹಾಯದ ಹೊರ್ತು ತಮ್ಮ ಆಡಳಿತವು ನಡೆಯಲಾರದೆಂದು ಈ ಸಮಯದಲ್ಲಿ ಇವರಿಗೆ ಪೂರಾ ಮನವರಿಕೆಯಾಗಿರುತ್ತದೆ.

ಕಾಂಗ್ರೆಸದ ವ್ಹಾಲಂಟಿಯರು, ಕಾಂಗ್ರೆಸದ ಮೆಂಬರರು ಈ ಸಮಯದಲ್ಲಿ ಕೀರ್ತಿ ಬರುವಂಥ ಸತ್ಕೃತ್ಯ ಮಾಡಿದರು. ನಿಮ್ಮ ಸಹಾಯಕ್ಕಾಗಿ ನಾನು ಅಸಮುದಾಬಾದಿಗೆ ಬರಬೇಕೆ? ಎಂಬದಾಗಿ ಮಹಾತ್ಮರು ಶ್ರೀ. ಪಟೇಲರಿಗೆ ತಾರು ಮಾಡಿ ಕೇಳಲು- ನೀವು ಮಾಡಿದ ಸಂಘ ಶಕ್ತಿಯು ಬಲವುಳ್ಳ ನಿಮ್ಮ ಅವಶ್ಯಕತೆ ಇಲ್ಲೆಂದು ಶ್ರೀ. ಪಟೇಲರು ಅವರಿಗೆ ಉತ್ತರ ಕೊಟ್ಟರು. ಕಾಂಗ್ರೆಸದ ಜನರು ಭಂಗಿ, ಮಾದಿಗ ಮೊದಲ್ಗೊಂಡು ಪ್ರತಿಯೊಂದು ಉಚ್ಚ ನೀಚ ಕೆಲಸ ಮಾಡಿದರು. ಗುಜರಾಥ ವಿದ್ಯಾಪೀಠದ ವಿದ್ಯಾರ್ಥಿಗಳು ರೋಕೋರ ಕ್ಷೇತ್ರದಲ್ಲಿ ಸತ್ತು ಕೊಳೆತ ದನಗಳನ್ನು ಎಳೆದು, ಅವಕ್ಕೆ ಮಣ್ಣು ಕೊಡಲು ಹಿಂದು ಮುಂದೆ ನೋಡಲಿಲ್ಲ. ಪವಿತ್ರವುಳ್ಳದಂಥ ಮತ್ತು ಬಹು ಬಿಗಿಯಾದಂಥ ಇಂಥ ಅನೇಕ ಕೆಲಸಗಳನ್ನು ವಿದ್ಯಾರ್ಥಿಗಳೂ, ಸ್ವಯಂ ಸೇವಕರೂ ಕಾಂಗ್ರೆಸದ ಮುಂದಾಳುಗಳೂ ಮಾಡಿ, ಲೋಕಾದರಕ್ಕೆ ಪಾತ್ರರಾಗಿದ್ದಾರೆ. ಈ ಗೌರವದ ಹಾಗು ಪ್ರಶಂಸೆಯಲ್ಲಿ ಎಷ್ಟನೇ ಅಂಶವನ್ನು ಆದರೂ ಅವರ ಕೆಳ ಪ್ರತಿಯ ಉದ್ಯೋಗಸ್ಥರೂ ದೊರೆಕಿಸಿದರೆಂದು ಯಾರಾದರೂ ಹೇಳುವರೇ ?

ರಾಯಲ ಕಮಿಶನ ಯಾವಾಗ?

ಇದೇ ಆಗಸ್ಟ ತಿಂಗಳ ೧೯ನೆಯ ತಾರೀಖಿನ ದಿವಸ ಲಾರ್ಡ ಆಯರ್ವಿನಸಾಹೇಬರು ದಿಲ್ಲಿಯಲ್ಲಿ ರಾಯಲ ಕಮಿಶನದ ವಿಚಾರವನ್ನೂ ಅದರ ಮೆಂಬರರ ಹೆಸರುಗಳನ್ನೂ ಜಾಹೀರ ಮಾಡುವರೆಂಬ ಸುದ್ದಿಯಾಗಿತ್ತು. ಆ ತಾರೀಖು ಹೋಗಿ ಒಂದು ವಾರವಾಯಿತು. ಸುದ್ದಿಯಂತೆ ಸಂಗತಿಯು ಸಂಭವಿಸಲಿಲ್ಲ. ಹೀಗೇಕಾಯಿತೆಂದು ತರ್ಕ ವಿತರ್ಕಗಳು ನಡೆದಿವೆ. ಇವುಗಳಲ್ಲಿ ಒಂದು ತರ್ಕವನ್ನು ಲಂಡನದ ಒಂದು ತಾರು ಹೇಳುತ್ತದೆ. ಹಿಂದುಸ್ಥಾನಕ್ಕೆ ದೊರೆಯುವ ದಾಳದ ಸ್ವರಾಜ್ಯದ ವಿರಚನೆ [illegible]ದಿಂದ ದಂಡಿಸ [illegible] ಹಿಂದೀ ಜನರ ಪ್ರವೇಶವು ದೊಡ್ಡ ಪ್ರಮಾಣದಿಂದಾಗಬೇಕೆಂದಿರುವದು. [illegible] ಕಮೀಟಿಯ [illegible] ಜನತೆಯು [illegible] ದಂಡಿನ [illegible] ರುತ್ತದೆ.

ಆಶಿಯಾ ಖಂಡದ ಪೂರ್ವ ಭಾಗದಲ್ಲಿರುವ ಬ್ರಿಟಿಶ ಸಾಮ್ರಾಜ್ಯದ [illegible] ಅಫಗಾಣ ಮತ್ತು ಅನೇಕ [illegible] ಹಿಂದುಸ್ಥಾನವಾಗಿರುತ್ತದೆ. ಶಿಂಗಾಪೂರದ [illegible] ಹಿಂದುಸ್ಥಾನವು [illegible] ಆದ್ದರಿಂದ ಹಿಂದುಸ್ಥಾನದಂಥ [illegible]ದ ರಾಷ್ಟ್ರದಲ್ಲಿ ಬ್ರಿಟಿಶ ಸಾಮ್ರಾಜ್ಯದ ಸೋಲ್ಜರರ ದೊಡ್ಡ ದಂಡನ್ನು ಇಡಬೇಕೆಂದು ವಿಲಾಯತಿಯ ಮಂತ್ರಿ ಮಂಡಲದವರು ಯುದ್ಧಖಾತೆಯವರೂ ವಿಚಾರಗ್ರಸ್ತರಾಗಿದ್ದಾರೆ.

ಧಂಡು ಹಿಂದುಸ್ಥಾನದಲ್ಲಿದ್ದರೆ, ರಕ್ಕಮು ಮತ್ತು ವಿಲಾಯತಿ ಸಂರಕ್ಷಣವಾಗುವದು ಖರೆ. ತಮ್ಮ ಯಾವದೊಂದು ಅಧಿಕಾರ ನಡೆಯುವಂಥ ದಂಡನ್ನು ಪ್ರಚಂಡ ಸಂಖ್ಯೆಯಿಂದ ಈ ದೇಶದಲ್ಲಿಟ್ಟುಕೊಳ್ಳಲು ಹಿಂದುಸ್ಥಾನ ಸರಕಾರವು ಸಮ್ಮತಿಸುವಲ್ಲ. ಇದು ಒಳ್ಳೇ ಗಡುಚಾದ ಪ್ರಶ್ನವಾಗಿದೆ. ಇದು ಸಮರ್ಪಕವಾಗಿ ಬಿಟ್ಟ ಹೊರತು ರಾಯಲ ಕಮೀಶನದ ಮಾತನ್ನು ಎತ್ತುವಂತಿರುವದಿಲ್ಲ.

ಇದೇ ಉದ್ದೇಶವಾಗಿ ವಿಲಾಯತಿಯಿಂದ ದಂಡಿನ ಖಾತೆಯ [illegible] ಮಿ. ಈವ್ಯಾನ್ಸಸಾಹೇಬರು ಒರತಕ್ಕವರಿದ್ದಾರೆ. ಇವರು ಬರುವದು ಖಾಸಗಿಯಾಗಿ ಇದೆಂದು ಹೇಳುವರು. ರಾಜದರಬಾರದಲ್ಲಿ ಸುದಿಯಿಂದು, ನಡೆಯೊಂದು ಈ ಪ್ರಕಾರ ಆಗಾಗ್ಗೆ ಕಂಡು ಬರುವದು ಸ್ವಾಭಾವಿಕವು. ಖಾಸಗಿ ರೀತಿಯಿಂದಾಗಲಿ; ಹೇಗೇ ಆಗಲಿ ಮಿ. ಈವ್ಯಾನ್ಸಸಾಹೇಬರು ಬಂದನಂತರ, ಈ ವಿಷಯದ ವಾದವಿವಾದ ನಡೆಯುವದು. ಇದರ ನಿ

ರ್ಣಯವು ಸಮರ್ಪಕವಾದರೆ ರಾಯಲ ಕಮಿಶನ ದ ಬಹಿಷ್ಕಾರವೂ ಬೇಗನೆ ಹತ್ತುವದು. ಇಲ್ಲವಾದರೆ ಮುಂದೆ ಜೋರಾಗಿ ಹೊಡೆಯುವ ದೆಂದು ಈ ತಾರಿನ ಹೇಳಿಕೆಯಾಗಿರುತ್ತದೆ.

ಪೈಸ್ಪುಲಾನಾ ಮಹಮುದಲ್ಲಿಯವರ ಮಹತ್ವದ ಭಾಷಣವು.

—o—

ಕಲಕತ್ತೆಯಲ್ಲಿ ಖಿಲಾಫತ್ ಪರಿಷತ್ತು ಕೂಡಿತ್ತು. ಮೌಲಾನಾ ಮಹಮುದಲ್ಲಿಯವರು ಅಧ್ಯಕ್ಷರಾಗಿದ್ದರು. ಆಗ ಇವರು ಮುಂದೆ ಕೊಟ್ಟಂತೆ ಭಾಷಣ ಮಾಡಿದ್ದರು:—

ಮುಸಲಮಾನರು ನಮಾಜ ಮಾಡುತ್ತಿರುವಾಗ ಮಸೀದಿಗಳ ಮುಂದೆ ಯಾವ ತರದ ವಾದ್ಯ ಬಾರಿಸಲು ಆಸ್ಪದಕೊಡುವದಿಲ್ಲ. ರಾಷ್ಟ್ರೀಯ ಐಕ್ಯಕ್ಕಾಗಿಯೂ, ಹಿಂದೂ ಮುಸಲಮಾನ ಸಂಘ ಬೆಳೆಯುವದಕ್ಕೂ ಹಿಂದೂ ಜನರಿಗೆ ಮಸೀದೆಗಳ ಮುಂದೆ ವಾದ್ಯಬಾರಿಸಗೊಡುವೆನು. ಆದರೆ ಸ್ವಾತಂತ್ರ್ಯದ ನಿಯಮವಾಗುವದನ್ನು ಮಾತ್ರ ಸಹಿಸಲಾರೆನು. ಮುಸಲಮಾನರು ಕತ್ತಿಯ ಬಲದಿಂದ ಜನರನ್ನು ಮುಸಲಮಾನ ಮಾಡಿದರೆಂದು ಡಾಕ್ಟರ ಮುಂಜೆಯವರು ಹೇಳುವದನ್ನು ಒಪ್ಪುವದಿಲ್ಲ. ಹಿಂದುಸ್ತಾನ, ಅಫಗಾಣಿಸ್ತಾನ, ಬಲುಚಿಸ್ತಾನ ಮತ್ತು ಇರಾಣವು ಇಸ್ಲಾಮು ಧರ್ಮದ ತತ್ವ ಮತ್ತು ಸತ್ಯದ ಬಲದಿಂದ ಮುಸಲಮಾನ ಧರ್ಮದೀಕ್ಷೆ ತಕ್ಕೊಂಡಿವೆ. ಮುಸಲಮಾನರನ್ನು ಹಿಂದುಸ್ತಾನದ ಹೊರಗೆ ಹಾಕಬೇಕೆಂದು ಹಿಂದೂ ಜನರು ತಿಳಕೊಂಡಿರುವದು ಕೇವಲ ಮೂರ್ಖತನವು ನನಗೆ ಒಂದೇ ಮಾತು ಹೇಳತಕ್ಕದ್ದುಂಟು. ಎರಡೂ ಜನಾಂಗಗಳವರು ಒಬ್ಬರ ಸ್ವತ್ವವನ್ನೊಬ್ಬರು ತಿಳಿಯತಕ್ಕದ್ದು. ಮತ್ತು ಪರಮತ ಸಹಿಷ್ಣುಗಳಾಗಿರತಕ್ಕದ್ದು.

ಈ ಪ್ರಕಾರ ಇವರ ಭಾಷಣವಾದ ಬಳಿಕ ಹಿಂದೂ ಜನರಿಂದ ಮಾನವೆಂದು ಕೃಷ್ಣಪಾದರೆ ಮುಸಲಮಾನರು ಕೂಡಲೆ ಶಾಂತ, ದಂಗೆಗೆ ಪ್ರವೃತ್ತರಾಗಬಾರದು. ಸರಕಾರದವರು ಹಿಂದೂ ಮುಸಲಮಾನ ದಂಗೆ ಬಂದಾಗುವಂಥ ಯಾವ ಉಪಾಯ ಮಾಡುವದಿಲ್ಲ. ದಂಗೆಗಳನ್ನು ನಿಲ್ಲಿಸುವ ಉಪಾಯ ಮಾಡಬೇಕು ಇಲ್ಲವಾದರೆ ತಮ್ಮ ಪಾಲುದಾರಿಕೆಯ ಫಲಭೋಗವನ್ನು ಬಿಡಬೇಕಾದೀತೆಂಬ ಠರಾವುಗಳನ್ನು ಮಾಡಿದ್ದಾರೆ.

ಮಹಾತ್ಮರು ಶ್ರೀಮನ್ಮಹೀಶೂರ ಮಹಾರಾಜರವರಿಗೆ ಒಂದು ರಾಟಿಯನ್ನು ಕಾಣಿಕೆಯಾಗಿ ಕೊಟ್ಟಿದ್ದಾರೆ. ಮೈಸೂರ ನಾಡಿನಲ್ಲಿ ಖಾದೀ ಪ್ರಚಾರ ಬಹಳ ಸಾವಧ ಭರಾಟೆಯು ನಡೆದಿರುತ್ತದೆ.

ಶಾಲಾಖಾತೆಯ ಮಹತ್ವದ ಸರಕ್ಯೂಲರವು.

ಮುಂಬಯಿ

ಮುಂಬಯಿ ಇಲಾಖೆಯ ವಿದ್ಯಾಖಾತೆಯುವರು ಎಜ್ಯುಕೇಶನಲ ಇನ್ಸಪೆಕ್ಟರರ ಕಡೆಗೆ ಒಂದು ಮಹತ್ವದ ಸರಕ್ಯೂಲರನ್ನು ಕಳಿಸಿದ್ದಾರೆ. ಯಾವದೊಂದು ಶಾಲೆ- ಕಾಲೇಜದಲ್ಲಿ ನೋ೨೦. ವಿದ್ಯಾರ್ಥಿಗಳ ಉಪಯೋಗಕ್ಕೆಂದು ಶಾಲೆಗಳಲ್ಲಿ ಹಚ್ಚಿದ ಪುಸ್ತಕಗಳ ಅರ್ಥದ ಹಾಗು ವಾಕ್ಯ ವಿವರಣೆಯ ಚಿಕ್ಕ ಚಿಕ್ಕ ಪುಸ್ತಕಗಳು ಹುಟ್ಟಿದ್ದು ಕಂಡು ಬರುವದು. ಇವುಗಳ ಸಹಾಯದಿಂದ ವಿದ್ಯಾರ್ಥಿಗಳು ಆಗಿನ ಮಟ್ಟಿಗೆ ಅಭ್ಯಾಸ ಮಾಡಿಕೊಂಡಂತೆ ತೋರುವದು. ಆದರೆ ಇದು ನಿಜವಾದ ಜ್ಞಾನವಾಗುವದಿಲ್ಲ. ಶಬ್ದಾರ್ಥ ವಾಕ್ಯಾರ್ಥಗಳ ಮಹತ್ವವು ಪುಸ್ತಕದ ಜ್ಞಾನಸಂಪಾದನದಿಂದ, ಈ ಪದ್ಧತಿಯನ್ನು ಆದಷ್ಟು ಜರಿದು, ಅವರಲ್ಲಿ ಜ್ಞಾನಾರ್ಜನೆಯ ಜೀವಂತ ಸ್ಫೂರ್ತಿಯು ಹುಟ್ಟಬೇಕು. ಸ್ಮರಣಶಕ್ತಿಯು ಬೆಳೆಯಬೇಕೆಂಬ ರೀತಿಯಿಂದಲೇ ಶಿಕ್ಷಣ ಕೊಡಬೇಕು. ಮತ್ತು ಹಾಯಸ್ಕೂಲು ಮುಂತಾದ ಮಾಧ್ಯಮಿಕ ಶಾಲೆಗಳಲ್ಲಿ ವರ್ಷ ವರ್ಷಕ್ಕೆ ಪುಸ್ತಕಗಳನ್ನು ಬದಲು ಮಾಡುವರು. ಇದು ಒಳಿತಲ್ಲ. ಕನಿಷ್ಠ ಮೂರು ವರ್ಷಗಳ ತನಕ ಒಂದೇ ಪ್ರಕಾರದ ಪುಸ್ತಕಗಳಿರಬೇಕೆಂದು ಈ ಸರಕ್ಯೂಲರದಲ್ಲಿ ಬರೆದಿದೆ. ಇವೆರಡೂ ಸೂಚನೆಗಳು ಸ್ತುತ್ಯವಾಗಿವೆ. ಹಿಂದಕ್ಕೊಮ್ಮೆ ನೋಟು ಪುಸ್ತಕಗಳ ಮೇಲೆ ಇದೇ ಪ್ರಕಾರದ ಸರಕ್ಯೂಲರ ಹೊರಟಿತ್ತು. ಕೆಲಕಾಲದ ನಂತರ ಅದು ಗೆದ್ದಲಿ ತಿಂದಿತು. ಹೊಸ ಸರಕ್ಯೂಲರದಿಂದ ಪುಸ್ತಕಗಳನ್ನು ಮಾರುವವರ ಹಾನಿಯಾದರೂ ವಿದ್ಯಾರ್ಥಿಗಳಿಗೆ ನಿಜವಾದ ಜ್ಞಾನವಾಗುವದು ಸಂತೋಷವು.

ನೀಲನಗೊಂಬೆಯನ್ನು ಭಂಗಪಡಿಸುವ ಸತ್ಯಾಗ್ರಹ.

— o —

ಮದ್ರಾಸಿನಲ್ಲಿ ಲಾರೆನ್ಸಸಾಹೇಬನ ಗೊಂಬೆಯನ್ನು ಒಡೆಯುವ ಪ್ರಯತ್ನವಾದ ಸಂಗತಿಯು ವಾಚಕರ ಸ್ಮರಣದಲ್ಲಿರಬಹುದು. ಅಲ್ಲಿಯಂತೆ ಮದ್ರಾಸದಲ್ಲಿಯೂ ಜನರು ನೀಲಸಾಹೇಬರ ಕಲ್ಲಿನ ಗೊಂಬೆಯನ್ನು ಒಡೆಯುವ ಪ್ರಯತ್ನವನ್ನು ಕೆಲ ಸ್ವಯಂಸೇವಕರು ನಡೆಸಿದ್ದಾರೆ. ಲಾರೆನ್ಸಸಾಹೇಬನು ಬ್ರಿಟಿಷ ನೀತಿಯ ದುಷ್ಟನು. ಕತ್ತಿಯಿಂದಲೋ? ಬುದ್ಧಿಯಿಂದಲೋ ಏತರಿಂದ ರಾಜ್ಯವಾಳುವದು ಬೇಕೆಂದು ಲಾರೆನ್ಸಸಾಹೇಬನು ಪಂಜಾಬಿಗಳಿಗೆ ಮಾಡಿದ ಪ್ರಶ್ನೆವು. ಆದರೆ ನೀಲಸಾಹೇಬನು ಸ್ತ್ರೀಹತ್ಯೆ, ಶಿಶುಹತ್ಯೆ ಮಾಡಿಸಿ, ಆ ಬಗ್ಗೆ ಪಶ್ಚಾತ್ತಾಪವೆಂದು ದೇವರಲ್ಲಿ ಮೊರೆಹೊಕ್ಕವನು. ಇಂಥವನ ಗೊಂಬೆಯು ಜನತೆಯ ಕಣ್ಣೆದುರಿಗಿರಬಾರದೆಂದು ಒಬ್ಬ ಹಿಂದೂ ಮತ್ತು ಒಬ್ಬ ಮುಸಲಮಾನ ಈ ಪ್ರಕಾರ ಇಬ್ಬರು ಸ್ವಯಂಸೇವಕರು ಅದನ್ನು ಭಗ್ನ ಮಾಡಲಿಕ್ಕೆ ಹೋದರು. ಈ ಅಪರಾಧದ ಬಗ್ಗೆ ಇವರಿಗೆ ಆರಾರು ತಿಂಗಳ ಶಿಕ್ಷೆಯಾಯಿತು. ಇವರ ನಂತರ ಮೂವರು ಸ್ವಯಂಸೇವಕರು ಇದೇ ಕಾರ್ಯಕ ಮಾಡಿದರು. ಇವರಿಗೂ ಎರಡೆರಡು ವರ್ಷದ ಶಿಕ್ಷೆಯಾಯಿತು. ಇವರಲ್ಲೊಬ್ಬ ವರ್ಷನಾದ ಸ್ವಾಮಿನಾಥ ಅಯ್ಯರನು ೧೭ ವರ್ಷದ ಹುಡುಗನು. ಈಗಿನ ಶಿಕ್ಷೆ ಮುಗಿದು, ತಾನು ಸ್ವತಂತ್ರನಾದ ಕೂಡಲೆ ಪುನಃ ಪ್ರತಿಮೆಯನ್ನು ಭಂಗ ಮಾಡುವೆನು. ನನಗೆ ನೀಡಿದ ಶಿಕ್ಷೆಯಿಂದ ನನ್ನ ಪ್ರತಿಜ್ಞೆ ಕಡಿಮೆ ಮಾಡುವದಿಲ್ಲೆಂದು ಕೋರ್ಟಿನಲ್ಲಿ ಜವಾಬು ಕೊಟ್ಟಿದ್ದಾನೆ. ಇದೇ ಅಪರಾಧಕ್ಕಾಗಿ ಇವರು ಸುರಂಗಕ್ಕೆ ಹೋದಂತಾಯಿತು. ನಾಗಪೂರದಂತೆ ಇವರಿಗೆ ಹಿಂಗಾರು ಕಳವು ಎನ್ನುಂವೆಂಬವನ್ನು ಜನರು ನೋಡುತ್ತಿರುವರು.

ಗಲ್ಲಿಗೆ ಹಾಕಿದರು.

—o—

ಗಲ್ಲಿನ ಬದಲಿಂದ ಬಾಂಬು ಹಾಕಿತು.

—o—

ಅಮೇರಿಕೆಯಲ್ಲಿ ಸಮಾಜವಾದಿಗಳು ಕೊಲೆಯಲ್ಲಿ ಸಾಕೊ ಮತ್ತು ವ್ಯಾಂಜೆಟಿಯನ್ನು ವಿದ್ಯುತ್ತಿನ ಖುರ್ಚಿಯ ಮೇಲೆ ಕೂಡ್ರಿಸಿ, ಅವರ ಪ್ರಾಣ ತರೆಸುವ ವಿಧಿ ಮಾಡಿದರು.

ಇವರನ್ನು ಗಲ್ಲಿಗೆ ಹಾಕುತ್ತಾರೆಂಬ ಶ್ರೀಕ್ಷೆಯಿಂದ ಕೋಲಿಕಾರರು ಫಿಲಾಡೆಲ್ಫಿಯಾದ ಮೇಯರನ ಕಾರಖಾನೆಯಲ್ಲಿ ಬಾಂಬು ಹಾಕಿಸಿ, ಧ್ವಂಸ ಕೇಡು ಮಾಡಿದರು. ಕಾರಖಾನೆಯ ಗೋಡೆಗಳು ಬಿದ್ದವು ನೆರೆ ಮನೆಗಳ ಗೋಡೆಗಳು ಬಿದ್ದವು.

ಗಂಡನು ಹೆಂಡತಿಗೆ ಗುಂಡು ಹಾಕಿ, ತಾನೂ ಗುಂಡು ಹಾಕಿಕೊಂಡನು.

—o—

ದರಭಂಗಾದಲ್ಲಿ ಒಬ್ಬ ಗೌರಕಾಯಸ್ಥನು ಅತ್ತೆಮಾವಂದಿರು ತನ್ನ ಹೆಂಡತಿಯನ್ನು ತನ್ನ ಸಂಗಡ ಕಳಿಸಿಕೊಡಲಿಲ್ಲೆಂಬ ಸಿಟ್ಟಿನಿಂದ ಹೆಂಡತಿಗೆ ಗುಂಡು ಹಾಕಿ, ಅವಳನ್ನು ಕೊಂದು, ತಾನೂ ಗುಂಡು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನು.

ದರು. ಮಾಮಲೇದಾರರು ಒಂದು, ಪೋಲೀಸರನ್ನು ಕರಸಿದರು. ಇವರು ಕೂಡಿದ ಜನರನ್ನು ಚದರಿಸ್ಸಿ ಸ್ವಯಂ ಸೇವಕರನ್ನು ಹಿಡಕೊಂಡು ಹೋದರು.

ದೊಡ್ಡ ಮನುಷ್ಯನ ಮರಣ–

ಇಜಿಪ್ತದ ಗುಲಾಮಗಿರಿತನವನ್ನು ತಪ್ಪಿಸಿ ಅದನ್ನು ಸರ್ವತಂತ್ರ ಸ್ವತಂತ್ರ ಮಾಡುವ ಸ್ಥಿತಿಗೆ ತಂದಂಥ ಧೈರ್ಯವಂತರಾದ ಝಗಲುಲ ಪಾಶ್ಯಾನವರು ಸ್ವರ್ಗವಾಸಿಯಾದರೆಂದು ಒಂದೆ ವರ್ತಮಾನವನ್ನು ಓದಿಯುವುದಕ್ಕೆ ಅತ್ಯಂತವಾಗಿ ವಿಷಾದಿಸುತ್ತೇನೆ.

ವಿದ್ಯಾರ್ಥಿಗಳ ಪರಾಕ್ರಮ–

ಕೊಲ್ಹಾಪೂರದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಗುಜರಾಥ ರಿಲೀಫ ಫಂಡಿಗಾಗಿ ಮನೆ ಮನೆಗ ಭಿಕ್ಷೆ ಬೇಡಿ, ೧೩೦೦೦ ಅರಿವೆ ೩೦೦ ಪಾತ್ರೆ ೩೦ ಚೀಲ ಅಕ್ಕಿ ಜೋಳವನ್ನು ಕೂಡಿಸಿದ್ದಾರೆ. ಲೋಕಮಾನ್ಯತನದವರ ಹೊರ್ಗ ಊರವರ ವರ್ಗಣಿಯು ಐದು ಸಾವಿರವಾಗಿರುತ್ತದೆ.

ವಿವಿಧ ವರ್ತಮಾನಗಳು

ಬೆಳಗಾವಿಯಲ್ಲಿ ಚಿಟ್ಟೆಗಳ ಉಪದ್ರವವು ಭಯಂಕರವಾಗಿದೆ. ಲಕ್ಷ ಸಂಖ್ಯೆಯಿಂದ ಅವನ್ನು ಕೊಂದರೂ, ಅವುಗಳ ಪೀಳಿಗೆಯು ಮರು ದಿವಸ ಇದ್ದಾಕ್ರಕಾರ ಆಗುತ್ತಿರುವದು.

ಮದ್ರಾಸದಲ್ಲಿ ಭಂಗೀ ಜನರು ಸಂಪು ಮಾಡಿದ್ದಾರೆ. ಅವನ್ನು ಶಾಂತ ಮಾಡಲಿಕ್ಕೆ ಹೋದಂಥ ಕಮೀಶನರ, ಹೆಲ್ಥ ಆಫೀಸರ ಮೊದಲಾದ ಕಾಮದಾರರನ್ನು ಇವರು ಕಲ್ಲಿನಿಂದ ಹೊಡೆದರು.

ಬಂಗಾಲದ ಕೌನ್ಸಿಲದಲ್ಲಿ ಮಂತ್ರಿಗಳು ಬೇಕೆಂಬ ವಾದವಿವಾದವು ಇವತ್ತಿನ ದಿವಸ ನಡೆಯುವದು.

ಆಗ್ರಾದಲ್ಲಿ ಒಬ್ಬ ಮುಸಲಮಾನ ಟಾಂಗಾದವನಿಗೂ ಕೆಲ ಹಿಂದೂ ಜನರಿಗೂ ಜಗಳ ಒಂದು ದಂಗೆಯು ಹುಟ್ಟಿದ್ದಿತು. ಕೂಡಲೆ ಪೇಟೆಯಲ್ಲಿ ಗದ್ದಲವಾಗಿ ಅಂಗಡಿಗಳು ಬಂದಾಗಿ ಎಲ್ಲ ವ್ಯವಹಾರ ಕಟ್ಟಾಯಿತು.

ಮುಂಬಯಿಯಲ್ಲಿ ಬ್ರಾಹ್ಮಣೇತರ ಪರಿಷತ್ತು ಹುಬ್ಬಳ್ಳಿಯಲ್ಲಿ ಧರ್ಮವೀರ ಧ್ಯಾಕರವಿ ಮನೆತನದ ಇವ

ಸ್ವರ ಮಾಡಿರಿ. ಮಾರಿಕಾ ಬೇನೆಗೆ ಅಲಕ್ಷವು ಅನರ್ಥಕ್ಕೆ ಕಾರಣವು

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂ. ಮಾಯಿ
೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸುವದು
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು.
ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೊರಿ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.
ಬೇಗ ಸಂಗ್ರಹಿಸಿರಿ
ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ ಕಿತ್ತೂರ, ಜಿಲ್ಲಾ ಬೆಳಗಾವ

ವನೌಷಧಿ ಕಾರಖಾನಾ ಕಿತ್ತೂರ

ಪುಸ್ತ್ವ ವಿಲಾಸ– ಈ ಗುಳಿಗೆಯು ಸೇವನೆಯಿಂದ ಅತ್ಯಂತ ಕಾಮೋದ್ದೀಪಕ ಮತ್ತು, ವೀರ್ಯವರ್ಧಕ ಮನೋಲ್ಲಾಸವಾಗಿ ಶಕ್ತಿ ಬರುತ್ತದೆ. ೩೦ ಗುಳಿಗೆಗಳಿಗೆ ೧ ರೂ. ೧೦೦ ಕ್ಕೆ ೪ ರೂ.

ಹುರುಕಿನ ಔಷಧ– ಚೀಟು ೧ ಕ್ಕೆ ೧ ಆಣೆ ೧೦೦ ೩ ರೂ ೮ ಆಣೆ.

ಕಣ್ಣಿನ ಔಷದ ಚೀಟು ೧ ಕ್ಕೆ ೩ ಪೈ ೧೦೦ ೧ ರೂ.

ಕೆಮ್ಮಿನ ಔಷದ– ಚೀಟು ೧ ಕ್ಕೆ ೬ ಪೈ. ೧೦೦ ಕ್ಕೆ ೨ ರೂ.

ಜ್ವರದ ಗುಳಿಗೆ– ಈ ಗುಳಿಗೆಗಳು ದೂಷಿತ ಜ್ವರ, ಮಲೇರಿಯಾ ಇನ್‌ಫ್ಲುಯೆಂಜ, ಸನ್ನಿಪಾತ್ಯ ಮೊದಲಾದ ಜ್ವರಗಳಿಗೆ ಅತ್ಯಂತ ಗುಣಕಾರಿಯಾಗಿರುವ ಮತ್ತು ಪ್ರವಾಸಕರಿಗೆ ಉಪಯುಕ್ತವಾದಂಥವುಗಳು. ೪೦ ಕ್ಕೆ ೧ ರೂ. ೧೦೦ ಕ್ಕೆ ೨ ರೂ.

ಸೂಚನಾ— ಒಂದು ಆಣೆ ಟಿಕೀಟು ಕಳಿಸಿದಲ್ಲಿ ನಮ್ಮ ಸುಖಸಂಜೀವನಿಯೆಂಬ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ವನೌಷಧಿ ಕಾರಖಾನಾ ಪೋ ಕಿತ್ತೂರ ಜಿಲ್ಲಾ ಬೆಳಗಾವ

ಡದೇಕಾಗಿತ್ತು. ಆದರೆ ಈ ಸಭೆಯು ವ್ಯವಸ್ಥಾಪಕರು ರಾಜಕೀಯ ಕೆಲಸಕ್ಕೆ ಸ್ಥಳ ಸಿಗಲಾರದೆಂದು ಹೇಳಿದ್ದರಿಂದ, ಸಭೆಯನ್ನು ಡಿ. ಲಿಸ್ಲೆ ಬೀದಿಯಲ್ಲಿರುವ ಸಿಂಧೆ ಹಾಲಿನಲ್ಲಿ ನೆರೆಸುವರು.

ಇಂಗ್ಲಂಡದಲ್ಲಿ ೧೮ ದಿವಸಗಳಿಂದ ಅಹೋರಾತ್ರಿ ಮಳೆಯಾಗುತ್ತಲಿದೆ. ಗುಜರಾಥದಂಥ ಕೇಡಾಗದಿದ್ದರೂ ವಿವಿಧ ರೀತಿಯಿಂದ ಕೇಡಾಗಿರುತ್ತದೆ

ದಬ್ಬಾಳಿಕೆಯಲ್ಲಿ ಸಿಕ್ಕ ಕೈದಿಗಳನ್ನು ಒಮ್ಮೆಯಲೆ ಬಿಡುವದಿಲ್ಲ. ಕ್ರಮೇಣ ಬಿಡುತ್ತಾ ಹೋಗುವೆವು ಈ ಜನರ ಸಂಖ್ಯೆಯು ೬೦ ಉಂಟೆಂದು ಬಂಗಾಲದ ಗವ್ಹರ್ನರಸಾಹೇಬರು ಕೌನ್ಸಿಲದಲ್ಲಿ ಭಾಷಣ ಮಾಡಿದ್ದಾರೆ.

ಶ್ರೀ ಸುಭಾಷಚಂದ್ರ ಬೋಸರ ಪ್ರಕೃತಿಯು ಸ್ವಸ್ಥವಾಗಿ ಸುಧಾರಿಸಿದ್ದು, ಶಿಲ್ಲಾಂಗದಿಂದ ಮನೆಯಿಂದ ಕಲಕತ್ತೆಗೆ ಬಂದಿದ್ದಾರೆ

ಹಿಂದೀ ಜನರ ಹಿತರಕ್ಷಣೆಗಾಗಿ ದಕ್ಷಿಣ ಆಫ್ರಿಕೆಗೆ ಹೋಗಿದ್ದ ರೆವರಂಡ ಅಂಡ್ರೂಸಾಹೇಬರು ಮರಳಿ ಹಿಂದುಸ್ಥಾನಕ್ಕೆ ಬಂದರು ಮುಂಬಯಿ ಮ್ಯುನಿಸಿಪಾಲಿಟಿಯವರು ಇವರಿಗೆ ಮಾನಪತ್ರ ಕೊಟ್ಟು ಇವರನ್ನು ಗೌರವಿಸಿದರು.

NATIONAL TELEGRAPH SCHOOL.

2 Club Road, DELHI

Conducted by R. . larke M. B. E.

Dy Postmaster General [Retd

Results Guaranteed.

Prospectus for 2 annas Stamps

[Quote No. 1831]

ಈ ಪತ್ರವನ್ನು ಅಣ್ಣಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿಯ ತಮ್ಮ ಸಾತಾರಕರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮} ಧಾರವಾಡ ಶುಕ್ರವಾರ ತಾರೀಖು ೨೭ ನೇ ಅಗಸ್ಟ ೧೯೨೭ {ಸಂಚಿಕೆ ೧೮೩

ಕಿರ್ಲೋಸ್ಕರ ಶೇಂಗಾ [ಭುಯಿಮೂಗು] ಒಡೆಯುವ ಯಂತ್ರಗಳು



ಈ ಯಂತ್ರಗಳು ಎರಡು ಮಾದರಿಯವು ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಕಡಿಮೆ ಕ್ರಯದವು [illegible]. ಶೇಂಗಾ ಒಡೆಯಲು ಯಂತ್ರದಲ್ಲಿ [illegible] ಇಡಲ್ಪಟ್ಟಿರುವದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳು ಕಳೆದ ಹಂಗಾಮಿನಲ್ಲಿ [illegible]. ಎತ್ತಿನಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. [illegible] ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ವಿಜಯ ಪುಸ್ತಕಾಲಯ.

೨ನೇ ಶತಮಾನದ ಗೊಂಚಲು	೧೦ ಆಣೆ.
ವಿಚಿತ್ರ ಸಂಶಯ	೫ ,,
[illegible]	೪ ,,
ದೇಶಬಂಧು ದಾಸರ ಚರಿತ್ರೆ	೩ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

[illegible]

[illegible]

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	೧೦—೦—೦ [illegible]
೬ ,,	೬—೦—೦ [illegible]
೪ ,,	೪—೦—೦ [illegible]
[illegible]	[illegible]

[illegible]

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ [illegible] ಕೊಡಲ್ಪಡುತ್ತದೆ.

ಈ ಬ್ಯಾಂಕಿನಲ್ಲಿ [illegible]

ಎ. ಕೆ. [illegible]
ಮ್ಯಾನೇಜಿಂಗ ಡಾಯರೆಕ್ಟರ

[illegible]

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಸುಭಾಷ ರೋಡ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ;

[illegible]

[illegible] ಕೇಳಿಕೊಳ್ಳಬೇಕು.

[illegible]
[illegible]

ವಿಜಯ.

ಧಾರವಾಡ ತಾ-೨೬-೮-೨೭ ನೇ ಇಸ್ವಿ

ಡಾಯರ್ಕಿಗೆ ಅಳಿಗಾಲ

ಮದ್ರಾಸ ಮತ್ತು ಕಲಕತ್ತೆಯಲ್ಲಿ ವಾದವಿವಾದ.

ಇಂಗ್ರೇಜಿ ಸರಕಾರದವರು ಹಿಂದುಸ್ಥಾನವು ಮಹಾಯುದ್ಧದಲ್ಲಿ ಮಾಡಿದ ಸಹಾಯದ ಉಪಕಾರವೆಂದು ಹಿಂದುಸ್ಥಾನಕ್ಕೆ ಸ್ವರಾಜ್ಯ ಸ್ವಾತಂತ್ರ್ಯ ಕೊಡುವ ವಿಶ್ವರೂಪ ತೋರಿಸುವ ಆಡಂಬರ ಮಾಡಿದರು. ಆದರೆ ಹಿಂದೀ ಜನರ ಕೈಯ್ಯಲ್ಲಿ ನಿಜವಾಗಿ ದೊರೆತದ್ದು ಕೊಬ್ಬರಿಯ ಠಾಯಿಯೇ! ಜವಾಬದಾರ ರಾಜ್ಯ ಪದ್ಧತಿ ಎಂಬದು ದೊರೆಯಿತು. ಆದರ ನಿಜವಾದ ಪ್ರಯೋಜನವೆಷ್ಟು? ಏನೂ ಇಲ್ಲ. ಕೌನ್ಸಿಲದ ಮೆಂಬರರ ಸಂಖ್ಯೆ ಹೆಚ್ಚಾಯಿತು ಮಂತ್ರಿಗಳೆಂಬವರು ಹುಟ್ಟಿದರು. ಆದರೆ ಇವರ ಕೈಯ್ಯಲ್ಲಿ ನಿಜವಾದ ಅಧಿಕಾರವೆಷ್ಟು ಇಂಬಿಲ್ಲ. ಕೌನ್ಸಿಲವು ಯಾವದೊಂದು ಠರಾವು ಮಾಡಿದರೆ- ಗವ್ಹರ್ನರ- ಗವ್ಹರ್ನರ ಜನರಲರು ಸರ್ಟಿಫಿಕೇಟು ಕೊಟ್ಟು, ಕೌನ್ಸಿಲದ ಠರಾವಿನ ಅಪಮಾನ ಮಾಡುವರು. ಇಂಥ ಅಪಮಾನವನ್ನು ಪ್ರತಿಯೊಂದು ಕೌನ್ಸಿಲವು ಸಹನ ಮಾಡಿರುತ್ತದೆ ಆದರೂ ಕೆಲ ದೇವಭೋಳೆ ಜನರು ಆಳರಸರ ಲಾಂಗೂಲ ಚಾಲನ ವೃತ್ತಿಯವರಾಗಿ, ಡಾಯರ್ಕಿಯನ್ನು ಯಶಸ್ವಿ ಮಾಡಿ ತೋರಿಸುವ ಹೆಮ್ಮೆ ತೊಟ್ಟರು. ಇವರಲ್ಲಿ ಮದ್ರಾಸದ ಜಸ್ಟೀಸ ಪಕ್ಷದವರು ಪ್ರಬಲರು. ಲಾರ್ಡ ವಿಲಿಂಗಡನ್ನರ ಕಾಲದಲ್ಲಂತೂ ಇವರು ಸುಖಶಾಂತಿ ನೆಲೆಗೊಂಡಂಥ ಕುಟುಂಬದವರಾಗಿದ್ದರು ಇವರೇ ಈಗ ಈ ಡಾಯರ್ಕಿಯು ನಡೆಯಲಾರದೆಂದಿದ್ದಾರೆ ಮಂತ್ರಿಯಾಗಿರುವಾಗ್ಗೇ ಪಾನಗಲ್ಲಿನ ರಾಜರು ರಾಜೀನಾಮೆಯನ್ನು ಬರೆಕೊಂಡು ಗವ್ಹರ್ನರಸಾಹೇಬರ ಹತ್ತರ ಹೋದರು ಆದರೆ ಅವರು ಬೀರಿದ ಸಕ್ಕರೆಯಂಥ ಸವಿಮಾತಿಗೊಳಗಾಗಿ ರಾಜೀನಾಮೆಯ ಕಾಗದವನ್ನು ಕಿಸೆಯಲ್ಲಿ ಹಾಕಿಕೊಂಡು ಬಂದರು. ದಿವಾನ ಬಹಾದ್ದೂರ ಚಿಂತಾಮಣಿ, ಜಗತ್ಸ್ವಾಕರಾಯಣರಂಥ ನೈತಿಕ ಧೈರ್ಯವನ್ನು ಆಗ ವ್ಯಕ್ತಪಡಿಸದಿದ್ದದ್ದು ಸೋಜಿಗವೇ ಸರಿ.

ದಿವಾನಗಿರಿಯು ತಪ್ಪಿದ ಬಳಿಕ ಇವರು ಕೊಯಿಂಮತ್ತೂರಿನಲ್ಲಿ ಸಭೆ ಮಾಡಿ, ಡಾಯರ್ಕಿಯನ್ನು ಅಳಿಸಬೇಕೆಂಬ ಠರಾವು ಮಾಡಿದರೆ- ಜಸ್ಟಿಸ ಪಕ್ಷವು ಮಂತ್ರಿಪದಾರೋಹಣ ಮಾಡಬಾರದೆಂದು ಸ್ವರಾಜ್ಯ ಪಕ್ಷೀಯರು ಸ್ವತಂತ್ರರನ್ನು ಸಚಿವಸ್ಥಾನದಲ್ಲಿರಗೊಟ್ಟರು ಡಾಯರ್ಕಿಯನ್ನು ಅಳಿದ ಹೊರ್ತು ದಿವಾನರಾಗತಕ್ಕದ್ದೇ ಅಲ್ಲವೆಂದು ಇವರು ಮಾಡಿದ ಠರಾವಿನಿಂದ ಸ್ವರಾಜ್ಯ ಪಕ್ಷೀಯರು ಹುರುಪುಗೊಂಡು ಪಾನಗಲ್ಲಿನ ರಾಜರ ಕಡೆದ ವಿಚಾರ ಮಾಡಿಕೊಂಡು ಕೌನ್ಸಿಲದಲ್ಲಿ ಮಂತ್ರಿಗಳನ್ನು ಮನೆಗೆ ಕಳಿಸುವ ಠರಾವು ತಂದಿದ್ದಾರೆ. ಅದರ ಪರಿಣಾಮವು ಇಂದಿನ ದಿವಸ ತಿಳಿಯುವದು.

ಸ್ವರಾಜ್ಯವೆಂಬದು ಮೃಗಜಲದಂತಾಗಿದೆ. ಇಂಗ್ಲಿಷ ಜನರು ದುಂಬಾಲಬಿದ್ದ ಹೊರ್ತು ಯಾರಿಗೂ ಹಕ್ಕ ಸ್ವಾತಂತ್ರ್ಯ ಕೊಟ್ಟವರಲ್ಲ. ಮತ್ತು ಡಾಯರ್ಕಿಯು ಹೇಗೆ ಪ್ರಯೋಜನ ಹೀನವಾಗಿರುತ್ತದೆಂಬ ಭಾಷಣವನ್ನು ಸ್ವರಾಜ್ಯ ಪಕ್ಷದ ಮುಖಂಡರಾದ ಶ್ರೀ. ವೆಂಕಟಾಚಲಮ ಶೆಟ್ಟರು ಸಪ್ರಮಾಣವಾಗಿ ಮಾಡಿದ್ದಾರೆ. ಅದರೊಳಗಿನ ಮುಖ್ಯಾಂಶಗಳನ್ನು ಇದರಡಿ ಕೊಡುತ್ತೇವೆ-

“ಸರಕಾರವು ಜವಾಬದಾರ ರಾಜ್ಯ ಪದ್ಧತಿಯ ಅಧಿಕಾರ ಕೊಟ್ಟಿದೆಂದು ಹೇಳುತ್ತದೆ. ಆದರೆ ಆ ಪ್ರಕಾರ ಅದರ ದೃಷ್ಟಿಯೇ ಬದಲಾಗಿಲ್ಲ. ಹಿಂದುಸ್ಥಾನದ ತಲೆಯ ಮೇಲೆ ಹೆಚ್ಚಿದ ಭಾರ ಮಾತ್ರ ಹೆಚ್ಚಿಗೆ ಆಯಿತು. ಗವ್ಹರ್ನರ- ಗವ್ಹರ್ನರ ಜನರಲರು ಕೊಡುವ ಸರ್ಟಿಫಿಕೇಟುಗಳ ಸೂರಿಯೂ ಆಗುತ್ತಿರುವದು. ಸರಕಾರ ಪಕ್ಷೀಯರು ಸಭಾಸಮಿತಿಯಲ್ಲಿ ಅನವಶ್ಯಕವಾಗಿ ಅಡ್ಡ ಬರುತ್ತಿರುವರು ಮಂತ್ರಿ ಮತ್ತು ಕೌನ್ಸಿಲರರ ನಡುವೆ ಜಳಮುಕಿಯಂತೂ ತಪ್ಪಿದ್ದೇ ಅಲ್ಲ. ಮಂತ್ರಿಗಳ ಕೈಕೆಳಗಿನ ಸೆಕ್ರೆಟರಿಗಳು ಮಂತ್ರಿಗಳ ಹಂಗು ದೊರೆದು, ಪರಭಾರೆ ಗವ್ಹರ್ನರ ಸಾಹೇಬರನ್ನು ಕಂಡು ಅವರ ಕೂಡ ಕಿವಿಮಾತಾಡುವರು. ಇವರಿಗೆ ಮಂತ್ರಿಗಳ ಬೆಲೆಯೂ ಇಲ್ಲ. ಹೆದರಿಕೆಯೂ ಇಲ್ಲ ಆಗಾಗ್ಗೆ ಕೌನ್ಸಿಲರರ ಅಧಿಕಾರವನ್ನು ಹೆಚ್ಚಿಸುವ ಮತ್ತು ಮಂತ್ರಿಗಳ ಅಧಿಕಾರವನ್ನು ಸಂಕಷ್ಟದಲ್ಲಿ ತರುವ ಕೃತಿಯೇ ನಡೆಯುತ್ತಿರುವದು. ಡಾಯರ್ಕಿಯು ಅವ್ಯವಹಾರ್ಯವಾದಂಥ ರಾಜ್ಯಪದ್ಧತಿಯಾಗಿ, ಅಟೋಪ ಮೀರಿದಂಥ ರಾಕ್ಷಸನಾಗಿರುತ್ತದೆಂದು ಪ್ರತಿಯೊಬ್ಬರು ಒಪ್ಪಿದ್ದಾರೆ ಸ್ವತಂತ್ರ ಪಕ್ಷದ ಮಂತ್ರಿಗಳು ಸ್ವಪಕ್ಷ ಸಮರ್ಥನಕ್ಕಾಗಿ ವ್ಯಾಖ್ಯಾನಗಳ ಸೂರೆ ಮಾಡಿದ್ದಾರೆ. ಅಡಿದಂತೆ ಒಂದಾದರೂ ಕೃತಿಯುಂಟೇ? ಮದ್ಯಪಾನ ಪ್ರತಿಬಂಧ ಮಾಡುತ್ತೇವೆಂದು ಹೇಳಿದ್ದಾರೆ. ಇದೊಂದು ಅವರ ಧ್ಯೇಯವೇ ಆಗಿದೆ, ಆದರೆ ಕೃತಿಯು ಹೆಸರಿನಿಂದ ದೊಡ್ಡ ಬಂಡೀಗಾಲಿಯು!! ಮಂತ್ರಿಗಳು ಲೋಕಮತದಿಂದ ಆರಿಸಲ್ಪಟ್ಟವರು. ಆದರೆ ಚಮತ್ಕಾರ ನೋಡಿರಿ. ಇವರು ಕೌನ್ಸಿಲದಲ್ಲಿ ಸರಕಾರದ ಮತಗಳ ಮೇಲೆ ಅವಲಂಬಿಸಿರುವದು ತೀರ ವಿಲಂಗತವಾಗುತ್ತದೆ

ಬ್ರಿಟಿಶರಿಗೆ ತಾವು ಜೈಯಿಸಿ, ತಮ್ಮ ಅಂಕಿತದಲ್ಲಿಟ್ಟುಕೊಂಡಂಥ ಪ್ರಜರಿಗೆ ಅವರ ಯೋಗ್ಯವಾದ ಹಕ್ಕ ಸ್ವಾತಂತ್ರ್ಯ ಕೊಡುವ ಬುದ್ಧಿಯೇ ಇಲ್ಲ ವೀರ್ಯವಾದ ಚಳವಳಿ ಮಾಡಿ, ಬಲವಾಗಿ ವಿರೋಧಿಸಿದರೇ ಅವರು ಮೆತ್ತಗಾಗುವರು ಯಾರು ಬೇಕಾದ್ದು ಅನ್ನಲಿ; ಇತಿಹಾಸದಲ್ಲಿ ಇಂಥ ಅನಂತ ಉದಾಹರಣೆಗಳುಂಟು. ಸರಕಾರದ ಕೃತಿಯು ಎಷ್ಟೂ ಉದಾರವಾಗಿರುವದಿಲ್ಲ. ಸುಳ್ಳೇ ಬಂದದ ವಚನ ಮಾತ್ರ ಕೊಡುತ್ತಿರುವದು ಬಹು ಸಂಖ್ಯಾಕರಾದ ಮೆಂಬರರು ಮಂತ್ರಿಪದ ಮತ್ತು ಡಾಯರ್ಕಿಯ ವಿರುದ್ಧವಿದ್ದದ್ದು ಗೊತ್ತಿದ್ದರೂ, ಎಲ್ಲಾಗಿರಾ ಮೂವರನ್ನು ಹುಡುಕಿ, ಅವರಿಗೆ ಬಿಳಿ ಸಂಗ್ರಹವನ್ನು ಕೆಡಲೆಣಿಸಿತು. ದುರ್ದೈವದಿಂದ ಇಂದು ಸರಕಾರೀ ಉದ್ಯೋಗಸ್ಥರು ಕಡ್ಡಾಯವಲ್ಲಿ ಇಂದು ನಾಳೆ ಅಲ್ಲಿಂದ ಸ್ಥಾನಚ್ಯುತ ಹೊಂದುವಂಥ ಈ ಮೂವರು ದೊರೆತರು. ಇವರು ತಮಗೆ ದಿವಾನಗಿರಿಯು ದೊರೆತ ಬಳಿಕ, ಅದ್ಲಂಡ ಮುದ್ಲಂಡ ಹಂಸನನ್ನು ತಮ್ಮ ಒಗಲಲ್ಲಿ ಹಾಕಿಕೊಂಡರು. ದಿವಾನರಾದ ಬಳಿಕ ಬುದ್ಧಿಗಿಂತ ಸಾಹಸದ ಮಾರ್ಗ ಹಿಡಿದರು. ಪ್ರಾರಂಭದಲ್ಲಿ ಯಶ ದೊರೆತಂತೆ ತೋರಿತು. ನೀರ ಮೇಲಿನ ಗುಳ್ಳೆಯು ಒಡೆಯದೆ ಹೋಗುವದೇ? ಇದೇ ಪ್ರಕಾರ ಮಂತ್ರಿಗಳ ಕರ್ಮಕಾಂಡವಾಯಿತು. ವಿಲಾಯತಿಯಲ್ಲಿ ಅಪಜಯವಾದ ಕೂಡಲೆ ಮಂತ್ರಿಗಳು ರಾಜೀನಾಮೆ ಕೊಡುವರು. ಈ ಮಂತ್ರಿಗಳಿಗೆ ಒಮ್ಮೆಯಲ್ಲ, ನೂರು ಸಾರೆ ಪೆಟ್ಟಿನ ಮೇಲೆ ಪೆಟ್ಟನ್ನುವಂತೆ ಅಪಜಯ ಬಂದವು ಆದರೂ ಅವರು ತಮ್ಮ ಸ್ಥಳಕ್ಕೆ ಅಂಟಿಕೊಂಡಿದ್ದಾರೆ ನಿಜವಾದ ಚುನಾವಣೆಯಿಂದ ಬಂದ ಮೆಂಬರರಲ್ಲಿ ೨/೩ ಜನರು ಡಾಯರ್ಕಿಯ ವಿರುದ್ಧ ಇದ್ದಾರೆ ಯುರೋಪಿಯನ್ನ ಮೆಂಬರರೂ, ಸರಕಾರೀ ಕಾಮದಾರರೂ ಇವರಿಗೆ ಅನುಕೂಲರಾಗಿದ್ದಾರೆ ಇಂದಿನ ದಿವಸ ಯುರೋಪಿಯನ್ನ ಮೆಂಬರರು ಮಂತ್ರಿಗಳ ಬುಡಗಟ್ಟಿ ಮಾಡಲೋಸುಗ ಹೋಟು ಕೊಡುವರು. ಮಂತ್ರಿಗಳು ಮದ್ಯಪಾನವನ್ನು ನಿಲ್ಲಿಸುವಂಥ ಧೈರ್ಯವುಳ್ಳವರಾಗಿದ್ದಾರೆ ಇದಕ್ಕೆ ತಮ್ಮ ಒಪ್ಪಿಗೆಯುಂಟೆಂದು ಗೌರಕಾಯ ಮೆಂಬರರು ಹೇಳುವರೇ? ಒರೇ ಮಂತ್ರಿಗಳ ಪಕ್ಷಗಟ್ಟುವದು ವಿಹಿತವಾಗಲಾರದು.

ದಿವಾನ ಬಹಾದ್ದೂರ ರಂಗನಾಥ ಮೊದ್ಲಿಯಾರರು ಒಂದು ಮಾತನ್ನು ಜಾಹೀರ ಮಾಡಿದ್ದಾರೆ. ಲೋಕಪಕ್ಷದ ಮೆಂಬರರೇ ಬಹುಮತವಾಗಿ

ಯಾವದೊಂದು ಠರಾವು ನಾಮಂಜೂರಾಯಿತೆಂದು ತಿಳಿದು ಬಂದ ಕೂಡಲೆ, ರಾಜೀನಾಮೆ ಕೊಡುವೆವೆಂದು ಇವರು ಸಾರಿ ಸಾರಿ ಹೇಳಿದ್ದಾರೆ. ಇವರು ಜಿದ್ದೀಯರಾಗಿದ್ದಾರೆ. ನಾಳಿನ ದಿವಸ ಎಣಿಸುವ ಮತಗಳನ್ನು ನೋಡಿ ಇವರು ರಾಜೀನಾಮೆ ಕೊಡುವರೆಂದು ನಾನು ಭಾವಿಸುತ್ತೇನೆ. ರಾಜೀನಾಮೆಗಿಂತ ಘನವಾದ ಕಾರ್ಯವಾವದಿರುವದು?

ಕೇಸರೀ ಕಚೇರಿಯಲ್ಲಿ
ಪುಣೆಯಲ್ಲಿ ಟಿಳಕರ ಮಕ್ಕಳ ಕಲಹ.

—೦—

ಲೋಕಮಾನ್ಯರು ಪರಲೋಕವಾಸಿಯಾಗುವ ಪೂರ್ವದಲ್ಲಿ ಪಂಚರನ್ನು ನೇಮಿಸಿ, ಕೇಸರಿ ಮತ್ತು ಮರಾಠಾ ವರ್ತಮಾನಪತ್ರಗಳು ಸೂರ್ಯಚಂದ್ರರಿರುವ ತನಕ ನಡೆಯುವಂತೆ ಮೃತ್ಯುಪತ್ರ ಮಾಡಿಟ್ಟಿದ್ದಾರೆ. ಅದೇ ಪ್ರಕಾರ ಕಳೆದಾರು ವರ್ಷಗಳಿಂದ ಇವೆರಡೂ ಪತ್ರಗಳ ವ್ಯವಸ್ಥೆಯಾಗಿರುತ್ತದೆ.

ಗಾಯಕವಾಡವಾಡೆಯು ಕೇಸರೀ ಮರಾಠಾ ಪತ್ರದ ಸ್ವಾಮಿತ್ವದಲ್ಲಿ. ಅಲ್ಲಿ ಕೆಲಸ ಮಾಡುವ ಮಟ್ಟಿಗೆ ಜನರು ಇರತಕ್ಕದ್ದು. ಇಷ್ಟಕ್ಕೆ ಸಾಕಷ್ಟು ಸ್ಥಳ ಬಿಟ್ಟು, ಉಳಿದ ಸ್ಥಳವು ತಮ್ಮದೇ ಎಂದೂ, ಟ್ರಸ್ಟಿಯಾದ ಮೆಸರ್ಸ ಕೇಳಕರ- ಗೋಖಲೆ ಮೊದಲಾದವರು ಮೂರು ಲಕ್ಷ ರೂಪಾಯಿಗಳ ಅಫರಾತಫರು ಮಾಡಿದ್ದಾರೆಂದೂ ಲೋಕಮಾನ್ಯರ ಚಿರಂಜೀವದ್ವಯರು ಕಲಹವೆಬ್ಬಿಸಿದ್ದಾರೆ. ಈ ಕಲಹದ ಪ್ರಾರಂಭದಲ್ಲಿ ಇವರು ಗೋಖಲೆ ಮೊದಲಾದವರನ್ನು ಕೊಂದು ಹಾಕುವಂಥ ಬಿರುನುಡಿಗಳನ್ನೂ ಆಡಿದರು.

ಲೋಕಮಾನ್ಯರ ಮಕ್ಕಳಿಗೂ ಟ್ರಸ್ಟಿಗಳಿಗೂ ಮೊದಲಿನಿಂದಲೇ ಭಟ್ಟಿ ಕಟ್ಟಿದೆ. ಈ ಮೊದಲು ಟಿಳಕ ಪುತ್ರರು ಹಾಯಕೋರ್ಟಿನಲ್ಲಿ ೪೪೦೦೦ ರೂಪಾಯಿಗಳ ಬಗ್ಗೆ ಟ್ರಸ್ಟಿಗಳ ಮೇಲೆ ದಾವೆ ಮಾಡಿದ್ದಾರೆ. ದಾವೆ ಮತ್ತು ಭಯೋತ್ಪಾದಕ ದುಷ್ಟ ಭಾಷಣ ಕೇಳಿ, ಟ್ರಸ್ಟಿಗಳು ತಮ್ಮ ಜೀವ ಸಂಕಟದಲ್ಲಿರುತ್ತದೆಂದು ಪೋಲೀಸಸಾಹೇಬರಿಗೆ ತಿಳಿಸಿದರು,

ಸಾಹೇಬರು ಎರಡೂ ಪಕ್ಷದವರನ್ನು ತಮ್ಮ ಆಫೀಸಿಗೆ ಕರೆಸಿದರು. ಟಿಳಕ ಪುತ್ರರು ತಾತ್ಸಿಟ್ಟಿನ ಭರದಲ್ಲಿ ಮಾತಾಡಿದ್ದು ನಿಜ. ಹಾಗೇನೂ ತಮ್ಮ ಉದ್ದೇಶವಿರಲಿಲ್ಲೆಂದು ಹೇಳಿದರು. ಇದರಿಂದ ಈ ವಿಷಯವು ಇಷ್ಟಕ್ಕೆ ಶಾಂತವಾಯಿತು. ಗಾಯಕವಾಡ ವಾಡೆಯ ಕಬಜಾ, ಮತ್ತು ದ್ರವ್ಯದ ಬಗ್ಗೆ ಕೋರ್ಟಿನಲ್ಲಿ ನ್ಯಾಯ ನಡೆಯತಕ್ಕದ್ದಿರುವದು.

ನಿರಾಶ್ರಿತರಿಗಾಗಿ
ಮುಂಬಯಿ ಸರಕಾರದ ಪ್ರಕಟನೆ.

—೦—

ಗುಜರಾಥದಲ್ಲಾದ ಹಾನಿಯನ್ನು ಪ್ರತ್ಯಕ್ಷವಾಗಿ ನೋಡಲು ಸರಕಾರದ ವತಿಯಿಂದ ನಾ. ರಝ್ಯಾ ಮತ್ತು ಮೇಥಾ ಮತ್ತು ಮಂತ್ರಿಗಳಾದ ದೇಸಾಯಿ ಹಾಗು ಪ್ರಧಾನರು ಹೋಗಿ ಬಂದರು. ನಾಮದಾರ ಗವ್ಹರ್ನರಸಾಹೇಬರನ್ನು ಇದೇ ವಿಷಯವಾಗಿ ಕಾಣಲಿಕ್ಕೆ ಹೋಗಿದ್ದ ಶ್ರೀ. ಪಟೇಲರೂ ಮಂತ್ರಿಗಳೂ ಮುಂದಾಗಿ ಮಾತಾಡಿಕೊಂಡು, ಗವ್ಹರ್ನರಸಾಹೇಬರನ್ನು ಕಾಣಲಿಕ್ಕೆ ಹೋದರು. ಸಾಹೇಬರು ಬಹುತೇಕವಾಗಿ ಇವರು ಮಾಡಿದ ಸೂಚನೆಗಳನ್ನು ಒಪ್ಪಿದರು. ಫ್ಯಾಮಿನ ಫಂಡಿನಿಂದ ರೈತರಿಗೆ ದ್ರವ್ಯ ಸಹಾಯ ಮಾಡಬೇಕೆಂದು ಶ್ರೀ. ಪಟೇಲರು ಸೂಚಿಸಿದ್ದನ್ನು ಸಾಹೇಬರು ಒಪ್ಪಿದರು. ಮತ್ತು ಸರಕಾರವು ಯಾವ ರೀತಿಯಿಂದ ಸಹಾಯ ಮಾಡುವದೆಂಬದನ್ನು ಕುರಿತು ಒಂದು ಪ್ರೆಸನೋಟನ್ನು ಪ್ರಸಿದ್ಧ ಮಾಡಿರುವರು. ಹೊಲಗಳಲ್ಲಿ ಬಿತ್ತಿದ್ದನ್ನು ಮುರಿದು ಹೊಸದಾಗಿ ಬಿತ್ತಲಿಕ್ಕೆ ಬೇಕಾಗುವ ಬೀಜದ ದೆಸೆಯಿಂದ ಸರಕಾರವು ಒಂದು ವರ್ಷದ ತನಕ ಅವಶ್ಯವೆನಿಸುವಷ್ಟು ದುಡ್ಡು ಕೊಡುವದು. ಇದರ ಮೇಲೆ ಒಂದು ವರ್ಷದ ತನಕ ಬಡ್ಡಿ ಮಾತ್ರ ತಕ್ಕೊಳ್ಳಲಾರದು. ಇದು ನಿಂತ ಕಾಲ ಮೇಲೆ ಮಾಡುವ ಸಹಾಯವಾಯಿತು. ಮನೆ ಕಟ್ಟಿಕೊಳ್ಳುವದಕ್ಕೂ, ಹೊಲಗಳ ದುರಸ್ತಿಗೂ ಎಷ್ಟು ದ್ರವ್ಯ ಬೇಕಾಗುವದೆಂಬದರ ಅಂದಾಜು ನಡೆದಿದೆ. ಈ ಅಂದಾಜು ಬಂದ ಕೂಡಲೆ ಈ ಬಗ್ಗೆ ಬೇರೊಂದು ಪ್ರಕಟನೆಯನ್ನು ಪ್ರಸಿದ್ಧ ಮಾಡುವದು.

ಸತ್ಯಾರ್ಥಪ್ರಕಾಶದ ಮೇಲೆ ಮುಸಲಮಾನರ
ಕೋಪ.

—೦—

ಆರ್ಯ ಸಮಾಜ ಸ್ಥಾಪಕರಾದ ಶ್ರೀ ಸ್ವಾಮಿ ದಯಾನಂದರು ಸತ್ಯಾರ್ಥ ಪ್ರಕಾಶವೆಂಬ ಪುಸ್ತಕ ಬರೆದಿದ್ದಾರೆ. ಇದರಲ್ಲಿ ಹಿಂದೂ ಪುರಾಣ, ಕ್ರಿಶ್ಚನ್ನರ ಬಾಯಬಲ ಮತ್ತು ಮುಸಲಮಾನರ ಕುರಾಣದ ಮೇಲೆ ಕಂಚಿತ ಹಾಕಿದಂಥ ಟೀಕೆಗಳುಂಟು. ಈ ಪುಸ್ತಕವು ಪ್ರಸಿದ್ಧವಾಗಿ ಕನಿಷ್ಠ ೭೦ ವರ್ಷವಾಯಿತು. ಮುಸಲಮಾನರು, ಹಿಂದೂಜನರು ಮತ್ತು ಸರಕಾರದವರು ಇದನ್ನು ನೂರಾರು ಸಾರೆ ಓದಿದ್ದಾರೆ. ಪುಸ್ತಕದ ಲಕ್ಷಾವಧಿ ಪ್ರತಿಗಳ ನೂರಾರು ಆವೃತ್ತಿಗಳು ಹೊರಟಿರುತ್ತವೆ. ಈವರೆಗೆ ಇದರಲ್ಲಿ ಇಂಥದೊಂದು ಆಕ್ಷೇಪಾರ್ಹವಾದ ಭಾಗವಿರುತ್ತದೆಂದು ಯಾರೂ ತಕರಾರು ಮಾಡಲಿಲ್ಲ. ಆದರೆ ಹಿಂದೂ ಮುಸಲಮಾನ ಮನಸ್ತಾಪದ ದೆಸೆಯಿಂದ ಇದರಲ್ಲಿ ಕುರಾಣ ಮತ್ತು ಪೈಗಂಬರರ ವಿಷಯಕವಾಗಿರುವ ಭಾಗವು ಮತದ್ವೇಷ ಬೆಳೆಸುವಂಥಾದ್ದಾಗಿರುವದರಿಂದ ಇದನ್ನು ಪ್ರೊಸ್ಕ್ರಾಯಿಬ ಮಾಡಬೇಕೆಂದು ಲಾಹೋರಿನಲ್ಲಿ ಹೊರಡುವ ಜಮೀನದಾರ ಪತ್ರವು ಚಳವಳಿ ನಡೆಸಿರುತ್ತದೆ.

ನಾಗಪೂರಿನಲ್ಲಿ ಹಿಂದೂ ಮುಸಲಮಾನ
ಪ್ರಕೋಪವು!!

—೦—

ನಾಗಪೂರಿನಲ್ಲಿ ಹಿಂದೂ ಮುಸಲಮಾನರ ನಡುವೆ ಮತದ್ವೇಷವು ಕಲ್ಪನಾತೀತವಾಗಿ ಬೆಳೆದಿರುತ್ತದೆ. ಮುಸಲಮಾನರ ಮೊಹಲ್ಲೆಗಳಲ್ಲಿ ಹಿಂದೂ ಜನರ ವಿರುದ್ಧ ಮತ್ತು ಹಿಂದೂ ಜನರ ಬೀದಿಗಳಲ್ಲಿ ಮುಸಲಮಾನರ ವಿರುದ್ಧ ದಿನಾಲು ವೀರಾವೇಶದ ವ್ಯಾಖ್ಯಾನಗಳಾಗುತ್ತಿರುವವು. ವ್ಯಾಖ್ಯಾನ ಕೇಳಲಿಕ್ಕೆ ಜನರು ಕಯ್ಯಲ್ಲಿ ದೊಣ್ಣೆಗಳನ್ನು ಹಿಡಕೊಂಡೇ ಹೋಗುವರು. ಈ ಪ್ರಕಾರ ಉಭಯ ಪಕ್ಷಗಳ ನಡುವೆ ಸ್ವಮತ ಸಮರ್ಥನೆಯು ಹಾಗು ಬಲಾಬಲದ ಪ್ರದರ್ಶನ ನಡೆದಿದ್ದು, ಯಾವಾಗ ಉಭಯತರಿಗೆ ಲಾಠಿಯ ಯುದ್ಧ ಹತ್ತಿ, ಲಾಠಿಗಳು ರಕ್ತಮಯವಾಗುವವೆಂಬ ನಿಯಮವಿಲ್ಲದಾಗಿದೆ. ಭಾವೀ ಉತ್ಪಾತಗಳ ಸೂಚಕವಾಗಿ ಸಂದಿಗಳಲ್ಲಿ ಒಬ್ಬೊಂಟಿಗರೇ ಆದಂಥವರು ಪಕ್ಷಪರಪಕ್ಷಗಳಿಂದ ಲತ್ತೆ ತಿನ್ನುತ್ತಿದ್ದಾರೆ.

ಮಾಮಲೇದಾರರ ಕಚೇರಿಯ ಬಾಗಿಲದಲ್ಲಿ
ಕಾಯದೆಭಂಗವು.

[—[°]—]

ನಾಗಪೂರದಲ್ಲಿ ಹಿಂದೂ ಮುಸಲಮಾನ ಕಲಹವು ವಿಕೋಪಕ್ಕೆ ಹೋದಂತೆ ಕಾಯದೆಭಂಗ ಮಾಡುವಂಥ ಹ್ವಾಲಂಟಿಯರರ ಕೃತ್ಯವೂ ವಿಕೋಪಕ್ಕೆ ಹೋಗಿದೆ. ಮೂವರು ಸ್ವಯಂ ಸೇವಕರ ಶಸ್ತ್ರಧಾರಿಯಾಗಿ ತಹಶೀಲದಾರರ ಕಚೇರಿಯ ಬಾಗಿಲದ ಮುಂದೆ ಭೀಷ್ಮಾಚಾರ್ಯರಂತೆ ಉಸ್ತಕ್ಕೆ ಮಲಕೊಂಡು ದಾರಿಯನ್ನು ಬಂದು ಮಾಡಿದರು. ಕೆಲಸದ ನಿಮಿತ್ತವಾಗಿ ಹೋಗುವಂಥವರು ಇವರನ್ನು ದಾಟಬೇಕಾಯಿತು. ಅನೇಕರು ಗೋಡೆ ಹಾರಿ ಒಳಗೆ ಹೋದರು. ಬಾಗಿಲವೇ ಬಂದಾದ ವರ್ತಮಾನ ಕೇಳಿ, ಸಾವಿರಾರು ಜನರು ಇಲ್ಲಿ ನೆರೆ

ಶ್ರೀ ಗಜಾನನೋತ್ಸವ ಧಾರವಾಡ.

ಸದರ್ನ ಮರಾಠಾ ಬ್ಯಾಂಕಿನವರು ಶ್ರೀ ಗಣೇಶೋತ್ಸವಕ್ಕೆ ತಮ್ಮ ಅಟ್ಟವನ್ನು ಕೊಡಲು ಒಪ್ಪಲಿಲ್ಲವೆಂದು ಈ ಮೊದಲೇ ಪ್ರಸಿದ್ಧ ಮಾಡಿರುವೆವು. ಆದರೆ ಚೇರಮನ್ನ ಸಾಹೇಬರಿಗೆ ಭೆಟ್ಟಿಯಾಗಿ ಕೇಳಲು ಅವರು ಕೆಲವು ಕರಾರುಗಳ ಮೇಲೆ ಕೊಡಲು ಸಮ್ಮತಿಸಿರುವರು. ಅದಕ್ಕೆ ಚೇರಮನ್ನರಾದ ಶ್ರೀ. ಜೋಶಿ ವಿಶ್ವನಾಥರಾಯರಿಗೆ ನಾವು ಬಹಳೇ ಋಣಿಯಾಗಿದ್ದೇವೆ.

ಉತ್ಸವದ ಕಾರ್ಯಕ್ರಮವು ೩೧-೮-೨೭ ರಿಂದ ೬-೯-೨೭ರ ವರೆಗೆ ನಡೆಯುವದು. ದಿನಾಲು ಸಾಯಂಕಾಲ ೬ ಘಂಟೆಗೆ ಪ್ರವಚನ, ಉಪನ್ಯಾಸ ಇಲ್ಲವೆ ಕೀರ್ತನಗಳು ಆಗುವವು.

ಇದಲ್ಲದೆ ಆದಿತ್ಯವಾರ (೪-೯-೨೭) ದಿನ ಸಾಯಂಕಾಲ ೪ರಿಂದ ೬ರ ವರೆಗೆ ಗುಡ್ಡ ಇಂಗ್ಲೀಷ ಸ್ಕೂಲದ ಹೊಸ ಕಟ್ಟಡದ ಎದುರಿನ ಬೈಲಿನಲ್ಲಿ ಸಮರ್ಥ ವ್ಯಾಯಾಮಶಾಲೆಯ ವಿದ್ಯಾರ್ಥಿಗಳು ಲಾಠಿ, ಲೇಝಿಮ, ಬೊಥಾಟಿ ಇತ್ಯಾದಿಗಳನ್ನು ಆಡಿ ತೋರಿಸುವರು.

ಕಾರ್ಯಕ್ರಮವು.

ತಾ||	ವಿಷಯ	ಉಪನ್ಯಾಸಕರು
೩೧-೮-೨೭	ಪ್ರವಚನ	ವೇ. ನಾಗೇಶ ಶಾಸ್ತ್ರಿಗಳು
೧-೯-೨೭	ಉಪನ್ಯಾಸ	ಪ್ರೊ. ಚನ್ನಕೇಶವ ಅಯ್ಯಂಗಾರ ಬಿ. ಎ
೨-೯-೨೭	,,	ಶ್ರೀಮತಿ ಆರ್. ಕಲ್ಯಾಣಮ್ಮಾ ಸಂಪಾದಕರು ಸರಸ್ವತಿ
೩-೯-೨೭	ಪ್ರವಚನ	ವೇ. ಗಲಗಲಿ ಕೂರ್ಮಾಚಾರ್ಯರು
೪-೯-೨೭	ಕೀರ್ತನ	ವೇ. ಹರಿದಾಸ ರಾಮಶಾಸ್ತ್ರಿಗಳು ಮುಳಗುಂದ
೫-೯-೨೭	ಉಪನ್ಯಾಸ	ಶ್ರೀಮತಿ ಕನಕಲಕ್ಷ್ಮಮ್ಮಾ ಎಂ. ಎ.
೬-೯-೨೭	ಮೇಳೆಗಳ ಸಮ್ಮೇಲನ	ವೇ. ಕೌಜಲಗಿ ಶ್ರೀನಿವಾಸರಾಯರು ಮತ್ತು

ಉಪಸಂಹಾರ

ಕಾರ್ಯಕ್ರಮವನ್ನು ಯಶಸ್ವಿಯಾಗಿ ಕೊನೆಗಾಣಿಸಲು ಧಾರವಾಡದ ನಾಗರಿಕರು ಎಲ್ಲ ರೀತಿಯಿಂದ ಸಹಾಯ ಮಾಡುವರೆಂದು ಕೋರುತ್ತೇವೆ.

ಸ್ಥಳ ಗ. ಉ. ಮಂಡಳಿ ಧಾರವಾಡ. } ಕಾರ್ಯದರ್ಶಿಗಳು.
ತಾ|| ೨೬-೮-೧೯೨೭ }

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸಿರುವದು.

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ.

ಆಯುರ್ವೇಷಧಿ ಕಾರಖಾನಾ ಕಿತ್ತೂರ

ಮನ್ಮಥವಿಲಾಸ— ಈ ಗುಳಿಗೆಯ ಸೇವನೆಯಿಂದ ಅತ್ಯಂತ ಶಾಂತೋದ್ದೀಪಕ ಮತ್ತು ವೀರ್ಯವರ್ಧಕ ಮನೋಲ್ಲಾಸವಾಗಿ ಶಕ್ತಿ ಬರುತ್ತದೆ. ೩೦ ಗುಳಿಗೆಗಳಿಗೆ ೧ ರೂ. ೧೦೦ ಕ್ಕೆ ೪ ರೂ.

ಹುರುಕಿನ ಔಷಧ— ಚೀಟು ೧ ಕ್ಕೆ ೧ ಆಣೆ ೧೦೦ ೩ ರೂ ೮ ಆಣೆ.

ಕಣ್ಣಿನ ಔಷಧ ಚೀಟು ೧ ಕ್ಕೆ ೩ ಪೈ ೧೦೦ ೧ ರೂ.

ಹೇನಿನ ಔಷಧ - ಚೀಟು ೧ ಕ್ಕೆ ೬ ಪೈ. ೧೦೦ ಕ್ಕೆ ೨ ರೂ.

ಜ್ವರದ ಗುಳಿಗೆ - ಈ ಗುಳಿಗೆಗಳು ದೂಷಿತ ಜ್ವರ, ಮಲೇರಿಯಾ ಇನ್‌ಫ್ಲುಯೆಂಝಾ, ಸನ್ನಿಪಾತ, ಮುಂತಾದ ಜ್ವರಗಳಿಗೆ ಅತ್ಯಂತ ಗುಣ-ಕಾರಿಯಾಗಿರುವ ಮತ್ತು ಪ್ರವಾಸಕರಿಗೆ ಉಪಯುಕ್ತವಾದುವು. ೨೦ ಕ್ಕೆ ೧ ರೂ. ೧೦೦ಕ್ಕೆ ೨ ರೂ.

ಸೂಚನಾ— ಒಂದು ಆಣೆ ಟಿಕೀಟು ಕಳಿಸಿದಲ್ಲಿ ನಮ್ಮ ಸುಖಸಂಜೀವಿನಿಯೆಂಬ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಆಯುರ್ವೇಷಧ ಕಾರಖಾನಾ ಪೋ ಕಿತ್ತೂರ ಜಿಲ್ಹಾ ಬೆಳಗಾವ

ಸ್ಮಶಾನಯಾತ್ರೆಯ ಮೊದಲು ಕೋಣನ ಬಲಿ.

—o—

ಸ್ವರ್ಗವಾಸಿ ಝಗಲುಲ ಪಾಷ್ಯಾನ ಸ್ಮಶಾನ ಯಾತ್ರೆ ಹೊರಡುವ ಮೊದಲು ಪಾರ್ಲಮೆಂಟದ ಭಾಗಿಲದಲ್ಲಿ ಒಂದು ಕೋಣನ ಬಲೀ ಕೊಟ್ಟರು. ಕೈರೋ ಪಟ್ಟಣವೇ ಮೆರವಣಿಗೆಯಲ್ಲಿ ಸೇರಿತು. ನಾಲ್ಕು ಸಾವಿರ ಸರಕಾರೀ ಕಾಮದಾರರು ಕಬರಸ್ಥಾನದಲ್ಲಿ ನೆರೆದಿದ್ದರು ಮೃತರ ದೇಹವನ್ನು ತೋಫಿನ ಬಂಡಿಯ ಮೇಲೆ ಇಟ್ಟಿದ್ದರು. ಸಾವಿರಾರು ಜನರೂ ವಿದ್ಯಾರ್ಥಿಗಳೂ ದುಃಖಸೂಚಕ ನಿಶಾನೆಗಳನ್ನು ಹಿಡಕೊಂಡು ಮೆರವಣಿಗೆಯ ಮುಂದೆ ನಡೆಯುತ್ತಿದ್ದರು.

ಮೂರು ಲಕ್ಷಕ್ಕೆ ಒಂದು ಕುದುರಿಯ ಮಾರಾಟ

ವಿಲಾಯತಿಯ ಡರ್ಬಿ ಸಂದ್ಯದಲ್ಲಿ ಒಂದನೆಯ ನಂಬರ ಬಂದಿದ್ದ ಕಾಲಬಾಯ ಎಂಬ ಕುದುರಿಯು ಮೂರು ಲಕ್ಷಕ್ಕೆ ಮಾರಲ್ಪಟ್ಟಿತು.

ಸೋಮನಾಥನ ದೊರಕನ—

ಹಿಂದುಸ್ಥಾನ ಸರಕಾರದವರು ಜನೋದೆಯ ಹಿಂದಾರ ಸರಹಿಂದಿನ ಘೋರಪಡೆಯವರು ಸೋಮನಾಥ ಸಂಸ್ಥಾನದ ದರ್ಬಾರಾಗಬೇಕೆಂದು ಪ್ರಸಿದ್ಧ ಮಾಡಿದ್ದಾರೆ.

ಖಾದಿಯ ಧಾರಣೆ ಹೆಚ್ಚಿತು—

ತಿರುಪತ್ತೂರ ಖಾದಿಯು ಪಡಿಮಾಲಿಯಾಗಿದೆ. ಅಲ್ಲಿಯ ಧಾರಣೆಯು ಏರಿದ್ದರಿಂದ ಅಲ್ಲಿಯ ವರ್ತಕರು ಮಹಾತ್ಮರ ಸಮ್ಮತಿ ಪಡಕೊಂಡು ವಾರಿಗೆ ಒಂಭತ್ತು ಕಾಸಿನಂತೆ ಧಾರಣೆಯಂತೆ ಹೆಚ್ಚಿಸಿದ್ದಾರೆ.

ಬೆಳಗಾವಿಯಲ್ಲಿ ಒಬ್ಬ ಒಡಿಗನು ತನ್ನ ಸೂಳೆಯನ್ನು ಕಡತದ ಮೇಲೆ ಕಡತ ಹಾಕಿ ಕೊಂದು, ತಾನು ಬಾವಿಯಲ್ಲಿ ಹಾರಿಕೊಂಡು ಜೀವ ಕೊಟ್ಟಿರುತ್ತಾನೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿಯ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

'R. N. B. 1443'

ವಿಜಯ

ನಿತ್ಯ ಪತ್ರ | ಬಿಡಿ ಅರ್ಧ ಆಣೆ

ಸಂಪಾದಕರು:- ಆಲ್ಲೂರು ವೆಂಕಟರಾಯರು ಬಾಳಾಚಾರ್ಯ ಜೋಶೀ.

ವರ್ಷ ೮) ಧಾರವಾಡ ಶನಿವಾರ ತಾರೀಖು ೨೭ ನೇ ಆಗಸ್ಟ ೧೯೨೭ (ಸಂಚಿಕೆ ೧೮೪

ಕಿರ್ಲೋಸ್ಕರ ಶೇಂಗಾ [ಬೆಮೂಗು] ಒಡೆಯುವ ಯಂತ್ರಗಳು



ಈ ಯಂತ್ರಗಳು ಎರಡು ಮಾದರಿಯವು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತವೆ. ಅವು ಕಡಿಮೆ ಕ್ರಯದವು. ಬಾಳಿಕೆ ಉಳ್ಳವು. ಹೊಟ್ಟನ್ನು ಹಾರಿಸಲು ಯಂತ್ರದಲ್ಲಿ ಬೀಸಣಿಕೆಯನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳು ಕಳೆದ ಹಂಗಾಮಿನಲ್ಲಿ ಬಹು ಉಪಯೋಗಿಯಾಗಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಹೋಗದ್ದರಿಂದ ಸಾಹುಕಾರರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ಕೇಳಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಬ್ಯಾಂಕ ಲಿಮಿಟೆಡ ಧಾರವಾಡ.

ಈ ಬ್ಯಾಂಕಿನಲ್ಲಿ ಸಾಲ, ಠೇವು ಮುಂತಾದ ಬಗೆ ಬಗೆಯ ವ್ಯವಹಾರ ನಡೆಯುತ್ತದೆ. ವಿವರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಗ್ಗೆಯ ಏರ್ಪಾಡು ಸಹ ಮಾಡಲಾಗಿದೆ. [illegible]

ವಿ. ಕೆ. ಶಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

[illegible]

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವುಗಳು ಐದು ಲಕ್ಷದ ಮೇಲಿವೆ. ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯುವದು. ಠೇವು ಮತ್ತು ಬೇರೆ ತರದ ಸಾಲಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ಹೆಚ್ಚಿನ ಸಂಗತಿಗಳನ್ನು ಕಛೇರಿಗೆ ಬಂದು ತಿಳಕೊಳ್ಳಬೇಕು.

[illegible] ಬಿ. [illegible]
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ ಪುಸ್ತಕಾಲಯ.

೨೦ನೇ ಶತಮಾನದ ಗೊಂದಲ	೧೦ ಆಣೆ,
ವಿಚಿತ್ರ ಸಂಶಯ	೫ ,,
ಲೋಕಮಾನ್ಯ ಟಿಳಕರ ಚರಿತ್ರೆ	೪ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ವೆಚ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ಜಾಹೀರಾತಿನ ದರಗಳು.

ತಿಂಗಳು ಕಾಲದ ಜಾಹಿರಾತುಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದಾಣಿ ಆಣೆ ಇಂಗ್ಲಿಷ ಪ್ರತಿಯೊಂದು ಸಾಲಿಗೆ ಎರಡು ಆಣೆ ದರ [illegible], ಮ್ಯುನಿಸಿಪಾಲಿಟಿ ಲೋಕಲ್‌ಬೋರ್ಡ ಗೀಲ ಬ್ಯಾಂಕ ಮುಂತಾದ ಸಾರ್ವಜನಿಕ ಸೊಸೈಟಿಗಳಿಗೆ [illegible] ರಿಂದ [illegible] ಕನ್ನಡದಲ್ಲಿ ಹಾಕಿಸುವದಿದ್ದರೆ ಅದು [illegible] ಕಾಲದ ಒಳಗೆ ಇನ್ನೂ ಜಾಸ್ತಿ ಕಾಲ ಜಾಹಿರಾತುಗಳನ್ನು ಕೊಡುವವರು ಕಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೪ ,,	೪—೦—೦ ರೂ
ವಾರ ಪತ್ರಿಕೆ ೧ ವರ್ಷಕ್ಕೆ	೩—೧೨—೦ ರೂ

[illegible]

ಮ್ಯಾನೇಜರ [illegible] ಧಾರವಾಡ

ವಿಜಯ.

ಧಾರವಾಡ ತಾ-೨೭-೮-೨೭ ನೇ ಇಸ್ವಿ

ಡಾಯರ್ಕಿಯು ಹೇಗೆ ನಿರುಪಯೋಗವಾಯಿತು.

ಡಾಯರ್ಕಿಯ ಪುರಸ್ಕರ್ತರಾಗಿ ಆರು ವರ್ಷಗಳ ವರೆಗೆ ಅದರ ಬೊರೆತನ ಮಾಡಿದ ಪಾನಗಲ್ಲಿನ ರಾಜರೇ ಅದರ ನಿರುಪಯುಕ್ತತೆಯನ್ನು ಮುಂದೆ ಕೊಟ್ಟಂತೆ ಹೇಳುತ್ತಾರೆ-

ಸಾಧಾರಣೆಯನ್ನು ಯಶಸ್ವಿ ಮಾಡಿ ತೋರಿಸುವದಕ್ಕಾಗಿಯೇ ನಮ್ಮ ಪಕ್ಷವಿತ್ತು. ಒರೆಗಲ್ಲಿಗೆ ಹಚ್ಚಿದೆ ಅದನ್ನು ಪಳಿಯುಕೂಡದೆಂದೇ ನಮ್ಮ ಮತವು. ಆದ್ದರಿಂದ ದಿವಾನಗಿರಿಯನ್ನು ಅಂಗೀಕರಿಸಿದೆವು. ೧೯೨೦ ನೆಯ ಚುನಾವಣೆಯಲ್ಲಿ ನಾವು ಬಹು ದೊಡ್ಡ ಮತಗಳಿಂದ ಆರಿಸಲ್ಪಟ್ಟೆವು ನಮ್ಮ ಬುದ್ಧಿಸಾಮರ್ಥ್ಯವನ್ನು ವೆಚ್ಚಮಾಡಿ, ದಿವಾನಗಿರಿಯನ್ನಾಳಿದೆವು. ದ್ವಿದಳ ದೊರೆತನವು ಬಹು ಕಠಿಣವಾದದ್ದು. ಇಂದಿಗೆ ಸಹ ನಮ್ಮ ಬಣದಲ್ಲಿ ಇದನ್ನು ಆಳಬಹುದೆಂಬ ಮತದವರಿದ್ದಾರೆ ಆದರೆ ಈಗಿನ ಬಿಕ್ಕಟ್ಟಿನ ಅವಸ್ಥೆಯಲ್ಲಿ ಅದು ಅವ್ಯವಹಾರ್ಯವಾಗಿರುತ್ತದೆ. ೧೯೨೦ ರಲ್ಲಿ ನಮ್ಮ ಬಹುಮತವಿತ್ತು. ಆದ್ದರಿಂದ ಸರಕಾರ ಪಕ್ಷೀಯರು ನಮ್ಮ ಕೂಡ ಸಹಕಾರದಿಂದ ನಡೆದರು. ಎರಡನೆಯ ಚುನಾವಣೆಯಲ್ಲಿ ಅವರ ಸ್ವರೂಪ ಬದಲಾಯಿತು ನಮ್ಮ ಬಹುಮತ ಕರಗಿತು. ಸರಕಾರ ಪಕ್ಷೀಯರಿಗೂ ನಮಗೂ ಪ್ರೀತಿ ಭಂಗವಾಯಿತು. ಹಿರಬರುತ್ತ ಈ ಕಾರಬಾರವು ಶಕ್ಯವೇ ಅಲ್ಲೆಂದು ಅತ್ಮ ಪ್ರತ್ಯಕ್ಷವಾಯಿತು. ಕಾರಣ ನನ್ನ ರಾಜೀನಾಮೆ ತಕ್ಕೊಳ್ಳಬೇಕೆಂದು ಗವ್ಹರ್ನರ ಸಾಹೇಬರಿಗೆ ಮುರವತ್ತು ಹಾಕಿದೆನು. ಸ್ವಬಲವಿಲ್ಲದೆ ರಾಜ್ಯಭಾರ ಮಾಡುವದಂತೂ ಶ್ರೀಪತಿ ಕಷ್ಟವೆಂದು ಮನವರಿಕೆಯಾಯಿತು. ಇವತ್ತಿನ ನಮ್ಮ ಹಕ್ಕಿನ ಪರಿಸ್ಥಿತಿಯು ದೊರೆತನ ಮಾಡುವಂತಿಲ್ಲವದೇ ಇಲ್ಲ. ಹಿಂಬಲವಿಲ್ಲದಂಥವರು ರಾಜ್ಯಸೂತ್ರಗಳನ್ನು ಅಂಗೀಕರಿಸುವದನ್ನು ನಾನು ಪೂರ್ಣ ವಿರೋಧಿಸುತ್ತೇನೆ.

ಸ್ವಾತಂತ್ರ್ಯವರ ಭಾಷಣ-

ದ್ವಿದಳ ದೊರೆತನವು ಅವ್ಯವಹಾರ್ಯವಾಗಿರುತ್ತದೆಂದು ಬ್ರಾಹ್ಮಣೇತರ ಪಕ್ಷದವರು ಅಂತಃಕರಣ ಬಿಚ್ಚಿ ಹೇಳಿದ್ದಕ್ಕಾಗಿ ನಾನು ಅವರ ಅಭಿನಂದನ ಮಾಡುತ್ತೇನೆ. ಹಿಂದುಸ್ಥಾನದ ಭಾವೀ ಏಳ್ಗೆಯನ್ನು ಬಯಸುವಂಥ ಯಾವ ದೇಶಾಭಿಮಾನಿಯೂ ಮಂತ್ರಿಯಾಗಲಾರನು. ಮಂತ್ರಿಗಳು ಬದಲಾದರೂ, ಅವರು ಕೂಡ್ರುವ ಸ್ಥಳಗಳು ಅವೇ ಇರುವವು. ಸರಕಾರದಿಂದ ನಾಮಿನೇಟಾದವರ ಪುರುಷಾರ್ಥವನ್ನು ಹೇಳತಕ್ಕದ್ದಲ್ಲ. ಈಗ ದುರಾಯಿರಾಜರಂಥವರು ತಮಗೆ ಹಾಲೆರೆದವರ ನೆತ್ತಿಯ ಮೇಲೆ ಕಾಲಿಡ್ಲೊ ಒತ್ತಬೇಕೆಂದಿದ್ದಾರೆ. ಜಾತಿಯ ಅಭಿಮಾನಕ್ಕೊಳಗಾದ ಯಾವದೊಂದು ಪಕ್ಷವು ಸರಕಾರದಸ್ತಾಗಲಿ, ಪ್ರಜರಿಗಾಗಲಿ ಹಿತ ಮಾಡುವದೆಂದು ಆಳೇಸರು ಸರ್ವಾತ್ಮನಾ ತಿಳಿಯತಕ್ಕದ್ದಲ್ಲ. ಆಳರಸರನ್ನು ಪುಷ್ಟ ಮಾಡವದಕ್ಕೆ ಡಾಯರ್ಕಿಯು ಸಹಾಯ ಮಾಡಿತು. ಇದರ ಬಲದಿಂದಲೇ ಅಸಹಕಾರದ ಚಳವಳಿಯಲ್ಲಿ ಸರಕಾರವು ನಿಷ್ಠುರತೆಯಿಂದ ನಡೆಯಿತು, ಪ್ರಜರ ಹಿತ ದೃಷ್ಟಿಯಿಂದ ನೋಡಲಾಗಿ ಇದು ಒಂದೆ ಹಾಗಿರುತ್ತದೆ. ನಿರಂಕುಶ ಮತ್ತು ಪ್ರಜಾಪ್ರಭುತ್ವದ ನಡುವೆ ಮೂರನೆಯ ಅವಸ್ಥೆ ಇರತಕ್ಕದ್ದಲ್ಲ. ಆಳರಸರ ಕೂಡ ಹೋರಾಡುವಂಥವರು ಜನರು ಸ್ವಾಭಾವಿಕವಾಗಿ [illegible] ವಂಥ ರೀತಿಯಾಗಿಯೇ ವರ್ತಿಸತಕ್ಕದ್ದು. ಸ್ವರಾಜ್ಯ ಪಕ್ಷೀಯರು ಅಧಿಕಾರಲೋಲುಪರಾಗಿದ್ದಾರೆಂದು ಸುಳ್ಳೇ ಸುದ್ದಿ ಹುಟ್ಟಿಸಿದ್ದಾರೆ. ಇದಕ್ಕಿಂತ ಹೆಚ್ಚಿನ ಅನುದಾರತನವು ಇನ್ನೊಂದಿರಲಾರದು ಈ ಸುದ್ದಿಯು ಹೇಳಿ ಮಾಡಿಸಿದ್ದು. ಗವ್ಹರ್ನರ ಸಾಹೇಬರಿಗೆ ನಾವು ಮಂತ್ರಿಯಾಗುವದಿಲ್ಲೆಂದು ಹೇಳಿದ್ದೇ ಪ್ರತ್ಯಕ್ಷ ಪ್ರಮಾಣವು

ಡಾಯರ್ಕಿಯು ಉಳಿಯಿತು-

ಕೊನೆಯಲ್ಲಿ ಮತಗಳನ್ನು ತಕ್ಕೊಳ್ಳಲು-ಮಂತ್ರಿಗಳ ಪಕ್ಷಕ್ಕೆ ೬೭ ಮತ್ತು ಸ್ವರಾಜ್ಯ ಪಕ್ಷೀಯರ ಬಣಕ್ಕೆ ೫೯ ಮತಗಳು ಬಿದ್ದು, ಮಂತ್ರಿಗಳ ಮೇಲೆ ಮೇಲಾಯಿತು ಇವರಿಗೆ ಸಹಾಯವಾದವರು ಸರಕಾರದ ಮೆಂಬರರೂ, ನಾಮಿನೇಟ ಆದಂಥವರೂ ಬ್ರಾಹ್ಮಣೇತರ ಪಕ್ಷದಿಂದ ಒಡೆದವರೂ ಸ್ವತಂತ್ರರೂ ಆಗಿದ್ದರೆ ಸ್ವರಾಜ್ಯ ಪಕ್ಷಕ್ಕೆ ಮತಕೊಟ್ಟಂಥವರೆಲ್ಲರೂ ಲೋಕನಿಯುಕ್ತರಾಗಿದ್ದಾರೆ.

ಸಾಹೇಬಜಾದಾನ ಶಿಕ್ಷಣ-

ಹೈದರಾಬಾದಿನ ನಿಜಾಮ ಸಾಹೇಬರು ತಮ್ಮ ಸಾಹೇಬಜಾದಾನಿಗೆ ಮತ್ತು ಉಳಿದ ಮಕ್ಕಳಿಗೆ ಧಾರ್ಮಿಕ, ನೈತಿಕ, ರಾಜಕೀಯ, ನ್ಯಾಯ ಮತ್ತು ದಂಡಿನ ಖಾತೆಯ ಶಿಕ್ಷಣವನ್ನು ಮಾರದಲ್ಲಿ ಒಮ್ಮೆ ತಪ್ಪದೆ ಕೊಡಬೇಕೆಂದು ಫರ್ಮಾನ ತೆಗೆದಿದ್ದಾರೆ. ಈ ಶಿಕ್ಷಣವನ್ನು ಆಯಾ ಖಾತೆಗಳ ಸೇಕ್ರೆಟರಿಯೇ ಕೊಡತಕ್ಕದ್ದು.

ಲಾಲಾ ಲಜಪತರಾಯರು ಇಂಗ್ರೇಜಿ ದರಬಾರಕ್ಕೆ ಕೊಟ್ಟ ಸರ್ಟಿಫಿಕೇಟು.

—o—

ಅಸೆಂಬ್ಲಿಯಲ್ಲಿ ಫೌಜದಾರಿ ಕಾಯದೆಯ ದುರಸ್ತಿಯ ಬಿಲ್ಲಿನ ವಾದವಿವಾದ ನಡೆದಿದೆ. ಈ ಸಮಯದಲ್ಲಿ ಲಾಲಾ ಲಜಪತರಾಯರು ಮುಂದೆ ಕೊಟ್ಟಂತೆ ಭಾಷಣ ಮಾಡಿದ್ದಾರೆ

ಫೌಜದಾರಿ ಕಾಯದೆಯ ದುರುಪಯೋಗ ಮಾಡಿದಂಥ ಬಹಳ ಉದಾಹರಣೆಯನ್ನು ತೋರಿಸಿದೆಂದು ಮಿ ಕ್ರೆರಾರಸಾಹೇಬರು ಕೇಳುತ್ತಾರೆ. ಪಂಜಾಬ ಸರಕಾರವು ಲಾಹೋರಿನ ಕಾಂಗ್ರೆಸ ಕಮಿಟಿಯ ಸಭೆಯು ಗೈರ ಕಾಯದೇಶೀರ ಮಾಡಲಿಲ್ಲವೆ? ಪಂಜಾಬ ಸರಕಾರವ [illegible] ತಿಸ್ಸಿಕೊಳ್ಳುವದಕ್ಕಾಗಿ ಹಿಂದುಸ್ಥಾನ ಸರಕಾರ ಮಧ್ಯಸ್ತಿಕೆ ಮಾಡಿ, ದಸ್ತಗಿರ ಮಾಡಿದಂಥ [illegible] ಬಂಧಮುಕ್ತ ಮಾಡಿತು. ಅಸಹಕಾರ [illegible] ಳವಳಿಯ ಸ್ವಾಯಂಸೇವಕರನ್ನು ಶಿಕ್ಷಿಸಿದವು ಗೈರ ಕಾಯದೇಶೀರ ಸಂಘಗಳನ್ನು ಮುರಿದೆಂದು ಬಾಯಿಮಾತಿನಿಂದ ಹೇಳಿಕೊಳ್ಳುತ್ತಾರೆ ನಾವೇಕೆ ಜೇಲಿಗೆ ಹೋದೆವೆಂಬುದು ಇವರಿಗೆ ಗೊತ್ತೇ ಇಲ್ಲ ಸರಕಾರದ ನ್ಯಾಯಬುದ್ಧಿಯು ಬಲಿಷ್ಠವಾಗಿರುತ್ತದೆಂದು ನಾವು ತುರಂಗಕ್ಕೆ ಹೋಗಲಿಲ್ಲ ಆತ್ಮ ರಕ್ಷಣೆಯ ಹಿರಿಮೆ ಕೊಡಬಾರದೆಂಬ ತತ್ವದ ದೆಸೆಯಿಂದ ತುರಂಗಕ್ಕೆ ಹೋಗಿದ್ದೇವೆ. ಇಷ್ಟೇ ಅಲ್ಲ, ನಮ್ಮ ವರ್ತಮಾನ ಪರಿಸ್ಥಿತಿಯು ಹೇಗುಂಟೆಂಬದನ್ನು ವ್ಯಕ್ತ ಪಡಿಸುವದಕ್ಕಾಗಿ ತುರಂಗಕ್ಕೆ ಹೋಗಿದ್ದೇವೆ

ದೇಶದಲ್ಲಿ ಬಹುಕಾಲ ಅಶಾಂತತೆಯುಂಟಾಗಿ ಗೊಂದಲವಾಗಬಹುದು. ಇವು ತಪ್ಪದ ಕೃತ್ಯಗಳು. ಎಲ್ಲಾದರೊಂದು ಸ್ಥಳದಲ್ಲಿ ಗೊಂದಲವೆದ್ದರೆ- ಸರಕಾರದಿಂದ ಸಾಧಾರಣ ಕಾಯದೆಯ ಸಹಾಯದಿಂದ ಅದನ್ನು ಮುರಿಯುವದಾಗದಿದ್ದರೆ- ಸರಕಾರವು ರಾಜ್ಯವ ಆಳಲಿಕ್ಕೆ ಅಯೋಗ್ಯವಾಗಿರುತ್ತದೆಂದು ಸ್ಪಷ್ಟವಾಗಿ ಜಾಹೀರನಾಮೆ ಹಚ್ಚಬೇಕು. ಈಗಿನ ಕಾಯದೆಯು ಹಿಂದುಸ್ಥಾನಕ್ಕೆ ಕಲಂಕ ತರುವಂಥಾದ್ದಾಗಿ, ದೇಶದ ಪ್ರಗತಿಯನ್ನು ಕುಂದಿಸುವಂಥಾದ್ದಾಗಿದೆ. ಯಾವನೊಬ್ಬನು ಅಪರಾಧ ಮಾಡಿದರೆ ಆತನಿಗೆ ಶಿಕ್ಷೆ ಮಾಡಿರಿ. ಆದರೆ ಮೇಡಿಗಳಂಥ ದುರಸ್ತಿಯ ಕಾಯದೆಯ ಆಧಾರದ ಆಶ್ರಯ ಹೊಂದಬೇಡಿರಿ. ಹಿಂದುಸ್ಥಾನದ ರಾಜಕೀಯ ಪರಿಸ್ಥಿತಿಯು ಪುಷ್ಕಳವಾಗಿ ಸುಧಾರಿಸಿರುತ್ತದೆಂದು ಭಾರತ ಮಂತ್ರಿ ಮತ್ತು ಅವರ ಅಂಡರ ಸೇಕ್ರೆಟರಿಯವರು ಒಪ್ಪಿದ್ದಾರೆ. ಆ ಪ್ರಕಾರ ನಿಮ್ಮ ಆಚರಣೆ ಇಟ್ಟುಕೊಳ್ಳಿರಿ.

ಪಾರೀಸ ಪಟ್ಟಣದಲ್ಲಿ ಭೀಮಸೇನನ ಅವತಾರ.

—೦—

ಅಮೇರಿಕೆಯಲ್ಲಿ ಸಕೊ ಮತ್ತು ವ್ಹೆಂಜಾಟಿಯನ್ನು ಗಲ್ಲಿಗೆ ಹಾಕಿದ್ದರ ಮುಯ್ಯವನ್ನು ಕೂಲಿಕಾರ ಸಂಘದವರು ಅಮೇರಿಗೆ ಮತ್ತು ವಿಲಾಯತಿಯಲ್ಲಿ ಪುಂಡಾಟಿಕೆಯಿಂದ ತೀರಿಸಿಕೊಂಡರು. ಇವರು ಒಂದು ಪಾದ್ರಿಯ ದೇವಾಲಯವನ್ನು ಹಾರಿಸಬೇಕೆಂದು ಬಾಂಬು ಇಟ್ಟರು. ಅದು ಪೋಸ್ಟಲಿನಲ್ಲಿಯೇ ಹಾರಿತು. ವಿಶೇಷ ನಷ್ಟವಾಗಲಿಲ್ಲ; ಇಂಥ ಅನೇಕ ಅತ್ಯಾಚಾರಗಳನ್ನು ಮಾಡಿದರು. ಜಿನೇವಾದಲ್ಲಿ ರಾಷ್ಟ್ರ ಸಂಘದ ಕಚೇರಿಯಲ್ಲಿ ದಾಳಿಯಿಟ್ಟು, ಅದನ್ನು ಬಹಳವಾಗಿ ವಿಧ್ವಂಸ ಮಾಡಿದರು. ಚಿಕಾಗೋ ಪಟ್ಟಣದಲ್ಲಿ ಸುರಂಗ ಹಾರಿಸಿ, ದೊಡ್ಡದಾದ ಮೂರು ಮನೆಗಳನ್ನು ನೆಲಸಮ ಮಾಡಿದರು. ಎಲ್ಲಕ್ಕೂ ಹೆಚ್ಚಿನ ಪುಂಡಾಟಿಕೆಯು ಪಾರಿಸ ಪಟ್ಟಣದಲ್ಲಾಯಿತು. ಇಲ್ಲಿಯ ಕೂಲಿಕಾರರು ಭೀಮಸೇನನ ಅವತಾರವನ್ನೇ ಧಾರಣ ಮಾಡಿದ್ದರು. ಭೀಮನು ಕೀಚಕನನ್ನು ಕೊಂದ ಬಳಿಕ ತನ್ನನ್ನು ಹಿಡಿಯಲಿಕ್ಕೆ ಬಂದಂಥ ಉಪಕೀಚಕರನ್ನು ಗಿಡಗಳನ್ನು ಕಿತ್ತಿ ಹೊಡೆದನಷ್ಟೇ; ಅದೇ ಪ್ರಕಾರ ದಂಗೆ ಮಾಡಿದ ಕೂಲಿಕಾರರು ತಮ್ಮ ಮೇಲೇರಿ ಬಂದ ಪೋಲೀಸರನ್ನು ದಾರಿಗುಂಟ ಕೈಗೆ ಸಿಕ್ಕ ಗಿಡಗಳನ್ನು ಬೇರು ಸಹಿತ ಕಿತ್ತಿ ಹೊಡೆದಿರುತ್ತಾರೆ. ಒಂದು ಬೀದಿಯಲ್ಲಿ ಪೋಲೀಸರ ಬಲ ಹೆಚ್ಚಾದ ಕೂಡಲೆ ಮತ್ತೊಂದು ಬೀದಿಯಲ್ಲಿ ಹೊಕ್ಕು ಅಲ್ಲಿ ಪುಂಡಾಟಿಕೆ ಹಾಕುವರು. ಈ ಪ್ರಕಾರ ಒಂದು ದಿವಸ ಹೋಕೀ ಹಾಕಿದರು. ದಂಗೆಗಾರರಲ್ಲಿ ಹೇರಳ ಜನರು ಮುಂದಾಗಿದ್ದರು. ಇವರ ಐವರು ಸತ್ತರು. ನೂರು ಜನರು ಘಾಯವಾದರು. ಪಟ್ಟಣದ ತುಂಬ ಲೂಟಿಯೂ ಆಯಿತು. ವ್ಹೆಂಜಾಟಿಯು ಸಾಯುವಾಗ ಅನಾಯಕತನವು ಬಯಲಾಗಲೆಂದು ಗರ್ಜನೆ ಮಾಡಿದನು. ಅವನ ನುಡಿಯಂತೆ ಒಂದು ದಿವಸ ಈ ರಾಜಧಾನಿಯು ತುಂಬ ಅನಾಯಕತನವನ್ನು ತಪ್ಪಿಸಿದ್ದರು.

ಹಾಯಕೋರ್ಟಿನ ವಕೀಲನ ದಸ್ತಗಿರಿಯು.

ಕೊಯಮತ್ತೂರಿನಲ್ಲಿಯ ಗಿರಣಿಯ ಕೂಲಿಕಾರರು ಸಂಪು ಮಾಡಿದ್ದಾರೆ. ಮದ್ರಾಸ ಹಾಯಕೋರ್ಟಿನ ವಕೀಲರಾದ ಶ್ರೀ ರಾಮಸ್ವಾಮಿ ಅಯ್ಯಂಗಾರರು ಕೂಲಿಕಾರರ ಸಂಘದ ಅಧ್ಯಕ್ಷರಾಗಿದ್ದಾರೆ. ಬಲವಂತದಿಂದ ಸಂಪು ಮಾಡಿಸುವ ಹಾಗು ಸಾರ್ವಜನಿಕ ಶಾಂತತೆಯನ್ನು ಭಂಗಪಡಿಸುವ ಉತ್ತೇಜಿತನ ಮಾಡಿದರೆಂಬ ಆರೋಪದಿಂದ ಪೋಲೀಸರು ಇವರನ್ನು ಬುಧವಾರ ಮಧ್ಯರಾತ್ರಿಯಲ್ಲಿ ದಸ್ತಗಿರ ಮಾಡಿದ್ದಾರೆ.

—ಭೋ ಸರಕಾರ್—

ಭವಣೆಯಲಿ ಬಳಲುವ ಬಡ ಪ್ರಾಥಮಿಕ ಶಿಕ್ಷಕರ ಉದ್ಗಾರಗಳು.

ಧಾಟಿ ಆ ಮಾಧವನೆಲ್ಲಿಹನು ಎಂಬಂತೆ.

ಹಾಡುವಿರೇನಾ ಹಾಡನ್ನೇ ! ಹಣವಿಲ್ಲೆಂಬುವ ಗೋಳನ್ನೇ ‖ ಪಲ್ಲ ‖

‖ ೧ ‖

ಧುರಧಾಳಿಗಿತ್ತು ಹೇರಳವೇ ! ಪ್ರೀತಿಯ ಮಕ್ಕಳು ಅವರೇನು !
ಶರಧಿಗೆ ಸುರಿವಿರಬ್ಬದಲೇ । ಸಿರಿತನ ಬಂದಿಹುದೆಂದೇನು ।
ಸರಿಗರಿಗಿತ್ತಿರಿ ಸಾಕನಿತೇ ! ಸ್ವಾರ್ಥದ ಕೃತಿಯಿದು ಅಲ್ಲೇನು !
ಭಕ್ಷ್ಯಕೆ ಸಾಕಸಿತಿಲ್ಲದಲೆ ।
ಶಿಕ್ಷಕ ವೃಂದವು ಬಳಲುತಲೆ ।
ಜಿಲ್ಲೆಯ ದೈನ್ಯದಿ ಬೇಡುತಲೆ ।
ಇರುತಿದೆ ನಿಮಗಿದು ಕಂಡಿಲ್ಲೇ । ಒಡಲಿನ ತಾಪವು ತಿಳಿದಿಲ್ಲೇ ‖

‖ ೨ ‖

ಬರಗಾಲ ಭವಣೆ ತಾನಿಲ್ಲೇ । ಶಿಕ್ಷಕರಿಗಾಗಿ ಮೀಸಲವೇ ‖
ಅರಹೊಟ್ಟೆ ಬಣ ವೇದನೆ । ಶಿಕ್ಷಕರಿಗಾಗಿ ಇರುತಿಹವೇ ‖
ದುರುಳರ ಅಂಜಿಕೆ ಅಳುಕುಗಳು । ಶಿಕ್ಷಕರಿಗಾಗಿ ಕೂತಿಹವೇ ‖
ಒಳನಿಕೆ ಕಾಣುವ ಕಣ್ಣಿಲ್ಲೇ ।
ಅಳು ಕೇಳುವ ಕಿವಿ ನಿಮಗಿಲ್ಲೇ ।
ಕಳಕಳದ ಪ್ರಾಣಿಯೆನಿಸಿಲ್ಲೇ ।
ಹೇಳಿರಿ ಶಿಕ್ಷಕರಿಗೀಗ ಸರಕಾರ್ ! ಕೇಳುವೆವೀಗಲೆ ಭೋ ಸರಕಾರ್ ‖

‖ ೩ ‖

ಸರಸಿಜ ಜಾತನು ಶ್ರೀಬ್ರಹ್ಮ ನಿರ್ಮಿಸಿದನೇಕೆ ಶಿಕ್ಷಕರಾ ।
ಧರಣಿಯ ನುಂಗಲೊ ಇಷ್ಟೇಕೆ । ಹೀನ ದೀನ ದುರ್ಬಲರಾ ।
ಮರಣವೆ ಅಂಜುತ ಲೋಡಿಸುದೇ । ನೋಡುತ ಅಜನ್ಮ ಭಿಕ್ಷುಕರಾ ।
ಬೇಕಾದ ಪಾಪ ಮಾಡು ಮಾಡು ।
ಸಾಕಾಗಿ ಜೀವ ನೀಡು ನೀಡು ।
ಶಿಕ್ಷಕ ತನುವನು ದೂಡು ದೂಡು ।
ಎಂಬಂತೇ ಆಗಿದೆ ಸರಕಾರ್ । ತುಂಬಾ ಕಷ್ಟವೋ ಭೋ ಸರಕಾರ್ ‖

‖ ೪ ‖

ವನವಾಸಿ ಶ್ರೀಗುರು ವೃಂದವನು । ದಾಸ್ಯಕೆ ತಚ್ಚಿದರವರಾರು ।
ಅನುದಿನ ಯಾಚಿತ ವೃತ್ತಿಯು । ಯಾಚಿಸಹತ್ತಿದರವರಾರು ।
ಜನಪದ ಶಿಕ್ಷಣ ಬೃಹತ್ಕಾರ್ಯದ । ಶೋಕಿಸ ಹಚ್ಚಿದರವರಾರು ।
ಹೊಟ್ಟೆಗೆ ಸಾಲದ ಅಳಲು ತಿಹಾ ।
ಬಟ್ಟೆಯು ಸಾಲದ ಬಳಲುತಿಹಾ ।
ಕಟ್ಟೆಚ್ಚರದಿ ಕಾಲ ಕಳೆಯುತಿಹಾ ।
ಶಿಕ್ಷಕ ಜನರಿಗೆ ಸಂಬಳವಾ । ಹೆಚ್ಚಿಸಬಾರದೆ ಭೋ ಸರಕಾರ್
ಸಂಬಳ ಹೆಚ್ಚಿಸದಿದ್ದರೆ ಆಗುವದೇನು?
ಪಾಪಜನ್ಯಂ ಗುರೋರ್ದ್ವಂದ್ವಂ ।
ನಾಸ್ತಿ ವಿದ್ಯಾಂಚ ಭೋಜನಃ ‖
ಸಾರಾಜ್ಯಂ ದೂರತೋ ಯಾತಂ ।
ಶಾಶ್ವತಃ ಹಿಂದು ಬಾಂಧವಾಃ ‖

ವಲ್ಲಭದಾಸ

ರಘುನಾಥ ಜೀವನರಾಜ ಇವರು ಸಂಸಾರ ಪ್ರವೇಶವೆಂಬ ಪುಸ್ತಕದಲ್ಲಿ ಅಶ್ಲೀಲ ವಿಷಯ ಹಾಕಿದ್ದಾರೆಂಬ ಆರೋಪದಿಂದ ಪೋಲಿಸರು ಇವರ ಮೇಲೆ ಖಟ್ಲೆ ಹಾಕಿದ್ದಾರೆ.

ಅತಿವೃಷ್ಟಿಯಿಂದ ಸಿಂಧ ಹೈದರಾಬಾದಿನ ಒಂದು ಜಿಲ್ಲೆಯಲ್ಲಿಯೇ ಅರವತ್ತು ಲಕ್ಷದ ಹಾನಿಯಾಗಿರುತ್ತದೆಂದು ಅಂದಾಜು ಮಾಡಲ್ಪಟ್ಟಿದೆ.

ಒಪೆಂಹೇಜಿನಲ್ಲಿ ದಿವಾನರಾಗಿದ್ದ ಮಿ. ನಡೆನಾಪಾಟೀಲರು ರಾಯಲ ಕಮಿಶನದ ಸೇಕ್ರೆಟರಿಯಾಗುವರೆಂದು ವರ್ತಮಾನವುಂಟು.

ಧಾರವಾಡ-

ಕಲಬುರ್ಗಿಯಲ್ಲಾಗುವ ಶ್ರೀ ಗಜಾನನೋತ್ಸವದ ದೆಸೆಯಿಂದ ಇಲ್ಲಿಂದ ಶ್ರೀ. ದಿವಾಕರ ಮತ್ತು ದಾನಿ ಪುರೋಹಿತರು ಹೋಗತಕ್ಕವರಿದ್ದಾರೆಂದು ತಿಳಿಯುತ್ತದೆ.

ಜಾಹೀರ ನೋಟೀಸು

ನಿಗ್ಡಿ ಬೀರಪ್ಪಾ ತಂದಿ ರಾಣಪ್ಪಾ ಮಾದರ ಪುಟಕಲ ಒಡನೀ ತಾಲೂಕ ಶಿಗ್ಗಾವಿ ಇವನಿಗೆ-

ಕೆಳಗೆ ಸಹಿ ಮಾಡಿದವಳ ಕಡೆಯಿಂದಾ ನಿನಗೆ ನೋಟೀಸಿನಿಂದಾ ತಿಳಿಸುವದೇನಂದರೆ ನೀನು ನನ್ನ ಲಗ್ನದ ಗಂಡನು ಇದ್ದು ಈಗ ನೀನು ಹಾದೀ ಮಾತು ಕೇಳಿ ನನಗೆ ಹೊಡದು ಬಡದು ನನ್ನ ಮೈ ಮೇಲಿನ ದಾಗೀನ ಕಸಕೊಂಡು ಹರಕ ಸೀರಿ ಕುಬಸದಿಂದಾ ನಿನ್ನ ಮನಿಬಿಟ್ಟು ನನಗೆ ವ ನನ್ನ ಎರಡು ಮಕ್ಕಳಿಗೆ ಹೊರಗೆ ಹಾಕಿ ಈಗ ಅಜಮಾಸು ಹತ್ತು ಹನ್ನೆರಡು ವರ್ಷ ಆಗುತ್ತಾ ಬಂತು ನಿನಗೆ ನಾನು ತಾ|| ೧೨-೭-೨೪ನೇ ದಿವಸ ಧಾರವಾಡ ವಿಜಯ ಪತ್ರದಲ್ಲಿ ನೋಟೀಸು ಕೊಟ್ಟಿದ್ದು ನೀನು ಬುದ್ಧ್ಯಾಪೂರ್ವಕ ಮಾರಿ ತಪ್ಪಿಸಿ ಸತ್ರ ಬಿಟ್ಟಿರುತ್ತಿ ಪುನಃ ೨ನೇ ನೋಟೀಸು ೨೧-೭-೨೭ ಇಸ್ವಿ ದಿವಸ ಕೊಟ್ಟಿರುತ್ತೇನೆ ಅದು ಸಹ ಇದರಂತೆ ಮರೀ ಬಿಟ್ಟಿರುತ್ತಿ ಈಗ ನನಗೆ ಸಾಲಗಾರರದ್ದು ಬಹಳೇ ತಗಾದಿ ಬಿಗಿರುತ್ತದೆ ಕಾರಣ ಪುನಃ ನಾನು ಮೂರನೇ ಜಾಹೀರ ನೋಟೀಸು ನಿನಗೆ ಕೊಡುವ ಬಾಬತ್ತು ಈ ನೋಟೀಸು ನಿನಗೆ ಮುಟ್ಟಿದ ಮೂರು ದಿವಸದಲ್ಲಿ ನಾನು ಮಾಡಿದ ಎರಡನೂರು ೨೦೦ ರೂಪಾಯಿ ಸಾಲಾ ಫೇಡು ಮಾಡಿ ನನ್ನ ಜೀವನಕ್ಕೆ ಯೋಗ್ಯ ಜಮೀನು ಕೊಟ್ಟು ನನಗೆ [illegible] ನು ತಪ್ಪಿದರೆ ನಿನ್ನ ಹುಜೂರ ಇದ್ದರೆ ನಾನು ನನ್ನ ಮರ್ಜಿಗೆ ಬಂದವನಿಗೆ ಉಡಿಕಿ ಮಾಡಿಕೊಂಡು ನಾನು ಮಾಡಿದ ಸಾಲಾ ಫೇಡ ಮಾಡುತ್ತೇನೆ ಆ ಮೇಲೆ ನಿನ್ನದು ನಿನ್ನ ವಾರಸದಾರರದ್ದು ನನ್ನ ಮೇಲೆ ವ ನನ್ನ ಮಕ್ಕಳ ಮೇಲೆ ಉಡಕಿ ಗಂಡನ ಮೇಲೆ ಯಾವ ತರದ್ದು ಹಕ್ಕು ದಾವಾ ನಿನ್ನದು ನಿನ್ನ ವಾರಸದಾರರದ್ದು ನಡಿಯುವದಿಕ್ಕಿಲ್ಲ ಅಂತ ಕೊಟ್ಟ ನೋಟೀಸು ಸಹಿ ತಾ. ೨೬-೮-೨೭

ಈ ಹೆಬ್ಬೆಟ್ಟಿನ ಗುರ್ತು ದುರ್ಗವ್ವಾ ಕೋಂ ನಿಗ್ಡಿ ಬೀರಪ್ಪಾ ಮಾದರ ಸಾ|| ಹುಬ್ಬಳ್ಳಿ ಇವಳ ಕೈದು ಅದೆ

ನೋಟೀಸು

ದುರಗಾ ತಂದಿ ಮರೆಪ್ಪಾ ಮಾದರ ಸಾ|| ಚಿಕ್ಕಮಲ್ಲೂರ ತಾಲ್ಲೂಕ ಬಂಕಾಪೂರ ಜಿಲ್ಲಾ ಧಾರವಾಡ ಇವನಿಗೆ—

ಕೆಳಗೆ ಸಹಿ ಮಾಡಿದವಳ ಕಡೆಯಿಂದಾ ನಿನಗೆ ನೋಟೀಸಿನಿಂದ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಗಂಡನು ಆಗಬೇಕು ನನ್ನ ಲಗ್ನ ಆಗಿ ಈಗ ಅಜಮಾಸು ಹದಿನಾರು ಹದಿನೆಂಟು ವರ್ಷ ಆಗುತ್ತಾ ಬಂತು ಚಿಕ್ಕ ವಯಸ್ಸಿನಲ್ಲಿ ನಮ್ಮ ತಂದಿತಾಯಿ ನಿನಗೆ ತಮ್ಮ ಸ್ವಂತ ಖರ್ಚಿನಿಂದ ಲಗ್ನ ಮಾಡಿ ಕೊಟ್ಟರು ಲಗ್ನಕಾಲಕ್ಕೆ ನನ್ನ ಮೈ ಮೇಲೆ ಯೇನೂ ದಾಗೀನ ನಿನ್ನ ಕಡೆಯಿಂದಾ ಇಟ್ಟಿಲ್ಲಾ ತವರು ಮನಿಯವರು ಇಟ್ಟಿಲ್ಲಾ ನನ್ನ ತಾಯಿ ತಮ್ಮನು ನೀನು ಆಗಬೇಕು ನೀನು ನನ್ನ ಕೂಡ ಚಲೋ ರೀತಿಯಿಂದ ಎರಡು ಮಕ್ಕಳು ಹುಟ್ಟುವ ವರೆಗೆ ಬಾಳೆವು ಮಾಡೀದಿ ಆ ಮೇಲೆ ನೀನು ಕೆಟ್ಟ ಜನರ ಸಂಗತಿಯಲ್ಲಿ ಬಿದ್ದು ನನಗೆ ನನ್ನ ಮಕ್ಕಳಿಗೆ ನೀನು ಬಿಟ್ಟು ಹೇಳದೆ ಓಡಿ ಹೋದಿ ನಾನು ನಿನ್ನ ಶೋಧನ ಮಾಡಿದರೂ ಎಲ್ಲಿ ನಿನ್ನ ತಾಳು ಹತ್ತಲಿಲ್ಲಾ ನನಗೆ ತಂದೆತಾಯಿ ಯಾರೂ ಇಲ್ಲಾ ಸತ್ತಿರುತ್ತಾರೆ ನನ್ನ ಹೊಟ್ಟೆ ತುಂಬುದಿಲ್ಲಾ ಅಂತಾ ಊರ ಬಿಟ್ಟು ಹುಬ್ಬಳ್ಳಿಗೆ ಬಂದೆ ಬಂದು ಈಗ್ಗೆ ಅಜಮಾಸು ಹತ್ತು ಹನ್ನೆರಡು ವರ್ಷ ಆಗುತ್ತಾ ಬಂತು ನಾನು ದುಡದದ್ದು ನನ್ನ ಹೊಟ್ಟೆಗೆ ಮಕ್ಕಳ ಹೊಟ್ಟೆಗೆ ಮಾಡಿ ಬಾಡೀಕ್ಕೆ ಸಾಲುವದಿಲ್ಲಾ ಅಂತಾ ನಿನ್ನ ಹೆಸರಿನ ಮೇಲೆ ಸಾಹುಕಾರ ಕಡೆಗೆ ಸಾಲಾ ದೀಡನೂರು (೧೫೦) ತೆಗದು ಹೊಟ್ಟೆಗೆ ವ್ಯಯ್ಯಿಗೆ ಅರವು ಮಾಡಿಕೊಂಡಿರುತ್ತೇನೆ ಈ ಸಾಲಾ ಕೊಟ್ಟ ಸಾಹುಕಾರರದು ನನಗೆ ಬಹಳೇ ತಗಾದಿ ಆಗಿರುತ್ತದೆ ಮುಂದ ಆದರೂ ಎಲ್ಲಿ ಸಾಲ ಹುಟ್ಟುವದಿಲ್ಲಾ ನೀನು ಈಗ ಚಿಕ್ಕಮಲ್ಲೂರ ಗ್ರಾಮಕ್ಕೆ ಬಂದಿರುತ್ತೀ ಅಂತಾ ನನಗೆ ತಿಳಿದಿದ್ದರಿಂದ ಈಗ ನೋಟೀಸು ಕೊಡುವ ಕಾರಣವಿತ್ತು ಈ ನೋಟೀಸು ನಿನಗೆ ಮುಟ್ಟಿದ ಮೂರು ದಿವಸಗಳಲ್ಲಿ ಬಂದು ನಾನು ಮಾಡಿದ ಸಾಲಾ ಫೇಡು ಮಾಡಿ ನನಗೆ ಯೋಗ್ಯ ಜಮೀನು ಕೊಟ್ಟು ಕರಕೊಂಡು ಹೋಗಿ ಚಲೋ ರೀತಿಯಿಂದ ಬಾಳೆವು ಮಾಡಬೇಕು ಜರ ಇದಕ್ಕೆ ನೀನು ತಪ್ಪಿದರೆ ಇದೇ ಸಾರಿಬಿತ್ತು ಅಂತಾ ತಿಳಬೇಕು ಆ ಮೇಲೆ ನಾನು ಮಾಡಿದ ಸಾಲ ಫೇಡು ಮಾಡುತ್ತೇನೆ ಆ ಮೇಲೆ ನಿನ್ನದು ನನ್ನ ಮೇಲೆ ನನ್ನ ಮಕ್ಕಳ ಮೇಲೆ ಉಡಕಿ ಗಂಡನ ಮೇಲೆ ಹಕ್ಕು ದಾವಾ ನಿನ್ನದು ನಿನ್ನ ವಾರಸದಾರರದು ನಡಿಯಿಕ್ಕಿಲ್ಲಾ ಮತ್ತು ದಿವಾಣಿ ಕೋರ್ಟಿನಲ್ಲಿ ಅಗರ ಪಂಚಾಯತದಲ್ಲಿ ಫಿರ್ಯಾದಿ ನಡಿಯೋದಿಲ್ಲ ಅಂತಾ ಕೊಟ್ಟ ನೋಟೀಸು ಈ ನೋಟೀಸಿನ ಖರ್ಚು ನಿನ್ನ ತಲಿಯ ಮೇಲೆ ಇರುತ್ತದೆ ತಿಳಿಯುವದು.

ತಾ|| ೨೭—೮ ೨೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಕರೆವ್ವಾ ಕೋಂ ದುರಗಪ್ಪಾ ಮಾದರ ಸಾಕೀನ ಹುಬ್ಬಳ್ಳಿ ಸೈತಿ ಗಂಟಿಕೇರಿ ಮಾದ್ರಓಣಿ ಇವಳ ಕೈದು ಇರುತ್ತದೆ.

ನೋಟೀಸು

ತಿಪ್ಪಾ ಬಸಪ್ಪಾ ಬೆನಕನಹಾಳ ಸಾಕೀನ ಮುಂಡರಗಿ ಇವನಿಗೆ—

ಕೆಳಗೆ ಸಹಿ ಮಾಡಿದವಳು ತಿಳಿಸುವದೇನಂದರೆ ನೀನು ತಾರೀಖು ೨೯-೮ ೨೭ ವಿಜಯ ನೋಟೀಸು ನೋಡಿದ ಆದರೆ ನಾನು ಆರು ತಿಂಗಳ ಹಿಂದೆ ನಿನ್ನ ಹತ್ತರನೇ ಇದ್ದೆ ಆಗ್ಗೆ ನನ್ನ ಮೇಲೆ ನೀನು ದುಷ್ಟ ಜನರ ಹೇಳಿಕೆಯಿಂದಾ ಹೊಡದು ಒದೆದು ಬೆಳ್ಳಿ ಭಂಗಾರದ್ದು ಸಾಮಾನು ವ ಶಿಲಿಂಗಳ ವಗೈರೆ ನಮ್ಮ ತಂದೆ ಎರಡು (೨೦೦) ನೂರು ರೂಪಾಯಿ ಕಸಕೊಂಡು ಆಗ್ಗೆ ನಾನು ೨ ತಿಂಗಳ ಗರ್ಭಿಣಿ ಇರಲಿಕ್ಕೇನೆ ಹೊರಗೆ ಹಾಕಿದಿ ಈಗ ನಾನು ಪೂರ್ಣ ಗರ್ಭಿಣಿ ಇದ್ದು ಇವತ್ತು ನಾಳೆ ಹೆರುವ ದಿವಸ ಅದೆ ನನ್ನಿಂದಾ ಜನಿಸಿದ ಕೂಸಿನ ಮಾಲಕನು ನೀನೇ ಇರುತ್ತೀ ನೀನು ಹೊರಗೆ ಹಾಕಿದ ಮೇಲೆ ನನ್ನ ಖರ್ಚಿನ ಬಗ್ಗೆ (೧೩೦) ಸಾಲಾ ಮಾಡೇನಿ ಈ ಸಾಲದ ಖರ್ಚು ವ ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಅದೆ ಇನ್ನು ತಾರಣ ವೀರಬಸಪ್ಪಾ ಅಡಿವೆಪ್ಪಾ ಮಾಲಿ ಮುಂಡರಗಿ ಇವನು ನನಗೆ ಯಾವ ಸಂಬಂಧ ಇಲ್ಲಾ ತಿಳಿಯುವದು.

ತಾ|| ೨೯—೮—೨೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಬಸವ್ವಾ ಕೋಂ ತಿಪ್ಪಾ ಬೆನಕನಹಾಳ ಇವಳದು ಅದೆ

ಈ ಪತ್ರವನ್ನು ಅಣ್ಣಾಜಿರಾವ ಬೆಳಗಾವಿ ಇವರು ಧಾರವಾಡದಲ್ಲಿ [illegible] ಮುದ್ರಿಸಿ ಪ್ರಸಿದ್ಧ ಪಡಿಸಿದರು.

[R. N. B. 1443]

ವಿಜಯ

ಸಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ರವಿವಾರ ತಾರೀಖು ೭೮ ನೇ ಅಗಸ್ಟ ೧೯೨೭ (ಸಂಚಿಕೆ ೧೮೫

ಕಿರ್ಲೋಸ್ಕರ ನೇಗಿಲ [ಟ್ರಿ ಪ್ಲೋಗು] ಒಡೆಯುವ ಯಂತ್ರಗಳು

ಈ ಯಂತ್ರಗಳು ಎರಡು ನಮೂದೆಯವು ನಮ್ಮ ಕಾರಖಾನೆಯಲ್ಲಿ ತಯಾರಾಗುತ್ತವೆ. ಇವು ಕಬ್ಬಿಣದವು. [illegible] ಯಂತ್ರದಲ್ಲಿ [illegible] ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ [illegible] ಈ ಯಂತ್ರಗಳು ಕಳದ ಹಂಗಾಮುದಲ್ಲಿ ಬಹು ಉಪಯೋಗಿಯಾಗುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಇವು ಒಡೆದು ಮಾರುವ ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ವಿಜಯ ಪುಸ್ತಕಾಲಯ

—o—

೨ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
[illegible]	೪ ,,
[illegible]	೨ ,,
ದ್ವಾದಶಸ್ತ್ರೋತ್ರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ [illegible] ವಿ. ಪಿ. ವೆಚ್ಚ [illegible] ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

—

ನೋಟೀಸಿನ ದರಗಳು.

—

[illegible] ನೋಟೀಸಿನ ದರವು [illegible] ಇಂಗ್ಲಿಷ [illegible] ಸಾರ್ವಜನಿಕ ನೋಟೀಸುಗಳಿಗೆ [illegible] ಕನ್ನಡದಲ್ಲಿ [illegible] ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

—

ವಿಜಯದ ವರ್ಗಣೀ ದರ

—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ.
೬ ,,	೭—೦—೦ ರೂ.
೪ ,,	೫—೦—೦ ರೂ.
[illegible]	೩—೧೨—೦ [illegible]

[illegible] ಧಾರವಾಡ

—

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ [illegible] ಠೇವುಗಳನ್ನು [illegible]

ಈ ಬ್ಯಾಂಕಿನಲ್ಲಿ [illegible]

[illegible]

[illegible] ಏಜಂಟ [illegible]

ದಿ ಧಾರವಾಡ ಅರ್ಬನ ಕೋ. ಓಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

[illegible] ಕ್ರೆಡಿಟ ಸೋಸಾಯಟಿಯು ಬ್ಯಾಂಕ ರೂಪಾಂತರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ [illegible]

[illegible]

[illegible]

ವಿಜಯ.

ಧಾರವಾಡ ತಾ- ೨೮-೮-೨೭ ನೇ ಇಸ್ವಿ

ಅಳಬುರುಕ ದಿವಾನಗಿರಿಯು.

ಮದ್ರಾಸದ ಕೌನ್ಸಿಲದಲ್ಲಿ ಸ್ವತಂತ್ರ ಪಕ್ಷೀಯರ ದಿವಾನಗಿರಿಯು ಉಳಿಯಿತೆಂಬದನ್ನು ನಿನ್ನಿನ ಸಂಚಿಕೆಯಲ್ಲಿ ಬರೆದಿರುತ್ತೇವೆ. ದಿವಾನಗಿರಿಯು ಉಳಿದದ್ದು ನಿಜ. ಆದರೆ ಅದು ತೀರ ಅಳಬುರುಕತನದಿಂದ ಉಳಿಯಿತೆಂದು ಧಾರಾಳವಾಗಿ ಹೇಳಬಹುದು. ಜಸ್ಟೀಸ ಮತ್ತು ಸ್ವರಾಜ್ಯ ಪಕ್ಷದವರು ತಮಗೆ ದಿವಾನಗಿರಿಯು ಬೇಡೆಂದು ಹೇಳಿದ ಬಳಿಕ, ಇವರಿಗೆ ಈ ಅಧಿಕಾರ ದೊರೆಯಿತು. ಅಳಿದ ಊರೊಳಗೆ ಉಳಿದವನೇ ಗೌಡನೆಂದು ಹೇಳುವಂತಾಯಿತು. ಅನಂತರ ಇವರ ವಿರುದ್ಧ ಎದ್ದ ಚಳವಳಿ ಮತ್ತು ಕೌನ್ಸಿಲದಲ್ಲಾದ ಹೋಟುಗಳ ಪ್ರಕಾರವನ್ನು ನೋಡಿದರೆ- ದಿವಾನಗಿರಿಯು ಹೆಸರಿಗೆ ಮಾತ್ರ ಇರುತ್ತದಲ್ಲದೆ, ಅದರಲ್ಲಿ ಮದುಳಿಲ್ಲೆಂದು ಸ್ಪಷ್ಟವಾಗುತ್ತದೆ. ಮಾಂಟೆಗ್ಯುಸಾಹೇಬರು ಮಹತ್ವದ ಖಾತೆಗಳನ್ನು ಕಾದಿಟ್ಟುಕೊಂಡು, ನಿರುಪದ್ರವ ಮತ್ತು ಬುದ್ಧಿ ಪರೀಕ್ಷೆಯಾಗದಂಥ ಖಾತೆಗಳನ್ನು ಮಂತ್ರಿಗಳಿಗೆ ಒಪ್ಪಿಸಿದ್ದಾರೆ, ಏಕೆಂದರೆ ಮಂತ್ರಿಗಳಿಗೇ ದೊಡ್ಡ ದೊಡ್ಡ ಖಾತೆಗಳನ್ನು ಒಪ್ಪಿಸಿದ ಬಳಿಕ, ಯುರೋಪಿಯನ್ನ ಕಾವಲುದಾರರು ನಿರ್ವಾಣ್ಯರಾಗಿ ಕೂಡುವದು ಸಹಜ. ಪೋಲೀಸ, ನ್ಯಾಯ ಮತ್ತು ಮುಲಕೀ ಖಾತೆಗಳು ಮಂತ್ರಿಗಳ ವಶವಾದರೆ- ಈ ಯುರೋಪಿಯನ್ನ ಕಾಮದಾರರನ್ನು ಯಾರು ಕೇಳುವರು? ಆದ್ದರಿಂದ ಮಾಂಟೆಗ್ಯುಸಾಹೇಬರು ಮೊದಲಿನಿಂದ ಮೈತುಂಬ ಕಣ್ಣುಳ್ಳವರಾಗಿದ್ದರು.

ಬೇಕಾದ ಖಾತೆಗಳು ದೊರೆತರೂ ದೊರೆಯಲಿ; ಅವುಗಳ ಸ್ವಾತಂತ್ರ್ಯವಾದರೂ ಮಂತ್ರಿಗಳಿಗಿರುವದೇ? ಹಣವಿದ್ದವರ ಗುಣ ಮುಚ್ಚುವದು. ಹೊನ್ನು ಇದ್ದವರ ತೊನ್ನು ಮುಚ್ಚುವದು. ಯುರೋಪಿಯನ್ನ ಅಥವಾ ಕೌನ್ಸಿಲರ ಕಯ್ಯಲ್ಲಿ ಬೊಕ್ಕಸ[illegible] ದ್ರವ್ಯಾಧಿಕಾರವಿರುವದು. ಇವರು ತಮ್ಮ [illegible] ತಕ್ಕಷ್ಟು ಬಿಟ್ಟದ್ದನ್ನು ಮಂತ್ರಿಗಳು ಉಪಯೋಗಿಸತಕ್ಕದ್ದು. ಅಂದರೆ ತಿರುಕನು ಕನಸ್ಸಿನ[illegible]ಯನ್ನು ಕಾಣುವಂಥ ಪ್ರಕಾರವೇ! ಇದ[illegible] ಪಕ್ಷಗಳು ಕೌನ್ಸಿಲರರನ್ನು ಸುಪ್ರಸನ್ನ ಮಾಡಿಕೊಂಡರೇ ವಿಹಿತ. ಇಲ್ಲವಾದರೆ ನರಿಯ ಮೋಜವಾಣಿಯಲ್ಲಿ ಕಹಾವ್ಯಗವು ಮಿಕಿಮಿಕಿ ಪೆಕೀರಿ ನೋಡುತ್ತ ಕೂಡಬೇಕಾಗುತ್ತದೆ. ಈ ಪ್ರಕಾರ ಆಗುತ್ತಿದ್ದ ಅಪಮಾನವನ್ನು ಸಹಿಸಲಾರದೆ ಬ್ರಾಹ್ಮಣೇತರರು ದಿವಾನಗಿರಿಯ ಆಶೆ ತೊರೆದು, ದ್ವಿದಳದ ದುಷ್ಟ ಗ್ರಹ ಹೋದ ಹೊರತು ದಿವಾನರಾಗತಕ್ಕವರಲ್ಲೆಂಬ ಪಂಥಗಟ್ಟಿದ್ದಾರೆ.

ಆರು ವರ್ಷದ ಅನುಭವದಿಂದ ಯಾವದೊಂದು ಮಾತಿನ ನಿರ್ಣಯವಾದ್ದನ್ನು ನಾಲ್ಕಾರು ತಿಂಗಳು ದೊರೆತನ ವಹಿಸಿದವರು ಹೊಡನುಳ್ಳಿಸುತ್ತೇವೆಂದು ಪಂಥತೊಟ್ಟಿದ್ದು ಸೋಜಿಗವೇ ಸರಿ. ತಾವು ಲೋಕಪಕ್ಷದ ಪ್ರತಿನಿಧಿಗಳು. ಅಂಥವರದೇ ಬೆಂಬಲವಿರಬೇಕೆಂದು ಇವರು ತಿಳಿಯತಕ್ಕದ್ದು. ಆದರೆ ತಮಗೆಲ್ಲ; ಆಳರಸರಿಗೆ ಆಧಾರಸ್ತಂಭರಾಗಿರುವಂಥವರ ಸಹಾಯ ಪಡಕೊಂಡು ಜೀವವುಳಿದರೆ ಸಾಕೆಂದು ವರ್ತಿಸುವದು ಯಾವ ಗೌರವವು? ಇವರು ಸ್ಥಾನಭ್ರಷ್ಟರಾಗಬಾರದೆಂದು ಸಹಾಯ ಮಾಡಿದವರಾರು? ಸರಕಾರೀ ಕಾಮದಾರರು. ಇವರು ವಿಹಿತಾವಿಹಿತವನ್ನಾಗಲಿ ನೋಡುವದಿಲ್ಲ. ಡಾಯರ್ಕಿಯು ಬೇಕೆನ್ನತಕ್ಕವರೇ. ಅದು ಬೇಡೆಂದರೆ- ತಮ್ಮ ತಪ್ಪನ್ನು, ತಮ್ಮ ಅಪಮಾನವನ್ನು ತಾವೇ ಒಪ್ಪಿಕೊಂಡಂತಾಗುತ್ತದಲ್ಲವೇ? ಆದ್ದರಿಂದ ಒಂದೇ ಏಳಿಗೆಯನ್ನು ಸರ್ವ ಸಾಮರ್ಥ್ಯ ಒಟ್ಟುಗೂಡಿಸಿದಂತೆ ಇವರು ಕೌನ್ಸಿಲದಲ್ಲಿ ಗುಜ್ಜಾಗಿ ಕೂತಿದ್ದರು. ಇವರ ತರುವಾಯಾ ಮಂತ್ರಿಗಳಿಗೆ ನೆರವಾದವರು ನಾಮಿನೇಟ ಆದಂಥ ಮೆಂಬರರು ಇವರು ಸರಕಾರದ ಹಂಗಿನೊಳಗಿರತಕ್ಕವರು. ಯಾರಾದರೂ ಉಪ್ಪುಂಡು ಸಪ್ಪಗೆನ್ನುವರೇ? ಆದ್ದರಿಂದ ಇವರ ವರ್ತನವು ಒಡೆಯನ ಪೇಳಿಕೆ, ಬಗಿಗನ ವಟಟವೆಂದಿರುವದು ಸಹಜವು. ಇವರ ಸಂಖ್ಯೆಯು ಹದಿನಾರು. ಒಬ್ಬನಾದರೂ ಲೋಕಪಕ್ಷಕ್ಕೆ ಒಲಿಯಲಿಲ್ಲ. ಸರಕಾರ ಮತ್ತು ಪ್ರಜರ ನಡುವೆ ಜಿದ್ದಿನ ಪ್ರಸಂಗ ಬಂದಾಗ ಇವರು ಆಳರಸರ ಮೋರೆಯನ್ನೇ ನೋಡುವರು. ಇಂಥವರ ಹೋಟುಗಳು ಹೋಟುಗಳೆಂದು ಹೇಳತಕ್ಕವರಿಗೆ ದೂರದಿಂದಲೇ ಶರಣು.

ಚುನಾವಣಿಯಲ್ಲಿ ಆರಿಸಲ್ಪಟ್ಟಂಥವರ ಸಂಖ್ಯೆ ೯೮. ಇವುಗಳಲ್ಲಿ ಆರು ಜನರು ಯುರೋಪಿಯನ್ನ ಮುಂತಾದ ಸರಕಾರದ ಕಡೆಗೇ ಒಲಿಯುವಂಥವರಾಗುತ್ತಾರೆ. ನಿಜವಾಗಿ ಆರಿಸಲ್ಪಟ್ಟವರು ೯೨ ಜನರು. ಇವರಲ್ಲಿ ಮಂತ್ರಿಗಳಿಗೆ ಅನುಕೂಲರಾದವರು ೨೪ ಜನರು. ಇವರ ವಿರುದ್ಧ ಪಕ್ಷಕ್ಕೆ ಹೋಟು ಕೊಟ್ಟವರು ೫೬ ಜನರು. ಇವರೆಲ್ಲರೂ ಆರಿಸಲ್ಪಟ್ಟವರು. ಇನ್ನುಡಿಗಿಂತ ಹೆಚ್ಚು ಮತದಾರರು- ಲೋಕನಿಯುಕ್ತರಾದಂಥವರು- ವಿರುದ್ಧ ಮತ ಕೊಟ್ಟದ್ದನ್ನು ನೋಡಿ, ಇವರು ರಾಜೀನಾಮೆ ಕೊಡತಕ್ಕದ್ದು. ಈ ಪ್ರಕಾರ ಯೋಗ್ಯ ಮಾರ್ಗವಲಂಬಿಗಳಾಗದೆ, ಜಿದ್ದು ಗದ್ದಿವೆಂದು ಅಹಂಕಾರ ಪಡುವವೆಂದರೆ- ಪೇಶ್ವೆ ಬಾಜೀರಾಯನು ಇಂಗ್ಲಿಷರ ಕೃಪೆಯಿಂದ ವೃತ್ತಿಯು ಪಟ್ಟ ಹೊರೆಯಿತೆಂದು ಆನಂದಪಟ್ಟಂತಾಗಿರುತ್ತದೆ.

ಮಂತ್ರಿಪದ ಉಳಿದಿದೆಂದು ಜಿದ್ದು ಗೆದ್ದ ಬಗ್ಗೆ ಆನಂದಪಡತಕ್ಕ ಕಾರಣವೇನೂ ಇರುವದಿಲ್ಲ. ನಗೆಯು ಹೊರಗೆ ಬರುವ ಅನೇಕ ಸಂಗತಿಗಳುಂಟು. ಬಲವದ್ವಿರೋಧ [illegible] ಅಧಿಕಾರ ನೋಡಬೇಕಾಗಿರುತ್ತದೆ. [illegible] ಬಿಟ್ಟಿನ ವಾದವಿವಾದದ [illegible] ಇವರ [illegible] ಪಟ್ಟನು. ಆಗ ಇವರು ದಿವಾನಗಿರಿಯಲ್ಲಿ ಗಟ್ಟಿಯಾಗಿ ಉಳಿಯುವ ಆಶೆ [illegible] ಕ್ಷಣದೇ ತಮಗೆ ವಿರುದ್ಧ [illegible] ಬಹುಮತವನ್ನು ಲಕ್ಷಿಸದೆ, ದಿವಾನಗಿರಿ[illegible] [illegible]ದು ನಿಜವಾದ ಪುರುಷಾರ್ಥ[illegible]

ಹಿಂಡು ಬಿಟ್ಟು ಹೋದ ಮೂವರು ಕುರಿಮರಿಗಳು.

—೧—

ಜಸ್ಟಿಸ ಪಕ್ಷದ ಮೂವರು ಮೆಂಬರರು ಆ ಪಕ್ಷದಿಂದೆಳೆದು, ಸ್ವತಂತ್ರರ ಒಡಸೇರಿ, ಅವರಂತೆ ಹೋಟು ಕೊಟ್ಟರು. ಈ ಪ್ರಕಾರ ಇವರಿಗೆ ಹೋಟು ಕೊಡಲಿಕ್ಕೆ ಬರಲಾರದು. ಇಯರ್ಲಂಡದಲ್ಲಿಯೂ ಇಂಥದೇ ಒಂದು ಅಸತ್ಕೃತ್ಯ ಸಂಭವಿಸಿ. ಅಲ್ಲಿಯ ಪಾರ್ಲಮೆಂಟ ಸಭೆಯಲ್ಲಿ ಡಿ. ವ್ಹಲೇರಾನ ಪಕ್ಷವು ಒಂದೇ ಮತದಿಂದ ಸೋತಿತು. ಒಂದು ಭಾಗದಿಂದ ಒಬ್ಬ ಮೆಂಬರ ಮನೆಯವನು ಆರಿಸಲ್ಪಟ್ಟಿದ್ದಾನೆ. ಮೊದಲು ಈತನು ಡಿ ವ್ಹಲೇರಾನ ಪಕ್ಷ ಸೇರಿದ್ದನು. ಹೋಟು ಕೊಡುವ ಸಮಯದಲ್ಲಿ ಈತನ ಮತದಾರರು ಈತನಿಗೆ ಸರಕಾರ ಪಕ್ಷದಂತೆ ಹೋಟು ಕೊಡಬೇಕೆಂದು ತಿಳಿಸಿದರು. ಆ ಪ್ರಕಾರ ಆತನ ಹೋಟು ಹೋಗಿ, ಕಾಸ್ಗ್ರೆವ್ಹರ ಪಕ್ಷವು ಅಧ್ಯಕ್ಷರ ಕಾಸ್ಟಿಂಗ ಹೋಟಿನಿಂದ ಗೆದ್ದಿತು. ಒಟ್ಲರನಿಗೆ ದೊರೆತಂಥ ಹಕ್ಕು ಮದ್ರಾಸದಲ್ಲಿ ಹಿಂಡು ಬಿಟ್ಟು ಹೋದವರಿಗೆ ದೊರೆಯಲಿಲ್ಲ. ಆದರೆ ಇವರು ಪಕ್ಷಭೇದಿಯಾದರು. ವಾಸ್ತವಿಕವಾಗಿ ಇವರು ರಾಜೀನಾಮೆ ಕೊಟ್ಟು, ಸ್ವತಂತ್ರ ಪಕ್ಷದವರೆಂದು ಸಾರಿ, ಚುನಾವಣೆಯಲ್ಲಿ ಉಮೇದವಾರರಾಗಿ ನಿಂತು, ಯಶಸ್ವಿಯಾಗಬೇಕಾಗಿತ್ತು. ಹೀಗೆ ಮಾಡದೆ, ಮೂಲಪಕ್ಷದ ವಿರುದ್ಧ ನಡೆದು, ಅನ್ಯರಿಗೆ ನೆರವಾದದ್ದು ಮನೆಮುರುಕತನವಾಯಿತು.

ಮದ್ರಾಸದಲ್ಲಿ ಕಳೆಕೊಂಡದ್ದನ್ನ ಬಂಗಾಲದಲ್ಲಿ ಸಂಪಾದಿಸಿದರು.

—೦—

ಎರಡು ದಿವಸ ಹಿಂದೆ ಮುಂದೆಯಾಗಿ ಮದ್ರಾಸ ಮತ್ತು ಬಂಗಾಲದ ಕೌನ್ಸಿಲಗಳಲ್ಲಿ ಮಂತ್ರಿಗಳಲ್ಲಿ ವಿಶ್ವಾಸವಿಲ್ಲೆಂಬ ಠರಾವುಗಳು ಬಂದವು. ಮದ್ರಾಸದಲ್ಲಿ ಸ್ವರಾಜ್ಯ ಪಕ್ಷೀಯರಿಗೆ ಯಶ ಬರದ್ದನ್ನು ನಿನ್ನಿನ ಸಂಚಿಕೆಯಲ್ಲಿ ಬರೆದಿರುತ್ತೇವೆ. ಬಂಗಾಲದ ವರ್ತಮಾನವು ಇಂತು ಬಂದಿರುತ್ತದೆ. ಅಲ್ಲಿ ಮಿ. ಚಕ್ರವರ್ತಿ ಹಿಂದೂ ಮತ್ತು ಮಿ. ಗಜನಾನಿ ಮುಸಲಮಾನ ಈ ಪ್ರಕಾರ ಇಬ್ಬರು ಗೃಹಸ್ಥರು ಮಂತ್ರಿಯಾಗಿದ್ದಾರೆ. ಹಿಂದೂ ಮಂತ್ರಿಯಲ್ಲಿ ವಿಶ್ವಾಸವಿಲ್ಲೆಂದು ಸ್ವರಾಜ್ಯ ಪಕ್ಷದ ಡಿಪುಟಿ ಲೀಡರ್ ಮಿಸ್ಟರ ದಾಸ್ತರ ರಾಯ ಮತ್ತು ಮುಸಲಮಾನ ನಾಯಕರಾದ ನವಾಬಸಾಹೆಬರು ಅವಿಶ್ವಾಸದ ಠರಾವು ತಂದರು. ಮೊದಲನೆಯ ಠರಾವಿಗೆ ೬೮ ಅನುಕೂಲ ಮತ್ತು ೩೨ ಪ್ರತಿಕೂಲ ಹಾಗು ಎರಡನೆಯ ಠರಾವಿಗೆ ೬೬ ಅನುಕೂಲ ಮತ್ತು ೬೩ ಪ್ರತಿಕೂಲಗಳು ಬಿದ್ದು, ಎರಡೂ ಠರಾವುಗಳು ಪಾಸಾಗಿ, ಮಂತ್ರಿಗಳು ಬಂದ ಹಾದಿಗೆ ಸುಂಕವಿಲ್ಲೆಂದು ಮನೆಗೆ ಹೋಗುವ ಹೊತ್ತು ಬಂದ ಕೂಡಲೆ ರಾಜೀನಾಮೆ ಕೊಟ್ಟುಬಿಟ್ಟರು.

ಈ ಸಮಯದಲ್ಲಿ ಕೆಲ ಮುಸಲಮಾನ ಮೆಂಬರರು ತಮ್ಮ ಬಸೆಂಗ್ಲು ಬಿಟ್ಟು ಯುರೋಪಿಯನ್ನ ಮೆಂಬರರ ಪಕ್ಕದ ಕೂತು, ತಾವು ಅತ್ಯಂತ ರಾಜನಿಷ್ಠರೆಂಬ ಪ್ರದರ್ಶನ ಮಾಡಿಕೊಂಡರು

ಠರಾವಿನ ಚರ್ಚೆಗೆ ಪ್ರಾರಂಭವಾಗುವಾಗ ಕೌನ್ಸಿಲ ಹಾಲಿನ ಹೊರಗೆ ಸಾವಿರಾರು ಜನರು ಸೇರಿ ಮಂತ್ರಿಗಳಿಗೆ ಧಿಕ್ಕಾರವಿರಲಿ; ಅದೀಪಾಕಷಾಗಲಿ ಶ್ರೀ ಮಹೀಮವೆಂದು ಭೀಕರವಾದ ಗರ್ಜನೆ ಮಾಡುತ್ತಿದ್ದರು ಜಯ ದೊರೆತ ಸುದ್ದೀ ಕೇಳಿದ ಕೂಡಲೆ ವಂದೇ ಮಾತರಂ ಮತ್ತು ಅಲ್ಲಾಹೋ ಅಕಬರದ ಜಯಘೋಷ ಮಾಡಿದರು.

ಗುಜರಾಥದಲ್ಲಿ ರಿಲೀಫ ಕಾಮಗಾರಿಯು ದೆಸೆಯಿಂದಲೇ ಸಂಚಾರದವರು ಮಿ. ಗ್ಯಾರೆಕ್ಸಸಾಹೇಬರನ್ನು ನೇಮಿಸಿದ್ದಾರೆ. ಇವರು ಕಮಿಶನರರೈಕೆಳಗೆ ಕೆಲಸ ಮಾಡತಕ್ಕದ್ದು.

ಬೈಲಹೊಂಗಲ ತಾಲೂಕ ಮಕ್ಕಂದದಲ್ಲಿ ರಾಚಪ್ಪಾ ಎಂಬ ಹೆಸರಿನ ಒಂಭತ್ತು ವರ್ಷದ ಹುಡುಗಿಯ ಮೈ ಮೇಲಿನ ದಾಗೀನೆಗಳನ್ನು ಗಾಂಜೆಯ ವ್ಯಸನಕ್ಕಾಗಿ ಮಾವನು ತಕ್ಕೊಂಡು, ತನ್ನ ಅಪರಾಧ ಹೊರಬೀಳಬಾರದೆಂದು ಆಕೆಯನ್ನು ಕೊಂದಿದ್ದಾರೆ, ಪೋಲೀಸರು ಇವನನ್ನು ಹಿಡಿದಿದ್ದಾರೆ.

ಕಂಚಿಯ ಸುವರ್ಣ ಜ್ಯುಬಿಲಿಯು.

—೦—

ಕಂಚೀ ಪಟ್ಟಣವು ಪುರಾಣ ಪ್ರಸಿದ್ಧವು. ಶೈವ ಮತ್ತು ವೈಷ್ಣವರ ಪುಣ್ಯಕ್ಷೇತ್ರವು. ಬ್ರಹ್ಮದೇವರೇ ಮೊದಲಾಗಿ ಅನೇಕ ದೇವಾನುದೇವತೆಗಳು ಯಾಗಗಳನ್ನು ಮಾಡಿದ್ದಾರೆಂದು ಪುರಾಣೋಕ್ತಿಯುಂಟು. ಅಲ್ಲಿರುವ ಪ್ರತಿಯೊಂದು ಕೆರೆಗೆ ಪುಷ್ಕರಣಿ ಎಂಬ ಹೆಸರು. ಅವಕ್ಕೆ ಏನಾದರೊಂದು ಪವಿತ್ರ ಹೆಸರಿನ ಸಂಬಂಧ ಹೇಳುವರು. ಇಲ್ಲಿ ಶ್ರೀ ವರದರಾಜನ ದೇವಾಲಯದಲ್ಲಿ ಬಂಗಾರದ ಹಲ್ಲಿಯುಂಟು. ಇದರ ಸ್ಪರ್ಶವಾದರೆ- ಹಲ್ಲಿ ಮುಟ್ಟಿದ ದೋಷ ಹೋಗುವದೆಂದು ಭಾವಿಕರು ಇಂದಿಗೂ ತಿಳಕೊಂಡಿದ್ದಾರೆ.

ದಕ್ಷಿಣ ದೇಶದ ಯಾತ್ರೆಗೆ ಹೊರಟವರು ಇಲ್ಲಿಗೆ ಹೋಗದಿರುವದಿಲ್ಲ. ಯಾತ್ರೆಯ ಜನರ ನಿತ್ಯದ ಸರಾಸರಿಯು ೫೦೦-೭೦೦ ಜನವಾಗುತ್ತದೆ. ಇದರ ಹೊರತು ವಿಷ್ಣುಕಂಚಿ ಮತ್ತು ಶಿವಕಂಚಿಯಲ್ಲಿ ಎರಡು ದೊಡ್ಡ ಜಾತ್ರೆಗಳಾಗುತ್ತವೆ. ಲಕ್ಷ ಜನರು ಕೂಡುವರು. ತಲೆಗೆ ಒಂದಾಣೆಯಂತೆ ಮ್ಯುನಿಸಿಪಾಲಿಟಿಗೆ ಆರು ಸಾವಿರ ರೂಪಾಯಿ ಪ್ರಾಪ್ತಿಯಾಗುತ್ತದೆ.

೧೮೭೭ ರಲ್ಲಿ ಇಸವಿಯಲ್ಲಿ ಮ್ಯುನಿಸಿಪಾಲಿಟಿಯು ಆದ ಆಯವು ೧೯೨೦ ಇತ್ತು. ಅದು ಈಗ ಎರಡು ಲಕ್ಷವಾಗಿದೆ. ಶಿಕ್ಷಣವು ಸಕ್ತಿಯ ಶಿಕ್ಷಣದ ಅವಶ್ಯಕತೆ ಇಲ್ಲೆನ್ನುವಷ್ಟು ಸುಲಭವಾಗಿದೆ. ಶಾಲೆಗೆ ಹೋಗುವ ವಯಸ್ಸಿನ ಹುಡುಗರಲ್ಲಿ ನೂರಕ್ಕೆ ೯೪ ಹುಡುಗರು ಓದುತ್ತಿರುವವು. ಪಟ್ಟಣದ ಜನಸಂಖ್ಯೆಯು ೪೦ ಸಾವಿರ, ಹಗಲು ಶಾಲೆಗಳು ೪೪ ಮತ್ತು ರಾತ್ರಿಯ ಶಾಲೆಗಳು ಒಂಭತ್ತು ಆರುವವು.

ಒಂದು ಕಾಲದಲ್ಲಿ ಕಂಚಿಯ ಶೀರಿ, ಧೋತರ, ಪೀತಾಂಬರಗಳು ಪ್ರಸಿದ್ಧವಾಗಿದ್ದವು. ನೆಯಕಾರಿಕೆಯು ಮುಖ್ಯ ಜೀವನವಾಗಿತ್ತು. ಆ ಪ್ರಸಿದ್ಧಿಯು ವಿಲಾಯತಿಯ ಬಟ್ಟೆಗಳ ಮೂಲಕ ಹಿಂದಾಗಿದೆ. ಅಲ್ಪ ಸ್ವಲ್ಪವಾಗಿ ಇಂದಿಗೂ ಬಟ್ಟೆಗಳಾಗುತ್ತಿರುವವು. ಮೊದಲಿನ ಐಶ್ವರ್ಯ ಹೋಗಿ ಬಡತನ ಬಂದಿದೆ. ಮ್ಯುನಿಸಿಪಾಲಿಟಿಯ ಉತ್ಪನ್ನ ಎರಡು ಲಕ್ಷದ ತನಕ ಬೆಳೆದ ಹಾಗೆ ಊರ ಶ್ರೀಮಂತಿಕೆ ಬೆಳೆಯುವದರ ಬದಲಾಗಿ ದರಿದ್ರತನ ಬೆಳೆಯುತ್ತಿರುವದೆಂಬದೊಂದು ಸಂಗತಿಯು ಜ್ಯುಬಿಲಿಯ ಉತ್ಸವದ ಆನಂದದಲ್ಲಿ ದುಃಖದ ಸಂಗತಿಯು.

ಹಂಪಿಯಲ್ಲಿ ವಿಜಯನಗರದ ದ್ರವ್ಯದ ಶೋಧ.

—೦—

ವಿಜಯನಗರದ ರಾಜರ ಕಾಲದಲ್ಲಿ ಭೂಮಿಯಲ್ಲಿ ಹುಗಿದಿಟ್ಟಂಥ ಪುಷ್ಕಳ ದ್ರವ್ಯವುಂಟೆಂದೂ ಇಂಥಲ್ಲೇ ಇರುತ್ತದೆಂದೂ ಹೈದರಾಬಾದಿನ ಹಕೀಮ ಮಹಮುದ ಕಾಶೀಮ ಎಂಬವರಲ್ಲಿದ್ದ ಒಂದು ಪುಸ್ತಕದಲ್ಲಿ ಬರೆದಿದೆ. ಈ ದ್ರವ್ಯ ಮತ್ತು ಬೇರೆ ಭೂಗತ ದ್ರವ್ಯಶೋಧದ ಕಾರ್ಯವನ್ನು ವೀರಶೈವ ಗುರುಗಳಾದ ಪ್ರಭುಸ್ವಾಮಿ ಮತ್ತು ಓರ್ವ ಪಾರ್ಸಿ ಗೃಹಸ್ಥರು ಬಳ್ಳಾರಿಗೆ ಬಂದ, ಕಲೆಕ್ಟರರನ್ನು ಕಂಡು, ಕೆಲವು ಶರ್ತುಗಳ ಮೇಲೆ ಈ ದ್ರವ್ಯ ಶೋಧನ ಕೆಲಸ ಪ್ರಾರಂಭಿಸಿದ್ದಾರೆ. ಇವರಿಗೆ ಸಹಾಯವಾಗಿ ಹಕೀಮರೂ ಬರತಕ್ಕವರಿದ್ದಾರೆ.

ಐದು ಲಕ್ಷದ ದುರುಪಯೋಗ.

—೦—

ಕೌನ್ಸಿಲ ಮೆಂಬರನ ದಸ್ತಗಿರಿಯು.

—೦—

ಮಿ. ಚಕ್ರವರ್ತಿಯವರ ಪಕ್ಷಕ್ಕೆ ಸೇರಿದ ಕೌನ್ಸಿಲ ಮೆಂಬರರಾದ ಮಿ. ಲಾಹಿರಿ ಎಂಬವರು ಕಲಕತ್ತೆಯಲ್ಲಿರುವ ಲಕ್ಷ್ಮೀ ಕಾಟನ ಮಿಲ್ಲಿನ ಡಾಯರೆಕ್ಟರರಾಗಿದ್ದಾರೆ. ಇವರು ಐದು ಲಕ್ಷ ರೂಪಾಯಿಗಳ ದುರುಪಯೋಗ ಮಾಡಿದ್ದಾರೆಂಬ ಆರೋಪದಿಂದ ಪೋಲೀಸರು ಇವರನ್ನು ದಸ್ತಗಿರ ಮಾಡಿದರು. ಕೌನ್ಸಿಲ ಸಭೆಯು ಮುಗಿದ ಬಳಿಕ ಇವರು ಮಿ. ಚಕ್ರವರ್ತಿಯವರ ಮೋಟಾರಿನಲ್ಲಿಯೇ ಕೂತು ಹೋದರು. ಈ ಮೋಟಾರಿನ ಹಿಂದೆಯೇ ಪೋಲೀಸರು ಹೋಗಿ ಇವರನ್ನು ಹಿಡಿದರು. ಅಂಥ ಪ್ರಾಮಾಣಿಕರಲ್ಲಿ ಹಿಡಿದದ್ದರಿಂದ ಸರಕಾರ ಪಕ್ಷದ ಒಂದು ಹೋಟು ಕಡಿಮೆಯಾಗುತ್ತಲ್ಲ!!

ವಿವಿಧ ವರ್ತಮಾನಗಳು

ಮುಂಬಯಿಯಲ್ಲಿ ಕೂಡುತ್ತಿರುವ ಗುಜರಾಥ ರಿಲೀಫ ಫಂಡಿನ ರಕಮು ಐದು ಲಕ್ಷವನ್ನು ಮೀರಿದೆ

ಮುಂಬಯಿ ಸರಕಾರದ ಕಾಯದೆ ಕೌನ್ಸಿಲ ಸಭೆಯು ಸಪ್ಟಂಬರ ತಿಂಗಳ ೫ ನೆಯ ತಾರೀಖಿನ ದಿವಸ ಪುಣೆಯಲ್ಲಿ ಕೂಡುವದು.

ಮುಂಬಯಿಯಲ್ಲಿರುವ ಶ್ರೀ ವೆಂಕಟೇಶ್ವರ ಮುದ್ರಾಲಯದ ಮಾಲೀಕರಾದ ರಾವಸಾಹೇಬ

ನೋಟೀಸು

—೦—

ರಾ|| ಬಸಪ್ಪಾ ತಂದಿ ಫಕೀರಪ್ಪಾ ನೆಲ್ಲೂರ ವರ ಸಾ|| ಕುಂದಗೋಳ ತಾ|| ಜಿಲ್ಲಾ ಧಾರವಾಡ ಇವರಿಗೆ-

ನೋಟೀ ಕೊಡುವ ಮರಿಯಪ್ಪ ತಂದಿ ಬಸಪ್ಪಾ ಸಾ|| ಮುಂಡರಗಿ ತಾಲ್ಲೂಕು ಕುಷ್ಟಗಿ ನಾನು ಈ ನೋಟೀಸಿನಿಂದ ತಿಳಿಸುವದೇನೆಂದರೆ- ನೀವು ಪೂರ್ವದಲ್ಲಿ ನನ್ನನ್ನು ನಿನ್ನ ವಕೀಲಿಯಿಂದ ಒದಗು ವಾಹದು ತಾವು ಮಾಹಿತಿಯವರು ಕೊಟ್ಟ ವ್ಯಾಪಾರದ ದಾಗೀನೆಗಳನ್ನು ಕಸಕೊಂಡು ಪೂರಗೆ ಹಾಕಿದಿ ನಂತರ ಯೋನಕ ದಿವಸಗಳ ಮೇಲೆ ನಂನ ಕರಿಯೂಕ್ಕೆ ಒಂದಿ ಆಗ ನ [illegible] ಒಬ್ಬಿವಂತರ ಪುರ್ದಿ ಮುಕ್ಕಾಮಿನಲ್ಲಿ ನನ್ನ ಸಾಮಾನಗಳನ್ನು ಮತ್ತು ನಾನು ವೃಪಜೀವನದ ಒಗ್ಗಿ ಮಾಡಿದಂಥ ಸಾಲವನ್ನು ೧೫ ದಿವಸಗಳಲ್ಲಿ ತೀರಿಸಿ ಕರಕೊಂಡು ಹೋ ಪದಕ್ಕೆ ಹೇಳಿದರು ಜರ ನೀನು ೧೫ ದಿವಸಗಳಲ್ಲಿ ಸದ್ರಿ ಪ್ರ|| ಅಮಲ ಮಾಡಿ ಕರಕೊಂಡು ಹೋಗದೆ ಇದ್ರೆ ಫಾರಿಕತಬಿ ಕೊಡಬೇಕೆಂದು ನಿರ್ಣಯವಾಯಿತು ಆ ಪ್ರ|| ನೀನು ಬರಲಿಲ್ಲಾ ಸಾಮಾನಗಳನ್ನು ನ ಸಾಲದ ರಕಮನ್ನು ಕೊಟ್ಟು ಕರಕೊಂಡು ಹೋಗಲಿಲ್ಲ. ನಾನು ಇಂದುವರಿಗೆ ನಿಂನ ಹಾದಿ ನೋಡಿದೆ ಮತ್ತು ಮುಂದೆ ನನಗೆ ವೃಪಜೀವನಕ್ಕೆ ಸಾಲ ಹುಟ್ಟುವಂತೆ ಇಲ್ಲ. ಕಾರಣ ನಾನು ನನ್ನ ಕಾಯಿದಾ ಪ್ರಕಾರ ಎರಡನೆ ಲಗ್ನ ಮಾಡಿಕೊಳ್ಳಲಿಕ್ಕೆ ನಿಯಮ ಮಾಡಿದ್ದೇನೆ ನೀನು ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ಬಂದು ನಂನ ಸಾಮಾನ ವ ೨೦೦ (ಎರಡನೂರು) ಸಾಲಾ ಕೊಟ್ಟು ಫಾರಿಕತಬಿ ಕೊಡಬೇಕು ಇಲ್ಲದಿದ್ರೆ ಇದೇ ನಂನ ಕಡಿಂದಾ ಫಾರಿಕತಬಿ ಅಂತಾ ತಿಳಿಯಬೇಕು ಮತ್ತು ನಂನ ನಿಂನ ಲಗ್ನದ ಸಂಬಂಧಾ ದಾವ ಹಕ್ಕು ಉಳಿದಿಲ್ಲಾ ಸದರ ಮುದ್ದತ್ತಿ ಸರಿಯಾಗಿ ಅಮಲ ಮಾಡದಿದ್ರೆ ಕಳವು ಮತ್ತು ಸಾಮಾನ ಬಾ|| ಜಾಸ್ತಿ ಕಾಯಿದಾ ಆಗುವದು ಅದರ ಖರ್ಚ ನಿಮ್ಮ ಈ ನೋಟೀಸಿನ ಖರ್ಚ ನಿಂನ ತಲಿಯ ಮೇಲೆ ಅದ ಅಂತಾ ಕೊಟ್ಟ ನೋಟೀಸು ತಾ|| ೧೮-೧೧-೩೭ ಇಸವಿ.

ಈ [illegible] ಹೆಬ್ಬಟ್ಟಿನ ಗುರ್ತಾ ಮರಿಯ [illegible]

ತ್ವರೆ ಮಾಡಿರಿ. ಮಾರಿಕಾ ಬೇನೆಗೆ ಅಲ್ಪಸ್ವಲ್ಪ ಆಸಕ್ಕೆ ಕೈ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ಕ್ಕೆ ೩ ರೂಪಾಯಿ.
೨—೩ ಗುಳಿಗೆ ಸೇವಿ ಬಂದು ಪ್ರಾಣ ಉಳಿಗಿಯುವದು
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅನೇಕ್ಕ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.
ಬೇಗ ಸಂಗ್ರಹಿಸಿರಿ
ಶ್ರೀ ಭಾರತ ವನೌಷಧಿ ಸಂಗಹಾಲಯ
ಪೋ ಕಿತ್ತೂರ, ಜಿಲ್ಹಾ ಬೆಳಗಾವ

ಎಲಿಕ್ಟ್ರೋ ಗೋಲ್ಡ್ ಪ್ಲೇಟೆಡ್.

ಇಮಿಟೇಷನ್ ಡಾಯಮಂಡು ಆಭರಣಗಳು.

ಇದರಲ್ಲಿ ತ ರಿಸಿರುವ ಆಭರಣಗಳು ಅ ಲು ಇಮಿಟೇಷನಗಳು ತರಿಸಿ ಸ್ವಂತದಲ್ಲಿ ತಾಗಾರು ಮಾಡಿ ಸರಿಯಾದ ಗ್ಯಾರಂಟಿ ಯಿಂದ ಕಳಿಸುತ್ತೇವೆ.
ವ ಕಿ ವದ್ಯಾಣ (ತ ಒ) ೧೬೦ ಗೆಜ್ಜೆಗಳು ಕ್ಯಾಟಲಾಗ್ರಯು ೫—೦—೦
ಸಾದಾ ವಡ್ಯಾಣ (ಡಾಗ) ೧ಕ್ಕೆ ೩—೮ ೦
ದಿಟೆ [illegible] ಸರಿಯು ೩—೮—೦
೧/೪ ಕೂಸಿದ ಮಾಲೆ ೧ಕ್ಕೆ ೪—೮—೦
ಬಿಳಿ ಆಸ್ಟಿಲಿಯನ್ ತಂಗಿಪಿಣ, ೧ಕ್ಕೆ ೩ ೮ ೦
,, ,, [illegible] ೧ಕ್ಕೆ ೨—೧—೦
,, [illegible] ಜೋಡ ಸರಗಳು ೬೩ ೧ಕ್ಕೆ ೩—೦—೦
,, [illegible] ೧ಕ್ಕೆ ೧—೪—೦
[illegible] ೧—೦ ೦
[illegible] ನೆಂದ [illegible] ಗೆ ೫ ೮—೦
ಇವುಗಳನ್ನು ಬಂದಾರ್ಡರ ತರಿಸಿ ನೆ [illegible] ಇವುಗಳ ಪರೀಕ್ಷೆ ಗೊತ್ತಾಗವದು.
ವಿ. ವಿ. ಪಿಳ್ಳೆ.
[illegible] ಟಿ. ಮದ್ರಾಸ,

[illegible] ಯೋಗ್ಯತಾ ಪತ್ರಗಳು ಕೊಟ್ಟ [illegible] ಯೋಗ್ಯತಾ ಪತ್ರಗಳನ್ನು ಕೊಡುವರೆಂಬು [illegible]
[illegible] ದಿವಸಗಳ ಔಷಧಿಕ್ಕೆ ೨ರೂ.
[illegible] ೨೦ ದಿವಸಗಳ ಔಷಧಿಕ್ಕೆ ೨ರೂ ೮ ಆಣೆ
[illegible] ಎಂಬ ತೈಲ (ನೋವನ್ನು ಹೋಗಿಸಿ ಪೀಡೆಯನ್ನು) ಕೊಡುವ ತೈಲ ಸೀಸೆ ೧ಕ್ಕೆ ೧ ರೂ.
ಅಪರಂಜಿ ಸೇರಿದ ಆಗ್ರ್ಯಾ ಭೋಗಕಾಂತಗಳು ೩೦ ಗುಳಿಗೆಗಳಿಗೆ ೮ ಆಣೆ
[illegible] ಸೀಸೆ ೧ಕ್ಕೆ ೮ ಆಣೆ
[illegible] ಸೀಸೆ ೧ಕ್ಕೆ ೮ಆಣೆ
[illegible] ಸೀಸೆ ೧ಕ್ಕೆ ೪ ಆಣೆ [illegible] ೮ ಆಣೆ
[illegible] ಮೆಡಿಕಲ್ ಹಾಲ್
ಜಾರ್ಜ ಟೌನ್ ಮದ್ರಾಸ

ಈ ಪತ್ರವನ್ನು [illegible] ಅವರು ಧಾರವಾಡದಲ್ಲಿಯ ವ [illegible] ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1449

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಸೋಮವಾರ ತಾರೀಖು ೨೯ ನೇ ಅಗಸ್ಟ ೧೯೩೭ (ಸಂಚಿಕೆ ೧೪೬

ಕಿರ್ಲೋಸ್ಕರ ಶೇಂಗಾ [ಭೈಮೂಗು] ಒಡೆಯುವ ಯಂತ್ರಗಳು



ಈ ಯಂತ್ರಗಳು ಎರಡು ಮಾದರಿಯವು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಗಟ್ಟಿಯಾದವು. ಬಾಳಿಕೆ ಉಳ್ಳವು. ಶೇಂಗಾವನ್ನು ಒಡೆಯಲು ಯಂತ್ರದಲ್ಲಿ ಜಾಣತನವನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳು ಕಳೆದ ಹಂಗಾಮಿನಲ್ಲಿ ಬಹು ಪ್ರಚಾರಗೊಂಡಿವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗಿಸುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಮಾರುವ ವ್ಯಾಪಾರಸ್ಥರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ ಸಾತಾರಾ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಪತ್ರ ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದಾವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ಸೊಸೈಟಿಗಳಿಗೆ ಸಾ ೦ ಗೆ ಮೂ ರಾ ಣೆ— ಇಂ ಗ್ಲಿ ಷ ದಂತೆ ಅವಶ್ಯವಿದ್ದಲ್ಲಿ ಕನ್ನಡದಲ್ಲಿ ಹಾಕುವದಿದ್ದರೆ ಅದು ಅಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ”	೭—೦—೦ ರೂ
೪ ”	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ವತ್ತೀ ಇಟ್ಟುಕೊಳ್ಳುವ ಪದ್ಧತಿ. ದರವು ನೂರಕ್ಕೆ ತಿಂಗಳು ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಧಾರವಾಡದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಕರಂಟ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಸಲ್ಪಡುವದು. ಕಾಯಮ ಮತ್ತು ಬೇರೆ ತರದ ಠೇವ ಪಟ್ಟಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಗೀ,

ಹೊ. ಸೆಕ್ರೆಟರಿ ಡಾಯರೆಕ್ಟರ

ವಿಜಯ ಪುಸ್ತಕಾಲಯ.

—೦—

ಎರಡನೇ ಶತಮಾನದ ಗೊಂದಲ	೧೦ ಆಣೆ,
ವಿಚಿತ್ರ ಸಂಶಯ	೫ ,,
ದೇಶಬಂದು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಖರ್ಚು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ

ಧಾರವಾಡ

ವಿಜಯ.

ಧಾರವಾಡ ತಾ- ೨೯ ೮-೨೭ ನೇ ಇಸ್ವಿ

ಆಯರ್ಲಂಡದ ಚುನಾವಣೆಯು.

ಆಯರ್ಲಂಡದ ಗವ್ಹರ್ನರ ಜನರಲರು ಅಲ್ಲಿಯ ಪಾರ್ಲಮೆಂಟನ್ನು ಡಿಸಾಲ್ವ ಮಾಡಿ ಸಭೆಯ ಹೊಸ ಚುನಾವಣೆಯಾಗಬೇಕೆಂಬ ಜಾಹೀರನಾಮೆ ಹಚ್ಚಿದ್ದಾರೆ. ಈ ಮೊದಲು ಚುನಾವಣೆಯಾಗಿ ಮೂರೇ ತಿಂಗಳಾಯಿತು. ಇಷ್ಟರಲ್ಲಿ ಹೊಸ ಚುನಾವಣೆಯು ಏಕೆಂದು ಸಹಜವಾಗಿ ಪ್ರಶ್ನ ಹೊರಡುತ್ತದೆ. ಅಲ್ಲಿ ಕಾಸ್ಗ್ರೇವ್ಹ ಮತ್ತು ಡಿ. ವ್ಹಲೆರಾ ಎಂಬೆರಡು ಬಣಗಳುಂಟು. ಮೊದಲನೆಯ ಬಣದವರು ಬ್ರಿಟಿಶ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವಾದಿಗಳು. ಡಿ. ವ್ಹಲೆರಾಸಾಹೇಬನು ಬ್ರಿಟಿಶ ಸರಕಾರದ ವಿರುದ್ಧ ಬಂಡಾಯ ಮಾಡಿ, ಸೆರೆಮನೆ ಕಂಡು ಬಂದವನು. ಇಂದಿಗೂ ಇವನು ಆಯರ್ಲಂಡವು ಸ್ವತಂತ್ರವಾಗಬೇಕೆಂಬ ಮತದವನಾಗಿದ್ದಾನೆ. ಮೂರು ತಿಂಗಳ ಹಿಂದೆ ಚುನಾವಣೆಯಲ್ಲಿ ಎರಡೂ ಪಕ್ಷಕ್ಕೆ ಸಮ ಮತಗಳು ದೊರೆತವು, ಅಂದರೆ ೪೭- ೪೭ ರಂತೆ ಮೆಂಬರರು ಆರಿಸಲ್ಪಟ್ಟರು. ಈ ಪ್ರಕಾರ ಸಮ ಮತಗಳು ಬಿದ್ದರೂ ಸಹ ಡಿ ವ್ಹಲೆರಾನ ಪಕ್ಷದವರು ಸಭೆಗೆ ಹೋಗಿ ರಾಜನಿಷ್ಠೆಯ ಆಣೆ ಮಾಡಲಿಲ್ಲ. ಆದ್ದರಿಂದ ಕಾಸ್ಗ್ರೇವ ಸಾಹೇಬನ ಏಕ ಪಕ್ಷದ ಮೆಂಬರರೇ ಕೂಡಿ, ತಂತಮ್ಮೊಳಗೆ ಅಧಿಕಾರಗಳನ್ನು ಹಂಚಿಕೊಂಡರು. ಮಂತ್ರಿಗಳನ್ನು ಆರಿಸಲು ಶಕ್ಯವಾಗಿದ್ದರೂ, ಇವರು ಕರ್ತವ್ಯತತ್ಪರರಾದರು ಇವರನ್ನು ಸೋಲಿಸಿ ಚರೆಯಬೇಕಾದರೆ- ರಾಜನಿಷ್ಠೆಯ ಆಣೆ ಮಾಡಿ, ಸಭಾ ಮಂದಿರ ಪ್ರವೇಶ ಮಾಡಿದ ಹೊರತು ಅನ್ಯೋಪಾಯವಿಲ್ಲೆಂದು, ಮನಗಂಡು, ಆಣೆ ಮಾಡಿ ಸಭಾ ಪ್ರವೇಶ ಮಾಡಿದರು [illegible] ಅವರಲ್ಲೊಬ್ಬ ದ್ರೋಹ-ಹೊರಟನು. ಈ [illegible] ನಿನ್ನಿನ ಸಂಚಿಕೆಯಲ್ಲಿ ಹೇಳಿದಂಥ ಬಟ್ಲರನು [illegible] ಬಿಟ್ಟು, ಎರಡೂ ಪಕ್ಷಕ್ಕೆ ೭೧-೭೧ [illegible] ಬಿದ್ದವು. ಅಧ್ಯಕ್ಷರು ಕಾಸ್ಟಿಂಗ ಹೋ[illegible] ಕಾಸ್ಗ್ರೇವ್ಹ ಸಾಹೇಬರ ಮೈ ಮೇಲಿ[illegible] ಕೊಟ್ಟರು. ಮುಂದೆ ಬಂ[illegible] ಉಪ ಚುನಾವಣೆಗಳಾದವು ಇವೆರಡರಲ್ಲಿಯೂ ಡಿ ವ್ಹಲೆರಾ ಪಕ್ಷವು ಗೆದೆಯಲಿಲ್ಲ. ಕಾಸ್ಗ್ರೇವಸಾಹೇಬನು ಹನಗಾರ ತುಂಬಿ ತರುವ ಕಂಡು, ಅಧ್ಯಕ್ಷರಿಂದ ಪಾರ್ಲಮೆಂಟ ಸಭೆಯ ವಿಸರ್ಜನೆ ಮಾಡಿಸಿ, ಹೊಸ ಚುನಾವಣೆಯ ಜಾಹೀರನಾಮೆ ಹಚ್ಚಿಸಿದ್ದಾನೆ. ಚುನಾವಣೆಯ ಜಾಹೀರನಾಮೆಯು ಯಾರ ಕನಸು ಮನಸ್ಸಿನಲ್ಲಿಲ್ಲದೆ, ಮಧ್ಯರಾತ್ರಿಯಲ್ಲಿ ಹತ್ತಿತು. ಇದನ್ನು ನೋಡಿ ಆಯಾ ಪಕ್ಷದವರು ಆಶ್ಚರ್ಯಚಕಿತರಾಗಿ ಭಾವೀ ಚುನಾವಣೆಯ ಬಗ್ಗೆ ವ್ಯವಸ್ಥೆಗಳನ್ನು ಜಾರಿ ಮಾಡಿದರು. ಚುನಾವಣೆಯು ಸಪ್ಟಂಬರದ ೧೬ ನೆಯ ತಾರೀಖಿನ ದಿವಸ ಜರುಗಿ, ಪಾರ್ಲಮೆಂಟವು ಆಕ್ಟೋಬರದ ೧೧ ನೆಯ ತಾರೀಖಿನ ದಿವಸ ಕೂಡುವದು ಈ ಚುನಾವಣೆಯಿಂದ ಆಯರ್ಲಂಡವು ಬ್ರಿಟಿಶ ಸಾಮ್ರಾಜ್ಯಾಂತರ್ಗತವೋ? ಸ್ವತಂತ್ರವೋ ಎಂಬ ನಿರ್ಣಯವಾಗುವದುಂಟು.

ಯುರೋಪಿಯನ್ನ ಡಾಕ್ಟರರ ರೊಟ್ಟಿ ತುಪ್ಪದಲ್ಲಿ ಬಿದ್ದ ಮಾದರಿಯು.

—o—

ಹಿಂದಸ್ಥಾನ ಸರಕಾರದವರು ವಿಲಾಯತಿಯಿಂದ ಕೆಲ ಡಾಕ್ಟರರನ್ನು ಕರೆವರು. ಅವರೆ ಅವರು ಕಾ-ಹೇಮರಲ್ಲ. ಆರು ಅಥವಾ ಹನ್ನೆರಡು ವರ್ಷಗಳ ಕರಾರಿನಿಂದ ತರುವರು ಇವರಿಗೆ ತಿಂಗಳಿಗೆ ಸಾವಿರ ರೂಪಾಯಿ ಸಂಬಳ ಕೊಡುವರು, ಇದೇ ಯೋಗ್ಯತೆಯ ಏತದ್ದೇಶೀಯ ಡಾಕ್ಟರರಿಗೆ ಐನೂರು ರೂಪಾಯಿ ಕೊಡುವರು. ಈ ಪಕ್ಷಪಾತವಿರಲಿ ಇದರ ತರುವಾಯ ವಿಲಾಯತಿಯ ಸಾಹೇಬರು ಆರು ವರ್ಷ ಕೆಲಸ ಮಾಡಿ ಸ್ವದೇಶಕ್ಕೆ ಹೋದರೆ- ಅವರಿಗೆ ೧೭॥ ಸಾವಿರ ಗ್ರ್ಯಾಚ್ಯುಯಿಟಿ ಕೊಡುವರು. ೧೨ ವರ್ಷದ ನಂತರ ಹೋದರೆ- ೩೫ ಸಾವಿರ ಕೊಡುವರು. ಈ ತೆರವಾಗಿ ದ್ರವ್ಯದ ಆಶೆಯನ್ನು ತೋರಿಸಿದರೆ- ಯಾವನ ಬಾಯಿಗೆ ನೀರು ಬಿಡಲಿಕ್ಕಿಲ್ಲ. ಹನ್ನೆರಡು ವರ್ಷ ಕೆಲಸ ಮಾಡಿದರಾಯಿತು ಸುಖವಾಗಿ ಬಾಳುವೆ ಮಾಡಿಕೊಂಡಿರುವಷ್ಟು ದ್ರವ್ಯ ಕೊಟ್ಟು ಇವರನ್ನು ಸ್ವದೇಶಕ್ಕೆ ಕಳಿಸುವರು. ಏತದ್ದೇಶೀಯರ ಕೂಡ ಈ ಕರಾರವಿಲ್ಲ. ಇವರಿಗೆ ಕಾಯಮ ಕೆಲಸ ಕೊಡುವರು. ಮತ್ತು ೩೫ ವರ್ಷ ಆದಮೇಲೆ ಪೆನಶನ ಕೊಡುವರು. ೧೨ ವರ್ಷದ ಕೆಲಸ, ಮೇಲೆ ೩೫೦೦೦ ರೂಪಾಯಿ ನಗದೆಂದು ಹೇಳಿದರೆ- ಯಾವ ಏತದ್ದೇಶೀಯನೂ ಕಾಯಮದ ಆಶೆ ಮಾಡಲಿಕ್ಕಿಲ್ಲ. ಏಕೆಂದರೆ ಡಾಕ್ಟರನು ಹಳಬನಾಗಿ ಅನುಭವಿಕನಾದಂತೆ ಪ್ರಾಕ್ಟೀಸ ಹೆಚ್ಚು!!! ಸಾವಿರಕ್ಕೆ ಎರಡು ಸಾವಿರ ಗಳಿಸುವನು.

ಶ್ರೀ ಶಿರಸಂಗಿ ದೇಸಾಯರ ಸಮಾಧಿಯ ದುರವಸ್ಥೆಯು

[—[೧]—]

ನವಲಗುಂದದಲ್ಲಿ ಶ್ರೀ ಶಿರಸಂಗಿ ದೇಸಾಯರ ಸಮಾಧಿಯುಂಟು ಅದರ ಸೆರಗುಂಟು ಸ್ವರ್ಗವಾಸಿ ದೇಸಾಯರು ತಮ್ಮ ಮೃತ್ಯುಪತ್ರದಲ್ಲಿ "ದೇಸಗತಿಯ ಆದಾಯದ ವಾರ್ಷಿಕ ಉತ್ಪನ್ನದಲ್ಲಿ ನಡೆಯಬೇಕು ಸಮಾಧಿಗಳ ವ್ಯವಸ್ಥೆಯು ಸರಿಯಾಗಿ ಬೇಕು. ದೇಸಗತಿಯ ಆದಾಯದಲ್ಲಿ [illegible] ದುರಸ್ತಿ ಹೊಂದಿ, ಉತ್ತಮ ಸ್ಥಿತಿಯಲ್ಲಿರಬೇಕೆಂದು" ಬರೆದಿಟ್ಟಿದ್ದಾರೆ. ಈ ಬರಹದ ಪ್ರಕಾರ ನವಲಗುಂದದಲ್ಲಿರುವ ಅವರ ಸಮಾಧಿಯ ವ್ಯವಸ್ಥೆ [illegible] ಆಗಬೇಕೆಂದು ಅವರ ಅಭಿಪ್ರಾಯವಿದ್ದಿತು [illegible] ಕೈಪ್ರತಿ ಪತ್ರದಲ್ಲಿ [illegible] ಜೀರ್ಣೋದ್ಧಾರವನ್ನು ಮಾಡಿದಾಗ [illegible] ಅವಮಾನದಲ್ಲಿ [illegible] ವು ನಡೆದಿತ್ತು. [illegible] ಕಳಂಕವಾಗಿರುತ್ತದೆ. ಈ ವಿಚಾರ [illegible] ರನುವೆಯನ್ನೂ ಸಮಾಧಿಯನ್ನು [illegible] ಜನರು ಟ್ರಸ್ಟಿಗಳ ಕರ್ತವ್ಯ ಪರಿಪೂರ್ಣವಾಗಿರುತ್ತದೆ ಈವರೆಗೆ ಇದನ್ನು ನಿಲ್ಲಿಸದ ವ್ಯವಸ್ಥಾಪಕರದ್ದು ದೊಡ್ಡ ತಪ್ಪು. ಹಿಂದೆ ಆದದ್ದು ಆಗಿ ಹೋಯಿತು ಈ ನಂತರ ವ್ಯವಸ್ಥೆ ಪತ್ರದಂತೆ ನಡೆಸಿ, ದೇಸಾಯರ ಆತ್ಮಕ್ಕೆ ಸಂತೋಷವನ್ನುಂಟು ಮಾಡುವರೆಂದು ತಿಳಿಯುತ್ತೇವೆ.

ಗಾಣಿಗನ ಕೊಲೆ.

—o—

ಹಿಂದೂ ಜನರ ಕ್ಷೋಭೆ

—o—

ದಿಲ್ಲಿಯ ನಾಸಕಚಂದನೆಂಬ ಗಾಣಿಗನನ್ನು ರೈಲ್ವೆಯಲ್ಲಿ ಒಬ್ಬ ಮುಸಲಮಾನನು ಕೊಂದನು. ಈತನ ಶವವನ್ನು ದಿಲ್ಲಿಗೆ ತಂದು, ಅದನ್ನು ಸ್ಮಶಾನ ಭೂಮಿಗೆ ಒಯ್ಯುವಾಗ ಹಿಂದೂ ಮುಸಲಮಾನ ದಂಗೆಯಾಗಿ ಪೇಟೆಯ ಬಾಗಿಲ ಹಾಕಿತು. ದಂಗೆಯ ಕಾರಣವನ್ನು ಮುಸಲಮಾನರು ಒಂದು ತರಹ ಮತ್ತು ಹಿಂದೂ ಜನರು ಒಂದು ತರಹ ಹೇಳುತ್ತಿದ್ದಾರೆ. ಹಿಂದೂ ಜನರು ಪ್ರಚಂಡ ಜಾಹೀರ ಸಭೆ ಕೂಡಿಸಿ ಈ ಕೊಲೆಯನ್ನು ತೀವ್ರ ಶಬ್ದಗಳಿಂದ ನಿಷೇಧಿಸಿದ್ದಲ್ಲದೆ, ಸರಕಾರವು ಹಿಂದೂ ಜನರ ಸಂರಕ್ಷಣೆಯ ಕಾರ್ಯವನ್ನು ಜವಾಬದಾರಿಯಿಂದ ತೋರದಿದ್ದರೆ, ಹಿಂದೂ ಜನರು ಆತ್ಮ ರಕ್ಷಣೆಗಾಗಿ ಸ್ವಂತ ದಾರೀ ನೋಡಿಕೊಳ್ಳಬೇಕಾದೀತೆಂದು ಸರಕಾರಕ್ಕೆ ಸ್ಪಷ್ಟವಾಗಿ ತಿಳಿಸಬೇಕೆಂಬ ಠರಾವು ಮಾಡಿದ್ದಾರೆ ವೃತ್ತಿನೆ

ಕುಟುಂಬದ ಸಂರಕ್ಷಣೆಗಾಗಿ ೨೦ ಸಾವಿರದ ವರ್ಗಣೀ ಕೂಡಿಸುವರು

ಸೂಳೆತನ ಮಾಡಲಿಕ್ಕಿಲ್ಲೆಂದು ನಾಯಿಕಸಾನಿಯರ ಪ್ರತಿಜ್ಞೆ.

—o—

ಹೋದ ವಾರದಲ್ಲಿ ಬಳ್ಳಾರಿಯಲ್ಲಿ ಪಾತರದವರನ್ನು ಗರತಿಯರಾಗಿ ಮಾಡುವ ಸಭೆ ನಾಗಿತ್ತು. ಈ ಸಭೆಗೆ [illegible] ಶ್ರೀಮತಿ [illegible], ವ್ಯಾಸರಾವ, [illegible] ಸಭೆಗೆ ನಾಯಿಕಸಾನಿಯರು ಬಂದಿದ್ದರು. ಇವರಲ್ಲಿ [illegible] ಸೌಭಾಗ್ಯವತಿ [illegible] ನಾಯಿಕಸಾನಿಯರು [illegible] ತಾವು ಅನಂತರ ವೇಶ್ಯಾವೃತ್ತಿಯನ್ನು ಬಿಡುವದಾಗಿಯೂ, ತಮ್ಮ ಹೆಣ್ಣುಮಕ್ಕಳನ್ನು [illegible] ಬಿಡುವದಿಲ್ಲ, ಅವರನ್ನು ಗರತಿಯರಾಗಿ ಮಾಡುವೆವೆಂದು ಸಭೆಯಲ್ಲಿ [illegible] ಪ್ರತಿಜ್ಞೆ ಮಾಡಿದರು. [illegible] ಜೀವನ ಸಾಧ್ಯ [illegible] ಮಾಡಬೇಕೆಂದು [illegible] ನಡೆಸಿತು. ಇಂಥ [illegible] ಮುಂಬಯಿ ಇಲಾಖೆಯಲ್ಲಿಯೂ ನಡೆಸುವದು ಅವಶ್ಯವಾಗಿದೆ.

ಜೈನರ ಗುಡಿಗಳಲ್ಲಿ ಬ್ರಾಹ್ಮಣ ಅರ್ಚಕರು.

—o—

ಗುಜರಾಥದಲ್ಲಿ ಜೈನರ ದೇವಾಲಯಗಳಲ್ಲಿ ಬ್ರಾಹ್ಮಣ ಪೂಜಾರಿಗಳಿದ್ದಾರೆ. ಜೈನರ ಮನೆಯಲ್ಲಾಗುವ ವಿವಾಹ ಉಪನಯನಗಳನ್ನು ಬ್ರಾಹ್ಮಣರೇ ಮಾಡಿಸುತ್ತಾರೆ. ಈ ಸಾಂಪ್ರದಾಯವು ಮಹಾರಾಷ್ಟ್ರ, ಕರ್ನಾಟಕ ಅಥವಾ ಇನ್ನಾವ ಭಾಗದಲ್ಲಿಯೂ ಇರುವದಿಲ್ಲ. ಬ್ರಾಹ್ಮಣರು ಮೂರ್ತಿ ಪೂಜೆ ಮಾಡಿಸಬಹುದು. ಆದರೆ ಅವರ ದಿಗಂಬರರಾದಂಥ ಜಿನ ದೇವರ ಪೂಜೆಯನ್ನು ಹೇಗೆ ಮಾಡುತ್ತಾರೆ. ಮತ್ತು ಯಾವ ಶ್ರದ್ಧೆ ಅಥವಾ ಭಾವನೆಯಿಂದ ಮಾಡುತ್ತಾರೆಂಬದು ಸೋಜಿಗವಾಗಿರುತ್ತದೆ, ಜೈನರಲ್ಲಿ ವೇದ ಪಥಾನುಯಾಯಿಗಳೂ ಇದ್ದರೆ ಒಂದೊಂದೇ ಚಮತ್ಕಾರ.

ಮಾಸ್ತರರ ಬಡತಿಗೆ [illegible]-

ವಿಜಾಪೂರ ಜಿಲ್ಲೆಯಲ್ಲಿ ಗುಪ್ತೇವಾಡದ ಮಾಸ್ತರನು ಹೆಣ್ತಿಗೆ ಸರಿಯಾಗಿ ಶಾಲೆ ಹಾಕುವದಿಲ್ಲೆಂಬ ಆಪಾದನೆ ಹೊರಿಸಿ, ಆತನಿಗೆ ಎರಡು ವರುಷಗಳ ಪರ್ಯಂತರ ಬಡತಿ ಕೊಡಲಾಗದೆಂದು ಸ್ಕೂಲ ಕಮಿಟಿಯವರು ಠರಾವು ಮಾಡಿದ್ದಾರೆ. ಇತ್ತ ಬೇರೆ ಸ್ಥಳಗಳ ಶಿಕ್ಷಕರು ಅವಶ್ಯ ಲಕ್ಷ ಕೊಡತಕ್ಕದ್ದು

ಮ್ಯಾಜಿಸ್ಟ್ರೇಟರ ಹೆಸರಿನಿಂದ ಸಿಪಾಯಿ ಲಂಚ ತಿಂದನು.

—o—

ಪುಣೆಯಲ್ಲಿ ಮಿ. ದಾತಾರ ಎಂಬ ಹೆಸರಿನ ಮೂರನೆಯ ವರ್ಗದ ಮ್ಯಾಜಿಸ್ಟ್ರೇಟರಲ್ಲಿ ಧೊಂಡಿಬಾ ಎಂಬ ಹೆಸರಿನ ಒಬ್ಬ ಸಿಪಾಯಿ ಇದ್ದನು. ಈತನು ಒಬ್ಬ ಆರೋಪಿಯಿಂದ ನೂರು ರೂಪಾಯಿ ತಕ್ಕೊಂಡು, ಮ್ಯಾಜಿಸ್ಟ್ರೇಟರಿಂದ ನಿನಗೆ ಬಿಡಿಸುವೆನೆಂದು ವಚನ ಕೊಟ್ಟನು. ಈ ಕಪಟವು ಹೊರಬಿದ್ದು, ಈಗ ಸಿಪಾಯಿಯ ಮೇಲೆ ಖಟ್ಲೆಯಾಗಿರುತ್ತದೆ.

ಕಳ್ಳರು ಪೋಲೀಸರ ಕಣ್ಣಿಗೆ ಇಂಗು ಹಚ್ಚಿದರು-

ಅಲ್ಲಾಬಾದ ಮುಗ್ಲಸರಾಯಿ ನಡುವೆ ಇರುವ ಒಂದು ಚಿಕ್ಕ ಸ್ಟೇಶನದಲ್ಲಿ ಬಂಡಿ ನಿಂತ ಕೂಡಲೆ ಒಬ್ಬನು ಸ್ತ್ರೀಯರ ಡಬ್ಬಿಯಲ್ಲಿ ಏರಿದನು. ಸ್ಟೇಶನದ ಅಧಿಕಾರಿಗಳೂ ಪೋಲೀಸರೂ ಈತನನ್ನು ಹೊರಗೆ ಇಳಿಸಬೇಕೆಂದರು. ಆತನು ಇಳಿಯದ್ದರಿಂದ ಗದ್ದಲವಾಯಿತು. ಎರಡು ನಿಮಿಷ ಮೊದಲು ಎಷ್ಟೋ ಪ್ರಯಾಣಿಕರು ಇಳಿದರು. [illegible] ದಂಥದಲ್ಲಿ ಹಿಂದಿನ ಮಗ್ಗಲಿಗೆ ನಿಂತ ಕಳ್ಳರು ಒಳಗೆ ನುಗ್ಗಿ ಕೈಗೆ ಸಿಕ್ಕಿದ್ದಷ್ಟು ಹೊರಗೆ ಚೆಲ್ಲಿ ಎತ್ತಿಕೊಂಡು ಪಲಾಯನ ಹೇಳಿದರು. ಮುಂದಿನ ಸ್ಟೇಶನಕ್ಕೆ ಹೋದ ಬಳಿಕ ಕಳ್ಳರು ಕಣ್ಣಿಗೆ ಇಂಗು ಹಚ್ಚಿದ್ದು ತಿಳಿಯಿತು.

ವಿವಿಧ ವರ್ತಮಾನಗಳು

—o—

ಕೊಲ್ಹಾಪೂರದಲ್ಲಿ ಚಹಾ ಕಾಫಿ ಮತ್ತು ಮಿಠಾಯಿಗಳ ಅಂಗಡಿಗಳ ಮೇಲೂ ರೇವಡಿಯನ್ನು ಬೀದಿಗಳಲ್ಲಿ ಮಾರುವವರ ಮೇಲೂ ಕರ ಕೂಡಿಸಿದ್ದಾರೆ. ಕರವು ಅವರವರ ಯೋಗ್ಯತೆಯ ಪ್ರಕಾರ ತಿಂಗಳಿಗೆ ಎಂಟಾಣೆಯಿಂದ ಎರಡು ರೂಪಾಯಿಯುಂಟು. ಬೀದಿಗಳಲ್ಲಿ ಮಾರುವಂಥವರಿಗೆ ಹದ್ದುಗೊತ್ತು ಮಾಡಿಕೊಟ್ಟಿದ್ದಾರೆ.

ಗುಜರಾಥದಲ್ಲಿ ಇಂಜಿನಿಯರ ಖಾತೆಯ ಹಾನಿಯು ನಾಲ್ಕು ಲಕ್ಷಕ್ಕಿಂತ ಹೆಚ್ಚಾಗಿದೆ. ಕಲ್ಲುಗಟ್ಟಿನ ಕಟ್ಟಡ ಮತ್ತು ಮೋರಿಗಳೇ ಈ ಪ್ರಕಾರ ದುರ್ದೆಶೆ ಹೊಂದಿದ ಬಳಿಕ ಬಡವರ ಮಣ್ಣಿನ ಗೋಡೆಗಳ ಹಾನಿಯು ಎಷ್ಟಾಗಿರಬಹುದೆಂಬದನ್ನು ಯಾರು ಊಹಿಸಬಲ್ಲರು?

ಬಂಗಾಲದ ಮಂತ್ರಿಯಾಗಿದ್ದ ಮಿ. ಚಕ್ರವರ್ತಿಯವರು ಹಿಂದುಸ್ಥಾನ ವಿಮೆಯ ಕಂಪನಿಯ ಡಾಯರೆಕ್ಟರರಾಗಿದ್ದರು. ಬ್ಯಾಂಕು ದಿವಾಳಿ ತೆಗೆದದ್ದರಿಂದ ಕಂಪನಿಯವರು ಈ ಲಕ್ಷ ರೂಪಾಯಿಗಳನ್ನು ಮಿ. ಚಕ್ರವರ್ತಿಯವರಿಂದ ಕೊಡಿಸಬೇಕೆಂದು ಕಲಕತ್ತೆಯ ಹಾಯಕೋರ್ಟಿನಲ್ಲಿ ದಾವೇ ಮಾಡಿದ್ದಾರೆ

ರಾಯಚೂರ ಸ್ಟೇಶನದಲ್ಲಿ ಒಂದು ಟ್ರಂಕಿನಲ್ಲಿ ಒಬ್ಬ ಮುಸಲಮಾನನ ಹೆಣವಿದ್ದದ್ದು ದೊರೆತಿದೆ. ಸೊಲ್ಲಾಪೂರ ಮತ್ತು ವಾಡಿಯ ನಡುವಿನ ಸ್ಟೇಶನಗಳಲ್ಲಿ ಯಾರಾದರು ಈ ಟ್ರಂಕು ಇಟ್ಟಿರಬೇಕೆಂಬ ಸಂಶಯವಾಗಿರುತ್ತದೆ.

ರೇಣಿಗುಂಟಾದಿಂದ ಮದ್ರಾಸದ ತನಕ ಸಣ್ಣ ಹಳಿಯ ರೇಲ್ವೆ ಹಾಕುವದಕ್ಕಾಗಿ [illegible] ರಾವ ಕಂಪನಿಯವರು ಸರ್ವೆ ಮಾಡುವರು.

ಬಂಗಾಲಕ್ಕೆ ಸೇರಿದ ಪಬನಾ ಜಿಲ್ಲೆಯಲ್ಲಿ ಬಂಡಾಯದಂತೆ ದಂಗೆ ಹಾಕಿದ ಮುಸಲಮಾನರಲ್ಲಿ ಈ ವರೆಗೆ ೩೮ ಜನರಿಗೆ ಶಿಕ್ಷೆಯಾಗಿರುತ್ತದೆ.

ಧಾರವಾಡ

—o—

ಬೆಳಗಾವಿಯಿಂದ ಸವದತ್ತಿ [illegible] ಮೇಲಿಂದ ಹುಬ್ಬಳ್ಳಿಗೆ ರೇಲ್ವೆ ಹಾಕುವ ವಿಚಾರವನ್ನು ರಹಿತಪಡಿಸಿ, ಬೆಳಗಾವಿ, ಸವದತ್ತಿ ಮಾರ್ಗವಾಗಿ ಧಾರವಾಡ ಜಂಕ್ಷನ ಮಾಡುವರೆಂಬ ವರ್ತಮಾನವಾಗಿದೆ. ಮತ್ತು ಧಾರವಾಡದಿಂದ ನರಗುಂದಕ್ಕೆ ರೇಲ್ವೆ ಹಾಕುವರೆಂದು ಅವರ ಕೂಡ ಇನ್ನೊಂದು ವರ್ತಮಾನವು

ಇಲ್ಲಿಯ ಕರ್ನಾಟಕ ಕಾಲೇಜದಲ್ಲಿ ಪ್ರೊಫೇಸರರಾಗಿರುವ ಮಿ. ಧೋಪೇಶ್ವರಕರಿಗೆ ಮೋಟಾರ ಸಾಯಕಲ್ಲಿನ ಅಪಘಾತವಾಗಿ ಅವರ ಕುತ್ತಿಗೆಯ ಪಕ್ಕದ ಎಲುಬು ಮುರಿದಿರುತ್ತದೆ.

ಮಿ. ಬಿನ್ನಸಾಹೇಬರು ಇಲ್ಲಿ ಇರಿಗೇಶನ ಇಂಜಿನಿಯರರಾಗಿ ನೇಮಿಸಲ್ಪಟ್ಟಿದ್ದಾರೆ.

ನವಲಗುಂದ ಮ್ಯುನಿಸಿಪಾಲಿಟಿಯ ಅಧ್ಯಕ್ಷಪದದ ವಾದವು ಕೋರ್ಟಿನ ಕಟ್ಟೆ ಹತ್ತುವದು. ಕಾಯದೆ ಪ್ರಕಾರ ಈ ನೋಟೀಸು ಹೋಗುತ್ತವೆಂದು ತಿಳಿಯುತ್ತದೆ.

ಈ ವಾರದಲ್ಲಿ ಮಳೆಯಿಲ್ಲ. ಯಾವಾಗಾದರೂ ಮೋಡ ಹಾಕಿ, ಕಲ್ಲು ತೊಯ್ಯುವಷ್ಟು ಹನಿಯುದುರುತ್ತಿರುವವು.

ಈ ಊರಲ್ಲಿ ಗುಜರಾಥ [illegible] ಗಾಗಿ ಒಂದು ಬಂಡಿ [illegible]

ದು ಭಾಷಣ ಮಾಡಿ, ರಾಜಿಯ ಹವಾಲಿಯನ್ನು ಹಿಂದೂ ಮುಸಲಮಾನರ ಮೇಲೆ ಹಾಕಿದ್ದಾರೆ.

ಹಿಂದೂ ಶೀಖರ ಅಂಗಡಿಗಳಿಗೆ ಬಹಿಷ್ಕಾರ-

ಅಮೃತಸರದ ಮುಸಲಮಾನರು ಹಿಂದೂ ಮತ್ತು ಶೀಖರ ಅಂಗಡಿಗಳಲ್ಲಿ ವ್ಯಾಪಾರ ಮಾಡಬಾರದೆಂದು ಅಂಗಡಿಗಳ ಮುಂದೆ ಪಿಕೆಟಿಂಗ ನಡೆಸಿದ್ದಾರೆ. ಮತ್ತು ಅಲ್ಲಿಯ ಲಾಯಿಟ ಮತ್ತು ಜಮೀನದಾರ ಪತ್ರಗಳಲ್ಲಿ ಹಿಂದೂ ಜನರಿಗೆ ಮನೋವ್ಯಥೆಯಾಗುವ ಲೇಖಗಳು ಬರುತ್ತಿರುವವು. ಇವೆರಡು ಕೃತ್ಯಗಳನ್ನು ಹಿಂದೂ ಜನರು ಸಭೆ ಮಾಡಿ, ನಿಷೇಧಿಸಿ ಇವನ್ನು ಸರಕಾರದ ದೃಷ್ಟಿಗೆ ಹಾಕಿದ್ದಾರೆ.

ಇತ್ತೀಚಾದ ಕಮಿಟಿ-

ಹಿಂದೂ ಮತ್ತು ಮುಸಲಮಾನರಲ್ಲಿ ಐಕ್ಯವನ್ನು ಹುಟ್ಟಿಸುವದಕ್ಕಾಗಿ ಅಮೃತಸರದಲ್ಲಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಪ್ರತಿಯೊಬ್ಬನು ದ್ವೇಷ ಹಬ್ಬದಂತೆ ಮತ್ತು ಐಕ್ಯ ಬೆಳೆಯುವಂತೆ ಪ್ರಾಮಾಣಿಕತನದಿಂದ ಪ್ರಯತ್ನ ಮಾಡುತ್ತೇನೆಂದು ಪ್ರತಿಜ್ಞಾಲೇಖ ಬರೆಯಬೇಕೆಂಬದಾಗಿ ಡಾಕ್ಟರ ಕಿಚಲೂಸಾಹೇಬರು ಮಾಡಿದ ಸೂಚನೆಯು ಸಭೆಗೆ ಮಾನ್ಯವಾಯಿತು.

ನಾಳಿನ ರಜೆ—

ಇಂದು ವಿನಾಯಕ ಚತುರ್ಥಿಯ ದಿನೆಯಿಂದ ಮುದ್ರಾಲಯಕ್ಕೆ ರಜೆ ಇರುವದರಿಂದ ನಾಳಿನ ನಿತ್ಯದ ವಿಜಯವು ಪ್ರಕಟಿಸಲ್ಪಡಲಾರದು.

ಎಲಕ್ಟ್ರೋ ಗೋಲ್ಡ ಪ್ಲೇಟೆಡ್.

ಇಮಿಟೇಷನ್ ದಯಮಂದು ಆಭರಣಗಳು.



ಇದರಲ್ಲಿ ಕಾಣಿಸಿರುವ ಆಭರಣಗಳು ಅಸಲು ಇಮಿಟೇಷನ ತರಿಸಿ ಸ್ವಂತದಲ್ಲಿ ತಯಾರು ಮಾಡಿ [illegible] ಗ್ಯಾರಂಟಿಯಿಂದ ಕಳಿಸುವೆವು.

ಮತಿ ಸದ್ಯಾಣ (ದಾಬು) ೧೬೦ ಗೆಜ್ಜೆಗಳು [illegible] ಕ್ರಯ ೫-೦-೦
ಸಾದಾ ಸದ್ಯಾಣ (ದಾಬು) ೧ಕ್ಕೆ ೩-೮-೦
[illegible] ೬-೮-೦
[illegible] ೪-೦-೦

ಜತೆ ಇಮಿಟೇಷನ್ [illegible] ೨-೮-೦
,, ,, [illegible] ೨-೧-೦
,, ಇಮಿಟೇಷನ್ [illegible] ಜತೆ ೧ಕ್ಕೆ ೩-೦-೦
,, ಇಮಿಟೇಷನ್ [illegible] ೧ಕ್ಕೆ ೧-೪-೦
ಜತೆ ನಾಗರ ೧ಕ್ಕೆ ೧-೦-೦
ಜತೆ [illegible] ಸಹಿತ ೧ಕ್ಕೆ ೫-೮-೦
ಇವುಗಳನ್ನು [illegible] ತರಿಸಿ ನೋಡಿದರೆ ಇವುಗಳ [illegible] ಗೊತ್ತಾಗುವದು.

ಪಿ. ವಿ. ಪಿಳ್ಳೆ.
ಆ ವೆಂಕಟಸ್ವಾಮಿ ಬೀದಿ ಪಿ. ಟಿ. ಮದ್ರಾಸು,

ಇದರ ಕೆಳಗೆ ಕಂಡ ಔಷಧಗಳು ಅನೇಕರು [illegible] ಯೋಗ್ಯತಾ ಪತ್ರಗಳ [illegible] ಅದರಿಂದ ಇವನ್ನು ಬೇಕಾದವರು ತರಿಸಿ [illegible] ಯೋಗ್ಯತಾ ಪತ್ರಗಳನ್ನು [illegible] ಇಷ್ಟು ಸ್ವಲ್ಪ ಪ್ರಯತ್ನ [illegible].

ಅಯಾಂಟ ಪ್ರಾಸ [illegible] ಕ್ರಯ ೨೦ ದಿನಗಳ [illegible].
[illegible] (ಮುತ್ತು [illegible]) ೨೦ [illegible] ತರಿಸಿ [illegible]
[illegible] ತೈಲ [illegible] ೧ಕ್ಕೆ ೧-೦.
[illegible]
[illegible]
[illegible]
[illegible]

[illegible] ಮದ್ರಾಸ

ನೋಟೀಸು

ಸೌ|| ಮತಿ ಲಕ್ಷ್ಮೀ ಕೋಂ ಇರಪಣ್ಣಾ ಚಿನಿವಾಲರ ಸಾಕೀನ ಹಳ್ಳಿವಸ್ತಿ ಬೆಳವಣಿಕೆ ತಾಲ್ಲೂಕ ರೋಣ ಇವರಿಗೆ-

ನಿಮಗೆ ಸಹಿ ಮಾಡುವ ಇರಪಣ್ಣಾ ತಂದಿ ಸಿಂಗಪ್ಪಾ ಚಿನಿವಾಲರ ಸಾಕೀನ ಕೊಣ್ಣೂರ ಪೇಠಾ ನರಗುಂದ ನಾನು ಈ ನೋಟೀಸಿನಿಂದ ನಿನಗೆ ತಿಳಿಸೋದೇನಂದರೆ- ನೀನು ನನ್ನ ಮದವಿ ಹೆಂಡತಿ ಇದ್ದು ಮದವಿ ಆಗಿ ಅಜಮಾಸು ಐದು ವರ್ಷವಾಯಿತು ನಂತರ ನೀನು ಪ್ರೈವರದ ಬಳಿಕ ನನ್ನ ಮನಿಯಲ್ಲಿ ಬಂದು ಮೂರು ನಾಲ್ಕು ತಿಂಗಳ ಚಲೋರೀತಿಯಿಂದ ಬಾಳ್ವೆ ಮಾಡಿಕೊಂಡಿದ್ದು ಮುಂದೆ ನಿನ್ನ ತಾಯಿ ಕರಿಯಲಿಕ್ಕೆ ಬಂದಾಗ್ಗೆ ಆಕೆಯ ಕೂಡಾ ಕಳಿಸಿಕೊಟ್ಟೆ ಈ ಮೇಲೆ ಅಂದರೆ ಈಗ ೭-೮ ಹಿಂದೆ ಪುನಃ ನಿನ್ನನ್ನು ಕರಕೊಂಡು ಬಂದೆ ಆಗ್ಗೆ ಹತ್ತು ತಿಂಗಳು ಮಾತ್ರ ನೆಟ್ಟಗಿದ್ದು ಮುಂದೆ ಕೆಟ್ಟ ಜನರ ದುರ್ಬೋಧನೆಯಿಂದ ನಾನು ಲಗ್ನದಲ್ಲಿ ಹಾಕಿದ ದಾಗೀನೆಗಳು ಸರಗಿ ೮ ತೊಲಿ ಕಿ|| ೧೬೦ ರೂಪಾಯಿ ಬಿಳಿ ಜೋಡು ೫ ತೊಲಿದ್ದು ೧೦೦ ರೂ ಕಿಮ್ಮತ್ತಿನವು ಕೋಡೆ ಜೋಡು ಒಂದು ಬೆಳ್ಳಿಯ ೬೦ ರೂ. ಕಿಮ್ಮತ್ತಿನವು ಈ ಪ್ರಕಾರ ೩೨೦ ಮುನ್ನೂರಾ ಇಪ್ಪತ್ತು ರೂಪಾಯದ ದಾಗೀನೆ ತಕ್ಕೊಂಡು ಮನೆಯಲ್ಲಿ ಯಾರಿಗೂ ಹೇಳದೆ ಕೇಳದೆ ಓಡಿ ಹೋದಿ ಮುಂದೆ ನಿನ್ನ ಶೋಧ ಮಾಡಲಾಗಿ ನೀನು ತವರ ಮನಿಗೆ ಅಂದರೆ ಬೆಳವಣಿಕೆಗೆ ಹೋಗೀದಿ ಅಂತಾ ತಿಳಿದು ಅಲ್ಲಿಗೆ ಮುದ್ದಾಂ ನಾನು ಕರಿಯಲಿಕ್ಕೆ ಬಂದೆ ಕೇಳಿದರೆ ನಾನು ಬರುವದಿಲ್ಲಾ ಅಂದಿ ಸಂಭಾವಿತರ ಕಡಿಂದಾ ನಿಮ್ಮ ತಾಯಿಗೆ ಹೇಳಿಸಿದೆ ಆದರೂ ನೀನು ಬರಲಿಕ್ಕೆ ಕಬೂಲ ಆಗಲಿಲ್ಲಾ ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ಮೇಲೆ ಕಾಣಿಸಿದ ದಾಗೀನಗಳು ತಗೊಂಡು ಬಂದು ನೆಟ್ಟಗೆ ರೀತಿಯಿಂದ ಬಾಳ್ವೆ ಮಾಡಿಕೊಂಡಿರಬೇಕು ಇದಕ್ಕೆ ತಪ್ಪಿದರೆ ನಿನ್ನ ಮ್ಯಾಲೆ ಫೌಜದಾರಿಯಲ್ಲಿ ದಾಗೀನೆಗಳ ಸಲುವಾಗಿಯೂ ನಿನ್ನ ಕಬಜಾಕ್ಕೆ ದಿವಾಣಿಯಲ್ಲಿ ಫಿರ್ಯಾದಿ ಮಾಡತೇನೆ ನನ್ನ ಪರವಾಗಿ ಇಲ್ಲದೆ ನೀನು ಉಡಿಕಿ ವಗೈರೆ ಮಾಡಿಕೊಂಡರೆ ನಿನ್ನ ಮ್ಯಾಲೆ ರೀತಿಪ್ರಕಾರ ಕೇಸ ನಡಿಸಲಾದೀತು ಅಂತಾ ಕೊಟ್ಟ ನೋಟೀಸು

ತಾ|| ೩೦—೮—೧೯೨೨ ಇಸವಿ
ಸಹಿ ಇರಪಣ್ಣಾ ತಂದಿ ಸಿಂಗಪ್ಪಾ ಚಿನಿವಾಲರ.

ಈ ಪತ್ರವನ್ನು ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N.B. 1443

ವಿಜಯ

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಬುಧವಾರ ತಾರೀಖು ೩೧ ನೇ ಅಗಸ್ಟ ೧೯೨೧ (ಸಂಚಿಕೆ ೧೮೭

ಕಿರ್ಲೋಸ್ಕರ ಶೇಂಗಾ [ಭುಯಿ ಮೂಗು] ಒಡೆಯುವ ಯಂತ್ರಗಳು



ಈ ಯಂತ್ರಗಳು ಎರಡು ಮಾದರಿಯವು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಕಬ್ಬಿಣದವು. ಬಾಳಿಕೆ ಉಳ್ಳವು. ಹೊಟ್ಟನ್ನು ಬೇರ್ಪಡಿಸಲು ಯಂತ್ರದಲ್ಲಿ ಬೀಸಣಿಕೆಯನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳು ಕಳೆದ ಹಂಗಾಮಿನಲ್ಲಿ ಬಹು ಪ್ರಚಾರಗೊಂಡಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಮಾರುವ ವ್ಯಾಪಾರಸ್ಥರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧೂ ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಪೋಸ್ಟೇಜಿನ ದರಗಳು.

ತಿಂಗಳು ಕಾಲಮಿನ ಪಕ್ಕ ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಏಳು ಆಣೆ ಕೋರ್ಟು, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಮುಂತಾದ ಸರಕಾರಿಕ ನೋಟೀಸುಗಳು ... ಅವಶ್ಯಕ ಕನ್ನಡದಲ್ಲಿ ಹಾಕುವದಿದ್ದರೆ ಆಣೆ ಕಾಲಮಿನ ಒಳಿಗೆ ಇಪ್ಪತ್ತು ಜಾಹಿರಾತುಗಳನ್ನು ಕೊಡುವವರು ಕೆಳಗೆ ಪತ್ರಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ೦
೬ ,,	೬—೦—೦ ೦
೪ ,,	೪—೦—೦ ೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ಆರು, ಒಂಭತ್ತು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಿಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತೆ ಬರುತ್ತದೆ.

ಎ. ಕೆ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಅರು ಲಕ್ಷದ ಮೇಲುಂಟು. ಜೆಕ ಕುಂಡಿ ಹೊರತಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯಲ್ಪಡುವದು. ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಹೆಚ್ಚಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ವಿಂಧ್ಯವರಾವ ಡಿ. ಜಹಾಗೀ,

ಮ್ಯಾನೇಜಿಂಗ ಡಾಯರೆಕ್ಟರ

ವಿಜಯ ಪುಸ್ತಕಾಲಯ.

—೦—

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಖರ್ಚು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ

ಧಾರವಾಡ

ದಿವಾನಬಹಾದ್ದೂರ ರೊದ್ದರಾಯರೇ? ಪ್ರಾಥಮಿಕ ಶಿಕ್ಷಕರ ಗೋಳು ಕಟ್ಟಿಕೊಳ್ಳಬೇಕೆನ್ನುವರೇನು?

(ಒರೆದು ಬಂದ ಲೇಖ)

೧ ದಿವಾನಬಹಾದ್ದೂರ ರೊದ್ದರಾಯರು ಕರ್ನಾಟಕದಲ್ಲಿ ಶಿಕ್ಷಣ ಪ್ರಸಾರವಾಗಬೇಕು. ಹಿಂದುಳಿದ ಕರ್ನಾಟಕವು ಮುಂದೊರೆಯಬೇಕು. ಕರ್ನಾಟಕದ ಗೌರವವು ಉಳಿಯಬೇಕೆಂದು ಕರ್ನಾಟಕ ಕಾಲೇಜವನ್ನು ಸ್ಥಾಪಿಸಿದಂತೆ ನೊನ್ನೆ ನೊನ್ನೆ ಬಂದಾದ ಧಾರವಾಡ ಟ್ರೇನಿಂಗ ಸ್ಕೂಲನ್ನು ಪುನಃ ಪ್ರಾರಂಭಿಸಬೇಕೆಂದು ಶ್ರೀ ನಾಮದಾರ ಗವ್ಹರ್ನರ ಸಾಹೇಬ ಮಯಿ ಇವರ ಕಡೆಗೆ ತಾ|| ೨-೭-೩೮ ನೇ ದಿವಸ ಒರೆದ ವಿನಂತಿ ಪತ್ರವನ್ನು ಓದಿದವರಿಗೆ ಆನಂದವೂ ದುಃಖವೂ ಕೂಡಿಯೇ ಆಗದಿರಲಾರದು! ಈ ಪತ್ರದಲ್ಲಿ ತಮ್ಮ ಉದ್ದೇಶದ ವಿಷಯಕ್ಕೆ ಸಂಬಂಧವಿಲ್ಲದೆ ಪ್ರಾಥಮಿಕ ಶಿಕ್ಷಕರ ಪಗಾರದ ವಿಷಯವನ್ನು ತಕ್ಕೊಂಡದ್ದು ಅಪ್ರಾಸಂಗಿಕವೆಂದು ನಿಃಸ್ವಾರ್ಥಬುದ್ಧಿಯಿಂದ ವಿಚಾರ ಮಾಡುವವರು ಹೇಳಬಹುದು. ಸರಕಾರದವರು ಹಾವ ಉಳಿತಾಯದ (ಕಾಟಕಸರಿನ) ಸಲುವಾಗಿ ಟ್ರೇನಿಂಗಸ್ಕೂಲನ್ನು ಬಂದು ಮಾಡುವರೆಂದು ತಿಳಿದು, ಹಣ ಉಳಿತಾಯವಾಗಬೇಕಾದರೆ ಪ್ರಾಥಮಿಕ ಶಿಕ್ಷಕರ ಬಾಯಿಗೆ ಗಡ್ಡೆಯನ್ನು ಕೊಡುವ ವಿಚಾರ ಮುಂದೆ ಮಾಡಿ, ಟ್ರೇನಿಂಗ ಸ್ಕೂಲನ್ನು ಪುನಃ ಸ್ಥಾಪಿಸಲಿಕ್ಕೆ ಪ್ರಯತ್ನಿಸಿದರು. ಅನೇಕ ಜನರ ಕಲ್ಯಾಣ ಮಾಡಿದ ಕರಣಿಕರು ರೊದ್ದರಾಯರು ಒಮ್ಮಿಂದೊಮ್ಮೆ ಶಿಕ್ಷಕರ ಮೇಲೆ ಕಡಕೊಂಡು ಬೀಳಬೇಕಾದರೆ ಅಂತರಂಗದಲ್ಲಿ ಏನಾದರೂ ಒಂದು ಉದ್ದೇಶವಿರಬೇಕೆಂದು ಸಹಜ ತಿಳಿಯಬಹುದು. ದಿ. ಬ. ರೊದ್ದರಾಯರು ಬರೆದ (ಇಂಗ್ಲಿಷದಲ್ಲಿ) ಪತ್ರದ ಅನುವಾದವನ್ನು ಕನ್ನಡ ಶಾಲಾಪತ್ರದ ಸಂಪಾದಕರು ಆತ್ಮಾನಂದದ ಸಂಗತಿಯೆಂದು ಅದನ್ನು ಜೂನ, ಜುಲೈ ೧೯೩೮ ತಿಂಗಳ ಸಂಚಿಕೆಯಲ್ಲಿ ಮುದ್ರಿಸಿದ್ದಾರೆ. ಸದರ ಪತ್ರದ ೬ ನೇ ಕಲಮನ್ನು ಓದಿದ ಪ್ರತಿಯೊಬ್ಬ ಶಿಕ್ಷಕನಿಗೆ ಅತ್ಯಂತ ಅಸಮಾಧಾನವಾಗದಿರಲಾರದು! ಕರ್ನಾಟಕದ ಹಿತಚಿಂತಕರಾದ ರಾಯರು ಹೀಗೇಕೆ ಬರೆದರೆಂಬುದು ತಿಳಿಯಲಾರದು.

೨ ದಿವಾನ ಬಹಾದ್ದೂರರೇ ನೀವು ಕೆಲಸ ಮಾಡುವ [illegible] ಯುಗದಲ್ಲಿ ಪೆಂಶನು ಧಾರಣೆಯು. ಹೇಗಿತ್ತೆಂಬುದು ನೆನಪದೆಯೋ? ನೀವು ಇಷ್ಟು ತೀವ್ರ ಮ[illegible] ಬಹಳೇ ನೋಡಿಗರಾಗಿರುವಿ? ಪ್ರಾಥಮಿಕ ಶಿ[illegible] ಅಷ್ಟು ಬ್ರಹ್ಮಚರ್ಯದಿಂದ ಜನ್ಮ[illegible] ದೀಕ್ಷೆಗೊಂಡ ಬಾಲಬ್ರಹ್ಮಚಾರಿಗಳೋ? ಸಂಸಾರ ತ್ಯಾಗ ಮಾಡಿ ಲಂಗೋಟಿ ಹಾಕಿಕೊಂಡು ಅರಣ್ಯ ಸೇರಿದ ಸನ್ಯಾಸಿಗಳೋ? ದೇವರಿಂದ ಬಂಜೆತನವನ್ನು ಪಡಕೊಂಡು ಬಂದ ಪಾಪಿಷ್ಠರೋ? ನಿಯಮಿತ ಮಕ್ಕಳನ್ನೇ ಹಡೆದು, ಹುಟ್ಟಿದ ಮಕ್ಕಳು ಪರಪುಷ್ಟರಾಗಿ ಜೀವಿಸಬೇಕೆಂದು ಬೇಡಿಕೊಂಡ ಕಂತುಗಾರರೋ? ಅರಹೊಟ್ಟೆ ಶಿಕ್ಷದ್ದನ್ನೇ ಪಕ್ವಾನ್ನವೆಂದು ತಿಂದು ಪವಿತ್ರ ಕಾರ್ಯವಾದ ಶಿಕ್ಷಣವನ್ನು ಸಾಗಿಸಿ ಮೋಕ್ಷ ಪಡೆಯಬೇಕೆಂಬ ವ್ರತ ಹಿಡಿದ ವ್ರತಸ್ಥರೋ? ಪ್ರತಿಯೊಬ್ಬನು ತಿಂಗಳಲ್ಲಿ ಎರಡು ಸಾರೆ ಏಕಾದಶಿ ವ್ರತವನ್ನು ಪಾಲಿಸುವದರಿಂದ ದೇಹವು ನಿರೋಗಿಯಾಗಿದ್ದು, ಪುಣ್ಯವು ದೊರೆಯುತ್ತದೆ. ಅಂದಮೇಲೆ ಆ ಜನ್ಮ ತಪ್ಪದೆ ಏಕಾದಶಿ ವ್ರತವನ್ನು ಪಾಲಿಸಿ ಮುಕ್ತಿಯನ್ನು ದೊರಕಿಸಬೇಕೆಂಬ ಮುಮುಕ್ಷುಗಳೋ? ರಾಯರೇ? ನೀವು ಭಾವಿಸಿದ್ದಾದರೂ ಏನು?

೩ ತಾವನ್ನುವಂತೆ ಶಿಕ್ಷಕನ ಕಾರ್ಯವು ಉತ್ಸಾಹವುಳ್ಳದ್ದು, ಪವಿತ್ರವಾದದ್ದು, ಭಾವೀ ಸಂಗತಿಯನ್ನು ತಿದ್ದುವಂಥಾದ್ದು ನಿಜ. ಶಿಕ್ಷಕನು ಇದ್ದದರಲ್ಲಿಯೇ ಸಂತೋಷದಿಂದಿರಬೇಕು. ಸ್ವಾರ್ಥತ್ಯಾಗದಿಂದಲೂ, ಕಳಕಳಿಯಿಂದಲೂ, ಕೆಲಸ ಮಾಡಬೇಕು. ಹೆಚ್ಚಿನ ಆಸೆಯು ಉಪಯೋಗದ್ದಲ್ಲ. ಇದೆಲ್ಲವೂ ಸರಿಯಾದದ್ದೇ! ಆದರೆ ನಿಯಮವೂ, ಉಪದೇಶವೂ ಶಿಕ್ಷಕನ ಕೆಲಸ ವಹಿಸಿದ ಹಾಯಸ್ಕೂಲು ಕಾಲೇಜಗಳ ಶಿಕ್ಷಕರಿಗೆ ಹತ್ತುವದಿಲ್ಲವೇನು? ಅವರಿಗೆ ಮಾತ್ರ ಹೆಡಿಗೆಗಟ್ಟಲೆ ಪಗಾರವು ಸಿಗಬೇಕು. ಪ್ರಾಥಮಿಕ ಶಿಕ್ಷಕರು ಮಾತ್ರ ಬಿಕ್ಕೆ ಬೇಡುತ್ತ ಪವಿತ್ರ ಕಾರ್ಯ ಮಾಡಬೇಕು! ಇವರ ನ್ಯಾಯ ನೀತಿಯು ತಮ್ಮ ಮನಸ್ಸಿಗಾದರೂ ಒಪ್ಪುವದೋ?

೪ ಇನ್ನು ಪವಿತ್ರವೆನಿಸುವ ಪ್ರತಿಯೊಂದು ಕೆಲಸಕ್ಕೆ ಸಜ್ಜನರೆಂಬುವವರು ತನುಮನಧನಗಳಿಂದ ಬುದ್ಧಿಪೂರ್ವಕವಾಗಿ ಸಹಾಯ ಮಾಡಿ ಪುಣ್ಯ ಪಡೆಯುತ್ತಾರೆ. ಆದರೆ ರಾಯರೇ ಶಿಕ್ಷಕರಿಗೆ ಪಗಾರ ಕೊಡುವವರು ಸರಕಾರದವರು. ಪ್ರಯತ್ನಿಸುವವರು ಸಮಾಜದವರು. ಇದರ ಸಲುವಾಗಿ ಎಷ್ಟೋ ದಿನಗಳಿಂದ ಎಷ್ಟೋ ಜನರು ತಮ್ಮ ರಕ್ತವನ್ನು ಸುಟ್ಟು ಪ್ರಯತ್ನಿಸುವಾಗ್ಗೆ ಅನೇಕ ರೀತಿಯಿಂದ ಸರಕಾರದಿಂದ ಭಾಗ್ಯ ಪಡೆದ ತಾವು ಬಡ ಪ್ರಾಥಮಿಕ ಶಿಕ್ಷಕರಿಗೆ ತೋರಿಸಿದ ಸಹಾನುಭೂತಿಯು ಇದೆಯೋ! ಕರ್ನಾಟಕದ ವೃದ್ಧಪಿತಾಮಹರಾದ ತಾವು ಕೆಲಸ ಮಾಡುವಾಗ್ಗೆ ಪ್ರಾಥಮಿಕ ಶಿಕ್ಷಕರಿಗೆ ಎಷ್ಟು ಪಗಾರವಿತ್ತು? ತಮಗೆ ಎಷ್ಟಿತ್ತು? ಈಗ ತಮಗೆ ಎಷ್ಟು ಪೆನ್ಶನ್ ದೊರೆಯುತ್ತದೆ? ಈಗಿನ ಪ್ರಾಥಮಿಕ ಶಿಕ್ಷಕರಿಗೆ ತಾವು ಗೊತ್ತು ಮಾಡಿದಷ್ಟು ಹಣವು ನಿಮಗೆ ಸಾಲದೇನು? ನಿಮ್ಮದಾದರೆ ಹಾಗೆ ಸರಿ! ಬಡ ಕಂಗಾಲ ಪ್ರಾಥಮಿಕ ಶಿಕ್ಷಕರದು ಹಾಗೇ ಸರಿ! ಅಂದರೆ "ನೆಂಟರೇ ನೀವು ನಮ್ಮವರೇ ಇದ್ದೀರಿ. ಆದರೆ ತಮ್ಮ ಕಂಟಲಿಗೆ ಮಾತ್ರ ಕೈಹಾಕಬೇಡಿರಿ." ಎಂಬಂತೆ ಆಗುವದಿಲ್ಲವೇ?

೫ ಈಗಿನದು ೨೦ ನೇ ಶತಮಾನವು! ಅಂದರೆ ದುಡ್ಡಿನ ಯುಗವು! ಇದಾವದೂ ತಮಗೆ ಗೊತ್ತೇ ಇದೆ. ಇನ್ನಷ್ಟು ಖಾತ್ರಿಯಾಗಬೇಕಾದರೆ ಪ್ರಾಥಮಿಕ ಶಿಕ್ಷಕರಷ್ಟು ಪಗಾರ ತಕ್ಕೊಂಡು ಅವರಂತೆ ಹಳ್ಳಿಯಲ್ಲಿ ಇದ್ದು, ಮುಂಜಾನೆ ಸಂಜೆ ನೋಡಿದರೆ ತಿಳಿಯುತ್ತದಲ್ಲದೆ ಮನೆಯಲ್ಲಿಯ ಟ್ರಿಬ್ಯೂನಿಗೆ ಹಣ ಧರ್ತಿ ಮಾಡುತ್ತ ಶಹರದಲ್ಲಿ ಮಹಲಿನ ಮನೆಯಲ್ಲಿ ಕೂತಿಕೊಂಡು ಚಕ್ಕದಿಂದ ಕಾಲವನ್ನು ಕಳೆಯುವ ಮಿರಾಸೆಗಳಿಗೆ ಹೇಗೆ ತಿಳಿದೀತು?

೬ ಪ್ರಾಥಮಿಕ ಶಿಕ್ಷಕರೆಂದರೆ ಊರಿಕ್ಕೆ ಗತಿ ಇಲ್ಲದೆ ಎರಡನೆ ಉದ್ಯೋಗದಲ್ಲಿ ತೊಡಗಲಿಕ್ಕೆ ಆಸ್ಪದವಿಲ್ಲದೆ "ಕತ್ತಿ ತಪ್ಪಿದರೆ ಹಾಳುಗೋಡೆ" ಎಂಬಂತೆ ಶಾಲಾಖಾತೆಯನ್ನೇ ಸೇರಿ, ಶಿಕ್ಷಕ ಕೆಲಸದಿಂದ ಉಪಜೀವಿಸುವ ಅನಾಥ ದೀನರು! ಅಂತೇ ಪ್ರತಿಯೊಬ್ಬ ವರ್ತಮಾನಪತ್ರಕಾರರು, ಕೌನ್ಸಿಲ್ ಮೆಂಬರರು, ದಯಾಳುಗಳಾದ ಅಧಿಕಾರಿಗಳು, ಸದ್ಗೃಹಸ್ಥರು "ಪ್ರಾಥಮಿಕ ಶಿಕ್ಷಕರ ಸ್ಥಿತಿಯು ಬಹಳೇ ಹೀನಸ್ಥಿತಿಯಲ್ಲಿದೆ." ಎಂದು ಸಹಾನುಭೂತಿಯಿಂದ ಅವರ ಸುಸ್ಥಿತಿಯು ಹೇಗಾದೀತೆಂದು ಹಗಲಿರುಳು ಕಳಕಳಿಯಿಂದ ಪ್ರಯತ್ನಿಸುತ್ತಿರುವಾಗ್ಗೆ, ರಾಯರೇ, ನೀವು ಅವರ (ಪ್ರಾ. ಶಿಕ್ಷಕರ) ಕುತ್ತಿಗೆಗೆ ಚೂರಿಯನ್ನು ಹಾಕಬೇಕೇ? ದಿವಾನ ಬಹಾದ್ದೂರ ರೊದ್ದರಾಯರೇ ನೀವು ಈ ಪ್ರಕಾರ ಪ್ರಾಥಮಿಕ ಶಿಕ್ಷಕರ ಗೋಳು ಕಟ್ಟಿಕೊಳ್ಳಬೇಕೆನ್ನುವರೇನು? ತಮ್ಮ ಹೊಸ ಸ್ಕೇಲಿನಂತೆ ಪಗಾರ ಸಾಲುತ್ತಿದ್ದರೆ, ಎಲ್ಲ ಪ್ರಾಥಮಿಕ ಶಿಕ್ಷಕರಿಗೆ ಮಾದರಿ ತೋರಿಸಲಿಕ್ಕೆ ಅವರಂತೆ ಕುಟುಂಬ ಸಹಿತ ಹಳ್ಳಿಯಲ್ಲಿ ಒಂದೇ ಒಂದು ತಿಂಗಳ ಮಟ್ಟಿಗೆ ಇದ್ದು, ಅವರಷ್ಟೇ ಪಗಾರದಲ್ಲಿಯೇ ಸಮಾಧಾನದಿಂದ ಉಪಜೀವಿಸಿ, ಶಾಂತ ರೀತಿಯಿಂದಲೂ, ಸ್ಫೂರ್ತಿಯಿಂದಲೂ ಕೆಲಸ ಮಾಡಿ ತೋರಿಸಿದಲ್ಲಿ ತಮ್ಮ ಪಾಲಿಗೆ ಕೀರ್ತಿಯೂ ಪುಣ್ಯವೂ ಬರುವದಲ್ಲದೆ ಸರಕಾರಕ್ಕೆ ಉಳಿತಾಯವೂ ಆಗುವದು.

೭ ಎಲ್ಲ ಕಾರ್ಯಗಳಲ್ಲಿ ರಾಷ್ಟ್ರೋದ್ಧಾರ ಕಾರ್ಯವು ಅತಿ ಪವಿತ್ರವಾದದ್ದು. ರಾಷ್ಟ್ರೋದ್ಧಾರವು ಭಾವೀ ಸಂತತಿಯ ಏಳ್ಗೆಯನ್ನು ಅವಲಂಬಿಸಿದೆ! ಭಾವಿ ಸಂತತಿಯ ಏಳ್ಗೆಯು ಪ್ರಾಥಮಿಕ ಶಿಕ್ಷಕರ ಶಿಕ್ಷಣ ಕಾರ್ಯವನ್ನು ಅವಲಂಬಿಸಿದೆ! ಯಾ

ಕೆಂದರೆ " ಎಲ್ಲರೂ ಮಾಡುವದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ " ಅಂದ ಮೇಲೆ ಹೀನ ದೆಶೆಯಲ್ಲಿರುವ ಪ್ರಾಥಮಿಕ ಶಿಕ್ಷಕರ ಸಮಾಧಾನವಾದ ಹೊರತು ಶಿಕ್ಷಣ ಕಾರ್ಯವು ಸರಿಯಾಗಿ ಎಂದೂ ಜರಗಲಾರದು. ಶಿಕ್ಷಣವು ಸರಿಯಾಗಿ ನಡೆಯದಿದ್ದರೆ ರಾಷ್ಟ್ರೋದ್ಧಾರವಂತೂ ಎಲ್ಲಿಯೋ ಉಳಿಯಿತು. ಶಿಕ್ಷಕನಿಗೆ ಸಂಸಾರದ ಯಾವ ತೊಂದರೆಯು ಇಲ್ಲದೆ ಸಮಾಧಾನದಿಂದ ಇದ್ದರೆ, ಶಿಕ್ಷಣವು ಸ್ಫೂರ್ತಿಯಿಂದಲೂ ಕಳಕಳಿಯಿಂದಲೂ ಸಾಗುವದು. ಹುಟ್ಟಿದಂದಿನಿಂದ ಸಾಯುವ ತನಕ ಬಡತನದ ವಿಕಾರವಶನಾಗಿ ಆಗಲಿ, ಮನೆಯಲ್ಲಿ ಹೆಂಡರು ಮಕ್ಕಳು ಗೋಳಾಡುವದನ್ನು ತಾನು ಕಣ್ಣಾರೆ ಒಂದೇ ಸಮನೆ ನೋಡುತ್ತಾಗಲಿ, ಹೆಂಡರು ಮಕ್ಕಳ ಗೋಳನ್ನು ನೋಡಲಾರದೆ ಸಾಲ ಮಾಡಿ ಸಾವುಕಾರರಿಂದ ಧಿಃ ಧಿಃ!! ಅನ್ನಿಸಿಕೊಳ್ಳುತ್ತಾ, ಮರ್ಯಾದೆಗೇಡಿಯಾಗಿ ಆಗಲಿ ಆಗಿದ್ದು, ಶಿಕ್ಷಣ ಕಾರ್ಯವನ್ನು ಸಮಾಧಾನದಿಂದಲೂ, ಉತ್ಸಾಹದಿಂದಲೂ ಹೇಗೆ ಮಾಡಬೇಕು? ರಾಯರೇ, ಶಿಕ್ಷಣ ಖಾತೆಯಲ್ಲಿ ಇಡೀ ಆಯುಷ್ಯವನ್ನೇ ಕಳೆದ ತಾವು ಒರೇ ಹದಿನೈದು ೧೫ ರೂಪಾಯಿಗಳಲ್ಲಿಯೇ ಒಬ್ಬ ಅಂಟ್ರೇಂಡ ಶಿಕ್ಷಕನ ಉಪಜೀವನ ಸಾಗುವದೆನ್ನುವಿರಾ! ಸಾಗಬಹುದೋ!

೭ ಇನ್ನು ಈಗ ರೂಢಿಯಲ್ಲಿ ಬಂದಿರುವ ಟ್ರಾಯಮಸ್ಕೇಲಿನ ಪದ್ಧತಿಯು ಕೆಟ್ಟದ್ದೆನ್ನುವಿರಾ? ಒಂದು ರೀತಿಯಿಂದ ಈ ತಮ್ಮ ವಿಧಾನಕ್ಕೆ ಒಪ್ಪಬಹುದಾದರೂ ಪರಿಸ್ಥಿತಿಯ ದೃಷ್ಟಿಯಿಂದ ಈಗಿರುವ ಪದ್ಧತಿಯು ಯೋಗ್ಯವೆಂದೇ ಅನ್ನಬೇಕಾಗಿದೆ. ಕೆಲಸದ ಮೇಲಿಂದ ಬಡತಿ ಕೊಡುವ ಪದ್ಧತಿ ಇದ್ದಾಗ್ಗೆ ಕಾಲಲ್ಲಿ ಗೆಜ್ಜೆಯನ್ನು ಕಟ್ಟಿಕೊಂಡು ಮೆಕ್ಕಿ ನಾಯಿಯಂತೆ ಬಾಲವ ಗೊಂಡಾಡಿಸುತ್ತ ಕಾಲಲ್ಲಿ ಸುಳಿದಾಡುವ ಜನರಿಗೆ ಮಾತ್ರ ಲಾಭವಾಗಿ, ಬಹುಜನ ಶಿಕ್ಷಕರಿಗೆ ಹಾನಿಯಾದದ್ದನ್ನು ಕಂಡೇ, ಸರಕಾರದವರು ಅಧಿಕಾರಿ ವರ್ಗದಿಂದ ಅನ್ಯಾಯವಾಗಬಾರದೆಂದು ತಿಳಿದು, ಮೊದಲಿನ ಪದ್ಧತಿಯನ್ನು ನಿಲ್ಲಿಸಿ, ಟಾಯಮ ಸ್ಕೇಲು ಅಮಲಿನಲ್ಲಿ ತಂದರು. ಯೋಗ್ಯ ರೀತಿಯಿಂದ ಕೆಲಸ ಮಾಡದ ಶಿಕ್ಷಕರಿಗೆ ಈಗಾದರೂ ಟಾಯಮ ಸ್ಕೇಲ ದೊರೆಯುವದಿಲ್ಲ, ಟಾಯಮಸ್ಕೇಲು ದೊರೆಯಬೇಕಾದರೆ ಪ್ರತಿಯೊಬ್ಬ ಶಿಕ್ಷಕನು ಸರಿಯಾಗಿ ಕೆಲಸ ಮಾಡಲೇ ಬೇಕಾಗುತ್ತದೆ. ಅಂದ ಮೇಲೆ ಟಾಯಮ ಸ್ಕೇಲಿನ ಪದ್ಧತಿಯು ಪರಿಸ್ಥಿತಿಗನುಸರಿಸಿ ಯೋಗ್ಯವಾದದ್ದೆಂದೇ ಅನ್ನಬೇಕಾಗಿದೆ.

೮ ಟ್ರೇನಿಂಗ ಸ್ಕೂಲ ಕಾಲೇಜಗಳಲ್ಲಿ ಶಿಕ್ಷಣವನ್ನು ಹೊಂದುವ ವಿದ್ಯಾರ್ಥಿಗಳಿಗೆ ಸರಕಾರದಿಂದ ಮೊದಲಿನಿಂದ ಇಲ್ಲಿಯವರೆಗೆ ಸ್ಕಾಲರಶಿಪ್ಪು ದೊರೆಯುತ್ತ ಬಂದಿದೆ. ಆದರೆ ಇನ್ನು ಮುಂದೆ ಈ ತರದ ಸ್ಕಾಲರಶಿಪ್ಪನ್ನು ಕೊಡುವದನ್ನಾಗಲಿ, ಶಿಕ್ಷಣ ಹೊಂದಿ ಹೊರಗೆ ಹೋದ ನಂತರ ನವಕರಿಯನ್ನು ಕೊಡುವ ಜವಾಬದಾರಿಯನ್ನಾಗಲಿ, ಸರಕಾರವು ಹೊರಬಾರದೆಂದರೆ ಈಗ ಮುಲ್ಕೀ ಪರೀಕ್ಷೆ ಪಾಸಾದವರು ತ್ರಿಶಂಕುವಿನಂತೆ ಜೋತಾಡಿರೆನ್ನುವದು! ಸದ್ಯಕ್ಕೆ ಮುಲ್ಕೀ ಪರೀಕ್ಷೆ ಪಾಸಾದ ಸಾವಿರಾರು ಜನರು ಉಪಜೀವನಕ್ಕೆ ಮಾರ್ಗವಿಲ್ಲದೆ ತಿರುವಾಗ್ಗೆ ಸಾಲ ಮಾಡಿ ಟ್ರೇನಿಂಗ ಸ್ಕೂಲ ಕಾಲೇಜುಗಳಲ್ಲಿ ಕಲಿತು ಸಾಲಗಾರರಾಗಿ ತಿರುಗಾಡಿರೆನ್ನುವದೇ ಸರಿ! ಉಚ್ಚ ತರದ ಶಿಕ್ಷಣ ಪಡೆಯುವವರಿಗೆ ಸಹಾಯವಿರುವದು. ಆದರೆ ಪ್ರಾಥಮಿಕ ಶಿಕ್ಷಣ ಪಡೆಯುವವರು ಅತಿ ಬಡವರು. ಒಂದು ವೇಳೆ ಉಚ್ಚ ತರದ ಶಿಕ್ಷಣವನ್ನು ಸಾಲಮಾಡಿ ಪಡೆದರೂ, ಮುಂದೆ ಸಾಲವನ್ನು ತೀರಿಸುವೆನೆಂಬ ಧಮ್ಮು ಅವರಿಗಿದ್ದಂತೆ ಇವರಿಗಿರುವದಿಲ್ಲ. ಅಂದ ಮೇಲೆ ಸರಕಾರದ ಸಹಾಯದ ಹೊರತು ಪ್ರಾಥಮಿಕ ಶಿಕ್ಷಕರ ಶಿಕ್ಷಣ ಕಾರ್ಯವು ನಡೆಯಲಾರದು. ಈ ಎಲ್ಲ ಸ್ಥಿತಿ ರೀತಿಗಳನ್ನು ಬಲ್ಲ, ಒಸನವು ಎಂಥ ಅಸತ್ಯವಾದದ್ದೆಂಬದನ್ನು ತಿಳಿದ, ಶಿಕ್ಷಣ ಖಾತೆಯಲ್ಲಿ ೫೧ ವರುಷಗಟ್ಲೆ ಅನುಭವವನ್ನು ಪಡೆದ, ಜನತೆಯಲ್ಲಿಯೂ, ಸರಕಾರದಲ್ಲಿಯೂ ಖ್ಯಾತಿಯನ್ನು ಪಡೆದು, ದೊಡ್ಡ ದೊಡ್ಡ ಬಿರುದುಗಳನ್ನು ಧರಿಸಿದ, ಕರ್ನಾಟಕದಲ್ಲಿ ಕರುಣಾಳುವೆಂನು ಹೆಸರು ಪಡೆದ, ಕರ್ನಾಟಕದ ವೃದ್ಧ ಪಿತಾಮಹರಾದ ದಿವಾನ ಬಹಾದ್ದೂರ ಸಿ. ಆಯ. ಆ ರಾಯರೆ, ಪ್ರಾಥಮಿಕ ಶಿಕ್ಷಕರ ದೈವವು ಗುಟುಕು ನೀರು ಕುಡಿಯುವ ಹೊತ್ತಿನಲ್ಲಿ ನೀವೇ ಹೀಗೆ ಅವರನ್ನು ರಸಾತಳಕ್ಕೆ ಮೆಟ್ಟಿ ತುಳಿಯಬೇಕೆನ್ನುವದು ಶೋಚನೀಯವು! ದುಃಖಕಾರಕವು!! ಇದು ನ್ಯಾಯವಾದದ್ದೋ? ನಿಸ್ವಾರ್ಥ ಬುದ್ಧಿಯಿಂದಲೂ, ನಿಜವಾದ ಅಂತಃಕರಣದಿಂದಲೂ ವಿಚಾರಿಸಿರಿ.

೯ ಕರುಣಾಳು ದೊಡ್ಡರಾಯರೇ ನೀವು ಕೆಲಸ ಮಾಡುವ ಕಾಲದ ಸ್ಥಿತಿಗೂ, ಈಗಿನ ಸ್ಥಿತಿಗೂ ಭೂಮ್ಯಾಕಾಶದಷ್ಟು ಅಂತರವಾಗಿದೆ. ನೀವು ನಿಮ್ಮ ಕಾಲದ ಪೇಟೆಯ ಧಾರಣೆ, ನಿಮ್ಮ ಕಾಲದ ಪಗಾರದ ಅಂಕೆ, ನಿಮ್ಮ ಕಾಲದ ಬಡತಿಯ ಪದ್ಧತಿ, ನಿಮ್ಮ ಕಾಲದ ಸಮಾಜದ ಸ್ಥಿತಿ ರೀತಿಗಳನ್ನೇ ಮುಂದಿಟ್ಟುಕೊಂಡಿರುವಿರೆಂಬುವದು ನಿಮ್ಮ ಪತ್ರದಿಂದ ತಿಳಿಯುತ್ತದೆ. ದಯ ಮಾಡಿ ನೀವು ನಿಮ್ಮ ಆ ಎಲ್ಲ ವಿಚಾರಗಳನ್ನು ಬದಿಗೊತ್ತಿ, ಈಗಿನ ಸ್ಥಿತಿಯ ಕಡೆಗೆ ನೋಡಿರಿ! ಪೇಟೆಯ ಧಾರಣೆಯನ್ನು ಅವಲೋಕಿಸಿರಿ!! ಮಹಾತ್ಮಾ ಗಾಂಧಿಯಂಥವರೇ ಪರಿಸ್ಥಿತಿಗನುಸರಿಸಿ ತಮ್ಮ ಆಚಾರ ವಿಚಾರಗಳನ್ನು ಬದಲು ಮಾಡಿ ನಡೆಯುವರು. ಅದರಂತೆ ನೀವಾದರೂ ನಿಮ್ಮ ವಿಚಾರ ತರಂಗಗಳನ್ನು ಬದಲಿಸಿರಿ! ಬಡ ಶಿಕ್ಷಕರ ಮತ್ತು ಅವರ ಹೆಂಡರು ಮಕ್ಕಳ ಆರ್ತಧ್ವನಿಗೆ ಕಿವಿಗೊಡಿರಿ!! ಎಲ್ಲ ಕಡೆಗೂ ಇನ್ನೊಮ್ಮೆ ಸಂಚರಿಸಿ ಇದರ ಅನುಭವವನ್ನು ಪಡಕೊಳ್ಳಿರಿ! ಹೀನಸ್ಥಿತಿಯಲ್ಲಿದ್ದ ಪ್ರಾಥಮಿಕ ಶಿಕ್ಷಕರ ಹಿತಕ್ಕಾಗಿ ಹೆಣಗಾಡಿರಿ! ಕರ್ನಾಟಕ ಕಾಲೇಜನನ್ನು ಸ್ಥಾಪಿಸಿ ಟ್ರೇನಿಂಗ ಸ್ಕೂಲನ್ನು ಪುನರುಜ್ಜೀವನಗೊಳಿಸಿ, ಕೀರ್ತಿ ಗಳಿಸಿದಂತೆ ಪ್ರಾಥಮಿಕ ಶಿಕ್ಷಕರ ಹಿತದ ಸಲುವಾಗಿ ಇನ್ನೊಮ್ಮೆ ನೇಕ ನಾಮದಾರ ಗವ್ಹರ್ನರಸಾಹೇಬ ಮುಂಬಯಿ ಇವರಿಗೆ ಇನ್ನೊಂದು ವಿನಂತಿಪತ್ರ ಬರೆದು ನಿಜವಾದ ಕರುಣಾಳುವೆಂದು ಕೀರ್ತಿಗಳಿಸಿರಿ, ಇಷ್ಟೇ ಸವಿನಯ ಪ್ರಾರ್ಥಿಸುವ,

ಒಬ್ಬ ಪ್ರಾಥಮಿಕ ಶಿಕ್ಷಕ

ಕಾಂಗ್ರೆಸ ಮತ್ತು ಬ್ರಾಹ್ಮಣೇತರ-

ಬೆಳಗಾವಿಯ ಸರಕಾರೀ ವಕೀಲರಾದ ಮಿ. ದಳವಿಯವರ ಅಧ್ಯಕ್ಷತೆಯಲ್ಲಿ ಮುಂಬಯಿಯಲ್ಲಿ ಬ್ರಾಹ್ಮಣೇತರರ ಸಭೆಯು ಕೂಡಿತ್ತು. ಅಧ್ಯಕ್ಷರೂ, ಜಾಧವರಾಯರೂ ಕಾಂಗ್ರೆಸ ಸೇರಬಾರದೆಂಬ ಮತದವರಾಗಿದ್ದರು. ಆದರೆ ತರುಣರು ಕಾಂಗ್ರೆಸ ಸೇರಬೇಕೆನ್ನುವ ಮತದವರಾಗಿದ್ದರು. ನಾಲ್ಕು ತಾಸಿನ ತನಕ ಪುಷ್ಕಳವಾಗಿ ಚರ್ಚೆ ನಡೆದು, ಯಾರು ಬೇಕಾದವರು ಕಾಂಗ್ರೆಸ ಸೇರಬಹುದೆಂಬ ಠರಾವು ಪಾಸಾಯಿತು.

ಜಾಧವರಾಯರಲ್ಲಿ ಅವಿಶ್ವಾಸ-

ದಿವಾನ ಜಾಧವರಾಯರು ಬ್ರಾಹ್ಮಣೇತರರ ಮುಂದಾಳುಗಳಾಗಿದ್ದು, ಇವರಲ್ಲಿ ತಮ್ಮ ವಿಶ್ವಾಸವುಂಟೆಂಬ ಠರಾವು ಬಂತು. ಅನೇಕರು ಈ ಠರಾವನ್ನು ವಿರೋಧಿಸಿದರು. ಅಧ್ಯಕ್ಷರ ಅತ್ಯಾಗ್ರಹದ ವಿನಂತಿಯಿಂದ ಇವರಲ್ಲಿ ವಿಶ್ವಾಸವುಂಟೆಂಬ ಠರಾವು ಬಹು ಕಷ್ಟ ಜುಲುಮೆಯಿಂದ ಪಾಸಾಯಿತು.

ಹಿಂದೂ ಮುಸಲಮಾನ ಹಿಸ್ಪಂದ-

ಸೋಮವಾರದ ದಿವಸ ಸಿಮಲಾದಲ್ಲಿ ಲಾರ್ಡ ಅಯರ್ವಿನರು ಚೇಂಬರು ಅಸೆಂಬ್ಲಿ ಮತ್ತು ಕೌನ್ಸಿಲ ಅಫ ಸ್ಟೇಟದ ಮೆಂಬರರನ್ನು ಕೂಡಿಸಿ- ಹೋದ ವರ್ಷ ಹಿಂದೂ ಮುಸಲಮಾನ ದಂಗೆಗಳಿಂದ ಮುನ್ನೂರು ಜನರು ಸತ್ತರು. ೨೪ ಜನರು ಘಾಯವಾದರು. ಈ ಪ್ರಕಾರ ರಕ್ತಪಾತವಾಗುವದು ಹಿತವಲ್ಲ. ಹಿಂದೂ ಮುಸಲಮಾನರು ನನಗೆ ಹೇಳಿಕೊಂಡರೆ- ರಾಜೀ ಮಾಡಿಸಲು ಪ್ರಯತ್ನಿಸುವೆನೆಂ

ವದಿಂದೂ ಪಂಚಾಚಾರಪ್ರಭಾದಲ್ಲಿ ಒರೆದಿದೆ. ಈ ಪ್ರಕಾರ ಲಗ್ನವಾದರೆ ಹುಡಿಗಿಯನ್ನು ಸಹೋದರಿಯಂತೆ ಸಂರಕ್ಷಣೆ ಮಾಡಬೇಕೆಂದು ಧರ್ಮಶಾಸ್ತ್ರ ಹೇಳುತ್ತದೆ.

ನೋಟೀಸು

ಬಸವಣ್ಣೆಪ್ಪಾ ಬಿನ್ನ ಬಸಬಸಪ್ಪಾ ಕೇಸರಹಳ್ಳಿ ಸಾ. ಕುಂಬ್ರಡಿ ತಾಲೂಕ ಕರ್ಜಗಿ ಇವರಿಗೆ-

ಕೆಳಗೆ ಸಹಿ ಮಾಡಿದವಳ ಕಡೆಯಿಂದಾ ಈ ನೋಟೀಸಿನಿಂದಾ ತಿಳಿಸೋದೇನಂದರೆ ನೀನು ನನ್ನ ಉಡಕಿಗಂಡನಿದ್ದು ಉಡಕಿ ಮಾಡಿಕೊಂಡಬಳಾಗಾಯಿತು ನೀನು ನನ್ನ ತವರ ಮನಿಯಲ್ಲಿಯೇ ಅದೇ ಊರಲ್ಲಿ ಇದ್ದು ಉಪಜೀವನ ಆಗಿರುತ್ತೀನಿ ಆದರೆ ಈಗ ನಾನು ೭-೮ ತಿಂಗಳು ಗರ್ಭಿಣಿ ಇದ್ದು ನೀನು ನಿನ್ನ ಅಣ್ಣ ತಮ್ಮಂದಿರ ಮಾತು ಕೇಳಿ ನನ್ನ ಹೊಟ್ಟಿಗೆ ಇವತ್ತಿನ ವರೆಗೂ ಹಾಕಲಿಲ್ಲಾ. ಹಾಂಗೂ ಮನಿಗೆ ಒಂದು ಬಹಳ ರೀತಿಯಿಂದ ತ್ರಾಸ ಕೊಡುತ್ತಿದಿ ಮತ್ತು ಇದರ ಹೊರ್ತು ಈಗ ನನಗೆ ನನ್ನ ತಾಯಿಯಾದ ಪುಟ್ಟವ್ವಾ ಕೋಂ ಸಿಂಗಪ್ಪಾ ಮುಲಗುಂದ ಈಕಿಯು ಅಜಮಾಸ ೧೫ ದಿವಸಗಳ ಹಿಂದೆ ಫೌತಿಯಾಗಿ ಅವಳ ಬಾಬತ ಸ್ಥಾವರ ಜಂಗಮ ಆಸ್ತಿಗೆ ನಾನು ವಾರಸದಾರಳು ಇದ್ದು ನನಗೆ ಮಾಸಾ ನಾತೇದಿಂದಾ ತಾಬೇಕ್ಕೆ ಬಂದಿರುತ್ತದೆ ಈ ಆಸ್ತಿ ನೀನು ನಿನ್ನ ಹೆಸರಿಗೆ ನನಗೆ ಮಾಡಿಕೊಡಬೇಕಂತ ತ್ರಾಸ ಕೊಡೋದಲ್ಲದೆ ಅದಕ್ಕೆ ನಾನು ನಿನಗೆ ಬರಕೊಡುವದಿಲ್ಲಾ ಅಂತಾ ನಾನು ಅನ್ನಲಿಕ್ಕೆ ಹತ್ತಿದ್ದರಿಂದಾ ನನ್ನ ಜೀವಕ್ಕೆ ಧೋಕ ಮಾಡುತ್ತಿದಿ ಅಂತಾ ಸಂಶಯ ಬಂದಿರುತ್ತದೆ. ಈ ಪಾಶ್ಚ್ಯಾಟ ಈಗ ೪-೫ ತಿಂಗಳಿಂದಾ ನಡದಿರುತ್ತದೆ. ನನ್ನ ತಾಯಿ ಜೀವಂತ ಇರುತ್ತಾ ನಡದಿರುತ್ತದೆ ಈಗ ನೀನು ನನಗೆ ಆಸ್ತಿ ಕೊಡದೇ ಇದ್ದರೆ ಜೀವದಿಂದಾ ಒದುಕೆ ಇರು ಅಂತಾ ಬಾಯಿಂದಾ ಅನ್ನುವದಲ್ಲದೆ ದಿನ ಮಹಿ ಹೊಡಿದು ಬಡಿದು ಮಾಡುತ್ತಿದಿ ಮತ್ತು ನನಗೆ ಇವತ್ತಿನ ವರಿಗೆ ಹೊಟ್ಟಿಗೆ ಸಹಾ ಹಾಕಿಲ್ಲ ಅದ್ದರಿಂದಾ ಈ ನೋಟೀಸಿನಿಂದ ತಿಳಿಸುವದೇನಂದರೆ ನೀನು ಇವತ್ತಿನಿಂದಾ ನನ್ನ ಮೇಲೆ ಯಾವ ಪ್ರಕಾರದ ಜೋರು ಮಾಡಲಿಕ್ಕೆ ಹಕ್ಕು ಇಲ್ಲ. ನಾನು ನಿನ್ನ ಮನೆ ಬಂದಂತೆ ಇರುತ್ತೇನೆ. ನೀನು ಏನಾದರೂ ಜೀವಕ್ಕೆ ಧೋಕೆ ಮಾಡಿದ ಪಕ್ಷಕ್ಕೆ ನಿನ್ನ ಮೇಲೆ ರೀತಿ ಪ್ರಕಾರಾ ಕೆಲಸ ನಡಿಸುತ್ತೇನೆ ನಿನ್ನಲ್ಲಿ ಬಾಳ್ವೆ ಮಾಡಿಕೊಂಡು ಇರಲಿಕ್ಕೆ ನನಗೆ ... ಇಲ್ಲ ... ನನ್ನ ಕಬೂಲ ಇಲ್ಲಾ

ಕ್ಷರೆ ನೋಡಿರಿ. ಮಾರಿಕ
ಅತ್ಯಂತ ಖಾತ್ರಿಯಾದ
೨—೪ ಗುಳಿಗೆ ಸೇವಿ
ಇದೇ ತಿಂಗಳಲ್ಲಿ ಸಹಸ್ರಾವಧಿ
ಅಸಂಖ್ಯ ಸರ್ಟಿಫಿಕೇಟುಗಳು ದಿನಾಲು
ಕ್ಕೆ ಹೆದರದೆ
ಬೇ

ಅದ್ದರಿಂದಾ ಇದೇ ನೋಟೀಸಿಂದ ಅಂತಾ ತಿಳಿಸ್ಲ ಮನಿಗೆ ನೀನು ಬರತಕ್ಕದ್ದು ಇಲ್ಲಾ ಜರೆ ಲುಕ್ಸಾನಕ್ಕೆ ಪಾತ್ರನಾಗುತ್ತಿದಿ ಈ ನೋಟೀಸಿನ ಖರ್ಚು ನಿನ್ನ ಮೇಲೆ ಅದೆ ತಿಳಿಯುವದು ೨೯-೮-೩೭ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಉಡಕಿ ಗಂಡಾ ಬಸವಣ್ಣೆಪ್ಪಾ ಕೇಸರಹಳ್ಳಿ ಸಮ್ಮತಿ ತಾ. ಕರ್ಜಗಿ ಇವ ಮಾಡಿದ್ದು ಅದೆ

ನೋಟೀಸು.

ಸಂಗ ಕೋಂ ಶಿದ್ದಪ್ಪಾ ಸೂರಣ ಸಾ. ಕಬ್ಬೂರ ತಾಲೂಕ ಕರ್ಜಗಿ ಹಾಲಿ ಮಸೂರ ತಾ. ಕರ್ಜಗಿ, ಬಸವಾ ಲಿಂಗಪ್ಪಾ ಕಾಸಂಬಿ ಇವರಲ್ಲಿ ಇರುತ್ತಾಳೆಗೆ-

ಕೆಳಗೆ ಸಹಿ ಮಾಡಿದ ಶಿದ್ದಬಸಪ್ಪಾ ಸೂರಪನವರ ಸಾ. ಕಬ್ಬೂರ ಇ ಈ ನೋಟೀಸಿನಿಂದಾ ತಿಳಿಸೋದೇನಂದರೆ ನ್ನ ಲಗ್ನದ ಹೆಂಡತಿ ಇದ್ದು ಈಗ ಅಜಮಾಸ ವರ್ಷಗಳ ಹಿಂದೆ ಇಲ್ಲಿಗೆ ಬಂದು ೧-೨ ಇದ್ದು ನಿನ್ನ ತಾಯಿ ಬಸವ್ವಾ ಇವಳು ಕ್ಕೆ ಬಂದಾಗ್ಗೆ ತವರ ಮನೆಗೆ ಕೆಳಗೆ ಗಿನಗಳನ್ನು ಇಟ್ಟುಕೊಂಡು ಹೋದವಳ ನ ವರಿಗೂ ಮರತ ಬರಲಿಲ್ಲಾ ಹಾಂಗೆ ಬರಲಿಕ್ಕೆ ೨ ವರ್ಷದಿಂದಾ ಇನಕಾರ ತ್ತಿದಿ ಮತ್ತು ನೀನು ವ್ಯಭಿಚಾರಿ ವ ವ್ಯಭಿಚಾರ ಕೃತ್ಯದಿಂದಾ ಗರ್ಭಿಣಿ ಅಂತಾ ತಿಳಿದು ಬರುತ್ತದೆ ಅದ್ದರಿಂದ ಟೀಸು ಕೊಡುವ ಭಾಗಬಿತ್ತು ಮತ್ತು ದ ದಾಗಿನಗಳನ್ನು ಈ ನೋಟೀಸು ವ ಟು ದಿವಸಗಳಲ್ಲಿ ನನಗೆ ತಂದು ಕೊಟ್ಟ ಮಾಡಿಯಬೇಕು ಅದರ ವಿವರ

೧ ಸರಗಿ ಒಂದು ತೆ.ಲಿ ೧೨ ವರಿ

ಪ್ರತಿಬಂಧ [illegible] ದಿನಾಂಕ 8.4.1963

[illegible]

[illegible]

ಗುರುವಾರ ತಾರೀಖು	೧ನೇ	ನವೆಂಬರ್	೧೯೬೨	[illegible]
ಶುಕ್ರವಾರ	೨ನೇ	〃	〃	೨ರೂ-
ಶನಿವಾರ	೩ನೇ	〃	〃	〃 -
ರವಿವಾರ	೪ನೇ	〃	〃	〃 -
ಸೋಮವಾರ	೫ನೇ	〃	〃	〃 -
ಮಂಗಳವಾರ	೬ನೇ	〃	〃	[illegible]
ಬುಧವಾರ	೭ನೇ	〃		[illegible]
ಗುರುವಾರ	೮ನೇ	〃	〃	〃 -
ಶುಕ್ರವಾರ	೯ನೇ	〃	〃	〃 -
ಶನಿವಾರ	೧೦ನೇ	〃	〃	〃 -
ರವಿವಾರ	೧೧ನೇ	〃	〃	[illegible]
ಸೋಮವಾರ	೧೨ನೇ	〃	〃	[illegible]
ಮಂಗಳವಾರ	೧೩ನೇ	〃	〃	[illegible]
ಬುಧವಾರ	೧೪ನೇ	〃		[illegible]
ಗುರುವಾರ	೧೫ನೇ	〃	〃	〃 -
ಶುಕ್ರವಾರ	೧೬ನೇ	〃	〃	〃 -
ಶನಿವಾರ	೧೭ನೇ	〃	〃	〃 -
ರವಿವಾರ	೧೮ನೇ	〃	〃	〃 -
ಸೋಮವಾರ	೧೯ನೇ	〃	〃	〃 -
ಮಂಗಳವಾರ	೨೦ನೇ	〃	〃	[illegible]
ಬುಧವಾರ	೨೧ನೇ	〃	〃	[illegible]
ಗುರುವಾರ	೨೨ನೇ	〃	〃	〃 -
ಶುಕ್ರವಾರ	೨೩ನೇ	〃	〃	〃 -
ಶನಿವಾರ	೨೪ನೇ	〃	〃	〃 -
ರವಿವಾರ	೨೫ನೇ	〃	〃	〃 -
ಸೋಮವಾರ	೨೬ನೇ	〃	〃	〃 -
ಮಂಗಳವಾರ	೨೭ನೇ	〃	〃	[illegible]
ಬುಧವಾರ	೨೮ನೇ	〃	〃	[illegible]
ಗುರುವಾರ	೨೯ನೇ	〃	〃	〃 -
ಶುಕ್ರವಾರ	೩೦ನೇ	〃	〃	〃 -

೨೪ [illegible]

ಷವೆಂದೂ ಪಂಚಾಚಾರಪ್ರಭಾದಲ್ಲಿ ಬರೆದಿದೆ. ಈ ಪ್ರಕಾರ ಲಗ್ನವಾದರೆ ಹುಡಿಗೆಯನ್ನು ಸಹೋದರಿಯಂತೆ ಸಂರಕ್ಷಣೆ ಮಾಡಬೇಕೆಂದು ಧರ್ಮಶಾಸ್ತ್ರ ಹೇಳುತ್ತದೆ.

ನೋಟೀಸು

ಬಸನಣ್ಣೆಪ್ಪಾ ಬಿನ್ನ ಚನಬಸಪ್ಪಾ ಕೆಸರಹಳ್ಳಿ ಸಾ. ಹುಮ್ನಾಬಾದ ತಾಲೂಕ ಅರ್ಜಿಗಿ ಇವನಿಗೆ-

ಕೆಳಗೆ ಸಹಿ ಮಾಡಿದವಳ ಕಡಿಯಿಂದಾ ಈ ನೋಟೀಸಿನಿಂದಾ ತಿಳಿಸೋದೇನಂದರೆ ನೀನು ನನ್ನ ಉಡಕಿ ಗಂಡನಿದ್ದು ಉಡಿಕಿ ಮಾಡಿಕೊಂಡಲಾಗಾಯಿತು ನೀನು ನನ್ನ ತವರ ಮನಿಯಲ್ಲಿಯೇ ಅದೇ ಊರಲ್ಲಿ ಇದ್ದು ಉಪಜೀವನ ಆಗಿರುತ್ತೀನೆ ಆದರೆ ಈಗ ನಾನು ೭-೮ ತಿಂಗಳು ಗರ್ಭಿಣಿ ಇದ್ದು ನೀನು ನಿನ್ನ ಅಣ್ಣ ತಮ್ಮಂದಿರ ಮಾತು ಕೇಳಿ ನನ್ನ ಹೊಟ್ಟಿಗೆ ಇವತ್ತಿನ ವರೆಗೂ ಹಾಕಲಿಲ್ಲಾ. ಹಾಂಗೂ ನನಿಗೆ ಒಂದು ಬಹಳ ರೀತಿಯಿಂದ ತ್ರಾಸ ಕೊಡುತ್ತಿದಿ ಮತ್ತು ಇದರ ಹೊರ್ತು ಈಗ ನನಗೆ ನನ್ನ ತಾಯಿಯಾದ ಪುಟ್ಟವ್ವಾ ಕೋಮ ಸಿಂಗಪ್ಪಾ ಯರಗಟ್ಟಿನ ಈಕಿಯು ಅಜಮಾಸ ೧೫ ದಿವಸಗಳ ಹಿಂದೆ ಫೋತಿಯಾಗಿದ್ದು ಅವಳ ಚಾಲತ ಸ್ಥಾವರ ಜಂಗಮ ಆಸ್ತಿಗೆ ನಾನು ವಾರಸದಾರಳು ಇದ್ದು ನನಗೆ ಮಂಗಸಾ ನಾತೇದಿಂದಾ ತಾಬೇಕ್ಕೆ ಬಂದಿರುತ್ತದೆ ಈ ಆಸ್ತಿ ನೀನು ನಿನ್ನ ಹೆಸರಿಗೆ ನನಗೆ ಮಾಡಿಕೊಡಬೇಕಂತ ತ್ರಾಸ ಕೊಡುತ್ತೀದಲ್ಲದೆ ಅದಕ್ಕೆ ನಾನು ನಿನಗೆ ಬರಕೊಡುವದಿಲ್ಲಾ ಅಂತಾ ನಾನು ಅನ್ನಲಿಕ್ಕೆ ಹತ್ತಿದ್ದರಿಂದಾ ನನ್ನ ಜೀವಕ್ಕೆ ಧೋಕ ಮಾಡುತ್ತಿದಿ ಅಂತಾ ಸಂಶಯು ಬಂದಿರುತ್ತದೆ. ಈ ವಾಶ್ಯಾಟ ಈಗ ೪-೫ ತಿಂಗಳಿಂದಾ ನಡದಿರುತ್ತದೆ ನನ್ನ ತಾಯಿ ಜೀವಂತ ಇರುತ್ತಾ ನಡಿದಿರುತ್ತಿದಿ ಈಗ ನೀನು ನನಗೆ ಆಸ್ತಿ ಕೊಡದೇ ಇದ್ದರೆ ಜೀವದಿಂದಾ ಬದುಕಿ ಇರು ಅಂತಾ ಬಾಯಿಂದಾ ಅನ್ನುವದಲ್ಲದೆ ವಿಷ ಹಾಕಿ ಹೊಡಿದು ಬಡಿದು ಮಾಡುತ್ತಿದಿ ಮತ್ತು ನನಗೆ ಇವತ್ತಿನ ವರೆಗೆ ಹೊಟ್ಟಿಗೆ ಸಹಾ ಹಾಕಿಲ್ಲಾ ಆದ್ದರಿಂದಾ ಈ ನೋಟೀಸಿನಿಂದ ತಿಳಿಸುವದೇನಂದರೆ ನೀನು ಇವತ್ತಿನಿಂದಾ ನನ್ನ ಮೇಲೆ ಯಾವ ಪ್ರಕಾರದ ಜೋರು ಮಾಡಲಿಕ್ಕೆ ಹಕ್ಕು ಇಲ್ಲಾ. ನಾನು ನಿನ್ನ ಮನೆಗೆ ಬಂದಂತೆ ಇರುತ್ತೇನೆ. ನೀನು ನನ್ನ ಜೀವಕ್ಕೆ ಧೋಕ ಮಾಡಿದ ಕಲ್ಮಕ್ಕೆ ನಿನ್ನ ಮೇಲೆ ರೀತಿ ಪ್ರಕಾರಾ ಕೆಲಸ ನಡಿಸುತ್ತೇನೆ ನಿನ್ನಲ್ಲಿ ಬಾಳ್ವೆ ಮಾಡಿಕೊಂಡು ಇರಲಿಕ್ಕೆ ನನಗೆ [illegible] ನಿನ್ನ [illegible] ವಿಲ್ಲಾ

ಖರೆ ಹಾದಿರಿ. **ಮಾರಿಕಾ ಬೇನೆಗೆ** ಅಲಕ್ಷವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿದಿರುವದು.

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತಾ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವ

ಆದ್ದರಿಂದಾ ಇದೇ ನೋಡಚೀಟಿ ಅಂತಾ ತಿಳಿದು ನನ್ನ ಮನಿಗೆ ನೀನು ಬರತಕ್ಕದ್ದು ಇಲ್ಲಾ ಬಂದರೆ ಲುಕ್ಸಾನಕ್ಕೆ ಪಾತ್ರನಾಗುತ್ತಿದಿ ಈ ನೋಟೀಸಿನ ಖರ್ಚು ನಿನ್ನ ಮೇಲೆ ಅದೆ ತಿಳಿಯುವದು ತಾ. ೨೯-೮-೨೭ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಈರವ್ವಾ ಉಡಕಿ ಗಂಡಾ ಬಸನಣ್ಣೆಪ್ಪಾ ಕೆಸರಹಳ್ಳಿ ಸಾ. ಹೊನ್ನುಂಡಿ ತಾ. ಅರ್ಜಿಗಿ ಅಂತ ಮಾಡಿದ್ದು ಅದೆ

ನೋಟೀಸು.

ಸಂಗಪ್ಪ ಕೋಮ ಶಿದ್ದಪ್ಪಾ ಸೂರಪ್ಪಾನವರ ಸಾ. ಕಲ್ಲೂರ ತಾಲೂಕ ಅರ್ಜಿಗಿ ಹಾಲಿವಸ್ತಿ ದೇವಿಸೂರ ತಾ. ಅರ್ಜಿಗಿ, ಬಸಪ್ಪಾ ಕೋಮ ಮಲ್ಲಿಂಗಪ್ಪಾ ಕಾಸಂಬಿ ಇವರಲ್ಲಿ ಇರುತ್ತಾಳೆ ಇವಳಿಗೆ-

ಕೆಳಗೆ ಸಹಿ ಮಾಡಿದ ಶಿದ್ದಪ್ಪಾ ಸೂರಪ್ಪಾ ಸಂಗಪನವರ ಸಾ. ಕಲ್ಲೂರ ಇವನಿಂದಾ ಈ ನೋಟೀಸಿನಿಂದಾ ತಿಳಿಸೋದೆನಂದರೆ ನೀನು ನನ್ನ ಲಗ್ನದ ಹೆಂಡತಿ ಇದ್ದು ಈಗ ಅಜಮಾಸು ೩ ವರ್ಷಗಳ ಹಿಂದೆ ಇಲ್ಲಿಗೆ ಬಂದು ೧-೨ ತಿಂಗಳು ಇದ್ದು ನಿನ್ನ ತಾಯಿ ಬಸವ್ವಾ ಇವಳು ಕರಿಯಲಿಕ್ಕೆ ಬಂದಾಗ್ಗೆ ತವರ ಮನಿಗೆ ಕೆಳಗೆ ಬರೆದ ದಾಗಿನಗಳನ್ನು ಇಟ್ಟುಕೊಂಡು ಹೋದವಳು ಇವತ್ತಿನ ವರೆಗೂ ಪರತ ಬರಲಿಲ್ಲಾ ಹಾಂಗೂ ಇಲ್ಲಿಗೆ ಬರಲಿಕ್ಕೆ ೨ ವರ್ಷದಿಂದಾ ಇನಕಾರ ಮಾಡುತ್ತಿದಿ ಮತ್ತು ನೀನು ವ್ಯಭಿಚಾರಿ ಇರುತ್ತಿದಿವ ವ್ಯಭಿಚಾರ ಕೃತ್ಯದಿಂದಾ ಗರ್ಭಿಣಿ ಇರುತ್ತಿದಿ ಅಂತಾ ತಿಳಿದು ಬರುತ್ತದೆ ಆದ್ದರಿಂದ ಈ ನೋಟೀಸು ಕೊಡುವ ಭಾಗಬಿತ್ತು ಮತ್ತು ಕೆಳಗೆ ಬರೆದ ದಾಗಿನಗಳನ್ನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನಗೆ ತಂದು ಕೊಟ್ಟು ಪಾವತಿ ಪಡಿಯಬೇಕು ಅದರ ವಿವರ

೧ ಸರಗಿ ಬಂದು ತೊಲಿ ೧೨ ವರಿ ಚೊಕ್ಕ ಕಿ॥ ರೂ ೨೪೦ ೨ ಒಳಿ ಜತಿ ವಂದು ತೊಲಿ ೮ ಚೊಕ್ಕ ವರಿದು ಕಿ॥ ರೂ. ೧೬೦ ೩ ತೋಡೆ ಮಾಟದ ಸರಪ ಜತಿ ವಂದು ತೊಲಿ ೧೨೦ ಕಿ॥ ರೂ. ೧೦೮ ೪ ಪಟ್ಟಿ ಬೆಳ್ಳಿದು ವಂದು ತೊಲಿ ೧೨ ಕಿ॥ ರೂ ೧೦ ೫ ಭಂಗಾರದ ವಂಕಿ ಜೋತಿ ವಂದು ತೊಲಿ ೪೦ ಚೊಕ್ಕ ವರಿದು ಕಿ॥ ರೂ ೪೪೦ ೬ ಭಂಗಾರದ ಪದಕದ ಸರಾ ಒಂದು ತೊಲಿ ೨॥ ಚೊಕ್ಕ ವರಿ ಕಿ॥ ರೂ. ೫೫ ೭ ತೀರಿ ಒಂದು ೨೫ ರೂ ಪ್ಯಾಲಿ ಉಡತಕ್ಕದ್ದು ಈ ಬಗೆ ೭ ಸಲು. ಒಟ್ಟು ೧೦೩೫ ರೂಪಾಯಿಗಳು

ಈ ಪ್ರಕಾರದಾ ದಾಗಿನ ತೀರಿ ವ ಕುಬಸಗಳನ್ನು ಪರತ ತಂದು ಕೊಡಬೇಕು. ಇಲ್ಲದೆ ಇದ್ದರೆ ರೀತಿ ಪ್ರಕಾರ ದಿವಾಣಿ ಕೋರ್ಟಿನಲ್ಲಿ ನಿನ್ನ ಮೇಲೆ ಹಾಂಗೂ ನಿನ್ನ ತಾಯಿಯ ಮೇಲೆ ದಾವೇ ಮಾಡಿ ವಸೂಲ ಮಾಡುವದರಲ್ಲಿ ಬರುವದು ಹಾಂಗೂ ಇದೇ ನೋಡಚೀಟ ಅಂತಾ ತಿಳಿಯಬೇಕು ಮತ್ತು ನೀನು ವ್ಯಭಿಚಾರ ಮಾಡುತ್ತಾ ಇರುವದರಿಂದಾ ನನ್ನ ಜಾಬತ್ತು ಸ್ಥಾವರ ಜಂಗಮ ಯಾವದೇ ಆಸ್ತಿಗೆ ನೀನಾಗಲಿ ಅಗರ ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಸಂತತಿಗ ಆಗಲಿ ಏನೂ ಹಕ್ಕು ಸಮ್ಮಂಧ ಇರೋದಿಲ್ಲಾ ಇದೇ ನೋಡಚೀಟಿ ಅದೆ ಈ ನೋಟೀಸಿನ ಯಾವತ್ತು ಖರ್ಚು ನಿನ್ನ ಮೇಲೆ ಇರುತ್ತದೆ ಅಂತಾ ಕೊಟ್ಟ ನೋಟೀಸು ಸಹಿ ತಾ. ೨೫-೮-೨೭ ಇಸ್ವಿ

ಸಿದ್ದಪ್ಪಾ ಸೂರಪ್ಪಾ ಸೂರಪ್ಪನವರ

ಚಂದಾದಾರರಿಗೆ ಸೂಚನೆ.

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮುಪ್ಪತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸಿದರು.

R. N. B. 1143

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೫] ಧಾರವಾಡ ಶುಕ್ರವಾರ ತಾರೀಖು ೨ ನೇ ಸಪ್ಟಂಬರ ೧೯೨೭ [ಸಂಚಿಕೆ ೧೮೮

ಕಿರ್ಲೋಸ್ಕರ ಶೇಂಗಾ [ಭುಯಿಮೂಗು] ಒಡೆಯುವ ಯಂತ್ರಗಳು



ಈ ಯಂತ್ರಗಳು ಎರಡು ನಮೂನೆಯವು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತವೆ. ಅವು ಕಬ್ಬಿಣದವು. ಬಾಳಿಕೆಯುಳ್ಳವು. ಹೊಟ್ಟನ್ನು ಝಾಡಿಸಲು ಯಂತ್ರದಲ್ಲಿ ಬೀಸಣಿಗೆಯನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳು ಕಳೆದ ಹಂಗಾಮುದಲ್ಲಿ ಬಹು ಪ್ರಚಾರಗೊಂಡಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಉದ್ಯೋಗ ಮಾಡತಕ್ಕವರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೇ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ... ಇರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಕುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುತ್ತಿರುವವು. ಗಾಹಕರು ಮತ್ತು ಬೇರೆ ತರದ ಠೇವು ಪಟಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಂಜಪ್ಪ ವಿ. ಜವಳಿ,
ಮ್ಯಾನೇ[illegible] ಡಾಯರೆಕ್ಟರ

ಜಾಹೀರಾತಿನ ದರಗಳು.

ತಿಂಗಳು ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದೊಂದು ಆಣೆ ಇಂಗ್ಲೀಷ ಪ್ರತಿಯೊಂದು ಪಂಕ್ತಿಗೆ ಎರಡು ಆಣೆ ನರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೆವಿ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ [illegible] ದಿಂದ ಆಕರಿಸಿ ಕನ್ನಡದಲ್ಲಿ ಹಾಕಿದ್ದರೆ ಅರ್ಧ ಆಣೆ ದೀರ್ಘಕಾಲದ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡಲಾಗುವದು. ವ್ಹಿ. ಪಿ. ಖರ್ಚು ಬೇರೆ.

ಮ್ಯಾನೇಜರ [illegible] ಪುಸ್ತಕಾಲಯ
[illegible]

ವಿಜಯ.

ಧಾರವಾಡ ತಾ ೨ ೯-೨೭ ನೇ ಇಸ್ವಿ

ಮಿ ಚಂದ್ರಗೌಡರ ಮೇಲಿನ ವಿಚಾರಣೆಯು.

ಇಲ್ಲಿಯ ಮ್ಯುನಿಸಿಪಾಲಿಟಿಯ ಮೆಂಬರರಾದ ಮಿ ಚಂದ್ರಗೌಡಾ ಮತ್ತು ಇಬ್ಬರು ಕಾರಕೂನರಾದ ಸುಬ್ಬಾಚಿ ಶಿವರಾವ ಜೋಶಿ ಮತ್ತು ಸಯ್ಯದ ಹುಶೇನ ಈ ಮೂವರ ಮೇಲೆ ಜನನರಿಜಿಸ್ಟರದ ಉತಾರಿನಲ್ಲಿ ವರ್ಷ ಬದಲು ಮಾಡಿದ್ದ ಪ್ರಕರಣವಿದ್ದ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಈ ಪ್ರಕರಣದ ವಿಚಾರಣೆಯು ಹೋದ ವಾರದಲ್ಲಿ ಪುನಃ ಪ್ರಾರಂಭವಾಯಿತು ನಡುವೆ ತಹಕೂಬಾ. ಶನಿವಾರ ನಡೆಯುವದು. ಅಂದು ಮಿರಜಿಯ ಸಾಕ್ಷಿಗಳಾಗುವವು. ಮಿ. ಚಂದ್ರಗೌಡರ ಮೇಲಿನ ಆರೋಪದ ಸಂಕ್ಷಿಪ್ತ ಸಂಗತಿಯು ಮುಂದೆ ಕೊಟ್ಟಂತಿದೆ.

ಮಾಮಲೇದಾರರಾಗಿದ್ದ ಸ್ವರ್ಗವಾಸಿ ಫಕೀರಗೌಡಾ ಪಾಟೀಲರಿಗೆ ಮಿ ಚಂದ್ರಗೌಡರು ಮಕ್ಕಳಾಗಬೇಕು. ಫಕೀರಗೌಡರೂ ಮಿ. ಗುರುನಗೌಡರೂ ಅಣ್ಣ ತಮ್ಮಂದಿರು. ಗುರುನಗೌಡರು ಚಂದ್ರಗೌಡರಿಗೆ ಕಕ್ಕ ಆಗಬೇಕು ಗುರುನಗೌಡರ ಮಗಳು ಸಾವಂತ್ರೆವ್ವಳನ್ನು ಮಿರಜಿಯಲ್ಲಿ ರಾಮಪ್ಪಾ ಕೇಶರಖಾನೆ ಎಂಬವರಿಗೆ ಕೊಟ್ಟು ೧೯೨೨ನೆಯ ಇಸವಿಯಲ್ಲಿ ಮದುವೆಯಾಯಿತು ದುರ್ದೈವದಿಂದ ರಾಮಪ್ಪನು ಲಗ್ನವಾದ ಒಂದೇ ವರ್ಷದೊಳಗೆ ಪರಲೋಕವಾಸಿಯಾದನು. ರಾಮಪ್ಪನ ಆಸ್ತಿಯು ದೊಡ್ಡದು ಹೆಂಡತಿ ಸಾವಂತ್ರೆವ್ವನೇ ಸರಳ ವಾರಸದಾರಳು ಆದರೆ ಚಿಕ್ಕವಳು. ೧೯೧೬ ನೆಯ ಇಸವಿಯಲ್ಲಿ ಹುಟ್ಟಿದಳು ಆಕೆಯ ಸಂರಕ್ಷಣಕರ್ತರೆಂದೂ ಆಸ್ತಿಯ ವ್ಯವಸ್ಥೆ ಮಾಡುವರೆಂದೂ ಮಿ ಚಂದ್ರಗೌಡರು ಒಟ್ಟು ಮುಖತ್ಯಾರರಾಗಿ ನೇಮಿಸಲ್ಪಟ್ಟರು. ಆಸ್ತಿಯು ಒಂದೂ ಕಾಲು ಲಕ್ಷ, ಭೂಮಿಯ ವಾರ್ಷಿಕ ಉತ್ಪನ್ನ ಮೂರು ಸಾವಿರ, ಸಾಹುಕಾರಿಕೆಯ ವ್ಯವಹಾರವೂ ದೊಡ್ಡದು, ಪಾಲನಕರ್ತರಾದವರು ಪ್ರತಿ ವರ್ಷ ಸರಕಾರಕ್ಕೆ ಲೆಕ್ಕ ಕೊಡಬೇಕಾಗುತ್ತದೆ. ಆ ಪ್ರಕಾರ ಮಿ. ಚಂದ್ರಗೌಡರಿಂದ ಕೊಡುವದಾಗಲಿಲ್ಲ. ಕೊಳ್ಳಕೊಟ್ಟು ಸಾಹುಕಾರ ಬೂಪಾಳಿಗಳ ತನಕ ಗಂಟು ಒಳಬಡಕ ಆಗುತಿದೆಂದು ಸಾವಂತ್ರೆವ್ವನ ತಂದೆಯಾದ ಮಿ. ಗುರುನಗೌಡರಿಗೆ ಸಂಶಯ ಬಂತು. ಇದು ಒಹಳ ಬೊಬ್ಬಾಟವಾಗುವ ಮುಂಚಿತವಾಗಿ ಸಾವಂತ್ರೆವ್ವನು ವಯಸ್ಸಿಗೆ ಬಂದಿದ್ದಾಳೆ ಆಕೆಗೆ ಎಲ್ಲ ಆಸ್ತಿಯನ್ನು ಒಪ್ಪಿಸಿ, ತಾವು ನಿರ್ಲಿಪ್ತರಾಗಬೇಕೆಂದು ಮಿ ಚಂದ್ರಗೌಡರು ಯೋಚಿಸಿದರು. ಆದರೆ ಸಾವಂತ್ರೆವ್ವನು ವಯಸ್ಸಿಗೆ ಬರಲಿಲ್ಲ. ಆಕೆ ಹುಟ್ಟಿದ್ದು ೧೯೦೬ನೇ ವರ್ಷದಲ್ಲಿ ೧೯೦೪ ರಲ್ಲಿ ಹುಟ್ಟಿದಳೆಂದು ಮ್ಯುನಿಸಿಪಾಲಿಟಿಯಲ್ಲಿ ದಾಖಲೆ ತಯಾರ ಮಾಡಿಸಿದರು. ಇದನ್ನು ಬರೆದವರು ಮೇಲೆ ಹೇಳಿದ ಜೋಶಿಯು. ಮೂಲ ಪ್ರತಿಯಂತಿರುತ್ತದೆಂದು ತಪಾಸಣೆಯ ರುಜು ಬರೆದವನು ಸಯ್ಯದ ಹುಶೇನಸಾಹೇಬನು. ಈ ಪ್ರಕಾರ ತಯಾರಾದ ನಕಲನ್ನು ಮಿರಜಿಯ ಕೋರ್ಟಿನವರು ಅಂಗೀಕರಿಸಲಿಲ್ಲ ಆಗ ಇಲ್ಲಿಂದ ಈ ನಕಲನ್ನು ಕೊಟ್ಟ ಈ ನಕಲು ನಿಜವಿರುತ್ತದೆಂದು ಜವಾಬ ಕೊಡಲಿಕ್ಕೆ ಜೋಶಿಯನ್ನು ಕಳಿಸಿದರು ಜನರಲ ಕಮಿಟಿಯ ಪರವಾನಿಗಿಯ ಹೊರತು ಮೂಲ ಪ್ರತಿಯನ್ನು ತರಲಿಕ್ಕಾಗುವದಿಲ್ಲ. ಚೀಫ ಆಫೀಸರರ ಹುಕುಮಿನ ಪ್ರಕಾರ ನಕಲು ತಂದಿದ್ದೇನೆಂದು ಜೋಶಿಯು ಪ್ರತಿಜ್ಞೆಯ ಮೇಲೆ ಜವಾಬ ಕೊಟ್ಟನು. ಆದರೂ ಆ ಕೋರ್ಟಿನವರು ನಕಲನ್ನು ಅಂಗೀಕರಿಸಲಿಲ್ಲ. ಈ ಪ್ರಕಾರ ಮಿರಜಿಯಲ್ಲಿ ನಡೆದ ವರ್ತಮಾನ ಕೇಳಿ, ಮಿ. ಗುರುನಗೌಡರು ಮಿರಜಿಗೆ ಹೋಗಿ, ಪೂರಾ ತಪಾಸ ಮಾಡಲಾಗಿ, ೧೯೦೬ ರ ಬದಲಾಗಿ ೧೯೦೪ ನೆಯ ವರ್ಷವಿರುತ್ತದೆ ಎಂದು ಕಂಡು ಬಂತು. ಮತ್ತು ಮಿ. ಚಂದ್ರಗೌಡರೂ ಇಬ್ಬರು ಕಾರಕೂನರೂ ಸೇರಿ ಸುಳ್ಳು ಉಪಾಯ ಮಾಡಿದ್ದಾರೆಂಬ ಆರೋಪವಿಟ್ಟು ಮಿ ಗುರುನಗೌಡರು ಫಿರ್ಯಾದಿ ಮಾಡಿದ್ದಾರೆ. ಸಾವಂತ್ರೆವ್ವನು ೧೯೦೬, ಫೇಬ್ರುವರಿ ತಿಂಗಳ ೨೨ ನೆಯ ತಾರೀಖಿನ ದಿವಸ ಹುಟ್ಟಿರುತ್ತಾಳೆ

ಜೋಶಿ ಕಾರಕೂನನು ಮಿ. ರಲೆಕ್ಟರಸಾಹೇಬರ ಮುಂದೆ ಈ ಮೊದಲು ಕೊಟ್ಟ ಜವಾಬಿನಲ್ಲಿ ಚೀಫ ಆಫೀಸರರ ಹೆಸರು ತಿಳಿಸಲಿಲ್ಲ. ತನ್ನ ಮೈಮೇಲೇ ಎಲ್ಲ ಜವಾಬದಾರಿ ತೆಗೆದುಕೊಂಡಿದ್ದನು. ಹೋದ ವಾರದಲ್ಲಿ ಮಿ. ಮ್ಯಜಿಸ್ಟ್ರೇಟರ ಮುಂದೆ ಬೇರೊಂದು ಜವಾಬು ಕೊಟ್ಟು, ನಕಲನ್ನು ಚೀಫ ಆಫೀಸರ ಮಿ. ಚನನಗೌಡ ಮತ್ತು ಚಂದ್ರಗೌಡರ ಸಮಕ್ಷಮ ಇವರ ಹೇಳಿಕೆಯಂತೆ ತಯಾರ ಮಾಡಿದನು ಅವನ ಕೈಕೆಳಗಿನ ಕಾರಕೂನನು. ಅವರ ಹೇಳಿದಂತೆ ನಡೆದನು. ಅವರು ಕೊಟ್ಟ ಚೀಟಿಯಿಂದಲೇ ಮಿರಜಿಗೆ ಸಾಕ್ಷಿಗೆ ಹೋದೆನು ಎಂದಾಗಿ ಹೇಳಿದ್ದಾನೆ.

ಖಾದಿಯ ಠರಾವು.

ಬಹಾರದ ಕಾಯದೆ ಕೌನ್ಸಿಲದಲ್ಲಿ ಸರಕಾರೀ ಕೆಲಸಕ್ಕೆ ಬೇಕಾಗುವ ಬಟ್ಟೆಗಳು ಅಂದರೆ ಸಿಪಾಯರ ಒಂದೇ ಪ್ರಕಾರದ ಬಟ್ಟೆ ಮತ್ತು ಇತರ ಕೆಲಸಗಳಿಗಾಗಿ ಖಾದಿಯನ್ನೇ ಉಪಯೋಗಿಸಬೇಕೆಂಬ ಠರಾವನ್ನು ಸ್ವರಾಜ್ಯ ಪಕ್ಷೀಯರಾದ ದೀಪನಾರಾಯಣಸಿಂಗರು ತಂದರು ಖಾದಿಯ ಪ್ರಚಾರವಾಗಿದ್ದರೆ- ಉಳಿದವ್ಯಕ್ತಿ ಗಿರಣಿಗಳ ಬಟ್ಟೆ ಕೊಳ್ಳಬೇಕೆಂದು ಶ್ರೀ ರಾಮದಯಾಳುಸಿಂಗರು ಉಪಸೂಚನೆ ತಂದರು. ಸರಕಾರ ಪಕ್ಷೀಯರು ಇದಕ್ಕೆ ಸಹಾನುಭೂತಿಯ ಉತ್ತರ ಕೊಟ್ಟರು ಭವಿಷ್ಯತ್ಕಾಲದಲ್ಲಿ ಇದರ ವಿಸ್ತೃತಿಯಾಗಬಹುದು. ಆದರೆ ಅದರ ಸಲುವಾಗಿ ...ವಿಲ್ಲ. ಬೆಲೆಯು ... ಬಟ್ಟೆಯಾಗುತ್ತದೆಂದು ಅವರು ಕಂಡು ಹೇಳಿದರು ಇದರಿಂದ ನಿಜವಾಗಿದೆ ಇದನ್ನು ಸರಿಗೊಳಿಸುವದಕ್ಕಾಗಿ ಖಾದಿಯನ್ನು ನೆಯಿಸುವಂಥವರು ಸತತವಾಗಿ ಪ್ರಯತ್ನ ಮಾಡಬೇಕಾಗಿದ್ದು. ಕಡೆಗೆ, ಖಾದಿಯ ಠರಾವು ೪೪ ಅನುಕೂಲ ಮತ್ತು ೨೪ ಪ್ರತಿಕೂಲ ಮತಗಳಿಂದ ಪಾಸಾಯಿತು.

ಮಂತ್ರಿಗಳಲ್ಲಿ ಅವಿಶ್ವಾಸ-

ಬಂಗಾಲದ ಕೌನ್ಸಿಲದಲ್ಲಿ ಮಂತ್ರಿಗಳಲ್ಲಿ ವಿಶ್ವಾಸವಿಲ್ಲೆಂಬ ಠರಾವು ಪಾಸಾದ ಬಳಿಕ, ಗವರ್ನರಸಾಹೇಬರು ಕೌನ್ಸಿಲ ಸಭೆಯನ್ನು ವಿಸರ್ಜನೆ ಮಾಡಿ, ಮೆಂಬರರಿಗೆ ಸದ್ಯದಲ್ಲಿ ತಮ್ಮತಮ್ಮ ಊರುಗಳಿಗೆ ಹೋಗಲು ಅಪ್ಪಣೆ ಕೊಟ್ಟರು. ಅನಂತರ ಬ್ಯಾರಿಸ್ಟರ ಸೇನಗುಪ್ತ, ಸರ ಅಬ್ದುಲ ರಹಿಮಾನರನ್ನು ಕರಸಿ, ನೀವು ದಿವಾನರಾಗಿರೆಂದರು. ಇದು ಕೇವಲ ಶಿಷ್ಟಾಚಾರವಾಗಿತ್ತು. ಇವರ ತರವಾಯ ಸಾಹಿಸ್ಸೂರದ ಮಹಾರಾಜರನ್ನೂ, ಮಿ ಫಜಲುಲ ಹಕ್ಕರನ್ನೂ ಕರಸಿ, ದಿವಾನರಾಗಲು ಅವರನ್ನು ಪ್ರೋತ್ಸಾಹಿಸಬೇಕೆಂದಿದ್ದಾರೆ.

ಮುಂಬಯಿಯೇ ಹೇಡಿಯು-

ಬಂಗಾಲದಲ್ಲಿ ದಿವಾನರಿಗೆ ಅಪ್ಪಣೆಯಾಯಿತು. ಮದ್ರಾಸದವರಿಗೆ ಧೀಮಗ ಬೆನ್ನು ನೆಲಕ್ಕೆ ಹತ್ತಿದಂತಾಗಿದೆ ಇವರು ಮಂತ್ರಿಗಳಿಗೆ ಎದ್ದಲಗಾಟ ಕೊಟ್ಟು, ಅವರನ್ನು ಓಡಿಸಬೇಕೆಂಬ ಸಂಧಗಟ್ಟಿದ್ದಾರೆ. ಅನೇಕರು ಇವರಿಗೆ ರಾಜೀನಾಮೆ ಕೊಡಿರೆಂದು ಒತ್ತಾಯ ಪಡಿಸುತ್ತಿದ್ದಾರೆ ಬಹಾರದ ಕೌನ್ಸಿಲದಲ್ಲಿಯೂ ಮಂತ್ರಿಗಳಲ್ಲಿ ವಿಶ್ವಾಸವಿಲ್ಲೆಂಬ ಠರಾವು ಬರತಕ್ಕದ್ದಿದೆ ನಾಗಪೂರವು ಪ್ರತಿಯೋಗಿ ಸಹಕಾರವೆಂಬ ಭೂತಬಾಧೆಯಿಂದ ಸ್ವರಾಜ್ಯ ಪಕ್ಷದ್ವೇಷಿ ಆಗಿರುತ್ತದೆ. ಇವೆಲ್ಲವುಗಳನ್ನು

ನೋಡಲಾಗಿ ಮುಂಬಯಿಯು ಮಾತ್ರ ಹೇಡಿಯಂತೆ ತೋರುತ್ತಲಿದೆ.. ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷೀಯರು ಬಹುಸಂಖ್ಯೆಯಿಂದ ಆರಿಸಲ್ಪಡಲಿಲ್ಲ. ಕೌನ್ಸಿಲದಲ್ಲಿ ಇವರು ಕಣ್ಣಿಗೆ ಒಡೆದು ಕಾಣದಷ್ಟು ಅಲ್ಪರಾಗಿದ್ದಾರೆ. ಹೀಗಾಗಿ ಮುಂಬಯಿಯು ನೆಂಬರಲ್ಲ. ಮತದಾರರೇ ಹೇಡಿಗಳೆನಿಸುವಂಥ ಮೂರ್ಖ ಪರಿಸ್ಥಿತಿಯಲ್ಲಿದ್ದಾರೆ.

ಕಾಂಗ್ರೆಸ ಮತ್ತು ಬ್ರಾಹ್ಮಣೇತರ-

ಮುಂಬಯಿಯಲ್ಲಿ ಸೇರಿದ್ದ ಬ್ರಾಹ್ಮಣೇತರರು ಬಹಳ ಬಹುಮತದಿಂದ ಯಾರಿಗೆ ಬೇಕಾದವರು ಕಾಂಗ್ರೆಸದ ಮೆಂಬರರಾಗಬಹುದೆಂದು ಮಾಡಿದ ಠರಾವಿನ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಕಾಂಗ್ರೆಸ ಸೇರಬೇಕೆಂಬ ಠರಾವು ಪಾಸಾದ ಕೂಡಲೆ, "ದೇಶಕಾರ್ಯ ಮತ್ತು ಸದಿಚ್ಛೆಯ ದೆಸೆಯಿಂದ ಬ್ರಾಹ್ಮಣೇತರರು ಕಾಂಗ್ರೆಸ ಸೇರಬೇಕೆಂದು" ಮಹಾತ್ಮರು ಇವರಿಗೆ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯ ಕಾರ್ಯದರ್ಶಿಯು- "ತಮ್ಮ ಉಪದೇಶಕ್ಕಾಗಿ ಕೃತಜ್ಞರಾಗಿದ್ದೇವೆ. ಕಾಂಗ್ರೆಸ ಸಭೆಯನ್ನು ಬ್ರಾಹ್ಮಣೇತರ ಮಾಡುವದಕ್ಕೂ, ಈ ಮೂಲಕ ಅದನ್ನು ಪ್ರಜಾಪ್ರಭುತ್ವ ಮಾಡಲಿಕ್ಕೂ ಕಾಂಗ್ರೆಸವನ್ನು ಸೇರುತ್ತೇವೆ." ತಾರು ಮಾಡಿದ್ದಾರೆ. ಬ್ರಾಹ್ಮಣೇತರರು ಬಹುಸಂಖ್ಯೆಯಿಂದ ಕಾಂಗ್ರೆಸ ಸೇರಿದರೂ, ಪಾಟೀ ದಿವಾನ ಜಾಧವರಾವ ರಾ. ಬ. ಕಾಂಬಳೆ, ಮಿ. ದಳವಿ ಪ್ರಭೃತಿಗಳು ಕಾಂಗ್ರೆಸದ ನೆರಳಿಗೆ ಹಾಯುವದು ಕೂಡ ಶಕ್ಯವಾಗಲಾರದು.

ಹಿಂದೂ ಮುಸಲಮಾನ ಐಕ್ಯ ಕಮಿಟಿ-

ಸಿಮಲಾದಲ್ಲಿ ಲಾರ್ಡ ಆಯರ್ವಿನಸಾಹೇಬರು ಹಿಂದೂ ಮುಸಲಮಾನ ಐಕ್ಯದ ದೆಸೆಯಿಂದ ಭಾಷಣ ಮಾಡಿದ ಬಳಿಕ, ಅಸೆಂಬ್ಲಿ ಮತ್ತು ಕೌನ್ಸಿಲ ಆಫ ಸ್ಟೇಟದ ಮೆಂಬರರಲ್ಲಿ ಪ್ರಮುಖರಾದವರು ಸೇರಿ, ಈ ಬಗ್ಗೆ ವಿಚಾರ ಮಾಡಿದರು. ಮುಂಬಯಿಯಲ್ಲಿ ಇದೇ ವಿಷಯವಾಗಿ ಕಮಿಟಿಯು ಕೂಡಿತ್ತಷ್ಟೇ; ಅದರ ಮುಂದೆ ಹೋಗಿ ವಿಚಾರ ಮಾಡಬೇಕೆಂದು ಸರ್ವಸಾಧಾರಣವಾಗಿ ಗೊತ್ತಾಯಿತು. ಎರಡೂ ಪಕ್ಷಗಳಲ್ಲಿ ಮೈತ್ರಿಯಾಗುವಂಥ ನಿಯಮಗಳನ್ನು ಒರೆಯುವದಕ್ಕಾಗಿ ಡಾಕ್ಟರ ಗೋಕುಲಚಂದ ನಾರಂಗ ಮತ್ತು ಸಾಹೇಬ ಕ್ವಾರಾತಿ ಇವರನ್ನು ನೇಮಿಸಿದ್ದಾರೆ.

ಜರ್ಮನಳು ಹಿಂದೂ ಆದಳು-

ಕಲಕತ್ತೆಗೆ ಮ್ಯಾರ್ಗರೆಟ ಗುಫ್ರೆನಹಾಪ್ಟ ಎಂಬ ಹೆಸರಿನ ತರುಣಿಯಾದ ವಿದುಷಿಯು ಬಂದಿದ್ದಾಳೆ. ಇವಳ ವಯಸ್ಸು ೨೩. ಉಪನಿಷತ್ತು ಮತ್ತು ಭಗವದ್ಗೀತೆಯಲ್ಲಿ ಬಹಳ ಶ್ರದ್ಧೆಯುಳ್ಳವಳು. ಸರ ಟಾಗೋರರ ಎಲ್ಲ ಗ್ರಂಥಗಳನ್ನೂ ಓದಿದ್ದಾಳೆ. ಇವಳು ಈ ವಾರದಲ್ಲಿ ಹಿಂದೂ ಧರ್ಮ ಸ್ವೀಕಾರ ಮಾಡಿ, ಎಲೆಕ್ಟ್ರಿಕ ಇಂಜಿನಿಯರರಾದ ಕಿರಣಚಂದ್ರರೆಂಬವನ್ನು ಮದಿವೆಯಾದಳು. ಈಕೆಗೆ ಇಂದುಬಾಲಾ ದೇವಿ ಎಂಬ ಹೆಸರು ಇಟ್ಟಿದ್ದಾರೆ. ಮದಿವೆಯಾದನಂತರ ಊಟಕ್ಕೆ ಬಂದಂಥ ಅತಿಥಿ, ಅಭ್ಯಾಗತರಿಗೆ ತಾನೇ ಬಡಿಸಿದಳು.

ಅಗ್ನಿಸಂಸ್ಕಾರ-

ನಿಶಾ ಮತ್ತು ಜ್ವಿಂಬಾಟಿಯ ಪ್ರೇತಗಳಿಗೆ ಜೋಹಾನ್ಸಬರ್ಗದಲ್ಲಿ ಅಗ್ನಿಸಂಸ್ಕಾರ ಮಾಡಿದರು. ಅಗ್ಗಿ ಒಂದು ಲಕ್ಷ ಜನರು ಸೇರಿದ್ದರು. ಗಲ್ಲಿನ ಮುಯ್ಯುಮೇದು ಕೂಲಿಕಾರರು ರೇಲ್ವೆಯ ಎರಡು ಇಂಜಿನ ಹಾಗು ಗಡ್ಡಿನ ಡಬ್ಬಿಗಳಿಗೆ ಬೆಂಕಿ ಹಚ್ಚಿ ಸುಟ್ಟುಬಿಟ್ಟರು. ಜ್ವಿಂಬಾಟಿಯು ತಂಗಿಯ ಪ್ರಕರಣದಿಯನ್ನು ಕಿಕ್ಕಿರಿಂದು ಅಮೇರಿಕೆ ಮತ್ತು ವಿಲಾಯತಿಯ ದೊಡ್ಡ ದೊಡ್ಡ ಪಟ್ಟಣಗಳಿಗೆ ಹೋಗುವಳು. ಅಲ್ಲಿ ಮೆರವಣಿಗೆಗಳು ಹೊರಡುವವು.

ಹಿಂದೂ ಮುಸಲಮಾನ ಕಲಹಗಳು.

— ೧ —

ಲಾಹೋರಿನ ಮುಸಲಮಾನರು ಹಿಂದೂ ಶೀಖರ ಅಂಗಡಿಗಳಲ್ಲಿ ಯಾರೂ ವ್ಯವಹಾರ ಮಾಡಬಾರದೆಂದು ಪಿಕೆಟಿಂಗ ನಡಿಸಿದ್ದಾರೆ.

ಸರಹದ್ದಿನ ಕಾಡು ಕುಲದವರು ದಪ್ಪಿಸಾಕಿದಂಥ ಹಿಂದೂ ಜನರನ್ನು ಮರಳಿ ಕರಕೊಂಡು ಅವರ ಆಸ್ತಿಯನ್ನು ಅವರಿಗೆ ಕೊಟ್ಟು, ಪ್ರೇಮದಿಂದಿರಲೊಪ್ಪಿದ್ದಾರೆ.

ಕಾಸಪೂರದಲ್ಲಿ ಎರಡು ದಿವಸ ಭಯಂಕರವಾದ ಹಿಂದೂ ಮುಸಲಮಾನ ದಂಗೆಯಾಯಿತು ೫೦ ಜನರು ಘಾಯವಾಗಿದ್ದಾರೆ. ಪಟ್ಟಣದಲ್ಲಿ ದಂಡಿನ ಕಾವಲುಂಟು.

ಬರೇಲಿಯಲ್ಲಿಯೂ ದಂಗೆಯಾಯಿತು. ಸರಕಾರದವರು ಊರತುಂಬ ಪೋಲಿಸ ಬಂದೋಬಸ್ತು ಇಟ್ಟಿದ್ದಾರೆ.

ಅಲ್ಲಾಹಾಬಾದಿನಲ್ಲಿ ರಾಮದಿಂಡು ಎಂಬ ಹಿಂದೂ ಜನರ ಉತ್ಸವ ಮತ್ತು ಮೆರವಣಿಗೆ ಹೊರಡತಕ್ಕದಿತ್ತು. ಮೆರವಣಿಗೆಗೆ ಪೋಲೀಸರು ಸಲ್ಲದ ನಿರ್ಬಂಧ ಹಾಕಿದ್ದರಿಂದ ಹಿಂದೂ ಜನರು ಮೆರವಣಿಗೆ ತೆಗೆಯಲಿಲ್ಲ. ಹರತಾಳ ಮಾಡಿ, ಎಲ್ಲ ವ್ಯವಹಾರವನ್ನು ನಿಲ್ಲಿಸಿಬಿಟ್ಟಿದ್ದರು.

ಪೈಗಂಬರರೇ ಮೊದಲಾದ ಸತ್ಪುರುಷರ ವಿರುದ್ಧ ಅಭದ್ರ ಲೇಖಗಳನ್ನು ಬರೆಯಬಾರದೆಂದು ಕಾಯದೆ ಮಾಡಿಸುವದಕ್ಕಾಗಿ ಅಲ್ಲೀ ಬಂಧು ದ್ವಯರು ಸಿಮಲಾಕ್ಕೆ ಹೋಗಿದ್ದಾರೆ.

ಲುಧಿಯಾನಾದ ಒಬ್ಬ ಪ್ರಸಿದ್ಧ ವಿರಾಗಿಯಾದ ಪೆಶಾವರ ಪಟೇಲರ ದಂಡನೆಗೊಳಗಾದವರ ಮೇಲೆ ಜಾಮೀನ ಮುಚ್ಚಳಿಕೆಯ ಕೆಲಸ ನಡೆಯಿತು. ಮ್ಯಾಜಿಸ್ಟ್ರೇಟರು ಐದು ಸಾವಿರದ ಜಾಮೀನು ಬೇಡಿದರು. ವೈರಾಗ್ಯಸಂಪನ್ನರಿಗೆ ಎಲ್ಲಿಯೂ ಜಾಮೀನು ಸಿಕ್ಕದ್ದರಿಂದ ಅನ್ಯಮಾರ್ಗವಿಲ್ಲದೆ ತುರುಂಗಕ್ಕೆ ಹೋದರು.

ವಿವಿಧ ವರ್ತಮಾನಗಳು

ಕಾರವಾರದ ಡಿಸ್ಟ್ರಿಕ್ಟ ಲೋಕಲಬೋರ್ಡಿನವರು ನೂರು ರೂಪಾಯಿ ಸಂಬಳದೊಳಗಿನ ಕೆಲಸಗಳ ನೇಮಣೂಕಿಗಳನ್ನು ಮಾಡುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಟ್ಟಿರುತ್ತಾರೆ.

ವಿಜಾಪೂರದ ಸ್ಕೂಲಬೋರ್ಡಿನವರು ತಮ್ಮ ಕಚೇರಿಯಲ್ಲಿರುವ ಎಲ್ಲ ಕಾರಕೂನರನ್ನು ಧಾರವಾಡದವರಂತೆ ಕಿತ್ತಿಹಾಕದೆ, ಕೆಲಸದ ಅನುಭವದ ದೆಸೆಯಿಂದ ಇಬ್ಬರನ್ನು ಇಟ್ಟುಕೊಂಡಿದ್ದಾರೆ.

ಮಿ. ಜಗತಾಪರು ವಿಜಾಪೂರದ ಡ್ಯಪುಟಿ ರಿಜಿಸ್ಟ್ರಾರರಾಗಿ ಹೋಗಬೇಕೆಂದು ದಿವಾನರು ಒತ್ತಾಯದ ಹುಕುಮು ಮಾಡಿದ್ದಾರೆಂದು ತಿಳಿಯುತ್ತದೆ.

ಮೈಸೂರ ಇಲಾಖೆಯಲ್ಲಿ ಗಾಂಧಿನಿಧಿಯು ೪೧ ಸಾವಿರ ಕೂಡಿತು. ಇದರಲ್ಲಿ ಬೆಂಗಳೂರು ೫೩೦೦, ಮೈಸೂರು ೬೯೨೦, ದಾವಣಗೇರಿ ೫೨೦೦ ರೂಪಾಯಿ ಕೂಡಿವೆ. ದಾವಣಗೇರಿಯು ಸಣ್ಣ ಪಟ್ಟಣವಾದರೂ ರಾಜಧಾನಿಯ ಎರಡೂ ಪಟ್ಟಣಗಳನ್ನು ಸರಿಗಟ್ಟಿದ್ದು ವಿಶೇಷವಾಗಿ ಭೂಷಣವಾಗಿರುತ್ತದೆ.

ಸವದತ್ತಿಯ ವಕೀಲರಾದ ಮಿ. ಬಸಂತಿಮಠ ಬಿ. ಎ. ಎಲ್.ಎಲ್. ಬಿ. ಯವರು ವೀರಶೈವ ಕ್ಷತ್ರಿಯರು ಇವರು ನಗರೇಕ್ಕರ ಒಬ್ಬ ಕನ್ಯೆಯನ್ನು ಮದಿವೆಯಾಗುವರೆಂದೂ, ಇದು ಸಿಂಧವಲ್ಲಿ ಧರ್ಮಶಾಸ್ತ್ರಕ್ಕೆ ವಿರುದ್ಧವಾದ ಕೃತ್ಯವಾಗು

ಬೇಕು. ಈ ಆಯುಷ್ಯದಲ್ಲಿ ವಿದ್ಯಾರ್ಜನೆಯೇ ವಿದ್ಯಾರ್ಜನೆ. ಜಗತ್ತಿನ ಚಟುವಟಿಗಳನ್ನು ತಟಸ್ಥರಿದ್ದು ನಿಷ್ಪಕ್ಷಪಾತ ವೃತ್ತಿಯಿಂದ ಅವುಕು ತಿಳಿದುಕೊಳ್ಳಬೇಕು. ಈಗಿನಂತೆ ಒಂದೊಂದು ಇಯತ್ತೆಯಿಂದ ಪಾರಾಗುವದೊಂದೇ ಗುರಿಯೆಂದು ತಿಳಿದುಕೊಳ್ಳಬೇಡಿ. ಒಂದೊಂದು ಇಯತ್ತೆಯಲ್ಲಿ ಪಾಸಾಗದಿದ್ದರೆ ವಿದ್ಯಾರ್ಜನೆಯಲ್ಲ. ವಿದ್ಯಾರ್ಜನ ಜ್ಞಾನ ಸಂಪಾದನೆಯೆಂದು ಸಾಧನವೆಂದು ತಿಳಿದುಕೊಳ್ಳಿರಿ. ಈ ತತ್ವದಲ್ಲಿ ದೊಡ್ಡ ವಿದ್ವಾಂಸರೆಂದು ಪ್ರಸಿದ್ಧರಾದ ಲೋಕಮಾನ್ಯ ಟಿಳಕ ಮುಂತಾದವರ ಉದಾಹರಣೆಗಳನ್ನು ಅನುಸರಿಸಿ ವಿದ್ಯಾಕ್ರಮವು ಮುಗಿದಮೇಲೆ ವಿದ್ಯಾಭ್ಯಾಸದ ಸಂಪೂರ್ಣಯಾಯಿತೆಂದು ತಿಳಿಯಬಾರದು. ಇಡೀ ಆಯುಷ್ಯದಲ್ಲಿ ವಿದ್ಯೆಯ ಸೇವೆಯಲ್ಲಿ ಕಳೆಯುವಂತೆ ಗೃಹಸ್ಥರು ಮಾಡಿರಿ ಮತ್ತು ಗೌರವನ್ನು ಕೀರ್ತಿಯನ್ನು ಪಡೆಯಿರಿ.

ಈ ಪ್ರಕಾರದ ಸ್ಫೂರ್ತಿದಾಯಕವಾದ ಉಪನ್ಯಾಸವನ್ನು ಶ್ರೀ ಬಸವನಾಳ ಇವರು ಶಾಂತರೀತಿಯಿಂದಲೂ ಗಂಭೀರ ವಾಣಿಯಿಂದಲೂ ವಿದ್ಯಾರ್ಥಿಗಳ ಅಂತಃಕರಣವನ್ನು ಸ್ಪರ್ಶಿಸುವಂತೆ ಮಾಡಿದ ನಂತರ ಶಾಲೆಯ ಅಧ್ಯಕ್ಷ ಸೇವಾದಾಸ ಶ್ರೀ ದೇವರಾಜ ಹಲ್ಯಾಳ ಇವರು ಶ್ರೀ ಬಸವನಾಳರವರಿಗೂ ನೆರೆದ ಸಭ್ಯಗೃಹಸ್ಥರಿಗೂ ಸಕ್ರಮ ವಂದನೆಗಳನ್ನು ಸಮರ್ಪಿಸಿ ಗಣೇಶೋತ್ಸವದ ಉದ್ದೇಶಗಳನ್ನು ವಿವರಿಸಿ ಹೇಳಿದರು. ದೇವತಾರಾಧನೆಯ ಮೂಲಕ ವಿದ್ಯಾರ್ಥಿಗಳಲ್ಲಿ ಶಾಲೆಯ ವಿಷಯವಾಗಿ ಆತ್ಮೀಯತೆಯ ಬುದ್ಧಿಯನ್ನು ಹುಟ್ಟಿಸುವದೂ ಆಸಪಾಸಿನ ಸುಸಂಸ್ಕೃತ ಮತ್ತು ಸಮಾಜ ಧುರೀಣರೂ ಈ ಉತ್ಸವದ ಮೂಲಕ ಶಾಲೆಗೆ ಬಂದು ವಿದ್ಯಾರ್ಥಿಗಳಿಗೆ ಉಪದೇಶದ ಮಾತುಗಳನ್ನು ಹೇಳುವದರಿಂದ ಶೀಲಘಟನೆಗೆ ಅವಶ್ಯವಾದ ಸದ್ಭಾವನೆಯನ್ನು ಹುಟ್ಟಿಸುವದೂ ಮತ್ತು ಶಾಲೆಯಲ್ಲಿ ಕೇವಲ ಪಠ್ಯ ಪುಸ್ತಕಗಳ ಅಧ್ಯಯನದಿಂದ ಉಂಟಾಗುವ ಬೇಸರವನ್ನು ಹೋಗಲಾಡಿಸಿ ಹೊಸ ಚೈತನ್ಯವನ್ನುಂಟು ಮಾಡಿ ಅಧ್ಯಯನಕ್ಕೆ ವಿಶೇಷ ಪ್ರವೃತ್ತರನ್ನಾಗಿ ಮಾಡುವದೂ ಇವೇ ಈ ಉತ್ಸವದ ಮೂಲ ಉದ್ದೇಶಗಳೆಂದು ಹೇಳಿದ ನಂತರ ಸಭೆಯು ವಿಸರ್ಜನವಾಯಿತು.

ಬ್ರಾಹ್ಮಣರ ಗಣಪತಿಯ ಮುಂದೆ ಅಂತ್ಯಜರು ಬಂದು ಹಾಡಿ, ಆನಂದಿಪಡಬೇಕೆಂದು ಮುಂಬಯಿಯ ಬ್ರಾಹ್ಮಣ ಸಭೆಯವರು ಠರಾವು ಮಾಡಿದ್ದಾರೆ. ಇದಕ್ಕೆ ಶ್ರೀ ಜಗದ್ಗುರು ಕುರ್ತಕೋಟಿ ಮಹಾಸ್ವಾಮಿಗಳ ಪೂರ್ಣ ಸಹಾನುಭೂತಿಯುಂಟು.

ಮದ್ರಾಸ ಕೌನ್ಸಲದ ಲೋಕನಿಯುಕ್ತ ಮೆಂಬರರಾದ ಡಾಕ್ಟರ ಮಲ್ಲಯ್ಯನವರಿಂದ ಪರಿಶೋಧಿಸಲ್ಪಟ್ಟ
ಮೆಸರ ಪಿ. ವ್ಹಿ ರಾಜನ ಕಂಪನಿಯು.

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು ಲಕ್ಷಾವಧಿ ಜನರು ಇದರ ಉಪಯೋಗ ಮಾಡಿದ್ದಾರೆ. ಇದರ ಗುಣದ ಬಗ್ಗೆ ಸಾವಿರಾರು ಜನರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

ಈ ಪುಡಿಯ ಉಪಯೋಗದಿಂದ ಗುಣವಾಗುವ ವ್ಯಾಧಿಗಳು — ನೆಗಡಿ ಅರತಲೆ ನೋವು, ತಲೆಯಲ್ಲಾಗುವ ಬೇರೆ ವಿಕಾರಗಳು ಕಣ್ಣುಗಳಲುಂಟಾಗುವ ಎಲ್ಲ ವ್ಯಾಧಿಗಳು, ದೂರಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ. ಬೇರೆ ನಶ್ಯದಲ್ಲಿ ಈ ನಶ್ಯದ ಒಂದು ಚಿಟಿಕೆಯನ್ನು ಕೂಡಿಸಿದರೆ ಎಲ್ಲವೂ ಸುಗಂಧವಾಗುವದು. ಮಾದರಿ ಪಿಠಿ ಉಚಿತವಾಗಿ ದೊರೆಯುವದು.

ಸಾದಾ ಮದ್ರಾಸ ನಶ್ಯ ೧೨೦ ತೊ ಪೀಸ ಒಂದಕ್ಕೆ ನಂಬರ ೧ ೪-೦-೦

,, ೨ ೩ ೮-೦

ದಯವಿಟ್ಟು ವಿಳಾಸವನ್ನು ಸ್ವಚ್ಛವಾಗಿ ಬರೆಯಿರಿ

ತಂತಿ ವಿಳಾಸ ನಶ್ಯನು | ಪಿ ವ್ಹಿ ರಾಜನ ಮತ್ತು ಕಂಪನಿ,
೪೪ ಗೋವಿಂದಪ್ಪ ನಾಯಕನ ಬೀದಿ ಜಾರ್ಜಟೌನ, ಮದ್ರಾಸ

P V RAJAN & COMPANY

Sole Manufacturers of Dr B S M's Medicated & Scented Snuff

No 44 Govindappa Naikan Street MADRAS

ನೋಟೀಸು

ರಾ ರಾ. ದೊಡ್ಡಪ್ಪಾ ರಾಮಪ್ಪಾ ಮಲ್ಲಿಗವಾಡದವರ ಸಾಕಿನ ಧಾರವಾಡ ಇವರಿಗೆ—

ಈ ಕೆಳಗೆ ಸಹಿ ಮಾಡಿದವಳಿಂದಾ ಈ ನೋಟೀಸಿನ ದ್ವಾರ ನಿಮಗೆ ತಿಳಿಸುವದೇನಂದರೆ ನೀವು ನನ್ನ ಲಗ್ನದ ಗಂಡನಿದ್ದು ಲಗ್ನ ಆಗಿ ಸುಮಾರು ೧೦-೧೨ ವರ್ಷಗಳಾಗಿದ್ದು ಕೆಲವು ದಿವಸ ನನ್ನ ಗೂಡಾ ಸುರಳೀತ ಪ್ರಪಂಚ ಮಾಡಿಕೊಂಡು ಇರುತಿದ್ದು ಇದಿ ಕಡಿಗೆ ನೀನು ದುರ್ವ್ಯಸನಕ್ಕೆ ಬಿದ್ದು ವ್ಯಸನದಲ್ಲಿ ನನ್ನನ್ನು ಹೊಡದೂ ಬಡದೂ ಮಾಡಿ ನನ್ನನ್ನು ಈಗ ವಂದು ವರ್ಷದ ಹಿಂದೆ ನನ್ನ ದಾಗೀನೆ ಕಸಕೊಂಡು ಮನಿಯಿಂದಾ ಹೊರಗೆ ಹಾಕಿರತೀದಿ ನಾನು ನನ್ನ ತವರ ಮನಿಯಲ್ಲಿ ಇದ್ದು ಎರಡುನೂರು ರೂಪಾಯಿ (೨೦೦) ಸಾಲಾ ಮಾಡಿ ಈ ವರಿಗೆ ಉಪಜೀವನ ಆಗಕೊಂಡಾ ಬಂದೆ ಆದರೆ ಈಗ ನೀನ ಇದಿ ಕಡಿಗೆ ಒಬ್ಬ ಎಲ್ಲಮ್ಮಾ ಅಂಬುವಾಕಿನ್ನ ಉಡಿಕಿ ಮಾಡಿಕೊಂಡು ಆಕಿಯ ಕೂಡಾ ಇರತೀದಿ ಈಗ ನನಗೆ ಸಾಲಗಾರರ ತಗಾದೆ ಬಹಳೇ ಆಗಿರುವದಲ್ಲದೇ ನನ್ನ ಉಪಜೀವನದ ಬಗ್ಗೆ ಸಹಾ ಬಹಳೇ ತೊಂದರೆ ಆಗಿರುತ್ತದೆ. ಕಾರಣಾ ಈಗ ನಿನಗೆ ಈ ನೋಟೀಸಿನ ದ್ವಾರಾ ತಿಳಿಸುವದೇನಂದರೆ ಈಗ ನೋಟಿಸ ಮುಟ್ಟಿದ ಎಂಟು ದಿವಸಗಳಲ್ಲಿ ನಾನು ಮಾಡಿದ ೨೦೦ ರೂಪಾಯಿ ಸಾಲಾ ತೀರಿಸಿ ನನ್ನ ದಾಗಿನಗಳನ್ನು ಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು. ಇಲ್ಲವಾದರೆ ನಿನ್ನ ಮೇಲೆ ಕಾಯದೇ ಪ್ರಕಾರ ಇಲಾಜ ಮಾಡುವದಲ್ಲದೇ ಇನ್ನು ಮುಂದ ನನ್ನ ಮೇಲೆ ನಿನ್ನದು ನಿನ್ನ ಮೇಲೆ ನನ್ನದು ಮತ್ತು ನನ್ನ ಉಡಿಕಿ ಗಂಡನ ಮೇಲೂ ಸಹಾ ಯಾವ ಪ್ರಕಾರದಿಂದಾನೂ ಹಕ್ಕು ಇಲ್ಲಾ ಇದೇ ಘಾರಿಯತ್ತು ಅಂತಾ ತಿಳಿದು ನಾನು ನನ್ನ ಮನಸ್ಸಿಗೆ ಬಂದಂತೆ ವ್ಯವಸ್ಥೆ ಮಾಡಿಕೊಳ್ಳತೇನೆ, ತಿಳಿಯಲಿ. ತಾರೀಖು ೧-೯-೧೯೨೭ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಲಕ್ಷ್ಮವ್ವಾ ಕೋಮ ದೊಡ್ಡಪ್ಪಾ ಮಲ್ಲಿಗವಾಡದವರ ಈ ಕೀದು ಅದೆ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಆನ್ರ್ಯಾಚಾರ್ಯ ಬಾಳಾಚಾರ್ಯ ಹೊಸಳೇರಿ.

ವರ್ಷ ೮) ಧಾರವಾಡ ಶನಿವಾರ ತಾರೀಖು ೩ ನೇ ಸಪ್ಟಂಬರ ೧೯೨೭ (ಸಂಚಿಕೆ ೧೮೯

ಕಿರ್ಲೋಸ್ಕರ ಬ್ರಿಗಾ [ಬ್ರದರ್ಸ] ಒಡೆಯರ ಯಂತ್ರಗಳು



ಈ ಯಂತ್ರಗಳು ಎರಡು ಮಾದರಿಯವು ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಚಿಕ್ಕಣದವು, ಬಾಳಿಕೆ ಉಳ್ಳವು. ಹುಟ್ಟನ್ನು ಧ್ವನಿಸಲು ಯಂತ್ರದಲ್ಲಿ ಬೀಸಣಿಗೆಯನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ, ಬೇರೆ ಬೀಳುತ್ತವೆ. ಈ ಯಂತ್ರಗಳು ಕಳೆದ ಹಂಗಾಮುದಲ್ಲಿ ಬಹು ಬಿಕರಿಯಾಗಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಮಾರುವವರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯವಶ್ಯಕವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ಕೇಳಿಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಕಡಿಮೆ ಇರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟಿ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಕುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಸಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವಂಕಟನರಾವ ಬಿ. ಗಲಗಲಿ,
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ಬಗ್ಗೆ.

ತಿಂಗಳ ಕಾಲಾವಧಿ ಪತ್ರ, ಪತ್ರಿಕೆಗೆ ಬರುವ ಬೆಲೆಯಾಗುವ ದೂರ ಪ್ರತಿದಿವಸ ವಗೈರೆ ಅಲ್ಲದೆ ಇಂಗ್ಲಿಷ ಪ್ರತಿದಿವಸ ಬಳಕೆ ಇದು ಅಣೆ ನೂರಕ್ಕೆ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೆಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಪೈ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಬರೆದು ಕೊಟ್ಟರೆ ಅರ್ಧ ಅಣೆ ದರ ಕಾಲಾವಧಿನ ಬಳಕೆಗೆ ಅಷ್ಟೆ ದರ. ಕಾಯಂ ಜಾಹೀರಾತುಗಳನ್ನು ಕೊಡುವವರು ತಮಗಿನ ಪತ್ರಿಕೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ದೇಶಬಂಧು ದಾಸರ ಚರಿತ್ರೆ	೩ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ವೆಚ್ಚ ಅಪಾಲ ಹಿರ್ಜ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ವಿಜಯ.

ಧಾರವಾಡ ತಾ-೩-೯-೨೭ ನೇ ಇಸ್ವಿ

ಹಿಂದೂ ಮುಸಲಮಾನ ಐಕ್ಯಕ್ಕಾಗಿ ಹಿಂದೂ ಮುಸಲಮಾನರ ಜಾಹೀರನಾಮೆಯು.

ಲಾರ್ಡ ಆಯರ್ವಿನಸಾಹೇಬರು ಸಿಮ್ಲಾದಲ್ಲಿ ಹಿಂದೂ ಮುಸಲಮಾನ ಐಕ್ಯದ ವಿಷಯವಾಗಿ ದೇವದೂತರಂತೆ ಮಾತಾಡುತ್ತಿದ್ದಾಗ, ಕಾನಪೂರ, ಬರೇಲಿ ಪಟ್ಟಣಗಳಲ್ಲಿ ದಂಗೆಗಳಾದವು. ಅಲ್ಲಾಬಾದಿನ ಪಟ್ಟಣಿಗರು ಹರತಾಳ ಮಾಡಿದರು. ಅದರ ಪೂರ್ಣಾಹುತಿಯಾಗಿ ರಾಯಬಹಾದ್ದೂರ ಶಿಂಗರು ಮುಸಲಮಾನರ ಗುಂಡಿನ ಬಾಯಿಗೆ ಬಿದ್ದರು.

ಸಾಹೇಬರ ಭಾಷಣವಾದ ಕೂಡಲೆ ಅಸೆಂಬ್ಲಿ ಮತ್ತು ಕೌನ್ಸಿಲ ಅಫ ಸ್ಟೇಟದ ಹಿಂದೂ ಮುಸಲಮಾನರು ಕಮಿಟಿ ಕೂಡಿ, ಈ ದುಃಸ್ಥಿತಿಯ ಬಗ್ಗೆ ವಿಚಾರ ಪ್ರಾರಂಭಿಸಿದರು. ಮಹಾತ್ಮರು ಲಾರ್ಡ ಸಾಹೇಬರ ಭಾಷಣ ಓದಿ, ಸರಕಾರದ ಪ್ರೇರಣೆಯಿಂದ ಆಗಬೇಕಾದ ಐಕ್ಯದ ದೆಸೆಯಿಂದ ತಮಗೆ ವಿಶೇಷವಾದ ಉತ್ಸಾಹವೆನಿಸುವದಿಲ್ಲ. ತಥಾಪಿ ಯಾವ ಭಾಗದಿಂದಾದರೂ ಈ ಕಲಹ ತಪ್ಪಿದರೆ- ತಮಗೆ ಸಂತೋಷವೆಂದು ಉದ್ಗಾರ ತೆಗೆದಿದ್ದಾರೆ.

ಈ ಪೂರ್ವದಲ್ಲಿ ಮೌಲಾನಾ ಶೌಕತಲ್ಲಿಯವರು ಖಿಲಾಫತ ಕಮಿಟಿಯ ಪರಿಯಿಂದ ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಡಾಕ್ಟರ ಮುಂಜೆಯವರಿಗೆ ಒಂದು ಪತ್ರ ಬರೆದು, ಹಿಂದೂ ಮುಸಲಮಾನ ಕಲಹಾಗ್ನಿಯನ್ನು ಬೇಗನೆ ಶಾಂತ ಮಾಡದಿದ್ದರೆ- ಅದು ಇಬ್ಬರ ನಡುವೆ ಮಹಾಯುದ್ಧದಂತೆ ಭಯಂಕರ ಸ್ವರೂಪ ಧಾರಣ ಮಾಡಬಹುದಾಗಿದೆ. ಅದುದರಿಂದ ಈ ವಿಷಯದ ಕೊನೆಯ ನಿರ್ಣಯ ಮಾಡುವದಕ್ಕಾಗಿ ಬೇಗನೆ ಒಂದು ದಿವಸ ಗೊತ್ತು ಮಾಡಿರೆಂದು ತಿಳಿಸಿದ್ದಾರೆ. ಮತ್ತು ಈ ಪತ್ರವನ್ನು ಸಿಮ್ಲಾದಲ್ಲಿ ಕೂಡಿದ ಮೇಲೆ ಹೇಳಿದ ಕಮಿಟಿಯಲ್ಲಿ ಓದಿ ತೋರಿಸಿದ್ದಾರೆ.

ಈ ಕಮಿಟಿಯವರು ಒಂದು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿ, ತಾವು ಯಾವದೇ ಮತ ನಿರ್ಣಯ ಮಾಡುವ ತನಕ ರಕ್ತಪಾತವನ್ನು ನಿಲ್ಲಿಸಬೇಕೆಂದು ವಿನಂತಿ ಮಾಡಿಕೊಂಡಿದ್ದಾರೆ. ಪರಸ್ಪರ ತಪ್ಪು ತಿಳುವಳಿಕೆ ಧರ್ಮ ದುರಭಿಮಾನ, ಕೊಲೆ, ಅಗ್ನಿಪ್ರಳಯ, ರಕ್ತಪಾತ, ಸಾರ್ವಜನಿಕ ಶಾಂತತಾಭಂಗ ಮುಂತಾದವುಗಳನ್ನು ಹೇಳಿ, ಇವುಗಳ ಅನರ್ಥದ ಬಗ್ಗೆ ಯಾರ ಮೇಲೂ ತಪ್ಪು ಹೊರಿಸದೆ, ಎಲ್ಲರೂ ಸ್ನೇಹಭಾವದಿಂದಲೇ ಇರಬೇಕೆಂದು ಇದರಲ್ಲಿ ಬರೆದಿರುತ್ತಾರೆ.

ರಾಯಲ ಕಮಿಶನ ಮಾತ್ರವಲ್ಲ; ಜಗತ್ತಿನಲ್ಲಿ ಈ ದಂಗೆಗಳು ದುಷ್ಟ ಮತ್ತು ತಿರಸ್ಕರಣೀಯವಾಗಿರುತ್ತವೆ. ಇವು ಹಿಂದುಸ್ಥಾನದ ರಾಷ್ಟ್ರೀಯತ್ವಕ್ಕೆ ಕಲಂಕ ತಂದಿರುತ್ತವೆ. ಆದ್ದರಿಂದ ಇವನ್ನು ನಿಲ್ಲಿಸಿ, ಜಗತ್ತಿನಲ್ಲಿ ಶ್ರೇಷ್ಠವಾದ ಯೋಗ್ಯತೆ ಪಡೆಯಬೇಕೆಂದೂ ಇವರು ಈ ಜಾಹೀರನಾಮೆಯಲ್ಲಿ ಹೇಳಿರುತ್ತಾರೆ.

ಅಸಹಕಾರ ಮತ್ತು ಖಿಲಾಫತದ ಚಳವಳಿಯಲ್ಲಿ ರಾಮ ಮತ್ತು ರಹಿಮರ ನಡುವೆ ಭೇದವಿಲ್ಲವೆನ್ನುವಷ್ಟು ಐಕ್ಯವಾಗಿತ್ತು. ಅದು ಈಗ ಹದಿನೆಂಟು ಕಡೆಗೆ ಹೋಗಿ ಬಿದ್ದಂಥ ಹಠಕವಾಗಿರುತ್ತದೆ. ತಂಜೀಮ ಮತ್ತು ಹಿಂದೂ ಸಂಘಟನೆಯ ಕೋಲಾಹಲಗಳು ದೇಶದ ತುಂಬ ಕೋಲಾಹಲ ಮಾಡಿದವು ಮಹಾತ್ಮರು ಈ ದಂಗೆಗಳು ಶಾಂತವಾಗಬೇಕೆಂದು ೧೮ ದಿವಸಗಳ ಪರ್ಯಂತರ ಮಾಡಿದ ನಿರಾಹಾರದ ಫಲವೇನೂ ಬರಲಿಲ್ಲ. ಆಗ್ಗೆ ಹಿಂದೂ ಮುಸಲಮಾನರು ಕಮಿಟಿ ಕೂಡಿದರು. ಆನಂತರ ಅನೇಕ ಸಾರೆ ಕಮಿಟಿ ಕೂಡಿದರು ಇವುಗಳ ಶ್ರಮವೆಲ್ಲ ಗುಡ್ಡಕ್ಕೆ ಕಲ್ಲು ಹೊತ್ತಂತಾಯಿತು. ದಂಗೆಗಳು ಶಾಂತವಾಗದೆ, ಘೋರ ಧಾರಣ ಮಾಡುತ್ತಿರುವವು. ಇವು ಬೆಳೆಯುವದು ಸರಕಾರಕ್ಕೂ, ಎರಡೂ ಕುಲಗಳ ಮುಖಂಡರಿಗೂ ಲಾಂಛನಾಸ್ಪದವಾಗುವದರಿಂದ, ಇವನ್ನು ನಿಲ್ಲಿಸುವಂತೆ ಮೂವರೂ ಪ್ರಯತ್ನಿಸಬೇಕೆಂದಿದ್ದಾರೆ.

ಹಿಂದೂ ಮುಸಲಮಾನ ಜಾಹೀರ ಪತ್ರಿಕೆಯನ್ನು ತೆಗೆಯುವದರಲ್ಲಿ ಕೆಳಗಿನ ಗೃಹಸ್ಥರು ಪ್ರಮುಖತ್ವವನ್ನು ವಹಿಸಿದ್ದರು.

ಹಿಂದೂ- ಪಂಡಿತ ಮಾಲವಿಯಾ, ಲಾಲಾ ಲಜಪತರಾಯ, ರಾಜಾ ನರೇಂದ್ರನಾಥ, ಡಾಕ್ಟರ ಗೋಕುಲಚಂದ ನಾರಂಗ, ಡಾಕ್ಟರ ಮುಂಜೆ, ಶ್ರೀ. ಕೇಳಕರ, ಲಾಲಾ ರಾಮ.ಶರಣದಾಸ, ರಾಜಾ ರಾಮಪಾಲಸಿಂಗ, ಬ್ಯಾರಿಸ್ಟರ ಜಯಕರ, ಶ್ರೀ. ಶ್ರೀನಿವಾಸ ಅಯ್ಯಂಗಾರ ಮತ್ತು ಸರದಾರ ಜೋಗೇಂದ್ರಶಿಂಗ-

ಮುಸಲಮಾನ- ಮೌ. ಅಲ್ಲಿ ಬಂಧುದ್ವಯ ಡಾ. ಡಾಕ್ಟರ ಅನಸಾರಿ. ಬ್ಯಾರಿಸ್ಟರ ಜಿನ್ನಾ ಮೌ. ಮಹಮ್ಮದ ಯಾಕೂಬ, ನವಾಬ ಸರ ಅಲ್ಲಿ ಜುಲಪಿಕಿರಖಾನ,- ರಾಜಾ ಗಜನಾಫರ ಅಲ್ಲಿಖಾನ, ಸಾಹೇಬ ಕ್ವಾರೆಸಿ, ಮತ್ತು ಮಹಮುದ ಶಾಫಿ,

---

ಹಿಂದೂ ಮುಖಂಡನ ಕೊಲೆ.

—೦—

ಅಲ್ಲಾಬಾದದ ಉಪನಗರವಾದ ಪಿಲಿಬಿಟ್ಟನಲ್ಲಿರುವ ಆನರರಿ ಮ್ಯಾಜಿಸ್ಟ್ರೇಟರಾದ ರಾಯಬಹಾದ್ದೂರ ಶಿಂಗರವರು ದೊಡ್ಡ ವರ್ತಕರಿದ್ದು; ಮಂಗಳವಾರ ರಾತ್ರಿ ಎಂಟು ಹೊಡೆಯುವಾಗ ಅಂಗಡಿಯಿಂದ ಮನೆಗೆ ಹೋಗುತ್ತಿರುವಾಗ ದಾರಿಯಲ್ಲಿ ಇವರನ್ನು ಗುಂಡು ಹಾಕಿ ಕೊಂದರು. ರಾಯಬಹಾದ್ದೂರರು ಹಿಂದೂ ಮಹಾಸಭೆಯ ಪುರಸ್ಕರ್ತರಿದ್ದು ಮೂಲಕ ಮುಸಲಮಾನರ ಕೋಪಕ್ಕೆ ಆಹುತಿಯಾದರು ಕೊಲೆಗಡುಕನು ಕಾಲಿಗೆ ಬುದ್ಧಿ ಹೇಳಿದನು. ಆತನ ಸಹಾಯಕನೆಂದು ಒಬ್ಬ ಮುಸಲಮಾನನನ್ನು ಹಿಡಿದಿದ್ದಾರೆ ಅಲ್ಲಾಬಾದಿನಲ್ಲಿ ಸ್ಮಶಾನ ಯಾತ್ರೆಯ ವಿಧಿಯಾಯಿತು. ೧೫೦೦೦ ಜನರು ಕೂಡಿದ್ದರು. ಈ ಕೊಲೆಯ ದೆಸೆಯಿಂದ ಹಿಂದೂ ಜನರು ಸಂತಾಪಗೊಂಡಿದ್ದಾರೆ.

ಮೈಸೂರಿನ ಅರಮನೆಯಲ್ಲಿ ದ್ರವ್ಯಾಪಹಾರ.

—೦—

ಶ್ರೀಮನ್ಮಹೀಸೂರ ಮಹಾರಾಜರ ಖಾಸಗಿ ಕಚೇರಿಯಲ್ಲಿರುವ ಕಾಮದಾರರು ಅರಮನೆಯ ೨೨ ಸಾವಿರ ರೂಪಾಯಿಗಳನ್ನು ಅಪಹಾರ ಮಾಡಿದ್ದಾರೆಂದು ಬೈಲಿಗೆ ಬಂದು ಮೂವರನ್ನು ದಸ್ತಗಿರ ಮಾಡಿದ್ದಾರೆ. ಅವರ ಹೆಸರುಗಳು:-

೧ ವಾಮನಕಾವಲ್ಯೆ ರಾಮಯ್ಯ, ಸಿರಸ್ತೆದಾರ, ದಪ್ತರ ಶಾಖೆ

೨ ಸುಬ್ಬಣ್ಣ ಖಜಾನಿಯ ಸಿರಸ್ತೇದಾರ

೩ ಲಕ್ಷ್ಮಣರಾವ ಗುಣಿಟ್ಟೆ ಸರಾಫ

ಲೋಕಮಾನ್ಯರ ಪುತ್ರರ ಘಾತಪಟುರಿಯು.

ಲೋಕಮಾನ್ಯರ ಪುತ್ರರು ಕೇಸರಿಯ ಪಂಚರ ಮೇಲೆ ಕೆಲಸ ನಡಿಸಿದ ನಕ್ಕೆ, ಪ್ರಕರಣವು ಪೋಲಿಸಸಾಹೇಬರ ತನಕ ಹೋಗಿದ್ದನ್ನು ಈ ಮೊದಲು ಬರೆದಿದ್ದೇವೆ ಈ ಸಂಗತಿಯು ಸಂಭವಿಸಿದ ನಂತರ ಲೋಕಮಾನ್ಯರ ಹಿರಿಯ ಮಗನು ಗಾಯಕವಾಡವಾಡೆಯ ಕಲಬಾಗಿಲದ ಬೇಗತಿತ್ತಿ, ಕಾವಲುಗಾರನನ್ನು ಹೊಡೆದನು ಈ ಬಗ್ಗೆ ಇವನ ಮೇಲೆ ಫಿರ್ಯಾದಿಯಾಯಿತು. ಮ್ಯಾಜಿಸ್ಟ್ರೇಟರು ಈತನಿಗೆ ಬುದ್ಧಿ ಹೇಳಿದರು. ಅತಿಕ್ರಮಣ ಮಾಡುವದಿಲ್ಲೆಂದೂ, ಕಾವಲಗಾರನನ್ನು ಹೊಡೆಯುವದಿಲ್ಲೆಂದೂ ಈತನು ಈಗ ಮಚ್ಚಲಿಕಾ ಮುಖಾಂತರ ಬರಕೊಟ್ಟಿರುತ್ತಾನೆ.

ಧಾರವಾಡ ಜಿ. ಪ್ರಾ. ಶಿಕ್ಷಕ ಸಂಘ ಹುಬ್ಬಳ್ಳಿ ಸಾಧಾರಣ ಸಭೆಯು.

—೦—

ಈ ಮೊದಲೇ ಪ್ರಸಿದ್ಧಿಸಿದ ಮೇರೆಗೆ ತಾ|| ೨೮-೮-೨೭ ನೇ ಇಸ್ವಿ ದಿವಸ ಇಲ್ಲಿಯ ಸುಪ್ರಸಿದ್ಧ ವಕೀಲರಾದ ಶ್ರೀಯುತ ವ್ಹಿ. ಬಿ ಪಾಟೀಲ ಇವರ ಅಧ್ಯಕ್ಷತೆಯ ಕೆಳಗೆ ಜರಗಿತು. ಈ ಸಭೆಯಲ್ಲಿ ಎಲ್ಲ ನಿರ್ಣಯಗಳು ಸರ್ವಾನುಮತದಿಂದ ಪಾಸಾಗಿದ್ದು ಅವುಗಳಲ್ಲಿ ಮಹತ್ವದ ಕೆಲವು ನಿರ್ಣಯಗಳನ್ನು ಸಂಕ್ಷೇಪವಾಗಿ ಈಗ ಪ್ರಸಿದ್ಧಿಸಿರುವೆವು.

೧ ದಿವಾನ ಬಹಾದ್ದೂರ ದೊಡ್ಡ ಶ್ರೀನಿವಾಸರಾಯರು ಪ್ರಾಥಮಿಕ ಶಿಕ್ಷಕರ ಪಗಾರದ ವಿಷಯವಾಗಿ ಅಂದರೆ ಈ ಶಿಕ್ಷಕರಿಗೆ ದೊರೆಯುತ್ತಿರುವ ಪಗಾರವು ಬಹಳ ಹೆಚ್ಚು ಅದೆ. ಅದನ್ನು ಕಡಿಮೆ ಮಾಡಬೇಕು. ಮತ್ತು ಡ್ಯೂಟಿ ಅಲಾವನ್ಸನ್ನು ತೆಗೆದು ಹಾಕಬೇಕು. ಇತ್ಯಾದಿಯಾಗಿ ಸರಕಾರಕ್ಕೆ ಪತ್ರ ಬರೆದಿರುವರು ಅದು ಅತಿ ಅಯೋಗ್ಯವದೆ. ಅದರಿಂದ ಅತ್ಯಂತ ವಿಷಾದವಾಗಿ ಈ ಸಭೆಯು ಅದನ್ನು ತೀವ್ರ ನಿಷೇಧಿಸುತ್ತದೆ.

೨ ಡ್ಯೂಟಿ ಅಲಾವನ್ಸನ್ನು ಕೆಲವು ಸ್ಥಾನಿಕ ಸಂಸ್ಥೆಯವರು ತಮ್ಮ ಹದ್ದಿಯ ಶಿಕ್ಷಕರಿಗೆ ಕೊಟ್ಟಿರುವರು. ಆದರೆ ಧಾರವಾಡ ಜಿಲ್ಹಾ ಲೋಕಲ ಬೋರ್ಡ ಈ ಸಂಸ್ಥೆಗಳು ತಮ್ಮ ಹದ್ದಿಯ ಶಿಕ್ಷಕರಿಗೆ ಸದರ ಡ್ಯೂಟಿ ಅಲಾವನ್ಸನ್ನು ಈ ವರೆಗೂ ಕೊಟ್ಟಿರುವದಿಲ್ಲ. ಕಾರಣ ಸರಕಾರದವರು ಅದನ್ನು ತೀವ್ರ ಕೊಡಿಸುವ ವ್ಯವಸ್ಥೆಯನ್ನು ಮಾಡಬೇಕು.

೩ ಧಾರವಾಡ ಟ್ರೇನಿಂಗಸ್ಕೂಲನ್ನು ಟ್ರೇನಿಂಗ ಕಾಲೇಜವನ್ನಾಗಿ ಮಾಡಿ ಸಂಸ್ಕೃತ, ಬೀಜಗಣಿತ, ಘಾರ್ಸಿ ಮುಂತಾದ ಯಾವತ್ತು ವಿಷಯಗಳನ್ನು ಮೊದಲಿನಂತೆಯೇ ಕಲಿಸತಕ್ಕದ್ದು.

೪ ಧಾರವಾಡ ಜಿಲ್ಹೆಯಲ್ಲಿ ೧೦೦ ಕ್ಕೆ ೮೦ ಕ್ಕಿಂತ ಹೆಚ್ಚು ಜನರು ಒಕ್ಕಲತನದಿಂದ ಜೀವಿಸುವವರಿದ್ದು ಆ ಜನರ ಉದ್ಯೋಗದ ಉನ್ನತಿಗಾಗಿ ಧಾರವಾಡದಲ್ಲಿ ಈಗಿರುವ ಒಕ್ಕಲತನದ ಖಾತೆಯ ಸರಕಾರೀ ನೌಕರರಿಂದಲೂ ಅಲ್ಲಿರುವ ಸರಕಾರಿ ಶೇತಕಿ ಫಾರ್ಮಿನಿಂದಲೂ ಟ್ರೇನಿಂಗ ಕಾಲೇಜದ (ಒಂದು ಭಾಗ) ಹಿಂದಿದ್ದ ದೊಡ್ಡ ಕಟ್ಟಡದಲ್ಲಿ ಒಂದು ಕನ್ನಡ ಒಕ್ಕಲತನದ ಕಾಲೇಜವನ್ನು ಸ್ವಲ್ಪ ಖರ್ಚಿನಲ್ಲಿ ತೆಗೆಯಲಿಕ್ಕೆ ಶಕ್ಯವಿರುವದರಿಂದ ಈ ಬಗ್ಗೆ ರಾವಸಾಹೇಬ ಶಿರಹಟ್ಟಿಯವರು ಸರಕಾರಕ್ಕೆ ಸೂಚಿಸಿದ ಮೇರೆಗೆ ಒಂದು ಒಕ್ಕಲತನದ ಕನ್ನಡ ಕಾಲೇಜವನ್ನು ಬೇಗನೆ ಸ್ಥಾಪಿಸಬೇಕೆಂದು ಈ ಸಭೆಯು ಸರಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತದೆ.

೫ ಮುಂಬಯಿ ಕಾಯಿದೆ ಕೌನ್ಸಿಲ್ ಸಭಾಸದರು ಶಿಕ್ಷಕರ ಹಿತವನ್ನು ಅನುಲಕ್ಷಿಸಿ ಸಾತೆ ಪರಾಂಜಪೆ ಸ್ಕೇಲನ್ನು ಕೊಡಬೇಕೆಂದು ಈ ಮೊದಲೇ ಠರಾವು ಪಾಸ ಮಾಡಿದಾಗ್ಯೂ ಅದು ಈ ವರೆಗೂ ಅಮಲಿನಲ್ಲಿ ಬರಲಿಲ್ಲವಾದ್ದರಿಂದ ಸರಕಾರದವರು ಸದರ ಸ್ಕೇಲನ್ನು ತೀವ್ರ ಅಮಲಿನಲ್ಲಿ ತರಬೇಕೆಂದು ಈ ಸಭೆಯು ಸೂಚಿಸುತ್ತದೆ.

೬ ವ್ಹ. ಫಾ. ಪರೀಕ್ಷೆಯನ್ನು ಪಾಸಾಗಿ ಶಾಲಾಖಾತೆಯಲ್ಲಿ ೧೫ ವರ್ಷ ಉತ್ತಮ ಕೆಲಸ ಮಾಡಿದ್ದರಿಂದ ಶಿಕ್ಷಕರಿಗೆ ಮೊದಲಿನಂತೆ ಮೊದಲನೇ ವರ್ಗದ ಲಾಯಖೀ ಸರಟಿಫಿಕೇಟನ್ನು ಕೊಡುತ್ತಾ ಹೋಗಬೇಕೆಂದು ಈ ಸಭೆಯು ವಿನಂತಿ ಇದೆ.

೭ ಶಾಲಾಖಾತೆಯು ನಿಜವಾಗಿ ಬೋರ್ಡಿನ ವಶಕ್ಕೆ ಹೋದ ತಾರೀಖಿನ ಮೊದಲು ನವಕರಿಯಲ್ಲಿ ಸೇರಿದ ಟ್ರೇಂಡ ಹಾಗೂ ಅಂಟ್ರೇಂಡ ಶಿಕ್ಷಕರನ್ನು ಹಳೇ ಶಿಕ್ಷಕರಂತೆ ಸರಕಾರಿ ನೌಕರರೆಂದು ಎಣಿಸಿ ಹಳೇ ಶಿಕ್ಷಕರ ಸ್ಕೇಲು ಬಗತಿ ಮುಂತಾದವುಗಳನ್ನು ಕೊಡತಕ್ಕದ್ದು. ಹಾಗೂ ಇತ್ತೀಚಿಗೆ ನೌಕರಿಯಲ್ಲಿ ಸೇರಿದ ಹಾಗು ಸೇರುವ ಯಾವತ್ತು ಶಿಕ್ಷಕರ ಸಂಬಳ ಸ್ಕೇಲು ಸಹ ಬೇರೆಯಾಗಿರದೆ ಹಳೇ ಶಿಕ್ಷಕರ ಸ್ಕೇಲೇ ಇರತಕ್ಕದ್ದು. ಇತ್ಯಾದಿ

೮ ಗುಜರಾಥ ಪ್ರಾಂತದ ದುಃಖಪೀಡಿತರಾದ ಜನರಿಗೆ ಎಲ್ಲ ಶಿಕ್ಷಕರು ಕೈಲಾದಷ್ಟು ಸಹಾಯವನ್ನು ಮಾಡಬೇಕು. ಹಾಗು ಸಂಘದಿಂದ ೨೫ ರೂಪಾಯಿಗಳನ್ನು ಸದರ ಫಂಡಿಗೆ ಕೊಡತಕ್ಕದ್ದು. ಹಾಗು ಸಭೆಯಲ್ಲಿ ತಾತ್ಕಾಲಿಕ್ಕೆ ಕೂಡಿದಂಥ ಹಣವನ್ನು ಸಹ ಸೇಕ್ರೆಟರಿಯವರು ಸಂಘದ ಮುಖಾಂತರವಾಗಿ ಕಳಿಸತಕ್ಕದ್ದು.

ಹುಬ್ಬಳ್ಳಿ } ಸಿ ಫ. ಕಟ್ಟೀಮನಿ
೧-೯-೨೭ } ಸೇಕ್ರೆಟರಿ
ಧಾ. ಜಿ ಪ್ರಾ. ಶಿಕ್ಷಕಸಂಘ.
ಹುಬ್ಬಳ್ಳಿ

ಹೈದರಾಬಾದಿನಲ್ಲಿ ಒಬ್ಬ ಮಿ ದೂ ಹಾಯ ಕೋರ್ಟಿನ ವಕೀಲನು ತನ್ನ ಹೆಂಡತಿಗೆ ಉರ್ದು ಕಲಿಸುವದಕ್ಕಾಗಿ ಒಬ್ಬ ಮೌಲ್ವಿ ಮತ್ತು ಸಂಸ್ಕೃತ ಕಲಿಸುವದಕ್ಕಾಗಿ ಒಬ್ಬ ಪಂಡಿತನನ್ನು ನೇಮಿಸಿದರು. ಇವರು ವಿದ್ಯೆ ಬುದ್ಧಿ ಹೇಳುವದರ ಬದಲಾಗಿ ಇವಳಿಗೆ ತಮ್ಮ ಕೂಡ ಓಡಿಹೋಗುವ ವಿದ್ಯೆ ಕಲಿಸತೊಡಗಿದರು. ಕೊನೆಯಲ್ಲಿ ಹೆಂಡತಿಯು ಪಂಡಿತನೊಡನೆ ವಸ್ತ್ರ ಒಡವೆ ಸಹಿತವಾಗಿ ಪಲಾಯನ ಹೇಳಿಸಿದಳು.

ಧಾರವಾಡ ಕರ್ನಾಟಕ ಹಾಯಸ್ಕೂಲಿನ ಗಣಪತಿಯ ಮಹೋತ್ಸವ.

—೦—

(ಬರೆದು ಬಂದದ್ದು)

ಪ್ರತಿ ವರ್ಷದಂತೆ ಈ ಸಾರೆಯೂ ಶ್ರೀ ಗಣೇಶೋತ್ಸವವು ಶಾಲೆಯಲ್ಲಿ ಆರಂಭವಾಗಿದೆ ಆದರೆ ಪ್ರತಿಸಾರೆಗಿಂತ ಈ ವರುಷದ ವಿಶೇಷ ಮಾತೊಂದುಂಟು. ವಿನಾಯಕನು ವಿದ್ಯಾಧಿದೇವತೆ ಆಗಿದ್ದರಿಂದ ವಿದ್ಯಾಲಯದ ಗಣೇಶೋತ್ಸವ ಇದುದರಿಂದ ವಿನಾಯಕನ ಉತ್ಸವದಲ್ಲಿ ವಿದ್ಯಾವಿಷಯಕ ವಿಶೇಷ ಸಂಗತಿಗಳೇನೂ ಜರಗದಿದ್ದರೆ ಅದು ಹೆಸರಿಗೆ ಮಾತ್ರವೇ ಸರಿ. ಈ ಕಾರಣದಿಂದಲೇ ಈ ಸಲದ ಶಾಲೆಯ ಉತ್ಸವದಲ್ಲಿ ಉಪನ್ಯಾಸಗಳ ಯೋಜನೆಯನ್ನು ಮಾಡಿದೆ. ಆ ಮೇರೆಗೆ ಇಂದು (೧-೯-೨೭) ಮೊದಲನೆ ಗೊತ್ತಾದ ಮೇರೆಗೆ ಲಿಂಗರಾಜ ಹಾಯಸ್ಕೂಲ ಮುಖ್ಯಾಧ್ಯಾಪಕರಾದ ಶ್ರೀ ಬಸವನಾಳರವರ ಉಪನ್ಯಾಸವಾಯಿತು. ಅನಂತರ ಶ್ರೀ ಗುತ್ತೀಕರ ಸಬ್‌ಜಜ್, ಡಾ. ಭಟ್ಟ ಪ್ರೊಫೆಸರ, ಹಾಗೂ ಪ್ರಿನ್ಸಿಪಾಲ ಹಿಂಡ್ಸ್ ಇವರ ಉಪನ್ಯಾಸಗಳೂ ಅನುಕ್ರಮದಿಂದ ೨, ೩ ೪ ನೆಯ ತಾ. ಗೆ ಆಗತಕ್ಕವು ಇವೆ. ಪ್ರಾರಂಭಕ್ಕೆ ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ ಶಾಂತಾ ಮೋಹನರಾವ ಪುಣೇಕರ ಇವರು ವಿದ್ಯಾಸ್ಥಾನಗಳಲ್ಲಿ ವಿದ್ಯಾಪತಿಯಾದ ಶ್ರೀ ಗಣನಾಯಕನ ಉತ್ಸವ ಜರಗಿಸುವದು ಯುಕ್ತವೆಂದು ಮತ್ತು ಈ ಕಾರ್ಯದಲ್ಲಿ ಪ್ರಾರಂಭಕ್ಕಾಗಿ ಪರಿಸರ್ವಾಪ್ತಿಗೂ ಇಬ್ಬರು ಗಣಪತಿಗಳೇ (ಕರ್ನಾಟಕ ಲಿಂಗಾಯತ ಹಾಯಸ್ಕೂಲಿನ ಮತ್ತು ಕರ್ನಾಟಕ ಕಾಲೇಜದ ಮುಖ್ಯಾಧ್ಯಾಪಕರೇ) ಲಭಿಸಿದ್ದು ನಮ್ಮೆಲ್ಲರ ಭಾಗ್ಯವೆಂದೂ ಹೇಳಿ ಶ್ರೀ. ಬಸವನಾಳ ಇವರಿಗೆ ವ್ಯಾಖ್ಯಾನವನ್ನು ಪ್ರಾರಂಭಿಸುವದಕ್ಕೆ ವಿನಂತಿಸಿದರು.

ಶ್ರೀ ಬಸವನಾಳ ಇವರು ವಿದ್ಯಾರ್ಥಿಗಳಿಗೆ ಅವರ ಕರ್ತವ್ಯದ ಸಂಬಂಧದಿಂದ ಸುಂದರವಾದ ಉಪದೇಶ ಮಾಡಿದರು. ಆಗ ಅವರು ಹೇಳಿದ್ದೇನಂದರೆ “ ವಿದ್ಯಾರ್ಥಿಗಳು ವಿದ್ಯಾಧಿಪತಿಯಾದ ಶ್ರೀ ಸಿದ್ಧಿವಿನಾಯಕನನ್ನೇ ತಮ್ಮ ಆದರ್ಶವೆಂದು ಇಟ್ಟುಕೊಳ್ಳಬೇಕು. ಆಜನ್ಮ ವಿದ್ಯಾರ್ಥಿಗಳಾಗಿರಬೇಕು. ವಿದ್ಯಾರ್ಥಿಯಿದ್ದಾಗಲೇ ಉದಾತ್ತ ಧ್ಯೇಯಗಳನ್ನಿಟ್ಟುಕೊಂಡು ಅದನ್ನು ಆಚರಣೆಯಲ್ಲಿ ತರಲು ಆಜನ್ಮ ಹೋರಾಡಬೇಕು. ವಿದ್ಯಾರ್ಥಿಗಳಿದ್ದಾಗ ಭಾವನೆಗಳು ಒಳ್ಳೇ ಜಾಗೃತವಾಗಿರುವದರಿಂದ ಆಗ ಮಾತ್ರ ಅತನು ದೊಡ್ಡ ಗುರಿಗಳನ್ನು ಇಟ್ಟುಕೊಳ್ಳಬಲ್ಲನು. ವಿದ್ಯಾರ್ಥಿಗೆ ತನ್ನ ಶಾಲೆ ತನ್ನ ಶಿಕ್ಷಕರ ಬಗ್ಗೆ ಸಂಪೂರ್ಣ ಅಭಿಮಾನವಿರಬೇಕು. ಆದರೆ ಅದು ದುರಭಿಮಾನವಾದಂತೆ ಎಚ್ಚರದ

ಗಣೇಶ ಸಂಸ್ಥಾ ಕನ್ನಡ ಗಂಡು ಹುಡುಗರ ೩ ನೇ ನಂಬರ ಶಾಲಾ ಹುಬ್ಬಳ್ಳಿ.

ಇವರ ಕಡೆಯಿಂದ- ನಮ್ಮ ಶಾಲೆಯ ವಿದ್ಯಾರ್ಥಿಗಳ ಪತಿಯಿಂದ ಶ್ರೀ ಗಜಾನನೋತ್ಸವವು ಬುಧವಾರ ತಾ|| ३१-८-೨೭ ರಿಂದ ರವಿವಾರ ತಾ|| ४-९-೨೭ ರ ವರೆಗೆ ೫ ದಿವಸ ಜರಗುವದು. ಅದರಲ್ಲಿ ವ್ಯಾಖ್ಯಾನ, ಪುರಾಣಶ್ರವಣ, ಮೇಳಗಳ ಸಮ್ಮೇಲನ ಮೊದಲಾದವುಗಳು ಹೋದ ವರ್ಷದಂತೆ ಈ ವರ್ಷವೂ ಏರ್ಪಡಿಸಲ್ಪಟ್ಟಿವೆ. ನಿನ್ನಿನ ದಿವಸ ಅಂದರೆ ಬುಧವಾರ ತಾ|| ३१-८-೨೭ ನೇ ದಿವಸ ಮುಂಜಾನೆ ೮|| ಘಂಟೆಗೆ ಸ್ಕೌಟ ಮೆರವಣಿಗೆಯಿಂದ ಗಣೇಶ ಮಂಡಳ ಹುಬ್ಬಳ್ಳಿ, ಕ್ಷತ್ರಿಯಸಂಘ, ರೇಣುಕಸಂಘ, ಮೂರುಸಾವಿರ ಗುರುಸಿದ್ಧೇಶ್ವರ ವಿದ್ಯಾರ್ಥಿಗಳ ಮೇಳಗಳ ಪಲ್ಲಕ್ಕಿಗಳು ಹೊರಟು ಸುಮಾರು ११ ೧०|| ಗಂಟೆಗೆ ನಮ್ಮ ಶಾಲೆಗೆ ಬಂದು ಮುಟ್ಟಿದವು. ಮಧ್ಯಾಹ್ನದಲ್ಲಿ ೧ ಗಂಟೆಗೆ ಶಾಸ್ತ್ರೋಕ್ತ ಪೂಜೆಯಾಯಿತು. ಆಮೇಲೆ ಸಂಜೆಯ ೫|| ಘಂಟೆಗೆ ವೆ|| ಶಾ|| ತ್ರಿವಿಕ್ರಮಶಾಸ್ತ್ರಿಗಳ ಸ್ಯಮಂತಕೋಪಾಖ್ಯಾನ ವ ಪುರಾಣಶ್ರವಣವಾಯಿತು ಆ ಕಾಲಕ್ಕೆ ಮೆ. ಸ್ಕೂಲ ಬೋರ್ಡ ಚೇರಮನ್‌ಸಾಹೇಬರು ಮೊದಲಾದ ಸಭ್ಯ ಗೃಹಸ್ಥರ ಆಗಮನ ವಾಗಿತ್ತು. ನಮ್ಮ ಸಂಸ್ಥೆಯು ಹೋದ ವರ್ಷ ಸ್ಥಾಪನೆಯಾಗಿ ಈ ವರ್ಷವೂ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಎಲ್ಲ ಕೆಲಸಗಳು ಚನ್ನಾಗಿ ಜರುಗಿದವು. ಈ ಪ್ರಕಾರ ನಡೆಯುವದು. ನಮ್ಮ ಭಾವೀ ರಾಷ್ಟ್ರ ಸ್ಫೂರ್ತಿಯ ಶುಭಚಿನ್ಹವೆಂದು ನಾವು ತಿಳಿಯುತ್ತೇವೆ ಮತ್ತು ಪ್ರತಿ ದಿವಸದ ಪ್ರಸಿದ್ಧ ಪತ್ರಿಕೆಯಂತೆ ಶ್ರೀಯುತ ವ್ಹಿ. ಬಿ ಬೆಳಗಂಗಡಿ, ಶ್ರೀಯುತ ಸಿ ದ. ಪಾಪಟಿ, ಶ್ರೀಯುತ ಕಲಬುರ್ಗಿ ಮಾಸ್ತರ ವ್ಹಾ. ಹಾಯಸ್ಕೂಲ ಇವರ ವ್ಯಾಖ್ಯಾನವು ಕ್ರಮವಾಗಿ ಸದ್ಯದ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಕರ್ತವ್ಯ ಭಕ್ತಿ, ಕರ್ನಾಟಕದ ಏಳಿಗೆ ಈ ವಿಷಯಗಳ ಮೇಲೆ ಆಗುವವು. ಕಡೆಯ ದಿವಸ ಎಲ್ಲ ಸಂಸ್ಥೆಗಳ ಮೇಳಗಳ ಸಮ್ಮೇಲನವಾಗಿ ಗಜಾನನ ವಿಸರ್ಜನವಾಗುವದು.

ಕಾರ್ಯದರ್ಶಿ
ಗಣೇಶ ಸಂಸ್ಥಾ ಕ. ಗ. ಹು.
೩ ನೇ ನಂ. ಶಾಲಾ ಹುಬ್ಬಳ್ಳಿ

ನಿಜಾಂವು ರಾಜ್ಯಕ್ಕೆ ಸೇರಿದ ಹಿಂದೂ ಧರ್ಮ ಗ್ರಂಥಗಳಲ್ಲಾದ ಶೀಖ ಮತ್ತು ಮುಸಲಮಾನ ಧರ್ಮದ ಚರ್ಚೆ ಮಾಡುವದಕ್ಕಾಗಿ ನಿಜಾಮಸಾಹೇಬರು ಮೂವರದೊಂದು ಕಮೀಶನ ನೇಮಿಸಿದ್ದಾರೆ. ಮೆ. ಅವಗನಸ್ಟಾಂಗ, ಜಡ್ಜ ಗಿರಿರಾವ ಮತ್ತು ನವಾಬ ಸಾದತಜಂಗರು ಮೆಂಬರರಾಗಿದ್ದಾರೆ

ನೋಟೀಸು.

ತಿ|| ರಾ|| ರಾ|| ಸಂಗಪ್ಪ ಕರಿಯಪ್ಪ ಕರಡಿ ಸಾಕೀನ ಅಲದಕಟ್ಟಿ ತಾಲೂಕ ರಾಣೇಬಿನ್ನೂರ ಇವರಿಗೆ-

ಕೆಳಗೆ ಸಹೀ ಮಾಡುವ ಗುರುಶಾಂತಪ್ಪ ಬಿನ್ನ ಮಲ್ಲಪ್ಪ ಓಂಗೌಂಡರ ಸಾಕೀನ ರಾಣೇಬಿನ್ನೂರ ಈತನು ನಿಮಗೆ ನೋಟೀಸಿನಿಂದ ತಿಳಿಸುವದೇನಂದರೆ-

ನೀವು ನನಗೆ ಹೆಣ್ಣು ಕೊಟ್ಟ ಮಾವಂದಿರಾಗಬೇಕು. ನಿಮ್ಮ ಅಡಚಣೆಯ ದೆಸೆಯಿಂದ ನಾನು ಎರಡನೆಯವರಲ್ಲಿ ದೇಣೆ ಮಾಡಿ, ಎಂಟು ನೂರು ರೂಪಾಯಿ ತಂದು ಕೊಟ್ಟೆ. ನೀವು ಖಾಸ ಮಾವನಾದ್ದರಿಂದ ನಾನು ನಿಮ್ಮಿಂದ ಕಾಗದ ವಗೈರೆ ಬರಸಿಕೊಳ್ಳಲಿಲ್ಲ ನೀವು ನನ್ನ ರಕಮು ತಿರುಗಿ ಕೊಡಬೇಕೆಂದು ನಾನು ತಗಾದಿ ಹಚ್ಚಲು ನೀವು ನನ್ನ ಮೇಲೆ ತಿರುಗಿ ಬಿದ್ದು, ನನ್ನ ಅಪಮಾನವಾಗುವಂಥ ಮತ್ತು ಜನರಲ್ಲಿ ನನ್ನ ಪತ್ತು ಹಾರುವಂಥ ನೋಟೀಸನ್ನು ಹುಬ್ಬಳ್ಳಿಯ ಲೋಕಮತದಲ್ಲಿ ಪ್ರಸಿದ್ಧ ಮಾಡಿರತೀರಿ ನೀವು ಈ ನೋಟೀಸನ್ನು ಪರತ ತಕ್ಕೊಳ್ಳದಿದ್ದರೆ- ಜನರಲ್ಲಿ ನನ್ನ ಬಗ್ಗೆ ವಿಪರೀತ ಗ್ರಹ ಸಮಜೂತಾಗಿ, ನಾನು ವ್ಯವಹಾರ ಉದ್ದಿಮೆ ಮಾಡುವದಕ್ಕೆ ಧಕ್ಕೆ ಹತ್ತುತ್ತದೆ. ಕಾರಣ ನೀವು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಸದರ ನೋಟೀಸಿನಲ್ಲಿ ಬರೆದ ದುಷ್ಟ ಶಬ್ದಗಳನ್ನು ಪರತ ತಕ್ಕೊಂಡು ಬೇರೊಂದು ನೋಟೀಸು ಛಾಪಿಸಬೇಕು. ಇಲ್ಲವಾದರೆ- ಈ ಸಂಬಂಧವಾಗಿ ಮತ್ತು ನಿಮ್ಮಿಂದ ಬರತಕ್ಕ ರಕಮಿನ ಸಂಬಂಧವಾಗಿ ನಿಮ್ಮ ಮೇಲೆ ಕಾಯದೆ ಪ್ರಕಾರ ಇಲಾಜ ಮಾಡುವೆನು. ನೋಟೀಸು ಪರತ ತಕ್ಕೊಳ್ಳುವಾಗ ನನ್ನ ರೂಪಾಯಿ ನನಗೆ ಬಡ್ಡಿ ಸಹಿತ ಕೊಟ್ಟು ನನ್ನಿಂದ ಪಾವತಿ ಪಡಕೊಳ್ಳಬೇಕು ಈ ನೋಟಿಸಿನ ಖರ್ಚು ನಿಮ್ಮ ಮೇಲೆ ಬೀಳುವದು ತಾ. ೩-೯-೨೭ ಇಸ್ವಿ

ಗುರುಶಾಂತಪ್ಪಾ ಬಿನ್ ಮಲ್ಲಪ್ಪಾ ಓಂಗೌಂಡ್ರ ಸಾ|| ರಾಣೇಬಿನ್ನೂರ ಬಣಕಾರ.

ಜಾಹೀರ ನೋಟೀಸು.

—o—

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವ ಮರಿತಮ್ಮಪ್ಪಾ ತಂದಿ ಪರಸಪ್ಪಾ ತಳವಾರ ಲಕಮಾಪೂರ ತಾಲೂಕ ಧಾರವಾಡ ಈತನು ಈ ಜಾಹೀರ ನೋಟೀಸಿನಿಂದ ಪ್ರಸಿದ್ಧ ಮಾಡುವದೇನಂದರೆ—

ನಾನು ೧೯೨೦ನೆಯ ಇಸವಿಯ ಜುಲೈ ತಿಂಗಳ ೨೨ನೇ ತಾರೀಖು ಮತ್ತು ಅದೇ ಇಸವಿಯ ೩ಲ ಆಗಸ್ಟ ಮತ್ತು ಅಕ್ಟೋಬರ ೧೩ ಈ ಪ್ರಕಾರ ಮೂರು ತಾರೀಖುಗಳಲ್ಲಿ ನನ್ನ ಹೆಂಡತಿಯಾದ ತುಂಗಾ ಈಕೆಯ ಮೇಲೆ ಧಾರವಾಡ ವಿಜಯ ಪತ್ರದಲ್ಲಿ ನೋಟೀಸು ಮಾಡಿ ಫಾರೀಕತ ಕೊಟ್ಟಿದ್ದೆನು. ಆದರೆ ಸದರ ನನ್ನ ಹೆಂಡತಿ ತುಂಗಾ ಈಕೆಯು ಉತ್ತಮ ರೀತಿಯಿಂದ ನಡೆದು ಸಂಭಾವಿತಳಾಗಿರುತ್ತಾಳೆಂದು ನನ್ನ ಹಾಗು ನನ್ನ ಕುಟುಂಬದವರ ಖಾತ್ರಿಯಾದ್ದರಿಂದ ಈಗ ಅಂದಾಜು ಆರು ತಿಂಗಳ ಹಿಂದೆ ಆಕೆಯನ್ನು ನನ್ನ ಮನೆಯಲ್ಲಿ ಕರಕೊಂಡು ಆಕೆಯ ಕೂಡ ಪ್ರಪಂಚ ಮಾಡುತ್ತಾ ಇದ್ದೇನೆ. ಈಗ ಆಕೆಯು ನನ್ನಾಗರದಿಂದಲೇ ಗರ್ಭಿಣಿಯಾಗಿ ಎರಡು ತಿಂಗಳಾಗಿರುತ್ತದೆ. ಆಕೆಗೆ ನನ್ನ ಮೊದಲಿನ ನೋಟೀಸುಗಳ ಬಾಧಾ ತಟ್ಟಬಾರದೆಂದು ಮತ್ತು ಈಕೆಯ ಹೊಟ್ಟೆಯಿಂದಾಗುವ ಸಂತತಿಯು ನನ್ನದೇ ಆಗಿ, ಅದಕ್ಕೆ ವಾರಸಾ ಹಕ್ಕು ಹುಟ್ಟಬೇಕೆಂದು ಒಳ್ಳೇ ಉದ್ದೇಶದಿಂದ ನಾನು ಇಂದು ಈ ಜಾಹೀರ ನೋಟೀಸು ಪ್ರಸಿದ್ಧ ಮಾಡಿದ್ದೇನೆ ಈ ಜಾಹೀರ ನೋಟೀಸಿನಿಂದ ನಾನು ಮೊದಲು ಕೊಟ್ಟಂಥ ಯಾವತ್ತು ನೋಟೀಸುಗಳು ರದ್ದು ಇರುತ್ತವೆಂದು ತಿಳಿಯಬೇಕು. ಅವುಗಳು ಇಂದಿನಿಂದ ಸದರಿಯ ಬಳಿಗೆ ಯಾವ ರೀತಿಯಿಂದಲೂ ಬಾಧಿಸಲಾರವು ಮತ್ತು ಈಕೆಯ ಹೊಟ್ಟೆಯಿಂದ ಹುಟ್ಟುವ ಕೂಸುಗಳಿಗೆ ಜನನ ರಜಿಸ್ಟರದಲ್ಲಿ ಜನಕ ತಂದಿ ಎಂದು ನನ್ನ ಹೆಸರು ಹಚ್ಚಿಸುವೆನು. ಮತ್ತು ಒಬ್ಬ ಹೆಂಡತಿಗೆ ಒಂದು ಕುಟುಂಬದಲ್ಲಿ ಧರ್ಮಶಾಸ್ತ್ರ ಹಾಗು ಕಾಯದೆಯಿಂದ ಇರತಕ್ಕಂಥ ಎಲ್ಲ ಹಕ್ಕು ಬಾಧ್ಯತೆಗಳು ಸದರ ತುಂಗಾ ಈಕೆಗೆ ಇರುತ್ತವೆಂದು ನಾನು ಆತ್ಮಸಂತೋಷದಿಂದ ಈ ನೋಟೀಸ ಮುಖಾಂತರ ಜಾಹೀರ ಮಾಡುತ್ತೇನೆ. ತಾ|| ೩-೯-೨೭.

(^) ಈ ಎಡಗೈ ಹೆಬ್ಬಟ್ಟಿನ ಗುರ್ತಾ ಮರಿತಮ್ಮಪ್ಪಾ ತಂದಿ ಪರಸಪ್ಪಾ ತಳವಾರ ಈತನ ಕೈದು ಇರುತ್ತದೆ

ಚಂದಾದಾರರಿಗೆ ಸೂಚನೆ.

—o—

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ಪಾರ ಪಕ್ಷದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ವ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N.B· 1L,3

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ರವಿವಾರ ತಾರೀಖು ೪ ನೇ ಸಪ್ಟಂಬರ ೧೯೨೭ (ಸಂಚಿಕೆ ೧೯೦

ಕಿರ್ಲೋಸ್ಕರ ಶೇಂಗಾ [ಬೈಮೂಗು] ಒಡೆಯುವ ಯಂತ್ರಗಳು



ಈ ಯಂತ್ರಗಳು ಎರಡು ಮಾದರಿಯವು ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಕಬ್ಬಿಣದವು. ಬಾಳಿಕೆ ಉಳ್ಳವು. ಹೊಟ್ಟನ್ನು ಝಾಡಿಸಲು ಯಂತ್ರದಲ್ಲಿ ಬೀಸಣಿಕೆಯನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳು ಕಳದ ಹಂಗಾಮಿನಲ್ಲಿ ಬಹು ಉಪಕಾರಿಗಳಾಗಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗಿಸುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಎಣ್ಣೆ ಮಾಡತಕ್ಕವರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ಕೇಳಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ ಸಾತಾರಾ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದ ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ [illegible] ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಎರಡು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಿಕೆಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೪ ,,	೪—೦—೦ ರೂ
ವಾರ ಪತ್ರಿಕೆಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೨೦ನೇ ಶತಮಾನದ ಗೊಂದಲ	೧೦ ಆಣೆ,
ವಿಚಿತ್ರ ಸಂಶಯ	೫ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಪೋಸ್ಟು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮುದತು, ಸೇವಿಂಗ್ಸ ಕರಂಟ ಪದ್ಧತಿ ಪ್ರಕಾರದಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ಕೇಳಿಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಪದ್ಧತಿಯು ದಾಗೀನೆಗಳ ಕಿಮ್ಮತ್ತಿನ ಮೇಲೆ ಸಾಲ ಕೊಡಲಾಗುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಅಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಈ ನಾಗರಿಕರಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಕೊಂಡಿಗೆಯು ಆರು ಲಕ್ಷದ ಮೇಲಿಂಟು. ಈ ಬ್ಯಾಂಕಿನಲ್ಲಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲ್ಪಡುವದು. ಠೇವಿಗಳ ಮತ್ತು ಬೇರೆ ತರದ ಠೇವಣಿಗಳಿಗೆ ಯೋಗ್ಯ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಚೇರಿಗೆ ಬಂದು ಮಾಡಿದವರು ಕೇಳಿಕೊಳ್ಳಬೇಕು.

ಪಂಢರಿನಾಥ ಬಿ. ಜತಾಪಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೪-೯-೨೭ ನೇ ಇಸ್ವಿ

ಹಿಂದೂ ಮುಸಲಮಾನರ ಐಕ್ಯ ವಿಚಾರಗಳು.

ಹಿಂದೂ ಮುಸಲಮಾನರಲ್ಲಾಗುತ್ತಿರುವ ದಂಗೆ ಮತ್ತು ರಕ್ತಪಾತದಲ್ಲಿ ಮುಖ್ಯವಾಗಿ ಮೂರು ಕಾರಣಗಳುಂಟು.

೧ ಮಸೀದೆಗಳ ಮುಂದೆ ವಾದ್ಯ ಬಾರಿಸುವದು

೨ ಗೋವಧ.

೩ ಶುದ್ಧಿ ಮತ್ತು ತಾಂಜೀಮು.

ಈ ಮೂರು ಕಾರಣಗಳನ್ನು ಸಹಜವಾಗಿ ದೂರ ಮಾಡಬಹುದು.

ವಾಸ್ತವಿಕವಾಗಿ ನೋಡಿದರೆ ಮುಸಲಮಾನರು ಮಸೀದೆಗಳ ಮುಂದೆ ವಾದ್ಯ ಬಾರಿಸಬಾರದೆಂಬ ಆಗ್ರಹ ಹಿಡಿಯತಕ್ಕದ್ದಲ್ಲ. ಏಕಂದರೆ ಈ ತರದ ನಡುವಳಿಕೆಯು ಇರಾಣ, ಕಾಬೂಲ, ತುರ್ಕಸ್ಥಾನ ಮುಂತಾದ ಮುಸಲಮಾನರ ದೇಶಗಳಲ್ಲಿಯೇ ಇರುವದಿಲ್ಲ. ಈ ದೇಶದಲ್ಲಾದರೂ ಈ ಜಗಳವು ಇತ್ತಿತ್ತಲಕಾಗಿನದಾಗಿದೆ. ಮಸೀದೆಗಳ ಮುಂದೆ ಹತ್ತು ಹೆಜ್ಜೆ ವಾದ್ಯ ಬಾರಿಸದಿರುವದರಿಂದ ಮತ್ತು ಒಳ್ಳೇ ಕಸವಿನಿಂದ ಮಸಿದೆಯ ಬಾಗಿಲದ ತನಕ ವಾದ್ಯ ಬಾರಿಸುತ್ತಾ ಬರುವದರಿಂದ ನಿಮಾಜ ಮಾಡತಕ್ಕವರಿಗೆ ತೊಂದರೆಯಾಗಬೇಕೆಂದು ತೀರ ಹುಚ್ಚತನವು. ಮಸೀದೆಯ ಬಾಗಿಲ ಮುಂದೆ ಮಾತ್ರ ಬಿಟ್ಟು, ಅದರ ಸುತ್ತಲು ಬ್ಯಾಂಡ, ನಗಾರಿ, ಬಜಂತ್ರಿ, ತಾಶೆ, ತುತೂರಿ, ಕಹಳೆ ಮುಂತಾದವುಗಳನ್ನು ಬಾರಿಸಿದರೆ ಮತ್ತು ಊದಿದರೆ ಆ ಧ್ವನಿಯು ಮಸೀದೆಯಲ್ಲಿ ಕೇಳಿಸುವದೇ ಇಲ್ಲೆಂದು ಹೇಳುವದು ತೀರ ಹಟಮಾರಿತನವಾಗುತ್ತದೆ. ಇದರ ವಿಹಿತಾವಿಹಿತವನ್ನು ಮುಸಲಮಾನರು ಅವಶ್ಯವಾಗಿ ಮಾಡತಕ್ಕದ್ದು. ಇದರಲ್ಲಿ ಅರ್ಥವಿರುವದಿಲ್ಲೆಂತಲೇ, ಮೌಲಾನಾ ಮಹಮ್ಮದಲ್ಲಿಯವರು ಹಿಂದೀ ರಾಷ್ಟ್ರೀಯತ್ವಕ್ಕಾಗಿ ವಾದ್ಯದ ಹಕ್ಕನ್ನು ಬಿಟ್ಟುಗೊಡಲು ಸಿದ್ಧರಾಗಿದ್ದಾರೆ.

ಗೋಹತ್ಯದಿಂದ ಹಿಂದೂ ಜನರ ಮನನೋಯುವದು ಸಹಜವಾದೆ. ಏಕಂದರೆ ಅದರಲ್ಲಿ ೩೩ ಕೋಟಿ ದೇವಾನುದೇವತೆಗಳಿರುತ್ತಾರೆಂದು ಹಿಂದೂ ಜನರ ಭಾವನೆಯು. ಮಹಮ್ಮದ ಪೈಗಂಬರರಿಗೆ ನಿಂದ್ಯೆ ಮಾಡಿದವರಿಗೆ ದೇಹಾಂತ ಶಿಕ್ಷೆಯಾಗಬೇಕೆಂದು ಮೌಲ್ವಿ ಜನರು ಕೋರ್ಟಿನಲ್ಲಿ ಜವಾಬ ಕೊಟ್ಟಿರುತ್ತಾರೆ. ತಮ್ಮಂತೆ ಪರರನ್ನು ಬಗೆಯುವದಾದರೆ ಗೋಹತ್ಯ ಮಾಡಿ, ಹಿಂದೂ ಜನರ ಮನನೊಯ್ಯುವಂಥ ಕೃತ್ಯಕ್ಕೆ ಯಾವ ಶಿಕ್ಷೆ ಕೊಡಬೇಕೆಂಬದನ್ನು ಮುಸಲಮಾನರೇ ಹೇಳಬೇಕು. ಸ್ಲಾಟರಹಾವುಸಗಳಲ್ಲಿ ಗೋವಧೆಯಾಗುತ್ತದೆ. ಅದಕ್ಕಾಗಿ ಯಾರೂ ದಂಗೆ ಮಾಡಿಲ್ಲ. ಮುಸಲಮಾನರು ತಮ್ಮ ಮೋಹಲೆಗಳಲ್ಲಿ ಗೋವಧ ಮಾಡುವರು. ಆಗ ಯಾರೂ ಜಗಳಕ್ಕೆ ಹೋಗಿಲ್ಲ, ಮುಂದೆ ಹೋಗರು. ಬುದ್ಧಿಪೂರ್ವಕವಾಗಿ ವಧಸ್ತಂಭಕ್ಕೆ ಮೆರವಣಿಗೆಯಿಂದ ಹಿಂದೂ ಜನರ ಬೀದಿಗಳಲ್ಲಿ ಹೋದರೇ ದಂಗೆಯಾಗುವದು. ಇಸ್ಲಾಮ ಧರ್ಮದ ಮೂಲ ತತ್ವವು ಬಂಧುಪ್ರೀತಿ ಮತ್ತು ಅಹಿಂಸೆಯನ್ನು ಅವಲಂಬಿಸಿರುತ್ತದೆಂದು ಪ್ರತಿಯೊಬ್ಬರು ವ್ಯಾಖ್ಯಾನಗಳಲ್ಲಿಯೂ, ಸಭೆಗಳಲ್ಲಿಯೂ ಸಾರಿ ಹೇಳುತ್ತಾರೆ. ನುಡಿಗೂ ನಡೆಗೂ ಅತ್ಯಂತರ ಬರುತ್ತಿರುವದೇ ಹೇಗೆಂಬದನ್ನು ಮುಸಲಮಾನರೇ ತಿಳಿದು ನೋಡತಕ್ಕದ್ದು.

ಶುದ್ಧಿ ಸಂಗಟನೆಯ ದೆಸೆಯಿಂದ ಮುಸಲಮಾನರು ಕೋಪಿಸತಕ್ಕ ಕಾರಣವೇ ಇಲ್ಲ. ಸಮಸ್ತ ಮುಸಲಮಾನರು ಒಂದೆಂದು ಮೊರೋಕೋದಿಂದ ಮಾಂಗೋಲಿಯಾದ ತನಕ ಜಿಹಾದ ಸಾರುವಂಥವರು. ಹಿಂದೂ ಜನರು ತಮ್ಮಲ್ಲಿ ಒಗ್ಗಟ್ಟನ್ನು ಹುಟ್ಟಿಸಿಕೊಂಡು ಶಕ್ತಿಯನ್ನು ಬೆಳೆಸಿದರೆ ಈ ಬಗ್ಗೆ ಮುಸಲಮಾನರು ಆನಂದ ಪಡುವದಲ್ಲದೆ ಹಿಂದೂ ಜನರನ್ನು ಪ್ರೋತ್ಸಾಹಿಸತಕ್ಕದ್ದು. ಶುದ್ಧಿಯು ವ್ಯಕ್ತಿಸ್ವಾತಂತ್ರ್ಯದ ವಿಚಾರವು. ಬೇಕಾದವನು ತನಗೆ ಸರಿಗಂಡ ಧರ್ಮ ಸ್ವೀಕಾರ ಮಾಡುವದು ಪ್ರಸ್ತುತದ ಕಾಲಮಹಿಮೆಯು. ಮೌ. ಪಿಕಥಾಲಸಾಹೇಬರು ಮುಸಲಮಾನರಾದರು. ಘಣಿಯ ಖಾನಸಾಹೇಬರು ಮಾಲಿನಿಯ ದೆಸೆಯಿಂದ ಬ್ರಹ್ಮೋಪಂಥ ಹಿಡಿದರು. ಅನೇಕ ಕ್ರಿಶ್ಚನ್ನರು ಮರಳಿ ಹಿಂದೂ ಆಗುತ್ತಿದ್ದಾರೆ. ಇದಕ್ಕಾಗಿ ಕ್ರಿಶ್ಚನ್ನರು ದಂಗೆ ಮಾಡಲಿಲ್ಲ. ಮಾಡುವದಿಲ್ಲ. ಅಂದ ಬಳಿಕ ಮುಸಲಮಾನರೇ ಗೊಂದಲವೆಬ್ಬಿಸುವದೇಕೆ? ಪಾದ್ರಿಗಳು ಉಪದೇಶದಿಂ ಹಿಂದೂ ಜನರನ್ನು ಕ್ರಿಶ್ಚನ್ನ ಮಾಡುತ್ತಾರೆಂಬದೇ ಪ್ರಕಾರದಿಂದ ಮುಸಲಮಾನರೂ ಮಾಡಬಹುದು. ಜನರಿಗೆ ವ್ಯಕ್ತಿ ಸ್ವಾತಂತ್ರ್ಯವಿರುವಂತೆ ವಿಚಾರ ಸ್ವಾತಂತ್ರ್ಯಕ್ಕೂ ಸಂಪೂರ್ಣ ಅವಕಾಶ ಕೊಡತಕ್ಕದ್ದು.

ಮುಸಲಮಾನರು ಮೇಲಿನ ವಿಚಾರಗಳ ಪ್ರಕಾರ ನಡೆದರೆ ದಂಗೆಗಳಾಗಲಿಕ್ಕೆ ಕಾರಣವೇ ಹುಟ್ಟಲಾರದು.

ಸರ ರವೀಂದ್ರನಾಥರ ಪೂರ್ವಜರ ವೃತ್ತಾಂತ.

ಸರ ರವೀಂದ್ರನಾಥ ಟಾಗೋರರು ಬಂಗಾಲಿಗಳು; ಹಿಂದೂಗಳು. ಆದರೆ ಇವರ ರಕ್ತವು ಪೋರ್ತುಗೀಜ ಮಿಶ್ರವಾಗಿರುತ್ತದೆಂದು ಅವರ ಬಾಯಿಯಿಂದಲೇ ಹೊರಟ ಶಬ್ದಗಳನ್ನು ಓದಿ ಆಶ್ಚರ್ಯಚಕಿತವಾಗುವಂತಿರುತ್ತದೆ. ಸರರು ಜಾವಾದೇಶದ ಸಂಚಾರ ತೀರಿಸಿಕೊಂಡು ಪೋರ್ತುಗಾಲವನ್ನು ನೋಡಲಿಕ್ಕೆ ಹೋಗುವರು. ದೇಶಾಟನಕ್ಕೆ ಹೋಗತಕ್ಕವರು ಆಯಾ ಪ್ರಾಂತದ ದೊಡ್ಡ ಪಟ್ಟಣಗಳನ್ನೂ ಬೇರೆ ಪ್ರೇಕ್ಷಣೀಯವಾದ ಸ್ಥಳಗಳನ್ನೂ ಮಾತ್ರ ನೋಡುವರು. ಆದರೆ ಇವರು ಆ ಸುಂದರವಾದ ಮತ್ತು [illegible] ದೇಶದ ಸಂದಿಗೊಂದಿಗಳಲ್ಲಿ ಸಹ ತಿರುಗಾಡುವರು. ಇಷ್ಟೇಕೆ ಈ ದೇಶದ ಮೇಲೆ ತನ್ನ ಪ್ರೀತಿ ಎಂದು ಲಂಡನದ ಡೇಲಿ ಮೇಲದ ಸಂಪಾದಕರು ಇವರಿಗೆ ಪ್ರಶ್ನೆ ಮಾಡಲು- ಅಯ್ಯಾ ನಾನು ಪೋರ್ತುಗಾಲದ ರಕ್ತದವನಾಗಿದ್ದೇನೆ. ನನ್ನ ಪೂರ್ವಜರಲ್ಲಿ ಐದನೆಯ ತಲೆವರು ಪೋರ್ತುಗೀಸದವರಾಗಿದ್ದಾರೆಂದು ಉತ್ತರ ಕೊಟ್ಟಿದ್ದಾರೆ.

ಸ್ವರಾಜ್ಯ ಸ್ವಾತಂತ್ರ್ಯದ ಕಾಯುದೆಯ ಹೊಸ ಮಾದರಿ.

ಹಿಂದುಸ್ಥಾನಕ್ಕೆ ರಾಯಲ ಕಮೀಶನ ಬಂದು, ಸಾಕ್ಷಿಗಳನ್ನು ತಕ್ಕೊಂಡು, ರಿಪೋರ್ಟು ಬರೆದು, ಮಂತ್ರಿಗಳಿಗೆ ಒಪ್ಪಿಗೆಯಾಗಿ, ಪಾರ್ಲಮೆಂಟದಲ್ಲಿ ಮಂಜೂರಾಗಿ, ಹಿಂದುಸ್ಥಾನದಲ್ಲಿ ಇವರ ಕಾಯಿದೆಯು ಅಮಲಿನಲ್ಲಿ ಬರುವದಕ್ಕೆ ಮೂರು ವರ್ಷಗಳಾದರೂ ಬೇಕು. ಇವರ ಕಾಯದೆಯು, ಇವರ ಇಚ್ಛೆಯಂತೆ ಅಮಲಿನಲ್ಲಿ ಬರದೆ, ಅದಕ್ಕೆ ಪ್ರಜಾಪಕ್ಷದ ಒಪ್ಪಕೊಡಬೇಕೆಂದು ಇಂಗ್ಲಂಡದಲ್ಲಿರುವ ಕೂಲಿಕಾರ ಪಕ್ಷದವರು ಅಭಿಲಾಷೆಯುಳ್ಳವರಾಗಿದ್ದಾರೆ. ಆನಿಬಿಝಾಂಟಮ್ಮನವರು ಈ ಮೊದಲು ಒಂದು ಯೋಜನೆ ಬರೆದು, ಅದನ್ನು ಇದೇ ಪಕ್ಷದ ಒಬ್ಬ ಮೆಂಬರರಿಂದ ಪಾರ್ಲಮೆಂಟ ಸಭೆಯಲ್ಲಿ ಸಾದರ ಪಡಿಸಿದ್ದಾರೆ. ಆದರೆ ಅದು ವಿಚಾರಣೆಗೆ ಬರದೆ, "ಒಗರ ಟೇಬಿಗೆ" ಬಿದ್ದಿರುತ್ತದೆ. ಇದಕ್ಕೆ ಹಿಂದುಸ್ಥಾನದ ಪ್ರಮುಖ ಸಮ್ಮತಿ ಇ

ಲ್ಲೊಂದು ಒಂದು ದೊಡ್ಡ ಕೊರತೆಯಾಗಿದೆ. ಆದ್ದರಿಂದ ಇದರ ಅವಸ್ಥೆಯು ದರಿದ್ರನ ಮನೋರಥದಂತಾಗಿರುತ್ತದೆ ಕಾರಣ ಹಿಂದುಸ್ಥಾನದ- ವಿಶೇಷವಾಗಿ ಕಾಂಗ್ರೆಸದ ಒಪ್ಪಿಗೆಯಾಗುವಂಥ ಒಂದು ಬಿಲ್ಲನ್ನು ಕೇವಲ ಬಣದ ಸ್ವತಂತ್ರ ಬಣದವರು ಬರೆದು, ಅಭಿಪ್ರಾಯಕ್ಕಾಗಿ ಅನೇಕರ ಕಡೆಗೆ ಕಳಿಸಿದ್ದಾರೆ. ಇದನ್ನು ಮುಂಗುಡಿ ಮಾಡಿಕೊಂಡು, ರಾಷ್ಟ್ರಾಭಿಮಾನಿಗಳು ರಾಯಲ ಕಮೀಶನದ ಮುಂದೆ ಸಾಕ್ಷೀ ನುಡಿಯಬೇಕೆಂದು ಇವರ ಮುಖ್ಯೋದ್ದೇಶವಾಗಿರುತ್ತದೆ.

ಸಹಕಾರ ಅಥವಾ ಅಸಹಕಾರ.

[—[o]—]

ಒಂದು ಕಾಲದಲ್ಲಿ ಹೆಸರಾದ ಅಸಹಕಾರಿಯಾದಂಥ ಡಾಕ್ಟರ ಅನಸಾರಿಯವರು ಕೌನ್ಸಿಲ ಸೇರಿ, ಅಸಹಕಾರ ಮಾಡಿ, ಬ್ರಿಟಿಶ ಸರಕಾರದವರು ಆಗಾಗ್ಗೆ ಕೊಡ ತ್ತಿರುವನ್ನು ರೊಟ್ಟಿಯನ್ನು ತಿಂದು ತೃಪ್ತರಾಗುತ್ತಾ, ಸ್ವರಾಜ್ಯ ಅಂದರೆ ವಸಾಹತಿನ ಸ್ವರಾಜ್ಯ ಸ್ವಾತಂತ್ರ್ಯ ದೊರೆಕಿಸಬೇಕೆಂಬದಾಗಿ ಸ್ಪಷ್ಟ ಪಡಿಸಿದ ವಿಚಾರಗಳ ಬಗ್ಗೆ ಹಿಂದುಸ್ಥಾನದ ತುಂಬ ಟೀಕೆ ನಡೆದಿದೆ. ಸಹಕಾರದ ಮಂತ್ರೋಪದೇಶ ಮಾಡುವಂಥವರು ಈ ದೇಶದಲ್ಲಿ ಅನೇಕರಿದ್ದಾರೆ. ಆದರೆ ಹಿಂದುಸ್ಥಾನದ ಮುಂದೆ ಝಗಳ ವ್ಯಾಖ್ಯಾನಂತೆ ಒಂದು ಅತ್ಯುಚ್ಚ ಧ್ಯೇಯವಿಡುವಂಥ ಧುರೀಣರೇ ಬೇಕಾಗಿದ್ದಾರೆ. ಡಾಕ್ಟರ ಅನಸಾರಿಯವರಿಂದ ಇಂಥ ಧ್ಯೇಯವನ್ನಿಡುವದಾಗದಿದ್ದರೆ- ಅಧ್ಯಕ್ಷರೇ ಆಗಬಾರದು. ಮತ್ತು ಕಾಂಗ್ರೆಸ ನಿರಬಲದವರು ಪುನಃ ಅಧ್ಯಕ್ಷರ ಚುನಾವಣೆ ಮಾಡಬೇಕು. ಆಗ ಸಹಕಾರವೋ? ಅಸಹಕಾರವೋ ? ಎಂಬದು ಒಡೆದು ಕಾಣುವದೆಂದು ಸರ್ವಸಾಧಾರಣವಾದ ಲೋಕಮತವಾಗಿರುತ್ತದೆ.

ಚತುರಬಾಯಿಗೆ ಶಿಕ್ಷೆ

—o—

ನಾಗಪೂರದ ಕಾಯದೆಭಂಗದಲ್ಲಿ ಒಳ್ಳೇ ಹೆಸರಿಗೆ ಬಂದಿದ್ದ ಚತುರಬಾಯಿ ಕೋಟಕರನ್ನು ಪೋಲೀಸರು ಹಿಡಿದಿದ್ದರಷ್ಟೇ; ಇವಳಿಗೆ ಮ್ಯಾಜಿಸ್ಟ್ರೇಟರು ಒಂದು ವರ್ಷದ ಸಾದಾ ಶಿಕ್ಷೆ ವಿಧಿಸಿದರು, ಬಾಯಿಯು ತನ್ನ ಪತಿಯಿಂದ ಡಿಫೆನ್ಸ್ ಕೊಡಲಿಲ್ಲ. ಇವಳ ಮೇಲೆ ಇನ್ನೂ ಎರಡು ಆರೋಪಗಳುಂಟು.

ನೀಲ ಮೂರ್ತಿಭಂಗದ
ಸತ್ಯಾಗ್ರಹ.

— o —

ಗಂಡನ ಕೂಡ ಹೆಂಡತಿಯ ಸತ್ಯಾಗ್ರಹ.

—o—

ಮದ್ರಾಸ ಪಟ್ಟಣದಲ್ಲಿರುವ ನೀಲಗೊಂಬೆಯನ್ನು ಒಡೆಯುವದಕ್ಕಾಗಿ ಆಗಾಗ್ಗೆ ಪ್ರಯತ್ನವಾಗುತ್ತಿರುವದು. ಅಲ್ಲಿ ಪೋಲೀಸ ಕಾವಲವಿರುವದರಿಂದ ಸತ್ಯಾಗ್ರಹಿಗಳ ಆಟ ಸಾಗುವದಿಲ್ಲ. ಆದರೂ ಇವರು ಗೊಂಬೆಯ ತನಕ ಹೋಗಿ, ಪೋಲೀಸರ ವಶವಾಗುತ್ತಿದ್ದಾರೆ. ಇವರಲ್ಲಿ ಈ ವಾರ ಹಿಡಿಯಲ್ಪಟ್ಟವರಲ್ಲಿ ಗಣಪತಿಅಯ್ಯರೆಂಬವರು ಪ್ರಮುಖರಾಗಿದ್ದಾರೆ ಇವರು ಮಧುರೆಯವರು, ಇವರನ್ನು ಹಿಡಿದ ವರ್ತಮಾನ ಕೇಳಿದ ಕೂಡಲೆ ಇವರ ಹೆಂಡತಿಯೂ ಸತ್ಯಾಗ್ರಹ ಮಾಡಿ, ಗಂಡನನ್ನು ಹಿಂಬಾಲಿಸಲು ಹೊರಟಿರುತ್ತಾಳೆ!!

ಹುಬ್ಬಳ್ಳಿಯಲ್ಲಿ ಒಂದು ಸಭೆಯ ಫಾರ್ಸ!!

---o---

ಗುಜರಾಥ ಸಂಕಟನಿವಾರಕ ನಿಧಿ ಕೂಡಿಸುವ ಬಗ್ಗೆ ಮ್ಯುನಿಸಿಪಾಲಿಟಿಯಲ್ಲಿ ಆದಿತ್ಯವಾರ ೩ ಘಂಟೆಗೆ ಸಭೆ ಇತ್ತು. ಧಾರವಾಡದಿಂದ ಡಿ. ಬಿ. ರೊಡ್ಡ ವ.ಪ.ತಾದವರು ಹೋಗಿ ನೋಡಲಾಗಿ ಕಟ್ಟಡಕ್ಕೆ ಕೀಲಿ! ಕೂಡಲೇ ಅವರು ರಾ. ಬ. ಕಂಬಳಿಯವರ ಕಡೆಗೆ ಹೋದರು. ಸಭೆ ೫ ಘಂಟೆಗೆ ಎಂದೂ ಅದರ ವ್ಯವಸ್ಥೆಯೆಲ್ಲಾ ಡಾ. ಹರ್ಡೀಕರರವರ ಕಡೆಗೆ ಎಂದು ಬೊಟ್ಟು ತೋರಿಸಿದರು! ರೊಡ್ಡರಾಯರು ಡಾ. ಹರ್ಡೀಕರರವರ ಕಡೆಗೆ ಬಂದು ಕೇಳಲಾಗಿ ನಾನೊಬ್ಬ ಸ್ವಯಂಸೇವಕನು ಸಭೆಯನ್ನು ಕರೆದವರು ರಾ. ಬ. ಕಂಬಳಿಯವರು ಅದರ ಜವಾಬದಾರಿಯು ನನ್ನ ಮೇಲೆ ಬಾರದೆಂದು ಸ್ಪಷ್ಟವಾಗಿ ಹೇಳಿದರು. ಆಮೇಲೆ ಎಲ್ಲರೂ ಕೂಡಿ ರಾ. ಸಾ. ಶಿರಹಟ್ಟೀಯವರ ಕಡೆಗೆ ಹೋಗಿ ಹೇಗಾದರೂ ೩೦-೩೫ ಜನರ ಸಭೆ ಕೂಡಿಸಲ್ಪಟ್ಟಿತು! ರಾ. ಬ. ಕಂಬಳಿಯವರು ೫೦ ರೂ ಕೊಟ್ಟರು. ಸಭೆಯಲ್ಲಿ ೨೦೦೦ರೂ. ವಚನ ಸಿಕ್ಕಿತು! ಡಾ- ಹರ್ಡೀಕರರವರು ಸೆಕ್ರೆಟರಿಯಾಗಬೇಕು; ಅಂದಕೂಡಲೇ ನಾನು ಗುಜರಾಥ ಪ್ರಾಂತಿಕ ಸಮಿತಿಯ ಕಡೆಗೆ ಕಳಿಸುವದಾದರೆ ಸೆಕ್ರೆಟರಿ ಆಗುವೆನೆಂದು ಹೇಳಿದರು. ಅದು ನಮ್ಮ "ಮಡಿ" ಜನರಿಗೆ ಸರಿಹೋಗದೆ ಶ್ರೀ ಕೆಂಪಣ್ಣನವರವರೊಬ್ಬರನ್ನೇ ಕಾರ್ಯದರ್ಶಿಯಾಗಿ ಮಾಡಿದರು. ಸ. ವಿ.

ವಿವಿಧ ವರ್ತಮಾನಗಳು

—o—

ಮುಂಬಯಿಗೆ ತೀರ ವಿರುದ್ಧವಾಗಿ ವೈಕಮದ ಆಚರಣೆಯುಂಟು. ಅಂತ್ಯಜರ ಸ್ಪರ್ಶದಿಂದ ದೇವಸ್ಥಾನದ ಬೀದಿ ಭ್ರಷ್ಟವಾಯಿತೆಂದು ಎಂಟು ಸಾವಿರ ರೂಪಾಯಿ ವೆಚ್ಚ ಮಾಡಿ, ಬೀದಿಯನ್ನು ಶುದ್ಧ ಮಾಡುವರು.

ಅಮರಾವತಿ ಪಟ್ಟಣದಲ್ಲಿರುವ ಭವಾನಿಯ ಗುಡಿಯಲ್ಲಿ ಅಂತ್ಯಜರು ಸತ್ಯಾಗ್ರಹ ಪ್ರಾರಂಭಿಸುವರು. ಇದಕ್ಕೆ ಕೌನ್ಸಿಲ ಮೆಂಬರರಾದ ಮಿ. ಗವಾಯಿಯವರ ಪೂರ್ಣ ಸಹಾಯವುಂಟು.

ಕೊಯಮತ್ತೂರಿನಲ್ಲಿ ದಸ್ತಗಿರ ಮಾಡಲ್ಪಟ್ಟ ಹಾಯಕೋರ್ಟ ವಕೀಲ ರಾಮಸ್ವಾಮಿ ಅಯ್ಯಂಗಾರರು ಜಾಮೀನದ ಮೇಲೆ ಬಿಡುಗಡೆ ಹೊಂದಿದರು. ಇವರ ಪತಿಯಿಂದ ಕೆಲವು ಸಂಬಳ ಸೇವೆಯಿಂದ ಶ್ರೀ ವಿಜಯರಾಘವಾಚಾರ್ಯರು ಹೋಗುವರು

ವೆಲ್ಲೂರಿನ ಡಿಸ್ಟ್ರಿಕ್ಟ್ ಲೋಕಲಬೋರ್ಡಿನವರು ಮಹಾತ್ಮರಿಗೆ ಮಾನಪತ್ರ ಕೊಟ್ಟು, ಖಾದಿಯ ಪ್ರಸಾರಕ್ಕೆ ಪೂರ್ಣ ಸಹಾಯ ಮಾಡುವಂತ ಅಭಿವಚನವಿತ್ತಿದ್ದಾರೆ.

ಧಾರವಾಡ—

ಈ ವಾರದಲ್ಲಿ ಮಳೆಯಿಲ್ಲ. ರೈತರು ಮಳೆಯ ನೋರೆಯನ್ನು ನೋಡುತ್ತಿದ್ದಾರೆ. ಬೆಳವಲದಲ್ಲಿ ಮಳೆಯಿಲ್ಲದ್ದರಿಂದ, ಅಲ್ಲಿಂದ ಮಲಾಡಕ್ಕೆ ಗುಳೇ ಹೋಗುವ ಜನರ ರೇಟೆಪ್ಟರುತ್ತದೆ.

ಪುಣೆಯಿಂದ ಶ್ರೀ. ರಾಜವಾಡೆ ಎಂಬವರು ಬಂದಿದ್ದಾರೆ. ದಿನಾಲು ಸಾಯಂಕಾಲದಲ್ಲಿ ಕರ್ನಾಟಕ ಪ್ರಿಂಟಿಂಗ ವರ್ಕ್ಸದ ವಿಶಾಲವಾದ ಸ್ಥಳದಲ್ಲಿ ಸನಾತನ ಧರ್ಮದ ಮೇಲೆ ಅವರ ಉಪನ್ಯಾಸಗಳು ನಡೆದಿವೆ.

ನಿನ್ನಿನ ದಿವಸ ಸಾಯಂಕಾಲದಲ್ಲಿ ಮಿ. ಕಲೆಕ್ಟರ ಸಾಹೇಬರ ಅಧ್ಯಕ್ಷತೆಯಲ್ಲಿ ದಕ್ಷಿಣ ಲಿಂಗ ಸಭೆಯ ಪತಿಯಿಂದ ಜಾಹೀರ ಸಭೆಯು ಕೂಡಿ, ಶ್ರೀ ಟಿ. ಕೆ. ಪಾಟೀಲ ಬಿ. ಎ. (ಆನ್ಸ್) ಇವರಿಗೆ ಬಂಗಾರದ ಪದಕವನ್ನು ಬಹುಮಾನವಾಗಿ ಕೊಡುವ ಸಮಾರಂಭವಾಯಿತು.

ಘೋಷಣೆಯ ದೆಸೆಯಿಂದ

ದಂಗೆ ಮತ್ತು ಕೊಲೆ

—೦—

ರಶಿಯಾ ರಾಜ್ಯಕ್ಕೆ ಸೇರಿದ ಬಜಾರವ್ಯಾಕ ಸಮಾನ ಎಂಬ ಪ್ರಾಂತದಲ್ಲಿ ಘೋಷಣಾದ ವಿರುದ್ಧ ದೊಡ್ಡ ಗಳವಳಿ ನಡೆದಿರುತ್ತದೆ. ರಶಿಯಾ ಸರಕಾರದವರು ಕ್ರಿಶ್ಚನ್ನರಾಗದ್ದರಿಂದಲೂ ಅವರು ಘೋಷಣಾದ ವಿರೋಧಿಗಳಾಗಿದ್ದಾರೆ. ತಮ್ಮ ಪ್ರಜೆಗೆ ಈ ಪದ್ಧತಿಯನ್ನು ತೆಗೆದು ಹಾಕಲು ಅಧಿಕಾರದಿಂದಲೂ ಸಾಮಾಜಿಕ ವಿಚಾರಗಳಿಂದ ಉಪದೇಶ ಮಾಡುವರು. ಆದರೆ ಇದು ಮೈಲ್ಪಿ ಮುಲ್ಲಾ ಜನರಿಗೆ ಸಮ್ಮತವಿಲ್ಲ. ಇವರು ಶ್ರೀಮಂತರಾದಂಥ ಸ್ತ್ರೀಯರ ಹಾಗು ಮುಲ್ಲಾ ಜನರ ಒಂದು ಸಭೆ ಕೂಡಿಸಿ ಯಾವ ಸ್ತ್ರೀಯು ಒಂದಕಿ ತೆಗೆದು, ಗಂಡರಾವಿಯಂತೆ ಮೋರೆ ತೋರಿಸುತ್ತಾ ತಿರುಗಾಡುತ್ತಾಳೋ, ಇನಳು ಸಕಿದಕ್ಕಿ ಸರಪಯಣಿಯಲ್ಲ; ಅವಳು ಅವಿಶ್ವಾಸಿ ಧರ್ಮಭ್ರಷ್ಟಳೆಂದು ತಿಳಿಯಬೇಕೆಂಬ ಗುಪ್ತ ಠರಾವು ಮಾಡಿದರು. ಈ ಠರಾವು ಪಾಸಾದ ಬಳಿಕ ದುರ್ಮಾಭಿಮಾನ ಪಕ್ಷ ಮತ್ತು ಸ್ವಸ್ತಾರೀಕ ಪಕ್ಷದ ನಡುವೆ ಹೊಡದಾಟವಾಗಿ ಇಬ್ಬರು ಮುಸಲ್ಮಾನರು ಸತ್ತರು. ಅನೇಕರು ಘಾಯವಾದರು. ರಶಿಯಾ ಸರಕಾರದವರಂತೂ ಮುಲ್ಲಾಗಳ ಮೇಲೆ ರಾಜದ್ರೋಹದ ಆರೋಪವಿಟ್ಟು ಕೇಸ ನಡಿಸಿದ್ದಾರೆ.

——

ಜಪಾನ, ರೂಸಿ ಯುದ್ಧ.

ಮುಸಲ್ಮಾನರು ಒನರ ಘಾಸಿಯಾದರು.

ಕೋರಿಯಾದ ರಾಜ್ಯದಲ್ಲಿ ಇಂಗ್ಲಿಷ ಸೀಮೆಯನ್ನು ದಾಟಿ, ಮಾಂಚೂರಿಯದ ಕಾಡು ಜನರಲ್ಲಿ ಸಿಯಾ ಮತ್ತು ರೂಸಿ ಪಂಥದವರು ಧರ್ಮದ ದೆಸೆಯಿಂದ ಭಯಂಕರವಾದ ಯುದ್ಧ ಮಾಡಿದರು. ಈ ಯುದ್ಧದಲ್ಲಿ ಮುಸಲ್ಮಾರು ಜನರು ಘಾಯವಾದರು. ಇವರಲ್ಲಿ ಸತ್ತವರ ಸಂಖ್ಯೆಯು ತಿಳಿಯುವದಿಲ್ಲ. ಮುಲ್ಲಾ ಮಹಮ್ಮದ ಇಬ್ರಾಹಿಂ ಎಂಬವನು ಈ ಬೇಗೆಯನ್ನು ಎಬ್ಬಿಸಿದವನು. ಈತನು ಅಲ್ಲಿ ವಾಸವಾಗಿರುವ ಹಿಂದೂ ಜನರನ್ನು ದುಷ್ಟ ರೀತಿಯಿಂದ ನಡಿಸಿಕೊಳ್ಳುತ್ತಾನೆ.

ಜಾಹೀರ ನೋಟೀಸು.

ರಾ. ರಾ. ಭೀಮಪ್ಪಾ ಯಲ್ಲಪ್ಪಾ ಜಾಧವ ಸಾಕೀನ ಅಡಿವಿ ಸೋಮಾಪೂರ ತಾಲೂಕ ಬಂಕಾಪೂರ ಇವರಿಗೆ—

ಕೆಳಗೆ ಸಹಿ ಮಾಡಿದವರ ಕಡೆಯಿಂದ ನೋಟೀಸಿನಿಂದ ತಿಳಿಸುವದೇನಂದರೆ ನಿಮ್ಮ ತಂದಿ ಯಲ್ಲಪ್ಪಾ ಭೀಮಪ್ಪಾ ಜಾಧವ ಇವರು ೧೫೦ ರೂಪಾಯಿ ಸಾಲದ ಬಗ್ಗೆ ಕೇಳಲಾಗಿ ಅವರ

ಮದ್ರಾಸ ಕೌನ್ಸಲದ ಲೋಕನಿಯುಕ್ತ ಮೆಂಬರರಾದ ಡಾಕ್ಟರ ಮಲ್ಲಯ್ಯನವರಿಂದ ಪರಿಶೋಧಿಸಲ್ಪಟ್ಟ

ಮೆಸರ ಪಿ. ವ್ಹಿ. ರಾಜನ ಕಂಪನಿಯು.

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು ಲಕ್ಷಾವಧಿ ಜನರು ಇದರ ಉಪಯೋಗ ಮಾಡಿದ್ದಾರೆ. ಇದರ ಗುಣದ ಬಗ್ಗೆ ಸಾವಿರಾರು ಜನರು ಸರ್ಟಿಫಿಕೇಟಗಳನ್ನು ಕೊಟ್ಟಿದ್ದಾರೆ.

ಈ ಪುಡಿಯು ಉಪಯೋಗದಿಂದ ಗುಣವಾಗುವ ವ್ಯಾಧಿಗಳು:— ಪಿನಸಿ ಅರತಲೆ ನೋವು, ತಲೆಯಲ್ಲಾಗುವ ಬೇರೆ ರೋಗಗಳು ಕಣ್ಣುಗಳಲ್ಲುಂಟಾಗುವ ಎಲ್ಲ ವ್ಯಾಧಿಗಳು ದೂರಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ ಬೇರೆ ನಶ್ಯದಲ್ಲಿ ಈ ನಶ್ಯದ ಒಂದು ಚಿಟಿಕೆಯನ್ನು ಕೂಡಿಸಿದರೆ ಎಲ್ಲವೂ ಸುಗಂಧವಾಗುವದು. ಮಾದರಿ ತಿಶೆ ಉಚಿತವಾಗಿ ದೊರೆಯುವದು.

ಸಾದಾ ಮದ್ರಾಸ ನಶ್ಯ ೧೨೦ ತೊ ವಿ.ಪಿ ಒಂದಕ್ಕೆ ನಂಬರ ೧ ೪-೦-೮

„ ೨ ೩-೮-೦

ದಯವಿಟ್ಟು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ತಂತಿ ವಿಳಾಸ ನಶ್ಯವು | ಪಿ ವ್ಹಿ. ರಾಜನ ಮತ್ತು ಕಂಪನಿ,
೪೪ ಗೋವಿಂದಪ್ಪ ನಾಯಕನ ಬೀದಿ ಜಾರ್ಜಟಾವುನ, ಮದ್ರಾಸ

P V. RAJAN & COMPANY.

Sole Manufacturers of Dr. B S M's, Medicated & Scented Snuff

No 44 Govindappa Naikan Street MADRAS.

೩೦೦ ರೂಪಾಯಿಗೆ ನನ್ನ ಮನಿ ಖರಿದಿ ಬರಕೊಡಬೇಕು ನಾನು ೧೫೦ ರೂಪಾಯಿ ಅದರ ಬಡ್ಡಿ ಕೊಟ್ಟಾಗ್ಗೆ ನನ್ನ ಮನಿ ಪರತ ಖರಿದಿ ನನಗೆ ಮಾಡಿಕೊಡಬೇಕು ಅಂತಾ ನಾಲ್ಕು ಮಂದಿ ಸಮಕ್ಷಮ ಕರಾರ ಮಾಡಿದ ಪ್ರಕಾರ ನನಗೆ ಹಣದ ಅಡಚಣಿ ಬಹಳೇ ಇದ್ದದರಿಂದ ಆ ಕರಾರಿಗೆ ಒಪ್ಪಿ ನಾನು ಅಡ್ವಿಸೋಮಾಪೂರದಲ್ಲಿ ಇರುವ ನಾನು ಇರತಕ್ಕ ಮನಿ ೩೦೦ ರೂಪಾಯಿಗೆ ಬರಕೊಟ್ಟು ೧೫೦ ರೂಪಾಯಿ ಸಾಲಾ ತಗೊಂಡೆ ಕಾಗದ ನೋಂದಾಯಿಸಿ ಕೊಟ್ಟೆ ಆ ಮಾತಿಗೆ ೧॥ ವರ್ಷ ಆಗಬಹುದು ಆದರೆ ಮನಿ ನನ್ನ ಕಬಜಾದಲ್ಲಿನೇ ಇವತ್ತಿನ ವರೆಗೂ ಅದೆ. ಮುಂದೆ ಅದೇ ವರ್ಷ ಸುಗ್ಗಿಯಲ್ಲಿ ೬ ಹೇರು ಭತ್ತಾ ಅದರ ಬಾ॥ ೧೨೦ ರೂಪಾಯಿ ೧ ಹೇರು ಬೆಲ್ಲಾ ಅದರ ಬಾ॥ ೨೦ ರೂಪಾಯಿ ಗೊತ್ತು ಮಾಡಿ ನಾಲ್ಕು ಮಂದಿ ಸಮಕ್ಷಮ ನಿಮ್ಮ ಮನಿಗೆ ತಂದು ಕೊಟ್ಟೆನು ಅಗ್ಗೆ ನೀನೂ ಹಾಜರ ಇದ್ದಿ ನಿಮ್ಮ ತಂದಿ ಬಾಕಿ ಉಳಿದ ಅಸಲಿನ ಬಾ॥ ೧೦ ರೂಪಾಯಿ ಬಡ್ಡಿ ಬಾ॥ ರೂಪಾಯಿ ಲೆಖ್ಖಾ ಮಾಡಿ ತಗೊಂಡು ಸದರ ಮನಿ ಪರತ ಖರೀದಿ ಮಾಡಿಕೊಡತೇನೆ ಅಂದಾ ಆ ಮೇಲೆ ೩-೪ ಸಾರೆ ನಾನು ಬಾಕಿ ರೂಪಾಯಿ ತಗೊಂಡು ಖರೀದಿ ಮಾಡಿಕೊಡು ಅಂತಾ ಕೇಳಿದರೆ ಇವತ್ತ ನಾಳೆ ಬರಕೊಡತೇನೆ ಅಂದು ಆವನು ಮೋಕಾಯಕಿ ಸತ್ತದ್ದರಿಂದ ಹಾಗೇ ಉಳಿತು ಆ ಮೇಲೆ ನಿನಗೆ ಕೇಳಿದರೆ ನೀನು ಸಹ ಇವತ್ತು ನಾಳೆ ಅಂದು ದಿನಮೋಕ ಮಾಡತೀದಿ ಕಾರಣ ಸದರ ಖರಿದಿ ಪ್ರೋಕಳ ಇದ್ದು ನೀನು ಈ ನೋಟೀಸ ಮುಟ್ಟಿದ ೭ ದಿವಸಗಳಲ್ಲಿ ನಿನಗೆ ಕೊಡತಕ್ಕ ಅಸಲಿನ ಬಾ॥ ೧೦ ರೂಪಾಯಿ ವ ಬಡ್ಡಿ ಲೆಖ್ಖಾ ಮಾಡಿ ತಗೊಂಡು ನನ್ನ ಮನಿ ನನಗೆ ಪರತ ಖರಿದಿ ಮಾಡಿ ನೋಂದಾಯಿಸಿ ಕೊಡಬೇಕು ಜರ ಇದರಂತೆ ಮಾಡದಿದ್ದರೆ ನನ್ನ ಮೇಲೆ ವ ನನ್ನ ಮನಿ ಮೇಲೆ ದಿವಾಣಿ ಕೋರ್ಟಿನಲ್ಲಿ ರಯಾವ ತರದ ಇಲಾಜ ನಡಿಸಿದರೂ ನಡಿಯಲಾರದು ಮತ್ತು ಇವತ್ತಿನಿಂದ ನೀನು ಖರೀದಿ ಮಾಡಿ ಕೊಡುವವರೆಗೆ ಬಾಕಿ ಉಳಿದ ಹಣಕ್ಕೆ ಬಡ್ಡಿ ಸಹ ಕೊಡುವದಿಲ್ಲಾ ಈ ನೋಟೀಸಿನ ಖರ್ಚು ನಿನ್ನ ತಲಿಯಮೇಲೆ ಇರುತ್ತದೆ ತಿಳಿಯುವದು ತಾರೀಖು ೨೭-೮-೧೯೦೪ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಚನ್ನಪ್ಪ ತಂದಿ ರುದ್ರಪ್ಪಾ ಕುನ್ನೂರ ಸಾಕೀನ ಅಡ್ವಿಸೋಮಾಪೂರ ತಾಲೂಕ ಬಂಕಾಪೂರ ಈತನದು ಅದೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N.B. 1443

ವಿಜಯ

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮] ಧಾರವಾಡ ಸೋಮವಾರ ತಾರೀಖು ೫ ನೇ ಸಪ್ಟಂಬರ ೧೯೨೭ (ಸಂಚಿಕೆ ೧೯೧

ಕಿರ್ಲೋಸ್ಕರ ಶೇಂಗಾ [ಭುಈಮೂಗು] ಒಡೆಯುವ ಯಂತ್ರಗಳು



ಈ ಯಂತ್ರಗಳು ಎರಡು ಮಾದರಿಯವು ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಕಬ್ಬಿಣದವು. ಚೌಕಟ್ಟು ಉಕ್ಕಿನವು. ಹೊಟ್ಟನ್ನು ಝಾಡಿಸಲು ಯಂತ್ರದಲ್ಲಿ ಬೀಸಣಿಕೆಯನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳು ಕಳೆದ ಹಂಗಾಮುದಲ್ಲಿ ಬಹು ಪ್ರಚಾರಗಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಮಾರಾಟ ಮಾಡತಕ್ಕವರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯವಶ್ಯಕವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ಕೇಳಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಎರಡು ಆಣೆ ದರ ಇದೆ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಲೋಕಲ ಬ್ಯಾಂಕ ಮುಂತಾದ ಸಾರ್ವಜನಿಕ ಸೋಸಾಯಿಟಿಗಳಿಗೆ ಸಾಲಿಗೆ ಮೂರು ದ— ಇಂತೆ ದರದ ಆಕರಿಸಿ ಕನ್ನಡದಲ್ಲಿ ಹಾಕಲಾಗುತ್ತದೆ ಆರು ಆಣೆ ಡಬಲ್‌ಕಾಲಮಿನ ಒಳಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ”	೭—೦—೦ ರೂ
೪ ”	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೮ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಖರ್ಚು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮುದತಿ, ಸೇವಿಂಗ ದರು ಕರೆಂಟ ಮುಂತಾದ ರೀತಿಯಿಂದ ಹಣವನ್ನು ಇಡಲಿಕ್ಕೆ ಅನುಕೂಲವಾಗುವದು. ದರವನ್ನು ಸಮಕ್ಷಮ ತಿಳಿಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಗ್ಗೆಯ ದಲ್ಲ ಸೂರಕ್ಷ ಶರತು ಕರಾರು ಮಾಡಲಾಗುತ್ತದೆ.

ಸಿ. ಶೆಟ್ಟಿ

ಮ್ಯಾನೇಜಿಂಗ ಡೈರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಈ ಪ್ರಾಂತದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಗಳು ಆರು ಲಕ್ಷದ ಮೇಲಿವೆ. ಚೆಕ್ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವವು. ಠೇವುಗಳ ಮೇಲೆ ಬೇರೆ ಬೇರೆ ದರದ ಬಡ್ಡಿ ... ಕೊಡಲಾಗುವದು.

ವಿಶೇಷ ಸಂಗತಿಗಳನ್ನು ... ಮ್ಯಾನೇಜರ ಅವರಿಂದ ತಿಳಿಕೊಳ್ಳಬೇಕು.

ಮ್ಯಾನೇಜರ ...

ವಿಜಯ.

ಧಾರವಾಡ ತಾ- ೫-೯-೨೭ ನೇ ಇಸ್ವಿ

ಮುನವಳ್ಳಿಯಲ್ಲಿ ಶ್ರೀ ವೆಂಕಟೇಶದೇವರ ಶಿರಚ್ಛೇದವು.

ಬೆಳಗಾವ ಜಿಲ್ಲೆಗೆ ಸೇರಿದ ಶಿಂದೆ ಮುನವಳ್ಳಿಯು ಈ ಪ್ರಾಂತದಲ್ಲಿ ಪ್ರಸಿದ್ಧವಾದ ಗ್ರಾಮವು ಇಲ್ಲಿ ಶ್ರೀ ವೆಂಕಟೇಶದೇವರ ಪುರಾತನ ದೇವಾಲಯವುಂಟು ಶ್ರೀಮದುತ್ತರಾದಿ ಮಠಕ್ಕೆ ಮೊಂದಿದ ಶ್ರೀ ಸತ್ಯಸಂಧ ಸ್ವಾಮಿಗಳವರು ಈ ದೇವರ ಪ್ರತಿಷ್ಠಾಪನೆ ಮಾಡಿದ್ದಾರೆ. ಈ ಮಾತಿಗೆ ನಾಲ್ಕು ನೂರು ವರ್ಷವಾಯಿತು. ಶ್ರೀಗಳವರು ದೇವರಿಗೆ ಕೊಟ್ಟಂಥ ಭೂಮಿಯುಂಟು. ಸರಕಾರದಿಂದ ನೂರು ರೂಪಾಯಿಗಳ ವರ್ಷಾಶನವುಂಟು ನಾಲ್ಕು ನೂರು ವರ್ಷಗಳಿಂದ ದೇವರ ನಿತ್ಯ ಪೂಜೆ ಮತ್ತು ಸೇವೆಯು ಯಥಾಪ್ರಕಾರ ನಡೆಯುತ್ತಾ ಬಂದಿರುತ್ತದೆ. ಇಂಥ ಪುರಾತನ ದೇವರಿಗೆ ದುಷ್ಟ ಜನರಿಂದ ಶಿರಚ್ಛೇದನ ಮಾಡಿಸಿಕೊಳ್ಳುವಂಥ ವಿಪತ್ತು ಒದಗಿದ್ದು ದುಃಖದ ಸಂಗತಿಯೇ ಸರಿ ದೇವರ ರುಂಡವನ್ನು ತುಂಡರಿಸಿದ್ದಲ್ಲದೆ, ಮುಂದೆ ಅದನ್ನು ಕೂಡಿಸಿ, ವ್ಯಂಗ ತೋರದಂತೆ ಮಾಡಬಹುದು; ಇದಕ್ಕಾಗಿ ಅನುವು ಕೊಡಬಾರದೆಂಬ ಅತ್ಯಂತವಾದ ನೀಚ ವಿಚಾರದಿಂದ ಮೂಗು ಮತ್ತು ಇತರ ಭಾಗವನ್ನೂ ಸವರಿದ್ದಾರೆ. ಈ ಕೃತ್ಯವು ಅಕಸ್ಮಾತ್ತಾದ್ದಾಗಿರುವದಿಲ್ಲವೆಂದು ಯಾರಿಗಾದರು ಅನಿಸುವದು. ಏಕಂದರೆ- ಮಧ್ಯರಾತ್ರಿಯಲ್ಲಿ ದೇವರ ಗುಡಿಯ ಕೀಲೀ ಮುರಿದು, ಒಳಗೆ ಹೋಗಿ ದೈತ್ಯಾಂಶರಾಗಿ ಅತ್ಯಾಚಾರ ಮಾಡಿದ್ದಾಗಿರುತ್ತದೆ. ಇಂಥ ಹೀನ ಕೃತ್ಯ ಮಾಡಿದ ನರಾಧಮನು ಮುಸಲಮಾನನಾಗಿರುವದಿಲ್ಲೆಂದು ಅಲ್ಲಿಯ ಶ್ರೀ. ವೆಂಕಟೇಶ ಭಕ್ತರ ಪೂರ್ಣ ನಂಬಿಗೆಯುಂಟು. ಏಕಂದರೆ- ಅಲ್ಲಿ ಹಿಂದೂ ಮುಸಲಮಾನ ಕಲಹವೇ ಇಲ್ಲ. ಯಾವ ಮೌಲ್ವಿ ಮೌಲಾನಾನ ಉಪದೇಶದಿಂದ ಮುಸಲಮಾನರು ವಿಗ್ರಹಭಂಗ ಮಾಡುವಂಥ ದುರಭಿಮಾನವನ್ನು ತಳೆದಿಲ್ಲ. ಹಿಂದೂ ಜನರಲ್ಲಿಯೇ ಇಂಥ ಅಧಮಾಧಮ ಕೃತ್ಯ ಮಾಡುವಂಥನು ಹುಟ್ಟಬೇಕೆಂಬದು ತ್ವೇಷ ಬರುವಂಥ ಸಂಗತಿ. ದೇವರ ಕೊಲೆಯನ್ನು ಮಾಡಿದವನಾವನಿರಬೇಕೆಂದು ಊರಜಂಬ ಜನರು ತರ್ಕ ಮಾಡುತ್ತಿದ್ದಾರೆ. ಆ ತಾಲೂಕಿನ ಮಾಮಲೇದಾರರಾದ ರಾವಸಾಹೇಬ ಟಿ ಎಸ ಕುಲಕರ್ಣಿಯವರು ಈ ಅನಾಹುತದ ವರ್ತಮಾನ ಕೇಳಿ, ತಪಾಸಣೆಗಾಗಿ ಹೋದರು. ಆದರೆ ಅವರಿಗೆ ಇದರ ಸುಳವು ಹತ್ತಿದಂತೆ ತೋರುವದಿಲ್ಲ. ತಾಲೂಕಿನ ಪೋಲಿಸ ಅಥವಾ ಮ್ಯಾಜಿಸ್ಟ್ರೇಟರಿಂದ ಈ ಅಪರಾಧದ ತಪಾಸ ಆಗದಿದ್ದರೆ- ಸರಕಾರದವರು ಗುಪ್ತಪೋಲಿಸಖಾತೆಯವರಿಗೆ ಈ ಅಪರಾಧದ ಶೋಧನ ಕಾರ್ಯವನ್ನು ಒಪ್ಪಿಸಬೇಕು ಈ ಬಗ್ಗೆ ದೇವಸ್ಥಾನದ ಹಾಗು ಮಿಕ್ಕ ಬ್ರಹ್ಮವೃಂದದವರು ಬೆಳಗಾವಿಯ ಕಲೆಕ್ಟರರ ಕಡೆಗೆ ಅರ್ಜಿಯನ್ನು ಮಾಡಬೇಕು. ಮನುಷ್ಯನ ಕೊಲೆಗೇ ಕೊಲೆ ಪಾತಕಿಯಾಗುತ್ತಾನೆ ದೇಹಾಂತ ಶಿಕ್ಷೆ ಹೊಂದುತ್ತಾನೆ. ಅದಕ್ಕೂ ಹೆಚ್ಚಿನ ಕೊಲೆ ಮಾಡಿದಂಥವನ ಶೋಧವಾಗಿ ಅವನಿಗೆ ಕೃತಕರ್ಮಕ್ಕೆ ತಕ್ಕ ಶಾಸನವಾಗುವದು ತೀರ ಅವಶ್ಯವಾಗಿರುತ್ತದೆ. ಕೊಲೆಯು ಎಂದೂ ಮುಚ್ಚುವದಿಲ್ಲ, ಇಂದಿಲ್ಲ ನಾಳೆ ಬೈಲಿಗೆ ಬರುವದೆಂದು ನಾಣ್ಣುಡಿಯುಂಟು. ಪೋಲೀಸರು ಹೆಚ್ಚು ಮನಸ್ಸುಗೊಟ್ಟು ತಪಾಸ ಮಾಡಿದರೆ- ಕೊಲೆಗಡಕನು ಸಿಗುವನೆಂದೇ ಹೇಳಬೇಕಾಗುತ್ತದೆ.

ಸುರತದ ದಂಗೆಯಲ್ಲಿ ಶಿಕ್ಷೆ-

ಸುರತದಲ್ಲಿ ಶ್ರೀ ಶಿವಾಜಿ ಮಹಾರಾಜರ ಉತ್ಸವಕ್ಕೆ ಪ್ರತಿಬಂಧ ಮಾಡಿ, ದಂಗೆ ಮಾಡಿದ ಒಂದು ಗುಂಪಿನ ೧೭ ಜನರಿಗೆ ಮ್ಯಾಜಿಸ್ಟ್ರೇಟರು ಆರಾರು ತಿಂಗಳ ಶಿಕ್ಷೆ ವಿಧಿಸಿದರು ಇವರಲ್ಲಿ ೧ ನೆಯ ನಂಬರಿನ ಆರೋಪಿಯು ಅಲ್ಪ ಶಿಕ್ಷೆಗಾಗಿ ನಕ್ಕು, ಧರ್ಮದ ದೆಸೆಯಿಂದ ಗಲ್ಲಿಗೆ ಹೋಗುವದಕ್ಕೆ ಸಹ ಸಿದ್ಧನಿದ್ದೇನೆಂದು ಕೋರ್ಟು ಗದ್ದರಿಸುವಂತೆ ಆವೇಶದ ಉದ್ಗಾರ ತೆಗೆದನು.

ಸ್ತ್ರೀಯಳ ಸತ್ಯಾಗ್ರಹ-

ಈ ಮೊದಲು ಬರೆದಂತೆ ಶ್ರೀ ಗಣಪತಿ ಅಯ್ಯರನ ಹೆಂಡತಿಯಾದ ಅಂಗಚಿಯಮ್ಮನು ಕಯ್ಯಲ್ಲಿ ಕೊಡ್ಲಿಯನ್ನು ತಕ್ಕೊಂಡು ನೀಲಗೊಂಬೆಯನ್ನು ಭಂಗಪಡಿಸ ಹೋದಳು ಆದರೆ ಹತ್ತಿರವೇ ಕಾವಲಗಾರರಾಗಿದ್ದ ಪೋಲೀಸರು ಇವಳನ್ನು ಹಿಡಿದು ತುರಂಗಕ್ಕೆ ಕರಕೊಂಡು ಹೋದಳು ಅಂಗಚಿಯು ಇದೇ ಸಾರೆ ಇಂಥ ವಿವೇಗಾರಿಕೆ ತೋರಿಸಲಿಲ್ಲ. ಪಿಕೆಟಿಂಗದ ವೇಳೆಯಲ್ಲಿ ಪಿಕೇಟು ಮಾಡಿ, ಮೂರು ಸಾರೆ ಶ್ರೀಕೃಷ್ಣ ಜನ್ಮಸ್ಥಾನವನ್ನು ನೋಡಿ ಬಂದಿದ್ದಾಳೆ.

ದಿವಾನ ಬಹಾದ್ದೂರ ರೊದ್ದ ಮತ್ತು ಪ್ರಾಥಮಿಕ ಶಾಲೆಗಳ ಶಿಕ್ಷಕರು

ದಿವಾನಬಹಾದ್ದೂರ ರೊದ್ದ ಶ್ರೀನಿವಾಸರಾಯರು ಕನ್ನಡ ಶಾಲಾಪತ್ರಿಕೆಯಲ್ಲಿ ಪ್ರಾಥಮಿಕ ಶಾಲೆಗಳ ಶಿಕ್ಷಕರ ಸಂಬಳ ಕಡಿಮೆ ಮಾಡಿ, ಅದರಿಂದಾಗುವ ಉಳಿತಾಯದಲ್ಲಿ ಟ್ರೇನಿಂಗ ಕಾಲೇಜಕ್ಕೆ ಪುನರ್ಜನ್ಮ ಕೊಡಬೇಕೆಂದು ಬರೆದ ಲೇಖವನ್ನು ಯಾವ ಶಿಕ್ಷಕನೂ ಸಮರ್ಥಿಸಲಾರನೆಂದು ನಾವು ಈ ಮುಂದಾಗಿ ಹೇಳಿದ್ದೆವು ಆ ಹೇಳಿಕೆಯು ನಿಜವಾಗಿರುತ್ತದೆನ್ನುವಂತೆ ನಾಲ್ಕೂ ಕಡೆಯಿಂದ ಬಂದ ಸುದ್ದಿಗಳಿಂದ ಸ್ಪಷ್ಟವಾಗುತ್ತದೆ. ದಿವಾನರ ದಿವಾನಗಿರಿ ಅಂದರೆ ಶಿಕ್ಷಕರ ಹಿತಸಂಬಂಧವಾಗಿ ಅವರು ಈ ಪರ್ಯಂತರ ಕರಗತವಾಗಿ ವ್ಯಕ್ತಿಪಡಿಸಿದ ಮುತ್ಸದ್ದಿತನವು ಮುಪ್ಪಿನ ಅರವತ್ತು ಮುರುವಿನಲ್ಲಿ ಹೊರಬಿದ್ದಿತೆಂದು ಪ್ರತಿಯೊಬ್ಬ ಶಿಕ್ಷಕನು ದುಃಖಿಸುತ್ತಾನೆ ಆ ಪ್ರಕಾರ ಅನರು ವ್ಯಕ್ತಿಶಃ ಮತ್ತು ಸಮೂಹತ್ವದಿಂದ ಈ ದುಃಖವನ್ನು ವಿಜಯದ ಮುಖಾಂತರವಾಗಿ ವ್ಯಕ್ತಪಡಿಸುತ್ತಿದ್ದಾರೆ ಹೋದ ವಾರದಲ್ಲಿ ಹುಬ್ಬಳ್ಳಿಯಲ್ಲಿ ಶಿಕ್ಷಕರು ಸಭೆಗೂಡಿ, ದಿವಾನರ ವಿಚಾರವನ್ನು ನಿಷೇಧಿಸಿದ್ದಾರೆ. ನಿನ್ನಿನ ದಿವಸ ಧಾರವಾಡದ ಶಿಕ್ಷಕರು ರಾ ಬ ಬಿ. ಎಲ್ ಪಾಟೀಲರ ಅಧ್ಯಕ್ಷತೆಯಲ್ಲಿ ಸಭೆ ಮಾಡಿ, ದಿವಾನರ ವಿಚಾರವನ್ನು ನಿಷೇಧಿಸಿದ್ದಾರೆ. ಅವಶ್ಯಕಂದರೆ- ಶಿಕ್ಷಕರ ಸ್ಪೇಶಲ ಪರಿಷತ್ತು ಕೂಡಿಸಿ, ಇದೇ ಪ್ರಕಾರ ಜಾಹೀರ ನಿಷೇಧ ಮಾಡುವರು. ಆದರೆ ಅವರು ಇಂಥ ಆಯಾಸಪಡತಕ್ಕ ಅವಶ್ಯಕತೆಯುಂಟಾದೀತೆಂದು ನಮಗೆ ತೋರುವದಿಲ್ಲ.

ಶಿಕ್ಷಕರ ಸಂಬಳದೆಂಬುದು ಸ್ಕೇಲುಂಟು. ಅದು ವಿದ್ಯಾಖಾತೆಯಲ್ಲಿ ಪಾಸಾದದ್ದಿರುತ್ತದೆ ಧಾರವಾಡದ ಟ್ರೇನಿಂಗ ಕಾಲೇಜದ ಮುಚ್ಚಿಗೆ ಕರ್ನಾಟಕದ ಮಾಸ್ತರ ಸಂಬಳ ಮಾತ್ರ ಕಡಿಮೆ ಮಾಡಲಿಕ್ಕೆ ಬರಲಾರದು. ಹಾಗೆ ಮಾಡಲಿಕ್ಕೆ ಬರುವದಿಲ್ಲ. ಸಿಂಧದ ಧರ ಸಾರ್ಕರದಿಂದ ಕಾರವಾರದ ಕೊನೆಯ ತನಕ ಶಿಕ್ಷಕರ ಸಂಬಳವನ್ನು ಹೆಚ್ಚು ಕಡಿಮೆ ಮಾಡಬೇಕಾಗುತ್ತದೆ ಕಡಿಮೆಯಂತೂ ಇಲ್ಲವೇ ಇಲ್ಲ. ಹೆಚ್ಚು ಮಾಡುವದೇ ಒಂದು ವಿಚಾರವಾಗಿರುತ್ತದೆ ನಾವೆ ಪರಾಂಜಪೆ ಸ್ಕೀಮಿಗೆ ಮುಳ್ಳು ಬಡೆಯಬೇಕೆಂದು ದಿವಾನ ಜಾದವರಾಯರು ಸುರ್ವೆಸಾಹೇಬರನ್ನು ನಿರ್ಮಾಣ ಮಾಡಿದರು. ಅವರು ಎಷ್ಟು ಸುತಕೊಂಡರೆಂಬದು ಎಲ್ಲರಿಗೂ ತಿಳಿದ ವಿಷಯವಾಗಿದೆ ಸುರ್ವೆಸಾಹೇಬರ ಶ್ರಮವೆಲ್ಲ ವ್ಯರ್ಥವಾಗಿ, ನಾವೆ ಪರಾಂ

ಜನೆ ಯೋಜನೆಯೇ ಕೌನ್ಸಿಲದಲ್ಲಿ ಒಪ್ಪಿಗೆ ಹೊಂದಿದೆ. ಆ ಪ್ರಕಾರ ಸಂಬಳ ಕೊಡುವದು ಮಾತ್ರ ಉಳಿದಿದೆ. ಈ ವರ್ಷದ ಬಜೆಟ್ಟದಲ್ಲಿ ಈ ಯೋಜನೆಯ ಮೇರೆಗೆ ರಕಮು ಹಾಕುವಂತೆ ಶಿಕ್ಷಕರು ಪ್ರಯತ್ನಿಸಬೇಕಾದದ್ದೇ ಅಗತ್ಯವಾದ ಕೆಲಸವು.

ದಿವಾನ ಬಹಾದ್ದೂರ ರೆಡ್ಡಿ ಶ್ರೀನಿವಾಸರಾಯರು ಶಿಕ್ಷಕರ ಸಂಬಳ ಕಡಿಮೆ ಮಾಡಬೇಕೆಂದ ಕೂಡಲೆ ಸರಕಾರವು ತಲೆದೂಗುವದೆಂದು ಯಾರೂ ತಿಳಿಯತಕ್ಕದ್ದಲ್ಲ. ದಿವಾನರು ಮಾಡುವ ಸೂಚನೆಯನ್ನು ವಿರೋಧಿಸುವಂಥ ಅನೇಕ ಮಹನೀಯರೂ ಇರುವರು. ಈಗಿನ ಶಿಕ್ಷಣ ಮಂತ್ರಿಯವರಂತೂ ಈ ವಿಚಾರಕ್ಕೆ ಎಷ್ಟೂ ಅಸ್ಪದ ಕೊಡಲಾರರು. ಟ್ರೇನಿಂಗ ಸ್ಕೂಲುಗಳು ಗುಟಕರಿಸಬಾರದೆಂದು ಪ್ರಯತ್ನ ಮಾಡಿದಂಥ ಗೃಹಸ್ಥರೆಲ್ಲರೂ ಶಿಕ್ಷಕರ ಸಂಬಳ ಕಡಿಮೆಯಾಗಕೂಡದೆಂದು ಒಂದೇ ಗುರಿ ಹಿಡಿಯುವರು ಮುಖ್ಯವಾಗಿ ಇದರ ನಿರ್ಣಯವು ಕೌನ್ಸಿಲದಲ್ಲಿ ಆಗಬೇಕಾಗುತ್ತದೆ. ಇದು ಸರಕಾರದ ಇಚ್ಛೆಯನ್ನು ಅವಲಂಬಿಸಿದಂಥ ಪ್ರಶ್ನವಲ್ಲ. ದಿವಾನ ಬಹಾದ್ದೂರ ರೆಡ್ಡಿರಾಯರು ಬರೇ ಸೂಚಕರಾಗಿದ್ದಾರೆ. ಕೌನ್ಸಿಲ ಮೆಂಬರರಲ್ಲ. ಮೆಂಬರರಾಗಿದ್ದರೆ ಕೌನ್ಸಿಲದಲ್ಲಿ ಠರಾವು ತರಬಹುದಾಗಿತ್ತು. ಆಗ ಏನಾಗುವದೆಂದು ಶಿಕ್ಷಕರು ತುಸು ಚಿಂತಿಸಬಹುದಾಗಿತ್ತು. ಅನೇಕರು ಅನೇಕ ಪ್ರಕಾರದ ಅಕ್ಷಿಪ್ತ ವಿಚಾರಗಳನ್ನು ಪ್ರಕಟ ಮಾಡುತ್ತಾರೆ. ಅವರಲ್ಲೊಂದು ದೊಡ್ಡರಾಯರಾಗಿದ್ದಾರೆಂದು ಊಹಿಸಿಕೊಂಡು ಶಿಕ್ಷಕರು ನಿಶ್ಚಿಂತೆಯಿಂದಿರಬೇಕೆಂದು ನಾವು ಆತ್ಮವಿಶ್ವಾಸದಿಂದ ಹೇಳುತ್ತೇವೆ.

ಮನುಷ್ಯನ ಉತ್ಪತ್ತಿಯು.

—೦—

ಮಂಗನಿಂದಲೋ? ಮೀನದಿಂದಲೋ?

—೦—

ಹಿಂದೂ ವಿಚಾರಗಳಿಂದ ನೋಡಲಾಗಿ ಮನುಷ್ಯನ ಉತ್ಪತ್ತಿಯ ಪ್ರಾರಂಭವು ಮೀನದಿಂದಾಗಿರುತ್ತದೆ ಮತ್ಸ್ಯಾವತಾರದಿಂದ ಪ್ರಾರಂಭವಾಗಿ ಕೃಷ್ಣಾವತಾರದ ತನಕ ಆತನು ಎಲ್ಲ ಪ್ರಕಾರದ ಸಂಸ್ಕಾರಗಳನ್ನೂ ಸುಖೋಪಭೋಗಗಳನ್ನೂ ಅನುಭವಿಸಿದನೆಂದು ಊಹೆಯಾಗುತ್ತದೆ ಇದಕ್ಕೆ ತೀರ ವಿರುದ್ಧವಾಗಿ ಮಂಗನಿಂದ ಮನುಷ್ಯನ ಹುಟ್ಟೆಂದು ಡಾರ್ವಿನಸಾಹೇಬನು ಶೋಧ ಹೇಳಿದ್ದಾನೆ. ಇದನ್ನು ಪಾಶ್ಚಿಮಾತ್ಯರು ಈ ಪರ್ಯಂತರ ನಂಬುತ್ತಾ ಬಂದಿದ್ದಾರೆ. ಆದರೆ ಈಗ ಬೀಡರನೆಂಬ ಪ್ರಾಣಿಶಾಸ್ತ್ರವೇತ್ತೆಯನು ಮನುಷ್ಯನ ಉತ್ಕ್ರಾಂತಿಯ ಪ್ರಾರಂಭವು ಮೀನದಿಂದಾಯಿತೆಂದು ಸಾಧಾರವಾಗಿ ಹೇಳುತ್ತಿದ್ದಾನೆ.

ವೇದ ಮತ್ತು ಕುರಾಣಕ್ಕೆ ಜಂಗೀ ಯುದ್ಧ.

—೦—

ಜಬಲಪೂರದಲ್ಲಿ ವೇದ ಮತ್ತು ಕುರಾಣಕ್ಕೆ ಜಂಗೀ ವಾಗ್ಯುದ್ಧ ನಡೆಯುವದು. ಕುರಾಣವು ದೇವವಾಣಿಯಾಗಿರುತ್ತದೆಂದು ಹಜರತ ಅಲಮಾ ದಾಬಾ ಎಂಬವರೂ, ವೇದವು ದೇವವಾಣಿಯಾಗಿರುತ್ತದೆಂದು ಪಂಡಿತ ಧರ್ಮಭಿಕ್ಷು ಎಂಬವರೂ ವಾದಿಸುವರು. ಈ ವಾದವಿವಾದ ಅಥವಾ ಖಂಡನವು ಮಂಡಣಮಿಶ್ರ ಮತ್ತು ಶ್ರೀ. ಶಂಕರಾಚಾರ್ಯರ ನಡುವೆ ಆದಂತಾಗುವದು ಹಜರತ ಅಲಮಾ ಸಾಹೇಬರು ನಾಲ್ಕೂ ವೇದಗಳ ಪಠಣ ಮಾಡಿ, ಮೌಲದಾಸ ಚತುರ್ವೇದಿ ಎಂಬ ಬಿರುದು ಹಚ್ಚಿಕೊಂಡಿದ್ದಾರೆ ಪಂಡಿತ ಧರ್ಮಭಿಕ್ಷು ಇವರು ಆರ್ಯ ಸಮಾಜದವರಾಗಿ ವೇದ ವೇದಾಂಗಗಳಲ್ಲಿ ಪಾರಂಗತರಾಗಿದ್ದಾರೆ. ಇವರಿಬ್ಬರೂ ಬರೇ ಸ್ಪರ್ಧೆ ಮಾಡುವದಿಲ್ಲ. ಸೋಲು ಗೆಲುವಿನಲ್ಲಿ ಶರತ್ತು ಹಾಕಿದ್ದಾರೆ ಹಜರತ ಸಾಹೇಬರು ಸೋತರೆ ಅವರು ಹಿಂದೂ ಧರ್ಮ ಸ್ವೀಕಾರ ಮಾಡತಕ್ಕದ್ದು. ಧರ್ಮಭಿಕ್ಷು ಸೋತರೆ ಮುಸಲಮಾನರಾಗತಕ್ಕದ್ದು. ವಾದವಿವಾದವು ಐವರು ಪಂಚರ ಮುಂದೆ ನಡೆಯುವದು. ಈ ವಾದದಲ್ಲಿ ತಮಗೆ ಸಹಾಯವಾಗಿ ಧರ್ಮಭಿಕ್ಷುರವರು ದಿಲ್ಲಿಯಿಂದ ಪಂಡಿತ ರಾಮಚಂದ್ರ ಮತ್ತು ದಿನಾಜಪೂರದಿಂದ ಪಂಡಿತ ಅಯೋಧ್ಯಾಪ್ರಸಾದರನ್ನು ಕರಿಸಿಕೊಂಡಿದ್ದಾರೆ.

ಬೆಳಗಾವಿಯ ಪೋಲೀಸ ಖಾತೆಯಲ್ಲಿ ಗದ್ದಲ

—೦—

ಮೂವರು ದೊಡ್ಡ ದೊಡ್ಡ ಕಾಮದಾರರಿಗೆ ಸಸ್ಪೆಂಡು.

—೦—

ಬೆಳಗಾವಿಯ ಪೋಲಿಸ ಖಾತೆಯಲ್ಲಿರುವ ಮೂವರು ದೊಡ್ಡ ಕಾಮದಾರರ ಮೇಲೆ ಲಂಚದ ಆರೋಪವಿಂದು ಸದ್ಯಕ್ಕೆ ಅವರು ಸಸ್ಪೆಂಡು ಮಾಡಲ್ಪಟ್ಟಿದ್ದಾರೆ ಅವರ ಹೆಸರು,

೧ ಮಿ- ರಂಗ ಡಿಪ್ಯೂಟಿ ಸು|| ಉತ್ತರಭಾಗ

೨ ಮಿ ಟರ್ನರ ಹೋಮ ಇನ್ಸಪೇಕ್ಟರ ಬೆಳಗಾವಿ

೩ ಮಿ ಮೊಘೆ ಸಬ್ ಇನ್ಸಪೇಕ್ಟರ ಬೆಳಗಾವಿಯ ಉತ್ತರ ಭಾಗ.

ಗುಪ್ತ ಪೋಲೀಸಖಾತೆಯ ಇನ್ಸಪೇಕ್ಟರರಾದ ಮಿ ಕಕ್ಕೇರಿಯವರು ಈ ಪ್ರಕರಣದ ತಪಾಸಣೆಗಾಗಿ ನೇಮಿಸಲ್ಪಟ್ಟಿದ್ದಾರೆ.

ಮ್ಯಾಜಿಸ್ಟ್ರೇಟರಿಗೂ ವಕೀಲರಿಗೂ ಚಕಮಕಿಯು.

ವಕೀಲರು ಕೋರ್ಟು ಬಿಟ್ಟು ಹೋದರು.

ಇಂದೂರಲ್ಲಾದ ಹಿಂದೂ ಮುಸಲಮಾನ ದಂಗೆಯಲ್ಲಿ ಮುಸಲಮಾನರ ಪಕ್ಷದಿಂದ ಕೆಲಸ ನಡಿಸಲಿಕ್ಕೆ ಹೋಗಿದ್ದ ಡಾಕ್ಟರ ಕಿಚಲೂಸಾಹೇಬರಿಗೆ ಹದ್ದುಪಾರನ ಹುಕುಮು ದೊರೆತ ಬಳಿಕ, ಬ್ಯಾರಿಸ್ಟರ ಮುಸಫಲಿಯವರು ಹೋದರು. ಇವರಿಗೂ ಮ್ಯಾಜಿಸ್ಟ್ರೇಟರಿಗೂ ಚಕಮಕಿಯಾಗಿ ಇವರೂ ಕೋರ್ಟಿಗೆ ಶರಣು ಹೊಡೆದು ಸ್ವಗ್ರಾಮದ ದಾರೀ ಹಿಡಿದರು. ಅದರ ವೃತ್ತಾಂತವು ಮುಂದೆ ಕೊಟ್ಟಂತಿರುತ್ತದೆ.

ಮುಸಫಲಿ- ಸಾಹೇಬರೇ- ಪೋಲೀಸರು ಕೋರ್ಟಿನಲ್ಲಿ ಆರೋಪಿಯು ಕೂಡ ಮಾತಾಡಲಿಕ್ಕೆ ಪ್ರತಿಬಂಧ ಮಾಡುತ್ತಾರೆ

ಮ್ಯಾ- ತುರಂಗಕ್ಕೆ ಹೋಗಿ ಅಲ್ಲಿ ಅವರ ಕೂಡ ಮಾತಾಡಬಹುದು

ಮು- ಕೋರ್ಟಿನಲ್ಲಿ ನನ್ನ ಅವರ ಕೂಡ ಮಾತಾಡುವ ಕಾಯದೆಶೀರ ಹಕ್ಕು ಇದೆ. ಪೋಲೀಸರು ಅಡ್ಡ ಬರುವದು ಗೈರಕಾಯದೆಯಾದದ್ದು. ಕಾಯದೆಯ ಪ್ರಕಾರ ವಕೀಲರಿಂದ ಕಿವಿಗೆ ಕೇಳಿಸದಷ್ಟು ದೂರ ಇರತಕ್ಕದ್ದು

ಮ್ಯಾ- ಈ ತರದ ಹುಕುಮು ಮಾಡುವ ಅಧಿಕಾರ ನನಗಿರುವದಿಲ್ಲ.

ಮು- ಸಾಹೇಬರೇ ನೀವ ಈ ಪ್ರಕಾರ ದರಲಿಂಗ ಕೊಡುವದಾದರೆ ನಾನು ಬಿಟ್ಟು ನಡಿಸಲಾರೆನು.

ಮ್ಯಾಜಿಸ್ಟ್ರೇಟರು ಉತ್ತರ ಕೊಡದಾಗಲು ಮಿ. ಮುಸಫಲಿಯವರು ಕೋರ್ಟಿಗೆ ಶರಣು ಹೊಡೆದು ದಿಲ್ಲಿಯ ದಾರೀ ಹಿಡಿದರು.

ಹಡಗದ ಮೇಲೆ ದರೋಡೆ.

—೦—

ಹಾಂಗಕಾಂಗದ ಹತ್ತರ ಚೀನೀ ಕಳ್ಳರು ಇಂಗ್ಲಿಷ ನಿಶಾನೆ ಏರಿಸಿಕೊಂಡು ಹೋಗುತ್ತಿದ್ದಂಥ ಕೂಚೆನ್ಗ ಎಂಬ ಹಡಗದಲ್ಲಿ ಹಗಲು ದರೋಡೆ ಹಾಕಿ, ಅದರ ಕಪ್ತಾನ ಮತ್ತು ಇನ್ನೂ ಮೂರರನ್ನು ಗುಂಡು ಹಾಕಿ ಕೊಂದು, ಹಡಗದಲ್ಲಿದ್ದ ಬೆಲೆಯುಳ್ಳ ಪದಾರ್ಥಗಳ ಲೂಟಿ ಮಾಡಿ, ಪ್ರವಾಸಿಕರಾಗಿದ್ದ ನೂರು ಜನ ಚೀನರನ್ನು ಸೆರೆ ಹಿಡಿದುಕೊಂಡು ಹೋದರು

ಷಯಕ್ಕೆ ಸಂಬಂಧಪಟ್ಟ ನಿರ್ಣಯವನ್ನು ತೋರಿಸದೆ ಕೇವಲ ಅಡಿನ್ಸಾಯ ಸಂಗತಿಯು ಹಾಗೂ ಕೌನ್ಸಿಲದಲ್ಲಿ ಪಾಸಾದ ಸಾತೆ ಪಠಾಂತಿಜಿಸ್ಟ್ರೇಷನ್ನು ಆದಷ್ಟು ಶೀಘ್ರ ಅನುಲಿಲ್ಲಿ ತರಬೇಕೆಂದು ಈ ಸಭೆಯು ಆತ್ಯಾಗ್ರಹದಿಂದ ಪ್ರಾರ್ಥಿಸುತ್ತದೆ.

೩ ಕ್ಲಾಸ ವರ್ನ್ಯಾಕ್ಯುಲರ ಫ ಯನಲ್ ಪರೀಕ್ಷೆಯನ್ನು ಪಾಸಾಗಿ ಇಪ್ಪತ್ತ ಆಗಿದೆ ಶಾಲಾ ಖಾತೆಯಲ್ಲಿ ಹತ್ತು ವರ್ಷ ಉತ್ತಮ ಕೆಲಸ ಮಾಡಿದವರಿಗೆ ಟ್ರೇನ್ಡ್ ಪ್ರಕಾರ ಸಂಬಳ ಸರ್ಟಿಫಿಕೇಟ ಕರ್ಣಾಟಕದ [illegible]ವನ್ನು ರದ್ದು ಮಾಡಿದ್ದು ಈ ರೂಲ್ಸ [illegible] ಅಮಲಿನಲ್ಲಿ ತರಬೇಕೆಂದು [illegible] ಈ ಸಭೆಯು [illegible]ತ್ತದೆ.

೪ [illegible] ನೇ ಇಸ್ವಿಯಲ್ಲಿ ಮುಕ್ತು [illegible] [illegible] [illegible]ಗಳ ಸ್ಕೇಲ [illegible] ಗಿ [illegible]

[illegible] ಅಪ್ರಕಟನದಿಂದ ಅಲ್ಲಿಯ ಜನರಿಗೆ [illegible] ಈ ಸಭೆಯು ಅತ್ಯಂತ ಬೇದ [illegible] ಅವರಿಗೆ ಸಹಾಯ ಮಾಡಲಿಕ್ಕೆ ಈ ಸಭೆಯು [illegible] ರೂಪಾಯಿಗಳನ್ನು [illegible] ಸಂಘದ ಸೆಕ್ರೆಟರಿ [illegible] ದೇಣಿಗೆಯದ [illegible] ನಿರ್ಧರಿಸುತ್ತದೆ.

ಕ. ಬ. ಮ. ಮಿಣ್ಣಗಟ್ಟಿ
ತಾ॥ [illegible] ಸೇಕ್ರೆಟರಿ
[illegible] ಧಾರವಾಡ.

ಕರುಣಾರ ಹುರುಪು!

[—[ ]—]

ಧಾರವಾಡ ಜಿಲ್ಲಾ ಬಂಕಾಪುರದಲ್ಲಿಯ [illegible]ಗಿಯ ಕರುಣಾ [illegible] ([illegible])ವೆಂಬ ಪಾಠಶಾಲೆಯನ್ನು ತಾ. ೧-೮-೨೭ನೇ ದಿವಸ ಸ್ಥಾಪನಾ ಮಾಡಿದರು ಮತ್ತು ಇದರ ಮೊದಲನೇ ಮೀಟಿಂಗು ಅದೇ ದಿವಸ ರಾತ್ರಿ ೭॥ ಘಂಟೆಗೆ ಇದೇ ಪಾಠಶಾಲೆಯಲ್ಲಿ ಶ್ರೀಯುತ ಪುಟ್ಟೇರಪ್ಪಾ ಹೊಲಪ್ಪಾ ಹಕ್ಕಟ್ಟಿ ಇವರ ಅಧ್ಯಕ್ಷತೆಯ ಕೆಳಗೆ ಜರಗಿತು ಈ ಮೀಟಿಂಗಿನಲ್ಲಿ ಮಿ॥ ಬಸಬಸಪ್ಪಾ [illegible] ಇವರು ಪಾಠಶಾಲೆಯದ ಆವಶ್ಯಕತೆಯ ಬಗ್ಗೆ ಜನರ ಮೇಲೆ ಪರಿಣಾಮವಾಗುವಂತೆ ಸುಭಾಷಣವನ್ನು ಮಾಡಿದರು. ನಂತರ ಮಿ॥ ಶಿವಲಿಂಗಪ್ಪಾ ಕೋರಿ ಇವರು ಸಂಸ್ಥೆಗೆ ಬೇಕಾದ ಆವಶ್ಯಕತೆಯ ಬಗ್ಗೆ ಒಳ್ಳೇ ಹುರುಪಿನಿಂದ ತಮ್ಮ ಭಾಷಣ ಮಾಡಿದರು. ಆ ಮೇಲೆ ಮಿ ದಯಾನಂದ ಶಿಗ್ಗಾಂವಕರ ಇವರು ಈಗಿನ ತರುಣರಲ್ಲಿ ನೆಲೆಗೊಂಡಿರುವ ಚಟಿಗಳಿಗೆ ಖರ್ಚ ಮಾಡುವ ಹಣದಲ್ಲಿ ಕೆಲ ಪಾಲನ್ನಾದರೂ ಶಾಲೆಗೆಯು ಗೋಸಂರಕ್ಷಣ ಸಂಘ ಇಂಥ ಸತ್ಕಾರ್ಯಗಳಿಗೆ ಸಹಾಯ ಮಾಡಬೇಕಾಗಿ ಹೇಳಿದ ಮೇಲೆ ಅಧ್ಯಕ್ಷರು ತಮ್ಮ ಸ್ವಭಾವಿಕ ಗಂಭೀರವಾಣಿಯಿಂದ ಅಲ್ಲಿ ಕೂಡಿದ ತರುಣರ ಹಾಗೂ ಸದ್ಗೃಹಸ್ಥರ ಮೇಲೆ ಪರಿಣಾಮವಾಗುವಂತೆ ಒಳ್ಳೇ ಕಳಕಳಿಯಿಂದ ಭಾಷಣ ಮಾಡಿ ಅಲ್ಲಿ ಕೂಡಿದ ಮಹನೀಯರ ಕಡೆಯಿಂದ ವರ್ಗಣಿಗಳಿಗೆ ಭಾಷೆಯನ್ನು ತಕ್ಕೊಂಡರು.

ಅದರಲ್ಲಿ ಮೊಗ್ಗದ ವಹಿಸಿದವರ ಹೆಸರುಗಳು.

ಶ್ರೀಯುತರಾದ ವೈಕಟಪ್ಪನವರು [illegible] ಹಸಿಪರಿ ಶ್ರೀ ವೀರೇಂದ್ರಪ್ಪನವರು ಗರಗಟ್ಟಿ. ಶ್ರೀ. ಗುಡ್ಡಪ್ಪಾ ಹಳ್ಳೂರ ಶ್ರೀ. ಮರಿಕೊಟ್ರಪ್ಪಾ [illegible] ಸಾ॥ ತುಪ್ಪದಕಟ್ಟಿ ಶ್ರೀ ಶಿವಲಿಂಗಪ್ಪಾ ಕೋರಿ (ಸೆಕ್ರೆಟರಿ) ಶ್ರೀ. ದಯಾನಂದ ಶಿಗ್ಗಾಂವ್ಕರ (ವ್ಯವಸ್ಥಾಪಕ) ಶ್ರೀ. [illegible] ಅಶೆಟ್ಟಿ ಶ್ರೀ. ವೈಲಂಕಪ್ಪ ಹುಳ್ಯಾಳ ಶ್ರೀ. ಬಸವಣ್ಣೆಪ್ಪಾ ಶೆಟ್ರು ಶ್ರೀ ಮಹಾದೇವಪ್ಪಾ [illegible] ಶ್ರೀ. [illegible] ಕಟ್ಟಿಹಳ್ಳಿ ಶ್ರೀ. ವಿರೂಪಾಕ್ಷಪ್ಪಾ ಬಾಂಡಕ ಶ್ರೀ. ಶಿವನಗೌಡ್ರು ತಿಪಶೆಟ್ಟಿ ಶ್ರೀ. ಶಿವರಾಯಪ್ಪಾ ವೃಕ್ಷರ ಶ್ರೀ. ಪುಟ್ಟಪ್ಪಾ ಕಲಬುರ್ಗಿ.

ಈ ಪ್ರಕಾರ ಇವರು ಸಹಾಯ ಮಾಡಲು ಸ್ವಸಂತೋಷದಿಂದ ಒಪ್ಪಿಕೊಂಡಿದ್ದಾರೆ ಇದರ ಮೇಲಿಂದ ಇದು ತೀವ್ರ ಒಳ್ಳೇ ಉರ್ಜಿತ ಸ್ಥಿತಿಗೆ ಬರುತ್ತದೆಂಬುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಕರ್ನಾಟಕ ಹುರುಪಿನ ತರುಣರ ಸಂಘಕ್ಕೆ ಸಹಾಯ ಮಾಡಿ ತಮ್ಮ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕೆಂದು ಕೋರುವೆ,

ತಮ್ಮ
ಎಸ್. ಎಸ್. ಕೋರಿ.
ಸೆಕ್ರೆಟರಿ.

ಚಂದ್ರಗೌಡರ ಪ್ರಕರಣ.

—೦—

ಜೋಶಿಯು ಮಾಫೀ ಸಾಕ್ಷಿದಾರ.

ಇಲ್ಲಿ ನಡೆದ ಮಿ. ಚಂದ್ರಗೌಡರ ಪ್ರಕರಣದಲ್ಲಿ ಜೋಶಿ ಎಂಬ ಆರೋಪಿಯು ತನ್ನ ಜವಾಬನ್ನು ದುರಸ್ತು ಮಾಡಿದ ಸಂಗತಿಯನ್ನು ಈ ಮೊದಲು ಬರೆದಿರುತ್ತೇವಷ್ಟೇ. ಮ್ಯಾಜಿಸ್ಟ್ರೇಟರು ಮೊನ್ನಿನ ದಿವಸ ಈತನು ಮಾಫೀ ಸಾಕ್ಷಿದಾರ ಮಾಡಿಕೊಂಡರೆಂದು ತಿಳಿಯುತ್ತದೆ.

ಬರೇಲಿಯಲ್ಲಾದ ದಂಗೆಯಲ್ಲಿ ೧೪ ಜನರು ಸತ್ತರು ೩೦೦ ಜನರು ಘಾಯವಾಗಿದ್ದಾರೆ.

ನೋಟೀಸು

ಸಿಂಗಪ್ಪಾ ಬಿನ್ನ ರಾಮಣ್ಣಾ ಮಾಳಣ್ಣನವರ ಸ॥ ಕೆಲವರಕೊಪ್ಪ ತಾಲೂಕ ಹಾನಗಲ್ಲ ಇವನಿಗೆ

ಕೆಳಗೆ ಸಹಿ ಮಾಡಿದವಳ ಕಡಿಂದಾ ಈ ನೋಟೀಸಿನ ದ್ವಾರ ತಿಳಿಸುವದೇನಂದರೆ.

ನೀನು ನನ್ನ ಮದುವೆಯ ಗಂಡನಿದ್ದು ನನ್ನನ್ನು [illegible] ಮಾಡಿಕೊಂಡು ಈಗ ೪-೫ ವರ್ಷವಾಯಿತು ಮೊದಲು ೧-೨ ವರ್ಷ ಒಳ್ಳೇ ರೀತಿಯಿಂದಾ ನನ್ನ ಕೂಡಾ ಬಾಳುವೆ ಮಾಡಿದಿ ನಂತರ ನೀನು ಹೊರಚಳಿ ಬಿದ್ದು ನನ್ನನ್ನು ತಪ್ಪ ಮಾಡ ಹೊಡೆದು ಬಡದು ತ್ರಾಸಗೊಟ್ಟು ಮನೆಬಿಟ್ಟು ಹೊರಗೆ ಹಾಕಿದಿ ಬುದ್ಧಿವಂತರ ಕಡಿಯಿಂದಾ ನಿನಗ ಎಷ್ಟೋ ಸಾರೆ ಹೇಳಿಸಿದೆ ಆದರೂ ನೀನು ನಿನ್ನ ನಡತಿ ಬಿಡಲಿಲ್ಲಾ ಪುನಃ ನಿನ್ನ ಕೂಡಾ ಬಾಳುವೆ ಮಾಡೋ ಇಚ್ಛಾದಿಂದ ನಾನಾಗಿ ಬಂದರೂ ನನಗೆ ಬಹಳ ತ್ರಾಸಗೊಟ್ಟು ಹೊಡಿಸಿ ದುಃಖಪಡಿಸುತ್ತು ಕೂಟ್ಟಿ ಮತ್ತು ನನ್ನ ಜೀವಕ್ಕ ಧಕ್ಕೆ ಮಾಡೋ ಪ್ರಯತ್ನ ಸಹಾ ಮಾಡಿದಿ ಈಗ ಒಂದು ವರ್ಷದ ಹಿಂದೆ ನನಗೆ ಬಹಳೇ ತ್ರಾಸಗೊಟ್ಟು ನೈಮೇಲಿನ ದಾಗೀನೆ ಸಹಾ ಕಸಗೊಂಡು ಉಟ್ಟ ಶೀರೆಯ ಮೇಲೆ ಮನೆಬಿಟ್ಟು ಹೊರಗೆ ಹಾಕಿದಿ ಆ ಲಾಗಾಯತು ನನ್ನ ಉಪಜೀವನದ ಸಂಬಂಧ ಶಿವಯ್ಯನ ಹತ್ತರ ಸಾಲಾ ಮಾಡಿ ನನ್ನ ಉಪಜೀವನ ಸಾಗಿಸುತ್ತೇನ ಈಗ ಈ ನೋಟೀಸು ಮುಟ್ಟಿದ ೮ ದಿವಸದ ಒಳಗಾಗಿ ನನಗೆ ಹೊಟ್ಟೆದ ಕೊಡಾ ಖರ್ಚ ಆದ ಒಂದು ನೂರು ರೂಪಾಯಿ ಸಾಲಾ (೧೦೦) ನನ್ನನ್ನು ಒಳ್ಳೇ ರೀತಿಯಿಂದಾ ಮುಂದೆ ನಡಿಸಿಕೊಂಬೋ ಬಗ್ಗೆ ಮತ್ತು ನೀನು ಕಟ್ಟಿಕೊಳ್ಳಬೋ ಬಗ್ಗೆ ಯೋಗ್ಯ ಜಾಮೀನು ಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು ಇಲ್ಲದಿದ್ದರೆ ನಾನು ಇದೇ ನೋಟೀಸಿನಂತಾ ಕಿಳ್ದು ತಿನೇ ಕಡಿಗೆ ಕೋರ್ಟ ಉದ್ಯೋಗ ಮಾಡಿಕೊಳ್ಳತೇನೆ ಈ ಮೇಲೆ ನನ್ನ ಮೇಲೆ ವ ನನ್ನ ಉದ್ಯೋಗಗಳ ಮೇಲೆ ನಿನ್ನ ಇಲಾಜ ಏನೂ ನಡಿಯುವದಿಲ್ಲಾ ಈ ನೋಟೀಸಿನ ಖರ್ಚು ನಿನ್ನ ತಲಿಯ ಮೇಲೆ ಅದೆ ತಾರೀಖು ೨೬-೮-೨೭ ಇಸ್ವಿ.

ಈ ಎ ಸ್ಟೇ. ಹೆ. ಗು. ಭರಮಪ್ಪ ಕೋರಿ ನಿಂಗಪ್ಪಾ ಮಾಳಣ್ಣವರ ಸಾ. ಕೆಲವರಕೊಪ್ಪ ಹಾಲಿ ಅವಸ್ಥೆ ಕೀಸಗಿರಿ ಹೋಸ್ಟ್ ಬಳೂರ ತಾಲೂಕ ಹಾನಗಲ್ಲ ಇವಳು ಮಾಡಿದ್ದು ಅದೆ

ಈ ಪತ್ರವನ್ನು ಅಣ್ಣಾಚಾರ್ಯ ಬಾಲಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ಮಾತೃಭಾಷಾ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೪) ಧಾರವಾಡ ಬುಧವಾರ ತಾರೀಖು ೭ ನೇ ಸಪ್ಟಂಬರ ೧೯೩೭ (ಸಂಚಿಕೆ ೧೯೨

ಕಿರ್ಲೋಸ್ಕರ ಶೇಂಗಾ [ಭೂಶೇಂಗಾ] ಒಡೆಯುವ ಯಂತ್ರಗಳು



ಈ ಯಂತ್ರಗಳು ಎರಡು ಮಾದರಿಯವು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಕಬ್ಬಿಣದವು. ಬಾಳಿಕೆ ಉತ್ತಮವು. ಹೊಟ್ಟನ್ನು ಝಾಡಿಸಲು ಯಂತ್ರದಲ್ಲಿ ಬೀಸಣಿಕೆಯನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳು ಕಳೆದ ಹಂಗಾಮುದಲ್ಲಿ ಬಹು ಬಿಕ್ಕಿಯಾಗಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಯಾಣ್ಣೆ ಮಾಡತಕ್ಕವರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯವಶ್ಯಕವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧೂ ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಿಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ [illegible] ಸ್ಥಾನ.

ಜಂದಿಗೆಯ [illegible] ಲಕ್ಷದ [illegible] ಮೇಲುಂಟು. ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ [illegible] ದೇವ ಕರಾರ [illegible]

[illegible] ಮಾಡಿದವರಿಂದ [illegible]

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಇಡಾಗಿ ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. [illegible]

ಮ್ಯಾನೇಜಿಂಗ ಡಾಯರೆಕ್ಟರ

ಹೊಟೇಲಿನ ದರಗಳು.

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದ ಪ್ರತಿಯೊಂದು ವಳಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಕರಕರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಟ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ „	೭—೦—೦ ರೂ
೪ „	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

೨ನೇ ಹನುಮಾನದ ಗೊಂದಲ	[illegible]
ವಿಚಿತ್ರ ಸಂಶಯ	[illegible]
ದೇಶಬಂಧು ದಾಸರ ಚರಿತ್ರೆ	[illegible]
ದೇಶಭಕ್ತರ ಸಂದೇಶ	[illegible]

ಈ ಪುಸ್ತಕಗಳನ್ನು ಒಟ್ಟಿಗೆ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡಬಹುದು [illegible] ಟಪಾಲು ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ ಧಾರವಾಡ

ವಿಜಯ.

ಧಾರವಾಡ ತಾ- ೭-೯-೨೭ ನೇ ಇಸ್ವಿ

ಕರ್ನಾಟಕಕ್ಕೆ ಸ್ವತಂತ್ರ ರಾಷ್ಟ್ರದಿನವು.

ಕರ್ನಾಟಕಕ್ಕೆ ಸ್ವತಂತ್ರವಾದ ರಾಷ್ಟ್ರದಿನವಿರಬೇಕೆಂಬ ಚರ್ಚೆ ಮತ್ತು ಚಳವಳಿಯನ್ನು ವಿಜಾಪೂರದವರು ನಡೆಸಿದ್ದಾರೆ. ಇದರಲ್ಲಿ ಬ್ರಾಹ್ಮಣ- ಬ್ರಾಹ್ಮಣೇತರರೂ ಸೇರಿದ್ದಾರೆ. ಮುಸಲಮಾನರನ್ನೂ ಕೂಡಿಸಿಕೊಳ್ಳುವ ವಿಚಾರವುಂಟು ಯಾವದೊಂದು ದೇವರ ಹಾಗು ಯಾವನೊಬ್ಬ ಸತ್ಪುರುಷನ ಹೆಸರಿನಿಂದ ಉತ್ಸವ ಮಾಡಿದರೆ- ಅದು ಎಲ್ಲ ಜಾತಿಯವರಿಗೂ ಸರಿಯಾಗಿ ಒಪ್ಪಿಗೆಯಾಗುವದಿಲ್ಲ; ಆದ್ದರಿಂದ ರಾಷ್ಟ್ರೀಯ ದಿನವೆನ್ನುವಂಥ ಒಂದು ದಿವಸವನ್ನು ಗೊತ್ತು ಮಾಡುವದು ಇವರಿಗೆ ತೀರ ಅವಶ್ಯಕವೆನಿಸಿರುತ್ತದೆ.

ಈ ಕಮಿಟಿಯಲ್ಲಿ ಕೂಡಿದ ವೀರಶೈವರು ಗಣಪತಿಯ ಉತ್ಸವಕ್ಕೆ ಹೆಸರಿಟ್ಟದ್ದನ್ನು ಓದಿ ಸಮಗೆ ಸೋಜಿಗವೆನಿಸಿತು. "ಗಣೇಶೋತ್ಸವ ಪಾಲಿಸುವದರಿಂದ ಕನ್ನಡಿಗರ ಮೇಲೆ ಪುಣೆಯ ಜನರ ವರ್ಚಸ್ಸು ಕೂಡುತ್ತದೆ. ಬಹು ಸಂಖ್ಯಾಕರಾದ ವೀರಶೈವರಿಗೆ ಇದು ಮಾನ್ಯವಲ್ಲ " ಎಂಬದಾಗಿ ಮಿ. ಚಿಕ್ಕೋಡಿಯವರು ಉದ್ಗಾರ ತೆಗೆದಿದ್ದಾರೆ. ಪುಣೆಯ ಜನರು ವರ್ಚಸ್ಸು ಬೀಳಬಾರದೆಂದು ಸಾರ್ವಜನಿಕವಾಗಿ ಗಜಾನನೋತ್ಸವ ಮಾಡಬಾರದೆಂದು ಮಿ. ಚಿಕ್ಕೋಡಿಯವರು ಹೇಳುವ ಬುದ್ಧಿವಂತಿಕೆಯು ಅಸಾಧಾರಣವಾದದ್ದೇ ಸರಿ. ಈ ಉತ್ಸವವು ರಾಷ್ಟ್ರೀಯವಾಗಬೇಕೆಂತಲೇ ಲೋಕಮಾನ್ಯರು ಇದನ್ನು ಪ್ರಾರಂಭಿಸಿದ್ದಾರೆ. ಈ ಉತ್ಸವವನ್ನು ಮಾಡಿದರೆ- ಮಹಾರಾಷ್ಟ್ರದ ವರ್ಚಸ್ಸು ಹೇಗೆ ಬೀಳುವದು? ಅವರ ಅನುಕರಣವನ್ನು ಹೇಗೆ ಮಾಡಿದಂತಾಗುವದೆಂಬದೂ ತಿಳಿಯದು. ಮೇಳ, ವ್ಯಾಖ್ಯಾನಗಳು ತದ್ರೂಪವಾಗುತ್ತವೆಂದು ಹೇಗೆ ತಿಳಿಯಬೇಕು? ಮೇಳ ಮತ್ತು ವ್ಯಾಖ್ಯಾನಗಳು ಮುಖ್ಯವೋ? ಗಣಪತಿಯು ಮುಖ್ಯನೋ? ಎಂಬ ವಿಚಾರವನ್ನೇ ಇವರು ಮಾಡಿದಂತೆ ತೋರಲಿಲ್ಲ. ಗಣಪತಿಯು ವಿದ್ಯಾಭಿಮಾನಿಯಾದ ದೇವರು. ಈ ಅಭಿಮಾನ ಹಿಡಿದು ಹಿಂದೂ ಜನರು ಯಾವದೊಂದು ರೀತಿಯಿಂದ ಈ ಉತ್ಸವ ಮಾಡಬೇಕಾಗುತ್ತದೆ. ಹಿಂದೂ ಜನರು ಹಿಂದುತ್ವವನ್ನು ಕಾಯ್ದುಕೊಳ್ಳುವದಕ್ಕೆ ಗಣಪತಿಯು ಎಲ್ಲ ಪಂಥದವರಿಗೂ ಒಪ್ಪಿಗೆಯಾದವನಾಗಿದ್ದಾನೆ. ಬ್ರಾಹ್ಮಣರಿಂದ ಪ್ರಾರಂಭಿಸಿ ಅಂತ್ಯಜರ ತನಕ ಎಲ್ಲ ಹಿಂದೂ ಜನರು ಒಂದೆಡೆಯಲ್ಲಿ ಕೂತು ಹಿಂದುತ್ವವನ್ನು ಕಾಯ್ದುಕೊಳ್ಳುವದಕ್ಕೆ ಗಣಪತಿಯು ಹೊರ್ತು ಬೇರೊಬ್ಬ ದೇವರೇ ಇರುವದಿಲ್ಲ. ಆದ್ದರಿಂದ ಇದು ಪುಣೆಯಿಂದ ಬಂದದ್ದೆಂದು ತುಚ್ಛ ಮಾಡದೆ, ಅದರ ಗುಣ ತಕ್ಕೊಳ್ಳಬೇಕಾದದ್ದು ಅವಶ್ಯಕವು.

ದಸರೆಯು ಹೇಗೆ ರಾಷ್ಟ್ರೀಯ ದಿನವಾಗುವದೆಂಬದೂ ತಿಳಿಯದು. ಇದು ಕ್ಷತ್ರಿಯರ ಮುಖ್ಯ ದಿನವು. ರಾಜರು ಯುದ್ಧ ಮಾಡುವದಕ್ಕೆ ಮುಹೂರ್ತ ಮಾಡುವ ದಿವಸವು. ಅದಂತೂ ಈಗ ಇಲ್ಲವೇ ಇಲ್ಲ. ಅನೇಕ ಮತದವರು ತಂತಮ್ಮ ದೇವರ ಪಲ್ಲಕ್ಕಿಗಳನ್ನು ಹೊರಡಿಸಿ ಬೇರೆ, ಬೇರೆ ಸ್ಥಳಗಳಿಗೆ ಬನ್ನೀ ಮುಡಿಯಲಿಕ್ಕೆ ಹೋಗುವರು. ಅಂದು ಎಲ್ಲರೂ ಒಂದೇ ಸ್ಥಳದಲ್ಲಿ ಸೇರುವರೆಂದು ತಿಳಿಯಲಿಕ್ಕಾಗದು.

ಒನವರಿಯ ೧ನೆಯ ತಾರೀಖು ಅಥವಾ ಬಾದಶಹರ ಹುಟ್ಟಿದ ದಿವಸ ಬ್ರಿಟಿಶ ಸಾಮ್ರಾಜ್ಯದಲ್ಲೆಲ್ಲ ದಂಡಿನ ಕವಾಯಿತು ಆಗುವದು. ಆ ದಿನವು ಬ್ರಿಟಿಶರಿಗೆ ರಾಷ್ಟ್ರೀಯ ದಿವಸವೆನಿಸುವದು. ಅಂಥದೊಂದು ಪದ್ಧತಿ ಹಾಕುವ ಪ್ರಕಾರವು ಕರ್ನಾಟಕಕ್ಕೆ ಬೇಕಾಗಿರುತ್ತದೆ. ಅದು ವಿಸ್ಯಾಕರ್ಣ್ಯರಿಂದಾಗುವಂತಿಲ್ಲ. ಏಕೆಂದರೆ- ಈ ಉತ್ಸವದಲ್ಲಿ ಮುಸಲಮಾನರು ಸೇರರು. ಬಸವಜಯಂತಿಯ ಒಗ್ಗೆ ಆ ಮತಸ್ಥರಲ್ಲಿಯೇ ಮತಭೇದವುಂಟು. ಎಲ್ಲ ಜನರು ಸೇರದಿದ್ದರೂ, ಆಯಾ ಮತದವರು ಪಂಥದವರು ಈ ಉತ್ಸವ ಮಾಡಿ, ಅನ್ಯರ ಸಹಾನುಭೂತಿಯನ್ನು ಪಡೆಯಬೇಕು. ಈ ಪರಸ್ಪರ ಸಹಾನುಭೂತಿಯು ಹಿಂದೂ ಜನರಲ್ಲಾದರೂ ಐಕ್ಯಾಭಿವೃದ್ಧಿ ಮಾಡಿಸುವದು.

ಮುಸಲಮಾನ, ಕ್ರಿಶ್ಚನ್ನ, ಪಾರ್ಸಿ, ಮೊದಲಾದವರು ಕರ್ನಾಟಕದ ರಾಷ್ಟ್ರೀಯ ಉತ್ಸವದಲ್ಲಿ ಸೇರಬೇಕಾದರೆ- ಅಂಥದೊಂದು ದಿವಸವೇ ಬೇಕು. ಅದು ಸದ್ಯದಲ್ಲಿ ಕಾಂಗ್ರೆಸ ಪ್ರಾರಂಭ ದಿವಸ ಮಾಡಿಕೊಂಡರೆ- ಸರ್ವ ಸಮ್ಮತವಾಗುತ್ತವೆ. ಕಾಂಗ್ರೆಸ ಸೇರುವ ದಿವಸ ಪ್ರತಿಯೊಂದು ಊರಲ್ಲಿ ಸಭೆಯಾಗಿ, ಅಧ್ಯಕ್ಷರ ಭಾಷಣವನ್ನು ಓದುವ ಪದ್ಧತಿ ಹಾಕಬೇಕು. ಈ ಭಾಷಣದ ಕೂಡ ಕರ್ನಾಟಕದ ಏಕೀಕರಣ, ಕರ್ನಾಟಕ ಸ್ವತಂತ್ರಪ್ರಾಂತ, ಮತ್ತು ಸ್ವರಾಜ್ಯದ ಠರಾವು ಮಾಡಬೇಕು. ಮುಂದೆ ಕರ್ನಾಟಕವು ಸ್ವತಂತ್ರ ಪ್ರಾಂತವಾಯಿತೆಂದರೆ- ಕಾಯದೆ ಕೌನ್ಸಿಲ ಸಭೆಯವರು ಒಂದು ದಿನ ಗೊತ್ತು ಮಾಡಬೇಕು. ಅದಕ್ಕೆ ರಾಜಾಜ್ಞೆಯು ಮಹತ್ವ ಬರುವದರಿಂದ, ಅದನ್ನು ಸರಕಾರೀ ಕಾಮದಾರರೇ ಮೊದಲಾಗಿ ಎಲ್ಲರೂ ಆನಂದದಿಂದ ಪಾಲಿಸುವರು.

ಶಕಲಾತವಾಲಾನ ಮೇಲೆ ಸರಕಾರದ ಸುದರ್ಶನ ಚಕ್ರ.

ಪಾರ್ಲಮೆಂಟ ಸಭೆಯ ಮೆಂಬರರಾದ ಮಿ. ಶಕಲಾತವಾಲಾ ಇವರು ಹಿಂದುಸ್ಥಾನಕ್ಕೆ ಬಂದು ಹೋದ ಸಂಗತಿಯು ವಾಚಕರಿಗೆ ಗೊತ್ತುಂಟು. ಅವರು ಗೃಹಕೃತ್ಯದ ದೆಸೆಯಿಂದ ಪುನಃ ಈ ದೇಶಕ್ಕೆ ಬರಲು ಲಂಡನದಲ್ಲಿ ಪಾಸಪೋರ್ಟ ಪಡಕೊಂಡರು. ಅಲ್ಲಿಂದ ಹಾಗವೇರತಕ್ಕವರಿದ್ದರು. ಇಷ್ಟರಲ್ಲಿ ಹಿಂದುಸ್ಥಾನ ಸರಕಾರದವರು ಮಿ. ಶಕಲಾತವಾಲಾನವರ ಪಾಸಪೋರ್ಟನ್ನು ರದ್ದು ಮಾಡಬೇಕು. ಅವರನ್ನು ಹಿಂದುಸ್ಥಾನಕ್ಕೆ ಬರಗೊಡಬಾರದೆಂದು ವಿಲಾಯತಿ ಸರಕಾರಕ್ಕೆ ತಾರಿನಿಂದ ತಿಳಿಸಲು ಅವರು ಇವರ ಪಾಸಪೋರ್ಟನ್ನು ರದ್ದು ಮಾಡಿ, ನಿಮ್ಮ ಫೀ ಹಣವನ್ನು ತಿರುಗಿ ತಕ್ಕೊಂಡು ಹೋಗಿರೆಂದು ಇವರಿಗೆ ತಿಳಿಸಿದ್ದಾರೆ. ಮಿ. ಶಕಲಾತಾವಾಲಾನವರು ಹಿಂದುಸ್ಥಾನದವರು. ಇದೇ ಅವರ ಜನ್ಮಭೂಮಿಯು ತಮ್ಮ ಮಾತೃ ದೇಶಕ್ಕೆ ಬರದಂಥ ಅಕ್ಷಮ್ಯ ಅಪರಾಧವನ್ನು ಈ ಸಾಹೇಬರು ಹೇಗೆ ಮಾಡುತ್ತಾರೆಂಬದನ್ನು ಸಿದ್ಧಮಾಡಿ ತೋರಿಸಿದ ಹೊರತು ಸರಕಾರದವು ಈ ಪ್ರಸಂಗದಲ್ಲಿ ನ್ಯಾಯವಾಗಿ ನಡೆಯಿತೆಂದು ಹೇಳಲಿಕ್ಕಾಗುವದಿಲ್ಲ. ಮೇಲಾಗಿ ಇವರು ಪಾರ್ಲಮೆಂಟದ ಮೆಂಬರರು. ಇವರಿಗೆ ಬ್ರಿಟಿಶ ಸಾಮ್ರಾಜ್ಯದಲ್ಲೆಲ್ಲಿಯೂ ಪ್ರತಿಬಂಧಕವಿರಕೂಡದು.

ಈ ಮೊದಲು ಸರಕಾರದವರು ಮಿ. ಹಾರ್ನಿಮನ್ನಸಾಹೇಬರಿಗೆ ಈ ದೇಶದಿಂದ ಹೊರಗೆ ಹಾಕಿದ್ದರು. ಅವರು ಪದೇ ಪದೇ ಕೇಳಿದರೂ ಪಾಸಪೋರ್ಟ ಕೊಡಲಿಲ್ಲ. ಕೊನೆಗೆ ಅವರು ಲಂಕೆಗೆ ಬಂದರು. ಅಲ್ಲಿಂದ ಸತ್ಯಾಗ್ರಹ ಮತ್ತು ಕಾಯದೆ ಭಂಗ ಮಾಡಿ, ಮದ್ರಾಸಕ್ಕೆ ಬಂದರು. ಬ್ರಿಟಿಶ ಪ್ರಜನಿಗೆ ಪಾಸಪೋರ್ಟ ಬೇಕಾಗುವದಿಲ್ಲೆಂದೇ ಆಗ ಹೇಳಲ್ಪಟ್ಟಿತು. ಮಿ. ಹಾರ್ನಿಮನ್ನರಂತೆ ಮಿ. ಶಕಲಾತವಾಲಾನವರೂ ಸತ್ಯಾಗ್ರಹ ಮತ್ತು ಕಾಯದೆಭಂಗ ಮಾಡಿ, ಬ್ರಿಟಿಶ ನಾಗರಿಕನೆಂಬ ಹಕ್ಕು ಸ್ಥಾಪಿಸಬಹುದಾಗಿದೆ.

ಮದ್ರಾಸದಲ್ಲಿ ಕಾಂಗ್ರೆಸದ ಸ್ವಾಗತ ಕಮಿಟಿ ಕೂಡಿ ಡಾಕ್ಟರ ಅನಸಾರಿಯವರು ಕಾಂಗ್ರೆಸದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು.

ಹುಬ್ಬಳ್ಳಿಯಲ್ಲಿ ಇಬ್ಬರು ಸೂಳೆಯರ ಭಯಂಕರ ಕೊಲೆ

—೦—

ಒಬ್ಬಳ ಕುತ್ತಿಗೆ ಹಾರಿಸಿದರು. ಒಬ್ಬಳ ಹೊಟ್ಟೆ ಕತ್ತರಿಸಿದರು.

—೦—

ಹುಬ್ಬಳ್ಳಿಯಲ್ಲಿ ದುರ್ಗದ ಬೈಲಿನಲ್ಲಿರುವ ವ ಶ್ರೀ ದತ್ತಾತ್ರಯನ ಗುಡಿಯ ಹತ್ತರಿರುವ ಒಂದು ಉಪ್ಪರಿಗೆಯ ಮನೆಯಲ್ಲಿ ಉಜ್ಜು ಮತ್ತು ಮಲ್ಲಿ ಎಂಬ ಹೆಸರಿನ ತಿಳವಳ್ಳಿಯ ಇಬ್ಬರು ಸೂಳೆಯರು ಸೂಳೆತನ ಮಾಡಿಕೊಂಡು ಜೀವಿಸುತ್ತಿದ್ದರು. ಇವರ ಮೈಮೇಲೆ ಕೇವೆರಡುಶೇರು ಬಂಗಾರವಿತ್ತು. ಈ ಬಂಗಾರವನ್ನು ಅಪಹರಿಸಬೇಕೆಂಬ ನೀಚ ಉದ್ದೇಶದಿಂದ ಇವರಿಬ್ಬರನ್ನು ಆದಿತ್ಯವಾರ ರಾತ್ರಿಯಲ್ಲಿ ಭಯಂಕರ ರೀತಿಯಿಂದ ಕೊಲೆ ಮಾಡಿದ್ದಾರೆ. ಒಬ್ಬಳು ಕೆಳಗೆ ಮಲಗಿದ್ದಳು. ಇನ್ನೊಬ್ಬಳು ಮೇಲೆ ಮಲಗಿದ್ದಳು. ಇಬ್ಬರನ್ನೂ ಏಕ ಕಾಲಕ್ಕೆ ಕೊಂದಿರುವರು. ಇಬ್ಬರು, ಇಬ್ಬರಿಗಿಂತ ಹೆಚ್ಚು ಜನರು ಮುಂದಾಗಿ ಮಸಲತ ಮಾಡಿ, ಕೊಲೆ ಮಾಡಿರಬೇಕೆಂದು ಸಹಜವಾಗಿ ತರ್ಕವಾಗುತ್ತದೆ. ಕೊಲೆಪಾತಕಿಗಳು ಒಬ್ಬಳ ಚಂಡೇ ಹಾರಿಸಿದ್ದಾರೆ. ಇನ್ನೊಬ್ಬಳ ಹೊಟ್ಟೆಯ ಮೇಲೆ ಭಯಂಕರ ಘಾಯಗಳನ್ನು ಮಾಡಿದ್ದಾರೆ. ಇವರ ಮೈಮೇಲಿನ ಒಂದೂ ಒಡಿವೆಯುಳಿದಿಲ್ಲ. ಕೊಲೆಪಾತಕಿಗಳು ತಮ್ಮ ಉದ್ದೇಶ ತೀರಿಸಿಕೊಂಡನಂತರ- ಮನೆಯ ಬಾಗಿಲ ಹಾಕಿಕೊಂಡು ಪಲಾಯನ ಹೇಳಿಸಿದ್ದಾರೆ. ಬಹಳ ಹೊತ್ತಾದರೂ ಬಾಗಿಲ ತೆರೆಯದ್ದರಿಂದ ಸಂಶಯ ಬಂದು, ಬಾಗಿಲ ತೆರೆಸಲಾಗಿ ಹೃದಯದ್ರಾವಕ ನೋಟ ಕಣ್ಣಿಗೆ ಬಿತ್ತು. ರೀತಿಪ್ರಕಾರ ಪೋಲೀಸ ಪಂಚನಾಮೆಯಾಗಿ ಕೊಲೆಗಡಕರ ತಪಾಸು ನಡೆದಿದೆ.

ಭೂಮಿಯ ಹೊಟ್ಟೆಯೊಳಗಿನ ಉಷ್ಣತೆಯ ಉಪಯೋಗ.

—೦—

ಭೂಮಿಯ ಹೊಟ್ಟೆಯಲ್ಲಿ ನಾಲ್ಕೈದು ಮೈಲು ಅಗಿಯುತ್ತಾ ಹೋಗಬೇಕು. ಅಲ್ಲಿ ಬೇಕಾದಷ್ಟು ಉಷ್ಣತೆಯುಂಟು. ಅದನ್ನು ಮೇಲೆ ತೆಗೆದು ಬೆಳೆಗಳಿಗೂ, ಕಾರಖಾನೆಗಳಿಗೂ ಉಪಯೋಗಿಸಬೇಕು. ಇದು ನೋಡಲಿಕ್ಕೆ ಅಶಕ್ಯವೆನಿಸಿದರೂ ಪ್ರಯತ್ನಾಂತ್ಯದಲ್ಲಿ ಸಾಧ್ಯವೆಂದು ಲಂಡನದಲ್ಲಿ ಹಾಬಸನರೆಂಬ ಸಾಹೇಬರು ಇಂಜಿನಿಯರ ಸಭೆಯಲ್ಲಿ ವ್ಯಾಖ್ಯಾನ ಕೊಟ್ಟಿದ್ದಾರೆ.

ಫಾರ್ಸಿ ಬ್ರಾಹ್ಮಣ ಮದಿವೆ.

—೦—

ಮುಂಬಯಿಯಲ್ಲಿರುವ ಗುಜರಾಥಿ ಬ್ರಾಹ್ಮಣನಾದ ನಗಿನ ಮೋತಿಲಾಲ ತ್ರಿವೇದಿ ಎಂಬವನು ಕುಮಾರಿ ತೆಹಮಿನಾ ಎಂಬ ಫಾರ್ಸಿ ಯುವತಿಯನ್ನು ಮದಿವೆಯಾದನು. ಮದಿವೆಯ ಪೂರ್ವದಲ್ಲಿ ಹಿಂದೂ ಮಿಶನರಿಯವರು ಇವಳಿಗೆ ಹಿಂದೂ ಧರ್ಮ ದೀಕ್ಷೆ ಕೊಟ್ಟು ಸರಳಾದೇವಿ ಎಂಬ ಹೆಸರಿಟ್ಟರು. ನಗಿನ ಮತ್ತು ಸರಳೆಯು ಕಳೆದ ಮೂರು ವರ್ಷಗಳಿಂದ ಪ್ರೇಮಬದ್ಧರಾಗಿದ್ದರು. ಈ ಮದಿವೆಯಾಗಗೊಡಬಾರದೆಂದು ಫಾರ್ಸಿಗಳು ಸರಳೆಯನ್ನು ಪ್ರತಿಬಂಧದಲ್ಲಿಟ್ಟರು. ಈಕೆಯ ಪ್ರತಿಬಂಧ ತಪ್ಪಿಸಬೇಕೆಂದು ನಗಿನನು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಫಿರ್ಯಾದಿ ಸಹ ಮಾಡಿದ್ದನು. ಸಾಕಷ್ಟು ಕಾರಣ ತೋರದ್ದರಿಂದ ಮ್ಯಾಜಿಸ್ಟ್ರೇಟರು ಈ ಅರ್ಜಿಯನ್ನು ಹಿಡಿಯಲಿಲ್ಲ. ಸರಳೆಯು ಹೇಗೋ ಪ್ರತಿಬಂಧದಿಂದ ಪಾರಾಗಿ ಬಂದಳು. ಮತ್ತು ಇಬ್ಬರು ಮೇಲೆ ಹೇಳಿದಂತೆ ವಿವಾಹ ವಿಧಿಯಿಂದ ಕೂಡಿಕೊಂಡರು. ಈ ಮದಿವೆಯು ಫಾರ್ಸಿ ಜನರಲ್ಲಿ ಚೆನ್ನಾಗಿ ಚಳವಳಿ ಹುಟ್ಟಿಸಿರುತ್ತದೆ.

ಸಂಗೊಳ್ಳಿಯಲ್ಲಿ ಭಯಂಕರ ಅಪಘಾತ.

—೦—

ಇದೇ ೨ ನೇ ತಾರೀಖಿನ ದಿವಸ ಸಂಗೊಳ್ಳಿ (ತಾಲೂಕ ಸಂಪಗಾಂವ) ಯ ಹತ್ತರ ಮಲಪ್ರಭಾ ನದಿಯಲ್ಲಿ ೪೦-೫೦ ಜನರಿಂದ ತುಂಬಿದ ಒಂದು ನಾವು ಬಂಡೆಗಲ್ಲಿಗೆ ಬಡಿದು ಒಮ್ಮೆಲೆ ನೀರು ತುಂಬಿ ಮುಳುಗಿ ಹಾಹಾಕಾರವೆದ್ದಿತು. ನಾವಿಯಲ್ಲಿ ಗಂಡಸರು ಹೆಂಗಸರು ಹುಡುಗರು ಕೂಡೇ ಕೂತಿದ್ದರು. ಆ ದಿವಸ ಬೈಲಹೊಂಗಲದ ಸಂತೆಯಿದ್ದದರಿಂದ ಎಲ್ಲರೂ ಸಂತೆಗೆ ಬರುವವರಿದ್ದರಿಂದ ಎಲ್ಲರ ಸಂಗಡ ಕಾಳುಕಡಿ ಮೊದಲಾದ ಸಾಮಾನುಗಳಿದ್ದವು. ನಾವು ಒಮ್ಮೆಲೆ ಮುಳುಗಿದ್ದರಿಂದ ಒಬ್ಬರಿಗೊಬ್ಬರು ತೆಕ್ಕಿಹಾಯ್ದು ಈಸಬಲ್ಲ ಗಂಡಸರು ಸಹ ಮುಳುಗಿದರು ಕೂಡಲೆ ಅಂಬಿಗರೂ ಹಾಗು ನದಿಯಲ್ಲಿ ಸ್ನಾನ ಮಾಡುತ್ತಿದ್ದ ಜನರೂ ಕೂಡಿ ಎಲ್ಲರನ್ನು ದಂಡೆಗೆ ತಂದರು.ಪ್ರಾಣಹಾನಿಯಂತೂ ಆಗಲೇ ಇಲ್ಲ. ಕಾಳುಕಡಿ ಮೊದಲಾದ ಅಲ್ಪಸ್ವಲ್ಪ ಹಾನಿಯಾಯಿತು. ಅಂಬಿಗರ ಅಲಕ್ಷತೆಗಾಗಿ ಅವರ ಮೇಲೆ ಖಟ್ಲೆಯಾಗಿದೆಯೆಂ ತಿಳಿಯುತದೆ,

ತ. ಕ.

ಧಾರವಾಡ ಶಹರ ಶಿಕ್ಷಕ ಸಂಘದ ಸ್ಪೇಶಲ ಸಭೆಯು.

ರಾವಬಹಾದ್ದೂರ ಬಿ. ಎರ್ ಪಾಟೀಲ ಬಿ. ಎ. ಎಲ್. ಎಲ್. ಬಿ. ಇವರ ಅಧ್ಯಕ್ಷತೆಯ ಕೆಳಗೆ ತಾರೀಖು ೪-೯-೧೯೨೭ನೇ ಇಸ್ವಿ ರವಿವಾರ ಇನ್‌ಫಂಟ ಮಾಡೆಲ್‌ಸ್ಕೂಲಿನಲ್ಲಿ ನೆರೆದ ಶಿಕ್ಷಕರ ಸಭೆಯಲ್ಲಿ ಪಾಸಾದ ಠರಾವುಗಳು.

೧ ೮. ಬ ರೊದ್ದರಾಯರು ಸಿ. ಆಯ್. ಇ. ಇವರು ಸರಕಾರಕ್ಕೆ ತಾರೀಖು ೩-೭-೧೯೨೭ ನೆಯ ದಿವಸ ಬರೆದ ಪತ್ರದಲ್ಲಿ " ಪ್ರಾಥಮಿಕ ಶಿಕ್ಷಕರ ಆರಂಭದ ಪಗಾರವು ಈಗ ಇಪ್ಪತ್ತೈದು ರೂಪಾಯಿ ಇರತಕ್ಕದ್ದು " ಎಂದು ಬರೆದಿರುತ್ತಾರೆ. ಇವರ ಬರಹವು ಕೇವಲ ತಪ್ಪು ತಿಳವಳಿಕೆಯಿಂದ ಬರೆದದ್ದಾಗಿದೆಯೆಂದು ಧ್ವನಿತವಾಗುತ್ತದೆ.

(ಅ) ಜೇಲ ಕೈದಿಯ ತಿಂಗಳ ಖರ್ಚು ಹದಿನೇಳು ರೂಪಾಯಿ ಯೆಂದು ಸರಕಾರದ ವರದಿಯು ಇದೆ.

(ಬ) ಏನೂ ಕಲಿಯದ ಪೋಲೀಸ ಸಿಪಾಯಿಗೆ ಹತ್ತೊಂಬತ್ತು ರೂಪಾಯಿ ಪಗಾರ ಸಿಗುತ್ತದೆ.

(ಕ) ಕೋರ್ಟಿನ ಬೇಲೀಫನ ಪಗಾರವು ಆರಂಭದ್ದು ಇಪ್ಪತ್ತು ರೂಪಾಯಿ ಇರುತ್ತದೆ.

(ಡ) ರೆವ್ಹಿನ್ಯೂ ಡಿಪಾರ್ಟಮೆಂಟಿನಲ್ಲಿ ಕೆಲಸ ಮಾಡುವ ಮುಲ್ಕೀ ಪರೀಕ್ಷೆ ಪಾಸಾದವನಿಗೆ ೩೫ ರೂಪಾಯಿ ಪಗಾರ ದೊರೆಯುತ್ತದೆ.

ಇವೆಲ್ಲ ಕಾರಣಗಳ ಮೇಲಿಂದ ಮುಲ್ಕೀ ಪರೀಕ್ಷೆ ಪಾಸಾದವನಿಗೆ ೩೫ ರೂಪಾಯಿ ಕೊಡುವದು ಕೇವಲ ಕಡಿಮೆಯ ಪಗಾರವೆಂದು ಈ ಸಭೆಯ ಅಭಿಪ್ರಾಯವಿರುತ್ತದೆ. ಇದರಿಂದ ೧ ನೆಯ ೨ ನೆಯ ೩ ನೆಯ ವರ್ಷಗಳ ಟ್ರೇಂಡರ ಪಗಾರದ ವಿಷಯಕ್ಕೂ ದಿವಾನ ಬಹಾದ್ದೂರರವರು ತಪ್ಪು ಬರೆದಿರುತ್ತಾರೆ. ಇವರ ಪತ್ರದಿಂದ ಸರಕಾರಕ್ಕೆ ತಪ್ಪು ತಿಳುವಳಿಕೆಯೂ ಶಿಕ್ಷಕರಿಗೆ ಅಸಂತೋಷವೂ ಆಗುತ್ತಿರುವದರಿಂದ ಇಂಥ ಅನರ್ಥಕಾರಕವಾದ ಪತ್ರದ ಬಗ್ಗೆ ಈ ಸಭೆಯು ಅತ್ಯಂತ ದುಃಖವನ್ನು ವ್ಯಕ್ತಪಡಿಸುತ್ತದೆ.

೨ ಹೋದ ವರ್ಷದ ಕೌನ್ಸಿಲದಲ್ಲಿ ನಾರೆ ಪರಾಂಜಪೆ ಸ್ಕೀಮು ಪಾಸಾಗಿದ್ದರೂ ಬಾಕೀ ವರ್ಷದ ಬಜೆಟ್ಟಿನಲ್ಲಿ ಸ್ಕೀಮಿನ ಹಣವನ್ನು ಹಾಕದ್ದರಿಂದ ಈ ಸಭೆಗೆ ಅತ್ಯಂತ ಖೇದವಾಗುತ್ತದೆ. ಕಳೆದ ಆರು ವರ್ಷಗಳಿಂದ ಸರಕಾರವು ಶಿಕ್ಷಕರ ಬೇಡಿಕೆಗಳನ್ನು ಪೂರ್ಣಗೊಳಿಸದೆ. ದಿವಸಗಳೆ ಮಾತ್ರ ನಡೆದಿದೆ. ಇದರಿಂದ ಅಸಂತುಷ್ಟರಾದ ಶಿಕ್ಷಕರು ಕೆಲವರು ಒಮ್ಮೊಮ್ಮೆ ದೇಶಸೇವಾಸಾಧಕವಾಗಿ ಬೇರೆ ಉಪಾಯಗಳನ್ನು ಕೈಕೊಳ್ಳಬೇಕಾಗುತ್ತದೆ. ಅತ್ಯಂತ ಬಡವರಾದ ಪ್ರಾಥಮಿಕ ಶಿಕ್ಷಕರ

ನೋಟೀಸು

—೦—

ಗಂಗವ್ವಾ ಕೋಮ ಹನಮಂತಪ್ಪಾ ಶಂಬಿ ಸಾ|| ಹಿರೇಸಂಗೀರಿ ತಾಲ್ಲೂಕ ಕಲಘಟಗಿ ಇವಳಿಗೆ—

ಕೆಳಗೆ ಹೆಬ್ಬಟ್ಟಿನ ಗುರತಾ ಮಾಡುವವನು ನಿನಗೆ ಈ ನೋಟೀಸಿನ ಮೂಲಕ ತಿಳಿಸುವದೇನಂದರೆ— ನೀನು ನನ್ನ ಲಗ್ನದ ಹೆಂಡತಿ ಇದ್ದು ಲಗ್ನ ಆಗಿ ಅಜಮಾಸು ೮ ೯ ವರ್ಷವಾಯಿತು ನೀನು ಪ್ರಬುದ್ಧಳಾದನಂತರ ನನ್ನ ಮನೆಗೆ ಬಂದು ಎರಡು ವರ್ಷ ಸುಶೀಲತೆ ಪ್ರಪಂಚ ಮಾಡಿಕೊಂತಾ ಇದ್ದಿ ಅನಂತರ ಈಗ ಅಜಮಾಸು ಒಂದು ವರ್ಷದ ಹಿಂದೆ ನೀನು ಸುಗ್ಗಿಗೆಂದು ನನ್ನನ್ನು ಸಹ ಕರಕೊಂಡು ನಿನ್ನ ತವರ ಮನೆಗೆ ಹೋದಿ ಅನಂತರ ನಾನು ನಿನ್ನನ್ನು ನಮ್ಮ ಊರಿಗೆ ಹೋಗಲಿಕ್ಕೆ ಬಾ ಎಂದು ಕೇಳಿದರೆ ನೀನು ಅರ್ಧ ದಾರಿಯ ವರೆಗೆ ಬಂದು ಊರಿಗೆ ಬರುವದಿಲ್ಲೆಂದು ಹಟದಿಂದ ಹೊಂಟು ಹೋದಿ ಅನಂತರ ನಾನು ನಿನ್ನನ್ನು ಕರಿಯಲಿಕ್ಕೆ ಎರಡು ಮೂರು ಸಾರೆ ಕರೆಯಲಿಕ್ಕೆ ಬಂದೆ ಆದರೆ ನೀನ ಬರಲಿಲ್ಲ. ಇದಲ್ಲದೆ ನೀನು ಇಲ್ಲಿಂದ ಹೋಗುವಾಗ್ಗೆ ನನ್ನಲ್ಲಿಂದ ಮೈದ ದಾಗೀನಗಳು ಒಂದು ಜೋಡು ತೋಳಬಂದಿ ಮತ್ತು ಒಂದು ಜೋಡು ತೋಡೆ ಇದಲ್ಲದೆ ನಾನು ಅಲ್ಲಿಗೆ ಬರುವಾಗ್ಗೆ ನನ್ನ ಸಂಗಡ ೧೪೦ ರೂಪಾಯಿ ತಂದಿದ್ದೆನು ಅವನ್ನು ನಿನ್ನ ಕೈಯ್ಯಲ್ಲಿ ಇಡಲಿಕ್ಕೆ ಕೊಟ್ಟೆ ಪುನಃ ಬರುವಾಗ್ಗೆ ಕೇಳಿದರೆ ರೂಪಾಯಿ ಕೊಡಲಿಲ್ಲ ಅದ್ದರಿಂದ ನೀನು ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ನನ್ನ ದಾಗೀನೆ ಮತ್ತು ಮೇಲೆ ಕಾಣಿಸಿದ ೧೪೦ ರೂಪಾಯಿ ತಗೊಂಡು ಬಂದು ನನ್ನ ಕೂಡ ಸುಶೀಲತೆ ಪ್ರಪಂಚ ಮಾಡಬೇಕು. ಇಲ್ಲದಿದ್ದರೆ ನಾನು ಇದೇ ನೋಟೀಸುಪತ್ರವೆಂದು ತಿಳಿದು ನನ್ನ ದಾಗೀನೆಗಳ ಸಲುವಾಗಿಯೂ ಮತ್ತು ನನ್ನ ರೂಪಾಯಿದ ಸಲುವಾಗಿಯೂ ನಿನ್ನ ಮೇಲೆಯೂ ನಿನ್ನ ತಂದೆಯ ಮೇಲೆ ಯೋಗ್ಯ ಇಲಾಜ ಮಾಡಿ ವಸೂಲ ಮಾಡಿಕೊಳ್ಳುವೆನು. ಇದಲ್ಲದೆ ಮುಂದೆ ನಾನು ನನ್ನ ಪ್ರಪಂಚ ಸಲುವಾಗಿ ಯರಡನೆಯವಳನ್ನು ಉಡಿಕೆಯಾಗಲೀ ಮದಿವೆಯಾಗಲೀ ಮಾಡಿಕೊಳ್ಳುವೆ ಅನಂತರ ನಿನ್ನದು ನನ್ನ ಮೇಲೂ ನನ್ನ ಆಸ್ತಿಯ ಮೇಲೆ ಯಾವ ರೀತಿಯಿಂದಲೂ ಹಕ್ಕು ಉಳಿಯಲಾರದು ತಿಳಿಯುವದು.

ತಾ|| ೬—೯—೧೯೨೭ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರತಾ ಹನಮಪ್ಪಾ ತಿಮ್ಮಪ್ಪಾ ಶಂಬಿ ಸಾ|| ಅಮ್ಮಿನಭಾವಿ ತಾ|| ಧಾರವಾಡ ಈತನದು ಅದೆ.

ನೋಟೀಸು.

—೦—

ಚಿ. ರಾ. ಶಾ. ಸಂಗನಬಸವ್ವಾ ಬಸಪ್ಪಾ ಕುಂದುರಿಗಿಯವರ ಸಾ. ದುಮ್ಮವಾಡ ಈಗ ಇರೋದು ಅಳಗವಾಡಿ ತಾ. ನವಲಗುಂದ ಈತನಿಗೆ—

ಕೆಳಗೆ ಸಹಿ ವ ಗುರ್ತು ಮಾಡಿದ ಗೂಳಪ್ಪಾ ತಿರಕಪ್ಪಾ ಕುಂದುರಿಗಿಯವರ ಈತನು ಈ ನೋಟೀಸಿಂದಾ ತಿಳಸುವದೇನಂದರೆ ಕಲಘಟಗಿ ತಾಲೂಕ ಪೈಕಿ ದುಮ್ಮವಾಡ ಗ್ರಾಮದಲ್ಲಿ ಇರುವ ನನ್ನ ಹಿಶೇದ ಜಮೀನಿಯಲ್ಲಿ ರಿ|| ಸ|| ನಂಬರ ೧೭/೯೫ ಮತ್ತು ಮನಿ ನೀನು ಬಸಪ್ಪ ಮಲ್ಲಪ್ಪಾ ಚಂಡೂನವರ ಸಾ|| ದುಮ್ಮವಾಡ ಈತನಿಗೆ ಖರಿದಿಗೆ ಕೊಡುತ್ತೀದಿ ಅಂತಾ ಕೇಳತೇನೆ ಆ ಜಮೀನಿಯಲ್ಲಿ ನನ್ನ ಹಿಸೆ ಇದ್ದು ಆ ಜಮೀನಿಯ ಸಂಮಂಧ ನನ್ನ ಹಿಸೇದ ಬಗ್ಗೆ ನಿನ್ನ ಮೇಲೆ ದಾವೇ ಮಾಡತಕ್ಕವನಿರುತ್ತೇನೆ ಆದ್ದರಿಂದ ಈ ನೋಟೀಸು ಕೊಡುವ ಭಾಗ ಬಿತ್ತು ಇದು ಮೀರಿ ನೀನು ಖರೀದಿ ಕೊಟ್ಟರೆ ಲುಕಸಾನೀ ಒಳಗೆ ಬಂದೀ ನೀನು ಖರೀದಿ ಕೊಡಬಾರದು ಈ ನೋಟೀಸು ಮುಟ್ಟಿದ ೪ ದಿವಸಗಳಲ್ಲಿ ನನ್ನ ಕಡಿಗೆ ಬಂದು ನನ್ನ ಹಿಸೇದ ಜಮೀನು ನನಗೆ ಕೊಟ್ಟು ನನ್ನ ಕಡಿಯಿಂದಾ ಲೇಖ ತೆಗೆದುಕೊಂಡು ಹೋಗಬೇಕು ಈ ಪ್ರಕಾರಾ ನೀನು ಈ ನೋಟೀಸಿನಲ್ಲಿ ಬರೆದ ಪ್ರಕಾರ ಮಾಡದೇ ಇದ್ದರೆ ನಿನ್ನ ಮೇಲೆ ರೀತಿ ಪ್ರಕಾರಾ ಕಾಯದೇಶೀರ ದಿವಾಣೀ ಕೋರ್ಟಿನಲ್ಲಿ ದಾವೇ ಮಾಡಿ ಖರ್ಚು ಸಹಿತಾ ವಸೂಲ ಮಾಡುವದರಲ್ಲಿ ಬಂದೀತು ಈ ನೋಟೀಸಿನ ಖರ್ಚು ನಿನ್ನ ತಲಿಯ ಮೇಲೆ ಆದೆ ತಿಳಯೋದು ತಾ. ೬-೯-೨೭

ಈ ಎಡಗೈ ಹೆಬ್ಬಟ್ಟಿನ ಗುತಾರ್ ಗೂಳಪ್ಪಾ ತಿರಕಪ್ಪಾ ಕುಂದರಗಿಯವರ ಈತನದು ಅದೆ.

ನೋಟೀಸು

ಶಾ. ರಾ. ಮಲ್ಲಪ್ಪಾ ಚಂಡೂನವರ ಸಾ|| ದುಮ್ಮವಾಡ ತಾ. ಕಲಘಟಗಿ ಇವರಿಗೆ—

ಕೆಳಗೆ ಸಹಿ ವ ಗುರ್ತು ಮಾಡಿದ ಗೂಳಪ್ಪಾ ತಿರಕಪ್ಪಾ ಕುಂದುರಿಗಿಯವರ ಈತನು ಈ ನೋಟೀಸಿನಿಂದ ತಿಳಿಸೋದೇನಂದರೆ—

ಕಲಘಟಗಿ ತಾಲೂಕ ಪೈಕಿ ದುಮ್ಮವಾಡ ಗ್ರಾಮದಲ್ಲಿ ಜಮೀನು ರಿವ್ಹಿಜನ್ ಸರ್ವೆನಂಬರು ೧೭/೯೫ ನೇ ಪೈಕಿ ಇರುವ ಜಮೀನು ವ ಮನಿ ಸಹಿತಾ ನಂನ ಹಿಶೇದ ಜಮೀನಿಯನ್ನು ಸಂಗನಬಸಪ್ಪಾ ಬಿಂನ ಬಸಪ್ಪಾ ಕುಂದರಗಿಯವರ ಈತನ ಕಡಿಯಿಂದ ಖರೀದಿ ತೆಗೆದುಕೊಳ್ಳುತ್ತೀದಿ ಅಂತಾ ಕೇಳತೇನೆ ಅಂದರೆ ಆ ಜಮೀನಿಯಲ್ಲಿ ನಂನ ಹಿಶೇ ಇರುತ್ತದೆ ಆ ಹಿಶೇದ ಸಂಬಂಧ ನಾನು ಧಾರವಾಡ ಕೋರ್ಟಿನಲ್ಲಿ ದಾವೇ ಮಾಡತಕ್ಕವನು ಇದ್ದೇನೆ ಆದ್ದರಿಂದ ಈ ನೋಟೀಸು ಕೊಡುವ ಭಾಗ ಬಿತ್ತು ಜರ ನೀನು ಖರೀದಿ ತೆಗೆದುಕೊಂಡರೆ ನೀನು ಲುಕ್ಸಾನಕ್ಕೆ ಬಂದೀ ಕಾರಣ ನೀನು ಖರೀದಿ ತೆಗೆದುಕೊಳ್ಳಬಾರದು ಈ ನೋಟೀಸಿನ ಖರ್ಚು ನಿಂನ ತಲಿಯ ಮೇಲೆ ಆದೆ ತಿಳಿಯೋದು.

ತಾ|| ೬ ೯-೨೭ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುತಾರ್ ಗೂಳಪ್ಪಾ ತಿರಕಪ್ಪಾ ಕುಂದುರಿಗಿಯವರ ಈತಂದು ಅದೆ.

ನೋಟೀಸಿನ ದರಗಳು.

—೦—

ತಿಂಗಲು ಕಾಲಮಿನ ಪತ್ತು, ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಸಾರೆಂದು ಪಳಿಗೆ ಒಂದಾಣೆ ಇಂಗ್ಲಿಷ ಪ್ರತಿಸಾರೆಂದು ಒಳಿಗೆ ಎರಡು ಆಣೆ [illegible] ಮ್ಯುನಿಸಿಪಾಲಿಟಿ ಲೋಕಲಬೋರ್ಡ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸು [illegible] ಗೆ [illegible] ಇಂಗ್ಲಿಷ [illegible] ಅವತರಿಸಿ ಕನ್ನಡದಲ್ಲಿ [illegible] ಅರು ಆಣೆ ಪಬಲ್ ಕಾಲಮಿನ ಒಳಗಳಿಗೆ ಇನ್ನು [illegible] ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ.

—೦—

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭ ಆಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ವಿಹಾರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. No. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಗುರುವಾರ ತಾರೀಖು ೮ ನೇ ಸಪ್ಟಂಬರ ೧೯೨೭ (ಸಂಚಿಕೆ ೧೯೩

ಕಿರ್ಲೋಸ್ಕರ ಶೇಂಗಾ [ಭೈಮೂಗು] ಒಡೆಯುವ ಯಂತ್ರಗಳು



ಈ ಯಂತ್ರಗಳು ಎರಡು ಮಾದರಿಯವು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಕಬ್ಬಿಣದವು. ಬಾಳಿಕೆ ಉಳ್ಳವು. ಶೇಂಗಾ ಒಡೆಯಲು ಯಂತ್ರದಲ್ಲಿ ಬೀಸಣಿಕೆಯನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ ಈ ಯಂತ್ರಗಳು ಕಳೆದ ಹಂಗಾಮದಲ್ಲಿ ಬಹು ಉಪಯೋಗಿಯಾಗಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಎಣ್ಣೆ ಮಾಡತಕ್ಕವರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

WANTED.

Wanted a Kanarese teacher to serve in the Municipal High School Ranebennur on a salary of Rs. 40—5/2—80 grade. He should be able to teach the students of the School Final and School leaving certificate examinations. Binding for 5 years is essential. Apply with testimonials to the undersigned before 8th October 1927.

Ranebennur
3—9—1927

Syad Nizamuddin Ahamad
President,
Ranebennur Municipality.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಎಂಗೀಶ ಪೇಠ ಸ್ಟೇಟಿ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಪ್ರಸಿದ್ಧವಾದ [illegible]

[illegible] ಹುಂಡಿ [illegible] ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ [illegible] ಮತ್ತು [illegible] ಒಳ್ಳೆ [illegible] ದೊರೆಯುವದು.

[illegible]

[illegible]

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುಪ್ಪತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ೧೨ ರಷ್ಟು ಆಕಾಯಿಸಲಾಗುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	೧೨—೮—೦ ರೂ
೬ "	೬—೦—೦ ರು
೪ "	೪—೦—೦ ರೂ
ವಾರ ಪತ್ರಿಕೆಗೆ ೧ ವರ್ಷಕ್ಕೆ	೩—೧೨—೦ ರು

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೩½ "
ದೇಶಬಂಧು ದಾಸರ ಚರಿತ್ರೆ	೨ "
ದೇಶಭಕ್ತರ ಸಂದೇಶ	೧ "

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ವೆಚ್ಚ ಟಪಾಲ ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ವಿಜಯ.

ಧಾರವಾಡ ತಾ ೮-೯-೩೭ ನೇ ಇಸ್ವಿ

ಶಿರಸಂಗಿಯ ದೇಸಾಯರ ಅರಮನೆಯ ಮತ್ತು ಸಮಾಧಿಯ ದುರವಸ್ಥೆ

ಶಿರಸಂಗಿಯ ದೇಸಾಯರು ತಮ್ಮ ದೇಸಗತಿಯನ್ನು ಶಿಕ್ಷಣಕ್ಕಾಗಿ ಧಾರೆ ಎರೆದು ಕೊಡುವಾಗ ಸಂಸ್ಥಾನದ ಎಲ್ಲ ಪೂಜಸಮಾರಾಧನೆಗಳು ಯಥಾಪ್ರಕಾರ ಅವಿಚ್ಛಿನ್ನವಾಗಿ ನಡೆಯಬೇಕೆಂದೂ ಪುರಾತನದ ಕಟ್ಟಡಗಳು ಸ್ಮಾರಕ ಸ್ವರೂಪವಾಗಿರಬೇಕೆಂದೂ ಮೃತ್ಯುಪತ್ರದಲ್ಲಿ ಸ್ಪಷ್ಟವಾಗಿ ಬರೆದಿರುತ್ತಾರೆ. ಶ್ರೀಮಂತ ದೇಸಾಯರು ಶಿವಸಾಯುಜ್ಯವನ್ನು ಹೊಂದಿ ಇಪ್ಪತ್ತು ವರ್ಷವಾಯಿತು. ಅವರ ಸಮಾಧಿಯು ನವಲಗುಂದದಲ್ಲಿರುವದು. ಇತ್ತಲಾಗಿ ಈ ಮನೆತನಕ್ಕೆ ಶಿರಸಂಗಿ ಎಂಬ ಹೆಸರಿದ್ದರೂ, ಪೂರ್ವದಿಂದ ನವಲಗುಂದದ ದೇಸಾಯಿಯರೆಂದೇ ಹೆಸರುಂಟು. ಮೊದಲು ಈ ದೇಸಗತಿಯು ವಿಜಯನಗರದ ರಾಜರ ಕಾಲದಲ್ಲಿ ಸ್ಥಾಪನವಾಯಿತು. ಅನಂತರ ಇವರು ಆದಿಲಶಾಹಿಯ ಕಾಲದಲ್ಲಿ ತೊರಗಲ್ಲಿನಿಂದ ಸವಣೂರಿನ ಬಾಗಿಲದ ತನಕ ಈ ಶಾಹಿಯ ಸೈನ್ಯದ ಅಧಿಪತಿಗಳಾಗಿದ್ದರು. ಇಂಥ ಹೆಸರಾದ ಮನೆತನದವರು ಶಾಲಾಂತರದಲ್ಲಾದರೂ ಪರಾಕ್ರಮಿಗಳಾಗಬೇಕೆಂಬ ಭಾವನೆಯಿಂದ ಅನೇಕರು ಮೃತ್ಯುಪತ್ರವನ್ನು ಸಮ್ಮತಿಸಲಿಲ್ಲ. ನಡೆದ ಮಾತಿಗೆ ನುಡಿವ ಫಲವಿಲ್ಲ. ಸದ್ಯದ ವಿಚಾರವು ಶ್ರೀಮಂತರ ನವಲಗುಂದದಲ್ಲಿರುವ ಅರಮನೆಯು ಮತ್ತು ಸಮಾಧಿಯು ಒಳ್ಳೇ ಸ್ಥಿತಿಯಲ್ಲಿದ್ದು ಅವು ದೇಶಗತಿಯ ಸ್ಮಾರಕವಾಗಿರಬೇಕೆಂದಿರುತ್ತದೆ. ಅವುಗಳ ಹೀನಸ್ಥಿತಿಯನ್ನು ಒಬ್ಬ ಲೇಖಕರು ಈ ಪ್ರಕಾರ ವರ್ಣಿಸುತ್ತಾರೆ.

"ಲಿಂಗಾಯತ ಸಮಾಜಕ್ಕೆ ಆದರ್ಶರೂಪವಾದ ದೇಶಗತಿಯ ಸ್ಮೃತಿಚಿಹ್ನವಾದ ಒಂದು ಅರಮನೆಯು [illegible]ಲ್ಲುಂಟು. ಆದರೆ ಅದು ಈಗ ಹಾಳು ಬಿದ್ದಿದೆ. ಬೇಗನೆ ದುರಸ್ತ ಮಾಡದಿದ್ದರೆ ಬಿದ್ದುಹೋಗುತ್ತದೆ. ಅರಮನೆಯ ಸುತ್ತಲಿನ ಗೋಡೆಗಳು ಬಿದ್ದವೆ. ಜನರು, ದನಕರು ನಿರ್ಭಯದಿಂದ [illegible] ಹೊಲಸು ಮಾಡುತ್ತವೆ. ಅರಮನೆಯು ತೀರ ಕೀಳಸ್ಥಿತಿಗೆ ಬಂದಿದೆಂದರೂ ಅಷ್ಟೇ ಇಲ್ಲ. ಇದು ಬರೀ ಅರಮನೆ ಎಂದು ತಿಳಿಯಕೂಡದು. ಶ್ರೀಮಂತ ದೇಸಾಯರ ಇಷ್ಟದೇವತೆಯಾದ ಶ್ರೀ. ಸಿದ್ಧೇಶ್ವರನ ದೇವಾಲಯವೂ ಉಂಟು ಗುಡಿಯ ಸುತ್ತಲು ಪೌಳಿಗಳುಂಟು. ಸುತ್ತಲಿನ ಚೌಕು ಬಿದ್ದು ಹೋಗಹತ್ತಿದೆ. ದೇವಸ್ಥಾನದ ಅಡಿಗೆಯ ಮನೆಯು ಇತರ ಇಮಾರತುಗಳೂ ಬೀಳಹತ್ತಿವೆ. ದೇವಸ್ಥಾನಕ್ಕೆ ಹೊಂದಿ ಪಶ್ಚಿಮಕ್ಕೆ ಗಣಪತಿಯ ಸಭಾಮಂಟಪವದೆ. ಆದರೆ ಅದರ ಮೇಲುಪ್ಪರಿಗೆಯು ಬಿದ್ದಿದೆ. ಸಮಾಧಿ, ಬೀದಿ, ತಿಪ್ಪಿ ಎನ್ನುವಂಥ ಭೇದವೇ ಉಳಿದಿಲ್ಲ"

ದೇಶಗತಿಯ ಆದಾಯವು ಅರವತ್ತು ಎಪ್ಪತ್ತು ಸಾವಿರ. ಈ ರೂಪಾಯಿಗಳಿಂದ ಶಿಕ್ಷಣ ಹೊಂದುವಂಥವರು ನೂರಾರು ವಿದ್ಯಾರ್ಥಿಗಳು ದೇಶಗತಿಯ ವ್ಯವಸ್ಥೆ ಮಾಡುವದಕ್ಕಾಗಿ ಇದ್ದಂಥ ಕಾರಭಾರಿ, ಕಾರಕೂನ ಸಿಪಾಯಿ ಮೊದಲಾದವರ ಸಂಖ್ಯೆಯೂ ದೊಡ್ಡದು. ಸದ್ಯದಲ್ಲಿ ದೇಸಗತಿಯ ಕಚೇರಿಯು ಶಿರಸಂಗಿಯಲ್ಲುಂಟು ಅಲ್ಲಿಯ ವ್ಯವಸ್ಥೆಯು ಸರಿಯಾಗಿ ನಡೆದಿದೆ. ಆದರೆ ಮೂಲಸ್ಥಾನವು ಮಾತ್ರ ಅಪವಿತ್ರವೆನಿಸುವಷ್ಟು ಕೆಟ್ಟು, ಕಟ್ಟಡಗಳು ಕಿಗ್ಗಳಾಗಿರುತ್ತವೆ. ಇವುಗಳ ಜೀರ್ಣೋದ್ಧಾರ ಮತ್ತು ನಿತ್ಯ ಸೇವೆಗಾಗಿ ಟ್ರಸ್ಟಿಗಳು ಕಳೆದ ಇಪ್ಪತ್ತು ವರ್ಷಗಳಲ್ಲಿ ಏನೂ ವ್ಯವಸ್ಥೆ ಮಾಡದಿದ್ದದ್ದು ದುಃಖದ ಸಂಗತಿಯು.

ಪ್ರಾಚೀನ ವಸ್ತುಗಳ ಸಂಸ್ಕೃತಿಯುಳಿಯಬೇಕೆಂದು ಲಾರ್ಡ ಕರ್ಜನಸಾಹೇಬರು ಸ್ವತಂತ್ರವಾದ ಕಾಯದೆ ಮಾಡಿದರು. ಈ ಕಾಯದೆಯಿಂದ ಮುಳಗೊಳಿಕೆಯಲ್ಲಿ ಬೆಳೆದ ಅನೇಕ ಇತಿಹಾಸ ಪ್ರಸಿದ್ಧ ಕಟ್ಟಡಗಳು ದುರಸ್ತಿ ಹೊಂದಿ, ಈಗ ಪ್ರೇಕ್ಷಣೀಯ ಸ್ಥಾನವಾಗಿವೆ ಲಾರ್ಡ ಕರ್ಜನಸಾಹೇಬರು ವಾರಸದಾರರಿಲ್ಲದಂಥವುಗಳ ದೆಸೆಯಿಂದ ಕಾಯದೆ ಮಾಡಿದರು. * ಶಿರಸಂಗಿಯ ದೇಸಗತಿಯ ಅವಸ್ಥೆಯು ಹೀಗಿರುವದಿಲ್ಲ. ಟ್ರಸ್ಟಿಗಳು ವಾರಸದಾರರೇ ಆಗಿದ್ದಾರೆ. ಇವರು ಮೂಲ ಅರಮನೆ ಮತ್ತು ತಮ್ಮ ಐಶ್ವರ್ಯದ ಮೇಲೆ ತುಳಸೀ ಪತ್ರ ಇಟ್ಟ ದೇಸಾಯರ ಸಮಾಧಿಯನ್ನು ಮರೆತು, ಅವನ್ನು ನೋಡಲಿಕ್ಕೆ ನಾಚಿಕೆ ಬರುವಂಥ ದುರವಸ್ಥೆಯಲ್ಲಿಟ್ಟದ್ದು ಎಷ್ಟು ಮಾತ್ರಕ್ಕೂ ಭೂಷಣವೆನಿಸುವದಿಲ್ಲ. ಮುಖ್ಯವಾಗಿ ಬೆಳಗಾವಿಯ ಕಲೆಕ್ಟರ ಸಾಹೇಬರು ಇದಕ್ಕೆ ಜವಾಬದಾರರಾಗುತ್ತಾರೆ. ಅವರು ಈ ಬಗ್ಗೆ ಪೂರಾ ವಿಚಾರ ಮಾಡಿ, ತಮ್ಮ ಪಾಲಿಗೆ ಅಪಕೀರ್ತಿ ಬರದಂಥ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಅತ್ಯಗತ್ಯವಾಗಿ ಸೂಚಿಸುತ್ತೇವೆ.

ಬ್ರಾಹ್ಮಣ ಬ್ರಾಹ್ಮಣೇತರ ವಿಷಯವಾಗಿ ಮಹಾತ್ಮರ ಮಹತ್ವದ ಭಾಷಣವು.

—o—

ಮಹಾತ್ಮರು ಹೋದ ವಾರದಲ್ಲಿ ಮದ್ರಾಸ ತಲ್ಪಿದರು ಅಲ್ಲಿಯವರು ಖಾದಿ ಫಂಡಿಗೆ ೧೬ ಸಾವಿರ ರೂಪಾಯಿ ಕೊಟ್ಟರು, ಟಿಳಕ ಘಾಟಿನ ಮೇಲೆ ೩೦ ಸಾವಿರ ಜನರ ಮುಂದ ಇವರ ಭಾಷಣವಾಯಿತು ಆಂಧ್ರರು ಮತ್ತು ತಮಿಳರ ದೆಸೆಯಿಂದ ಎರಡು ಭಾಗ ಮಾಡಿ, ವಿದ್ಯುಚ್ಛಕ್ತಿಯಿಂದ ಇವರ ಭಾಷಣ ಕೇಳಿಸುವಂತೆ ಮಾಡಿದ್ದರು. ಈ ಸಮಯದಲ್ಲಿ ಮಹಾತ್ಮರು ಬ್ರಾಹ್ಮಣ- ಬ್ರಾಹ್ಮಣೇತರವನ್ನು ಕುರಿತು ಮುಂದೆ ಕಂಡಂತೆ ಭಾಷಣ ಮಾಡಿದ್ದಾರೆ.

ನಿಮ್ಮಲ್ಲಿ ಬ್ರಾಹ್ಮಣ- ಬ್ರಾಹ್ಮಣೇತರ ಕಲಹವಿರುವದನ್ನು ನಾನು ಒಲ್ಲೆನು. ನಾವು ಮುಂದೆ ಮಾಡಬೇಕಾಗಿರುವ ರಾಷ್ಟ್ರ ಕಾರ್ಯವನ್ನು ಲಕ್ಷ್ಯಕ್ಕೆ ತಂದು ಈ ಕಲಹವನ್ನು ಮುಗಿಸುವಿರೆಂದು ಆಶಿಸುತ್ತೇನೆ. ಮನುಷ್ಯಮಾತ್ರನ ಕಯ್ಯಲ್ಲಿರವಷ್ಟು ಶಕ್ತಿಯನ್ನು ಉಪಯೋಗಿಸಿ, ಕಾಂಗ್ರೆಸ ಕಾರ್ಯದಲ್ಲಿ ಈ ಕಲಹವು ಅಡ್ಡ ಬರದಂತೆ ಮಾಡಬೇಕೆಂಬದೇ ನನ್ನ ಇಚ್ಛೆಯು ತಾನು ಹಿಂದೂ, ಕ್ರಿಶ್ಚನ್ನ, ಮುಸಲಮಾನ, ಪಾರ್ಸಿ, ಯಹುದಿ, ಬ್ರಾಹ್ಮಣ- ಬ್ರಾಹ್ಮಣೇತರ ಅಸ್ಪೃಶ್ಯ ಎಂಬದಾಗಿ ಹೊಡೆದಾಡುವ ವಿಚಾರವೇ ತಪ್ಪುವಂಥ ದಿವಸವನ್ನು ನಾನು ಎದುರು ನೋಡುತ್ತಿದ್ದೇನೆ ಈ ಜಾತಿಗಳೆಲ್ಲ ಒಂದು ದೊಡ್ಡ ಸುಂದರ ಗಿಡದ ಟೊಂಗೆಗಳು. ಇದರ ಹೆಸರು ಅವಿಭಕ್ತ ಮತ್ತು ವಿಭಕ್ತ ಮಾಡದಂಥ ಗಿಡವೆಂದಾಗುವದು. ಮದ್ರಾಸ ಪಟ್ಟಣವು ಈ ಕಾರ್ಯ ಮಾಡಿ, ಯಶ ಪಡೆಯುವದೆಂದು ಭಾವಿಸುತ್ತೇನೆ.

ರಾಜದ್ರೋಹದ ಆರೋಪ-

ಶ್ರೀ ಸತ್ಯಮೂರ್ತಿಯವರು ಪುದಕೋಟೆಯ ಅರಸೊತ್ತಿಗೆಯು ಬಿಳೆ ಹೆಂಗಳಿನ ರಾಜಕುಮಾರನಿಗಾಗಬಾರದೆಂದು ಮಾಡಿದ ಭಾಷಣದ ಸಾರಾಂಶವನ್ನು ಈ ಮೊದಲು ವಿಜಯದಲ್ಲಿ ಬರೆದಿದ್ದೇವೆ. ಈ ಭಾಷಣದ ಅವತರಣವನ್ನು ಪ್ರಕಟವಾಗುತ್ತಿರುವ ಜನಮಿತ್ರವೆಂಬ ಪತ್ರದಲ್ಲಿ ತಕ್ಕೊಂಡರು. ಇದು ರಾಜದ್ರೋಹವಾಗುತ್ತದೆಂದು ಸಂಸ್ಥಾನದವರು ಇದರ ಮೇಲೆ ಕೆಲಸ ನಡಿಸಿದ್ದಾರೆ.

ನಾಗಪೂರದಲ್ಲಿ ಹಿಂದೂ ಮುಸಲಮಾನರ ದಂಗೆ.

—o—

ಗುಂಡು ಹಾರಿದವು; ಮನೆಗಳು ಸುಟ್ಟವು.

—o—

ಕುಸ್ತಿಯ ಪೈಲವಾನರು ಸತ್ತರು.

—o—

ನಾಗಪೂರದ ಹಿಂದೂ ಮುಸಲಮಾನ ದಂಗೆಯು ಕುಸ್ತಿಯ ಕಣದಿಂದ ಎದ್ದಿತು. ಮುಸಲಮಾನರು ಹಿಂದೂ ಜನರ ಮೇಲೆ ಗುಂಡು ಹಾಕಿದರು. ಹಿಂದೂ ಜನರು ಮುಸಲಮಾನರ ಮನೆಗಳಿಗೆ ಬೆಂಕಿ ಹಚ್ಚಿದರು. ಗುಂಡುಗಳಿಂದ ೧೫ ಜನರು ಸತ್ತರು, ೧೦೦ ಜನರು ಘಾಯವಾದರು. ಇದರಲ್ಲಿ ೬೪ ಮುಸಲಮಾನ ಮತ್ತು ೩೬ ಹಿಂದೂ ಆಗಿದ್ದಾರೆ. ಹೊಡತದಿಂದ ಮುಸಲಮಾನರಾದ ಇಬ್ಬರು ಪ್ರಸಿದ್ಧ ಪೈಲವಾನರು ಸತ್ತರು. ಪೇಟೆ, ಶಾಲೆ, ಗಿರಣಿಗಳು ಬಂದಾಗಿ, ಊರು ರಣಗುಟ್ಟುತ್ತಿರುವದು. ಸ್ಪೇಶಲ ಟ್ರೇನಿನಿಂದ ದಂಡು ಬಂದು, ಪಟ್ಟಣದಲ್ಲಿ ಭದ್ರತೆಯನ್ನುಂಟು ಮಾಡಿರುವದು.

ಜಯಪೂರದಲ್ಲಿ ಪೋಲೀಸರ ಗೋಳಿಬಾರು.

—o—

ಮಹಾರಾಣಿಯವರ ಸತ್ಯಾಗ್ರಹ ಮತ್ತು ಅನ್ನ ನೀರು ವರ್ಜ.

—o—

ರಜಪೂತಾನಸ್ಥಾನದಲ್ಲಿರುವ ಜಯಪೂರ ಸಂಸ್ಥಾನದ ರಾಜಧಾನಿಯಲ್ಲಿಯೇ ಪೋಲೀಸರಿಗೂ ಪ್ರಜರಿಗೂ ಜಗಳ ಬಂದು, ಪೋಲೀಸರು ಪ್ರಜರ ಮೇಲೆ ಗುಂಡು ಹಾಕಲು- ಇಬ್ಬರು ಸತ್ತರು. ಪ್ರಜರು ಅನ್ಯಾಯವಾಗಿ ನೊಂದು, ಅವರ ಕೊಲೆಯಾದ ವರ್ತಮಾನ ಕೇಳಿ, ಮಹಾರಾಣಿಯವರು ಅತ್ಯಂತವಾಗಿ ದುಃಖಿಸಿ, ಪ್ರಜರು ಶಾಂತರಾಗಿ ಪ್ರಕಾಳವನ್ನು ಎಬ್ಬಿಸಿದ ವಿನಹ ತಾವು ಅನ್ನ ನೀರು ತಕ್ಕೊಳ್ಳತಕ್ಕವರಲ್ಲೆಂದು ಸತ್ಯಾಗ್ರಹ ಪ್ರಾರಂಭಿಸಿದ್ದಾರೆ. ಮಹಾರಾಣಿಯವರ ಪ್ರಜಾ ವಾತ್ಸಲ್ಯ ಮತ್ತು ದೃಢನಿಶ್ಚಯ ಕಂಡು, ಅಧಿಕಾರಿಗಳು ನಿಂತಕಾಲ ಮೇಲೆ ಇಬ್ಬರು ಪೋಲೀಸ ಅಮಲದಾರರಿಗೆ ಸಸ್ಪೆಂಡ ಮಾಡಿ, ದಂಗೆಯ ವಿಚಾರ ಮಾಡಲು ಒಂದು ಕಮೀಟಿ ನೇಮಿಸಿದ್ದಾರೆ. ಸ್ವದೇಶಿಯ ಸಂಸ್ಥಾನಗಳಲ್ಲಿ ಮಾತ್ರ ಈ ಪ್ರಕಾರ ರಾಜರು ಪ್ರಜರನ್ನು ಮಕ್ಕಳಂತೆ ನೋಡುವದು ಆಗಾಗ್ಗೆ ಕಂಡುಬರುವದು. ಮಹಾರಾಣಿಯವರು ತೋರಿಸಿದ ಪ್ರಜಾಪ್ರೇಮಕ್ಕಾಗಿ ಅವರನ್ನು ಎಷ್ಟು ಶ್ಲಾಘಿಸಿದರೂ ಕಡಿಮೆಯೇ ಸೈ!!

ನಿಜಾಮ ಹೈದರಾಬಾದಿನಲ್ಲಿ ಮುತ್ತಿನ ಬೆಳೆಯು.

—o—

ಹೈದರಾಬಾದ ರಾಜ್ಯಕ್ಕೆ ಸೇರಿದ ಘಾಟಕೇಶವವೆಂಬ ಗ್ರಾಮದಲ್ಲಿ ಒಬ್ಬ ರೈತನು ತನ್ನ ಹೊಲದಲ್ಲಿ ಜೋಳ ಬಿತ್ತಿದನು. ಕೆಲವು ದಿವಸಗಳ ನಂತರ ಜೋಳಕ್ಕೆ ಬಂದ ತೆನೆಗಳು ಲಕಲಕ ಬೆಳ್ಳಗೆ ಹೊಳೆಯ ಹತ್ತಿದವು. ಮುಂದೆ ಒಂದು ದಿವಸ ನೋಡುವಾಗ ಜೋಳದ ಬದಲಾಗಿ ತೆನೆಗಳ ತುಂಬ ಮುತ್ತುಗಳೇ ಸುರಿದಿದ್ದವು. ಮುತ್ತು ನಿಜವಿದ್ದು, ಆಕಾರದಲ್ಲಿ ಮಾತ್ರ ಸಾಕಷ್ಟು ದುಂಡಗೆ ಇರುವದಿಲ್ಲ.

ಹತ್ತು ಲಕ್ಷದ ಉಪಯೋಗ-

ಮೈಸೂರ ಟಂಕಸಾಲೆಕ್ಕೆ ಇಂಗ್ಲಿಷ ದರಬಾರದಿಂದ ಬರುವ ಹತ್ತು ಲಕ್ಷ ರೂಪಾಯಿಗಳನ್ನು ಪ್ರಾಥಮಿಕ ಶಿಕ್ಷಣಕ್ಕೂ, ವಿದ್ಯಾರ್ಥಿಗಳಿಗೆ ದಂಡಿನ ಶಿಕ್ಷಣ ಕೊಡುವದಕ್ಕೂ ಉಪಯೋಗಿಸಬೇಕೆಂದು ಕಡೂರಿನ ಜನರು ಸಭೆ ಮಾಡಿ, ಆ ಪ್ರಕಾರ ಪ್ರಜಾಪ್ರತಿನಿಧಿ ಸಭೆಯಲ್ಲಿ ಠರಾವು ತರುವ ವಿಚಾರ ಮಾಡಿದ್ದಾರೆ. ಈ ಶಿಕ್ಷಣದ ಮೊದಲು ಗಿರಣಿ- ಕಾರಖಾನೆಗಳನ್ನು ಸ್ಥಾಪಿಸಬೇಕು. ಇವುಗಳಿಂದ ಬರುವ ಪ್ರಾಪ್ತಿಯನ್ನು ಮೇಲಿನ ಶಿಕ್ಷಣಕ್ಕಾಗಿ ಉಪಯೋಗಿಸಬೇಕೆಂದು ಠರಾವು ತಂದರೆ- ಬಡಜನರಿಗೆ ಮೊದಲು ಉದ್ಯೋಗವಾಗಿ, ಆದರ ಉಪಜೀವನ ಸಾಗುವದು. ಉಪಜೀವನಕ್ಕೆ ಮಾರ್ಗವಿದ್ದರೇ ಶಿಕ್ಷಣವೆಂಬದನ್ನು ಅವರು ಲಕ್ಷ್ಯಕ್ಕೆ ತರತಕ್ಕದ್ದು.

ರಾಮಾಯ ಸ್ವಸ್ತಿ, ರಾವಣಾಯ ಸ್ವಸ್ತಿ-

ಪುಣೆಯಲ್ಲಿ ಲೋಕಮಾನ್ಯ ಟಿಳಕರ ಚಿರಂಜೀವರು ಗಾಯಕವಾಡ ವಾಡೆಯ ಬಾಗಿಲ ಮುರಿದ ಸುದ್ದಿಯನ್ನು ಬರೆದಿದ್ದೇವೆ. ಇದರ ಮೇಲೆ ಪಂಚರು ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದಿ ಮಾಡಿದರು. ಮ್ಯಾಜಿಸ್ಟ್ರೇಟರು ಸ್ವತಃ ವಾಡೆಗೆ ಬಂದು, ವಿದ್ಯಮಾನ ಸಂಗತಿಗಳನ್ನು ತಿಳಕೊಂಡು ಆದಕ್ಕೆ ಸ್ವತಃ ಬೀಗ ಹಾಕಿ ಅದರ ಒಂದೊಂದು ಕೈಯನ್ನು ಇಬ್ಬರ ಕೈಯಲ್ಲಿಯೂ ಕೊಟ್ಟರು. ಅಂದರೆ ಇಬ್ಬರೂ ನ್ಯಾಯ ತೀರುವ ತನಕ ಒಬ್ಬರಿಗೊಬ್ಬರು ಅಡ್ಡೀ ಮಾಡಬಾರದೆಂದೇ ಮ್ಯಾಜಿಸ್ಟ್ರೇಟರ ಮತವು.

ಕೋರ್ಟು ಏಳುವ ತನಕ ಶಿಕ್ಷೆ-

ಮದ್ರಾಸದಲ್ಲಿ ನೀಲಗೊಂಬೆಯನ್ನು ಭಂಗಿಸುವದಕ್ಕಾಗಿ ಗಂಡಸನ್ನು ಹಿಂಬಾಲಿಸಿದ ಅಂಗನೆ ಅಮ್ಮಾಳಿಗೆ ಮ್ಯಾಜಿಸ್ಟ್ರೇಟರು ಕೋರ್ಟು ಏಳುವ ತನಕ ಕೈದು ಮತ್ತು ಏಳು ರೂಪಾಯಿ ದಂಡದ ಶಿಕ್ಷೆ ಹೇಳಿದ್ದಲ್ಲದೆ, ೫೦-೫೦ ರೂಪಾಯಿಗಳ ಎರಡು ಜಾಮೀನು ಕೊಡಬೇಕು. ಇಲ್ಲವಾದರೆ- ಆರು ತಿಂಗಳು ಸಾದಾ ಕೈದಿನ ಶಿಕ್ಷೆ ಅನುಭವಿಸಬೇಕೆಂದು ತೀರ್ಪು ಹೇಳಿದರು. ಅಮ್ಮಾಳು ಜಾಮೀನು ಕೊಡದೆ ತುರಂಗದ ದಾರಿ ಹಿಡಿದಳು.

ಅತಿವೃಷ್ಟಿಯಿಂದ ಸಿಂಧ ದೇಶದಲ್ಲಾದ ಹಾನಿಯು ಒಂದು ಕೋಟಿಯನ್ನು ಮೀರಿರುತ್ತದೆಂದು ಅಂದಾಜು ಮಾಡಲ್ಪಟ್ಟದೆ.

ನೋಟೀಸು.

ಧಾರವಾಡ ಮ್ಯುನಿಸಿಪಲ್ ಆಫೀಸ
ತಾರೀಖು ೬-೯-೧೯೨೭ನೇ ಇಸ್ವಿ

ಕೆಳಗೆ ಕಾಣಿಸಿದ ವಿಷಯಗಳನ್ನು ವಿಚಾರ ಮಾಡುವ ಕುರಿತು ಸ್ಪೇಶಲ್ ಜನರಲ್ ಕಮಿಟಿಯನ್ನು ಕರೆಯಲಿಕ್ಕೆ ಮುನ್ಸಿಪಾಲಿಟಿಯ ಎಂಟು ಮಂದಿ ಮೆಂಬರ ಜನರು ಸಹಿ ಮಾಡಿ ಲೇಖಿ ವಿನಂತಿಯನ್ನು ಕಳಿಸಿದ್ದರಿಂದ ಶನಿವಾರ ತಾರೀಖು ೧೦ ಸಪಟಂಬರ ೧೯೨೭ ಇಸವಿ ದಿವಸ ಸಂಜೆಯ ೬ ಘಂಟೆಗೆ ಮ್ಯುನಸಿಪಾಲಿಟಿ ಆಫೀಸದಲ್ಲಿ ಸ್ಪೇಶಲ್ ಕಮೀಟಿಯು ಕೂಡುವದು.

ವಿಷಯಗಳು.

೧. ಶಹರದಲ್ಲಿ ನಳದ ನೀರು ಕೊಡುವದನ್ನು ಬಂದು ಮಾಡುವದಕ್ಕೆ ಸಾರ್ವಜನಿಕ ಚಳವಳಿಯು ನಡೆದದ್ದರಿಂದ ಹಾಗೆ ಮಾಡುವದು ಯೋಗ್ಯವೋ ಹ್ಯಾಗೆಂಬದರ ಕುರಿತು ವಿಚಾರ ಮಾಡುವದು.

೨. ಮಳೆ ಇಲ್ಲದೇ ಕೆಲಗೇರಿ ಕೆರೆಯು ನೀರಿನಿಂದ ತುಂಬದೇ ಇದ್ದ ಕಾರಣ ಶಹರ ಜನರಿಗೆ ನೀರಿನ ಸೋಯಿಯನ್ನು ಮಾಡಿ ಕೊಡುವದಕ್ಕೆ ಹಂಗಾಮಿ ತರೀಕ ಉಪಾಯವನ್ನು ಯೋಜಿಸು ಕುರಿತು ವಿಚಾರ ಮಾಡುವದು.

೩. ಕಮಿಟಿಯ ಮುಂದೆ ಮೆ|| ಪ್ರೆಸಿಡೆಂಟರು ಹೇಳಬಹುದಾದ ಬೇರೆ ಯಾವದೂ ವಿಷಯಗಳಿದ್ದರೆ.

Sd/- A. F. I. PATHAN,
ಪ್ರೆಸಿಡೆಂಟ
ಧಾರವಾಡ ಮುನಸಿಪಲ್ ಬರೋ.

ಗೊಂಬೆಯ ಸ್ಥಳಾಂತರ-

ಸೀಲಿಗೊಂಬೆಯನ್ನು ಬೇಗನೆ ಸ್ಥಳ ಬಿಡಿಸಿ, ಎಲ್ಲಾದರೊಂದು ಮೂಲೆಯಲ್ಲಿಡಬೇಕೆಂದು ಶ್ರೀ. ಸಿಂಗರವೇಲುನವರು ಮದ್ರಾಸದ ಮ್ಯುನಿಸಿಪಾಲಿಟಿಯಲ್ಲಿ ತರುವ ತರುವ ಸೂಚನೆಯನ್ನು ಅಧ್ಯಕ್ಷರ ಕಡೆಗೆ ಕಳಿಸಿದರು. ಗೊಂಬೆಯು ಸರಕಾರದ ಸ್ವಾಮಿತ್ವಕ್ಕೆ ಸೇರಿದ್ದು ಅದರಲ್ಲಿ ಮ್ಯುನಿಸಿಪಾಲಿಟಿಯು ಕೈ ಹಾಕಲಿಕ್ಕೆ ಬಾರದೆಂದು ಅಧ್ಯಕ್ಷರು ಈ ಠರಾವಿಗೆ ತಿಂಗಳು ಒಪ್ಪಿಗೆ ಕೊಡಲಿಲ್ಲ. ಮ್ಯುನಿಸಿಪಾಲಿಟಿಯು ಈ ಪ್ರಕಾರ ಠರಾವು ಮಾಡಿ, ಸರಕಾರಕ್ಕೆ ತಿಳಿಸಿದರೆ ತಪ್ಪು?

ಸಿದ್ಧ ಪತ್ರ ಮಾನಗಳು

ವಿಜಾಪೂರ ಜಿಲ್ಲಾದ ಗಜಾನನೋತ್ಸವದಲ್ಲಿ ಪಾಂಚಾಳರು ಸಿಂಪಿಗರೂ ಮಾಡಿದ ಮೇಳಗಳು ನೋಡ ನ ದಾಸ್ತ್ರವು ಇವರು ಹಾಕುತ್ತಿದ್ದ ಕಣೀ. ಸ್ವಷ್ಟ ಒಪ್ಪಿಂದು ಹಾರರುವಂತಾಗು ತ್ತಿತ್ತು.

ಪಂಜಾಬದಲ್ಲಿ ಶೀಖರ ಮಹಾ ಸಭೆಯು ಕೂಡುವದು. ನಾಭಾದ ಮಹಾರಾಜರಿಗೆ ಅಧ್ಯಕ್ಷಸ್ಥಾನ ಕೊಡಬೇಕೆಂದು ಪ್ರಮುಖ ಶೀಖರ ಮತವು. ಸರಕಾರವು ಅಡ್ಡ ಬರುವದೇನೆಂಬದೇ ಅವರಿಗೆ ಭಯವು.

ಡಾಕ್ಟರ ಅನಸಾರಿಯವರು ಮದ್ರಾಸ ಕಾಂಗ್ರೆಸದ ಅಧ್ಯಕ್ಷರಾಗಲಿಕ್ಕಿದ್ದಾರೆ.

ಸಿಂಹಲದ್ವೀಪದ ಬುದ್ಧಜನರು ಐದು ಲಕ್ಷ ಬಂಡವಲ ಹಾಕಿ, ಒಂದು ಕಂಪನಿಯು ತೆಗೆದು, ಬುದ್ಧಗಯೆಯ ವಾದದ ದಿಸೆಯಿಂದ ಹಿಂದುಸ್ಥಾನದ ಯಾವದೊಂದು ಮುಖ್ಯ ಪಟ್ಟಣದಲ್ಲಿ ಒಂದು ನಿತ್ಯ ಪತ್ರ ತೆಗೆಯುವರು.

ಕಾನಪೂರದಲ್ಲಿ ಭಯಂಕರ ದಂಗೆಯಾದರೂ, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಬೆದರಿಕೆಯಿಂದ ವರ್ತಮಾನಪತ್ರಗಳು ಭಯೋತ್ಪಾದಕವೆನಿಸುವಂಥ ಲೇಖಗಳನ್ನೇ ಬರೆಯಲಿಲ್ಲ.

ಧಾರವಾಡ-

ನಾಟ್ಯಕಲೆಯಲ್ಲಿ ಪ್ರಾವೀಣ್ಯವನ್ನು ಹೊಂದಿದ ೧೨ ಜನರೊಂದಿಗೆ ಬೆಂಗಳೂರಿನ ಶ್ರೀ. ಕೈಲಾಸಮ್ ಇವರು ನಮ್ಮಲ್ಲಿಗೆ ಬಂದಿರುವರು. ಅಭಿನಯಕಾರರಲ್ಲಿ ಸುಪ್ರಸಿದ್ಧ ನಂದಾಚಾರ್ಯರ ಕೈಯಲ್ಲಿ ನುರಿತವರಿರುವರು. ಶ್ರೀ. ಕೈಲಾಸಮ್ಮರವರು ಇಂತಹ ನ್ಯೂನಾರ ಸರಕಾರದ ಭೂಗರ್ಭಶಾಸ್ತ್ರದ ಖಾತೆಯ ಅಧಿಕಾರಿ ಸ್ಥಳವನ್ನು ತ್ಯಜಿಸಿ ನಾಟ್ಯಕಲಾ ಸೇವೆಯನ್ನೇ ಮಾಡಬೇಕೆಂದು ನಿರ್ಧರಿಸಿದವರು ಇವರು ಹಾಸ್ಯರಸಮೂರ್ತಿಗಳೆಂಬದನ್ನು ಇವರ ಪ್ರಯೋಗಗಳನ್ನು ನೋಡಿದವರೆಲ್ಲ ಮನಗಾಣದೆ ಇರರು. ಇವರ ನಾಟಕ ಪದ್ಧತಿಯು ಕರ್ನಾಟಕಕ್ಕೆ ನೂತನವಾದುದು. ಇಂಥ ನಾಟಕಗಳನ್ನು ನೋಡುವ ಸುಸಂಧಿಯು ಧಾರವಾಡಸ್ಥರಿಗೆ ಮೊದಲನೇ ಸಲ ದೊರಕಿದೆಯೆಂದು ಧಾರಾಳವಾಗಿ ಹೇಳಬಹುದು. ಇವರ ನಾಟಕಗಳು ಶ್ರೀ. ಗೋಪಾಳಗಿರಿಯವರ ಥಿಯೇಟರದಲ್ಲಿ ಇವತ್ತಿನಿಂದ ಪ್ರಾರಂಭವಾಗುವವು. ಇವರಿಗೆ ಧಾರವಾಡದವರು ಉದಾರಾಶ್ರಯವನ್ನು ಕೊಡುವರೆಂದು ನಂಬಿಗೆಯದೆ.

ಜಾಹೀರ ನೋಟೀಸು.

ಸವದತ್ತಿ ಎಲ್ಲಮ್ಮಾ ಮ್ಯುನಿಸಿಪಾಲಿಟಿ ಕಚೇರಿಯಿಂದಾ ಯಾವತ್ತು ಜನರಿಗೆ ತಿಳುಹಿಸುದೇನಂದರೆ:—

ಶ್ರೀ ಯಲ್ಲಮ್ಮನ ಗುಡ್ಡಕ್ಕೆ ಬರುವ ಯಾತ್ರಿಕರ ಮೇಲಿನ ವಸೂಲ ಮಾಡುವ ತಲೆಪಟ್ಟಿ ಗಾಡಿ, ಮೋಟಾರ ಮತ್ತು ಜನಾವರಗಳ ಮೇಲೆ ವಸೂಲ ಮಾಡುವ ಕರ ಇವುಗಳ ಮುಕ್ತೆ ಭಾದ್ರಪದ ಕೃ ೩೦ ಹನ್ನೆರಡು ಘಂಟೆ ರಾತ್ರಿಯಿಂದ ಮಾರ್ಗಶೀರ್ಷ ಕೃ ೩೦ ರಾತ್ರಿ ಹನ್ನೆರಡು ಘಂಟೆಯ ವರೆಗೆ ಅಂದರೆ ತಾರೀಖು ೨೫—೯—೨೭ ಯಿಂದಾ ೨೪—೯—೨೭ ಮೂರು ತಿಂಗಳ ಮಟ್ಟಿಗೆ ತಾರೀಖು ೧೮—೯—೨೭ ಇಸವಿ ಮಧ್ಯಾನ್ಹ ೩ ಘಂಟೆಕ್ಕೆ ಉಘಡ ರೀತಿಯಿಂದಾ ಮ್ಯುನಿಸಿಪಲ ಆಫೀಸಿನಲ್ಲಿ ಲಿಲಾವ ಮಾಡಿ ಕೊಡುವದರಲ್ಲಿ ಬರುವದು. ಸವಾಲಿನಲ್ಲಿ ಬೇಡತಕ್ಕವರು ತಾಲೂಕ ಅಮಲದಾರರ ಕಡಿಂದಾ ಲಾಯಖಿ ಸರ್ಟಿಫಿಕೇಟು ತಗೊಂಡು ಹಾಜರ ಇರಬೇಕು. ಮತ್ತು ಲಿಲಾವ ಪ್ರಾರಂಭವಾಗುವ ಪೂರ್ವದಲ್ಲಿ ಕಮೀಟಿ ಮುಂದೆ ಹಾಜರ ಮಾಡಬೇಕು. ಇಲ್ಲದಿದ್ದರೆ ಅವರ ಸವಾಲ ತೆಗೆದುಕೊಳ್ಳುವದು ಕಮೀಟಿಯ ಮರ್ಜಿಯ ಮೇಲೆ ಅವಲಂಬಿಸಿರುತ್ತದೆ. ಅಖೈರ ಸವಾಲು ಮಂಜೂರಾದ ಕೂಡಲೆ ಮಂಜೂರಾದ ರಕಮಿನ ೧/೪ ರಕಮು ಡಿಪಾಜಿಟ ತರೀಖ ಅಗಾವ ಜಮಾ ಮಾಡಬೇಕು. ಜಾಮೀನಾಗಿ ಮಂಜೂರಾದ ರಕಮಿಗೆ ತಾಲೂಕ ಅಮಲದಾರ ಕಡಿಂದಾ ಲಾಯಖಿ ಸರ್ಟಿಫಿಕಿಟ ಪಡಕೊಂಡಂಥ ಯೋಗ್ಯ ಜನರನ್ನು ಜಾಮೀನ ಕೊಟ್ಟು ಶರ್ತಗಳಿಗೆ ಅನುಸರಿಸಿ ಯೋಗ್ಯ ಸ್ಟಾಂಪಿನ ಮೇಲೆ ಕಬುಲಾಯತಿ ಬರಕೊಡಬೇಕು. ಶರ್ತಿನ ಯಾದಿ ಲಿಲಾವಿನ ಕಾಲಕ್ಕೆ ಓದಿ ಹೇಳುವದರಲ್ಲಿ ಬರುವದು. ತಿಳಿಯಬೇಕು. ತಾರೀಖು ೩೦—೯—೨೭ ಇಸ್ವಿ

R. G. NARGUND
Secretary.

G. M. KALADIGI,
President,
S. Y. Municipality.

ನೋಟೀಸು

ಜನಪಿ ಗಂಡ ಭೀಮಪ್ಪಾ ನೆಲ್ಲೂರ ಸಾ. ಕೊಕಟನೂರ ತಾಲೂಕ ರೋಣ ಇರೊದು ಮೊಸೂರು ಕುರಬನವರ ತಾಲೂಕ ಕುಷ್ಟಗಿ ಪೋಷ್ಟ ಹನಮಸಾಗರ ಇಲಾಖಾ ನಿಜಾಮ ಇವರಿಗೆ-

ಕೆಳಗೆ ಸಹಿ ಮಾಡಿದವನಿಂದ ತಿಳಿಸುವದೇನಂದರೆ ನೀನು ನನ್ನ ಲಗ್ನದ ಹೆಂಡತಿ ಇದ್ದು ನನ್ನು ನಿನ್ನಲ್ಲಿ ಬಿಟ್ಟು ಬಾಳಿ ಬಾಳ ಕಡಿ ನಡಿಯುದಕ್ಕೆ ಹೇಳದೇ ಕೇಳದೇ ನ್ಯಾನೇಲೆ ಇಟ್ಟ ನಮ್ಮ ದಾಗಿನೆ ಅಂದರೆ ಬೆಳ್ಳಿ ಬಂದಿ (೨) ಬೆಳ್ಳಿ ಪಟ್ಟಿ (೧) ಒಂಗಾರ ಎಳಿ (೧) ಭಂಗಾರ ಭೆಂಡವಾಳ (೧) ವ ರೋಖ (೨೦೦) ರೂಪಾಯಿ ಇಷ್ಟು ಸಾಮಾನು ತೆಗೆದುಕೊಂಡು ರಾತ್ರೋ ರಾತ್ರಿ ನನ್ನ ಮಗಳು ಲಕ್ಷುಮವ್ವಾ ಇಂಬೆ ಹುಡುಗಿ ಸಹಿತ ಓಡಿ ಹೋಗಿ ತವರ ಮನೆಯಲ್ಲಿರತಿದಿ ಈ ಬಗ್ಗೆ ತಿಂಗಳ ಯಿತರ ನಾಹಕ್ಕ ನನ್ನ ಈ ಮಾಲು ಕೊಟ್ಟು ನೋಟಚೀಟಿ ಬರಕೊಡತೇನೆಂದು ನಿನ್ನ ತಂದೆ ಮಾರ್ಫತ ಹೇಳಿದಾಗ ಈ ವರಿಗೂ ಸಾಮಾನ ತಂದು ಕೊಡಲಿಲ್ಲ ಮ ನೋಡಚೀಟಿನೂ ಬರಕೊಡಲಿಲ್ಲ ಕಾರಣ ನೋಟೀಸು ಕೊಡೋ ಭಾಗವತ್ತು ಈ ನೋಟೀಸು ಮುಟ್ಟಿದ ೧೫ ದಿವಸದಲ್ಲಿ ಬಂದು ಸಾಮಾನ ಕೊಟ್ಟು ನೋಡಚೀಟಿ ಕೊಟ್ಟು ಹೋಗಬೇಕು ಇಲ್ಲದಿದ್ದರೆ ಸಾಮಾನ ಬಗ್ಗೆ ಇಲಾಜ ಮಾಡಲಾಗುದೀತು ಇದೇ ನೋಡಚೀಟಿ ಅಂತ ತಿಳಿತಕ್ಕದ್ದು ನೀನು ನಿನ್ನ ಮರ್ಜಿ ಪ್ರಕಾರ ಇರಬೇಕು ನಾನು ನನ್ನ ಮರ್ಜಿ ಪ್ರಕಾರ ಇರತೇನೆ ಈ ನೋಟೀಸಿನ ಖರ್ಚು ವಗೈರೆ ನಿನ್ನ ಮೇಲೆ ಅದೆ ತಿಳಿಯಬೇಕು ತಾ. ೬-೯-೨೭ ಇಸ್ವಿ

ಸಹಿ ಭೀಮಪ್ಪ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ನ ತಮ್ಮ ಕರ್ನಾಟಕ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. 1443

ವಿಜಯ

ನಿತ್ಯ ಪತ್ರ | ಬಿಡಿ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೯) ಧಾರವಾಡ ಶುಕ್ರವಾರ ತಾರೀಖು ೯ ನೇ ಸಪ್ಟಂಬರ ೧೯೨೭ | ಸಂಚಿಕೆ ೧೯೪

ಕಿರ್ಲೋಸ್ಕರ ಶೇಂಗಾ [ಬೈಮೂಗು] ಒಡೆಯುವ ಯಂತ್ರಗಳು



ಈ ಯಂತ್ರಗಳು ಎರಡು ಮಾದರಿಯವು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಕಬ್ಬಿಣದವು. ಬಾಳಿಕೆ ಉಳ್ಳವು. ಶುಟ್ಟನ್ನು ಘೋಡಿಸಲು ಯಂತ್ರದಲ್ಲಿ ಜಾಣತನವನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳು ಕಳೆದ ಹಂಗಾಮದಲ್ಲಿ ಬಹು ಉಪಯೋಗಿಯಾಗಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗಿಸುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಒಡೆದು ಎಣ್ಣೆ ಮಾಡತಕ್ಕವರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅವಶ್ಯವಾಗಿರುತ್ತವೆ

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ನೋಟೀಸಿನ ದರಗಳು.

— ೦ —

ತಿಂಗಳು ಕಾಲಮಿನ ಪತ್ರ್ಯ ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮುನ್ಸಿಸಿಪಾಲಿಟಿ ಲೋಕಲಬೋರ್ಡ ಗೀಲೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಆ— ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕಬೇಕಿದ್ದರೆ ಆರ ಆಣೆ ಡಬಲ್‌ಕಾಲಮಿನ ಓಳಿಗೆ ಇಮ್ಮಡಿ ಬಾಬು. ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

— ೦ —

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೬—೮—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ಗ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ.
ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಕಲ್ಮ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಕಂಡಿಗೆಯು ಆರು ಲಕ್ಷದ ಮೇಲಿರುವದು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ... ಮತ್ತು ಬೇರೆ ತರದ ಡಿಪಾಜಿಟುಗಳ ... ಬಡ್ಡಿ ದೊರೆಯುವದು.

... ಕೆಳಗೆ ... ವಿಚಾರಿಸುವದು.

ತುಕಾರಾಮ ಬಿ. ... ಸೆಕ್ರೆಟರಿ ...

೨೯-೧೧ ...

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

— ೦ —

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ... ಆಣೆಯಿಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ ಪುಸ್ತಕಾಲಯ.

— ೦ —

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂತಯ	೫ "
ದೇಶಬಂಧು ದಾಸರ ಚರಿತ್ರೆ	೨ "
ದೇಶಭಕ್ತರ ಸಂದೇಶ	೧ "

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ವೆಚ್ಚ ಟಪಾಲ ಮಶೂಲ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ ಧಾರವಾಡ

ವಿಜಯ.

ಧಾರವಾಡ ತಾ- ೯-೯-೨೭ ನೇ ಇಸ್ವಿ

ಶಿಕ್ಷಕರ ಸಂಬಳವು ಹೆಚ್ಚಾಗಿದೆಯೋ?

(ಲೇಖಕ- ಓರ್ವ ಶಿಕ್ಷಕ)

ಬಲ್ಲಿದರೆನಿಸುವವರು ಕೂಡ ಒಮ್ಮೊಮ್ಮೆ ತಪ್ಪು ವಿಧಾನಗಳನ್ನು ಮಾಡುವರು. ಆಗ ಆ ವಿಧಾನಗಳನ್ನು ಖಂಡಿಸಲಿಕ್ಕೆ ನಿರ್ವಾಹವಿಲ್ಲದೆ ಲೆಕ್ಕಣಿಕೆಯನ್ನೆತ್ತುವ ಪ್ರಸಂಗವು ಬರುತ್ತದೆ; ಆ ವೇಳೆ ಅವರು ಯಾರೇ ಇರಲಿ. ವಾಸ್ತವಿಕವಾಗಿ ಟ್ರೇನಿಂಗ ಕಾಲೇಜದಲ್ಲಿ ಕೆಲಸ ಮಾಡಿದ ಹಾಗು ಮಾಡುವ ಪ್ರತಿಯೊಬ್ಬ ಶಿಕ್ಷಕನು, ಆ ಸಂಸ್ಥೆಯು ನಮ್ಮ ವಿದ್ಯಾನಿಲಯವಾದ್ದರಿಂದ ನಮಗೆ ಪೂಜ್ಯವೆನಿಸುವನು; ಆ ವೇಳೆ ಆತನು ಪ್ರತ್ಯಕ್ಷ ನಮ್ಮ ಶಿಕ್ಷಕನಿರಲಿ, ಇಲ್ಲದಿರಲಿ; ಆದ್ದರಿಂದ ನಮಗೆ ಅಂಥವರು ಅನುಚಿತ ವಿಚಾರಗಳನ್ನು ಮುಂದಿಟ್ಟರೆ, ಅವರ ಪ್ರತಿಪಾದನದ ಜೊಳ್ಳುತನವನ್ನು ತೋರಿಸಲಿಕ್ಕೆ ಮುಂದರಿಯುವದರಲ್ಲಿ ನಮಗೆ ಅತ್ಯಂತ ವಿಷಾದವೆನಿಸಿದರೂ ಇಡೀ ಸಮಾಜದ ಹಿತಕ್ಕಾಗಿ ಇಂಥ ಕಟು ಕರ್ತವ್ಯವನ್ನು ಒಮ್ಮೊಮ್ಮೆ ಮಾಡಲೇ ಬೇಕಾಗುವದು.

ಧಾರವಾಡದ ಟ್ರೇನಿಂಗ ಕಾಲೇಜವನ್ನು ಬಂದು ಮಾಡದೆ ಮುಂದೆ ಹಾಗೇ ನಡೆಯಿಸುವದು ಅಗತ್ಯವೆಂಬ ಬಗ್ಗೆ ದಿ. ಬ. ರೊದ್ದರಾಯರು ಸಿ. ಆಯ. ಇ. ಇವರು ನೇಕ ನಾಮದಾರ ಗವರ್ನರ ಸಾಹೇಬರಿಗೆ ಕಳುಹಿದ ವಿನಂತಿ ಪತ್ರದ ಕನ್ನಡ ಅನುವಾದವು ಶಾಲಾಪತ್ರಕದ ಜೂನ- ಜುಲೈಯ ಸಂಯುಕ್ತ ಸಂಚಿಕೆಯಲ್ಲಿ ಪ್ರಕಟವಾಗಿದೆ. ಅದರೊಳಗಿನ ಅದನೆಯ ವಾಕ್ಯಗುಚ್ಛವು (ಪ್ಯಾರಿಗ್ರಾಫವು) ಶಿಕ್ಷಕ ಸಮಾಜಕ್ಕೆ ಅವಮಾನಗೊಳಿಸ ವಂತಹದೂ, ಅಪ್ರಮಾಣವಾದದ್ದೂ, ಶಿಕ್ಷಕರ ಹಿತಕ್ಕೆ ವಿರೋಧವನ್ನುಂಟು ಮಾಡುವದೂ ಆಗಿರುವದು. ಅಂಥ [illegible] ಅದು ಹೊರಬಿದ್ದದ್ದರೆ, [illegible] ಅದರ [illegible] ಮಾಡುತ್ತಿದ್ದಿಲ್ಲ. ಆದರೆ ಒಂದು [illegible] ಶಿಕ್ಷ[illegible]ಲಯದ[illegible] (ಪ್ರಿನ್ಸಿಪಾಲ)ರಾದವರೂ, ಶಿಕ್ಷ[illegible]ವರೂ, [illegible] ಅನುಭವಿಕರೂ,

ಸಮಾಜದ ಸರಕಾರ ಪ್ರಿಯವಾದ ಮುಂದಾಳುಗಳೂ ಆದ ದಿ. ಬ. ರೊದ್ದರಾಯರಂಥವರಿಂದ ಅದು ಹೊರಬಿದ್ದದರಿಂದ ಅದರಲ್ಲಿ ಕಂಡು ಬರುವ ಸದೋಷ ವಿಚಾರ ಸರಣಿಯ ನಿರಾಕರಣವನ್ನು ಮಾಡುವದು ಅಗತ್ಯವಾಗಿದೆ.

"ಪ್ರಾಥಮಿಕ ಶಿಕ್ಷಕರಿಗೆ ಈಗ ಅವರ ಯೋಗ್ಯತೆ ಮೀರಿ ಪಗಾರು ಕೊಡಲ್ಪಡುವದೆಂದು ಹೇಳಬೇಕಾಗುವದು. ತೀರ ಕಡಿಮೆ ಪಗಾರವನ್ನು ೨೫ ರೂ. ಇಟ್ಟದ್ದು ಬಹಳ ಹೆಚ್ಚಾಗಿದೆ .... ಸ್ಥಾನಿಕ ಸಂಸ್ಥೆಗಳು ೧೫ ರೂ. ಗಳ ಮೇಲೆ ಅಂಟ್ರೇಂಡ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಬಹುದು" ಎಂದು ಅವರು ಉಲ್ಲೇಖಿಸಿರುವರು. ಶಿಕ್ಷಕರ ಯೋಗ್ಯತೆಯ ಆರಂಭದ ಮೆಟ್ಟನ್ನು ಗೊತ್ತುಪಡಿಸುವ ಒರೆಗಲ್ಲು ಯಾವದು? ಮುಲಕೀ ಪರೀಕ್ಷೆಯೇ ಅಲ್ಲವೇ? ಆ ಪರೀಕ್ಷೆಯನ್ನು ಇಳಿದವರಿಗೆ ಬೇರೆ ಖಾತೆಗಳಲ್ಲಿ ಎಷ್ಟು ಸಂಬಳವು ದೊರೆಯುವದು? ಮುಲಕೀ ಖಾತೆಯಲ್ಲಿ ಅವರ ಸಂಬಳದ ತರಗತಿಯು (ಸ್ಕೇಲವು) ೩೫ ರಿಂದ ೧೧೦ ರೂ. ತನಕ ಇರುತ್ತದೆ ನಮ್ಮೊಡನೆ ಮುಲಕೀ ಪರೀಕ್ಷೆಯಾಗಿ ಸರ್ವೇಖಾತೆಯಲ್ಲಿ ಸೇರಿದವರೊಬ್ಬರಿಗೆ ಈಗ ೧೩೫ ರೂ. ಗಳು ಸಿಗುವವು ಆದರೆ, ಅಷ್ಟೇ ಸರ್ವೀಸಿನ ೩ನೇ ವರ್ಷದ ಟ್ರೇಂಡರಾದ ನನಗೆ ೪೦ ರೂ. ಗಳೇ, ರೇವ್ಹಿನ್ಯೂ! ಸರ್ವೆ, ವ್ಹ್ಯಾಕ್ಸಿನೇಶನ್ ಮೊದಲಾದ ಬೇರೆ ಖಾತೆಗಳಲ್ಲಿ ಸೇರಿದವರ ಮುಲಕೀ ಪರೀಕ್ಷೆಯೂ, ಆ ಪರೀಕ್ಷೆಯನ್ನಿಳಿದವರ ಯೋಗ್ಯತೆಯೂ ಬೇರೆ, ಶಾಲಾಖಾತೆಯಲ್ಲಿ ಸೇರಿದವರದು ಬೇರೆ ಇರುವದೋ ಏನೋ! ಇನ್ನು ಉಳಿದ ಖಾತೆಯವರಿಗೆ "ಭತ್ತೆ" ಮೊದಲಾದ ಇತರ ಪ್ರಾಪ್ತಿಯಿದ್ದಂತೆ ಶಿಕ್ಷಕರಿಗಿಲ್ಲದ್ದರಿಂದ, ಕಡಿಮೆ ಸಂಬಳದವರಿಗೆ ಅದು ಮತ್ತಿಷ್ಟು ಕಡಿಮೆಯಾಗುವದು ಒಂದು ತರದ ಪಾರಿತೋಷಕವೆಂದು ಬಗೆದರೆ ತಿಳಿಯದು!!

ಪೋಸ್ಟಮನ್, ಪೋಲೀಸ ಶಿಪಾಯಿ ಇವರಿಗೆ ೧೫ ರೂ. ಗಳಿಗಿಂತ ಹೆಚ್ಚು (ಆರಂಭಕ್ಕೆ ೩೦ ರೂ.) ಸಂಬಳವು ದೊರೆತು, ಅನಂತರ ಕ್ರಮದಿಂದ ಹೆಚ್ಚುತ್ತ ಹೋಗುವದೆಂಬದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ ಅವರಿಗೆ ಮುಲಕೀ ಪರೀಕ್ಷೆಯ ನಿರ್ಬಂಧವೂ ಇಲ್ಲ. ಪೋಸ್ಟಮನ್ನರಿಗೆ ಓದುಬರಹ ಒಂದಿಷ್ಟು ಬೇಕು. ಪೋಲೀಸರಿಗೆ ಅದರ ಅವಶ್ಯಕತೆಯೂ ಇಲ್ಲ. ಪರೀಕ್ಷೆಯ ಅವಶ್ಯಕತೆಯು ಇಲ್ಲದವರಿಗಿಂತ ಅದರ ಅವಶ್ಯಕತೆಯಿದ್ದವರ ಯೋಗ್ಯತೆಯೇ ಕಡಿಮೆಯೋ?

"ಪರೀಕ್ಷೆಯು ಮಹತ್ವದ್ದಲ್ಲ; ಅವರವರು ಮಾಡುವ ಕೆಲಸದ ಯೋಗ್ಯತೆಯನ್ನನುಸರಿಸಿ ಸಂಬಳ ಕೊಡಬೇಕಾಗುವದೆಂ"ದರು ಕೂಡ ಪತ್ರಗಳನ್ನು ಹಂಚುವ ಪೋಸ್ಟಮನ್ನನು ಖರಡು ಗೀಚುವ ಕಾರಕೂನನು ಇಲ್ಲವೆ ಹಡೇಲ ಹಸ್ಸಿಯು ಪೋಲಿಸನ, ಇವರಿಗಿಂತ ತನ್ನ ಒಡಲೊಳಗಿನ ವಿದ್ಯೆಯನ್ನು ಇನ್ನೊಬ್ಬರಲ್ಲಿ ಸೇರಿಸುವ ಶಿಕ್ಷಕನ ಕೆಲವು ಕಡಿಮೆ ಯೋಗ್ಯತೆಯದೂ ಸಾಮಾನ್ಯವಾದದ್ದೂ ಆಗಿರುವದೇ? ಶಿಕ್ಷಕರ ಯೋಗ್ಯತೆಯು ಎಲ್ಲಕ್ಕೂ ಹೆಚ್ಚಿನದೆಂದು ಹೊಗಳುವ ಈ ದೇಶದ ಪಂಡಿತರೂ ಪರದೇಶದ ಪಂಡಿತರೂ ಮೂರ್ಖರೇ? ಕೇವಲ ಪೊಟ್ಟಿಗಾರನಾಗಿರುವ ಕನ್ನರನೂ ಕೂಡ ಶಿಕ್ಷಕನಿಗಿಂತ ಹೆಚ್ಚಿನ ಯೋಗ್ಯತೆಯವನೇ ಸರಿ, ಯಾಕಂದರೆ ಅವನಿಗೂ ೨೦ ರೂ. ಗಳ ತನಕ ಪಗಾರ ಸಿಗುತ್ತಿರುತ್ತದೆ.

ಈಗ ಶಿಕ್ಷಕರಿಗೆ ದೊರೆಯುತ್ತಿರುವ ಸಂಬಳವು ಅವರ ಬೇಡಿಕೆಯಷ್ಟಿಲ್ಲ. ಶಿಕ್ಷಕರ ಆಂದೋಲನವು ಇಂದಿಗೆ ಹತ್ತು ವರ್ಷಗಳಿಂದ ನಡೆದಿದೆ. ಇಲಾಖೆಯ ತಂಟ ಅವರ ತಾಲೂಕ, ಜಿಲ್ಲಾ, ಪ್ರಾಂತ ಹಾಗು ಇಲಾಖಾ ಸಂಘಗಳು ಸ್ಥಾಪಿತವಾಗಿವೆ. ಶಿಕ್ಷಕರ ವತಿಯಿಂದ ಅವರ ಸಂಬಳದ ತರಗತಿಯು (ಸ್ಕೇಲವು) ಸೋಲ್ಲಾಪುರದ ಇಲಾಖಾ ಪರಿಷತ್ತಿನಲ್ಲಿ ನಿರ್ಣಯವಾಗಿದ್ದು, ಇಂದಿನ ವರೆಗೆ ಒಳ್ಳೆದರ ಅಧ್ಯಕ್ಷತೆಯ ಕೆಳಗೆ ಆದ ಆ ಸಂಘಗಳ ಪ್ರತಿಯೊಂದು ಅಧಿವೇಶನದಲ್ಲಿ ಈ ಬೇಡಿಕೆಯು ಮಾನ್ಯತೆಯನ್ನೈದಿದೆ. ಪ್ರತಿಯೊಂದು ಸಂಘದ ಇಂಥ ಅಧಿವೇಶನಗಳು ಹತ್ತೆಂಟಾದರೂ ಆಗಿರುವವು. ವೃತ್ತ ಪತ್ರಗಳಲ್ಲಿಯೂ ಇಲಾಖೆಯ ನಿಯಮ ನಿರ್ಮಾಣ ಸಭೆಯಲ್ಲಿಯೂ ಆ ಸ್ಕೇಮವು ಉದ್ಘೋಷಿತವಾಗಿ ಸಂಘದ ಅಧಿವೇಶನಗಳಿಗೆ ನಿಲಕದ ಇಲಾಖೆಯೊಳಗಿನ ಮುಖಂಡರುಗಳೂ ಅದಕ್ಕೆ ಸಮ್ಮತಿಯನ್ನಿತ್ತಿರುವರು. ಹೀಗೆ ಇಲಾಖೆಯೊಳಗಿನ ಸಾವಿರಕ್ಕಿಂತ ಹೆಚ್ಚು ಜನ ಸಭಾಧ್ಯತೆ ಪಡೆದ ಹಾಗು ಬೇರೆ ಮುಂದಾಳುಗಳೂ ತಜ್ಞರೂ ಆದವರು ಅದನ್ನು ಒಪ್ಪಿ ಅದು ಸರ್ವಮಾನ್ಯವಾದರೂ ಸರಕಾರಕ್ಕೆ ಅದನ್ನು ಪೂರ್ಣ ಮಾಡುವದು ಹಣದ ಅನಾನುಕೂಲತೆಯ ಮೂಲಕ! ಅಶಕ್ಯವೆನಿಸಿದ್ದರಿಂದ ಆ ವರಿಂದ ಇದರ ವಿಚಾರಕ್ಕೆಗೆ ನಿಯಮಿಸಲ್ಪಟ್ಟ ಸಾಠೇ- ಪರಾಂಜಪೆ ಕಮಿಟಿಯು ತೀರ ಕಡಿಮೆಯೆಂದರೆ ಇಂತಿಷ್ಟು ಕೊಡಬೇಕೆಂದು ಶಿಫಾರಸು ಮಾಡಿದ ಸ್ಕೀಮದಂತೆ ಆರಂಭದ ಸಂಬಳವು ಮಾತ್ರ ಈಗ ದೊರೆಯುತ್ತಲಿದೆ. ಆ ಸ್ಕೀಮವನ್ನು ತಜ್ಞರೇ ಗೊತ್ತುಪಡಿಸಿದ್ದು ಅದಕ್ಕೆ ಸರಕಾರವೂ ಲೋಕ ಪ್ರತಿನಿಧಿಗಳೂ (ಕೌನ್ಸಿಲರರೂ) ಒಪ್ಪಿಗೆಯನ್ನಿತ್ತಿರುವರು. ಅಂದ ಬಳಿಕ ಈ ಸಾಠೆ- ಪರಾಂಜಪೇ ಸ್ಕೀಮಿಗೆ ಮಾನ್ಯತೆ ಕೊಟ್ಟ ಸರಕಾರವೂ, ನಿಯಮ ನಿರ್ಮಾಣ ಸಭೆಯ ಸದಸ್ಯರೂ ಬೇರೆ ಮುಂದಾಳುಗಳೂ ತಿಳಗೇಡಿಗಳೇ! ಅವರಿಗೆ ಜನಹಿತದ ಹಾಗು ಶಿಕ್ಷಣ ಪ್ರಸಾರದ ಹಂಬಲವಿಲ್ಲವೇ?

ಹಿಂದುಸ್ಥಾನದ ಸದ್ಯಃಪರಿಸ್ಥಿತಿಯನ್ನಭ್ಯಾಸಿಸಿ

ದ ಪಂಡಿತರು ಈಗ ಇಲ್ಲಿ ವಾಸಿಸುವ ಪ್ರತಿಯೊಬ್ಬ ಬುದ್ಧಿಜೀವಿ ಮನುಷ್ಯನಿಗೆ ಅವನ ಯೋಗ್ಯತೆಯಂತೆ ತೀರ ಕಡಿಮೆಯೆಂದರೆ ೫೦ ರೂ. ತೀರ ಹೆಚ್ಚೆಂದರೆ ಸಾವಿರ ರೂಪಾಯಿ ವೇತನವು ಪ್ರತಿ ತಿಂಗಳಿಗೆ ದೊರೆಯಬೇಕೆಂದು ಅಭಿಪ್ರಾಯಪಟ್ಟಿರುವರು. ಅದಕ್ಕೂ ಕಡಿಮೆ ಸಂಬಳವೆಂದರೆ ಯೋಗ್ಯತೆಯು ಪೇಟೆಯ ದಾಣೆಯಾಯಿತೆಂದೂ ಹೆಚ್ಚು ಸಂಬಳ ಕೊಡುವದೆಂದರೆ ದೇಶದ ಸುಲಿಗೆಯೆಂದೂ ಅವರ ನಿರ್ದಾಕ್ಷಿಣ್ಯದ ಮತವು. ಹೀಗೆನ್ನುವವರೇನು ಅವಿವೇಕಿಗಳೇ?

ಉದರ ನಿಮಿತ್ತವೇ ದುಡಿಯುವದಲ್ಲವೇ? ಶಿಕ್ಷಕನು ಸನ್ಯಾಸಿಯಲ್ಲ; ನೈಷ್ಠಿಕ ಬ್ರಹ್ಮಚಾರಿಯೂ ಅಲ್ಲ; ಗೃಹಸ್ಥನು. ಅಂದಬಳಿಕ ಅವನು ಒಬ್ಬೊಂಟಿಗನಿರುವದು ಶಕ್ಯವಿಲ್ಲ. ಗಾರ್ಹಸ್ಥ್ಯ ಧರ್ಮದಂತೆ ತನ್ನ ಹಾಗು ತನ್ನ ಕುಟುಂಬದ ಊಟ ಉಡಿಗೆ (ಗಂಡಹೆಂಡಿರಿಬ್ಬರಲ್ಲ. ಕ್ವಚಿತ್ ಒಬ್ಬನೇ ಇದ್ದರೂ) ಅತಿಥಿ ಅಭ್ಯಾಗತರ ಮನ್ನಣೆ, ಅರಿವೆ ಅಂಚಡಿ ಇನ್ನಿವುಗಳ ವೆಚ್ಚವು ಅವನ ಸಂಬಳದಲ್ಲಿ ಸಾಗಬೇಕಲ್ಲವೇ? ಒಂದು ಮಧ್ಯಮತರಗತಿಯ ಕುಟುಂಬಕ್ಕೆ (ಇವುಗಳ ಬಗ್ಗೆ ಪ್ರತಿ ತಿಂಗಳು)ಗಂಡಹೆಂಡಿರಿಬ್ಬರೇ ಇದ್ದರೂ) ಮೂವತ್ತು ರೂಪಾಯಿಗಳಿಗಿಂತ ಕಡಿಮೆ ಹಣವು ಸಾಲದೆಂಬದು ಸ್ವಾನುಭವದ ಮಾತು. ಇನ್ನು ಶಿಕ್ಷಕನು ನೈಷ್ಠಿಕಬ್ರಹ್ಮಚಾರಿಯಾದರೆ, (ವಾನಪ್ರಸ್ಥಾಶ್ರಮಿಯಿದ್ದರೆ ಅವನೂ ಅತಿಥಿಸತ್ಕಾರವನ್ನು ಮಾಡಬೇಕಾಗುವದಲ್ಲದೆ ಸಕುಟುಂಬಿಯಿರುವದರಿಂದ ಅನರ್ಹನು) ಸನ್ಯಾಸಿಯಾಗಲಿ ಇರಬೇಕೆಂದು ಕಟ್ಟಳೆಯನ್ನು ಮಾಡಿದರೆ ಮಾತ್ರ ೧೫ರೂ ಗಳಲ್ಲಿ ಅತನ ಜೀವನಾರ್ಥವು ಸಾಗಬಹುದು; ಅಥವಾ ಈ ತಲಬಿನ ಅವಶ್ಯಕತೆಯಾದರೂ ಇಂಥ ಏಕಾಕಿಯಾದವನಿಗೇನು? ಬ್ರಹ್ಮದೇಶದೊಳಗಿರುವ ಪುಂಗಿಗಳಂತೆ ಸಮಾಜವು ಅನ್ನವನ್ನೂ ತೀರ ಅವಶ್ಯಕವಾದ ಅರಿವೆಗಳನ್ನೂ ಒದಗಿಸಿಕೊಟ್ಟರಾಯಿತು ಹೇಗೂ ಶಿಕ್ಷಣದ ಖರ್ಚು ಜನತೆಯ ಮೇಲೆಯೇ ಬೀಳತಕ್ಕದ್ದು. ಈಗ ಅಪ್ರತ್ಯಕ್ಷವಾಗಿದ್ದರೆ ಆಗ ಪ್ರತ್ಯಕ್ಷವಾಗುವದಿಷ್ಟೇ. ಮೇಲಾಗಿ ದಾನವೃತ್ತಿಯು ನಮ್ಮ ಜನರಲ್ಲಿ ಸಹಜವಾಗಿರುವದರಿಂದ ಹುಚ್ಚಾಗಿ ಒ ದಾಣೆ ಲೋ ಲಘುಂಡ ಕೊಟ್ಟಷ್ಟು ಅದು ಜಡವೂ ಅನಿಸಲಿಕ್ಕಿಲ್ಲ. ಆದರೆ ಶಿಕ್ಷಕರು ಸನ್ಯಾಸಿಗಳಂತಿರಬೇಕೆಂಬ ಕಟ್ಟು ಆಗುವ ತನಕ ಈಗಿದ್ದ ಶಿಕ್ಷಕರಿಗೆ ಮಾತ್ರ ಹದಿನೈದು ರೂಪಾಯಿಗಳು ಜೀವನಾರ್ಥಕ್ಕೆ ಸಾಲವು ನೆರೆಯಾಕನ ಪ್ರತಿ ತಿಂಗಳ ವೆಚ್ಚವು ಸರಾಸರಿ ೧೭ ರೂ. ಗಳಿಗಿಂತ ಹೆಚ್ಚು ಇದ್ದದ್ದು ಸರಕಾರೀ ವರದಿಯಿಂದ ತಿಳಿಯುತ್ತಿರಲು, ಶಿಕ್ಷಕರಿಗೆ ೧೫ ರೂಪಾಯಿ ಸಾಕೆನ್ನುವದು ಸೋಜಿಗವೇ ಸರಿ.

ಕೆಲಸದ ಮೇಲೆ ಇದ್ದರೆ ಯೋಗ್ಯತೆಯ ವಿಚಾರವನ್ನು ಮಾಡಬೇಕಾಗುವದಷ್ಟೇ? ಕಾರ್ಯನಿವೃತ್ತರಾದವರಿಗೆ (ಪೆನ್ಶನದಾರರಿಗೆ) ಇದರ ಸಂಬಂಧವೇನೂ ಇರುವದಿಲ್ಲ. ಕುಟುಂಬ ಪೋಷಣದ ಭಾರವೂ ಅವರ ಮೇಲಿರುವ ಕಾರಣವಿಲ್ಲ. ಕೇವಲ ಒಂದು ಹೊಟ್ಟೆಯ ಜೀವನಾರ್ಥ ಸಾಗುವಷ್ಟು ಪ್ರಾಪ್ತಿಯಿಂದ ಅವರು ತೃಪ್ತರಾಗಿ ಶೇಷಾಯುಷ್ಯವನ್ನು ಪರಮಾತ್ಮನ ಚಿಂತನದಲ್ಲಿಯೇ ಆಗಲಿ, ರಾಷ್ಟ್ರಕಾರ್ಯದಲ್ಲಿಯೇ ಆಗಲಿ ತಮ್ಮ ತಮ್ಮ ಒಲವಿನಂತೆ ಕಳೆಗು ದೇಹಸಾರ್ಥಕ್ಯವನ್ನು ಮಾಡಿಕೊಳ್ಳಲು ಅವರಿಗೆ ಪ್ರತ್ಯವಾಯವಿಲ್ಲ. ಆದ್ದರಿಂದ ೧೫ ರೂಪಾಯಿಗಳಲ್ಲಿ ಶಿಕ್ಷಕರ ಉ ಜೀವನವು ಸಾಗುವದೆಂಬ ನಂಬಿಗೆಯಿದ್ದವರು ಗವ್ಹರ್ನರ‌ಸಾಹೇಬರಿಗೆ ಬರೆದಾಗಲಿ ಬೇರೆ ಬಗೆಯಿಂದಾಗಲಿ ೧೫ ರೂಪಾಯಿಗಳಿಗಿಂತ ಹೆಚ್ಚು ಪೆನಶೆನ್ ಪಡೆಯುವವರೆಲ್ಲರ ಹೆಚ್ಚಿನ ಹಣವು ಸರಕಾರಕ್ಕೆ ಸೇರುವಂತೆ ಮಾಡುವ ಚಳವಳಿಯನ್ನು ಕೈಕೊಳ್ಳುವದು ನಮಗಂತು ಹೆಚ್ಚು ಸಮಂಜಸವಾಗಿ ತೋರುತ್ತದೆ. ಮತ್ತು ಈ ಮೇಲುಪಂಕ್ತಿಯನ್ನು ದಿ. ಬ. ರೊದ್ದ ರಾಯರೇ ಮೊದಲು ಎಲ್ಲರಿಗೆ ಹಾಕಿಕೊಟ್ಟು ಸ್ವಾರ್ಥತ್ಯಾಗದ ಮಾದರಿಯನ್ನು ತೋರಿಸಬೇಕೆಂದು ನಮ್ಮ ನಮ್ರ ಪ್ರಾರ್ಥನೆಯಿದೆ. ಹೀಗೆ ಮಾಡಲು ಉಳಿತಾಯವಾಗುವ ಹಣದಿಂದ ಜನಹಿತದ ಅನೇಕ ಕಾರ್ಯಗಳು ಸಾಗಿ, ಬಡಶಿಕ್ಷಕರ ಯೋಗ್ಯತೆಯನ್ನು ನಿರ್ಧರಿಸುವ ಅಳವು ಮೀರಿದ ಕೆಲಸವನ್ನು ಕೈಕೊಳ್ಳುವ ಕಾರಣವೂ ಬೀಳಲಿಕ್ಕಿಲ್ಲ; ಸಲಿಕೆಯಿಂದ ಸಂಬಳವನ್ನಳೆಯುವ ಹಿರಿಯಾಳುಗಳ ಮನವೂ ನೋಯಲಿಕ್ಕಿಲ್ಲ.

ಒಂದು ಮಧ್ಯಮ ಸ್ಥಿತಿಯ ಕುಟುಂಬಕ್ಕೆ ಬೇಕಾಗುವ ಖರ್ಚಿನ ಸಂಪೂರ್ಣ ಟಿಪ್ಪಣೆಯನ್ನು ಕೊಡುವ ಅವಶ್ಯಕತೆಯು ನಮಗೆ ಅಷ್ಟೊಂದು ತೋರುವದಿಲ್ಲ. ಕಾಲೇಜದಲ್ಲಿರುವ ವಿದ್ಯಾರ್ಥಿಗಳ ಬರೆ ಹೊಟ್ಟೆಯ ಖರ್ಚಿನ ಲೆಖ್ಖವು ಸಿಗುವದು. ಮಧ್ಯಮಸ್ಥಿತಿಯ ಕುಟುಂಬದಲ್ಲಿ ಹವ್ಯಕವ್ಯ, ಅತಿಥ್ಯಾಭ್ಯಾಗತ್ಯ, ಹಬ್ಬಹುಣ್ಣಿವೆ ಇತ್ಯಾದಿಗಳ ಮೂಲಕ ಅದಕ್ಕೂ ಹೆಚ್ಚು ಖರ್ಚು ಬರುವದಾದರೂ ಅದನ್ನುಳಿದು ಕಾಲೇಜದ ಲೆಖ್ಖವನ್ನೇ ನೋಡಿದರೂ ಒಂದು ಕುಟುಂಬಕ್ಕೆ ಬರೇ ಹೊಟ್ಟೆಗೆ ಎಷ್ಟು ಖರ್ಚು ಹಿಡಿದೀತೆಂಬದರ ಕಲ್ಪನೆಯಾದೀತು. ಅದರಲ್ಲಿ ಅರಿವೆಅಂಚಡಿ, ಮನೆಬಾಡಿಗೆ, ದೀಪದೀವಿಗೆ ಎಣ್ಣೆಬೆಣ್ಣೆ, ಬೇನೆಬೇಸರಿಕೆ ಇವುಗಳ ವೆಚ್ಚವನ್ನು ಸಮಾವೇಶ ಮಾಡಿದರೆ ಇರಬೇಕಾದ ಸಂಬಳದ ಪರಿಮಿತಿಯು ಗೊತ್ತಾಗುವದು. ಮೂರು ಜನರಿದ್ದ ಒಂದು ಕುಟುಂಬಕ್ಕೆ ೪೦ ರೂ. ಇಬ್ಬರೇ ಇದ್ದ ಕುಟುಂಬಕ್ಕೆ ೩೦ ರೂ ಪ್ರತಿ ತಿಂಗಳ ಸರಾಸರಿ ಖ

ರ್ಚು ತಪ್ಪದೇ ಬರುವದು. ನನ್ನ ಅನುಭವದ ಮಾತಾಗಿದೆ. ಇದರ ಸತ್ಯತ್ವವನ್ನು ತಮ್ಮ ಅರಿವಿಕೆಯಿಂದಲೇ ಪ್ರತಿಯೊಬ್ಬ ಮಧ್ಯಮಸ್ಥಿತಿಯ ಪಗಾರದಾರನು ಮನಗಾಣಬಹುದು. ಪರಿಸ್ಥಿತಿಯ ಜ್ಞಾನವಿಲ್ಲದೆ ಅಂಕಿ ನೋಡಿ ಬೆದರುವ ಸಂಶಯಾತ್ಮನ ಸಂದೇಹನಿರಸನ ಮಾಡಲಿಕ್ಕೂ ನಾವು ಸಿದ್ಧರಿದ್ದೇವೆ.

ನಾಳಿನ ಸಂಚಿಕೆಯಲ್ಲಿ ಪೂರ್ಣವಾಗುವದು.

ನ್ಯಾಯ ಬೇಡುವಂಥವರ ಮೇಲೆ ಗುಂಡು ಹಾಕಿದರು.

—೦—

ಜಯಪೂರದಲ್ಲಿ ಪೋಲೀಸರು ಗುಂಡು ಹಾಕಿದ ಸಮಾಚಾರವನ್ನು ನಿನ್ನಿನ ಸಂಚಿಕೆಯಲ್ಲಿ ಬರೆದಿದ್ದೇವೆ. ಅನ್ಯಾಯವನ್ನು ದೂರ ಮಾಡಿ, ಪೋಲೀಸರ ಜುಲುಮೆಯನ್ನು ತಡೆಯಿರೆಂದು ಕೇಳುವಾಗ ಹೋದಂಥ ಜನರ ಮೇಲೆ ಯುರೋಪಿಯನ್ನ ಸುಪರಿಂಟೆಂಡೆಂಟರಾದ ಕಾವ್ಹಟ್ರೀಸಾಹೇಬರು ಗುಂಡು ಹಾಕಲಿಕ್ಕೆ ಹುಕುಮು ಮಾಡಿದರೆಂದು ಜಯಪೂರದಿಂದ ಬಂದ ಸುದ್ದಿಯಾಗಿದೆ.

ಹಿಂದೂ ಮುಸಲಮಾನ ದಂಗೆಗಳ ಭಯಂಕರ ಸ್ಥಿತಿಯು.

—೦—

ನಾಗಪೂರದಲ್ಲಾದ ದಂಗೆಯಲ್ಲಿ ಮುಸಲಮಾನರು ಬಹುವಾಗಿ ಹಾನಿಗೆ ಗುರಿಯಾದರು. ತಮಗೆ ನೆಲೆಯಿಲ್ಲೆಂಬ ಹೆದರಿಕೆಯಿಂದ ಅವರು ತಂಡ ತಂಡಾಗಿ ಪಟ್ಟಣಕ್ಕೆ ಶರಣು ಹೊಡೆಯುತ್ತಿದ್ದಾರೆ. ದಂಗೆಯಲ್ಲಿ ೧೧ ಜನ ಮುಸಲಮಾನರು ಏಳು ಹಿಂದೂ ಜನರು ಸತ್ತರು.

ಕಾನಪೂರದ ದಂಗೆಯಲ್ಲಿ ೩೫೦ ಜನರನ್ನು ಹಿಡಿದಿದ್ದಾರೆ. ದಂಗೆ ಮರಳಿಸಬಾರದೆಂದು ಪೋಲೀಸರು ದೇವಾಲಯ ಮತ್ತು ಮಸೀದೆಗಳಲ್ಲಿ ಕಾವಲಾಗಿದ್ದಾರೆ.

ಮುಜಫ್ಫರದಲ್ಲಾದ ದಂಗೆಯಲ್ಲಿ ಮುಸಲಮಾನರ ಸ್ಥಾವರ ಜಂಗಮ ಜಿಂದಗಿಯ ಹಾನಿಯು ಐದು ಲಕ್ಷವಾಗಿದೆ. ಹಿಂದೂ ಜನರ ಹಾನಿಯು ೩೧ ಸಾವಿರವಾಗಿದೆ.

ಲಖನೌ ಪಟ್ಟಣದಲ್ಲಿ ಹಿಂದೂ ಮುಸಲಮಾನ ಕಲಹವು ವಿಕೋಪಕ್ಕೆ ಹೋಗಿದೆ.

ಗೊಂಬೆಯ ಸ್ಥಳಾಂತರ-

ನೀಲಗೊಂಬೆಯನ್ನು ಈಗಿನ ಸ್ಥಳ ಬಿಡಿಸಿ, ಎಲ್ಲಾದರೊಂದು ವಸ್ತು ಸಂಗ್ರಹಾಲಯದಲ್ಲಿಡಬೇಕೆಂದು ಶ್ರೀ. ಸಿಂಗರವೇಲುನವರು ಮದ್ರಾಸದ ಮ್ಯುನಿಸಿಪಾಲಿಟಿಯಲ್ಲಿ ತರುವ ತಗುವ ಸೂಚನೆಯನ್ನು ಅಧ್ಯಕ್ಷರ ಕಡಿಗೆ ಕಳಿಸಿದರು. ಗೊಂಬೆಯು ಸರಕಾರದ ಸ್ವಾಮಿತ್ವಕ್ಕೆ ಸೇರಿದ್ದು ಅದರಲ್ಲಿ ಮ್ಯುನಿಸಿಪಾಲಿಟಿಯು ಕೈ ಹಾಕಲಿಕ್ಕೆ ಬರುವದಿಲ್ಲೆಂದು ಅಧ್ಯಕ್ಷರು ಈ ಠರಾವಿಗೆ ತಮ್ಮ ಒಪ್ಪಿಗೆ ಕೊಡಲಿಲ್ಲ. ಮ್ಯುನಿಸಿಪಾಲಿಟಿಯು ಈ ಪ್ರಕಾರ ಠರಾವು ಮಾಡಿ, ಸರಕಾರಕ್ಕೆ ತಿಳಿಸಿದರೇನು ತಪ್ಪು?

ಪಿಂಡ ಪತ್ರ-ಮಾನಗಳು

ವಿಜಾಪೂರದಲ್ಲಿದ್ದ ಗಜಾನನೋತ್ಸವದಲ್ಲಿ ಪಾಂಡುರಂಗ ಜಂಪಿಗರೂ ಮಾಡಿದ ಮೇಳಗಳು ಸೋತ ಪದವಿತ್ತು ಇವರು ಹಾಕುತ್ತಿದ್ದ ಕಾಂಗ್ರೆಸ್ಸ ಪ್ರಕ್ಷ ಒಬ್ಬೊಂದು ಹಾರಿಸುವಂತಾಗುತ್ತಿತ್ತು.

ಪಂಜಾಬದಲ್ಲಿ ಶೀಖರ ಮಹಾ ಸಭೆಯು ಕೂಡುವದು ನಾಭಾದ ಮಹಾರಾಜರಿಗೆ ಅಧ್ಯಕ್ಷಸ್ಥಾನ ಕೊಡಬೇಕೆಂದು ಪ್ರಮುಖ ಶೀಖರ ಮತವು ಸರಕಾರವು ಅಡ್ಡ ಬರುವದೇನೆಂಬದೇ ಅವರಿಗೆ ಭಯವು.

ಡಾಕ್ಟರ ಅನಸಾರಿಯವರು ಮದ್ರಾಸ ಕಾಂಗ್ರೆಸದ ಅಧ್ಯಕ್ಷರಾಗಲೊಪ್ಪಿದ್ದಾರೆ.

ಸಿಂಹಲದ್ವೀಪದ ಬುದ್ಧಜನರು ಐದು ಲಕ್ಷ ಬಂಡವಲ ಹಾಕಿ, ಒಂದು ಮುದ್ರಾಲಯ ತೆಗೆದು, ಬುದ್ಧಗಯೆಯ ವೇದವ ದೆಸೆಯಿಂದ ಹಿಂದುಸ್ಥಾನದ ಯಾವದೊಂದು ಮುಖ್ಯ ಪಟ್ಟಣದಲ್ಲಿ ಒಂದು ನಿತ್ಯ ಪತ್ರ ತೆಗೆಯುವರು.

ಕಾನಪೂರದಲ್ಲಿ ಭಯಂಕರ ದಂಗೆಯಾದರೂ, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಬೆದರಿಕೆಯಿಂದ ವರ್ತಮಾನಪತ್ರಗಳು ಭಯೋತ್ಪಾದಕವೆನಿಸುವಂಥ ಲೇಖಗಳನ್ನೇ ಬರೆಯಲಿಲ್ಲ.

ಧಾರವಾಡ-

ನಾಟ್ಯಕಲೆಯಲ್ಲಿ ಪ್ರಾವೀಣ್ಯವಳ್ಳ ಹೊಂದಿದ ೧೨ ಜನರೊಂದಿಗೆ ಬೆಂಗಳೂರಿನ ಶ್ರೀ. ಕೈಲಾಸಮ್‌ ಇವರು ಇಲ್ಲಿಗೆ ಬಂದಿರುವರು. ಅಧಿನಯಕಾರರಲ್ಲಿ ಸುಪ್ರಸಿದ್ಧ ಪಂಡಿತ ಚಾರ್ಯರ ಕೈಯಲ್ಲಿ ನುರಿತವರಿರುವರು. ಶ್ರೀ. ಕೈಲಾಸಮ್ಮರು ಮೈಸೂರ ಸರಕಾರದ ಭೂಗರ್ಭಶಾಸ್ತ್ರದ ಖಾತೆಯ ಅಧಿಕಾರ ಸ್ಥಳವನ್ನು ತ್ಯಜಿಸಿ ನಾಟ್ಯಕ

ಜಾಹೀರ ನೋಟೀಸು.

ಸವದತ್ತಿ ಎಲ್ಲಮ್ಮಾ ಮ್ಯುನಿಸಿಪಾಲಿಟಿ ಕಚೇರಿಯಿಂದಾ ಯಾವತ್ತು ಜನರಿಗೆ ತಿಳಿಸುವದೇನಂದರೆ:—

ಶ್ರೀ ಯಲ್ಲಮ್ಮನ ಗುಡ್ಡಕ್ಕೆ ಬರುವ ಯಾತ್ರಿಕರ ಮೇಲಿನ ವಸೂಲು ಮಾಡುವ ತಲಿಪಟ್ಟಿ ಗಾಡಿ, ಮೋಟಾರ ಮತ್ತು ಜನಾವರಗಳ ಮೇಲೆ ವಸೂಲ ಮಾಡುವ ಕರ ಇವುಗಳ ಮಕ್ತೆ ಭಾದ್ರಪದ ಕೃ ೩೦ ಹನ್ನೆರಡು ಘಂಟೆ ರಾತ್ರಿಯಿಂದ ಮಾರ್ಗಶೀರ್ಷ ಕೃ ೩೦ ರಾತ್ರಿ ಹನ್ನೆರಡು ಘಂಟೆಯ ವರೆಗೆ ಅಂದರೆ ತಾರೀಖು ೨೫—೯—೨೭ ಯಿಂದಾ ೨೪—೧—೨೮ ಮೂರು ತಿಂಗಳ ಮುಟ್ಟಿಗೆ ತಾರೀಖು ೧೯—೯—೨೭ ಇಸವಿ ಮಧ್ಯಾನ್ಹ ೩ ಘಂಟೆಕ್ಕೆ ಉಘಡ ರೀತಿಯಿಂದಾ ಮ್ಯುನಿಸಿಪಲ್ ಆಫೀಸಿನಲ್ಲಿ ಲಿಲಾವ ಮಾಡಿ ಕೊಡಲ್ಪಡುವದಲ್ಲಿ ಬರುವದು. ಸವಾಲಿನಲ್ಲಿ ಬೇಡತಕ್ಕವರು ತಾಲೂಕ ಅಮಲದಾರರ ಕಡಿಂದಾ ಲಾಯಖಿ ಸರ್ಟಿಫಿಕೇಟು ತಗೊಂಡು ಹಾಜರ ಇರಬೇಕು. ಮತ್ತು ಲಿಲಾವ ಪ್ರಾರಂಭವಾಗುವ ಪೂರ್ವದಲ್ಲಿ ಕಮಿಟಿ ಮುಂದೆ ಹಾಜರ ಮಾಡಬೇಕು. ಇಲ್ಲದಿದ್ದರೆ ಅವರ ಸವಾಲ ತೆಗೆದುಕೊಳ್ಳುವದು ಕಮಿಟಿಯ ಮರ್ಜಿಯ ಮೇಲೆ ಅವಲಂಬಿಸಿರುತ್ತದೆ. ಅಖೈರ ಸವಾಲು ಮಂಜೂರಾದ ಕೂಡಲೆ ಮಂಜೂರಾದ ರಕಮಿನ ೧/೪ ರಕಮು ಲಿಲಾವಿನ ತಾರೀಖು ಅಗಾವ ಜಮಾ ಮಾಡಬೇಕು. ಹೊರತಾಗಿ ಮಂಜೂರಾದ ರಕಮಿಗೆ ತಾಲೂಕ ಅಮಲದಾರ ಕಡಿಂದಾ ಲಾಯಖಿ ಸರ್ಟಿಫಿಕೇಟ ಪಡಕೊಂಡಂಥ ಯೋಗ್ಯ ಜನರನ್ನು ಜಾಮೀನ ಕೊಟ್ಟು ಶರ್ತುಗಳಿಗೆ ಅನುಸರಿಸಿ ಯೋಗ್ಯ ಸ್ಟ್ಯಾಂಪಿನ ಮೇಲೆ ಕಬೂಲಾಯತಿ ಬರಕೊಡಬೇಕು. ಶರ್ತಿನ ಯಾದಿ ಲಿಲಾವಿನ ಕಾಲಕ್ಕೆ ಓದಿ ಹೇಳುವದರಲ್ಲಿ ಬರುವದು. ತಿಳಿಯಬೇಕು. ತಾರೀಖು ೫—೯—೨೭ ಇಸ್ವಿ

R. G. NARGUND
Secretary.

G M KALADIGI,
President,
S. Y Municipality

ಅದೇ ನೀವೆಯನ್ನೇ ಮಾಡಬೇಕೆಂದು ನಿರ್ಧರಿಸಿದವರು ಇವರು ಹಾಸ್ಯರಸಮೂರ್ತಿಗಳೆಂಬದನ್ನು ಇವರ ಪ್ರಯೋಗಗಳನ್ನು ನೋಡಿದವರೆಲ್ಲ ಮನಗಾಣದೆ ಇರರು. ಇವರ ನಾಟಕ ಪದ್ಧತಿಯು ಕರ್ನಾಟಕಕ್ಕೆ ಹೊಸನವಾದುದು. ಇಂಥ ನಾಟಕಗಳನ್ನು ನೋಡುವ ಸುಸಂಧಿಯು ಧಾರವಾಡಸ್ಥರಿಗೆ ಸುದೈವದಿಂದಲೇ ದೊರಕದೆಯೆಂದು ಧಾರಾಳವಾಗಿ ಹೇಳಬಹುದು. ಇವರ ನಾಟಕಗಳು ಶ್ರೀ. ಗೋವಿಂದ ಗಿರಿಯವರ ಥಿಯೇಟರದಲ್ಲಿ ಇವತ್ತಿನಿಂದ ಪ್ರಾರಂಭವಾಗುವವು. ಇವರಿಗೆ ಧಾರವಾಡದವರು ಉದಾರಾಶ್ರಯವನ್ನು ಕೊಡುವರೆಂದು ನಂಬಿಗೆಯದೆ.

ನೋಟೀಸು

ಹನಮಪ್ಪ ಗಂಡ ಭೀಮವ್ವಾ ಸೆಲ್ಲೂರ ಸಾ. ಹೊಸವಾಳ ತಾಲೂಕ ರೋಣ ಇರೊದು ಮಾಸೂರು ಕುರಬನೂರ ತಾಲೂಕ ಕುಷ್ಟಗಿ ಪೈಕಿ ಹನಮನಗೌಡ ಇಲಾಖಾ ನಿಜಾಮ ಈತಗೆ-

ಕಳಗೆ ಸಹಿ ಮಾಡಿದವಳಿಂದ ತಿಳಿಸುವದೇನಂದರೆ ನೀನು ನನ್ನ ಲಗ್ನದ ಹೆಂಡತಿ ಇದ್ದು ನನ್ನ ಸಮ್ಮತಿ ಇಲ್ಲದೆ ಅಗ ಕೂಡಿ ನಡಿಯುದಕ್ಕೆ ಹೇಳದೇ ಕೇಳದೇ ನನ್ನಮೇಲೆ ಇಟ್ಟ ನನ್ನ ದಾಗಿನೆ ಅಂದರೆ ಬೆಳ್ಳಿ ಬಂದಿ (೩) ಬೆಳ್ಳಿ ಪಟ್ಟಿ (೧) ಬಂಗಾರ ಎಳೆ (೧) ಬಂಗಾರ ಬೆಂಡವಾಲೆ ಜೋಡು (೧) ವ ರೋಖು (೨೦೦) ರೂಪಾಯಿ ಇಷ್ಟು ಮಾಲು ತಗೊಂಡು ರಾತ್ರೋ ರಾತ್ರಿ ನನ್ನ ಮನೆಗಳು ಬಿಟ್ಟು ಅಂಬೆ ಗುಡಿಗೆ ಸಹಿತ ಓಡಿ ಹೋಗಿ ತವರ ಮನೆಯಲ್ಲಿರತಿದಿ ಈ ಬಗ್ಗೆ ತಿಂಗಳ ಯಿತರ ಮಾರ್ಫತ್ತ ನನ್ನ ಈ ಮಾಲು ಕೊಟ್ಟು ಸೋಡಚೀಟಿ ಬರಕೊಡತೇನೆಂದು ನಿನ್ನ ತಂದಿ ಮಾರ್ಫತ ಹೇಳಿದಾಗ ಈ ವರಿಗೂ ನಾವದಾನ ತಂದು ಕೊಡಲಿಲ್ಲ ಮತ್ತೆ ಸೋಡಚೀಟಿಸಹ ಬರಕೊಡಲಿಲ್ಲ ಕಾರಣ ನೋಟೀಸು ಕೊಡುವ ಭಾಗವಿತ್ತು ಈ ನೋಟೀಸು ಮುಟ್ಟಿದ ೧೫ ದಿವಸದಲ್ಲಿ ಬಂದು ಸಾಮಾನ ಕೊಟ್ಟು ಸೋಡಚೀಟಿ ಕೊಟ್ಟು ಹೋಗಬೇಕು ಇಲ್ಲದಿದ್ದರೆ ಸಾಮಾನ ಬಗ್ಗೆ ಇಲಾಜ ಮಾಡಲಾಗುದು ಇದೇ ಸೋಡಚೀಟಿ ಅಂತ ತಿಳಕೊಳ್ಳದ್ದು ನೀನು ನಿನ್ನ ಮರ್ಜಿ ಪ್ರಕಾರ ಇರಬೇಕು ಹಾಗು ನನ್ನ ಮರ್ಜಿ ಪ್ರಕಾರ ಇರತೇನೆ ಈ ನೋಟೀಸಿನ ಖರ್ಚು ವಗೈರೆ ನಿನ್ನ ಮೇಲೆ ಅದೆ ತಿಳಿಯಬೇಕು ತಾ. ೬-೯-೨೭ ಇಸ್ವಿ

ಸಹಿ ಭೀಮವ್ವಾ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. 1443

ವಿಜಯ

ನಿತ್ಯ ಪತ್ರ | ಬಿಲ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಶುಕ್ರವಾರ ತಾರೀಖು ೯ ನೇ ಸಪ್ಟಂಬರ ೧೯೨೭ | ಸಂಚಿಕೆ ೧೯೪

ಕಿರ್ಲೋಸ್ಕರ ಶೇಂಗಾ [ಭೈಮೂಗು] ಒಡೆಯುವ ಯಂತ್ರಗಳು



ಈ ಯಂತ್ರಗಳು ಎರಡು ಮಾದರಿಯವು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತವೆ. ಇವು ಕಬ್ಬಿಣದವು. ಚಾಕಟ್ಟು ಉಕ್ಕಿನವು. ಹೊಟ್ಟನ್ನು ಝಾಡಿಸಲು ಯಂತ್ರದಲ್ಲಿ ಜರ್ಣಿಕೆಯನ್ನು ಕೂಡ್ರಿಸಿರುವದರಿಂದ ಕಾಳುಗಳು ಹಸನಾಗಿ ಬೇರೆ ಬೀಳುತ್ತವೆ. ಈ ಯಂತ್ರಗಳು ಕಳೆದ ಹಂಗಾಮದಲ್ಲಿ ಬಹು ಪ್ರಚಾರಗಿರುತ್ತವೆ. ಇಂಜಿನದಿಂದ ತಿರುಗುವದೊಂದು ಹಾಗು ಕೈಯಿಂದ ತಿರುಗುವದೊಂದು ಹೀಗೆ ಎರಡು ಯಂತ್ರಗಳು ತಯಾರಾಗುತ್ತವೆ. ಕಾಳು ಬಿತ್ತು ಯಣ್ಣೆ ಮಾಡತಕ್ಕವರಿಗೂ, ವ್ಯಾಪಾರಸ್ಥರಿಗೂ ಈ ಯಂತ್ರಗಳು ಅತ್ಯುಪಯುಕ್ತವಾಗಿರುತ್ತವೆ.

ಹೆಚ್ಚಿನ ಸಂಗತಿ ಬಗ್ಗೆ ಬರೆದು ತಿಳಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ನೋಟೀಸಿನ ದರಗಳು.

— ೦ —

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಹಿರೆ ಬ್ಯಾಂಕ ಮೊದಲಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂ ಗಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರ ಆಣೆ ಡಬಲ್ ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

— ೦ —

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೬—೮—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಧಾರವಾಡದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರುದಾರರು ಅದು ಲಕ್ಷದ ಮೇಲು [illegible]. [illegible] ಮಾಡದಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ [illegible]. [illegible] ಮತ್ತು ಬೇರೆ ತರದ [illegible] ದೊರೆಯುವದು.

[illegible] ಮಾಡಿದವ [illegible].

[illegible]

[illegible] ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ

— ೦ —

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತ ಕರಾರಿನಿಂದ ಹಣವನ್ನು ಠೇವಾಣಿ ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ [illegible] ಆಣೆಯಂತಿರುತ್ತದೆ.

ಎ. ಶ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ವಿಜಯ ಪುಸ್ತಕಾಲಯ.

— ೦ —

೨ನೇ ಶತಮಾನದ [illegible]	೧೦ ಆಣೆ.
ವಿಚಿತ್ರ ಸಂಶಯ	೫ "
ದೇಶಬಂಧು ದಾಸರ ಚರಿತ್ರೆ	೨ "
ದೇಶಭಕ್ತರ ಸಂದೇಶ	೧ "

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ಟಪಾಲ ಹಾಶಿಲ ಬೇರೆ. [illegible]

ಮ್ಯಾನೇಜರ ವಿಜಯ ಪುಸ್ತಕಾಲಯ ಧಾರವಾಡ.

ವಿಜಯ.

ಧಾರವಾಡ ತಾ-೯-೯-೩೭ ನೇ ಇಸ್ವಿ

ಶಿಕ್ಷಕರ ಸಂಬಳವು ಹೆಚ್ಚಾಗಿದೆಯೋ?

(ಲೇಖಕ:- ಓರ್ವ ಶಿಕ್ಷಕ)

ಬಲ್ಲಿದರೆನಿಸುವವರು ಕೂಡ ಒಮ್ಮೊಮ್ಮೆ ತಪ್ಪು ವಿಧಾನಗಳನ್ನು ಮಾಡುವರು. ಆಗ ಆ ವಿಧಾನಗಳನ್ನು ಖಂಡಿಸಲಿಕ್ಕೆ ನಿರ್ವಾಹವಿಲ್ಲದೆ ಟೀಕ್ಕಣೆಕೆಯನ್ನೆತ್ತುವ ಪ್ರಸಂಗವು ಬರುತ್ತದೆ; ಆ ನೇಲೆ ಟೀಕಿಸುವವರು ಯಾರೇ ಇರಲಿ. ವಾಸ್ತವಿಕವಾಗಿ ಟ್ರೇನಿಂಗ ಕಾಲೇಜದಲ್ಲಿ ಕೆಲಸ ಮಾಡಿದ ಹಾಗು ಮಾಡುವ ಪ್ರತಿಯೊಬ್ಬ ಶಿಕ್ಷಕನು, ಆ ಸಂಸ್ಥೆಯು ನಮ್ಮ ವಿದ್ಯಾನಿಲಯವಾದ್ದರಿಂದ ನಮಗೆ ಪೂಜ್ಯನೆನಿಸುವನು; ಆ ವೇಳೆ ಆತನು ಪ್ರತ್ಯಕ್ಷ ನಮ್ಮ ಶಿಕ್ಷಕನಿರಲಿ, ಇಲ್ಲದಿರಲಿ; ಆದ್ದರಿಂದ ನಮಗೆ ಅಂಥವರು ಅನುಚಿತ ವಿಚಾರಗಳನ್ನು ಮುಂದಿಟ್ಟರೆ, ಅವರ ಪ್ರತಿಪಾದನದ ಜೊಳ್ಳುತನವನ್ನು ತೋರಿಸಲಿಕ್ಕೆ ಮುಂದರಿಯುವದರಲ್ಲಿ ನಮಗೆ ಅತ್ಯಂತ ವಿಷಾದವೆನಿಸಿದರೂ ಇಡೀ ಸಮಾಜದ ಹಿತಕ್ಕಾಗಿ ಇಂಥ ಕಟು ಕರ್ತವ್ಯವನ್ನು ಒಮ್ಮೊಮ್ಮೆ ಮಾಡಲೇ ಬೇಕಾಗುವದು.

ಧಾರವಾಡದ ಟ್ರೇನಿಂಗ ಕಾಲೇಜವನ್ನು ಬಂದು ಮಾಡದೆ ಮುಂದೆ ಹಾಗೇ ನಡೆಯಿಸುವದು ಅಗತ್ಯವೆಂಬ ಬಗ್ಗೆ ದಿ. ಬ. ರೊದ್ದರಾಯರು ಸಿ. ಆಯ್. ಇ. ಇವರು ನೇಕನಾಮದಾರ ಗವ್ಹರ್ನರ ಸಾಹೇಬರಿಗೆ ಕಳುಹಿದ ವಿನಂತಿ ಪತ್ರದ ಕನ್ನಡ ಅನುವಾದವು ಶಾಲಾಪತ್ರಕದ ಜೂನ- ಜುಲೈಯ ಸಂಯುಕ್ತ ಸಂಚಿಕೆಯಲ್ಲಿ ಪ್ರಕಟವಾಗಿದೆ. ಅದರೊಳಗಿನ ಆರನೆಯ ವಾಕ್ಯವೃಂದವು (ಪ್ಯಾರಿಗ್ರಾಫವು) ಶಿಕ್ಷಕ ಸಮಾಜಕ್ಕೆ ಅವಮಾನಗೊಳಿಸ ತಕ್ಕುದೂ, ಅಪ್ರಮಾಣವಾದದ್ದೂ, ಶಿಕ್ಷಕರ ಹಿತಕ್ಕೆ ವಿರೋಧವನ್ನುಂಟು ಮಾಡುವದೂ ಆಗಿರುವದು. ಅಂಥವರ ಲೇಖಣಿಯಿಂದ ಅದು ಹೊರಬಿದ್ದಿದ್ದರೆ, ಸ್ವಾಭಾವಿಕವಾಗಿ ಅದರ ವಿಚಾರವನ್ನೇ ಮಾಡುತ್ತಿದ್ದಿಲ್ಲ. ಆದರೆ ಒಂದು ಕಾಲದಲ್ಲಿ ಧಾರವಾಡ [illegible] ಶಿಕ್ಷಣಾಲಯದ ಮುಖ್ಯೋಪಾಧ್ಯಾಯರು (ಪ್ರಿನ್ಸಿಪಾಲ)ರಾಗಿದ್ದವರೂ, ಶಿಕ್ಷಣಶಾಸ್ತ್ರ ಧುರೀಣರೆನಿಸುವವರೂ, [illegible] ಸ್ಥಿತಿಯನ್ನರಿತವರೂ, ಅನುಭವಿಕರೂ, ಸಮಾಜದ ಸರಕಾರ ಮಾನ್ಯವಾದ ಮುಂದಾಳುಗಳೂ ಆದ ದಿ. ಬ. ರೊದ್ದರಾಯರಂಥವರಿಂದ ಅದು ಹೊರಬಿದ್ದದರಿಂದ ಅದರಲ್ಲಿ ಕಂಡು ಬರುವ ಸದೋಷ ವಿಚಾರ ಸರಣಿಯ ನಿರಾಕರಣವನ್ನು ಮಾಡುವದು ಅಗತ್ಯವಾಗಿದೆ.

"ಪ್ರಾಥಮಿಕ ಶಿಕ್ಷಕರಿಗೆ ಈಗ ಅವರ ಯೋಗ್ಯತೆ ಮೀರಿ ಪಗಾರು ಕೊಡಲ್ಪಡುವದೆಂದು ಹೇಳಬೇಕಾಗುವದು. ತೀರ ಕಡಿಮೆ ಪಗಾರವನ್ನು ೨೫ರೂ. ಇಟ್ಟದ್ದು ಬಹಳ ಹೆಚ್ಚಾಗಿದೆ .... ಸ್ಥಾನಿಕ ಸಂಸ್ಥೆಗಳು ೧೫ರೂ. ಗಳ ಮೇಲೆ ಅಂಡ್ರೇಂಡ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಬಹುದು" ಎಂದು ಅವರು ಉಲ್ಲೇಖಿಸಿರುವರು. ಶಿಕ್ಷಕರ ಯೋಗ್ಯತೆಯ ಆರಂಭದ ಮಟ್ಟನ್ನು ಗೊತ್ತುಪಡಿಸುವ ಒರೆಗಲ್ಲು ಯಾವದು? ಮುಲಕೀ ಪರೀಕ್ಷೆಯೇ ಅಲ್ಲವೇ? ಆ ಪರೀಕ್ಷೆಯನ್ನು ಇಳಿದವರಿಗೆ ಬೇರೆ ಖಾತೆಗಳಲ್ಲಿ ಎಷ್ಟು ಸಂಬಳವು ದೊರೆಯುವದು? ಮುಲಕೀ ಖಾತೆಯಲ್ಲಿ ಅವರ ಸಂಬಳದ ತರಗತಿಯು (ಸ್ಕೇಲವು) ೩೫ ರಿಂದ ೧೨೦ರೂ. ತನಕ ಇರುತ್ತದೆ. ನಮ್ಮೊಡನೆ ಮುಲಕೀ ಪರೀಕ್ಷೆಯಾಗಿ ಸರ್ವೇಖಾತೆಯಲ್ಲಿ ಸೇರಿದವರೊಬ್ಬರಿಗೆ ಈಗ ೧೫೫ರೂ. ಗಳು ಸಿಗುವವು ಆದರೆ, ಅಷ್ಟೇ ಸರ್ವಿಸಿನ ೩ನೇ ವರ್ಷದ ಟ್ರೇಂಡರಾದ ನಮಗೆ ೪೦ರೂ. ಗಳೇ, ರೇವ್ಹಿನ್ಯೂ! ಸರ್ವೆ, ವ್ಯಾಕ್ಸಿನೇಶನ್ ಮೊದಲಾದ ಬೇರೆ ಖಾತೆಗಳಲ್ಲಿ ಸೇರಿದವರ ಮುಲಕೀ ಪರೀಕ್ಷೆಯೂ, ಆ ಪರೀಕ್ಷೆಯನ್ನಿಳಿದವರ ಯೋಗ್ಯತೆಯೂ ಬೇರೆ, ಶಾಲಾಖಾತೆಯಲ್ಲಿ ಸೇರಿದವರದು ಬೇರೆ ಇರುವದೋ ಏನೋ! ಇನ್ನು ಉಳಿದ ಖಾತೆಯವರಿಗೆ "ಭತ್ತೆ" ಮೊದಲಾದ ಇತರ ಪ್ರಾಪ್ತಿಯಿದ್ದಂತೆ ಶಿಕ್ಷಕರಿಗಿಲ್ಲದ್ದರಿಂದ, ಕಡಿಮೆ ಸಂಬಳದವರಿಗೆ ಅದು ಮತ್ತಿಷ್ಟು ಕಡಿಮೆಯಾಗುವದು ಒಂದು ತರದ ಪಾರಿತೋಷಕವೆಂದು ಬಗೆದರೆ ತಿಳಿಯಿತು!!

ಪೋಸ್ಟಮನ್, ಪೋಲೀಸ ಶಿಪಾಯಿ ಇವರಿಗೆ ೧೫ರೂ. ಗಳಿಗಿಂತ ಹೆಚ್ಚು (ಆರಂಭಕ್ಕೆ ೩೦ರೂ.) ಸಂಬಳವು ದೊರೆತು, ಅನಂತರ ಕ್ರಮದಿಂದ ಹೆಚ್ಚುತ್ತ ಹೋಗುವದೆಂಬದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ. ಅವರಿಗೆ ಮುಲಕೀ ಪರೀಕ್ಷೆಯ ನಿರ್ಬಂಧವೂ ಇಲ್ಲ. ಪೋಸ್ಟಮನ್ನರಿಗೆ ಓದುಬರಹ ಬಂದರೆ ಸಾಕು. ಪೋಲೀಸರಿಗೆ ಅದರ ಅವಶ್ಯಕತೆಯೂ ಇಲ್ಲ. ಪರೀಕ್ಷೆಯ ಅವಶ್ಯಕತೆಯು ಇಲ್ಲದವರಿಗಿಂತ ಅದರ ಅವಶ್ಯಕತೆಯುಳ್ಳವರ ಯೋಗ್ಯತೆಯೇ ಕಡಿಮೆಯೋ?

"ಪರೀಕ್ಷೆಯು ಮಹತ್ವದ್ದಲ್ಲ; ಅವರವರು ಮಾಡುವ ಕೆಲಸದ ಯೋಗ್ಯತೆಯನ್ನನುಸರಿಸಿ ಸಂಬಳ ಕೊಡಬೇಕಾಗುವದೆಂ"ದರು ಕೂಡ ಪತ್ರಗಳನ್ನು ಹಂಚುವ ಪೋಸ್ಟಮನ್ನನು ಖಂಡಿತವಾಗಿ ಕಾರಕೂನನು ಇಲ್ಲವೆ ಹಡೇಲ ಹಪ್ಪಿಯ ಪೋಲೀಸನು, ಇವರಿಗಿಂತ ತನ್ನ ಒಡಲೊಳಗಿನ ವಿದ್ಯೆಯನ್ನು ಇನ್ನೊಬ್ಬರಲ್ಲಿ ಸೇರಿಸುವ ಶಿಕ್ಷಕನ ಕೆಲಸ ಕಡಿಮೆ ಯೋಗ್ಯತೆಯದೂ ಸಾಮಾನ್ಯವಾದದ್ದೂ ಆಗಿರುವದೇ? ಶಿಕ್ಷಕರ ಯೋಗ್ಯತೆಯು ಎಲ್ಲಕ್ಕೂ ಹೆಚ್ಚಿನದೆಂದು ಹೊಗಳುವ ಈ ದೇಶದ ಪಂಡಿತರೂ ಪರದೇಶದ ಪಂಡಿತರೂ ಮೂರ್ಖರೇ? ಕೇವಲ ಮೊಟ್ಟಗಾರನಾಗಿರುವ ಕನ್ನರನೂ ಕೂಡ ಶಿಕ್ಷಕನಿಗಿಂತ ಹೆಚ್ಚಿನ ಯೋಗ್ಯತೆಯುಳ್ಳವನೇ ಸರಿ, ಯಾಕಂದರೆ ಅವನಿಗೂ ೨೨ರೂ. ಗಳ ತನಕ ಪಗಾರು ಸಿಗುತ್ತಿರುತ್ತದೆ.

ಈಗ ಶಿಕ್ಷಕರಿಗೆ ದೊರೆಯುತ್ತಿರುವ ಸಂಬಳವು ಅವರ ಬೇಡಿಕೆಯಷ್ಟಲ್ಲ. ಶಿಕ್ಷಕರ ಆಂದೋಲನವು ಇಂದಿಗೆ ಹತ್ತು ವರ್ಷಗಳಿಂದ ನಡೆದಿದೆ. ಇಲಾಖೆಯ, ತಂಬ ಅವರ ತಾಲೂಕ, ಜಿಲ್ಲಾ, ಪ್ರಾಂತ ಹಾಗು ಇಲಾಖಾ ಸಂಘಗಳು ಸ್ಥಾಪಿತವಾಗಿವೆ. ಶಿಕ್ಷಕರ ಪರಿಯಿಂದ ಅವರ ಸಂಬಳದ ತರಗತಿಯು (ಸ್ಕೇಲವು) ಸೊಲ್ಲಾಪುರದ ಇಲಾಖಾ ಪರಿಷತ್ತಿನಲ್ಲಿ ನಿರ್ಣಯವಾಗಿದ್ದು, ಇಂದಿನ ವರೆಗೆ ಒಳ್ಳೆದರ ಅಧ್ಯಕ್ಷತೆಯ ಕೆಳಗೆ ಆದ ಆ ಸಂಘಗಳ ಪ್ರತಿಯೊಂದು ಅಧಿವೇಶನದಲ್ಲಿ ಈ ಬೇಡಿಕೆಯು ಮಾನ್ಯತೆಯನ್ನೈದಿದೆ. ಪ್ರತಿಯೊಂದು ಸಂಘದ ಇಂಥ ಅಧಿವೇಶನಗಳು ಹತ್ತೆಂಟಾದರೂ ಆಗಿರುವವು. ವೃತ್ತ ಪತ್ರಗಳಲ್ಲಿಯೂ ಇಲಾಖೆಯ ನಿಯಮ ನಿರ್ಮಾಣ ಸಭೆಯಲ್ಲಿಯೂ ಆ ಸ್ಕೀಮವು ಉದ್ಘೋಷಿತವಾಗಿ ಸಂಘದ ಅಧಿವೇಶನಗಳಿಗೆ ಬಂದ ಇಲಾಖೆಯೊಳಗಿನ ಮುಖಂಡರುಗಳೂ ಅದಕ್ಕೆ ಸಮ್ಮತಿಯನ್ನಿತ್ತಿರುವರು. ಹೀಗೆ ಇಲಾಖೆಯೊಳಗಿನ ನಾವಿರಕ್ಕಿಂತ ಹೆಚ್ಚು ಜನ ಸಭಾಧ್ಯಕ್ಷತೆ ಪಡೆದ ಹಾಗು ಬೇರೆ ಮುಂದಾಳುಗಳೂ ತಜ್ಞರೂ ಆದವರು ಅದನ್ನು ಒಪ್ಪಿ ಅದು ಸರ್ವಮಾನ್ಯವಾದರೂ ಸರಕಾರಕ್ಕೆ ಅದನ್ನು ಪೂರ್ಣ ಮಾಡುವದು ಹಣದ ಅನಾನುಕೂಲತೆಯ ಮೂಲಕ? ಅಶಕ್ಯವೆನಿಸಿದ್ದರಿಂದ ಆ ವರಿಂದ ಇದರ ವಿಚಾರಣೆಗೆ ನಿಯಮಿಸಲ್ಪಟ್ಟ ನಾಶೀ- ಪರಾಂಜಪೆ ಕಮೀಟಿಯು ತೀರ ಕಡಿಮೆಯೆಂದರೆ ಇಂತಿಷ್ಟು ಕೊಡಬೇಕೆಂದು ಶಿಫಾರಸು ಮಾಡಿದ ಸ್ಕೀಮದಂತೆ ಆರಂಭದ ಸಂಬಳವು ಮಾತ್ರ ಈಗ ದೊರೆಯುತ್ತಲಿದೆ. ಈ ಸ್ಕೀಮವನ್ನು ತಜ್ಞರೇ ಗೊತ್ತು ಪಡಿಸಿದ್ದು ಅದಕ್ಕೆ ಸರಕಾರವೂ ಲೋಕ ಪ್ರತಿನಿಧಿಗಳೂ (ಕೌನ್ಸಿಲರರೂ) ಒಪ್ಪಿಗೆಯನ್ನಿತ್ತಿರುವರು. ಅಂದ ಬಳಿಕ ಈ ನಾಶೀ- ಪರಾಂಜಪೇ ಸ್ಕೀಮಿಗೆ ಮಾನ್ಯತೆ ಕೊಟ್ಟ ಸರಕಾರವೂ, ನಿಯಮ ನಿರ್ಮಾಣ ಸಭೆಯ ಸದಸ್ಯರೂ ಬೇರೆ ಮುಂದಾಳುಗಳೂ ತಿಳಗೇಡಿಗಳೇ! ಅವರಿಗೆ ಜನಹಿತದ ಹಾಗು ಶಿಕ್ಷಣ ಪ್ರಸಾರದ ಹಂಬಲವಿಲ್ಲವೇ?

ಹಿಂದುಸ್ಥಾನದ ಸದ್ಯಃಪರಿಸ್ಥಿತಿಯನ್ನ ಭ್ಯಾಸಿಸಿ

ದ ಪಂಡಿತರು ಈಗ ಇಲ್ಲಿ ವಾಸಿಸುವ ಪ್ರತಿಯೊಬ್ಬ ಬುದ್ಧಿಜೀವಿ ಮನುಷ್ಯನಿಗೆ ಅವನ ಯೋಗ್ಯತೆಯಂತೆ ತೀರ ಕಡಿಮೆಯೆಂದರೆ ೫೦೦ ರೂ. ತೀರ ಹೆಚ್ಚೆಂದರೆ ಸಾವಿರ ರೂಪಾಯಿ ವೇತನವು ಪ್ರತಿ ತಿಂಗಳಿಗೆ ದೊರೆಯಬೇಕೆಂದು ಅಭಿಪ್ರಾಯಪಟ್ಟಿರುವರು. ಅದಕ್ಕೂ ಕಡಿಮೆ ಸಂಬಳವೆಂದರೆ ಯೋಗ್ಯತೆಯು ಪೇಟೆಯ ದಾಣಿಯಾಯಿತೆಂದೂ ಹೆಚ್ಚು ಸಂಬಳ ಕೊಡುವದೆಂದರೆ ದೇಶದ ಸುಲಿಗೆಯೆಂದೂ ಅವರ ನಿರ್ದಾಕ್ಷಿಣ್ಯದ ಮತವು. ಹೀಗೆನ್ನುವವರೇನು ಅವಿವೇಕಿಗಳೇ?

ಉದರ ನಿಮಿತ್ತವೇ ದುಡಿಯುವದಲ್ಲವೇ? ಶಿಕ್ಷಕನು ಸನ್ಯಾಸಿಯಲ್ಲ; ನೈಷ್ಠಿಕ ಬ್ರಹ್ಮಚಾರಿಯೂ ಅಲ್ಲ; ಗೃಹಸ್ಥನು. ಅಂದಬಳಿಕ ಅವನು ಒಬ್ಬಂಟಿಗನಿರುವದು ಶಕ್ಯವಿಲ್ಲ. ಗಾರ್ಹಸ್ಥ್ಯ ಧರ್ಮದಂತೆ ತನ್ನ ಹಾಗು ತನ್ನ ಕುಟುಂಬದ ಊಟ ಉಡಿಗೆ, (ಗಂಡಹೆಂಡಿರಿಬ್ಬರಲ್ಲ. ಕ್ವಚಿತ್ ಒಬ್ಬನೇ ಇದ್ದರೂ) ಅತಿಥಿ ಅಭ್ಯಾಗತರ ಮನ್ನಣೆ, ಅರಿವೆ ಅಂಚಡಿ ಇವೆಲ್ಲವುಗಳ ವೆಚ್ಚವು ಅವನ ಸಂಬಳದಲ್ಲಿ ಸಾಗಬೇಕಲ್ಲವೇ? ಒಂದು ಮಧ್ಯಮತರಗತಿಯ ಕುಟುಂಬಕ್ಕೆ (ಇವುಗಳ ಬಗ್ಗೆ ಪ್ರತಿ ತಿಂಗಳು) ಗಂಡಹೆಂಡಿರಿಬ್ಬರೇ ಇದ್ದರೂ) ಮೂವತ್ತು ರೂಪಾಯಿಗಳಿಗಿಂತ ಕಡಿಮೆ ಹಣವು ಸಾಲದೆಂಬದು ಸ್ವಾನುಭವದ ಮಾತು. ಇನ್ನು ಶಿಕ್ಷಕನು ನೈಷ್ಠಿಕಬ್ರಹ್ಮಚಾರಿಯಾಗಲಿ, (ವಾನಪ್ರಸ್ಥಾಶ್ರಮಿಯಿದ್ದರೆ ಅವನೂ ಅತಿಥಿಸತ್ಕಾರವನ್ನು ಮಾಡಬೇಕಾಗುವದಲ್ಲದೆ ಸಕುಟುಂಬಿಯಿರುವದರಿಂದ ಅನರ್ಹನು) ಸನ್ಯಾಸಿಯಾಗಲಿ ಇರಬೇಕೆಂದು ಕಟ್ಟಳೆಯನ್ನು ಮಾಡಿದರೆ ಮಾತ್ರ ೧೫ ರೂ ಗಳಲ್ಲಿ ಆತನ ಜೀವನಾರ್ಥವು ಸಾಗಬಹುದು; ಅಥವಾ ಈ ತಲಬಿನ ಆವಶ್ಯಕತೆಯಾದರೂ ಇಂಥ ಏಕಾಕಿಯಾದವನಿಗೇನು? ಬ್ರಹ್ಮದೇಶದೊಳಗಿರುವ ಪುಂಗಿಗಳಂತೆ ಸಮಾಜವು ಅನ್ನವಸ್ತ್ರ ತೀರ ಅವಶ್ಯಕವಾದ ಅರಿವೆಗಳನ್ನೂ ಒದಗಿಸಿಕೊಟ್ಟರಾಯಿತು ಹೇಗೂ ಶಿಕ್ಷಣದ ಖರ್ಚು ಜನತೆಯಮೇಲೆಯೇ ಬೀಳತಕ್ಕದ್ದು. ಈಗ ಅಪ್ರತ್ಯಕ್ಷವಾಗಿದ್ದಾರೆ ಆಗ ಪ್ರತ್ಯಕ್ಷವಾಗುವದಿಷ್ಟೇ. ಮೇಲಾಗಿ ದಾನವೃತ್ತಿಯು ನಮ್ಮ ಜನರಲ್ಲಿ ಸಹಜವಾಗಿರುವದರಿಂದ ಹೆಚ್ಚಾಗಿ ಒಂದಾಣೆ ಲೋಟ ಲಘುದ ಕೊಟ್ಟಷ್ಟು ಅದು ಜಡವೂ ಅನಿಸಲಿಕ್ಕಿಲ್ಲ. ಆದರೆ ಶಿಕ್ಷಕರು ಸನ್ಯಾಸಿಗಳಾಗಲೇಬೇಕೆಂಬ ಕಟ್ಟು ಆಗುವ ವರೆಗೆ ಈಗಿದ್ದ ಶಿಕ್ಷಕರಿಗೆ ಮಾತ್ರ ಹದಿನೈದು ರೂಪಾಯಿಗಳು ಜೀವನಾರ್ಥಕ್ಕೆ ಸಾಲವು. ಸೆರೆಯಾಳಿನ ಪ್ರತಿ ತಿಂಗಳ ವೆಚ್ಚವು ಸರಾಸರಿ ೧೭ ರೂ. ಗಳಿಗಿಂತ ಹೆಚ್ಚು ಇದ್ದದ್ದು ಸರಕಾರೀ ವರದಿಯಿಂದ ತಿಳಿಯುತ್ತಿರಲು, ಶಿಕ್ಷಕರಿಗೆ ೧೫ ರೂಪಾಯಿ ಸಾಕೆನ್ನುವದು ಸೋಜಿಗವೇ ಸರಿ.

ಕೆಲಸದ ಮೇಲೆ ಇದ್ದರೆ ಯೋಗ್ಯತೆಯ ವಿಚಾರವನ್ನು ಮಾಡಬೇಕಾಗುವದಷ್ಟೇ? ಕಾರ್ಯನಿವೃತ್ತರಾದವರಿಗೆ (ಪೆನ್ಶನದಾರರಿಗೆ) ಇದರ ಸಂಬಂಧವೇನೂ ಇರುವದಿಲ್ಲ. ಕುಟುಂಬ ಪೋಷಣದ ಭಾರವೂ ಅವರ ಮೇಲಿರುವ ಕಾರಣವಿಲ್ಲ. ಕೇವಲ ಒಂದು ಹೊಟ್ಟೆಯ ಜೀವನಾರ್ಥ ಸಾಗುವಷ್ಟು ಪ್ರಾಪ್ತಿಯಿಂದ ಅವರು ತೃಪ್ತರಾಗಿ ಶೇಷಾಯುಷ್ಯವನ್ನು ಪರಮಾತ್ಮನ ಚಿಂತನದಲ್ಲಿಯೇ ಆಗಲಿ, ರಾಷ್ಟ್ರಕಾರ್ಯದಲ್ಲಿಯೇ ಆಗಲಿ ತಮ್ಮ ತಮ್ಮ ಒಲವಿನಂತೆ ಕಳೆದು ದೇಹಸಾರ್ಥಕ್ಯವನ್ನು ಮಾಡಿಕೊಳ್ಳಲು ಅವರಿಗೆ ಪ್ರತ್ಯವಾಯವಿಲ್ಲ. ಆದ್ದರಿಂದ ೧೫ ರೂಪಾಯಿಗಳಲ್ಲಿ ಶಿಕ್ಷಕರ ಉಪಜೀವನವು ಸಾಗುವದೆಂಬ ನಂಬಿಗೆಯಿದ್ದವರು ಗವ್ಹರ್ನರಸಾಹೇಬರಿಗೆ ಬರೆದಾಗಲಿ ಬೇರೆ ಬಗೆಯಿಂದಾಗಲಿ ೧೫ ರೂಪಾಯಿಗಳಿಗಿಂತ ಹೆಚ್ಚು ಪೆನಶೆನ್ ಪಡೆಯುವವರೆಲ್ಲರ ಹೆಚ್ಚಿನ ಹಣವು ಸರಕಾರಕ್ಕೆ ಸೇರುವಂತೆ ಮಾಡುವ ಚಳವಳಿಯನ್ನು ಕೈಕೊಳ್ಳುವದು ನಮಗಂತು ಹೆಚ್ಚು ಸಮಂಜಸವಾಗಿ ತೋರುತ್ತದೆ. ಮತ್ತು ಈ ಮೇಲುಪಂಕ್ತಿಯನ್ನು ದಿ. ಬ. ದೊಡ್ಡರಾಯರೇ ಮೊದಲು ಎಲ್ಲರಿಗೆ ಹಾಕಿಕೊಟ್ಟು ಸ್ವಾರ್ಥತ್ಯಾಗದ ಮಾದರಿಯನ್ನು ತೋರಿಸಬೇಕೆಂದು ನಮ್ಮ ನಮ್ರ ಪ್ರಾರ್ಥನೆಯಿದೆ. ಹೀಗೆ ಮಾಡಲು ಉಳಿತಾಯವಾಗುವ ಹಣದಿಂದ ಜನಹಿತದ ಅನೇಕ ಕಾರ್ಯಗಳು ಸಾಗಿ, ಬಡಶಿಕ್ಷಕರ ಯೋಗ್ಯತೆಯನ್ನು ನಿರ್ಧರಿಸುವ ಅಳವು ಮೀರಿದ ಕೆಲಸವನ್ನು ಕೈಕೊಳ್ಳುವ ಕಾರಣವೂ ಬೀಳಲಿಕ್ಕಿಲ್ಲ; ನಲಿಕೆಯಿಂದ ಸಂಬಳವನ್ನಳೆಯುವ ಹಿರಿಯಾಳುಗಳ ಮನವೂ ನೋಯಲಿಕ್ಕಿಲ್ಲ.

ಒಂದು ಮಧ್ಯಮ ಸ್ಥಿತಿಯ ಕುಟುಂಬಕ್ಕೆ ಬೇಕಾಗುವ ಖರ್ಚಿನ ಸಂಪೂರ್ಣ ಟಿಪ್ಪಣಿಯನ್ನು ಕೊಡುವ ಆವಶ್ಯಕತೆಯು ನಮಗೆ ಅಷ್ಟೊಂದು ತೋರುವದಿಲ್ಲ. ಕಾಲೇಜದಲ್ಲಿರುವ ವಿದ್ಯಾರ್ಥಿಗಳ ಬರೆ ಹೊಟ್ಟೆಯ ಖರ್ಚಿನ ಲೆಖ್ಖವು ಸಿಗುವದು. ಮಧ್ಯಮಸ್ಥಿತಿಯ ಕುಟುಂಬದಲ್ಲಿ ಹವ್ಯಕವ್ಯ, ಆತಿಥ್ಯಾಭ್ಯಾಗತ್ಯ, ಹಬ್ಬಹುಣ್ಣಿವೆ ಇತ್ಯಾದಿಗಳ ಮೂಲಕ ಅದಕ್ಕೂ ಹೆಚ್ಚು ಖರ್ಚು ಬರುವದಾದರೂ ಅದನ್ನುಳಿದು ಕಾಲೇಜದ ಲೆಖ್ಖನ್ನೇ ನೋಡಿದರೂ ಒಂದು ಕುಟುಂಬಕ್ಕೆ ಬರೇ ಹೊಟ್ಟೆಗೆ ಎಷ್ಟು ಖರ್ಚು ಹಿಡಿದೀತೆಂಬದರ ಕಲ್ಪನೆಯಾದೀತು. ಅದರಲ್ಲಿ ಅರಿವೆಅಂಚಡಿ, ಮನೆಬಾಡಿಗೆ, ದೀಪದೀವಿಗೆ ಎಣ್ಣೆಬೆಣ್ಣೆ. ಬೇನೆಬೇಸರಿಕೆ ಇವುಗಳ ವೆಚ್ಚವನ್ನು ಸಮಾವೇಶ ಮಾಡಿದರೆ ಇರಬೇಕಾದ ಸಂಬಳದ ಪರಿಮಿತಿಯು ಗೊತ್ತಾಗುವದು. ಮೂರು ಜನರಿದ್ದ ಒಂದು ಕುಟುಂಬಕ್ಕೆ ೪೦ ರೂ. ಇಬ್ಬರೇ ಇದ್ದ ಕುಟುಂಬಕ್ಕೆ ೩೦ ರೂ ಪ್ರತಿ ತಿಂಗಳ ಸರಾಸರಿ ಖರ್ಚು ತಪ್ಪದೇ ಬರುವದು. ನಮ್ಮ ಅನುಭವದ ಮಾತಾಗಿದೆ. ಇದರ ಸತ್ಯತ್ವವನ್ನು ತಮ್ಮ ಅರಿವಿಕೆಯಿಂದಲೇ ಪ್ರತಿಯೊಬ್ಬ ಮಧ್ಯಮಸ್ಥಿತಿಯ ನೌಕರದಾರನು ಮನಗಾಣಬಹುದು. ಪರಿಸ್ಥಿತಿಯ ಜ್ಞಾನವಿಲ್ಲದೆ ಅಂಕಿ ನೋಡಿ ಬಿದಿರುವ ಸಂಶಯಾತ್ಮನ ಸಂದೇಹನಿರಸನ ಮಾಡಲಿಕ್ಕೂ ನಾವು ಸಿದ್ಧರಿದ್ದೇವೆ.

ನಾಳಿನ ಸಂಚಿಕೆಯಲ್ಲಿ ಪೂರ್ಣವಾಗುವದು.

ನ್ಯಾಯ ಬೇಡುವಂಥವರ ಮೇಲೆ ಗುಂಡು ಹಾಕಿದರು.

—೦—

ಜಯಪೂರದಲ್ಲಿ ಪೋಲೀಸರು ಗುಂಡು ಹಾಕಿದ ಸಮಾಚಾರವನ್ನು ನಿನ್ನಿನ ಸಂಚಿಕೆಯಲ್ಲಿ ಬರೆದಿದ್ದೇವೆ. ಅನ್ಯಾಯವನ್ನು ದೂರ ಮಾಡಿ, ಪೋಲೀಸರ ಜುಲುಮೆಯನ್ನು ತಡೆಯಿರೆಂದು ಕೊತವಾಲಿಗೆ ಹೋದಂಥ ಜನರ ಮೇಲೆ ಯುರೋಪಿಯನ್ನ ಸುಪರಿಂಟೆಂಡೆಂಟರಾದ ಕಾವ್ಟ್ರೀಸಾಹೇಬರು ಗುಂಡು ಹಾಕಲಿಕ್ಕೆ ಹುಕುಮು ಮಾಡಿದರೆಂದು ಜಯಪೂರದಿಂದ ಬಂದ ಸುದ್ದಿಯಾಗಿದೆ.

ಹಿಂದೂ ಮುಸಲಮಾನ ದಂಗೆಗಳ ಭಯಂಕರ ಸ್ಥಿತಿಯು.

—೦—

ನಾಗಪೂರದಲ್ಲಾದ ದಂಗೆಯಲ್ಲಿ ಮುಸಲಮಾನರು ಬಹುವಾಗಿ ಹಾನಿಗೆ ಗುರಿಯಾದರು. ತಮಗೆ ದೆಸೆಯಿಲ್ಲೆಂಬ ಹೆದರಿಕೆಯಿಂದ ಅವರು ತಂಡ ತಂಡಾಗಿ ಪಟ್ಟಣಕ್ಕೆ ಶರಣು ಹೊಡೆಯುತ್ತಿದ್ದಾರೆ. ದಂಗೆಯಲ್ಲಿ ೧೧ ಜನ ಮುಸಲಮಾನರು ಏಳು ಹಿಂದೂ ಜನರು ಸತ್ತರು.

ಕಾನಪೂರದ ದಂಗೆಯಲ್ಲಿ ೨೫೭ ಜನರನ್ನು ಹಿಡಿದಿದ್ದಾರೆ. ದಂಗೆ ಮರಳಿ ಸಂಭವಿಸಬಾರದೆಂದು ಪೋಲೀಸರು ದೇವಾಲಯ ಮತ್ತು ಮಸೀದೆಗಳಲ್ಲಿ ಕಾವಲಾಗಿದ್ದಾರೆ.

ಮುಜಫ್ಫರಪೂರದಲ್ಲಾದ ದಂಗೆಯಲ್ಲಿ ಮುಸಲಮಾನರ ಸ್ಥಾವರ ಜಂಗಮ ಜಿಂದಗಿಯ ಹಾನಿಯು ಐದು ಲಕ್ಷವಾಗಿದೆ. ಹಿಂದೂ ಜನರ ಹಾನಿಯು ೩೧ ಸಾವಿರವಾಗಿದೆ.

ಲಖನೌ ಪಟ್ಟಣದಲ್ಲಿ ಹಿಂದೂ ಮುಸಲಮಾನರ ಕಲಹವು ಏಕೋಪಕ್ಷೆ ಹೋಗಿದೆ.

ಪ್ರೀತಿ ವಿವಾಹದ ಪೂರ್ವ ಕಥೆ-

ಬ್ರಾಹ್ಮಣನನ್ನು ಮದಿವೆಯಾದ ಫಾರ್ಸಿ ಸರಳೆಯು ತನ್ನ ಪ್ರೀತಿ ವಿವಾಹದ ಪೂರ್ವ ಕಥಾನುವಾದವನ್ನು ಮುಂದೆ ಕೊಟ್ಟಂತೆ ಮಾಡಿರುತ್ತಾಳೆ.

ನಗಿನನಲ್ಲಿ ನನ್ನ ಪ್ರೇಮ ಕಟಾಕ್ಷ ಕೂಡಿಂದಿನಿಂದ ಆತನು ನನ್ನ ಕೂಡ ಪ್ರಾಮಾಣಿಕತನದಿಂದಲೇ ನಡೆದನು. ನನ್ನ ಮದಿವೆಯಾಗಿದೆ. ಹೆಂಡತಿ ಇದ್ದಾಳೆ, ನನ್ನ ಹಾದಿಗೆ ಬರಬೇಡೆಂದು ಹೇಳಿದನು. ಆದರೂ ನಾನು ನಗಿನನ್ನು ಮದಿವೆಯಾಗಬೇಕೆಂದು ದೃಢನಿಶ್ಚಯ ಮಾಡಿದೆನು. ಮತ್ತು ಮೊದಲನೆಯ ಹೆಂಡತಿಯು ಕೂಡ ಪ್ರೀತಿಯಿಂದಿದ್ದು, ಆಕೆಯ ಸೇವೆ ಮಾಡಬೇಕೆಂದೂ ಇಚ್ಛಿಸಿದೆನು.

ನಗಿನನ ಕೂಡ ವಿವಾಹವಾಗುವದರಿಂದ, ಒದಗತಕ್ಕ ಎಲ್ಲ ತಾಪ ತೊಂದರೆ ಮತ್ತು ನಷ್ಟಕ್ಕೆ ನಾನು ಸಿದ್ಧಳಾದೆನು. ನಗಿನನು ನನ್ನನ್ನು ಅನ್ಯಾಯವಾಗಿ ನಡಸಿಕೊಂಡನೆಂದು ಜನರು ಅನ್ನುವದು ಅನ್ಯಾಯವಾದದ್ದು. ಮೊದಲಿನಿಂದಲೇ ಪವಿತ್ರವಾದ ವಿವಾಹದಿಂದಲೇ ಇಬ್ಬರೂ ಕೂಡಬೇಕೆಂದು ನಾವು ನಿಶ್ಚಯಿಸಿದ್ದೆವು. ಇಂದು ಆ ನಿಶ್ಚಯವನ್ನು ಪೂರ್ಣ ಮಾಡಿದ್ದೇನೆ.

ನಾವು ಮದಿವೆಯಾಗದೆ, ಪರಸ್ಪರ ಪ್ರೀತಿಯಿಂದ ನಡೆದಿದ್ದರೆ ಉಭಯತರ ವರ್ತನವು ಅನೀತಿ ಪ್ರವರ್ತಕವಾಗಿ, ಸಾಮಾಜಿಕ ದೃಷ್ಟಿಯಿಂದ ದೊಡ್ಡ ಪಾಪ ಮಾಡಿದಂತಾಗುತ್ತಿತ್ತು.

ನಗಿನನು ಹೆಂಡತಿಗೆ ಕೊಟ್ಟ ಸೋಡಪತ್ರ-

ನಗಿನನು ತನ್ನ ವಿಚಾರವನ್ನು ಈ ತೆರವಾಗಿ ಹೇಳುತ್ತಾನೆಃ—

ಯಾವ ಸ್ವಂತ ವಿಚಾರದಿಂದ ನನ್ನ ಮೊದಲನೆಯ ಲಗ್ನವಾಯಿತೆಂದು ಹೇಳಲಾರೆನು. ನಾನು ಆಗ ಚಿಕ್ಕವನಿದ್ದೆನು. ನನ್ನ ತಂದೆತಾಯಿಗಳು ಈ ಲಗ್ನವನ್ನು ನನ್ನ ಅಜ್ಞಾನ ದಶೆಯಲ್ಲಿ ಮಾಡಿದ್ದರೆ. ಹುಡಿಗೆಯ ಅಭಿರುಚಿ, ಅಪೇಕ್ಷೆ, ನಡತೆ ಮತ್ತು ವಿದ್ಯೆ ಇವಾವವದನ್ನೂ ನನಗೆ ಹೇಳಲಿಲ್ಲ. ಅವನ್ನು ಬಚ್ಚಿಟ್ಟಿದ್ದರು. ಇಂಥ ಲಗ್ನಕ್ಕೆ ನಾನೇಕೆ ಕರಾರಬದ್ಧನಾಗಿ ನಡೆಯಬೇಕು.? ಹಿಂದೂ ಧರ್ಮಶಾಸ್ತ್ರ ಬಲ್ಲವರೆಲ್ಲರೂ ನಿಮ್ಮಳೆಯ ಕೂಡ ಆದ ಮದಿವೆಯು ಅಶಾಸ್ತ್ರವೆಂದೇ ಹೇಳದಿರರು.

ಈ ಲಗ್ನಕ್ಕೆ ನಿರ್ಮಲೆಯು ಎನ್ನೂ ಜವಾಬದಾರಳಲ್ಲ. ಪಾಪ ಹುಡಿಗೆಯು. ನಾನು ಈ ವಿವಾಹ ರಜ್ಜುಬಂಧನದಿಂದ ಆಕೆಯನ್ನು ಪೂರ್ಣವಾಗಿ ಮುಕ್ತ ಮಾಡುತ್ತೇನೆ. ಆಕೆಯು ಬೇರೆಯವನನ್ನು ಆನಂದದಿಂದ ಮದಿವೆಯಾಗಬಹುದು ಆಕೆಯು ಅಂಗನರ್ ವಾಗಿಲ್ಲ. ಆಕೆಯು ತನ್ನ ತಂದೆ ತಾಯಿಗಳ ಕಠೋರ ಹೃದಯ ಮತ್ತು ಸಾಮಾಜಿಕ ಬಂಧನೆಗಳ ಮೂಲಕ ಕಷ್ಟಪಡಬೇಕಾಗುತ್ತದೆ. ನಾನು ಆಕೆಯನ್ನು ತ್ಯಜಿಸಿಲ್ಲ. ಆಕೆಯು ಅಜ್ಞಾನ, ತಂದೆ ತಾಯಿಗಳ ಅಕುಂಚಿತ ವಿಚಾರ ಮತ್ತು ಜನತೆಯ ಅಲ್ಪ ವಿಚಾರಕ್ಕಾಗಿ ಆಕೆಯು ದುಃಖಪಡಬೇಕಾಗಿದೆ. ಆದ್ದರಿಂದ ನಾನೇನೂ ದ್ರೋಹಿಯಲ್ಲ.

ಜಾಹೀರ ನೋಟೀಸು.

ಸವದತ್ತಿ ಎಲ್ಲಮ್ಮಾ ಮ್ಯುನಿಸಿಪಾಲಿಟಿ ಕಚೇರಿಯಿಂದಾ ಯಾವತ್ತು ಜನರಿಗೆ ತಿಳುಹಿಸುವದೇನಂದರೆಃ—

ಶ್ರೀ ಯಲ್ಲಮ್ಮನ ಗುಡ್ಡಕ್ಕೆ ಬರುವ ಯಾತ್ರಿಕರ ಮೇಲಿನ ವಸೂಲ ಮಾಡುವ ತಲಿಪಟ್ಟಿ **ಗಾಡಿ**, ಮೋಟಾರ ಮತ್ತು ಜನಾವರಗಳ ಮೇಲೆ ವಸೂಲ ಮಾಡುವ ಕರ ಇವುಗಳ ಮಕ್ತೆ ಭಾದ್ರಪದ ಕೃ ೩೦ ಪನ್ನೆರಡು ಘಂಟೆ ರಾತ್ರಿಯಿಂದ ಮಾರ್ಗಶೀರ್ಷ ಕೃ ೩೦ ರಾತ್ರಿ ಹನ್ನೆರಡು ಘಂಟೆಯ ವರೆಗೆ ಅಂದರೆ ತಾರೀಖು ೨೫—೯—೨೭ ಯಿಂದಾ ೨೪—೧೨—೨೭ ಮೂರು ತಿಂಗಳ ಮುಟ್ಟಿಗೆ ತಾರೀಖು ೧೮—೯—೨೭ ಇಸವಿ ಮಧ್ಯಾಹ್ನ ೩ ಘಂಟೆಕ್ಕೆ ಉಘಡ ರೀತಿಯಿಂದಾ ಮ್ಯುನಿಸಿಫಲ ಆಫೀಸಿನಲ್ಲಿ ಲಿಲಾವ **ಮಾಡಿ** ಕೊಡುವದರಲ್ಲಿ ಬರುವದು. ಸವಾಲಿನಲ್ಲಿ ಬೇಡತಕ್ಕವರು ತಾಲೂಕ ಅಮಲದಾರರ ಕಡಿಂದಾ ಲಾಯಖಿ ಸರ್ಟಿಫಿಕೇಟು ತಗೊಂಡು ಹಾಜರ ಇರಬೇಕು. ಮತ್ತು ಲಿಲಾವ ಪ್ರಾರಂಭವಾಗುವ **ಪೂರ್ವದಲ್ಲಿ** ಕಮೀಟಿ ಮುಂದೆ ಹಾಜರ ಮಾಡಬೇಕು. ಇಲ್ಲದಿದ್ದರೆ ಅವರ ಸವಾಲ ತೆಗೆದುಕೊಳ್ಳುವದು ಕಮೀಟಿಯ ಮರ್ಜಿಯ ಮೇಲೆ ಅವಲಂಬಿಸಿರುತ್ತದೆ. ಆಖೈರ ಸವಾಲು ಮಂಜೂರಾದ ಕೂಡಲೆ ಮಂಜೂರಾದ ರಕಮಿನ ೧/೪ ರಕಮು ಡಿಪಾಜಿಟ ಕರೀಖ ಅಗಾವ ಹಾಜರ ಮಾಡಬೇಕು. ಹೆಚ್ಚಿಗಾಗಿ ಮಂಜೂರಾದ ರಕಮಿಗೆ ತಾಲೂಕ ಅಮ್ಮಲದಾರ ಕಡಿಂದಾ ಲಾಯಖಿ ಸರ್ಟಿಫಿಕಿಟ ಪಡಕೊಂಡಂಥ ಯರಡು ಜನರನ್ನು ಜಾಮೀನ ಕೊಟ್ಟು ಶರ್ತುಗಳಿಗೆ ಅನುಸರಿಸಿ ಯೋಗ್ಯ ಸ್ಟ್ಯಾಂಪಿನ ಮೇಲೆ ಕಬುಲಾಯತಿ ಬರಕೊಡಬೇಕು. ಶರ್ತಿನ ಯಾದಿ ಲಿಲಾವಿನ ಕಾಲಕ್ಕೆ ಓದಿ ಹೇಳುವದರಲ್ಲಿ ಬರುವದು. ತಿಳಿಯಬೇಕು. ತಾರೀಖು ೫—೯—೨೭ ಇಸ್ವಿ

R. G. NARGUND
Secretary.

G. M. KALADIGI,
President,
S. Y. Municipality

ಪೈಗಂಬರರ ಮಾನ ರಕ್ಷಣೆಯ ಕಾಯದೆ-

ಹಿಂದುಸ್ಥಾನ ಸರಕಾರದವರು ಪೈಗಂಬರರೇ ಮೊದಲಾದ ಸಾಧು ಸಜ್ಜನರ ಹಾಗು ದೇವಾನುದೇವತೆಗಳ ಅಪಮಾನ ಮಾಡುವಂಥ ಕೃತ್ಯಗಳು ಬಂದಾಗಬೇಕೆಂದು ಅಸೆಂಬ್ಲಿಯಲ್ಲಿ ಒಂದು ಕಾಯದೆ ತಂದಿದ್ದಾರೆ. ಈ ಕಾಯದೆಯನ್ನು ದೇಶಭಾಷೆಯಲ್ಲಿ ಮುದ್ರಿಸಿ, ಶಾಂತ ರೀತಿಯಿಂದ ವಿಚಾರ ಮಾಡಬೇಕೆಂದು ನಾಮದಾರ ಬೆಳವಿಯವರು ಮಾಡಿದ ಸೂಚನೆಯು ಬಹು ಜನಕ್ಕೆ ಒಪ್ಪಿಗೆಯಾಗಲಿಲ್ಲ. ಅಸೆಂಬ್ಲಿಯು ಏಳುವದರೊಳಗಾಗಿ ಪಾಸ ಮಾಡುವರು ಒಂದೇ ವಾರದಲ್ಲಿ ವಿಚಾರ ಮಾಡಿ, ರಿಪೋರ್ಟ ಮಾಡುವದಕ್ಕಾಗಿ ಈ ಕೆಳಗಿನ ಗೃಹಸ್ಥರ ಸಿಲೆಕ್ಟ ಕಮಿಟಿಯನ್ನು ನೇಮಿಸಿದ್ದಾರೆ.

ಹಿಂದೂ- ಶ್ರೀ ಶ್ರೀನಿವಾಸ ಅಯ್ಯಂಗಾರರ ೨ ಶ್ರೀ. ಕೇಳಕರ ೩ ಬ್ಯಾರಿಸ್ಟರ ಜಯಕರ ೪ ಕೆ. ಸಿ. ರಾಯ ೫ ಲಾಲಾ ಲಜಪತರಾಯ.

ಮುಸಲಮಾನ- ಬ್ಯಾರಿಸ್ಟರ ಜಿನ್ನಾ ೨ ಮಿ. ಇಸ್ಮಾಯಿಲಖಾನ ೩ ಮಿ. ಗಜನಾಫ ೪ ಸರ ಅಬ್ದುಲ ಕ್ವಾಯುಮ.

ಯುರೋಪಿಯನ್ನ- ಮಿ. ಆರ್ಥರ ಮೂರ ೨ ಮಿ. ಕೋಟಮನ ೩ ಸರ ಡೇನಿ ಬ್ರೇ. ೪ ಮಿ. ಕ್ರೆರಾರ.

ಧಾರವಾಡ-

ಮಳೆಯಿಲ್ಲ, ಉರಿ ಉರಿ ಎನಿಸುವಂಥ ಬಿಸಿಲು ಕಾಯುತ್ತಿರುವದು.

ಇಂದು ಪ್ರಾತಃಕಾಲದಲ್ಲಿ ಶ್ರೀಮದುತ್ತರಾದಿ ಮಠದ ಶ್ರೀ ಸ್ವಾಮಿಗಳವರು ಗಜಾರೋಹಣವಾಗುವರು. ಮತ್ತು ಸಂಭ್ರಮದಿಂದ ಮೆರವಣಿಗೆ ಹೊರಡುವದು.

ನಾಳಿನ ರಜೆ-

ವಾಡಿಕೆಯ ಪದ್ಧತಿಯ ಪ್ರಕಾರ ಅನಂತವ್ರತದ ಬೆಸೆಯಿಂದ ಇಂದು ಮುದ್ರಾಲಯಕ್ಕೆ ರಜೆ ಇರುವದರಿಂದ ನಾಳಿನ ನಿಶ್ಯದ ವಿಜಯವು ಪ್ರಕಟಿಸಲ್ಪಡಲಾರದು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ವಿಜಯ

ನಿತ್ಯ ಪತ್ರ | ಬಿಡಿ ಅರ್ಧ ಆಣೆ

ಸಂಪಾದಕರು:— ಆಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೯) ಧಾರವಾಡ ಶನಿವಾರ ತಾರೀಖು ೧೦ ನೇ ಸಪ್ಟಂಬರ ೧೯೩೨ (ಸಂಚಿಕೆ ೧೯೫

ಹಂಗಾಮುವು ಮುಗಿಯ ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಚನ್ನಾಗಿ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು ಇವುಗಳ ವೈಶಿಷ್ಟ್ಯವೇದರೆ ಉಕ್ಕಿನ ಕಂಬಗಳ ಚೌಕಟ್ಟು ಹಿತ್ತಾಳಿ ಬೇರಿಂಗುಗಳು ಇರುವದರಿಂದ ಯಂತ್ರವು ಅಚ್ಚುಕಟ್ಟಾಗಿ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಗಿಂತಲೂ ಇವುಗಳಲ್ಲಿ ಕಾಳು ಬೇಳೆ ಯಾಗುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆ.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದ ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲಿ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ”	೬—೦—೦ ರೂ
೪ ”	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಚಂದಿಗೆಯು. ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ವ ನಡೆಸುವನು. ಕಾಯಂ ಮತ್ತು ಬೇರೆ ತರದ ಠೇವು ಪಟಗಳಿಗೆ ಚನ್ನಾಗಿ ಬಡ್ಡಿ ಕೊಡುವನು.

ವಿಶೇಷ ಸಂಗತಿ ಕಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಎಂ ಎನ್ ಪಿ. ಜಕಾತಿ,
ಮ್ಯಾನೇಜರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ ಪುಸ್ತಕಾಲಯ.

—೦—

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ವೆಚ್ಚ ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ವಿಜಯ.

ಧಾರವಾಡ ತಾ-೧೦-೯-೩೭ ನೇ ಇಸ್ವಿ

ಶಿಕ್ಷಕರ ಸಂಬಳವು ಹೆಚ್ಚಾಗಿದೆಯೋ?

(ಹಿಂದಿನಿಂದ ಮುಗಿದುದು)

ಸ್ಥಾನಿಕ ಸಂಸ್ಥೆಗಳಿಗೇನು? ೧೫ರದ. ಗಳೇಕೆ? ೧೦ಕ್ಕೆ ಒಪ್ಪಿದರೆ ಅವ ಒಳ್ಳೆನ್ನುವವ್ರೋ? ಆದರೆ ಉಪಜೀವನವು ಸಾಗುವಷ್ಟಾದರೂ ಸಂಬಳವು ಬೇಡವೋ? ಕೊಟ್ಟಷ್ಟು ಸಂಬಳದಲ್ಲಿ ಶಿಕ್ಷಕನ ಕೆಲಸವನ್ನು ಮಾಡಲಿಕ್ಕೆ ಬೇಕಾದಷ್ಟು ಜನರು ಸಿಗುವದರಿಂದ ಅವರ ಯೋಗ್ಯತೆಯು ಕಡಿಮೆಯೆಂದರೆ, ಈಗ ಅತ್ಯಲ್ಪ ವೇತನಕ್ಕೆ ಬಿ. ಎ. ಆದವರೂ ಸಿಗುವರು; ಆದ್ದರಿಂದ ೮-೧೦ ವರ್ಷಗಳ ಹಿಂದಿನ ಮ್ಯಾಟ್ರಿಕದವರಿಗಿಂತ ಅಜೀಕೆ ಮುಲಕೀ ಪರೀಕ್ಷೆಯವರಿಗಿಂತ ಅವರು ಹೀನತರಗತಿಯವರೆನ್ನಬಹುದೇ? ಸಂತೆಯ ಧಾರಣೆಯನ್ನನುಸರಿಸುವ ಹೀನ ವಿಚಾರವನ್ನು ಬಲ್ಲವರು ಎಂದೂ ಮಾಡರು. ಕಡಿಮೆ ಸಂಬಳಕ್ಕೆ ಶಿಕ್ಷಕರು ಸಿಗುವದರಿಂದ ಅವರ ಉಪಜೀವನಕ್ಕೆ ಅಷ್ಟೇ ಹಣವು ಸಾಕೆಂದು ತಿಳಿಯುವದೂ ತಪ್ಪು. ಬರಗಾಲದಲ್ಲಿ ಒಂದು ತುತ್ತು ಕೂಳು ಕಾಣದವನೊಬ್ಬನು ಗಿರ್ದ ರೊಟ್ಟಿ ಸಿಗಲು ನಲಿದಾಡಿ ಕುಣಿದರೆ ಆತನ ಹೊಟ್ಟೆಗೆ ಅಷ್ಟೇ ಸಾಕೆಂದು ಊಹಿಸುವಂತೆಯೇ ಈ ಮಾತಾಗಿದೆ.

ಹಿಂದಿನ ಕಾಲದ ಶಿಕ್ಷಕರು ಕಡಿಮೆ ಸಂಬಳದಲ್ಲಿ ಕೆಲಸವನ್ನು ಮಾಡಿರುವದೇನೋ ನಿಜವು. ಆದರೆ ಆ ಕಾಲವೇ ಬೇರೆಯಾಗಿತ್ತು. ಆಗ ಇದಕ್ಕೂ ಹೆಚ್ಚು ಅಗ್ಗಳತೆಯಿತ್ತು; ಆದ್ದರಿಂದ ಇದಕ್ಕೂ ಕಡಿಮೆ ಹಣದಲ್ಲಿ ಪ್ರಪಂಚವು ಸಾಗುತ್ತಿತ್ತು. ಆಗ ದುಡ್ಡಿಗೆ ಬೆಲೆಯಿತ್ತು; ಈಗ ಪದಾರ್ಥಗಳಿಗೆ ಬೆಲೆ ಒಂದು ದುಡ್ಡು ಅಗ್ಗವಾಗಿದೆ. ಆದ್ದರಿಂದ ಜನರಲ್ಲಿ ಮೊದಲಿನ[illegible] ಉದಾರ ಭಾವನೆಯಿಲ್ಲ. ಹಳ್ಳಿವಾಡದವರಿಗೆ ಶಾರೀರಿಕ ಶ್ರಮದ ಹೊರತು ಬೇರೆ ದುಡಿತದ ಕಲ್ಪನೆಯು ಇಲ್ಲದಿರುವದರಿಂದ ಶಿಕ್ಷಕರೆಂದರೆ ಶ್ರಮವಿಲ್ಲದೆ ಸಂಬಳ ತಿನ್ನುವವನೆಂಬ ಕಲ್ಪನೆಯು ಅವರಲ್ಲಿ [illegible] ನೆಲೆಗೊಂಡಿರುವದು. ಆದರಿಂದ ಮೊದಲಿನ [illegible] ಇಲ್ಲದಂ[illegible] ಹೆಚ್ಚು ಬೆಲೆ [illegible] ಆಗಿದೆ. ಅದೇ ಹಿಂದಿನ ಕಾಲದಲ್ಲಿ ಶಿಕ್ಷಕರ ಪ್ರಪಂಚದ ಅರ್ಧಕ್ಕಿಂತ ಹೆಚ್ಚು ಭಾರವನ್ನು ಊರವರೇ ವಹಿಸುತ್ತಿದ್ದರು. ಹಳ್ಳಿಯ ಒಕ್ಕಲಿಗನಲ್ಲಿ ಹುಟ್ಟಿದ್ದ ಪದಾರ್ಥಗಳನ್ನಷ್ಟೇ ಆತನು ಕೊಳ್ಳಬೇಕಾಗುತ್ತಿತ್ತು. ಮುಷ್ಟಿ ಧಾನ್ಯವೊಂದು ಇದಕ್ಕೆ ಅಪವಾದವು. ಆದರೆ ಈಗ ದುಡ್ಡಿಲ್ಲದೆ ಮಾತಾಡಿಸುವಂತಿಲ್ಲ. ಶಿಕ್ಷಕರಲ್ಲಿಯೂ ಸ್ವಾಭಿಮಾನವು ಜಾಗೃತವಾಗಿರುವದರಿಂದ ಅವರಿಗೂ ಈಗ ತಾಂಗೂಲ ಚಾಲನವು ಸೇರುವದಿಲ್ಲ. ಆದ್ದರಿಂದ ಮೊದಲಿನವರೊಡನೆ ಹೋಲಿಸುವದು ಎಷ್ಟೂ ಸರಿಯಲ್ಲ. ತಮಗೆ ದೊರೆಯುವ ಸಂಬಳದಿಂದ ಉದರ ನಿರ್ವಾಹವು ಸಾಗದಿರಲು ಶಿಕ್ಷಕರ, ಮೊದಲಿನಂತೆ ಸ್ವವೃತ್ತಿಯರಾಗುವ ಅಂಜಿಕೆಯು ವಿಶೇಷವಾಗಿರುವದು. ಹಾಗಾದರೆ, ಸ್ವಾಭಾವಿಕವಾಗಿ ಅನುಕರಣಶೀಲವಿರುವ ಛಾತ್ರವರ್ಗದಲ್ಲಿ ಈ ದುರ್ಗುಣವು ಮೊಳೆತು, ಭಾವೀ ರಾಷ್ಟ್ರವೆಲ್ಲ ನಿಸ್ತೇಜವಾಗಿ ಪರ್ಯಾಯದಿಂದ ಶಿಕ್ಷಕರ ಅಲ್ಪವೇತನವು ರಾಷ್ಟ್ರದ ಅವನತಿಗೆ ಕಾರಣವಾದಂತಾಗುವದೆಂಬದು ವಿಚಾರಶೀಲರ ಮನಸ್ಸಿನಲ್ಲಿ ಬಾರದೆ ಇರದು.

ಈಗ ಪಡೆಯುವ ಸಂಬಳಕ್ಕೆ ಶಿಕ್ಷಕರು ಅರ್ಹರೋ ಅನರ್ಹರೋ ಎಂಬದನ್ನು ನಿರ್ಧರಿಸಬೇಕಾದರೆ ಅವರಷ್ಟೇ ಕಲಿತವರೂ, ಕಡಿಮೆ ಕಲಿತವರೂ ಇತರ ಖಾತೆಗಳಲ್ಲಿ ಸೇರಿ ಎಷ್ಟು ಗಳಿಸುವರೆಂಬದನ್ನು ನೋಡಬೇಕಾಗುವದಲ್ಲದೆ, ಮಾನಸಿಕಶ್ರಮದ ಮಹತ್ವವನ್ನೂ ಉಪಜೀವನಕ್ಕೆ ಅವಶ್ಯವಾದ ಪ್ರಾಪ್ತಿಯ ವಿಚಾರವನ್ನೂ ಮನಸ್ಸಿನಲ್ಲಿ ತರಬೇಕಾಗುವದು. ಹಾಗೆ ಮಾಡದೆ ಸಿಕ್ಕ ಸಿಕ್ಕಂತೆ ಏನಾದರೊಂದು ವಿಧಾನವನ್ನು ಮಾಡುವದೆಂದರೆ ಬುದ್ಧಿಪೂರ್ವಕ ಒಂದು ಮಹತ್ವದ ವರ್ಗದ ಅವಮಾನವನ್ನು ಮಾಡಿದಂತಾಗುವದೆಂಬದನ್ನು ಒಲ್ಲದರಿಗರುಹಬೇಕಾಗಿಲ್ಲ. ಬಲಹೀನವೂ ತೇಜೋಹೀನವೂ ಆದ ಶಿಕ್ಷಕ ಸಮಾಜದಿಂದ ಇದರ ಪ್ರತಿಕಾರವಾಗಲಿಕ್ಕಿಲ್ಲೆಂಬದು ನಿಜವು. ಆದರೆ ಅದು ತನ್ನ ಅಳವಿಗನುಸರಿಸಿಯಾದರೂ ಸಂತಾಪವನ್ನು ವ್ಯಕ್ತಗೊಳಿಸದೆ ಬಿಡಲಿಕ್ಕಿಲ್ಲ; ಮತ್ತು ಆ ಸಂತಾಪದಿಂದುಂಟಾಗುವ ಪ್ರತ್ಯಕ್ಷವಿಲ್ಲದಿದ್ದರೂ ಅಪ್ರತ್ಯಕ್ಷ ಫಲವನ್ನು ಯಾರೂ ತಪ್ಪಿಸಲಾರರು.

ಸಂಬಳದಂತೆಯೇ ಬಡತಿಯ ಬಗ್ಗೆಯೂ ಡಿ. ಬಿ. ರವರು ಅಸಂಗತ ವಿಧಾನವನ್ನು ಮಾಡಿರುವರು. ಈಗಿನ ಶಿಕ್ಷಕ ವರ್ಗವು ಕರ್ತವ್ಯಚ್ಯುತವಾಗಿದೆಯೆಂದು ಹೇಳುವಾಗ ಪರೀಕ್ಷಕರನ್ನೂ ಅದೇ ವರ್ಗದಲ್ಲಿ ಸಮಾವೇಶ ಮಾಡಿದಂತಾಗುವದೆಂಬದು ಅವರ ಲಕ್ಷ್ಯಕ್ಕೆ ಬಂದಿಲ್ಲ. ಮೇಲಾಗಿ ಅವರ ಈ ವಿಚಾರಸರಣಿಯು ಪ್ರಕೃತ ಪರಿಸ್ಥಿತಿಯಲ್ಲಿ ಅತ್ಯಂತ ದೋ[illegible]

ಪ್ರಾಥಮಿಕ ಶಿಕ್ಷಕರು ವರ್ಷಂಪ್ರತಿಯ ಬಡತಿಯ ಸ್ಕೇಲಿನಿಂದ ಹಿಂದಿನ ಶಿಕ್ಷಕರಂತೆ ಸ್ಫೂರ್ತಿಯಿಂದಲೂ, ಉತ್ಸಾಹದಿಂದಲೂ ಕಲಿಸುವದಿಲ್ಲೆಂಬದಕ್ಕೆ ಆಧಾರವೇನು? ಈಗಿನ ಒಬ್ಬನೇ ಒಬ್ಬನಳಿಯದಂತೆ ಎಲ್ಲ ಶಿಕ್ಷಕರೂ ದೋಷರಹಿತರೇ ಇರುವರೆಂದು ನಾವೆನ್ನುವದಿಲ್ಲ; ಅದರಂತೆ ಹಿಂದಿನ ಕಾಲದವರೆಲ್ಲರೂ ಉತ್ಸಾಹಿಗಳೇ ಇದ್ದರೆಂದು ಎದೆ ತಟ್ಟಿ ಹೇಳುವ ಧೈರ್ಯವೂ ಯಾರಿಗಾಗಲಿಕ್ಕಿಲ್ಲ. ಆದರೂ ಸಾಮಾನ್ಯತಃ ಪ್ರತಿಯೊಂದು ಸಾಲೆಯ ವಾರ್ಷಿಕ ಪರೀಕ್ಷೆಯ ಪರಿಣಾಮವನ್ನೂ, ಮುಲಕೀ ಪರೀಕ್ಷೆಯ ಪರಿಣಾಮವನ್ನೂ ನೋಡಿದರೆ ಪರಿಸ್ಥಿತಿಯನ್ನರಿತ ಪ್ರತಿಯೊಬ್ಬನು ಈ ವಿಧಾನವು ಸರಿಯಲ್ಲೆಂದು ಹೇಳುವನು

ಏನೂ ತಿಳಿಯದ ಹಳ್ಳಿಯ ಮುಂಡನು ಕೂಡ ತನ್ನ ಕಾಲದ ಶಿಕ್ಷಣದ ಪ್ರಾಥಮಿಕವನ್ನು ಹೇಳಿ ಹಳೆಯದೆಲ್ಲ ಹೊನ್ನೆಂದು ಹೊಗಳುವದೂ, ಹೊಸದೆಲ್ಲ ಮಣ್ಣೆಂದು ತೆಗಳುವದೂ ಸಾರ್ವತ್ರಿಕವಾಗಿದೆ. “ಮೊದಲಿನಂತೆ ಝುಡತೀ ಬರುವದಿಲ್ಲ; ಹುಬ್ಬದ ಮೇಲೆ ಕಲ್ಲು ಹೇರಿ ಇಡೀ ಒಪ್ಪತ್ತು ಬಿಸಿಲು ಬರೆಯಿಸುವದಿಲ್ಲ; ಬೆರಳುಗಳಿಂದ ನೆತ್ತರವು ಚಿಮ್ಮುವಂತೆ ಕುದುರೆ ಏರಿಸುವದಿಲ್ಲ. ಮೊದಲಿನಂತೆ ಕಾಲೇಜದಲ್ಲಿ ಬಡಿಗೆ ಬೀಳುವದೊತ್ತಟ್ಟಿಗಿರಲಿ, ಇಲ್ಲಿ (ಪ್ರಾಥಮಿಕ ಸಾಲೆಯಲ್ಲಿ) ಕೂಡ ಬೀಳುವದಿಲ್ಲ; ಪರೀಕ್ಷಕರ ಮನೆಗೆ ನಿಂತು ಸನ್ನೆ ಮಾಡುವ ಕಲೆಯು ಈಗಿನ ಶಿಕ್ಷಕರಲ್ಲಿಲ್ಲ; ಆದ್ದರಿಂದ ಈಗಿನ ಶಿಕ್ಷಣವು ಹೀನವಾದದ್ದು ” ಎಂದು ಉಬ್ಬುಬ್ಬಿ ಹೇಳುವ ದನ್ನರೆಷ್ಟೋ ಜನರು ಲೇಖಕನ ನಿದರ್ಶನಕ್ಕೆ ಬಂದಿರುವರು.

ಈ ಹೊಗಳು ತೆಗಳುವಿಕೆಗಳಲ್ಲಿ ಸತ್ಯಾಂಶವು ತುಸು ಮಟ್ಟಿಗಿದ್ದರೂ ಅದರ ದೋಷವು ಶಿಕ್ಷಕವರ್ಗದ ಕಡೆಗಿರುವದಿಲ್ಲ. ವಿಷಯಗಳ ಹಾಗು ಪದ್ಧತಿಯ ಬದಲು, ಆದರೆ ಅದಕ್ಕನುಸರಿಸಿ ಮಾರ್ಪಾಡು ಮಾಡದ ಪರಿಸ್ಥಿತಿ ಇವೇ ಇದಕ್ಕೆ ಕಾರಣವಾಗಿವೆ. ಇಂಥವರಲ್ಲಿಯೂ ಸಮಾಧಾನಕರವಾಗಿ ಕೆಲಸ ಮಾಡುವ ಶಿಕ್ಷಕರು ಹಳೇ ಶಿಕ್ಷಕರಿಗಿಂತಲೂ ಎಷ್ಟೋ ಮಡಿ ಸ್ವಾರ್ಥತ್ಯಾಗಿಗಳು ನಮ್ಮ ಮಾತಿನ ಯಥಾರ್ಥತೆಯು ಸ್ವಲ್ಪ ನಿರೀಕ್ಷಣ ಮಾಡಿದರೆ ಪ್ರತಿಯೊಬ್ಬರ ಅನುಭವಕ್ಕೆ ಬರುವಂತಿದೆ.

ಟಾಯಿಮಸ್ಕೇಲ ಕೊಟ್ಟದ್ದೇನಾಯಿತು? ಪರೀಕ್ಷಕರೇನು ಮಲಗಿರುವರೇ? ಮೊದಲು, ವರ್ಷದಲ್ಲಿ ಒಮ್ಮೆ ಪರೀಕ್ಷಕರು ಸಾಲೆಗೆ ಬಂದರೆ ಮುಗಿಯಿತು. ವರ್ಷದ ತನಕ ಅವರ ದರ್ಶನವೇ ಆಗುತ್ತಿದ್ದಿಲ್ಲ. ಈಗ ೩-೪ ಸಾರೆ ಅದೂ ತಿಳಿಸದೆ ಬರುವರು. ಆಗರಿಂದ ಮೊದಲಿಗಿಂತ ಹೆಚ್ಚು ಎಚ್ಚ

ಕದಿಂದ ಕೆಲಸ ಮಾಡಬೇಕಾದೀತಲ್ಲವೇ? ಟಾಯಿಮ ಸ್ಕೇಲಿನಂತೆ ಬಡತಿಯನ್ನು ಕೊಡುತ್ತಿದ್ದರೂ ಶಿಕ್ಷಕರು ಜನಸಮೂಹ ಮತ್ತು ಪರೀಕ್ಷಕರೆಂಬ ಎರಡು ಶಾಳಿಗಳುಳ್ಳ ಬೀಸುವ ಕಲ್ಲೊಳಗಿಂದ ಸುರಕ್ಷಿತ ಪಾರಾಗಬೇಕಾಗುವದರಿಂದ ಬಲು ದಕ್ಷತೆಯಿಂದ ಕೆಲಸವನ್ನು ಮಾಡಬೇಕಾಗುವದು; ಆದ್ದರಿಂದ ಮನಸಿದ್ದರೂ ಅವರು ಕರ್ತವ್ಯಚ್ಯುತರಾಗುವದು ಅಶಕ್ಯವೆಂಬದನ್ನು ಮರೆಯಲಾಗದು.

ಮೇಲಾಗಿ ಅನಿಯಮಿತ ಬಡತಿಯನ್ನು ಕೊಡುವದರಿಂದ ಶಿಕ್ಷಕರು ಕರ್ತವ್ಯಚ್ಯುತರಾಗುತ್ತಾರೆಂಬದಕ್ಕೆ ಪೂರಾವೆಯೇನು? ಬಡತಿಯ ಪಾತ್ರತೆಗೆ ಕೇವಲ ಕರ್ತವ್ಯನಿಷ್ಠೆಯೇ ಕಾರಣವಿರುವದೇನು? ಹೀಗಿರಲು ಅದರಿಂದ ಸ್ಪರ್ಧೆಯೂ ಮೇಲಾಟವೂ ಹುಟ್ಟುವದೆಂಬೆನು ವನೆಂದರೆ ಜನಸ್ವಭಾವ ಪರಿಶೀಲನದ ಅಭಾವವೆಂಬಂತಲೇ ಊಹಿಸಬೇಕಾಗುತ್ತದೆ. ಸ್ವಾರ್ಥ, ವ್ಯಕ್ತಿವಿಷಯಕಾಭಿಮಾನ, ಪಕ್ಷಾಭಿನಿವೇಶ, ಸ್ತುತಿನಿಂದೆ ಇತ್ಯಾದಿ ಮುಂತಾದವುಗಳಿಂದ ಸಮಾಜವೆಲ್ಲ ಮುಕ್ತವಾಗಿ ಪ್ರತಿಯೊಂದು ವ್ಯಕ್ತಿಯು ಧರ್ಮರಾಜನ ಅವತಾರವನ್ನೇ ತಾಳಿದ್ದರೆ ಏನೋ!

ಶಿಕ್ಷಕರು ಪೀಡಿತರಾಗಿರಲಿ, ಸರಕಾರವೂ ಲೋಕನಾಯಕರೂ ಒಪ್ಪಿಕೊಂಡ ಸಾರ್ವ-ಪರಾಂಜಪೇ ಸ್ಕೀಮನ್ನೇ ಪೂರಾ ಒಳಿತೆಯಲ್ಲಿ ತಂದರೂ ಸಿಲೆಕ್ಸನದ ಮೇಲಾಟವು ಉಳಿಯುವದೇ ಅಲ್ಲ.

ದಿ. ಬ ರೊದ್ದರವರು ತಮ್ಮ ಪತ್ರದಲ್ಲಿ ಶಿಕ್ಷಕರಿಗೆ ಅಪಮಾನಕರವಾದ ಅಸಮಂಜಸ ವಿಚಾರಗಳನ್ನು ಪ್ರಕಟಿಸಿರುವರು. ಅವರು ಬೇಕೆಂದು ಹೀಗೆ ಮಾಡಿರುವರು ಇಲ್ಲವೆ ಶಿಕ್ಷಕರ ಬಗ್ಗೆ ಅವರಲ್ಲಿ ಅಭಿಮಾನವಿಲ್ಲೆಂದು ನಮ್ಮ ಅಂಬೋಣವಿಲ್ಲ. ಆದರೂ ಧಾರವಾಡದ ಟ್ರೇನಿಂಗ ಕಾಲೇಜವು ಸ್ಥಿರವಾಗಲಿಕ್ಕೆ ಸರಕಾರಕ್ಕೆ ಉಳಿತಾಯವನ್ನು ತೋರಿಸುವ ಅಭಿನಿವೇಶದಲ್ಲಿ ಅವರಿಂದ ಈ ಅಸಂಗತ ವಿಧಾನಗಳು ಹೊರಬಿದ್ದಿವೆ. ವಿಚಾರಾಂತ್ಯದಲ್ಲಿ ತಮ್ಮ ಈ ಮತವು ಸರಿಯಲ್ಲೆಂದು ಅವರಿಗೆ ಕಂಡುಬರುವದೆಂದು ನಮಗೆನಿಸುವದು. ದಿ. ಬ. ರವರು ಎಲ್ಲಿಯೇ ಇರಲಿ, ಹೇಗೆಯೇ ಇರಲಿ, ನಮಗೆ ಪೂಜ್ಯರೇ ಆದ್ದರಿಂದ ಅವರಿಗೆ ವಿನಯದಿಂದ ಪ್ರಾರ್ಥಿಸುವದೇನೆಂದರೆ- ಅವರು ತಮ್ಮ ಈ ವಿಚಾರಗಳನ್ನು ಸರಿಪಡಿಸಿಕೊಂಡು ಶಿಕ್ಷಕರ ಗಾಯದ ಮೇಲೆ ಉಪ್ಪುದರಿಸಿದ್ದನ್ನು ತೊಳೆಯಲು ಯತ್ನಿಸಬೇಕು. ಹಾಗು ನಮ್ಮ ಬರವಣಿಗೆಯಲ್ಲಿ ಅತಿಕ್ರಮಣವಾಗಿ ದೆಯೆಂದೆನಿಸಿದರೆ (ಹಾಗೆ ಇಲ್ಲೆಂದು ನಮ್ಮ ನಂಬಿಗೆ) ಅದನ್ನು ದೊಡ್ಡ ಮನಸ್ಸಿನಿಂದ ಕ್ಷಮಿಸಬೇಕು. ಇಷ್ಟೇ.

ತರುಣರೆಲ್ಲರು ವಿಧವೆಯರನ್ನೇ ಮದಿವೆಯಾಗಬೇಕು

—೦—

ತರುಣರಿಗೆ ಮಹಾತ್ಮರ ಉಪದೇಶ.

—೦—

ಮದ್ರಾಸದಲ್ಲಿ ಮಹಾತ್ಮರು ತರುಣರಿಗೆ ವಿಧವಾವಿವಾಹ ಸಂಬಂಧವಾಗಿ ಮುಂದೆ ಕೊಟ್ಟಂತೆ ಉಪದೇಶ ಮಾಡಿದ್ದಾರೆ.

ವಿಧವೆಯು ಆಜನ್ಮ ದುಃಖದಲ್ಲಿಯೇ ಕಾಲ ಕಳೆಯಬೇಕೆಂದು ಹಿಂದೂ ಧರ್ಮಶಾಸ್ತ್ರದಲ್ಲಿಯೇ ಹೇಳಿಲ್ಲ. ನಾನು ಆಗಾಗ್ಗೆ ಏಕಾಂತದಲ್ಲಿ ದೇವರಿಗೆ ಈ ವಿಷಯವಾಗಿ ಮರೆಹೋಗುತ್ತಿದ್ದೇನೆ. ಎಲೈ ದೇವರೇ- ನಾನು ಬದುಕಿರಬೇಕೆಂದು ನಿನ್ನ ಅಪೇಕ್ಷೆ ಇದ್ದರೆ- ನನಗೆ ಇಂಥ ಶೋಕದಾಯಕ ನೋಟವನ್ನು ನೋಡಗೊಡಬೇಡೆಂದು ಪ್ರಾರ್ಥನೆ ಮಾಡಿದ್ದೇನೆ. ವಿದ್ಯಾರ್ಥಿಗಳು ಈ ದುಷ್ಟ ಪದ್ಧತಿಯನ್ನು ತೆಗೆದು ಹಾಕಬೇಕೆಂದು ನಾನು ಉಪದೇಶ ಮಾಡುವದಲ್ಲದೆ ಒಂದು ಕ್ರಿಯಾರೂಪ ಸೂಚನೆ ಮಾಡುತ್ತೇನೆ. ವಿಧವೆಯರನ್ನೇ ಮದಿವೆಯಾಗುತ್ತೇವೆಂದು ಪ್ರತಿಜ್ಞೆ ಮಾಡಿರಿ. ಈ ಪ್ರಕಾರ ನಿಶ್ಚಯ ಮಾಡಿ, ಜಗತ್ತಿಗೆ ಸಾರಿ ಹೇಳಿರಿ. ವೈಧವ್ಯವೆಂಬ ಶಬ್ದವೇ ಹಿಂದೂ ಭಾಷೆಯಲ್ಲಿ ದುರುಪಯೋಗ ಮಾಡಿದ್ದಿರುತ್ತದೆ. ಜ್ಞಾನ ಮತ್ತು ಸತ್ಯಾನ್ವೇಷಣದಲ್ಲಿ ಹಿಂದೂ ಧರ್ಮದಲ್ಲಿ ಪ್ರತಿಯೊಬ್ಬ ವಿಧವೆಯು ಪ್ರಸಂಗದ ಸಂಭೋಗಭೋಗವನ್ನು ಅನುಭವಿಸದಿರುವ ತನಕ ಹಿಂದೂ ಧರ್ಮವೇ ಧರ್ಮವಲ್ಲೆಂದು ಖಂಡಿತವಾಗಿ ತಿಳಿಯಬೇಕು. ಮತ್ತು ಇದು ಅಧರ್ಮವೆಂದೇ ಭಾವಿಸಬೇಕು.

ಮುಂಬಯಿಯಲ್ಲಿ ಅಂತ್ಯಜೋದ್ಧಾರ.

—೦—

ಬ್ರಾಹ್ಮಣ ಬ್ರಾಹ್ಮಣರಲ್ಲಿ ಕಲಹ.

—೦—

ಅಂತ್ಯಜರ ಗಣಪತಿಯ ಮೇಳೆಯು ಬ್ರಾಹ್ಮಣ ಸಭೆಯಲ್ಲಿ ಗಜಾನನ ಸ್ತುತಿ ಮಾಡಬೇಕೆಂಬದಾಗಿ ಆದ ಠರಾವಿನ ವಿರುದ್ಧ ಮುಂಬಯಿಯಲ್ಲಿ ದೊಡ್ಡ ಗೊಂದಲವೆದ್ದಿದೆ. ಪುರಾಣ ಮತವಾದಿಗಳು ಈ ಠರಾವನ್ನು ವಿರೋಧಿಸಿ, ಹಾಯಕೋರ್ಟಿಗೆ ತಹಕೂಬಿಯ ಅರ್ಜೀ ಮಾಡಿದರು. ನ್ಯಾಯಮೂರ್ತಿ ಮಡಗಾಂವಕರರು ಈ ಅರ್ಜಿಯನ್ನು ಕಿತ್ತಿ ಹಾಕಿ, ದಾವೆಯ ಪೂರ್ಣ ವಿಚಾರವಾಗಬೇಕೆಂದು ತೀರ್ಪು ಹೇಳಿದ್ದಾರೆ. ಈ ವಿಷಯವಾಗಿ ಕೂಡಿದ ಸಭೆಯಲ್ಲಿ ಖುರ್ಚಿಗಳು ತೂರಾಡಿದವು. ಕೈಗೆ ಕೈ ಹತ್ತಿತು. ಸಭೆಯು ತುಂಬ ಪುಂಡಾಟಿಕೆಯೇ ನಡೆಯಿತು.

ಶ್ರೀಶನೇ! ಮಳೆಗೊಡು! ಸಲಹು.

॥ ಕಂದಂ ॥

ಮಳೆಬಾರದೆ ಬೆಳೆ ಬರುವುದೆ ।
ಇಳೆ ಬಾಳ್ವುದೆ? ಲೋಕಪಾಲನಾ ಪಹೆಸೆಂಬ ॥
ಗ್ಗಳದ ಬಿರುದು ನಿನಗೊಪ್ಪುದೆ ।
ಗಳಿಲನೆ ಮಳೆಸುರಿಸಿ ಸಲಹು! ಶ್ರೀಶ! ಕೃಪಾಬ್ಧಿ
॥ ೧ ॥

ಗಗನಂ ನಿರಭ್ರಮಿರುವುದು ।
ಸೊಗಸಲ್ಲದ ಗಾಳಿ ಬೀಸುವುದು ಲೋಕಂ ಬಾಯ್ದು ॥
ದೆಗೆವುದು ನಿನಗೇಂ ಹರುಷವೊ ।
ಬಗೆ! ಮಳೆಗೊಡು! ಸಲಹು ಸುಶರ! ಜಗದೀಶನೀ
ನೀಂ [ಜಗದಂಬಿಕೆ ನೀಂ] ॥ ೨ ॥

ಭವದ್ಭಕ್ತನಪ್ಪ ದೀನ ಶಿವಾನಂದದೀಕ್ಷಿತ
ವಾಜಪೇಯಂ, ಧಾರವಾಡ.

ಧಾರವಾಡ ಹುಬ್ಬಳ್ಳಿಯ ನಡುವೆ ಆರು ಬಂಡಿಗಳು.

—೦—

ಹುಬ್ಬಳ್ಳಿಯಿಂದ ಆಳ್ನಾವರಕ್ಕೆ ಸ್ಪೇಶಲ ಬಂಡಿ.

—೦—

ರೇಲ್ವೆ ಕಂಪನಿಯವರು ಇದೇ ೧೨ನೆಯ ತಾರೀಖು ಸೋಮವಾರದಿಂದ ಹುಬ್ಬಳ್ಳಿ ಧಾರವಾಡದ ನಡುವೆ ಆರು ಬಂಡಿಗಳನ್ನು ಮಾಡಿದ್ದಾರೆ. ಅವುಗಳ ವೇಳೆಯು-

ಹುಬ್ಬಳ್ಳಿಯಿಂದ	ಧಾರವಾಡಕ್ಕೆ
೧ ೭-೪೦	೮-೨೯
೨ ೯-೩೦	೧೦-೧೪
೩ ೧೧-೩೦	೧೨-೧೫
೪ ೧೫-೨೫	೧೬- ೯
೫ ೧೬-೧೫	೧೮- ೬
೬ ೧೯-೧೦	೧೯-೫೪
ಧಾರವಾಡದಿಂದ	ಹುಬ್ಬಳ್ಳಿಗೆ
೧ ೮-೩೯	೯ ೧೩
೨ ೧೦-೩೪	೧೧ ೧೦
೩ ೧೩-೫೦	೧೪- ೩೫
೪ ೧೬-೨೦	೧೬-೫೩
೫ ೧೮-೧೬	೧೮-೫೨
೬ ೨೦ ೨೫	೨೧- ೫

ಹುಬ್ಬಳ್ಳಿಯಿಂದ ಆಳ್ನಾವರದ ಕಡೆಯಿಂದ ಮದ್ರಾಸ್ದ ೩-೫೫ ಬಂಡಿ ಬಿಟ್ಟು, ಧಾರವಾಡಕ್ಕೆ ೫-೩೦ ಬದಲು ೬-೩೦ ಕ್ಕೆ ಆಳ್ನಾವರಕ್ಕೆ ಮುಟ್ಟುವದು.

ನೋಟೀಸು.

ರಾ|| ಹುಶೇನಸಾಬ ವ|| ಇಮಾಮಸಾಬ ಕಳ್ಳಿಮನಿ ಸಾಕೀನ ನರವಿನಹಳ್ಳಿ ತಾ|| ಪರಸಗಡ ಇವರಿಗೆ—

ಈಗ ನಿ|| ಮಾಡವಳ ಕಡಿಂದ ತಿಳಿಸೋದೇನಂದರೆ- ನೀನು ನಂನ ಲಗ್ನದ ಗಂಡನಿರುತ್ತಿ ನಿಂನಿಂದ ನನಗ ಒಂದು ಹುಡುಗ ಹುಟ್ಟಿದೆ ಅದು ಈಗ ೭-೮ ವರ್ಷದ್ದು ಅದೆ ಐದೀಗಡಿಗೆ ನೀನು ಬಂಡಿ ಮಾತು ಕೇಳಿ ನನಗ ಕೇಳದೆ ಒಂದು ವರ್ಷದ ಹಿಂದೆ ನನಗೆ ಹೊಡದು ಉಟ್ಟ ಶೀರಿಲೆ ಹೊರಗ ಹಾಕಿದಿ ಪುನಃ ಕರಕೊಂಡು ಹೋಗಲಿಲ್ಲ ನಾನು ಊರಡನೆ ಕಡಗೆ ಇದ್ದು ಕೂಲಿ ಮಾಡಿ ಹೊಟ್ಟೆ ತುಂಬಿಕೊಂಡ ನಂನ ಹೊಟ್ಟೆ ದಶಿಂದ ನಾನು ಈಗ ಎಂಟು ನೂರು ರೂಪಾಯಿ ೧೦೦ ಸಾಲಾ ಮಾಡಿರತೇನೆ.

ಈಗ ಬಿಸ್ಯಾಳ ಇದ್ದು ಕೂಲಿ ಸಹ ಹತ್ತೋದಿಲ್ಲ ಹೊಟ್ಟಿಗ ಅಡಚಣಿ ಆಗಿದೆ ಸಾಲ ತಿಗೋದಿಲ್ಲ ನಾವಂತಾ- ಆಗಾದಿ ಆಗಿದೆ ಕಾರಣ ನೋಟೀಸು ಕೊಡೊ ಭಾಗಬಿತ್ತು ಈ ನೋಟೀಸ ಮುಟ್ಟಿದ ೮ ದಿವಸದಲ್ಲಿ ನೀನು ಒಂದು ನಾನು ಮಾಡಿದ ಸಾಲಾ ತೀರಿಸಿ ನನಗೆ ಒಡಿಯೋದಿಲ್ಲ ಅಂತ ಜಾಮೀನು ಕೊಟ್ಟು ನಂನ ಕರಕೊಂಡು ಹೋಗಬೇಕು ಹಾಗೆ ಮಾಡದೆ ಇದ್ದರೆ ಇದೇ ನೋಟೀಸ ಅಂತಾ ತಿಳಿದು ನಾನು ಒದನೆದವನನ್ನು ಉಡಿಕಿ ಆಗತೇನ ನಂನ ಮೇಲೆ ನಿಂನ ಹಕ್ಕು ಇಲ್ಲಾ ನಂನ ಸಾಲದ ಒಗ್ಗ ನಿಂನ ಮೇಲೆ ದಾವೆ ಮಾಡಿ ವಸೂಲ ಮಾಡಲಾಗತೇತು. ಈ ನೋಟೀಸಿನ ಖರ್ಚು ನಿಂನ ಮೇಲೆ ಅದ

ತಾ|| ೮-೯-೩೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಹುಶೇನಬಿ ಕೋಂ ಹುಶೇನಸಾಬ ಕಳ್ಳಿಮನಿ ಈಕಿ ಕೈದು ಅದೆ.

ನೋಟೀಸಿನ ದರಗಳು.

ಹಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದ ರೂಪಾಯಿ ಮುಂದ ಪ್ರತಿಯೊಂದು ಪಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಮೇಲೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರುವಾಣೆ ಡಬಲ್ ಕಾಲಮಿನ ಒಳಿಗಳಿಗೆ ಇಮ್ಮಡಿ ಖಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಸತ್ತೀಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ.

ಸಪ್ಟಂಬರ ೩೦ ಕ್ಕೆ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸ ಬೇವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಜಾಹೀರ ನೋಟೀಸು.

ಸವದತ್ತಿ ಎಲ್ಲಮ್ಮಾ ಮ್ಯುನಿಸಿಪಾಲಿಟಿ ಕಚೇರಿಯಿಂದಾ ಯಾವತ್ತು ಜನರಿಗೆ ತಿಳುಹಿಸುದೇನಂದರೆ—

ಶ್ರೀ ಯಲ್ಲಮ್ಮನ ಗುಡ್ಡಕ್ಕೆ ಬರುವ ಯಾತ್ರಿಕರ ಮೇಲಿನ ವಸೂಲ ಮಾಡುವ ತಲೆಪಟ್ಟಿ ಗಾಡಿ, ಮೋಟಾರ ಮತ್ತು ಜನಾವರಗಳ ಮೇಲೆ ವಸೂಲ ಮಾಡುವ ಕರ ಇವುಗಳ ಮಕ್ತಾ ಭಾದ್ರಪದ ಕೃ ೩೦ ಹನ್ನೆರಡು ಘಂಟಿ ರಾತ್ರಿಯಿಂದ ಮಾಗ ಶೀರ್ಷ ಕೃ ೩೦ ರಾತ್ರಿ ಹನ್ನೆರಡು ಘಂಟಿಯ ವರೆಗೆ ಅಂದರೆ ತಾರೀಖು ೩೧—೯—೩೭ ಯಿಂದಾ ೨೮—೧೨—೩೭ ವರೆಗಿನ ತಿಂಗಳ ಮುಟ್ಟಿಗೆ ತಾರೀಖು ೧೯—೯—೩೭ ಇಸವಿ ಮಧ್ಯಾನ್ಹ ೩ ಘಂಟೆಕ್ಕೆ ಉಘಡ ರೀತಿಯಿಂದಾ ಮ್ಯುನಿಸಿಫಲ ಆಫೀಸಿನಲ್ಲಿ ಲಿಲಾವ ಮಾಡಿ ಕೊಡುವದರಲ್ಲಿ ಬರುವದು. ಸವಾಲಿನಲ್ಲಿ ಬೇಡತಕ್ಕವರು ತಾಲೂಕ ಅಮಲದಾರರ ಕಡಿಂದಾ ಲಾಯಖಿ ಸರ್ಟಿಫಿಕೇಟು ತೆಗೊಂಡು ಹಾಜರ ಇರಬೇಕು ಮತ್ತು ಲಿಲಾವ ಪ್ರಾರಂಭವಾಗುವ ಪೂರ್ವದಲ್ಲಿ ಕಮೀಟಿ ಮುಂದೆ ಹಾಜರ ಮಾಡಬೇಕು ಇಲ್ಲದಿದ್ದರೆ ಅವರ ಸವಾಲ ತೆಗೆದುಕೊಳ್ಳುವದು ಕಮೀಟಿಯ ಮರ್ಜಿಯ ಮೇಲೆ ಅವಲಂಬಿಸಿರುತ್ತದೆ ಅಖೈರ ಸವಾಲು ಮಂಜೂರಾದ ಕೂಡಲೆ ಮಂಜೂರಾದ ರಕಮಿನ ೧/೪ ರಕಮು ಡಿಪಾಜಿಟ ತರೀಖ ಅಗಾವ ಹ ಚರ ಮಾಡಬೇಕು. ಹೊರತಾಗಿ ಮಂಜೂರಾದ ರಕಮಿಗ ತಾಲೂಕ ಅಮಲದಾರ ಕಡಿಂದಾ ಲಾಯಖಿ ಸರ್ಟಿಫಿಕೀಟ ಪಡಕೊಂಡಂಥ ಯರಡು ಜನರನ್ನು ಜಾಮೀನ ಕೊಟ್ಟು ಶರ್ತಗಳಿಗೆ ಅನುಸರಿಸಿ ಯೋಗ್ಯ ಸ್ಟಾಂಪಿನ ಮೇಲೆ ಕಬುಲಾಯತಿ ಬರಕೊಡಬೇಕು. ಶರ್ತಿನ ಯಾದಿ ಲಿಲಾವಿನ ಕಾಲಕ್ಕೆ ಓದಿ ಹೇಳುವದರಲ್ಲಿ ಬರುವದು. ತಿಳಿಯೋದು. ತಾರೀಖು ೫—೯—೩೭ ಇಸ್ವಿ

R. G. NARGUND
Secretary.

G M. KALADIGI,
President,
S. Y Municipality

ನಾಲ್ಕು ಆಟಗಳು ಮಾತ್ರ.

ಈ ಊರಿಗೆ ಪ್ರಥಮ ಆಗಮನ-

ಹೊಸ ಸಿನರಿ! ಹೊಸ ಉಡುಪು! ಅಪೂರ್ವ ಸಮಯ!!!

ಮೈಸೂರು ಶ್ರೀಮನ್ಮಹಾರಾಜರವರ ಕೃಪಾಪೋಷಣೆಗೆ ಪಾತ್ರರಾಗಿ ಮೈಸೂರು ದೇಶದ ಎಲ್ಲಾ ಸ್ಥಳಗಳಲ್ಲಿಯೂ, ಕೊಡಗು, ಮದ್ರಾಸ, ಮತ್ತು ದಕ್ಷಿಣ ಮದ್ರಾಸು, ಬಳ್ಳಾರಿ, ಅನಂತಪುರ, ಮಂಗಳೂರು ಪ್ರಾಂತಗಳಲ್ಲಿಯೂ ಹುಬ್ಬಳ್ಳಿ ಗದಗ ಮೊದಲಾದ ಮುಂಬಾಯಿ ಪ್ರಾಂತಗಳಲ್ಲಿಯೂ ಸಂಚರಿಸಿ, ವಿಶೇಷ ಬಹುಮಾನಗಳನ್ನೂ, ಭಂಗಾರದ ಪದಕಗಳನ್ನೂ ಪ್ರಶಸ್ತಿಪತ್ರಗಳನ್ನೂ ಪಡೆದು ಸುಪ್ರಸಿದ್ಧಿಯನ್ನು ಹೊಂದಿರುವ

ವಿನೋದ ರತ್ನಾಕರ ಜಿ. ಹೆಚ್. ವೀರಣ್ಣನವರ

"ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ

ಸಂಘದವರು

ಧಾರವಾಡ ಅನ್ನಪೂರ್ಣಾ ಥಿಯೇಟರಿನಲ್ಲಿ

ತಾರೀಖು ೧೪-೯-೩೭ನೇ ಮಂಗಳವಾರ ರಾತ್ರಿ

ಕಬೀರದಾಸ.

ತಾರೀಖು ೧೯-೯-೩೭ ಭಾನುವಾರ ಸಾಯಂಕಾಲ

ತುಕಾರಾಮ.

ತಾರೀಖು ೨೦-೯-೩೭ ಮಂಗಳವಾರ ರಾತ್ರಿ

ಪ್ರಹ್ಲಾದ.

ತಾರೀಖು ೨೬-೯-೩೭ ಭಾನುವಾರ ಸಾಯಂಕಾಲ

ನಿರುಪಮಾ.

ಎಂಟು ಅಂಕ್ಯಾಟಗಳನ್ನು ಅಭಿನಯಿಸುವರು. ಸರ್ವರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ವಿನೋದ ರತ್ನಾಕರ ಜಿ. ಹೆಚ್. ವೀರಣ್ಣ.
(ವರ್ಸಟೈಲ್ ಕಮೆಡಿಯನ್) ಪ್ರೊಪ್ರೈಟರ್

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ | ಬಿಡಿ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

[illegible] ಧಾರವಾಡ ಸೋಮವಾರ ತಾರೀಖು ೧೨ ನೇ ಸಪ್ಟಂಬರ ೧೯೨೭ | ಸಂಚಿಕೆ ೧೯೬

ಹಂಗಾಮುವು ಮುಗಿಯ ಬಂದಿತು ತ್ವರೆ ಮಾಡಿರಿ.
ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಚನ್ನಾಗಿ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೇದರೆ ಉಕ್ಕಿನ ಕಂಬಗಳ ಚೌಕಟ್ಟು ಚಿತ್ತಾಳಿ ಬೆರಂಗುಗಳು ಇರುವದರಿಂದ ಯಂತ್ರವು ಅಚ್ಚುಕಟ್ಟಾಗಿ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಗಿಂತಲೂ ಇವುಗಳಲ್ಲಿ ಕಾಳು ಬೇಳೆ ಯಾಗುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶಂಡಿಗೆಯು ಅರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ [illegible] ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವವು.

[illegible]

[illegible]

ದಿ ಧಾರವಾಡ ಬ್ಯಾಂಕ ಲಿಮಿಟೆಡ ಧಾರವಾಡ.

—०—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಇಟ್ಟು ಸಾಲ ಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳ [illegible] ಆಗುತ್ತಿರುತ್ತದೆ.

ಎ. ಗ. ಶಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸು.

ನಿಂಗಪ್ಪಾ ಲಕ್ಷ್ಮಪ್ಪಾ ಜೋಗಣ್ಣವರ ಸಾ॥ ದ್ಯಾಗಾನಟ್ಟಿ ತಾ॥ ಗೋಕಾಕ ಹಲ್ಲಿವಸ್ತಿ ಮದಿರೇ ಕಡಬಿ, ಮಹಾಲ ಮುರಗೋಡ ಇವನಿಗೆ-

ಸಿದ್ದವ್ವಾ ಕೋಂ ನಿಂಗಪ್ಪಾ ಜೋಗಣ್ಣವರ ಹಲ್ಲಿವಸ್ತಿ ದೊಡ್ಡವಾಡ ನಾನು ಈ ನೋಟೀಸಿನಿಂದ ತಿಳಿಸುವದೇನಂದರೆ- ನೀನು ನನ್ನ ಮದುವೆಯ ಗಂಡನಿದ್ದು ನಮ್ಮ ಮದುವೆಯಾಗಿ ೮ ೧೦ ವರ್ಷಗಳ ಲಾಗಾಯತ, ನೀನು ನನ್ನನ್ನು ಕರಕೊಂಡು ಹೋಗಲಿಲ್ಲ. ಬಾಳವೆ ಮಾಡಲಿಲ್ಲ. ನಾನು ವ ನಮ್ಮ ಸಂಬಂಧಿಕರು ಎಲ್ಲರೂ ಕೂಡಿ ನಮ್ಮೂರ ನಾಲ್ಕು ಜನ ಸಂಭಾವಿತರ ಕಡಿಂದ ನಿನಗೆ ಬಹಳ ಸಾರೆ ಹೇಳಿ ಕಳಿಸಿದೆವು ಆದರೂ ಸಹ ನೀನು ನನ್ನನ್ನು ಕರಕೊಂಡು ಹೋಗಲಿಲ್ಲ. ನಮ್ಮ ಮನೆಯ ಜನರಿಗೆ ನಾನು ಬೇಸರಾಗಿ ನಮ್ಮೂರ ಬಿಟ್ಟು ಅವರು ನನ್ನನ್ನು ಹೊರಗೆ ಹಾಕಿದರು. ಈಗ ಹಳ್ಳಿ ದೊಡ್ಡವಾಡದಲ್ಲಿ ಉಪಜೀವನ ಮಾಡುತ್ತ ಇದ್ದೇನೆ ನನ್ನ ಹೊಟ್ಟೆಯ ದತಿಂದ ಇವತ್ತಿನ ವರೆಗೂ ಎರಡನೆಯವರ ಕಡಿಂದ ೧೦೦ರೂ. ಸಾಲಾ ತೆಗೆದಿರುತ್ತೇನೆ ಸಾಲಗಾರರ ಉಪದ್ರವ ಬಹಳೇ ಆಗಿರುತ್ತದೆ. ಕಾರಣ ಈ ನೋಟೀಸ ಕೊಡುವ ಭಾಗಬಿತ್ತು. ನೀನು ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ನನ್ನ ಸಾಲಗಾರರ ಸಾಲ ವಗೈರೆ ಎಲ್ಲ ತೀರಿಸಿ ನನ್ನನ್ನು ಕರಕೊಂಡು ಹೋಗಬೇಕು. ಇಲ್ಲದಿದ್ದರೆ ಆ ಸಾಲದ ಬಗ್ಗೆ ವ ಮುಂದಿನ ನನ್ನ ಉಪಜೀವನ ಬಗ್ಗೆ ನಾನು ಎರಡನೆಯವನನ್ನು ಲಗ್ನ ಮಾಡಿಕೊಳ್ಳುತ್ತೇನೆ ಆ ಮೇಲೆ ನನ್ನ ಮೇಲೆ ವ ನನ್ನ ಉಡಿಕೆಯ ಗಂಡನ ಮೇಲೆ ಯಾವ ತಂದ ತಕರಾರು ನಡೆಯಲಿಕ್ಕಿಲ್ಲ ಈ ನೋಟೀಸಿನ ಖರ್ಚು ನಿನ್ನ ಮೇಲೆಯೇ ಇರುತ್ತದೆ ಅಂತಾ ಕೊಟ್ಟ ನೋಟೀಸು.

ತಾ॥ ೧-೯ ೨೭ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಸಿದ್ದವ್ವಾ ಕೋಂ ನಿಂಗಪ್ಪಾ ಜೋಗಣ್ಣವರ [illegible] ದೊಡ [illegible] ಕೈದು ಇವೆ.

ವಿಜಯ.

ಧಾರವಾಡ ತಾ- ೧೨ ೯-೩೭ ನೇ ಇಸ್ವಿ

ದಶಾವತಾರದ ಉತ್ಕ್ರಾಂತಿ ವಿಚಾರಗಳು

ಡಾರ್ವಿನಸಾಹೇಬನು ಮನುಷ್ಯನ ಮೂಲ ಪುರುಷನು ಮಂಗನೆಂದು ಶೋಧ ಹಚ್ಚಿದನು. ಆದರೆ ಹಿಂದೂ ಪುರಾಣಗಳು ಮನುಷ್ಯನ ಪ್ರಾರಂಭವು ಮೀನದಿಂದಾಯಿತೆಂದು ಹೇಳಿ, ದಶಾವತಾರದಿಂದ ಉತ್ಕ್ರಾಂತಿಯನ್ನು ಹೇಳುತ್ತಾ ಬಂದಿರುತ್ತವೆ. ಹಿಂದೂ ಪುರಾಣಗಳೇ ಸತ್ಯವೆನ್ನುವಂತೆ ಲಂಡನದಲ್ಲಿ ಹಾಜನನೆಂಬ ಪ್ರಾಣಿಶಾಸ್ತ್ರವೇತ್ತೆಯನು ವ್ಯಾಖ್ಯಾನ ಕೊಟ್ಟದ್ದನ್ನು ಹೋದ ವಾರದಲ್ಲಿ ಬರೆದಿದ್ದೇವೆ. ಮತ್ಸ್ಯಾವತಾರದಿಂದ ಬೌದ್ಧನ ತನಕ ಮನುಷ್ಯನು ಹೇಗೆ ಉದ್ಧಿಪಂತನಾಗುತ್ತಾ ಹೋದನೆಂಬ ವಿಷಯವನ್ನು ಈ ಊರಲ್ಲಿ ಕೆಲವು ದಿವಸಗಳಿಂದ ದಿನಾಲು ವ್ಯಾಖ್ಯಾನ ಕೊಡುತ್ತಿದ್ದ ಶ್ರೀ ರಾಜವಾಡೆಯವರು ಮೊನ್ನಿನ ದಿವಸ ಅನುವಾದ ಮಾಡಿದರು ಅದರ ಸಾರಾಂಶವನ್ನು ಇದರಡಿ ಕೊಡುತ್ತೇವೆ.

ಮೊದಲು ಪೃಥ್ವಿಯು ಸೂರ್ಯಗೋಲಿನಂತೆ ಧಗಧಗ ಉರಿಯುತ್ತಿತ್ತು. ಭೂಮಿಯ ಹೊಟ್ಟೆಯೊಳಗಿನ ಉಷ್ಣತೆಯು ಇಂದು ಇಲ್ಲದಂತಾದರೆ ಜೀವಪ್ರಾಣಿಗಳು ಬದುಕಲಾರವು. ಭೂಮಿ ಬೇರೆ, ನೀರು ಬೇರೆಯಾದ ಕೂಡಲೆ ಜಲಚರವಾದವು ಆಗ ಮನುಷ್ಯನು ಇರಲೇ ಇಲ್ಲ. ಮೀನವಾಯಿತು. ಪ್ರಾಣವಾಯು ಇದ್ದ ಹೊರತು ಯಾವ ಜೀವವೂ ಬದುಕಲಾರದು. ಈ ವಾಯುವು ನೀರಲ್ಲಿ ಎರಡು ಪಾಲು, ಭೂಮಿಯಲ್ಲಿ ಒಂದು ಪಾಲು [illegible]. ಮೊದಲು ಜಲಚರ, ಪಶು ಮತ್ತು ಪಕ್ಷಿಗಳು ಇದ್ದವು [illegible]. ತಿಮಿತಿಮಿಂಗಲುಗಳು [illegible] ಮುಳುಗುವಷ್ಟು ನೀರು [illegible]. [illegible] ದಲ್ಲಿ ಯಾವದೊಂದು [illegible] ಲಕ್ಷಾವಧಿ ವರ್ಷ [illegible]. ಸೈಬೇರಿಯಾದಲ್ಲಿ [illegible] ಫರ್ಲಾಂಗಿನ [illegible] ಪ್ರಾರಂಭದಲ್ಲಿ ಪ [illegible] ಗಿರುವದಿಲ್ಲ. ಅವುಗಳ ಆಕಾರ ಕಡಿಮೆಯಾಗುತ್ತಾ ಹೋಗಿ, ಮನುಷ್ಯನ ಬುದ್ಧಿಯು ಹೆಚ್ಚುತ್ತಾ ನಡೆದಿರುವದು.

ಮತ್ಸ್ಯಾವತಾರದ ನಂತರ ಕೂರ್ಮಾವತಾರವಾಯಿತು. ನೀರ ಮೇಲೂ ಭೂಮಿಯ ಮೇಲೂ ವಾಸವಾಗುವ ಸ್ಥಿತಿಯುಳ್ಳವನಾಯಿತು. ಮೀನವು ಭೂಮಿಯ ಮೇಲೆ ಬಂದರಾಯಿತು ಅದಕ್ಕೆ ಮರಣವೇ ಬರುತ್ತದೆ ಕೂರ್ಮಾವತಾರದ ನಂತರ ವರಾಹವಾಯಿತು ಆದು [illegible] ದೊಡ್ಡ ದೊಡ್ಡ ವೃಕ್ಷಗಳಿದ್ದವು. ಅಲಂಕಾರ ಭಾಷೆಯಲ್ಲಿ ಹೇಳುವಂತಿಲ್ಲ. [illegible] ಗಗನ ಚುಂಬಿತವಾಗಿದ್ದವು. ಇವು ಸುಟ್ಟು ಇವುಗಳ ಮೇಲೆ ಮಣ್ಣಿನ ಥರ ಕೂತು ಕಲ್ಲಿದ್ದಲಿಯಾಗುತ್ತದೆ. ಭೂಮಿಯ ಮೇಲಿನ ಪ್ರಾಣಿಯು [illegible] ಗಡ್ಡೆಗಳನ್ನು ಕಿತ್ತಿಕೊಂಡು ತಿನ್ನುವದಕ್ಕೆ ಬರುವ ಹಾಗೆ ಬಾಯಿಯ ರಚನೆಯಾಯಿತು ವರಾಹವಾದ ಕೂಡಲೆ ನರಸಿಂಹ. ಅರ್ಧ ಪಶು ಮತ್ತು ಅರ್ಧ ಮನುಷ್ಯ. ನೃಸಿಂಹನ ಜನನವಾದದ್ದು ಯಾವಾಗ. ಸಂಧ್ಯಾಕಾಲದಲ್ಲಿ ಪಶುವಿನಿಂದ ಮನುಷ್ಯನಿಗೆ ರೂಪಾಂತರವಾಗುವಂಥ ಸಂಧಿಕಾಲ. ನೃಸಿಂಹನಿಂದ ವಾಮನಾವತಾರವಾಯಿತು ವಾಮನನು ಗಿಡ್ಡನು ಆದರೆ [illegible] ದೊಡ್ಡವನಾಗುವದು ಹೇಗೆ? ವಾಮನನೆಂದ ಕೂಡಲೆ- ಗಿಡ್ಡನೆಂದು ಇಂದಿಗೂ ಮನಸ್ಸಿನಲ್ಲಿ ವಿಚಾರ ಬರುತ್ತದೆ. ವಾಮನನಾದವನು ಆತ್ಮರಕ್ಷಣೆ ಮಾಡಿಕೊಳ್ಳುವದು ಹೇಗೆ ಹಿಂಸ್ರ ಪಶುಗಳೇನು ಕಡಿಮೆ. ಆದ್ದರಿಂದ ಪರಶುರಾಮಾವತಾರವಾಯಿತು. ಪರಶು ಅಂದರೆ ಕೊಡ್ಲಿ ಇದನ್ನು ಸಹಜವಾಗಿ ಮಾಡಬಹುದು. ಅದಕ್ಕೆ ಬಹಳ ಬುದ್ಧಿ ಬೇಕಾಗಲಾರದು. ಕಲ್ಲು ಚೂಪ ಮಾಡಿ, ಕಟ್ಟಿಗೆಗೆ ಚುಚ್ಚಿ, ಒಂದು ಆಯುಧವನ್ನು ಸಹಜವಾಗಿ ಮಾಡಿಕೊಳ್ಳಬಹುದು. ಕೊಡ್ಲಿಯ ಉಪಯೋಗವು ವೈರಿಯು ತೀರ ಹತ್ತರ ಬಂದರೇ. ವೈರಿಯು ದೂರದಲ್ಲಿರುವಾಗಲೇ ಹೊಡೆಯುವ ಸಾಧನ ಬೇಕಾಯಿತು. ಏಕೆಂದರೆ- ಇದು ಆತ್ಮರಕ್ಷಣೆಯ ಹೆಚ್ಚು ಸುಲಭ ಉಪಾಯವು ಆಗ ರಾಮಾವತಾರವಾಯಿತು ಬಿಲ್ಲು ಬಾಣವಾಯಿತು ಪರಶುರಾಮ- ರಾಮರಿಗೆ ಯುದ್ಧವಾಗಿ, ಪರಶುಧಾರಿಯು ಧನುರ್ಧಾರಿಗೆ ಸೋಲುವದು ಸಹಜವಾದದ್ದು.

ರಾಮಾವತಾರವು ರಾಮರಾಜ್ಯವೆನಿಸುವಷ್ಟು ಆನಂದಕಾರಕವಾಗುವಷ್ಟು ಸಂತೋಷ ಪ್ರದವು. ಪರಶುರಾಮ ಮತ್ತು ರಾಮನ ನಡುವೆ ಮನೋವಿಕಾರ ಮತ್ತು ಆತ್ಮ ಸಂಯಮನದಲ್ಲಿ ಪರಸ್ಪರ ವಿರುದ್ಧವಾದದ್ದು ಪರಶುರಾಮನು 'ಜಮದಗ್ನಿಯ ಮಗನು. ಬೆಳೆಯ(?) ಕಂಡ. ತಂದೆಯು ಅಪ್ಪಣೆಯಾದ ಕೂಡಲೆ, ತಾಯಿಯನ್ನು ಕೊಂದನು. ವಿಚಾರವಿಹಿತವೇ ಇಲ್ಲ; ಆದರೆ ರಾಮನನ್ನು ನೋಡಿರಿ. ಆತನು ತಂದೆಯ ಆಜ್ಞೆ ಮನ್ನಿಸಿದನು. ಮಲತಾಯಿಯ ಆಜ್ಞೆ ಮೀರಲಿಲ್ಲ. ವನವಾಸಿಯಾಗಿ ದುಃಖ ಪಟ್ಟನು. ಹೆಂಡತಿ ಕಳಕೊಂಡನು. ಯುದ್ಧ ಮಾಡಿ ಹೆಂಡತಿಯನ್ನು ಸಂಪಾದಿಸಿದನು. ಪುನಃ ಲೋಕಾಪವಾದಕ್ಕಾಗಿ [illegible] ಮನೆಯಿಂದ ಹೊರಡಿಸಿಕೊಂಡನು ಆದರೂ ರಾಮನು ಸತ್ಯಪ್ರತಿಜ್ಞ. [illegible] ದೊರೆತನವು ಜಗತ್ತಿಗೇ ಆದರ್ಶವಾಗಿ ರಾಮರಾಜ್ಯವೆಂದರಾಯಿತು. ಪ್ರಜಾ [illegible] ಸೌಖ್ಯ.

ರಾಮಾವತಾರದ ನಂತರ ಕೃಷ್ಣಾವತಾರ ನೋಡಿರಿ [illegible]. ರಾಮಜನ್ಮವಾದ ದಿವಸ [illegible] ತುಂಬ ಸಂತೋಷ ಕೃಷ್ಣನು ಹುಟ್ಟಿದ [illegible] ಹೇಳುವರು ಕೂಡ ಕಷ್ಟ. [illegible] ಲ್ಲಿ. ರಾಮನು [illegible] ಕೃಷ್ಣನು ಕೃಷ್ಣ ಪಕ್ಷದ [illegible] ಯಲ್ಲಿ ಹುಟ್ಟಿದನು, ಚಂದ್ರ [illegible]! [illegible] ತಕ್ಕೊಂಡು ಮಹಾಜಲ ದಾಟಿ. [illegible] ಇವು ನನ್ನ [illegible]. [illegible] ಹೇಳಬೇಕಾಯಿತು. ಕಂಸ ವಧ [illegible] ಕೃಷ್ಣನು ಸಾಧಾರಣ ಸ್ಥಿತಿಯಲ್ಲಿದ್ದನು. ಈ ವಧದ ನಂತರ ಸರ್ವೈಶ್ವರ್ಯ ಮತ್ತು ಸಕಲ ಸುಖೋಪಭೋಗಗಳನ್ನು ಅನುಭವಿಸಿದನು. ರಾಮನು ಸ್ವತಃ ರಾಜ್ಯವಾಳಿದರೆ ಕೃಷ್ಣನು ಧರ್ಮರಾಜನಿಂದ ರಾಜ್ಯಪಾಲನೆ ಮಾಡಿಸಿದನು. ರಾಮನಿಗೆ ರಾಜಕಾರಣ ಮತ್ತು ಧರ್ಮಶಾಸ್ತ್ರ ಹೇಳುವದಕ್ಕೆ ವಸಿಷ್ಠರು ಬೇಕಾದರು ಆದರೆ ಶ್ರೀ ಕೃಷ್ಣನು ಸ್ವತಃ ಧರ್ಮಶಾಸ್ತ್ರ ಹೇಳಿದನು. ರಾಮನ ಕಯ್ಯಲ್ಲಿ ಒಂದೇ ಬಾಣ, ಕೃಷ್ಣನಲ್ಲಿ ಗದಾ, ಪದ್ಮ, ಸುದರ್ಶನ ಮುಂತಾದ ಹಲವು ಪ್ರಕಾರದ ಆಯುಧಗಳು. [illegible] ಕಾಲದ ಜಾಮಗಿಯ(?) ಬಂದೂಕಿನಂತೆ ರಾಮನ ಯುದ್ಧೋಪಕರಣ. ಮಿನಿಟಿಗೆ ನೂರಾರು ಗುಂಡುಗಳು ಹಾರುವಂಥ ಮಶಿನ ಗನ್ನಗಳಂತೆ ಕೃಷ್ಣನ ಆಯುಧಗಳು. ರಾಮನಿಗೆ ಸೀತೆಯೊಬ್ಬಳೇ ಹೆಂಡತಿ, ಕೃಷ್ಣನಿಗೆ ಎಷ್ಟು ಬೇಕಾದಷ್ಟು ಜನರು. ರಾಮನ ಆಯುಷ್ಯವು ಕಷ್ಟದಲ್ಲಿ ಹೋಯಿತು. ಕೃಷ್ಣನಿಗೆ ಕಷ್ಟವೆಂಬದು ಗೊತ್ತೇ ಆಗಲಿಲ್ಲ. ರಾಮನ ಹೆಂಡತಿಯನ್ನು ರಾವಣನು ಕದ್ದೊಯ್ದನು. ಕೃಷ್ಣನು ರುಕ್ಮಿಣಿಯನ್ನು ಹರಣ ಮಾಡಿದನು. ರಾಮನು ಏಕವಚನಿಯು, ಕೃಷ್ಣನು ಹಾಗಲ್ಲ ಹೊತ್ತು ಬಂದಂತೆ ವಿಚಾರ ಬದಲಿಸುವ ಯುಕ್ತಿಯು(?). ರಾಜಕಾರಣಪಟು. ರಾಮನು ಸ್ವರ್ಗಕ್ಕೆ ಹೋಗುವಾಗ

ಇಡೀ ಅಯೋಧ್ಯೆಯ ವಾಸಿಗಳನ್ನು ಕರಕೊಂಡು ಹೋದನು. ಕೃಷ್ಣನು ಅಷ್ಟೈಶ್ವರ್ಯ ಭೋಗಿಸಿದರೂ, ಅನಾಥನಂತೆ ವ್ಯಾಧನ ಕಯ್ಯಿಂದ ಕೊಲ್ಲಿಸಿಕೊಂಡನು. ಅರ್ಜುನನು ಹತ್ತರವೇ ಇದ್ದನು ಆದರೂ ಕೃಷ್ಣನನ್ನು ಉಳಿಸಿಕೊಳ್ಳುವದಾಗಲಿಲ್ಲ. ಈ ಮುಂಚೆ ಯಾದವರೆಲ್ಲರೂ ನಾಶವಾಗಿ ಹೋದರು.

ಕೃಷ್ಣಾವತಾರದನಂತರ ಬೌದ್ಧಾವತಾರವಾಯಿತು. ಜಗತ್ತು ಮಿಥ್ಯಾ ಸಂಸಾರದಲ್ಲಿ ಅರ್ಥವಿಲ್ಲ; ಎಲ್ಲವೂ ದುಃಖಮಯವಾದದ್ದೆಂದು ಹೇಳಲ್ಪಟ್ಟಿತು. ಕೃಷ್ಣಾವತಾರದ ಸುಬೋಧಗಳಿಗೆ ತೀರ ವಿರುದ್ಧವಾದ ಕೃತ್ಯಗಳೂ ವಿಚಾರಗಳೂ. ಮನುಷ್ಯನು ಗಜಗಾತ್ರನಾಗಿ ಬೆಳೆಯುತಿದ್ದರೂ, ಆತನ ಬುದ್ಧಿಯು ಅದ್ಭುತವಾಗಿ ಬೆಳೆದು, ಪಂಚ ಮಹಾಭೂತಗಳನ್ನು ವಶ ಮಾಡಿಕೊಂಡಿರುತ್ತಾನೆ.

ಮುನಿಸಿಪಾಲ ಮೆಂಬರರು
ಸಮಿತಿ ಬಿಟ್ಟು ಹೋದರು.

—o—

ಲಖನೌದಲ್ಲಿ ಮ್ಯುನಿಸಿಪಾಲಿಟಿಯವರು ಅಮೀನಬಾದ ಪಾರ್ಕೆಂಬ ಉದ್ಯಾನದಲ್ಲಿ ಮುಸಲಮರಿಗೆ ಧಾರ್ಮಿಕ ಸಭೆಗಳನ್ನು ಕೂಡಿಸಲು ಸಮ್ಮತಿ ಕೊಡದ್ದರಿಂದ ಕಮಿಟಿಯಲ್ಲಿದ್ದ ಎಲ್ಲ ಮೆಂಬರರು ರಾಜೀನಾಮೆ ಕೊಟ್ಟು, ಕಮಿಟಿ ಬಿಟ್ಟು ಎದ್ದು ಬಂದರು.

ಸ್ವರಾಜ್ಯ ಮೆಂಬರರು
ಅಸೆಂಬ್ಲಿಗೆ ಶರಣು ಹೊಡೆದರು.

—o—

ಇವತ್ತಿನ ಮುಸಲಮಾನರ ವಿಚಾರವು ತಮ್ಮ ಸಾಂಪತ್ತಿಕ ಸ್ಥಿತಿಯು ಹೇಗೆ ಸುಧಾರಿಸುವದೆಂದಿರುವದಿಲ್ಲ. ಮುಸಲಮಾನರು ಸ್ವಧರ್ಮದಲ್ಲಿ ನಂಬಿಗೆಯುಳ್ಳವರಾಗಿ ಹೇಗೆ ಐಕ್ಯದಿಂದ ನಡೆಯುವರೆಂಬದಾಗಿರುತ್ತದೆ. ಪಂಜಾಬದಲ್ಲಿ ಮುಸಲಮಾನರ ಪ್ರಮಾಣವು ನೂರಕ್ಕೆ ೫೫ ರಷ್ಟುಂಟು. ಆದರೂ ತಮಗೆ ಹಿಂದೂ ಜನರಿಂದ ಹಿಂಸೆಯಾಗುತ್ತದೆಂದು ಇವರು ಹೇಳುವದನ್ನು ಕೇಳಿ ನನಗೆ ದುಃಖವಾಗುತ್ತದೆ. ಈ ಪ್ರಕಾರ ತಕರಾರು ಮಾಡುವದು ಇಸ್ಲಾಮು ಧರ್ಮದ ಅಪಮಾನ ಮಾಡಿದಂತಾಗುತ್ತದೆ. ಮುಸಲಮಾನರು ಯಾವಾಗಲು ಶಾಂತತಾಪ್ರಿಯರಾಗಿದ್ದು, ಶಾಂತತಾಭಂಗವನ್ನು ಆದಷ್ಟು ದೂರೀಕರಿಸತಕ್ಕದ್ದು. ದುರ್ದೈವದಿಂದ ಬಾಣ ಬರ್ಚಿಗಳ ಪೆಟ್ಟು ತಿನ್ನುವ ಪ್ರಸಂಗ ಬಂದರೆ ಎದೆ ಮುಂದೆ ಮಾಡಿ, ಅವುಗಳ ಪೆಟ್ಟು ತಿನ್ನಬೇಕಲ್ಲದೆ, ಬೆನ್ನು ತೋರಿಸಿ ಹೇಡಿಗಳಂತೆ ವರ್ತಿಸಬಾರದು. ಬಹುಸಂಖ್ಯಾಕರಾದ ಮುಸಲಮಾನರಾದ ನೀವು ಬೇರೆ ಇಲಾಖೆಗಳಲ್ಲಿರುವ ಅಲ್ಪ ಸಂಖ್ಯಾಕರಾದ ನಿಮ್ಮ ಬಂಧುಗಳಿಗೆ ಒಳ್ಳೇ ಉದಾಹರಣೆ ಹಾಕಿ ತೋರಿಸುವದಿಲ್ಲೆಂಬದು ದುಃಖದ ಮಾತು. ರಂಗೀಲ ರಸೂಲದ ಪ್ರಕಾಶಕನ ಮೇಲೆ ದಯೆದೋರಿರಿ ಮತ್ತು ಆತನು ಇಸ್ಲಾಮು ಧರ್ಮದೀಕ್ಷೆ ತಕ್ಕೊಳ್ಳುವಂತೆ ದೇವರನ್ನು ಪ್ರಾರ್ಥಿಸಿರಿ.

———

ಬೆಂಕಿ ಆರ್ದ ಹಾರಿದೆ–

ಅಲಹಾಬಾದಿನಲ್ಲಿಯೂ ಹಿಂದೂ ಮುಸಲಮಾನರ ನಡುವೆ ಬೆಂಕಿಯು ಆರ್ದ ಹಾರಿದೆ. ಹಿಂದೂ ಜನರು ಮಸೀದೆಗಳ ಮುಂದೆ ದೊಡ್ಡ ವಾದ್ಯಗಳನ್ನು ಬಾರಿಸಬಾರದು. ವೀಣೆ ಮೃದಂಗ ಶತಿ ಮುಂತಾದ್ದನ್ನು ಬಾರಿಸಬಹುದೆಂದು ಮುಸಲಮಾನರು ಹೇಳುವರು. ಇದೊಂದಕ್ಕೂ ಹಿಂದೂ ಜನರು ಒಪ್ಪಿಗೆ ಕೊಡಲಿಲ್ಲ. ಕಲಹವು ಭುಗಿಭುಗಿಸುತ್ತಿರುವದು.

———

ಅಪ್ರಿಯ ಪೋಲೀಸರು–

ಕಾನಪೂರದಲ್ಲಿ ಹಿಂದೂ ಮುಸಲಮಾನ ದಂಗೆಯು ಅಮಾನುಷ ಕೃತ್ಯವೆನಿಸುವಂತಾಯಿತು. ದಂಗೆಯ ಉಪಶಮನ ಮಾಡುವ ಕೆಲಸದಲ್ಲಿ ಪೋಲೀಸರು ಅಜಾಗರೂಕತೆಯನ್ನು ತೋರಿಸಿದರು. ಮತ್ತು ಈಗಿನ ಪೋಲೀಸ ಅಧಿಕಾರಿಯು ನಾಗರಿಕರ ವಿಶ್ವಾಸವನ್ನೇ ಕಳಕೊಂಡಿದ್ದಾನೆ. ದಸರೆಯ, ರಾಮಲೀಲಾ ಉತ್ಸವ ಪ್ರಾರಂಭವಾಗುವದರೊಳಗಾಗಿ ಈತನಿಗೆ ವರ್ಗ ಮಾಡಬೇಕೆಂದು ಅಲ್ಲಿಯ ವ್ಯಾಪಾರ ಸಂಘದವರು ಠರಾವು ಮಾಡಿ, ಆ ಪ್ರಕಾರ ಅಲ್ಲಿಯ ಗವ್ಹರ್ನರಸಾಹೇಬರಿಗೆ ತಿಳಿಸಿದ್ದಾರೆ.

———

ಮೋಟಾರದ ಭಯಂಕರ ಅಪಘಾತ.

—೦—

ಆರು ಜನರು ಮರಣೋನ್ಮುಖರಾದರು.

—೦—

ಚಿಂಗಲಪೇಟಿನಿಂದ ಮದ್ರಾಸಕ್ಕೆ ಬರುತ್ತಿರುವ ಒಂದು ಪ್ರಯಾಣಿಕರ ಮೋಟಾರು ಒಂದು ಪೂಲಿನ ಮೇಲೆ ಬರುತ್ತಿರುವ ಎತ್ತಿನ ಬಂಡಿಗೆ ಹಾಯ್ದು, ಮೋಟಾರು ನದಿಯಲ್ಲಿ ಬಿದ್ದು ಮೋಟಾರು ಪುಡಿಯಾಯಿತು. ಎತ್ತು ಸತ್ತವು. ಆರು ಜನರು ಮರಣೋನ್ಮುಖರಾಗಿದ್ದಾರೆ.

———

ಒಬ್ಬ ದೊಡ್ಡ ಸಾಹೇಬನು ಹಿಂದೂ ಆದನು

—೦—

ಸರ್ವಾಧಿಪತಿಯಾಗಿದ್ದ ಲಾರ್ಡ ಡಫರಿನಸಾಹೇಬರ ವಂಶಸ್ಥನೂ ಚಕ್ರೋಟಿನಲ್ಲಿ ಕಲೆಕ್ಟರರಾಗಿದ್ದ ಲಾಫನು ಸಾಹೇಬರ ಚಿರಂಜೀವನೂ ಆಗಿರುವ ಡಿ. ಎ. ಟಮನ್ನನೆಂಬಸಾಹೇಬನು ಆಯರಿಶ ಕುಲದವನು. ಈತನು ಲಂಡನ ಯುನಿವರ್ಸಿಟಿಯ ಪದವಿಧರನು. ಇಂಥ ದೊಡ್ಡ ವಂಶ ಮತ್ತು ದೊಡ್ಡ ವಿದ್ಯೆಯುಳ್ಳ ಈ ಸಾಹೇಬನು ಮುಂಬಯಿಯಲ್ಲಿ ಹಿಂದೂ ಧರ್ಮ ಸ್ವೀಕಾರ ಮಾಡಿ, ಪಂಡಿತ ಸತ್ಯಾನಂದನೆಂಬ ಹೆಸರು ಇಟ್ಟುಕೊಂಡಿದ್ದಾನೆ. ಈ ರೀತಿ ಹಿಂದೂ ಧರ್ಮ ಸ್ವೀಕಾರ ಮಾಡಿದ ಮೇಲೆ, ಖಾದಿಯ ಅರಿವೆ ತೊಟ್ಟು, ಗಾಂಧಿ ಟೊಪ್ಪಿಗೆ ಹಾಕಿ, ನಿಜಾಂತ ಸ್ವದೇಶಿಯಾಗಿದ್ದಾನೆ.

———

ಮುಸಲಮಾನನ ಧರ್ಮಾಂತರ–

ಲಾ ಫಕಿ ಸಾಹೇಬನೆಂಬ ಅಮೇರಿಕನನಾದ ಒಬ್ಬ ಮುಸಲಮಾನಸಾಹೇಬನು ತನ್ನ ಹತ್ತು ವರ್ಷದ ಮಗನೊಂದಿಗೆ ಹಿಂದೂ ಧರ್ಮ ಸ್ವೀಕಾರ ಮಾಡಿದ್ದಾನೆ.

———

ಸೊಂಡೂರಿನ ಪಟ್ಟಾಧಿಕಾರ–

ಸೊಂಡೂರಿನ ರಾಜರು ಪ್ರಕೃತ ಸ್ವರ್ಗವಾಸಿ ದಿ ಪರಲೋಕವಾಸಿಯಾದರು. ಬಹಳೋಮೆಯ ಒ

ಅಪಮಾನವೆನಿಸುವಂಥ ಕಟ್ಟಳೆಯನ್ನು ಹೇಳಿದ್ದರಿಂದ ಹಿಂದೂ ಜನರು ಗಣಪತಿಯ ಮೆರವಣಿಗೆ ತೆಗೆಯಲಿಲ್ಲ. ಮತ್ತು ಅಂದು ಹರತಾಳ ಮಾಡಿ, ಎಲ್ಲ ವ್ಯವಹಾರವನ್ನ ಬಂದಿಟ್ಟಿದ್ದರು.

ಮುಂಬಯಿಯ ವರ್ತಕರಾದ ತುಳಸೀದಾಸ ಮೊರಾರಜೀಯವರ ಕೋಳಿಯು ಬುಧದಲ್ಲಿ ಹೊನ್ನು ಅಥವಾ ಹಣ್ಣಿನ ಸಂಶಯು ವೃತ್ತವಾಗಿದೆ. ಇದೊಂದು ಬಾವಲಿ ಕೋಳಿಯ ಎಂಡನೆಯ ಅನೃತ್ತಿಯಾಗುವದೆಂದು ಜನರು ಅನ್ನುತ್ತಿದ್ದಾರೆ.

ಜಾಹೀರ ನೋಟೀಸು

ರಾ. ಶಿವಪ್ಪಾ ತಂದಿ ಯಲ್ಲಪ್ಪಾ ಪೂಜಾರ ಸಾಕೀನ ಬಂಕಾಪೂರ ಇವರಿಗೆ–

ಕೆಳಗ ಸಹಿ ಮಾಡುವವನು ಈ ನೋಟೀಸಿನ ಮೂಲಕ ತಿಳಿಸುವದೇನಂದರೆ–

ನೀನು ತಾರೀಖು ೧೧-೮-೧೯೩೭ನೇ ಇಸ್ವಿ ದಿವಸಾ ಲೋಕಮತ ಪತ್ರಿಕೆಯಲ್ಲಿ ಕೊಟ್ಟ ಜಾಹೀರ ನೋಟೀಸು ನೋಡಿದೆ ನೀನು ಹೋದ ಸಾಲಿಗೆ ಪೂಜಾರ ಪಾಳಿ ನಮ್ಮ ಪೈಕಿ ಬಸಲಿಂಗಪ್ಪಾ ಈತನ ಕಡಿಂದ ತೆಗೆದುಕೊಂಡೀದಿ ಆ ಕಾಲಕ್ಕೆ ಏನೇಕ ದೇವರ ಎನಿಯೋಗದ ಸಾಮಾನು ಕೊಟ್ಟಿಲ್ಲಾ. ಅಂತಾ ಅನ್ನುವ ಕಾರಣ ಈಗ ನಿನ್ನ ಪಾಳಿ ಮುಗಿದು ನನಗೆ ಬಿಟ್ಟು ಕೊಡುವ ಸುಮಾರಿಗೆ ಮಾಡುತೀದಿ ಮತ್ತು ದೇವರ ಏನಿಯೋಗದ ಸಾಮಾನು ನೀವು ಕೊಟ್ಟರೆ ಮುಂದಿನ ಪಾಳೆದಾರನಿಗೆ ಒಪ್ಪಿ ಕೊಡತೇನೆ ಅಂತಾ ಬರದೀದಿ ಇದರಲ್ಲಿ ಏನೇ ಒಂದು ದುಷ್ಟ ಇರಾದೆ ಅದೆ ಅಂತಾ ತಿಳೀತದೆ ಮತ್ತು ಶ್ರೀ ದೇವರ ಗುಡಿ ದುರಸ್ತ ವ ತೇರಿನ ದುರಸ್ತ ಈ ಕೆಲಸಗಳು ಭೋಕಿ ನಿಮ್ಮ ತಂದಿ ವ ನಾವೆಲ್ಲರೂ, ಕೂಡಿ ಭಕ್ತ ಮಂಡಳಿಯಿಂದ ವರ್ಗಣಿ ಹಣಾ ಕೂಡಿಸಿ ಮಾಡಿಸಿರತೇವೆ ಹೀಗಿದ್ದು ನಿಮ್ಮ ತಂದಿ ಒಬ್ಬನೇ ಗುಡಿ ದುರಸ್ತ ಮಾಡಿಸಿಂತಾನೆ ಈ ಬಾಬತು ನಿಮ್ಮ ಕಡಿಂದಾ (೩೦೦) ರೂಪಾಯಿ ಬರತಕ್ಕದ್ದದೆ. ಅಂತಾ ಸುಳ್ಳು ಮಜಕೂರು ಬರದೀದಿ ಮತ್ತು ನೀನು ಖಾತೇದಾರನು ಅಲ್ಲಾ ಹೀಗಿದ್ದು ನಾನು ಖಾತೇದಾರನು ಇರತೇನೆ ನನ್ನ ಲುಕ್ಸಾನ ಆದೆ ಅಂತಾ ಸುಳ್ಳು ಬರದೀದಿ ಈ ಯಲ್ಲಾ ನೋಡಿದರೆ ನೀನು ಕೊಟ್ಟ ನೋಟೀಸು ಆಧುಕ್ತ ಸುಳ್ಳು ವ ನಡತಲಬೇದು ಅದೆ ಈ ನೋಟೀಸಿನಿಂದ ನನಗೆ ಆಗಿದ್ದ ಹಕ್ಕು ಬಾಧ್ಯತೆಗೆ ಯಾವದೇ ಥರದಿಂದ ಅತಂಕ ಬರಲಾರದು ತಿಳಿಯೋದು ತಾರೀಖು ೧೬-೯-೩೭

ಮರಿಗೆಪ್ಪಾ ತಂದಿ ಕಲ್ಯಾಣಪ್ಪ ಪೂಜಾರ ಸಾ. ಬಂಕಾಪೂರ

ಮೂರು ಆಟಗಳು ಮಾತ್ರ.

ಈ ಊರಿಗೆ ಪ್ರಥಮ ಆಗಮನ-

ಹೊಸ ಸಿನರಿ! ಹೊಸ ಉಡುಪು! ಅಪೂರ್ವ ಸಮಯ!!

ಮೈಸೂರು ಶ್ರೀಮನ್ಮಹಾರಾಜರವರ ಕೃಪಾಪೋಷಣೆಗೆ ಒಳಪಟ್ಟು ಮೈಸೂರು ದೇಶದ ಎಲ್ಲಾ ಸ್ಥಳಗಳಲ್ಲಿಯೂ, ಕೊಡಗು, ಮದ್ರಾಸು, ಮತ್ತು ದಕ್ಷಿಣ ಮಹಾರಾಷ್ಟ್ರ, ಬಳ್ಳಾರಿ ಅನಂತಪೂರ, ಮಂಗಳೂರು ಪ್ರಾಂತಗಳಲ್ಲಿಯೂ ಹುಬ್ಬಳ್ಳಿ ಗದಗ ಮೊದಲಾದ ಬೊಂಬಾಯಿ ಪ್ರಾಂತಗಳಲ್ಲಿಯೂ ಸಂಚರಿಸಿ ವಿಶೇಷ ಬಹುಮಾನಗಳನ್ನೂ, ಭಂಗಾರದ ಪದಕಗಳನ್ನೂ ಮೆಡಲ್ಸ್‌ಗಳನ್ನೂ ಪಡೆದು ಸುಪ್ರಸಿದ್ಧಿಯನ್ನು ಹೊಂದಿರುವ

ವಿನೋದ ರತ್ನಾಕರ ಜಿ. ಹೆಚ್. ವೀರಣ್ಣನವರ

ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ

ಸಂಘದವರು

ಧಾರವಾಡ ಅನ್ನಪೂರ್ಣಾ ಥಿಯೇಟರಿನಲ್ಲಿ

ತಾರೀಖು ೧೯-೯-೩೭ ಭಾನುವಾರ ಸಾಯಂಕಾಲ

ಪ್ರಮೀಳಾ.

ತಾರೀಖು ೨೧-೯-೩೭ ಮಂಗಳವಾರ ರಾತ್ರಿ

ಪ್ರಹ್ಲಾದ.

ತಾರೀಖು ೨೬-೯-೩೭ ಭಾನುವಾರ ಸಾಯಂಕಾಲ

ನಿರುಪಮಾ.

ಎಂಬ ಆಖ್ಯಾನಗಳನ್ನು ಅಭಿನಯಿಸುವರು. ಸರ್ವರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಧಾರವಾಡ ಸೋಮವಾರ
ತಾ|| ೧೬-೯-೧೯೩೭

ವಿನೋದ ರತ್ನಾಕರ ಜಿ. ಹೆಚ್. ವೀರಣ್ಣ.
(ವರ್ಸಟೈಲ್ ಕಮೆಡಿಯನ್) ಪ್ರೊಪ್ರೈಟರ್

ಜಾಹೀರ ನೋಟೀಸು.

ಸವದತ್ತಿ ಎಲ್ಲಮ್ಮಾ ಮ್ಯುನಿಸಿಪಾಲಿಟಿ ಕಚೇರಿಯಿಂದಾ ಯಾವತ್ತು ಜನರಿಗೆ ತಿಳಿಸುವದೇನಂದರೆ:—

ಶ್ರೀ ಯಲ್ಲಮ್ಮನ ಗುಡ್ಡಕ್ಕೆ ಬರುವ ಯಾತ್ರಿಕರ ಮೇಲಿನ ವಸೂಲ ಮಾಡುವ ತಲೆಪಟ್ಟಿ ಗಾಡಿ, ಮೋಟಾರ ಮತ್ತು ಜನಾವರಗಳ ಮೇಲೆ ವಸೂಲ ಮಾಡುವ ಕರ ಇವುಗಳ ಮಕ್ತಾ ಭಾದ್ರಪದ ಕೃ ೩೦ ಹನ್ನೆರಡು ಘಂಟೆ ರಾತ್ರಿಯಿಂದ ಮಾರ್ಗಶೀರ್ಷ ಕೃ ೩೦ ರಾತ್ರಿ ಹನ್ನೆರಡು ಘಂಟೆಯವರೆಗೆ. ಅಂದರೆ ತಾರೀಖು ೨೫—೯—೩೭ ಯಿಂದಾ ೨೪—೧೨—೩೭ ಮೂರು ತಿಂಗಳ ಮಟ್ಟಿಗೆ ತಾರೀಖು ೧೯—೯—೩೭ ಹಸವಿ ಮಧ್ಯಾನ್ನ ೩ ಘಂಟೆಕ್ಕೆ ಉಘಡ ರೀತಿಯಿಂದಾ ಮ್ಯುನಿಸಿಫಲ ಆಫೀಸಿನಲ್ಲಿ ಲಿಲಾವ ಮಾಡಿ ಕೊಡುವದರಲ್ಲಿ ಬರುವದು. ಸವಾಲಿನಲ್ಲಿ ಬೇಡತಕ್ಕವರು ತಾಲೂಕ ಅಮಲದಾರರ ಕಡಿಂದಾ ಲಾಯಖಿ ಸರ್ಟಿಫಿಕೇಟು ತಗೊಂಡು ಹಾಜರ ಇರಬೇಕು. ಮತ್ತು ಲಿಲಾವ ಪ್ರಾರಂಭವಾಗುವ ಪೂರ್ವದಲ್ಲಿ ಕಮಿಟಿ ಮುಂದೆ ಹಾಜರ ಮಾಡಬೇಕು. ಇಲ್ಲದಿದ್ದರೆ ಅವರ ಸವಾಲ ತೆಗೆದುಕೊಳ್ಳುವದು ಕಮೀಟಿಯ ಮರ್ಜಿಯ ಮೇಲೆ ಅವಲಂಬಿಸಿರುತ್ತದೆ. ಅಖೈರ ಸವಾಲು ಮಂಜೂರಾದ ಕೂಡಲೆ ಮಂಜೂರಾದ ರಕಮಿನ ೧/೪ ರಕಮು ಡಿಪಾಜಿಟ ಕರೀಖು ಆಗಾವ ಹಾಜರ ಮಾಡಬೇಕು. ಹೊರತಾಗಿ ಮಂಜೂರಾದ ರಕಮಿಗೆ ತಾಲೂಕ ಅಮಲದಾರ ಕಡಿಂದಾ ಲಾಯಖಿ ಸರ್ಟಿಫಿಕೇಟ ಪಡಕೊಂಡಂಥ ಯಂದು ಜನರನ್ನು ಜಾಮೀನ ಕೊಟ್ಟು ಕರಾರಗಳಿಗೆ ಅನುಸರಿಸಿ ಯೋಗ್ಯ ಸ್ಟಾಂಪಿನ ಮೇಲೆ ಕಬೂಲಾಯತಿ ಬರಕೊಡಬೇಕು. ಶರ್ತ ಯಾದಿ ಲಿಲಾವಿನ ಕಾಲಕ್ಕೆ ಓದಿ ಹೇಳುವದರಲ್ಲಿ ಬರುವದು. ತಿಳಿಯೋದು. ತಾರೀಖು ೧೫—೯—೩೭ ಇಸ್ವಿ

R. G. NARGUND
Secretary.

G. M. KALADIGI,
President,
S. Y Municipality

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿ ಮುದ್ರಿಸಿಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ಸಿಕ್ಕ ಸತ್ರ — ಬೆಲ ಅರ್ಧಾಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಶುಕ್ರವಾರ ತಾರೀಖು ೧೬ನೇ ಸಪ್ಟಂಬರ ೧೯೨೭ (ಸಂಚಿಕೆ ೧೯

ಹಂಗಾಮುವು ಮುಂಗಿಯ ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಚನ್ನಾಗಿ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಖ್ಯಾತಿ ಯುಂಟು. ಇವುಗಳ ವೈಶಿಷ್ಟ್ಯವೇದರೆ ಉಕ್ಕಿನ ಕಂಬಗಳ ಚೌಕಟ್ಟು ಹಿತ್ತಾಳೆ ಬೇರಿಂಗುಗಳು ಇರುವದರಿಂದ ಯಂತ್ರವು ಅಚ್ಚುಕಟ್ಟಾಗಿ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಂತಲೂ ಇವುಗಳಲ್ಲಿ ಕಾಳು ಬೇಳೆ ಯಾಗುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಡಿಪಾರ್ಟಮೆಂಟಿನಿಂದ ಮಂಜೂರಾದ

ಕನ್ನಡ ನಿಬಂಧರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟದ್ದಲ್ಲದೆ, ರಿಪೋರ್ಟ- ಅರ್ಜಿ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ— ೧ ರಾ. ರಾ ಬಿ ಜಿ ವಿವೇಕರ,

ಸಾಧನಕೇರಿ, ಧಾರವಾಡ

೨ ರಾ. ರಾ. ಎ. ಆರ್ ಶಿವನಾಗಪ್ಪ

ವಸ್ತ್ರದ ಅಂಗಡಿ ಹುಬ್ಬಳ್ಳಿ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಚಾಲು ಖಾತೆ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯುವವು. ಕಾಯಮು ಠೇವುಗಳಿಗೆ ಚನ್ನಾಗಿ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ೬ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಿಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಕನ್ನೆರಡು ಆಣೆಯಂತಿರುತ್ತದೆ.

ಎ. ಕ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ಸಿಕ್ಕ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರು.
೬ „	೭—೦—೦ ರು.
೪ „	೪—೦—೦ ರು.
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರು.

ವಿಶೇಷ ಮಾಹಿತಿ ಬೇಕಾದ ಬಗ್ಗೆ

ಮ್ಯಾನೇಜರ ವಿಜಯ ಕಾರ್ಯಾಲಯ

ವಿಜಯ.

ಧಾರವಾಡ ತಾ-೧೬-೯-೨೭ ನೇ ಇಸ್ವಿ

ಬಸವಿ ಬಿಡಬಾರದು
ಮತ್ತು
ಸೂಳೆತನಕ್ಕೆ ಹಚ್ಚಬಾರದೆಂಬ ಕಾಯದೆ.

ಅಜ್ಞಾನ ಸ್ಥಿತಿಯಲ್ಲಿದ್ದ ಹುಡುಗಿಯರನ್ನು ದೇವರ ಹೆಸರಿನಿಂದ ಬಸವಿ ಬಿಡಬಾರದೆಂದೂ ಮತ್ತು ಪಾತರದವರು ಕುಲಪರಂಪರೆಯ ಜೀವನವೆಂದು ತಮ್ಮ ಹೊಟ್ಟೆಯಿಂದ ಹುಟ್ಟಿದ ಅಥವಾ ಸಾಕಿ ದತ್ತಕವೆಂದು ಮಾಡಿಕೊಂಡ ಹುಡುಗಿಯರನ್ನು ಸೂಳೆತನಕ್ಕೆ ಹಚ್ಚಬಾರದೆಂದೂ ಕಾಯದೆಯನ್ನು ಮಾಡಬೇಕೆಂಬ ಠರಾವನ್ನು ಶ್ರೀ. ರಾಮದಾಸ ಪಂತಲುಸವರು ಕೌನ್ಸಿಲ ಆಫ ಸ್ಟೇಟದಲ್ಲಿ ತಂದಿದ್ದಾರೆ. ಸರಕಾರದವರು ಈ ಠರಾವನ್ನು ಅನುಮೋದಿಸಿ, ಈ ಬಗ್ಗೆ ಬೇಗನೆ ಸ್ವತಂತ್ರ ಕಾಯದೆ ಮಾಡುವ ಅಭಿವಚನವಿತ್ತಿದ್ದಾರೆ. ಇನ್ನೆರಡು ವರ್ಷಗಳಲ್ಲಿ ಈ ಕಾಯದೆಯಾಗಿ ಬಸವಿ ಬಿಡುವದೂ ಪಾತರದವರು ತಮ್ಮ ಮಕ್ಕಳನ್ನು ಸೂಳೆತನಕ್ಕೆ ಹಚ್ಚುವದೂ ಪೂರಾ ನಿಂತು ಹೋಗುವದೆಂಬದು ಸುಚಿನ್ಹವು.

ಪುಣೆ ಪ್ರಾಂತದಲ್ಲಿ ಜೆಜೂರಿಯ ಖಂಡೋಬನ ಹೆಸರಿನಿಂದ ಬಿಡುವ ಬಸವಿಯರಿಗೆ ಮುರುಳಿ ಎನ್ನುವರು. ಯಲ್ಲಮ್ಮನಿಗೆ ಬಿಡತಕ್ಕವರಿಗೆ ಬಸವಿ ಎನ್ನುವರು. ಈ ದುಷ್ಟ ಮತ್ತು ಅನೀತಿ ಪ್ರವರ್ತಕ ನಡತೆಯನ್ನು ತೆಗೆದು ಹಾಕಬೇಕೆಂದು ಕಳೆದ ೩೦ ವರ್ಷಗಳಿಂದ ಚಳವಳಿ ನಡೆದಿದೆ. ಅದಕ್ಕೆ ಈಗ ಪಕ್ವ ಕಾಲ ಬಂದಿರುವದು.

ಬೇಡರು, ಮರಾಟರು, ಗಂಗೆ ಮಕ್ಕಳು ಹೊಲೆಯರು ಮೊದಲಾದವರು ಮುರುಳಿ ಅಥವಾ ಬಸವಿ ಬಿಡುವ ಪದ್ಧತಿಯುಂಟು. ಇದು ತೀರ ಕಡಿಮೆ ಯೋಗ್ಯತೆಯ ಜನರಲ್ಲಿ ರೂಢವಾದಂಥದ್ದು. ಖಂಡೋಬ ಅಥವಾ ರೇಣುಕೆಯ ಜಾತ್ರೆಗಳಲ್ಲಿ ನೋಡಿದರೆ ಇಂಥವರೇ ಬಹು ಸಂಖ್ಯೆಯಿಂದ ಜಾತ್ರೆಗೆ ಬಂದವರಾಗುತ್ತಾರೆ. ಯಮನೂರ ದೇವರ ಹೆಸರಿಂದ ಕ್ವಚಿತವಾಗಿ ಬಸವಿ ಬಿಡುವರು. ಆದರೂ ಅಲ್ಲಿ ಕೂಡುವ ಇವರ ಸಂಖ್ಯೆಯು ದೊಡ್ಡದಾಗುತ್ತದೆ. ಸರಕಾರದವರು ಈ ಕಾಯದೆಯನ್ನು ಮಾಡಿದ ಬಳಿಕ, ಈ ಜಾತ್ರೆಗಳ ಅರ್ಧ ಮಹತ್ವ ಕಡಿಮೆಯಾಗಿ, ಪರಿಸೆಯೂ ಇಷ್ಟು ನೆರೆಯಲಾರದು.

ಕಸಬಿಗಾಗಿ ಬಿಡತಕ್ಕಂಥ ಜನರಿಗಿಂತ ಹೆಚ್ಚು ಕಷ್ಟದ ಸ್ಥಿತಿಯು ದೇವದಾಸಿಯರಾದಂಥ ಪಾತರದವರಿಗೆ ಬರುವದು. ಏಕಂದರೆ ಕೆಲವು ವರ್ಷಗಳಲ್ಲಿ ಇವರ ಕುಲ ವ್ಯವಸಾಯವೇ ಅಳಿದು ಹೋಗುವದು. ದೇವಸ್ಥಾನಗಳಲ್ಲಿಯ ಸೇವೆಯ ದೆಸೆಯಿಂದಿರುವ ಭೂಮಿಯ ಮೇಲೆ ರೈತವಾರಿಯ ಹಕ್ಕು ಕೂತು ಕಯ್ಯಿಂದ ಪಟ್ಟಿಗೆ ರೊಕ್ಕ ಕೊಡಬೇಕಾಗುವದು, ಮತ್ತು ಕಸಬಿನಿಂದ ಗಳಿಸತಕ್ಕ ದುಡ್ಡು ಮುಣುಗುವದು. ಈಗ ದೇಹ ವಿಕ್ರಯದಿಂದ ಜೀವಿಸುವಂಥವರು ಹಾಗೇ ಜನ್ಮ ಕಳೆಯಲೆಂದೋ? ಅವರೂ ವೃದ್ಧನಾರಿ ಪತಿವ್ರತೆಯರಾಗಲೆಂದೋ ಯಾವ ರೀತಿಯಿಂದ ಕಾಯದೆ ಮಾಡುವರೆಂಬದನ್ನು ನೋಡಬೇಕಾಗಿದೆ.

ಸರಕಾರದ ಕಾಯದೆಯು ಯಾವಾಗ್ಗೇ ಆಗಲಿ; ಅದು ತಮ್ಮ ಮೇಲೆ ಸುದರ್ಶನ ಚಕ್ರದಂತೆ ಬೆನ್ನು ಹತ್ತುವದೆಂದು ಮುಂದಾಗಿ ತಿಳಕೊಂಡು ಬಸವಿ ಬಿಡುವದನ್ನು ಬಂದು ಮಾಡಬೇಕು. ಪಾತರದವರು ತಮ್ಮ ಮಕ್ಕಳಿಗೆ ಗಾಯನ ಅಭಿನಯ ಕಲಿಸುವದನ್ನು ಬಿಟ್ಟು, ಅವರು ಗುಣವಂತೆ ಮಾನವಂತೆಯರಾಗುವಂಥ ಶಿಕ್ಷಣ ಕೊಡಬೇಕೆಂದು ಆಗತ್ಯವಾಗಿ ಸೂಚಿಸುತ್ತೇವೆ.

ಹೆಸರಿಗೆ ಮುತ್ತೈದೆಯಾಗಿರುವದಕ್ಕಿಂತ ವಿಧವೆಯಾಗಿರುವದೇ ಲೇಸು.

ಕರೆ ಶಿಂದಿಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವದು ಅಸಹಕಾರದ ಚಳವಳಿಯಿಂದಲೇ ಬಂದದ್ದಲ್ಲ. ಬಂಗಾಲದ ವಿಭಾಗದಿಂದ ಬಂದದ್ದು. ಸರಕಾರದವರು ಪ್ರಜರ ಮೋರೆಯ ಮೇಲೆ ಕೈ ಎಳೆದು ಪ್ರತಿಯೊಂದು ಜಿಲ್ಲೆಯಲ್ಲಿ ಅಬಕಾರೀ ಕಮೀಟಿಗಳನ್ನು ನೇಮಿಸಿದರು. ಈ ಕಮೀಟಿಗೆ ತಮ್ಮ ಪತಿಯಿಂದ ಇಬ್ಬರು ಮೆಂಬರರನ್ನು ಆರಿಸಿ ಕಳಿಸುವ ಅಧಿಕಾರವನ್ನು ಮ್ಯುನಿಸಿಪಾಲಿಟಿಗಳಿಗೆ ಕೊಟ್ಟರು. ಈ ಅಧಿಕಾರವು ನಿರ್ಗಂಧ ಕುಸುಮದಂತಿರುತ್ತದೆ. ಸರಕಾರದ ದ್ರವ್ಯಪ್ರಾಪ್ತಿಗೆ ಬಾಧೆ ಬರುವಂಥ ಯಾವ ಸೂಚನೆ ಮಾಡುವಂತಿಲ್ಲ. ಒಂದು ವೇಳೆ ಮಾಡಿದರೆ ಅದನ್ನು ಕೇಳಲೇ ಬೇಕೆಂಬದಾಗಿ ಸರಕಾರವು ವಾಚಾಬದ್ಧವಾಗಿಲ್ಲ. ಶರೆಯ ಅಂಗಡಿಯನ್ನು ಹೆಚ್ಚಿಸಬೇಕೆಂದರೆ ಅವರೆಲ್ಲ ಒಪ್ಪುವರು, ಕಡಿಮೆ ಮಾಡಬೇಕು; ಅಥವಾ ಸ್ಥಳಾಂತರ ಮಾಡಬೇಕೆಂದು ಸೂಚಿಸಿದರೆ ಮೋರೆ ಸೊಟ್ಟ ಮಾಡುವರು. ಅಂದರೆ ಈ ಮೆಂಬರರು ಕಮೀಟಿಯಲ್ಲಿ ಶೋಭೆಯ ಮಟ್ಟಿಗೆ ಮೆಂಬರರಾಗುವರು. ಈ ತೆರವಾಗಿ ಮೆಂಬರರಾಗಿ ದೇಶಹಿತ ಜನಹಿತ ಮಾಡದ್ದಕ್ಕಿಂತ ಅದರಲ್ಲಿ ಸೇರದಿರುವದೇ ವಾಸಿಯೆಂದು ಮುಂಬಯಿ ಕಮೀಟಿಗೆ ತಮ್ಮ ಪತಿಯಿಂದ ಮೆಂಬರರನ್ನೇ ಕಳಿಸಬಾರದೆಂದು ಅಲ್ಲಿಯ ಮ್ಯುನಿಸಿಪಾಲಿಟಿಯವರು ಠರಾವನ್ನು ನಾಲ್ಕು ದಿವಸಗಳ ಹಿಂದೆ ಮಾಡಿದ್ದಾರೆ. ಮುಂಬಯಿಯು ಈ ಪ್ರಕಾರ ತೋರಿಸಿದ ಸ್ವಾಭಿಮಾನ ಮತ್ತು ಸ್ವಜನ ಹಿತಾಭಿಮಾನವು ಪ್ರಶಂಸನೀಯವಾದದ್ದು. ಅದರ ಅನುಕರಣವನ್ನು [illegible] ಸ್ಥಿತಿಯಲ್ಲಿರುವ ಬೇರೆ ಮ್ಯುನಿಸಿಪಾಲಿಟಿಗಳ ಮೆಂಬರರೂ ಮಾಡಲೇ ಬೇಕು.

ಹುಬ್ಬಳ್ಳಿಯಲ್ಲಿ ಅದ್ಭುತ ಮಳೆ.

ಮೊನ್ನಿನ ದಿವಸ ಧಾರವಾಡದಲ್ಲಾದ ಮಳೆಗಿಂತ ಅದ್ಭುತ ಮಳೆಯು ಹುಬ್ಬಳ್ಳಿಯಲ್ಲಾಯಿತು. ಪ್ರಾತಃಕಾಲದಲ್ಲಿ ಒಂದೂವರೆ ತಾಸ ಮಳೆ ಬಿತ್ತು. ಇದು ಆರು ಇಂಚಾಯಿತು. ಆಕಾಶ ಹರಿದು ಬೀಳುವಂತೆ ಸುರಿಯುತ್ತಿದ್ದ ಸಂತತಧಾರವನ್ನು ಕಂಡು ತಮ್ಮ ಮೇಲೆ ಬಡೋದೆಯ ದುರ್ಧರ ಪ್ರಸಂಗ ಬರುವದೆಂದು ನಾಗರಿಕರು ಭಯಗೊಂಡರು. ಆದರೆ ಬೇಗನೆ ನಿಂತು ಜನರ ಚಿಂತೆಯು ದೂರಾಯಿತು. ಆದರೂ ಪುಷ್ಕಳವಾಗಿ ಕೇಡಾಯಿತು. ಮಳೆಯ ದೆಸೆಯಿಂದ ಅಂದು ಪ್ರಾತಃಕಾಲದಲ್ಲಿ ರೇಲ್ವೆಯ ವರ್ಕಶಾಪ ಬಂದು ಬಿತ್ತು. ಏಕಂದರೆ ಜನರು ಮನೆ ಬಿಟ್ಟು ಹೊರಬೀಳದಷ್ಟು ನೀರು ಸುರಿಯುತ್ತಿದ್ದಲ್ಲದೆ, ದಾರಿಗಳ ತುಂಬ ನೀರೇ ನೀರಾಗಿತ್ತು. ಕಾಟನ್ನ ಮಾರ್ಕೇಟದ ಹತ್ತರಿರುವ ಕೆರೆಯ ಒಡ್ಡು ಒಡೆದು, ಅದರ ಪ್ರಚಂಡ ಪ್ರವಾಹವು ಮೋದಾರ ಬೀದಿಯ ದಾರಿ ಹಿಡಿಯಿತು. ಹತ್ತರವೇ ಇದ್ದ ತಗ್ಗಿನ ನಿಟ್ಟಿನಲ್ಲಿ ನೀರು ಹೊಳ್ಳದಿದ್ದರೆ ಮೋದಾರ ಓಣಿಯೇ ತೇಲಿ ಹೋಗಿ ಅನರ್ಥವಾಗುತ್ತಿತ್ತು. ಆದರೂ ಅವರ ಇಪ್ಪತ್ತು ಮನೆಗಳು ಬಿದ್ದವು. ಇದೇ ಓಣಿಯಲ್ಲಿರುವ ಬೇರೆ ಜನರ ಮನೆಗಳು ಡಬಾಸ ಹಾಕಿದವು. ಜನರು ಪ್ಯಾಪೇಲಿನ ಅರಿವೆಗಳಿಂದ ಮಾತ್ರ ಹೊರಬಿದ್ದು, ಕಲ್ಲು ಕಟ್ಟಿ ಸುರಿಯುತ್ತಿರುವ ಮಳೆಯಲ್ಲಿ ನಿಂತರು. ಭೀಮಾ ಎಂಬ ಹೆಸರಿನ ಕಸಬಿಯ ಮನೆಯ ಮುಂದಿನ ಹೂವಿನ ತೋಟ ಹರಿದು ಹೋಯಿತು. ಒಬ್ಬ ಪಿಂಡಾರಿಯ ಮನೆ ಬಿದ್ದು, ದೊಡ್ಡ ಕುದುರೆ ಮತ್ತು ಪಶುಗಳು ಸತ್ತವು. ಇದಕ್ಕೂ ಹೆಚ್ಚು ಹಾನಿಯು ನಾದಿರಶಹಾ ಇವರ ಪ್ರೆಸ್ಸಿನಲ್ಲಾಯಿತು. ಪಗಾರಗಳು ಬಿದ್ದು ಇಬ್ಬರು ಆಳುಗಳು ಘಾಯ ಹೊಂದಿದರು. ಇವರನ್ನು ಆರೈಕೆಗಾಗಿ ಇಸ್ಪತ್ರಿಗೆ ಕಳಿಸಿದ್ದಾರೆ. ಹತ್ತೀಕಾಳಿನ ಚೀಲಗಳು ತೇಲಿ ಮತ್ತು ತೊಯ್ದು ಐದು ಸಾವಿರದ ಹಾನಿಯಾಗಿದೆ. ಎರಡೂ ಹುಬ್ಬಳ್ಳಿಗಳ ನಡುವಿನ ಹಳ್ಳವು ಮಹಾ ಪ್ರವಾ

ಹದಂತೆ ಬಂದು, ಅದು ತನ್ನ ಕಳವಿನಲ್ಲಿ ಸಿಕ್ಕದ್ದನ್ನು ಕಚ್ಚಿಕೊಂಡು ಹೋಯಿತು.

ಮೂವತ್ತು ಸಾವಿರ ಚೀನರ
ಭಯಂಕರ ಕೊಲೆ.

—o—

ಚೀನ ದೇಶದಲ್ಲಿ ಉತ್ತರ ಹೋನಾನ ಪ್ರಾಂತದಲ್ಲಿ ದಲ್ಲಿರುವ ಚಾಂಗಟಿ ಪಟ್ಟಣದಲ್ಲಿ ಫೆಂಗ ಯು ಶಿಯಾಂಗನ ಸೈನಿಕರು ಭಯಂಕರ ರೀತಿಯಿಂದ ಪ್ರಜಾಸಂಹಾರ ಮಾಡಿದ್ದಾರೆ. ಈ ಪಟ್ಟಣದ ಜನಸಂಖ್ಯೆ ಒಂದು ಲಕ್ಷ. ಇದರಲ್ಲಿ ಮೂವತ್ತು ಸಾವಿರ ಜನರಿಗೆ ಕಂಠಸ್ನಾನ ಹಾಕಿದರು. ಹೆಂಗಸರು, ಹುಡುಗರು, ಮುದುಕರು, ಬಡ್ಡಿನವರು ಎಂಬ ಯಾವ ಸಾರಾಸಾರ ವಿಚಾರ ಮಾಡದೆ, ಎಲ್ಲರನ್ನೂ ನಿರ್ದಯದಿಂದ ಕೊಲೆ ಮಾಡಿದ್ದಾರೆ. ಇಂಥ ಕೊಲೆಯು ಇತಿಹಾಸದಲ್ಲಿ ಅಭೂತಪೂರ್ವವಾದದ್ದು.

ನೆಲ್ಲೂರಿನ ದಂಗೆ.

—o—

ವಕೀಲನ ಕೊಲೆ.

—o—

ನೆಲ್ಲೂರಿನಲ್ಲಾದ ಹಿಂದೂ ಮುಸಲ್ಮಾನ ದಂಗೆಯಲ್ಲಿ ಕುಲಕರ್ಣಿ ಎಂಬ ಉಪನಾಮದ ವಕೀಲರು ಕೊಲ್ಲಲ್ಪಟ್ಟರು. ದಂಗೆಯು ವಿರಾಟಸ್ವರೂಪ ಧಾರಣ ಮಾಡಿದ್ದರಿಂದ ವಿಜಾಪೂರ ಮತ್ತು ಅಹಮದನಗರದಿಂದ ಸಶಸ್ತ್ರ ಪೋಲೀಸರನ್ನು ತರಿಸಿದ್ದಾರೆ. ವೃತ್ತಿಯಲ್ಲಿ ದಂಗೆಗೆ ಸಿದ್ಧವಾಗಿರುವಂತೆಯೂ ಟೆಲಿಫೋನಿನಿಂದ ತಿಳಿದಿದ್ದಾರೆ.

ಮದ್ಯ ಮಾಂಸಕ್ಕೆ ಪ್ರತಿಬಂಧ-

ಕಾಠೇವಾಡದಲ್ಲಿರುವ ಬಾಗಾಬಾರಾ ಎಂಬ ಸಂಸ್ಥಾನದ ಅರಸರು ತಮ್ಮ ನಾಡಿನಲ್ಲಿ ದೇಶಿ ಮತ್ತು ಪರದೇಶಿ ಸರೆ ಮತ್ತು ದನದ ಮಾಂಸವನ್ನು ಮಾರಬಾರದೆಂಬುದಾಗಿ ಕಟ್ಟಪ್ಪಣೆ ವಿಧಿಸಿದ್ದಾರೆ. ಬೇಟೆಯಾಡಿ, ಜೀವ ಹಿಂಸೆ ಮಾಡಬಾರದೆಂದು ಈ ಮುಂದಾಗಿ ರಾಜಾಜ್ಞೆ ತೆಗೆದಿರುವರು.

ಪರ್ಬಾಡಕ್ಕೆ ಸೇರಿದ ಯುವತಸಾಳದ ಹಿಂದೂ ಜನರು ಅಸ್ಪೃಶ್ಯರಿಗೆ ತಮ್ಮ ಕೂಡ ಗಣಪತಿಯ ಮೆರವಣಿಗೆ ತೆಗೆಯಲಿಕ್ಕೂ ಅವರಿಗೆ ಅವರು ಮುಟ್ಟಿದ ಕೆರೆಯಲ್ಲಿ ವಿಸರ್ಜನ ಮಾಡಲಿಕ್ಕೂ ಸಮ್ಮತಿಕೊಟ್ಟಿದ್ದಾರೆ.

ಕುಮಟೆಯಲ್ಲಿ ವಾರಾಂಗನೆಯರ
ದೇವತಾರಾಧನೆಯ ಸತ್ಯಾಗ್ರಹ.

ಶ್ರೀ ಗೋಪಾಲಕೃಷ್ಣ ದೇವಾಲಯದಲ್ಲಿ ಭಜನೆ ನಡೆದದೆ. ದಿನೇ ದಿನೇ ಶ್ರೀ ದೇವರಿಗೆ ಹೊಸ ಹೊಸ ಅಲಂಕಾರಗಳು ಮಾಡೋಣಾಗುತ್ತವೆ. ಶ್ರೀ ದೇವರ ದರ್ಶನಕ್ಕಾಗಿ ನಿತ್ಯವೂ ಜನಸ್ತೋಮ ಸೇರುತ್ತದೆ. ಈ ವರ್ಷ ಭಜನೆಯ ಸಮಯ ಒಂದು ಹೇಳತಕ್ಕಂಥ ಸಂಗತಿಯಾಯಿತು. ಈ ತನಕ ಪುರುಷರ ಭಜನೆಯೇ ಕೇಳಬರುತ್ತಿತ್ತು. ಈ ವರುಷ ಶ್ರೀ ಗೋಪಾಲಕೃಷ್ಣನಿಗೆ ಗೋಪಿಕಾ ಸ್ತ್ರೀಯರ ನೆನಪಾಯಿತೋ, ಏನೋ! ವೇಶ್ಯಾ ಸ್ತ್ರೀಯರಿಗೊಂದು ಪಾಳಿ ಕೊಡಲ್ಪಟ್ಟಿತು. ಸಮಯವೂ ಪ್ರಶಸ್ತವಿತ್ತು! ಮಧ್ಯರಾತ್ರಿ ಮಿಕ್ಕಿದ ಬಳಿಕ ವೇಶ್ಯಾ ಸ್ತ್ರೀಯರ ಪಾಳಿ ಕೆಲ ಪುರಾತನವಾದಿಗಳು ಈ ಸುಧಾರಣೆಗೆ ಒಪ್ಪಲಿಲ್ಲ. ಆದರಿಂದ ಮೊದಲನೇ ದಿನವು ನಿರರ್ಥಕವಾಯಿತು. ಮಾರನೇ ದಿನ ಊರಲ್ಲೆಲ್ಲ ಇದೇ ಗಲಬಲಿ. ಘನಘೋರ ವಾಗ್ಯುದ್ಧ ನಡೆಯಿತು. ತಾಸು ರಾತ್ರಿಯಾಯಿತು; ಅಷ್ಟರಲ್ಲಿ ಭಗವದ್ಭಕ್ತ ವೇಶ್ಯಾ ಸ್ತ್ರೀಯರು ಸತ್ಯಾಗ್ರಹವನ್ನು ಕೈಕೊಳ್ಳಬೇಕೆನ್ನುವವರಾದರು. ಭಜನೆ ಮಾಡೇ ತೀರುವೆವಾಗಿ ಅವರ ಹಟ. ಪುರುಷರಿಗೆ ಹದರಿ ಭಜನೆ ಮಾಡದೆ ಬಿಟ್ಟರೆ, ಸ್ತ್ರೀಯರು ಅಬಲೆಯರೆಂದು ಲೋಕದಲ್ಲಿ ಶಾಶ್ವತವಾದ ಅಪಕೀರ್ತಿ ಹೊಂದಬೇಕಾದೀತೆಂದು ವೇಶ್ಯೆಯರ ಗ್ರಹಿಕೆಯಾದಂತೆ ತೋರುತ್ತದೆ. ಹಲವರು ವೇಶ್ಯೆಯರಿಗೆ ಇದಿರಾಗಲು ಟೊಂಕಕಟ್ಟಿದರು. ಸಂಗ್ರಾಮದ ಸುದ್ದಿಯುವೇಳೆ ಸುದ್ದಿ! ವೇಶ್ಯೆಯರು ಪಲ್ಲಕ್ಕಿಯಲ್ಲಿ ಶ್ರೀ ಸದ್ಗುರೂಡ ಸ್ವಾಮಿಗಳ ಹಾಗು ಮಹಾತ್ಮರ ಭಾವಚಿತ್ರಗಳನಿಟ್ಟುಕೊಂಡು, ಶ್ರೀ ಗೋಪಾಲಕೃಷ್ಣದೇವಾಲಯಕ್ಕೆ ಕೂಚು ಮಾಡುತ್ತಿದ್ದರು. ವಾದ್ಯಘೋಷವು ಸಾಗಿತ್ತು. ಪಲ್ಲಕ್ಕಿಯನ್ನು ಹೊರನಿಲ್ಲಿಸಿ ವಾದ್ಯದೊಂದಿಗೆ ವೇಶ್ಯೆಯರು ಗೋಪಿಕಾವಲ್ಲಭನ ಮಂದಿರವನ್ನು ನುಗ್ಗಿದರು ಹಲವರು ಹೊರಹೋಗ ಹೇಳಿದರು. ಆದರೆ ಕಿವಿಗೊಡುವವರಾರು? ಗರ್ಭಗುಡಿಯ ತನಕ ವೇಶ್ಯೆಯರು ನುಗ್ಗಿದರು ಭಗವನ್ನಾಮಸಂಕೀರ್ತನವು ಒಳ್ಳೇ ರಭಸದಿಂದ ಸಾಗಿತ್ತು. ಕೆಲ ಪತಿತಪಾವನ ಪುರುಷರು ವೇಶ್ಯೆಯರ ಪಕ್ಷದಿಂದ ವಾದಿಸಹತ್ತಿದರು. ಅಬಲೆಯರಿಗೆ ಪ್ರಬಲರ ನೆರವಾಗುವದೇ ಭೂಷಣವಲ್ಲವೇ? ವಾದ ಬೆಳೆಯಿತು. ಕೈಗೆ ಕೈ ಹತ್ತುವ ಪ್ರಸಂಗ ಬಂತು ಇಷ್ಟರಲ್ಲಿ ಭಗವಚ್ಛಕ್ತಿಯಿಂದಲೇ ಈ ಪ್ರಸಂಗದಲ್ಲಿ ಸೇರಿಕೊಂಡಿದ್ದರು. ಪುಣ್ಯವೋ? ಪಾಪವೋ! ಸೌಭಾಗ್ಯವೋ? ದುರ್ಭಾಗ್ಯವೋ! ಅಥವಾ ಕುಚೋದ್ಯಗಾರನಾದ ಶ್ರೀ ಕೃಷ್ಣನ ಸಂಕಲ್ಪವೋ? ಗರ್ಭದ ದೀಪವು ಥಕ್ಕನೆ ನಂದಿಹೋಯಿತು!! ಭವಭಯವು ಎಂಬ ಶಬ್ದ ಕೇಳ ಬರಹತ್ತಿತು ವಿಠ್ಠಲ, ವಿಠ್ಠಲ ಎಂಬ ಲೋಕಪಾಲಕನ ನಾಮದೊಂದಿಗೆ ಪೋಲೀಸ, ಎಂಬ ಐಹಿಕ ಲೋಕಪಾಲಕರ ನಾಮಸಂಕೀರ್ತನವೂ ಕೇಳಬಂತು. ಅಂತು ಇಂತು ಸಮಾಧಾನವಾಯಿತು ವೇಶ್ಯೆಯರ ವೇಶವು ಶ್ರೀ ದೇವಸ್ಥಾನದ ಸಭಾಮಂಟಪದಿಂದ ಹೊರಬೀಳ; ಹೊರಹೋಗಲಿಲ್ಲ. ಒಳಪ್ರಾಕಾರವು ನೋಡಿಯೇ ತಿ-ಇ ತಾಸು ಭಜನೆನಡೆಸಿ, ಶ್ರೀ ಪರಮಾತ್ಮನ ಅನುಗ್ರಹವನ್ನು ಯಾಚಿಸುತ್ತಿತ್ತು. ಸುಧಾರಕ ಪುರುಷರು ಬಗೆದ ವೇಳೆ ನೋಡಿ ಅವರೊಂದಿಗೆ ಭಜನೆ ಮಾಡಹತ್ತಿದರು ಆಗ ಭಜನೆಗೆ ಒಳ್ಳೇ ಕಳೆಯೇರಿತು ಕಳೆ ಏರುವ ವಿಷಯವೇ ಇದು. ಶ್ರೀ ಗೋಪಾಲಕೃಷ್ಣನು ದಯಮಾಡಿ, ಎಲ್ಲ ಸುಧಾರಕ ಸ್ತ್ರೀ-ಪುರುಷರನ್ನು ಸಮರ್ಥಗೊಳಿಸಿದರೆ, ಸ್ತ್ರೀ-ಪುರುಷರ ಭಜನೆಯು ಸಾರ್ಥಕವಾಗುತ್ತಿತ್ತು.

ಕಾ. ವೃತ್ತ.

ವಿವಿಧ ವರ್ತಮಾನಗಳು

ಹೈದರಾಬಾದಿನ ನಿಜಾಮಸರಕಾರದವರು ಗುಜರಾಥದ ನೆರೆಹಾವಳಿಯ ಫಂಡಿಗೆ ೫೦ ಸಾವಿರ ರೂಪಾಯಿ ಕೊಟ್ಟಿದ್ದಾರೆ

ಸರಹದ್ದಿನಲ್ಲಿಯ ಮುಸಲಮಾನರು ಹಿಂದೂ ಜನರಿಗೆ ಕೊಟ್ಟಂಥ ಉಪದ್ರವದ ವಿಚಾರ ಮಾಡಲೋಸುಗ ಮೌಲಾನಾ ಮಹಮ್ಮದಲ್ಲಿ, ಪಂಡಿತ ಮದನಮೋಹನ ಮಾಲವೀಯರು ಅಲ್ಲಿಗೆ ಹೋಗಿದ್ದಾರೆ.

ಕಾಂಗ್ರೆಸದ ವರ್ಕಿಂಗ ಮತ್ತು ಆಲ ಇಂಡಿಯಾ ಕಮಿಟಿಗಳು ಮುಂಬಯಿಯಲ್ಲಿ ಇದೇ ತಿಂಗಳ ೨೪-೨೫ ತಾರೀಖಿನಲ್ಲಿ ಕೂಡುವವು.

ಮುಂಬಯಿಯ ಮಹಿಳೆಯರು ತಮ್ಮ ಫ್ಯಾಶನ್‍ಗಳು ಬಾಯಕಾಟವಾಗಿ ಬೇರೆ ಸ್ವದೇಶೀ ಪ್ರತಿಜ್ಞೆ ಮಾಡಿ ಬಂದಿದ್ದಾರೆ.

ಮುಂಬಯಿಯ ಗವರ್ನರ ಸಾಹೇಬರು ಗುಜರಾಥದಲ್ಲಿ ಸಂಚಾರ ಮಾಡುತ್ತಿದ್ದಾರೆ. ರೈತರು ಹಸ್ತೆಯ ಮಾಫಿ ಕೊಡಬೇಕೆಂದು ಸಾಹೇಬರಿಗೆ ಹೇಳುತ್ತಿದ್ದಾರೆ.

ಸುರತದ ಕಲೆಕ್ಟರರು ಗಣಪತಿಯ ವಿಸರ್ಜನ ಕಾಲದಲ್ಲಿ ಹಿಂದೂ ಜನರಿಗೆ ವಾದ್ಯದ ಬಗ್ಗೆ

ಪಡಿದುಕೊಂಡು ವೀರಶೈವ ಧರ್ಮ ದೀಕ್ಷೆ ತ ಕ್ಕೊಂಡು, ಲಿಂಗಧಾರಣ ಮಾಡಿ, ಲಿಂಗಾಯತರಾ ದ ರಾ. ರಾ. ಬಸಯ್ಯಾ ಸಂಗಯ್ಯಾ ವಸ್ತ್ರದ ಇ ವರ ಶ್ರೀಮತಿ ಪರೀಟವನ್ನು ಮದುವೆಯಾದರೆಂ ದು ವರ್ತಮಾನ ಬಂದಿದೆ.

— —

ಬೆಳಗಾವಿಯ ಸುದ್ದಿಯು.

ಡಿ ೧ ಕಲೆಕ್ಟರರಾಗಿರುವ ಮಿ. ಜೆ. ಎ ಹಿರೇಮಠ ಇವರಿಗೆ ರತ್ನಾಗಿರಿಗೆ ವರ್ಗವಾಯಿತು. ಇವರ ಸ್ಥಳದಲ್ಲಿ ರಾ. ಬ. ಪಾಟೀಲರು ಬರು ವರು.

— —

ರಾವಬಹಾದ್ದೂರ ಕೊಯಮತ್ತೂರ ಇವರು ನಾಲ್ಕು ತಿಂಗಳ ರಜೆ ತಕ್ಕೊಳ್ಳುವರು. ಇವರ ಸ್ಥ ಳದಲ್ಲಿ ಮಿ. ನಾಡಿಗ ಇವರ ನೇಮಣೂಕಾಗಿರುತ್ತದೆ.

— —

ನೋಟೀಸು

ಕೊಟ್ರಶೆಟ್ಟಿ ತಂದಿ ಭಗವಂತಪ್ಪ ಶಾಟೀನಹ ಳ್ಳಿಯವರ ಸಾಕೀನ ಶಾಬಾದಿ ಹಾಲಿವಸ್ತಿ ಶಾಬಾದ ಗಿ ಇತನಿಗೆ.

ಕೆಳಗೆ ಸಹಿಮಾಡಿದ ಗುತರ್ಗ ಮಾಡುವ ಸಂ ಗವ್ವಾ ಕೋಂ ಕೊಟ್ರಶೆಟ್ಟಿ ಶಾಟೀನಹಳ್ಳಿ ಹಾ ಲವಸ್ತಿ ಶಾಬಾದಿ ಇತಯು ನಿನಗೆ ಈ ನೋಟೀಸಿ ನಿಂದ ತಿಳಿಸುವದೇನೆಂದರೆ.

ನೀನು ನನ್ನ ಮದಿವೆಯ ಗಂಡನಾಗಬೇಕು ಮದಿವೆಯಾಗಿ ಆರೇಳು ವರ್ಷವಾಯಿತು ನಾನು ಪ್ರಬುದ್ಧಳಾದ ಬಳಿಕ ನೀನು ನನ್ನ ಕೂಡ ಸುರಳೀತ ರೀತಿಯಿಂದ ಪ್ರಪಂಚ ಮಾಡಲಿಲ್ಲ ಬದಲಾಗಿ ನನ್ನನ್ನು ಕೆಟ್ಟ ರೀತಿಯಿಂದ ನಡಿಸಿ ಕೊಳ್ಳುತ್ತಾ ಬಂದಿ ಇಲ್ಲಿಂದಿಗೆ ಮೂರು ವರ್ಷದ ಮೇ ಲಾಯಿತು ನನ್ನನ್ನು ಹೊಡೆದು ಮೈಮೇಲಿನ ಬೋಳುಬಾಳು ದಾಗೀನೆ ಕಸಕೊಂಡು ಮನೀಬಿಟ್ಟು ಹೊರಗೆ ಹಾಕಿದಿ ಆಗಿನಿಂದ ನಾನು ನಾನಾಪ್ರಕಾರ ಕಷ್ಟ ದೇಣಿ ಮಾಡಿ, ಉಪಜೀವನ ಮಾಡಿಕೊಳ್ಳುತ್ತಾ ಬಂದಿದ್ದೇನೆ ಈ ಬಗ್ಗೆ ... ರು ರಾ. ಆ ಗಿರುವರ. ಈ ದರಮ್ಯಾನ ನನ್ನ ಕೂಡ ಸುರಳೀತ ರೀತಿಯಿಂದ ಬಾಳವೆ ಮಾಡಿಕೊಂಡಿರಬೇಕೆಂದು ಅ ನೇಕ ಸಾರೆ ಹೇಳಿಸಿದೆ. ಆದರೆ ನೀನು ನಿನ್ನ ಹಂ ಗಿನಿಂದ ಮಾತು ಕೇಳಿ ನನ್ನ ಕೂಡ ಬಾಳವೆ ಮಾಡ ದಿದ್ದು ಅನಕಾರ ಮಾಡುತ್ತೀದಿ ಮತ್ತು ಆಳಿಯ ಮ ನ... ಸೇರಿ, ಗಾಂಜಿ ವಗೈರೆ ಸೇದಿ ಯದ್ವಾತ ದ್ವಾ ನಡೀತೀದಿ ನಿನ್ನ ಮನಸ್ಸಿನಲ್ಲಿ ನನ್ನ ಕೂಡ ಸುರಳೀತ ರೀತಿಯಿಂದ ನಡಿಯುವ ಇಚ್ಛೆ ಇದ್ದರೆ ನೀನು ದುರ್ವರ್ತನ ಬಿಟ್ಟು ನ..ದ ಬಾಳವೆಯನ್ನು ಕೇ ಟ್ಟು ನನ್ನನ್ನು ಕರಕೊಂಡು ಹೋಗಬೇಕು. ಇ ದಕ್ಕೆ ತಪ್ಪಿದರೆ ನಾನು ಎರಡನೆಯವನನ್ನು ಉಡಿ ಕೆ ಮಾಡಿಕೊಳ್ಳುವೆನು ಅನಂತರ ನಿನ್ನ ಹಕ್ಕು ನ ನ್ನ ಮೇಲೆ ಮತ್ತು ನನ್ನನ್ನು ಉಡಿಕೆಯಾಗುವ ಗಂ ಡನ ಮೇಲೆ ಬಿಲಕೂಲ ಉಳಿಯಲಾರದು ಇದೇ ನೋಟೀಸೇ ಸೋಡಪತ್ರವೆಂದು ತಿಳಿಯಬೇಕು. ಮತ್ತು ಈಗಾದ ನಾಲದ ರಕಮು ನಾಲ್ಕು ನೂ ರು ರೂಪಾಯಿಗಳ ದೆಸೆಯಿಂದ ನಿನ್ನ ಮೇಲೆ ಕಾ ಯದೆ ಪ್ರಕಾರ ಇಲಾಜ ಮಾಡುವೆನು ಆ ಬಾಬ ತು ಹತ್ತುವ ಖರ್ಚು ಮತ್ತು ಈ ನೋಟೀಸಿನ ಖ ರ್ಚು ನಿನ್ನ ತಲೆಯ ಮೇಲಿರುತ್ತದೆ. ಅಂತಾ ಕೊ ಟ್ಟ ಸೋಡಪತ್ರದ ನೋಟೀಸು

ತಾ|| ೧೫ ಸೆಪ್ಟಂಬರ ೧೯೨೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುತರ್ಗ ಸಂಗವ್ವಾ ಕೋಂ ಕೊಟ್ರಶೆಟ್ಟಿ ಶಾಟೀನಹಳ್ಳಿ ಇವರ ಕೈದು ಇರುತ್ತದೆ.

———

ಮೂರು ಆಟಗಳು ಮಾತ್ರ.

ಈ ಊರಿಗೆ ಪ್ರಥಮ ಆಗಮನ.

ಹೊಸ ಸಿನರಿ! **ಹೊಸ ಉಡುಪು!** **ಅಪೂರ್ವ ಸಮಯ!**

ಮೈಸೂರು ಶ್ರೀಮನ್ಮಹಾರಾಜರವರ ಕೃಪಾಪೋಷಣೆಗೆ ಪಾತ್ರವಾಗಿ ಕನ್ನಡ ದೇಶ ದ ಎಲ್ಲಾ ಸ್ಥಳಗಳಲ್ಲಿಯೂ, ಕೊಡಗು, ಮದ್ರಾಸ, ಮತ್ತು ದಕ್ಷಿಣ ಮದ್ರಾಸ, ಬಳ್ಳಾರಿ ಅನಂತಪುರ, ಮಂಗಳೂರು ಪ್ರಾಂತಗಳಲ್ಲಿಯೂ ಹುಬ್ಬಳ್ಳಿ ಗದಗ ಮೊದಲಾದ ಮುಂಬಾಯಿ ಪ್ರಾಂತಗಳಲ್ಲಿಯೂ ಸಂಚರಿಸಿ ವಿಶೇಷ ಬಹುಮಾನಗಳನ್ನು, ಬಂಗಾರದ ಪದಕಗಳನ್ನೂ ಮಿ ತ್ರಗಳನ್ನೂ ಪಡೆದು ಸುಪ್ರಸಿದ್ಧಿಯನ್ನು ಹೊಂದಿರುವ

ವಿನೋದ ರತ್ನಾಕರ ಜಿ. ಹೆಚ್. ವೀರಣ್ಣನವರ

ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ

ಸಂಘದವರು

ಧಾರವಾಡ ಅನ್ನಪೂರ್ಣಾ ಥಿಯೇಟರಿನಲ್ಲಿ

ತಾರೀಖು ೧೮-೯-೨೭ ಭಾನುವಾರ ಸಾಯಂಕಾಲ

ಪ್ರಮೀಳಾ.

ತಾರೀಖು ೨೦-೯-೨೭ ಮಂಗಳವಾರ ರಾತ್ರಿ

ಪ್ರಹ್ಲಾದ.

ತಾರೀಖು ೨೫-೯-೨೭ ಬುಧವಾರ ಸಾಯಂಕಾಲ

ನಿರುಪಮಾ.

ಎಂಬ ಆಖ್ಯಾನಗಳನ್ನು ಅಭಿನಯಿಸುವರು. ಸರ್ವರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಧಾರವಾಡ ಸೋಮವಾರ } **ವಿನೋದ ರತ್ನಾಕರ ಜಿ. ಹೆಚ್. ವೀರಣ್ಣ.**
ತಾ|| ೧೨-೯-೧೯೨೭ } (ವರ್ಸಟೈಲ್ ಕಮೆಡಿಯನ್) ಪ್ರೊಪ್ರೈಟರ್

ಜಾಹೀರ ನೋಟೀಸು

— o —

ಯಾವತ್ತು ಜನರಿಗೆ ಕೆಳಗೆ ಸಹಿ ಮಾಡುವ ವರಿಂದ ತಿಳಿಸೋದೇನಂದರೆ ನಮ್ಮ ಕಿರಾಣಿ ಅಂ ಗಡಿ ಬುಧವಾರಪೇಟೆಯಲ್ಲಿ ಬಂದದರಿಂದಾ ಅದನ್ನು ನಾ ವು ಬಂದ ಮಾಡಿರುತ್ತೇವೆ. ಸದರ ಅಂಗಡಿಯಲ್ಲಿ ಯಾವತ್ತು ಮಾಲು ನಾವು ಜಾಹೀರ ರೀತಿಯಿಂದ ಲಿಲಾವ ಮಾಡತಕ್ಕವರು ಇದ್ದೇವೆ ಆದದರಿಂದ ಬೇಕಾದವರು ಜಾಹೀರ ಲಿಲಾವಿನಲ್ಲಿ ಬಂದು ಮಾ ಲು ತಕ್ಕೊಳ್ಳಬಹುದು. ಈ ಕೆಲ್ಸ ತಾ|| ೨೫ರಿಂದ ಸುರುವು ಆಗುವದು.

ತಾ|| ೧೬-೯-೧೯೨೭ ಇಸ್ವಿ

ಸಹಿ- ಮ್ಯಾನೇಜರ ಕುಲಕರ್ಣಿ ಪಾಪಟ ಲ್ಯಾಂಡ ಕಂಪನಿ ಧಾರವಾಡ.

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಬಾಳಾಚಾ ರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1413

ನಿತ್ಯ ಪತ್ರ — ಬೆಲ ಅರ್ಧ ಆಣೆ

ಸಂಪಾದಕರು:— ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮: ಧಾರವಾಡ ಶನಿವಾರ ತಾರೀಖು ೧೭ ನೇ ಸಪ್ಟಂಬರ ೧೯೨೭ ಸಂಚಿಕೆ ೨೦೦

ಹಂಗಾಮು ಮುಗಿಯ ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಚನ್ನಾಗಿ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೆಂದರೆ ಉಕ್ಕಿನ ಕಂಬಗಳ ಚೌಕಟ್ಟು ಕಿತ್ತಾಳೆ ಬೇರಿಂಗುಗಳು ಇರುವದರಿಂದ ಯಂತ್ರವು ಅಚ್ಚುಕಟ್ಟಾಗಿ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಗಿಂತಲೂ ಇವುಗಳಲ್ಲಿ ಕಾಳು ಒಡೆಯುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ದಿವಾಳಿ ಮುಂಚಿನಿಂದ ಮಂಜೂರಾದ

ಕನ್ನಡ ನಿಬಂಧರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟದ್ದಲ್ಲದೆ, ರಿಪೋರ್ಟ- ಅರ್ಜಿ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ— ೧ ರಾ ರಾ ಬಿ ಜಿ ದಿವೇಕರ,
ಮಾಳಮಡ್ಡಿ, ಧಾರವಾಡ
೨ ರಾ. ರಾ. ವಿ. ಆರ್. ಶಿವಣಗಿಮಠ
ಕಂಗ್ರೆಸ್ ಬುಕ್ ಡಿಪೋ ಹುಬ್ಬಳ್ಳಿ

W A N 3 T D·

Wanted Candidates for Telegraph and Station Master's Courses Railway Fare GRANTED Boarding Seat FREE. Prospectus on 2 annas stamp,– Presidency Telegaph Coll ge, Royapettah Madras.

———

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ. ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರಿನ ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯುವವು. ಠೇವುಗಳು ಮತ್ತು ಬೇರೆ ಕಾರಣಗಳಿಗೆ ಚನ್ನಾಗಿ ಬಡ್ಡಿ ಕೊಡುವರು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀ,
ಮಾ. ನೆ ಸಂಗ ಡಾಯರೆಕ್ಟರ

———

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಾಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಇಟ್ಟು ಇಟ್ಟುಕೊಳ್ಳುವ ಪದ್ಧತಿಯು ಇಂದು ಮೂರು ತಿಂಗಳ ಪ್ರವೃತ್ತಿ ಹೊಂದಿರುತ್ತದೆ.

ಎ. ಶಿ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೧೬-೯-೨೭ ನೇ ಇಸ್ವಿ

ಶ್ರೀಮದುತ್ತರಾದಿ ಮಠದ ಮಹಾಸ್ವಾಮಿಗಳ ಧರ್ಮೋನ್ನತಿಯ ಕೆಲವು ವಿಚಾರಗಳು.

ಶ್ರೀಮದುತ್ತರಾದಿ ಮಠದ ಮಹಾಸ್ವಾಮಿಗಳು ಈ ಊರಲ್ಲಿ ನಾಲ್ಕು ತಿಂಗಳು ಶಿಷ್ಯ ಮಹಾಜನಗಳಿಂದ ಆತಿಥ್ಯ ಸತ್ಕಾರ ಹೊಂದಿ, ಹುಬ್ಬಳ್ಳಿಯ ಮಾರ್ಗವಾಗಿ ಹಾನಗಲ್ಲಿನ ಸ್ಟೇಶನ್ನಲ್ಲಿ ಪ್ರಯಾಣ ಬೆಳೆಸಿದರು. ಶ್ರೀಗಳವರು ಈ ಊರಿಂದ ಹೊರಡುವ ಪೂರ್ವದಲ್ಲಿ ಪ್ರಮುಖರಾದ ಶಿಷ್ಯರನ್ನು ಕರಿಸಿ, ಅವರ ಮುಂದೆ ಧರ್ಮೋನ್ನತಿಯ ಕೆಲವು ವಿಚಾರಗಳನ್ನಿಟ್ಟಿದ್ದಾರೆ. ಅವೇನಂದರೆ:-

೧ ಶ್ರೀಗಳವರು ಪೂರ್ವಾಶ್ರಮದಲ್ಲಿ ಸಂಪಾದಿಸಿದ ಮತ್ತು ವಂಶಪರಂಪರೆಯಿಂದ ಬಂದ ಸ್ಥಿರಾಸ್ತಿಯ ವಾರ್ಷಿಕ ಉತ್ಪನ್ನವು ೫೦೦೦ ರೂಪಾಯಿಯಾಗುವದು. ಅದನ್ನು ಮಧ್ವಶಾಸ್ತ್ರದ ಅಭಿವೃದ್ಧಿಗಾಗಿ ಉಪಯೋಗಿಸುವದು.

೨ ಇಲ್ಲಿಯ ಮಧ್ವ ಬ್ಯಾಂಕಿಗೆ ಆ ಮತ್ತರದರ ಸಹಾಯ ಮತ್ತು ಸಹಾನುಭೂತಿಯು ಬೇಕಾದಷ್ಟು ಇರುವದಿಲ್ಲ. ಅದಕ್ಕೆ ವ್ಯಾನೇಜಿಂಗ ಏಜಂಟರು ಬ್ಯಾಂಕನ್ನು ಮಧ್ವ ಸಭೆಗೆ ಒಪ್ಪಿಸದಿದ್ದರೆ- ಸಭೆಯ ಪಕ್ಷದಿಂದ ಸ್ವತಂತ್ರ ಬ್ಯಾಂಕು ತೆರೆಯಬೇಕು. ಇದಕ್ಕೆ ಶ್ರೀಗಳವರು ಹತ್ತು ಸಾವಿರ ರೂಪಾಯಿ ಕೊಡುವರು. ಮತ್ತು ಶೇರ ಹಾಗು ಡಿಪಾಸಿಟ ಕೂಡಿಸಿ ಕೊಡುವರು. ಇದರಿಂದ ಸಭೆಯು ಕೆಲಸವನ್ನು ಸಾಗಿಸಬೇಕು.

೩ ಬಿ. ಎ. ಎಮ್. ಎ. ಆದಂಥವರು ಮಧ್ವಶಾಸ್ತ್ರದ ಅಧ್ಯಯನ ಮಾಡಲಿಕ್ಕೆ ಸಿದ್ಧರಿದ್ದರೆ- ಅವರಿಗೆ ೫೦ ರೂಪಾಯಿ ಸಂಬಳ ಕೊಟ್ಟು, ಅವರಿಗೆ ಶಾಸ್ತ್ರ ಕಲಿಸುವದು.

೪ ಯಾವದೊಂದು ಊರವರು ಸಂಸ್ಕೃತ ಪಾಠಶಾಲೆಯನ್ನು ತೆಗೆದರೆ- ಶ್ರೀಗಳವರು ಪಂಡಿತರನ್ನು ಅವರ ಸಂಬಳ ಸಹಿತವಾಗಿ ಪೂರೈಸುವರು. ಆ ಊರವರು ವಿದ್ಯಾರ್ಥಿಗಳನ್ನು ಮಾತ್ರ ಪೂರೈಸಬೇಕು.

ಶ್ರೀಗಳವರ ಮೇಲಿನ ಸೂಚನೆಗಳ ವಿಚಾರ ಮಾಡುವದಕ್ಕಾಗಿ ಈ ಊರ ಪ್ರಮುಖ ಮಾಧ್ವ ಗೃಹಸ್ಥರು ಬೇಗನೆ ಬಂದು ಸಾರ್ವಜನಿಕ ಸಭೆ ಕೂಡಿಸತಕ್ಕವರಿದ್ದಾರೆ.

— —

ಧಾರವಾಡದ ಅಬಕಾರಿ ಕಮೀಟಿಯು.

ಕಳೆದ ಬುಧವಾರದ ದಿವಸ ಧಾರವಾಡದ ಅಬಕಾರಿ ಕಮಿಟಿಯು ಮಿ. ಕಲೆಕ್ಟರಸಾಹೇಬರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಶ್ರೀ ವಿನಾಯಕರಾವ ಜೋಶಿಯವರು ದೇಶಿ ಮತ್ತು ವಿದೇಶಿ ಕರೆಗಳ ಮಾರಾಟದ ಎರಡು ವರ್ಷಗಳ ಅಂಕಿಗಳನ್ನು ಕೇಳಿದ್ದರು. ಅವಕ್ಕೆ ದೊರೆತ ಉತ್ತರವು.

ದೇಶೀ ಕರೆ-

೧೯೨೫—೨೬

೪೦ ಅಂಶದ ಪ್ರೂಫ-	೬೦ ಅಂಶದ ಪ್ರೂಫ
೯೦೩೪ ಗ್ಯಾಲನ ೩೭ ದ್ರಾಮು	೩೪೯೭ ಗ್ಯಾ. ೧೬ ದ್ರಾಮ.

೧೯೨೬—೨೭

೬೯೩೭ ಗ್ಯಾ ೪೨ ದ್ರಾ.	೭೬೪೭ ಗ್ಯಾ ೭ ದ್ರಾಮ.

ಪರದೇಶಿ ಕರೆ-

	ಲಿಕರ		ವಾಯಿನ		ಸ್ಪಿರಿಟ	
	ಗ್ಯಾ.	ದ್ರಾ.	ಗ್ಯಾ.	ದ್ರಾ.	ಗ್ಯಾ.	ದ್ರಾ.
೧೯೨೫—೨೬	೨೯೬	೩೨	೪೯	೪೪	೪೯೧	೨೯
೧೯೨೬—೨೭	೬೩೯	೪೪	೫೯	೪	೫೩೪	೨೪

ಮೇಲಿನ ಅಂಕಿಗಳನ್ನು ತುಲನೆ ಮಾಡಿ ನೋಡಲಾಗಿ ದೇಶಿ ಕರೆಯ ಮಾರಾಟ ಕಡಿಮೆಯಾಗಿ ವಿಲಾಯತಿ ಕರೆಯ ವ್ಯಾಪಾರವು ಹೆಚ್ಚಿದಂತೆ ಕಂಡುಬರುತ್ತದೆ. ದೇಶಿ ಕರೆಯಿಂದ ಅಮಲು ಕಡಿಮೆ ಬರುತ್ತಿರುವದರಿಂದ ಇದು ಕಡಿಮೆಯಾಗಿದ್ದರೆ- ಒಂದು ರೀತಿಯಿಂದ ಉತ್ತಮ. ಇದರ ಬದಲಾಗಿ ಪರದೇಶೀ ಕರೆಯು ಇದನ್ನು ಕುಡಿಯುವಂಥ ಜನರಿಂದಲೇ ಹೆಚ್ಚಾಗಿದ್ದರೆ- ಮಾತ್ರ ಕೆಡಕು. ವಿಲಾಯತಿ ಕರೆಯನ್ನು ಬಹುತೇಕವಾಗಿ ಯುರೋಪಿಯನ್ನರೂ ಸುಶಿಕ್ಷಿತರೆನ್ನುವಂಥವರೂ ಉಪಯೋಗಿಸುವರು. ಇದರಲ್ಲಿ ಡಾಕ್ಟರರು ಔಷಧಕ್ಕಾಗಿ ಎಷ್ಟು ಉಪಯೋಗಿಸಿದ್ದಾರೆಂಬದನ್ನು ವಜಾ ತೆಗೆದರೂ ಕೂಡ, ಈ ವ್ಯಸನವು ಕಲಿತ ಜನರಲ್ಲಿ ಹೆಚ್ಚೆಚ್ಚಾಗುತ್ತ ನಡೆದಿದೆಂದು ತೋರಿಂದಿರದು. ಕಲಿತವರಾಗಲಿ, ಕಲಿಯುದವರಾಗಲಿ ಇಬ್ಬರೂ ಸೇರಿ ವಿಲಾಯತಿಯ ಕಲಾಲರ ಜೋಳ್ಗೆ ಬೆಳೆಸಿ, ಸ್ವದೇಶೀ ಅಂದರೆ- ತಮ್ಮ ಸ್ವಂತ ಜನರ ಜೋಳ್ಗೆ ಕರಗಿಸಿ, ಅವರನ್ನು ಬರಡೊಳಗಿನ ಜೀವಂತಪ್ರೇತ ಮಾಡುತ್ತಿದ್ದಾರೆಂಬದು ಮಾತ್ರ ನಿಜ. ನಮ್ಮ ಜನರಲ್ಲಿ ಗೇಶಿಯ ಕರೆಯನ್ನು ಬಹಿರಂಗವಾಗಿ ಕುಡಿಯುವರು. ವಿಲಾಯತಿಯ ಬ್ರ್ಯಾಂಡಿಯನ್ನು ಕದ್ದು ಕುಡಿಯುವರು. ಇವರಲ್ಲಿ ಯಾರು ಸಂಭಾವಿತರೆಂಬದನ್ನು ಯಾರಾದರೂ ಊಹಿಸಬಹುದು.

ಧಾರವಾಡದಲ್ಲಿ ದೇಶೀ ಕರೆಯ ಮೂರು ಅಂಗಡಿಗಳುಂಟು. ಅವನ್ನು ಎರಡು ಮಾಡಿ, ಒಂದು ಹೊಸಯಲ್ಲಾಪುರ, ಮತ್ತೊಂದನ್ನು ಹೆಬ್ಬಳ್ಳಿಯ ದಾರಿಯ ಮೇಲಿಡಬೇಕೆಂದು ಗೊತ್ತಾಗಿದೆ. ಊರ ಹೊರಗೆ ಇಡಬೇಕೆಂದು ಈ ಪ್ರಕಾರ ವ್ಯವಸ್ಥೆ ಮಾಡಿದ್ದಾರೆ. ಊರ ಹೊರಗೆ ಅಂದರೆ ಮ್ಯುನಿಸಿಪಾಲಿಟಿಯ ಸೀಮೆ ದಾಟಿಯಲ್ಲ ಕುಡುಕರು ವಾಸವಾಗಿರುವಂಥ ಸ್ಥಳಗಳು! ಮೂರರ ಬದಲಾಗಿ ಎರಡು ಮಾಡುವದರಿಂದ ಅಂಗಡಿಗಳಲ್ಲಿ ದಾಟಿ ಹೆಚ್ಚಾಗುವದಲ್ಲದೆ, ವ್ಯಾಪಾರ ಕಡಿಮೆಯಾಗಲಾರದು. ದೇಶೀ ಕರೆಯಂತೆ ವಿಲಾಯತಿಯ ಕರೆಯು ಗುತ್ತಿಗೆ ಸಿಗುವ ಅಂಗಡಿಕಾರನಿಗೂ ಜವಾಬು ಬೇಕಸುವದು. ಹುಲಿಗೆ ಮನುಷ್ಯನ ರಕ್ತದ ರುಚಿಯು ಹತ್ತಿದಂತೆ, ಜನಗೆ ಕರೆ- ಬ್ರ್ಯಾಂಡಿಯ ಚಟ ಹತ್ತಿದೆ ಕಾಯದೆ ಮಾಡಿ, ಇದರ ಮಾರಾಟ ನಿಲ್ಲಿಸಿದ ಹೊರತು ಈ ವ್ಯಾಪಾರವೆಷ್ಟು ಬಂದಾಗಲಾರದು.

———

ಮೈಸೂರ ಸಂಸ್ಥಾನದಲ್ಲಿ ಹಿಂದೂ ಧರ್ಮಶಾಸ್ತ್ರದಲ್ಲಿ ಸುಧಾರಣೆ.

— ೦ —

ಮೈಸೂರ ಕಾಯದೆ ಕೌನ್ಸಿಲದ ಪ್ರಾಗತಿಕ ಪಕ್ಷದವರು ಹಿಂದೂ ಧರ್ಮಶಾಸ್ತ್ರದಲ್ಲಿ ಕೆಳಗಿನ ತಿದ್ದುಪಡೆಗಳಾಗಬೇಕೆಂದು ಸೂಚಿಸಿದ್ದಾರೆ.

೧ ಸೊಸೆ, ಅಣ್ಣತಮ್ಮಂದಿರ ಹೆಂಡರು, ಮಲತಾಯಿ ಮತ್ತು ಸೋದರ ಸೊಸೆ ಇವರನ್ನು ವಾರಸದಾರರಲ್ಲಿ ಸೇರಿಸಬೇಕು.

೨ ವಾರಸದಾರರ ನಿರ್ಣಯವನ್ನು ತೀರ ಸಮೀಪವಾಗುವಂಥವರಿಂದ ಪ್ರಾರಂಭಿಸಬೇಕು.

೩ ಕುರುಡರು, ಮೂಕರು ಮುಂತಾದವರಿಗೆ ವಾರಸಾ ಹಕ್ಕು ಹುಟ್ಟುವದಿಲ್ಲ. ಇವರಿಗೂ ವಾರಸಾ ಮತ್ತು ಹಿಸೇದ ಹಕ್ಕು ದೊರೆಯಬೇಕು.

೪ ತಂದೆತಾಯಿಗಳಿಲ್ಲದಂಥ ಪರದೇಶಿ ಹುಡುಗನನ್ನೂ ದತ್ತಕ ತಕ್ಕೊಳ್ಳುವ ಹಕ್ಕು ಹುಟ್ಟಬೇಕು.

೫ ಗಂಡನ ಆಜ್ಞೆ ಇರಲಿ; ಇಲ್ಲದಿರಲಿ; ವಿಧವೆಯರಿಗೆ ವಂಶಾಭಿವೃದ್ಧಿಗಾಗಿ ದತ್ತಕ ತ

ಕೊಳ್ಳುವ ಹಕ್ಕು ಇರಬೇಕು.

೬ ದತ್ತಕ ವಿಷಯಕವಾದ ನಂದ ಪದ್ಧತಿಯು ನ್ನು ತೆಗೆದು ಹಾಕಬೇಕು.

೭ ಪ್ರೌಢವಿವಾಹ ಮತ್ತು ವಿಧವಾ ವಿವಾಹ ಗಳನ್ನು ಸಶಾಸ್ತ್ರ ತಿಳಿಯಬೇಕು.

೮ ಯಾವದೊಂದು ಮೂಲ ಜಾತಿಯ ಉಪಜಾತಿಗಳಲ್ಲಾಗುವ ಶರೀರ ಸಂಬಂಧಗಳನ್ನು ಸಶಾಸ್ತ್ರವೆಂದು ತಿಳಿಯಬೇಕು.

೯ ಸ್ತ್ರೀಧನ ಮತ್ತು ಅವರಿಗೆ ಬೇರೆ ಮಾರ್ಗದಿಂದ ಬಂದ ಆಸ್ತಿ ಅಥವಾ ಧನದ ಮೇಲೆ ಸ್ತ್ರೀಯರ ಪೂರ್ಣ ಸ್ವಾಮಿತ್ವವಿರಬೇಕು.

೧೦ ಉಪಜಾತಿಗಳಲ್ಲಾಗುವ ಮದುವೆಗಳನ್ನು ಕಾಯದೆಶೀರ ಮಾಡಬೇಕು.

೧೧ ಮಹಾರೋಗ, ವ್ಯಭಿಚಾರ, ಕ್ರೂರಹಿಂಸೆ, ಬಿಡುವಕ್ಕೆ ಅಪಾಯ, ನಪುಂಸಕತ್ವ, ಜಾತಿಭ್ರಷ್ಟತೆ ಮುಂತಾದ ಅತೀವ ಪ್ರಸಂಗಗಳಲ್ಲಿ ಮಾತ್ರ ಸೋಡಪತ್ರ ಕೊಡಿಸಬೇಕು.

ಪಾತರದವರ ವಿಷಯವಾಗಿ ಮಹಾತ್ಮರ ಸನಿಕರವು.

—೦—

ಮಹಾತ್ಮರು ಮಾಯಾವರಮಕ್ಕೆ ಹೋದಾಗ, ಅನೇಕ ಜನ ದೇವದಾಸಿಯರು ಅವರನ್ನು ಕಾಣಲಿಕ್ಕೆ ಹೋಗಿ, ಅವರ ಮುಂದೆ ತಮ್ಮ ಹೃದಯ ವಿದಾರಕವಾದಂಥ ವೃತ್ತಾಂತ ಹೇಳಿಕೊಂಡರು. ಮಹಾತ್ಮರು ಅತ್ಯಂತ ಕರುಣಾಳುವಾಗಿ ಅಂದ್ದೇನಂದರೆ-

ದೇವದಾಸಿಯರ ಅವಸ್ಥೆಯನ್ನು ಕೇಳಿ, ನನ್ನ ಅಂತಃಕರಣದಲ್ಲಿ ಆಲ್ಲೋಲ ಕಲ್ಲೋಲವಾಯಿತು. ನಾವು ಇವರ ವಿಷಯವಾಗಿ ಎರಡು ಪ್ರಕಾರದ ಪಾಪ ಮಾಡುತ್ತೇವೆ. ದೇವದಾಸಿಯರೆಂದವರು ದೇವರ ಸೇವೆ ಮಾಡುವಂಥವರು. ಮತ್ತು ಇವರು ನಮ್ಮ ಸಹೋದರಿಯರಿದ್ದಾರೆ. ಇವೆರಡು ಭಾವಗಳ ಪ್ರಕಾರ ನಾವು ಅವರ ಕೂಡ ಮಾಡುವ ವ್ಯಭಿಚಾರವು ಪಾಪವಾಗುತ್ತದೆ. ಈ ತೆರನಾಗಿ ವಿಷಯ ಲಂಪಟರಾದವರು ಈ ಕರ್ಮ ಬಿಟ್ಟು, ವ್ಯಭಿಚಾರದ ಮೂಲವನ್ನೇ ಕಡಿದು ಹಾಕಬೇಕು. ದೇಹವಿಕ್ರಯಬಿಟ್ಟು, ಸನ್ಮಾರ್ಗದಿಂದ ನಡೆಯುವಂಥವರಿಗಾಗಿ ನಾನು ಒಂದು ಸ್ವತಂತ್ರವಾದ ವಾಸಸ್ಥಾನವನ್ನು ನಿರ್ಮಿಸುವೆನು.

ಮೊದಲು ಮಹಾತ್ಮರು ವ್ಯಭಿಚಾರ ಮಾಡುವಂಥವರು ದನಕ್ಕಿಂತ ದನವಾಗಿದ್ದಾರೆಂದು ಅಭಿಪ್ರಾಯ ಪಟ್ಟಿದ್ದಾರೆ.

ಹೊಸ ಚುನಾವಣೆ.

—೦—

ಧಾರವಾಡ ಜಿಲ್ಹಾ ಕಾಂಗ್ರೆಸ ಕಮಿಟಿಯ ಹೊಸ ವಾರ್ಷಿಕ ಸಾಧಾರಣ ಸಭೆಯು ಚುನಾವಣೆ ಮತ್ತು ಉಳಿದ ವಿಷಯಗಳ ಬಗ್ಗೆ ತಾರೀಖು ೯-೧೦-೩೭ನೇ ಇಸ್ವಿ ರವಿವಾರ ಮಧ್ಯಾನ್ಹ ೪ ಘಂಟೆಗೆ ಧಾರವಾಡ ಕಾಂಗ್ರೆಸ ಕಚೇರಿಯಲ್ಲಿ ಕೂಡುವದು.

ಚರ್ಚಿಸತಕ್ಕ ವಿಷಯಗಳು.

೧ ಕಳೆದ ವರ್ಷದ ಆಯವ್ಯಯ ಪತ್ರಿಕೆಯನ್ನೋದಿ ಮಂಜೂರ ಮಾಡುವದು.

೨ ಮುಂದಿನ ವರ್ಷದ ಚುನಾವಣೆಯ ಕಾರ್ಯವು ಅಂದರೆ-

(೧) ಹೊಸ ಅಧ್ಯಕ್ಷರನ್ನು, ಉಪಾಧ್ಯಕ್ಷರನ್ನು, ಕೋಶಾಧ್ಯಕ್ಷರನ್ನು, ಕಾರ್ಯದರ್ಶಿಗಳನ್ನು ಮತ್ತು ಕಾರ್ಯಕಾರಿ ಮಂಡಲವನ್ನು ಆರಿಸುವದು.

(೨) ಪ್ರಾಂತಿಕ ಕಮಿಟಿಗೆ ಕಳಿಸತಕ್ಕ ಪ್ರತಿನಿಧಿಗಳನ್ನು ಆರಿಸುವದು.

(೩) ಅಖಿಲಭಾರತ ಕಾಂಗ್ರೆಸ ಕಾರ್ಯಕಾರೀ ಮಂಡಲಕ್ಕೆ ಸಭಿಕರನ್ನು ಆರಿಸುವದು.

(೪) ಮದ್ರಾಸದಲ್ಲಾಗುವ ಈ ಸಾರೆಯ ಕಾಂಗ್ರೆಸಕ್ಕೆ ಜಿಲ್ಹೆಯ ಪತಿಯಿಂದ ಡೆಲಿಗೇಟರನ್ನು ಆರಿಸುವದು

(೫) ಕರ್ನಾಟಕ ಪ್ರಾಂತಿಕ ಪರಿಷತ್ತಿಗೆ ಅಧ್ಯಕ್ಷರನ್ನು ಡೆಲಿಗೇಟರನ್ನು ಆರಿಸುವದು.

೩ ಮುಂದಿನ ವರ್ಷದ ಆಯವ್ಯಯ ಪತ್ರಿಕೆಯನ್ನು ತಯಾರಿಸುವದು.

೪ ತಾರೀಖು ೨೧-೧೧-೧೯೩೭ನೇ ದಿವಸದ ಸಭೆಯಲ್ಲಿ ಪಾಸಾದ ೪ನೇ ಮತ್ತು ೫ನೇ ಠರಾವುಗಳ ವಿಚಾರ ಮಾಡುವದು.

೫ ಆಯಾ ತಾಲೂಕ ಕಾಂಗ್ರೆಸ ಕಮಿಟಿಗಳಿಂದ ೩ ವರ್ಷಗಳಿಂದಾ ಅಫೀಲಿಯೇಶನ್ ಫೀ ವಗೈರೆ ಬರತಕ್ಕ ಹಣದ ಭಾಗವು ಬಾರದೇ ಉಳಿದದ್ದು ಅದರ ಬಗ್ಗೆ ವಿಚಾರ,

೬ ಪ್ರಾಂತಿಕ ಕಾಂಗ್ರೆಸ ಕಮಿಟಿ ಕಚೇರಿಯನ್ನು ಎಲ್ಲಿ ಇಡಬೇಕು ಎಂಬ ಬಗ್ಗೆ ಮತ ಪ್ರಕಟನೆ ಮಾಡುವದು.

೭ ಅಧ್ಯಕ್ಷರ ಅಪ್ಪಣೆಯಿಂದ ಯೋಗ್ಯ ವಿಷಯಗಳು ಬಂದಲ್ಲಿ ಚರ್ಚಿಸಲ್ಪಡುವವು. ಈ ಪ್ರಕಾರ ವಿಚಾರ ನಿಶ್ಚಯಗಳಾಗತಕ್ಕವುಗಳಿದ್ದು, ಜಿಲ್ಹಾ ಕಾಂಗ್ರೆಸ ಕಮಿಟಿಯ ಯಾವತ್ತು ಸಭಿಕರು ತಪ್ಪದೇ ಈ ಸಭೆಗೆ ಬರಬೇಕೆಂದು ಪ್ರಾರ್ಥನೆ.

ಜಿ. ಕಾ. ಕ. ಧಾ. ಬಾಬೂರಾವ ಪಟವರ್ಧನ

ತಾ ೧೫-೯-೩೭ ಮಧ್ವ ಭೀಮರಾವ ಕಬಸ್ಸರ

ಕಾರ್ಯದರ್ಶಿಗಳು

ಖಾದಿಯ ಪ್ರಸಾರ-

ಶ್ರೀ. ಶಂಕರಲಾಲ ಬ್ಯಾಂಕರರವರು ಪ್ರೈಸೂರಸಂಸ್ಥಾನದ ತುಂಬ ತಿರುಗಾಡಿ, ಖಾದಿಯ ಪ್ರಸಾರದ ಬಗ್ಗೆ ಒಂದು ಯೋಜನೆ ಮಾಡಿದ್ದಾರೆ. ನೂಲು ಮತ್ತು ಖಾದಿಯ ಹುಟ್ಟುವಳಿಯು ದೆಸೆಯಿಂದ ದರಬಾರದ ಪೂರ್ಣ ಸಹಾನುಭೂತಿಯೂ ಸಹಾಯವೂ ಉಂಟು. ಸಧ್ಯದಲ್ಲಿ ನಂಜನಗೂಡಿನ ಹತ್ತಿರಿರುವ ಬದನವಾಳ ಗ್ರಾಮದಲ್ಲಿ ಖಾದಿಯ ಕಾರಖಾನೆಯನ್ನು ಪ್ರಾರಂಭಿಸುವರು. ದರಬಾರಿನವರು ಇದಕ್ಕಾಗಿ ೧೫೦೦ ರೂಪಾಯಿ ಮಂಜೂರ ಮಾಡಿದ್ದಾರೆ ೫೦೦ ರಾಟಿಗಳನ್ನೂ ೪೦ ಮಗ್ಗಗಳನ್ನೂ ಹಾಕುವರು. ಇಲ್ಲಾಗುವ ಎಲ್ಲ ಬಟ್ಟೆಗಳನ್ನು ಕೊಳ್ಳಲು ಮಹಾತ್ಮರ ನೂಲುವ ಸಂಘದವರು ಒಪ್ಪಿದ್ದಾರೆ.

ಮದ್ರಾಸದಲ್ಲಿ ಸೀಂಗೋಂಟಿಯ ಸತ್ಯಾಗ್ರಹದ ಮುಂದಾಳುವಾದ ಶ್ರೀ ಸ್ವಾಮಿ ಸಾಂಬಶಿವ ದ್ವಿಯಾರವರ ಮೇಲೆ ಪೋಲೀಸರು ಜಾಮೀನ ಮುಚ್ಚಳಿಕೆಯ ಫಿರ್ಯಾದಿ ಮಾಡಿದ್ದಾರೆ.

ಮದ್ಯಪಾನ ಪ್ರತಿಬಂಧಕ್ಕೆ ಪಿಕೆಟಿಂಗವು ಅವಶ್ಯವಾಗಿ ಬೇಕೆಂದು ಶ್ರೀ ಸುಭಾಷಚಂದ್ರ ಬೋಸರು ಕಲಕತ್ತೆಯ ಮಿತ ಮದ್ಯಪಾನ ಸಂಘದವರಿಗೆ ತಿಳಿಸಿರುತ್ತಾರೆ.

ಧಾರವಾಡ-

ನಿನ್ನೆ ಪ್ರಾತಃಕಾಲದಲ್ಲಿ ೯ ಘಂಟೆ ತಾಸಿನವರೆಗೆ ಚಳೋ ಮಳೆಯಾಯಿತು.

ಬುಧವಾರ ಪ್ರಾತಃಕಾಲದಲ್ಲಿ ಹುಬ್ಬಳ್ಳಿಯಲ್ಲಾದ ಮಳೆಯಿಂದ ಅಲ್ಲಿಯ ಸಳದ ಕೆರೆಗೆ ೧೧ ಫೂಟು ನೀರು ಬಂದಿದೆ. ಧಾರವಾಡದ ಕೆರೆಗೆ ಇಷ್ಟು ನೀರು ಬಂದಿರುವದಿಲ್ಲ. ಸುಮಾರು ಎಂಟು ತಿಂಗಳ ಬೇಜವಿಯುಂಟು.

ಸಪ್ಟಂಬರ ತಿಂಗಳಲ್ಲಿ ಸೇಕಂಡರಿ ಶಿಕ್ಷಕರ ಸಮ್ಮೇಲನ ಕೂಡುವದು. ಬಿ. ನಾಡಿಗೇರರು ಸ್ವಾಗತ ಕಮಿಟಿಯ ಚೇರಮನ್ನರಾಗಿದ್ದಾರೆ.

ಹುಬ್ಬಳ್ಳಿಯ ಸಾರ್ವಜನಿಕ ವ್ಯಾಯಾಮ ಶಾಲೆಯವರು ಈ ಸಾರೆ ದಸರೆಯ ದಿವಸ ಪ್ರತಿ ವರ್ಷಕ್ಕಿಂತ ದೊಡ್ಡ ಪ್ರಮಾಣದ ಮಂಡ್ಯಾಲಂಕಾರ ವರು.

ಹುಬ್ಬಳ್ಳಿಯಲ್ಲಿ ಭವಾನಿ ಎಂಬ ಕೇಸನೆ ಕೃಷ್ಣ ಕುಮಾರಿಯ ತಿರುಗಾಟವು ಟೂರು

ಸಹ ಒಂದು ಕಾಣುವವು. ಕೆರೆಯ ಭವ್ಯವಾದ ನೀರನ್ನು ನೋಡಿ ನಾನು ಉಪಹಾರಿದೆನು. ನೀರು ಗುಡ್ಡದ ಮೇಲಿಂದ ಬಿದ್ದು ಮುಂದೆ ಕುಮುದ್ವತಿ ನದಿಯೆಂದು ಕರೆಯಲ್ಪಡುವ ಕೋಡ, ರಾಣೇಬೆನ್ನೂರ ತಾಲೂಕಿನಲ್ಲಿ ಹರಿಯುದೆ. ನೀರು ಗುಡ್ಡದ ಮೇಲಿಂದ ಬೀಳುವದನ್ನು ನೋಡಿ ನನಗೆ ಆಶ್ಚರ್ಯವೂ ಭೀತಿಯೂ ಆಯಿತು. ನೀರು ಕೆಳಗೆ ಬಿದ್ದ ಮೇಲೆ ಅಲ್ಲಿನ ವಸ್ತುಗಳಿಂದ ಮಂಜುಗಡ್ಡೆಯಾಗಿ ನಮ್ಮ ಬಲದ ಕಿಲ್ಲಿ ತೇಲಿಯು ಹೋದವು. ಗಿರಿ ಸಪ್ಪೆ ಧಬಧಬಿಯು ಇದೇ ಮಾದರಿಯದಿದ್ದು ದೊಡ್ಡ ಪ್ರಮಾಣದಿಂದಿರುತ್ತದೆಂತಲೂ ಗೋಕಾಕ ತನಸ್ಸಿಂದ ಶಕ್ತಿಯನ್ನು ಸಂಗ್ರಹಿಸಿ ಗಿರಣಿಗಳನ್ನು ನಡೆಯಿಸುವರೆಂತಲೂ ನಮ್ಮ ಗುರುಗಳು ತಿಳಿಸಿದರು.

ನೀವು ಗುಡ್ಡವನ್ನು ಕೊರೆದು ಬಂದ ಕಾರಣವನ್ನು ಕರೆಯ ಇತಿಹಾಸವನ್ನು ಧಾರವಾಡ ಜಿಲ್ಲೆ ಭೂಗೋಲದಲ್ಲಿ ಬರೆದಿರುವದರಿಂದ ಅದನ್ನೇ ನಾನು ವಿಸ್ತಾರವಾಗಿ ಬರೆಯಲಾರೆನು. ನೀರ ಬೀಳುವ ಸ್ಥಳದಲ್ಲಿ ಮೇಲ್ಭಾಗಕ್ಕೆ ಕಲ್ಲಿನ ಕಟ್ಟೆ ಮಸ್ಕಿರೆ ಇರುವದರಿಂದ ಎಚ್ಚರಿಕೆಯಿಂದ ಎಲ್ಲರೂ ಅಲ್ಲಿ ಇಳಿದು ಸ್ನಾನ ಮಾಡಿಕೊಂಡು ಫಲಾಹಾರ ಮಾಡಿ ತೀರಿಸಿಕೊಂಡು ಸಾಗಿ ಕಟ್ಟಿದ ಕಿರಿದಾದ ಬಂಡೀ ನೋಡಿದ ಪೂರ್ವದ ಮೇಲೆ ಹಾದು ಮಾಸೂರ ಮಾರ್ಗವಾಗಿ ಊರಿಗೆ ಒಂದು ತಲುಪಿದೆವು.

ಶಿವನಗೌಡಾ ಬಸನಗೌಡಾ ಕರೇಗೌಡ್ರ.

ಮಾಮಲೇದಾರರಿಗೆ ಚೆನ್ನೆಯ ಪ್ರಸಾದ.

—೦—

ಬ್ಯಾಡಗಿ ಸಾಲ ಪಟ್ಟಣದ ಮಾಮಲೇದಾರರಾದ ಅಬ್ದುಲ ಗನಿ ಸಾ. ಜನಘರಿ ಎಂಬವರು ಸಿಪಾಯಿಯನ್ನು ಮುಂದೆ ಹಾಕಿಕೊಂಡು ಹೋಗುತ್ತಿದ್ದಾಗ, ಹಿಂದಿನಿಂದ ಯಾವನೋ ಒಂದವನೇ ಇಬರಿಗೂ ಚೆನ್ನೆಯ ಪ್ರಸಾದವನ್ನು ಬಹುದಿವಸ ನೆನಪಿರುವಂತೆ ಕೊಟ್ಟು, ಪಲಾಯನ ಹೇಳಿರುವ್ವಾನೆ

ಸ್ವಾಟಲಾಹೇಲಿನ ಡಸ್ತಗಿರಿ.

—೦—

ಇಂಗ್ಲಂಡದಿಂದ ಅಲ್ಲಿಸು ಕಾಲಿಕಾರರ ಸಂಸ್ಥೆಯ ವತಿಯಿಂದ ಇಲ್ಲಿಗೆ ಬಂದಿರುವ ಪೆ. ಸ್ವಾಟ ಸಾಹೇಬರನ್ನು ಪೋಲೀಸರು ರಾಜದ್ರೋಹದ ಆರೋಪದಿಂದ ದಸ್ತಗಿರ ಮಾಡಿದ್ದಾರೆ.

ಮೂರು ಆಟಗಳು ಮಾತ್ರ.

ಈ ಊರಿಗೆ ಪ್ರಥಮ ಆಗಮನ-

ಹೊಸ ಸಿನರಿ! **ಹೊಸ ಉಡುಪು!** **ಅಪೂರ್ವ ಸಮಯ!**

ಮೈಸೂರು ಶ್ರೀಮನ್ಮಹಾರಾಜರವರ ಕೃಪಾಪೋಷಣೆಗೆ ಪಾತ್ರವಾಗಿ ಮೈಸೂರು ದೇಶದ ಎಲ್ಲಾ ಸ್ಥಳಗಳಲ್ಲಿಯೂ, ಕೊಡಗು, ಮದ್ರಾಸ, ಮತ್ತು ದಕ್ಷಿಣ ಮದ್ರಾಸು, ಬಳ್ಳಾರಿ ಅನಂತಪುರ, ಮಂಗಳೂರು ಪ್ರಾಂತಗಳಲ್ಲಿಯೂ ಹುಬ್ಬಳ್ಳಿ ಗದಗ ಮೊದಲಾದ ಬೊಂಬಾಯಿ ಪ್ರಾಂತಗಳಲ್ಲಿಯೂ ಸಂಚರಿಸಿ, ವಿಶೇಷ ಬಹುಮಾನಗಳನ್ನು, ಬಂಗಾರದ ಪದಕಗಳನ್ನೂ ಪ್ರಶಸ್ತಿಗಳನ್ನೂ ಪಡೆದು ಸುಪ್ರಸಿದ್ಧಿಯನ್ನು ಹೊಂದಿರುವ

ವಿನೋದ ರತ್ನಾಕರ ಜಿ. ಹೆಚ್. ವೀರಣ್ಣನವರ

ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ

ಸಂಘದವರು

ಧಾರವಾಡ ಅನ್ನಪೂರ್ಣಾ ಥಿಯೇಟರಿನಲ್ಲಿ

ತಾರೀಖು ೧೮-೯-೩೭ ಭಾನುವಾರ ಸಾಯಂಕಾಲ

ಪ್ರಮೀಳಾ.

ತಾರೀಖು ೨೦-೯-೩೭ ಮಂಗಳವಾರ ರಾತ್ರಿ

ಪ್ರಹ್ಲಾದ.

ತಾರೀಖು ೨೧ ೯-೩೭ ಬುಧವಾರ ಸಾಯಂಕಾಲ

ನಿರುಪಮಾ.

ಎಂಬ ಆಖ್ಯಾನಗಳನ್ನು ಅಭಿನಯಿಸುವರು. ಸರ್ವರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಧಾರವಾಡ ಸೋಮವಾರ. ತಾ||೧೩-೯-೧೯೩೭. } **ವಿನೋದ ರತ್ನಾಕರ ಜಿ. ಹೆಚ್. ವೀರಣ್ಣ.** (ವರ್ಸಟೈಲ್ ಕಮೆಡಿಯನ್) ಪ್ರೊಪ್ರೈಟರ್

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಿಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೦—೦ ರೂ
ವಾರ ಪತ್ರಿಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

—೦—

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರಿಕಾ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ಪತ್ರಿಕೆ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಮ್ಯಾನೇಜರ ವಿಜಯ ಧಾರವಾಡ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಪರಿಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೀತಿ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ... ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಆಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1449

ನಿತ್ಯ ಪತ್ರ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೮] ಧಾರವಾಡ ರವಿವಾರ ತಾರೀಖು ೧೮ ನೇ ಸಪ್ಟಂಬರ ೧೯೨೭ [ಸಂಚಿಕೆ ೨೦೧

ಹಂಗಾಮು ಮುಗಿಯು ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಬಹಳ ಶೀಘ್ರವಾಗಿ ಕಾಳುಗಳನ್ನು ತೆಗೆಯುವ ಯಂತ್ರಗಳು. ಇವುಗಳ ವೈಶಿಷ್ಟ್ಯವೇನೆಂದರೆ ಉಕ್ಕಿನ ಕಂಬಗಳ ಚೌಕಟ್ಟು ಹಿತ್ತಾಳೆ ಬೇರಿಂಗುಗಳು ಇರುವದರಿಂದ ಯಂತ್ರವು ಅಚ್ಚುಕಟ್ಟಾಗಿ ನಡೆಯುವದಲ್ಲದೆ ಮಿಶ್ರ ... ಇವುಗಳಲ್ಲಿ ಕಾಳು ಬೇಳೆ ಯಾಗುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ... ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿಪಾವಳಿ ಮುಂಚಿನಿಂದ ಪ್ರಕಟವಾದ

ಕನ್ನಡ ನಿಬಂಧರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟಿದ್ದಲ್ಲದೆ, ರಿಪೋರ್ಟ, ಅರ್ಜಿ ಮುಂತಾದ ಪತ್ರವ್ಯವಹಾರದ ಕೆಲವು ಮುಖ್ಯದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ:— ೧ ರಾ ರಾ ಬಿ ಜಿ ದಿವೇಕರ,

ಮಾಳಮಡ್ಡಿ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಪ್ಪ

ಪ್ರಿಂಟಿಂಗ ಬುಕ್ ಡಿಪೋ, ಹುಬ್ಬಳ್ಳಿ

WANTED.

Wanted Candidates for Telegraph and Station Master's Courses. Railway Fare GRANTED Boarding Seat FREE. Prospectus on 2 annas stamp,—Presidency Telegraph College, Royapettah Madras.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಸಲ್ಪಡುವದು. ಠಾಹೀವು ಮತ್ತು ಚಾಲು ತರದ ಠೇವುಗಳಿಗೆ ಅನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಿಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಪದ್ಧತಿಯ ದರವು ನೂರಕ್ಕೆ ತಿಂಗಳಿಗೆ ... ಇರುತ್ತದೆ.

ಎ. ಕೆ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೧೮-೯-೨೭ ನೇ ಇಸ್ವಿ

ಅಸೆಂಬ್ಲಿಯಲ್ಲಿ ಸರಕಾರದ ಎರಡು ಸೋಲುಗಳು.

ಅಸೆಂಬ್ಲಿಯ ವಾದವಿವಾದದಲ್ಲಿ ಸರಕಾರ ಪಕ್ಷೀಯರು ಎರಡು ಸಾರೆ ಸೋತು ಪ್ರಜಾ ಪಕ್ಷದ ಜಯವಾಯಿತು. ವಿಲಾಯತಿಯಲ್ಲಿ ಈ ಪ್ರಕಾರ ಪೆಟ್ಟಿನ ಮೇಲೆ ಪೆಟ್ಟು ಕಂಡ ಮಂತ್ರಿಗಳ ಅಪಜಯವಾಗಿದ್ದರೆ ಅವರು ರಾಜೀನಾಮೆ ಕೊಟ್ಟು, ಪಾರ್ಲಿಮೆಂಟದ ಹೊಸ ಚುನಾವಣೆಯಾಗುತ್ತಿತ್ತು. ಒಂದೇ ಸಾಮ್ರಾಜ್ಯ, ಒಂದೇ ಪಡಿಯಚ್ಚಿನ ಕಾಯದೆ; ಆದರೂ ಅಧಿಕಾರ ಬೇರೆಯಾದ್ದರಿಂದ ಹಿಂದುಸ್ಥಾನದಲ್ಲಿ ಸರಕಾರಕ್ಕೆ ಎಷ್ಟು ಅಪಜಯಗಳು ಬಂದರೂ, ಅವುಗಳ ವ್ಯಥೆಯು ಆಳರಸರಿಗೆ ಆನೆಗೆ ಸೊಳ್ಳೆ ಕಡಿದಷ್ಟು ಕೂಡ ಆಗುವದಿಲ್ಲ. ಏಕಂದರೆ ಮುಯ್ಯಕ್ಕೆ ಮುಯ್ಯವೆನಿಸುವಷ್ಟು ಬಲವು ಹಿಂಬಲವು ಮೆಂಬರರಿಗೆ ಇರುವದಿಲ್ಲ.

ಸರಕಾರವು ಮೊದಲು ಸೋತದ್ದು ರಿಝರ್ವ ಬ್ಯಾಂಕಿನ ಬಿಲ್ಲಿನಿಂದ. ಈ ಬ್ಯಾಂಕಿನ ದೊರೆತನದಲ್ಲಿ ಹಿಂದೀ ಜನರ ವಿಶೇಷವಾಗಿ ಅಸೆಂಬ್ಲಿಯ ವತಿಯಿಂದ ಇಬ್ಬರು ಮೆಂಬರರಿರಬೇಕೆಂದು ಕಡುತರ ಜಗಳ ಹುಟ್ಟಿತು. ಇದರ ಬಿಲ್ಲೇ ದುರ್ಮುಹೂರ್ತದಲ್ಲಿ ಜನನ ಹೊಂದಿದೆ. ಇದರ ನಿಯಮಗಳನ್ನು ಗೊತ್ತು ಮಾಡುವದಕ್ಕಾಗಿ ಕೂಡಿಸಿದ ಸಿಲೆಕ್ಟ ಕಮಿಟಿಯ ಮೆಂಬರರಿಗೂ, ಜನಕರಾದ ಕೋಶಾಧ್ಯಕ್ಷ ಸರ ಬ್ಲೆಕೆಟಸಾಹೇಬರಿಗೂ ನಾನಾರು ಸಾರೆ ಮನಸ್ತಾಪವಾಗಿ ಹಗ್ಗ ಹರಿದು ಹೋಗುವಷ್ಟು ರಣಪಿತ್ತವಾಯಿತು. ಸರ್ವಾಧಿಪತಿಗಳಾದ ಲಾರ್ಡ ಆಯರ್ವಿನಸಾಹೇಬರು ಮಧ್ಯಸ್ಥಿ ಮಾಡಿದರು. ನಡುವೆ ಒಡಂಬಡಿಕೆಯಾದಂತೆ ತೋರಿತು. ಈ ರಾಜಿಗೆ ಭಾರತ ಮಂತ್ರಿಯವರು ಒಪ್ಪಲಿಲ್ಲ. ಹೀಗೆ ರಾಜಿಯು ಹುಳಿಗೆಡಲು ಸರ ಬ್ಲೆಕೆಟಸಾಹೇಬರು ತಮ್ಮ ಅಪಮಾನವಾಯಿತೆಂದು ರಾಜೀನಾಮೆ ಕೊಡಲು ಸಿದ್ಧರಾಗಿದ್ದಾರೆ. ಸದ್ಯದಲ್ಲಿ ಈ ಬಿಲ್ಲಿನ ವಿಚಾರವನ್ನು ತಹಕೂಬ ಮಾಡಿದ್ದಾರೆ. ವಿಲಾಯತಿ ಸರಕಾರದವರು ಇನ್ನೊಮ್ಮೆ ಅಸೆಂಬ್ಲಿ ಕೂಡುವ ಮುಂಚಿತವಾಗಿ ಸರ ಬ್ಲೆಕೆಟಸಾಹೇಬರ ಕೋರಿಕೆಯನ್ನು ಪೂರ್ಣ ಮಾಡದಿದ್ದರೆ ಇವರು ದಿಸೆಂಬರ ತಿಂಗಳಲ್ಲಿ ರಾಜೀನಾಮೆ ಕೊಟ್ಟು ಸ್ವದೇಶದ ದಾರಿ ಹಿಡಿಯುವರು. ವಿಲಾಯತಿ ಸರಕಾರದ ಈ ಕೃತ್ಯವನ್ನು ನಿಷೇಧಿಸುವದಕ್ಕಾಗಿ ಶ್ರೀ ಚಮನಲಾಲರು ಅಸೆಂಬ್ಲಿಯಲ್ಲಿ ಠರಾವು ತಂದರು. ಅದು ಲೋಕಪಕ್ಷದ ವಿಜಯವೆನ್ನುವಷ್ಟು ಸೊಗಸಾದ ರೀತಿಯಿಂದ ಪಾಸಾಗಿರುತ್ತದೆ.

ಎರಡನೆಯ ಠರಾವು ಸ್ಕೀನ ಕಮಿಟಿಯ ದೆಸೆಯಿಂದಿರುತ್ತದೆ. ಹಿಂದೀ ಜನರು ತಮ್ಮ ದೇಶರಕ್ಷಣೆ ಮಾಡಿಕೊಳ್ಳುವ ಸಾಮರ್ಥ್ಯವನ್ನು ತಮ್ಮಲ್ಲಿ ಹುಟ್ಟಿಸಿಕೊಳ್ಳದಿದ್ದರೆ ಅಂಥ ಸ್ವರಾಜ್ಯವೆಂಬ ಪ್ರಶ್ನವು ಸಹಜವಾಗಿ ಹೊರಡುತ್ತದೆ. ಸ್ಕೀನ ಕಮಿಟಿಯಾಯಿತು. ವಿಚಾರಪೂರ್ಣವಾಯಿತು; ಗೋಳಗು ಮುಟ್ಟಿವಾಯಿತು. ಮುಂದೇನೆನ್ನುವಂತೆ ಇದರ ಕರ್ಮಕಥೆಯಾಗಿರುತ್ತದೆ. ಈ ಕಮಿಟಿಯು ರಿಪೋರ್ಟ ಹಿಂದೀ ಜನರ ಮಹತ್ವಾಕಾಂಕ್ಷೆಗಳನ್ನು ಬಹು ಮಟ್ಟಿಗೆ ಪೂರ್ಣ ಮಾಡುವಂತಿರುವದರಿಂದ, ಇದರ ಕಲಮುಗಳನ್ನು ಅಮಲಿನಲ್ಲಿ ತರಬೇಕೆಂದು ಅಸೆಂಬ್ಲಿಯ ಮೆಂಬರರು ಬಹುಮತದಿಂದ ಹೇಳಲಾರಂಭಿಸಿದ್ದಾರೆ. ಆದರೆ ಸರಕಾರದ ಧೋರಣವು ಬೆನಕನ ಪರಿಯಂತೆ ಮುಂದೆ ಬೀಳುತ್ತಿರುವದು. ಹಿಂದೀ ಜನರನ್ನು ದಂಡಿನಲ್ಲಿ ತಕ್ಕೊಂಡು ಅವರಿಗೆ ಕರ್ನಲ, ಕ್ಯಾಪ್ಟನ, ಜನರಲ ಮುಂತಾದ ಅಧಿಕಾರಗಳನ್ನು ಕೊಡುವದು ಆಳರಸರಿಗೆ ಜೀವದ ಮೇಲೆ ಬಂದಿದೆ. ಹಿಂದೀ ಜನರು ಈ ತರದ ಯೋಗ್ಯತೆಯನ್ನು ಮೊದಲು ಪಡೆಯಲೆಂದು ಹಳೇ ಹಳಸಿದ ಮಾತನ್ನೇ ಹೇಳುವರು. ಮೊದಲಿನಿಂದಲೂ ಯುದ್ಧ ಖಾತೆಯಲ್ಲಿ ಸೇರಿದಂಥ ಕುಲಗಳನ್ನೇ ಮುಂದೆ ತರಬೇಕೆಂದು ಸರಕಾರಕ್ಕೆ ಕೆಲ ಕುಲಗಳ ಜನರು ಅರ್ಜಿ ಮಾಡಿದ್ದಾರೆ. ಸೇನಾಧಿಪತಿಗಳಿಗೆ ಹೆಚ್ಚು ಬೇಕೆನಿಸಿದ್ದಾರೆ- ಇದರಿಂದ ಸುಶಿಕ್ಷಿತರಾದಂಥ ಅನೇಕ ಕುಲಗಳ ಜನರು ದಂಡಿನಲ್ಲಿ ಸೇರಲು ಅವಕಾಶ ದೊರೆಯುವ ಸಂಭವವುಂಟು. ಈಗಿನ ಯುದ್ಧದಲ್ಲಿ ಮೊದಲಿನ ಕಾಲದ ಗದಾಯುದ್ಧದಂತೆ ಬರೇ ಶಕ್ತಿಯು ಬೇಕಾಗಿಲ್ಲ.

ಶಾಸ್ತ್ರೀಯವಾದ ನವೀನ ಶೋಧಗಳಿಂದ ಯುದ್ಧ ನಡೆಯುವದು. ಆದದರಿಂದ ಅರ್ವಾಚೀನ ಪದ್ಧತಿಗನುಸರಿಸಿ, ಯುದ್ಧ ಶಾಸ್ತ್ರ ಬಲ್ಲವಂಥವರೇ ಹೆಚ್ಚಾಗಿ ಬೇಕಾಗುತ್ತಾರೆ. ಇಂಥವರನ್ನು ದಂಡಿನಲ್ಲಿ ಸೇರಿಸಿಕೊಳ್ಳಬೇಕೆಂದು ಅಸೆಂಬ್ಲಿಯ ಮತವು ಮವಾಳ, ರಾಷ್ಟ್ರೀಯ, ಸ್ವತಂತ್ರ ಸ್ವರಾಜ್ಯ ಮೊದಲಾದ ಎಲ್ಲ ಪಕ್ಷಗಳ ಮೆಂಬರರು ಒಂದಾಗಿದ್ದಾರೆ. ಸೇನಾಧಿಪತಿ ಮತ್ತು ಅವರ ಸೇಕ್ರೆಟರಿಯು ಈ ಠರಾವಿನ ಬಗ್ಗೆ ಅಗ್ರಹ ತೋರಿಯುಹೇರಿದ ಎಲ್ಲವನ್ನೂ ಸರಿಗಾಣಿಸುವೆವೆಂಬ ಆಶೆ ತೋರಿಸಿದ ಭಾಷಣ ಮಾಡಿದರು. ಹಿಂದೀ ಲೋಕಮತವು ಹೇಗಿರುತ್ತದೆಂದು ಸಾರ್ವಜನಿಕವಾಗಿ ಪ್ರಸಿದ್ಧವಾಗಬೇಕಾದದರಿಂದ, ಅಸೆಂಬ್ಲಿಯವರು ಈ ಬಗ್ಗೆ ತಮ್ಮ ವಿಚಾರಗಳನ್ನು ತೋರಿಸಿದರು. ತಮಗೆ ಸೋಲು ಬರುವದೆಂದು ಆಳರಸರಿಗೆ ಗೊತ್ತಾದ್ದರಿಂದ, ಅವರು ಮತ ತಕ್ಕೊಳ್ಳಬೇಕೆಂದು ಆಗ್ರಹ ತೊಡಲೇ ಇಲ್ಲ. ಹೀಗಾಗಿ ಈ ವಿಷಯವಾಗಿಯೂ ಸರಕಾರದ ಪಾಲಿಗೆ ಸೋಲು ಬಂತು.

ರಿಝರ್ವ ಬ್ಯಾಂಕು, ಸೈನ್ಯ ಶಿಕ್ಷಣ ಇವೆಲ್ಲ ರಾಜ್ಯದ ಸ್ವಾಧೀನದ ಪೂರ್ವ ಚಿನ್ಹಗಳಾಗಿವೆ. ರಿಝರ್ವ ಬ್ಯಾಂಕಿನಿಂದ ದ್ರವ್ಯದ ಮೇಲೆ ಪ್ರಜರ ಹುಕುಮತ್ತು ನಡೆಯುವದು. ಸೈನ್ಯ ಶಿಕ್ಷಣದಿಂದ ಹಿಂದೀ ಜನರಲ್ಲಿ ಹಿಂಬಲ ಬರುವದು. ಇವೆರಡರಲ್ಲಿಯೂ ಒಮ್ಮೆ ಸ್ವದೇಶಿಯರ ಅಧಿಕಾರ ನಡೆದರೆ ತಮ್ಮ ವರ್ಚಸ್ಸು, ತಮ್ಮ ಬಲ ಮತ್ತು ಸಾರೋದ್ಧಾರ ಅಧಿಕಾರ ಕಡಿಮೆಯಾಗುವದೆಂದು ವಿಲಾಯತಿ ಸರಕಾರದವರು ಚಿಂತಿಸುತ್ತಿದ್ದಾರೆ. ಅವರ ಚಿಂತೆಯನ್ನು ಕೇಳುವ ಕಾಲ ಹಿಂದಾಗಿ, ಹಿಂದುಸ್ಥಾನವು ಹೆಚ್ಚೆಚ್ಚು ಪ್ರಗತಿ ಹೊಂದುವ ಕಾಲ ಮುಂದಾಗಿರುತ್ತದೆಂಬದು ನಿರ್ವಿವಾದವಾಗಿರುತ್ತದೆ.

ಹಿಂದೂ ಮುಸಲಮಾನರ ಕಲಹಗಳು.

ಲಖನೌದಲ್ಲಿರುವ ಒಂದು ಶಿವಾಲಯದಲ್ಲಿರುವ ಪಿಂಡಿಯನ್ನೂ ನಂದಿಯನ್ನೂ ಪುಡಿಮಾಡಿದ್ದಾರೆ.

ಮುಜಫ್ಫರನಗರದಲ್ಲಿ ದೇವಾಲಯಗಳ ಹತ್ತಿರುವ ಬಾವಿಗಳಲ್ಲಿ ಗೋಮಾಂಸ ಚಲ್ಲಿ ಅವನ್ನು ಭ್ರಷ್ಟ ಮಾಡಿದ್ದಾರೆ.

ಸೋಲಾಪೂರದಲ್ಲಾದ ದಂಗೆಯಲ್ಲಿ ಒಬ್ಬ ಹಿಂದೂ ಸ್ತ್ರೀಯೂ ಪ್ರಾಣಾಹುತಿ ಕೊಟ್ಟಳು

ಮುಂಬಯಿಯ ಹತ್ತರಿರುವ ವೈರಸೋವಾದ ಕೋಳಿಗಾರರು ಮುಸಲಮಾನರಿಗೆ ಬಹಿಷ್ಕಾರ ಹಾಕಿ, ಅವರಲ್ಲಿ ಯಾವ ಉದ್ಯಮ ವ್ಯವಹಾರ ಮಾಡಬಾರದೆಂದು ಕಟ್ಟು ಮಾಡಿದ್ದಾರೆ.

ನಾಗಪೂರದ ಗವ್ಹರ್ನರಸಾಹೇಬರು ಶಾಂತತೆಯ ರಕ್ಷಣೆಗಾಗಿ ಹಿಂದೂ, ಮುಸಲಮಾನ ಮತ್ತು ಸರಕಾರೀ ಕಾಮದಾರರ ಒಂದು ಕಮಿಟಿ ನೇಮಿಸಿದ್ದಾರೆ.

ಗಣಪತಿಯ ವಿಸರ್ಜನ ಸಮಯದಲ್ಲಿ ಒಡೋದೆ ರಾಜ್ಯಕ್ಕೆ ಸೇರಿದ ಸೋನಗಡದಲ್ಲಿ ಹಿಂದೂ ಮುಸಲಮಾನ ದಂಗೆಯಾಗಿ ನಾಲ್ವರು ಘಾಯ ಹೊಂದಿದ್ದಾರೆ.

ಚಿಕ್ಕವರ ಮದಿವೆಯ ಮೇಲೆ ಧಾಡಿ.

—(೦)—

೧೨ ವರ್ಷದೊಳಗಿನವರ ಮದಿವೆ ಮಾಡಕೂಡದು.

—೦—

ಲೆಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿ ರಾವಸಾಹೇಬ ಹರಿವಿಲಾಸ ದಾಸರು ಹಿಂದುಸ್ಥಾನದಲ್ಲಿ ಯಾವದೇ ಜಾತಿಯವರಾಗಲಿ, ೧೨ ವರ್ಷದೊಳಗಿನ ಹುಡುಗಿಯರ ಮತ್ತು ೧೫ ವರ್ಷದೊಳಗಿನ ಹುಡುಗರ ಮದಿವೆ ಮಾಡಬಾರದೆಂಬದಾಗಿ ಕಾಯದೆ ಮಾಡುವ ಬಿಲ್ಲನ್ನು ತಂದಿದ್ದಾರೆ. ಈ ಬಿಲ್ಲು ಬಹುಪೇಕ ಜನ ಮೆಂಬರರಿಗೆ ಸಮ್ಮತವಾಗಿದ್ದು, ಅದು ವಿಚಾರಕ್ಕಾಗಿ ಪದ್ಧತಿ ಪ್ರಕಾರ ಸಿಲೆಕ್ಟ ಕಮೀಟಿಯ ಕಡಿಗೆ ಕಳಿಸಬೇಕೆಂಬದಾಗಿ ಠರಾವು ಪಾಸ ಆಗಿರುತ್ತದೆ. ಶ್ರೀ ಶ್ರೀನಿವಾಸ ಅಯ್ಯಂಗಾರ, ಎಮ್. ಕೆ. ಆಚಾರ್ಯ, ಬ್ಯಾರಿಸ್ಟರ ಜಯಕರ, ಶ್ರೀ ಕೇಳಕರ, ಲಾಲಾ ಲಜಪತರಾಯ, ಪಂಡಿತ ಮಾಲವಿಯಾ ಮೊದಲಾದವರೆಲ್ಲರೂ ಈ ಕಾಯದೆಗೆ ಅನುಕೂಲ ಮತ ಕೊಟ್ಟಿದ್ದಾರೆ. ಸಿ. ಬೆಳವಿಯವರು ಮಾತ್ರ ವಿರುದ್ಧ ಮತ ಕೊಟ್ಟು, ಕಾಯದೆ ಮಾಡುವದರಿಂದ ಲೋಕಮತ ಕಲಬೇಕೆಂದಿದ್ದಾರೆ.

—

ಕೊಲ್ಹಾಪೂರದಲ್ಲಿ ಸುಲ್ತಾನಶಾಹಿ.

—೦—

ಕೊಲ್ಹಾಪೂರದ ಮಹಾರಾಜರ ಆಜ್ಞಾಪತ್ರವೆಂದು ಕೆಳಗಿನ ಮೂರು ವರ್ತಮಾನಪತ್ರಗಳು ಸಂಸ್ಥಾನದಲ್ಲಿ ಬರಕೂಡದೆಂದು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

೧ ಸಂಗ್ರಾಮ
೨ ಸಂಸ್ಥಾನ ಸ್ವರಾಜ್ಯ
೩ ಸಂದೇಶ

—

ಎದೆಗೆ ಪಿಸ್ತೂಲ ಹಚ್ಚಿ ಕಳವು.

—೦—

ಇಂಗ್ಲೆಂಡದಂಥ ಸುಧಾರಿಸಿದ ದೇಶದಲ್ಲಿ ಬ್ರಿಸ್ಟಾಲ ಪಟ್ಟಣದ ಗರಿಯ ಸ್ಟೇಶನದಲ್ಲಿ ಒಬ್ಬನು ಉಗಿಬಂಡಿಯಲ್ಲಿ ಹತ್ತಿ, ಪ್ರಯಾಣಿಕರಿಗೆ ರಿವಾಲ್ವರದ ಹೆದರಿಕೆ ತೋರಿಸಿ, ಅವರ ಬಳಿಯ ಬಂದು ಮೊತ್ತ ಅವರಲ್ಲಿದ್ದದ್ದನ್ನ ಕಸಕೊಂಡು ಸ್ಟೇಶನದಲ್ಲಿಳಿದು, ಟಿಕಿಟ ಕಲೆಕ್ಟರನಿಗೂ ಹೆದರಿಕೆ ಹಾಕಿ ಮುಂದೆ ಸಾಗಿದನು. ಈ ಕೃತ್ಯದ ಬೊಬ್ಬಾಟವಾಗಿ, ಜನರು ಕೂಡಿದರು ಇವನಿಗಿಂತ ಗಟ್ಟಿಗನಾದವನು ಇವನ್ನು ಹಿಡಿದನು.

ಮಹಾರಾಣಿ ಲಕ್ಷ್ಮೀಬಾಯಿ.

—೦—

ದ್ವಿತೀಯ ಮುದ್ರಣ.

ಕರ್ನಾಟಕ ಹಿತೈಷಿಣೀ ಗ್ರಂಥಮಾಲೆಯ ೪ ನೆಯ ಪುಷ್ಪವಾದ "ಮಹಾರಾಣಿ ಲಕ್ಷ್ಮೀಬಾಯಿ" ಪುಸ್ತಕದ ದ್ವಿತೀಯ ಮುದ್ರಣದ ಪ್ರತಿಯು ನಮ್ಮ ಕಡೆಗೆ ವಿಮರ್ಶೆಗಾಗಿ ಬಂದಿರುವದು. ೧೮೫೭ ನೆಯ ಇಸ್ವಿಯ ಬಂಡಾಯದ ಪ್ರಾಮುಖ್ಯವಾದ ಎಲ್ಲ ಐತಿಹಾಸಿಕ ಘಟನೆಗಳನ್ನೂ ಝಾಂಸಿಯ ಮಹಾರಾಣಿ ಲಕ್ಷ್ಮೀಬಾಯಿಯ ದ ಅಪೂರ್ವವೂ ಸ್ಫೂರ್ತಿದಾಯಕವೂ ಆದ ಜೀವನ ಚರಿತ್ರೆಯನ್ನು ಒಳಕೊಂಡಿರುವ ಈ ಐತಿಹಾಸಿಕ ಕಾದಂಬರಿಯು ಐದು ಮನೋಹರವಾದ ಚಿತ್ರಗಳಿಂದ ಅಲಂಕೃತವಾಗಿದೆ. ಗ್ರಂಥದ ಭಾಷೆಯೂ ವಿಷಯ ವಿವೇಚನೆಯೂ ವಾಚಕರ ಮನಸ್ಸನ್ನು ಆಕರ್ಷಿಸಿ ಅಂತಃಕರಣವನ್ನು ಕಲಕಿಸಿ ಬಿಡುವವು. ಪ್ರೊ. ಎಸ್. ಚನ್ನಕೇಶವ ಅಯ್ಯಂಗಾರರ ಪ್ರಸ್ತಾವನೆಯೂ ಶ್ರೀ. ಭಾರದ್ವಾಜರ ಟೀಕೆಯೂ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯಗಳ ಐತಿಹಾಸಿಕ ಸತ್ಯತೆಯನ್ನೂ ಅದರ ಪ್ರಸ್ತುತ ಕಾಲದ ಉಪಯುಕ್ತತೆ ಮನೋಹರತೆಗಳನ್ನೂ ಪಡಿಸುವವು.

ಮೊದಲನೆಯ ಮುದ್ರಣದಲ್ಲಿ ಪ್ರತಿಪಾದಿತವಾದ ವಿಷಯಗಳನ್ನು ಹೆಚ್ಚು ವಿಶದವಾಗಿ ಪ್ರತಿಪಾದಿಸಿ ಗ್ರಂಥದ ಆಕಾರವನ್ನು ಮೊದಲಿನ ಒಂದೂವರೆ ಮಡಿಯಷ್ಟು ಬೆಳಿಸಿ ಮತ್ತು ಬೆಲೆಯನ್ನು ಒಂದೇ ರೂಪಾಯಿ ಇಟ್ಟಿರುವರು. ಗ್ರಂಥಕಾರರ ಮುಕ್ತ ಪುಸ್ತಕಗಳಂತೆ ಇದೂ ಸರ್ವಜನ ಪ್ರಿಯವಾಗುವದೆಂಬದರಲ್ಲಿ ಸಂಶಯವಿಲ್ಲ.

ಭಾಷೆಯ ದೃಷ್ಟಿಯಿಂದಲೂ ವಿಷಯದ ದೃಷ್ಟಿಯಿಂದಲೂ ತುಂಬಾ ಮಹತ್ವದ್ದಾದ ಈ ಗ್ರಂಥವು ಸಾಲೆ ಕಾಲೇಜ ಕಲಿಯುವವರು ಪುಸ್ತಕದಂತೆ ಉಪಯೋಗಿಸಲು ತಕ್ಕದ್ದಾದ ಒಂದು ಅತ್ಯುತ್ತಮ ಪುಸ್ತಕವೆಂದು ಬಹು ಜನರು ಸ್ವೀಕರಿಸುತ್ತಿರುವಾಗ ನಾವೇ ನು ಹೆಚ್ಚಿಗೆ ಹೇಳಬೇಕಾಗಿದೆ?

ಶ್ರೀ. ಕುಂಡಿಯವರು ಕನ್ನಡಿಗರಿಂದ ಪ್ರೋತ್ಸಾಹಿತರಾಗಿ ಇನ್ನೂ ಇಂಥವೇ ಅನೇಕ ಗ್ರಂಥಗಳನ್ನು ರಚಿಸಿ ಶ್ರೇಯೋವಂತರಾಗಲೆಂದು ಹಾರೈಸುವೆವು.

—

ತಮಿಳನಾಡಿನಲ್ಲಿ ಪ್ರವಾಸ ಮಾಡುವ ಕಿನೇಕ ಸೌಥ ಇಂಡಿಯನ್ನ ರೇಲ್ವೆ ಕಂಪನಿಯವರು ಪ್ರವಾಸ್ತರಿಗಾಗಿ ವಿಶಾಲವಾದ ಒಂದು ಡಬ್ಬಿಯನ್ನು ನಿರ್ಮಾಣ ಮಾಡುವರು. ಮತ್ತು ಅದರಲ್ಲಿ ಕೊರಾವನ್ನು ಜನರಿಂದಲೇ ಹಾಸಿಲು ತಕೆಕೊಳುವರು.

ಮದಗವಹೊಸಕೆರೆ ಸರೋವರದ ಭವ್ಯ ನೋಟವು.

—

ಸೋರಬ ತಾಲೂಕ ಕೆರೆ ಲಿ. ತಾಳಗುಪ್ಪೆ ವಿದ್ಯಾರ್ಥಿಗಳು ಮದಗವಾಸರದ ಸರೋವರವನ್ನು ನೋಡಲಿಕ್ಕೆ ಹೋಗಿದ್ದರು ... ವಿದ್ಯಾರ್ಥಿಯು ಅದರ ವರ್ಣನೆಯನ್ನು ಮುಂದೆ ಕೊಟ್ಟಿರುತ್ತಾನೆ.

ನಮ್ಮ ಪ್ರಯಾಣದಲ್ಲಿ ಗುಡ್ಡದ ಮೇಲೆ ಏರುವದೂ ಇಳಿಯುವದೂ ಒಂದು ದಾರಿಯೇ ಪಕ್ಕದ್ದರಿಂದ ... ನಮಗೆ ತ್ರಾಸ ಆಯಿತು. ಆದರೂ ನೋಡುವ ಅನುಕೂಲದಿಂದ ನಾವು ಎಲ್ಲರಕ್ಕಿಂತಲೂ ಮುಂದೆ ಸಾಗಿದೆವು. ಗುಡ್ಡದಲ್ಲಿ ಸುತ್ತುಕೊಟೆ ... ನೋಡುತ್ತ ಸಿದ್ಧವಾದೆ ... ಗುಡ್ಡದ ಬಳಿ ... ಸುತ್ತಲೂ ... ನಮ್ಮ ... ದೊಡ್ಡ ... ಗೆ ತಿಳಿಯಿತು. ... ನೆರೆಯುತ್ತಿ ... ಪ್ರದೇಶದಲ್ಲಿ ... ಸಮಾನ ... ನಾಲಿಯ (ನ ೩೦೦) ಫು ಮನೋಹರವಾಗಿ ... ಆದೆ.

ಮುಂದೆ ಭಯಂಕರ ... ದಾದ ... ಗಿಡಗಳನ್ನು, ... ನಾದ ... ಈ ಗುಡ್ಡದಲ್ಲಿ ಕರಡಿ, ಹುಲಿ, ಚಿರತೆ, ... ಗಳು ಮುಂತಾದ ... ಪಶುಗಳು ಇರುತ್ತವೆಂದು ತಿಳಿಯಿತು.

ಮುಂದೆ ಹದಿನಾರು ... ತಿನಸು ... ದಲ್ಲಿ ... ಮನೋಹರವಾಗಿ ... ಈ ಸರೋವರದ ... ಕಾಲುವೆಯು ... ಶ್ರೇಯವಾದೆ.

ಈ ಕರೆಯ ... ವೈಲು ... ನದಿಯು ... ಹುತ್ತವೆ ... ಸಣ್ಣಗಳು

ಯನ್ನಳು. ಯುರೋಪಿಯನ್ನರಲ್ಲಿ ಒಬ್ಬಳು ವಿಲಾಯತಿಯ ಹಾದಿ ಹಿಡಿದ ಹೋಗಿದ್ದಾಳೆ. ಇನ್ನೊಬ್ಬಳು ಹಿಂದುಸ್ಥಾನದಲ್ಲಿಯೇ ಇದ್ದಾಳೆ. ಆದರೆ ಎಲ್ಲಿದ್ದಾಳೆಂಬ ವಿಶ್ವಾಸ ಗೊತ್ತಿಲ್ಲ. ಪೋಲೀಸರು ಯುರೋಪಿಯನ್ನ ದಾಯಿಯನ್ನು ಹಿಡಿದು ೧೪ ದಿವಸಗಳ ವರೆಗೆ ಲಾಕಪ್ಪಿನಲ್ಲಿಟ್ಟು ಕರೆದಾಗ, ಅವಳು ವೆಸಂದು ಅನಾಥ ಮಕ್ಕಳ ಒರಸಿಕೊಂಡು ಬಿಟ್ಟಿದ್ದಾರೆ.

ಮಹಾರಾಜರು ಅಡವಿಯಲ್ಲಿ ಬಿಟ್ಟಂತಾಗಿದ್ದಾರೆ. ಎಲ್ಲಿ ಹೋಗಬೇಕು? ಯಾರನ್ನು ಮರೆ ಹೋಗಬೇಕು? ಈ ಪ್ರಕರಣ ಸ್ಥಾನ ಮಾಡಿ, ವಿಷ ಪ್ರಯೋಗ ಮಾಡಿ ಹೀಗೆ ಶಿಕ್ಷೆ ಮಾಡಿಸಬೇಕು ಚಿಂತೆಯಿಂದ ದುಃಖಮಾನರಾಗಿದ್ದಾರೆ ಮ್ಯಾಜಿಸ್ಟ್ರೇಟ, ಮತ್ತು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಹಾಗೂ ... ... ಅದರೂ ತಮ್ಮ ... ಹೋಗಬೇಕೆಂದು ಗವ್ಹರ್ನರರು ... ಬರೆಯುತ್ತಾರೆ

ಐರ್ಲಂಡ ಚುನಾವಣೆಯಲ್ಲಿ ದಂಗೆ

— ೦ —

ಮೂವರು ಸತ್ತರು.

— ೦ —

ಐರ್ಲಂಡದಲ್ಲಿ ಪಾರ್ಲಮೆಂಟ ಸಭೆಯ ಚುನಾವಣೆ ನಡೆದ ... ಚುನಾವಣೆಯ ವೇಳೆಯಲ್ಲಿ ... ... ಗ್ರಾಮದಲ್ಲಿ ಡಿವ್ಹೇಲರಾ ಮತ್ತು ಸರಕಾರ ಪಕ್ಷದವರ ನಡುವ ಹೊಡದಾಟವಾಗಿ ಮೂವರು ಸತ್ತರು

ತಮಿಳ ನಾಡಿನ ಪ್ರವಾಸವು ಮಹಾತ್ಮರ ಪ್ರಕೃತಿಗೆ ಅಸಿಸ್ಟ ... ಮಾಡುವ ಭಯದೊಳಿದ್ದರಿಂದ, ಅವರ ಪ್ರವಾಸದ ಕಾರ್ಯಕ್ರಮವನ್ನು ಹತ್ತಿಗೆ ತಂದು, ದಿನಾಲು ಒಂದು ವ್ಯಾಖ್ಯಾನವ ... ಗೊತ್ತು ಮಾಡಿದ್ದಾರೆ.

ವಿಜಯ ಪುಸ್ತಕಾಲಯ.

—೦—

೨ನೇ ತರಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಸಾರ	೫ ,,
ದೇಶಬಂಧು ದಾಸರ ಚರಿತ್ರೆ	೩ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಖರ್ಚು ಟಪಾಲ ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ಮೂರು ಆಟಗಳು ಮಾತ್ರ.

ಈ ಊರಿಗೆ ಪ್ರಥಮ ಆಗಮನ.

ಹೊಸ ಸಿನರಿ! ಹೊಸ ಉಡುಪು!! ಅಪೂರ್ವ ಸಮಯ!!

ಮೈಸೂರು ಶ್ರೀಮನ್ಮಹಾರಾಜರವರ ಕೃಪಾಪೋಷಣಿಗೆ ಒಳಪಟ್ಟ ಮೈಸೂರ ದೇಶದ ಎಲ್ಲಾ ಸ್ಥಳಗಳಲ್ಲಿಯೂ, ಕೊಡಗು, ಮದ್ರಾಸ, ಮತ್ತು ದಕ್ಷಿಣ ಮದ್ರಾಸು, ಬಳ್ಳಾರಿ ಅನಂತಪುರ, ಮಂಗಳೂರು ಪ್ರಾಂತಗಳಲ್ಲಿಯೂ ಹುಬ್ಬಳ್ಳಿ ಗದಗ ಮೊದಲಾದ ... ಪ್ರಾಂತಗಳಲ್ಲಿಯೂ ಸಂಚರಿಸಿ ವಿಶೇಷ ಬಹುಮಾನಗಳನ್ನು, ಭಂಗಾರದ ಪದಕಗಳನ್ನೂ ಸರ್ಟಿಫಿಕೇಟುಗಳನ್ನೂ ಪಡೆದು ಸುಪ್ರಸಿದ್ಧಿಯನ್ನು ಹೊಂದಿರುವ

ವಿನೋದ ರತ್ನಾಕರ ಜಿ. ಹೆಚ್. ವೀರಣ್ಣನವರ

ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ

ಸಂಘದವರು

ಧಾರವಾಡ ಅನ್ನಪೂರ್ಣಾ ಥಿಯೇಟರಿನಲ್ಲಿ

ತಾರೀಖು ೨೦-೯-೨೭ ಮಂಗಳವಾರ ರಾತ್ರಿ

ಪ್ರಹ್ಲಾದ.

ತಾರೀಖು ೨೧-೯-೨೭ ಬುಧವಾರ ಸಾಯಂಕಾಲ

ನಿರುಪಮಾ.

ಎಂಟು ಆಖ್ಯಾನಗಳನ್ನು ಅಭಿನಯಿಸುವರು. ಸರ್ವರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಧಾರವಾಡ ಸೋಮವಾರ
ತಾ||೧೨-೯-೧೯೨೭

ವಿನೋದ ರತ್ನಾಕರ ಜಿ. ಹೆಚ್. ವೀರಣ್ಣ,
(ವರ್ಸಟೈಲ ಕಮೆಡಿಯನ್) ಪ್ರೊಪ್ರೈಟರ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಿಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೦—೦ ರೂ
ವಾರ ಪತ್ರಿಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

—೦—

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ಪತ್ರಿಕೆ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದ ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದು ಆಣೆ ಇಂಗ್ಲೀಷ ಪ್ರತಿಯೊಂದು ಓಳಿಗೆ ಎರಡು ಆಣೆ ... ಕೋರ್ಟ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ... ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ... ರಿಂದ ಆವರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಇರು ... ಡಬಲ್ ಕಾಲಮಿನ ಓಳಿಗೆ ಇಮ್ಮಡಿ ... ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಆಚಾರ್ಯ ... ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1449

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆ.

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ಪುಸ್ತಕ ೮; | ಧಾರವಾಡ ಸೋಮವಾರ ತಾರೀಖು ೧೯ ನೇ ಸಪ್ಟಂಬರ ೧೯೨೭ | ಸಂಚಿಕೆ ೨೦೨

ಹಂಗಾಮು ಮುಗಿಯ ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರರ ಶೇಂಗಾ ಯಂತ್ರಗಳು



ಜನರಿಗೆ ಕೆಲಸವನ್ನು ಕಡಿಮೆ ಮಾಡುವ [illegible] ಯಂತ್ರಗಳ [illegible] ಯಂತ್ರವು [illegible] ಕಡಿಮೆ ಇರುತ್ತದೆ. ಇದರಿಂದ [illegible] ಯಂತ್ರಗಳು ಬೇಕಾದವು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ಕೇಳಿಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

[illegible]

ಕನ್ನಡ ನಿಬಂಧರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟಿದ್ದಲ್ಲದೆ, [illegible] ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು [illegible] ಕನ್ನಡ [illegible], [illegible], [illegible], ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ [illegible] ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ— ೧ ರಾ. ರಾ. [illegible] ದಿವೇಕರ, ಮಾಳಮಡ್ಡಿ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಪ್ಪಾ, [illegible] ಹುಬ್ಬಳ್ಳಿ

WANTED.

Wanted Candidates for Telegraph and Station Master's Courses. Railway Fare GRANTED Boarding Seat FREE Prospectus on annas stamp,—Presidency Telegraph College, Royapettah Madras.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ [illegible] ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ವಂತಿಗೆಯು ಆರು ಲಕ್ಷದ ಮೇಲಿರುತ್ತದೆ. [illegible] ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ಜನರಿಗೆ ಬಡ್ಡಿ ಕೊಡುವೆವು.

[illegible]

ಮಾಧವರಾವ ಜಿ. [illegible], [illegible] ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು [illegible] ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಕೇಳಿಕೊಳ್ಳಬೇಕು.

ಈ ಬ್ಯಾಂಕಿನಲ್ಲಿ [illegible] ಇಟ್ಟುಕೊಳ್ಳುವ ಒಡ್ಡಿಯ ದರವು [illegible] ಇರುತ್ತದೆ.

ಎ. ಜಿ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೧೯ ೯-೨೭ ನೇ ಇಸ್ವಿ

ಚಿಕ್ಕವರ ಮದುವೆ ಮಾಡಬಾರದೆಂಬ ಕಾಯದೆ

ಚಿಕ್ಕವರ ಮದುವೆಯನ್ನು ಮಾಡಬಾರದೆಂಬುದಾಗಿ ಅಸೆಂಬ್ಲಿಯಲ್ಲಿ ರಾವಸಾಹೇಬ ಹರಬಿಲಾಸರು ಬಿಲ್ಲನ್ನು ತರುವಾಗ್ಗೆ ಮುಂದೆ ಕೊಟ್ಟಂತೆ ಭಾಷಣ ಮಾಡಿದ್ದಾರೆ

ಹುಡುಗೆಯು ಮೈನೆರೆದು ಮೂರು ವರ್ಷಗಳಾದ ನಂತರ ಅವಳ ಮದುವೆ ಮಾಡಬೇಕೆಂದು ಮನುವು ಹೇಳುತ್ತಾನೆ. ಅಂದರೆ ಆಕೆಯು ಹದಿನೆಂಟು ವರ್ಷದವಳಾದ ನಂತರ ಮದುವೆ ಮಾಡತಕ್ಕದ್ದು. ಈ ವಿಷಯವಾಗಿ ನಾನು ಯಾವ ಧರ್ಮದ ವಿರುದ್ಧ ಹೋಗುವದಿಲ್ಲ. ಚಿಕ್ಕವರ ಮದುವೆ ಮಾಡುವದರಿಂದ ವಿಧವೆಯರ ಸಂಖ್ಯೆಯು ಹೆಚ್ಚಾಗುತ್ತದೆಂದೂ ಕೂಸುಗಳ ಮರಣ ಸಂಖ್ಯೆಯು ಹೆಚ್ಚಾಗುತ್ತದೆಂದೂ ಮನುಷ್ಯಗಣತಿಯಿಂದ ಸ್ಪಷ್ಟವಾಗಿ ಕಂಡು ಬರುತ್ತದೆ. ಇದಕ್ಕೆ ಬಾಲವಿವಾಹವೇ ಕಾರಣವು. ಹಿಂದುಸ್ಥಾನವು ಸಾಮಾಜಿಕ ವಿಚಾರಗಳಲ್ಲಿ ಪ್ರಗತಿ ಹೊಂದಿ, ಜಗತ್ತಿನಲ್ಲಿ ಬೇರೆ ದೇಶಗಳಿಗೆ ಸರಿಯಾಗಬೇಕಾದರೆ- ಬಾಲ ವಿವಾಹವನ್ನು ನಿಲ್ಲಿಸಲೇಬೇಕು ಈ ಕಾಯದೆಯನ್ನು ಯೋಗ್ಯ ರೀತಿಯಿಂದ ಅವಲಿನಲ್ಲಿ ತರುವಂಥ ಅಧಿಕಾರಿಯು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟನೇ ಆಗುತ್ತಾನೆ ಮೈಸೂರು, ಬಡೋದೆ, ಭರತಪೂರ ಮುಂತಾದ ಸಂಸ್ಥಾನಗಳಲ್ಲಿ ಈ ಕಾಯದೆಯು ಅವಲಿನಲ್ಲಿ ಬಂದಿರುತ್ತದೆ. ಚೀನ ಸರಕಾರವು ೧೬ ವರ್ಷದೊಳಗೆ ಮದುವೆ ಮಾಡಬಾರದೆಂದು ಕಾಯದೆ ಮಾಡಿದೆ.

ಕುಮಾರ ಗಂಗಾನಂದ ಸಿಂಹ-

ರಾವಸಾಹೇಬ ಹರಬಿಲಾಸರು ಈ ಬಿಲ್ಲನ್ನು ಯೋಗ್ಯ ವೇಳೆಯಲ್ಲಿ ಮತ್ತು ಯೋಗ್ಯ ಸ್ಥಳದಲ್ಲಿ ತಂದಿದ್ದಾರೆ. ಹಿಂದೂ ಜನರಲ್ಲಿ ಬಾಲ ವಿವಾಹವು ಇತ್ತಲಾಗಿ ಸೇರಿದ್ದಾಗಿದೆ ಮೊದಲು ಇದ್ದಿಲ್ಲ. ಇದಕ್ಕೆ ಧರ್ಮಶಾಸ್ತ್ರದ ಆಧಾರವಿಲ್ಲ. ಸಾಮಾಜಿಕ ಸುಧಾರಣೆಯು ಬೆಳೆಯುತ್ತಿದ್ದರೂ, ಬಾಲ ವಿವಾಹವು ಬೆಳವಣಿಗೆಯುಳ್ಳದ್ದು. ಹುಡುಗೆಯರ ವಯಸ್ಸು ೧೨ ಆಗಿರಬೇಕೆಂಬದಕ್ಕೆ ನನ್ನ ವಿರೋಧವಿಲ್ಲ. ಹುಡುಗರ ವಯಸ್ಸು ಮಾತ್ರ ೧೮ ವರ್ಷವಾಗಬೇಕು. ಅಗ್ಗೆ ಅವರಿಗೆ ಸಾರಾಸಾರ ವಿಚಾರದ ವಿವೇಕ ಹುಟ್ಟುತ್ತದೆ.

ಸರ ಪುರುಷೋತ್ತಮದಾಸ-

ಹುಡಿಗೆಯರ ಲಗ್ನದ ವಯಸ್ಸು ಮೊದಲಿಗಿಂತ ಈಗ ಹೆಚ್ಚುತ್ತಿದ್ದರೂ, ಕಾಯದೆಯಿಂದ ವಯಸ್ಸನ್ನು ನಿರ್ಬಂಧಪಡಿಸುವದು ಅವಶ್ಯವದೆ. ಕೂಸು ಕನ್ನಿಗಳ ಲಗ್ನ ಮಾಡುವ ನಡತೆಯು ಹೇಗೆ ಉಂಟಾಯಿತೆಂದು ಹಿಂದಿನ ಇತಿಹಾಸ ಹೇಳುವ ಅಥವಾ ನೋಡುವ ಪ್ರಯೋಜನವಿಲ್ಲ. ಹಿಂದೂ ಜನಾಂಗದ ಕೆಲ ಮತದವರು ಬಾಲವಿವಾಹವನ್ನು ಧರ್ಮದ ಒಂದು ಅಂಗ ಮಾಡುತ್ತಿರುವದು ದುರ್ದೈವದ ಸಂಗತಿಯು. ಬಾಲವಿವಾಹವು ಅನೇಕ ರೋಗ ಮತ್ತು ಮನೋವ್ಯಥೆಗಳಿಗೆ ಕಾರಣವಾಗುತ್ತದೆಂದು ತಂದೆತಾಯಿಗಳಿಗೆ ಗೊತ್ತಿದ್ದರೂ, ಅವರು ಇದಕ್ಕೇ ಪ್ರವೃತ್ತರಾಗುವದು ತಲೆ ಕೆಳಗೆ ಮಾಡುವಂಥ ಕೃತ್ಯವಾಗುತ್ತದೆ. ಇಂಥವರು ಮತಭ್ರಾಂತಿಷ್ಟರಾದ ಹುಚ್ಚರೇ ಸರಿ ಧರ್ಮದ ಹೆಸರು ಮುಂದೆ ತಂದು ವಿವಾಹದ ವಯಸ್ಸನ್ನು ನಿರ್ಬಂಧ ಪಡಿಸುವಂಥವರು ಯಾವದೊಂದು ರೀತಿಯಿಂದ ಸ್ವಾರ್ಥಪರಾಯಣರಾಗಿರಬೇಕು; ಇಲ್ಲವೆ ಹುಚ್ಚರ ಆಸ್ಪತ್ರೆಯಲ್ಲಿರಲು ಯೋಗ್ಯರಾಗಿರಬೇಕು.

ಲಾಲಾ ಲಜಪತರಾಯ-

ಸರಕಾರೀ ಅಧಿಕಾರಿಗಳು ಈ ಕಾಯದೆಯ ವಿಷಯವಾಗಿ ಸಾವಧಾನದ ಸೂಕ್ತವನ್ನು ಆಗಾಗ್ಗೆ ಪಠಿಸುತ್ತಾರೆ ಹೀಗೆ ಅಂದದ್ದೇ ಅಂದು ನಮ್ಮ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಪತ್ತಿಕ ಪ್ರಗತಿಯನ್ನು ಹಿಂದಕ್ಕೆ ಜಗ್ಗುತ್ತಾರೆ. ಹಿಂದೂ ಜನರು ತಮ್ಮ ಧರ್ಮದಲ್ಲಿ ಆಗಾಗ್ಗೆ ಬದಲಾವಣೆ ಮಾಡುತ್ತಾ ಬಂದಿದ್ದಾರೆ. ವಿವಾಹದ ವಯಸ್ಸಿಗೂ ಧರ್ಮಕ್ಕೂ ಅರ್ಥಾರ್ಥ ಸಂಬಂಧವಿರುವದಿಲ್ಲ. ಇಂದಲ್ಲ ಮುಂದಲ್ಲ; ಯಾವಾಗಾದರೂ ಈ ಸುಧಾರಣೆಯನ್ನು ವಿರೋಧಿಸುವಂಥವರು ಹೊರಟೇ ಹೊರಡುತ್ತಾರೆ. ಈ ಕಾಯದೆಯು ಯೋಗ್ಯವೇ? ಅಯೋಗ್ಯವೇ ಎಂದು ಮಾತ್ರ ಸರಕಾರವು ಒರೆಹಚ್ಚಿ ನೋಡತಕ್ಕದ್ದು ಸರಕಾರವು ಲೋಕಮತ, ಲೋಕಮತವೆಂದು ಕೂಗುತ್ತದೆ. ಇದು ಯಾವಾಗಾದರೂ ಲೋಕಮತದ ದಾಕ್ಷಿಣ್ಯವಿಟ್ಟಿರುತ್ತದೆಯೇ? ಕುಸುವಾದರೂ ಅದನ್ನು ಲಕ್ಷಿಸಿರುತ್ತದೆಯೋ? ಸರಕಾರ ಪಕ್ಷದ ಮೆಂಬರರಾದ ಕ್ರೇರಾರಸಾಹೇಬರ ಸಾವಧಾನದ ಹಾಗು ಲೋಕಮತದ ಭರಿಗೆ ಬಿದ್ದರೆ- ಈ ಕಾಯದೆಯಾಗಲಿಕ್ಕೆ ಮಾರ್ಕಂಡೇಯನ ಆಯುಸ್ಸು ಬೇಕಾಗುವದು. ನಾನೇ ಈ ಬಿಲ್ಲನ್ನು ತಂದಿದ್ದರೆ- ವಿವಾಹದ ವಯಸ್ಸನ್ನು ಹದಿನಾರು [illegible]ದೆನು, ನಮ್ಮಲ್ಲಿ ಕಾಯದೆ ಮಾಡುವ ಅಧಿಕಾರವಿದ್ದರೆ- ಬಾಲವಿವಾಹದಿಂದಾಗುವ ದುಷ್ಪರಿಣಾಮಗಳೆಲ್ಲ ಎಂದೋ ಲಯವಾಗಿ ಹೋಗುತ್ತಿದ್ದವು. ಕೆಲ ಮಟ್ಟಿಗೆ ಕಾಯದೆಯಿಂದ ಬಲಾತ್ಕಾರವಾದರೂ ಅಡ್ಡಿಯಿಲ್ಲ. ಈ ಕಾಯದೆಯಾಗಲೇ ಬೇಕು. ಬಾಲವಿವಾಹವನ್ನು ಹಿಂದೂ ಜನರು ದೂಷಿಸುತ್ತಲೇ ಇದ್ದಾರೆ. ಅದನ್ನು ಕಳೆಯುವದರಿಂದ ಹೆಚ್ಚಿಗೆ ಪಾಪ ಬರುತ್ತದೆಂದು ಯಾರೂ ತಿಳಿಯಲಿಕ್ಕಾಗದು. ಪ್ರತಿಯೊಂದು ದೇಶದಲ್ಲಿ ಒಂದಿಲ್ಲೊಂದು ತರದ ಸಾಮಾಜಿಕ ಕುಂದು ಕೊರತೆಗಳು ಇದ್ದೇ ಇರುತ್ತವೆ.

ಬ್ಯಾರಿಸ್ಟರ ಜಯಕರ—

ಈ ಬಿಲ್ಲನ್ನು ಲೋಕಮತಕ್ಕಾಗಿ ಹಾಕದೆ, ಸಿಲೆಕ್ಟ ಕಮಿಟೀಗೆ ಕಳಿಸುವದೆ ಒಳಿತು. ಸರಕಾರದ ಪ್ರಶ್ನೆಯು ರಾಷ್ಟ್ರೀಯ [illegible] ಪರೀಕ್ಷೆ ಮಾಡಲು ಯೋಗ್ಯ ಸಮಯವಾಗಿರುತ್ತದೆ. ಸರಕಾರವು ಇಂಥ ಸಮಯಗಳಲ್ಲಿ ಅಜ್ಞಾನದ ಸೋಗು ಹಾಕಿ, ತನ್ನ ನಿಜವಾದ ದುರ್ಬಲತೆಯನ್ನು ತೋರಿಸುತ್ತದೆ. ಕಾಯದೆಯು ಯೋಗ್ಯವೋ ಅಯೋಗ್ಯವೋ? ಎಂಬದನ್ನು ಸರಕಾರವು ತನ್ನ ವಿಚಾರದಿಂದ ತಿಳಿದು ನೋಡತಕ್ಕದ್ದು. ಸುಶಿಕ್ಷಿತರು ಹೇಳುವ ಅಭಿಪ್ರಾಯದ ಪ್ರಕಾರ ಮುಂದೆ ಸಾಗತಕ್ಕದ್ದು ರಾಷ್ಟ್ರೀಯ ಜಾಗೃತಿಯು ಪ್ರಗತಿಯಲ್ಲಿ ತಾರುಣ್ಯವಸ್ಥೆಗೆ ಬಂದರೆ- ಮತ್ತು ಕೆಲಮಟ್ಟಿಗೆ ಬಲಾತ್ಕಾರವಾದರೂ ನಾವು ಅದನ್ನು ಲಕ್ಷಿಸತಕ್ಕದ್ದಲ್ಲ. ಕೆಲ ಹಿಂದೂ ಜನರು ಕಾಯದೆಯನ್ನು ವಿರೋಧಿಸುವರು. ಅವರ ಮಾತಿಗೆ ಅಂಜಿ ನಡೆಯತಕ್ಕದ್ದಲ್ಲ. ಮಗನಾಗಲಿ, ಹುಡುಗಿಯಾಗಲಿ ೧೪ ವರ್ಷದವರಾಗುವ ತನಕ ಆಟಪಾಟಗಳಲ್ಲಿ ಆನಂದದಿಂದ ಕಾಲ ಕಳೆಯಬಾರದೇ? ಅವರು ದಾಂಪತ್ಯ ಕಾಲದಿಂದ ಭಾರ ಹೊರಬೇಕೇ? ಹುಡುಗೆಯರು ಈ ವಯಸ್ಸಿನಲ್ಲಿ ಮಕ್ಕಳ ತಾಯಿಯರಾಗಿ ಬಾಣಂತಿತನ ಮಾಡಿಸಿಕೊಳ್ಳಬೇಕೇ? ಎಂಬದನ್ನು ತಿಳಿದು ನೋಡತಕ್ಕದ್ದು ಮನೆಗೆ ಬೆಂಕಿ ಹತ್ತಿರುತ್ತದೆ. ಇದನ್ನು ಆರಿಸುವದಕ್ಕಾಗಿ ನೀವು ಲೋಕಮತ ಕೇಳಲಿಕ್ಕೆ ಹೋಗುವಿರಾ? ವಿಲಾಯತಿಯಿಂದ ಬಂದ [illegible] ೧೨ ವರ್ಷ ಕೆಲಸ ಮಾಡಿದರೆ- ೩೦೦೦೦ ರೂಪಾಯಿಗಳ [illegible] ಪಾತ್ರನಾಗುತ್ತಾನೆ. ಈ ಬಗ್ಗೆ ಸರಕಾರವು ಲೋಕಮತವನ್ನು ಕೇಳಿತೇ? ಈ ವಿಷಯವು ನೂರಾರು ವರ್ಷಗಳಿಂದ ಚರ್ಚಿಸಲ್ಪಡುತ್ತದೆ. ಆದರೂ ಸರಕಾರವು ಲೋಕಮತದ ನೆವನ ಹೇಳುತ್ತಲೇ ಇರುವದು. ನಮಗೆ ಸ್ವರಾಜ್ಯವು ಬಂದು ಇಂಗ್ರೇಜಿ ಜನರು ಕೂಡ್ರುವಂಥ ಸ್ಥಳದಲ್ಲಿ ನಾವು ಕೂತರೆ- ಈ ಕಾಯದೆಯನ್ನು ನಾವು ಕೂತ ಮೇಲೆ ಪಾಸ ಮಾಡುವೆವು. ವಿ. ಬೇವಿಯವರು ಈ ಸಿದ್ಧಾಂತವನ್ನು ವಿರೋಧಿಸುತ್ತಾರೆ.

ಇಂಥ ಪ್ರಸಂಗದಲ್ಲಿ ಮಿ. ಬೇವಿಯವರಿಗೆ ಪರಕೀಯ ಸರಕಾರದಲ್ಲಿ ವಿಶ್ವಾಸ ಉದಿಸಿತು. ನಮ್ಮ ಆಡಳಿತದಲ್ಲಿ ಎಷ್ಟು ಮಹತ್ವ ಬರಲಾರದು. ಪರಕೀಯ ಸರಕಾರದ ಕೃತ್ಯಗಳಿಂದ ಇಥವರ ಮಹತ್ವವು ಪಾತ್ರ ಹೆಚ್ಚುತ್ತದೆ. ಒಟ್ಟಿನ ಮತ್ತು ವ್ಯವಹಾರದಲ್ಲಿ ಅರ್ಥವಾದ ಸ್ವರಾಜ್ಯವಂಯ. ಅವು ಈ ಕಾಯದೆಯನ್ನು ಎಂದೇ ಪಾಸ ಮಾಡಿರುತ್ತವೆ. ಇಂಗ್ಲೀಷ ಹುಡುಗಿಯು ೫೦ ವೋಟು ಇದ್ದದ್ದು ಅರು ವೋಟು ಆಗಿದೆಂದು ನಾನು ಓದಿದ್ದೇನೆ. ನಮ್ಮ ಹುಡುಗಿಯರಾದರೂ ಬೆಳೆಗಿಯುಳ್ಳವರೂ ಒಂದೆಂತರೂ, ದೇಹಪುಷ್ಟಿಯಿಂದ ಆರೋಗ್ಯವಂತರೂ ಆಗಬೇಕೆಂಬುದೇ ನಮ್ಮ ಅಪೇಕ್ಷೆ. ಇಂಗ್ಲಿಷ ಹುಡುಗಿಯರಷ್ಟೇ ಎತ್ತರವಾಗಿ ಹಿಂದೂ ಹುಡುಗಿಯರಾಗುವಂತೆ ಪ್ರತಿಪಾದಿಸಬ್ಬ ಇಂಗ್ಲಿಷ ಸ್ತ್ರೀಯರು ಒಪ್ಪಿ, ಆ ಪ್ರಕಾರ ಸ್ವತಂತ್ರ ವಿಚಾರದಿಂದ ಅಧಿಕಾರಗಳ ಮೇರೆ ನಡೆದದ್ದು ಹೋಯಿತು [illegible].

ಮಿ. ಜೇವಿ—


ಹಂಗಾಮುವು ಮುಗಿಯುವದರೊಳಗೆ ತ್ವರೆ ಮಾಡಿರಿ.

ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಜನ್ಮಾಗಿ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೇನಂದರೆ ಉತ್ಕೃಷ್ಟ ಕಂಬಗಳ ಚೌಕಟ್ಟು ಹಿತ್ತಾಳೆ ಬೇರಿಂಗುಗಳು ಇರುವದರಿಂದ ಯಂತ್ರವು ಅಚ್ಚುಕಟ್ಟಾಗಿ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಗಿಂತಲೂ ಇವುಗಳಲ್ಲಿ ಕೈಯು ಬೇಗ ದಣಿಯುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಡಿಪಾರ್ಟಮೆಂಟಿನಿಂದ ಮಂಜೂರಾದ

ಕನ್ನಡ ನಿಬಂಧರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟಿದ್ದಲ್ಲದೆ, ವ್ಹೋರ್ಟೋ ಲೆಟರ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ:— ೧ ರಾ. ರಾ. ಬಿ. ಜಿ. ದಿವೇಕರ, ಮಾರ್ಕೆಟ್ಟ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಪ್ಪಾ ದಿ ಗ್ಲೋಬ ಬುಕ್ ಡಿಪೋ ಹುಬ್ಬಳ್ಳಿ

WANTED

Wanted Candidates for Telegraph and Station Master's Courses Railway Fare GRANTED Boarding Seat FREE. Prospectus on 2 annas stamp,– Presidency Telegraph Coll.ge, Royapettah Madras.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹಿಂದಿಗೆಯು ಆರು ಲಕ್ಷದ ಮೇಲುಂಟು, ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯುವವು. ಕಾಯಮ ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮುಷ್ಠಪ್ಪ ವೀ. ಜತ್ತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಇಟ್ಟು ತಕ್ಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒಂದು ರೂಪಾಯಿ ಬೀಳುತ್ತದೆ.

ಎ. ಕೆ. ಕಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೨೫-೯-೨೭ ನೇ ಇಸ್ವಿ

ಆಯರ್ಲಂಡದ ಚುನಾವಣೆಯು.

ಆಯರ್ಲಂಡದಲ್ಲಿ ನಡೆದ ಪಾರ್ಲಮೆಂಟ ಸಭೆಯ ಚುನಾವಣೆಯು ಮುಗಿಯಿತು. ಚುನಾವಣೆಯಲ್ಲಿ ಈಗ ಅಧಿಕಾರಾರೂಢರಾಗಿರುವ ಮಿ. ಕ್ಯಾಸಗ್ರೇವ್ಹ ಸಾಹೇಬರನೇ ಕೊನೆಯಲ್ಲಿ ಬಹುಮತವಾಯಿತು ಈ ಬಹುಮತವು ಕಡೆಯ ದಿವಸವಾಯಿತು. ಚುನಾವಣೆಯ ಪ್ರಾರಂಭದಿಂದ ಇವರಿಗೂ, ಇವರ ಪ್ರತಿಸ್ಪರ್ಧಿಯಾದ ಡಿವ್ಹಲೆರಾ ಸಾಹೇಬರಿಗೂ ಸರಿಯಾಗಿಯೇ ಜನರು ಆರಿಸಲ್ಪಡುತ್ತಿದ್ದರು. ಚುನಾವಣೆಯಲ್ಲಿ ದಂಗೆಯಾಗಿ ಜನಲಯುವೂ ಆಯಿತು. ಆದರೂ ಎರಡೂ ಪಕ್ಷಗಳ ಬಲಾಬಲವು ಸಮವಾಗುತ್ತಾ ಹೋಯಿತು. ಕ್ಯಾಸಗ್ರೆವ್ಹ ಮತ್ತು ಡಿವ್ಹೆಲೆರಾ ಸಾಹೇಬರ ಪಕ್ಷಗಳು ಮುಖ್ಯವಾಗಿದ್ದು, ಇವಕ್ಕೆ ಚಿಲ್ಲರೆ ಗಲ್ಲುಗಳೂ ಉಂಟು. ಕ್ಯಾಸಗ್ರೆವ್ಹ ಪಕ್ಷಕ್ಕೆ ಸೇರಿದವರು.

ಕ್ಯಾಸಗ್ರೇವ	೬೧
ಸ್ವತಂತ್ರರು	೧೨
ಒಕ್ಕಲಿಗರು	೬
	೭೯

ವಿರುದ್ಧ ಪಕ್ಷಕ್ಕೆ ಸೇರಿದವರು.

ಪ್ರಜಾಸತ್ತಾತ್ಮಕ	೫೭
ಕೂಲಿಕಾರ	೧೩
ರಾಷ್ಟ್ರೀಯ	೨
ಬೋಲ್ಶೆವಿಕ	೧
	೭೩

ಈ ಚುನಾವಣೆಯಲ್ಲಿ ಮಂತ್ರಿಗಳೆಲ್ಲರೂ ಆರಿಸಲ್ಪಟ್ಟರು. ಡಿವ್ಹೆಲೆರಾ ಸಾಹೇಬನಿಗೆ ಹೋಟು ಕೊಡದೆ ತಟಸ್ಥವೃತ್ತಿಯಿಂದುಳಿದ ಸಾಹೇಬನು ಮಾತ್ರ ಆರಿಸಲ್ಪಡಲಿಲ್ಲ. ಈತನ ಅವಸ್ಥೆಯು ತೊಗಲಬಾವಲಿಯಂತಾಯಿತು ಹಿಂದಿನ ಚುನಾವಣೆಯಲ್ಲಿ ಒಂದೇ ಮತದ ಅಂತರವಿತ್ತು. ಈ ಸಾರೆ ಆ ಅಂತರವು ಅರ್ಧ ಡಜನ್ನ ಆಗಿರುತ್ತದೆ. ಆದರೂ ಮಂತ್ರಿಪದವು ಕಸರತ್ತಿನಗಿನ ಕಂಬವಾಗಿರುತ್ತದೆಂದು ಕ್ಯಾಸಗ್ರೇವ್ಹ ಸಾಹೇಬನು ತಿಳಕೊಂಡಿದ್ದಾನೆ. ಯಾವದೊಂದು ಮಹತ್ವದ ವಾದವಿವಾದದಲ್ಲಿ ಅಪಜಯ ಬರಬಾರದೆಂದೂ ಒಂದು ವರ್ಷವಾದರೂ ದೊರೆತನ ಸಾಗುವದೆಂದೂ ಈತನು ಆಶಾವಾದಿಯಾಗಿದ್ದಾನೆ.

ಆಯರ್ಲಂಡಕ್ಕೆ ಸಂಪೂರ್ಣ ಸ್ವತಂತ್ರವಿಲ್ಲದಿದ್ದರೂ, ವಸಾಹಾತಿನಂಥ ಸ್ವರಾಜ್ಯವುಂಟು. ಅಲ್ಲಿಯ ದೊರೆತನವು ಬಹುಮತದವರ ಕಯ್ಯಲ್ಲುಂಟು ಡಿವ್ಹೆಲೆರಾ ಸಾಹೇಬನು ಬ್ರಿಟಿಶ ಸರಕಾರದ ವಿರುದ್ಧ ಬಂಡಾಯದ ನಿಶಾನೆ ಹಚ್ಚಲು ಸರಕಾರದವರು ವಸಾಹಾತಿನಂಥ ಸ್ವರಾಜ್ಯ ಕೊಟ್ಟರು. ಪರಿಸ್ಥಿತಿಗೆ ಶರಣು ಎಂದು ಡಿವ್ಹೆಲೆರಾನು ಈ ದೊರೆತನವನ್ನು ಒಪ್ಪಿದ್ದಾನೆ. ಹಿಂದಿನ ಚುನಾವಣೆಯ ತನಕ ಈತನು ರಾಜನಿಷ್ಠೆಯ ಆಣೆ ಕೂಡ ಮಾಡಲಿಲ್ಲ. ಆಣೆ ಮಾಡಿದ ಹೊರ್ತು ಪಾರ್ಲಮೆಂಟದಲ್ಲಿ ಪ್ರವೇಶ ದೊರೆಯಲಾರದೆಂಬದನ್ನು ಕಂಡು, ಆಣೆಗೆ ಸಿದ್ಧನಾದನು. ಮತ್ತು ಈಗ ಸೋತರೂ ಮುಂದೆ ರಾಜ್ಯಾಧಿಕಾರವನ್ನು ಆಕ್ರಮಿಸುವ ಪಂಥ ತೊಟ್ಟಿರುವನು ಪ್ರಕೃತದಲ್ಲಿ ಚೀನ ಹಾಗು ಇಜಿಪ್ತದಲ್ಲಿ ಝಗಲೂಲ ಪಾಶಾನ ಮರಣದ ರಾಜಕೀಯ ಪರಿಸ್ಥಿತಿಯಲ್ಲೆಷ್ಟು ಹುಲ್ಲು ಕಡಿಮೆ ಇರುವದಿಲ್ಲ. ಈತನು ತನ್ನ ಪಕ್ಷಕ್ಕೆ ಪ್ರಜಾಸತ್ತಾತ್ಮಕವೆಂಬ ಹೆಸರನ್ನೇ ಇಟ್ಟುಕೊಂಡಿದ್ದಾನೆ ಮತ್ತು ಕಾಲಾನುಕಾಲಕ್ಕಾಗಿ ಅದನ್ನು ಆ ಅವಸ್ಥೆಗೆ ತರುವ ಧ್ಯೇಯವುಳ್ಳವನಾಗಿದ್ದಾನೆ.

ತರೀಭೂಮಿಯ ತೀರ್ವೆ ಹೆಚ್ಚಾಯಿತು.

ಧಾರವಾಡ ಜಿಲ್ಲೆಯಲ್ಲಿರುವ ತರೀ ಭೂಮಿಯ ಕಂದಾಯವನ್ನು ನೂರಕ್ಕೆ ೫೦ ಅಂದರೆ ರೂಪಾಯಕ್ಕೆ ಎಂಟಾಣೆಯಂತೆ ಹೆಚ್ಚಿಸುವಂತೆ ಸರಕಾರದ ಠರಾವು ಬಂದಿದೆ ಸರಕಾರವು ಒಮ್ಮೆಂದೊಮ್ಮೆ ನೂರಕ್ಕೆ ಐವತ್ತು ರೂಪಾಯಿಗಳನ್ನು ಹೆಚ್ಚಿಗೆ ಗಳಿಸುವಂಥ ಭಾಗ್ಯೋದಯವು ರೈತರಿಗೆ ಯಾವ ದಿಕ್ಕಿನಿಂದಾಗಿರುತ್ತದೆಂಬದು ದೇವರಿಗೇ ಗೊತ್ತು ಕೌನ್ಸಿಲ ಸಭೆಯು ಸಮ್ಮತಿಯ ಹೊರ್ತು ಹತ್ತಿಯನ್ನು ಹೆಚ್ಚಿಸಬಾರದೆಂಬ ಠರಾವು ಪಾಸಾಗಿದೆ. ಆ ಠರಾವನ್ನು ಅವಮಾನಿಸಿ, ಅಂದರೆ ಕೌನ್ಸಿಲವನ್ನು ಅವಮಾನಿಸಿ, ಸರಕಾರವು ಹತ್ತಿಯನ್ನು ಹೆಚ್ಚಿಸಿದ ಸಿಟ್ಟಿಗೆಯು ಮುಖ್ಯವಾಗಿ ಕೌನ್ಸಿಲದ ಮೆಂಬರರೇ ಇರಬೇಕು. ಮಲ್ಲಾಡದ ರೈತರು ಬಹಳ ಪುಕ್ಕರು ಅವರಿಗೆ ಬ್ರಹನ್ನಳೆಯಂಥ ಸಾರಥಿಯು ದೊರೆತ ವಿನಹ ಗಟ್ಟಿಗರಾಗರು. ಕಾಂಗ್ರೆಸ ಕಮೀಟಿಯವರು ಈ ಕೆಲಸದಲ್ಲಿ ಮುಂದೊರೆದು ರೈತರ ಹಿತಸಾಧಿಸಬೇಕು. ಕಾಂಗ್ರೆಸದ ಮೆಂಬರರನ್ನು ಮಾಡುವದಕ್ಕಿಂತ ಈ ಕೆಲಸವು ಕೋಟಿ ಪಾಲು ಶ್ರೇಯಸ್ಕರವಾಗುತ್ತದೆ. ಹಿಂಬಲ ದೊರೆತರೆ ರೈತರು ಸತ್ಯಾಗ್ರಹ ಮೊದಲಬಹುದು ಅಲ್ಲೀಬಾಗದವರಂತೆ ಕಾಯದೆಭಂಗ ಮಾಡಬಹುದು. ಆ ಹಿಂಬಲವು ಕಾಂಗ್ರೆಸ ಕಮೀಟಿಯ ಹೊರ್ತು ಇನ್ನಾರಿಂದಲೂ ದೊರೆಯದು.

ಬನವಾಸಿಯ ದೇವಾಲಯದಲ್ಲಿ ಮಧುಕೇಶ್ವರ ಸೋಜಿಗದ ಸಾಕ್ಷಿಯು.

ಬನವಾಸಿಯ ಮಧುಕೇಶ್ವರ ದೇವಸ್ಥಾನದ ಡಾವೆಯ ವಿಚಾರವು ನಡೆದಿದೆ. ಪ್ರತಿವಾದಿಯರ ಸಾಕ್ಷಿಗಳಾಗುತ್ತಿರುವವು. ಈ ವಾರದಲ್ಲಿ ಒಂದು ಸಂಗತಿಯು ಹೊಸದಾಗಿ ಪ್ರತಿವಾದಿಯರಿಂದ ಹೇಳಲ್ಪಟ್ಟಿತು. ಅದೇನೆಂದರೆ—

ಲಿಂಗಾಯತರಿಗೆ ಅನಾದಿಯಿಂದ ೧೯೨೦ನೆಯ ಇಸವಿಯ ತನಕ ಗುಡಿಯಲ್ಲಿ ಪ್ರವೇಶವಿತ್ತು. ಅಸಹಕಾರತೆಯು ದೇಶದಲ್ಲೆಲ್ಲ ಪ್ರಾರಂಭವಾದದೊಡನೆ ಬ್ರಾಹ್ಮಣರು ಧುಮುಕಿದರು. ಲಿಂಗಾಯಿತರು ರಾಜನಿಷ್ಠೆಯನ್ನು ಬಿಡದೆ, ಸರಕಾರದೊಂದಿಗೆ ಸಹಕಾರಿತೆಯನ್ನೇ ಮಾಡುತ್ತಾ ಬಂದ ಕಾರಣ, ಬ್ರಾಹ್ಮಣರು ಲಿಂಗಾಯತರಿಗೆ ಬಹಿಷ್ಕಾರ ಹಾಕಿ, ಶ್ರೀ ಮಧುಕೇಶ್ವರ ದೇವರ ಪೂಜೆಯ ಹಕ್ಕನ್ನು ಅಪಹರಿಸಿದರು.

ತಳೆಗಾವಿನಂತೆ ಅಹಮದಾಬಾದ.

ಮುಸಲಮಾನರಿಗೆ ಸಾಮಾಜಿಕ ಬಹಿಷ್ಕಾರ.

ಶ್ರೀಯುತ ಪಟೇಲರೂ, ಖೇಡಾದ ಮುಸಲಮಾನ ಜಡ್ಜರೂ ಸೇರಿ, ಗುಜರಾಥದಲ್ಲಿ ಹಬ್ಬಲಾರಂಭಿಸಿದ ಹಿಂದೂ ಮುಸಲಮಾನ ದ್ವೇಷಾಗ್ನಿಯನ್ನು ಆರಿಸಬೇಕೆಂದು ಮನಮುಟ್ಟಿ ಪ್ರಯತ್ನ ಮಾಡುತ್ತಿದ್ದಾಗ, ಅಹಮದಾಬಾದಿನಲ್ಲಿ ಮುಸಲಮಾನರು ಕೊಲ್ಲುವ ಉದ್ದೇಶದಿಂದ ಒಂದು ಆಕಳವನ್ನು ಸಿಂಗರಿಸಿ, ಅದನ್ನು ಮೆರೆಸಿದರು. ಈ ಕೃತ್ಯಕ್ಕಾಗಿ ಹಿಂದೂ ಜನರು ಸಂತಾಪಗೊಂಡು, ಮುಸಲಮಾನರ ಕೂಡ ಯಾವ ವ್ಯವಹಾರ ಮಾಡಬಾರದೆಂದು ಅವರಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ.

ಡಾಕ್ಟರ ಮ್ಯಾನಸಾಹೇಬರ ರಾಜೀನಾಮೆ.

ಡಾಕ್ಟರ ಮ್ಯಾನಸಾಹೇಬರಿಗೂ ಒಕ್ಕಲತನದ ಖಾತೆಯ ಮಂತ್ರಿಗೂ ಸಿಂಧದಲ್ಲಿಯ ಹೊಸ್ಸದ ಕಾಲುವೆಯ ಕಟ್ಟುವಿಕೆಯ ದೆಸೆಯಿಂದ ಮತಭೇದವಾಗಿ, ಡಾಕ್ಟರ ಸಾಹೇಬರು ರಾಜೀನಾಮೆ ಕೊಟ್ಟು, ವಿಲಾಯತಿಯ ದಾರೀ ಹಿಡಿಯುವರೆಂದು ಪ್ರಸಿದ್ಧವಾಗಿರುತ್ತದೆ.

ಚುಟ್ಟಾ ಸೇದುವದರಿಂದಾಗುವ ಕೆಟ್ಟ ಪರಿಣಾಮ.

——(೦)——

ಒಬ್ಬ ಗೃಹಸ್ಥನು, ತನ್ನ ಮಿತ್ರರಾದ ಒಬ್ಬ ಡಾಕ್ಟರನ್ನು ಸಂಧಿಸಿದಾಗ ಹೀಗೆಂದು ಪ್ರಶ್ನೆ ಮಾಡಿದನು "ಓ ಡಾಕ್ಟರರೇ! ಬೀಡಿ, ಚುಟ್ಟಾ ಸೇದುವುದರಲ್ಲಿ ಬಹಳವಾಗಿ ಮಿತಿಮೀರಿ ಹೋಗದೆ ಮಿತವಾಗಿಯೇ ಸೇವಿಸುತ್ತಿದ್ದರೆ ಅದರಿಂದ ಅಪಾಯವೇನೂ ಇಲ್ಲವಷ್ಟೇ?"

ಅದಕ್ಕಾ ಡಾಕ್ಟರು "ಹೌದು! ಅದಕ್ಕೆ ಸಂದೇಹವೇನು? ದಿನಕ್ಕೆ ಹತ್ತು ಸಿಗರೆಟ್ಟುಗಳನ್ನು ಸೇದುವವರಿಗೆ ಉಂಟಾಗುವಷ್ಟು ಅಪಾಯವು ದಿನಕ್ಕೆ ಒಂದೆರಡು ಸಿಗರೆಟ್ಟುಗಳನ್ನು ಮಾತ್ರ ಉಪಯೋಗಿಸುವವರಿಗೆ ಸಂಭವಿಸಲಾರದೆಂಬುದೇನೋ ನಿಜವೇ! ಆದರೆ ಸಿಗರೆಟ್ ಸೇದುವ ಪದ್ಧತಿಯು ಎಷ್ಟೇ ಮಿತವಾಗಿದ್ದರೂ ಅದರಿಂದ ಅಪಾಯವಿಲ್ಲವೆಂಬುದು ಸುಳ್ಳು. ಹೊಗೆಸೊಪ್ಪೆಂಬುದನ್ನು ಯಾವ ರೂಪದಿಂದ ಸೇವಿಸಿದರೂ ದೇಹಾರೋಗ್ಯವನ್ನು ಕೆಡಿಸುವದು ಅಷ್ಟೇಕೆ? ಅದೊಂದು ವಿಷ ಪದಾರ್ಥವು. ವಿಷವು ಚಿಕ್ಕಾದರೇನು? ಸ್ವಲ್ಪವಾದರೇನು? ಅದು ತನ್ನ ದುರ್ಗುಣವನ್ನು ತೋರಿಸದೆ ಬಿಡದು. ಆದರೆ, ಅತಿಸ್ವಲ್ಪವಾದ ವಿಷವು ಮೈಗೆ ಸೇರಿದರೆ ಅದರಿಂದುಂಟಾಗುವ ಕೆಡಕು ನಮಗೆ ತತ್ಕಾಲಕ್ಕೆ ಸ್ಪಷ್ಟವಾಗಿ ಕಾಣದೆ ಇರಬಹುದು. ಆದರೆ ಅದರಿಂದ ಉಂಟಾಗುವ ದೋಷಗಳೆಲ್ಲಾ ಒಳಗೇ ಅಡಗಿದ್ದು, ಒಟ್ಟಾಗಿ ಸೇರಿ ಕಾಲಕ್ರಮದಿಂದ ಕೆಡುಕನ್ನುಂಟುಮಾಡಬಹುದು.

"ಈಗ್ಗೆ ಮೂವತ್ತು ವರ್ಷಗಳ ಕೆಳಗೆ ಒಬ್ಬ ತರುಣ ವಯಸ್ಸಿನ ಡಾಕ್ಟರನ್ನು ನಾನು ಸಂಧಿಸಿದೆನು. ಅವನಿಗೆ ಸಿಗರೆಟ್ಟು ಸೇದುವ ಅಭ್ಯಾಸವಿತ್ತು. ಅವನು ಒಂದು ದೊಡ್ಡ ಯೂನಿವರ್ಸಿಟಿಯ "ಶಾಕಲ್ತಿ" ಎಂಬ ಶಾಖೆಯಲ್ಲಿ ಮೆಂಬರನಾಗಿ, ಬಹಳ ಪ್ರಖ್ಯಾತಿ ಹೊಂದಿದ್ದನು. ಎಲ್ಲರಿಗೂ ಅವನಲ್ಲಿ ಗೌರವವಿತ್ತು. ನಾನು ಅವನಿಗೆ ಹೊಗೆ ಸೇದುವ ಅಭ್ಯಾಸವನ್ನು ಬಿಟ್ಟುಬಿಡುವಂತೆ ಸ್ನೇಹಭಾವದಿಂದ ಹೇಳಿದೆನು. ವಿದ್ಯಾವಿಷಯದಲ್ಲಿ ಮುಂದೆ ಅವನಿಂದ ನಡೆಯಬೇಕಾದ ವಿಷಯಗಳು ಅನೇಕವಿರುವುವೆಂದೂ, ಅಂಥವನು ಹೀಗೆ ಈ ದುರಭ್ಯಾಸದಿಂದ ತನ್ನ ಪುರೋಭಿವೃದ್ಧಿಯನ್ನು ಕೆಡಿಸಿಕೊಳ್ಳಬಾರದೆಂದೂ ನಾನು ಆಗಾಗ ಬುದ್ಧಿವಾದವನ್ನು ಹೇಳುತ್ತಿದ್ದೆನು. ಆದರವನು "ಸಿಗರೆಟ್ಟು ಕುಡಿಯುವುದರಿಂದ ನನಗೆ ಯಾವ ಕೆಡುಕೂ ಆಗುವುದಿಲ್ಲವೆಂದು ಉತ್ತರ ಕೊಡುತ್ತ, ತಿರುಗಿ ತಿರುಗಿ ಬೆಂಕಿಯ ಪೆಟ್ಟಿಗೆಯನ್ನು ತೆಗೆದು ಸಿಗರೆಟ್ಟನ್ನು ಹತ್ತಿಸುತ್ತಲೇ ಇದ್ದನು. ಆಮೇಲೆ ನಾನು ಸ್ವಂತ ಅನುಭವದಿಂದ ಆ ಡಾಕ್ಟರನ್ನು ಒಪ್ಪಿಸುವುದಕ್ಕಾಗಿ, ಅಯ್ಯಾ! ನಾನೂ ಇದೇ ರೀತಿಯಾಗಿ ಮೊದಮೊದಲು ವಿಶೇಷವಾಗಿ ಹೊಗೆಬತ್ತಿಯನ್ನು ಸೇದುವ ಅಭ್ಯಾಸದಲ್ಲಿದ್ದೆನು. ಡಾಕ್ಟರ್ ಕೆಲ್ಲಾಗ್ ಎಂಬವರು ನನಗೆ ಈ ದುರಭ್ಯಾಸವನ್ನು ಬಿಡಿಸುವುದಕ್ಕಾಗಿ, ಅನೇಕ ವರ್ಷಗಳವರೆಗೆ ಪ್ರಯತ್ನಪಟ್ಟರೂ, ನಾನು ಅವರ ಮಾತಿಗೆ ಲಕ್ಷ್ಯಕೊಡಲಿಲ್ಲ. ಆದರೆ ಈಚೆಗೆ ನಾಲ್ಕು ವರ್ಷಗಳ ಕೆಳಗೆ ಹೊಗೆಸೊಪ್ಪಿನಿಂದ ಉಂಟಾಗುವ ಅಪಾಯವು ಚನ್ನಾಗಿ ನನ್ನ ಅನುಭವಕ್ಕೆ ಬಂದುದರಿಂದ, ಅದನ್ನು ನಾನು ಬಿಟ್ಟುಬಿಟ್ಟೆನು. ಈಗ ನನ್ನ ಮೈಗೆ ಎಷ್ಟೋ ಗುಣವು ಕಂಡು ಬಂದಿದೆ, ಆ ದುರಭ್ಯಾಸದಿಂದ ಉಂಟಾಗತಕ್ಕ ಅಪಾಯವೂ ಈಗ ನನ್ನ ಅನುಭವಕ್ಕೆ ಬಂದಿದೆ.

ಮೊದಮೊದಲು ಹೊಗೆ ಕುಡಿಯುವುದರಿಂದ ಅವಗುಣವೇನೂ ಸ್ಪಷ್ಟವಾಗಿ ತೋರದಿರುವದಕ್ಕೆ ಕಾರಣವೇನೆಂಬುದು ಸೂಕ್ಷ್ಮ ವಿಚಾರದ ಮೇಲೆ ನಿದರ್ಶನಕ್ಕೆ ಬಂದಿತು ಈಗ್ಗೆ ಮೂವತ್ತು ವರ್ಷಗಳ ಕೆಳಗೆ ಈ ಹೊಗೆಸೊಪ್ಪಿನ ಅವಗುಣವು ತೋರದಿರುವುದಕ್ಕೆ ನಮ್ಮ ಶರೀರದಲ್ಲಿ ಯೌವನಬಲದಿಂದಿದ್ದ ರೋಗ ನಿವಾರಣಾಶಕ್ತಿಯೇ ಕಾರಣವೆಂಬುದು ತಿಳಿಯಿತು. ಆದರೆ ಹೊಗೆಸೊಪ್ಪಿನ ಸೇವನೆಯು ಆ ಶಕ್ತಿಯನ್ನು ಕ್ರಮಕ್ರಮವಾಗಿ ಕಡಿಮೆ ಮಾಡುತ್ತ ಬರುವುದು. ಇದೋಷನಿವಾರಣಾಶಕ್ತಿಯು ಎಷ್ಟೆಷ್ಟು ಅಧಿಕವಾಗಿದ್ದರೆ, ಅಷ್ಟು ಒಳ್ಳೆಯದು. ಸನ್ನಿವರನ್ನು ದೊಡ್ಡವರನ್ನಾಗಿ ಮಾಡುವುದಕ್ಕೂ ಆ ಶಕ್ತಿಯು ಬೇಕು. ಸನ್ನಿಪಾತಜ್ವರ, ಕಫಜ್ವರ, ಮುಂತಾದ ರೋಗಗಳು ಮೈಗೆ ಅಂಟದಂತೆ ಮಾಡುವುದಕ್ಕೂ ಆ ಶಕ್ತಿಯು ಅವಶ್ಯಕವು. ಮನುಷ್ಯರು ಎಂಭತ್ತು ತೊಂಭತ್ತು ವರ್ಷಗಳವರೆಗೆ ಜೀವಿಸುವಂತೆ ಮಾಡುವುದಕ್ಕೂ ಆ ಶಕ್ತಿಯು ಅವಶ್ಯವು. ಆ ಶಕ್ತಿಯು ಕ್ಷಯಿಸುವುದರಿಂದಲೇ ಜನರು ಅಲ್ಪಾಯುಷ್ಯದಿಂದ ಸಾಯುವರು.

ಹೊಗೆಸೊಪ್ಪಿನ ಸೇವನೆಯು ಅಂತಹ ಶಕ್ತಿಯನ್ನು ತಗ್ಗಿಸುತ್ತ ಬರುವುದೇ ಹೊರತು, ಅದಕ್ಕೆ ಬದಲಾಗಿ ಯಾವ ಲಾಭವನ್ನೂ ಉಂಟುಮಾಡುವದಾಗಿಲ್ಲ. ಆದುದರಿಂದಲೇ ಹೊಗೆಸೊಪ್ಪಿನ ಸೇವನೆಯು ಆಯುಃಕ್ಷಯಕ್ಕೂ, ಬುದ್ಧಿಕ್ಷಯಕ್ಕೂ, ದುರ್ಬಲತೆಗೂ ಕಾರಣವಾಗಿ, ರೋಗನಿವಾರಣ ಶಕ್ತಿಯನ್ನು ತಗ್ಗಿಸುವುದು. ಎಂದನು

ಇದರ ಮೇಲೆ ಆ ಗೃಹಸ್ಥನು ಡಾಕ್ಟರನ್ನು ಕುರಿತು. ಡಾಕ್ಟರೇ! ನೀವು ಹೇಳಿದಂತೆಯೇ ನಿಜವಾಗಿ ಆ! ತರುಣವಯಸ್ಸಿನಲ್ಲಿ ಹೊಗೆಸೊಪ್ಪಿನ ಸೇವನೆಯಿಂದ ಅವನ ಮುಂದಿನ ಬೆಳವಣಿಗೆಯನ್ನು ತಪ್ಪಿಸಬಹುದು. ಮನುಷ್ಯನಿಗೆ ಪ್ರೌಢಶಿಕ್ಷಣದ ಮೇಲೆ ಆ ಅಭ್ಯಾಸದಿಂದ ಕೆಡುಕೇನೂ ಇಲ್ಲವಷ್ಟೇ? ಏಕೆಂದರೆ, ಒಬ್ಬ ಮನುಷ್ಯನು ಪೂರ್ಣವಾಗಿ ಬೆಳೆದ ಮೇಲೆ, ಅವನ ಮುಂದಿನ ಬೆಳವಣಿಗೆಗೇನೂ ಅವಕಾಶವಿಲ್ಲದುದರಿಂದ, ಅಂಥವರಿಗೆ ಅದೇನೂ ಬಾಧಕವಾಗಲಾರದಷ್ಟೆ?.

ಅದಕ್ಕೆ ಡಾಕ್ಟರು ಅದೊಂದು ಸರಿಯಾದ ಸಮಾಧಾನವಲ್ಲ. ಒಬ್ಬ ಮನುಷ್ಯನು ಉನ್ನತ್ತದವನಾಗಿ ಬೆಳೆದ ಮಾತ್ರಕ್ಕೆ ಅದರಿಂದ ಕೃತಾರ್ಥನಾಗಲಿಲ್ಲ. ಪೂರ್ಣವಾದ ಬೆಳವಣಿಗೆಯನ್ನು ಹೊಂದಿದ ಮನುಷ್ಯನು, ತನ್ನ ಪ್ರಾಣಶಕ್ತಿಯು ಕುಂದದಂತೆಯೂ, ತಾನು ಬದುಕಿರುವವರೆಗೆ ತನಗೆ ಕಾರ್ಯಸಾಮರ್ಥ್ಯವು ಕುಂದದಂತೆಯೂ ಎಚ್ಚರ ತೆಗೆದುಕೊಳ್ಳಬೇಕಾದುದು ಅವಶ್ಯವಲ್ಲವೇ? ಹೊಗೆಸೊಪ್ಪಿನ ವಿಷಯು ಅವೆರಡನ್ನೂ ತಗ್ಗಿಸುವುದು.

ಜೀವವಿಮೆ ಕಂಪನಿಯವರೂ ಹೊಗೆಸೊಪ್ಪಿನ ಸೇವನೆಯು ಆಯುಃಕ್ಷಯಕ್ಕೆ ಕಾರಣವೆಂದು ಒಪ್ಪಿರುವರು. ಒಂದು ದೊಡ್ಡ ಲೈಫ್ ಇನ್‌ಷ್ಯೂರನ್ಸ್ ಕಂಪನಿಗೆ ಮೆಡಿಕಲ್ ಡೈರೆಕ್ಟರಾಗಿದ್ದ ಪ್ರಸಿದ್ಧ ಡಾಕ್ಟರೊಬ್ಬರ ಅಭಿಪ್ರಾಯವನ್ನು ನಾನು ಕೇಳಿದ್ದರಲ್ಲಿ, ಅವರು ಹೊಗೆಸೊಪ್ಪಿನ ಸೇವನೆಯು ಆರೋಗ್ಯನಾಶಕ್ಕೂ, ಆಯುಃಕ್ಷಯಕ್ಕೂ ಕಾರಣವೆಂಬುದನ್ನು ತಮ್ಮ ಅನೇಕ ವರ್ಷಗಳ ಅನುಭವದಿಂದ ನಿವೇದಿಸಿ ಹೇಳಿದರು. ಅವರಿಗೆ ಸ್ವತಃ ಈ ಅಭ್ಯಾಸವಿದ್ದುದರಿಂದ ಅದರಿಂದಾದ ದುಷ್ಪರಿಣಾಮವು ಅವರಿಗೆ ಚನ್ನಾಗಿ ತಿಳಿದಿತ್ತು.

ಮುಖ್ಯವಾಗಿ ಹೊಗೆಬತ್ತಿಗಳನ್ನು ಸೇದುವ ಅಭ್ಯಾಸವಿಲ್ಲದವರಲ್ಲಿ ಸಾವಿರಕ್ಕೆ ನೂರು ಮಂದಿ ಸಿಕ್ಕರೆ, ಆ ದುರಭ್ಯಾಸವುಳ್ಳವರಲ್ಲಿ ಸಾವಿರಕ್ಕೆ ನೂರಹನ್ನೆರಡರಂತೆ ಮರಣಸಂಖ್ಯೆಯು ಹೆಚ್ಚಿದೆಯೆಂಬುದು ಅನುಭವಸಿದ್ಧವಾಗಿದೆ" (ಗೃಹ ಸಖ).

———

ವಾಯವ್ಯ ಸರಹದ್ದಿನಲ್ಲಿ ಸುನ್ನಿ ಜನರು ಶಿಯಾ ಜನರನ್ನು ಶಸ್ತ್ರಬಲದಿಂದ ನಡಿಸಿಕೊಳ್ಳುವುದನ್ನು ಲಕ್ನೌದ ಶಿಯಾ ಜನರು ಸಭೆ ಸೇರಿ, ನಿಷೇಧಿಸಿದರು.

———

ಮ್ಯಾ. ಗಜವಾಡಿಯವರ ಮಂತ್ರಿಪದಕ್ಕೆ ಧಕ್ಕೆ ತಂದ ಸರ ಅಬ್ದುಲ ರಹಿಮಾನರು ಹೊಸ ಮಂತ್ರಿಗೆ ಅನುಕೂಲವಾಗಿ ನಡೆಯುವರು.

———

ಧಾರವಾಡ–

ಗಜೇಂದ್ರಗಡದ ಶ್ರೀ. ಯಶವಂತರಾವ ಘೋರ್ಪಡೆಯವರು ನೆರೆಯುರಿನ ಸಂಸ್ಥಾನಿಕರ ಮತ್ತು ತಮ್ಮ ಹೇಳಿದ ಅಭಿಪ್ರಾಯವನ್ನು ವ್ಯಕ್ತಪಡಿಸಿ

ಧಾರವಾಡ ಜಿಲ್ಹಾ ತಾ. ಕಾಂಗ್ರೆಸ ಕಮಿಟಿಗಳ ವಾರ್ಷಿಕ ಸಭೆಯು ಮುಂದೆ ಬಿದ್ದಿತು.

—೦—

ಕಾಂಗ್ರೆಸ ಮೆಂಬರರನ್ನು ಮಾಡುವ ಅವಧಿಯನ್ನು ಅಕ್ಟೋಬರ ತಿಂಗಳ ೧೫ನೇ ತಾರೀಖಿನ ವರೆಗೆ ಬೆಳೆಸಿದ್ದರಿಂದ, ಕಾಂಗ್ರೆಸ ಮೆಂಬರರೆಲ್ಲರಿಗೂ ಯೋಗ್ಯ ಸವಡು ಸಿಗಲೆಂಬ ಅಪೇಕ್ಷೆಯಿಂದ ತಾ|| ೯-೧೦-೩೭ನೇ ದಿನ ಇಟ್ಟ ವಾರ್ಷಿಕ ಸಭೆಗಳು ಮುಂದೆ ೩೦-೧೦-೩೭ನೇ ದಿನ ಮೊದಲೇ ಗೊತ್ತು ಪಡಿಸಿದ ಸ್ಥಳದಲ್ಲಿ ಅದೇ ವೇಳೆಗೆ ಕೂಡುವವು ದಯಮಾಡಿ ಎಲ್ಲ ಕಾಂಗ್ರೆಸ ಮೆಂಬರರೂ ಆವತ್ತಿನ ದಿವಸ ತಪ್ಪದೇ ದಯಮಾಡಿ ಬರಬೇಕಾಗಿ ಪ್ರಾರ್ಥನೆ.

ರಂಗನಾಥ ದಿವಾಕರ
ಅಧ್ಯಕ್ಷ.

ಜಾಹೀರ ನೋಟೀಸು.

ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡುವಂಥ ತುಳಸವ್ವಾ ಕೋಂ ಯಲ್ಲವ್ವಾ ಸೂಲಗಿತ್ತಿಯವರ ಸಾಕೀನ ಮಲ್ಲಾಪೂರ ಮಜರೆ ಕಿತ್ತೂರ ಈಕೆಯು ಈ ಜಾಹೀರ ನೋಟೀಸಿನಿಂದ ಪ್ರಸಿದ್ಧ ಮಾಡುವದೇನಂದರೆ.

ನಾನು ನನ್ನ ಗಂಡನಾದ ಯಲ್ಲಾ ತಂದಿ ಭೀಮಾ ಸೂಲಗಿತ್ತಿಯವರ ಸಾಕೀನ ಬೈಲಹೊಂಗಲ ಈತನ ಹೆಸರಿನಿಂದ ರಾಜಹಂಸ ಪತ್ರದಲ್ಲಿ ತಾ|| ೨೧ ಜುಲೈ ೧೯೩೭ ನೇ ತಾರೀಖಿನ ದಿವಸ ಒಂದು ನೋಟೀಸು ಮಾಡಿಸಿದೆ ಸದರ ನೋಟೀಸು ಕಾಯದೆ ಪ್ರಕಾರ ರಜಿಸ್ಟರಾಗಿ ಹೋಯಿತು ಆದರೆ ಆತನು ಅದನ್ನು ಸ್ವೀಕಾರ ಮಾಡಲಿಲ್ಲ ಆದರೂ ಆತನಿಗೆ ಈ ನೋಟೀಸಿನ ಮಜಕೂರು ಮತ್ತು ಆತನ ಕೂಡ ನಾನು ಬಾಳ್ವೆ ಮಾಡಬೇಕೆಂಬ ನನ್ನ ಇಚ್ಛೆಯನ್ನು ಎಕಡನೆಯವರಿಂದ ತಿಳಿಸಿದೆನು ಆದರೆ ಆತನು ನನ್ನ ಕೂಡ ಬಾಳ್ವೆ ಮಾಡಲಿಕ್ಕೆ ಇನಕಾರ ಮಾಡಿದ್ದಾನೆ ಮತ್ತು ನೋಟೀಸಾಗಿ ಎರಡು ತಿಂಗಳಾದರೂ ನನ್ನನ್ನು ಕರಕೊಂಡು ಹೋಗುವ ವಿಚಾರ ಮಾಡಲಿಲ್ಲ ಆದ್ದರಿಂದ ಆತನ ಮನಸ್ಸಿನಲ್ಲಿ ಬಾಳ್ವೆ ಮಾಡುವದು ಇದ್ದಂತೆ ಕಾಣುಬರುವದಿಲ್ಲ ಕಾರಣ ನನ್ನ ಉಪಜೀವನದ ದೆಸೆಯಿಂದ ನಾನು ಎರಡನೆಯವನನ್ನು ಉಡಿಕೆ ಮಾಡಿಕೊಳ್ಳುವದು ಅನಿವಾರ್ಯವಾಗಿದೆ ಅದರ ದೆಸೆಯಿಂದ ಈ ಜಾಹೀರ ನೋಟೀಸು ಮಾಡಿದ್ದೇನೆ ಸದರ ನನ್ನ ಗಂಡಾ ಯಲ್ಲಾ ಈತನು ಈ ಜಾಹೀರಾತು ಪ್ರಸಿದ್ಧವಾದ ಎಂಟು ದಿವಸಗಳಲ್ಲಿ ಎಲ್ಲಿದ್ದರೂ ನನ್ನಲ್ಲಿಗೆ ಬಂದು ನನ್ನ ಕಾಲ ವ್ಯವಸ್ಥೆ ರು ರಾವಿಡಾಯ ತೀರಿಸಿ, ನನ್ನನ್ನು ಕರಕೊಂಡು ಹೋಗಬೇಕು ಜರ ಇದಕ್ಕೆ ತಪ್ಪಿದರೆ ನಾನು ಎರಡನೆಯವನನ್ನು ಉಡಿಕೆ ಮಾಡಿಕೊಳ್ಳುವೆನು. ಅನಂತರ ನನ್ನ ಉಡಿಕೆ ಗಂಡ ಮತ್ತು ನನ್ನ ಮೇಲೆ ಸದರ ಎಲ್ಲಾ ಈತನ ಯಾವ ಹಕ್ಕು ನಡೆಯಲಾರದು ಮತ್ತು ಈಗಾದ ಸಾಲದ ದೆಸೆಯಿಂದ ಆತನ ಮೇಲೆ ಕಾಯದೆಶೀರ ಇಲಾಜ ಮಾಡಿ ವಸೂಲ ಮಾಡುವೆನು ಅಂತಾ ಜಾಹೀರ ಮಾಡಿದ ಸೋದಪತ್ರದ ನೋಟೀಸು

ತಾ|| ೨೪-೯-೧೯೩೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ತುಳಸವ್ವಾ ಕೋಂ ಯಲ್ಲಾ ಸೂಲಗಿತ್ತಿಯವರ ಈಕೆ ಕೈದು ಇರುತದೆ.

ಕರ್ನಾಟಕ ಏಕೀಕರಣ.

ಮಿ|| ಕರ್ಜನ ಹಾಗೂ ಮಾಂಟೇಗ್ಯೂ ಚೇಮ್ಸಫರ್ಡ ಸಾಹೇಬರು ಭಾಷಾವಾರ ಪ್ರಾಂತರಚನೆಯನ್ನು ಪ್ರತಿಪಾದಿಸಿದ್ದಾರೆ. ಗವ್ಹರ್ನಮೆಂಟ ಆಫ ಇಂಡಿಯಾ ಎಕ್ಟ ೨೯೦ (ಅ) ಕಲಮಿನಿಂದ ಈ ಅಧಿಕಾರವು ವ್ಹಾಯಿಸರಾಯರಿಗೆ ಕೊಡಲ್ಪಟ್ಟಿದೆ. ಆದರೆ ನಾವು ಕರ್ನಾಟಕ ಏಕೀಕರಣವು ನಮಗೆ ಬೇಕು ಎಂದು ಸಪ್ರಮಾಣವಾಗಿ ಸರಕಾರದ ಮುಂದೆ ಇಡಬೇಕಾಗಿದೆ. ಆದುದರಿಂದ ಏಕೀಕರಣವು ಬೇಕೆಂಬುವವರ ಒಂದು ಲಕ್ಷ ಸಹಿಗಳನ್ನು ಕೂಡಿಸಬೇಕೆಂದು ಏಕೀಕರಣ ಸಭೆಯವರು ಮಾಡಿದ ನಿಶ್ಚಯವನ್ನು ಕೊನೆಗಾಣಿಸಲಿಕ್ಕೆ ಪ್ರತಿಯೊಬ್ಬ ಕರ್ನಾಟಕಸ್ಥನು ಸಹಾಯ ಮಾಡಬೇಕೆಂದು ನಮ್ಮ ಪ್ರಾರ್ಥನೆ.

ವಿ. ನಾ. ಜೋಗ ಎಮ್. ಎಲ್. ಸಿ.	ಚ. ಚ. ಹುಲಕೋಟಿ ವಕೀಲ.
ಎ. ಎಫ್. ಆಯ್. ಪಠಾಣ ವಕೀಲ.	ಬಿ. ಎಲ್. ಪಾಟೀಲ ವಕೀಲ.
ಮಹಬೂಬ ಅಲ್ಲೀಖಾನ (ಸರದಾರ) ಹುಬ್ಬಳ್ಳಿ.	ವಾಯ್. ಜೀ. ನಾಡಗೀರ ಎಮ್. ಎನ್.

ಟೀಪು:—ಇನ್ನೂ ೨೫ ಜನ ಕರ್ನಾಟಕದ ಮುಖಂಡರು ಇದರ ಮೇಲೆ ಸಹಿ ಮಾಡಿದ್ದಾರೆ. ಧಾರವಾಡ ಊರಿಗೆ ಅವರ ಹೆಸರುಗಳನ್ನಷ್ಟೇ ಇಲ್ಲಿ ಪ್ರಕಟಿಸಿದ್ದೇವೆ.

ನವರಾತ್ರಿಯಲ್ಲಿಯ ಕಾರ್ಯ.

ಧಾರವಾಡದ ಏಕೀಕರಣ ಸಂಘದವರು ನವರಾತ್ರಿಯ ಒಂಭತ್ತು ದಿವಸಗಳಲ್ಲಿ ಕರ್ನಾಟಕಕ್ಕೆ ಏಕೀಕರಣವು ಅವಶ್ಯವಿರುವುದು; ಮತ್ತು ಅದು ಪ್ರತಿಯೊಬ್ಬ ಕನ್ನಡಿಗನ ಜನ್ಮಸಿದ್ಧವಾದ ಹಕ್ಕು ಇರುವುದೆಂಬ ಬಗ್ಗೆ ಧಾರವಾಡ ನಾಗರೀಕರ ಸಹಿಗಳನ್ನು ತೆಗೆದುಕೊಳ್ಳುವುದನ್ನು ನಿಶ್ಚಯಿಸಿದ್ದಾರೆ. ಈ ಕಾರ್ಯದ ಸಲುವಾಗಿ ಕೆಲವು ಸದ್ಗೃಹಸ್ಥರು ಓಣಿ ಓಣಿಗೆ ಹೋಗಿ ಸಹಿ ಕೂಡಿಸಿ ಕಾರ್ಯವನ್ನು ಮಾಡುವವರಿದ್ದಾರೆ. ಆ ಕಾಲಕ್ಕೆ ಪ್ರತಿಯೊಬ್ಬರು ದಯಮಾಡಿ ಸಹಿ ಕೊಟ್ಟು ಈ ಮಹತ್ಕಾರ್ಯಕ್ಕೆ ನೆರವಾಗಬೇಕೆಂದು ಪ್ರಾರ್ಥನೆ.

ಈ ಕಾರ್ಯವು ಸರಕಾರದ ಧೋರಣಕ್ಕೆ ಅನುಸರಿಸಿಯೇ ಇರುವದರಿಂದಲೂ, ಈ ವಿಷಯದಲ್ಲಿ ಕರ್ನಾಟಕದ ಯಾವತ್ತು ಜಾತಿ, ಪಕ್ಷ, ಪಂಗಡಗಳಲ್ಲಿ ಏಕಮತ್ಯವಿರುವುದರಿಂದಲೂ, ಸರಕಾರದ ಕಾಮದಾರರು, ಬ್ರಾಹ್ಮಣರು, ಲಿಂಗಾಯತರು, ಮುಸಲ್ಮಾನರು ಇವರೇ ಮುಂತಾದವರು ಯಾವತ್ತರೂ ನಿರಾತಂಕವಾಗಿ ಸಹಿ ಮಾಡಿ ಈ ಕಾರ್ಯಕ್ಕೆ ಸಹಾಯ ಮಾಡುವರೆಂದು ನಂಬುತ್ತೇನೆ.

ಡಾ. ಕಾಂತರಾವ ಕಮಲಾಪುರ.
ಸಿ. ಕೆ. ಒಡೆಯರ ವಕೀಲ.
ಕಾರ್ಯದರ್ಶಿಗಳು.

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ		೧೨—೮—೦ ರೂ
೬	”	೭—೦—೦ ರೂ
೪	”	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ		೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಲಕ್ಷ್ಮಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಸತ್ಯ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಸೋಮವಾರ ತಾರೀಖು ೨೬ ನೇ ಸಪ್ಟಂಬರ ೧೯೨೭ (ಸಂಚಿಕೆ ೨೦೮

ಹಂಗಾಮವು ಮುಗಿಯು ಬಂದಿತು ತ್ವರೆ ಮಾಡಿರಿ.
ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಚನ್ನಾಗಿ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೇನೆಂದರೆ ಉಕ್ಕಿನ ಕಂಬಗಳ ಚೌಕಟ್ಟು ಹತ್ತಾರು ಪಲ್ಲಂಗುಗಳು ಇರುವದರಿಂದ ಯಂತ್ರವು ಅಚ್ಚುಕಟ್ಟಾಗಿ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಗಿಂತಲೂ ಇವುಗಳಲ್ಲಿ ಕಾಳು ಒಡೆಯುವ ಪ್ರಮಾಣವು ಬಹಳ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ಡಿಪಾರ್ಟಮೆಂಟಿನಿಂದ ಮಂಜೂರಾದ

ಕನ್ನಡ ನಿಬಂಧರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ.

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟಿದ್ದಲ್ಲದೆ, ರಿಪೋರ್ಟ- ಲೆಟರ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವದೆ.

ಪ್ರತಿಗಳು ದೊರೆಯುವ ಸ್ಥಳ— ೧ ರಾ. ರಾ. ಬಿ. ಜಿ. ದಿವೇಕರ,
ಮಾರ್ಗಗುಡ್ಡ, ಧಾರವಾಡ
೨ ರಾ. ರಾ. ಎ. ಆರ್. ಶಿವನಾಗಪ್ಪಾ
ವಾಗ್ವಿಲಾಸ ಬುಕ್ ಡಿಪೋ. ಹುಬ್ಬಳ್ಳಿ

WANTED.

Wanted Candidates for Telegraph and Station Master's Courses Railway Fare GRANTED Boarding Seat FREE. Prospectus on 2 annas stamp, - Presidency Telegaph Coll ge, Royapettah Madras.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇಂದಿಗರೂ ಆರು ಲಕ್ಷದ ಮೇಲುಂಟು. ಚಳ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಸಲ್ಪಡುವವು. ಠೇವಣಿ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒಂದು ರೂ. ಆಗಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಕರ್ನಾಟಕ ಏಕೀಕರಣ.

ಮಿ|| ಕರ್ಟಿಸ ಹಾಗೂ ಮಾಂಟೇಗ್ಯೂ ಚೇಮ್ಸಫರ್ಡ ಸಾಹೇಬರು ಭಾಷಾವಾರ ಪ್ರಾಂತರಚನೆಯನ್ನು ಪ್ರತಿಪಾದಿಸಿದ್ದಾರೆ. ಗವ್ಹರ್ನಮೆಂಟ ಆಫ ಇಂಡಿಯಾ ಆ್ಯಕ್ಟ ೫೨ (ಅ) ಕಲಮಿನಿಂದ ಈ ಅಧಿಕಾರವು ವ್ಹಾಯಿಸರಾಯರಿಗೆ ಕೊಡಲ್ಪಟ್ಟಿದೆ. ಆದರೆ ನಾವು ಕರ್ನಾಟಕ ಏಕೀಕರಣವು ನಮಗೆ ಬೇಕು ಎಂದು ಸಪ್ರಮಾಣವಾಗಿ ಸರಕಾರದ ಮುಂದೆ ಇಡಬೇಕಾಗಿದೆ. ಆದುದರಿಂದ ಏಕೀಕರಣವು ಬೇಕೆಂಬುವವರ ಒಂದು ಲಕ್ಷ ಸಹಿಗಳನ್ನು ಕೂಡಿಸಬೇಕೆಂದು ಏಕೀಕರಣ ಸಭೆಯವರು ಮಾಡಿದ ನಿಶ್ಚಯವನ್ನು ಕೊನೆಗಾಣಿಸಲಿಕ್ಕೆ ಪ್ರತಿಯೊಬ್ಬ ಕರ್ನಾಟಕಸ್ಥನು ಸಹಾಯ ಮಾಡಬೇಕೆಂದು ನಮ್ಮ ಪ್ರಾರ್ಥನೆ.

ವಿ. ನಾ. ಜೋಗ ಎಮ್. ಎಲ್ ಸೀ.	ಚ. ಚ ಹುಲಕೋಟಿ ವಕೀಲ.
ಎ. ಎಫ್. ಆಯ್. ಪಠಾಣ ವಕೀಲ.	ಬಿ. ಎಲ್. ಪಾಟೀಲ ವಕೀಲ.
ಮಹಬೂಬ ಅಲ್ಲೀಖಾನ (ಸರದಾರ) ಹುಬ್ಬಳ್ಳಿ	ವಾಯ್. ಜೀ. ನಾಡಗೀರ ಎಮ್. ಎಸ್.

ಟೀಪು —ಇನ್ನು ಬಹು ಜನ ಕರ್ನಾಟಕ ದ ಮುಖಂಡರು ಇದರ ಮೇಲೆ ಸಹಿ ಮಾಡಿದ್ದಾರೆ. ಧಾರವಾಡ ಊರಿಗೆ ಅವರ ವಿದ್ದವುಗಳನ್ನಷ್ಟೇ ಇಲ್ಲಿ ಪ್ರಕಟಿಸಿದ್ದೇವೆ.

ನವರಾತ್ರಿಯಲ್ಲಿಯ ಕಾರ್ಯ.

ಧಾರವಾಡದ ಏಕೀಕರಣ ಸಂಘದವರು ನವರಾತ್ರಿಯ ಒಂಭತ್ತು ದಿವಸಗಳಲ್ಲಿ ಕರ್ನಾಟಕಕ್ಕೆ ಏಕೀಕರಣವು ಅವಶ್ಯವಿರುವದು; ಮತ್ತು ಅದು ಪ್ರತಿಯೊಬ್ಬ ಕನ್ನಡಿಗನ ಜನ್ಮಸಿದ್ಧವಾದ ಹಕ್ಕು ಇರುವದೆಂಬ ಬಗ್ಗೆ ಧಾರವಾಡ ನಾಗರೀಕರ ಸಹಿಗಳನ್ನು ತೆಗೆದುಕೊಳ್ಳುವದನ್ನು ನಿಶ್ಚಯಿಸಿದ್ದಾರೆ. ಈ ಕಾರ್ಯದ ಸಲುವಾಗಿ ಕೆಲವು ಸದ್ಗೃಹಸ್ಥರು ಓಣಿ ಓಣಿಗೆ ಹೋಗಿ ಸಹಿ ಕೂಡಿಸಿ ಕಾರ್ಯವನ್ನು ಮಾಡುವವರಿದ್ದಾರೆ. ಆ ಕಾಲಕ್ಕೆ ಪ್ರತಿಯೊಬ್ಬರು ದಯಮಾಡಿ ಸಹಿ ಕೊಟ್ಟು ಈ ಮಹತ್ಕಾರ್ಯಕ್ಕೆ ನೆರವಾಗಬೇಕೆಂದು ಪ್ರಾರ್ಥನೆ.

ಈ ಕಾರ್ಯವು ಸರಕಾರದ ಧೋರಣಕ್ಕೆ ಅನುಸರಿಸಿಯೇ ಇರುವದರಿಂದಲೂ, ಈ ವಿಷಯದಲ್ಲಿ ಕರ್ನಾಟಕದ ಯಾವತ್ತು ಜಾತಿ, ಪಕ್ಷ, ಪಂಗಡಗಳಲ್ಲಿ ಐಕಮತ್ಯವಿರುವದರಿಂದಲೂ, ಸರಕಾರದ ಕಾಮದಾರರು, ಬ್ರಾಹ್ಮಣರು, ಲಿಂಗಾಯತರು, ಮುಸಲ್ಮಾನರು ಇವರೇ ಮುಂತಾದವರು ಯಾವತ್ತರೂ ನಿರಾತಂಕವಾಗಿ ಸಹಿ ಮಾಡಿ ಈ ಕಾರ್ಯಕ್ಕೆ ಸಹಾಯ ಮಾಡುವರೆಂದು ನಂಬುತ್ತೇವೆ.

ಡಾ. ಶಾಂತರಾವ ಕಮಲಾಪುರ.
ಸಿ. ಕೆ. ಒಡೆಯರ ವಕೀಲ.
ಕಾರ್ಯದರ್ಶಿಗಳು.

ಧಾರವಾಡ ಜಿಲ್ಹಾ ತಾ. ಕಾಂಗ್ರೆಸ ಕಮಿಟಿಗಳ ವಾರ್ಷಿಕ ಸಭೆಯು ಮುಂದೆ ಬಿದ್ದಿತು.

—೦—

ಕಾಂಗ್ರೆಸ ಮೆಂಬರರನ್ನು ಮಾಡುವ ಅವಧಿಯನ್ನು ಅಕ್ಟೋಬರ ತಿಂಗಳ ೧೫ನೇ ತಾರೀಖಿನ ವರೆಗೆ ಬೆಳೆಸಿದ್ದರಿಂದ, ಕಾಂಗ್ರೆಸ ಮೆಂಬರರೆಲ್ಲರಿಗೂ ಯೋಗ್ಯ ಸವಲತ್ತು ಸಿಗಲೆಂಬ ಅಪೇಕ್ಷೆಯಿಂದ ತಾ: ೯ ೧೦-೨೭ನೇ ದಿನ ಇಟ್ಟ ವಾರ್ಷಿಕ ಸಭೆಗಳು ಮುಂದೆ ೩೦-೧೦-೨೭ನೇ ದಿನ ಮೊದಲೇ ಗೊತ್ತು ಪಡಿಸಿದ ಸ್ಥಳದಲ್ಲಿ ಅದೇ ವೇಳೆಗೆ ಕೂಡುವವು. ದಯಮಾಡಿ ಯಾವ ಕಾಂಗ್ರೆಸ ಮೆಂಬರರೂ ಆವತ್ತಿನ ದಿವಸ ತಪ್ಪದೇ ದಯಮಾಡಿ ಬರಬೇಕಾಗಿ ಪ್ರಾರ್ಥನೆ.

ರಂಗನಾಥ ದಿವಾಕರ
ಅಧ್ಯಕ್ಷ.

ಜಾಹೀರ ನೋಟೀಸು.

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವಂಥ ತುಳಸವ್ವಾ ಕೋಮ ಯಲ್ಲವ್ವಾ ಸೂಲಗಿತ್ತಿಯವರ ಸಾಕೀನ ಮಲ್ಲಾಪೂರ ಮಜರೆ ಕಿತ್ತೂರ ಈಕೆಯು ಈ ಜಾಹೀರ ನೋಟೀಸಿನಿಂದ ಪ್ರಸಿದ್ಧ ಮಾಡುವದೇನಂದರೆ-

ನಾನು ನನ್ನ ಗಂಡನಾದ ಯಲ್ಲಾ ತಂದಿ ಭೀಮಾ ಸೂಲಗಿತ್ತಿಯವರ ಸಾಕೀನ ಬೈಲಹೊಂಗಲ ಈತನ ಹೆಸರಿನಿಂದ ರಾಜಹಂಸ ಪತ್ರದಲ್ಲಿ ತಾ|| ೨೧ ಜುಲೈ ೧೯೨೭ ನೇ ತಾರೀಖಿನ ದಿವಸ ಒಂದು ನೋಟೀಸು ಮಾಡಿಸಿದ ಸದರ ನೋಟೀಸು ಕಾಯದೆ ಪ್ರಕಾರ ರಜಿಸ್ಟರಾಗಿ ಹೋಯಿತು ಆದರೆ ಆತನು ಅದಿನ್ನು ಸ್ವೀಕಾರ ಮಾಡಲಿಲ್ಲ ಆದರೂ ಆತನಿಗೆ ಈ ನೋಟೀಸಿನ ಮಜಕೂರು ಮತ್ತು ಆತನ ಕೂಡ ನಾನು ಬಾಳ್ವೆ ಮಾಡಬೇಕೆಂಬ ನನ್ನ ಇಚ್ಛೆಯನ್ನು ಎರಡನೆಯವರಿಂದ ತಿಳಿಸಿದೆನು ಆದರೆ ಆತನು ನನ್ನ ಕೂಡ ಬಾಳ್ವೆ ಮಾಡಲಿಕ್ಕೆ ಇನಕಾರ ಮಾಡಿದ್ದಾನೆ ಮತ್ತು ನೋಟೀಸಾಗಿ ಎರಡು ತಿಂಗಳಾದರೂ ನನ್ನನ್ನು ಕರಕೊಂಡು ಹೋಗುವ ವಿಚಾರ ಮಾಡಲಿಲ್ಲ. ಆದ್ದರಿಂದ ಆತನ ಮನಸ್ಸಿನಲ್ಲಿ ಬಾಳುವೆ ಮಾಡುವದು ಇದ್ದಂತೆ ಕಂಡುಬರುವದಿಲ್ಲ. ಕಾರಣ ನನ್ನ ಉಪಜೀವನದ ದೆಸೆಯಿಂದ ನಾನು ಎರಡನೆಯವನನ್ನು ಉಡಿಕೆ ಮಾಡಿಕೊಳ್ಳುವದು ಅನಿವಾರ್ಯವಾಗಿದೆ ಆದರ ದೆಸೆಯಿಂದ ಈ ಜಾಹೀರ ನೋಟೀಸು ಮಾಡಿದ್ದೇನೆ ಸದರ ನನ್ನ ಗಂಡಾ ಯಲ್ಲಾ ಈತನು ಈ ಜಾಹೀರಾತು ಪ್ರಸಿದ್ಧವಾದ ಎಂಟು ದಿವಸಗಳಲ್ಲಿ ಎಲ್ಲಿದ್ದರೂ ನನ್ನಲ್ಲಿಗೆ ಒಂದು ನನ್ನ ಕಾಳು ಮುಟ್ಟಿನ್ನೂರು ರೂಪಾಯಿ ತೀರಿಸಿ, ನನ್ನನ್ನು ಕರಕೊಂಡು ಹೋಗಬೇಕು ಇದಕ್ಕೆ ತಪ್ಪಿದರೆ ನಾನು ಎರಡನೆಯವನನ್ನು ಉಡಿಕೆ ಮಾಡಿಕೊಳ್ಳುವೆನು ಆನಂತರ ನನ್ನ ಉಡಿಕೆ ಗಂಡ ಮತ್ತು ನನ್ನ ಮೇಲೆ ಸದರ ಯಲ್ಲಾ ಈತನ ಯಾವ ಹಕ್ಕು ನಡೆಯಲಾರದು ಮತ್ತು ಈಗಾದ ಸಾಲದ ದೆಸೆಯಿಂದ ಆತನ ಮೇಲೆ ಕಾಯದೆಶೀರ ಇಲಾಜ ಮಾಡಿ ವಸೂಲ ಮಾಡುವೆನು ಅಂತಾ ಜಾಹೀರ ಮಾಡಿದ ಸೋರಪತ್ರದ ನೋಟೀಸು

ತಾ|| ೨೮-೯-೧೯೨೭ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ತುಳಸವ್ವಾ ಕೋಮ ಯಲ್ಲಾ ಸೂಲಗಿತ್ತಿಯವರ ಈಕೆಯದು ಇರುತ್ತದೆ.

ವಿಜಯದ ವರ್ಗಣೀ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	೧೨—೮—೦ ರೂ
೬ ”	೬—೦—೦ ರೂ
೪ ”	೪—೦—೦ ರೂ
ವಾರ ಪತ್ರಿಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಆಚಾರ್ಯ ಬಾಳಾಚಾರ್ಯ ಹೊಸೂರ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಸೋಮವಾರ ತಾರೀಖು ೨೬ ನೇ ಸಪ್ಟಂಬರ ೧೯೨೭ (ಸಂಚಿಕೆ ೨೦೪

ಹಂಗಾಮು ಮುಗಿಯು ಬಂದಿತು ತ್ವರೆ ಮಾಡಿರಿ,
ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಚನ್ನಾಗಿ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೇನೆಂದರೆ ಉಕ್ಕಿನ ಕಂಬಗಳ ಚೌಕಟ್ಟು ಹತ್ತಾರೆ ಬೇರಿಂಗುಗಳು ಇರುವದರಿಂದ ಯಂತ್ರವು ಹಚ್ಚುಕಟ್ಟಾಗಿ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಗಿಂತಲೂ ಇವುಗಳಲ್ಲಿ ಕಾಳು ಬೇಳೆ ಯಾಗುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿದೆವು.

ಕಟ್ಟಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ದಿಪಾವಳಿ ನಿಮಿತ್ತದಿಂದ ಮಂಜೂರಾದ

ಕನ್ನಡ ನಿಬಂಧರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟಿದ್ದಲ್ಲದೆ, ರಿಪೋರ್ಟು-ಅರ್ಜಿ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವದೆ,

ಪ್ರತಿಗಳು ದೊರೆಯುವ ಸ್ಥಳ:— ೧ ರಾ. ರಾ. ಬಿ. ಜಿ. ದಿವೇಕರ,
ಮಾಳಗುಡ್ಡ, ಧಾರವಾಡ
೨ ರಾ. ರಾ. ಎ. ಆರ್. ಶಿವನಾಗಪ್ಪಾ
ವಾಗ್ವಿಲಾಸ ಬುಕ್ ಡಿಪೋ ಹುಬ್ಬಳ್ಳಿ

WANTED.

Wanted Candidates for Telegraph and Station Master's Courses Railway Fare GRANTED Board ing Seat FREE. Prospectus on 2 annas stamp,- Presidency Telegaph Coll ge, Royapettah Madras

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಲಗಿಯು ಆರು ಲಕ್ಷದ ಮೇಲುಂಟು. ಚಳವಳಿ ನೋಡಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯಲ್ಪಡುವವು. ಠೇವಿ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವವು.

ವಿಶೇಷ ಸಂಗತಿಗಳನ್ನು ಕಛೇರಿ ಭೆಟ್ಟಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಹಾಗಿ,
ಮ್ಯಾನೇಜಿಂಗ ಡೈರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಇಟ್ಟು ತೆಗೆದುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೨೬-೯-೨೬ ನೇ ಇಸ್ವಿ

ಹಿಂದೂ ಮುಸಲಮಾನ ಐಕ್ಯದ ಸಭೆಗೆ ದೃಷ್ಟಿಯಾಯಿತು.

--೦--

ಸಿಮಲಾದಲ್ಲಿ ಕೂತ ಹಿಂದೂ ಮುಸಲಮಾನ ಐಕ್ಯ ಕಮೀಟಿಗೆ ಪುನಃ ದೃಷ್ಟಿಯಾಯಿತು. ಗೋವಧ ಮತ್ತು ಮಸೀದೆಯ ಮುಂದೆ ವಾದ್ಯ ಬಾರಿಸುವ ವಿಷಯಗಳು ಹಗ್ಗ ಹರಿಯಲಿಲ್ಲ, ಕೋಲು ಮುರಿಯಲಿಲ್ಲೆಂತಾದವು. ಮುಖ್ಯ ವಿಷಯಗಳು ಬಿಟ್ಟು, ಕೆಲಕೆಲ ವಿಷಯಗಳು ಉಭಯತರ ಅನುಮೋದನಕ್ಕೆ ಬಂದವು. ಗಲ್ಲಿನ ಶಿಕ್ಷೆ ಕಾಪಾಡಿ ಹೋಮವ್ವಿಕೆದು, ಬಿಕ್ಕ ಶಿಕ್ಷೆಗಳ ಮಾಫಿಯಾಗುವಂತೆಯೋ ಸೈ!! ಮೆಂಬರರು ಕಮೀಟಿ ಮುರಿದು ಏಳುವಾಗ ಪುನಃ ಆಶಾವಾದಿಗಳಾಗಿ ಈ ಬಗ್ಗೆ ಉಭಯ ಪಕ್ಷದಿಂದಲೂ ವಿಚಾರ ಮಾಡುವದಕ್ಕಾಗಿ ಹಿಂದೂ ಮುಸಲಮಾನರದೊಂದು ಕಮೀಟಿ ನೇಮಿಸಿದ್ದಾರೆ. ಇವರ ಹೆಸರುಗಳು.

ಹಿಂದೂ— ಲಾಲಾ ಲಜಪತರಾಯ, ಪಂಡಿತ ಮಾಲವಿಯಾ, ಡಾಕ್ಟರ ಮುಂಜೆ ರಾಯ ಕೇದಾರನಾಥ, ಜಯರಾಮದಾಸ ದೌಲತರಾಮ ಮತ್ತು ಸರದಾರ ಉಜ್ಜಲಸಿಂಗ.

ಮುಸಲಮಾನರು— ಮೌಲಾನಾ ಅಜದ, ಹಕೀಮ ಅಜಮಲಖಾನ, ಮೌಲಾನಾ ಮಹಮುದಲ್ಲಿ ಡಾಕ್ಟರ ಕಿಚಲು.

ಇವರು ಸರ್ವಾನುಮತದಿಂದ ಕಳಿಸಿದ ರಿಪೋರ್ಟಿನ ವಿಚಾರ ಮಾಡುವದಕ್ಕಾಗಿ, ಇದು ಮುಟ್ಟಿದ ಮೂರು ವಾರಗಳೊಳಗಾಗಿ ಸಭೆ ಕರೆಯಬೇಕು. ಸಭೆಯನ್ನು ಕರೆಯುವ ಕೆಲಸವನ್ನು ಬ್ಯಾರಿಸ್ಟರ ಜಿನ್ನಾ ಸಾಹೇಬರಿಗೆ ಒಪ್ಪಿಸಿದ್ದಾರೆ ರಿಪೋರ್ಟನ್ನು ಇವರ ಕಡೆಗೇ ಕಳಿಸತಕ್ಕದ್ದು.

—

ಸ್ತ್ರೀಯರು ಯಾವಾಗ ಪೂಜ್ಯಳು.

ಸ್ತ್ರೀಯರು ವೈಕುಂಠ ಒಡವೆಗಳನ್ನು ಟ್ಟು, ಜರದ ಪೀತಾಂಬರವುಟ್ಟ ಮಾತ್ರದಿಂದ ಪೂಜ್ಯರೂ ಮಾನಾರ್ಹರೂ ಆಗುವದಿಲ್ಲ. ಆಕೆಯ ಅಕ್ಕವು ಪರಿಶುದ್ಧವಾಗಿದ್ದರೇ ಪೂಜ್ಯಳಾಗುವಳು. ವಸ್ತ್ರ ಒಡವೆಗಳ ಅವಶ್ಯಕತೆಯು ಎಷ್ಟು ಇರುವದಿಲ್ಲೆಂದು ಮಹಾತ್ಮಜಿನಾಪಲ್ಲಿಯಲ್ಲಿ ಭಾಷಣ ಮಾಡಿದ್ದಾರೆ.

ಅಸ್ಪೃಶ್ಯವಾದಿಗಳು ಸೈತಾನವೃತ್ತಿಯವರು.

—೦—

ಮಹಾತ್ಮರು ಪುದಕೋಟೆಗೆ ಹೋದಾಗ ಅಂತ್ಯಜೋದ್ಧಾರವನ್ನು ಕುರಿತು ಮಹತ್ವದ ಭಾಷಣ ಮಾಡಿದರು. ಅಸಹಕಾರದ ವೇಳೆಯಲ್ಲಿ ಇಂಗ್ರೇಜಿ ಸರಕಾರವು ಸೈತಾನವಾಗಿರುತ್ತದೆಂದು ಹೇಳುತ್ತಾ ಬಂದರು. ಅದನ್ನೇ ಈಗ ಧರ್ಮವಿಷಯವಾಗಿ ಹೇಳಲಿಕ್ಕೆ ಪ್ರಾರಂಭಿಸಿದ್ದಾರೆ. ಇವರು ಅನ್ನುವದೇನಂದರೆ-

ಅಸ್ಪೃಶ್ಯವೆಂಬದು ಸೈತಾನ ನಿರ್ಮಾಣವಾದಂಥ ಜಾತಿಯಾಗಿದೆ. ಇವರನ್ನು ಮುಟ್ಟಿಸಿಕೊಳ್ಳದಂಥವರು ಭಗವದಯೆ ಮತ್ತು ದೇವರ ಮುಂದೆ ತಮ್ಮ ಜವಾಬು ಕೊಡಬೇಕಾದೀತು. ಇದೊಂದು ಪಾಪಕೃತ್ಯವಾಗಿರುತ್ತದೆಂದು ಹೇಳಲಿಕ್ಕೆ ನಾನೆಷ್ಟು ಹಿಂಜರಿಯುವದಿಲ್ಲ. ನೀವು ಈ ಸೈತಾನನ ಹಿಡಿತದೊಳಗಿಂದ ಪಾರಾದಿರೆಂದರೆ- ಜಗತ್ತಿನಲ್ಲಿ ಅಸ್ಪೃಶ್ಯವೆಂಬದೇ ಉಳಿಯುವದಿಲ್ಲ.

—

ಸುರತದಲ್ಲಿ ಸ್ತ್ರೀಯರ ಸಭೆ.

—೦—

ಸುರತದ ಕಲೆಕ್ಟರಸಾಹೇಬರು ಶಾಂತತಾಭಂಗದ ನೆವನ ಮಾಡಿಕೊಂಡು ಹಿಂದೂ ಜನರಿಗೆ ಮಸೀದೆಗಳ ಮುಂದೆ ವಾದ್ಯ ಬಾರಿಸುವದಕ್ಕೆ ಪ್ರತಿಬಂಧ ಮಾಡಿದ್ದಾರೆ ಈ ಕೃತ್ಯದ ನಿಷೇಧ ಮಾಡುವದಕ್ಕಾಗಿ ಪುರುಷರು ಸಭೆ ಮಾಡಿದ್ದಂತೂ ಸರಿಯೇ. ಸ್ತ್ರೀಯರೂ ಸಭೆ ಮಾಡಿ, ಸಾಹೇಬರ ಕೃತ್ಯವನ್ನು ನಿಷೇಧಿಸಿದರು. ಈ ಸಭೆಗೆ ಹತ್ತಾರು ಸಾವಿರ ಸ್ತ್ರೀಯರು ಬಂದಿದ್ದರು. ಈ ವಿಷಯವಾಗಿ ಪುರುಷರು ಕೈಕೊಳ್ಳುವಂಥ ಯಾವದೊಂದು ಕೃತ್ಯವನ್ನು ತಾವು ಧೈರ್ಯಸ್ಥೈರ್ಯದಿಂದ ಹಿಂಬಾಲಿಸುವಂತೆ ಇವರು ಸಭೆಯಲ್ಲಿ ಠರಾವು ಮಾಡಿದ್ದಾರೆ.

—

ಕಾಯದೆ ಕೌನ್ಸಿಲದ ಮೆಂಬರರಿಗೆ ಶಿಕ್ಷೆ.

—೦—

ಸಿಂಧ ಹೈದರಾಬಾದದಲ್ಲಿ ಡಿಸ್ಟ್ರಿಕ್ಟ ಲೋಕಲಬೋರ್ಡಿನ ಉಪಾಧ್ಯಕ್ಷರೂ, ಮುಂಬಯಿಯ ಕಾಯದೆ ಕೌನ್ಸಿಲದ ಮೆಂಬರರೂ ಆದಂಥ ಮಿ. ಸಯ್ಯದ ಬಬಶಕ್ಸ ಶಹಾ ಎಂಬವರು ಇಬ್ಬರು ಹಿಂದೂ ಬಡಿಗೇರರ ಮೇಲೆ ಕೊಲೆಯ ಆರೋಪ ಹೊರಿಸಿ, ಫಿರ್ಯಾದು ಮಾಡಿದರು. ಈ ಫಿರ್ಯಾದಿಯು ಸುಳ್ಳಿರುತ್ತದೆಂದು ಕಂಡುಬಂದು, ನರಿಮನೆಯು ತಿನ್ನು ಸಾಯಲೆಂದರೆ- ತಾನೇ ಸಾಯಲೆನ್ನುವಂತೆ, ಸಾಹೇಬರ ಮೇಲೆ ಪ್ರಕರಣ ಹೊಳ್ಳಿತು. ಮತ್ತು ಸೆಶನ ಕೋರ್ಟಿನಲ್ಲಿ ಇವರಿಗೆ ಮೂರು ವರ್ಷ ಕೈದು ಮತ್ತು ಐನೂರು ರೂಪಾಯಿ ದಂಡವಾಯಿತು. ದಂಡ ಕೊಡದಿದ್ದರೆ- ಒಂದು ವರ್ಷ ಹೆಚ್ಚಿಗೆ ಶಿಕ್ಷೆ ಅನುಭವಿಸಬೇಕಾಗುತ್ತದೆ

—

ವೈಕುಂಠವಾಸಿ ರಾಣೆಬೆನ್ನೂರಿನ ರಾವಬಹಾದ್ದೂರ ವೆಂಕಣ್ಣನಾಯಕರು.

ರಾಣೆಬೆನ್ನೂರಿನ [illegible] ಕರ್ನಾಟಕ ಪ್ರಾಂತದಲ್ಲೆಲ್ಲ ಸುಪ್ರಸಿದ್ಧಿಯನ್ನು ಪಡೆದಿದ್ದ ರಾವಬಹಾದ್ದೂರ ವೆಂಕಣ್ಣನಾಯಕರು ಮೊನ್ನಿನ ದಿವಸ ಪ್ರಾಂತದಲ್ಲಿ ತಮ್ಮೂರಲ್ಲಿ ಅಕಸ್ಮಾತ್ತಾಗಿ ವೈಕುಂಠವಾಸಿಗಳಾದರೆಂಬದಾಗಿ ಬಂದ ತಾರಿನ ವರ್ತಮಾನವನ್ನು ಬರೆಯುವದಕ್ಕೆ ಅತ್ಯಂತವಾಗಿ ವಿಷಾದಿಸುತ್ತೇವೆ. ರಾ. ಬ. ನಾಯಕರು ಆ ಭಾಗದ ಶ್ರೀಮಂತ ಮನೆತನಕ್ಕೆ ಸೇರಿದವರು. ದೊಡ್ಡ ದೊಡ್ಡ ಮನೆತನಗಳ ಕೂಡ ಬಾಂಧವ್ಯವುಳ್ಳವರು. ವಂಶಪರಂಪರೆಯಿಂದ ಬಂದಿದ್ದ ಪ್ರಸಿದ್ಧಿಯನ್ನು ಸ್ವಂತ ಕರ್ತೃತ್ವದಿಂದ ಮತ್ತಿಷ್ಟು ಹೆಚ್ಚಿಸಿದರು. ಸರಕಾರ ದರಬಾರದಲ್ಲಿ ಬಹುಪ್ರಿಯರಾದರು. ಮ್ಯುನಿಸಿಪಾಲಿಟಿ ಲೋಕಲಬೋರ್ಡುಗಳ ಅಧ್ಯಕ್ಷರಾಗಿದ್ದದಲ್ಲದೆ ಸರಕಾರದ ವತಿಯಿಂದ ಹಳೇ ಕೌನ್ಸಿಲದ ಮೆಂಬರರಾಗಿದ್ದರು. ಸರಕಾರದವರು ಕೈಕೊಂಡಂಥ ಪ್ರತಿಯೊಂದು ಸಾರ್ವಜನಿಕ ಕೃತ್ಯದಲ್ಲಿ ಕರ್ತವ್ಯ ನಿರತರಾಗಿ ಕೆಲಸ ಮಾಡುವರು. ಇವರ ಸ್ವಭಾವವು ಪೃಥು ಮಧುರವಾದದ್ದು. ಸಾವಿರಾರು ಜನರಿಗೆ ಸಹಾಯ್ಯವಾದ ಉಪಕಾರ ಮಾಡಿದ್ದಾರೆ. ರಾಣೆಬೆನ್ನೂರು ಹಳ್ಳಿ ಹೋಗಿ ಪಟ್ಟಣದಂತೆ ಸುಧಾರಣೆಯನ್ನು ಹೊಂದಿದ್ದಕ್ಕೆ ಇವರ ಸ್ವಗ್ರಾಮಾಭಿವೃದ್ಧಿಯ ಅಭಿಮಾನವೇ ಕಾರಣವು. ಇವರ ದೆಸೆಯಿಂದಲೇ ಲಾರ್ಡ ವಿಲಿಂಗಡನ್ನ ಸಾಹೇಬರು ರಾಣೆಬೆನ್ನೂರಿಗೆ ಬಂದರು. ಮತ್ತು ಅಗ್ಗೆ ದನದ ಪ್ರದರ್ಶನವಾಯಿತು. ಆ ಪ್ರಾಂತದಲ್ಲಿ ಇವರಷ್ಟು ಲೋಕಶಿಕ್ಷಣಪ್ರಿಯರಾದಂಥವರು ಇಲ್ಲೆಂದರೂ ಸಲ್ಲುವದು. ಇವರ ಅಕಾಲಿಕ ಮೃತ್ಯುವಿನ ದೆಸೆಯಿಂದ ಅತ್ಯಂತವಾಗಿ ವಿಷಾದಿಸುತ್ತೇವೆ.

—

ಧಾರವಾಡ-

ಇಲ್ಲಿಯ ಮಾಮಲೇದಾರರಾದ ಮಿ. ದೇಶಪಾಂಡೆಯವರಿಗೆ ಕಾರವಾರ ಜಿಲ್ಹೆಗೆ ಅಸಿಸ್ಟಂಟ ಡಿ. ಡಿ. ಕಲೆಕ್ಟರ ಕೆಲಸದ ಮೇಲೆ ವರ್ಗವಾಗಿರುತ್ತದೆ.

—

ಮಿ. ಬಸನಗೌಡರು ತಮ್ಮನ್ನು ಜಾಮೀನದ ಮೇಲೆ ಬಿಡಬೇಕೆಂದು ಜಜ್ಜ ಕೋರ್ಟಿಗೆ ಅಪೀಲು ಮಾಡಿದ್ದು, ಅದರ ಸುನಾವಣೆಯು ಇವತ್ತಿನ ದಿವಸ ಆಗತಕ್ಕದ್ದಿರುತ್ತದೆ,

ಬನವಾಸಿ ಮಧುಕೇಶ್ವರ ದೇವಸ್ಥಾನದ ಪ್ರಕರಣ

ವೆ. ಶಾಂತವೀರ ಒಡೆಯರ ಡಿ. ಬಿ. ಕಲೆಕ್ಟರ ಇವರ ಜವಾಬು.

ನನ್ನ ಸ್ವಸ್ಥಾನ ಧಾರವಾಡ ಜಿಲ್ಲೆ. ಮುಂಬೈ ಯುನಿವ್ಹರ್ಸಿಟಿ L. A. G. ಗ್ರ್ಯಾಜ್ಯುಯೇಟನಿದ್ದೇನೆ. ೧೯೦೭ರಲ್ಲಿ ಪಾಸಾದೆನು. ೧೯೦೮ರಲ್ಲಿ ಗವ್ಹರ್ನಮೆಂಟ ಸರ್ವಿಸಿನಲ್ಲಿ ಸೇರಿದೆನು. ನನ್ನ ಸರ್ವಿಸ ಬುಕ್ಕಿನಲ್ಲಿ ನನ್ನ ಜಾತಿ ಲಿಂಗಾಯತ ಜಂಗಮ ಅಂತಾ ಅದೆ. ನಾನು ಸರ್ವಿಸಕ್ಕೆ ಅರ್ಜಿ ಮಾಡುವ ಕಾಲಕ್ಕೆ ಲಿಂಗಾಯತರು ವಿದ್ಯಾದಿಂದ ಹಿಂದೆ ಉಳಿದವರು, ಅಂತಾ ಅರ್ಜಿಯಲ್ಲಿ ನಮೂದಿಸಿರುತ್ತೇನೆ. ಆ ಅರ್ಜಿಯಲ್ಲಿ ಲಿಂಗಿ ಬ್ರಾಹ್ಮಣ, ಅಪ್ರಾಕೃತ ಬ್ರಾಹ್ಮಣ ಅಂತಾ ಕಾಣಿಸಿಲ್ಲಾ, ಲಿಂಗಿ ಬ್ರಾಹ್ಮಣ ಅಂತಾ ಕಾಣಿಸಿಲ್ಲಾ. ಲಿಂಗಿ ಬ್ರಾಹ್ಮಣರೆಂದು ಪೂರ್ವದಿಂದಾ ಕರೆಯಲ್ಪಡುತ್ತೇವೆ. ಬಹು ಪುರಾತನ ಕಾಲದಿಂದಾ ಕರೆಯಲ್ಪಡುತ್ತೇವೆ. ನಾನು ಸರ್ವಿಸಕ್ಕೆ ಅರ್ಜಿ ಮಾಡುವಾಗ್ಯೆ ಲಿಂಗಿ ಅಪ್ರಾಕೃತ ಬ್ರಾಹ್ಮಣರೆನ್ನುವದು ನನಗೆ ಗೊತ್ತಿತ್ತು. ಈ ವಿಷಯವನ್ನು ಅರ್ಜಿಯಲ್ಲಿ ಕಾಣಿಸಬೇಕೆಂಬ ಕಾರಣ ಕಾಣಲಿಲ್ಲಾ. ಅದ್ದರಿಂದ ಕಾಣಿಸಲಿಲ್ಲಾ. ಬ್ರಾಹ್ಮಣರು ಇತರ ಜಾತಿ ಜನರು ನಮಗೆ ಲಿಂಗಿ ಅಥವಾ ಅಪ್ರಾಕೃತ ಬ್ರಾಹ್ಮಣರನ್ನುತ್ತಾರೆ. ಬ್ರಾಹ್ಮಣರು ನಮಗೆ ಲಿಂಗಿ ಬ್ರಾಹ್ಮಣರೆನ್ನುವ ಕಾಗದಗಳನ್ನು ಹಾಜರ ಮಾಡಿದ್ದೇನೆ. ೧೮೪೭ನೇ ಭಾದ್ರಪದ ಶುದ್ಧದಲ್ಲಿ ಕಾಶಿಯಿಂದಾ ಬಂದ ಕಾಗದ ಗದವಾಲದ ಭೂಗೋಲ ನಮ್ಮ ಶಿಲಾ ಶಾಸನಗಳು ಇವುಗಳಲ್ಲಿ ಮೂರು ಇನ್ನು ಕೆಲವು ಹಾಜರ ಮಾಡಿದ ಬುಕ್ಕಿನಲ್ಲಿ ನೋಡಿ ಹೇಳುತ್ತೇನೆ. ಕಾಶಿ ಕಾಗದದಲ್ಲಿ ಲಿಂಗಿ ಅಥವಾ ಅಪ್ರಾಕೃತ ಬ್ರಾಹ್ಮಣ ಯಂತಾ ಶಬ್ದಗಳಿಲ್ಲಾ. ಕಾಶಿಯಿಂದಾ ಬಂದ ಗದ್ವಾಲ ಭೂಗೋಲದಲ್ಲಿ ಈ ಶಬ್ದಗಳಿಲ್ಲಾ ಲಿಂಗಿ ಅಪ್ರಾಕೃತ ಬ್ರಾಹ್ಮಣರೆಂತ ಶಬ್ದ ಶಿಲಾಲಿಪಿಗಳಲ್ಲಿ ಇಲ್ಲಾ. ನಾನು ಹಾಜರ ಮಾಡಿದ ಬುಕ್ಕಿನಲ್ಲಿ ಲಿಂಗಿ ಅಪ್ರಾಕೃತ ಬ್ರಾಹ್ಮಣಯಂತಾ ಅದೆ. ನನ್ನ ತನ್ನಂದಿರ ಜನ್ಮ ಆಗುವ ಮೊದಲು ಲಿಂಗೀ ಬ್ರಾಹ್ಮಣ ಶಬ್ದ ಇತ್ತು. ಬಹುಕಾಲದಿಂದಾ ಮೊದಲು ಇತ್ತು. ಡಾಕ್ಟರ ಭಾಂಡಾರಕರವರ ಪುಸ್ತಕದಲ್ಲಿ ಲಿಂಗಿ ಬ್ರಾಹ್ಮಣ ಎಂಬ ಶಬ್ದ ಅದೆ. ಈ ಪುಸ್ತಕ ಹಾಜರ ಮಾಡಿತ್ತು. ಮಹಾಭಾರತ ಅನುಶಾಸನ ಪರ್ವ ಅಧ್ಯಾಯ ೨೩೫ರಲ್ಲಿಯ ಲಿಂಗಧಾರಣ ಚಂದ್ರಿಕಾ ಪಾನು ೧೯ರಲ್ಲಿ ಇವುಗಳಲ್ಲಿ ಲಿಂಗಿ ಬ್ರಾಹ್ಮಣವೆಂತ ಒದೆದವೆ. ಅನುಶಾಸನ ಪರ್ವದ ಅರ್ಥ ನನಗೆ ಗೊತ್ತಿಲ್ಲಾ. ಪ್ರಶ್ನೆ- ಈ ಶ್ಲೋಕದ ಅರ್ಥ ಗೊತ್ತಿಲ್ಲದೆ ಹ್ಯಾಗೆ ಹೇಳಿದಿರಿ? ಉತ್ತರ ಅದರಲ್ಲಿ ಬರೆದದೆ. ಅದರಿಂದ ಹೇಳಿದ್ದೇನೆ. ಬ್ರಾಹ್ಮಣಂ ಲಿಂಗಿನಂ ಜ್ಞೇಯ ಅಂತಾ ಬರೆದದೆ ಅದ್ದರಿಂದಾ ಲಿಂಗಿ ಬ್ರಾಹ್ಮಣ ಅಂತಾ ಹೇಳಿದೆ. ಅಪ್ರಾಕೃತ ಬ್ರಾಹ್ಮಣ ಅಂತಾ ಚಿಕ್ಕೋಡಿ ಕೋರ್ಟಿನಲ್ಲಿ ಜಡ್ಜಮೆಂಟಿನಲ್ಲಿ ಬರೆದದ್ದು ಹಾಜರ ಮಾಡಿದೆ ಇನ್ನು ಕೆಲವು ಪುಸ್ತಕಗಳಲ್ಲಿ ಇರಬಹುದು. ಪುಸ್ತಕಗಳನು ಓದಿ ನೋಡದ ಹೊರತು ನಾನು ಈಗ ಹೇಳಲಾರೆ. ಅಪ್ರಾಕೃತ ಬ್ರಾಹ್ಮಣ ಇದರ ಅರ್ಥ ನನಗೆ ಗೊತ್ತು ಇಲ್ಲಾ. [illegible] ರ್ಮೆಂಟದವರು ನಮು ಬ್ರಾಹ್ಮಣರೆಂತಾ ಗ[illegible]ವಾದರೋ ಇಲ್ಲೋ [illegible]ಗೆ ಗೊತ್ತಿಲ್ಲಾ. ನಾನು ವರ್ತಮಾನ ಪ[illegible] ಧಾರವಾಡ ಜಿಲ್ಲೆಯಲ್ಲಿ ನಾ[illegible] ಬ್ರಾಹ್ಮಣ ಕಾನ್ಫರೆನ್ಸ ಆದದ್ದು ವರ್ತಮಾನ ಪತ್ರದಲ್ಲಿ ಓದಿ[illegible]ನೆ. ಈ ಕಾನ್ಫರೆನ್ಸದಲ್ಲಿ ಲಿಂಗಾಯತರು ಮುಖಂಡರಾಗಿ ಪಾರ್ಟ ತೆಗೆದುಕೊಂಡದ್ದು ನನಗೆ ಗೊತ್ತಿಲ್ಲಾ. ಲಿಂಗಾಯತರು ಸಭೆಯಲ್ಲಿದ್ದರು ಯಂತ ವರ್ತಮಾನ ಪತ್ರದಲ್ಲಿ ಓದಿದ್ದೇನೆ. ಆ ಕಾನ್ಫರೆನ್ಸದಲ್ಲಿ ನಾನ್ ಬ್ರಾಹ್ಮಣ ಗ್ರುಪ ಇದ್ದದ್ದು ನನಗೆ ಗೊತ್ತಿಲ್ಲಾ. ಇದಕ್ಕೂ ಮೊದಲು ಇದ್ದದ್ದು ನನಗೆ ಗೊತ್ತಿಲ್ಲಾ. ರಾವಬಹಾದ್ದೂರ ಕಂಬಳಿ ಕುಲಕರ್ಣಿ ಗುರ್ತು ಅದೆ. ಇವರು ಲಿಂಗಾಯತರು. ಅವರು ನಾನ್ ಬ್ರಾಹ್ಮಣ ಪಾರ್ಟಿಯಲ್ಲಿ ಸೆರಿದ್ದರೋ ಇಲ್ಲೋ ನನಗೆ ಗೊತ್ತಿಲ್ಲಾ. ಲಿಂಗಾಯತರು ೧೯೨೧ನೇ ಇಸ್ವಿದಿಂದಾ ವೀರಶೈವ ಬ್ರಾಹ್ಮಣರೆಂತಾ ಕರಿಸಿಕೊಳ್ಳಬೇಕೆಂತಾ ಪ್ರಯತ್ನ ನಡಿಸಿದ್ದು ನನಗೆ ಗೊತ್ತಿಲ್ಲಾ. ಈ ಬಗ್ಗೆ ಗವ್ಹರ್ನಮೆಂಟ ರೆಪ್ರಜೆಂಟ ಮಾಡಿಕೊಂಡದ್ದು ನನಗೆ ಗೊತ್ತಿಲ್ಲಾ. ೧೯೨೪ನೇ ಇಸ್ವಿಯಲ್ಲಿ ವೀರಶೈವ ಕಾನ್ಫರನ್ಸ ಆದದ್ದು ನನಗೆ ಗೊತ್ತಿಲ್ಲ. ನಾನು ಹಾಜರ ಮಾಡಿದ ಬುಕ್ಕುಗಳಲ್ಲಿ ಅವನ್ನು ಓದಿಲ್ಲಾ. ಕಾಸ್ಟ್ಸ ಎಂಡ ಟ್ರಾಯಬ್ಸ ಈ ಪುಸ್ತಕದಲ್ಲಿ ೩೮೭ ಪಾನಿನಲ್ಲಿ ಇದ್ದ ವಿಷಯವು ಜಂಗಮ ಮಾದವಯ್ಯ ಮಾಡಿದ ಇರುವ ಪ್ಯಾರಾ ನಾನು ಧರ್ಮಶಾಸ್ತ್ರ ಓದಿದವನಲ್ಲಾದ ಕಾರಣ ಮಾನ್ಯವಿದೆಯೋ ಇಲ್ಲೋ ನನಗೆ ಗೊತ್ತಿಲ್ಲಾ. ಈ ಬುಕ್ಕು, ನಾನು ಹಾಜರ ಮಾಡಿದ್ದೇನೆ. ಇದರಲ್ಲಿ ನನ್ನ ೧೯೨೧ರಲ್ಲಿ ವೀರಶೈವ ಬ್ರಾಹ್ಮಣರೆಂತಾ ದಾಖಲ ಮಾಡಲಿಕ್ಕೆ ಬಂದ ಮಜಕೂರ ಸುಳ್ಳ ಅದೆಯೋ ಖರೇ ಅದೆಯೋ ನಾನು ಹೇಳಲಾರೆ. ಪಾ. ೩೫೨ ರಿಂದಾ ಪಾ. ೩೬೧ರ ವರೆಗೆ ಲಿಂಗಾಯತರಿಗೆ ಬಸವ ಪುರಾಣ ಚನ್ನಬಸವ ಪುರಾಣ ಪವಿತ್ರವಾದವು ಹೌದೊ ಅಲ್ಲೋ ನನಗೆ ಗೊತ್ತಿಲ್ಲಾ. ಬಸವ ಪುರಾಣ ಚನ್ನಬಸವ ಪುರಾಣ ಅನ್ನುವ ಹೆಸರು ಕೇಳಿದ್ದೇನೆ. ಆ ಪುರಾಣಗಳನ್ನು ನಾನು ಓದಿಲ್ಲಾ ಕೇಳಿಲ್ಲಾ. ಅದ್ದರಿಂದಾ ಮಾನ್ಯ ಅವೆಯೋ ಇಲ್ಲೋ ನಾನು ಹೇಳಲಾರೆ. ಬಸವ ಪುರಾಣ ಚನ್ನಬಸವ ಪುರಾಣಗಳು ಲಿಂಗಾಯತ ಧರ್ಮ ಹೇಳುತ್ತವೋ ಇಲ್ಲೋ ನನಗೆ ಗೊತ್ತು ಇಲ್ಲಾ. ಚನ್ನಬಸವ ಚಾರಿತ್ರ್ಯವನ್ನು ವದು ಕೇಳಿದ್ದೇನೆ. ಬಸವನು ಲಿಂಗಾಯತ ಧರ್ಮ ಸ್ಥಾಪಕನಲ್ಲಾಯೆಂತಾ ನನ್ನ ಅಭಿಪ್ರಾಯವು. ನಂದಿ ಭೃಂಗಿ ಸ್ಕಂಧ ಮುಂತಾದ [illegible] ಗೋತ್ರದ ಪುರುಷರು ಧರ್ಮ ಸ್ಥಾಪಕರೆಂತಾ ಕೇಳಿದ್ದೇನೆ. ಇವರು ಐದು ಮಂದಿ ಕೂಡಿ ಸ್ಥಾಪಿಸಿದರೋ ಒಬ್ಬರೇ ಸ್ಥಾಪಿಸಿದರೋ ನನಗೆ ಗೊತ್ತಿಲ್ಲಾ. ಲಿಂಗಾಯತ ಧರ್ಮವು ಯಾವ ಶತಮಾನದಲ್ಲಿ ಸ್ಥಾಪಿಸಲ್ಪಟ್ಟಿತೆಂಬುವದು ನನಗೆ ಗೊತ್ತಿಲ್ಲಾ. ಐದು ಮಂದಿ ಲಿಂಗಾಯತ ಮತಸ್ಥಾಪಕರ ಬಗ್ಗೆ ಯಾವ ಬುಕ್ಕಗಳನ್ನು ಹಾಜರ ಮಾಡಿದೇನೋ ಗೊತ್ತಿಲ್ಲಾ. ಬಸವನು ೧೨ನೇ ಶತಮಾನದಲ್ಲಿ ಇದ್ದನೆಂದು ಕರ್ನಾಟಕ ಇತಿಹಾಸದಲ್ಲಿ ಓದಿದ್ದೇನೆ. ವಿ[illegible] ನಂಬರ ೪೯೫ರ [illegible] ದಾಸಿ[illegible]ನಲ್ಲಿರುವ ಮಜಕೂರು ಯಾವ ಪ್ರತೀ ಅನುವಾದವೋ ಗೊತ್ತಿಲ್ಲಾ. ಇದರ ವಿರುದ್ಧವಾಗಿ ನಾನು ಹಾಜರ ಮಾಡಿದ ಗ್ರಂಥದಲ್ಲಿ ಅದೆಯೋ ಇಲ್ಲೋ ನಾನು ಹೇಳಲಾರೆ. ಬಸವನು ಬ್ರಾಹ್ಮಣನಲ್ಲಿ ಹುಟ್ಟಿದವನೆಂದು ಕೇಳಿದ್ದೇನೆ. ಬ್ರಾಹ್ಮಣರಲ್ಲಿ [illegible] ವನ್ನು ನನಗೆ ಗೊತ್ತಿಲ್ಲಾ. ಬ್ರಾಹ್ಮಣನು ಜನಿವಾರ ಹಾಕುವದು ಗೊತ್ತು ಅದೆ. ಬಸವನು ಜನಿವಾರ ಹಾಕಿಕೊಳ್ಳಲಿಕ್ಕೆ ಒಪ್ಪಲಿಲ್ಲಾ. ಮತ್ತು ಹುಟ್ಟಿದ ಕೂಡಲೆ [illegible] ಓದಿದ್ದೇನೆ. ಕೇಳಿದ್ದೇನೆ.

ಇಂಗ್ಲಂಡದಲ್ಲಿ ಅತಿವೃಷ್ಟಿ.

—o—

ಗುಜರಾಥ ಎತ್ತ ಕೇಳು.

—o—

ಇಂಗ್ಲಂಡದಲ್ಲಿ ಅರವತ್ತು ತಾಸುಗಳ ವರೆಗೆ ಬಿಟ್ಟೂ ಬಿಡದೆ, ಸತತವಾಗಿ ಮಳೆಯು ಸುರಿಯಿತು. ಈ ಮಳೆಯು ಸ್ಕಾಟಲಂಡ ಮತ್ತು ಇಂಗ್ಲಂಡದ ಕೆಲ ಭಾಗದಲ್ಲಿಯೂ ಬಿತ್ತು. ಟ್ರೇನ ಮತ್ತು [illegible] ಹೊಳೆಗಳಿಗೆ [illegible] ಬಂತು. ನೀರಿನ ಕಳವಿನಲ್ಲಿ [illegible] ನಾಶವಾಗಿ ಅವು ಬಹಳ ನಷ್ಟ ಹೊಂದಿದವು.

ಗೇಣ್ಸ್ ಮತ್ತು ಲೈನ [illegible] ಮೇಲೆ ಎಲ್ಲಿ ನೋಡಿದರೂ ನೀರೇ ನೀರಾಗಿರುತ್ತದೆ. ಸ್ಕಾಟ್ಲಂಡದ ಮುಖ್ಯ ಪಟ್ಟಣವಾದ ಎಡಿನಬರೋದ ಮೇಲೆ ಮೂರು ಅಬ್ಜ ಗ್ಯಾಲನ ನೀರು ಬಿದ್ದಂತೆ ಅಂದಾಜು ಮಾಡಲ್ಪಟ್ಟದೆ.

ನೋಟೀಸು

ಮೆ. ರಾಜೇಸಾಬ ವ|| ನಡರುಸಾಬ ಟಾಂಗೆ ವಾಲೆ ಸಾ. ಗದಗ ಸ್ಟೈಕಿ ಗಣೆಚಾಂಟಣೆ ಇವನಿಗೆ-

ಕೆಳಗೆ ಸಹಿ ಮಾಡಿದವಳ ಗುರ್ತು ಮಾಡಿದವಳ ಕಡೆಯಿಂದಾ ನಿನಗೆ ನೋಟೀಸಿನಿಂದಾ ತಿಳಿಸುವದು ಏನಂದರೆ ನೀನು ನನ್ನ ಲಗ್ನದ ಗಂಡನು ಇದ್ದು ನನ್ನ ಲಗ್ನ ಆಗಿ ಈಗ ಅಜಮಾಸು ಲಗಬಗ ಹತ್ತು ವರ್ಷ ಆಗಿರುವ ಬಂದು ನನ್ನ ಲಗ್ನ ಆದ ಕೂಡಲೆ ನೀನು ನನಗೆ ಗದಗಕ್ಕೆ ಕರಕೊಂಡು ಹೋದದ್ದು ಹೋದವರು ಪುನಃ ಹುಬ್ಬಳ್ಳಿಗೆ ನನ್ನ ತವರ ಮನೆಗೆ ಕಳಿಸಲಿಲ್ಲಾ ಎರಡು ವರ್ಷ ನಿನ್ನ ಮನೆಯಲ್ಲಿ ನನಗ ಇಟಕೊಂಡರಿ ಹುಬ್ಬಳ್ಳಿಯಿಂದಾ ನನ್ನ ತಂದಿ ತಾಯಿ ನನಗೆ ಕರಿಯಲಿಕ್ಕೆ ಗದಗಕ್ಕೆ ಬಂದರೆ ಅವರಿಗೆ ನನ್ನ ನೋಡ ಕೊಡದೆ ಸದರಿ ಅವರಿಗೆ ಯೇನಾದರು ಸುಳ್ಳು ಸಂಬ ಹೇಳಿ ನನ್ನ ಹುಬ್ಬಳ್ಳಿಗೆ ಕಳಿಸುತ್ತಿದ್ದಿರಿ ನನಗೆ ನೀವು ಬಹಳೇ ತಾಸು ಕೊಡಲಿಕ್ಕೆ ಹತ್ತಿದಿರಿ ನನಗೆ ಗದಗ ತಾಲೂಕ ಬೇಟಗೇರಿ ಗ್ರಾಮಕ್ಕೆ ಹೋಗಿ ಹೋಗ ಬೇಕೆಂದು ನೀವು ಕರದಿಂದಾ ಮಾರಾಟ ಮಾಡಲಿಕ್ಕೆ ನನ್ನ ಕಡಿಂದಾ ದರದಿವಸ ಕಳಿಸುತ್ತಿದಿರಿ ನಾನು ಅಂಬೆ ದಾರಿಯಲ್ಲಿ ನನಗೆ ಯಾರಾದರೂ ಹಿಡಕೊಂಡು ಬಾವದಿಗೆ ಪೈದಾರು ಪೆಲ್ಲೆ ಅಂದರೆ ನೀನು ನಿನ್ನ ತಾಯಿ ನಿನ್ನ ಅಕ್ಕ ಮೂರು ಜನರು ಕೂಡಿ ನನಗೆ ಹೊಡಿಬೇಕು ನಾನು ಕರೆವು ಕೇಲಿಕ್ಕೆ ಹೋಗದ ದಿವಸ ನನಗೆ ಉಪವಾಸ ಕೆಡುವಬೇಕು ನನ್ನ ಹೊಟ್ಟಿಗೆ ಅನ್ನ ಅರಿವೆ ಕೊಡದೆ ಬಹಳೇ ತ್ರಾಸ ಮಾಡಲಿಕ್ಕೆ ಹತ್ತಿದಿರಿ ಕರೆವು ತಿಂದು ಕೆಂದರೇ ನನ್ನ ಮನಿಯಲ್ಲಿ ಇರಬೇಕು. ಇಲ್ಲದರೆ ನೀನು ನಿನ್ನ ವರಗೆಗೆ ಬಂದ ಕಡಿಗೆ ಹೋಗು ಅಂತಾ ಒಂದು ಹರಕ ಶೀರಿ ಪಡಕಿ ಕೊಟ್ಟು ನಿನ್ನ ಗಾಸಿಬಿಟ್ಟು ಹೊರಗೆ ಹಾಕಿದಿ ನಾನು ಊರವಾಸ ವನವಾಸ ಮಾಡಕೋತಾ ಗದಗದಿಂದಾ ಯರಡು ದಿವಸಕ್ಕೆ ಹುಬ್ಬಳ್ಳಿಗೆ ಒಂದೆ ನನ್ನ ತವರ ಮನೆಗೆ ಬಂದರೆ ಅವರು ನನ್ನ ರೂಪಾ ವಗೈರೆ ನೋಡಿ ಪೋಲೀಸರ ಕಡಿಗೆ ಹಾಜರ ಮಾಡಿ ಪೂರು ಸದರಿ ಅವರು ಕರಕೊಂಡು ಹೋಗಿ ನಿಮ್ಮ ಮನಿಯಲ್ಲಿ ಇಟಕೊಳರಿ ಅಂತಾ ಹೇಳಿದರಿಂದಾ ನನ್ನ ತಂದಿ ತಾಯಿ ಕರಕೊಂಡು ಮನಿಗೆ ಬಂದರು ನನ್ನ ತಂದಿ ತಾಯಿ ಬಡವರು ಇದ್ದು ನನಗೆ ಜನ್ಮ ಕಡಿಯಿಂದಾ ಪಿಡಿಯುವದು ಆಗಲಿಲ್ಲಾ ನಾನು ನಿನ್ನ ಹೆಸರಿನ ಮೇಲೆ ಒದ್ದು ಇದ್ದ ಎರಡು ವರ್ಷ ಆಗುತ್ತಾ ಬಂತು ನನ್ನ ಹೊಟ್ಟಿಗೆ ಅನ್ನ ವೈ ಅರಿವಿ ಇಲ್ಲದರಿಂದಾ ನಿನ್ನ ಹೆಸರಿನ ಮೇಲೆ ಒಬ್ಬ ಸಾವಕಾರ ಕಡಿಗೆ ಭಂಡಸಾಲದು ರೂಪಾಯಿ ೧೦) ಸಾಲಾ ಮಾಡಿ ನನ್ನ ಹೊಟ್ಟೆಗೆ ತಿಂದಿದ್ದೆನೆ ಈಗ ಸಾಲಾ ಕೊಟ್ಟ ಸಾವಕಾರರದ್ದು ನನಗೆ ಬಹಳೇ ತಗಾದಿ ಆಗಿದ್ದರಿಂದಾ ನಾನು ನಿನಗೆ ಎಷ್ಟೋ ಸಾರೆ ಜನರ ಕಡಿಂದಾ ಹೇಳಿ ಕಳ್ಸಿದೆ ಇವತ್ತಿನ ವರಿಗೆ ನೀನು ಬರಲಿಲ್ಲಾ ಮುಂದೆ ಅದರು ಸವಗೆ ಎಲ್ಲಿ ಸಾಲಾ ಹುಟ್ಟುವದಿಲ್ಲಾ ಕಾರಣಾ ಈಗ ನಿನಗೆ ನೋಟೀಸು ಕೊಡುವ ಭಾಗಬಿತ್ತು ಈ ನೋಟೀಸು ನಿನಗೆ ಮುಟ್ಟಿದ ಮೂರು ದಿವಸದಲ್ಲಿ ಬಂದು ನಾನು ಮಾಡಿದ ಸಾಲಾ ಪೇಡ ಮಾಡಿ ಶೀರಿ ಕುಬಸಾ ದಾಗೀನೆ ಇಟ್ಟು ನನ್ನ ಜೀವಕ್ಕೆ ಯೋಗ್ಯ ಜೀವನವನು ಕೊಟ್ಟು ಕರಕೊಂಡು ಹೋಗಿ ಜಯೋ ರೀತಿಯಿಂದಾ ಬಳಿತು ಮಾಡಬೇಕು ಈ ನೋಟೀಸಿಗೆ ನೀನು ಇನ್ನಕಾರ ಮಾಡಿದರೆ ನಿನ್ನ ಹುಜ ರ ಇಡದೆ ನಾನು ಒಬ್ಬ ಗಂಡನ್ನ ಉಡಕಿ ಮಾಡಿಕೊಂಡು ನಾನು ಮಾಡಿದ ಸಾಲಾ ಪೇಡು ಮಾಡುತ್ತೇನೆ ಇದೇ ಧಾರಮಿಕ ಅಂತಾ ನೀನು ತಿಳಿದೇಕು ಆ ವೇಳಕ ನಿನ್ನದು ನಿನ್ನ ವಾರ್ಸುದಾರಾಂದ್ದು ನನ್ನ ಮೇಲೆ ವ ಉಡಕಿ ಗಂಡನ ಮೇಲೆ ಯಾವ ತರದ್ದು ಹಕ್ಕು ಪಾರಸಾ ನಡಿಲಾರದು ಅಂತಾ ಕೊಟ್ಟ ನೋಟೀಸು ಈ ನೋಟೀಸಿನ ಖರ್ಚು ನಿನ್ನ ತಲಿ ಮೇಲೆ ಇರುತ್ತದೆ ತಿಳಿಯೋದು ತಾ. ೨೭-೯-೨೭ ಇಸ್ವಿ

ಈ ಹೆಬ್ಬಟ್ಟಿನ ಗುರ್ತು ಬೈಕುನ್ನವಿ ಕೋಂ ರಾಜೇಸಾಬ ಟಾಂಗೆವಾಲೆ ಸಾ. ಹುಬ್ಬಳ್ಳಿ ಸ್ಟೈಕಿ ಕವಲಪೇಟ ಈಕಿ ಕ್ಯೆದು ಅದ.

ನೋಟೀಸು

ರಾ. ನಿಂಗಪ್ಪಾ ತಂದಿ ಸಿದ್ದಪ್ಪಾ ಹಡಪದವರ ಸಾ|| ಉಗರಗೋಳ ತಾ. ಪರಸಗಡ ಇಕಗೆ

ಕೆಳಗೆ ಗುರ್ತು ಮಾಡಿದ ತಿಪ್ಪವ್ವಾ ಕೋಂ ನಿಂಗಪ್ಪಾ ಹಡಪದವರ ಸಾ. ಕಂಪ್ಲಿ ಕೊಪ್ಪ ತಾಲೂಕ ಹುಬ್ಬಳ್ಳಿ ನಾನು ಈ ನೋಟೀಸಿನಿಂದ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಗಂಡನಿದ್ದು ಲಗ್ನ ಆದ ನಂತರಾ ವಂದು ಸಾರೆ ನಿನ್ನ ಮನಿಗೆ ಬಂದು ಬಾಳ್ವೆ ಮಾಡಿಕೋತಾ ಇದ್ದೆ ನೀನು ದುರ್ವೆಸನಕ್ಕೆ ಬಿದ್ದು ಒಬ್ಬ ಸೂಳಿಯನ್ನ ಇಟ್ಟುಕೊಂಡು ನನಗೆ ಆಕೆಯ ಮಾತು ಕೇಳಿ ಹೊಡದೂ ಮಾಡಿ ಮನೆ ಬಿಟ್ಟು ಉಟ್ಟ ಶೀರಿ ಸೀಸಿ ಹೊರಗೆ ಹಾಕಿದಿ ನಂತರಾ ನಾನು ಬೇಡಿ ಮಾಡಿ ಉಪಜೀವನ ಆಗಿ ಕೋತಾ ಬಂದೆ ಹಾಗು ನನ್ನ ಕರಕೊಂಡು ಹೋಗಿ ಸುಲಕ್ಷಿತ ಬಾಳ್ವೆ ಮಾಡಬೇಕಂತಾ ಅನೇಕಾವರ್ತಿ ಹೇಳಿ ಕಳಿಸಿದೆ ಆದರೂ ನೀನು ನಿನ್ನ ರಂಡಿಯ ಮಾತು ಕೇಳಿ ದಾದು ಮಾಡವಲ್ಲಿ ಮತ್ತು ಈಗ ನನಗೆ ಸಾಲಗಾರರ ತಗಾದೆ ಬಹಳ ಆಗಿದೆ ಕಾರಣ ಈ ನೋಟೀಸು ಕೊಡು ಭಾಗಬಿತ್ತು ಇದು ಮುಟ್ಟಿದ ೭ ದಿವಸದೊಳಗಾಗಿ ಒಂದು ನನ್ನ ಸಾಲಾ ರೂಪಾಯಿ ೨೦೦ ಮತ್ತು ಬಟ್ಟೆ ಶೀರಿಸಿ ನಾನು ಒದಕೊಟ್ಟ ಕಾಗದಕ್ಕೆ ಹರಿಸಿ ನನ್ನ ಜೀವಕ್ಕೆ ಉಪಾಯ ಮಾಡುವದಿಲ್ಲಾ ಸುರಕ್ಷಿತ ಪ್ರಪಂಚ ಮಾಡತೇನೆ ರಂಡೀಗೆ ಬಿಡತೇನೆ ಅಂಬುವ ಬಗ್ಗೆ ಜಾಮೀನು ಕೊಟ್ಟು ನನ್ನ ಕರಕೊಂಡು ಹೋಗಿ ಸುರಕ್ಷಿತ ಪ್ರಪಂಚ ಮಾಡಬೇಕು ಜಾ ಇದಕ್ಕೆ ತಪ್ಪಿದರೆ ನಾನು ನಿನ್ನ ಮಾರ್ಗ ನೋಡದೆ ಬೇರೆ ಕಡಿಗೆ ನನ್ನ ಮನಸಿಗೆ ಬಂದವರನ್ನು ಉಡಕಿ ಮಾಡಿಕೊಂಡು ನನ್ನ ಸಾಲದ ವ್ಯವಸ್ಥೆ ಮಾಡಿಕೋತೇನೆ ಮುಂದೆ ನನ್ನ ಮೇಲೆ ಮತ್ತು ನನ್ನ ಉಡ್ಕಿ ಇದವನ ಮೇಲೆ ಸಹಾ ನಿನ್ನದು ಯಾವ ಪ್ರಕಾರದ್ದು ಹಕ್ಕ ಸಂಬಂಧ ಏನೂ ಉಳಿಯಲಿಕ್ಕಿಲ್ಲಾ ಇದೇ ನೋಟೀಸಿ ಅಂತಾ ತಿಳಿಯಬೇಕು ಈ ನೋಟೀಸಿನ ಖರ್ಚು ನಿನ್ನ ಮೇಲೆ ಆದೆ ತಿಳಿಯೋದು ತಾ. ೨೬ನೇ ಸಪ್ಟಂಬರ ೨೭

ಈ ಎಡಗೈ ಹೆಬ್ಬಟ್ಟಿನ ಗುರ್ತು ತಿಪ್ಪವ್ವಾ ಕೋಂ ನಿಂಗಪ್ಪಾ ಹಡಪದವರ ಸಾ. ಕಂಪ್ಲಿಕೊಪ್ಪ ತಾ. ಹುಬ್ಬಳ್ಳಿ ಈಕೀ ಕ್ಯೆದು ಅದೆ

ದಿ ಧಾರವಾಡ ಅರ್ಬನ ಕೋ. ಅಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ ಅಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇಂದಿಗೆಯು ಅರು ಲಕ್ಷದ ಮೇಲಿಂಟು. ಚೆಕ ಬುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಎ ಒಲ್ಪದಾವು. ಕಾಯೀಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡಿ ದೊರೆಯುವವು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಪಂಡ್ಲ ಪರಾವ ಬಿ. ಜಕಾತಿ

ಮ್ಯಾನೇಜಿಂಗ ಡಾಯರೆಕ್ಟರ

ವಿಜಯ ಪುಸ್ತಕಾಲಯ.

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ

ಧಾರವಾಡ

ಈ ಪತ್ರವನ್ನು ಲಕ್ಷ್ಮೇಶ್ವರ ಭಾಗವತ ಯರ ಹೊಸಂಗಡಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮| ಧಾರವಾಡ ಬುಧವಾರ ತಾರೀಖು ೨೮ ನೇ ಸಪ್ಟಂಬರ ೧೯೨೭ | ಸಂಚಿಕೆ ೨೦೯

ಹಂಗಾಮು ಮುಗಿಯ ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಜನರಿಗೆ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿ ಪಡೆದವು. ಇವುಗಳ ವೈಶಿಷ್ಟ್ಯವೇನೆಂದರೆ ಉಕ್ಕಿನ ಕಂಬಿಗಳ ಬಾಲ್ ಬೇರಿಂಗುಗಳು ಇರುವದರಿಂದ ಯಂತ್ರವು ಹಗುರವಾಗಿ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಗಿಂತಲೂ ಇವುಗಳಲ್ಲಿ ಕಾಳು ಒಡೆಯುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದವು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ಶಿಕ್ಷಣ ಮಂಡಳಿಯಿಂದ ಮಂಜೂರಾದ

ಕನ್ನಡ ನಿಬಂಧರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟದ್ದಲ್ಲದೆ ರಿಪೋರ್ಟ ಬರೆಯುವ ರೀತಿ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ:— ೧ ರಾ ರಾ ಬಿ ಜಿ ದಿವೇಕರ,
ಮಾಳಮಡ್ಡಿ, ಧಾರವಾಡ

೨ ರಾ. ರಾ. ಎ. ಆರ್. ಶಿರಹಟ್ಟಿ
ವರ್ತಕರು ಬುಕ್ ಡಿಪೋ ಹುಬ್ಬಳ್ಳಿ

ಜಾಹೀರ ವಿನಂತಿ

—೦—

ಮಹಾಜನರಿಗೂ ಇದರ ಮೂಲಕ ವಿನಂತಿ ಮಾಡಿಕೊಳ್ಳುವದೇನೆಂದರೆ:—

ನಾನು ಮೃತ ನನ್ನ ಗಂಡ ಈರಪ್ಪಾ ಗಡಿಯಪ್ಪಾ ಸಕ್ಕರೆಹಟ್ಟಿ ಇವರ ಹೇಳಿಕೆ ಪ್ರಕಾರ ಅವರ ಮರಣೋತ್ತರ ನಡೆದ ದಾವೆಯ ಶೆರಪ್ಪಾ ದರ್ಗ್ಗಾ ಬಸಪ್ಪ ದನದಮನಿ, ಎತ್ತಿನಗುಡ್ಡ ಇವರಿಗ ಬರುವ ಮಗನ ದತ್ತು ಬಗ್ಗೆ ತಕರಾರು ನನಗ ದತ್ತಕ ತೊಂದರೆ ಕೊಡುವದಕ್ಕೆ ಅವರು. ಕೋರ್ಟ ಪ್ರಕಾರ ಇವತ್ತಿನ ದಿವಸ ಮುಂಜಾನೆ ೭ ಘಂಟೆಗೆ ನನ್ನ ಧರ್ಮ ಪದ್ಧತಿ ಪ್ರಕಾರ ನನ್ನ ಮಗನನ್ನು ನಾನು ದತ್ತಕ ತೆಗೆದುಕೊಂಡಿರುತ್ತೇನೆ ಮತ್ತು ಮೃತ ನನ್ನ ಗಂಡನ ಸ್ಥಿರಚರ ಆಸ್ತಿ ನನ್ನ ಒಲ್ಲವಾಯಿ ದತ್ತಕ ಮಗನ ತರ್ಫೆ ವಹಿವಾಟು ಮಾಡಲಿಕ್ಕೆ ಅವನ ಜನಕ ತಂದೆ ನಾಗಪ್ಪನನ್ನೇ ಕೊಟ್ಟಿರುತ್ತೇನೆ. ಕಾರಣ ಇನ್ನು ಮುಂದೆ ಮೃತ ನನ್ನ ಗಂಡನ ಸಂಗಡ ವ್ಯವಹಾರ ಇದ್ದವರು ವ ಒಲ್ಲವಾಯಿ ಮಗನ ಕೂಡ ವ್ಯವಹಾರ ಮಾಡಲಿಚ್ಛಿಸುವವರು ಒಲ್ಲವಾಯಿ ಮಗನ ತರ್ಫೆ ಅವನ ಜನಕ ತಂದೆಯ ಕೂಡಾನೇ ಮಾಡಬೇಕಾಗಿ ವಿನಂತಿ ಅದ.

ಧಾರವಾಡ ಪೈಕಿ ಮಾಳಾಪುರ,

ತಾ. ೨೬-೯-೧೯೨೭ ಇಸ್ವಿ.

ತಮ್ಮ,

ಈ ಬರಹಕ್ಕೆ ಬೆಟ್ಟಬೆಟ್ಟಿನ ಗುರುತ: ನಾಗವ್ವ ಕೋಂ ಈರಪ್ಪಾ ಸಕ್ಕರೆಹಟ್ಟಿ ಇವರ ಕೈದು ಅದ.

—

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ „	೬—೦—೦ ರೂ
೪ „	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕಾಗದ ಬರೆಯಬೇಕು.

ಮ್ಯಾನೇಜರ, ವಿಜಯ, ಧಾರವಾಡ.

ವಿಜಯ.

ಧಾರವಾಡ ತಾ-೨೮-೯-೨೭ ನೇ ಇಸ್ವಿ

ಜಹಾಗೀರದಾರ ಮನಾಲೆದಾರರು ವಿಧವೆಯರೋ? ವೀರರೋ?

---(೦)---

ಹಿಂದುಸ್ಥಾನದಲ್ಲಿಯ ಈಗಿನ ಜಹಾಗೀರದಾರರು ಸಂಪಾದಿಸಿದ ಜಹಾಗೀರಿಯನ್ನು ವಿಧವೆಯಂತಾಗಿ, ಸಂಪಾದಿಸಲಿಲ್ಲ. ಶೂರ- ವೀರರಾಗಿ ರಣಮಂಡಲದಲ್ಲಿ ಸೂರ್ಯನಾರಾಯಣನಿಗೆ ರಕ್ತದ ಅರ್ಘ್ಯ ಬಿಟ್ಟು, ಸಂಪಾದಿಸಿದ್ದಾರೆ. ಆ ಇನಾಮದಾರ, ಜಹಾಗೀರದಾರರ ಅವಸ್ಥೆಯು ಎಷ್ಟು ಹೀನ ದೀನವಾಗಿರುತ್ತದೆಂಬುದನ್ನು ನೋಡಿದರೆ ಇವರು ಮನೆಯಲ್ಲಿ ಪ್ರೋಟಿಗಿದಾರರಂತೆ [illegible] ಕಾಲಕ್ಷೇಪ ಮಾಡಿಕೊಂಡಿರಬೇಕಾಗುತ್ತದೆ. ಸರಕಾರದವರು ಇವರನ್ನು ರಾಜದರಬಾರದ ಯಾವ ಕೆಲಸದಲ್ಲಿಯೂ ಸೇರಿಸಿಕೊಳ್ಳುವದಿಲ್ಲ. ಲೋಕಪಕ್ಷದವರಿಂದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂದರೆ- ಸರಕಾರವು ತಮ್ಮ ಕೆಲಸಗಾರರಿಗೆ [illegible] ಹೆಚ್ಚಾಗಿ ಇವರ [illegible] ಬಿಟ್ಟು ಕೊಡುತ್ತದೆ. ವಿಲಾಯತಿಯಲ್ಲಿರುವ ಪ್ರತ್ಯಕ್ಷ ರಾಜ್ಯ, ಅರ್ಲ ಮೊದಲಾದ ಪತನದಾರರು ನಡೆದ ಸಂಧಿಸುತ್ತಲೇ [illegible] ರಾಜ್ಯಕಕ್ಷೆಯ ಹಾಗು [illegible] ಕರ್ತವ್ಯಕರ್ಮವನ್ನು ಅಂಗೀಕರಿಸುತ್ತಾರೆ. ಆದರೆ ಹಿಂದುಸ್ಥಾನದ ಜಹಾಗೀರದಾರರು ಇವಾವ ಹಕ್ಕುಗಳ ಉಪಯೋಗ ಮಾಡುವ ರೀತಿಯು ತಿಳುಕದೋರ್ವನು ಕನಸಿನಲ್ಲಿ ಸಿರಿ ಕಂಡಂತಾಗುತ್ತಾಗುತ್ತದೆ. ಸರಕಾರದವರು ವರ್ಷಕ್ಕೊಮ್ಮೆ ದರ್ಬಾರ ಕೂಡಿಸಿ, ರಾಜನಿಷ್ಠೆಯ ತಾಳೀಕ್ಷ್ಮ ಮಾನ್ಪಪತ್ರ, ಉಡುಗೆ ಕೊಡುವರು. ತಮಗೆ ಯಾವಾಗೊಂದರು ದ್ರವ್ಯ ಅಥವಾ ಜನಸಹಾಯ ಬೇಕಾದರೆ- ಅವನ್ನು ಇವರಿಂದ ಯಾಚಿಸುವರು. ಮಹಾಯುದ್ಧದಲ್ಲಿ ಜನಸಹಾಯ, ಧನಸಹಾಯ ಬೇಡಿಕೊಂಡರು. ಈಗ ಹಿಂದೂ ಮುಸಲಮಾನರ ದಂಗೆಗಳಲ್ಲಿ ತಮಗೆ ನೆರವಾಗಬೇಕೆಂದು ಅಂದುಕೊಂಡಿದ್ದಾರೆ.

[illegible]ಗೆ ಪ್ರಾಪ್ತವಾದ ಕೀಳತನವೇ [illegible], ಜಹಾಗೀರದಾರರು ಅತ್ಯಂತವಾ[illegible]ದ್ದಾರೆ. ತಮ್ಮ ಸ್ಥಿತಿಯನ್ನು ಸುಧಾರಿಸುವ ಕುರಿತು ಎಂಥೆಂಥ ಉಪಾಯಗಳನ್ನು ಕೈಕೊಳ್ಳಬೇಕೆಂದು ಆಲೋಚಿಸುತ್ತಿದ್ದಾರೆ. ಮುಂದೆ ಬರುವ ರಾಯಲ ಕಮಿಶನದ ಮುಂದೆ ದೂರು ಹೇಳಿಕೊಳ್ಳಬೇಕೆಂದಿದ್ದಾರೆ. ತಮ್ಮ ಅವಸ್ಥೆಯು ಸಂತಾನವಿಲ್ಲದಂಥ ಗಂಡಸತ್ತ ವಿಧವೆಯಂದಾಗಿರುತ್ತದೆಂದು ಈಚಲಕರಂಜಿಯಂಥ ದೊಡ್ಡ ಸಂಸ್ಥಾನದ ಅಧಿಪತಿಗಳು ಸರಕಾರದ ದಾಕ್ಷಿಣ್ಯವಿಡದೆ ಮತ್ತು ತಮ್ಮ ಮನಘಂತಿಕೆಯ ಅಭಿಮಾನ ಹಿಡಿಯದೆ ಹೇಳುತ್ತಾರೆ. ತಮ್ಮ ಸ್ಥಿತಿಯನ್ನು ಹೇಗೆ ಸುಧಾರಿಸಿಕೊಳ್ಳಬೇಕೆಂದು ಇವರು ಕಳೆದ ಕೆಲವು ದಿನ [illegible] ಪುಣೆಯಲ್ಲಿ ಜಾಹೀರ ಸಭೆ ಕೂಡಿಸಿದ್ದರು. ಜಗತ್ತಿನ [illegible] ಜನರ ಮುಂದೆ ಈ ಉದ್ಗಾರ ತೆಗೆದು [illegible] ಹಾಕಿದ್ದಾರೆ. [illegible] ಇವರು [illegible] ರವರಿಂದ [illegible] ಆವಸ್ಥೆ ಎಷ್ಟು [illegible] ಯೆಂಬುದನ್ನು ಸಾರಿ [illegible] ಸ್ಥಿತಿಯನ್ನು [illegible] ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆಯುವ ತನಕ ಆಳವಸರ ಮಳೆಯುತ್ತದೆ.

ವಿವಿಧ ವಿಷಯಗಳು

ಶೃಂಗೇರಿಯ ಶ್ರೀ. ಜಗದ್ಗುರು ಶಂಕರಾಚಾರ್ಯರವರು ವೈಶ್ಯರಿಗೆ ದಯಪಾಲಿಸಿದರು. [illegible] ರಾಜಮಹೇಂದ್ರಿ ಮತ್ತು [illegible] ಯಿಂದ [illegible] ಶ್ರೀಗಳವರ ಆಗಮನ ಸೂಚಕವಾಗಿ ತೋಳಿನ ೨೧ ಗುಂಡುಗಳು ಹಾರಿಸಲ್ಪಟ್ಟವು. ತ್ರಿಮಸ್ಥರು ಶ್ರೀಗಳವರನ್ನು ಆದರಿಸಿದರು. ಆದರೆ ವೈಶ್ಯರು ಮಾತ್ರ ಇದರಲ್ಲಿ ಭಾಗ ತಕ್ಕೊಳ್ಳಲಿಲ್ಲ. ಏಕೆಂದರೆ- ವೈಶ್ಯರಿಗೆ ವೇದಾಧಿಕಾರವಿಲ್ಲೆಂದು ಈ ಮಠದ ಆಜ್ಞೆ ಹೊರಟಿತ್ತದೆ.

ಬಾಗಲಕೋಟೆಯ ಪ್ರಸಿದ್ಧ ಗುಜ್ಜರ ಸಾಹುಕಾರರಾದ ಬಾಲಕೋಟೆಚರೆ [illegible]ರು ಪ್ರತಿವರ್ಷ ಶ್ರೀಗಜಾನನೋತ್ಸವವನ್ನು ಸಂಭ್ರಮದಿಂದ ರಘುವೆತ್ತ ಮಾಡಿ ಮಾಡುವರು. ಇದರಲ್ಲಿ ರಾಜಕೀಯ ಅಥವಾ ರಾಷ್ಟ್ರೀಯ ವಾಸನೆಯೂ ಇರುವದಿಲ್ಲ. ಗದಗ ಬೆಟಗೇರಿಯ ಡಂಬಳದ ರಾಜೇವಪ್ಪನವರು ಮಾಡಿಸುತ್ತಿದ್ದಂಥ ಉತ್ಸವವು ಗಣಪತಿಯ ವಿಸರ್ಜನದ ದಿವಸ ಪುರಾತನ ಸಾಂಪ್ರದಾಯವನ್ನು ಅಂದರೆ ಹಿಂದೂ ಜನರ ಹಕ್ಕನ್ನು ದುರ್ಲಕ್ಷಿಸಿ, ಮಸೀದೆಯ ಮುಂದೆ ವಾದ್ಯ ನಿಲ್ಲಿಸುವ ಅತಿರೇಕ ಮಾಡಿದರು. ಭಜನಿ ಮಂಡಳಿಗಳವರು ತಾಳ ಮೃದಂಗವನ್ನು ಸಹ ಬಂದು ಮಾಡಬೇಕೆಂದರು. ಇದಕ್ಕೆ ಅವರು ಒಪ್ಪದಾಗಲು- ಇವರನ್ನು ಮನೆಗೆ ಕಳಿಸಿ, ಮಸಿದೆಯ ಮುಂದೆ ವಾದ್ಯ ನಿಲ್ಲಿಸಿ, ಮಂಗಳಮೂರ್ತಿಯನ್ನು ಅಮಂಗಲ ಮಾಡಿದರು. ತಮಗೆ ದೊರೆತ ಒಳ್ಳೇತನ [illegible] ಹೀಗೆ ಮಾಡಿದರೆಂದು ಲೋಕಾಪವಾದ ಹೊತ್ತಿರುವರು.

ರಶಿಯಾ ದೇಶದಲ್ಲಿ ಬೋಲ್ಶೆವಿಕ [illegible] ಸ್ಥಾಪನೆಯಾಗಿ ಹತ್ತು ವರ್ಷಗಳಾದವು. [illegible] ಈ ಉತ್ಸವವನ್ನು ಬಹು ದೊಡ್ಡ ಪ್ರಮಾಣದ [illegible] ಸಂಭ್ರಮದಿಂದ ಮಾಡಬೇಕೆಂದಿದ್ದಾರೆ. [illegible]ಲ್ಲಿ [illegible] ಮಿತಕ್ಕೆ [illegible] ಗೆ ಆಮಂತ್ರಣ ಕಳಿಸಿದ್ದಾರೆ. [illegible] ಮುಂಬಯಿ [illegible] ಶ್ರೀ ರಾಮಾನಂದ ಚತರ್ಜಿ [illegible] ಸದ ಶ್ರೀ ಸಿಂಗರವೇಲು ಮೊದಲಾದವರಿಗೆ ಆಮಂತ್ರಣ ಪತ್ರಿಕೆ ಕಳಿಸಿದ್ದಾರೆ. ಶ್ರೀ ಸಿಂಗರವೇಲೂಸವರು ಅವರನ್ನು ಮನ್ನಿಸಿದ [illegible] ಮಾಡಿಕೊಂಡಿದ್ದಾರೆ. [illegible] ಹೋಗಲೇಬೇಕೆಂಬುದಾಗಿ ಹೇಳಿಕೊಂಡಿದ್ದಾರೆ. [illegible] ಸರಕಾರದ ಆಮಂತ್ರಣವನ್ನು ಮನ್ನಿಸಿ, ಪ್ರಯಾಣ ಬೆಳೆಸುವರು. ಆಗರೆ ಇದಕ್ಕೆ ಹಿಂದುಸ್ಥಾನ ಸರಕಾರದ ಪಾಸಪೋರ್ಟ ಬೇಕು. ಸರಕಾರವು ಸಿಂಗಾರಾಯರನಂತೆ [illegible] ಬರೆದಿದ್ದರೆ- ಇವರು ಪ್ರಯಾಣ ಬೆಳೆಸುವರು.

ಲಂಕೆಯು ಲಂಕೆಯು ಜನರೇ ಎಂಬ ಮಹತ್ವ ಸಿಲೋನದ ಜನರ ತಲೆಯಲ್ಲಿ ಸೇರಿದೆ. ಮಹಾತ್ಮಾಜಿ ಅಲ್ಲಿಗೆ ಹೋದ ಗತಿಯಲ್ಲಿ ಖಾದಿಗಾಗಿ [illegible] ಸಾವಿರ ರೂಪಾಯಿಗಳನ್ನು ಕಾಣಿಕೆಯಾಗಿ ಕೊಡಬೇಕೆಂದು ಅಲ್ಲಿ ವಾಸವಾಗಿರುವ ಹಿಂದೂ ಜನರು ವಿಚಾರ ಮಾಡಿದ್ದಾರೆ. ಲಂಕೆಯ ದುಡ್ಡು ಬೇರೆಗೆ ಹೋಗಬಾರದು. ಲಂಕೆಯ ರಾಜಕಾರಣ ಬೇರೆ, ಹಿಂದುಸ್ಥಾನದ ರಾಜಕಾರಣ ಬೇರೆ, ಒಂದು ವೇಳೆ ದ್ರವ್ಯ ಕೊಟ್ಟರೂ ಅದರ ವಿನಿಯೋಗವು ಲಂಕಾದ್ವೀಪದಲ್ಲಿಯೇ ಆಗಬೇಕೆಂದು ಮೂಲ ನಿವಾಸಿಗಳನ್ನಲಾರಂಭಿಸಿದ್ದಾರೆ. ಇವರು ಈ ಧನವನ್ನು ಖಾದಿಯ ಪ್ರಸಾರಕ್ಕೇ ಉಪಯೋಗಿಸಿದರೆ- ಮಹಾತ್ಮರು ಆನಂದದಿಂದ ಅದನ್ನು ಅಲ್ಲಿಯೇ ಬಿಟ್ಟು ಬರುವರು. ಇದಕ್ಕೇಕೆ ಇಷ್ಟು ಗಲಭೆ!!

ಶ್ರೀ ಜಗದ್ಗುರು ಕುರ್ತಕೋಟಿಯ ಮಹಾಭಾಗವತ ಸ್ವಾಮಿಗಳು ನಿಜಾಮ ರಾಜ್ಯದಲ್ಲಿ ಶ್ರೀಗೊಂಡ,

ಚಾಮುಂಡೇಶ ಮುಂತಾದ ಪಟ್ಟಣಗಳಿಗೆ ದರ್ಶನಲಾಭ ಕೊಟ್ಟರು. ಇವರು ಅಸ್ತಿ ಎಂಬ ಗ್ರಾಮದ ಹತ್ತಿರಿರುವ ಹಳ್ಳವನ್ನು ದಾಟುತ್ತಿದ್ದಾಗ, ಮೋಟಾರವು ಹುದುಲಿನಲ್ಲಿ ಸಿಕ್ಕಿತು. ಇಷ್ಟರಲ್ಲಿ ಮೇಲಿನಿಂದ ಹಳ್ಳ ಬಂತು. ಮೋಟಾರು ೨೦ ಮಾರು ಕಳವಿಸ ಗುಂಟ ಹೋಯಿತು. ಶ್ರೀಗಳವರು ಪ್ರಸ್ಥಳ ಪ್ರಯಾಸದಿಂದ ಮೋಟಾರದ ಹೊರಗೆ ಬಂದು ಕುತ್ತು ದಾಟಿದರು. ಶ್ರೀಗಳವರಿಗೆ ವ್ಯಾಘ್ರವು ವಿಶೇಷವಾಗಿ ರುತ್ತದೆ. ಶ್ರೀಗಳವರು ಜೀವದ ಮೇಲೆ ಬಂದ ಕುತ್ತು ದಾಟಿದ್ದು ಸಂತೋಷದ ಸಂಗತಿಯು.

ಕುರುಂದವಾಡದ ಹಿರಿಯ ಮನೆತನದ ಯುವರಾಜರಾದ ಸ್ವ. ಶ್ರೀಮಂತ ಮಾಧವರಾಯರು ಎರಡು ವರ್ಷ ಕೆಳಗಿನ ವ್ಯಾಧಿಗ್ರಸ್ತರಾಗಿದ್ದರು. ಅವರ ಪತ್ನಿಯವರೇ ರಾಜ್ಯ ಕಾರಭಾರ ನೋಡಿದರು. ಯುವರಾಜರಿಗೆ ಒಬ್ಬ ಚಿರಂಜೀವನಿದ್ದಾನೆ ಏಳೇ ವರ್ಷದ ಬಾಲಕನು. ಈತನು ಪ್ರಬುದ್ಧನಾಗುವ ತನಕ, ರಾಣೀಸಾಹೇಬರನ್ನು ರೀಜಂಟ ನೇಮಿಸಿ, ರಾಜಪುತ್ರನ ಶಿಕ್ಷಣ ಕಾರ್ಯವನ್ನು ಯೋಗ್ಯ ಜನರ ಕೈಯಲ್ಲಿ ಕೊಟ್ಟು, ರಾಣೀಸಾಹೇಬರಿಗೆ ಯೋಗ್ಯವಾದ ಜಹಗೀರನ್ನಾದರೂ ಕೊಡಬೇಕೆಂದು ಮುಂಬಯಿ ಸರಕಾರಕ್ಕೆ ಪ್ರಾರ್ಥನೆಗಳಾಗುತ್ತವೆ. ಸರಕಾರದವರು ಜಮಖಂಡಿಯ ರಾಣಿಸಾಹೇಬರಿಗೆ ರೀಜಂಟ ಅಧಿಕಾರ ಕೊಟ್ಟಿದ್ದರು. ಅದೇ ಪ್ರಕಾರ ಇಲ್ಲಿಯೂ ಮಾಡಲಿಕ್ಕೆ ಯಾವ ಪ್ರತ್ಯವಾಯುವಿರುವದಿಲ್ಲ.

ಭೋಪಾಳದ ಬೇಗಮ ಸಾಹೇಬರು ರಾಜ್ಯಪದತ್ಯಾಗ ಮಾಡಿ, ಸ್ವಸ್ಥಚಿತ್ತದಿಂದ ಕಾಲಕ್ಷೇಪ ಮಾಡುತ್ತಿದ್ದಾರೆ. ಇವರ ಸ್ವಂತ ಆಸ್ತಿಯು ದೊಡ್ಡದು. ಕೋಟಿಯಾಗುತ್ತದೆ. ಇದೆಲ್ಲವನ್ನು ಇವರು [illegible] ಸ್ಲಾಮ ಧರ್ಮ ಪ್ರಸಾರಕ್ಕಾಗಿ ವಿನಿಯೋಗಿಸುವರೆಂತೆ ನಿಶ್ಚಯಿಸಿದ್ದಾರೆಂದು ಮುಂಬಯಿ ಕ್ರಾನಿಕಲ ಪತ್ರ ಮಾಡುತ್ತಿದೆ. ನಿಜವಿದ್ದರೆ ಆಶ್ಚರ್ಯವೇನು.

ಬೆಳಗಾವ, ಅಹಮದಾಬಾದಿನವರು ಮುಸಲ್ಮಾನರಿಗೆ ಸಾಮಾಜಿಕ ಬಹಿಷ್ಕಾರ ಹಾಕುವ ಠರಾವು ಮಾಡಿದ್ದಾರಷ್ಟೇ; ಪುಣೆಯವರೂ ಈ ತೀವ್ರ ಮತ್ತು ತೀಕ್ಷ್ಣ ಉಪಾಯದಲ್ಲಿ ಮುಂದೊತ್ತಿದ್ದಾರೆ. ಇವರು ಸಾರ್ವಜನಿಕ ಸಭೆ ಕೂಡಿ—

೧ ಹಿಂದೂ ಮುಸಲಮಾನ ಕಲಹವನ್ನು ಲಕ್ಷಿಸಿ ಕ್ಕೆ ತಂದು ಹಿಂದೂ ಜನರು ತಮ್ಮ ಸ್ಥಾನದ ಜಂಗಮ ಆಸ್ತಿ ಮತ್ತು ದೇವಾಲಯಗಳ ಸಂರಕ್ಷಣೆ ತಾವೇ ಮಾಡಿಕೊಳ್ಳಬೇಕು.

೨ ಮುಸಲಮಾನರು ಮಾಡುತ್ತಿರುವ ವ್ಯಾಪಾರ ಹಕ್ಕವನ್ನು ಲಕ್ಷಿಸಿ, ಅವರ ಕೂಡ ಯಾವ ವ್ಯವಹಾರ ಮಾಡಬಾರದು. ಅವರಿಗೆ ಕಾಣಿಕೆ ಕೊಡಬಾರದು. ಅವರಿಗೆ ಕೆಲಸಕೊಡಬಾರದು. ಮತ್ತು ಜೀವನಕ್ಕೆ ಅವಶ್ಯವೆನಿಸುವ ಯಾವ ಪದಾರ್ಥವನ್ನು ಕೊಡಬಾರದು.

ಎಂಬ ಠರಾವುಗಳನ್ನು ಮಾಡಿದ್ದಾರೆ.

ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಯವರಾದ ಲಾರ್ಡ ಬರ್ಕನಹೆಡ್ ಸಾಹೇಬರಿಗೆ ಗುಜರಾಥದ ನೆರೆಹಾವಳಿಯಿಂದ ಜನರು ಅಪಾರವಾದ ಕಷ್ಟ ಭೋಗಿಸುತ್ತಿರುವ ಊಹೆಯು ಆಗಿಗಾಯಿತು. ಹಿಂದುಸ್ಥಾನದಲ್ಲಿ ಹತ್ತೊಂಬತ್ತು ಲಕ್ಷದ ವರ್ಗಣಿ ಕೂಡಿತು. ಬಾಲಕನು ಎರಡು ಸಾವಿರ ರೂಪಾಯಿ ಕೊಟ್ಟರು. ಅನಂತರ ಇವರಲ್ಲಿಯೂ ದಾನಬುದ್ಧಿಯು ಜಾಗೃತವಾಗಿ, ಇವರು ೧೫೦ ರೂಪಾಯಿ ಅಂದರೆ ಹತ್ತು ಪವನಗಳನ್ನು ಕೊಟ್ಟಂತೆ ಲಂಡನದಿಂದ ತಾರು ಬಂದಿದೆ. ಸಾಹೇಬರ ಪ್ರಜಾವಾತ್ಸಲ್ಯದ ಕಳಕಳಿಯು ಎಷ್ಟಿರುತ್ತದೆಂಬುದರ ಪರಿಚಯ ಸರಿ. ಸರಿ ಒಬ್ಬ ಹಿಂದೂ ದೊರೆತ್ತಿ ಒಂದರೆ ಒಂದೇ ಊರಾದರು ಇವರ [illegible] ಕಂತ ಪಾಲಿಯು ಬರಿಯ [illegible] ಡುತ್ತದೆ.

ವಿವಿಧ ವರ್ತಮಾನ

ಬೈಲಹೊಂಗಲದ ಪ್ರಸಿದ್ಧ ಸಾಹುಕಾರರೂ, ಬೆಂಚ ಮ್ಯಾಜಿಸ್ಟ್ರೇಟರೂ, ಡಿಸ್ಟ್ರಿಕ್ಟ ಲೋಕಲಬೋರ್ಡಿನ ಮೆಂಬರರೂ ಆಗಿದ್ದ ಶ್ರೀ. ಬಸನ್ನೆಪ್ಪ ಶೆಟ್ಟರ ಗುತ್ತ ಇವರು ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಹುಬ್ಬಳ್ಳಿಯಲ್ಲಿ ಕ್ರಿಶ್ಚನ್ನ ಮತದಿಂದ ಹಿಂದೂ ಧರ್ಮದಲ್ಲಿ ಸೇರಿದಂಥ ಸಾಂಸ್ಥನನ್ನು ಜನಪದವಾಸ್ಪೂರದ ಶ್ರೀ ಪಡೆಯರವರು ಶುದ್ಧ ಮಾಡಿದರೆಂದು ಪ್ರಸಿದ್ಧವಾಗಿರುತ್ತದೆ.

ಗುಜರಾಥ ರಿಲೀಫ ಫಂಡಿನ ರಕಮು ಹನ್ನೆರಡು ಲಕ್ಷವನ್ನು ಮುಟ್ಟಿದೆ.

ಗುಜರಾಥದಲ್ಲಿರುವ ಅಹಮದಾಬಾದಿನಲ್ಲಿಯ ಹಿಂದೂ ಜನರು ಮುಸಲಮಾನರಿಗೆ ಹಾಕಿದ ಬಹಿಷ್ಕಾರವು ತೀವ್ರವಾಗಿರುತ್ತದೆ. ಮುಸಲಮಾನರಿಗೆ ಎಳೆಯುಡಿಕೆ ಕೂಡ ದೊರೆಯುವದಿಲ್ಲ. ಮೌ. ಗುಗ್ಗರಿಯವರು ಈ ಜಗಳವನ್ನು ಶಾಂತ ಮಾಡಬೇಕೆಂದು ಪ್ರಯತ್ನಿಸಿದರು. ಆದರೆ ಯಶ ಬರಲಿಲ್ಲ.

ಮಹಾನವಮಿಯ ಉತ್ಸವವು.

—o—

ಧಾರವಾಡದ ಶ್ರೀ. ಶಂಕರ ಮಹಾರಾಜರವರ ಪರವಾಗಿ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಸೋಮವಾರ ತಾ. ೨೬ರಿಂದ ಪ್ರಾರಂಭವಾಗಿರುತ್ತದೆ. ಸೋಮವಾರ ದಿವಸ ನಡೆದ ಸಂಗತಿಗಳು ಏನೆಂದರೆ, ಮೊದಲು ಕನ್ನಡಿಗರಿಗೆ ಪ್ರಿಯವಂತೆ ಬಾಲಕರ ಮೇಳಗಳ ಪದಗಳಾದ ನಂತರ ಶ್ರೀ. ದೇಶಪಾಂಡೆಯವರ ಇವರು ಬಂದು ಸ್ತೋತ್ರವನ್ನು ಮಾಡಿದ ನಂತರ ಶ್ರೀ. ಜೋಶಿಯವರ ನವರಾತ್ರಿಯು ಉತ್ಸವವನ್ನು ಹೊಸದಾಗಿ ಮಾಡಲು ಪ್ರಾರಂಭವಾಗಿರುತ್ತದೆಂಬ ತಿಳುವಳಿಕೆಯಿಂದ ಬಂದ ಕೆಲವರ ಇಷ್ಟರಿಗೆ ಸಮರ್ಪಕ ಉತ್ತರವನ್ನಿತ್ತು ಉತ್ಸವದ ಮುಖ್ಯ ಮಹಾರಾಜರಿಂದ ಪರಂಪರೆಯನ್ನು, ಅದರ ಪಾವಿತ್ರ್ಯ ಹಾಗು ಘನತೆಯನ್ನು ಸ್ಪಷ್ಟೀಕರಿಸಿ ಧಾರವಾಡದಲ್ಲಿ ಈ ಉತ್ಸವವನ್ನು ಪ್ರಾರಂಭಿಸಿದ ಉದ್ದೇಶವನ್ನು ಹೇಳಿ ಯಾವ ಸಂಗತಿಯನ್ನು ಈ ಉತ್ಸವವು ಅಭಿವ್ಯಕ್ತಪಡಿಸುವದರಿಂದ ಎಲ್ಲರೂ ಉತ್ಸವವನ್ನು ನಡೆಸಲು ಸಹಾಯ ಮಾಡಬೇಕೆಂದು ಹೇಳಿದರು. ಆ ಮೇಲೆ ಶ್ರೀ ಮುದವೀಡಕರರು ಪರಮಹಂಸ ಶ್ರೀ ಪ್ರಸನ್ನ ರಾಮಚಂದ್ರ ಗುರು ಕರ್ಜಗಿಯವರ ಗೋಪಾಲಾಚಾರ್ಯರ ಪದಗಳನ್ನು ವ್ಯಾಖ್ಯಾನ ಮತ್ತು ಪ್ರತಿಭೆಯನ್ನು ಮನವರಿಕೆಯಾಗುವಂತೆ ಅವುಗಳನ್ನು ಅಂದು ಅವುಗಳ ಅರ್ಥ ಮಾಡಿ ತಿಳಿಸಿದರು. ಕರ್ನಾಟಕ ಏಕೀಕರಣದ ಸಮಯದ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡಬೇಕೆಂದು ಶ್ರೀ. ದಿವಾಕರರು ಹೇಳಿದರು. ಆರತಿಯಾದ ನಂತರ ಸಭೆಯು ಮುಗಿಯಿತು.

[illegible]

[illegible]

—o—

[illegible]

[illegible]

[illegible]

[illegible]

ವಿವಿಧ ವಿಷಯಗಳು.

—೦—

ಬೆಂಗಳೂರ ಮ್ಯುನಿಸಿಪಾಲಿಟಿಯಲ್ಲಿ ರಾಜೇನಾಮೆ ಕೊಟ್ಟಂಥ ಹದಿನಾಲ್ಕು ಜನ ಮೆಂಬರರು ಚುನಾವಣೆಯಲ್ಲಿ ಪುನಃ ಉಮೇದವಾರರಾಗಿ ನಿಲ್ಲುವರು. ಇವರನ್ನೇ ಆರಿಸಬೇಕೆಂದು ಮತದಾರರಿಗೆ ಸೂಚನೆಗಳಾಗುತ್ತಿರುವವು. ಯಾವದೊಂದು ಪ್ರಸಂಗದಲ್ಲಿ ನಿರಂಕುಶ ಅಧಿಕಾರವನ್ನು ನಿಷೇಧಿಸುವಾಗ ರಾಜೀನಾಮೆಯನ್ನು ಕೊಟ್ಟಂಥವರನ್ನೇ ಪುನಃ ಆರಿಸುವದು ಅನುಕೂಲಕರವಾಗಿರುತ್ತದೆ. ವಿಲಾಯತಿಯಲ್ಲಿ ಬ್ರ್ಯಾಡಲಾಸಾಹೇಬರನ್ನು ಮತದಾರರು ಒಪ್ಪಲಿಲ್ಲ; ಮೂರು ಸಾರೆ ಆರಿಸಿ, ಅಧಿಕಾರ ವರ್ಗದ ಮೇಲೆ ಜಯ ಸಂಪಾದನೆ ಮಾಡಿದರು ಬೆಂಗಳೂರಿನ ಮತದಾರರೂ ಇದೇ ರೀತಿಯಾಗಿ ಅಧ್ಯಕ್ಷರ ಮೇಲೆ ಜಯ ಸಂಪಾದಿಸುವರೆಂದು ತಿಳಿಯುತ್ತೇವೆ.

ತಗಡೂರ ರಾಮಚಂದ್ರರಾಯರು ಮೈಸೂರಲ್ಲಿ ತೆಗೆಯಬೇಕೆಂದಿದ್ದ ಕನ್ನಡ ಪತ್ರಿಕೆಗೆ ಅಡ್ಡ ಬಂದವರು ಅಲ್ಲಿಯ ಮ್ಯಾಜಿಸ್ಟ್ರೇಟರೇ. ಪತ್ರ ಬಂದು ಮಾಡುವದಕ್ಕೂ, ಇದರ ಯಂತ್ರ ಸಾಮಗ್ರಿಯನ್ನು ಒಪ್ಪ ಮಾಡುವದಕ್ಕೂ ಸರಕಾರದ ಮಂಜೂರಿಯೇ ಇಲ್ಲ. ಮ್ಯಾಜಿಸ್ಟ್ರೇಟರ ಹೈದರಶಾಹಿಯ ವರ್ತನದ ಬಗ್ಗೆ ಶ್ರೀ ಹೊಸಕೊಪ್ಪದ ಕೃಷ್ಣರಾಯರು ಅಲ್ಲಿಯ ಲೆಜಿಸಲೆಟಿವ್ಹ ಅಸೆಂಬ್ಲಿಯಲ್ಲಿ ವಾದವಿವಾದ ಮಾಡತಕ್ಕವರಿದ್ದಾರೆ.

ವಿವಿಧ ವರ್ತಮಾನಗಳು

—೦—

ಹೊಸಪೇಟೆಯಿಂದ ಕಣಿವಿನಹಳ್ಳಿಗೆ ದಾರದಲ್ಲಿ ಮೂರು ಸಾರು ಉಗೆಬಂಡಿ ಬಿಡುತ್ತಿದ್ದರು. ಇನ್ನು ದಿನಾಲು ಬಿಡುವಂತೆ ಕಂಪನಿಯವರು ವ್ಯವಸ್ಥೆ ಮಾಡಿದ್ದಾರೆ

ಮುಲ್ಕೀ ಖಾತೆಯ ಅಪೀಲಿನ ಸುನಾವಣೆಗಾಗಿ ಹೈದರಾಬಾದಿನ ನಿಜಾಮಸಾಹೇಬರು ಮೂವರು ಕಾಮದಾರರ ಒಂದು ಕಮಿಟಿ ನೇಮಿಸಿದ್ದಾರೆ.

ಮುದ್ರಾಸ ಇಲಾಖೆಯಂತೆ ಮುಂಬಯಿ ಇಲಾಖೆಯಲ್ಲಿಯೂ ಒಂದು ಜಿಲ್ಲೆಯಲ್ಲಿ ಕರಿಯ ವ್ಯಾಪಾರವನ್ನು ಪೂರಾ ನಿಲ್ಲಿಸಿ, ಅದರ ಪರಿಣಾಮ ನೋಡಬೇಕೆಂತ ಮಂತ್ರಿಯಾದ ಎಂ. ಪ್ರಧಾನರು ಯೋಚಿಸಿದ್ದಾರೆ ಈ ಭಾಗ್ಯವು ಸಾತಾರ ಜಿಲ್ಲೆಗೆ ದೊರೆಕ್ಕದ್ದುಂಟು.

ಡಾಕ್ಟರ ಮ್ಯಾನಸಾಹೇಬರ ಸ್ಥಳದಲ್ಲಿ ಮಿ. ನೋನ ಸಾಹೇಬರು ಒಕ್ಕಲತನದ ಖಾತೆಯ ಡಾಯರೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

ಅಮೃತಸರದ ಖಾಲಸಾ ಕಾಲೇಜದ ಪ್ರೊಫೇಸರರಾದ ಆಮನಸಿಂಗರೆಂಬವರು ಕಲೆಕ್ಟರ ಪರೀಕ್ಷೆಗೆ ಕೂಡಲಿಕ್ಕೆ ತಮ್ಮ ವಯಸ್ಸಾಗಬೇಕೆಂದು ತಾವು ೧೯೦೧ರಲ್ಲಿ ಹುಟ್ಟಿದ್ದರೂ, ೧೯೦೪ರಲ್ಲಿ ಹುಟ್ಟಿದ್ದಂತೆ ರಜಿಸ್ಟರದಲ್ಲಿ ತಿದ್ದುಪಡಿ ಮಾಡಿದರೆಂಬ ಆರೋಪಕ್ಕೊಳಗಾಗಿ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಆರೋಪಿಯಾಗಿ ವಿಚಾರಣೆಗೆ ಗುರಿಯಾಗಿದ್ದಾರೆ

ಧಾರವಾಡ—

ದಿನಾಲು ಮೋಡ ಹಾಕಿ, ಮಳೆ ಬೀಳುತ್ತಿರುವದು ಬೆಳೆಗೆ ಕೇಡಗಾಲವೇ ಸರಿ.

ನಾಳಿನ ದಿವಸ ಇಲ್ಲಿಯ ಕರ್ನಾಟಕ ಕಾಲೇಜದಲ್ಲಿ ಸೋಸಿಯಲ ಗ್ಯಾದರಿಂಗದ ವಾರ್ಷಿಕ ಸಮಾರಂಭವಿರುತ್ತದೆ.

ಜಾಮೀನದ ದೆಸೆಯಿಂದ ಮಾಜೀ ಚೀಫ ಆಫೀಸರರಾಗಿದ್ದ ಮಿ. ಚವನಗೌಡರು ಬಡ್ಡ ಕೋರ್ಟಿಗೆ ಮಾಡಿಕೊಂಡಿದ್ದ ಅಪೀಲ ಅರ್ಜಿಯು ನಾಮಂಜೂರಾಯಿತು.

ರಾಣೇಬೆನ್ನೂರ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಮೆ. ಸಯ್ಯದ ನಿಜಾಮುದ್ದೀನಸಾಹೇಬರ ಅಧ್ಯಕ್ಷತೆಯಲ್ಲಿ ರಾಣೇಬೆನ್ನೂರಿನ ನಾಗರಿಕರ ಸಭೆಯಾಗಿ, ರಾ. ಬ. ನಾಯಿಕರ ಮೃತ್ಯುವಿನ ದೆಸೆಯಿಂದ ದುಃಖಪ್ರದರ್ಶನ ಮಾಡಲ್ಪಟ್ಟಿತು. ಮತ್ತು ಇವರ ಸ್ಮಾರಕ ಮಾಡುವದಕ್ಕಾಗಿ ಒಂದು ಕಮಿಟಿ ನೇಮಿಸಲ್ಪಟ್ಟಿದೆ. ಇವರ ಮೃತ್ಯುವಿನ ದೆಸೆಯಿಂದ ಆ ಊರ ಪೇಟೆ, ಶಾಲೆ, ಮ್ಯುನಿಸಿಪಾಲಿಟಿ ಮತ್ತು ಲೋಕಲ ಬೋರ್ಡಿನ ಕಚೇರಿಗಳು ಬಂದಾಗಿದ್ದವು.

WANTED.

Wanted Candidates for Telegraph and Station Master's Courses. Railway Fare GRANTED Boarding Seat FREE. Prospectus on 2 annas stamp,— Presidency Telegraph College, Royapettah Madras.

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಕನ್ನಡು ಆಣೆಯಿರುತ್ತದೆ

ಎ. ಕೆ ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ವಂದಿಗೆಯು ಆರು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವವು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀ,

ಮ್ಯಾನೆಜಿಂಗ ಡಾಯರೆಕ್ಟರ

ವಿಜಯ ಪುಸ್ತಕಾಲಯ.

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ

ಧಾರವಾಡ

ಈ ಪತ್ರವನ್ನು ರಂಗನಾಥ ಭೀಮರಾವ ಬಾಳಿಕಾಯಿ ಹೊಸಕೇರಿ ಇವರು, ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1448

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮| ಧಾರವಾಡ ಗುರುವಾರ ತಾರೀಖು ೨೯ ನೇ ಸಪ್ಟಂಬರ ೧೯೨೭ | ಸಂಚಿಕೆ ೨೧೦

ಹಂಗಾಮವು ಮುಗಿಯ ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಚನ್ನಾಗಿ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೆಂದರೆ ಉಕ್ಕಿನ ಕಂಬಗಳ ಚೌಕಟ್ಟು ಒಳ್ಳೆ ಬೇರಿಂಗುಗಳು ಇರುವದರಿಂದ ಯಂತ್ರವು ಹಗುರಾಗಿ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಗಿಂತಲೂ ಇವುಗಳಲ್ಲಿ ಕಾಳು ಒಡೆಯುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಜಾಹೀರ ವಿನಂತಿ

—೦—

ಯಾವತ್ತರಿಗೂ ಇದರ ಮೂಲಕ ವಿನಂತಿ ಮಾಡಿಕೊಳ್ಳುವದೇನಂದರೆ:—

ನಾನು ಮೃತ ನನ್ನ ಗಂಡ ಈರಪ್ಪಾ ಗಡಿಯಪ್ಪಾ ಪಟ್ಟೇಟಿ ಇವರ ಹೇಳಿಕೆ ಪ್ರಕಾರ ಅವರ ವಂಶಾಭಿವೃದ್ಧಿ ದಕ್ಕಿಂದ ರಾಜೇಶ್ರೀ ಈರಪ್ಪಾ ದೊಡ್ಡಬಸಪ್ಪಾ ದನದಮನಿ, ಪತ್ತಿನಗೌಡ್ರ ಇವರಿಗೆ ಅವರ ಮಗನಾದ ಚಿ. ಬಸವಣ್ಣೆಪ್ಪನನ್ನು ನನಗೆ ದತ್ತಕ ಕೊಡಲಿಕ್ಕೆ ಕೇಳಿಕೊಂಡದ್ದಕ್ಕೆ ಅವರು ಒಪ್ಪಿಕೊಂಡ ಪ್ರಕಾರ ಇವತ್ತಿನ ದಿವಸ ಮುಂಜಾನೆ ೭ ಘಂಟೆಕ್ಕೆ ನಮ್ಮ ಧರ್ಮ ಪದ್ಧತಿ ಪ್ರಕಾರ ಸದರ ಹುಡುಗನನ್ನು ನಾನು ದತ್ತಕ ತೆಗೆದುಕೊಂಡಿರುತ್ತೇನೆ. ಮತ್ತು ಮೃತ ನನ್ನ ಗಂಡನ ಸ್ಥಿರಚರ ಆಸ್ತಿ ನನ್ನ ಅಲ್ಪವಯ ದತ್ತಕ ಮಗನ ತರ್ಫೆ ವಹಿವಾಟ ಮಾಡಲಿಕ್ಕೆ ಅವನ ಜನಕ ತಂದೆ ತಾಬಾಕ್ಕೇನೇ ಕೊಟ್ಟಿರುತ್ತೇನೆ. ಕಾರಣ ಇನ್ನು ಮುಂದೆ ಮೃತ ನನ್ನ ಗಂಡನ ಸಂಗಡ ವ್ಯವಹಾರ ಇದ್ದವರು ವ ಅಲ್ಪವಯ ಮಗನ ಕೂಡ ವ್ಯವಹಾರ ಮಾಡಲಿಚ್ಛಿಸುವವರು ಅಲ್ಪವಯ ಮಗನ ತರ್ಫೆ ಅವನ ಜನಕ ತಂದೆಯ ಕೂಡಾನೇ ಮಾಡಬೇಕಾಗಿ ವಿನಂತಿ ಇದೆ.

ಧಾರವಾಡ ಪೈಕಿ ಮಾಳಾಪೂರ,

ತಾ. ೨೬-೯-೧೯೨೭ ಇಸ್ವಿ.

ತಮ್ಮ,

ಈ ಎಡಗೈ ಹೆಬ್ಬಟ್ಟಿನ ಗುರ್ತ ನಿಂಗವ್ವಾ ಕೋಂ ಈರಪ್ಪಾ ಪಟ್ಟೇಟಿ ಇವರ ಕೈದು ಇದೆ.

ಡಿಪಾರ್ಟಮೆಂಟಿನಿಂದ ಮಂಜೂರಾದ

ಕನ್ನಡ ನಿಬಂಧರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟದ್ದಲ್ಲದೆ ರಿಪೋರ್ಟು ಅರ್ಜಿ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವದೆ.

ಪ್ರತಿಗಳು ದೊರೆಯುವ ಸ್ಥಳ:— ೧ ರಾ ರಾ ಬಿ. ಡಿ. ದಿವೇಕರ,

" ಮಾಳಗುಡ್ಡ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಪ್ಪ

ವಾಗ್ವಿಲಾಸ ಬುಕ್ ಡಿಪೋ ಹುಬ್ಬಳ್ಳಿ

ವಿಜಯದ ವರ್ಗಣೀದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೬—೦—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೨೮-೯-೧೧ ನೇ ಇಸ್ವಿ

ಅರಬಸ್ಥಾನದ ಮೇಲೆ ವಿಲಾಯತಿಯ ಮೂವರು ಪ್ರಬಲ ರಾಜರ ಮೂರು ತರದ ದೃಷ್ಟಿಗಳು.

ಅರಬಸ್ಥಾನದ ಮೇಲೆ ಇಂಗ್ಲಂಡ, ಇಟಲಿ ಮತ್ತು ರಶಿಯವು ತನ್ನ ವರ್ಚಸ್ಸು ಅಂದರೆ ಪ್ರಭುತ್ವವನ್ನು ಹೇರಬೇಕೆಂದು ಉದ್ಯೋಗ ಮಾಡಿವೆ ಅರಬಸ್ಥಾನವೆಂಬದು ಚಿಕ್ಕ ದೇಶವು. ಯುದ್ಧ ಹೂಡಿದರೆ ಯುರೋಪದ ಯಾವದೊಂದು ಚಿಕ್ಕ ದೇಶಕ್ಕೆ ಕೂಡ ಒಂದೇ ಹೊಡತದಲ್ಲಿ ತುತ್ತಾಗುವಂಥ ಸಾಧಾರಣಾ ಹೀನ ಪಾಡಿನಂಥಾದ್ದು. ಇದು ಸ್ವತಂತ್ರ ದೇಶವೆಂದು ಒಡಂಬಡಿಕೆಯ ಕಾಗದದಲ್ಲಿ ಬರೆಯುವದು ಕೇವಲ ಉಪಚಾರವಾಗುತ್ತದೆ. ಮುತ್ಸದ್ದಿಗಳು ಮೋರೆಯ ಮೇಲೆ ಕೈ ಎಳೆದು ಕಾರ್ಯ ಸಾಧಿಸಿಕೊಳ್ಳುವಂಥ ಪ್ರಕಾರವು.

ಅರಬಸ್ಥಾನದ ಕೆಂಪು ಸಮುದ್ರದ ದಂಡೆಗುಂಟ ಜಗತ್ತಿನಲ್ಲಿರುವ ಎಲ್ಲ ಹಡಗಗಳು ಹಾಯುವವು. ವ್ಯಾಪಾರದ ಹಡಗಗಳಿಗೆ ಅನಿರ್ಬಂಧವಿರುವದು. ಸುಂಕ ಕೊಟ್ಟರಾಯಿತು. ಆದರೆ ಯುದ್ಧದ ಹಡಗಗಳಿಗೆ ಮಾತ್ರ ಈ ತರದ ಸ್ವೇಚ್ಛಾಚಾರವು ದೊರೆಯದು ಅದು ಯಾವಾಗಲೂ ಇಂಗ್ಲಿಷರ ಹಂಗಿನೊಳಗಿರಬೇಕಾಗುತ್ತದೆ. ಏಕಂದರೆ-ಇದರ ದಕ್ಷಿಣೋತ್ತರದ ಬಾಗಿಲುಗಳ ಬೀಗಗಳನ್ನು ಇಂಗ್ಲಿಷರು ತಮ್ಮ ಕಯ್ಯಲ್ಲಿಟ್ಟುಕೊಂಡಿದ್ದಾರೆ. ಇವೆರಡೂ ಬಾಗಿಲುಗಳ ಮಧ್ಯದಲ್ಲಿ ಸಿಕ್ಕ ಅರಬಸ್ಥಾನವನ್ನು ಸರ್ವತಂತ್ರ ಸ್ವತಂತ್ರವೆಂದು ಇಂಗ್ಲಿಷ ಜನರು ಈಗೀಗ ಮಾಡಿಕೊಂಡ ಒಡಂಬಡಿಕೆಯಲ್ಲಿ ಒಪ್ಪಿದ್ದಾರೆ. ರಾಜಕಾರಣದ ವಿಚಾರಗಳನ್ನು ಹೇಳದೆ ಈ ಒಡಂಬಡಿಕೆಯಲ್ಲಿಲ್ಲದ ಬೇರೆ ಸಂಗತಿಗಳನ್ನು ಮಾತ್ರ ಪ್ರಕಟ ಮಾಡಿದ್ದಾರೆ. ಅರಬರು ಗುಲಾಮರ ವ್ಯಾಪಾರವನ್ನು ನಿಲ್ಲಿಸಬೇಕು. ಇಂಗ್ರೇಜಿ ರಾಜ್ಯದ ಮುಕ್ಕಾದ ಯಾತ್ರಸ್ಥರ ಸುಖಸೋಯಿ ಮತ್ತು ಸುರಕ್ಷಿತೆಯನ್ನು ಕಾಯಬೇಕು. ಯಾವನೊಬ್ಬ ಯಾತ್ರಿಕನು ಒಳಗದಿಂದಿಲ್ಲದೆ ಸತ್ತರೆ ಆತನ ಜಿಂದಗಿಯನ್ನು ಅವರ ವಾರಸದಾರರಿಗೆ ಮುಟ್ಟಿಸುವಂತೆ ಇಂಗ್ಲಿಷ ಏಜಂಟನ ವಶ ಮಾಡಬೇಕು.

ಇಂಗ್ಲಂಡದ ತರುವಾಯ ಇಟಲಿಯೂ ಅರಬರ ಕೂಡ ಒಪ್ಪಂದ ಮಾಡಿಕೊಂಡಿರುತ್ತದೆ. ಅದರಲ್ಲಿ ರಾಜಕೀಯವು ಹೆಚ್ಚು ಹೆಚ್ಚಿಗೆ ಕಂಡು ಬರುತ್ತಿರುವದು ಮಾದರಿಗಾಗಿ ಕೆಲವನ್ನು ಇದರಡಿ ಕೊಡುತ್ತೇವೆ —

೧ ಇಟಲಿಯ ಅರಸರು ಅರಬಸ್ಥಾನವು ಸ್ವತಂತ್ರ ದೇಶವೆಂದೇ ಒಪ್ಪುತ್ತಾರೆ.

೨ ಇಟಲಿಯು ಅರಬರಿಗೆ ಶಕ್ಯವಾದ ಎಲ್ಲ ಪ್ರಕಾರದ ಸಹಾಯ ಮಾಡುವದು. ತೋಫು ಬಂದೂಕು ಮತ್ತು ಮದ್ದು ಗುಂಡನ್ನು ಯೋಗ್ಯ ಬೆಲೆಗೆ ಕೊಟ್ಟು, ಕಂತಿನಿಂದ ಬೆಲೆಯನ್ನು ತಕ್ಕೊಳ್ಳುವದು.

೩ ಇಟಲಿಯು ಅರಬಸ್ಥಾನದ ಸುಧಾರಣೆಗಾಗಿ ತಜ್ಞರ ನೆರವು ಕೊಡುವದು ಈ ತಜ್ಞರು ಕೆಲಸ ಮಾಡುವ ತನಕ ಅರಬರ ಸೇವಕರೇ ಆಗಿ, ಅವರ ಹುಕುಮಿನಂತೆ ನಡೆಯುವರು.

೪ ಇಟಲಿಯ ಪ್ರಜರು ಅರಬಸ್ಥಾನದಲ್ಲಿ ವ್ಯಾಪಾರ ಮತ್ತು ಆರ್ಥಿಕ ದೃಷ್ಟಿಯಿಂದ ವ್ಯವಹಾರ ಮಾಡಬಹುದು. ಆದರೆ ಅರಬ ದೇಶದ ಕರಪಟ್ಟಿಯನ್ನು ಕೊಡಬೇಕು.

ಗುಲಾಮರ ವ್ಯಾಪಾರವನ್ನು ಮುರಿಯುವದಕ್ಕಾಗಿ ಇಟಲಿಯು ಹಡಗಳಿಗೆ ಸಹಾಯ ಮಾಡತಕ್ಕದ್ದು.

ಇಂಗ್ಲಂಡ ಮತ್ತು ಫ್ರಾನ್ಸವನ್ನು ಹಿಂದೆ ಒತ್ತಿ, ತಾನು ವಿಲಾಯತಿಯ ರಾಜಕಾರಣದಲ್ಲಿ ಮುಂದೆ ಬರಬೇಕೆಂದು ಇಟಲಿಯು ಸಾಹಸ ಪಡುತ್ತಿರುವದು. ಆದರದೇ ಇದೊಂದು ದೃಷ್ಟಾಂತವು.

ಇವೆರಡೂ ದೇಶಗಳಂತೆ ರಶಿಯವೂ ಈ ದೇಶದಲ್ಲಿ ತನ್ನ ಕಾಲು ಚಾಚಬೇಕೆಂದಿರುತ್ತದೆ ಮೊಗಲಾಯಿಕ ತತ್ವವು ಬೇರೂರದಂಥ ದೇಶವು ಜಗತ್ತಿನಲ್ಲಿ ಯಾವದಿರುವದು? ಇಂಗ್ಲಿಷ ಜನರು ವ್ಯಾಪಾರದಿಂದಲೇ ಜಗತ್ತನ್ನು ಸುತ್ತು ಹಾಕಿದ್ದಾರೆ. ಇಂಗ್ಲಿಷರಂತೆ ರಶಿಯನರೂ ವ್ಯಾಪಾರದ ನಿಮಿತ್ಯದಿಂದ ರಾಜಕಾರಣವನ್ನು ಸಾಧಿಸಬೇಕೆಂದು ಹೊಂಚು ಹಾಕಿದ್ದಾರೆ. ರಶಿಯಾದ ಓರ್ವ ಪ್ರತಿನಿಧಿಯು ಅರಬಸ್ಥಾನದಲ್ಲಿ ತಿರುಗಾಡಿ, ಅರಬದೇಶದಲ್ಲಿ ರಶಿಯಾದ ಸಕ್ಕರೆ, ಹಿಟ್ಟು, ಸಾಬಾಣ, ದೀಪದ ಎಣ್ಣೆ ಮೊದಲಾದ ಪದಾರ್ಥಗಳಿಗೆ ದೊಡ್ಡ ಬೇಡಿಕೆಯುಂಟೆಂದು ಅಭಿಪ್ರಾಯ ಪಟ್ಟಿರುತ್ತಾನೆ. ಈ ವ್ಯಾಪಾರ ವಿಷಯವಾಗಿ ಇವೆರಡೂ ದೇಶಗಳ ನಡುವೆ ಬೇಗನೆ ಕರಾರುಗಳೂ ಆಗತಕ್ಕವಿವೆ. ವ್ಯಾಪಾರದ ಬಂಡು ಪ್ರವೇಶದಲ್ಲಿ ಇಂಗ್ಲಂಡದ ಸಾಮ್ರಾಜ್ಯ ಸಂಭ್ರಮಕ್ಕೆ ಧಕ್ಕೆ ತಾಬೇಕೆಂದಿದ್ದಾರೆ. ಅರಬರೂ ಇಟಲಿ ರಶಿಯಾ ಒಂದಾಗುವದು ಇವರಿಗೆ ಇಷ್ಟವಿಲ್ಲ. ಏಕಂದರೆ ಈ ಒಡಂಬಡಿಕೆಯು ಇಂಗ್ಲಿಷರಿಗೆ ಹಿತವಾಗಿ, ರಶಿಯರಿಗೂ ತುರುಕರಿಗೂ ಪ್ರತಿಕೂಲವಾಗುವದು. ಆದುದರಿಂದ ಅರಬಸ್ಥಾನವನ್ನು ತಮ್ಮ ಬಗಲೊಳಗೆ ಹಾಕಿಕೊಂಡು, ಕೆಂಪು ಸಮುದ್ರದಲ್ಲಿರುವ ಇಂಗ್ಲಿಷರ ಪ್ರಭುತ್ವಕ್ಕೆ ದಾರಿ ತರಬೇಕೆಂದು ರಶಿಯರು ಬಹಿರಂಗವಾಗಿ ಪ್ರಯತ್ನ ನಡೆಸಿದ್ದಾರೆ.

ಕೆಲವು ವರ್ಷಗಳಲ್ಲಿ ಅರಬಸ್ಥಾನವು ವಿಲಾಯತಿಯ ರಾಜಕಾರಣದ ಮತ್ತು ಭಾವೀ ಸಂಗ್ರಾಮದ ರಂಗಸ್ಥಳವಾಗುವದೆಂದು ಹೇಳುವಂತೆ ಇಂಗ್ಲಂಡ, ಇಟಲಿ ಮತ್ತು ರಶಿಯವು ನಡೆಸಿದ ಕಾರಸ್ಥಾನಗಳಿಂದ ತರ್ಕವಾಗುತ್ತದೆ. ಸೇನಾ ಸಾಮರ್ಥ್ಯದ ಬಲವುಳ್ಳವರ ಶಕ್ತಿಯು ಎಷ್ಟಾದರೂ ಒಮ್ಮೆ ಕುಗ್ಗುವದು ಸೃಷ್ಟಿಯ ಧರ್ಮವಾಗಿರುತ್ತದೆ.

ಸ್ಕೂಲಬೋರ್ಡಿನ ಆಡಮಿನಿಸ್ಟ್ರೇಟರರು.

ಮಾಡಿದ್ದುಣ್ಣೋ ಮಹಾರಾಯಾ !!

— ೦ —

ಸ್ಕೂಲಬೋರ್ಡಿನ ಆಡಮಿನಿಸ್ಟ್ರೇಟರನ್ನು ನೇಮಿಸಿಕೊಳ್ಳುವ ಕರ್ತವ್ಯದಲ್ಲಿ ಧಾರವಾಡ ಜಿಲ್ಲೆಯವರು ಮಾಡಿದ ಅಪ್ರಬುದ್ಧ ವಿಚಾರ ಮತ್ತು ಬೇರೆ ಸ್ಥಳಗಳಲ್ಲಿ ಕಂಡುಬಂದ ಸುಜ್ಞಾನಶಾಹಿಯನ್ನು ಲಕ್ಷ್ಯಕ್ಕೆ ತಂದು, ಮುಂಬಯಿ ಸರಕಾರದವರು ಈ ನೇಮಣೂಕಿಯು ಬೆನೆಯಿಂದ ಆಯದೆ ಕಾನ್ಸಿಲ ಸಭೆಯಲ್ಲಿ ಒಂದು ದುರಸ್ತಿಯ ಬಿಲ್ಲನ್ನು ತರುವವರಿದ್ದಾರೆ ಇದರಿಂದ ಸ್ಕೂಲಬೋರ್ಡುಗಳ ಮುಕ್ತ ಪೂರ ವರ್ತನದ ಉದ್ದಾಮತನವೆಲ್ಲ ಹೋಗುವಂತಿರುತ್ತದೆ.

ಸ್ಕೂಲಬೋರ್ಡಿನವರು ತಮಗೆ ಬೇಕಾದಂಥ ಒಬ್ಬ ಗೋಪಾಳ ಗಣೇಶನನ್ನು ನೇಮಿಸಿಗೊಂಡು, ಈತನನ್ನೇ ಸರಕಾರವು ಒಪ್ಪಬೇಕೆಂದು ಆಗ್ರಹ ಕೊಡುವದೆಂದರೆ ವಿದ್ಯಾಖಾತೆಯ ಇನ್ಸಪೆಕ್ಟರ, ಡಾಯರೆಕ್ಟರ ಮತ್ತು ಮಂತ್ರಿಯವರು ಸಹ ತಮ್ಮ ಹುಕುಮನ್ನೇ ನಡೆಸಬೇಕೆಂದು ಇವರ ಅಂಬೋಣವಾಗುತ್ತದೆ ದುಡ್ಡು ಕೊಡತಕ್ಕವರು ಸರಕಾರದವರು. ದುಡ್ಡು ಕೊಟ್ಟವರೂ, ಅವರ ಮಾತು ನಡೆಯಬಾರದೆಂದು ಲೋಕಬೋರ್ಡು ಹೇಳುವದು ದುರಹಂಕಾರವಾಗುತ್ತದೆ. ಆಕಳ ದಾನ ಸಿಕ್ಕಿರುತ್ತದೆಂದು ಅದರ ಹಂದರಿ ಮಾಡಬೇಕೇ? ದ್ರವ್ಯದ ಯೋಗ್ಯ ಉಪಯೋಗವಾಗಬೇಕು. ಯೋಗ್ಯ ಗೃಹಸ್ಥರೇ ಆಡಮಿನಿಸ್ಟ್ರೇಟರರಾಗಬೇಕೆಂದು ಈ ಬಿಲ್ಲಿನ ಮುಖ್ಯೋದ್ದೇಶವಾಗಿರುತ್ತದೆ.

ಈ ಬಿಲ್ಲಿನಿಂದ [illegible] ರನ್ನು ಕಾಯಮ ಮಾಡುವ ಸಂಪೂರ್ಣ [illegible] ಮತ್ತು ಬವಾಬದಾರಿಯನ್ನು ವಿದ್ಯಾಖಾತೆಯವರು ವಹಿಸ್ಕ ಕಡೆ

ಗೆ ಇಟ್ಟುಕೊಂಡಿದ್ದಾರೆ. ಸ್ಕೂಲ ಕಮೀಟಿಯವರು ಬೇಕಾದಂಥ ಜನರ ಶಿಫಾರಸ ಮಾಡಬಹುದು. ವಿಶೇಷ ಸೂಚನೆ ಮಾಡಬಹುದು. ಆದರೆ ಈ ಠರಾವು ಅಥವಾ ಸೂಚನೆಗಳನ್ನು ಅಂಗೀಕರಿಸಲು ವಿದ್ಯಾಖಾತೆಯ ಸ್ಥಾನಿಕ ಅಧಿಕಾರಿಗಳು ಬಾಧ್ಯಬದ್ಧರಾಗುವದಿಲ್ಲ. ಅವರು ಬೇಕಾದರೆ ಈ ಸೂಚನೆಯನ್ನು ಅಂಗೀಕರಿಸಬಹುದು ಬೇಡಾದರೆ ತಿರಸ್ಕರಿಸಬಹುದು. ಇಂದವರು ಬೇರೊಂದು ಅರ್ಜಿದಾರರ ಅರ್ಜಿಯಂತೆ ಒಂದು ಅರ್ಜಿಯನ್ನು ಕಳಿಸುವದಕ್ಕಿಂತ ಬೇರೆ ಡಿ.ನ ಕಯ್ಯಲ್ಲೇನೂ ಸ್ವಾತಂತ್ರ್ಯವಿಲ್ಲ. ಇದಕ್ಕೇ ಮಾಡಿದ್ದುಣ್ಣೋ ಮಹಾರಾಯನೆನ್ನುತ್ತಾರೆ.

ಖಿಲಾಫತ ಕಮಿಟಿಗೆ ಕಾಬೂಲದ ಅಮೀರ ಸಾಹೇಬರ ಉಪದೇಶ.

—೦—

ಉತ್ತರ ದೇಶದ ಖಿಲಾಫತ ಕಮಿಟಿಯ ಕೆಲ ಪ್ರತಿನಿಧಿಗಳು ಕಾಬೂಲಕ್ಕೆ ಹೋಗಿ, ಹಿಂದೂ ಮತ್ತು ಶೀಖ ಜನರ ವಿರುದ್ಧ ದೂರಿಕೊಂಡು ಅವರನ್ನು ಕಾಬೂಲ ದೇಶದಿಂದ ಹೊರಗೆ ಹಾಕಬೇಕೆಂದು ಅಮೀರರಿಗೆ ವಿನಂತಿ ಮಾಡಿಕೊಂಡರು. ಇಂಗ್ಲಿಶರು [illegible]ನ್ನೇ ಕಾರಣ ಮಾಡಿಕೊಂಡರು. ಹಿಂದೂ ಮತ್ತು ಶೀಖರು ಪೈಗಂಬರರು ಮತ್ತು ಅವರಂಥ ಯೋಗ್ಯತೆಯ ಸತ್ಪುರುಷರನ್ನು ನಿಂದಿಸುವರು ಆದ್ದರಿಂದ ಇಂಥ ಕಾಫರರು ಮುಸಲ್ಮಾನ ರಾಜ್ಯದಲ್ಲಿ ಇರಬಾರದೆಂದು ಇವರು ನುಡಿದರು.

ಅಮೀರ ಸಾಹೇಬರು ಇವರ ವಿನಂತಿಗೆ ಎಷ್ಟೂ ಮಾನ ಕೊಡಲಿಲ್ಲ. ನನ್ನ ದೇಶದಲ್ಲಿರುವ ಹಿಂದೂ ಶೀಖರ ಕೂಡ ಇರುವ ಸಂಬಂಧವು ಪ್ರೀತಿಯುಳ್ಳದ್ದಾಗಿರುತ್ತದೆ. ನಾನು ನನ್ನ ವಂಶಸ್ಥರು ಪಾಕಿದಂಥ ರಾಜಶಾಸನದ ವಿರುದ್ಧ ಹೋಗುವದಿಲ್ಲೆಂದು ಅಮೀರ ಸಾಹೇಬರು ಸಮರ್ಪಕ ಉತ್ತರ ಕೊಟ್ಟರು. ಮೈಸೂರ, ಬಡೋದೆ, ಗ್ವಾಲೇರ, ಕಾಶ್ಮೀರ ಮೊದಲಾದವರು ತಮ್ಮಲ್ಲಿರುವ ಮುಸಲ್ಮಾನರನ್ನು ದೇಶ ಬಿಟ್ಟು ಹೊರಗೆ ಹಾಕುವದರಿಂದುಂಟಾಗುವ ಅನಿಷ್ಟ ಪರಿಣಾಮವನ್ನು ಮುಸಲ್ಮಾನರಿಗೆ ಎಲ್ಲಿಯೂ ನೆಲೆಯುಂಟಾಗಲಾರದೆಂದೂ ಖಿಲಾಫತದವರು ಮುಂದಾಗಿ ಭಾವಿಸಿದ್ದರೆ-ಇಂಥ ಮೂರ್ಖತನ ಮಾಡುತ್ತಲೇ ಇದ್ದಿಲ್ಲ.

ಜಿನೆವ್ಹಾಕ್ಕೆ ಹೋದಂಥ ಸರ ಸಿ. ಪಿ. ರಾಮಸ್ವಾಮಿ ಅಯ್ಯರರು ಇಂಗ್ಲಂಡಕ್ಕೆ ಹೋಗಿ ಮುಖ್ಯ ಮಂತ್ರಿ, ಭಾರತ ಮಂತ್ರಿ, ಮಾಜಿ ಮಂತ್ರಿಗಳಾದ ಮ್ಯಾಕಡೋನಾಲ್ಡ ಮತ್ತು ಲಾಯಿಡ ಜಾರ್ಜ ಸಾಹೇಬರನ್ನು ಕಾಣುವರು.

ಮಲೇರಿಯಾ ಜ್ವರಕ್ಕೆ ರಾಮಬಾಣ ಉಪಾಯವು.

—೦—

ಸಾಧಾರಣವಾಗಿ ಡಾಕ್ಟರ ಜನರು ಮಲೇರಿಯಾ ಎಂಬ ದೋಷ ಜ್ವರಕ್ಕೆ ಕ್ವಿನಾಯಿನವನ್ನು ಉಪಯೋಗಿಸುತ್ತಾರೆ. ದೇಶೀ ವೈದ್ಯರು ಅಷ್ಟು ಕಟ್ಟಿಯ ಕಹಿಯಾದ ಕಷಾಯ ಕೊಡುತ್ತಾರೆ. ಈ ಉಪಾಯ ಮೇಲೆ ಆಗಿರುವ ಪೇಟೆಂಟ ಎಂಬ ಅಗ್ಗ ಮಿಶ್ರಣಗಳೆಲ್ಲ ಕಹಿಯ ವಿಷಯದಲ್ಲಿ ಒಂದಕ್ಕೊಂದು ಹಿರಿದಾಗಿರುತ್ತವೆ. ಬಾಟ್ಲಿವಾಲಾನ ಅಗ್ಯುಮಿಕ್ಶ್ಚರವಂತೂ ಕಹಿಯ ಪರಮಾವಧಿಯಾಗಿರುತ್ತದೆ. ಇವೆಲ್ಲ ಹೊಟ್ಟೆಯೊಳಗೆ ಮಾಡುವ ಉಪಾಯಗಳು. ಹೊರಗೂ ಉಪಾಯವುಂಟೆಂದು ಕಲೆಕ್ಟರ ಕೆಲಸ ಮಾಡುತ್ತಿರುವ ಸೌಟರರೆಂಬ ಸಾಹೇಬರು ಹೇಳುತ್ತಾರೆ. ಇದು ಬಹಳ ಸುಲಭವಾದದ್ದು ಕಾಸೆರದ ಕಾಸಿನಲ್ಲಿ ಆಗುವಂಥಾದ್ದು ಪ್ರತಿಯೊಂದು ಊರು ಪ್ರತಿಯೊಂದು ಮನೆಯಲ್ಲಿ ಇರುವಂಥಾದ್ದು. ಅದು ಕಲ್ಲೆಣ್ಣೆಯು. ಈ ಎಣ್ಣೆಯು ಇಲ್ಲದಂಥ ಮನೆಯು ಜಗತ್ತಿನಲ್ಲಿಯೇ ಇರುವದಿಲ್ಲ. ಮಲ್ನಾಡದ ಜನರು ಮತ್ತು ಮಲ್ನಾಡದಲ್ಲಿ ಸಂಚಾರ ಮಾಡುವಂಥ ಪ್ರಸಂಗ ಬಂದವರು ಕೆಲ ದಿವಸ ದಿನಾಲು ಮುಂಜಾನೆ ಮತ್ತು ಸಾಯಂಕಾಲದಲ್ಲಿ ಮೈ ತುಂಬ ಈ ಎಣ್ಣೆಯನ್ನು ಸವರಿ, ಕೆಲ ಹೊತ್ತು ಬಿಟ್ಟು ಸಾಬೂನ- ಸೀಗೇಕಾಯಿ ಹಚ್ಚಿ ಸ್ನಾನ ಮಾಡಬೇಕು. ರಾತ್ರಿ ಹಚ್ಚಿ, ಬೆಳಗಾದ ಮೇಲೆ ಮೈ ತೊಳೆದರಂತೂ ಉತ್ತಮ. ಮೊದ ಮೊದಲು ಎಣ್ಣೆಯ ವಾಸನೆಯು ಉಗ್ರವಾಗುವದು ರೂಢಿ ಬಿದ್ದಂತೆ ಉಗ್ರವು ಹೋಗುವದು, ಮತ್ತು ವಾಸನೆಯೂ ಹಾರಿ ಹೋಗುವದು. ಇದರ ಗುಣವನ್ನು ಪ್ರತ್ಯಕ್ಷ ನೋಡಿದ್ದೇನೆ. ಆದ್ದರಿಂದ ಜನರು ಇದನ್ನು ಉಪಯೋಗಿಸಿ, ಅನುಭವ ಪಡೆಯಬೇಕೆಂದು ಸಾಹೇಬರು ಹೇಳುತ್ತಾರೆ

ಈ ಎಣ್ಣೆಯು ಗುಣಕಾರಿಯಾಗುವದು ನಿಜ ಕ್ವಿನಾಯಿನವನ್ನು ಪೂರಾ ಬಿಟ್ಟು ಉಪಯೋಗಿಸಿಲ್ಲ. ಎಣ್ಣೆಯು ಉಗ್ರವಾದರೆ, ಅದರಲ್ಲಿ ನೀಲಗಿರಿಯ ಎಣ್ಣೆಯನ್ನು ಕೂಡಿಸಬೇಕು. ಅಂದರೆ ಆ ವಾಸನೆಯು ಕ್ಷೀಣವಾಗಿ ಅಡಗುವದೆಂದು ಮದ್ರಾಸದ ಹೆಲ್ಥ ಆಫೀಸರರಾದ ಡಾಕ್ಟರ ರಾಘವೇಂದ್ರರಾಯರು ಅಭಿಪ್ರಾಯಪಟ್ಟಿರುತ್ತಾರೆ.

ನಾಗಪೂರದಲ್ಲಿ ಮುಸಲ್ಮಾನರು ಒಬ್ಬ ಬ್ರಾಹ್ಮಣನನ್ನು ಚೂರಿಯಿಂದ ಇರಿದು ಕೊಂದರು. ಹಿಂದೂ ಜನರು ಒಂದು ಮಸೀದೆಯಲ್ಲಿ ಕೊಂದ ಹಂದಿಯನ್ನು ಚಲ್ಲಿ ಕೊಲೆಯ ಮುಯ್ಯ ತೀರಿಸಿಕೊಂಡರು.

ಗೌಡನು ಪಂಚರನ್ನು ಗುಂಡು ಹಾಕಿ ಕೊಂದನು.

ನೀಲಗಿರಿಯಲ್ಲಿ ಬೆಳಗೊಡರೆಂಬವರು ಪ್ರಸಿದ್ಧ ಮನೆತನದವರು. ಇವರಿಗೂ ಇವರ ದಾಯಾದಿಗಳಿಗೂ ಪಿತ್ರಾರ್ಜಿತ ಆಸ್ತಿಯ ವಿಷಯವಾಗಿ ಜಗಳ ಬಂತು. ಪಂಚರು ಪಂಚಾಯತಿಯಿಂದ ಜಗಳ ತೀರಿಸಬೇಕೆಂದು ಕೂಡಿದರು. ಆಗ ಬೆಳೆಗೌಡನು ಇವರ ಮೇಲೆ ಗುಂಡು ಹಾಕಿದನು. ಗುಂಡಿನಿಂದ ಮೂವರು ಸತ್ತರು. ಅನೇಕರು ಗಾಯವಾದರು. ಕಡೆಯಲ್ಲಿ ಬೆಳೆಗೌಡನು ತಾನೂ ಗುಂಡು ಹಾಕಿಕೊಂಡು, ಜೀವ ಕೊಟ್ಟು ಇಹಲೋಕದ ಬಳಲಿಕೆಯನ್ನು ತಪ್ಪಿಸಿಕೊಂಡನು.

ಮಲಮಗನನ್ನು ಕೊಂದ ಮಾಂಸದ ಊಟವನ್ನು ಗಂಡನಿಗೆ ನೀಡಿದಳು.

——(೦)——

ಬಂಗಾಲದಲ್ಲಿ ಒಬ್ಬ ಮುಸಲ್ಮಾನನು ತನ್ನ ಹೆಂಡತಿಗೆ ಅಡಿಗೆ ಮಾಡಲು ಮಾಂಸ ತಂದು ಕೊಟ್ಟನು. ನಾಯಿಯು ಆ ಮಾಂಸವನ್ನು ತಿಂದಿತು. ಗಂಡನು ಸಿಟ್ಟು ಮಾಡುವನೆಂಬ ಅಂಜಿಕೆಯಿಂದ ಹೆಂಡತಿಯು ಮಲಮಗನನ್ನು ಕೊಂದು ಅದರ ಮಾಂಸದ ಅಡಿಗೆ ಮಾಡಿ ನೀಡಿದಳು. ಈ ವಾರ್ತೆ ಹೊರಬಿದ್ದ ಮೇಲೆ ಪೋಲೀಸರು ಗಂಡ ಹೆಂಡರಿಬ್ಬರನ್ನೂ ಹಿಡಿದಿದ್ದಾರೆ

ಜೀವದ ಮೇಲೆ ಬಂದದ್ದು ಬಾಲದ ಮೇಲೆ ಹೋಯಿತು.

ಮುಸಲ್ಮಾನರ ಕೋಪಕ್ಕೆ ಕಾರಣವಾದಂಥ ರಂಗೀಲ ರಸೂಲ ಪುಸ್ತಕದ ಸಂಪಾದಕರಾದ ರಾಜಪಾಲರೆಂಬವರನ್ನು ಕೊಲ್ಲಬೇಕೆಂದು ಅನೇಕ [illegible] ಹೊಂಚು ಹಾಕಿದರು. ಬೆದರಿಕೆಯ ಪತ್ರಗಳನ್ನೂ ಬರೆದರು. ಆದರೂ ಅವರ ಜೀವಕ್ಕೆ ಅಪಾಯವಾಗಿದ್ದಿಲ್ಲ. ಕಳೆದ ಸೋಮವಾರದ ದಿವಸ ಅಂಗಡಿಯಲ್ಲಿ ಒಬ್ಬ ಮುಸಲ್ಮಾನನು ಇವರನ್ನು ಚೂರಿಯಿಂದ ಕೊಲ್ಲಲೆತ್ನಿಸಿದನು. ಭಯಂಕರ ಘಾಯ ಮಾಡುವದರೊಳಗಾಗಿ, ಅವನನ್ನು ಹಿಡಿದರು. ಕೊಲೆಗಡುಕನ ಹೆಸರು ಖುದಾಬಕ್ಷನೆಂದಿರುತ್ತದೆ.

ರಶಿಯಾದ ಪೆಟ್ಟಿಗೆ ಅವಲಕ್ಷಣಗಳು-

ರಶಿಯಾ ಸರಕಾರದವರು [illegible]ಕಾದ ಮುದ್ರೆಯಲ್ಲಿ ಶೌಕತ, ಅಬ್ದುಲಕಲಾಮ ಆಜಾದ, ಹಸರತ ಮೊಹಾನಿ, ಹಕೀಮ ಅಜಮಲಖಾನ ಸಾಗೂ ಅವಲಕ್ಷಣ ಇಳಿಸಿರಾರೆ. ಆ ಸರಕಾರದವರು ಇವರ ಎಲ್ಲ ಚಟ್ಟಗಳನ್ನು ನೋಡಿಕೊಳ್ಳುವರು.

ಮಹಾನವಮಿಯ ಉತ್ಸವ.

—೦—

ಮಂಗಳವಾರ ತಾ॥ ೨೭-೯-೨೭

ಮೊದಲು ಕರ್ಣಮನೋಹರ ಹಾಗು ಭಿನ್ನ ಭಿನ್ನ ರಸಗಳಿಂದ ಯುಕ್ತವಾದಂಥ ಭಾರತವನ್ನು ಆ ಆ ರಸಗಳು ಅಲ್ಲಲ್ಲಿ ಒಡೆದು ಕಾಣುವಂತೆ ಶ್ರೀ ವೈದ್ಯ ಸುಬ್ಬಣ್ಣಾ ಇವರು ಓದಿದನಂತರ ಶ್ರೀ. ನರಗುಂದಕರ ರಾಮರಾವ ವಕೀಲ ಇವರು ಏಶಿಯಾಖಂಡದೊಳಗಿನ ನವಜೀವನವೆಂಬ ವಿಷಯವನ್ನು ಕುರಿತು ಮಾಡಿದ ಭಾಷಣದಲ್ಲಿ ಅಂದದ್ದೇನೆಂದರೆ- ಚೀನ, ತುರ್ಕ, ಜಪಾನ ಮುಂತಾದ ರಾಷ್ಟ್ರಗಳೇ ಧರ್ಮಬಂಧನಗಳೊಳಗಾಗಿ ನಾವೇ ಶ್ರೇಷ್ಠರೆಂದು ಅಂಧಕಾರದಲ್ಲಿ ಸ್ವಸ್ಥ ನಿದ್ರೆಯನ್ನು ಗೈಯುತ್ತಿರಲು ಪಾಶ್ಚಿಮಾತ್ಯ ಸಂಸ್ಕೃತಿಗಳ ಹೊಡೆತದಿಂದ ಮೊದಲು ಜಪಾನವು ಎಚ್ಚತ್ತಿತು. ಮತ್ತು ಧರ್ಮಬಂಧನಗಳನ್ನು ಕಿತ್ತೊಗೆದು ಬಹಿಷ್ಕಾರಕ್ಕೆ ಹೆದರದೆ ತರುಣ ಜಪಾನರು ಪಾಶ್ಚಿಮಾತ್ಯ ದೇಶಗಳಿಂದ ವಿದ್ಯಾ ಸಂಪಾದಿಸಿ ತಮ್ಮ ರಾಷ್ಟ್ರೋದ್ಧಾರವನ್ನು ಮಾಡಿ ಇಷ್ಟು ಪ್ರಬಲರಾದರಲ್ಲ; ರೂಸೋ ಜಪಾನ ಯುದ್ಧದಲ್ಲಿ ರಶಿಯಾ ದೇಶವು ಹಿಂಜರಿಯಿತು ಜಪಾನದಲ್ಲಿಯ ಈ ಚೈತನ್ಯದ ಕಿರಣಗಳು ತುರ್ಕಸ್ಥಾನದಲ್ಲಿ ಪರಿಣಮಿಸಿದವು. ತರುಣ ತುರ್ಕರು ಖಲಿಫಾನನ್ನು ಬದಿಗೆ ಸರಿಸಿ ತಮ್ಮ ಉದ್ಧಾರ ಮಾಡತೊಡಗಿದ್ದಾರೆ. ಸತ್ತಾನೆಯಂತೆ ಬಿದ್ದ ಚೀನವು ನವ ಚೈತನ್ಯದಿಂದ ತರುಣ ಸಿಂಹನಂತೆ ಎಚ್ಚರಾಗಿದೆ. ಈ ಪ್ರಕಾರವಾಗಿ ಇಡಿ ಏಶಿಯಾಖಂಡದಲ್ಲಿ ಚೇತರಿಸ ನವಜೀವನದ ಕುರುಹು ಈ ಮಹಾನವಮಿ ಉತ್ಸವದಿಂದ ಈ ಕರ್ನಾಟಕದಲ್ಲಿ ಉಂಟಾಗಿದೆ. ಆಭಾರ ಮನ್ನಣೆಯಾಗಿ ಸಭೆಯು ಮುಗಿಯಿತು.

ಬುಧವಾರ ತಾ॥ ೨೮-೯-೨೭

ಮೊದಲು ಮೇಳದ ಪದ್ಯ, ದೇವಿಯ ಸ್ತೋತ್ರ ಮತ್ತು ಶ್ರೀಮತಿ ಭಾಗೀರಥಿಬಾಯಿ ಪುಣೇಕರ ಹಾಗು ಶ್ರೀ. ಸುಬ್ಬಣ್ಣಾ ಅಧ್ವರ್ಯ ಇವರು ಮನಸ್ಸಿಗೆ ಆಹ್ಲಾದವಾಗುವಂತೆ ದಾಸರ ಪದಗಳನ್ನು ಅಂದನಂತರ ಶ್ರೀ ಮಧ್ವಾಚಾರ್ಯ ಕಟ್ಟಿ ಇವರು ದಾಸಕೂಟ ಮಾರ್ಗವೆಂಬ ವಿಷಯವನ್ನು ಕುರಿತು ಮಾಡಿದ ಭಾಷಣದ ಸಾರಾಂಶವೇನೆಂದರೆ ಪರಮೇಶ್ವರನು ತಾನು ಮಾಡಿಸುವನೆಂಬ ಭಾವನೆಯಿಂದ ಅಹಂಕಾರ ಬಿಟ್ಟು ಪರಮೇಶ್ವರನಿಗೆ ಅರ್ಪಣ ಮಾಡುವವನೇ ದಾಸನು. ಸ್ವಾರ್ಥಕ್ಕಾಗಿ ಅಪೇಕ್ಷೆಯಿಂದ ಪರರ ಸೇವೆಯನ್ನು ಮಾಡುವವನು ದಾಸನು. ದಾಸಕೂಟದ ಪದಗಳಲ್ಲಿ ಕಂಡುಬರುವ ವೈಶಿಷ್ಟ್ಯವೆಂದರೆ ದಾಸನೆಂಬ ಭಾವನೆಯಿಂದ ನಾಮಸ್ಮರಣೆಯನ್ನು ಮಾಡುವದು. ಗುರುವಿನಲ್ಲಿ ಅಚಲ ಶ್ರದ್ಧೆಯನ್ನಿಟ್ಟು ಈಶ್ವರಿ ಪ್ರತಿಜ್ಞೆಯನ್ನು (ಗಾಡಕಾನ್‌ಶಸ್‌ನೆಸ್) ಅದರ ಅನುಗ್ರಹದಿಂದ ಪಡೆಯುವದು. ಮತ್ತು ಪೃಥ್ವಿಯಂತೆ ಸಹನಶೀಲತೆ ಮುಂತಾದ ಪಂಚ ಮಹಾಭೂತಗಳ ಸದ್ಗುಣಗಳನ್ನು ಆಚರಣೆಯಲ್ಲಿ ತರಲು ಯತ್ನಿಸುವದು ಇತ್ಯಾದಿ ತತ್ವಗಳ ಪ್ರತಿಪಾದನವೆ ಸರಿ. ನೀವು ಮಹಾದೇವಿಯ ಉತ್ಸವವನ್ನು ಮಾಡುತ್ತಿರುವಿರಿ. ಆ ಭುವನೇಶ್ವರಿಯನ್ನು ಬೇಡಿಕೊಂಡರೆ ಈ ಎಲ್ಲ ಗುಣಗಳನ್ನು ಕೊಡುವಳು. ಆಮೇಲೆ ಶ್ರೀ ಗುತ್ತಲ ವಕೀಲರು ಒಳ್ಳೇ ಭಕ್ತಿಪರ ಹಾಗು ಬೋಧಪ್ರದ ದಾಸರ ಪದಗಳನ್ನು ಅಂದರು. ಆಭಾರ ಮನ್ನಣೆಯಾದನಂತರ ಸಭೆಯು ಮುಗಿಯಿತು.

ವಿವಿಧ ವರ್ತಮಾನಗಳು

—೦—

ರಂಗಿಲ ರಸೂಲದ ಶ್ರೀ. ರಾಜಪಾಲರು ಕೋರ್ಟು ದಾಟಿದ್ದಕ್ಕೆ ಅವರ ಅಭಿನಂದನ ಮಾಡಿ, ಮುಸಲಮಾನ ಖುದಾಬಕ್ಷನ ಕೃತ್ಯ ನಿಷೇಧಿಸುವದಕ್ಕಾಗಿ ಆದಿತ್ಯವಾರದ ದಿವಸ ಲಾಹೋರಿನ ಹಿಂದೂ ಜನರು ಹರತಾಳ ಮಾಡಿ ಎಲ್ಲ ವ್ಯವಹಾರವನ್ನು ಬಂದಿಡುವರು.

ಅಹಮದಾಬಾದ ಮ್ಯುನಿಸಿಪಾಲಿಟಿಯವರು ರಿಲೀಫ ಕೆಲಸಕ್ಕಾಗಿ ಸ್ವತಃ ಗಡ್ಡ ಮಾಡಿಸಿ ಮೂಲ ಬೆಲೆಗೆ ಕೊಡುವರು. ಮತ್ತು ಒಂದು ಕೋಟಿ ಇಟ್ಟಿಂಗೆಗಳನ್ನು ಮಾಡಿಸುವರು.

ಕಾಬೂಲದ ಅಮೀರ ಸಾಹೇಬರು ಡಿಶಂಬರದಲ್ಲಿ ವಿಲಾಯತಿಯ ಪ್ರವಾಸಕ್ಕೆ ಹೊರಡುವರು. ಲಂಡನ ಮೊದಲು ಮಾಡಿಕೊಂಡು ಅನೇಕ ದೇಶಗಳ ರಾಜಧಾನಿಗಳನ್ನು ನೋಡುವರು.

ಕೋಚೀನದ ಮಹಾರಾಜರು ಮಹಾತ್ಮರಿಗೆ ತಮ್ಮೂರಿಗೆ ಆಗಮಿಸಬೇಕೆಂದು ಆಮಂತ್ರಣ ಕೊಟ್ಟಿದ್ದಾರೆ.

ಬೆಳಗಾವಿಯಲ್ಲಿ ಆಗಷ್ಟ ತಿಂಗಳಲ್ಲಿ ೨೩ ಜನರಿಗೆ ಪ್ಲೇಗ ಬಂದು, ೨೦ ಜನರು ಸತ್ತರು. ಸದ್ಯದ ತಿಂಗಳಲ್ಲಿ ಮೂರೇ ವಾರಗಳಲ್ಲಿ ೫೩ ಜನರಿಗೆ ಬೇನೆ ಬಂದು, ೩೪ ಜನರು ಸತ್ತರು. ಈಗಾಗಲೆ ೫ ಸಾವಿರ ಜನರು ವ್ಯಾಕ್ಸೀನ ಚುಚ್ಚಿಸಿಕೊಂಡಿದ್ದಾರೆ.

ಧಾರವಾಡ-

ಇಲ್ಲಿ ಕೂಡುವ ಮಾಧ್ಯಮಿಕ ಶಾಲೆಗಳ ಶಿಕ್ಷಕರ ಸಮ್ಮೇಲನವು ಅಕ್ಟೋಬರ ತಿಂಗಳ ೧೭ ನೆಯ ತಾರೀಖಿನಿಂದ ಪ್ರಾರಂಭವಾಗುವದು. ಮೈಸೂರಿನ ಪ್ರೊಫೇಸರ ಎಸ್. ಸುಬ್ಬರಾಯರು ಅಧ್ಯಕ್ಷರಾಗುವರು.

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಪಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ದರ ಕಾವಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೀತಿ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂ ಗಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

೨ನೇ ಶತಮಾನದ ಗೊಂದಲ	೬ ಆಣೆ.
ವಿಚಿತ್ರ ಸಂಶಯ	೫ ,,
ಗೀತಬಂಧು ದಾಸರ ಚರಿತ್ರೆ	೨ ,,
ದೇವಸ್ವತ್ವದ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ

ಧಾರವಾಡ

ಈ ಪತ್ರವನ್ನು ಪಬ್ಲಿಶರ [illegible] ಯರ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ [illegible]ದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ ಧಾರವಾಡ ಶುಕ್ರವಾರ ತಾರೀಖು ೩೦ ನೇ ಸಪ್ಟಂಬರ ೧೯೨೭ ಸಂಚಿಕೆ ೨೧೧

ಹಂಗಾಮುವು ಮುಗಿಯ ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಶೇಂಗಾ ಯಂತ್ರಗಳು

G. K.



ಚನ್ನಾಗಿ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ [illegible] ಯಂತ್ರವು [illegible] ನಡೆಯುವದಲ್ಲದೆ [illegible] ಪ್ರಮಾಣವು [illegible] ಇರುತ್ತದೆ. ಇದರಿಂದ [illegible] ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಪೆಟ್ಟಿನ ಸಂಗತಿ ಬಗ್ಗೆ ಇಂದೇ ಕೇಳಿಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಡಿಪಾರ್ಟಮೆಂಟಿನಿಂದ ಮಂಜೂರಾದ

ಕನ್ನಡ ನಿಬಂಧರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮತ್ತು ಪ್ರಕರಣಗಳ ವಿಷಯಗಳು ಬರೆಯಲ್ಪಟ್ಟಿದ್ದಲ್ಲದೆ [illegible] ಕನ್ನಡ [illegible] ಪರೀಕ್ಷೆಯ [illegible] ಬಹಳೇ ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ:— ೧ ರಾ ರಾ. ಬಿ ಜಿ ದಿವೇಕರ, [illegible] ಧಾರವಾಡ

೨ ರಾ. ರಾ. ಎ. ಆರ್. [illegible] ಹುಬ್ಬಳ್ಳಿ

WANTED·

Wanted Candidates for Telegraph and Station Master's Courses. Railway Fare GRANTED Board-ing Seat FREE. Prospectus on 2 annas stamp,– Presidency Telegaph College, Royapettah Madras.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು [illegible] ತಿಂಗಳ ಮುದ್ದತಿ [illegible] ಠೇವಣಿ [illegible] ಮು ತಿಳಿದುಕೊಳ್ಳಬೇಕು.

ಈ ಬ್ಯಾಂಕಿನಲ್ಲಿ [illegible] ತಿಂಗಳಿಗೆ [illegible]

[illegible] ಶೆಟ್ಟಿ

ಮ್ಯಾನೇಜಿಂಗ ಡೈರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯು [illegible] ಮಾಡಲ್ಪಟ್ಟಿದೆ.

[illegible] ಬ್ಯಾಂಕಿನ [illegible]

[illegible]

[illegible]

ಮ್ಯಾನೇಜಿಂಗ ಡೈರೆಕ್ಟರ

ವಿಜಯ.

ಧಾರವಾಡ ತಾ- ೨೦-೯-೨೮ ನೇ ಇಸ್ವಿ

ಹಾರಿಯ ಮದ್ದು ಹಾರಿಸಬಾರದೆಂಬ ಹುಕುಮು.

ಹುಕುಮಿನ ಅಪ್ರಯೋಜಕತನವು.

—o—

ಮೂರು ತಿಂಗಳಾಯಿತು. ಊರೊಳಗೆ ಹಾರಿಯ ಮದ್ದಿನ ಸಪ್ಪಳವೇ ಕೇಳಿಸುವದಿಲ್ಲ. ಅಂಗಡಿಕಾರರನ್ನು ಕೇಳಿದರೆ- ಸರಕಾರದವರು ಬಂದು ಮಾಡಿದ್ದಾರೆಂದು ಹೇಳುತ್ತಾರೆ. ಕಾರಣ ಕೇಳಿದರೆ- ಗೊತ್ತಿಲ್ಲೆಂದು ಕೆಲವರೂ, ಜನರಿಗೆ ತ್ರಾಸವಾಗುತ್ತದೆಂದು ಕೆಲವರೂ ಹೇಳುತ್ತಾರೆ.

ಮೃತರ ಮೆರವಣಿಗೆ, ದಸರೆಯಲ್ಲಿ ಕುದುರೆ, ಮತ್ತು ದೀವಳಿಗೆಯಲ್ಲಿ ಒನದ ಮೆರವಣಿಗೆಯಲ್ಲಿ ಈ ಮದ್ದನ್ನು ಬಹುವಾಗಿ ಉಪಯೋಗಿಸುವರು

ಮೋಜಿಗಿಂತ ಇದರ ಉಪಯೋಗವು ರೈತರಿಗೆ ಬಹಳವುಂಟು. ಹೊಲಗಳಲ್ಲಿ ಬೆಳೆ ನಿಂತ ಮೂರು ತಿಂಗಳಲ್ಲಿ ಈ ಮದ್ದು ಅವರಿಗೆ ತೋಫು ತುಬಾಕಿಯಷ್ಟು ಉಪಯೋಗವುಳ್ಳದ್ದಾಗುತ್ತದೆ. ರಾತ್ರಿಯಲ್ಲಿ ಇದನ್ನು ಫಡಲ್ ಫಡಲ್ ಎಂದು ಹಾರಿಸುತ್ತಿದ್ದರೆ ಮೃಗಗಳೂ ಚಿಗರೆಗಳೂ ಹೊಲದ ಹತ್ತರವೇ ಬರುವದಿಲ್ಲ. ಈ ವರ್ಷ ಮದ್ದೇ ಇಲ್ಲದ್ದರಿಂದ ಅಪಕ್ಕೆ ನಿರ್ಭಯವಾಗಿರುತ್ತದೆ.

ಬೇವಲದಲ್ಲಿ ಚಿಗರೆಯ ಕಾಟವು ಅಷ್ಟಿಷ್ಟು ಆಗಿಲ್ಲ. ಇವು ಮೊಗಲಾಯಿಯಿಂದ ಬರುವವು. ಕರೂಡಗೇರಿಯ ಸುಂಕ ಕೊಡುವ ಹೆದರಿಕೆಯೋ ಇಲ್ಲ. ಕರೂಡಗೇರಿಯ ಮುಂದೇ ತಂಡತಂಡವಾಗಿ ಹಾದು, ಇಂಗ್ರೇಜಿ ಹದ್ದಿನಲ್ಲಿ ಬರುವವು.

ಚಿಗರಿ ಬೇಟೆಗಾರರು ಇವನ್ನು ತಮ್ಮ ಶಕ್ತಿ ಮೀರಿ ಧ್ವಂಸ ಮಾಡುವರು. ಇಂಗ್ರೇಜಿ ಸರಕಾರದವರು ಇವರನ್ನು ಹಿಡಿದು, ಸೆಟಲ್ಮೆಂಟಿನಲ್ಲಿ ಹಾಕಿದ್ದರಿಂದ, ಇವಕ್ಕೆ ವೈರಿಯೇ ಇಲ್ಲದಂತಾಗಿರುತ್ತದೆ. ಒಂದು ಹೊಲ ಹೊಕ್ಕರಾಯಿತು. ಅದರ ನಿರ್ನಾಶವೇ ಆಗುತ್ತದೆ.

ಬೇವಲದಂತೆ ಮಲ್ಲಾಡದಲ್ಲಿ ಹಂದಿಯ ಕಾಟವು. ಇವುಗಳ ನಾಶ ಮಾಡಬೇಕೆಂದು ಸರಕಾರದವರು ೩೦-೪೦ ವರ್ಷಗಳಿಂದ ಅನ್ನುತ್ತಾ, ಹಂಚಿಕೆ ಹಾಕುತ್ತಾ ಇದ್ದಾರೆ. ಆದರೆ ಇವು ಸರಕಾರದ ಮೇಲೆ ಜಯ ದೊರಕಿಸಿ, ಮೋರೆ ಮೇಲೆ ಮಾಡಿಕೊಂಡು, ದಾಳಿಗಾರರಂತೆ ಹಾವಳಿ ಮಾಡುತ್ತವೆ.

ಮಳೆ ಇಲ್ಲದೆ ಮುಂಗಾರಿ ಹೋಯಿತು. ಮೃಗ ಮತ್ತು ಚಿಗರಿಯಿಂದ ಹಿಂಗಾರಿ ಹೋಗುವದೆಂದು ರೈತರು ದುಃಖಿಸುತ್ತಿದ್ದಾರೆ. ಬೆಳೆಯು ಇಲ್ಲದ ಬಳಿಕ ಸರಕಾರದ ಹಪ್ತೆಯನ್ನು ಹೇಗೆ ಕೊಡುವದು ಮತ್ತು ಜೀವನ ಮಾಡುವದೆಂದು ಯೋಗ್ಯ ಪ್ರಶ್ನ ಮಾಡುತ್ತಾರೆ

ಬೆಳೆಯ ರಕ್ಷಣೆಗಾಗಿ ಬಂದೂಕಿನ ಪಾಸು ದೊರೆಯುವದು ಎಲ್ಲರಿಗೂ ಸಹಜವಲ್ಲ. ಹಾರಿಯ ಮದ್ದು ಸಹಜವಾಗಿ ಸುಲಭ ಸಾಧ್ಯವಾದದ್ದು. ಇದಕ್ಕೋಸ್ಕರ ಬಂದು ಮಾಡಿದರಿ ಪುನಃ ಮಾರಲಿಕ್ಕೆ ಪರವಾನಿಗಿ ಕೊಡಿರೆಂದು ಅನೇಕ ರೈತರು ಧಾರವಾಡದ ಕಲೆಕ್ಟರಸಾಹೇಬರಿಗೆ ಅರ್ಜಿಯನ್ನು ಮಾಡಿದ್ದಾರೆ.

ರೈತರು ಸುಖವಾಗಿ ಬಾಳುವವರಾಗಬೇಕು, ಸರಕಾರದ ಹಪ್ತೆಯು ಸುರಳಿತವಾಗಿ ವಸೂಲಾಗಬೇಕು, ರಿಲೀಫ ಕಾಮುಗಾರಿಗಳನ್ನು ಪ್ರಾರಂಭಿಸುವ ಪ್ರಾರಬ್ಧಯೋಗ ಬರಬಾರದೆಂದು ಸಾಹೇಬರ ಮನಸ್ಸಿನಲ್ಲಿದ್ದರೆ- ನಿರುಪದ್ರವಿ ತಥಾಪಿ ರೈತರಿಗೆ ಮಹೋಪಕಾರಿಯಾಗಿರುವಂಥ ಹಾರಿಯ ಮದ್ದನ್ನು ಮಾರಲಿಕ್ಕೆ ಪುನಃ ಹುಕುಮು ಕೊಡಬೇಕು. ಇಲ್ಲವಾದರೆ- ರೈತರ ಅವಸ್ಥೆಯು ದೇವರು ಕೊಟ್ಟದ್ದನ್ನು ಅಳಿಸರು ಕಚ್ಚಿಕೊಂಡು ಹೋದರೆನ್ನುವಂತಾಗುತ್ತದೆ.

ಸುರತದ ರೈತರ ಸತ್ಯಾಗ್ರಹ.

ಹೆಚ್ಚಿನ ಹಪ್ತೆ ಕೊಡಬಾರದೆಂಬ ಠರಾವು.

ಅಭಿನಂದನ

ಮುಂಬಯಿ ಸರಕಾರದವರು ಧಾರವಾಡ ಜಿಲ್ಲೆಯ ಕರೀ ಭೂಮಿಯ ಮೇಲೆ ನೂರಕ್ಕೆ ೫೨ರಂತೆ ಹಪ್ತೆಯನ್ನು ಹೆಚ್ಚಿಸಿದ ವರ್ತಮಾನವನ್ನು ಈ ಮೊದಲು ಬರೆದಿರುತ್ತೇವೆ. ಧಾರವಾಡದಂತೆ ಸುರತ ಜಿಲ್ಲೆಯಲ್ಲಿರುವ ಚವರಾಸಿ ಎಂಬ ತಾಲೂಕಿನಲ್ಲಿಯೂ ಹಪ್ತೆಯನ್ನು ಹೆಚ್ಚಿಸಿದ್ದಾರೆ ಈ ತಾಲೂಕಿನ ಹಪ್ತೆಯು ಈ ಮೊದಲೇ ಆಜೂಬಾಜೂ ಯಾವದೊಂದು ತಾಲೂಕಿಗಿಂತ ಹೆಚ್ಚಾಗಿರುತ್ತದೆ. ಆದ್ದರಿಂದ ಈ ನಂತರ ಹೆಚ್ಚಿಸುವ ಹಪ್ತೆಯನ್ನು ಕೊಡುವದು ತಮ್ಮ ಶಕ್ತಿಯ ಹೊರಗೆ ಇರುತ್ತದೆಂದು ಸರಕಾರಕ್ಕೆ ತಿಳಿಸುವದಕ್ಕಾಗಿಯೂ ಸರಕಾರವು ಹಟ ಹಿಡಿದರೆ ಸತ್ಯಾಗ್ರಹ ಮಾಡಿ, ಹಪ್ತೆ ಕೊಡಬಾರದೆಂದು ಠರಾವು ಮಾಡುವದಕ್ಕೂ ರೈತರ ಸಭೆಯಾಯಿತು. ಕಾಂಗ್ರೆಸ ಕಮಿಟಿಯವರೂ, ಆ ಜಿಲ್ಲೆಯ ಕೌನ್ಸಿಲದ ಉಮೇದವಾರ ಮೆಂಬರರಾದ ಮೆಸರ್ಸ ಶಿವದಾಸಿನಿ ಮತ್ತು ರಾ. ಬ. ಭೀಮಭಾಯಿ ನಾಯಿಕರೂ ಸಭೆಯಲ್ಲಿ ಮುಖ್ಯ ಪಾರ್ಟ ತಕ್ಕೊಂಡಿದ್ದರು.

ಧಾರವಾಡ ಜಿಲ್ಲೆಯಲ್ಲಿಯೂ ಇಬ್ಬರು ಮೆಂಬರರಿದ್ದಾರೆ. ಕಾಂಗ್ರೆಸದ ಪತಿಯಿಂದ ಶ್ರೀ. ಜೋಗರವರಿದ್ದಾರೆ. ರಾ. ಬ. ಭೀಮಭಾಯಿಯವರಂತೆ ರಾ. ಬ. ಕಂಬಳಿಯವರಿದ್ದಾರೆ. ತಾವು ಸರಕಾರದ ಪದವಿಧರರೆಂದು ಈ ಚಳವಳಿಯಿಂದ ಬಾಗಿಯಾಗಲಿಕ್ಕೆ ಬರದಂತೆ ರಾ ಬ. ಭೀಮಭಾಯಿಯವರು ಪ್ರತ್ಯಕ್ಷ ಕೃತಿಯಿಂದ ಉದಾಹರಣೆ ಹಾಕಿಕೊಟ್ಟಿದ್ದಾರೆ. ಆದುದರಿಂದ ರಾ. ಬ. ಕಂಬಳಿಯವರು ಶ್ರೀ ಜೋಗ, ಕಾಂಗ್ರೆಸ ಕಮಿಟಿ ಮತ್ತು ಅಲ್ಲಲ್ಲಿ ಸ್ಥಾಪಿಸಲ್ಪಟ್ಟ ವೀರಶೈವ ತರುಣ ಸಂಘಗಳಿಗೆ ಹುರುಪುಗೊಟ್ಟು, ಹಪ್ತೆಯ ವಿಷಯವಾಗಿ ರೈತರ ಮೇಲೆ ಒಂದ ಗಂಡಾಂತರವನ್ನು ದೂರ ಮಾಡಲುದ್ಯುಕ್ತರಾಗಿಸುವರೆಂದು ಪೂರಾ ನಂಬಿರುತ್ತೇವೆ. ಇದು ರಾ. ಬ. ಕಂಬಳಿಯವರ ರೈತರ ಹಿತ ಬುದ್ಧಿಯ ಪರೀಕ್ಷೆಯ ಕಾಲವೇ ಆಗಿರುತ್ತದೆ ಏಕಂದರೆ- ರೈತರ ಹಿತವೆಂದರೆ- ಬ್ರಾಹ್ಮಣೇತರರ ಹಿತವೇ ಆಗುತ್ತದೆ.

ಹೊಗೆಬಂಡಿ ಹೊಳೆಯಲ್ಲಿ ಬಿತ್ತು.

—o—

ದೊಡ್ಡ ದೊಡ್ಡ ಕಾಮದಾರರು ಮುಣಗಿದರು.

—o—

ಇಂಗ್ಲಂಡ, ಇಟಲಿ ಮತ್ತು ಆಸ್ಟ್ರಿಯಾ ದೇಶಗಳಲ್ಲಿ ಗುಜರಾಥ, ಸಿಂಧದಂತೆ ಮಳೆರಾಜನು ಪ್ರಳಯ ಮಾಡಿದ್ದಾನೆ. ಲಂಡನದಲ್ಲಿ ಹರಿಯುವ ಥೇಮ್ಸ ನದಿಗೆ ಮಹಾಪೂರ ಬಂದು, ಅನೇಕ ಬಂಗಲೆಗಳಲ್ಲಿ ವಿಪರೀತ ನೀರು ಹೊಕ್ಕು, ದಾರಿಯು ಕಟ್ಟಾಗಿರುತ್ತದೆ.

ಇಂಗ್ಲಂಡಕ್ಕಿಂತ ಹೆಚ್ಚು ಹಾನಿಯು ಆಸ್ಟ್ರಿಯಾದಲ್ಲಾಗಿದೆ. ಹೊಳೆಗಳಿಗೆ ಬಂದ ನೆರೆಯ ಸೆಳವಿನಿಂದ ಅನೇಕ ಸೇತುವೆಗಳು ಕಡಕೊಂಡು ಬಿದ್ದವೆ. ಪಶುಲಯದ ಕೂಡ ಜನಲಯವೂ ಆಗಿದೆ.

ಇದೇ ದುರವಸ್ಥೆಯು ಇಟಲಿಯಲ್ಲಿಯೂ ಆಗಿದೆ. ನೆರೆಯಲ್ಲಿ ಸಿಕ್ಕ ಜನರ ಸಹಾಯಕ್ಕಾಗಿ ಕಾಮದಾರರು ಉಗಿಬಂಡಿಯಲ್ಲಿ ಕೂತು ಹೋಗುತ್ತಿದ್ದಾಗ, ಆ ಉಗಿಬಂಡಿಯು ಒಂದು ನದಿಯ ಪೂಲಿನಿಂದ ಕುಸಿದು ಜಲಸಮಾಧಿ ಹೊಂದಿತು. ಒಂಭತ್ತು ಜನ ಕಾಮದಾರರೂ ಬೇರೆ ಆಳುಗಳೂ ಜಲ ಸಮಾಧಿ ಹೊಂದಿದರು.

ಸ್ವಿಟ್ಝರ್ಲಂಡದಲ್ಲಾದ ಹಾನಿಯು ಎಲ್ಲ

ಕಷ್ಟ ಹೆಚ್ಚಿನದು. ಕಂತಾನ ಗ್ರಿಕಸ್ಸನೆಂಬ ಜಿಲ್ಲೆಯು ಒಡೆಯಡೆಯಂತೆ ಹಾನಿ ಹೊಂದಿದೆ. ಬ್ರಿಗಾಗ್ಲಿಯಾ ಎಂಬ ಜಿಲ್ಲೆಯಲ್ಲಿರುವ ಎಲ್ಲ ಪೂಲುಗಳೂ ಬಿದ್ದು ಹೋದವು. ಟಾವನಸಾ ಎಂಬ ಹೊಳೆಯ ಮೇಲಿನ ಪೂಲು ಬಿದ್ದ ಪ್ರವಾಹ ನೋಡುತ್ತಾ ನಿಂತಿದ್ದ ಒಂಭತ್ತು ಜನರು ಹೊಳೆಯ ಗುಂಟ ಹೋದರು. ಹೆಣಗಳು ಸಹ ಕೈಗೆ ಹತ್ತಲಿಲ್ಲ.

ಸ್ಫುಟ ವಿಷಯಗಳು.

——(೦)——

ವಿಲಾಯತಿಯಿಂದ ಮುಂಬಯಿಗೆ ಬಂದಿದ್ದ ಮಿ. ಸ್ಪ್ರಾಟಸಾಹೇಬರನ್ನು ಸರಕಾರದವರು ರಾಜದ್ರೋಹದ ಆರೋಪದಿಂದ ದಸ್ತಗಿರ ಮಾಡಿದ ಸಂಗತಿಯನ್ನು ಈ ಮುಂಚೆ ಬರೆದಿದ್ದೇವೆ. ಈ ಸಾಹೇಬರ ಕೂಡ ಅ್ಯಡವೋಕೇಟ ಮುದ್ರಾಲಯದ ಪ್ರಿಂಟರ ಮಿ. ಚಿತಳೆ ಮತ್ತು ಇವರು ಬರೆದ ಪುಸ್ತಕದ ಮಾರಾಟಗಾರರಾಗಿದ್ದ ಮಿ. ಮಿರಜಕರರೆಂಬವರನ್ನೂ ಇದೇ ಆರೋಪದಿಂದ ಹಿಡಿದಿದ್ದಾರೆ. ಈ ಮೂವರ ವಿಚಾರಣೆಯೂ ಅಲ್ಲಿಯ ಹಾಯಕೋರ್ಟಿನ ಸೆಶನದಲ್ಲಾಗುವದು. ಬ್ಯಾರಿಸ್ಟರ ಜಿನ್ನಾಸಾಹೇಬರು ಇವರ ಪತಿಯಿಂದ ಕೆಲಸ ನಡಿಸುವರು. ಸ್ಪ್ರಾಟಸಾಹೇಬರು ಧನಹೀನರು. ಕೂಲಿಕಾರರ ಉತ್ಕರ್ಷಕ್ಕಾಗಿ ಈ ದೇಶಕ್ಕೆ ಬಂದವರು. ಇವರ ಮೇಲೆ ಬ್ರಿಟಿಶ ಸರಕಾರವನ್ನು ಬುಡಮೇಲು ಮಾಡುವ ಆರೋಪ ಬಂದಿದೆ. ಇವರ ಸಹಾಯಕ್ಕಾಗಿ ಮುಂಬಯಿಯಲ್ಲಿ ಪೈಸಾಫಂಡಿನಂತೆ ಮನೆ ಮನೆಗೆ ಫಂಡು ಕೂಡಿಸುತ್ತಿದ್ದಾರೆ.

ಹಿಂದೂ ಮುಸಲಮಾನರ ಜಗಳವನ್ನು ಸೊಂದಿಸಬೇಕೆಂದು ದೊಡ್ಡ ದೊಡ್ಡವರೆಂಬವರು ಮಾಡುತ್ತಿರುವ ಪ್ರಯತ್ನಕ್ಕೆ ಯಶ ಬರುವದೊಂದೆಡೆಯಲ್ಲಿರಲಿ; ಹೊಸ ಹೊಸ ವಿಘ್ನಗಳೂ ಬರುತ್ತಿರುವವು. ಹಿಂದೂ ಜನರು ಗೋಹತ್ಯವನ್ನು ಸಮ್ಮತಿಸಿದರೆ ಮುಸಲಮಾನರು ಮಸೀದಿಗಳ ಮುಂದೆ ವಾದ್ಯ ಬಾರಿಸಲು ಸಮ್ಮತಿಕೊಡಬಹುದೆಂದು ಅನ್ನಲಾರಂಭಿಸಿದ್ದಾರೆ. ವಾದ್ಯಕ್ಕಿಂತ ಜೀವ ಹಾನಿಯ ಪ್ರಶ್ನವು ಘನತರವಾದದ್ದು. ಕಡುತರವಾದದ್ದು. ಮಸೀದಿಗಳ ಮುಂದೆ ವಾದ್ಯ ಬಾರಿಸುವ ಸಲುವಾಗಿಯು ದೆಸೆಯಿಂದ ಹಿಂದೂ ಜನರು ಎಂದೂ ಗೋಮಾತೆಯ ವಧಮಾಡಿಸುವ ಪಾಪ ಕಟ್ಟಿಕೊಳ್ಳರು. ಮುಸಲಮಾನರು ಗೋವಧ ನಿಲ್ಲಿಸುವದಾದರೆ ಮಸೀದಿಗಳ ಮುಂದೆ ವಾದ್ಯ ನಿಲ್ಲಿಸುವದಕ್ಕೆ ಸಮ್ಮತಿಸಬಹುದು.

ಗುಜರಾಥದಲ್ಲಾದ ನೆರೆ ಹಾವಳಿಯ ಕ್ಷೇತ್ರವನ್ನು ಸ್ವತಃ ಗವ್ಹರ್ನರಸಾಹೇಬರು ನೋಡಿ ಬಂದರು. ಮಂತ್ರಿತ್ರಯರು ನೋಡಿ ಬಂದರು. ಆದರೆ ಅವರಿಂದ ರೈತರ ಕಷ್ಟನಷ್ಟಗಳು ದೂರಾಗುವ ಆಶೆಯು ತೋರಲೊಲ್ಲದು. ಹತ್ತಿಯ ಮಾಫಿಯನ್ನು ಕೊಡಬೇಕೆಂದು ರೈತರು ನಾಮದಾರ ಗವ್ಹರ್ನರಸಾಹೇಬರಿಗೆ ವಿನಂತಿ ಮಾಡಿಕೊಂಡರು. ಸಾಹೇಬರು ರೈತರು ಸಮಾಧಾನಪಡುವಂಥ ಉತ್ತರ ಕೊಟ್ಟಿಲ್ಲ. ಪ್ರೈನರಾಗಿದ್ದಾರೆ. ರಿಲೀಫ ಫಂಡು ಹನ್ನೆರಡು ಲಕ್ಷವಾಗಿದೆ. ಇದು ರಾವಣನ ಹೊಟ್ಟೆಗೆ ಕಾಸಿನ ಕುಂಡಿಯಂತಾಗಿರುವದು. ಕೋಟಿ ರೂಪಾಯಿಯಾದರೂ ಸಾಲದು. ಸಕ್ಕರದ ಕಾಲಿವೆಯ ಹಾಗು ಮುಂಬಯಿಯ ಬ್ಯಾಕಬೇ ದೆಸೆಯಿಂದ ಸರಕಾರವು ಕೋಟಿ ಸ್ವಚ್ಛೆಯಿಂದ ದ್ರವ್ಯವನ್ನು ಸಾರಿ ಮಾಡುತ್ತಿರುವದು. ಅದನ್ನೆಲ್ಲ ಗುಜರಾಥದ ಪುನರ್ಘಟನೆಗೆ ವಿನಿಯೋಗಿಸಬೇಕೆಂದು ಪುಣೆಯಲ್ಲಿ ಕೂಡುವ ಕೌನ್ಸಿಲದಲ್ಲಿ ಠರಾವಿನ ಮೇಲೆ ಠರಾವು ಬರಕ್ಕವಿವೆ.

ಅಗ್ನಿಕುಮಾರ ಸೇನನೆಂಬ ಹೆಸರಿನ ಬಂಗಾಲಿ ಗೃಹಸ್ಥನು ೬೦ ವರ್ಷದ ಮುದುಕನು. ಆದರೂ ಈಸುವದರಲ್ಲಿ ಈತನು ಹುರುಪು ಮತ್ತು ಗಟ್ಟಿಗತನವು ಎಣೆಯಿಲ್ಲದಂಥಾದ್ದು. ಇಂಗ್ಲಿಷ ಚ್ಯಾನಲ ಸಮುದ್ರವನ್ನು ದೇಶ ವಿದೇಶಿಯರು ಈಸಿ, ಬಹಾದ್ದೂರಿ ಪಡೆಯುವರು. ಹದಿನೇಳು ಮೈಲು ಅಗಲವಾದ ಈ ಸಮುದ್ರದಲ್ಲಿ ಈಸಿ, ಕಾನಡ ಭಲಿರೆ, ಭಲಿರೆ ಎಂದೆನಿಸಿಕೊಳ್ಳಬೇಕೆಂದು ಸೇನನು ಹುರುಪುಗೊಂಡಿದ್ದಾನೆ. ಅದರ ಪೂರ್ವ ಪ್ರಯೋಗದ ತಾಲೀಮನ್ನು ಕಲಕತ್ತೆಯಲ್ಲಿ ಭಾಗೀರಥಿ ಹೊಳೆಯಲ್ಲಿ ಮಾಡಿ ನೋಡಿದನು. ಸೋಮವಾರ ಪ್ರಾತಃಕಾಲದಲ್ಲಿ ಹೊಳೆಯಲ್ಲಿ ಬಿದ್ದವನು ಅಂದು ರಾತ್ರಿ ಎಂಟರ ತನಕವೆಂದರೆ ೧೪ ತಾಸಿನ ತನಕ ಸತತವಾಗಿ ದಣಿಯದೆ ಈಸಿದನು. ಒಂದು ದಂಡೆಯಿಂದ ಮತ್ತೊಂದು ದಂಡೆಗೆ ತಿರುವು ಮುರುವು ೨೦೨ ಸಾರೆ ಬಂದು ಹೋದನು. ಇದರ ಉದ್ದಳತೆಯು ಹನ್ನೊಂದು ಮೈಲು ೧೬೦ ಯಾರ್ಡ ಆಯಿತು. ಹಿರೇ ಹೊಳೆಯು ತುಂಬಿದಾಗ ಈಸಿದೆ. ಒಂಟಿಗೆ ಗಯ್ಯಿಂದ ಈಸಿದೆಂದು ಹೆಮ್ಮೆ ಪಡುವಂಥವರು ಸೇನನ ಸಾಹಸ ಕಂಡು ಕೌತುಕ ಪಡಬಲ್ಲರು.

ಪುಣೆಯಲ್ಲಿ ಕೂಡಿದ್ದ ಇನಾಮದಾರರ ಸಭೆಯ ಅಧ್ಯಕ್ಷರಾಗಿದ್ದ ಶ್ರೀ. ಇಚಲಕರಂಜಿಯ ಯಜಮಾನರು ಸಂಸ್ಥಾನಿಕರು ತಮ್ಮ ಸಂಸ್ಕೃತಿಯನ್ನು ಹೇಗೆ ಬೆಳಸಬೇಕು. ಮತ್ತು ಸರಕಾರವು ತಮ್ಮ ಗೌರವ ಕಾಯ್ದು, ತಮಗೆ ಹೇಗೆ ಬಹುಮಾನ ಮಾಡಬೇಕೆಂಬ ಭಾಷಣ ಮಾಡಿದ್ದಾರೆ. ಸಂಸ್ಥಾನಿಕರು ಮೊದಲು ತಮ್ಮ ಮಕ್ಕಳಿಗೆ ಉತ್ತಮ ಪ್ರತಿಯ ಶಿಕ್ಷಣ ಕೊಡಬೇಕು. ಪಟ್ಟಣದಲ್ಲಿ ಕಂಡು ಬರುವ ಡೌಲಿಗೆ ಮೆಚ್ಚದೆ, ಮತ್ತು ವ್ಯರ್ಥವಾದ ಬಾಹ್ಯಾಡಂಬರದ ಸೊಗಸಿಗಾಗಿ ದ್ರವ್ಯವ್ಯಯ ಮಾಡದೆ, ಹಳ್ಳಿಗಳಲ್ಲಿದ್ದುಕೊಂಡು ಸುಧಾರಣೆ ಮಾಡಬೇಕು. ಮತ್ತು ಸರಕಾರವು ತಮ್ಮ ಗೌರವ ಪ್ರತಿಷ್ಠೆಯನ್ನು ಕಾಯ್ದು, ಯೋಗ್ಯ ರೀತಿಯಿಂದ ತಮ್ಮ ಬಹುಮಾನ ಮಾಡುವಂತೆಯೇ ವರ್ತಿಸಬೇಕೆಂದು ಹೇಳುತ್ತಾರೆ. ಸಂಸ್ಥಾನಿಕರು ಈ ರೀತಿಯಾಗಿ ವರ್ತಿಸದರೆ ಹಿಂದೀ ಪ್ರಜೆಗೆ ಆನಂದವೇ ಆಗುವದು.

ಬೆಳಗಾವಿಯು ಮರಾಠಿಯದಾಗಿರುತ್ತದೆಂದು ಕನ್ನಡಿಗರು ಹೊತ್ತು ಉರಿಯುತ್ತಿದ್ದಾರೆ ಬೆಳಗಾವಿಯ ಮೂಲ ಭಾಷೆಯು ಕನ್ನಡ; ಮರಾಠಿ ಕಲಿಯುವರು; ಇವರ ಮರಾಠಿಯು ಉಚ್ಚಾರದಲ್ಲಿ ಥೇಟ ಗುಜರಿಯದಾಗಿ, ಮರಾಠಿಯು ಅಪಭ್ರಂಶವಾಗುತ್ತದೆಂದು ಮರಾಠಿ ಶಾಲೆಯ ಹೆಡ್ಮಾಸ್ತರರಾಗಿದ್ದ ಮಿ. ಗಣೇಶ ರಾಮಚಂದ್ರ ಕುಲಕರ್ಣಿ ಎಂಬವರು ಗುಣುಗುಟ್ಟುತ್ತಾರೆ. ಆದರೂ ಇವರು ಸವಣೂರ ರಾಮಚಂದ್ರರಾಯರ ಹಾಂಗು ವೆಂಕಟ ರಂಗೋ ಕಟ್ಟಿಯವರ ಮರಾಠಿಯ ಸ್ವಚ್ಛತ್ವವನ್ನು ಬಹುವಾಗಿ ಹೊಗಳುತ್ತಾರೆ. ಸವಣೂರ ರಾಮಚಂದ್ರರಾಯರು ಬರೆಯುವಾಗ 'ಅಥವಾ ಮಾತಾಡುವಾಗ ಯಾವಾಗಲು ಮರಾಠಿಯ ಅಶುದ್ಧ ಪ್ರಯೋಗ ಮಾಡಲಿಲ್ಲ. ವೆಂಕಟ ರಂಗೋ ಕಟ್ಟಿಯವರ ಮರಾಠಿ ಭಾಷೆಯನ್ನು ನೋಡಿ, ತಮಗೆ ಆಶ್ಚರ್ಯವಾಯಿತೆಂದು ಇವರು ಸಾಕಂಪಾಧಿವತನದಿಂದ ಉದ್ಗಾರ ತೆಗೆದಿದ್ದಾರೆ. ಮರಾಠಿಯಲ್ಲಿ ಶಾಸ್ತ್ರವಿದ್ಯಾ ಪಡೆದಂಥ ನೂರಾರು ಜನ ಕನ್ನಡಿಗರನ್ನು ಇಂದಿಗೂ ತೋರಿಸಬಹುದು. ಆದರೆ ಕನ್ನಡದಲ್ಲಿ ಕೆ.ಸುವಾದರೂ ಜ್ಞಾನ ಸಂಪಾದಿಸಿದ ಮರಾಠರು ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಸೇರಿ, ಕೈ ಬೆರಳಿನಷ್ಟು ಸಹ ಹೊಂದಲಾರರು.

ಇಬ್ಬರು ವಕೀಲರಿಗೆ ಶಿಕ್ಷೆ.

ಕುಳ್ಳ ಕಾಗದ, ಸುಳ್ಳ ಪ್ರತಿಷ್ಠೆ ಮಾಡಿದ್ದಕ್ಕಾಗಿ ಅಹ್ಮದಾಬಾದಿನ ಇಬ್ಬರು ವಕೀಲರು ಒಬ್ಬ ಮುಖ್ತ್ಯಾರ ಮತ್ತು ಜೇಲಿನ ಇಬ್ಬರು ಕಾರಕೂನರಿಗೆ ಶಿಕ್ಷೆಯಾಯಿತು. ಈ ಆರೋಪಿತರು ಒಂದು ಲಾವಣಿ ಮೊಕದ್ದಮೆಯಿಂದ ಉದ್ಭವಿಸಿತು.

ವಿಜಯ. —

ಕನ್ನಡ ದಿನ ಪತ್ರಿಕೆ.

ಧಾರವಾಡ.	ಶನಿವಾರ ತಾರೀಖು	೧ ನೇ	ಅಕ್ಟೋಬರ	೧೯೨೭	ಇದೆ.
	ರವಿವಾರ	೨ ನೇ	"	"	"
	ಸೋಮವಾರ	೩ ನೇ	"	"	"
	ಮಂಗಳವಾರ	೪ ನೇ	"	"	ಇಲ್ಲ
	ಬುಧವಾರ	೫ ನೇ	"	"	"
	ಗುರುವಾರ	೬ ನೇ	"	"	"
	ಶುಕ್ರವಾರ	೭ ನೇ	"	"	"
	ಶನಿವಾರ	೮ ನೇ	"	"	ಇದೆ.
	ರವಿವಾರ	೯ ನೇ	"	"	"
	ಸೋಮವಾರ.	೧೦ ನೇ	"	"	"
	ಮಂಗಳವಾರ	೧೧ ನೇ	"	"	ಇಲ್ಲ
	ಬುಧವಾರ	೧೨ ನೇ	"	"	ಇದೆ
	ಗುರುವಾರ	೧೩ ನೇ	"	"	"
	ಶುಕ್ರವಾರ	೧೪ ನೇ	"	"	"
	ಶನಿವಾರ	೧೫ ನೇ	"	"	"
	ರವಿವಾರ	೧೬ ನೇ	"	"	"
	ಸೋಮವಾರ	೧೭ ನೇ	"	"	"
	ಮಂಗಳವಾರ	೧೮ ನೇ	"	"	ಇಲ್ಲ
	ಬುಧವಾರ	೧೯ ನೇ	"	"	ಇದೆ.
	ಗುರುವಾರ	೨೦ ನೇ	"	"	"
	ಶುಕ್ರವಾರ	೨೧ ನೇ	"	"	"
	ಶನಿವಾರ	೨೨ ನೇ	"	"	"
	ರವಿವಾರ	೨೩ ನೇ	"	"	"
	ಸೋಮವಾರ	೨೪ ನೇ	"	"	"
	ಮಂಗಳವಾರ	೨೫ ನೇ	"	"	ಇಲ್ಲ
	ಬುಧವಾರ	೨೬ ನೇ	"	"	"
	ಗುರುವಾರ	೨೭ ನೇ	"	"	"
	ಶುಕ್ರವಾರ	೨೮ ನೇ	"	"	"
	ಶನಿವಾರ	೨೯ ನೇ	"	"	ಇದೆ
	ರವಿವಾರ	೩೦ ನೇ	"	"	"
	ಸೋಮವಾರ	೩೧ ನೇ	"	"	"

೨೧ ಅಂಕಗಳು ಮಾತ್ರ.

ಮಹಾನವಮಿಯ ಉತ್ಸವವು.

—೦—

ಗುರುವಾರ ತಾ ೨೯-೯-೩೭

ಮೊದಲು ವೇಳೆಗಳ ಪದಗಳಾದ ನಂತರ ಶ್ರೀ. ಸುಬ್ಬಣ್ಣ ವೈದ್ಯ ಇವರು ಶಾಸ್ತ್ರಗೀತವನ್ನು ಅಂದರು. ಆ ಮೇಲೆ ಕವಿಗಳಾದ ಶ್ರೀ ಹಂಪಿಹೊಳಿ, ಶ್ರೀ ಕುರಡಿ, ಶ್ರೀ. ಚೂಲಿಕವಿ, ಶ್ರೀ. ಪಾಟೀಲ, ಶ್ರೀ ಸಂಕನೂರ, ಶ್ರೀ ಮುಗಳಿ, ಶ್ರೀ. ಗೋಕಾಕ, ಶ್ರೀ. ಕೆಂಚೇಬ ಶ್ರೀ ಪ್ರಲ್ಹಾದ, ಶ್ರೀ ಬುರ್ಲಿ, ಶ್ರೀ ಗೋಯುಂಡಿ ಶ್ರೀ. ಮಳಗಿ, (ಸ್ವಂತದ ಹಾಗು ಶ್ರೀ ಕುಲಕರ್ಣಿ ಮಾಸ್ತರರ ಪದವನ್ನು) ಶ್ರೀ ಗೋಪಾಂಡೆ [ಶ್ರೀ. ಬೆಟಗೇರಿಯವರ ಪದವನ್ನು) ಶ್ರೀ. ಬೆಳಗಾಂವಕರ ಶ್ರೀ. ಮಾಡೀಕರ, ಶ್ರೀ ಬೂಲ್ಬಾರ ಶ್ರೀ. ಸಾಲಿ, ಶ್ರೀ. ಬೇಂದ್ರೆ (ಮನೆಯವರು ಮತ್ತು ನರ್ಸ) ಕೆಂಪಗೆ ಶ್ರೀ ಮತಿ ಪಂಗೇರಿಬಾಯಿ ಪುರಾಣಿಕ ಮುಂತಾದವರು ಕವಿತ ಗಾಯನವನ್ನು ಮಾಡಿದರು. ನಡು ನಡುವೆ ಪ್ರಾಸ ಮುಂತಾದವುಗಳ ಸಂಬಂಧವಾಗಿ ಶ್ರೀ ಹಂಪಿಹೊಳಿ, ಶ್ರೀ ಮದ್ವೇಡಕರ ಶ್ರೀ. ಮೂರ್ತಿಗಳು ಚರ್ಚೆಯನ್ನು ಮಾಡಿದರು. ಒಟ್ಟಿನ ಮೇಲೆ ಕಾರ್ಯಕ್ರಮವು ವಿವಿಧತೆ ಇತ್ತು. ಕೆಲವು ಪದಗಳು ಪ್ರಾಸಂಗಿಕ, ಕೆಲವು ಬೇರೆ, ಕೆಲವು ಸರಸ ವಿದ್ದವು ಅನ್ನುವವರ ದೋಷಗಳ ಮೂಲಕ ಅರುಚಿಯನ್ನು ಉಂಟು ಮಾಡುವಂಥವು. ಕೆಲವು ಸರಸ ಸುಲಭ, ಅರ್ಥಗಾಂಭೀರ್ಯ ಶ್ಲೇಷಾಲಂಕಾರ, ಶಬ್ದಾಲಂಕಾರ ಹಾಗು ಪ್ರಾಸಗಳಿಂದ ಸುಶ್ರಾವ್ಯವಾದಂಥವು, ಕೆಲವು ಭಕ್ತಿಪರ, ಸ್ಫೂರ್ತಿದಾಯಕ ಹಾಗು ದೇಶಾಭಿಮಾನ ಪ್ರೇರಿತವಿದ್ದ ಮೂಲಕ ಕಾರ್ಯಕ್ರಮವು ಒಳ್ಳೆ ಮನೋರಂಜನ, ಬೋಧಪ್ರದ ಹಾಗು ಆಕರ್ಷಣವಾಗಿತ್ತು. ಆಭಾರ ಮನ್ನಣೆಯಾಗಿ ಸಭೆಯು ಮುಗಿಯಿತು.

ವಿಜಯ ಪುಸ್ತಕಾಲಯ.

—೦—

೩೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಸಾರ	೫ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ದಿವಾಣಿ ಕಾಯದೆ ಬೋಧಿನಿ

(ಹೊಸ ಆವೃತ್ತಿ ೧೯೩೭)

ಇದರಲ್ಲಿ ದಿವಾಣಿ ಕಾಯದೆಯ ಕಲಮುಗಳ ಸಾರಾಂಶವು ಹಾಗು ಪುರಾವೆ ಆಕ್ಟು, ಸ್ಟ್ಯಾಂಪ ಆಕ್ಟು, ಕೋರ್ಟ ಫೀ ಆಕ್ಟು, ಮಾಮಲೇದಾರ ಆಕ್ಟು, ಇನಕಮ್‌ಟ್ಯಾಕ್ಸ ಆಕ್ಟ, ಹಿಂದೂ ಧರ್ಮಶಾಸ್ತ್ರ ಮೊದಲಾದ ಉಪಯುಕ್ತ ಕಾಯದೆಗಳ ಸಾರಾಂಶವು ಸಾಮಾನ್ಯ ಜನರಿಗೆ ತಿಳಿಯುವಂತೆ ಸ್ಪಷ್ಟವಾಗಿ ಕೊಡಲ್ಪಡುತ್ತದೆ. ಇದು ದಿವಾಣಿ ಕೋರ್ಟಿನ ಪಕ್ಷಕಾರರಿಗೂ ವಕೀಲರ ಕಾರಕೂನರಿಗೂ ಬಹಳ ಉಪಯೋಗವಾಗುತ್ತದೆ. ಇದರಲ್ಲಿ ಹೊಸ ಸ್ಟ್ಯಾಂಪ ಮತ್ತು ಹೊಸ ಕೋರ್ಟ ಫೀ ದರಗಳನ್ನು ಕೊಟ್ಟಿರುತ್ತದೆ. ಪಕ್ಷಕಾರರು ಇಂಥ ಕಾಯದೆಗಳನ್ನು ತಿಳಿದುಕೊಂಡು ಅಥವಾ ಯಾವದೇ ಜನರ ಸುಳ್ಳು ಅಥವಾ ತಪ್ಪು ಹೇಳಿಕೆಯ ಮೇಲೆ ವಿಶ್ವಾಸವಿಟ್ಟು ಮೋಸ ಹೋಗಬಾರದೆಂದು ಈ ಪುಸ್ತಕವನ್ನು ಬರೆದಿರುತ್ತದೆ. ಬೆಲೆ ಒಂದು ರೂಪಾಯಿ ಅಂಚೆ ವೆಚ್ಚ ಬೇರೆ.

ಮಾಮಲೇದಾರ ಕೋರ್ಟ ಆಕ್ಟ [ನವೀನ]

ಇದು ಮಾಮಲೇದಾರ ಕೋರ್ಟಿನಲ್ಲಿ ವಹಿವಾಟು ದಾವೆಗಳನ್ನು ಮಾಡುವವರಿಗೆ ಬಹಳ ಉಪಯೋಗವಾಗುತ್ತದೆ. ಇದರಲ್ಲಿ ಮಾಮಲೇದಾರ ಕೋರ್ಟಿನ ಯಾವತ್ತು ಮುಖ್ಯ ಠರಾವುಗಳನ್ನು ಕೊಟ್ಟಿರುತ್ತದೆ. ಇದು ೧೯೩೭ನೇ ಇಸವಿಯಲ್ಲಿ ಛಾಪಿಸಿ ಪ್ರಸಿದ್ಧವಾಗಿರುತ್ತದೆ. ಬೆಲೆ ೧೦ ಆಣೆ ಅಂಚೆ ವೆಚ್ಚ ಬೇರೆ. ಇದಲ್ಲದೆ ನಮ್ಮಲ್ಲಿ ನಮ್ಮ ರಚಿಸಿದ ನೀತಿ ಮಂಜರಿ ಬೆಲೆ ೧೦ ಆಣೆ, ಶ್ರೀ ರಾಮದಾಸಸ್ವಾಮಿ ಚರಿತ್ರ ಬೆಲೆ ೧೨ ಆಣೆ, ಬೋಧ ರತ್ನ ಬೆಲೆ ೮ ಆಣೆ, ಬಾಲ ರಾಮಾಯಣ ಬೆಲೆ ೬ ಆಣೆ ಬೋಧ ಗುಚ್ಛ ಬೆಲೆ ೨ ಆಣೆ, ಅದ್ಭುತ ಪ್ರೇಮ ಕಾದಂಬರಿ ಬೆಲೆ ೧ ಆಣೆ, ತ್ರಾಟಿಕಾ ನಾಟಕ (ಹೆಂಡತಿ ಗಂಡನ ಮತ್ತು ... ನಾಟಕ ಬೆಲೆ ೧೨ ಆಣೆ ಧ್ರುವ ಚರಿತ್ರೆ ೩॥ ಆಣೆ, ಚಿಲ್ಲಾಳ ಚರಿತ್ರೆ ೨॥ ಆಣೆ ... ಚರಿತ್ರೆ ಬೆಲೆ ೪ ಆಣೆ. ಗ್ರಾಮ ಪೋಲೀಸ ಆಕ್ಟ [ನವೀನ] ಬೆಲೆ ೬ ಆಣೆ, ಕೊಂಡವಾಡಿ ಆಕ್ಟು (ನವೀನ) ಬೆಲೆ ೨ ಆಣೆ, ... ನಿಯಮಗಳು ಮತ್ತು ನಮೂನೆಗಳು ಬೆಲೆ ೩ ಆಣೆ ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ.

ವಿಶೇಷ ಸೂಚನೆ:—ಈ ಯಾವತ್ತೂ ಪುಸ್ತಕಗಳನ್ನು ಒಮ್ಮೆಲೆ ಕ್ರಯಕ್ಕೆ ತೆಗೆದುಕೊಳ್ಳುವವರಿಗೆ ಮೂರು ನಾಲ್ಕಾಂಶ ಬೆಲೆಗೆ ಕೊಡುತ್ತೇವೆ.

ಗದಿಗೆಯ್ಯಾ ಹುಚ್ಚಯ್ಯಾ ಹೊನ್ನಾಪೂರಮಠ
ಡಿಸ್ಟ್ರಿಕ್ಟ ಕೋರ್ಟ ಪ್ಲೀಡರರು
ಮತ್ತು ಚಂದ್ರೋದಯ ಪ್ರೆಸ್ಸ ಮಾಲಕ, ಧಾರವಾಡ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

—೦—

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದ ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಲೀಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರ್ಧ ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಖಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1445

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಶನಿವಾರ ತಾರೀಖು ೧ ನೇ ಅಕ್ಟೋಬರ ೧೯೩೨ | (ಸಂಚಿಕೆ ೨೧೨)

ಹಂಗಾಮು ಮುಗಿಯ ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಕೋಂಗಾ ಯಂತ್ರಗಳು



ಚನ್ನಾಗಿ ಕ ಪವನ್ನು ತೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೆಂದರೆ ಉಸ್ಸಿನ ಕಂಬಗಳ ಚೌಕಟ್ಟು ಹಿತ್ತಾಳಿ ಬಿಲರಿಂಗುಗಳು ಇರುವದರಿಂದ ಯಂತ್ರವು ಆಸ್ತಾಕಟ್ಟಗಿ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಗಿಂತಲೂ ಇವುಗಳಲ್ಲಿ ಕಾಳು ಬೀಳಿ ಯಾಗುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಯಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ಡಿಪಾರ್ಟಮೆಂಟಿನಿಂದ ಮಂಜೂರಾದ

ಕನ್ನಡ ನಿಬಂಧರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ.

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟದ್ದಲ್ಲದೆ ರಿಪೋರ್ಟ- ಅರ್ಜಿ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವದೆ.

ಪ್ರತಿಗಳು ದೊರೆಯುವ ಸ್ಥಳ— ೧ ರಾ. ರಾ. ಬಿ. ಜಿ. ದಿವೇಕರ,
ಮಾಳಗುತ್ತ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಪ್ಪಾ
ವಾಗ್ಭೂಷಣ ಬುಕ್ ಡಿಪೋ. ಹುಬ್ಬಳ್ಳಿ

WANTED.

Wanted Candidates for Telegraph and Station Master's Courses. Railway Fare GRANTED Boarding Seat FREE. Prospectus on 2 annas stamp,- Presidency Telegaph Coll ge, Royapettah Madras.

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿಟ ಇಟ್ಟುಕೊಳ್ಳಲಾಗುವದು. ಬಡ್ಡಿಯನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೆ ಇಟ್ಟುಕೊಳ್ಳುವ ಏರ್ಪಾಡು ಇದ್ದು ಸಾವಿರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತೆ ಬೀಳುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಯು ಆರು ಲಕ್ಷದ ಮೇಲುಂಟು. ಚೆಕ್, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರಗಳು ನಡೆಯುವವು. ಕಾಯಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೧ ೧೦-೨೭ ನೇ ಇಸ್ವಿ

ಎಲ್ಲೆಲ್ಲಾದರೂ ಸ್ಕೂಲಬೋರ್ಡ ಅ್ಯಡಮಿನಿಸ್ಟ್ರೇಟರರದೇ ಗಲಭೆ.

ಧಾರವಾಡ ಜಿಲ್ಲೆಯ ಸ್ಕೂಲಬೋರ್ಡಿನವರು ಅನೇಕ ಜನ ಅನುಭವಿಕ ಮತ್ತು ಹೆಚ್ಚು ಯೋಗ್ಯತೆಯುಳ್ಳಂಥವರನ್ನು ಬದಿಗೊತ್ತಿ, ತಮಗೆ ಬೇಕಾದಂಥ ಅನುಭವಶೂನ್ಯ ಗೃಹಸ್ಥರನ್ನು ಅ್ಯಡಮಿನಿಸ್ಟ್ರೇಟರರಾಗಿ ನೇಮಿಸಿಗೊಂಡ ವಿಷಯವು ಮಂತ್ರಿಯ ಕಾಗದ ಪತ್ರಗಳಲ್ಲಿ ಸಧ್ಯ ಮುಂದುಗಾಣದೆ ಬಿದ್ದಿರುತ್ತದೆ. ಬೆಳಗಾವಿಯವರು ತಮಗೆ ಜಗತಾಪರ ಬೇಕೆಂದು ಹಟ ಹಿಡಿದು, ಸರಕಾರಕ್ಕೆ ಸತ್ಯಾಗ್ರಹದ ಸಂಭಾವನೆ ಕೊಡಬೇಕೆಂದಿದ್ದಾರೆ. ವಿಜಾಪೂರದವರು ಮಿ. ಗೋಬಲೆಯವರಂಥ ಅನುಭವಿಕ ಗೃಹಸ್ಥರನ್ನು ಬಿಟ್ಟು, ಬ್ರಾಹ್ಮಣೇತರರೆಂಬ ಅಭಿಮಾನದಿಂದ ಮಿ. ಜಗತಾಪರನ್ನೇ ನೇಮಿಸಿಕೊಂಡರು. ಈ ಪ್ರಕಾರ ನಡೆದ ಉದ್ಧಟತನದ ವರ್ತನಕ್ಕೆ ಮತ್ತು ಮುಂದೆ ಯಾರೂ ಇಂಥ ಅಧಿಕ ಪ್ರಸಂಗತನ ಮಾಡಬಾರದೆಂದು ವಿದ್ಯಾಖಾತೆಯ ಮಂತ್ರಿಯವರು ಅ್ಯಡಮಿನಿಸ್ಟ್ರೇಟರ ನೇಮಣೂಕಿಯ ಮಂಜೂರಿಯನ್ನು ಸಂಪೂರ್ಣವಾಗಿ ಸರಕಾರದ ಸ್ವಾಧೀನಕ್ಕೊಳಪಡಿಸಬೇಕೆಂದು ಬಿಲ್ಲ ಪಾಸು ಮಾಡಿಕೊಳ್ಳುವರು. ಲೋಕಮತದ ಪ್ರಭುತ್ವವೆಂದು ಸಾರುವಂಥ ಮತ್ತು ವಿಶೇಷವಾದ ರಾಜಕೀಯ ಹಕ್ಕುಗಳನ್ನು ಬೇಡುವಂಥ ಸಮೀಪ ಕಾಲದಲ್ಲಿ ಸರಕಾರದಿಂದ ದೊರೆತ ಹಕ್ಕನ್ನು ಬರೇ ಕುಲಾಭಿಮಾನದಿಂದ ಹೇಗೆ ಕಳಕೊಳ್ಳುತ್ತಿರುವರೆಂದು ಈ ವಿವೇಚನೆಯಿಂದ ಸ್ಪಷ್ಟವಾಗುತ್ತದೆ.

ಧಾರವಾಡ, ಬೆಳಗಾವಿಗಿಂತ ಕಾರವಾರದ ಅ್ಯಡಮಿನಿಸ್ಟ್ರೇಟರ ಪ್ರಕರಣವು ಬಹು ತಮಾಷೆಯದ್ದಾಗಿ, ಕೋರ್ಟಿನ ಕಟ್ಟೆ ಹತ್ತಿರುತ್ತದೆ ಅಲ್ಲಿಯ ಸ್ಕೂಲ ಬೋರ್ಡಿನವರು ಮಿ. ವಗಕರೆಂಬವರನ್ನು ಅ್ಯಡಮಿನಿಸ್ಟ್ರೇಟರರಾಗಿ ನೇಮಿಸಿಕೊಳ್ಳಬೇಕೆಂದರು. ಮಿ. ವಗಕರು ಹೊರಗಿನವರಲ್ಲ; ಸ್ಕೂಲಬೋರ್ಡಿಗೆ ಅಧಿಕಾರ ದೊರೆಯುವ ಪೂರ್ವದಿಂದಲೇ ಈ ಕೆಲಸ ಮಾಡುತ್ತಾ ಇದ್ದರು. ಇವರನ್ನೇ ಕಾಯಮ ಮಾಡಬೇಕೆಂದು ಬೋರ್ಡಿನವರು ಡಿಸ್ಟ್ರಿಕ್ಟ ಲೋಕಲಬೋರ್ಡಿಗೆ ಸಿಫಾರಸ್ಸು ಮಾಡಿದರು. ಒಮ್ಮೆಯಲ್ಲ; ಎರಡು ಸಾರೆ ಮಾಡಿದರು. ಆದರೂ ಜಿಲ್ಲಾ ಬೋರ್ಡಿನವರು ಇವರ ಬರವಣಿಗೆಯನ್ನು ಮಂಜೂರ ಮಾಡದೆ, ಒಂದಕ್ಕಿಂತ ಹೆಚ್ಚು ಹೆಸರುಗಳನ್ನು ಸಿಫಾರಸ್ಸ ಮಾಡಬೇಕೆಂದು ಬರೆದರು. ಅನಿವಾರ್ಯವಾಗಿ ಸ್ಕೂಲಕಮೀಟಿಯವರು ಮಿ. ವಗಕರ ಹೆಸರನ್ನು ಮೊದಲು ಬರೆದು, ಬೇರೆ ಐದು ಹೆಸರುಗಳನ್ನು ಸೂಚಿಸಿ ಮಿ. ಗಟ್ಟಿ ಎಂಬವರೂ ಯೋಗ್ಯರಿದ್ದಾರೆಂದು ಸಿಫಾರಸ್ಸ ಮಾಡಿದರು. ಜನರಲ ಬೋರ್ಡಿನವರು ಅನಾಯಾಸವಾಗಿ ದೊರೆತ ಎರಡನೆಯ ಹೆಸರನ್ನು ಮಂಜೂರ ಮಾಡಿ, ಪಡಳರಿಗೆ ಮನೆಗೆ ಅಪ್ಪಣೆ ಕೊಟ್ಟು, ಮಿ. ಗಟ್ಟಿಯವರನ್ನು ನೇಮಿಸಿಕೊಂಡು, ವಿದ್ಯಾಖಾತೆಯವರ ಮಂಜೂರಿ ಪಡಕೊಂಡರು.

ಮಿ. ಗಟ್ಟಿಯವರು ಇಷ್ಟರಲ್ಲಿ ಚಾರ್ಜ ತಕ್ಕೊಳ್ಳುವರು. ಈ ನೇಮಣೂಕು ಅನ್ಯಾಯವಾಗಿಯೂ, ಬೇಕಾಯದೆಶೀರವೂ ಆಗಿರುತ್ತದೆಂದು ಜಿಲ್ಲಾ ಬೋರ್ಡಿನ ಒಬ್ಬ ಮೆಂಬರರಾದ ಮಿ. ಅಲವೇಡಾ ಎಂಬವರು ಅಂದುಕೊಂಡು, ಈ ನೇಮಣೂಕಿಯನ್ನು ರದ್ದ ಮಾಡಬೇಕೆಂದು, ಮಿ. ಗಟ್ಟಿಯವರು ಚಾರ್ಜ ತಕ್ಕೊಳ್ಳದಂತೆ ತಹಕೂಬಿಯ ಹುಕುಮು ಕೊಡಬೇಕೆಂದೂ ದಿವಾಣಿ ಕೋರ್ಟಿನಲ್ಲಿ ದಾವೇ ತಂದಿದ್ದಾರೆ. ಡಿಸ್ಟ್ರಿಕ್ಟ ಲೋಕಲಬೋರ್ಡಿನವರು ಮಾಡಿದ ಮಿ. ಗಟ್ಟಿಯವರ ನೇಮಣೂಕು ಮತ್ತು ಸರಕಾರದವರು ಕೊಟ್ಟ ಮಂಜೂರಿಯು ಗ್ಯೆರ ಕಾಯದೆಶೀರವಿದ್ದು, ಈ ಪ್ರಕರಣದ ಪೂರ್ಣ ವಿಚಾರಣೆಯಾಗುವ ತನಕ ಮಿ. ಗಟ್ಟಿಯವರಿಗೆ ಚಾರ್ಜ ಕೊಡಗೊಡಬಾರದೆಂದು ತಮ್ಮ ಅರ್ಜಿಯಲ್ಲಿ ಬರೆಕೊಂಡಿದ್ದಾರೆ.

ಮಿಡಿತೆಗಳಿಂದಾಗುವ ಬೆಳೆಯ ಹಾನಿಯು.

—(೦)—

ಮುಂಬಯಿ ಇಲಾಖೆಗೆ ಮೂರು ತರದ ಮಿಡತೆಗಳು ಬೆಳೆಗಳ ಹಾನಿಗೆ ಕಾರಣವಾಗಿರುತ್ತವೆ. ಇವನ್ನು ಹೀಗೆಯೇ ಬೆಳೆಯಗೊಟ್ಟರೆ ರೈತರ ಕೈಗೆ ಒಂದು ಕಾಳು ಸಹ ಹತ್ತದೆಂದು ಒಕ್ಕಲತನದ ಖಾತೆಯವರಿಗೆ ಭಯವಾಗಿರುತ್ತದೆ. ಇವನ್ನು ಎರಡು ವರ್ಷಗಳಲ್ಲಿ ಸಂಪೂರ್ಣ ನಾಶ ಮಾಡದಿದ್ದರೆ ಈ ಹುಳಗಳೇ ಹೊಲಗಳ ಕೂಬಾಗಿ, ರೈತರು ಬದುಕುವ ಆಗಸ್ಯವೇ ಉಂಟಾಗಲಾರದೆಂದು ದಾಕ್ತರ ಮ್ಯಾಕನಸಾಹೇಬರು ಭಯದ ಡಂಗುರ ಸಿಗ್ನಲ ತೋರಿಸಿದ್ದಾರೆ.

ಮಿಡತೆಗಳು ಮೂರು ಪ್ರಕಾರದ್ದಿರುತ್ತವೆ.

೧ ಸಿಂಧ ಕಾಠೇವಾಡ ಮತ್ತು ಗುಜರಾಥದಲ್ಲಿ ಹಾವಳಿ ಮಾಡುವ ಚಿಟ್ಟೆಗಳು.

೨ ಕೊಂಕಣ ಮತ್ತು ಮಲ್ಲಾಡದಲ್ಲಿರುವ ಕಿರಿ ಜಾತಿಯವು.

೩ ರೆಕ್ಕೆಯಿಲ್ಲದಂಥ ಮಿಡತೆಗಳು, ಇವು ನಾಸಿಕದಿಂದ ಧಾರವಾಡದ ತನಕ ಬೆಳೆಗಳ ಮೇಲೆ ಹಾವಳಿ ತಂದಂಥವು.

ಇವು ಹೇಗೆ ಅನರ್ಥ ಮಾಡುವವೆಂಬದನ್ನು ದಾಕ್ತರ ಮ್ಯಾಕನಸಾಹೇಬರ ಶಬ್ದಗಳಲ್ಲಿಯೇ ಇದರಲ್ಲಿ ಕೊಡುತ್ತೇವೆ.

"ನಮ್ಮ ಮುಂದೆ ಒಂದು ದೊಡ್ಡ ಗಂಡಾಂತರವು ದುತ್ತೆಂದು ನಿಂತಿರುತ್ತದೆ. ಮೂರು ಜಾತಿಯ ಮಿಡತೆಗಳು ಇಡೀ ಮುಂಬಯಿ ಇಲಾಖೆಯನ್ನು ವ್ಯಾಪಿಸಿ, ಅತ್ಯರ್ಥವಾದ ಕೇಡು ಮಾಡಬೇಕೆಂದಿರುತ್ತವೆ. ಹಸಿಯಿಂದ ತನೆಯ ತನಕ ಬೆಳೆಗಳನ್ನು ಧ್ವಂಸ ಮಾಡುವವು. ಹೋದ ವರ್ಷಕ್ಕಿಂತ ಈ ವರ್ಷ ಹೆಚ್ಚು ಕೇಡು ಮಾಡುವವು. ಇವುಗಳ ಬನಸ, ಬೆಳೆಗೆ ಮತ್ತು ನಾಶದ ಪೂರ್ವಾಪರವನ್ನು ಕಂಡುಹಿಡಿಯದಿದ್ದರೆ ಇಲಾಖೆಯ ಮುಖ್ಯ ಧಾನ್ಯವು ಪೂರಾ ನಷ್ಟವಾಗುವದು. ಅಥವಾ ಅಲ್ಪ ಸ್ವಲ್ಪ ಕೈಗೆ ಹತ್ತುವದು. ಹೀಗೇ ಬಿಟ್ಟರೆ ಈ ಹಾವಳಿಯು ಭಯಂಕರವಾಗಿ ಬೆಳೆಯುವದು. ಆಗ ಇವುಗಳ ಧ್ವಂಸಕ್ಕಾಗಿ ಸರಕಾರದ ಎಲ್ಲ ಖಾತೆಗಳ ಕಾಮದಾರ, ಸಿಪಾಯರನ್ನು ಮೊದಲು ಮಾಡಿಕೊಂಡು ಯುದ್ಧದಲ್ಲಿ ಸೇನಾಸಿದ್ಧತೆ ಮಾಡುವಂತೆ, ಎಲ್ಲರನ್ನು ಕಲೆ ಹಾಕಬೇಕಾಗುವದು."

ಏಸೂಕ್ರಿಸ್ತನು ಪಾಪಿಷ್ಠನೋ? ಪುಣ್ಯವಂತನೋ?

—೦—

ಹುಟ್ಟಿದಾಗ ಶೂದ್ರನು; ಕರ್ಮದಿಂದ ಬ್ರಾಹ್ಮಣನು ಎಂಬದಾಗಿ ಹಿಂದೂ ಮತವು ಹೇಳುತ್ತದೆ. ಅದೇ ಪ್ರಕಾರ ಏಸೂ ಕ್ರಿಸ್ತನು ಹುಟ್ಟಿದಾಗ ಪಾಪಿಯು. ಬಾಪ್ತಿಸಮಾ ತಕ್ಕೊಂಡ ಬಳಿಕ ಪುಣ್ಯಶರೀರವುಳ್ಳವನಾದನೆಂದು ಅಮೇರಿಕೆ ಮತ್ತು ಜರ್ಮನಿಯ ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈ ಅಭಿಪ್ರಾಯದ ಅನುವಾದವನ್ನು ರೆವ್ಹರೆಂಡ ಪಂಗಬೆರಿ ಎಂಬ ಹೆಸರಿನ ಪ್ರಸಿದ್ಧ ಪಾದ್ರೀಸಾಹೇಬರು ಮಾಡಿದರು. ಆಚಾರ್ಯ ಅಥವಾ ಭಟ್ಟರಾದವರು ಗತಾನುಗತಿಕವಾಗಿ ಒಂದಂಥ ವಾಕ್ಯಾರ್ಥ ಶಾಸ್ತ್ರಾರ್ಥ ಮಾಡಬೇಕೆಂದು ಆಯಾ ಮತದ ಗುರುಗಳು ಖಂಡಿತವಾಗಿ ಹೇಳುವರು. ಇದರ ವಿರುದ್ಧ ಹೋಗುವಂಥವರನ್ನು ಪಾಖಂಡಿಗಳ ವರ್ಗದಲ್ಲಿ ಸೇರಿಸಿ, ಅವರನ್ನು ಬಹಿಷ್ಕಾರ ಮಾಡುವರು. ಅದೇ ಪ್ರಕಾರದ ಶಾಸನದ ಶಿಕ್ಷೆಯನ್ನು ಭೋಗಿಸುವ ಪ್ರಸಂಗವು ರೆವ್ಹರೆಂಡ ಪಂಗ್ಸಬರಿ

ಯುವರಿಗೆ ಪ್ರಸ್ತುತದಲ್ಲಿ ಬಂದಿದೆ. ಏಸೂಕ್ರಿಸ್ತನು ಹುಟ್ಟಿದಾಗ ಪಾಪಿಯಾಗಿದ್ದನು. ಬಾಪ್ತಿಸ್ಮಾ ತಕ್ಕೊಂಡ ನಂತರವೇ ಪವಿತ್ರ ಶರೀರಿಯಾದನೆಂಬುದೇ ನಿಜವೆಂದು ಇವರು ದೇವಾಲಯಗಳಲ್ಲಿ ಪುನಃ ಪುನಃ ಭಾಷಣ ಮಾಡಿದರು. ಮನಸ್ಸಿಗೆ ಖಂಡಿತವಾಗಿ ಹೊಳೆದದ್ದನ್ನು ಮುಚ್ಚುಮರೆ ಮಾಡುವದು ಹೇಗೆ? ಇವರಂತೆ ಉಳಿದವರ ವಿಚಾರವಾಗಲಿಲ್ಲ. ದೇವರ ಮಗನು ಪುರುಷ ಸಂಬಂಧವಿಲ್ಲದೆ ಕುಮಾರಿಯ ಹೊಟ್ಟೆಯಿಂದ ಹುಟ್ಟಿದವನು ಪಾಪಿಯಾಗುವದೆಂತು? ಸರ್ವಜ್ಞನಾ ಅಲ್ಲೆಂದು ಮಿಕ್ಕ ಪಾದ್ರಿಗಳು ಕಿಂಗ್ಸಬರಿಯ ವಿರುದ್ಧ ಬಂಡಾಯವೆಬ್ಬಿಸಿದರು. ಮೊದಲನೆಯ ಶಿಕ್ಷೆ ಎಂದು ಇವರಿಗೆ ಪಾದ್ರೀ ಕೆಲಸದಿಂದ ಸಸ್ಪೆಂಡ ಮಾಡಿದರು. ಅನಂತರ ಸಮಸ್ತ ಪಾದ್ರಿಗಳ ಮಹಾಸಭೆಯು ಕೂಡಿತು. ಇದು ಎರಡು ವರ್ಷಕ್ಕೊಮ್ಮೆ ಕೂಡುವದು. ಈ ಸಭೆಯು ಹೋದವಾರದಲ್ಲಿ ಮಧುರೆಯಲ್ಲಿ ಕೂಡಿತು. ಇದರ ಮುಂದೆ ಕಿಂಗ್ಸಬೆರಿಸಾಹೇಬರು ತಮ್ಮ ಸಿದ್ಧಾಂತವನ್ನೇ ನುಡಿದರು. ಪುನಃ ಪುನಃ ಸಾಧಿಸುವಂತೆ ಅನುವಾದ ಮಾಡುವದು ಪಾದ್ರಿಗಳಿಗೆ ಸಹನವಾಗಲಿಲ್ಲ. ಬಹುಮತದಿಂದ ಇವರನ್ನು ಎರಡು ವರ್ಷ ಸಸ್ಪೆಂಡ ಮಾಡಿದರು. ಅಲ್ಪ ಸಂಖ್ಯಾಕರಾದರೂ ಇವರಿಗೆ ಕೆಲ ಜನರಾದರೂ ಅನುಕೂಲರಾಗಿರುವರೆಂಬದು ಒಂದು ವಿಶೇಷ.

ಮಹತ್ವದ ಠರಾವುಗಳು.

—೦—

ಶ್ರೀ. ಜೋಗ ಇವರು ೨೯-೯-೨೭ಕ್ಕೆ ಪ್ರಾರಂಭಿಸುವ ಮುಂಬಯಿ ಕೌನ್ಸಿಲಿನ ಅಧಿವೇಶನದಲ್ಲಿ ಈ ಮಹತ್ವದ ಠರಾವುಗಳನ್ನು ತರತಕ್ಕವರಿದ್ದಾರೆ.

(೧) ಮುಂಬಯಿ ಮತ್ತು ಮದ್ರಾಸ ಇಲಾಖೆಗಳಲ್ಲಿರುವ ಕನ್ನಡಭಾಗ, ಕೊಡಗು ಈ ಮೊದಲಾದವುಗಳನ್ನು ಕೂಡಿಸಿ ಕರ್ನಾಟಕವೆಂಬ ಭಾಷಾನುಗುಣ ಪ್ರಾಂತವನ್ನು ರಚಿಸಬೇಕೆಂದು ಮುಂಬಯಿ ಸರಕಾರದವರು ಹಿಂದುಸ್ಥಾನ ಸರಕಾರಕ್ಕೆ ಹೇಳಿಕೊಳ್ಳಬೇಕೆಂದು ಈ ಕೌನ್ಸಿಲ್ಲು ಶಿಫಾರಸು ಮಾಡುತ್ತದೆ.

(೨) ಲ್ಯಾಂಡ ರೆವ್ಹಿನ್ಯೂ ಅಸೆಸಮೆಂಟ ಕಮೀಟಿಯ ವರದಿಯ ಬಗ್ಗೆ ಸರಕಾರದವರು ಹೊರಡಿಸಿದ ಪ್ರಕಟನೆಯನ್ನು ಈ ಕೌನ್ಸಿಲ್ಲು ನಿಷೇಧಿಸುತ್ತದೆ, ಮತ್ತು ೧೮೭೯ ರಲ್ಲಿಯ ಲ್ಯಾ. ರೆ. ಕೋಡಿನಲ್ಲಿರುವ ತೆರಿಗೆ ಹೆಚ್ಚಿಸುವ ಬಗ್ಗೆ ಇದ್ದ ನಿಯಮಗಳನ್ನು ಬದಲು ಮಾಡುವದು ಈ ಕೌನ್ಸಿಲಿನ ಅನಧಿಕಾರಿ ಸಭಾಸದರ ಸಮ್ಮತಿಯಿಂದ ಮಾಡಬೇಕೆಂದು ಈ ಕೌನ್ಸಿಲಿನ ಮತವಿರುವದು.

(೩) ಮೇಲಿಂದ ಮೇಲೆ ಬರಬೀಳುತ್ತಿರುವ ಮತ್ತು ಕುಡಿಯುವ ನೀರಿನ ಅಡಚು ಇದ್ದ ಧಾರವಾಡದ ನವಲಗುಂದ ನರಗುಂದ ಭಾಗಗಳಲ್ಲಿ ಸಣ್ಣ ಪುಟ್ಟ ನೀರಾವರಿ ಕೆಲಸಗಳನ್ನು ಮಾಡುವದರ ಸಲುವಾಗಿಯೂ ಭಾವಿಗಳನ್ನು ಅಗಿಯುವದರ ಸಲುವಾಗಿಯೂ ೨ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗಿ ಈ ಕೌನ್ಸಿಲ್ಲು ಶಿಫಾರಸ ಮಾಡುತ್ತದೆ.

(೪) ಗಡಿಬಿಡಿ ಇಲ್ಲದೇ ತಮ್ಮ ಸರಕುಗಳನ್ನು ತಕ್ಕ ಬೆಲೆಗೆ ಮಾರಲಿಕ್ಕೆ ರೈತರಿಗೆ ಅವಕಾಶ ದೊರೆಯುವಂತೆ ಸರಕಾರಕ್ಕೆ ತೆರಿಗೆ ಕೊಡುವ ತಾರೀಖುಗಳನ್ನು ಒಂದು ತಿಂಗಳ ಮಟ್ಟಿಗೆ ಮುಂದೆ ಹಾಕಬೇಕೆಂದು ಈ ಕೌನ್ಸಿಲಿನ ಅಭಿಪ್ರಾಯವು.

(೫) ಧಾರವಾಡ ಜಿಲ್ಲೆಯ ಮುಸಲ್ಮಾನೇತರ ಜನರಿಗೆ ಇನ್ನೆರಡು ಸಭಾಸದರನ್ನು ಕೌನ್ಸಿಲ್ಲಿಗೆ ಆರಿಸಿ ಕೊಡುವ ಅಧಿಕಾರವನ್ನು ಕೊಡಬೇಕೆಂದು ಹಿಂದುಸ್ಥಾನ ಸರಕಾರಕ್ಕೆ ಮುಂಬಯಿ ಸರಕಾರದವರು ಹೇಳಬೇಕೆಂದು ಈ ಕೌನ್ಸಿಲಿನ ಅಭಿಪ್ರಾಯವು

(೬) ಸರ ವಿಶ್ವೇಶ್ವರಯ್ಯನವರು ಸೂಚಿಸಿದ ಕೈಗಾರಿಕೆಯ ಶಿಕ್ಷಣವನ್ನು ಕೂಡಲೇ ಪ್ರಾರಂಭಿಸಿ ಮುಂದಿನ ವರ್ಷದ ಆಯವ್ಯಯ ಪತ್ರಿಕೆಯಲ್ಲಿ ಹಣದ ವ್ಯವಸ್ಥೆ ಮಾಡಬೇಕು.

(೭) ಸಹಕಾರೀ ತತ್ವದಂತೆ ಸಂಘಗಳು ನಡೆದಿರುವವೋ ಇಲ್ಲವೋ ಇದನ್ನು ಪರೀಕ್ಷಿಸಲಿಕ್ಕೂ ಸಭಾಸದರ ಆರ್ಥಿಕ ಸ್ಥಿತಿಯು ಹೇಗಿದೆ ಎಂಬುದನ್ನು ನೋಡಿ ಸುಧಾರಣೆಗಳನ್ನು ಸೂಚಿಸಲಿಕ್ಕೂ ಒಂದು ಮಂಡಲವು ನೇಮಿಸಲ್ಪಡಬೇಕು.

ಗುಜರಾಥದ ಕಾಂಗ್ರೆಸ ಕಮೀಟಿಯವರು ಹೊಸ ಪದ್ಧತಿಯಿಂದ ಎಲ್ಲ ಸುಧಾರಣೆಗಳಿಂದೊಡಗೂಡಿದ ಮಾದರಿಯ ಒಂದು ಹಳ್ಳಿಯನ್ನು ಕಟ್ಟುವರು. ೧೫೦ ಮನೆಗಳಾಗುವವು. ೭೫೦೦೦ ರೂಪಾಯಿ ವೆಚ್ಚಬೀಳುವದು. ಇದು ಯಶಸ್ವಿಕರವಾದರೆ ಅನೇಕ ಗ್ರಾಮಗಳ ಪುನರ್ಘಟನೆ ಮಾಡುವರು.

ದಿಲ್ಲಿಯಲ್ಲಿ ಹಿಂದುಸ್ಥಾನದಲ್ಲಿರುವ ಉತ್ತಮ ಜಾತಿಯ ನಾಯಿಗಳ ಪ್ರದರ್ಶನ ನೆರೆಯುವದು. ಉತ್ತಮವೆಂದು ಠರಾದಂಥವುಗಳಿಗೆ ಇನಾಮು ದೊರೆಯುವದು.

ಲಂಡನದ ಪ್ರೊಲೆಸ್ವಿಲ ಸಂಘದ ಕೂಲಿಕಾರರು ಗುಜರಾಥದ ರಿಲೀಫ ಫಂಡಿಗೆ ೧೫೦ ರೂಪಾಯಿಗಳನ್ನು ಕಳಿಸಿದ್ದಾರೆ

ಧಾರವಾಡ ಮ್ಯುನಿಸಿಪಾಲಿಟಿಯಲ್ಲಿ ಸಸ್ಪೆಂಡದ ಪ್ರಕರಣವು.

—೦—

ಸಕ್ತಿಯ ರಜೆ ಅಥವಾ ಸಸ್ಪೆಂಡದಲ್ಲಿರುವ ಇಲ್ಲಿಯ ಮ್ಯುನಿಸಿಪಾಲಿಟಿಯ ಮೂವರು ಕಾಮದಾರರಾಗಿದ್ದ ಮೆಸರ್ಸ್ ಜನಗೌಡಾ ಪಾಟೀಲ, ಗಿಲಗಂಜಿ ಮತ್ತು ಚಿಂತಕರರ ಪ್ರಕರಣವು ಫೌಜದಾರೀ ಕಚೇರಿಯನ್ನು ಕಾಣುವದೆಂದೂ ಆ ಬಗ್ಗೆ ಪೂರ್ಣ ಸಿದ್ಧತೆಯಾಗಿರುತ್ತದೆಂದೂ ತಿಳಿಯುತ್ತದೆ.

ರಾಣೇಬಿನ್ನೂರಲ್ಲಿ ಅಸ್ಪೃಶ್ಯರ ಸಭೆಯಾಗಿತ್ತು. ಈ ಸಭೆಗೆ ಹಿರೇಕೆರೂರಿನ ಮಾಮಲೇದಾರರಾದ ಮಿ. ಕರಜಗಿ ಒಪ್ಪನವರು ದಯಮಾಡಿಸಿದ್ದರು. ಇವರಿಗೆ ನೀವು ಕ್ರಿಶ್ಚನ್ನರಾಗಬೇಡಿರಿ. ನಿಮ್ಮ ಉದ್ಧಾರವನ್ನು ಹಿಂದೂ ಧರ್ಮದಲ್ಲಿಯೇ ಮಾಡಿಕೊಳ್ಳಿರೆಂದು ಉಪದೇಶ ಮಾಡಿರುತ್ತಾರೆ.

ವಿವಿಧ ವಿಷಯಗಳು.

—೦—

ಪುಣೆಯ ಫರಗ್ಯುಸನ್ನ ಕಾಲೇಜು ಮತ್ತು ನ್ಯೂ ಇಂಗ್ಲಿಷಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳಿಗೆ ಬಲವಂತಿಕೆಯಿಂದ ವ್ಯಾಯಾಮ ಶಿಕ್ಷಣ ಕೊಡುವರು. ಇದಕ್ಕಾಗಿ ಇವರಿಗೆ ವರ್ಷಕ್ಕೆ ಏಳು ಸಾವಿರದ ವೆಚ್ಚ ಬರುವದು.

ಧಾರವಾಡದಂತೆ ವಿಜಾಪೂರದಲ್ಲಿಯೂ ನವರಾತ್ರಿಯ ಉತ್ಸವದಲ್ಲಿ ವ್ಯಾಖ್ಯಾನಗಳು ನಡೆದವು. ಬ್ರಾಹ್ಮಣೇತರರೂ ಇವರಲ್ಲಿ ಸೇರಿದ್ದರು. ಅಲ್ಲಿಗೆ ಗವ್ಹರ್ನರಸಾಹೇಬರು ೧೨ ನೇ ತಾರೀಖಿನ ದಿವಸ ಬರುವರು.

ಸಾಂಗಲಿಯ ಯುವರಾಜರ ಮೊದಲನೆಯ ಚಿರಂಜೀವರಾದ ಗೋವಿಂದರಾವ ಭಯ್ಯಾಸಾಹೇಬರು ಪರಲೋಕವಾಸಿಯಾದ ಬಗ್ಗೆ ಅಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ, ದುಃಖಪ್ರದರ್ಶನ ಮಾಡಲ್ಪಟ್ಟಿತು. ಪೇಟೆ ಮತ್ತು ಅಂಗಡಿಗಳು ಬಂದು ಮಾಡಲ್ಪಟ್ಟಿದ್ದವು.

ಮುಂಬಯಿಯ ಗವ್ಹರ್ನರಸಾಹೇಬರು ಸಾವಂತವಾಡಿಗೆ ಬರುವರು. ಸಾಹೇಬರ ಸ್ವಾಗತಕ್ಕಾಗಿ ರಾಜರು [illegible] ಮಾಡಬೇಕೆಂದಿದ್ದಾರೆ. [illegible]

ಮಹಾನವಮಿಯ ಉತ್ಸವವು.

—೦—

ಗುರುವಾರ ತಾ. ೨೯-೯-೨೭

ಮೊದಲು ಗೀತೆಗಳ ಪದಗಳಾದ ನಂತರ ಶ್ರೀ ಸುಬ್ರಹ್ಮಣ್ಯ ಶಾಸ್ತ್ರೀ ಇವರು ಶಾಸ್ತ್ರಗೀತವನ್ನು ಅಂದರು. ಆ ಮೇಲೆ ಬಾಲಿಗರಾದ ಶ್ರೀ ಹಂಪಿಹೊಳಿ, ಶ್ರೀ ಕುರಡಿ, ಶ್ರೀ. ಹೂಲಿಕಟ್ಟಿ, ಶ್ರೀ. ಪಾಟೀಲ, ಶ್ರೀ. ಸಾಸನೂರ, ಶ್ರೀ ಮುಗಳಿ, ಶ್ರೀ. ಗೋಕಾಕ, ಶ್ರೀ. ಕುಲಕರ್ಣಿ ಶ್ರೀ ಪ್ರಲ್ಹಾದ, ಶ್ರೀ ಟಕ್ಕರ, ಶ್ರೀ ಹೇಮಾಡಿ ಶ್ರೀ. ಮಳಗಿ, (ಸ್ವಂತದ ಹಾಗು ಶ್ರೀ ಕುಲಕರ್ಣಿ ಮಾಸ್ತರರ ಪದಗಳ) ಶ್ರೀ ದೇಶಪಾಂಡೆ [ಶ್ರೀ. ಬೆಟಗೇರಿಯವರ ಪದವನ್ನು] ಶ್ರೀ ಬೆಳಗಾಂವಕರ ಶ್ರೀ ಮುಧೋಳಕರ ಶ್ರೀ ಬೋಳಾರ್ಡ ಶ್ರೀ ನಾಲಿ, ಶ್ರೀ ಬೇಂದ್ರೆ (ಬುಲಬುಲ ಸಂಸ್ಥೆ ವರ್ಗ) ಕೊನೆಗೆ ಶ್ರೀ ವಾತಿ ಸಂಗೀತ ಪುರಾಣಿಕ ಮುಂತಾದವರು ಕವಿತೆ ಗಾಯನವನ್ನು ಮಾಡಿದರು. ನಡು ನಡುವೆ ಪ್ರಾಸ ನುಡಿಗಳ ಪಡೆಗಳ ಸಂಬಂಧವಾಗಿ ಶ್ರೀ ಹಂಪಿಹೊಳಿ, ಶ್ರೀ ಮುದ್ವೇಡಕರ ಶ್ರೀ. ಹೂಲಿಕಟ್ಟಿಗಳು ಟೀಕೆಯನ್ನು ಮಾಡಿದರು. ಒಟ್ಟಿನ ಮೇಲೆ ಕಾರ್ಯಕ್ರಮದಲ್ಲಿ ವಿವಿಧತೆ ಇತ್ತು. ಕೆಲವು ಪದಗಳು ಪ್ರಾಂಗಿಕ, ಕೆಲವು ನೀರಸ, ಕೆಲವು ಸರಸವಿದ್ದವು. ಅನ್ಯಾನ್ಯರ ದೋಷಗಳ ಮೂಲಕ ಅರುಚಿಯನ್ನು ಉಂಟು ಮಾಡುವಂಥವು, ಕೆಲವು ಸರಸ ಸುಲಭ, ಅದಾಗಿಯೂ ಯಮಕ ಶ್ಲೇಷಾಲಂಕಾರ, ಶಬ್ದಾಲಂಕಾರ ಹಾಗು ಪ್ರಾಸಗಳಿಂದ ಮನೋಹರವಾದಂಥವು, ಕೆಲವು ಭಕ್ತಿಪರ, ಸ್ಫೂರ್ತಿದಾಯಕ ಹಾಗು ದೇಶಾಭಿಮಾನ ಪ್ರೇರಿತವಿದ್ದ ಮೂಲಕ ಕಾರ್ಯಕ್ರಮವು ಒಳ್ಳೆ ಮನೋರಂಜನ, ಬೋಧಪ್ರದ ಹಾಗು ಆಕರ್ಷಣವಾಗಿದ್ದು ಉಭಾರ ಮನ್ನಣೆಯಾಗಿ ಸಭೆಯು ಮುಗಿಯಿತು.

—

ವಿಜಯ ಪುಸ್ತಕಾಲಯ.

—೦—

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಭಯ	೫ ,,
ದೇಶಬಂಧು ದಾಸರ ಚರಿತ್ರೆ	೨ ,,
ಶ್ರೀಕೃಷ್ಣನ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮಹಸೂಲ ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ದಿವಾಣಿ ಕಾಯದೆ ಬೋಧಿನಿ

(ಹೊಸ ಆವೃತ್ತಿ ೧೯೨೭)

ಇದರಲ್ಲಿ ದಿವಾಣಿ ಕಾಯದೆಯ ಕಲಮುಗಳ ಸಾರಾಂಶವು ಹಾಗು ಮುದ್ದತ ಆಕ್ಟ, ಸ್ಟಾಂಪ ಆಕ್ಟ, ಕೋರ್ಟ ಫೀ ಆಕ್ಟ, ಮಾಮಲೇದಾರ ಆಕ್ಟ, ಇನಕಮ್‌ಟ್ಯಾಕ್ಸ ಆಕ್ಟ, ಹಿಂದೂ ದರ್ಮಶಾಸ್ತ್ರ ಮೊದಲಾದ ಉಪಯುಕ್ತ ಕಾಯದೆಗಳ ಸಾರಾಂಶವು ಸಾಮಾನ್ಯ ಜನರಿಗೂ ತಿಳಿಯುವಂತೆ ಸ್ಪಷ್ಟವಾಗಿ ಬರೆಯಲ್ಪಟ್ಟಿರುತ್ತದೆ. ಇದು ದಿವಾಣಿ ಕೋರ್ಟಿನ ಪಕ್ಷಕಾರರಿಗೂ ವಕೀಲರ ಕಾರಕೂನರಿಗೂ ಬಹಳ ಉಪಯೋಗವಿರುತ್ತದೆ. ಇದರಲ್ಲಿ ಹೊಸ ಸ್ಟಾಂಪ ಮತ್ತು ಹೊಸ ಕೋರ್ಟ ಫೀ ದರಗಳನ್ನು ಕೊಟ್ಟಿರುತ್ತವೆ. ಪಕ್ಷಕಾರರು ಇದ್ದ ಅಂಥ ಕಾಯದೆಗಳನ್ನು ಓದಿಕೊಂಡು ಅಥವಾ ಯಾವದೇ ಜನರ ಸುಳ್ಳು ಅಥವಾ ತಪ್ಪು ಹೇಳಿಕೆಯ ಮೇಲೆ ವಿಶ್ವಾಸವಿಟ್ಟು ಮೋಸ ಹೋಗಬಾರದೆಂದು ಈ ಪುಸ್ತಕವನ್ನು ಬೇಕಂತಲೇ ಮಾಡಿರುತ್ತದೆ. ಬೆಲೆ ಒಂದು ರೂಪಾಯಿ ಅಂಚೆ ವೆಚ್ಚ ಬೇರೆ.

ಮಾಮಲೇದಾರ ಕೋರ್ಟ ಆಕ್ಟ [ನವೀನ]

ಇದು ಮಾಮಲೇದಾರ ಕೋರ್ಟಿನಲ್ಲಿ ವಹಿವಾಟಿ ದಾವೆಗಳನ್ನು ಮಾಡುವವರಿಗೆ ಬಹಳ ಉಪಯೋಗವಾಗುತದೆ. ಇದರಲ್ಲಿ ಮುಂಬಯಿ ಹೈಕೋರ್ಟಿನ ಯಾವತ್ತು ಮುಖ್ಯ ದಾಖಲೆಗಳನ್ನು ಕೊಟ್ಟಿರುತ್ತದೆ. ಇದು ೧ನೇ ಆವೃತ್ತಿಯು ೧೯೨೭ನೇ ಸಪ್ಟೆಂಬರ ತಿಂಗಳಲ್ಲಿ ಪ್ರಸಿದ್ಧವಾಗಿದ್ದು ಬೆಲೆ ೧೦ ಆಣೆ ಅಂಚೆ ವೆಚ್ಚ ಬೇರೆ.

ಇದಲ್ಲದೆ ನಮ್ಮಲ್ಲಿ ನಾವು ರಚಿಸಿದ ನೀತಿ ಮಂಜರಿ ಬೆಲೆ ೧೦ ಆಣೆ, ಶ್ರೀ ರಾಮದಾಸ ಸ್ವಾಮಿ ಚರಿತ್ರ ಬೆಲೆ ೧ ರೂ ೬ ಆಣೆ ಬೋಧ ರತ್ನ ಬೆಲೆ ೮ ಆಣೆ, ಬಾಲ ರಾಮಾಯಣ ಬೆಲೆ ೬ ಆಣೆ ಬಾಲಭಾರತ ಬೆಲೆ ೨ ಆಣೆ, ದುಷ್ಯಂತ ಪ್ರೇಮ ಕಾದಂಬರಿ ಬೆಲೆ ೧೦ ಆಣೆ ತ್ರಾಟಿಕಾ ನಾಟಕ (ಮೊಂಡ ಗಂಡನ ಮುತ್ತು ತುಂಟ ಹೆಂಡತಿಯರು ನಾಟಕ) ಬೆಲೆ ೧೨ ಆಣೆ ಧ್ರುವ ಚರಿತ್ರ ೨॥ ಆಣೆ, ಚೆನ್ನಮ್ಮ ಚರಿತ್ರ ೩॥ ಆಣೆ, ಸಾವಿತ್ರಿ ಚರಿತ್ರ ಬೆಲೆ ೪ ಆಣೆ ಗ್ರಾಮ ಪೋಲೀಸ ಆಕ್ಟ [ನವೀನ] ಬೆಲೆ ೬ ಆಣೆ, ತೊಂಡವಾಡಿ ಆಕ್ಟ (ನವೀನ) ಬೆಲೆ ೫ ಆಣೆ, ದಸ್ತೈವಜರ ನಿಯಮಗಳು ಮತ್ತು ನಮೂನೆಗಳು ಬೆಲೆ ೩ ಆಣೆ ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ.

ವಿಶೇಷ ಸೂಚನೆ:—ಈ ಯಾವತ್ತೂ ಪುಸ್ತಕಗಳನ್ನು ಒಮ್ಮೆಲೆ ಕ್ರಯಕ್ಕೆ ತೆಗೆದುಕೊಳ್ಳುವವರಿಗೆ ಮೂರು ನಾಲ್ಕಾಂಶ ಬೆಲೆಗೆ ಕೊಡುತ್ತೇವೆ.

ಗದಿಗೆಯ್ಯಾ ಹುಚ್ಚಯ್ಯಾ ಹೊನ್ನಾಪೂರಮಠ
ಡಿಸ್ಟ್ರಿಕ್ಟ ಕೋರ್ಟ ಪ್ಲೀಡರ,
ಮತ್ತು ಚಂದ್ರೋದಯ ಪ್ರೆಸ್ಸ ಮಾಲಕ, ಧಾರವಾಡ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

—

ಚಂದಾದಾರರಿಗೆ ಸೂಚನೆ

—೦—

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಸಾಲುಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದಾವರೆ ಆಣೆ ಇಂಗ್ಲಿಷ ಪ್ರತಿಯೊಂದು ಸಾಲಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರ್ಧ ಆಣೆ ಡಬಲ್‌ಕಾಲಮಿನ ಸಾಲುಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೪ | ಧಾರವಾಡ ಶನಿವಾರ ತಾರೀಖು ೧ ನೇ ಅಕ್ಟೋಬರ ೧೯೩೨ | ಸಂಚಿಕೆ ೨೧೨

ಹಂಗಾಮವು ಮುಗಿಯು ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಹಿಂಗಾ ಯಂತ್ರಗಳು



ಚನ್ನಾಗಿ ಕ ನವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೆಂದರೆ ಉಕ್ಕಿನ ಕಂಬಿಗಳ ಬಾಲ್ ಬೇರಿಂಗ್ ಚಕ್ರಗಳು ಇರುವದರಿಂದ ಯಂತ್ರವು ಅತ್ಯಂತ ಹಗುರಾಗಿ ನಡೆಯುವದಲ್ಲದೆ ಇತರ ಯಂತ್ರಗಳಿಗಿಂತ ಇವುಗಳಲ್ಲಿ ಕಾಳು ಬೇಳೆ ಒಡೆಯುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ದುಡ್ಡಿಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದವು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

WANTED.

Wanted Candidates for Telegraph and Station Master's Courses. Railway Fare GRANTED Boarding Seat FREE Prospectus on 2 annas stamp,— Presidency Telegraph College, Royapettah Madras.

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನ್ನ ಪಾಲುಗಳು, ನಾಲ್ಕು ವರು ಷಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಈ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಪಾಲಿನವರನ್ನು ವತ್ತೀ ಕ ಮ್ಮವಿದ್ಯ ವ ಬಡ್ಡಿಯ. ದರವು ನಾಲ್ಕು ತಿಂಗಳಿಗೆ ಬಡ್ಡಿದರ ಆಗುಯಿಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಸರಕಾರ ಮಂಜೂರಿಯಿಂದ ಮಂಜೂರಾದ

ಕನ್ನಡ ನಿಬಂಧರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟಿದ್ದಲ್ಲದೆ ರಿಪೋರ್ಟ- ಅರ್ಜಿ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವದೆ.

ಪ್ರತಿಗಳು ದೊರೆಯುವ ಸ್ಥಳ— ೧ ರಾ. ರಾ ಬಿ ಜಿ. ದಿವೇಕರ,
ಮಾಳಮಡ್ಡಿ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಪ್ಪಾ,
ವಾಣ್ಣಿಜ್ಯದ ಬುಕ ಡಿಪೋ ಹುಬ್ಬಳ್ಳಿ

ದಿ ಧಾರವಾಡ ಅರ್ಬನ ಕೋ.
ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವವು. ಕಾಯಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೧ ೧೦-೨೭ ನೇ ಇಸ್ವಿ

ಎಲ್ಲೆಲ್ಲಾದರೂ ಸ್ಕೂಲಬೋರ್ಡ ಅ್ಯಡಮಿನಿಸ್ಟ್ರೇಟರರದೇ ಗಲಭೆ.

ಧಾರವಾಡ ಜಿಲ್ಲೆಯ ಸ್ಕೂಲಬೋರ್ಡಿನವರು ಅನೇಕ ಜನ ಅನುಭವಿಕ ಮತ್ತು ಹೆಚ್ಚು ಯೋಗ್ಯತೆಯುಳ್ಳಂಥವರನ್ನು ಬದಿಗೊತ್ತಿ, ತಮಗೆ ಬೇಕಾದಂಥ ಅನುಭವಶೂನ್ಯ ಗೃಹಸ್ಥರನ್ನು ಅ್ಯಡಮಿನಿಸ್ಟ್ರೇಟರರಾಗಿ ನೇಮಿಸಿಕೊಂಡ ವಿಷಯವು ಮುಂತ್ರಿಯ ಕಾಗದ ಪತ್ರಗಳಲ್ಲಿ ಸದ್ಯ ಮುಂದುಗಾಣನೆ ಬಿದ್ದಿರುತ್ತದೆ. ಬೆಳಗಾವಿಯವರು ತಮಗೆ ಜಗತಾಪರೇ ಬೇಕೆಂದು ಹಟ ಹಿಡಿದು, ಸರಕಾರಕ್ಕೆ ಸಹ್ಯಾಗ್ರಹದ ಸಂಭಾವನೆ ಕೊಡಬೇಕೆಂದಿದ್ದಾರೆ. ವಿಜಾಪೂರದವರು ಮಿ. ಗೋಖಲೆಯವರಂಥ ಅನುಭವಿಕ ಗೃಹಸ್ಥರನ್ನು ಬಿಟ್ಟು, ಬ್ರಾಹ್ಮಣೇತರರೆಂಬ ಅಭಿಮಾನದಿಂದ ಮಿ. ಜಗತಾಪರನ್ನೇ ನೇಮಿಸಿಕೊಂಡರು. ಈ ಪ್ರಕಾರ ನಡೆದ ಉದ್ಧಟತನದ ವರ್ತನಕ್ಕೆ ಮತ್ತು ಮುಂದೆ ಯಾರೂ ಇಂಥ ಅಧಿಕ ಪ್ರಸಂಗತನ ಮಾಡಬಾರದೆಂದು ವಿದ್ಯಾಖಾತೆಯ ಮಂತ್ರಿಯವರು ಅ್ಯಡಮಿನಿಸ್ಟ್ರೇಟರ ನೇಮಣೂಕಿಯ ಮಂಜೂರಿಯನ್ನು ಸಂಪೂರ್ಣವಾಗಿ ಸರಕಾರದ ಸ್ವಾಧೀನಕ್ಕೊಳಪಡಿಸಬೇಕೆಂದು ಬಿಲ್ಲ ಪಾಸು ಮಾಡಿಕೊಳ್ಳುವರು. ಲೋಕಮತದ ಪ್ರಭುತ್ವವೆಂದು ಸಾರುವಂಥ ಮತ್ತು ವಿಶೇಷವಾದ ರಾಜಕೀಯ ಹಕ್ಕುಗಳನ್ನು ಬೇಡುವಂಥ ಸಮೀಪ ಕಾಲದಲ್ಲಿ ಸರಕಾರದಿಂದ ದೊರೆತ ಹಕ್ಕನ್ನು ಒರೇ ಕುಲಾಭಿಮಾನದಿಂದ ಹೇಗೆ ಕಳಕೊಳ್ಳುತ್ತಿರುವರೆಂದು ಈ ವಿವೇಚನೆಯಿಂದ ಸ್ಪಷ್ಟವಾಗುತ್ತದೆ

ಧಾರವಾಡ, ಬೆಳಗಾವಿಗಿಂತ ರಾಣೆಯ ಅ್ಯಡಮಿನಿಸ್ಟ್ರೇಟರ ಪ್ರಕರಣವು ಬಹು ಚಮತ್ಕಾರದ್ದಾಗಿ, ಕೋರ್ಟಿನ ಕಟ್ಟೆಯನ್ನೇರಿರುತ್ತದೆ ಅಲ್ಲಿಯ ಸ್ಕೂಲ ಬೋರ್ಡಿನವರು ಮಿ. ವಡಕರೆಂಬುವವರನ್ನು ಅ್ಯಡಮಿನಿಸ್ಟ್ರೇಟರರಾಗಿ ನೇಮಿಸಿಕೊಳ್ಳಬೇಕೆಂದರು. ಮಿ. ವಡಕರು ಹೊರಗಿನವರಲ್ಲ; ಸ್ಕೂಲಬೋರ್ಡಿಗೆ ಅಧಿಕಾರ ದೊರೆಯುವ ಪೂರ್ವದಿಂದಲೇ ಈ ಕೆಲಸ ಮಾಡುತ್ತಾ ಇದ್ದರು. ಇವರನ್ನೇ ಕಾಯಮ ಮಾಡಬೇಕೆಂದು ಬೋರ್ಡಿನವರು ಡಿಸ್ಟ್ರಿಕ್ಟ ಲೋಕಲಬೋರ್ಡಿಗೆ ಸಿಫಾರಸ್ಸು ಮಾಡಿದರು. ಒಮ್ಮೆಯಲ್ಲ; ಎರಡು ಸಾರೆ ಮಾಡಿದರು. ಆದರೂ ಜಿಲ್ಹಾ ಬೋರ್ಡಿನವರು ಇವರ ಬರವಣಿಗೆಯನ್ನು ಮಂಜೂರ ಮಾಡದೆ, ಒಂದಕ್ಕಿಂತ ಹೆಚ್ಚು ಹೆಸರುಗಳನ್ನು ಸಿಫಾರಸ್ಸ ಮಾಡಬೇಕೆಂದು ಒರೆದರು ಅನಿವಾರ್ಯವಾಗಿ ಸ್ಕೂಲಕಮಿಟಿಯವರು ಮಿ. ವಡಕರ ಹೆಸರನ್ನು ಮೊದಲು ಬರೆದು, ಬೇರೆ ಐದು ಜನರುಗಳನ್ನು ಸೂಚಿಸಿ ಮಿ. ಗಟ್ಟಿ ಎಂಬವರೂ ಯೋಗ್ಯರಿದ್ದಾರೆಂದು ಸಿಫಾರಸ್ಸ ಮಾಡಿದರು. ಜಿಲ್ಲಾ ಬೋರ್ಡಿನವರು ಅನಾಯಾಸವಾಗಿ ದೊರೆತ ಎರಡನೆಯ ಹೆಸರನ್ನು ಮಂಜೂರ ಮಾಡಿ, ವಡಕರಿಗೆ ಮನೆಗೆ ಅಪ್ಪಣೆ ಕೊಟ್ಟು, ಮಿ. ಗಟ್ಟಿಯವರನ್ನು ನೇಮಿಸಿಕೊಂಡು, ವಿದ್ಯಾಖಾತೆಯವರ ಮಂಜೂರಿ ಪಡಕೊಂಡರು.

ಮಿ. ಗಟ್ಟಿಯವರು ಇಷ್ಟರಲ್ಲಿ ಚಾರ್ಜ ತಕ್ಕೊಳ್ಳುವರು. ಈ ನೇಮಣೂಕು ಅನ್ಯಾಯವಾಗಿಯೂ, ಬೇಕಾಯದೇಶೀರವೂ ಆಗಿರುತ್ತದೆಂದು ಜಿಲ್ಲಾ ಬೋರ್ಡಿನ ಒಬ್ಬ ಮೆಂಬರರಾದ ಮಿ ಅಲಮೇಡಾ ಎಂಬವರು ಅಂದುಕೊಂಡು, ಈ ನೇಮಣೂಕಿಯನ್ನು ರದ್ದ ಮಾಡಬೇಕೆಂದು, ಮಿ. ಗಟ್ಟಿಯವರು ಚಾರ್ಜ ತಕ್ಕೊಳ್ಳದಂತೆ ತಡಕೂಬಿಯ ಹುಕುಮು ಕೊಡಬೇಕೆಂದೂ ದಿವಾಣಿ ಕೋರ್ಟಿನಲ್ಲಿ ದಾವೇ ತಂದಿದ್ದಾರೆ. ಡಿಸ್ಟ್ರಿಕ್ಟ ಲೋಕಲಬೋರ್ಡಿನವರು ಮಾಡಿದ ಮಿ. ಗಟ್ಟಿಯವರ ನೇಮಣೂಕು ಮತ್ತು ಸರಕಾರದವರು ಕೊಟ್ಟ ಮಂಜೂರಿಯು ಗೈರ ಕಾಯದೆಶೀರವಿದ್ದು, ಈ ಪ್ರಕರಣದ ಪೂರ್ಣ ವಿಚಾರಣೆಯಾಗುವ ತನಕ ಮಿ. ಗಟ್ಟಿಯವರಿಗೆ ಚಾರ್ಜ ಕೊಡಗೊಡಬಾರದೆಂದು ತಮ್ಮ ಅರ್ಜಿಯಲ್ಲಿ ಬರಕೊಂಡಿದ್ದಾರೆ.

ಮಿಡತೆಗಳಿಂದಾಗುವ ಬೆಳೆಯ ಹಾನಿಯು.

—(೦)—

ಮುಂಬಯಿ ಇಲಾಖೆಗೆ ಮೂರು ತರದ ಮಿಡಚೆಗಳು ಬೆಳೆಗಳ ಹಾನಿಗೆ ಕಾರಣವಾಗಿರುತ್ತವೆ. ಇವನ್ನು ಹೀಗೆಯೇ ಬೆಳೆಯಗೊಟ್ಟರೆ ರೈತರ ಕೈಗೆ ಒಂದು ಕಾಳು ಸಹ ಹತ್ತದೆಂದು ಒಕ್ಕಲತನದ ಖಾತೆಯವರಿಗೆ ಭಯವಾಗಿರುತ್ತದೆ. ಇವನ್ನು ವರ್ಷ ರಡು ವರ್ಷಗಳಲ್ಲಿ ಸಂಪೂರ್ಣ ನಾಶ ಮಾಡದಿದ್ದರೆ ಈ ಹುಳಗಳೇ ಹೊಲಗಳ ತುಂಬಾಗಿ, ರೈತರು ಬಿತ್ತುವ ಅಗತ್ಯವೇ ಉಂಟಾಗಲಾರದೆಂದು ಡಾಕ್ಟರ ಮ್ಯಾಕಸಾಹೇಬರು ಭಯದ ಡಂಗುರ ಸಿಗ್ನಲ ತೋರಿಸಿದ್ದಾರೆ.

ಮಿಡಚೆಗಳು ಮೂರು ಪ್ರಕಾರದ್ದಿರುತ್ತವೆ.

೧ ಸಿಂಧ ಕಾಠೇವಾಡ ಮತ್ತು ಗುಜರಾಥದಲ್ಲಿ ಹಾವಳಿ ಮಾಡುವ ಬೆಟ್ಟಗಳು.

೨ ಕೊಂಕಣ ಮತ್ತು ಮಲ್ಲಾಡದಲ್ಲಿರುವ ಕಿರಿ ಜಾತಿಯವು.

೩ ರೆಕ್ಕೆಯಿಲ್ಲದಂಥ ಮಿಡಚೆಗಳು, ಇವು ಸಾಸಿರದಿಂದ ಧಾರವಾಡದ ತನಕ ಬೆಳೆಗಳನ್ನೇ ಲೆ ಹಾವಳಿ ತಂದೊದವು.

ಇವು ಹೇಗೆ ಅನರ್ಥ ಮಾಡುವವೆಂಬುದನ್ನು ಡಾಕ್ಟರ ಮ್ಯಾಕಸಾಹೇಬರ ಶಬ್ದಗಳಲ್ಲಿಯೇ ಇದಂದಿ ಕೊಡುತ್ತೇವೆ.

ನಮ್ಮ ಮುಂದೆ ಒಂದು ದೊಡ್ಡ ಗಂಡಾಂತರವು ದುತ್ತೆಂದು ನಿಂತಿರುತ್ತದೆ. ಮೂರು ಜಾತಿಯ ಮಿಡಚೆಗಳು ಇಡೀ ಮುಂಬಯಿ ಇಲಾಖೆಯನ್ನು ವ್ಯಾಪಿಸಿ, ಅತರ್ಕ್ಯವಾದ ಕೇಡು ಮಾಡಬೇಕೆಂದಿರುತ್ತವೆ. ಸಸಿಯಿಂದ ತೆನೆಯ ತನಕ ಬೆಳೆಗಳನ್ನು ಧ್ವಂಸ ಮಾಡುವವು. ಹೋದ ವರ್ಷಕ್ಕಿಂತ ಈ ವರ್ಷ ಹೆಚ್ಚು ಕೇಡು ಮಾಡುವವು ಇವುಗಳ ಜನನ, ಬೆಳೆಗೆ ಮತ್ತು ನಾಶದ ಪೂರ್ವಾಪರವನ್ನು ಕಂಡುಹಿಡಿಯದಿದ್ದರೆ ಇಲಾಖೆಯ ಮುಖ್ಯ ಧಾನ್ಯವು ಪೂರಾ ನಷ್ಟವಾಗುವದು. ಅಥವಾ ಅಲ್ಪ ಸ್ವಲ್ಪ ಕೈಗೆ ಹತ್ತುವದು. ಹೀಗೇ ಬಿಟ್ಟರೆ ಈ ಹಾವಳಿಯು ಭಯಂಕರವಾಗಿ ಬೆಳೆಯುವದು ಆಗ ಇವುಗಳ ಧ್ವಂಸಕ್ಕಾಗಿ ಸರಕಾರದ ಎಲ್ಲ ಖಾತೆಗಳ ಕಾಮದಾರ, ಸಿಪಾಯರನ್ನು ಮೊದಲು ಮಾಡಿಕೊಂಡು ಯುದ್ಧದಲ್ಲಿ ಸೇನಾಸಿದ್ಧತೆ ಮಾಡುವಂತೆ, ಎಲ್ಲರನ್ನೂ ಕಲೆ ಹಾಕಬೇಕಾಗುವದು.”

ಏಸೂಕ್ರಿಸ್ತನು ಪಾಪಿಷ್ಠನೋ? ಪುಣ್ಯವಂತನೋ?

—೦—

ಹುಟ್ಟಿದಾಗ ಶೂದ್ರನು, ಕರ್ಮದಿಂದ ಬ್ರಾಹ್ಮಣನು ಎಂಬದಾಗಿ ಹಿಂದೂ ಮತವು ಹೇಳುತ್ತದೆ. ಅದೇ ಪ್ರಕಾರ ಏಸೂ ಕ್ರಿಸ್ತನು ಹುಟ್ಟಿದಾಗ ಪಾಪಿಯು. ಬಾಪ್ತಿಸಮಾ ತಕ್ಕೊಂಡ ಬಳಿಕ ಪುಣ್ಯಶರೀರವುಳ್ಳವನಾದನೆಂದು ಅಮೇರಿಕೆ ಮತ್ತು ಜರ್ಮನಿಯ ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈ ಅಭಿಪ್ರಾಯದ ಅನುವಾದವನ್ನು ರೆವ್ಹರೆಂಡ ಪಂಗಬೆರಿ ಎಂಬ ಹೆಸರಿನ ಪ್ರಸಿದ್ಧ ಪಾದ್ರೀಸಾಹೇಬರು ಮಾಡಿದರು. ಆಚಾರ್ಯ ಅಥವಾ ಭಟ್ಟರಾದವರು ಗತಾನುಗತಿಕವಾಗಿ ಒಂದಂಥ ಪಾಕ್ಷಾರ್ಥ ಶಾಸ್ತ್ರಾರ್ಥ ಮಾಡಬೇಕೆಂದು ಆಯಾ ಮತದ ಗುರುಗಳು ಖಂಡಿತವಾಗಿ ಹೇಳುವರು. ಇದರ ವಿರುದ್ಧ ಹೋಗುವಂದವರನ್ನು ಪಾಖಂಡಿಗಳ ವರ್ಗದಲ್ಲಿ ಸೇರಿಸಿ, ಅವರನ್ನು ಬಹಿಷ್ಕಾರ ಮಾಡುವರು. ಅದೇ ಪ್ರಕಾರದ ಶಾಸನದ ಶಿಕ್ಷೆಯನ್ನು ಭೋಗಿಸುವ ಮಾನಸ್ಥರು ರೆವ್ಹರೆಂಡ ಪಂಗ್ಸಬರಿ

ಯವರಿಗೆ ಪ್ರಸ್ತುತದಲ್ಲಿ ಬಂದಿದೆ. ಯೇಸೂಕ್ರಿಸ್ತನು ಹುಟ್ಟಿದಾಗ ಪಾಪಿಯಾಗಿದ್ದನು. ಬಾಪ್ತಿಸಮಾ ತಕ್ಕೊಂಡ ನಂತರವೇ ಪವಿತ್ರ ಶರೀರಿಯಾದನೆಂಬದೇ ನಿಜವೆಂದು ಇವರು ದೇವಾಲಯಗಳಲ್ಲಿ ಪುನಃ ಪುನಃ ಭಾಷಣ ಮಾಡಿದರು. ಮನಸ್ಸಿಗೆ ಖಂಡಿತವಾಗಿ ತೋಳಿದದ್ದನ್ನು ಮುಚ್ಚುಮರೆ ಮಾಡುವದು ಹೇಗೆ? ಇವರಂತೆ ಉಳಿದವರ ವಿಚಾರವಾಗಲಿಲ್ಲ. ದೇವರ ಮಗನು ಪುರುಷ ಸಂಬಂಧವಿಲ್ಲದೆ ಕುಮಾರಿಯ ಹೊಟ್ಟೆಯಿಂದ ಹುಟ್ಟಿದವನು ಪಾಪಿಯಾಗುವದೆಂತು? ಸರ್ವಜ್ಞನಾ ಅಲ್ಲೆಂದು ಮಿಕ್ಕ ಪಾದ್ರಿಗಳು ಕಿಂಗ್ಸಬರಿಯ ವಿರುದ್ಧ ಬಂಡಾಯವೆಬ್ಬಿಸಿದರು. ಹೊಸಬನೆಯ ಶಿಕ್ಷೆ ಎಂದು ಇವರಿಗೆ ಪಾದ್ರೀ ಕೆಲಸದಿಂದ ಸಸ್ಪೆಂಡ ಮಾಡಿದರು. ಅನಂತರ ಸಮಸ್ತ ಪಾದ್ರಿಗಳ ಮಹಾಸಭೆಯು ಕೂಡಿತು. ಇದು ಎರಡು ವರ್ಷಕ್ಕೊಮ್ಮೆ ಕೂಡುವದು. ಈ ಸಭೆಯು ಹೋದವಾರದಲ್ಲಿ ಮಧುರೆಯಲ್ಲಿ ಕೂಡಿತು. ಇದರ ಮುಂದೆ ಕಿಂಗ್ಸಬರಿಸಾಹೇಬರು ತಮ್ಮ ಸಿದ್ಧಾಂತವನ್ನೇ ನುಡಿದರು. ಪುನಃ ಪುನಃ ಪಾಬುಡಿಯಂತೆ ಅನುವಾದ ಮಾಡುವದು ಪಾದ್ರಿಗಳಿಗೆ ಸಹನವಾಗಲಿಲ್ಲ. ಒಮ್ಮತದಿಂದ ಇವರನ್ನು ಎರಡು ವರ್ಷ ಸಸ್ಪೆಂಡ ಮಾಡಿದರು. ಅಲ್ಪ ಸಂಖ್ಯಾಕರಾದರೂ ಇವರಿಗೆ ಕೆಲ ಜನರಾದರೂ ಅನುಕೂಲರಾಗಿರುವರೆಂಬದು ಒಂದು ವಿಶೇಷ.

ಮಹತ್ವದ ಠರಾವುಗಳು.

—o—

ಶ್ರೀ. ಜೋಗ ಇವರು ೨೯-೯-೨೭ಕ್ಕೆ ಪ್ರಾರಂಭಿಸುವ ಮುಂಬಯಿ ಕೌನ್ಸಿಲ್ಲಿನ ಅಧಿವೇಶನದಲ್ಲಿ ಈ ಮಹತ್ವದ ಠರಾವುಗಳನ್ನು ತರತಕ್ಕವರಿದ್ದಾರೆ.

(೧) ಮುಂಬಯಿ ಮತ್ತು ಮದ್ರಾಸ ಇಲಾಖೆಗಳಲ್ಲಿರುವ ಕನ್ನಡಭಾಗ, ಕೊಡಗು ಈ ಮೊದಲಾದವುಗಳನ್ನು ಕೂಡಿಸಿ ಕರ್ನಾಟಕವೆಂಬ ಭಾಷಾನುಗುಣ ಪ್ರಾಂತವನ್ನು ರಚಿಸಬೇಕೆಂದು ಮುಂಬಯಿ ಸರಕಾರದವರು ಹಿಂದುಸ್ಥಾನ ಸರಕಾರಕ್ಕೆ ಹೇಳಿಕೊಳ್ಳಬೇಕೆಂದು ಈ ಕೌನ್ಸಿಲ್ಲು ಶಿಫಾರಸು ಮಾಡುತ್ತದೆ.

(೨) ಲ್ಯಾಂಡ ರೆವ್ಹಿನ್ಯೂ ಅಸೆಸಮೆಂಟ ಕಮೀಟಿಯ ವರದಿಯ ಬಗ್ಗೆ ಸರಕಾರದವರು ಹೊರಡಿಸಿದ ಪ್ರಕಟನೆಯನ್ನು ಈ ಕೌನ್ಸಿಲ್ಲು ನಿಷೇಧಿಸುತ್ತದೆ, ಮತ್ತು ೧೮೭೯ ರಲ್ಲಿಯ ಲ್ಯಾ. ರೆ. ಕೋಡಿನಲ್ಲಿರುವ ತೆರಿಗೆ ಹೆಚ್ಚಿಸುವ ಬಗ್ಗೆ ಇದ್ದ ನಿಯಮಗಳನ್ನು ಬದಲು ಮಾಡುವದು ಈ ಕೌನ್ಸಿಲ್ಲಿನ ಅಧಿಕಾರ ಸಭಾಸದರ ಸಮ್ಮತಿಯಿಂದ ಮಾಡಬೇಕೆಂದು ಈ ಕೌನ್ಸಿಲ್ಲಿನ ಮತವಿರುವದು.

(೩) ಮೇಲಿಂದ ಮೇಲೆ ಬರಬೀಳುತ್ತಿರುವ ಮತ್ತು ಕುಡಿಯುವ ನೀರಿನ ಅಭಾವ ಇದ್ದ ಧಾರವಾಡದ ನವಲಗುಂದ ನರಗುಂದ ಭಾಗಗಳಲ್ಲಿ ಸಣ್ಣ ಪುಟ್ಟ ನೀರಾವರಿ ಕೆಲಸಗಳನ್ನು ಮಾಡುವದರ ಸಲುವಾಗಿಯೂ ಬಾವಿಗಳನ್ನು ಅಗಿಯುವದರ ಸಲುವಾಗಿಯೂ ೨ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗಿ ಈ ಕೌನ್ಸಿಲ್ಲು ಶಿಫಾರಸ ಮಾಡುತ್ತದೆ.

(೪) ಗಡಿಬಿಡಿ ಇಲ್ಲದೇ ತಮ್ಮ ಸರಕುಗಳನ್ನು ತಕ್ಕ ಬೆಲೆಗೆ ಮಾರಲಿಕ್ಕೆ ರೈತರಿಗೆ ಅವಕಾಶ ದೊರೆಯುವಂತೆ ಸರಕಾರಕ್ಕೆ ತೆರಿಗೆ ಕೊಡುವ ತಾರೀಖುಗಳನ್ನು ಒಂದು ತಿಂಗಳ ಮಟ್ಟಿಗೆ ಮುಂದೆ ಹಾಕಬೇಕೆಂದು ಈ ಕೌನ್ಸಿಲ್ಲಿನ ಅಭಿಪ್ರಾಯವು.

(೫) ಧಾರವಾಡ ಜಿಲ್ಹೆಯ ಮುಸಲ್ಮಾನೇತರ ಜನರಿಗೆ ಇನ್ನೆರಡು ಸಭಾಸದರನ್ನು ಕೌನ್ಸಿಲ್ಲಿಗೆ ಆರಿಸಿ ಕೊಡುವ ಅಧಿಕಾರವನ್ನು ಕೊಡಬೇಕೆಂದು ಹಿಂದುಸ್ಥಾನ ಸರಕಾರಕ್ಕೆ ಮುಂಬಯಿ ಸರಕಾರದವರು ಹೇಳಬೇಕೆಂದು ಈ ಕೌನ್ಸಿಲಿನ ಅಭಿಪ್ರಾಯವು

(೬) ಸರ ವಿಶ್ವೇಶ್ವರಯ್ಯನವರು ಸೂಚಿಸಿದ ಕೈಗಾರಿಕೆಯ ಶಿಕ್ಷಣವನ್ನು ಕೂಡಲೇ ಪ್ರಾರಂಭಿಸಿ ಮುಂದಿನ ವರ್ಷದ ಆಯವ್ಯಯ ಪತ್ರಿಕೆಯಲ್ಲಿ ಹಣದ ವ್ಯವಸ್ಥೆ ಮಾಡಬೇಕು.

(೭) ಸಹಕಾರೀ ತತ್ವದಂತೆ ಸಂಘಗಳು ನಡೆದಿವೆಯೋ ಇಲ್ಲವೋ ಇದನ್ನು ಪರೀಕ್ಷಿಸಲಿಕ್ಕೂ ಸಭಾಸದರ ಆರ್ಥಿಕ ಸ್ಥಿತಿಯು ಹೇಗಿದೆ ಎಂಬದನ್ನು ನೋಡಿ ಸುಧಾರಣೆಗಳನ್ನು ಸೂಚಿಸಲಿಕ್ಕೂ ಒಂದು ಮಂಡಲವು ನೇಮಿಸಲ್ಪಡಬೇಕು.

ಗುಜರಾಥದ ಕಾಂಗ್ರೆಸ ಕಮೀಟಿಯವರು ಹೊಸ ಪದ್ಧತಿಯಿಂದ ಎಲ್ಲ ಸುಧಾರಣೆಗಳಿಂದೊಡಗೂಡಿದ ಮಾದರಿಯ ಒಂದು ಹಳ್ಳಿಯನ್ನು ಕಟ್ಟುವರು. ೧೫೦ ಮನೆಗಳಾಗುವವು. ೭೫೦೦೦ ರೂಪಾಯಿ ವೆಚ್ಚ ಬೀಳುವದು. ಇದು ಯಶಸ್ವಿಯಾದರೆ ಅನೇಕ ಗ್ರಾಮಗಳ ಪುನರ್ಘಟನೆ ಮಾಡುವರು.

ದಿಲ್ಲಿಯಲ್ಲಿ ಹಿಂದುಸ್ಥಾನದಲ್ಲಿರುವ ಉತ್ತಮ ಜಾತಿಯ ನಾಯಿಗಳ ಪ್ರದರ್ಶನ ನೆರೆಯುವದು. ಉತ್ತಮವೆಂದು ಪಾಸಾದಂಥವುಗಳಿಗೆ ಇನಾಮು ದೊರೆಯುವದು.

ಲಂಡನದ ಬೊಲ್ಶೆವಿಕ ಸಂಘದ ಕೂಲಿಕಾರರು ಗುಜರಾಥದ ರಿಲೀಫ ಫಂಡಿಗೆ ೧೩೦ ರೂಪಾಯಿಗಳನ್ನು ಕಳಿಸಿದ್ದಾರೆ

ಧಾರವಾಡ ಮ್ಯುನಿಸಿಪಾಲಿಟಿಯಲ್ಲಿ ಸಸ್ಪೆಂಡದ ಪ್ರಕರಣವು.

—o—

ಸಕ್ತಿಯ ರಜೆ ಅಥವಾ ಸಸ್ಪೆಂಡದಲ್ಲಿರುವ ಇಲ್ಲಿಯ ಮ್ಯುನಿಸಿಪಾಲಿಟಿಯ ಮೂವರು ಕಾಮೆದಾರರಾಗಿದ್ದ ಮೆಸರ್ಸ ಚನಬಸನಗೌಡಾ ಪಾಟೀಲ, ಗಿಲಗಂಚಿ ಮತ್ತು ವೆಂಕಟರಾವ ಸ್ತರಣಾವ ಫೌಜದಾರೀ ಕಚೇರಿಯನ್ನು ಕಾಣುವರೆಂದೂ ಆ ಬಗ್ಗೆ ಪೂರ್ಣ ಸಿದ್ಧತೆಯಾಗಿರುತ್ತದೆಂದೂ ತಿಳಿಯುತ್ತದೆ.

ದಾಣೇಬಸ್ತೂರಲ್ಲಿ ಅಸ್ಪೃಶ್ಯರ ಸಭೆಯಾಗಿತ್ತು. ಈ ಸಭೆಗೆ ಹಿರೇಕೆರೂರಿನ ಮಾಮಲೇದಾರರಾದ ಮಿ ಅರಜಗಿ ಬಸಪ್ಪನವರು ದಯಮಾಡಿಸಿದ್ದರು. ಇವರಿಗೆ ನೀವು ಕ್ರಿಶ್ಚನ್ನರಾಗಬೇಡಿರಿ. ನಿಮ್ಮ ಉದ್ಧಾರವನ್ನು ಹಿಂದೂ ಧರ್ಮದಲ್ಲಿಯೇ ಮಾಡಿಕೊಳ್ಳಿರೆಂದು ಉಪದೇಶ ಮಾಡಿದ್ದಾರೆ.

ವಿವಿಧ ವಿಷಯಗಳು.

—o—

ಪುಣೆಯ ಫರ್ಗ್ಯುಸನ್ನ ಕಾಲೇಜ ಮತ್ತು ನ್ಯೂ ಇಂಗ್ಲಿಷಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳಿಗೆ ಬಲವಂತಿಕೆಯಿಂದ ವ್ಯಾಯಾಮ ಶಿಕ್ಷಣ ಕೊಡುವರು. ಇದಕ್ಕಾಗಿ ಇವರಿಗೆ ವರ್ಷಕ್ಕೆ ಏಳು ಸಾವಿರದ ವೆಚ್ಚ ಬರುವದು.

ಧಾರವಾಡದಂತೆ ವಿಜಾಪೂರದಲ್ಲಿಯೂ ನವರಾತ್ರಿಯ ಉತ್ಸವದಲ್ಲಿ ವ್ಯಾಖ್ಯಾನಗಳು ನಡೆದವೆ. ಬ್ರಾಹ್ಮಣೇತರರೂ ಇವರಲ್ಲಿ ಸೇರಿದ್ದಾರೆ. ಅಲ್ಲಿಗೆ ಗವ್ಹರ್ನರಸಾಹೇಬರು ೧೨ ನೇಯ ತಾರೀಖಿನ ದಿವಸ ಬರುವರು.

ಸಾಂಗಲಿಯ ದಿವಾನರ [illegible] ಚಿರಂಜೀವರಾದ ಗೋವಿಂದರಾವ [illegible] ರು ಪರಲೋಕವಾಸಿಯಾದ ಬಗ್ಗೆ ಅಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಸಭೆ ಆಗಿ, ದುಃಖಪ್ರದರ್ಶನ ಮಾಡಲ್ಪಟ್ಟಿತು. ಪೇಟೆ ಮತ್ತು ಅಂಗಡಿಗಳು ಬಂದು ಮಾಡಲ್ಪಟ್ಟಿದ್ದವು.

ಮುಂಬಯಿಯ ಗವ್ಹರ್ನರಸಾಹೇಬರು [illegible] ವಂಶವಾಹಿಗೆ ಬರುವರು. ಸಾಹೇಬರ ಸ್ವಾಗತಕ್ಕಾಗಿ [illegible] ಮಾಡಬೇಕೆಂದು [illegible] ಬಾಬತ್ತಿನ [illegible] ಆಗುತ್ತಿರುವದು.

ಕಲಾಲ[ಬ-ಖಿ] ಜನರು

ಎಂಥಾ ಮುಸಲಮಾನರೋ- ಅಥವಾ ಹೆಚ್ಚಿನ ಮುಸಲಮಾನರೋ ಹ್ಯಾಗೆ?

—೦—

ಕಾರಣಾ- ಧಾರವಾಡ- ಜಿಲ್ಹೆಯಲ್ಲಿ- ಕೆಲವು ಗ್ರಾಮಗಳಲ್ಲಿ- ಇರುವಂಥಾ ಬಕರ ಖಿಸಾಯಿ ಕಲಾಲರು ಮುಸಲ್ಮಾನರು ಅಂತಾ- ಪ್ರಮುಖವಾದ ಯಾವತ್ತು ಮುಸಲ್ಮಾನ ಬಾಂಧವರು ಗ್ರಹಿಸಿರಾ ಇದ್ದರ ನಮ್ಮಿಂದಾ- ಕ್ರಮವಾಗಿ- ವಿನಯಪೂರ್ವಕ ಕೇಳಿದಲ್ಲಿ ಒಬ್ಬರಲ್ಲಾ- ಧಾರವಾಡದ ಮುಸಲಮಾನ ಬಾಂಧವರೇ- ರಾಜಣ್ಣಾ- ಹು- ಕೆ- ಮಿಯ್ಯಾಜಿ ಸಾ- ಕ- ಮತ್ತು ಮಸಾಬ- ಕೆ- ಸಾಂತಾ ಬ ಒನರು ಮುಸಲ್ಮಾನರು ಎಂದು ನೀವು ತಿಳ್ಕೊ ಪಟ್ಟು ಅನಾದ ಪಡಿಯುವದನ್ನು ಕಂಡು ನೋಡಿ ಜಿಗ ಆನಿಸುವದು. ಮೇಲೆ ಕಾಣಿಸಿದ ಕಲಾಲರ ಮನಿಯೊಳಗೆ ನವರಾತ್ರಿ ಘಟಸ್ಥಾಪನೆಯನ್ನು ನೋಡಿ ಮನಸ್ಸು ತಾಂತ ಪಡಿಯರಿ (೨) ಅಮೀನಸಾಬ ಹಣಗಿ- ಸಾ|| ಗದಗ- ಅಲ್ಲಿಯ ಪಂಚ ಜನರೇ- ಅಪ್ಪಾಜಿ ಮೊ- ಕ- ಪಲ್ಲಹಣ್ಣಾ- ಕ- ವೊರಕೆ ಕ- ವಗೈರೆ ಜನರು ಮುಸಲ್ಮಾನರು ಎಂದು ಭಾವಿಸಿದ ನೀವಿಂದ ನೋಡಲಾಗಿ ಮೇಲೆ ಕಾಣಿಸಿದ ಕಲಾಲರ ಮನಿಗೆ ಹೋಗಿ ದೇವರ ಒಗಲಿಯ ಮುಂದ ನವರಾತ್ರಿ ಘಟಸ್ಥಾಪನೆಯ ನೋಡಿ ಮನಸ್ಸಿಗೆ ಆನಂದ ಪಡಿಯರಿ ಎಂಥಾ ಮುಸಲ್ಮಾನರೋ ನೋಡರಿ

ಯಾವತ್ತು ಜನರಿಗೆ ಕೆಳಗೆ ಸಹಿ ಮಾಡಿದವನು ಈ ನೋಟೀಸಿನದ್ವಾರ ತಿಳಿಸುವದೇನಂದರೆ- ಧಾರವಾಡ ಜಿಲ್ಹಾ ಹಾನಗಲ್ಲ ತಾಲೂಕ ಇನಾಂ ಗ್ರಾಮ ಅಕ್ಕಿಆಲೂರದಲ್ಲಿರುವ ತಿಪ್ಪಿ ಕಂಡಿ ಶಿದ್ದಪ್ಪಾ ಅಗಸರ (ಮಡಿವಾಳರ) ಈತೆಯು ತನ್ನ ಲಗ್ನದ ಹೆಂಡತಿ ಇದ್ದವಳು ಶೋಭನಕಾರ್ಯ ನೆರವೇರಿದ್ದ ನಂತರ ಒಂದು ತಿಂಗಳೊಪ್ಪತ್ತಿನಲ್ಲಿ ಯಾರದನ್ನೇ ಪ್ರೀತಿಗೆ ಮೆಚ್ಚಿದವಳಾಗಿದ್ದಂದ ತನ್ನ ತವರುಮನೆ ಅಕ್ಕಿಆಲೂರಕ್ಕೆ ಓಡಿ ಹೋದಳು. ನಂತರ ಕೆಲವು ಜನ ಬುದ್ಧಿವಂತರ ಸಮಕ್ಷಮ ಸದರಿಯವಳಿಗೆ ಚನ್ನಾಗಿ ಬುದ್ಧಿ ಹೇಳಿಸಿ ಕರಕೊಂಡು ಬಂದ ಆದರೂ ಬಾಳ್ವೆ ಮಾಡಲಿಕ್ಕೆ ತನಗೆ ಬುದ್ಧಿ ಬಾರದೆ ಪುನಃ ತವರ ಮನಿಗೆ ಕೆಳಗೆ ನಮೂದ ಮಾಡಿದ ಪ್ರಕಾರ ನಾನು ಸದರಿಯವಳ ಮೈಮೇಲೆ ಇಟ್ಟ ಒಂದು ನೂರು ರೂಪಾಯದ ಕಿಮ್ಮತ್ತಿನ ದಾಗಿನೆಗಳು-

೧ ಬಂಗಾರದ ಸುಳುವಿನ ಟೀಕಿ ಒಂದು ಕಿಮ್ಮತ್ತು ರೂಪಾಯಿ ೩ ... ಪದಕದ ಸರಾ ಒಂದು ೨ ... ೩ ಬೆಂಡವಾಲಿ ಜತಿ ಒಂದು ೭ ... ೪ ಬೆಳ್ಳಿ ತೋಳಬಂದಿ ಜತಿ ಒಂದು ೧೮ ... ೫ ಪಟ್ಟಿ ಒಂದು ೧೦ ... ೬ ಕಡಗಾ ಒಂದು ೫ ಅಂತು ೧೦೦ ರೂಪಾಯಿ ಸಹಿತವಾಗಿ ಓಡಿ ಹೋದಳು. ನಂತರ ಪುನಃ ಕೆಲವು ಬುದ್ಧಿವಂತರನ್ನು ಕರಕೊಂಡು ಕರಿಯಲಿಕ್ಕೆ ಹೋದರೆ ಬಾಳ್ವೆ ಮಾಡಲಿಕ್ಕೆ ಇನಕಾರ ಮಾಡಿದ್ದಲ್ಲದೆ ದಾಗಿನೆಗಳನ್ನು ಸಹ ಕೊಡುವದಿಲ್ಲವೆಂದು ಹೇಳಿದಳು. ಈಬಗ್ಗೆ ತಾರೀಖು ೮-೭-೩೭ ನೇ ದಿವಸ ನಾನು ಪ್ರೈವೇಟ ದಾಗೀನೆ ಸಹಿತ ತಾನು ಬಂದು ನನ್ನ ಕೂಡ ಬಾಳ್ವೆ ಮಾಡಬೇಕಂತಾ ಯಂಟು ದಿವಸದ ಮುದ್ದತ ಇಟ್ಟು ಕೈ ಬರಹದ ನೋಟೀಸು ರಜಿಸ್ತರ ಮಾಡಿದೆ. ಆದರೆ ಸದರ ನೋಟೀಸ ತಾರೀಖು ೧೩-೭-೩೭ ನೇ ದಿವಸ ಇನಕಾರ ಮಾಡಿ ಬಿಟ್ಟಳು. ಈಗಾದರೂ ಸದರಿಯವಳ ಕೂಡ ಚಲೋ ಬಾಳ್ವೆ ಮಾಡಬೇಕಂತಾ ನನ್ನ ಪ್ರೀತಿ ವಿಶೇಷ ಇರುವ ಮೂಲಕ ಪುನಃ ಈ ಜಾಹೀರ ನೋಟೀಸಿನ ಪ್ರತಿ ಒಂದು ಅಲಾಹಿದಾ ಸದರ ನನ್ನ ಹೆಂಡತಿ ತಿಪ್ಪಿಗೆ ಮುಟ್ಟಿದ ತಾರೀಖಿನಿಂದ ಒಂದು ತಿಂಗಳ ಒಳಗಾಗಿ ಮೇಲ್ಕಂಡ ಯಾವತ್ತು ದಾಗೀನೆಗಳು ಸಹಿತ ತಾನು ಒಂದು ಚಲೋ ಬಾಳ್ವೆ ಮಾಡಬೇಕು. ಜರ ಈ ಮುದ್ದತಿ ಒಳಗಾಗಿ ತಾನು ಬಾರದಿದ್ದರೆ ಇದೇ ಸೋಡಚೀಟಿ (ಬಿಡುಗಡೆಯ ಪತ್ರ) ಅಂತಾ ತಿಳಕೊಳ್ಳಬೇಕು. ಮುಂದೆ ನನ್ನ ಕೂಡ ಕೂಡಿಕೊಂಡೇನಂದರೆ ಸದರಿಯವಳ ಇಲಾಜು ಯಾವ ತರದ್ದು ನಡಿಯಲಾರದು. ತಾನು ವ್ಯಭಿಚಾರದಿಂದ ಒಸರಾಗಿ ಹಡದಲ್ಲಿ ಹುಟ್ಟಿದ ಕೂಸು ನನ್ನ ವಾರಸಾಕ್ಕೆ ಯೇನೂ ಸಂಬಂಧಪಟ್ಟವು ಆಗಲಾರವು. ಮತ್ತು ನನ್ನ ದಾಗಿನೆಗಳನ್ನು ನನಗೆ ಒಪ್ಪಿಸಿ ತಾನು ಉಡಿಕಿ ಮಾಡಿಕೊಂಡರೆ ನನ್ನ ತಕರಾರು ಇಲ್ಲಾ. ದಾಗಿನೆಗಳನ್ನು ಕೊಡದಿದ್ದರೆ ಕಾಯದೆ ಪ್ರಕಾರ ಕೆಲಸ ನಡಿಸುವದರಲ್ಲಿ ಬರುವದು. ಈ ನೋಟೀಸಿನ ಮುದ್ದತ ಬಾಹೇರಿನಂತರ ನಾನು ಯರಡನೇ ಲಗ್ನ ಮಾಡಿಕೊಳ್ಳತಕ್ಕವನು ಇರುತ್ತೇನೆ ಅಂತಾ ತಿಳಿಸಿದ ಜಾಹೀರ ನೋಟೀಸು.

ತಾರೀಖು ೪-೧೦-೧೯೩೭ ನೇ ಇಸ್ವಿ

ಈ ಯಡಗೈ ಹೆಬ್ಬೆಟ್ಟಿನ ಗುರ್ತ ನಿಂಗಪ್ಪಾ ಚಿನ್ನ ಗುಡ್ಡಪ್ಪಾ ಅಗಸರ (ಮಡಿವಾಳರ) ಸಾಕೀನ ಬಾಳಂಬೀಡ ತಾ|| ಹಾನಗಲ್ಲ ಈತನದು ಇದೆ

WANTED

Wanted Candidates for Telegraph and Station Master's Courses Railway Fare GRANTED Boarding Seat FREE Prospectus on 2 annas stamp – Presidency Telegaph College, Royapettah Madras

---

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಂತೆ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಒಪ್ಪಂದ ಬರವ ಕರಾರಕ್ಕೆ ತಿಂಗಳಿಗೆ ಕಡ್ಡರದು ಕೊಡಲ್ಪಡುತ್ತದೆ

... ಕೆ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕ ಲಿಮಿಟೆಡ ಧಾರವಾಡ

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ಆರು ತಿಂಗಳು, ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲಪರ್ಯಂತರ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಆರು ರೂಪಾಯಿ ಮತ್ತು ವರ್ಷಕ್ಕೆ ಆರುವರಿ ರೂಪಾಯಿ ಬಡ್ಡಿ ದೊರೆಯುವದು. ಹೆಚ್ಚು ಕಾಲದ ದರವನ್ನು ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನೆಗಳೂ ಒತ್ತೀ ಇಟ್ಟುಕೊಳ್ಳಲ್ಪಡುವವು ಚಕ್ಕ ವ ಹುಂಡಿಯ ವ್ಯವಹಾರ ಮಾಡಲ್ಪಡುವದು

ಮೆಸರ್ಸ ದೇಶಪಾಂಡೆ ಮತ್ತು ಅಣ್ಣಾಚಾರ್ಯ ಕಟ್ಟಿ

ಕಂಪನಿ ಮ್ಯಾನೇಜಿಂಗ ಏಜಂಟ್ಸ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ಸಿತ್ತ ಪತ್ರ | ಬಿಡಿ ಅರ್ಧ ಆಣೆ

ಸಂಪಾದಕರು:— ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಮಂಗಳವಾರ ತಾರೀಖು ೯ ನೇ ಅಕ್ಟೋಬರ ೧೯೩೭ | ಸಂಚಿಕೆ ೨೧

ಹಂಗಾಮವು ಮುಗಿಯ ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಚನ್ನಾಗಿ ಕೆಲಸವನ್ನು ಮಾಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೆಂದರೆ ಉಕ್ಕಿನ ಕಂಬಗಳ ಚೌಕಟ್ಟು ಕಿತ್ತಾಳೆ ಬೇರಿಂಗುಗಳು ಇರುವದರಿಂದ ಯಂತ್ರವು ಅತ್ಯಂತ ಹಗುರಾಗಿ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಂತಲೂ ಇವುಗಳಲ್ಲಿ ಕಾಳು ಬೀಳೆ ಒಡೆಯುವ ಪ್ರಮಾಣವು ಬಹಳಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದವು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ಹಿಂದೀ ಭಾಷೆಯಲ್ಲಿ ಪರೀಕ್ಷೆ.

ಕೆಲವು ವರ್ಷಗಳಿಂದ ಇಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯು ಪತಿಯಿಂದ ಜರಗುತ್ತಲಿರುವ ಹಿಂದೀ ಪರೀಕ್ಷೆಗಳು ಈ ಸಾರೆ ಇದೇ ತಿಂಗಳ ೯ನೇ ತಾರೀಖಿನ ದಿವಸ ಪ್ರಾರಂಭವಾಗುವವು. ಪರೀಕ್ಷೆಗಾಗಿ ಇಲ್ಲಿಯ ಲಿಂಗಾಯತ ಹಾಯಸ್ಕೂಲಿನ ಕಟ್ಟಡದಲ್ಲಿಯ ಒಂದು ಭಾಗವು ಗೊತ್ತು ಪಡಿಸಲ್ಪಟ್ಟಿರುತ್ತದೆ. ಪರೀಕ್ಷೆಗೆ ಕೂಡುತ್ತಿರುವ ಎಲ್ಲ ವಿದ್ಯಾರ್ಥಿಗಳು ಆ ದಿವಸ ವೇಳೆಯ ಸ್ಥಳಕ್ಕೆ ಸರಿಯಾಗಿ, ಮುಂಜಾನೆ ೮ ಘಂಟೆಗೆ ಬರಬೇಕೆಂದು ವಿನಂತಿ ಇರುತ್ತದೆ.

ಕೆ. ಗಯರ.

ಹಿಂ. ಪ್ರ. ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಿಕೊಳ್ಳಬೇಕು.

ವೆಂಕಪ್ಪರಾವ ಬಿ. ಜಕಾತಿ

ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ಸಲುವಾಗಿ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ಪತ್ರವನ್ನು ಪೋಷಿಸಬೇಕೆಂದು ವಿನಂತಿಯು.

ಮ್ಯಾನೇಜರು ವಿಜಯ ಧಾರವಾಡ

ದಿವಾಳಿ ನಿಮಿತ್ತದಿಂದ ಮುಂಬರಾದ

ಕನ್ನಡ ನಿಬಂಧ ರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟದ್ದಲ್ಲದೆ ರಿಪೋರ್ಟ- ಅರ್ಜಿ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ— ೧ ರಾ. ರಾ. ಬಿ. ಜಿ. ದಿವೇಕರ,

ಮಾಳಗುಡ್ಡ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಶೆಟ್ಟಿ

ವಾಗ್ವಿಲಾಸ ಬುಕ್ ಡಿಪೋ ಹುಬ್ಬಳ್ಳಿ.

ವಿಜಯ.

ಧಾರವಾಡ ತಾ-೯ ೧೦-೨೭ ನೇ ಆಗಸ್ಟ

ಮೂವರ ಹುಟ್ಟಿದ ಹಬ್ಬಗಳು.

ಹಿಂಡನಬರ್ಗ, ಅನಿಬಿಝಾಂಟ
ಮತ್ತು ಮಹಾತ್ಮರು

ಅಗ್ರಲೇಖ

ಹೋದ ವಾರದಲ್ಲಿ ಜಗತ್ಪ್ರಸಿದ್ಧರಾದ ಮೂವರ ವರ್ಧಂತ್ಯುತ್ಸವಗಳಾದವು. ಮೊದಲನೆಯವರು ಜರ್ಮನಿಗೆ ಸಂಬಂಧಿಸಿದವರೆಂದು ಹೇಳುವ ಅಗತ್ಯವೇ ಇಲ್ಲ. ಇದರಂತೆ ಉಳಿದಿಬ್ಬರು ಹಿಂದುಸ್ಥಾನಕ್ಕೆ ಸಂಬಧಿಸಿದವರೆಂದು ಬರೆಯುವ ಅವಶ್ಯಕತೆ ಇರುವದಿಲ್ಲ.

ಫೀಲ್ಡ ಮಾರ್ಶಲ ಹಿಂಡನಬರ್ಗರು ಮಹಾಯುದ್ಧದಲ್ಲಿ ಸಮಸ್ತ ಜರ್ಮನ ಸೇನೆಯ ಅಧ್ಯಕ್ಷರಾಗಿದ್ದರು. ಸದ್ಯದಲ್ಲಿ ಜರ್ಮನ ರಾಜ್ಯದ ಅಧ್ಯಕ್ಷರಾಗಿದ್ದಾರೆ. ಒಂದು ದೊಡ್ಡ ದೇಶ, ಮತ್ತು ಸುತ್ತಲು ವೈರಿಗಳಿರುವಂಥ ದೇಶದ ಅಧ್ಯಕ್ಷರಾಗಿದ್ದಾರೆ. ಇಂಥವರ ವಯಸ್ಸೆಷ್ಟೆಂದರೆ ಒಂದೇ ೮೧!! ಹಾಗಲ ಹಣ್ಣು ಅಥವಾ ತೀರ ಮುಪ್ಪಿನ ಮುದುಕರೆನಿಸಿಕೊಳ್ಳುವಂಥವರು ತರುಣರಂಥ ಹುರುಪಿನಿಂದ ರಾಜ್ಯಕಾರಭಾರ ಮಾಡುತ್ತಿರುವರು. ಜರ್ಮನ ರಾಷ್ಟ್ರವೇ ಇವರ ಹುಟ್ಟಿದ ಹಬ್ಬ ಮಾಡಿ ರಾಷ್ಟ್ರೀಯ ಉತ್ಸವ ಮಾಡಿತು. ವರ್ಧಂತಿಯ ಆನಂದದ ದೆಸೆಯಿಂದ ಇವರು ೭೫ ಜನ ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಿದರು. ಇಂಗ್ಲಂಡದ ಬಾದಶಹರು ತಮ್ಮ ಹುಟ್ಟಿದ ದಿನಕ್ಕೊಮ್ಮೆ ಸ್ಮರಣೆಗಾಗಿ ಎಷ್ಟು ಜನ ಕೈದಿಗಳನ್ನು ಬಿಡುಗಡೆ ಮಾಡಿಸುವರೆಂಬ ಪ್ರಶ್ನವು ಸಹಜವಾಗಿ ಹೊರಡುತ್ತದೆ.

ಅನಿಬೆಝಾಂಟಮ್ಮನವರೂ ಹಿಂಡನಬರ್ಗರಂತೆ ೮೧ ವರ್ಷದವರಾಗಿದ್ದಾರೆ. ಈ ವಯಸ್ಸಿನಲ್ಲಿಯುವರೆಗೆ ಅವರ ವೈಯೇ ಅವರಿಗೆ ಭಾರವಾಗುತ್ತದೆ. ಆದರೆ ಅಮ್ಮನವರ ದೇಹದಾರ್ಢ್ಯ ಮತ್ತು ಹುರುಪು ಹಿಂಡನಬರ್ಗರಂತಿದೆ. ಇವರು ಸದ್ಯ ವಿಲಾಯತಿಯಲ್ಲಿದ್ದಾರೆ. ಒಂದು ತಿಂಗಳಲ್ಲಿ ಅಮೇರಿಕಾದಲ್ಲೆಲ್ಲ ತಿರುಗಾಡಿದರು. ಹಗಲು ರಾತ್ರಿಗಳ ಪರಿವೆಯಿಲ್ಲದೆ, ಪ್ರವಾಸ ಮಾಡಿ, ೩೦ ದಿವಸಗಳಲ್ಲಿ ೫೦ ಸ್ಥಳಗಳಲ್ಲಿ ವ್ಯಾಖ್ಯಾನ ಕೊಟ್ಟಿದ್ದಾರೆ. ವಿಲಾಯತಿಯಿಂದ ಉಗಿಹಡಗದಲ್ಲಿ ಕೂತು ಹಿಂದುಸ್ಥಾನಕ್ಕೆ ಬರಲಿಕ್ಕೆ ೧೫ ದಿವಸಗಳು ಹತ್ತುತ್ತವೆ. ಇಷ್ಟು ಕಾಲಾಪವ್ಯಯ ಮಾಡದೆ, ವಿಮಾನದಲ್ಲಿ ಕೂತು ಬರಬೇಕೆಂದಿದ್ದಾರೆ. ರಾಜಕೀಯವಾಗಿ ಎಷ್ಟೇ ಮತಭೇದವಿದ್ದರೂ, ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆಯಬೇಕೆಂದು ಅವರ ಮನಃಪೂರ್ವಕವಾದ ಪ್ರಯತ್ನವಿರುತ್ತದೆ.

ಮಹಾತ್ಮರು ಮೇಲಿನವರಷ್ಟು ದಿನಗಳೆದವರಲ್ಲ. ೫೯ ವರ್ಷಗಳು. ಅವರಂಥ ದೇಹಯಷ್ಟಿಯೂ ಗಟ್ಟಿಯಲ್ಲ. ಯೋಗಿಗಳಂತೆ ಉಪವಾಸ- ನಿರಾಹಾರದವರು. ಆದರೂ ಅವರ ಚಟುವಟಿಕೆಯು ಇಬ್ಬರನ್ನೂ ಸರಿಗಟ್ಟುವಂತುಂಟು. ಪ್ರವಾಸದಲ್ಲಿಯೂ, ಭಾಷಣದಲ್ಲಿಯೂ ಅಮ್ಮನವರಿಗಿಂತ ಹೆಚ್ಚು ಭರಾಟೆಯುಳ್ಳವರು. ಸ್ವದೇಶಾಭಿಮಾನ, ಸ್ವಧರ್ಮಾಭಿಮಾನದ ಬಗ್ಗೆ ಹೊಸದಾಗಿ ಹೇಳಬೇಕಾಗಿಲ್ಲ. ಹಿಂಡನಬರ್ಗರು ಸ್ವದೇಶದಲ್ಲಿ ರಾಜನಿಗೆ ಮರ್ಯಾದೆ ಎಂತಿರುವರು. ಅಮ್ಮನವರು ವಿದ್ವಾಂಸರು ಎಲ್ಲೆಲ್ಲಿಯೂ ಪೂಜ್ಯರೆಂದಿರುತ್ತಾರೆ. ಮಹಾತ್ಮರು ಹಿಂಸೆಯ ಅಸಹಕಾರದ ಮೂರ್ತಿಯಾಗಿ, ಏಸೂ ಕ್ರಿಸ್ತನಂಥ ಯೋಗ್ಯತೆ ಪಡೆದು, ಅಜರಾಮರ ಪ್ರಖ್ಯಾತಿ ಪಡೆಯುವಂಥವರಾಗಿದ್ದಾರೆ. ಈ ಮೂವರೂ ಶತಂಜೀವಿ ಶತಧೋ ವರ್ಧಮಾನರಾಗಿ ತಂತಮ್ಮ ಪರಿಯಾಗಿ ದೇಶಸೇವೆ, ಜಗತ್ತಿನ ಸೇವೆ ಮಾಡಲೆಂದು ಹಾರೈಸುತ್ತೇವೆ.

ಇಂಗ್ರೇಜಿ ನಿಶಾನೆಯಮೇಲೆ ಬೋಯರರ ಕೋಪ !!

—೦—

ನಿಶಾನೆಯನ್ನು ಹರಿದುಚಿಂದಿ ಮಾಡಿದರು

ದಕ್ಷಿಣ ಆಫ್ರಿಕೆಯಲಿರುವ ಬ್ಲೋಯಮಫಾಂಟನೆಂಬ ಪಟ್ಟಣದಲ್ಲಿ ಜನರಲ ಸ್ಮಟಸಾಹೇಬರು ವ್ಯಾಖ್ಯಾನ ಕೊಡತಕ್ಕವರಿದ್ದರು. ವ್ಯಾಖ್ಯಾನದ ಸಿದ್ಧತೆಯಾಗಿ, ಜನರಲಸಾಹೇಬರು ಮಾತಾಡಲಿಕ್ಕೆ ಪ್ರಾರಂಭಿಸುವಾಗ ರಾಷ್ಟ್ರೀಯರಾದಂಥ ಬೋಯರರು ಹರಳಮುರುಕ ಆಯುಧಗಳನ್ನು ತಕ್ಕೊಂಡುಬಂದು ಭಯಂಕರವಾದ ಪುಂಡಾಟಿಕೆ ನಡಿಸಿ, ಜನರಲಸಾಹೇಬರ ಬಣದವರನ್ನು ಮೈಮುರಿಹೊಡೆದು, ಯುನಿಯನ ಜಾಕ ನಿಶಾನೆಯನ್ನು ಹರಿದು ಚಿಂದಿಮಾಡಿ, ಸಭಾಮಂದಿರದ ತುಂಬಾ ಜಯಶಾಲಿಗಳಂತೆ ಹಾಡುತ್ತಾ ಕುಣಿಯುತ್ತಾ ಆನಂದಪಟ್ಟರು.

ಪೈಗಂಬರರು ಹಿಂಸೆ ಹೇಳಲಿಲ್ಲ.

—೦—

ಉತ್ತರ ಮತ್ತು ಮಧ್ಯ ದೇಶಗಳಲ್ಲಿ ನಡೆದ ಹಿಂದೂ ಮುಸಲಮಾನ ರಕ್ತಪಾತವನ್ನು ನೋಡಿ, ಮುಸಲಮಾನರ ಅಹಮದೀಯಾಪಂಥದ ಧರ್ಮಗುರುಗಳಾದ ಮಿರಜಾ ಬಸರುದ್ದೀನಸಾಹೇಬರು ಬಹುವಾಗಿ ವ್ಯಥೆಗೊಂಡು ಮುಸಲಮಾನರನ್ನುದ್ದೇಶಿಸಿ ಮುಂದೆ ಕೊಟ್ಟಂತೆ ಉಪದೇಶ ಮಾಡಿದ್ದಾರೆ

೧ ಕಾಯದೆಯನ್ನು ಕೈಯ್ಯಲ್ಲಿ ತಕ್ಕೊಳ್ಳಬೇಕೆಂದು ನಮ್ಮ ಧರ್ಮವು ಹೇಳುವದಿಲ್ಲ. ಪೈಗಂಬರರ ಕಾಲದಲ್ಲಿ ಅನೇಕರು ಅವರನ್ನು ಬೈದುಕೊಂಡರು ಆದರೆ ಪೈಗಂಬರರು ಯಾರಿಗೂ ಮರಣದ ಶಿಕ್ಷೆ ಕೊಡಲಿಲ್ಲ.

೨ ಮಸೀದೆಗಳ ಮುಂದೆ ವಾದ್ಯ ಬಾರಿಸುವ ಹಕ್ಕಿನ ವಿಷಯವಾಗಿ ಮುಸಲಮಾನರು ಹಿಡಿದ ಆಗ್ರಹವು ಯೋಗ್ಯವಾಗಿರುವದಿಲ್ಲ.

೩ ಗೋಹತ್ಯವನ್ನು ದನಗಳನ್ನು ಕೊಯ್ಯುವ ಮನೆಗಳಲ್ಲಿಯೇ ಮಾಡಬೇಕು ಅದವಾ ಹಿಂದೂ ಜನರ ದೃಷ್ಟಿಗೆ ಬೀಳದಂಥ ಸ್ಥಳದಲ್ಲಿ ಮಾಡಬೇಕು

ಮುಸಲಮಾನರು ಮೇಲಿನ ಮೂರೂ ಮಾತಿನಂಥ ಮಾತುಗಳ ಪ್ರಕಾರ ನಡೆದರೆ ರಕ್ತಪಾತಕ್ಕೆ ಆಸ್ಪದವೇ ಉಂಟಾಗಲಾರದು. ಆದರೆ ಇಂಥ ಅನ್ಯ ಶಹಾಣೆಯನ್ನು ಯಾರು ಲಕ್ಷಿಸುವರು? ದಿನಾಲು ಪ್ರಾರ್ಥನೆಯ ಐದು ಸಮಯಗಳಲ್ಲಂತೂ ಇರಲಿ, ರಮಜಾನ ಇಡೀ ತಿಂಗಳಲ್ಲಿ ಯಾವಾಗಲು ಮಸೀದೆಗಳ ಮುಂದೆ ವಾದ್ಯ ಬಾರಿಸಬಾರದೆಂದು ಮೌ. ಮಹಮದಲ್ಲಿಯವರು ಐಕ್ಯದ ಸಭೆಯ ಮುಂದೆ ಶರ್ತ ಇಟ್ಟಿದ್ದಾರೆ. ಈ ಪ್ರಕಾರ ವಿರೋಧದ ಹೊಸ ಹೊಸ ಶರ್ತುಗಳನ್ನು ಹಾಕಿದರೆ ಐಕ್ಯವಾಗುವದೆಂತು?

ಯಾವ ವರ್ತಮಾನ ಪತ್ರಗಳಲ್ಲಿ ಕರಿಯ ಜಾಹೀರಾತುಗಳಿರುತ್ತವೆ, ಅವಕ್ಕೆ ಮ್ಯುನಿಸಿಪಾಲಿಟಿಯ ನೋಟೀಸು ಜಾಹೀರಾತುಗಳನ್ನು ಕೊಡಬಾರದೆಂಬ ಠರಾವು ಮುಂಬಯಿ ಮ್ಯುನಿಸಿಪಾಲಿಟಿಯಲ್ಲಿ ಬರತಕ್ಕದ್ದಿರುತ್ತದೆ. ಧಾರವಾಡ ಜಿಲ್ಹೆಯಲ್ಲಿ ಕರಿ ತಿಂದಿ, ಅಫೂ ಗಾಂಜಾದ ಜಾಹೀರಾತುಗಳನ್ನು ಪ್ರಸಿದ್ಧ ಮಾಡುವ ಪತ್ರಗಳು ಮುಂದಾಗಿ ಎಚ್ಚರಪಡುವಂಥ ಸೂಚನೆಯೇ ಸೈ !!

ತಿರುಪತಿಯಲ್ಲಿ ಅಸ್ಪೃಶ್ಯರು ಬೆಟ್ಟದ ಪಾದಗಟ್ಟಿಯ ತನಕ ಬರುವರು. ತಮಗೂ ಬೆಟ್ಟದ ಮೇಲೆ ಹೋಗುವದಕ್ಕೆ ಅಪ್ರತಿಬಂಧವಿರಬೇಕೆಂದು ಚಳವಳ ನಡಿಸಿದ್ದಾರೆ.

ಇನ್ನೊಬ್ಬ ಪ್ರಬಲ ಈಸುಗಾರನು.

—೦—

ಅಲ್ಲಾಹಾಬಾದಿನವನಾದ ಚತರಜಿ ಎಂಬ ತರುಣನು ಬಿ. ಎ ಪರೀಕ್ಷೆ ಪಾಸಾಗಿದ್ದಾನೆ. ಈತನು ಈಸುವದರಲ್ಲಿ ಜಂಗು ಕಟ್ಟಿದ್ದಾನೆ. ಭಾಗೀರಥಿ ಹೊಳೆಯಲ್ಲಿ ಸತತವಾಗಿ ೧೯ ತಾಸುಗಳ ತನಕ ನೀರಲ್ಲಿ ಬಿದ್ದು, ೪೩ ಮೈಲು ಈಸಿದ್ದಾನೆ. ಆ ನಂತರ ಜಗನ್ನಾಥದಲ್ಲಿ ಸಮುದ್ರದಲ್ಲಿಯೂ ಈಸಿ ಸಮುದ್ರದಲ್ಲಿ ಈಸುವದನ್ನು ಅನುಭವಗೊಂಡಿದ್ದಾನೆ.

ಬಂಗಾಲದ ಉಪಸಾಗರಕ್ಕಿಂತ ಅರಬೀ ಸಮುದ್ರದಲ್ಲಿ ಗಾಳಿ ಬಹಳ. ತೆರೆಗಳು ದೊಡ್ಡವು. ಸಮುದ್ರವು ಆಗಾಗ್ಗೆ ಅಲ್ಲೋಲಕಲ್ಲೋಲವಾಗುವದು. ಇಂಥ ಸಮುದ್ರದಲ್ಲಿ ಈಸಿ, ಅದ್ವಿತೀಯನೆಂದೆನಿಸಿಕೊಳ್ಳಬೇಕೆಂದು ಈತನು ಈ ವಾರದಲ್ಲಿ ಮುಂಬಯಿಗೆ ಬಂದನು.

ಮಂಗಳವಾರ ಹಗಲು ೧೧ ||. ರ ಸಮಯದಲ್ಲಿ ಅಪಾಲೋ ಬಂದರದಲ್ಲಿ ಈಸು ಬಿದ್ದನು. ಈತನನ್ನು ನೋಡಲು ಸಾವಿರಾರು ಜನರು ನೆರೆದಿದ್ದರು. ಮೈಯಲ್ಲಿ ಒಂದು ಲಂಗೋಟಿ ಮಾತ್ರವಿತ್ತು. ತಿನಸು, ನೀರು ಪ್ರಸಂಗವಶಾತ ಬೇಕಾಗುವ ಎಲ್ಲ ಸಹಾಯಗಳೊಂದಿಗೆ ಹ್ವಾಲಂಟಿಯರರು ಒಂದು ದೋಣಿಯಲ್ಲಿ ಕೂತು ಹಿಂದೆ ಹೊರಟರು. [illegible] ತನಕ ನಿರಾತಂಕವಾಗಿ ಈಸಿದನು. ಅಲ್ಲಿಂದ ಎಲಿಫಂಟಾಕ್ಕೆ ಹೋಗತಕ್ಕವನಿದ್ದನು. ಆದರೆ ಮೇಲೆ ಹೇಳಿದಂತೆ ಗಾಳಿಯೂ, ತೆರೆಗಳೂ ಈತನಿಗೆ ಮುಂದೆ ಈಸಗೊಡಲಿಲ್ಲ. ಆದರೂ ಸತತವಾಗಿ ಹನ್ನೆರಡು ತಾಸು ನೀರಲ್ಲಿದ್ದನು. ಈ ಅಪಯಶದಿಂದ ಎಷ್ಟೂ ಎದೆಗುಂದಿಲ್ಲ. ಪುನಃ ಪ್ರಯತ್ನ ಮಾಡಿ ನೋಡುವನು. ನಾಗರಿಕರು ಬೇಕಾದ ಸಹಾಯವನ್ನೊದಗಿಸಲು ಸಿದ್ಧರಾಗಿ, ಉತ್ತೇಜನ ಕೊಟ್ಟಿರುತ್ತಾರೆ.

ಚತರಜಿಯು ಇನ್ನೊಂದು ಪರಾಕ್ರಮ ಮಾಡಿ ತೋರಿಸುವನು. ಹತ್ತು, ಹನ್ನೆರಡು ಜನರು ಒಂದು ದೋಣಿಯಲ್ಲಿ ಕೂಡ್ರುವರು. ಹಗ್ಗದಿಂದ ಕೈಕಾಲು ಕಟ್ಟುವರು. ಟೊಂಕಕ್ಕೆ ಹಗ್ಗ ಹಚ್ಚುವರು. ತನ್ನ ಟೊಂಕದ ಕಸುವಿನಿಂದ ದೋಣಿಯನ್ನು ಐದು ಮೈಲುಗಳ ತನಕ ನೀರೊಳಗೆ ಜಗ್ಗಿಕೊಂಡು ಹೋಗುವನು. ಈ ಅಂಗಸಾಧನೆಯ ಪರಾಕ್ರಮವು ನಿಜವಾಗಿ ಪ್ರಶಂಸನೀಯವಾಗುವದು.

ಪೋಲೀಸರು ರಾಮಲೀಲೆಯ ಮೆರವಣಿಗೆಗೆ ಯೋಗ್ಯ ಸಹಾಯ ಮಾಡಲಿಲ್ಲ; ಮತ್ತು ಸಲ್ಲದ ನಿರ್ಬಂಧನೆಗಳನ್ನು ಹಾಕಿದರೆಂದು ಅಲ್ಲಾಬಾದಿನ ಹಿಂದೂ ಜನರು ದಸರೆಯ ದಿವಸ ಮೆರವಣಿಗೆ ತೆಗೆಯಲಿಲ್ಲ.

ಶಿಕ್ಷಣ ಮಂತ್ರಿಯ ಸುತ್ತ ಸುದರ್ಶನ ಚಕ್ರ.

—೦—

ಮುಂಬಯಿಯ ಶಿಕ್ಷಣ ಮಂತ್ರಿಯಾದ ಮಿ. ದೇಸಾಯಿಯವರು ಕೌನ್ಸಿಲಕ್ಕೆ ಅಪ್ರಿಯರಾಗಿದ್ದು, ಅವರಲ್ಲಿ ಕೌನ್ಸಿಲದ ವಿಶ್ವಾಸವಿಲ್ಲೆಂಬ ಠರಾವನ್ನು ನಾಸಿಕದ ಮಿ. ಪ್ರಧಾನರು ತರತಕ್ಕವರಿದ್ದಾರೆ.

೧ ಸಕ್ತಿಯ ಶಿಕ್ಷಣದ ಪ್ರಸಾರ ಮಾಡುವ ಲಕ್ಷಣವಿಲ್ಲ.

೨ ನಾಮೆ- ಪರಾಂಜಪೆಯವರ ಯೋಜನೆಯ ಪ್ರಕಾರ ಶಿಕ್ಷಕರ ಸಂಬಳದ ಏರ್ಪಾಡು ಮಾಡಲಿಲ್ಲ

೩ ಯುನಿವರ್ಸಿಟಿಯ ಸುಧಾರಣೆಯ ಬಿಲ್ಲಿಗೆ ಗವ್ಹರ್ನರ ಜನರಲರ ಮಂಜೂರಿಯ ಅವಶ್ಯಕತೆಯುಂಟೆಂದು ಕೌನ್ಸಿಲಕ್ಕೆ ತಪ್ಪು ತಿಳುವಳಿಕೆಯನ್ನುಂಟು ಮಾಡಿದರು.

೪ ಹ್ವಾಯಿಸ ಚ್ಯಾನ್ಸಲರರು ಲೋಕಪಕ್ಷೀಯರಾಗಿ ಆರಿಸಲ್ಪಡಬೇಕೆಂಬ ತತ್ವವನ್ನು ವಿರೋಧಿಸಿದರು.

೫ ಕೌನ್ಸಿಲದಲ್ಲಿ ಮಾತಾಡತಕ್ಕವರಿಗೆ ಅನುವು ಕೊಡದೆ, ಅವರ ನಿರುತ್ಸಾಹವಲ್ಲದೆ, ಮಾನಕ್ಷತಿ ಮಾಡುವರು

೬ ಪ್ರಶ್ನೆಗಳಿಗೆ ಉತ್ತರ ಕೊಡುವ ಪದ್ಧತಿಯು ತೀರ ಅತೃಪ್ತಿಕರವಾಗಿರುತ್ತದೆ.

೭ ಜವಾಬದಾರಿ ಮತ್ತು ಪ್ರಾಗತಿಕವಿಲ್ಲದೆ ಒಪ್ಪಿಸಲ್ಪಟ್ಟ ಖಾತೆಯಿಂದ ಮಂತ್ರಿಯ ಈ [illegible] ವರ್ತನದಿಂದ ಸಮಾಧಾನಕರವಾಗಿ ಕಾರಭಾರ ಸಾಗುವ ಸಂಭವವಿಲ್ಲ.

ಸೇನಾಧಿಪತಿಯನ್ನು ಗುಂಡು ಹಾಕಿ ಕೊಂದರು.

ಸರ್ವಿಯಾ ದೇಶದ ಸೇನಾಧ್ಯಕ್ಷನಾದ ಕೋವಾಟಿಚ್ಚ ಸಾಹೇಬನನ್ನು ಇಸ್ಟಿಪವೆಂಬ ಗ್ರಾಮದಲ್ಲಿ ಯಾರೋ ಇಬ್ಬರು ಗುಂಡು ಹಾಕಿ ಕೊಂದಿದ್ದಾರೆ. ಕೊಲೆಗಡಕರು ಪಾರಾಗಿ ಹೋಗಬಾರದೆಂದು ಊರ ಸುತ್ತಲು ಕಾವಲಿಟ್ಟಿದ್ದಾರೆ.

ಮಧುರೆಯಲ್ಲಿಯ ಬ್ರಾಹ್ಮಣೇತರರು ಮಹಾತ್ಮರನ್ನು ಕಾಣಲಿಕ್ಕೆ ಹೋಗಿದ್ದರು. ಮಹಾತ್ಮರು ಇವರ ಕಣ್ಣಿಗೆ ಅಂಜನ ಹಾಕಿದಂಥ ಭಾಷಣ ಮಾಡಿದರು. "ನಿಮ್ಮ ರಾಜಕೀಯ ಹೇತುವಿನಲ್ಲಿ ಸ್ವಾರ್ಥವಿದೆ. ನೀವು ಹಿಂದೂ ಸಂಘಟನೆಯನ್ನೇ ನಾಶಮಾಡಲಿಕ್ಕೆ ಪ್ರವೃತ್ತರಾಗಿದ್ದೀರಿ. ರಾಜಕೀಯ ಸ್ವಾರ್ಥವನ್ನು ಬಿಟ್ಟು ಕೊಡಿರಿ" ಎಂಬದಾಗಿ ಮಹಾತ್ಮರು ಅಂದಿರುತ್ತಾರೆ. ಕರ್ನಾಟಕದ ವೀರಶೈವರು ವಿಚಾರ ಮಾಡುವಂಥ ಪ್ರಶ್ನೆಯು.

ಸೊಲ್ಲಾಪೂರದಲ್ಲಿ ಪಿಸಾರೆ ಎಂಬ ಉಪನಾಮದ ವೀರಶೈವ ಶ್ರೀಮಂತ ವರ್ತಕರಿದ್ದಾರೆ. ಇವರು ಮ್ಯುನಿಸಿಪಾಲಿಟಿ ಮತ್ತು ಪಂಚಾಯತಿಯ ಮೆಂಬರಿರುವದಲ್ಲದೆ, ಲಿಂಗಾಯತ ಕಮಿಟಿಯ ಅಧ್ಯಕ್ಷರಿದ್ದಾರೆ. ಸರಕಾರದಿಂದ ಇವರಿಗೆ ರಿವಾಲ್ವರದ ಪಾಸು ಇತ್ತು. ಹಿಂದೂ ಮುಸಲಮಾನ ದಂಗೆಯ ಸಮಯದಲ್ಲಿ ಇವರು ಹುಸಿ ಗುಂಡು ಹಾರಿಸಿದರು. ಈ ಪ್ರಕಾರ ಇವರಿಗೆ ಗುಂಡು ಹಾರಿಸುವ ಅಗತ್ಯ ಉಂಟಾಗುವ ಪ್ರಸಂಗವಿದ್ದಿಲ್ಲ. ಮೇಲಾಗಿ ಮನೆಯ ಹತ್ತರವೇ ಪೋಲೀಸರ ಕಾವಲಿತ್ತು. ಆದರೂ ಇವರು ರಿವಾಲ್ವರದ ದುರುಪಯೋಗ ಮಾಡಿದರೆಂದು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಇವರ ಪಾಸನ್ನು ನಿರಂತರ ರದ್ದು ಮಾಡಿದರು.

ಮಹಾನವಮಿಯ ಉತ್ಸವವು.

——(೦)——

ಬುಧವಾರ ತಾ|| ೫-೧೦-೩೭

ಮೊದಲು ಬಾಲ ಬಾಲಿಕೆಯರ ಮೇಳಗಳ ಪದಗಳಾದ ನಂತರ ಪ್ರಾಚೀನರ ಗಾಂಭೀರ್ಯ ಹಾಗು ಪಾವಿತ್ರ್ಯದ ದ್ಯೋತಕವಾದಂಥ ವಾಡಿಕೆಯಂತೆ ಆಧುನಿಕ ಬಿಲ್ಲೆಗಳನ್ನು ಮೇಳಗಳ ಮುಖ್ಯಸ್ಥರಿಗೆ ಕೊಡುವದರ ಬದಲಾಗಿ ತೆಂಗಿನಕಾಯಿಗಳನ್ನು ಉಪನ್ಯಾಸಕರಾದ ಶ್ರೀ. ಮಾವಟಿ ವಕೀಲ ಹುಬ್ಬಳ್ಳಿ ಇವರ ಹಸ್ತದಿಂದ ಅವರಿಗೆ ಕೊಡಿಸಲ್ಪಟ್ಟವು. ತರುಣರಾದ ಶ್ರೀ ಬಸಲಿಂಗಯ್ಯಾ ಬಬಲಾದಿ ಇವರು ಪದಗಳನ್ನು ಏಕತಾರಿಯ ಮೇಲೆ ಅಂದರು. ಆ ಮೇಲೆ ಶ್ರೀ ಸರ್ವೋತ್ತಮಾಚಾರ್ಯ ಮುಂಡರಗಿ ಇವರು ಒಳ್ಳೆ ಆಕರ್ಷಕವಾಗಿ ಹಾರ್ಮೋನಿಯಮ ಬಾರಿಸಿದ ನಂತರ ಶ್ರೀ. ಮಾವಟಿಯವರು "ಶರಣರ ನಡೆ" ಎಂಬ ವಿಷಯವನ್ನು ಚನ್ನಾಗಿ ವಿವರಿಸಿದರು. ಎಲ್ಲ ಮತಗಳಿಕಿಂತ ವೀರಶೈವ ಮತವು ಶ್ರೇಷ್ಠವು ಏಕಂದರೆ ಮಿಕ್ಕ ಮತದಂತೆ ವೇದಾದಿ ಗ್ರಂಥಗಳಿಂದ ಬುದ್ಧಿವಂತರು ಬುದ್ಧಿ ಬಲದಿಂದ ಸ್ಥಾಪಿಸಿದ ಮತವು ಇದಲ್ಲ. ಇದು ಅಂತಃಸ್ಫೂರ್ತಿಯಿಂದ ಉಂಟಾದ ಮತವು. ಶರಣರ ನಡೆಯು ಎಷ್ಟು ಶುದ್ಧವಿತ್ತೆಂದು ಅವರ ಪದಗಳಿಂದ ಗೊತ್ತಾಗುತ್ತದೆ. ಶಿವ ಜೀವರ ಐಕ್ಯವಾಗಿ ಎಲ್ಲ ವ್ಯವಹಾರಗಳು ನಡೆಯುವದರಿಂದ ಜಾತಿ ಕುಲ ಮುಂತಾದ ಭೇದಗಳಿಗೆ ಅವರಲ್ಲಿ ಆಸ್ಪದವಿಲ್ಲ. ಲಿಂಗಜ್ಞಾನವಿಲ್ಲದೆ ಕೇವಲ ಲಿಂಗ ಧರಿಸುವವರಿಂದ ವೀರಶೈವನಾಗಲಾರನು ಮುಂತಾದ ಸಂಗತಿಗಳನ್ನು ಒಳ್ಳೆ ಮಾರ್ಮಿಕವಾಗಿ ವಿವರಿಸಿದರು. ಆ ಮೇಲೆ ಶ್ರೀ. ಬೇಂದ್ರೆಯ

ಬನವಾಸಿ ಶ್ರೀ. ಮಧುಕೇಶ್ವರ ದೇವಸ್ಥಾನದ ಪ್ರಕರಣ.

(ಒಂದು ಸ ಕ್ಷಿಯ ಮಾದರಿ)

ಎಷ್ಟೋ ತೊಂದರೆಗಳನ್ನು ಕೊಟ್ಟಾಗ್ಯೂ ಸರಕಾರದ ಮೇಲೆ ದೃಢವಿಶ್ವಾಸವುಳ್ಳ ವೀರಶೈವರು ಅಸಹಕಾರಿಗಳ ಉದ್ಬೋಧನೆಗೆ ಒಳಗಾಗದೆ, ಈ ಅಸಹಕಾರಿಗಳಿಗೆ ವಿರುದ್ಧವಾಗಿ ಅವರು ಹೋದ ಹೋದಲ್ಲಿ ತಾವೂ ಜನರನ್ನು ಕೂಡಿಸಿ ಸಭೆ ಮಾಡಿ, ಬ್ರಿಟೀಶ ಸರಕಾರದ ಆಡಳಿತೆಗೂ, ಹಿಂದಿನ ಪೇಶವಾಯಿ ಆಡಳಿತೆಗೂ ಇರುವ ವ್ಯತ್ಯಾಸವನ್ನು ಸರಿಯಾಗಿ ಜನರಿಗೆ ತಿಳಿಸಿ, ಬ್ರಿಟಿಷ ಸರಕಾರದ ಆಡಳಿತೆಯಲ್ಲಿ ಪ್ರಜೆಗಳಿಗೆ ಇರುವ ಸ್ವಾತಂತ್ರ್ಯವನ್ನೂ ಸೌಕರ್ಯವನ್ನೂ, ವಿದ್ಯೆಯಲ್ಲಿ ಹಿಂದುಳಿದವರಿಗೆ ಸರಕಾರದವರು ತೋರಿಸುತ್ತಿರುವ ಸಹಾಯವನ್ನೂ ಜನರಿಗೆ ತೋರಿಸುತ್ತ ದುರ್ಬೋಧನೆಗೆ ಒಳಗಾದ ಜನರ ಮನಸ್ಸು ತಿರುಗಿಸಿ ರಾಜಭಕ್ತಿಯುಳ್ಳವರನ್ನಾಗಿ ಮಾಡುತ್ತ, ಈ ಬಗ್ಗೆ ಅನೇಕ ಠರಾವುಗಳನ್ನು ಪಾಸು ಮಾಡಿ ಸರಕಾರಕ್ಕೆ ತಿಳಿಸುತ್ತಾ ಕಾರವಾರ ಜಿಲ್ಲೆಯ ಅಸಹಕಾರಿಗಳನ್ನು ಬಗ್ಗು ಬಡಿದದ್ದು ಜಾಹೀರ ಆದ ಸಂಗತಿ ಇರುತ್ತದೆ. ಇದೇ ಸಂದರ್ಭದಲ್ಲಿ ಬನವಾಸಿ ಯವೀಕರೂ ಕೊಂಕಣರೂ ಚಿತ್ರಾಪುರ ಸಾರಸ್ವತರೂ ಕೂಡಿ ಒಂದು ಪ್ರಚಂಡವಾದ ಅಸಹಕಾರಿತೆಯ ಸಭೆಯನ್ನು ಕರೆದರು. ಆ ಸಭೆಗೆ ಶಿರಸಿಯ ವಕೀಲರು ಹಾಲಿ ಈ ಕೇಸಿನಲ್ಲಿ ವಕೀಲಿ ನಡೆಸುತ್ತಿರುವ ರಾ. ಭೀಮರಾಯರೂ, ಬಾಡೀ ಒಟ್ಟಿಯ ಸೋಗು ಹಾಕಿಕೊಂಡು ಅಸ್ಪೃಶ್ಯೋದ್ಧಾರಕರೆಂಬ ನೆವದಿಂದ ಅಸಹಕಾರಿತೆಯ ಮುಂದಾಳುಗಳಾಗಿ ಈ ಕೇಸು ನಡೆಸುತ್ತಿರುವ ಕೊಲ್ಲಾಳ್ಳಿ ವಕೀಲರೂ ಬಂದು ಸರಕಾರದ ವಿರುದ್ಧ ಘೋರತರವಾದ ಚಳವಳಿ ಎಬ್ಬಿಸಲಿಕ್ಕೆ ಜನರಿಗೆ ಬೋಧಿಸಹತ್ತಿ, ಲಿಂಗಾಯತರನ್ನು ಚಳವಳಿಯಲ್ಲಿ ಸೇರಿಸಲಿಕ್ಕೆ ದುರಾಗ್ರಹ ಮಾಡಲಿಕ್ಕೆ ಹತ್ತಿದರು. ಸರಕಾರದ ಮೇಲೆ ವಿಶ್ವಾಸವುಳ್ಳ ಲಿಂಗಾಯತರು ಇವರ ದುರ್ಬೋಧನೆಗೆ ಒಳಗಾದರೆ ಸರಕಾರಕ್ಕೆ ಕೃತಜ್ಞರಾಗಿ ಮಹಾದ್ರೋಹಕ್ಕೆ ಪಾತ್ರರಾಗುತ್ತೀರೆಂಬ ಧೂರ್ತ ಕಲ್ಪನೆಯನ್ನು ಊಹಿಸಿ, ತಮ್ಮ ಜಾತ್ಯಾಬೋಳೆ ಸ್ವಭಾವಕ್ಕೆ ಅನುಸರಿಸಿ ಅಸಹಕಾರಿತೆಯ ವಿರುದ್ಧವಾಗಿ ಸಹಕಾರಿತೆಯ ಸಭೆಗಳನ್ನು ಕೂಡಿಸಿ ಇವರ ಬೋಧನೆಯು ನಮ್ಮ ಉನ್ನತಿಯ ಬಗ್ಗೆ ಇಲ್ಲವೆಂದಿಲ್ಲ. ಬ್ರಾಹ್ಮಣರು ತಮ್ಮ ಕೆಲಸ ಸಾಧಿಸುವ ಸ್ವಾರ್ಥಕ್ಕೆ ಮಾತ್ರ ಸರಕಾರದ ವಿರುದ್ಧ ಜನರ ಮನಸ್ಸು ಕಲುಷಿತ ಮಾಡುತ್ತಿದ್ದಾರೆಂದರಿತು, ಈ ಬ್ರಾಹ್ಮಣ ಜಾಲಕ್ಕೆ ಬಲೆ ಬೀಳಬೇಡಿರೆಂತಲೂ ಜನರಿಗೆ ಬೋಧಿಸಿ, ತಮ್ಮ ಸೀಮೆಯಲ್ಲಿ ಶಾಂತತೆಯನ್ನುಂಟುಮಾಡಿದರು. ಬ್ರಾಹ್ಮಣರು ಪಾಟೀಲಕೀ ಕುಲಕರ್ಣಿಕಿ ಬಿಟ್ಟು ಸರಕಾರ ಕೆಲಸಕ್ಕೆ ತೊಂದರೆ ತಂದ ಗ್ರಾಮಗಳಲ್ಲಿ ಲಿಂಗಾಯತರು ತಮ್ಮ ಮಕ್ಕಳು ಸಹೋದರರನ್ನು ನೇಮಿಸಿ ಕೆಲಸ ಸುರಳೀತ ಸಾಗು ಮಾಡಿದರು. ಈ ಸಂಗತಿಯು ಕಾರವಾರ ಕಲೆಕ್ಟರ ಕಚೇರಿಯಲ್ಲಿ ಈಗ್ಯೂ ರಿಕಾರ್ಡ ಆಗಿ ಉಳಿದಿದೆ.

ಈ ರೀತಿ ಲಿಂಗಾಯತರು ತಮ್ಮ ಕಾರ್ಯಕ್ಕೆ ವಿಘ್ನ ತಂದದ್ದು ನೋಡಿ ಈ ಬಗ್ಗೆ ಬನವಾಸಿ ಸೀಮೆಯ ಲಿಂಗಾಯತರ ಮೇಲೆ ಎರಡನೇ ಉಪಾಯ ಕಾಣದೆ ಬನವಾಸಿ ಬ್ರಾಹ್ಮಣರು ಲಿಂಗಾಯತರನ್ನು ದೇವಸ್ಥಾನದಲ್ಲಿ ಪೂಜೆಗೆ ಬರುವದನ್ನು ಬಂದು ಮಾಡಿದರು. ದೇವಸ್ಥಾನದಲ್ಲಿ ಆಡಳಿತವೆಲ್ಲ ಬ್ರಾಹ್ಮಣ ಮೆಜಾರಿಟಿ ಇದ್ದು, ಇತರೆಯವರ ಆಟ ಏನೂ ಸಾಗದೆ ಇದ್ದದ್ದರಿಂದಲೂ ಮತ್ತು ಟೌನ ಕಮಿಟಿಯಲ್ಲಿ ಬ್ರಾಹ್ಮಣ ಮೆಜಾರಿಟಿ ಇದ್ದು ಪೂಜಾ ಬಂದು ಮಾಡಿದ ಬಗ್ಗೆ ತಕರಾರು ತೆಗೆದುಕೊಳ್ಳಲಿಕ್ಕೆ ತಿಳಿಸಿದರೆ ದಾದು ಹತ್ತುವಂತೆ ಇಲ್ಲವೆಂದು ತಿಳಿದು ನಿರುಪಾಯರಾಗಿ ಪೂಜೆಗೆ ಹೋಗುವದನ್ನು ಬಿಟ್ಟು ದರ್ಶನಕ್ಕೆ ಮಾತ್ರ ದೇವರಿರುವ ಕೋಣೆಯ ಒಳಗೆ ಹೋಗಹತ್ತಿದರು. ಸನ್ ೧೯೨೬ನೇ ಇಸವಿಯಲ್ಲಿ ಪೂಜ್ಯ ಮೆ. ಒಡೆಯರ ಸಾಹೇಬರನ್ನು ದೇವಸ್ಥಾನಕ್ಕೆ ಕರಕೊಂಡು ಹೋಗಿ ತೋರಿಸಿ ಅವರ ಮೇಲೆ ದಾವಾ ತಂದ ಸಂಗತಿ ತಿಳಿದು ಸಮಯ ಬಂದರೆ ಶ್ರೀ ಮಧುಕೇಶ್ವರನಿಗೆ ದಯ ಹುಟ್ಟಿ ನಮ್ಮ ಸತ್ಯತೆಗೆ ಸರಿಯಾಗಿ ಈಶ್ವರನ ಪೂಜೆಯು ಮೊದಲಿನಂತೆ ಸರ್ವ ವೀರಶೈವರಿಗೂ ಲಭಿಸಬಹುದೆಂದು ದರ್ಶನಕ್ಕೆ ಹೋಗುವದನ್ನು ಸಹಾ ಈಗ ಬಿಟ್ಟಿದ್ದಾರೆ. ಎಂದು ತೋರುತ್ತದೆ.

ಒಕ್ಕಲಿಗರೂ ಒಕ್ಕಲತನವೂ.

ನಮ್ಮ ಮಾಸ ಪತ್ರಿಕೆಯು ಈಗ ಸುಮಾರು ೧೭ ವರ್ಷಗಳಿಂದ ದೇಶಾಭಿಮಾನಿಗಳ ಸೇವೆಯನ್ನು ಮಾಡಿ ಯಾವತ್ತು ಜನರ ಆದರಕ್ಕೆ ಪಾತ್ರವಾಗಿರುವದು. ಇತ್ತೀಚೆಗೆ ಒಕ್ಕಲತನದ ಬೆಳೆಗಳ ಬಗ್ಗೆ ಉದಾತ್ತ ವಿಚಾರಗಳ ಲೇಖಗಳೂ ಅಂದವಾದ ಮುದ್ರಣವೂ ಇರುವದರಿಂದ ವಾಚಕರ ಮನಸ್ಸನ್ನು ತನ್ನ ಕಡೆಗೆ ಎಳೆಯುವದೆ ಎಂದೂ ಬಿಡದು. ಕೃಷಿಕರ್ಮವೇ ಶ್ರೇಷ್ಠವಾದದ್ದೆಂದು ಸರ್ವ ಸಮ್ಮತವಿರುವದರಿಂದ ಈ ವಿಷಯಕ್ಕೆ ಆನಾದರವನ್ನು ತೋರಿಸದೆ, ಇಂಥ ಮಾಸಪತ್ರಿಕೆಗಳನ್ನು ಆದರಿಸಬೇಕೆಂದು ತಮ್ಮ ಅಗ್ರಹಪೂರ್ವಕ ವಿನಂತಿ. ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ೧-೩-೦

ಸಂಪಾದಕ
ಒಕ್ಕಲಿಗರೂ ಒಕ್ಕಲತನವೂ,
ಧಾರವಾಡ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಸಾಲುಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ನೇತ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ. ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	౬—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾ

ಈ ಪತ್ರವನ್ನು ಲಕ್ಷ್ಮೀಶಾಯರ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮] ಧಾರವಾಡ ಸೋಮವಾರ ತಾರೀಖು ೧೦ ನೇ ಅಕ್ಟೋಬರ ೧೯೨೮ [ಸಂಚಿಕೆ ೨೧೭

ಹಂಗಾಮು ಮುಗಿಯ ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಚನ್ನಾಗಿ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೆಂದರೆ ಉಕ್ಕಿನ ಕಂಬಗಳ ಬಾಲ್ ಬೇರಿಂಗುಗಳು ಇರುವದರಿಂದ ಯಂತ್ರವು ಲಘುತ್ವದಿಂದ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಗಿಂತಲೂ ಇವುಗಳಲ್ಲಿ ಕಾಳು ಬೀಳ ಯಾಗುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಆದದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದವು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ಡಿಪಾರ್ಟಮೆಂಟಿನಿಂದ ಮಂಜೂರಾದ

ಕನ್ನಡ ನಿಬಂಧ ರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ.

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟದ್ದಲ್ಲದೆ ರಿಪೋರ್ಟ, ಅರ್ಜಿ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ— ೧ ರಾ. ರಾ. ಬಿ. ಜಿ. ದಿವೇಕರ,
ಮಾಳಗುತ್ತಿ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಪ್ಪಾ
ಪಾಂಗ್ವಿಲ ನ ಬುಕ್ ಡಿಪೋ, ಹುಬ್ಬಳ್ಳಿ

WANTED.

Wanted Candidates for Telegraph and Station Master's Courses Railway Fare GRANTED Boarding Seat FREE. Prospectus on 2 annas stamp,- Presidency Telegraph College, Royapettah Madras.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

೧೯೧೨ ಕೋಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯುತ್ತದೆ. ಠೇವಣಿ ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ಕೊಡಿಸುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಲ್ಲಪರಾವ ಜಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರ ತಿಂಗಳ ಮುದ್ದತಿ ಠೇವಣಿಗಳಿಂದ ಹಣವನ್ನು ವಿಶ್ವಾಸದಿಂದ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯು ಇರುತ್ತದೆ.

ಎ. ಜಿ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೧೦-೧೦-೩೭ ನೇ ಇಸ್ವಿ

ಪಿತ್ರಾರ್ಜಿತ ಹೊಲಗಳಲ್ಲಿ ತುಂಡು ಬೀಳಬಾರದೆಂಬ ಕಾಯಿದೆ.

ಮುಂಬಯಿಯ ಕೌನ್ಸಿಲದಲ್ಲಿ ಅಣ್ಣಾ ಸಾಹೇಬರು ತಮ್ಮ ಹೊಲಗಳಲ್ಲಿ ತೀರ ಸಣ್ಣವಾದ ಭಾಗಗಳನ್ನು ಮಾಡಿಕೊಳ್ಳಬಾರದೆಂಬ ಕಾಯದೆಯು ಇಷ್ಟರಲ್ಲಿ ಜರ್ಜೆಗೆ ಹೊರಡತಕ್ಕದ್ದಿದೆ. ಸರಕಾರದವರೇ ಈ ಕಾಯದೆಯ ಜನಕರಾಗಿದ್ದಾರೆ. ಏಕೆಂದರೆ ಇದು ಕಾದಿಟ್ಟ ಖಾತೆಗೆ ಸೇರಿದ್ದು. ಮಂತ್ರಿಗಳಿಗೆ ಪ್ರತ್ಯಕ್ಷವಾಗಿ ಸಂಬಂಧಿಸಿಲ್ಲ. ಆದರೂ ಇವರು ಈ ಕಾಯದೆಯನ್ನು ಪಾಸ ಮಾಡುವ ಕೆಲಸದಲ್ಲಿ ಸರಕಾರಕ್ಕೆ ಮನಮುಟ್ಟಿ ನೆರವಾಗುವರು.

ಈ ಕಾಯದೆಯಿಂದ ಹಿಂದೂ ಧರ್ಮದ ಸಾವಿರಾರು ವರ್ಷಗಳಿಂದ ನಡೆದು ಬಂದ ಹಕ್ಕು ಬಾಧ್ಯತೆಗಳೆಲ್ಲ ನಷ್ಟವಾಗುವವು. ದತ್ತ ವಿಧಾನ; ದಾಯ ವಿಭಾಗ; ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡೇ ಆಗಿರಲೆಂದು ಕೂಡಿಬರುವಷ್ಟು ಉತ್ಪನ್ನ ದೊರೆಯುವದೆಂದು ಇದ್ದ ದೃಢವಿಶ್ವಾಸವೆಲ್ಲ ಹೋಗುವ ಹೊತ್ತು ಬಂದಿತು.

ಅಣ್ಣತಮ್ಮಂದಿರು ಭೂಮಿಯನ್ನು ಒಡೆದು ಹಂಚಿಕೊಳ್ಳುವ ಪ್ರಕಾರವು ಅನಿಷ್ಟವಾಗಿರುತ್ತದೆಂಬದು ನಿಜ. ಒಬ್ಬೊಬ್ಬನ ಪಾಲಿಗೆ ಎರಡು ಎಕರೆ ಸಹ ಬರುವದಿಲ್ಲ. ತರಿಯು ಬಂದರೆ ದೊಡ್ಡ ಮಾತಲ್ಲ. ಎರೆನಾಡಿನ ಒಣನೆಲ ಬರುವದು ಮಾತ್ರ ಕಷ್ಟ. ಸರಕಾರದ ಕಾಯದೆಯ ಮುಖ್ಯ ಕಟಾಕ್ಷವಾದರೂ ಈ ಒಣನೆಲದ ಮೇಲುಂಟು. ಹಳ್ಳಿಗಳಲ್ಲಿ ಜನರು ಇಷ್ಟೇ ಭೂಮಿಗೆ ಅಂಟಿಕೊಂಡು, ಜೀವನ ಮಾಡುವರು. ತೀರ ಬಡತನ ನೋಡುವರು. ಆದರೆ ಬೇರೆ ಉದ್ಯೋಗ ಮಾಡಿ, ಜೀವನ ಸೌಖ್ಯ ಪಡೆಯುವದಿಲ್ಲ. ಅವರಿಗೆ ಹೊಸ ಉದ್ಯೋಗದ ಗುಟ್ಟು ಹತ್ತಿ, ಹೆಚ್ಚು ಸುಖಿಗಳಾಗಬೇಕೆಂದೇ ಸರಕಾರದವರು ಈ ಕಾಯದೆಯ ಕುದುರೆಯನ್ನು ಕೌನ್ಸಿಲದಲ್ಲಿ ಬಿಟ್ಟಿದ್ದಾರೆ. ಇದೊಂದು ಅಶ್ವಮೇಧವೆಂತಲು ಲೋಕನಿಯುಕ್ತ ಮೆಂಬರರು ಇದನ್ನು ಕಟ್ಟಿ ಹಾಕಿ, ಸರಕಾರದ ಮೇಲೆ ದಿಗ್ವಿಜಯ ಮಾಡುವರೋ! ಸರಕಾರಕ್ಕೇ ಜಯಪತ್ರ ಕೊಡುವರೋ! ಎಂಬ ಪರೀಕ್ಷೆಯ ಹೊತ್ತು ಬಂದಿದೆ.

ದಾಯಾದಿಗಳ ವಿಭಾಗದ ವಿಷಯವಾಗಿ ವಿಲಾಯತಿಯ ಕಾಯದೆ ಬೇರೆ. ಹಿಂದುಸ್ಥಾನದ ಕಾಯದೆ ಬೇರೆ. ಅಲ್ಲಿಯ ವ್ಯವಹಾರಗಳೆಲ್ಲ ಕಾಯದೆಯಿಂದ ನಡೆಯುತ್ತವೆ. ವಿಲಾಯತಿಯಲ್ಲಿ ಹಿರಿಯ ಮಗನು ಆಸ್ತಿಯ ಬಾಧ್ಯಸ್ತನಾಗುವನು. ಉಳಿದ ಮಕ್ಕಳು ತಂದೆಯ ಮೃತ್ಯುಪತ್ರದಂತೆ ಸಂಗಮ ಜೀವಿಗೆ ಭಾಗಿಗಳಾಗುವರು. ಅದು ಪರಂಪರೆಯಾಗಿ ನಡೆದು ಬಂದದ್ದರಿಂದ ಹಿಸೆಯ ಪ್ರಸಂಗದಲ್ಲಿ ಯಾರಿಗೂ ದುಃಖವಾಗುವದಿಲ್ಲ. ಹಿಂದುಸ್ಥಾನದಲ್ಲಿ ಈ ಪ್ರಕಾರ ಹಿಸೆ ಮಾಡಿದಾಗ ಹಿರಿಯನ ಹೊರತು, ಉಳಿದವರಿಗೆ ಎಷ್ಟು ದುಃಖ ಮತ್ತು ತಾಪವಾಗುವದೆಂಬದನ್ನು ಬರೆಯುವದಕ್ಕಿಂತ ಊಹಿಸುವದೇ ಲೇಸು.

ಯುರೋಪಿಯನ್ನರು ಶ್ರೀಮಂತರಿದ್ದಾರೆ. ಜಗತ್ತಿನ ವ್ಯಾಪಾರ ಬುದ್ಧಿಮತ್ತೆಯು ಅವರ ಕಯ್ಯಲ್ಲುಂಟು. ರಾಜ್ಯಾಧಿಕಾರದ್ದರಿಂದ ಹೆಚ್ಚಿನ ದೇಶಗಳಿಂದು ದಿಕ್ಕು ದಿಕ್ಕಿನಲ್ಲಿಯೂ ಹೋಗುವರು. ಇವುಗಳಲ್ಲಿ ಒಂದಾದರೂ ಸೌಲಭ್ಯವು ಹಿಂದೂ ರೈತರಿಗಿರುವದಿಲ್ಲ. ಮೊದಲು ತಿನ್ನುವ ಹೆಸರಿನಿಂದ ದೊಡ್ಡ ಬಂಡೀಗಾಳಿ!! ದೇಶ ದೇಶಾಂತರಗಳ ಹೆಸರು ಕೂಡ ಗೊತ್ತಿರುವದಿಲ್ಲ. ಧರ್ಮವಂತೂ ಕ್ಷಣಕ್ಷಣ ಅಡ್ಡ ಬರುವದು. ಇಷ್ಟಾಗಿಯೂ ದೂರ ದೇಶಕ್ಕೆ ಹೋಗಬೇಕೆಂದರೆ ಹತ್ತರ ರೊಕ್ಕವಿರುವದಿಲ್ಲ. ಯಾವದೊಂದು ಕಸಬು ಬರುವದಿಲ್ಲ. ಸಲಿಕೆ ಗುದ್ದಲಿ ಹಿಡಿಯುವದರ ಹೊರ್ತು ಹೆಚ್ಚಿನ ವಿದ್ಯೆ ಗೊತ್ತಿಲ್ಲ. ವಿಲಾಯತಿಯಂತೆ ಇವರೆಲ್ಲರಿಗೂ ಕೆಲಸ ಪೂರೈಸುವಷ್ಟು ಗಿರಣಿ ಕಾರಖಾನೆಗಳಿರುವದಿಲ್ಲ.

ಪ್ರತಿಯೊಬ್ಬ ರೈತನ ಮನೆಯಲ್ಲಿ ಒಂದು ಪಿಯಾನ ಪೆಟ್ಟಿಗೆ ಅವಾಗ ಅವನ ಬಡತನ ಹಿಂಗಿತೆಂದು ತಿಳಿಯಬೇಕೆಂದು ಗ್ಲ್ಯಾಡಸ್ಟನಸಾಹೇಬರ ತತ್ವವು. ನೀರು ತರುವದಕ್ಕೆ ತಾಂಬ್ರದ ಕೊಡ, ಕುಡಿಯುವದಕ್ಕೆ ಹಿತ್ತಾಳಿಯ ಚರಿಗೆಯಾದರೂ ಸಾಕೆಂದು ಇಲ್ಲಿಯ ರೈತರ ತಿಳುವಳಿಕೆ. ಇಂಥ ದರಿದ್ರ ರೈತನು ತನ್ನ ಮಕ್ಕಳಿಗೆ ಹಂಚಿ ಕೊಡುವದೇನು? ಮೃತ್ಯುಪತ್ರದ ಮಾತಂತೂ ಬಹಳ ದೂರಿನ ವಿಚಾರವು. ಏಕೆಂದರೆ ಅವನಿಗೆ ಬರೆಯಲಿಕ್ಕೆ ಬಂದರೆ ಮೃತ್ಯುಪತ್ರದ ವಿಚಾರವು. ಬರೇ ಮನಿ, ಕರೇ ಹೊಲ, ಬಹಳವಾದರೆ ಎರಡು ಎತ್ತುಗಳು ಇಷ್ಟೇ ಅವನ ಸ್ಥಾವರ ಜಂಗಮ ಆಸ್ತಿಯು. ಇವುಗಳಲ್ಲಿ ಅಣ್ಣನಿಗೇನು ಸಲ್ಲಬೇಕು? ತಮ್ಮನಿಗೇನು ಸಲ್ಲಬೇಕೆಂಬದು ಬಹು ಬಿಕ್ಕಟ್ಟಿನ ಪ್ರಶ್ನವಾಗುತ್ತದೆ.

ಇದು ಹೊರಗಿನ ನೋಟವಾಯಿತು. ಒಳನೋಟವು ಬೇರೆಯುಂಟು. ಅದು ಸಾಲವು!! ಸಾಲವಿಲ್ಲದ ರೈತನಾವನಿರುವನು? ಕ, ಡ, ಪತ್ರಿಕೆಯು ಇದರ ಕರ್ಮಕಾಂಡವನ್ನು ಸರಸಾಗಿ ಹೇಳುತ್ತದೆ.

ಒಕ್ಕಲತನದವರ ಕುಟುಂಬ ಪರಿಸ್ಥಿತಿಯು ಸೋಜಿಗವಾದದ್ದಿರುತ್ತದೆ. ಹಿರಿಯ ಮಗನು ಖಾತೆದಾರನಾಗುತ್ತಾನೆ. ಇವನಿಗೆ ಯಾರಾದರೂ ಹೆಣ್ಣು ಕೊಡುವರು. ಚಿಕ್ಕವರಿಗೆ ಕೊನೆಗೆ ಹಿಂದು ಮುಂದೆ ನೋಡುವರು. ಆದ್ದರಿಂದ ಮೊದಲು ಸಣ್ಣವರ ಮದುವೆ ಮಾಡಿ, ಅನಂತರ ಖಾತೇದಾರನ ಮದುವೆ ಮಾಡುವರು. ಸರಕಾರದ ಕಾಯದೆಯಿಂದ ಚಿಕ್ಕವರಿಗೆ ಭೂಮಿಯಲ್ಲಿ ಭಾಗವೇ ದೊರೆಯದಾದರೆ ಇವರಿಗೆ ಹೆಣ್ಣೇ ದುರ್ಲಭವಾಗುತ್ತದೆ. ಇದರಿಂದ ಹಿಂದೂ ಸಮಾಜಘಟನೆಯೇ ಶಿಥಿಲವಾಗುವ ಹೊತ್ತು ಬರುತ್ತದೆ.

ಭೂಮಿಯ ಭಾಗದಿಂದುಂಟಾಗುವ ದರಿದ್ರತನದ ದೆಸೆಯಿಂದ ಸರಕಾರದವರು ಅನೇಕ ವರ್ಷಗಳಿಂದ ವಿಚಾರ ಮಾಡುತ್ತಾ ಬಂದು, ಈಗ ಕಾಯದೆ ಮಾಡಬೇಕೆಂದಿದ್ದಾರೆಂದು ಸರ ಜ.ನಿರಾಲ ವೇಳಾಪಾಯೇಬರು ಹೇಳುತ್ತಾರೆ. ಹಿಂದ ಎಷ್ಟೋ ವರ್ಷಗಳ ಪರ್ಯಂತರ ಈ ವಿಷಯವಾಗಿ ವಿಚಾರ ಮಾಡುತ್ತಾ ಸುಮ್ಮನಿದ್ದಂತೆ, ಮುಂದೆ ಕೆಲವು ವರ್ಷ ರೈತರು ಸುಸ್ಥಿತಿಯನ್ನು ಹೊಂದುವ ತನಕ ಈ ಕಾಯದೆಯಲ್ಲಿ ಸರಕಾರವು ಆಸಕ್ತವಾಗತಕ್ಕದ್ದಲ್ಲ. ಸರಕಾರವು ತನ್ನ ಹಟವನ್ನೇ ಹಿಡಿದರೆ ಲೋಕನಿಯುಕ್ತ ಮೆಂಬರರು ಸರ್ವಾನುಮತದಿಂದ ಇದನ್ನು ವಿರೋಧಿಸುವದೇ ಪ್ರಜಾ ಪ್ರತಿನಿಧಿತ್ವದ ಉಚಿತ ಧರ್ಮವಾಗಿರುತ್ತದೆ.

ಹಿಂದುಸ್ಥಾನಕ್ಕೆ ಸ್ವಯಂ ನಿರ್ಣಯದ ತಕ್ಕದ ರಾಜ್ಯವಾಳಗೊಡಬೇಕು. ಮತ್ತು ಎಲ್ಲ ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಬೇಕೆಂಬ ಠರಾವನ್ನು ವಿಲಾಯತಿಯ ಕಾಮಗಾರರು ಈ ವಾರದಲ್ಲಿ ಕೂಡುವ ತಮ್ಮ ಪರಿಷತ್ತಿನಲ್ಲಿ ಮಾಡತಕ್ಕವರಿದ್ದಾರೆ.

ಮುಂಬಯಿಯ ಒಂದು ಭಾಗವಾದ ಮಾತುಂಗಾದಲ್ಲಿ ಕನ್ನಡ ವಿದ್ಯಾರ್ಥಿಗಳ ದೆಸೆಯಿಂದ ಕನ್ನಡಿಗರು ಸ್ವಂತ ವೆಚ್ಚದಿಂದ ಪ್ರಾಥಮಿಕ ಶಾಲೆಯನ್ನು ತೆರೆದಿದ್ದಾರೆ.

ನಿಜಾಮ ಹೈದರಾಬಾದಿನ ವಕೀಲರು ಸ್ಟೈದರಾಬಾದಿನಲ್ಲಿ ಪರಿಷತ್ತು ಕೂಡಿಸುವರು. ಪಂಡಿತ ಕೇಶವರಾಯರು ಅಧ್ಯಕ್ಷರಾಗುವರು.

ಕಾಯದೆಯ ಬೋಧಿತನಕ್ಕಾಗಿ
ಒಂದೇ ಪೈ ದಂಡ !!

—o—

ಗುಲಾಮ ಮಹಮ್ಮದನೆಂಬ ರೇಲ್ವೇ ಪ್ರವಾಸಿಕನು ಅಲಹಾಬಾದಿನ ಹತ್ತಿರ ಒಂದು ಸ್ಟೇಶನದಲ್ಲಿ ಮಧ್ಯರಾತ್ರಿಯಲ್ಲಿಳಿದನು. ಸ್ಟೇಶನದಿಂದ ಊರು ಸನಿಯವಾಗಿತ್ತು. ಕಗ್ಗತ್ತಲೆಯಾಗಿತ್ತು. ಸಂಗಡ ಹೆಂಡತಿ ಮಕ್ಕಳಿದ್ದರು. ದಾರಿ ಕಾಣಿಸಬೇಕೆಂದು ಕಂದೀಲ ಕೊಡಬೇಕೆಂದು ಸ್ಟೇಶನ ಮಾಸ್ತರನನ್ನು ಕೇಳ ಹೋದನು. ಆದರೆ ಅವನಿದಾರನು ಸಿಟ್ಟು ಬಂದನು. ಆಗ ಇಬ್ಬರಿಗೂ ಬಾಯಿಗೆ ಬಾಯಿ ಹತ್ತಿತು. ರೇಲ್ವೆಯ ಕೆಲಸಗಾರರ ಮೈ ಮೇಲೆ ಹೋದನೆಂದು ಗುಲಾಮ ಮಹಮ್ಮದನ ಮೇಲೆ ರೇಲ್ವೆ ಕಾಯದೆಯ ಪ್ರಕಾರ ಖಟ್ಲೆಯಾಯಿತು.

ಮ್ಯಾಜಿಸ್ಟ್ರೇಟರು ಉಭಯ ಪಕ್ಷದ ವಕೀಲರುಗಳನ್ನು ಕೇಳಿಕೊಂಡು, ಸಾಕ್ಷೀ ಪುರಾವೆ ತೆಗೆದುಕೊಂಡು, ಆರೋಪಿ ಗುಲಾಮ ಮಹಮ್ಮದನ ಉದ್ದೇಶವು ಸ್ವಚ್ಛವಿದ್ದರೂ, ಹವಾಲದಾರನಿಗೆ ಬಿರು ನುಡಿಗಳನ್ನಾಡತಕ್ಕದ್ದಿದ್ದಿಲ್ಲ. ಕಾಯದೆಯ ದೃಷ್ಟಿಯಿಂದ ಏನಾದರೂ ಶಿಕ್ಷೆಯಾಗತಕ್ಕದ್ದು. ಆದ್ದರಿಂದ ಬಹಳ ನ್ಯಾಯದ ತೀರ ಅಲ್ಪ ನಾಣ್ಯವಾದ ಒಂದು ಪೈ ದಂಡ ಕೊಡಬೇಕೆಂದು ತೀರ್ಪು ಹೇಳಿ, ಸ್ಟೇಶನದವರು ಪ್ರಯಾಣಿಕರ ಕೂಡ ಸಭ್ಯತನದಿಂದ ನಡೆಯಬೇಕೆಂದು ಉಪದೇಶ ಮಾಡಿದ್ದಾರೆ.

'ರೇಲ್ವೆಯವರು ಪ್ರಯಾಣಿಕರಿಗೆ ಸರ್ವ ಸಾಧಾರಣವಾಗಿ ತೋರಿಸಬಹುದಾದಂಥ ಸೌಜನ್ಯವನ್ನು ತೋರಿಸಲಿಲ್ಲೆಂಬ ಕಾರಣದಿಂದ ಈ ಪೈ ದಂಡವನ್ನು ರದ್ದ ಮಾಡಬೇಕೆಂದು ಗುಲಾಮ ಮಹಮ್ಮದನು ಅಲ್ಲಿಯ ಹಾಯಕೋರ್ಟಿಗೆ ಅಪೀಲು ಮಾಡಿದ್ದಾನೆ.

ಫ್ರಾನ್ಸ ಮತ್ತು ರಶಿಯಾ.

—o—

ರಾಯಭಾರಿಯ ದೆಸೆಯಿಂದ ಜಗಳ.

——(o)——

ರೆಟೋವ್ಹಸ್ಕಿ ಎಂಬವನು ರಶಿಯಾದ ಪರಿಯಿಂದ ಪಾರೀಸ ಪಟ್ಟಣದಲ್ಲಿ ರಾಯಭಾರಿಯಾಗಿದ್ದನೆ. ಈತನು ತನ್ನ ಕರ್ತವ್ಯ ಮಾತ್ರ ಮಾಡದೆ, ಫ್ರಾನ್ಸ ದೇಶದ ತುಂಬ ಬೋಲ್ಸವಿಕ ಧರ್ಮತತ್ವ ಪ್ರಚಾರ ಮಾಡಗೊಡುವನು ಆದುದರಿಂದ ಈತನನ್ನು ಹಿಂದಕ್ಕೆ ಕರಿಸಿಕೊಂಡು, ಬೇರೊಬ್ಬನನ್ನು ರಾಯಭಾರಿಯಾಗಿ ಕಳಿಸಬೇಕೆಂದು ಫ್ರೇಂಚ ಸರಕಾರದವರು ರಶಿಯಾಕ್ಕೆ ತಿಳಿಸಿದರು. ಫ್ರೆಂಚರ ಇಷ್ಟಕ್ಕನುಸಾರವಾಗಿ ನಡೆಯದೆ ತನ್ನ ಘನತೆಗೆ ಕಳಂಕ ಹತ್ತುತ್ತದೆಂದು ರಶಿಯಾರು ಇದೊಂದು ಕೆಲಸ ಮಾತ್ರ ಆಗಲಾರದೆಂದು ಉತ್ತರ ಬರೆದಿದ್ದಾರೆ. ರೆಟೋವ್ಹಸ್ಕಿಯ ದೆಸೆಯಿಂದ ಎರಡೂ ಸರಕಾರಗಳು ಹಟಕ್ಕೆ ಬಿದ್ದಿರುತ್ತವೆ. ಯಾವದು ಸೋಲುವದೆಂಬುದನ್ನು ನೋಡಬೇಕಾಗಿದೆ.

ನಾಭಾದ ಮಹಾರಾಣಿಯವರ
ವಿಷ ಪ್ರಯೋಗ!

—o—

ಲಾರ್ಡ ಆಯರ್ವಿನ ಸಾಹೇಬರು ಗೃಹಮಂತ್ರಿಯಾದ ಮಿ. ಥಾಮಸನ್ನ ಸಾಹೇಬರನ್ನು ಕರೆಸಿಕೊಂಡು-

ಥಾಮಸನ್ನರೇ- ಮಹಾರಾಣಿಯವರ ಆಗನ್ಯವಾದ ವಿಷಪ್ರಯೋಗದ ವರ್ತಮಾನವೇನು?

ಥಾಮಸನ್ನರು- ದೊರೆಗಳೇ- ಈ ಸುದ್ದಿಯು ದುಃಖದಾಯಕವು. ಸೋಜಿಗವಾದದ್ದೂ ಇರುತ್ತದೆ.

ಆಯರ್ವಿನ- ಅದು ಸರಿ ಆದರೆ ಅಷ್ಟರಿಂದಲೇ ಮುಗಿಯದು. ಈ ವಿಷ ಮುದ್ದಿಗೆ ನೀವು ಏನಾದರೂ ವಿಚಾರ ಮಾಡಿದ್ದೀರಾ?

ಥಾಮಸನ್ನರು- ಗುಪ್ತ ಪೋಲೀಸರು ತಪಾಸು ನಡೆಸಿದ್ದಾರೆ.

ಆಯರ್ವಿನ- ಮಹಾರಾಣಿಗೆ ಯಾರು ವಿಷ ಹಾಕಿದರು. ಮತ್ತು ಅದು ಹೇಗೆ ಹೊರಬಿತ್ತೆಂಬ ಕಥಾಂತರವೇನು?

ಥಾಮಸನ್ನರು- ಹಾಗೆ ವರ್ತಮಾನಪತ್ರಗಳಲ್ಲಿ ಬರೆದಿದೆ.

ಆಯರ್ವಿನ- ಮಹಾರಾಣಿಯವರ ಆರೈಕೆಗಾಗಿದ್ದ ಇಬ್ಬರು ದಾಯಿಗಳ ವಿಚಾರವೇನು?

ಥಾಮಸನ್ನರು- ಗುಪ್ತ ಪೋಲೀಸರು ಅವರನ್ನು ಹುಡುಕುತ್ತಿದ್ದಾರೆ.

ಆಯರ್ವಿನ- ಮಹಾರಾಜರಿಗೆ ಹೆಂಡತಿಯ ಭೆಟ್ಟಿಯನ್ನೇಕೆ ಮಾಡಗೊಡಲಿಲ್ಲ.

ಥಾಮಸನ್ನರು- ಆ ವಿಷಯ ನನಗೆ ತಿಳಿಯದು.

ಆಯರ್ವಿನ- ಮಹಾರಾಣಿಯು ಜೀವಿಯುಳ್ಳ ಅಸ್ತಿಯ ರಕ್ಷಣೆ ಮಾಡಬೇಕೆಂದು ಮ್ಯಾಜಿಸ್ಟ್ರೇಟ, ಕಲೆಕ್ಟರ, ಕಮಿಶನರ ಮೊದಲಾದವರಿಗೆ ಮಾಡಿದ ಅರ್ಜಿಗಳೇಕೆ ದಾಖಲ ದಫ್ತರವಾದವು?

ಥಾಮಸನ್ನರು- ಅದರಿಂದ ನನಗೇನೂ ತಿಳಿದಿಲ್ಲ.

ಆಯರ್ವಿನ- ರಿಪೋರ್ಟು ಕಳಿಸಲಿಕ್ಕೆ ಕೇಳಿದ್ದೀರಾ?

ಥಾಮಸನ್ನರೇ- ಇಲ್ಲ. ಪದ್ಧತಿ ಪ್ರಕಾರ ರಿಪೋರ್ಟು ಬರುವದೆಂದು ನಂಬಿದ್ದೇನೆ.

ಆಯರ್ವಿನ- ಈ ಮಾತು ಯಾರೊಬ್ಬರನ್ನು ಕೊಂದರೆ ನಡಿಸುವಂಥಾದ್ದು. ದೇಶದ ತುಂಬ ಜನರ ಗವರ್ನ್ಮೆಂಟ. ಮಾಡಿದ ಇಂಥ ಮಹತ್ವದ ಪ್ರಕರಣದಲ್ಲಿ ನೀವೇನೂ ಲಕ್ಷ್ಯ ಹಾಕಿದಂತೆ ತೋರುವದಿಲ್ಲ. ನಿಮ್ಮ ಖಾತೆಯು ತನ್ನ ಜವಾಬದಾರಿಯನ್ನು ಅರಿತು ಕೆಲಸ ಮಾಡುತ್ತದೆಂದು ನೀವು ತಿಳಿಯುತ್ತೀರಾ?

ಥಾಮಸನ್ನರು- ದೊರೆಗಳೇ ಈ ಮಾತು ಕೇಳಿ ನನಗೆ ಬಹಳ ದುಃಖವಾಗುತ್ತದೆ.

ಇಲ್ಲಿಗೇ ಪ್ರಸ್ತಾಪ ಮುಗಿಯಿತು. ಇದು ಕಾಲ್ಪನಿಕ ಸಂವಾದವೆಂದು ಒರೆಯುವ ಅಗತ್ಯವಿಲ್ಲ.

ಬಂಡಾಯವಲ್ಲ; ಸ್ವಾತಂತ್ರ್ಯದ ಯುದ್ಧ-

—o—

ಪೇಶವೆ ನಾನಾಸಾಹೇಬನ ಸ್ಮಾರಕ.

—o—

೧೮೫೭ ನೆಯ ಇಸವಿಯ ಬಂಡಾಯವು ಬಂಡಾಯವಲ್ಲ. ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಮಾಡಿದ ಯುದ್ಧವು. ಇದರ ವೀರಾಧಿವೀರರಾದ ಪೇಶವೆ ನಾನಾಸಾಹೇಬ ಮತ್ತು ಮಹಾರಾಣಿ (ಝಾಶಿ) ಲಕ್ಷ್ಮೀಬಾಯಿಯ ಸ್ಮಾರಕ ಮಾಡಬೇಕು. ಇದಕ್ಕಾಗಿ ಎರಡು ಲಕ್ಷ ರೂಪಾಯಿ ಹಣ ಕೂಡಿಸಬೇಕು. ಮತ್ತು ದೇವಿ ಸರೋಜಿನಿ, ಪುರುಷೋತ್ತಮದಾಸ ಟಾಂಡನ ಮತ್ತು ಮಹಿಳಾಲ ಕೋರಿ ಇವರದೊಂದು ಕಮೀಟಿ ನೇಮಿಸಬೇಕೆಂದು ಆಲ ಇಂಡಿಯಾ ಕಾಂಗ್ರೆಸ ಕಮೀಟಿಯಲ್ಲಿ ಪಂಡಿತ ಗೌರೀಶಂಕರ ಮಿಶ್ರರು ಠರಾವು ತರತಕ್ಕವರಿದ್ದಾರೆ.

ಹೆಚ್ಚಿನ ಪಟ್ಟಿ ಕೊಡಬಾರದೆಂದು ರೈತರ ನಿಶ್ಚಯ.

—o—

ಸೂರತ ಜಿಲ್ಹೆಯಲ್ಲಿ ಹೆಚ್ಚಿಗೆ ಆದ ಪಟ್ಟಿಯನ್ನು ಕೊಡಬಾರದೆಂದು ರೈತರು ಠರಾವು ಮಾಡಿದ್ದನ್ನು ಈ ಮೊದಲು ಬರೆದಿದ್ದೇವೆ. ಬಾರಡೋಲಿಯ ರೈತರೂ ಇದೇ ಪ್ರಕಾರ ನಿರ್ಧರಿಸಿ ತಮ್ಮ ಸತ್ಯಾಗ್ರಹದ ಚಾಲಕತ್ವವನ್ನು ಅಂಗೀಕರಿಸಬೇಕೆಂದು ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ. ಪಟೇಲರಿಗೆ ವಿನಂತಿ ಮಾಡಿಕೊಂಡಿದ್ದಾರೆ.

'ಹಿಂದುಸ್ಥಾನದ ಗಣಿಗಳಿಗೆ ಚೀನ ಜಪಾನದ ಮಾರ್ಕೆಟುಗಳು ಬಂದಾದ್ದರಿಂದ, ಗಣಿಯವರು ಇಂಗ್ಲೆಂಡ, ಮೆಸಪೋಟೇಮಿಯಾ, ಆಫ್ರಿಕಾ ಮುಂತಾದ ದೇಶ ಖಂಡಗಳಿಗೆ ಹೊಸ ಪೇಟೆಗಳನ್ನು ಹುಡುಕಲು ತಮ್ಮ ಪಡಿಯಿಂದ ಏಜಂಟರನ್ನು ಕಳಿಸುವರು.

ಒಂದು ವರ್ಷದಲ್ಲಿ ಎರಡು ಲಕ್ಷ ರೂಪಾಯಿಯಾಗಿ ರುತ್ತದೆ

ಸರ ರಾಮಸ್ವಾಮಿ ಅಯ್ಯಂಗಾರು ಜಿನೇವಾದಿಂದ ತಿರುಗಿ ಬರುವಾಗ ಇಂಗ್ಲಂಡಕ್ಕೆ ಹೋಗಿ ಭಾರತ ಮಂತ್ರಿ ಲಾರ್ಡ ಬರ್ಕನಹೆಡ್ಡರ ಕೂಡ ಏಕಾಂತದಲ್ಲಿ ಭಾಷಣ ಮಾಡಿದರು. ವಿಷಯ ರಾಯಲ ಕಮಿಶನ ವಿನು ಪಾ. ನಡೆಯಿತೆಂಬುದನ್ನು ಅವರು ಹೇಳಲಿಚ್ಛಿಸುವದಿಲ್ಲ.

ನೋಟೀಸು

೮ ಧಾ॥ ಟ್ರಿಶಾ ಜಾಕೀರಪ್ಪನಾದ ಸಂಭಾಜಿದಾರ ಸಾ. ಕೇನ ನಲವಡಿ ತಾ|| ನವಲಗುಂದ ಈತಗೆ

ಕೆಳಗೆ ಸಹಿ ಮಾಡುವವರ ಕಡೆಯಿಂದ ನಿನಗೆ ಈ ನೋಟೀಸಿನಿಂದ ತಿಳಿಸುವದೇನೆಂದರೆ ನೀನು ನನ್ನ ಲಗ್ನದ ಹೆಂಡತಿ ಇದ್ದು ನಿನ್ನನ್ನು ಲಗ್ನವಾಗಿ ಅಜಮಾಸು ಮೂರು ವರ್ಷಗಳಾದವು ಆಗ ನನ್ನ ಕೂಡಾ ನೀನು ಯಾವಾಗಲೂ ಸುರಳೀತ ರೀತಿಯಿಂದ (ಅಂದರೆ) ಹೇಳಿದಂತೆ ಕೇಳದೆ ಹಾಗೂ ಹೀಗೂ ಪ್ರಪಂಚ ಮಾಡುತ್ತಾ ಬಂದಿ. ಈಗ ಏಳೆಂಟು ತಿಂಗಳ ಹಿಂದೆ ನಿಮ್ಮ ತಂದೆ ಮತ್ತು ತಾಯಿ ನಿಮ್ಮ ಅಣ್ಣಾ ಈ ಮೂವರು ಕೂಡಿ ಪಂಚರಿಗೆ ಸಂತಾಳ ಮಾಡಲಿಕ್ಕೆ ಬಂದರು. ಆಗ ನಾನು ಮಟ್ಟಸೇ ನಿನ್ನನ್ನು ಕರೆದುಕೊಂಡು ಬೇರೆಯಿದ್ದರಿಂದಾ ನನಗೆ ಬಹಳೇ ಅಡಚಣೆ ಆಗುತ್ತದೆಂತ ತಿಳಿದು ನಾನು ನಿಮ್ಮವರಿಗೆ ಕಳಿಸಲಿಕ್ಕೆ ಆಗುವದಿಲ್ಲ ಅಂತಾ ಹೇಳಿದೆ, ಸದ್ರಿಯವರು ನನ್ನ ಮನಿಯಲ್ಲಿಯೇ ಒಂದು ಮೂರು ದಿವಸಯಿದ್ದರು. ಇದಕೆ ತಾ||೨೪-ಜುಲೈ-೧೯೨೭ ನೇ ಇಸ್ವಿ ದಿವಸಾ ನಾನು ಕೆಲಸದ ಮೇಲೆ ಧಾರವಾಡ ತಾಲ್ಲೂಕ ಸಿಗದಿಗೆ ಹೋದಾಗ ನೀನು ನಿಮ್ಮ ತಂದೆತಾಯಿಗಳ ಚಿತಾವಣಿಯಿಂದಾ ನನ್ನ ಮನಿಬಿಟ್ಟು ಹೋಗಿರುತ್ತಿ. ಆ ಕಾಲಕ್ಕೆ ನಿನ್ನ ಮೈಮೇಲೆಯಿದ್ದ ನನ್ನ ದಾಗೀನೆಗಳು

೧ ಬಂಗಾರದ ಬೋರೆ ೧ ಅಜಮಾಸ ತೊಲಿ ೫.
೨ ಬೆಳ್ಳಿ ಕಾಲುಚೈನಜೋಡು ೧ ಅಜಮಾಸ ತೊಲಿ ೧೨
೩ ಬೆಳ್ಳಿ ಪೈಜಣಜೋಡ ೧ ಅಜಮಾಸ ತೊಲಿ ೬೦
೪ ಬೆಳ್ಳಿ ಪಟ್ಟಿ ಒಂದು ಅಜಮಾಸ ತೊಲಿ ೧೩
೫ ಬಂಗಾರದ ಸರಗಿ ಒಂದು ಅಜಮಾಸ ತೊಲಿ ೯.
೬ ಗುಂಡಿಗಳಿರುವ ಸರ ಒಂದು ಅಜಮಾಸ ಕಿಮ್ಮತ್ತು ೧೦ ರೂಪಾಯಿ

(ಸದ್ರಿ) ಸಾಮಾನುಗಳು ಹೋಗುವಾಗ್ಯೆ ತೆಗೆದುಕೊಂಡು ಹೋಗಿರುತ್ತಿ, ನಾನು ಊರಿಂದಾ ಬಂದ ನಂತರ ನೀನು ಹೋದದ್ದು ಗೊತ್ತಾಯಿತು. ಇದರ ಕೂಡಾ ಪಂಚರು ಹಬ್ಬ ಆದ ಕೂಡ್ಲೆ ಲೋಕಾ ನಡಾವಳಿ ಪ್ರಕಾರ ಬಂದೀ ಅಂತಾ ತಿಳಿದೇ ಹಬ್ಬ ಆದರೂ ಬರಲಿಲ್ಲ. ಮತ್ತು ಪತ್ರ ವಗೈರೆ ಹಾಕಿದರೂ ಅದಕ್ಕೆ ಜವಾಬ ಇಲ್ಲಾ. ಇಲ್ಲಿಯವರೆಗೆ ದಾರೀ ನೋಡಿದೆ ಬರಲಿಲ್ಲಾದ ಕಾರಣಾ ಈ ನೋಟೀಸ ಕೊಡುವ ಭಾಗ ಬಿತ್ತು. ಈ ನೋಟೀಸ ಮುಟ್ಟಿದ ಎಂಟು ದಿವಸದಲ್ಲಿ ಮೇಲೆ ಕಾಣಿಸಿದ ನನ್ನ ದಾಗೀನೆ ವಗೈರೆ ಯಾವತ್ತು ತೆಗೆದುಕೊಂಡು ಬಂದು ನಾನು ಹೇಳಿದಂತೆ ಕೇಳಿಕೊಂಡು ಸುರಳೀತ ಪ್ರಪಂಚ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ನಿನ್ನ ಮೇಲೆ ವ ನಿನಗೆ ಚಿತಾವಣಿ ಮಾಡಿದ ತಂದೆ ತಾಯಿ ಅಣ್ಣನ ಮೇಲೆ ಕಾಯಿದೇಶೀರ ಇಲಾಜ ಮಾಡೇನು. ಆ ಬಾಬತು ಖರ್ಚು ಸಹಾ ನಿನ್ನ ತಲೆಯ ಮೇಲೆ ಅದೆ. ಮುದ್ದತ್ತ ಒಳಗಾಗಿ ಸಾಮಾನು ತೆಗೆಕೊಂಡು ಬರಲಿಕ್ಕೆ ತಪ್ಪಿದಲ್ಲಿ ಮುಂದೆ ನಿನ್ನ ಕೂಡಾ ಪ್ರಪಂಚ ಮಾಡಲಿಕ್ಕೆ ಕಬೂಲ ಇಲ್ಲಾ ಇದೇ ಕಡೇ ಲೇಖ ಅಂತಾ ತಿಳಿಬೇಕು. ಮುಂದೆ ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ನಿನ್ನ ಹಕ್ಕು ಸಂಬಂಧ ಯೇನೂ ಇರೋದಿಲ್ಲಾ. ಮತ್ತು ಈಗ ನಿನ್ನ ಹೊಟ್ಟೀಲೆ ಹೆಣ್ಣು ಗಂಡು ಮಕ್ಕಳು ಯೇನೂ ಇರೋದಿಲ್ಲಾ. ಮುಂದೆ ಯೇನಾದರೂ ಹೆಚ್ಚು ಕಡಿಮೆಯಾದಲ್ಲಿ ನನಗೇನೂ ಸಂಬಂಧ ಇಲ್ಲಾ. ನನ್ನ ಆಸ್ತಿಯ ಮೇಲೆ ಹುಟ್ಟಿದ ನಿನಗೆ ಹುಡುಗರು ವಗೈರೆ ವ ಯಾವಧರೇದ ಹಕ್ಕು ಸಂಬಂಧ ಯೇನೂ ಇರೋದಿಲ್ಲಾ ತಿಳಿಯಬೇಕು. ಈ ನೋಟೀಸಿನ ಖರ್ಚು ನಿನ್ನ ತಲೆ ಮೇಲೆ ಅದೆ.

ತಾ|| ೧೧-೧೦-೧೯೨೭.

ಸಹಿ (ಇಂಗ್ಲೀಷ)—ಬಿ. ಬಿ, ಸುಭೇದಾರ.

ಒಕ್ಕಲಿಗರೂ ಒಕ್ಕಲತನವೂ.

ನಮ್ಮ ಮಾಸ ಪತ್ರಿಕೆಯು ಈಗ ಸುಮಾರು ೧೬ ವರ್ಷಗಳಿಂದ ದೇಶಾಭಿಮಾನಿಗಳ ಸೇವೆಯನ್ನು ಮಾಡಿ ಯಾವತ್ತು ಜನರ ಆದರಕ್ಕೆ ಪಾತ್ರವಾಗಿರುವದು. ಇತ್ತೀಚೆಗೆ ಒಕ್ಕಲತನದ ಬೆಳೆಗಳ ಬಗ್ಗೆ ಉದಾತ್ತ ವಿಚಾರಗಳ ಲೇಖಗಳೂ ಅಂದವಾದ ಮುದ್ರಣವೂ ಇರುವದರಿಂದ ವಾಚಕರ ಮನಸ್ಸನ್ನು ತನ್ನ ಕಡೆಗೆ ಎಳೆಯದೆ ಎಂದೂ ಬಿಡದು. ಕೃಷಿಕರ್ಮವೇ ಶ್ರೇಷ್ಠವಾದದ್ದೆಂದು ಸರ್ವ ಸಮ್ಮತವಿರುವದರಿಂದ ಈ ವಿಷಯಕ್ಕೆ ಅನಾದರವನ್ನು ತೋರಿಸದೆ, ಇಂಥ ಮಾಸಪತ್ರಿಕೆಗಳನ್ನು ಆದರಿಸಬೇಕೆಂದು ನಮ್ಮ ಅಗ್ರಹಪೂರ್ವಕ ವಿನಂತಿ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧-೩-೦

ಸಂಪಾದಕ
ಒಕ್ಕಲಿಗರೂ ಒಕ್ಕಲತನವೂ,
ಧಾರವಾಡ

ನೋಟೀಸಿನ ದರಗಳು.

—೦—

ತಿಂಗಳ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಆಕಾರಿ. ಮ್ಯುನಿಸಿಪಾಲಿಟಿ ಲೋಕಲಬೋರ್ಡ ಮೊದಲಾದ ಸಾರ್ವಜನಿಕ ನೋಟೀಸುಗಳು ಸಾಲಿಗೆ ಮೂರಾಣೆ— ಇಂಗ್ಲಿಷಿನಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರೆ ಆಣೆ ಡಬಲ್ ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೩ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ದೇಶಬಂಧು ದಾಸರ ಚರಿತ್ರೆ	೩ ,,
ಲೋಕಭಕ್ತನ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೩—೮—೦ ರೂ
೬ ,,	೭—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರಿಕೆಯನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಬುಧವಾರ ತಾರೀಖು ೧೫ ನೇ ಅಕ್ಟೋಬರ ೧೯೨೨ | ಸಂಚಿಕೆ ೨೧೮

ಹಂಗಾಮುವು ಮುಗಿಯು ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಚನ್ನಾಗಿ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೆಂದರೆ ಉಕ್ಕಿನ ಕಂಬಿಗಳ ... ಬಲಗಳು ಇರುವದರಿಂದ ಯಂತ್ರವು ಅಸ್ತುಕಟ್ಟಾಗಿ ನಡೆಯುವದಲ್ಲದೆ ... ಪ್ರಯೋಗಿಸುವ ಇವುಗಳಿಗೆ ಹಾಕು ಬೆಲೆ ... ಪ್ರಮಾಣವು ಬಹಳ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಯಿಗಳನ್ನು ಸಂಗ್ರಹಿಸುವವರೂ ... ಈ ಯಂತ್ರಗಳು ಮೋಲಾದದ್ದು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ಕೇಳಿಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ಡಿಪಾಟಿ ಮೆಂಟಿನಿಂದ ಮಂಜೂರಾದ

ಕನ್ನಡ ನಿಬಂಧ ರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟಿದ್ದಲ್ಲದೆ ... ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಒದಗಿಸಿ ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ— ೧ ರಾ. ರಾ. ಬಿ. ಜಿ. ದಿವೇಕರ, ಮಾರ್ಕಂಡೇಯ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಪ್ಪ, ಮಾಗ್ವಿಲ ಸ ಬುಕ್ ಡಿಪೋ, ಹುಬ್ಬಳ್ಳಿ

WANTED.

Wanted Candidates for Telegraph and Station Master's Courses Railway Fare GRANTED Boarding Seat FREE. Prospectus on 2 annas stamp,- Presidency Telegraph College, Royapettah Madras.

ದಿ ಧಾರವಾಡ ಅರ್ಬನ ಕೋ.

ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು ೮೦ ಲಕ್ಷದ ಮೇಲಿಂದೆ. ಚೆಕ್ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಕಾಯಮ ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಿಕೊಳ್ಳಬೇಕು.

ಮಧ್ವರಾವ ಜಿ. ಜಹಗೀರದಾರ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ವಿಚಾರಿಸಿ ತಿಳಿಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಇಟ್ಟುಕೊಳ್ಳುವ ಒಳ್ಳೆಯ ದಾರ್‍ಯ ... ತಿಂಗಳಿಗೆ ... ಆಣೆಯಂತೆ ಬೀಳುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೧೨ ೧೦-೨೭ ನೇ ಇಸ್ವಿ

ಮುಂಬಯಿ ಕೌನ್ಸಿಲದಲ್ಲಿ ಮುಸಲ್ಮಾನ ಮತ್ತು ಬ್ರಾಹ್ಮಣೇತರರ ಉಪಟಳ.

ಇವರನ್ನು ಬೊಗ್ಗು ಬಡೆಯುವ ಬಗೆ.

ಮುಂಬಯಿಯ ಕೌನ್ಸಿಲಿನಲ್ಲಿ ಒಮ್ಮೆ ಸರಕಾರದ ಬಸವನ ಹಿಂದೆ ಬಾಲವಂತಾಗಿದ್ದ ಮುಸಲಮಾನರೂ, ಬ್ರಾಹ್ಮಣೇತರರೂ ಪ್ರಸ್ತುತದಲ್ಲಿ ಸರಕಾರದ ವೈರಿಯಾದವರಾಗಿದ್ದಾರೆ. ಮುಸಲಮಾನರ ಪೈಕಿಯಿಂದ ಇಬ್ಬರು ಮಂತ್ರಿಯಾಗಬೇಕಾಗಿತ್ತು. ಆದರೆ ಗವ್ಹರ್ನರಸಾಹೇಬರು ಒಬ್ಬರನ್ನೇ ಮಂತ್ರಿ ಮಾಡಿಕೊಂಡರು. ಬ್ರಾಹ್ಮಣೇತರರಲ್ಲಿ ಒಬ್ಬರಿಗಾದರೂ ಮಂತ್ರಿಪದ ಕೊಡಲಿಲ್ಲ. ಇವರನ್ನು ಕುನುವಾದರೂ ಸಮಾಧಾನಪಡಿಸಬೇಕೆಂದು ರಾ. ಬ. ಕಂಬಳಿಯವರಿಗೆ ಕೌನ್ಸಿಲದ ಡೆಪ್ಯುಟಿ ಪ್ರೆಸಿಡೆಂಟ ಕೆಲಸ ಕೊಟ್ಟು, ಅವರ ಮೋರೆಯ ಮೇಲೆ ಕೈ ಎಳೆದರು. ಮೆಟೆ ಬೆಲ್ಲ ಕಸಗೊಂಡು, ಹಿಡಿ ಬೆಲ್ಲ ಕೊಟ್ಟಂತಾದ ಕೃತಿಯಿಂದ ಬ್ರಾಹ್ಮಣೇತರರು ಸರಕಾರದ ಮೇಲೆ ಕೋಪಾಟೋಪರಾಗಿ, ಸರಕಾರವನ್ನು ವಿರೋಧಿಸುವ ಪಂಥಗಟ್ಟಿದ್ದಾರೆ.

ಕೇವಲ ಸ್ವಾರ್ಥೈಕ ಪರಾಯಣರಾಗಿ ಬ್ರಾಹ್ಮಣೇತರರೂ, ಮುಸಲಮಾನರೂ ಸರಕಾರದ ಮೇಲೆ ಸಿಟಗೊಂಡದ್ದು ಮವಾಳರಿಗೂ, ಸ್ವತಂತ್ರರಿಗೂ ಸಹನವಾಗಿಲ್ಲ. ಇವರ ಆಚಾರವಿಚಾರವು ಹುಚ್ಚುಚ್ಚಾರದಂತಾಗಿದೆ. ಮಾಜಿ ಮಂತ್ರಿ ಜಾಧವ, ಅವರ ಎಡಗಯ್ಯ ಒಲಿಗಯ್ಯಂತಿರುವ ಮುಂಬಯಿಯ ಬೋಲೆಯವರು ತೀರ ಕಿತಗೇಡಿತನವನ್ನು ಪ್ರಾರಂಭಿಸಿದ್ದಾರೆ. ಸರಕಾರವು ಯುನಿವರ್ಸಿಟಿಗೆ ಒಂದು ಲಕ್ಷದ ಗ್ರಾಂಟು ಕೊಡಬೇಕು. ಅದರ ಸಾಂಪತ್ತಿಕ ಸ್ಥಿತಿಯು ಸುಧಾರಿಸಬೇಕು; ಈ ಮಾಳಿಗೆ ಉಚ್ಚ ಪ್ರತಿಯ ಹಾಗು ಶಾಸ್ತ್ರೀಯ ಶಿಕ್ಷಣ ಬೆಳೆಗಬೇಕು; ತರುಣರು ಪಾಶ್ಚಿಮಾತ್ಯರಂತೆ ಪಂಡಿತರಾಗಬೇಕೆಂಬ ವಿಚಾರವನ್ನು ಬೋಲೆಯವರು ಕಟುಶಬ್ದಗಳಿಂದ ವಿರೋಧಿಸಿದರು. ದಿವಾನ ಜಾಧವರಂಥವರಿಗೆ ಸಂಸ್ಕೃತವೇ ಬೇಕಾಗಿಲ್ಲ; ಮುರಾಟಿಯಾದರೆ ಸಾಕೆಂಬ ಮುಕ್ತಾಫಲವನ್ನು ಸೂರೆಗೈದಿದ್ದರು. ಅದೇ ಪ್ರಕಾರದ ಮೂರ್ಖ ವಿಚಾರವನ್ನು ಪ್ರಸ್ತುತದಲ್ಲಿ ಮಿ. ಬೋಲೆಯವರು ನುಡಿದು, ತಮ್ಮ ಬುದ್ಧಿವಂತಿಕೆಯ ಪ್ರದರ್ಶನ ಮಾಡಿಕೊಂಡರು. ಇಂಥ ಕ್ಷುದ್ರ ವಿಚಾರದ ಜನರನ್ನು ಅಥವಾ ಅವರ ಗುಟ್ಟನ್ನು ಹೊರಗೆಡವಿ, ಅವರ ಸಂಘವನ್ನು ಮುರಿಯಬೇಕೆಂದು ಉದಾತ್ತ ವಿಚಾರದವರು ಒಂದಾದರೆ ಏನೂ ಆಶ್ಚರ್ಯವಲ್ಲ.

ಮವಾಳ, ರಾಷ್ಟ್ರೀಯ, ಸ್ವತಂತ್ರ ಮತ್ತು ಸ್ವರಾಜ್ಯ ಪಕ್ಷದ ಕೆಲ ಮೆಂಬರರು ಸೇರಿ, ಮೇಲಿನ ಕುಂಟಬಣವನ್ನು ಮುರಿಯುವ ವಿಚಾರ ಮಾಡಿದ್ದಾರೆ. ಇವರಲ್ಲಿ ಬೆಳಗಾವಿಯ ಶ್ರೀ ಚಿಕ್ಕೋಡಿ, ಪುಣೆಯ ಮಿ. ಗುಂಜಾಳಕರು ಕೂಡಿಕೊಂಡಿದ್ದಾರೆ. ಇದಕ್ಕೆ ಪ್ರತಿಯೋಗಿ ಸಹಕಾರಿಗಳ ಪ್ರಾಗತಿಕರೆಂಬ ಹೆಸರು ಕೊಡುವರು. ಮಂತ್ರಿಗಳಿಗೆ ಸಹಾಯ ಮಾಡಬೇಕು. ಸರಕಾರದಿಂದ ಆದಷ್ಟು ಹೆಚ್ಚು ಅಧಿಕಾರ ಮತ್ತು ಅನುಕೂಲತೆಗಳನ್ನು ಸಂಪಾದಿಸಬೇಕೆಂದು ಇವರ ಉದ್ದೇಶವಿರುತ್ತದೆ. ಪ್ರಾರಂಭದಿಂದಲೇ ಇವರಿಗೆ ಯಶ ದೊರೆದಿದೆ. ಒರಟಿರುತ್ತಾ ಇವರ ಹೊಸತದಿಂದ ಕೌನ್ಸಿಲದಲ್ಲಿ ಬ್ರಾಹ್ಮಣೇತರ ಮೇಳ ಸದ್ದೇ ಅಡಗಿ ಸೊಳಲಿಕ್ಕೆ ಹೆಸರಿಲ್ಲದೆ ಹೋಗುವದು.

ಸಿಂಧದ ಮುಸಲಮಾನ ಮತ್ತು ಕರ್ನಾಟಕ ಮತ್ತು ಮಹಾರಾಷ್ಟ್ರದ ಬ್ರಾಹ್ಮಣೇತರರೆಂಬ ತಪ್ಪುಮುಪ್ಪು ಬಡಕೊಂಡವರು ಕೌನ್ಸಿಲದಲ್ಲಿ ೨೫-೩೦ ಕ್ಕಿಂತ ಹೆಚ್ಚಿಲ್ಲ. ೧೧೧ ಜನರಲ್ಲಿ ಯಾವ ರೀತಿಯಿಂದಲೂ ಇವರ ಆಟ ಸಾಗದೆಂದು ಎಂಡೂ ಅಂಕೆಗಳಿಂದ ವಿದಿತವಾಗುತ್ತದೆ. ಬ್ರಾಹ್ಮಣೇತರ ಹಿತ ಮಾಡುವದಕ್ಕಾಗಿಯೇ ಕೌನ್ಸಿಲದಲ್ಲಿ ಪ್ರವೇಶ ಮಾಡುತ್ತೇವೆ. ಮತ್ತು ಮಾಡಿದ್ದೇವೆಂದು ಅಜ್ಞ ಮತದಾರರ ಮುಂದೆ ಆತ್ಮಸ್ತುತಿ ಮಾಡಿಕೊಳ್ಳುವವರಿಂದ ಕೌನ್ಸಿಲದಿಂದ ಯಾವ ಹಿತವಾಗಲಾರದೆಂದು ಪೂರಾ ವ್ಯಕ್ತವಾಯಿತು. ಸರಕಾರವು ತನ್ನ ಉದ್ದೇಶವನ್ನು ಸಾಧಿಸುವದಕ್ಕಾಗಿ ಸಮಯ ಬಂದಂತೆ ಟೊಪ್ಪಿಗೆ ಹಾಕುವದು. ಇದರಿಂದ ಸರಕಾರವು ತಾವು ಹೇಳಿದಂತೆ ಕೇಳುವದೆಂದು ಮುಸಲಮಾನರೂ ಬ್ರಾಹ್ಮಣೇತರರೂ ಹುಚ್ಚು ಹುರಿಮಾಗಳಂತೆ ತಿಳಕೊಂಡಿದ್ದರು. ಸದ್ಯದಲ್ಲಿ ಭ್ರಮನಿರಸನವಾಯಿತು. ಇದರಿಂದ ಬುದ್ಧಿಗಲಿತು. ಸ್ವರಾಜ್ಯ ಪಕ್ಷೀಯರನ್ನು ಕೂಡಿಕೊಂಡರೆ ಕೇಗಾದ ಮೇರೆಯು ಪುನಃ ಮೇಲಾಗುವದು. ಗುರು...ರು ಮಧುರೆಯಲ್ಲಿ ಉಪದೇಶ ಮಾಡಿದಂತೆ ಸ್ವಾರ್ಥಬಿಟ್ಟು ದೇಶಹಿತವನ್ನೇ ಮುಂಗುರಿ ಮಾಡಿಕೊಂಡರೆ ಪರಸಿಯುಗೂಡ ಗೋವಿಂದನನ್ನು ಹಾಗೆ ತಮ್ಮದೂ ಹಿತವಾಗುವದು.

ಸುರತದ ಬ್ರಾಹ್ಮಣರ ಸಭೆಯು.

ಕಾಪಾಡಸಿ ಬಿಟ್ಟು ಕರಾಡಸಿ.

—೦—

ಸುರತದ ಕಲೆಕ್ಟರರು ಹಿಂದೂ ಜನರಿಗೆ ವಿರುದ್ಧವಾಗಿ ಮಸೀದೆಗಳ ಮುಂದೆ ವಾದ್ಯ ಬಾರಿಸುವ ವಿಷಯವಾಗಿ ಮಾಡಿದ ಹುಕುಮನ್ನು ನಿಷೇಧಿಸುವದಕ್ಕಾಗಿ ಅಲ್ಲಿಯ ಸ್ತ್ರೀಯರು ಕರೆದ ಜಾಹೀರ ಸಭೆ ಕೂಡಿಸಿದ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಸ್ತ್ರೀಯರ ನಂತರ ಬ್ರಾಹ್ಮಣ ವೈದಿಕರೂ ಒಂದು ಸಭೆ ಕೂಡಿಸಿದರು. ಅಲ್ಲಿಯ ಬ್ರಾಹ್ಮಣರಲ್ಲಿ ಒಂದಲ್ಲ; ಎರಡಲ್ಲ; ಎಳ ಕುಲಭೇದಗಳುಂಟು. ಇವರೆಲ್ಲರೂ ಸಭೆಗೆ ದಯಮಾಡಿಸಿದ್ದರು. ಸಭೆಯಲ್ಲಿ ಒಬ್ಬರು "ಯಾವನ ಕಯ್ಯಲ್ಲಿ ಬಡಿಗೆ ಅವನ ಹತ್ತರ ಎಮ್ಮೆ" ಎಂಬ ಗಾದೆಯ ನುಡಿಯನ್ನು ಹೇಳಿ ಬ್ರಾಹ್ಮಣರು ಬರೇ ಉಂಡಿಗಳನ್ನು ತಿಂದು ತೇಗುತ್ತಾ ಕೂಡ್ರದೆ, ಆಯುಧಪಾಣಿಗಳಾಗಿ, ಆತ್ಮರಕ್ಷಣೆ ಮಾಡಿಕೊಳ್ಳಬೇಕೆಂದರು. ಇನ್ನೊಬ್ಬರು ನಾವು ಪುಕ್ಕರಂತೆ ಅಡಗಿಕೊಂಡು ಕೂಡ್ರತಕ್ಕದ್ದಲ್ಲ. ನಾವು ನಮ್ಮ ಸಂರಕ್ಷಣೆಯ ವಿಚಾರವನ್ನು ಮಾಡಿಕೊಳ್ಳಗಿದ್ದರೆ, ಕುರಿಗಳಂತೆ ನಮ್ಮನ್ನು ಕೊಯ್ದು ಹಾಕುವರೆಂದು ಉದ್ಗಾರ ತೆಗೆದರು. ಮೂರನೆಯವರು "ಪ್ರಸ್ತುತದಲ್ಲಿ ನಿಮ್ಮ ಧರ್ಮರಕ್ಷಣೆಯ ಪರೀಕ್ಷೆಯ ಕಾಲ ಬಂದಿದೆ. ಈ ಪರ್ಯಂತರ ನಿಮ್ಮ ಧರ್ಮರಕ್ಷಣೆ ಮಾಡಿಕೋತಾ ಬಂದಿದ್ದೀರಿ. ಈಗ ಕುಂಭಕರ್ಣನಂತೆ ನಿದ್ದೆ ಮಾಡುತ್ತಾ, ಪರಧರ್ಮೀಯರು ಮಾಡುತ್ತಿರುವ ಅಪಮಾನಗಳನ್ನು ಸಹಿಸುತ್ತಾ ಬಂದಿದ್ದೀರಿ. ನಿಮ್ಮ ಧರ್ಮವೇ ಶಾಶ್ವತವಾದ ಬಳಿಕ ಯಾವನೂ ನಿಮಗೆ ಊಟಕ್ಕೆ ಕರಿಯುವದಿಲ್ಲ. ಮತ್ತು ದಾನಧರ್ಮ ಕೊಡುವದಿಲ್ಲೆಂದು" ಅಡಿದ್ದಾರೆ. ಸುರತದ ಬ್ರಾಹ್ಮಣರಂತೆ ಮಿಕ್ಕ ಸ್ಥಳಗಳ ಬ್ರಾಹ್ಮಣರೂ ವಿಚಾರ ಮಾಡುವಂಥ ಪ್ರಶ್ನವೇ ಸರಿ.

ದಿವಾನರಿಗೂ ಬೇರೆ ದೊಡ್ಡ ಕಾಮದಾರರಿಗೂ ಬರತರ್ಫ ಮತ್ತು ದಸ್ತಗೀರಿ.

ಉತ್ತರ ಹಿಂದುಸ್ಥಾನದಲ್ಲಿರುವ ಬುಂದೀ ಸಂಸ್ಥಾನದ ದಿವಾನರನ್ನೂ ಬೇರೆ ದೊಡ್ಡ ದೊಡ್ಡ ಕಾಮದಾರರನ್ನೂ ಮೊದಲು ಬರತರ್ಫ ಮಾಡಿ, ಆ ನಂತರ ವಾರಂಟು ತೆಗೆದು ಅವರನ್ನ ದಸ್ತಗೀರ ಮಾಡಿದ್ದಾರೆ. ವಾರಂಟನ್ನು ಸಂಸ್ಥಾನಿಕರೂ, ಪೊಲಿಟಿಕಲ ಏಜಂಟರೂ ಸೇರಿ ತೆಗೆದಿದ್ದಾರೆ. ಪ್ರಜೆಗಳನ್ನು ಹಿಂಸೆಪಡಿಸಿ, ಲಂಚ ತಕ್ಕೊಂಡರೆಂದು ಇವರ ಮೇಲೆ ಆರೋಪ ಹೊರಿಸಿದ್ದಾರೆ. ಶ್ರೀ. ಭಟ್ಟಾಚಾರ್ಯರೆಂಬವರು ಹೊಸ ದಿವಾನರಾಗಿದ್ದಾರೆ.

ಇಂಗ್ಲಿಷ ನಿಶಾನೆಯ ವಿರುದ್ಧ ಎದ್ದ ಉಲ್ಬಣ.

—೦—

ಟ್ರಿಲ್ಲಯುಮಹಾಸಭೆಯ ರಾಷ್ಟ್ರೀಯರು ಇಂಗ್ಲಿಷರ ಯುನಿಯನ್ನ ಜಾಕ ನಿಶಾನೆಯನ್ನು ಹರಿದು ಚಿಂದಿ ಮಾಡಿದ ಸಂಗತಿಯನ್ನು ಹಿಂದಿನ ಲೇಖದಲ್ಲಿ ಬರೆದಿರುತ್ತೇವೆ. ಇದು ಬರೇ ನಿಶಾನೆಯ ಅಪಮಾನವಲ್ಲ; ಇಂಗ್ಲಿಷರ ದೊರೆತನವೇ ತಮಗೆ ಬೇಡೆಂಬ ಚಳವಳಿಯು. ಈ ಚಳವಳಿ ಅಥವಾ ಅಹಿಂಸೆಯ ಅಸಹಕಾರದ ಚಳವಳಿಯ ಪುರಸ್ಕರ್ತರು ಹರ್ಟಜಾಗ ಸಾಹೇಬರಾಗಿದ್ದಾರೆ. ಇವರು ಬಹುಮತದ ಬಲದಿಂದಲೇ ಇಂಗ್ರೇಜಿ ನಿಶಾನೆಯ ಕೂಡ ಇಂಗ್ಲಿಷ ಪ್ರಭುತ್ವಕ್ಕೆ ಎದ್ದಲಗಾಟ ಕೊಡಬೇಕೆಂದಿದ್ದಾರೆ. ನಮಗೆ ನಿಮ್ಮ ತಳಿಕೆ ಬೇಡ. ನಾವು ಪೂರ್ಣ ಸ್ವಾತಂತ್ರ್ಯದಿಂದ ರಾಜ್ಯ ಮಾಳಿಕೊಳ್ಳುತ್ತೇವೆಂದು ಸ್ವಯಂ ನಿರ್ಣಯ ತತ್ವ ಪ್ರಕಾರ ಹೇಳಿದರೆ ಇಂಗ್ಲಿಷ ಜನರು ಅಡ್ಡ ಬರುವ ಕಾರಣವೇ ಇರುವದಿಲ್ಲೆಂದು ಹರ್ಟಜಾಗಸಾಹೇಬರ ಮತವು.

ಜನರಲ ಸ್ಮಟಸಾಹೇಬರು ಈ ಮತವನ್ನು ವಿರೋಧಿಸತಕ್ಕವರೂ ಸಾಮ್ರಾಜ್ಯ ಮತವಾದಿಗಳೂ ಆಗಿದ್ದಾರೆ. ಆಸ್ಟ್ರೇಲಿಯಾ, ಕಾನಡಾ, ರೋಡೆಶಿಯಾ ಮುಂತಾದ ದೇಶಗಳು ವಸಾಹತಿನ ಸ್ವರಾಜ್ಯವನ್ನೇ ಧ್ಯೇಯವಾಗಿಟ್ಟುಕೊಂಡಿವೆ. ಇಂಗ್ಲಿಷ ಸಾಮ್ರಾಜ್ಯದ ಸಂಬಂಧ ಕಳಕೊಳ್ಳಬಾರದೆಂದು ಅನ್ನುತ್ತವೆ. ದಕ್ಷಿಣ ಆಫ್ರಿಕೆಯು ಮಾತ್ರ ಅಕುಂಚಿತ ಭ್ರಾಂತಿಯಿಂದ ಮತ್ತು ಜನಾಂಗದ ದುರಭಿಮಾನದಿಂದ ಸ್ವತಂತ್ರವಾಗಬೇಕೆನ್ನುವದು ದೇಶವನ್ನು ಹಳಕು ಮುರುಳ ಮಾಡುವಂತಾಗಿರುತ್ತದೆಂದು ಜನರಲ ಸಾಹೇಬರು ಅಂದು, ಹರ್ಟಜಾಗಸಾಹೇಬರ ಕೂಡ ಕುಸ್ತೀ ಹಿಡಿದಿದ್ದಾರೆ. ಕುಸ್ತಿಯ ಸೋಲು ಗೆಲವು ಅಲ್ಲ ಬೇಗನೆ ಕೂಡತಕ್ಕ ಪಾರ್ಲಮೆಂಟದಲ್ಲಿ ತಿಳಿಯುವದು.

ಒಂದು ನೂರು ಮುಸಲಮಾನರು ಹಿಂದೂ ಆದರು.

ಕಾಶಿಯ ಹತ್ತರ ನಿಕಲಾಪೂರವೆಂಬ ಹೆಸರಿನದೊಂದು ಗ್ರಾಮವುಂಟು. ಸ್ವಾಮಿ ಚಿದಾನಂದರೆಂಬ ಸನ್ಯಾಸಿಯವರು ಅಲ್ಲಿಗೆ ಹೋಗಿ ಮುಸಲಮಾನರ ಇಪ್ಪತ್ತು ಕುಟುಂಬಗಳಿಗೆ ಹಿಂದೂ ಧರ್ಮದೀಕ್ಷೆ ಕೊಟ್ಟರು. ಆ ಜನರ ಸಂಖ್ಯೆಯು ಒಂದು ನೂರು ಆಗಿರುತ್ತದೆ. ಇದೇ ಪ್ರಕಾರ ಉತ್ತರ ದೇಶದಲ್ಲಿ ಮುಸಲಮಾನರು ಹಿಂದೂ ಧರ್ಮದೀಕ್ಷೆ ತಕ್ಕೊಂಡ ಸುದ್ದಿಯು ಆಗಾಗ್ಗೆ ಬರುತ್ತಾ ಇದೆ.

ಶಾಲೆಗಳಲ್ಲಿ ಶಾರೀರಿಕ ಶಿಕ್ಷಣ ಕೊಡುವ ವಿಚಾರಣಾ ಕಮೀಟಿಯು.

—(೦)—

ಪ್ರಾಥಮಿಕ ಮತ್ತು ಇಂಗ್ಲಿಷ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಒತ್ತಾಯದಿಂದ ಶಾರೀರಕ ಶಿಕ್ಷಣ ಕೊಡುವ ವಿಷಯದ ಯೋಜನೆಯ ವಿಚಾರ ಮಾಡುವದಕ್ಕಾಗಿ ವಿದ್ಯಾಖಾತೆಯ ಮಂತ್ರಿಗಳಾದ ಮಿ. ದೇಸಾಯಿಯವರು ಒಂದು ಕಮೀಟಿ ನೇಮಿಸಿದ್ದಾರೆ. ಕೌನ್ಸಿಲ ಮೆಂಬರರಾದ ಮಿ. ಮುನಸಿಯವರು ಅಧ್ಯಕ್ಷರಾಗುವರು. ಕಮಿಟಿಯಲ್ಲಿ ಯುರೋಪಿಯನ್ನ, ಹಿಂದೂ ಮುಸಲಮಾನರು ಮೆಂಬರರಾಗಿದ್ದಾರೆ. ಕುಮಾರಿ ಜೋಟುಮಾಲಾ ಎಂಬೋವರೂ ಮೆಂಬರಳಾಗಿರುವಳು. ಇವರಲ್ಲಿ ಒಬ್ಬರೂ ಕನ್ನಡಿಗರಾಗಿರುವದಿಲ್ಲೆಂಬದೇ ಆಶ್ಚರ್ಯ. ಕಮೀಟಿಯು ೧ ನೆಯ ನವ್ಹಂಬರದಿಂದ ಕೆಲಸ ಪ್ರಾರಂಭ ಮಾಡಿ, ೧೯೨೮ ನೆಯ ಇಸವಿಯ ಜನವರಿ ತಿಂಗಳ ನೆಯ ಜೂನ ಅಖೇರಕ್ಕೆ ತನ್ನ ರಿಪೋರ್ಟು ಕಳಿಸತಕ್ಕದ್ದು.

ಆಟದ ಬೈಲಸ್ಥಳ, ತಾಲೀಮಖಾನೆ, ಗರಡೀಮನಿ, ದೇಶೀವ್ಯಾಯಾಮ, ಅಮಾ ಮನುಷ್ಯನ ವರಿಗೆ ಯೋಗ್ಯವಾದ ವ್ಯಾಯಾಮ, ವ್ಯಾಯಾಮ ಶಾಲೆಗಳಿಗೆ ಗ್ರ್ಯಾಂಟು ಕೊಡುವದು ಇವೇ ಮುಂತಾದ ವಿಷಯಗಳನ್ನು ಕಮೀಟಿಯು ವಿಚಾರ ಮಾಡಿ, ರಿಪೋರ್ಟು ಕಳಿಸತಕ್ಕದ್ದು.

ಭಯಂಕರ ಅಗ್ನಿ ಪ್ರಳಯ.

—(೦)—

ಸಾವಿರ ಮನೆಗಳು ಸುಟ್ಟವು.

ಪೇಶಾವರದಲ್ಲಿ ಕರೀಮಪೂರವೆಂಬ ಭಾಗದ ಮೇಲೆ ಅಗ್ನಿ ನಾರಾಯಣನ ಕೋಪವಾಯಿತು. ಒಬ್ಬ ಹಿಂದೂ ಗೃಹಸ್ಥನ ಮನೆಯಲ್ಲಿ ಮೊದಲು ಉರಿಯು ಎದ್ದಿತು, ಇದು ತನ್ನ ಸಾವಿರ ನಾಲಿಗೆಗಳಿಂದ ನಾಲ್ಕು ದಿಕ್ಕುಗಳನ್ನೂ ವ್ಯಾಪಿಸಿತು. ಬೆಂಕಿಯು ಪ್ರಾತಃಕಾಲದ ಹತ್ತು ಗಂಟೆಗೆ ಹತ್ತಿತು. ಮರು ದಿವಸ ಬೆಳಗಾಗುವ ತನಕ ಆಟೋಕ್ಕೆ ಬರಲಿಲ್ಲ. ಹಿಂದೂ ಮುಸಲ್ಮಾನರ ಮನೆಗಳು ಸುಟ್ಟು ಇಬ್ಬರೂ ಸಮದುಃಖಿಗಳಾದರು. ಪೋಲೀಸರೂ ದಂಡಿನವರೂ ಸೇರಿ ಅನೇಕ ಮನೆಗಳನ್ನು ಕೆಡವಿ ಬೆಂಕಿಯು ಹಬ್ಬದಂತೆ ಮಾಡಿದರು. ಆದರೂ ಸಾವಿರ ಮನೆಗಳು ಸುಟ್ಟು ಬೂದಿಯಾದವು. ಸೇವಾಸಮಿತಿಯವರು ಉರಿಯನ್ನು ನಂದಿಸಲು ಬಹುವಾಗಿ ಸಹಾಯ ಮಾಡಿದರು. ದುರ್ದೈವದಿಂದ ಇವರಲ್ಲಿ ಒಬ್ಬನು ಉರಿಯಲ್ಲಿ ಬಿದ್ದು ಸತ್ತನು. ಇನ್ನೊಬ್ಬನು ಮನೇಬಿದ್ದು ಸತ್ತನು. ಕೋಟ್ಯಾವಧಿ ರೂಪಾಯಿ ಹಾನಿಯಾಗಿದೆ.

ಲಾಹೋರಿನಲ್ಲಿ ಪುನಃ ಮುಸಲಮಾನರ ಹಾವಳಿ.

—೦—

ಸ್ವಾಮಿ ಸತ್ಯಾನಂದರನ್ನು ಕೊಲ್ಲುವ ಪ್ರಯತ್ನ.

—೦—

ಲಾಹೋರಿನಲ್ಲಿ ರಂಗಿಲ ರಸೂಲದ ಪ್ರಕಾಶಕರಾದ ರಾಜಪಾಲರನ್ನು ಕೊಲ್ಲುವ ಪ್ರಯತ್ನ ಮಾಡಿದ ಒಗ್ಗೆ ಮದಾಂಧಕ್ಕನಿಗಾದ ಭಯಂಕರ ಶಿಕ್ಷೆಯು ಇಲೋ ಮರೆ ಹೋಗಿವು ಅಲ್ಲಿಯ ಮುಸಲಮಾನ ಕಾಟಕರ ಮೇಲೆ ಎಷ್ಟೂ ಪರಿಣಾಮ ತೋರುಗದಿಲ್ಲ. ಹೋದ ರವಿವಾರದ ದಿವಸ ಇದೇ ರಾಜಪಾಲರ ಅಂಗಡಿಯಲ್ಲಿ ಕೂತಿದ್ದ ಸ್ವಾಮಿ ಸತ್ಯಾನಂದರನ್ನು ಕೊಲ್ಲಬೇಕೆಂದು ಒಬ್ಬ ಘಾಜಿಯು ಚೂರಿಯನ್ನು ಒಡಕೊಂಡವನೇ ಅಂಗಡಿಯಲ್ಲಿ ಹೊಕ್ಕು, ಅವರನ್ನು ಮನಬಂದಂತೆ ಚೂರಿಯಿಂದ ಘಾಯಪಡಿಸತೊಡಗಿದನು. ಹತ್ತರವೇ ಇದ್ದ ಇಬ್ಬರು ಗೃಹಸ್ಥರು ತಮ್ಮ ಜೀವದ ಮೋಹವನ್ನು ಹಂಗುದೊರೆದು ಅವರನ್ನು ಉಳಿಸಿಕೊಂಡರು. ಸ್ವಾಮಿಗಳ ಘಾಯಗಳಿಂದ ರಕ್ತದ ಪ್ರವಾಹ ಹರಿಯುತ್ತ ಹಿಡಿಸಿಕೊಂಡ ಗೃಹಸ್ಥರ ಕೈಗಳೂ ರಕ್ತಮಯವಾಗಿವೆ. ತನ್ನ ಉದ್ದೇಶ ಕೊನೆಗಾಣದ್ದನ್ನು ಕಂಡು ಮುಸಲಮಾನನು ಇವರನ್ನು ಕೊಸರಿಕೊಂಡು ಕಾಲಿಗೆ ಬುದ್ಧಿ ಹೇಳಬೇಕೆಂದು ಯತ್ನಿಸಿದನು. ಆದರೆ ಕೃತಕರ್ಮದ ಫಲವನ್ನು ಉಣ್ಣುವದಕ್ಕಾಗಿ ಪೋಲೀಸರ ಕೈ ಸೇರಿದನು. ಸ್ವಾಮಿ ಸತ್ಯಾನಂದರು ಸ್ವಾಮಿ ಶ್ರದ್ಧಾನಂದರಂಥ ಪ್ರಸಿದ್ಧ ಸನ್ಯಾಸಿಯವರಾಗಿದ್ದಾರೆ. ಕೊಲೆಪಾತಕಿಯ ಘೋರ ಕೃತ್ಯದ ಸುದ್ದಿಯಿಂದ ಹಿಂದೂ ಜನರಲ್ಲಿ ಹಾಹಾಕಾರವಾಗಿದ್ದು, ಇಂಥ ಕೊಲೆಗಳ ಪ್ರತಿಯುಕ್ತಕ್ಕೆ ಹಿಂಬಾಲ್ವಂತೆಂದು ಹಿಂದೂ ಜನರು ಅನ್ನುತ್ತಿರುವದು ಗಟ್ಟಿಮುಟ್ಟಿಯಾಗುತ್ತಿರುವದು.

ಸ್ಟೇಶನ ಮಾಸ್ತರನನ್ನು ಗುಂಡು ಹಾಕಿ ಕೊಂದರು.

—೦—

ಆಗ್ರಾದ ಹತ್ತರದ ಮಥುರಾ ಎಂಬಲ್ಲಿಯ ಸ್ಟೇಶನ ಮಾಸ್ತರ ಮೆಹ್ಮುದ್ ಅಲಿ ಮುಲ್ಲಾ ಸಾಹೇಬರು ಮಲಗಿದಾಗ ಅವರನ್ನು ಯಾರೋ ಗುಂಡು ಹಾಕಿ ಕೊಂದಿದ್ದಾರೆ.

ಮುಂಬಯಿಯಲ್ಲಿ ಪೋಲೀಸರು ಬಾಡಿಗೆಗಳ ಚಾಳುಗಳನ್ನು ಕಟ್ಟಿಸಿದ್ದಾರೆ ಇಲ್ಲಿ ಬಹುತೇಕವಾಗಿ ಬಡವರೇ ವಾಸವಾಗುವರು ಇವರು ಬಾಡಿಗೆ ಕೊಡದೆ ಸ್ಟ್ರೈಕು ಮಾಡಿದ್ದಾರೆ [illegible]

ಕ್ಯವಾಗಿದೆ. ದಸರೆಯ ಮೆರವಣಿಗೆಯ ದಿವಸ ಮುಸಲಮಾನರು ತಮ್ಮ ಮಸೀದೆಗಳಲ್ಲಿ ದೀಪಾರಾಧನೆ ಮಾಡಿ, ಹಿಂದೂ ಜನರನ್ನು ಸತ್ಕರಿಸಿದರು.

ಧಾರವಾಡ–

ಸೋಮವಾರದಿಂದ ಈ ಊರಲ್ಲಿ ಕೂಡುವ ಇಂಗ್ರೇಜಿ ಶಿಕ್ಷಕರ ಸಮ್ಮೇಲನದಲ್ಲಿ ಪ್ರೊಫೇಸರ ಕಾನಿಟಕರ, ಆಜರೇಕರ, ನಾಯಿಕ, ಹ್ಯಾಂಡನ ಮೊದಲಾದವರು ಬೇರೆ ಬೇರೆವಿಷಯಗಳ ಚರ್ಚೆಯ ಚೇರಮನ್ನರಾಗುವರು.

ಕಾರವಾರದಲ್ಲಿ ಆಕ್ಟಿಂಗ ಕಲೆಕ್ಟರರಾಗಿರುವ ಮಿ. ಸುಂಡೇಕರರು ಇಲ್ಲಿಗೆ ಮಿ. ಮಾಸ್ತರಸಾಹೇಬರು ಬರುವ ತನಕ ಕಲೆಕ್ಟರರಾಗಿ ಬರುವರು.

ಹುಬ್ಬಳ್ಳಿಯಲ್ಲಿ ಭಯಂಕರ ಕೊಲೆ–

ಹುಬ್ಬಳ್ಳಿಯಲ್ಲಿ ಜವಳಿನ ಪತ್ತಾರ ಒಬ್ಬ ಶೇರಿಯ ವ್ಯಾಪಾರಿಯು ಹೋಗುತ್ತಿದ್ದಾಗ, ಆತನನ್ನು ಭಯಂಕರ ರೀತಿಯಿಂದ ಕೊಂದು, ಆತನ ಟೊಂಕದಲ್ಲಿದ್ದ ಹಮ್ಮೀಣಿಯೊಳಗಿನ ರೂಪಾಯಿಗಳನ್ನೂ ಬಂಗಾರದ ಒಡವೆಯನ್ನೂ ಸೈದಿದ್ದಾರೆ. ಕೊಲೆಗಾರರ ತಪಾಸು ನಡದಿದೆ.

ಪತ್ರವ್ಯವಹಾರ.

ಶೇತಕಿ ಟ್ರೇಂನಿಂಗ ಕ್ಲಾಸ ಸಭೆ ಬೆಳಗಾಂವ.

ಇದೇ ತಿಂಗಳಲ್ಲಾಗಲಿ ಮುಂದಿನ ತಿಂಗಳ ಆರಂಭದಲ್ಲಾಗಲಿ ಬೆಳಗಾಂವಿಯಲ್ಲಿ ಶೇತಕಿಟ್ರೇಂಡ ಶಿಕ್ಷಕರ ಸಭೆಯನ್ನು ನೆರೆಯಿಸಬೇಕೆಂದು ಬಹು ಜನರ ವಿಚಾರವಿದೆ.

ಶೇತಕಿ ಕ್ಲಾಸದ ಶಿಕ್ಷಣದ ಕೆಲಸದಲ್ಲಿ ಬರುವ ತೊಂದರೆ ಮುಂತಾದ ಮಹತ್ವದವಿಷಯಗಳ ಚರ್ಚೆಯಾಗತಕ್ಕದ್ದದೆ. ಆದ್ದರಿಂದ ಯಾವ ತಾರೀಖಿಗೆ ಸಭೆ ನುಡಿಸಬೇಕೆಂಬದನ್ನು ಯಾವತ್ತು ಶೇತಕಿ ಕ್ಲಾಸ ಮಾಸ್ತರರು ತಿಳಿಸಬೇಕೆಂದು ಅಗದ ವಿನಂತಿಯದೆ.

ಗು. ಶಿ. ಕೋರಿಮಠ.
ಶೇತಕಿ ಟ್ರೇಂಡ ಶಿಕ್ಷಕಸಂಘದ ಸೆಕ್ರೇಟರಿ
ಸಂಪಗಾಂವ

ನೋಟೀಸು,

ನಿಂಗಪ್ಪಾ ಬಿನ್ನ ಶೀವಪ್ಪಾ ಮಾದನೂರ ಸಾಕಿನ್ ಗೊಬ್ಬನೂರ ತಾ|| ಶಿರಹಟ್ಟಿ ಇವರಿಗೆ–

ಕೆಳಗೆ ಸಹಿ ಮಾಡುವವನು ಈ ನೋಟೀಸಿನ ಮುಖಾಂತರ ತಿಳಿಸುವದೇನಂದರೆ– ನಾನು ನಿನ್ನ ಖಾಸ ಮಗನು ಇದ್ದು ನಾನೇ ಮನೆತನದ ರಾವತ್ತು ವಹಿವಾಟ ಮಾಡಿಕೊಳ್ಳುತ್ತಾ ಇರತೇನೆ ನಾವು ನಾಲ್ಕು ಮಂದಿ ಅಣ್ಣತಮ್ಮಂದಿರು ಇದ್ದು ನಮಗೆ ನಿನ್ನ ಸಮ್ಮಂಧಿ ಪಿತ್ರಾರ್ಜಿತ ಆಸ್ತಿ ಏನೂ ಇಲ್ಲಾ. ಖಲಿಕಡಿಗೆ ನಾವು ಅಣ್ಣತಮ್ಮಂದಿರು ದುಡಿದು ಏನಿಕೆ ಜಮೀನು ವ ಮನಿ ಖರೀದಿ ಮಾಡಿರುತ್ತೇವೆ. ನೀನು ಹಿರಿಯನೆಂಬ ಮುಲಾಜಿನಿಂದಾ ಅವುಗಳನ್ನು ನಿನ್ನ ಹೆಸರಿನ ಖರೀದಿ ಪತ್ರವನ್ನು ಮಾಡಿಸಿರುತ್ತವೆ ಆದರೆ ಈಗ ನೀನು ತೀರ ಮುದುಕನಾಗಿ ಎರಡನೇದವರ ಕೇಳಿಕೆ ಮಾತಿನಿಂದಾ ನಾವು ಗಳಿಸಿದ ಆಸ್ತಿಯನ್ನು ಖರೀದಿ ಪತ್ರೆ ವಿಲೇವಾಟ ಮಾಡುತೀರಿ ಅಂತಾ ತಿಳಿದು ಬರುತ್ತದೆ. ಕಾರಣ ಈ ನೋಟೀಸು ಕೊಡೋದು ಭಾಗಬಿತ್ತು. ಇದು ನೀನು ಗಳಿಸಿದ ಆಸ್ತಿ ಇಲ್ಲದ್ದರಿಂದ ನಿನಗೆ ಇದರ ವಿಲೇವಾಟ ಯಾವ ರೀತಿಯಿಂದಲೂ ಮಾಡಲಿಕ್ಕೆ ಬರುವದಿಲ್ಲ. ಖರ ಮಾಡಿದರೆ ಇದಕ್ಕೆ ನಾವು ಜವಾಬದಾರರು ಆಗಲ್ಲಾ. ವಿನಾಕಾರಣ ತೊಂದರೆಗೆ ಒಳಗಾಗಬಾರದು ಕಾರಣ ಯಾವ ರೀತಿಯಿಂದಲೂ ವಿಲೇವಾಟ ಮಾಡಬಾರದು

ಇದರಲ್ಲಿ ಯಾವತ್ತು ಜನರಿಗೆ ತಿಳಿಸುವದೇನಂದರೆ ನಮ್ಮ ತಂದೆಯು ತೀರ ಮುಪ್ಪಿನವನಾಗಿ ಹುಚ್ಚು ಮುಬ್ಬು ಕೂಡಿದಂತಾಗಿ ಬೇರೆ ದವರ ಕೇಳಿಕೆ ಮಾತಿನಿಂದಾ ಸ್ವತಃ ನಾವು ಗಳಿಸಿದ್ದು ಆಸ್ತಿ ಅವರ ಹೆಸರಿನ ಖರೀದಿ ಇದ್ದದ್ದು ಯಾವದೇ ತರದಿಂದ ವಿಲೇವಾಟ ಮಾಡಲಿಕ್ಕೆ ಸಮ್ಮತಿಸಿದರೂ ಯಾರೂ ಯಾವ ರೀತಿಯಿಂದಲೂ ತೆಗೆದುಕೊಳ್ಳಬಾರದು ಖರ ತೆಗೆದುಕೊಂಡರೆ ವಿನಾಕಾರಣ ತೊಂದರೆಗೆ ಒಳಗಾಗಬೇಕಾದೀತು ಅಂತಾ ಕೊಟ್ಟ ನೋಟೀಸು ತಿಳಿಯುವದು ತಾ. ೧೨-೧೦-೨೭

ಗುರಪ್ಪಾ ನಿಂಗಪ್ಪಾ ಮಾದನೂರ

ಒಕ್ಕಲಿಗರೂ ಒಕ್ಕಲತನವೂ.

ನಮ್ಮ ಮಾಸ ಪತ್ರಿಕೆಯು ಈಗ ಸುಮಾರು ೧೬ ವರ್ಷಗಳಿಂದ ದೇಶಾಭಿಮಾನಿಗಳ ಸೇವೆಯನ್ನು ಮಾಡಿ ಯಾವತ್ತು ಜನರ ಆದರಕ್ಕೆ ಪಾತ್ರವಾಗಿರುವದು. ಇತ್ತೀಚೆಗೆ ಒಕ್ಕಲತನದ ಬೆಳೆಗಳ ಬಗ್ಗೆ ಉದಾತ್ತ ವಿಚಾರಗಳ ಲೇಖಗಳೂ ಅಂದವಾದ ಮುದ್ರಣವೂ ಇರುವದರಿಂದ ವಾಚಕರ ಮನಸ್ಸನ್ನು ತನ್ನ ಕಡೆಗೆ ಎಳೆಯದೆ ಎಂದೂ ಬಿಡದು. ಕೃಷಿಕರ್ಮವೇ ಶ್ರೇಷ್ಠವಾದದ್ದೆಂದು ಸರ್ವ ಸಮ್ಮತವಿರುವದರಿಂದ ಈ ವಿಷಯಕ್ಕೆ ಅನಾದರವನ್ನು ತೋರಿಸದೆ, ಇಂಥ ಮಾಸಪತ್ರಿಕೆಗಳನ್ನು ಆದರಿಸಬೇಕೆಂದು ನಮ್ಮ ಆಗ್ರಹಪೂರ್ವಕ ವಿನಂತಿ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧-೨-೦

ಸಂಪಾದಕ
ಒಕ್ಕಲಿಗರೂ ಒಕ್ಕಲತನವೂ,
ಧಾರವಾಡ

ನೋಟೀಸಿನ ದರಗಳು.

—೦—

ತಿಂಗಳ ಕಾಲಮಿನ ಹತ್ತು ಪಳಿಗಳಿಗೆ ಒಂದ ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಗೋ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಆಣೆ— ಇಂಗಿಷ ..ಂದ ಆವಕರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರುಹತ್ತೆ ದೊಡ್ಡ ಕಾಲಮಿನ ಒಳಗಳಿಗೆ ಇಷ್ಟು ಚಾರ್ಜ ಕೊಡುವ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೫ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೪	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಆಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿಯ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಗುರುವಾರ ತಾರೀಖು ೧೩ ನೇ ಅಕ್ಟೋಬರ ೧೯೩೨ | ಸಂಚಿಕೆ ೨೧೯

ಹಂಗಾಮು ಮುಗಿಯ ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಶೇಂಗಾ ಯಂತ್ರಗಳು



[illegible] ಶೇಂಗಾ ಯಂತ್ರಗಳು [illegible] ಯಂತ್ರಗಳು ಮೇಲಾದವು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಪಟ್ಟಿಸ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ವಿಶಾಲ ಮಂಡಲದಿಂದ ಮಂಜೂರಾದ

ಕನ್ನಡ ನಿಬಂಧ ರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ [illegible] ಕನ್ನಡ [illegible] ಪರೀಕ್ಷೆಯ [illegible] ಉಪಯುಕ್ತವದೆ.

ಪ್ರತಿಗಳು ದೊರೆಯುವ ಸ್ಥಳ:— ೧ ರಾ. ರಾ. ಬಿ. ಜಿ. ದಿವೇಕರ, ಮಾಳಮಡ್ಡಿ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಪ್ಪಾ [illegible] ಬುಕ್ ಡಿಪೋ ಹುಬ್ಬಳ್ಳಿ

WANTED.

Wanted Candidates for Telegraph and Station Master's Courses Railway Fare GRANTED Boarding Seat FREE. Prospectus on 2 annas stamp,– Presidency Telegraph College, Royapettah Madras.

ದಿ ಧಾರವಾಡ ಅರ್ಬನ ಕೋ.

ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯು ಅಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ವಿ. [illegible], ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು [illegible] ತಿಂಗಳ [illegible] ಮಾ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ [illegible] ತಿಂಗಳಿಗೆ [illegible]

[illegible]

[illegible]

ವಿಜಯ.

ಧಾರವಾಡ ತಾ- ೧೩-೧೦-೨೭ ನೇ ಇಸ್ವಿ

ಭೂಮಿಯನ್ನು ತುಂಡು ತುಂಡು ಮಾಡಬಾರದೆಂಬ ಕಾಯದೆಯು.

ಈ ಮೊದಲು ವಿಜಯದಲ್ಲಿ ಬರೆದಂತೆ ರೈತರು ಕೆಲಸಕ್ಕೆ ಬಾರದಷ್ಟು ರೀತಿಯಾಗಿ ಭೂಮಿಯನ್ನು ತುಂಡು ಮಾಡಿ ಹಂಚಿಕೊಳ್ಳಬಾರದೆಂಬ ಕಾಯದೆಯ ಮಸೂದೆಯನ್ನು ಸರ ಚುನಿಲಾಲ ಮೇಥಾಸಾಹೇಬರು ಕೌನ್ಸಿಲದಲ್ಲಿ ಓದಿದರು. ಇದಕ್ಕೆ ಲೋಕನಿಯುಕ್ತ ಮೆಂಬರರಿಂದ ಬಹುವಾಗಿ ವಿರೋಧ ಬರುವದೆಂದು ಮೊದಲು ತೋರಿತು. ಆದರೆ ಹಾಗೇನೂ ಸಂಭವಿಸಲಿಲ್ಲ. ಪೂರ್ವಖಾನದೇಶದ ಮೆಂಬರರಾದ ರಾವಸಾಹೇಬ ಪಾಟೀಲರು ಫೆಬ್ರವರಿ ತಿಂಗಳಲ್ಲಿ ಕೂಡುವ ಕೌನ್ಸಿಲದ ತನಕ ಈ ವಿಚಾರವನ್ನು ಮುಂದೆ ಹಾಕಬೇಕೆಂದು ಸೂಚಿಸಿದರು. ಆದರೆ ಪ್ರಚಂಡ ಬಹುಮತದಿಂದ ಇವರ ಸೂಚನೆಯು ಬಿದ್ದಾಯಿತು. ರಾವಸಾಹೇಬ ಪಾಟೀಲರಿಗೆ ಪ್ರತಿಕೂಲವಾಗಿ ಹೋಟು ಕೊಟ್ಟವರಲ್ಲಿ ಮುಸಲಮಾನರೂ, ಬ್ರಾಹ್ಮಣೇತರರೂ, ಚುನಾಯಿಸಲ್ಪಟ್ಟಂಥ ಮವಾಳರೂ, ರಾಷ್ಟ್ರೀಯರೂ ಸೇರುತ್ತಾರೆ. ತಮ್ಮ ಸೂಚನೆಯು ನಾಮಂಜೂರಾದ್ದನ್ನು ಕಂಡು ರಾವಸಾಹೇಬ ಪಾಟೀಲರು ಒಕ್ಕಲಿಗರ ಪರಿಯಿಂದ ಮಹತ್ವದ ಭಾಷಣ ಮಾಡಿದರು. ಅದೂ ವ್ಯರ್ಥಶ್ರಮವಾಯಿತು. ಇದರಂತೆ ಅಹಮದಾಬಾದಿನ ಶ್ರೀ ಸ್ವಾಮಿ ನಾರಾಯಣರೂ ಬಿಲ್ಲನ್ನು ವಿರೋಧಿಸಿದರು. ಮಾಜಿ ಮಂತ್ರಿ ದಿವಾನ ಬಹಾದ್ದರ ... ಅಪ್ಪಗೋಡೆಯು ಮೇಲೆ ದೀಪವಿಟ್ಟಂತೆ ನಡಿಸಿದರು. ... ನಿ ಪ್ಪ ಸ್ ಟ ಯ ಮೆಂ ಬ ರರಾದ ವಿ. ಮುಕಿ, ಹೆಚ್ಚಿನ ಹಕ್ಕು ಕೊಡಬಾರದೆಂದು ಸುರತದ ರೈತರಿಗೆ ಉತ್ತೇಜನ ಕೊಟ್ಟಿರುವ ರಾವಬಹಾದ್ದೂರ ಭೀಮಭಾಯಿ ನಾಯಕ, ಕೇರವಾಡದ ಧಾಕೂರ, ಸೊಲ್ಲಾಪೂರದ ಖಾನಸಾಹೇಬ ಅಬ್ದುಲ ಲತೀಫಖಾನರು ಬಿಲ್ಲಿಗೆ ಅನುಮೋದನ ಕೊಟ್ಟರು. ಈ ಕೃತ್ಯದಿಂದ ಮೆಂಬರ ಕೌನ್ಸಿಲನಲ್ಲಿ ಈ ಬಿಲ್ಲು ಪಾಸಾಗಬೇಕೆಂದೇ ಇರುವದೆಂದು ಧ್ವನಿತವಾಗುತ್ತದೆ.

ಸರಕಾರದವರು ಅನೇಕ ವರ್ಷಗಳಿಂದ ಈ ವಿಷಯವಾಗಿ ವಿಚಾರ ಮಾಡುತ್ತಾ ಬಂದಿದ್ದಾರೆ. ಮುಂಬಯಿ ಇಲಾಖೆ ಮಾತ್ರವಲ್ಲ; ಮದ್ರಾಸ, ನಾಗಪೂರ ಪಂಜಾಬ ಇಲಾಖೆಗಳಲ್ಲಿಯೂ ಈ ಮುಂದಾಗಿ ಇಂಥ ಪ್ರಯತ್ನವಾಗಿದೆ. ಆದರೆ ಬಲವಂತಿಕೆ ಇರಲಿಲ್ಲ. ಒಕ್ಕಲಿಗರ ಇಚ್ಛೆಯನ್ನು ಅವಲಂಬಿಸಿ, ಭಾಗ ಮಾಡಿಕೊಡಬೇಕೆಂದರು. ರೈತರ ಮೇಲೇ ಜವಾಬದಾರಿಯನ್ನು ಹೇರಿದ್ದರಿಂದ, ಅದು ಯಶಸ್ವಿಯಾಗಲಿಲ್ಲ. ಆದುದರಿಂದ, ಕಾಯದೆಯನ್ನೇ ಮಾಡಬೇಕೆಂದು ಅವರ ಮತವಾಗಿದೆ. ಆ ಮತದ ಮೇರೆಗೆ ಮುಂಬಯಿ ಸರಕಾರದವರು ರೈತರ ಇಚ್ಛೆಯ ಮಾರ್ಗ ಪ್ರತೀಕ್ಷೆ ಮಾಡದೆ, ಒಮ್ಮೆಯಲೆ ಕಾಯದೆಯನ್ನೇ ಮಾಡಲೆತ್ನಿಸಿದ್ದಾರೆ

ಇಂದು ಕಾಯದೆಯನ್ನು ಪಾಸ ಮಾಡಿದರೂ, ಅದನ್ನು ನಿಂತ ಕಾಲಮೇಲೆ ಒಮ್ಮೆಯಲೆ ಅಮಲಿನಲ್ಲಿ ತರುವದಿಲ್ಲೆಂದು ಸರ ಚುನಿಲಾಲರು ಹೇಳುತ್ತಾರೆ. ಇಂದಿನ ಸಾವು ನಾಳೆಗಾದರೂ, ಅದು ತಪ್ಪಿದ್ದಲ್ಲೆಂಬ ಮಾತು ಸಹಜವಾಗುತ್ತದೆ. ಈ ಕಾಯದೆಯಿಂದ ವಾರಸದಾರರ ವಾರಸಾ ಹಕ್ಕಿಗೆ ಮತ್ತು ಹಿಸ್ಸೇಕ್ಕೆ ಬಾಧೆ ತರುವದಿಲ್ಲ. ಅಣ್ಣತಮ್ಮಂದಿರೆಲ್ಲರೂ ಸೇರಿ, ಭೂಮಿಯ ಹುಟ್ಟುವಳಿಯ ಉಪಭೋಗ ಮಾಡಲಿಕ್ಕೂ ಕಾಯದೆಯು ಅಡ್ಡ ಬರುವದಿಲ್ಲ. ಮುಖ್ಯವಾಗಿ ಭೂಮಿಯ ಚತುಃಸೀಮೆಯು ಒಂದೇ ಉಳಿಯತಕ್ಕದ್ದು. ಕೆಲವೊಂದು ಪ್ರಮಾಣದಿಂದ ಭೂಮಿಯು ಇಂತಿಷ್ಟೇ ಎಕರೆಯದಾಗಿರಬೇಕೆಂದು ಕಾಯದೆಯಿಂದ ನಿರ್ಬಂಧಪಡಿಸುವರು. ಅದರೊಳಗೆ ಮಾತ್ರ ಒಡೆದು ಹಿಸ್ಸೆ ಮಾಡತಕ್ಕದ್ದಲ್ಲ. ಮೆಂಬರರಲ್ಲಿ ಮತಭೇದವಾದರೆ ಸಿಲೆಕ್ಟ ಕಮಿಟಿಯಲ್ಲಿಯೂ, ಬಿಲ್ಲನ್ನು ಎರಡನೆಯ ಸಾರೆ ಓದುವಾಗಲೂ ಬೇಕಾದಷ್ಟು ಉಪಸೂಚನೆಗಳನ್ನು ತರಲು ಅವಕಾಶ ಕೊಟ್ಟಿರುತ್ತಾರೆ.

ಮಹಾಯುದ್ಧವು ಮರಳಿಸುವಂಥ ಭವಿಷ್ಯ.

ಬರುವ ವರ್ಷ ಮೇ ತಿಂಗಳ ಸುಮಾರಕ್ಕೆ ಮಹಾಯುದ್ಧದಂಥ ಯುದ್ಧವೇಳುವದು. ಅದು ಐದು ವರ್ಷಗಳ ತನಕ ಸತತವಾಗಿ ನಡೆಯುವದು. ಒಂದು ನಿಟ್ಟಿನಲ್ಲಿ ರಶಿಯಾ, ಚೀನ, ಮಧ್ಯ ಆಶಿಯಾದ ಮುಸಲಮಾನ ದೇಶಗಳೂ, ಮತ್ತೊಂದು ನಿಟ್ಟಿನಲ್ಲಿ ಇಂಗ್ಲಿಷರೂ ಜಪಾನರೂ ಮೊದಲಾಗಿ ಬೇರೆ ದೇಶಗಳೂ ನಿಲ್ಲುವವು. ಯುದ್ಧದ ಪರಿಣಾಮಗಳು ಹಿಂದುಸ್ಥಾನದ ವಾಯವ್ಯ ಸರಹದ್ದು ಮತ್ತು ಚೀನ ರಾಜ್ಯವಾಗುವದೆಂದು ಫಿಲ್ಪ ಜೋಯಿಸರು ಭವಿಷ್ಯ ಹೇಳುತ್ತಾರೆ.

ರೇಲ್ವೆ ಅಧಿಕಾರಿಗಳ ಅವ್ಯವಸ್ಥೆ.

—o—

ತನಗೆ ಕುಣಿಯಲಿಕ್ಕೆ ಬರದಿದ್ದರೆ ಅಂಗಳ ಡೊಂಕ !!

—o—

ಸಿಮಲಾದಲ್ಲಿ ಹಿಂದುಸ್ಥಾನದಲ್ಲಿರುವ ರೇಲ್ವೆಗಳ ಪ್ರತಿನಿಧಿಗಳ ಪರಿಷತ್ತು ಕೂಡಿತ್ತು. ಸದರ್ನ ಮರಾಠಾ ರೇಲ್ವೆಯ ಏಜಂಟರಾದ ಮಿ. ಬಿಗ್ಸಸಾಹೇಬರು ಅಧ್ಯಕ್ಷರಾಗಿದ್ದರು. ಸಾಹೇಬರು ರೇಲ್ವೆಯ ಪುರಾಣವನ್ನು ಉದ್ದವಾಗಿ ಹೇಳಿದರು. ರೇಲ್ವೆಗಳಲ್ಲಿ ಒಂದು ವರ್ಷದಲ್ಲಿ ೨೧ ಲಕ್ಷ ಜನರು ಟಿಕೇಟು ಕೊಡದೆ ಪ್ರಯಾಣ ಮಾಡಿದರು. ಇಷ್ಟು ಜನರು ಟಿಕೇಟು ಕೊಟ್ಟು ಪ್ರವಾಸ ಮಾಡಿದ್ದರೆ ಟಿಕೇಟಿನ ದರ ಕಡಿಮೆ ಮಾಡಬಹುದಾಗಿತ್ತು. ಪ್ರಯಾಣಿಕರಿಗಾಗಿ ಬೇರೆ ಸೌಕರ್ಯಗಳನ್ನು ಒದಗಿಸಬಹುದಾಗಿತ್ತು. ಪ್ರಯಾಣಿಕರ ಸಂಘದವರು ಇತ್ತ ಕಡೆಗೆ ಲಕ್ಷ್ಯಗೊಟ್ಟು, ಫುಕಟ ಪ್ರವಾಸದ ತಾಪ ತಪ್ಪಿಸಬೇಕೆಂದು ಸಾಹೇಬರು ಬುದ್ಧಿ ಮಾತಾಡಿದ್ದಾರೆ.

ರೇಲ್ವೆಯಲ್ಲಿ ಯಾವನೂ ರೊಕ್ಕ ಕೊಡದೆ ತಿರುಗಾಡಬಾರದೆಂದು ಸಾಕಷ್ಟು ಬಂದೋಬಸ್ತಗಳನ್ನು ಮಾಡಿದ್ದಾರೆ. ಟಿಕೇಟು ಕೊಡದೆ ಯಾವನನ್ನೂ ಪ್ಲಾಟಫಾರ್ಮಿನ ಮೇಲೆ ಬಿಡುವದಿಲ್ಲ. ಬಂಡಿಯಿಂದ ಇಳಿದವನಿಂದ ಟಿಕೇಟು ತೆಕ್ಕೊಳ್ಳದೆ ಯಾವನನ್ನೂ ಹೊರಗೆ ಬಿಡುವದಿಲ್ಲ. ಬಂಡಿಗಳಲ್ಲಿಯೇ ಟಿಕೇಟು ತಪಾಸು ಮಾಡುವದಕ್ಕಾಗಿ ಸ್ಪೇಶಲ ಜನರಿದ್ದಾರೆ. ದೊಡ್ಡ ದೊಡ್ಡ ಸ್ಟೇಶನಗಳಲ್ಲಿ ಪ್ರತಿಯೊಬ್ಬನ ಟಿಕೇಟು ತಪಾಸ ಮಾಡುವರು. ಕಂಪನಿಯು ಇಷ್ಟು ನಿರ್ಬಂಧನೆಗಳನ್ನು ಮಾಡಿದರೂ ಜನರು ಟಿಕೇಟು ಇಲ್ಲದೆ ಪ್ರವಾಸ ಮಾಡುತ್ತಾರೆಂಬದು ಆಶ್ಚರ್ಯಜನಕವಾಗುತ್ತದೆ. ಆ ಸಂಖ್ಯೆಯಾದರೂ ಚಿಕ್ಕದಿದ್ದಲ್ಲ. ೨೧ ಲಕ್ಷ!! ಇಷ್ಟು ಜನರು ಫುಕಟ ಪ್ರವಾಸ ಮಾಡುವದರ ದೋಷವು ಕಂಪನಿಯ ಮೇಲೇ ಬರುತ್ತದೆ. ತನ್ನ ಕಾರಭಾರದಲ್ಲಿಯೇ ಏನೆಯು ಹೋದರೂ ಕೇಳತಕ್ಕವರಿಲ್ಲೆನ್ನುವಷ್ಟು ದೋಷವಿರುತ್ತದೆಂದು ಕಂಪನಿಯು ತಿಳಿದುಕೊಳ್ಳತಕ್ಕದ್ದು. ತನಗೆ ಕುಣಿಯಲಿಕ್ಕೆ ಬರದಿದ್ದರೆ ಅಂಗಳ ಡೊಂಕವೆಂದು ಹೇಳುತ್ತಾ ಹೋಗಬಾರದು.

ತಂದೆ ಮಕ್ಕಳು ಪ್ರತ್ಯೇಕವಾದ ಬಳಿಕ ತಂದೆಯ ಸಾಲಕ್ಕೆ ಮಗನು ಹೊಣೆಗಾರನೇ ಎಂಬ ಕಾಯದೆಯ ಪ್ರಶ್ನೆ ಹುಟ್ಟಿ, ಅದರ ವಿಚಾರಣೆಯು ಮದ್ರಾಸ ಹಾಯಕೋರ್ಟಿನ ಮೂವರು ಜಡ್ಜರ ಮುಂದೆ ನಡೆದಿರುತ್ತದೆ.

ಲಂಡನದಲ್ಲಾದ ಹಿಂದುಸ್ಥಾನದ ಸಿವ್ಹಿಲ ಸರ್ವಿಸ ಪರೀಕ್ಷೆಯಲ್ಲಿ ೧೯ ಜನ ಹಿಂದೀ ಜನರನ್ನು ತಕ್ಕೊಂಡಿದ್ದಾರೆ. ಇನ್ನು ಮೂವರ ನಿರ್ಣಯವು ಈ ನಂತರ ಆಗತಕ್ಕದ್ದುಂಟು.

ಮದ್ರಾಸದಲ್ಲಿ ನೀಲಗೋಂಡೆಗೆ ಸ್ಥಳಾಂತರ ಮಾಡಿಸುವ ಸತ್ಯಾಗ್ರಹಕ್ಕೆ ಡಾಕ್ಟರ [illegible] ರು ಸಹಾಯ ಮತ್ತು ಸಹಾನುಭೂತಿಯ ಪತ್ರ ಬರೆದಿರುತ್ತಾರೆ.

ಬರೋಡಾ ರಾಜ್ಯ ಮತ್ತು ತೆಲಗು ದೇಶದಲ್ಲಿ ತಿರುಗುವ ಲಾಯಬ್ರರಿಗಳುಂಟು. ಅದೇ ಪ್ರಕಾರದ ಒಂದು ಲಾಯಬ್ರರಿಯನ್ನು ವಿಜಾಪುರ ಜಿಲ್ಲೆಗೆ ಸೇರಿದ [illegible]ದ ಜನರು ಸ್ಥಾಪಿಸಿದ್ದಾರೆ.

ಹೋದ ವರ್ಷ ಶಿವನಗಿ [illegible]. ಇದರಲ್ಲಿ ಶಿಕ್ಷಣಕ್ಕಾಗಿ [illegible] ರೂಪಾಯಿ ಮೀಸಲಾಗಿರುತ್ತದೆ.

[illegible] ದ ಸರಕಾರಕ್ಕೆ ಪತ್ರ ಬರೆದಿದ್ದಾರೆ

ನೋಟೀಸು

ಬಸಪ್ಪಾ ಬಿನ್ನ ಬಸಲಿಂಗಪ್ಪಾ ಬಂಕಾಪೂರ ಸಾ|| ಕುಳೇನೂರ ತಾಲ್ಲೂಕ ಕರ್ಜಗಿ ಇವರಿಗೆ—

ಕೆಳಗೆ ಸಹಿ ಮಾಡಿದ ಗೂಳಪ್ಪಾ ದಾನಪ್ಪಾ ಬಂಕಾಪೂರ ಸಾ|| ಕುಳೇನೂರ ತಾಲ್ಲೂ ಕರ್ಜಗಿ ಇವರ ಕಡಿಂದಾ ನೋಟೀಸಿನಿಂದಾ ತಿಳಿಸುವದೇನಂದರೆ- ನೀನು ತಾ|| ೨೩-೬-೩೫ ನೇ ದಿವಸ ... [illegible] ... ಬೀದಿಕೆ ಹಾಕಿ ದಿಕ್ರಿ ಮಾಡಿಕೊಂಡು ಪುನಹಾ ... [illegible] ... ೨೭-೬-೩೭ ನೇ ದಿವಸ ೨೫೦ ರೂಪಾಯಕ್ಕೆ ಪತ್ರಿ ಪತ್ರ ... [illegible] ... ನನ್ನ ಮಗನಾದ ತಿದ್ದಪ್ಪಾ ಬಿನ್ನ ಗೂಳಪ್ಪಾ ಇವನ ಕಡಿಂದಾ ಸಹಿತಾ ... [illegible] ... ದಿ ಮೋಸದ ಪತ್ರಿ ಪತ್ರ ಬರಸಿಕೊಂಡಿರುತ್ತೀದಿ ಹಾಗೂ ನಾನು ದತ್ತಕ ಮಾಡಿಕೊಳ್ಳಲಿ ಇದ್ದವನ ಕಡಿಂದಾ ಸಹಾ ನನ್ನ ಮಗಾ ಅಂತಾ ... [illegible] ... ದಲ್ಲಿ ಬರಸಿ ಮುಂದಿನ ಸಾಧನಾ ... [illegible] ... ಕೊಂಡಿರುತ್ತೀದಿ ಈ ಯಾವತ್ತು ... [illegible] ... ನಿನಗೆ ... [illegible] ... ದು ಸದರಿ ಪತ್ರಿ ಪತ್ರ ಪೋಕಳ ಇದ್ದದರಿಂದ ಅದು ರದ್ದು ಬಾತಲ ಇರುತ್ತದೆ. ಹಾಂಗೂ ನಿನ್ನ ಕಡಿಗೆ ... [illegible] ... ನ್ನು ಸಹಾ ನೀನು ಪರತ ಕೊಟ್ಟಿರುವದಿಲ್ಲ ನಾನು ವಯೋವೃದ್ಧನು ಇದ್ದು ... [illegible] ... ಆಗುತ್ತಿರುವದರಿಂದ ನನಗೆ ಇಲ್ಲದ್ದೊಂದು ... [illegible] ... ಬೀದಿಕೆ ಹಾಕಿ ಈ ರೀತಿ ಮಾಡಿರುತ್ತೀದಿ ಕಾರಣ ಈ ನೋಟೀಸು ಕೊಡುವ ಭಾಗ ... [illegible] ... ನೀನು ಬರಸಿಕೊಂಡ ಪತ್ರಿ ಪತ್ರದ ... [illegible] ... ಹೊರತಾಗಿ ಬಾಕಿ ... [illegible] ... ದತ್ತಕ ಮಗಾ ಅಂತಾ ... [illegible] ... ಬರಸಿಕೊಂಡದ್ದು ಸುಳ್ಳು ಇರುತ್ತದೆ ಕಾರಣ ಈ ಹಣಾ ನಿನಗೆ ... [illegible] ... ಸದರಿ ದಸ್ತವೇಜು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಪರತ ಕೊಡಬೇಕು ಇಲ್ಲವಾದ್ದರೆ ರೀತಿಪ್ರಕಾರ ಇಲಾಜ ... [illegible] ... ಈ ನೋಟೀಸಿನ ಖರ್ಚ ನಿನ್ನ ಮೇಲೆ ಇರುತ್ತದೆ

ತಾರೀಖು ೧೧—೧೦—೩೭ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಗೂಳಪ್ಪಾ ದಾನಪ್ಪಾ ಬಂಕಾಪೂರ ಸಾ|| ಕುಳೇನೂರ

ನೋಟೀಸು

ತಿದ್ದಪ್ಪಾ ಜನಕ ತಂದಿ ಗೂಳಪ್ಪಾ ಬಂಕಾಪೂರ ಸಾ. ಕುಳೇನೂರ ತಾಲೂಕ ಕರ್ಜಗಿ ಇವರಿಗೆ

ಕೆಳಗೆ ಸಹಿ ಮಾಡಿದ ಗೂಳಪ್ಪಾ ಬಿನ್ನ ದಾನಪ್ಪಾ ಬಂಕಾಪೂರದ ಸಾ. ಕುಳೇನೂರ ತಾ. ಕರ್ಜಗಿ ಈ ನೋಟೀಸಿನಿಂದಾ ತಿಳಿಸೋದೇನಂದರೆ ನೀನು ನನ್ನಲ್ಲಿ ಆಳು ಮನುಷ್ಯನು ಇದ್ದು ನನಗೆ ಈಗ ೫ ವರ್ಷದ ಮುಂದೆ ಬಹಳೇ ಅಜಾರಿಯಾಗಿತ್ತು ಆ ಬಾಗ್ಗೆ ಉಪಚಾರ ಮಾಡುವವರು ಇಲ್ಲದ್ದರಿಂದಾ ನೀನು ನನ್ನ ಜಾತಿಯವನು ಇದ್ದದರಿ ದಾಗ ನನಗೆ ಆಡಿಗೆ ನಿನ್ನಕಡೆ ಮಾಡಿ ಹಾಕುತ್ತಿದ್ದಿ ಹೀಗಿದ್ದು ಮುಂದೆ ಕೆಲವು ದಿವಸದ ಮೇಲೆ ಹಾವೇರಿ ಡಾಕ್ತರರ ಕಡಿಗೆ ಔಷದ ಕೊಡಿಸುತ್ತೇನಂತಾ ಕರಕೊಂಡು ಬಂದು ನೀನು ಮಲ್ಲಪ್ಪಾ ಬಿನ್ನ ಬಸಲಿಂಗಪ್ಪಾ ಉಭಯತರ ಕೂಡಿ ಸಂದು ಕಾಗದಾ ಮಾಡಿಸಿ ಹೆಬ್ಬಟಿನ ಗುರ್ತಾ ತಕ್ಕೊಂಡು ಇರುತ್ತಿದಿ ಆದರೆ ಈ ಹಕಿಕತ್ತ ನನಗೆ ನೋಟೀಸು ಪೋಕಳ ಪತ್ರಿ ಪತ್ರ ಬರಸಿಕೊಂಡಿದ್ದು ಅದರಲ್ಲಿ ನಹಾ ಮುಂದೆ ಸಾಧನೂಕಿದ ತಿಂದಾ ದತ್ತಕ ಮಗಾ ಅಂತಾ ಬರಸಿರುತ್ತಿರಿ ಅಂಬು ವದು ಈಗ ತಿಳಿದದರಿಂದಾ ಈ ನೋಟೀಸು ಕೊಡುವ ಬಾಗ ಬಿತ್ತು ಮತ್ತು ನೀವು ಒಳಗಡೆ ದತ್ತಕ ಪತ್ರ ಮಾಡಿಸಿಕೋಂಡಿದ್ದರೆ ಅದು ನಿನಗೆ ಅಜಾರಿ ಆದ ವ್ಯಾಳೆಕ್ಕೆ ಮಾಡಿಸಿಕೊಂಡಿದ್ದು ಅದು ರದ್ದ ಬಾತಲ ಇರುತ್ತದೆ ಮತ್ತು ಈಗ ಬರಸಿಕೊಂಡ ಪತ್ರಿ ಪತ್ರ ಸಹಾ ನಿನ್ನ ಹಕ್ಕನು ನನಗೆ ಬೆದರಿಕೆ ಹಾಕಿ ಬರಸಿಕೊಂಡದ್ದು ಇದ್ದು ಅದು ರದ್ದು ಇರುತ್ತದೆ ನನ್ನ ಜಾಬತ ಸ್ಥಾವರ ಜಂಗಮ ಆಸ್ತಿ ಮೇಲೆ ನಿನ್ನದು ಏನೂ ಮಾಲ್ಕಿ ಹಕ್ಕು ವಗೈರೆ ಇರೋದಿಲ್ಲ ವ ನಿನ್ನನ್ನು ನಾನು ದತ್ತಕ ಮಾಡಿಕೊಂಡಿಲ್ಲಾ ಸುಳ್ಳು ಆದ ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಸದರಿ ಕಾಗದ ಪರತ ಕೊಟ್ಟು ರದ್ದು ಮಾಡಿಕೊಳ್ಳಬೇಕು ಇಲ್ಲದಿದ್ದರೆ ನಿನ್ನ ಮೇಲೆ ರೀತಿ ಪ್ರಕಾರ ಇಲಾಜ ಮಾಡಲಾದೀತು ನೀವು ಉಭಯತರು ವಿಶ್ವಾಸಘಾತ ಮಾಡಿರುತ್ತೀರಿ ಅಂತಾ ಬರಕೊಟ್ಟ ನೋಟೀಸು ಸಹಿ ತಾರೀಖು ೧೧-೧೦-೩೭

ಈ ಎಡಗೈ ಹೆಬ್ಬಟ್ಟಿನ ಗುರ್ತ ಗುಳಪ್ಪಾ ದಾನಪ್ಪಾ ಬಂಕಾಪೂರ ಈತ ಮಾಡಿದ್ದು ಅದ.

ನೋಟೀಸ.

ಖಾದಿರಬಾ ವಲ್ಲದ ಶಮಶೇರಖಾ ಸೂರ್ಯ ಅಲ್ಲಿಬಾವನವರ ಸಾಕೀನ ಕೂಬ್ಯಾಳ ಸಂಸ್ಥಾನ ಕುಂದಗೋಳ ಇವನಿಗೆ ಹಾಂಕಿ ತಂದಿ ಫಕೀರಸಾಬ ಹುಶೇನಸಾಯ್ಕರ ಸಾ|| ಇಂಗಳಹಳ್ಳಿ ತಾಲೂಕು ಹುಬ್ಬಳ್ಳಿ ಇಳಿನ ಕಡೆಯಿಂದ ನೋಟೀಸು ಕಳಿಸುವದೇನಂದರೆ ನೀನು ನನ್ನನ್ನು ಲಗ್ನಮಾಡಿಕೊಂಡಿದ್ದು ಆ ಕಾಲಕ್ಕೆ ನನಗೆ ಮಹಾರಿನ ಹಣ ರೂ. ೨೦೦ ಕೊಡತಕ್ಕದ್ದು ಒಪ್ಪಿಕೊಂಡಿದ್ದಿ ಸದರ ಹಣವನ್ನು ನಾನು ಬೇಡಿದ್ದಾಗ್ಗೆ ಕೊಡುವ ಕರಾರಯಿತ್ತು ಈಗ ಅಜಮಾಸ ೨ ವರ್ಷಗಳ ಹಿಂದೆ ನಿನ್ನ ತಂಗೀ ಬೀಬಾನಿ ಇಕೆಯು ಸಂಗತ ನನ್ನನ್ನು ಶಿಶಿಗೆ ಕಳ್ಳಿದಿ ಆಕೆಯು ನನ್ನನ್ನು ಮುಂದಗೋಳದಲ್ಲಿ ಬಿಟ್ಟು ಹೋದಳು ನನ್ನನ್ನು ಸರಕಾರದವರು ನನ್ನ ತಾಯಿಯು ಕಡಿಗೆ ಎಲ್ಲಿನಾಳಕ್ಕೆ ಕಳ್ಳಿದರು ನನ್ನ ತಾಯಿಯು ನನ್ನನ್ನು ಕರಕೊಂಡು ಹೋಗಲಿಕ್ಕೆ ನಿನಗೆ ತಿಳಿಸಿದಳು ನೀನು ನನ್ನ ಕೂಡ ಬಾಳ್ವೆ ಮಾಡುವದಿಲ್ಲಾ ಅಂತಾ ತಕ್ಷಿಕಕೊಟ್ಟು ಮಹಾರಿನ ಹಣ ಮಂದ ತಿಂಗಳಲ್ಲಿ ಕೊಡುತ್ತೇನೆಂದು ಹೇಳಿಹೋದಿ ಇದುವರಿಗೆ ಕೊಡಲಿಲ್ಲಾ ನಾನು ಬೇರೆ ಲಗ್ನ ಮಾಡಿಕೊಳ್ಳುತ್ತೇನೆ ಕಾರಣ ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ಮಹಾರಿನ ಹಣ ತಂದು ಕೊಡಬೇಕು ಇಲ್ಲದಿದ್ದರೆ ರೀತಿ ಪ್ರಕಾರ ನಿನ್ನ ಮೇಲೆ ಕೆಲಸ ನಡಿಸುತ್ತೇನೆ ತಿಳಿಯುವದು—

ತಾ|| ೧೪—೧೦—೧೯೩೭ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಫಾತಿಮಾಬಿ ತಂದಿ ಫಕೀರಸಾಬ ಹುಶೇನಸಾಯ್ಕರ ಈಕೆಯ ಕೈದು ಅದೆ.

ವಿಜಯ ಪುಸ್ತಕಾಲಯ.

—೦—

೨೦ನೇ ಶತಮಾನದ ಗೊಂದಲ	೧೦ ಆಣೆ.
ವಿಚಿತ್ರ ಸಂಶಯ	೨ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	೧೨—೦—೦ ರೂ
೬ ,,	೬—೦—೦ ರೂ
೪ ,,	೪—೦—೦ ರೂ
ವಾರ ಪತ್ರಿಕೆಗೆ ೧ ವರ್ಷಕ್ಕೆ	೩—೧೨—೦ ರೂ

ಹೆಚ್ಚಿನ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ಸಪ್ತಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಸೋಮವಾರ ತಾರೀಖು ೧೭ ನೇ ಅಕ್ಟೋಬರ ೧೯೨೭ | ಸಂಚಿಕೆ ೨೯೩

ಸಂಗಾತವು ಸಂಗೀತವು ಬಂದಿತು ತ್ವರೆ ಮಾಡಿರಿ.
ಕಿರ್ಲೋಸ್ಕರ ಪೇಟಿಗಾ ಯಂತ್ರಗಳು



ಬಹಳ ದಿವಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೇನೆಂದರೆ ಇತ್ತಿನ ಕಂಬಗಳ ಬಾಕ್ಸು ಹಿತ್ತಾಳೆ ಪಟ್ಟಿಗಳು ಇರುವದರಿಂದ ಯಂತ್ರವು ಅಚ್ಚುಕಟ್ಟಾಗಿ ನಡೆಯುವದಲ್ಲದೆ ಹೊಸ್ತು ಯಂತ್ರಗಳಿಗಿಂತಲೂ ಇವುಗಳಲ್ಲಿ ಕಾಲ ಬೇಳೆ ಯಾಗುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ವಿಸ್ತ್ರಿತ ಬೇಡದ ರಾಗಗಳನ್ನು ಸಂಗ್ರಹಿಸುವವರಿಗೂ ಯಜ್ಞಯನ್ನು ತೆಗೆಯುವವರಿಗೂ ಸಮ್ಮ ಯಂತ್ರಗಳು ಮೇಲಾದವು.

ಈ ವರ್ಷ ದರಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಪಟ್ಟಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ ಸಾತಾರಾ

ಡಿಪಾರ್ಟಮೆಂಟಿನಿಂದ ಮಂಜೂರಾದ

ಕನ್ನಡ ನಿಬಂಧ ರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟದ್ದಲ್ಲದೆ ರಿಪೋರ್ಟ- ಅರ್ಜಿ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳ ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ:— ೧ ರಾ. ರಾ ಬಿ ಜಿ ದಿವೇಕರ, ಮಾರ್ಗುತ್ತಿ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಪ್ಪಾ ವೆಂಕ್ಟರಮಣ ಬುಕ್ ಡಿಪೋ. ಹುಬ್ಬಳ್ಳಿ

WANTED.

Wanted Candidates for Telegraph and Station Master's Courses. Railway Fare GRANTED Boarding Seat FREE. Prospectus on 2 annas stamp,- Presidency Telegraph College, Royapettah Madras.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

೧೯೧೬ ಕೋಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹುಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಸಲ್ಪಡುವವು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ, ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಇಟ್ಟು ಇಟ್ಟುಕೊಳ್ಳುವ ಏರ್ಪಾಡು ಕೆಲವು ತಿಂಗಳಿಂದ ಚನ್ನಾಗಿ ನಡೆಯುತ್ತಿರುತ್ತದೆ.

ಎ. ಕೆ. ಶೆಟ್ಟಿ, ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೧೭ ೧೦-೨೭ ನೇ ಇಸ್ವಿ

ಡಿ॥ ಲೋ॥ ಬೋರ್ಡಿನ ಸ್ಕೂಲ ಬೋರ್ಡುಗಳು!!

ಅ್ಯಾಡಮಿನಿಸ್ಟ್ರೇಟರರನ್ನು ನೇಮಿಸಿಕೊಳ್ಳುವ ಹಕ್ಕು ಕಳಕೊಂಡವು.

ಹೊಸ ಲೋಕಲ್‌ಬೋರ್ಡಿನ ಕಾಯದೆಯನ್ವಯ ಡಿಸ್ಟ್ರಿಕ್ಟ ಲೋಕಲ ಬೋರ್ಡುಗಳ ಸ್ಕೂಲ ಕಮೀಟಿಗಳಿಗೆ ತಮ್ಮ ವತಿಯಿಂದ ಡಿಪುಟಿ ಎಂದರೆ ಅ್ಯಾಡಮಿನಿಸ್ಟ್ರೇಟರರನ್ನು ನೇಮಿಸಿಕೊಳ್ಳುವ ಹಕ್ಕು ದೊರೆದಿತ್ತು. ಸ್ಕೂಲ ಕಮೀಟಿ ಮತ್ತು ಡಿಸ್ಟ್ರಿಕ್ಟ ಲೋಕಲಬೋರ್ಡುಗಳು ಸೇರಿ, ಯೋಗ್ಯ ಮನುಷ್ಯನನ್ನು ಆರಿಸಿ, ಸರಕಾರಕ್ಕೆ ಸಿಫಾರಸ್ಸು ಮಾಡಬೇಕು; ಮತ್ತು ಸರಕಾರವು ಈತನ ನೇಮಣೂಕಿಯನ್ನು ಮಂಜೂರ ಮಾಡಬೇಕೆಂಬ ಭಾವವಿತ್ತು. ಮಂಜೂರಿಯು ಕೇವಲ ಹೆಸರಿಗೆ ಇರುವಂತಾಗಿತ್ತು. ಬೋರ್ಡಿನವರು ಯೋಗ್ಯ ಮನುಷ್ಯನನ್ನು ಆರಿಸಿ, ಶಿಫಾರಸ ಮಾಡಿದ್ದಾರೆಂದು ಎಜ್ಯುಕೇಶನಲ ಇನ್ಸ್‌ಪೇಕ್ಟರ, ಡಾಯರೆಕ್ಟರ ಮತ್ತು ಮಂತ್ರಿಯವರಿಗೆ ಮನನಂಬಿಗೆಯಾಗುವಂತಾದರೆ- ಅವರು ಆತನ ಕುಲಗೋತ್ರವನ್ನು ನೋಡರು. ಬೋರ್ಡಿನವರು ಕುಲದ ಅಭಿಮಾನಕ್ಕೆ ಬಿದ್ದು, ಬಹುಮತದ ಅಹಂಕಾರದಿಂದ ಅನನುಭವಿಕ ಮತ್ತು ಅನಧಿಕಾರಿಯೆನಿಸುವಂಥ ಮನುಷ್ಯನನ್ನು ಸಿಫಾರಸ್ಸು ಮಾಡಿದರೆ- ಅದಕ್ಕೆ ತಥಾಸ್ತು ಎನ್ನುವದಕ್ಕೆ ಮೇಲಿನ ಅಧಿಕಾರಿಗಳು ಕಟ್ಟಿರುವದಿಲ್ಲ. ಏಕೆಂದರೆ ಅವರು ಆಯಾ ಪ್ರಾಂತ ಮತ್ತು ಇಲಾಖೆಯ ಶಿಕ್ಷಣದ ಜವಾಬದಾರರಾಗಿರುತ್ತಾರೆ. ಅವರು ಬೋರ್ಡಿನ ಸಿಫಾರಸ್ಸೆಂದು ದಾಕ್ಷಿಣ್ಯ ಪಡದೆ, ಉಚಿತವಾದಂಥ ಕರ್ತವ್ಯವನ್ನೇ ಮಾಡುವರು. ಈ ಕರ್ತವ್ಯದ ಜಾಗ್ರತೆಯೇ ಸ್ಕೂಲಬೋರ್ಡಿಗೆ ತದ್ದ್ವಾರಾ ಡಿಸ್ಟ್ರಿಕ್ಟ ಬೋರ್ಡಿಗೆ ಇದ್ದ ನೇಮಣೂಕಿಯ ಅಧಿಕಾರವನ್ನು ಕಸಕೊಳ್ಳುವದರಲ್ಲಿ ಕೊನೆಗಾಣಬೇಕಾಯಿತೆಂಬ ದುಃಖದ ಸಂಗತಿಯು. ಬೋರ್ಡಿನವರು ತಮ್ಮ ಮೈಮೇಲೆ ಬಂದ ಜವಾಬದಾರಿಯನ್ನು ಮೈ ಮುಟ್ಟುವಂಥ ಎಚ್ಚರಿಕೆಯಿಂದ ಸ್ಮರಿಸಿ, ರಾಜಾಪ್ರಜೆಗಳೆರಡೂ ಬೊಟ್ಟು ಮಾಡಿ ತೋರಿಸುವದಕ್ಕೆ ಅ[illegible]ಕ ದೊರೆಯದಂತೆ ನೇಮಣೂಕಿಯನ್ನು ಮಾಡಿದ್ದರೆ- ಇಂಥ ಮಹತ್ವದ ಹಕ್ಕನ್ನು ಕಳಕೊಳ್ಳುವ ದುಃಸ್ಥಿತಿಯು ಬರುತ್ತಲೇ ಇದ್ದಿಲ್ಲ. ಹಿರಿಯತನ ಬಂತೆಂದ ಕೂಡಲೆ, ಅಸಹ್ಯವೆನಿಸುವ ರೀತಿಯಿಂದ ಅದರ ದುರುಪಯೋಗ ಮಾಡಲಾರಂಭಿಸಿದ್ದು, ಮೊದಲಿನ ತುತ್ತಿಗೇ ಸೂಜಾ ಬಂದಂತೆ ಮಾಡಿಕೊಂಡು ಹಕ್ಕು ಕಳಕೊಂಡದ್ದಂತೂ ಹೆಚ್ಚಿನ ದುಃಖದ ಸಂಗತಿಯು.

ಈ ಹಕ್ಕನ್ನು ಕಸಕೊಳ್ಳುವಂಥ ಕಲಮಿನ ದುರಸ್ತಿಯ ಬಿಲ್ಲನ್ನು ವಿದ್ಯಾಖಾತೆಯ ಮಂತ್ರಿಯವರು ಕೌನ್ಸಿಲದಲ್ಲಿ ತರುವರೆಂದು ಈ ಮೊದಲು ವಿಜಯದಲ್ಲಿ ಬರೆದದ್ದು ವಾಚಕರ ಸ್ಮರಣದಲ್ಲಿರಬಹುದು. ಆ ಪ್ರಕಾರ ನಾಮದಾರ ದೇಸಾಯಿಯವರು ಬಿಲ್ಲು ತಂದರು. ಆದರ ಮೂರೂ ವಾಚನಗಳು ಎಲಿಗೆ ಸುಣ್ಣ ಹಚ್ಚುವಷ್ಟು ಅವಕಾಶವನ್ನು ನಡುವೆ ಕೊಡದೆ, ಒಂದರ ಮೇಲೊಂದರಂತೆ ಮೂರೂ ಸಾರೆ ಆದವು. ಒಬ್ಬ ಮೆಂಬರರಾದರೂ ಅದನ್ನು ವಿರೋಧಿಸಲಿಲ್ಲ. ಏಕಂದರೆ- ಅವರಿಗೆ ಯಾವ ರೀತಿಯಿಂದ ವಿರೋಧಿಸಬೇಕೆಂಬು ತೋರಿಕೆ ಇರಲಿಲ್ಲ. ಎಷ್ಟೋ ಜನ ಮೆಂಬರರು ಡಿಸ್ಟ್ರಿಕ್ಟ ಲೋಕಲಬೋರ್ಡಿನ ಮೆಂಬರರೂ ಅಧ್ಯಕ್ಷ ಉಪಾಧ್ಯಕ್ಷರೂ ಆಗಿದ್ದಾರೆ. ಮತ್ತು ಯೋಗ್ಯತಾಹೀನರಾಗಿದ್ದರೂ, ಕುಲಾಭಿಮಾನದ ದೆಸೆಯಿಂದ ಅವರ ಸಿಫಾರಸ್ಸು ಮಾಡಿದ್ದಾರೆ. ಇಂಥವರಿಗೆ ಕೂಡ ಮೋರೆಯನ್ನು ಮೇಲಕ್ಕೆ ಎತ್ತಿ, ಮಂತ್ರಿಯ ವಿರುದ್ಧ ಮಾತಾಡುವ ನೈತಿಕ ಧೈರ್ಯವೇ ಇರಲಿಲ್ಲ. ಹೀಗಾಗಿ ಈ ದುರಸ್ತಿಯು ಸರ್ವಾನುಮತದಿಂದಾಯಿತು. ಈ ಸಮಯದಲ್ಲಿ ಮಂತ್ರಿಯವರು ಮಾಡಿದ ಭಾಷಣವು ಮುಂದೆ ಕೊಟ್ಟಂತಿರುತ್ತದೆ:—

“ಯಾವದೊಂದು ಸ್ಕೂಲ ಕಮೀಟಿಯವರು ಅ್ಯಾಡಮಿನಿಸ್ಟ್ರೇಟರನನ್ನು ನೇಮಿಸಿಕೊಂಡರಾಯಿತು. ಆತನನ್ನೇ ಸ್ಥಾನಿಕ ಅಧಿಕಾರಿಗಳು ಒಪ್ಪಲೇಬೇಕೆಂದು ಆ ಕಮೀಟಿಯವರು ತಿಳಕೊಂಡಿದ್ದಾರೆ. ಹೀಗೆ ಕಾಯದೆಯ ಭಾವವಿರುವದಿಲ್ಲ. ಸರಕಾರವು ದುಡ್ಡು ಕೊಡುವಂಥಾದ್ದು. ಪ್ರಸ್ಥಾನದಲ್ಲಿರುವಂಥಾದ್ದು. ಆದರೂ ಇದನ್ನೆಷ್ಟು ಕೇಳತಕ್ಕದ್ದಲ್ಲೆಂದು ಬೋರ್ಡುಗಳು ತಿಳಕೊಂಡಿರುವವು. ಈ ಪ್ರಕಾರ ಸಮರ್ಪಕನಾ ಇರುವದಿಲ್ಲ. ಈ ತಿಳುವಳಿಕೆಯನ್ನು ದೂರ ಮಾಡುವದಕ್ಕಾಗಿಯೇ ಪ್ರಸ್ತುತದ ದುರಸ್ತಿಯುಂಟು. ಈ ದುರಸ್ತಿಯಿಂದ ಬೋರ್ಡುಗಳು ಅ್ಯಾಡಮಿನಿಸ್ಟ್ರೇಟರರ ಸಿಫಾರಸ್ಸು ಮಾಡಬಹುದು. ಸ್ಥಾನಿಕ ಅಧಿಕಾರಿಗಳು ಸಿಫಾರಸ್ಸಿನ ಪಾತ್ರಾಪಾತ್ರದ ವಿಚಾರ ಮಾಡುವರು, ಮತ್ತು ಬೋರ್ಡಿನ ಮನುಷ್ಯನನ್ನೇ ನೇಮಿಸಿಕೊಳ್ಳಬೇಕೆಂದು ಅಧಿಕಾರಿಗಳು ಬದ್ಧರಾಗಲಾರರು”

ಮಂತ್ರಿಯವರ ಮೇಲಿನ ಭಾಷಣ ಮತ್ತು ಕಾಯದೆಯಲ್ಲಾದ ಹೊಸ ತಿದ್ದುಪಡಿಯನ್ನು ನೋಡಲಾಗಿ ಧಾರವಾಡ ಡಿ॥ ಲೋ॥ ಬೋರ್ಡಿನ ಸ್ಕೂಲ ಕಮೀಟಿ ಮತ್ತು ಸ್ವತಃ ಬೋರ್ಡಿನವರು ಪುಷ್ಟಿ ಕೊಟ್ಟು ಮಾಡಿಕೊಂಡಂಥ ಮಿ. ಬೆಟಗೇರಿಯವರಿಗೆ ಸ್ಥಾನಿಕ ಅಥವಾ ಮೇಲಧಿಕಾರಿಗಳು ಮಂಜೂರಿ ಕೊಡುವರೆಂದು ಹೇಳಲಿಕ್ಕಾಗುವದಿಲ್ಲ. ಆದುದರಿಂದ ಇವರು ಬೇಗನೆ ಬೇರೊಬ್ಬರ ಸಿಫಾರಸು ಮಾಡಬೇಕಾಗುವದು. ಆಗಾದರೂ ಕೈ ತೋರಿಸಿ, ಅವಲಕ್ಷಣ ಮಾಡಿಕೊಳ್ಳುವಂತಾಗದಂತೆ ಜಾಗೃತರಾಗಬೇಕೆಂದು ಮುಂದಾಗಿ ಸೂಚಿಸುತ್ತೇವೆ. ಬೋರ್ಡಿಗೆ ಆಗುವ ಅಪಮಾನವು ಇಡೀ ಜಿಲ್ಹೆಗೇ ಆಗುತ್ತದೆಂಬುದನ್ನು ಲಕ್ಷ್ಯದಲ್ಲಿಡತಕ್ಕದ್ದು.

ಕರ್ನಾಟಕ ಏಕೀಕರಣದ ಚಳವಳಿಯು ಶಾಸನದೊಳಗಿನ ಕೂಗಾಯಿತು.

ಮೆಸರ್ಸ ಜೋಗ, ಕರ್ಕಿ, ರಾ. ಬ. ಕಂಬಳಿ ಮೊದಲಾದವರು ಮುಂಬಯಿ ಕೌನ್ಸಿಲದಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಈ ಮುಂದಾಗಿ ಸರಕಾರಕ್ಕೆ ಠರಾವುಗಳನ್ನು ಕಳಿಸಿದ್ದರಷ್ಟೆ; ಈ ಠರಾವುಗಳ ಮಂಗಳಾರತಿಯು ಪ್ರಶ್ನೋತ್ತರದಲ್ಲಿಯೇ ಆಗಿ ಹೋಯಿತು. ಶ್ರೀ. ಕರ್ಕಿಯವರು ಕೇಳಿದ ಪ್ರಶ್ನೆಕ್ಕೆ ಸರಕಾರ ವತಿಯಿಂದ ಮಿ. ರ್ಯೂಸಾಹೇಬರು ಉತ್ತರ ಕೊಟ್ಟದ್ದೇನಂದರೆ-

“ನುಡಿಯ ಪ್ರಕಾರ ನಾಡನ್ನು ಮಾಡಬೇಕೆಂದು ವರ್ತಮಾನ ಪತ್ರಗಳಲ್ಲಿ ಚರ್ಚೆ ನಡೆದದ್ದು ಸರಕಾರಕ್ಕೆ ಗೊತ್ತುಂಟು. ಆದರೆ ಈ ವಿಷಯವಾಗಿ ಜನರಲ್ಲಿ ಬಲವಾದ ಚಳವಳಿ ಇರುವಂತೆ ಸರಕಾರಕ್ಕೆ ಗೊತ್ತಿರುವದಿಲ್ಲ. ಈ ವಿಷಯವಾಗಿ ಸರಕಾರವು ವಿಚಾರಮಾಡಿಲ್ಲ, ಅಥವಾ ಮಾಹಿತಿಯನ್ನೂ ತರಿಸಿಲ್ಲ. ಯಾಕೆಂದರೆ ಇಂಥ ವಿಚಾರಣೆಯು ಅಗತ್ಯವಿರುತ್ತದೆಂದು ಸರಕಾರಕ್ಕೆ ಅನಿಸುವದಿಲ್ಲ.”

ಸಾಹೇಬರು ಕೊಟ್ಟ ಉತ್ತರವು ಕೋರ್ಟಿನಲ್ಲಿ ವಕೀಲರು ತಂತಮ್ಮ ಪಕ್ಷಕ್ಕೆ ಅನುಕೂಲವಾಗಿರುವಷ್ಟೇ ಹೇಳುವಂತಾಗಿರುತ್ತದೆ. ಸಾಹೇಬರಿಗೆ ವರ್ತಮಾನಪತ್ರಗಳಲ್ಲಿಯ ಚರ್ಚೆ ಗೊತ್ತುಂಟು ಏಕೆಂದರೆ ಅದು ಗೊತ್ತಿಲ್ಲವೆಂದು ಹೇಳಲಿಕ್ಕೆ ಬರುವಂಥ ವಿಷಯವೇ ಅಲ್ಲ. ಲೋಕಮತದ ಚಳವಳಿಯ ಅನಾದರವನ್ನು ಬೇಕಾದಂತೆ ಮಾಡಲಿಕ್ಕೆ ಬರುತ್ತದೆ. ಇನ್ನು ಥರ್ಮಾಮೀಟರದಲ್ಲಿ ಯಾವ ಡಿಗ್ರಿಗೆ ಏರುತ್ತದೆಂದು ಸರಕಾರದ ನೋಡುವದಕ್ಕೆ

ಕ ಪ್ರಜರೇ ಹೇಳುವದೇ ಲೇಸು. ಸರಕಾರದ ಯಂತ್ರದಲ್ಲಿಯು ಪಾಲಜವು ಎಷ್ಟು ಕೆಳಗೆ ಇಳಿದಿರುತ್ತದೆ; ಅಷ್ಟೇ ಮೇಲೆ ಲೋಕಮತದ್ದು ಏರಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ ಏಕೀಕರಣದ ಚಳವಳಿಯು ಎಷ್ಟು ಜೋರಾದಷ್ಟು ಆಗಿದೆ. ಮಿ. ರ್‍ಯಾಸಾಹೇಬರ ಮನಸ್ಸಿನಲ್ಲಿದ್ದರೆ ಅವರಿಗೆ ಇಷ್ಟೇ ಚಳವಳಿ ಮತ್ತು ಮೆಂಬರರು ಕೌನ್ಸಿಲ ಮತ್ತು ಕೌನ್ಸಿಲ ಆಫ ಸ್ಟೇಟದಲ್ಲಿ ತಂದ ಠರಾವುಗಳೇ ಸಾಕಾಗುತ್ತಿದ್ದವು. ಬಳ್ಳಾರಿಯು ಕನ್ನಡನಾಡಿಗೆ ಸೇರಬೇಕೆಂದು ಇಡೀ ಕರ್ನಾಟಕದ ಪ್ರಮುಖರು ಮದ್ರಾಸದ ವಿದ್ಯಾಖಾತೆಯ ಮಂತ್ರಿಯ ಕಡೆಗೆ ಶಿಷ್ಟಮಂಡಳವಾಗಿ ಹೋದದ್ದು ಯಾವ ಗುರುತನ್ನು ತೋರುತ್ತದೆ? ಜನರಲ್ಲಿ ಯಾವದೊಂದು ವಿಷಯದ ಚರ್ಚೆಯಿದ್ದರೇ, ಅದೇ ವರ್ತಮಾನಪತ್ರದಲ್ಲಿ ಬರುತ್ತದೆ. ಅದನ್ನು ಅರಿಯದಷ್ಟು ಅಲ್ಪಜ್ಞರು ಮಿ. ರ್‍ಯಾಸಾಹೇಬರಿರುವದೇ ಇಲ್ಲ. ಸಾಹೇಬರ ವಿಚಾರಗಳು ವಿನಾದರೊಂದು ಜೀವನವಂತಿರುತ್ತವೆ. ಸ್ವತಃ ಮಾಂಟೆಗ್ಯುಸಾಹೇಬರು ನುಡಿಯ ಮೇರೆಗೆ ನಾಡಿರಬೇಕೆಂದು ಮಾಡಿದ ಸೂತ್ರ ಕೂಡ ಈ ಸಾಹೇಬರಿಗೆ ಅನವಶ್ಯವೆನಿಸಿದೆ. ಏಕೆಂದರೆ ಈ ವಿಷಯವಾಗಿ ಅವರಿಗೆ ವಿಚಾರ ಮಾಡುವದೇ ಬೇಕಾಗಿಲ್ಲ, ಸಾಹೇಬರ ಕರ್ನಾಟಕಸ್ಥರ ನಿರ್ಧಾರನೆಯ ಉತ್ತರವು ಸುಲಭಸಾಧ್ಯವೆಂತಿರುತ್ತದೆ. ಈ ಉತ್ತರದ ಪರಿಣಾಮವು ಕನ್ನಡಿಗರು ಈ ಪರ್ಯಂತರ ಏಕೀಕರಣದ ವಿಷಯವಾಗಿ ಮಾಡಿದ ಚಳವಳಿಯು ಶಾಸನದಲ್ಲಿ ವ್ಯರ್ಥವಾಗಿ ಕೂಗಿ ಕೊಂಡಂತಾಯಿತು.

ದಬ್ಬಾಳಿಕೆಯಲ್ಲಿ ಸಿಕ್ಕು ದುಃಖಪಡುವಂಥವರ ಸ್ಮರಣೆಯು

—o—

ಬಂಗಾಲದಲ್ಲಿ ದಬ್ಬಾಳಿಕೆಯಲ್ಲಿ ಸಿಕ್ಕಂಥವರನ್ನು ಸರಕಾರದವರು ಒಬ್ಬ್ಯಯಲೆ ಬಿಡಲಾರರು. ತಮ್ಮ ಇಚ್ಛೆಯ ಪ್ರಕಾರ ಒಬ್ಬರನ್ನು ಬಿಡುವರು. ಒಬ್ಬರನ್ನು ಒಂದೊಂದು ಠಾಣ್ಯದಲ್ಲಿ ಬಂದಿಯಲ್ಲಿಡುವರು. ತನ್ನ ತಪ್ಪಾಯಿತೆಂದು ತೋರಬಾರದೆಂದು ಈ ತರದ ಸೋಗಲಾಡಿತನ ಮಾಡುತ್ತಿರುವದು. ಸರಕಾರದ ದೋಷಪೂರ್ಣವಾದ ರಹಸ್ಯವನ್ನು ಒಡೆದು ಅದರ ತಪ್ಪನ್ನು ಅದರ ಉಡಿಯಲ್ಲಿ ಹಾಕಬೇಕೆಂದು ಇವರನ್ನು ಹಿಡಿದ ದಿವಸವೇ ಶಾಸ್ತ್ರೀಯ ಜಾಹೀರ ಸಭೆಗಳನ್ನು ಕೂಡಿಸುವ ಏರ್ಪಾಡು ನಡೆದಿದೆ. ಈ ಕಾರ್ಯಕ್ಕೆ ಪರಪ್ರಾಂತದವರಿಗೂ ಆಮಂತ್ರಣವುಂಟು ಇವರಲ್ಲಿ ಮಹಾತ್ಮಾ ಗಾಂಧಿ, ಶ್ರೀ. ಶ್ರೀನಿವಾಸಯ್ಯಂಗಾರ, ಬ್ಯಾರಿಸ್ಟರ ಜಯಕರ, ಶ್ರೀ. ಕೇಳಕರ, ಮಿ. ಪ್ರಕಾಶಮ, ಡಾ. ಮಹಮ್ಮದಲ್ಲಿ, ಡಾಕ್ಟರ ಅನಸಾರಿ, ಡಾಕ್ಟರ ಮುಂಜೆಯವರು ಪ್ರಮುಖರಾಗಿದ್ದಾರೆ.

ಮುಂಬಯಿ ಮ್ಯುನಿಸಿಪಾಲಿಟಿಯ ಕಾಂಟ್ರಾಕ್ಟಿನಲ್ಲಿ ಹೊರಟ ಹೊಗರು.

—o—

ಮುಂಬಯಿ ಮ್ಯುನಿಸಿಪಾಲಿಟಿಯಲ್ಲಿರುವ ಫೂಟಪಾಥಗಳೆಂಬ ರಾಜಮಾರ್ಗಗಳ ಇಬ್ಬದಿಯ ಕಾಲ್ನಡೆಗೆಯ ದಾರಿಗಳನ್ನು ಧುಮುಸು ಮಾಡಿ, ಗಟ್ಟಿ ಮಾಡುವದಕ್ಕಾಗಿ ಕಾಂಟ್ರಾಕ್ಟು ಕೊಟ್ಟಿದ್ದರು. ನೆಲವನ್ನು ಸಿಮೆಂಟದಿಂದ ಕಾನಕ್ರೀಟ ಮಾಡಬೇಕೆಂಬ ಕರಾರಿತ್ತು. ಕಾಂಟ್ರಾಕ್ಟರರು ಸಿಮೆಂಟಿನ ಬದಲಾಗಿ 'ಕಲ್ಲು-ಉಸುಕು ಹಾಕಿ; ಮೇಲೆಗೆ ಮಾತ್ರ ಸಿಮೆಂಟನ್ನು ಒರಿಸುತ್ತಾರೆಂದು ಸಂಶಯ ಬಂದು ಮ್ಯುನಿಸಿಪಲ ಕಮೀಶನರಸಾಹೇಬರೂ ನಾಲ್ಕೈದು ಜನ ಮೆಂಬರರೂ ಸೇರಿ, ನೂರಾರು ಜನ ಕೂಲಿಕಾರರನ್ನು ಸಂಗಡ ಕರಕೊಂಡು ಹೋಗಿ, ಇದನ್ನು ಅಗಿಸಲು- ಸಂಶಯ ಬಂದಂತೆ ಉಸುಕು ಮತ್ತು ಕಪ್ಪುಬಾದಿನ ಕಲ್ಲಿನ ತುಣುಕುಗಳು ಹೊರಟವು. ಕಾಂಟ್ರಾಕ್ಟರರ ಈ ಕಪಟ ಕೃತ್ಯದ ಆಳವು ಇನ್ನೂ ಇರುತ್ತದೆಂದು ತಿಳಿಯುವಂತಿಲ್ಲ. ಅಧಿಕಾರಿಗಳು ಹೆಚ್ಚಿನ ತಪಾಸು ಮಾಡುತ್ತಲಿದ್ದಾರೆ.

ದಿವಾನರ ಜಿಂದಗಿಯ ಜಪ್ತಿ, ನಾಯಬ ದಿವಾನನಿಗೆ ಶಿಕ್ಷೆ

—o—

ಬುಂದೀ ಸಂಸ್ಥಾನದ ದಿವಾನರೇ ಮೊದಲಾಗಿ ಅನೇಕ ದೊಡ್ಡ ದೊಡ್ಡ ಕಾಮದಾರರನ್ನು ಬರತರ್ಫ ಮಾಡಿ, ವಾರಂಟಿನಿಂದ ದಸ್ತಗಿರ ಮಾಡಿದ ಪೂರ್ವ ವೃತ್ತಾಂತವನ್ನು ವಿಜಯದಲ್ಲಿ ಬರೆದಿದ್ದೇವೆ. ಮುಖ್ಯ ದಿವಾನನ ಆಸ್ತಿಯು ಬಹಳ ದೊಡ್ಡದಾಗಿ, ಅನೇಕ ಊರುಗಳಲ್ಲುಂಟು. ಈಗ ಎಲ್ಲ ಜಿಂದಗಿಯನ್ನು ಜಪ್ತ ಮಾಡಿ, ಅದಕ್ಕೆ ಮೊಹರು ಹಾಕಿದ್ದಾರೆ. ಉಪ ದಿವಾನರಾದ ರಘುವೀರ ಆಹಮದರೆಂಬವರಿಗೆ ಮ್ಯಾಜಿಸ್ಟ್ರೇಟರು ಒಂದು ವರ್ಷದ ಕೈದು ಮತ್ತು ನೂರು ರೂಪಾಯಿ ದಂಡದ ಶಿಕ್ಷೆ ವಿಧಿಸಿದರು. ಸಂಸ್ಥಾನದ ಅರಮನೆಯ ಒರ್ವ ಹಿಂದೂ ದಾಸಿಯನ್ನು ಮುಸಲಮಾನ ಮಾಡುವದಕ್ಕಾಗಿ ಆಕೆಯನ್ನು ಓಡಿಸಿಕೊಂಡು ಹೋದರೆಂಬ ಆರೋಪ ಸಿದ್ಧವಾಗಿ ಇವರು ಶಿಕ್ಷೆಗೆ ಗುರಿಯಾದರು.

ಇಂಗ್ಲಂಡದಲ್ಲಿ ಕಾಮಗಾರರ ಪಕ್ಷದ ಒಬ್ಬ ಪ್ರಮುಖ ಗೃಹಸ್ಥರಾದ ಮಿ. ಜಾರ್ಜ ಲ್ಯಾನ್ಸಬರಿಸಾಹೇಬರು ಮದ್ರಾಸದ ಕಾಂಗ್ರೆಸ ಸಭೆಗೆ ಬರುವರು.

ಹುಗಿದ ಕೂಸು ಬದುಕಿತ್ತು.

—o—

ಬಾದಾಮಿ ತಾಲೂಕ ಕಟಗೇರಿಯಲ್ಲಿ ಒಬ್ಬ ಹೆಣ್ಣುಮಗಳು ಜಾರಕರ್ಮದಿಂದ ಹಡೆದು. ಕೂಸನ್ನು ಜೀವಂತ ಹುಗಿದಳು. ಪೋಲೀಸರಿಗೆ ಈ ಸಂಗತಿ ತಿಳಿದು, ತೆಗಿಸಲು ಕೂಸು ಜೀವಂತವಿತ್ತೆಂದು ಮುಂದಾಳು ಪತ್ರದಲ್ಲಿ ಬರೆದಿದೆ.

ಗ್ರೀಕರಿಂದ ಮೂರ್ತಿ ಪೂಜೆ-

ಹಿಂದುಸ್ಥಾನದಲ್ಲಿ ಮೊದಲು ಮೂರ್ತಿ ಪೂಜೆ ಇದ್ದಿಲ್ಲ. ಬೌದ್ಧರಿಂದ ಪ್ರಾರಂಭವಾಯಿತು. ಈ ಧರ್ಮ ಪ್ರಸಾರ ಕಾಲದಲ್ಲಿ ಎಲ್ಲೆಲ್ಲಾದರೂ ಬುದ್ಧನ ಮೂರ್ತಿಯು ದೇವಾಲಯಗಳು ಸ್ಥಾಪಿಸಲ್ಪಟ್ಟವು. ದೇವಾಲಯ ಮತ್ತು ಮೂರ್ತಿ ಸ್ಥಾಪನೆಯ ಅನುಕರಣವನ್ನು ಬೌದ್ಧರು ಗ್ರೀಕರಿಂದ ತಕ್ಕೊಂಡರು. ಹಿಂದುಸ್ಥಾನ ಮತ್ತು ಚೀನದಲ್ಲಿರುವ ಮೂರ್ತಿಗಳು ಗ್ರೀಕ ಮೂರ್ತಿಗಳಿಗೆ ಹೋಲುತ್ತವೆಂದು ಒಬ್ಬ ಜರ್ಮನ ಸಂಶೋಧಕನು ಹೇಳುತ್ತಾನೆ.

ವಿವಿಧ ವರ್ತಮಾನಗಳು

—o—

ರಾಣೆಯ ಮಿ. ಪ್ರಧಾನರು ಮುಂಬಯಿ ಕೌನ್ಸಿಲದಲ್ಲಿ ಸ್ಥಾಪಿಸಲ್ಪಟ್ಟಂಥ ಸ್ವಾಗತಿಕರಂತೆ ತಾವೂ ಒಂದು ಪಕ್ಷಗಟ್ಟಿದ್ದಾರೆ. ಸಹಕಾರ ಮತ್ತು ಹಿಂದುಳಿದವರ ಹಿತ ನೋಡುವದೇ ಇವರ ಉದ್ದೇಶವು.

ಮದ್ರಾಸದ ಸಿವ್ಹಿಲ ಸರ್ವಂಟರಾದ ಶ್ರೀ ವೆಂಕಟನಾರಾಯಣರು ಎಡೆಂಬರೊಳಗೆ ಫಸ್ಟ ಅಸಿಸ್ಟಂಟರೆಂದು ನೇಮಿಸಲ್ಪಟ್ಟರು. ಈ ಅಧಿಕಾರವು ಏತದ್ದೇಶೀಯರಿಗೆ ಸಿಕ್ಕದ್ದು ಇದೇ ಮೊದಲು.

ಜನಸಂಖ್ಯೆಯಿಂದ ಬ್ರಾಹ್ಮಣರೂ ಕ್ಷತ್ರಿಯರೂ ಬಹಳ ಕಡಿಮೆ ಜನರಿದ್ದಾರೆ. ಶೂದ್ರರ ಸಂಖ್ಯೆ ಬಹಳ ದೊಡ್ಡದು. ಅದರಿಂದ ಇವರು ಶೂದ್ರ ಸ್ತ್ರೀಯರನ್ನು ಮದುವೆಯಾಗಬಹುದು. ತಮ್ಮ ಕುಲದಲ್ಲಿಯ ಕನ್ಯೆಗಳು ದೊರೆತರೆ ಮೇಲು ಎಂಬದಾಗಿ ಮಹಾತ್ಮರು ಅಭಿಪ್ರಾಯ ಪಟ್ಟಿರುತ್ತಾರೆ. ಮಹಾತ್ಮರು ಈಗ ತಾಮಿಳನಾಡ ಸಂಸ್ಥಾನದಲ್ಲಿ ಸಂಚಾರ ಮಾಡುತ್ತಿದ್ದಾರೆ.

ಹುಗಿದ ಕೂಸು ಜೀವಂತ ಎದ್ದಿತು!!

—o—

ಬದಾಮಿ ತಾಲೂಕದ ಕಟಗೇರಿ ಗ್ರಾಮದಲ್ಲಿ ಓರ್ವ ಲಿಂಗವಂತ ಸ್ತ್ರೀಯು ಹಡೆದ ಕೂಸಲೆ ತನ್ನ ಕೂಸನ್ನು ಅದೇ ಕಾಲೆಯ ಒಂದಡೆಗೆ ಮಾಂಸ ಹುರಿ ಸಹಿತ ಹುಗಿದಳು ಮುಂದೆ ಫಜದಾರ ರೊಟ್ಟೀಯವರು ೧ನೇ ತಾರೀಖಿನ ದಿನ ಆ ಸುದ್ದಿಯನ್ನು ಕೇಳಿ ಕಟಗೇರಿಗೆ ಲಗುಬಗೆಯಿಂದ ಹೋಗಿ ಹುಗಿದ ಸ್ಥಾನವನ್ನು ಶೋಧಿಸಿ, ಅಗಿಸುತ್ತಿರುವಾಗ್ಯೆ ಕೂಸು ಅಳುವ ಧ್ವನಿಯು ಕೇಳಿಸಿತು! ಎಲ್ಲರಿಗೂ ಆಶ್ಚರ್ಯವಾಯಿತು! ಇದು ಧ್ವನಿಯಿರಬಹುದೆಂದು ಜನರು ಶಂಕಿಸಿದರು! ಆದರೆ ಪೂರ್ಣ ಅಗಿದು ನೋಡುವಾಗ್ಗೆ ೧೧ದಿನ ೨೦ ತಾಸಿನ ವರೆಗೆ ಕೂಸು ಜೀವಂತವಾಗಿದ್ದು ಅಳುವದನ್ನು ಕಂಡು ಎಲ್ಲರೂ ಅತ್ಯಂತ ಆಶ್ಚರ್ಯಚಕಿತರಾದರು! ದೇವರ ಅಗಾಧ ಲೀಲೆಯು ಎಷ್ಟು ಕಂಡಿರಾ!! ಈ ಕೂಸು ಈಗ್ಗೆ ಬದಾಮಿಯ ಸರ್ಕಾರಿ ದವಾಖಾನೆಯಲ್ಲಿ ಕೃಪಿನಲ್ಲಿದ್ದು ತಾಯಿಯೊಂದಿಗೆ ಆರೈಕೆ ಹೊಂದುತ್ತಲಿದೆ. ಗರ್ಭಕೋಶದಿಂದ ಹೊರಬಿದ್ದ ಕೂಡಲೆ ಉಸುರಾಡಿಸುವ ಮೊದಲು ಕೂಸುಗಳನ್ನು ಹುರಿಮಾಂಸಗಳ ಸಹಿತ ಕೆಲಸೊತ್ತು ಹುಗಿದರೂ ಗರ್ಭದಲ್ಲಿರುವಂತೆ ಜೀವಂತ ಉಳಿಯುವದು ಶಕ್ಯವಿದೆಯೆಂದು ಡಾಕ್ಟರರ ಮತ. ಹುಗಿಯುವಾಗ್ಗೆ ಜಬಡಿಯಿಂದ ಮರ್ದಿಸಿದಂತೆ ಕಲ್ಲು ಮಣ್ಣುಗಳನ್ನು ಕೂಸಿನ ಮೇಲೆ ಸುರಿಸಿದ್ದರೂ, ಅದರಿಂದ ಏನು ಕೂಸಿಗೆ ಗಾಯ ತಗಲದಿದ್ದದ್ದು ಈಶ ಲೀಲೆಯೇ. ಶ್ರೀ ರೊಟ್ಟಿಯವರಂತೆ ಪೋಲಿಸರು ಜಾಗ್ರತರಾಗಿ ಆಗಿಂದಾಗ್ಗೆ ಗುನ್ಹೆಗಳನ್ನು ಶೋಧಿಸುವದಲ್ಲದೇ, ಉಳಿಯುವಂತೆ ತತ್ಕಾಲದಲ್ಲಿ ಗಾಯ ಹೊಂದಿದವರನ್ನು ದವಾಖಾನೆಗೆ ಕಳಿಸುತ್ತ ಹೋದರೆ ಜನರು ಪೋಲಿಸರಿಗೆ ಹೆಸರಿಡರು.

ಸಂಕಾರೀ ಹಾಯಸ್ಕೂಲುಗಳ ಶಿಕ್ಷಕರಿಗೆ ಈಗ ಧಾರವಾಡದಲ್ಲಿ ಕೂಡಿರುವ ಶಿಕ್ಷಕರ ಪರಿಷತ್ತಿಗೆ ಹೋಗಬಾರದೆಂದು ವಿದ್ಯಾಖಾತೆಯು ಡಾಯರೆಕ್ಟರು ಕಟ್ಟು ಮಾಡಿದರು. ಆನಿರ್ಬಂಧವನ್ನು ಈಗ ತೆಗೆದು ಹಾಕಿದ್ದಾರೆ.

ಜೋಕರ್ ... ಇಂದೂರಿನಲ್ಲಿರುವ ಒಳಿವೋಕಸೆಂಬ ಹೆಸರಾದ ಪೈಲವಾನನನ್ನು ಮುಸಲ್ಮಾನರು ಕೊಂದಿರುತ್ತಾರೆ ಈತನ ಸ್ಮಾರಕ ಪತ್ರಿಕೆಗೆ ೨೦ ಸಾವಿರ ಜನ ಕೂಡಿತ್ತು.

ಸಂಸ್ಕೃತೀ ಭಾರತ ಭಕ್ತ ಗ್ರಂಥಮಾಲಾ ಧಾರವಾಡ

ಕನ್ನಡ ನಾಡಿಗೊಂದರಿಕೆ

ಈ ಮಾಲೆಯು ಉದಯಕ್ಕೆ ಬಂದು ನಾಲ್ಕು ವರ್ಷಗಳಾದವು, ಇದು ವರೆಗೆ ಕೆಳಗೆ ಕಾಣಿಸಿದ ಕುಸುಮಗಳು ಈ ಮಾಲೆಯಲ್ಲಿಯೇ ಅರಳಿರುವವು. ಇವುಗಳಲ್ಲಿ ಬಹು ಅಂಶವು ಜನತೆಯ ಸಂಪೂರ್ಣ ಆದರಕ್ಕೆ ಪಾತ್ರವಾಗಿದೆ. ಇದಲ್ಲದೆ ಮುಂಬಯಿ ಇಲಾಖಾ ಮತ್ತು ಮೈಸೂರ ಸಂಸ್ಥಾನದ ವಿದ್ಯಾಖಾತೆಯವರಿಂದ ೧೩ನೇ ನಂ. ಪುಸ್ತಕವಾದ ಸರ್ ಜಗದೀಶ ಚಂದ್ರ ಬೋಸರವರ ಚಿಕ್ಕ ಚರಿತ್ರೆಯು ಪ್ರಾಥಮಿಕ-ಮಾಧ್ಯಮಿಕ ಶಾಲೆಗಳಲ್ಲಿ ಇನಾಮಿನ ಪುಸ್ತಕವಾಗಿ ಗೊತ್ತುಪಡಿಸಲ್ಪಟ್ಟಿದೆ. ಧಾರವಾಡ ವಿದ್ಯಾವರ್ಧಕ ಸಂಘದವರಿಂದಲೂ ಕಾಣಿಕೆಯನ್ನು ಹೊಂದಿದೆ. ಸಾಂಗಲಿ ಸಂಸ್ಥಾನದ ವಿದ್ಯಾಖಾತೆಯವರಾದರೂ ರವೀಂದ್ರನಾಥ ಠಾಕೂರ, ಪಂ. ಮದನಮೋಹನ ಮಾಲವಿಯಾ, ಕೈ|| ಗೋಪಾಳ ಕೃಷ್ಣ ಗೋಖಲೆ ಸರ ಜಗದೀಶ ಚಂದ್ರ ಬೋಸ, ಅಹಲ್ಯಾಬಾಯಿ ಹೋಳಕರ, ಲಕ್ಷ್ಮೀಬಾಯಿ ಝಾಂಸಿ ಈ ಮೊದಲಾದ ಕೆಲವೊಂದು ಪುಸ್ತಕಗಳನ್ನು ಇನಾಮಿನ ಪುಸ್ತಕಗಳಾಗಿ ನಿರ್ಣಯಿಸಿರುವರು ಕೆಲ ಜನ ಸದ್ಗೃಹಸ್ಥರಂತೂ ಈ ಮೊದಲೇ ಇವುಗಳ ಬಗ್ಗೆ ತಮ್ಮ ಸದಭಿಪ್ರಾಯವನ್ನು ಪತ್ರಿಕೆಗಳ ಮುಖಾಂತರ ವ್ಯಕ್ತಗೊಳಿಸಿರುವರು. ಈ ಮೇರೆಗೆ ಸ್ವಲ್ಪಾವಧಿಯಲ್ಲಿಯೇ ಲೋಕಾದರಕ್ಕೆ ಪಾತ್ರವಾದ ಈ ಮಾಲೆಯು ಸ್ಥಿರವಾಗಿ ಉಳಿದು, ತನ್ಮೂಲಕ ತರುಣ ಲೇಖಕರಿಗೆ ಉತ್ತೇಜನ ದೊರಕುವಂತೆ ಮಾತೃಭಾಷಾಭಿಮಾನಿಗಳೆಲ್ಲರೂ ಇದಕ್ಕೆ ನೆರವಾಗಿ ನಮ್ಮಿಂದ ಸೇವೆ ಪಡೆಯಬೇಕಾಗಿ ನಮ್ಮ ಸವಿನಯ ಬೇಡಿಕೆಯು.

ಕುಸುಮಗುಚ್ಛವು.

ಪ್ರತಿಯೊಂದರ ಬೆಲೆ

ರೂ. ಆ. ಪೈ.

೧ ಲೋಕಮಾನ್ಯ ವಿಜಯ	೪		೧೧ ದಾದಾಭಾಯಿ ನವರೋಜೀ
೨ ಸರೋಜಿನೀ ನಾಯಿಡು,	,,		೧೨ ಕೈ ಗೋ ಕೃ ಗೋಖಲೆ
೩ ಮಹಾತ್ಮಾ ಗಾಂಧಿ,	,		೧೩ ಸರ ಜಗದೀಶ ಚಂದ್ರ ಬೋಸ
೪ ಲಾಲಾ ಲಜಪತರಾಯ	,,		೧೪ ಅಹಲ್ಯಾಬಾಯಿ ಹೋಳಕರ
೫ ದೇಶಬಂಧು ಸಿ. ಆರ್. ದಾಸ	,,		೧೫ ಲಕ್ಷ್ಮೀಬಾಯಿ ಝಾಂಸಿ
೬ ರವೀಂದ್ರನಾಥ ಠಾಕೂರ	,,		೧೬ ಜೋಸೆಫ್ ಮ್ಯಾಝಿನಿ
೭ ಅರವಿಂದ ಘೋಷ	,,		೧೭ ನೆಪೋಲಿಯನ್
೮ ಪಂ., ಮದನಮೋಹನ ಮಾಲವೀಯ	,,		೧೮ ಟಾಲಸ್ಟಾಯ್
೯ ಪಂ. ಮೋತೀಲಾಲ ನೆಹರು	,,		೧೯ ನಿಕೋಲಸ್ ಲೆನಿನ್
೧೦ ವೀರ ಅಲ್ಲೀ ಬಂಧುಗಳು	,,		೨೦ ಟೆರನ್ಸ್ ಮ್ಯಾಕ್ಸ್ವಿನಿ

ಈ ಚರಿತ್ರೆಗಳಲ್ಲಿ ಚರಿತ್ರನಾಯಕರ ಅಂದವಾದ ಒಣ್ಣದ ಭಾವಪಟಗಳುಂಟು, ಮಂದ್ವಾದ ಬಾಲಕರಿಗಂತೂ ಬೇಡಿಕೆಯ ಆಭರಣಗಳು! ಜಾಗೃತೆಯಾಗಿ ಕೊಂಡುಕೊಳ್ಳಿರಿ!!

ಆರ್ಡರಿನ ಸಂಗಡ ೧/೪ ಹಣವನ್ನು ಮುಂಗಡವಾಗಿ ಕಳುಹಿಕೊಟ್ಟು ಇವುಗಳನ್ನು ವ್ಹೀ. ಪೀ. ಯಿಂದ ಪಡೆದುಕೊಳ್ಳಿರಿ. ವ್ಯಾಪಾರಸ್ಥರಿಗೆ ಧಾರಾಳವಾಗಿ ದಳ್ಳಾಳಿಯು ಸಿಕ್ಕುವದು. ತ್ವರೆ ಮಾಡಿ ಕೆಳಗಿನ ಈ ವಿಳಾಸಕ್ಕೆ ಬರೆಯಿರಿ!

ಮ್ಯಾನೇಜರ

"ವಿಜಯ" ಪ್ರೇಸ್ಸ ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದ ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದುವರೆ ಆಣೆ ಇಂಗ್ಲಿಷ ಪತ್ರಿಯೊಂದು ಒಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಗೇರ್‍ವ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳು. ಸಾ ಲಿ ಗೆ ಮೂ ರಾ ಣೆ— ಇಂ ... ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ೨೦. ಆಣ ಸಿಂಗಲ ಕಾಲಮಿನ ಒಳಿಗಳಿಗೆ ಇಮ್ಮಡಿ ... ಕಾಯಂ ಜಾಹಿರಾತುಗಳನ್ನು ಕೊಡುವವರು ಕಳಗಿ ... ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭ. ಆಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ — ಬಿಡಿ ಅರ್ಧ ಆಣೆ

ಸಂಪಾದಕರು:- ಅಣ್ಣಾ ಚಾ... ...ಬಾಳಾಚಾರ್ಯ ಹೊಸಕೇರಿ.

ವರ್ಷ ೮ — ಧಾರವಾಡ ಬುಧವಾರ ತಾರೀಖು ೧೯ ನೇ ಅಕ್ಟೋಬರ ೧೯೩೭ — ಸಂಚಿಕೆ ೩೩೪

ಸಂಗೀತವು ಮುಗಿಯ ಬಂದಿತು ತ್ವರೆ ಮಾಡಿರಿ.
ಕಿರ್ಲೋಸ್ಕರ ಸಂಗೀತ ಯಂತ್ರಗಳು



ಚನ್ನಾಗಿ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೆಂದರೆ ಉಕ್ಕಿನ ಕಂಬಗಳ ಚೌಕಟ್ಟು ಕಿತ್ತಾಳೆ ಬಿಡಿಭಾಗಗಳು ಇರುವದರಿಂದ ಯಂತ್ರವು ಚನ್ನಾಗಿ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಗಿಂತಲೂ ಇವುಗಳಲ್ಲಿ ಸ್ವರ ಬೇರೆ ಆಗುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ಬಹಳ ಕಾಲ ಕಳೆದ ಹಾಡುಗಳನ್ನು ಸಂಗ್ರಹಿಸುವವರಿಗೂ ಮಜ್ಜೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟಿ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಅರ್ಧ ಲಕ್ಷದ ... ಉಂಟು. ಠೇವು ಇಂದಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ... ಡವಿದು. ಕಾಟೀವು ಮತ್ತು ಬೇರೆ ತರದ ... ಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಬಳಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ದಿವಾಳಿ ಮುಂಚಿನಿಂದ ಮಂಜೂರಾದ

ಕನ್ನಡ ನಿಬಂಧ ರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟದ್ದಲ್ಲದೆ ರಿಪೋರ್ಟು ಅರ್ಜಿ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ— ೧ ರಾ. ರಾ. ಬಿ. ಜಿ. ದಿವೇಕರ, ಮಾರ್ಕೆಟ್ಟು, ಧಾರವಾಡ

೨ ರಾ. ರಾ. ಎ. ಆರ್ ಶಿವನಾಗಪ್ಪ, ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೦—೦ ರೂ
೬ "	೬—೦—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೦—೦ ರೂ

ವಿಶೇಷ ಮಾಹಿತಿ ಕಳಿಸುವ ವಿಳಾಸಕ್ಕೆ

ಮ್ಯಾನೇಜರ ವಿಜಯ ... ಧಾರವಾಡ

ವಿಜಯ.

ಧಾರವಾಡ ತಾ. ೧೯-೧೦-೨೭ ನೇ ಇಸ್ವಿ

ಮುಂಬಯಿ ಕೌನ್ಸಿಲದಲ್ಲಿ ಮದುವೆಯ ಇನ್ನೊಂದು ಕಾಯದೆ

ಲೆಜಿಸಲೆಟಿವ್ಹ ಅಸೆಂಬ್ಲಿಯಲ್ಲಿ ಹೆಣ್ಣು ಹುಡುಗಿಯ ಮದುವೆಯನ್ನು ಹನ್ನೆರಡು ವರ್ಷವಾದ ಬಳಿಕ ಮಾಡಬೇಕೆಂಬ ಕಾಯದೆಯು ಮೊದಲನೆಯ ವಾಚನವಾಗಿ, ವಿಶೇಷ ವಿಚಾರಕ್ಕಾಗಿ ಅದು ಸಿಲೆಕ್ಟ ಕಮಿಟಿಯ ಕಡೆಗೆ ಹೋಗಿರುತ್ತದಷ್ಟೇ; ಈ ಕಾಯದೆಗಿಂತ ಒಂದು ಹೆಜ್ಜೆ ಮುಂದಾಗಿ ಮುಂಬಯಿ ಕೌನ್ಸಿಲದಲ್ಲಿ ಒಂದು ಕಾಯದೆ ಬರತಕ್ಕದ್ದಿದೆ. ಇದನ್ನು ಸಿಂಧದ ಶ್ರೀ. ಜಯರಾಮ ದೌಲತರಾಮರವರು ತರತಕ್ಕವರಿದ್ದು, ಇದು ಈಗ ಸರಕಾರಿ ಗ್ಯಾಝೆಟದಲ್ಲಿ ಪ್ರಸಿದ್ಧವಾಗಿರುತ್ತದೆ.

ಸಮ್ಮತಿ ವಯದ ಕಾಯದೆಯ ವಯಸ್ಸು ಮೊದಲು ೧೨ ವರ್ಷದ್ದಿತ್ತು. ಅದು ೧೩ ವರ್ಷ ಮಾಡಲ್ಪಟ್ಟಿದೆ. ಅಂದ ಬಳಿಕ ಮದುವೆಯ ವಯಸ್ಸನ್ನು ಹದಿಮೂರು ಏಕೆ ಮಾಡಬಾರದೆಂದು ಇವರು ಪ್ರಶ್ನೆ ಮಾಡಿ, ಕಾಯದೆಯ ಮಸೂದೆ ಬರೆದಿದ್ದಾರೆ. ಇದರಲ್ಲಿ ಇವರು ಬರೆದಿರುವದೇನಂದರೆ-

ಹುಡಿಗಿಯರ ಲಗ್ನವನ್ನು ೧೪ ಮತ್ತು ಹುಡುಗರ ಲಗ್ನವನ್ನು ೧೮ ವರ್ಷಕ್ಕೆ ಮಾಡುವದು ಸಮಂಜಸವಾದದ್ದೆಂದು ಪ್ರತ್ಯಕದಲ್ಲಿ ಸುಶಿಕ್ಷಿತರ ಸರ್ವಸಾಧಾರಣವಾದ ಮತವಾಗಿದೆ. ಆದರೆ ಬಹಳ ದಿವಸಗಳಿಂದ ನಡೆದು ಬಂದ ಪದ್ಧತಿಯಲ್ಲಿ ಒಮ್ಮಿಯಲೆ ದೊಡ್ಡ ಹಾರಿಕೆಯಿಂದ ಹೋಗಬಾರದು ಅದ್ದರಿಂದ ನಾನು ಹುಡುಗ ಹುಡಿಗೆಯರ ಮದುವೆಯ ವಯಸ್ಸನ್ನು ೧೬ ಮತ್ತು ೧೩ ಇರಬೇಕೆಂದಿರುತ್ತೇನೆ. ಒಂದು ವೇಳೆ ಈ ವಯಸ್ಸಿನ ಕೆಳಗೆ ಯಾರಾದರೂ ಮದುವೆ ಮಾಡಿದ್ದರೆ ಅವು ರದ್ದಾಗಬೇಕೆಂದು ನಾನು ಹೇಳುವದಿಲ್ಲ, ಏಕೆಂದರೆ ಅವು ಧರ್ಮಶಾಸ್ತ್ರ ಪ್ರಕಾರ ಆಗಿರುತ್ತವೆ.

ಕಾಯಿದೆಗೆ ವಿರುದ್ಧವಾಗಿ ವರ್ತಿಸಿದವರಿಗೆ ಕುರಂಗದ ಶಿಕ್ಷೆಯಾಗಬೇಕೆಂದು ನಾನು ಹೇಳುವದಿಲ್ಲ. ದಂಡವಾದರೆ ಸಾಕು. ಲಗ್ನದ ಪ್ರತ್ಯಕ್ಷ ಸಂಬಂಧವಿದ್ದವರೂ ಮತ್ತು ಇವರಿಗೆ ಸಹಾಯ ಮಾಡಿದವರೂ ದಂಡಕ್ಕೆ ಪಾತ್ರರಾಗುವರು. ದಂಡವು ಸಾವಿರ ರೂಪಾಯಿಗಿಂತ ಹೆಚ್ಚಾಗಿರಬಾರದು. ದಂಡ ಕೊಡದಿದ್ದರೆ ಮಾತ್ರ ಶಿಕ್ಷೆ ಇರತಕ್ಕದ್ದು.

ಯಾವದೊಂದು ಸಾವಜಾನಿಕ ಸುಧಾರಕ ಸಂಘದವರು ಅಥವಾ ಐವರು ಗೃಹಸ್ಥರು ಫಿರ್ಯಾದಿ ಮಾಡಿದರೆ- ಅದರ ವಿಚಾರಣೆಯಾಗಬೇಕು. ಲಗ್ನವಾದ ಎರಡು ವರ್ಷದೊಳಗೇ ಫಿರ್ಯಾದಿಯಾಗಬೇಕು. ಆನಂತರ ಆಗತಕ್ಕಂಥ ಅರ್ಜಿಗಳನ್ನು ಹಿಡಿಯತಕ್ಕದ್ದಲ್ಲ."

ಗವ್ಹರ್ನರರ ಆಗಮನವೆಂದರೆ- ರೈತರದೊಂದು ಪಾಪವೇ?

ಮದ್ರಾಸ ಇಲಾಖೆಯ ಗವ್ಹರ್ನರಸಾಹೇಬರು ಹೋದ ವಾರದಲ್ಲಿ ದಕ್ಷಿಣ ಕನ್ನಡ ಜಿಲ್ಹೆಯಲ್ಲಿ ಸಂಚಾರಕ್ಕೆ ಹೋಗಿದ್ದರು. ಸಾಹೇಬರ ಪ್ರವಾಸವು ಸುಖಕರವಾಗಿ ತಮಗೆ ಬಹಾದ್ದೂರ ಬಿಲ್ಲೆ ಬರಬೇಕೆಂದು ಪೋಲೀಸರು ದಾರಿಗಳಲ್ಲಿ ಒಂದು ನೊಣ ಸಹ ಹಾಯಬಾರದೆಂದು ಕಾವಲಾಗಿದ್ದರು. ಇವರು ಬಂ ದೋ ಬ ಸ್ತು ಅ ತಿ ರೇ ಕ ವ ನ್ನೆ ಷ್ಟು ಮಾ ಡು ತ್ತಾ ರೆಂ ಬ ದು ಪ್ರ ತಿ ಯೊಂ ದು ಸ್ಥಳದವರಿಗೆ ಗೊತ್ತುಂಟು. ಸಾಹೇಬರು ಲೈನಮಾರ್ಗವಾಗಿ ಹೋಗುವಾಗ ಎಡಬದಿಯ ಹಳ್ಳಿಗಳಲ್ಲಿರುವ ದನಗಳನ್ನು ಅಡ್ಡ ಹಾಯಗೊಡುವದಿಲ್ಲ. ಅಂದು ಅವಕ್ಕೆ ಗೂಟಕ್ಕೆ ನಿಲ್ಲುವ ಬಂದಿವಾಸವೇ ಬರುತ್ತದೆ. ದಾರಿಕಾರರು ಅಲ್ಲಲ್ಲಿ ಪಕ್ಕಡಿಗಳನ್ನು ತರಬೇಕೊಂದು ಸಾಹೇಬರು ಯಾವಾಗ ಒಮ್ಮೆ ದಾಟಿ ಹೋಗುವರೆಂದು ಚಿಂತಿಸುವರು, ಸುಧಾರಿಸಿದ ಬಾಡಿಗೆ ಮೋಟಾರುಗಳು ಸಹ ಅಂದು ಬಂದಾಗುವವು. ಈ ವಿಘ್ನಗಳಲ್ಲದೆ, ಜನರು ಪೋಲೀಸರ ಪರಿಪರಿಯ ತಾಪಕ್ಕೆ ಒಳಗಾಗುವರು. ಒಂದು ಸಿಟ್ಟಿನಿಂದ ಮತ್ತೊಂದು ಸಿಟ್ಟಿಗೆ ಹೋಗುವದು ಕೂಡ ನಿಂತು ಹೋಗುತ್ತದೆ.

ಇಂಥ ಹಿಂಸೆಯ ಕೃತ್ಯಗಳನ್ನು ಪ್ರತ್ಯಕ್ಷ ನೋಡಿ, ಮಂಗಳೂರಿನ ಕೌನ್ಸಿಲ ಮೆಂಬರರಾದ ಮೆ. ಸಾಲ್ಡಾನಾಸಾಹೇಬರು ಗವ್ಹರ್ನರಸಾಹೇಬರ ಪ್ರಾಯವ್ಹೇಟ ಸೆಕ್ರೇಟರಿಗೆ ಪತ್ರ ಬರೆದರು-

"ಅನವಶ್ಯಕ ಮತ್ತು ಅನ್ಯಾಯವಾಗಿ ಜಂತುಗಳನ್ನೂ ಬೇರೆ ವ್ಯವಹಾರವನ್ನೂ ಒಂದು ಮಾಡಿದಂತೆ ನನ್ನ ಕಡಿಗೆ ಅನೇಕ ತಕರಾರು ಬಂದಿವೆ ಗವ್ಹರ್ನರಸಾಹೇಬರು ತಂದೆ ತಾಯಿಯಂತಿದ್ದು, ಅವರನ್ನು ಎಲ್ಲರೂ ನೋಡಬೇಕಾದದ್ದಾಗಿರುತ್ತದೆ"

ಪ್ರಾಯವ್ಹೇಟ ಸೇಕ್ರೆಟರಿಯವರು ಮೆ. ಸಾಲ್ಡಾನಾಸಾಹೇಬರ ಸಮಾಧಾನದ ಪತ್ರ ಬರೆಯುವದು ಕರ್ತವ್ಯವಾಗಿತ್ತು. "ನೀವು ಹೇಳಿದಂತೆ ಪ್ರವಾಸಕ್ಕೆ ವ್ಯತ್ಯಯ ತರುವಂಥ ಯಾವ ಹುಕುಮು ಕೊಟ್ಟಿರಲಿಲ್ಲ ಪೋಲೀಸರಿಂದ ಅಧಿಕ ಪ್ರಸಂಗತವಾಗಿದ್ದರೆ- ಪೋಲೀಸ ಖಾತೆಯು ಇನ್ನಷ್ಟೇ ಕ್ಟದ ಜನರೆಲ್ಲರಿಗೆ ಬರೆಯಿರಿ' ಎಂಬದಾಗಿ ಉತ್ತರ ಕೊಟ್ಟಿದ್ದಾರೆ. ನಾವು ಈ ಬಗ್ಗೆ ಸ್ವತಃ ವಿಚಾರ ಮಾಡುವೆವು. ರೈತರ ಕಷ್ಟನಷ್ಟಗಳನ್ನು ದೂರ ಮಾಡುವೆವು ಮುಂದೆ ಇಂಥ ಉಂಕೋಚಿತನವಾಗದಂತೆ ಕಟ್ಟಪ್ಪಣೆಯನ್ನು ವಿಧಿಸುವೆವೆಂದು ಪ್ರಾಯವ್ಹೇಟ ಸೇಕ್ರೆಟರಿಯವರು ಉತ್ತರ ಬರೆದಿದ್ದರೆ- ಅವರಲ್ಲಿ ನಿಜವಾದ ಪ್ರಜಾಹಿತ ಬುದ್ಧಿಯುಂಟೆಂದು ವ್ಯಕ್ತವಾಗುತ್ತಿತ್ತು.

ಕೌನ್ಸಿಲ ಕಮಿಟಿಗಳಲ್ಲಿಯ ಪಕ್ಷಪಾತ

—೦—

ಮಿ. ಚಿಕ್ಕೋಡಿಯವರ ರಾಜೀನಾಮೆ.

—೦—

ಮುಂಬಯಿ ಕೌನ್ಸಿಲದಲ್ಲಿ ಬೇರೆ ಬೇರೆ ಕಮಿಟಿಗಳ ಜಿಸೆಯಿಂದ ಮೆಂಬರರನ್ನು ನೇಮಿಸುವರು. ಈ ನೇಮಣೂಕಿಯ ಕೆಲಸವು ಸರಕಾರದ್ದೇ ಇರುತ್ತದೆ. ಆಯಾ ಖಾತೆಗಳ ಕೌನ್ಸಿಲರ ಅಥವಾ ಮಂತ್ರಿಗಳು ತಮಗೆ ಬೇಕಾದಂಥವರನ್ನೇ ನೇಮಿಸುವರು. ಬ್ರಿಟಿಶರು ಮೂರು ನಾಲ್ಕು ಕಮಿಟಿಗಳಲ್ಲಿರುವರು. ಕೆಲವರಿಗೆ ಒಂದರ ಕಮಿಟಿಯಲ್ಲಿ ಆಸನವು ಸಿಗುವದಿಲ್ಲ. ಈ ಪ್ರಕಾರ ಅಂಗೈ ಹುಣ್ಣಿಗೆ ಕನ್ನಡಿ ಬೇಕೆ? ಎಂದೆನಿಸುವಂಥ ಪಕ್ಷಪಾತವು ಕಂಡುಬರುವದು ಇದಲ್ಲದೆ ಆಯಾ ಬಣಗಳ ಮೆಂಬರರಲ್ಲಿಯೂ ಸ್ಪರ್ಧೆಯುಂಟು. ತಮಗೆ ಮೆಂಬರ ಕೆಲಸ ದೊರೆಯಬೇಕೆಂದು ಪರಸ್ಪರ ಅಸೂಯದಿಂದ ಪೇಚಾಡುವರು. ಇವೆಲ್ಲ ಅಕ್ರಮ ಅನ್ಯಾಯ ಮತ್ತು ಅಸಡ್ಡೆಗಳನ್ನು ನೋಡಲಾರದೆ, ಶ್ರೀ. ಚಿಕ್ಕೋಡಿಯವರು ಒಂದು ಮಹತ್ವದ ಕಮಿಟಿಯ ಮೆಂಬರ ಕೆಲಸಕ್ಕೆ ರಾಜೀನಾಮೆ ಕೊಟ್ಟರು.

ಕೊಲ್ಹಾಪೂರ ಸಂಸ್ಥಾನದಲ್ಲಿ ಗೋಳಿಬಾರು.

—೦—

ಕೊಲ್ಹಾಪೂರ ಸಂಸ್ಥಾನಕ್ಕೆ ಸೇರಿದ ಶಿರೋಳ ತಾಲೂಕಿನಲ್ಲಿರುವ ತೇರವಾಡ ಎಂಬಲ್ಲಿ ಇಬ್ಬಣವಾಗಿ ಭಯಂಕರ ದಂಗೆಯಾಗುವ ಪ್ರಸಂಗ ಒಂದು. ಬಂದೋಬಸ್ತಿಗಾಗಿ ತಾಲೂಕಿನಿಂದ ಪೋಲೀಸರು ಹೋದರು. ಎರಡೂ ಬಣದವರು ದಂಗೆಗೆ ಪ್ರವೃತ್ತರಾಗಲು, ಪೋಲೀಸರು ಇವರ ಮೇಲೆ ಗುಂಡು ಹಾರಿಸಿದರು ಒಬ್ಬನು ಸತ್ತನು. ಮೂವರು ಘಾಯವಾಗಿದ್ದಾರೆ.

ಠಕ್ಕರಂಥ ಅತ್ಯಾಚಾರ.

—೦—

ವಕೀಲರನ್ನು ಸುಡುವ ಸಾಹಸ.

—೦—

ಮದ್ರಾಸ ಇಲಾಖೆಗೆ ಸೇರಿದ ನೆಲ್ಲೂರು ಪೇಟೆಯ ಮಸ್ಜಿದ ಸ್ಥಳದ ಅಲ್ಲಿ ಮಸೀದಿಗಳ ಮುಂದೆ ವಾದ್ಯ ಬಾರಿಸುವ ವಿಷಯವಾಗಿ ಹಿಂದೂ ಮುಸಲಮಾನ ಜಗಳವು ಅನೇಕ ವರ್ಷಗಳಿಂದಿದೆ. ಕೋರ್ಟಿನ ಕಟ್ಟೆ ಹತ್ತಿ, ಹಿಂದೂ ಜನರಂತೆ ತೀರ್ಪು ಆಗಿರುತ್ತದೆ. ಆದರೂ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಸಾರ್ವಜನಿಕ ಶಾಂತತೆಯು ಭಂಗವಾಗುತ್ತದೆಂದು ಹಿಂದೂ ಜನರಿಗೆ ಮಸೀದಿಗಳ ಮುಂದೆ ವಾದ್ಯ ಬಾರಿಸುವದಕ್ಕೆ ಪ್ರತಿಬಂಧ ಮಾಡಿದ್ದಾರೆ. ಸಾಹೇಬರ ಸುಲ್ತಾನಶಾಹಿಯ ಹುಕುಮನ್ನು ಹಿಂದೂ ಜನರು ಬಹಳವಾಗಿ ನಿಷೇಧಿಸಿದ್ದಾರೆ. ಈ ಚಳವಳಿಯ ಪುರಸ್ಕರ್ತರು ಶ್ರೀ. ವಿಶ್ವನಾಥರೆಡ್ಡಿಯವರೆಂಬ ವಕೀಲರಿದ್ದಾರೆ. ಇವರು ವ್ಹೋಟಾರದಿಂದ ಮದ್ರಾಸಕ್ಕೆ ಹೋಗಿ, ಹಾಯಕೋರ್ಟಿನಲ್ಲಿ ಮೇಲಿನ ಅನ್ಯಾಯದ ಹುಕುಮಿನ ವಿರುದ್ಧ ಅಪೀಲು ದಾಖಲ ಮಾಡಿ, ಒಬ್ಬ ದೋಸ್ತೀ ನಾಯಕರೊಂದಿಗೆ ತಿರುಗಿ ಬರುವಾಗ ಊರ ಬಾಗಿಲದಲ್ಲಿ ಕೆಲ ಮುಸಲಮಾನರು ಇವರ ಮೋಟಾರ ತರುಬಿ, ಜೊತೆಯೊಳು ವಕೀಲರನ್ನು ಬಹುವಾಗಿ ಘಾಯ ಪಡಿಸಿ, ಅದಕ್ಕೆ ಕಲ್ಲೆಣ್ಣೆ ಉಗ್ಗಿದರು. ಮುಂದೆ ಅವರಿಗೆ ಹಚ್ಚಬೇಕೆಂದಿದ್ದರು. ಇಷ್ಟರಲ್ಲಿ ಹಿಂದೆ ಜನರು ಒಂದಿಷ್ಟು ಕಂಡು, ಈ ಸೈತಾನರು ಹೆದರಿದ್ದು ಓಡಿ ಹೋದರು. ವಕೀಲರು ಬೇಹೋಷರಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ ಮಾತಾಡಲಿಕ್ಕೆ ಶಕ್ತಿಯಿಲ್ಲದಷ್ಟು ನಿಶ್ಶಕ್ತರಾಗಿದ್ದಾರೆ.

——

ಬಡೋದೆಯ ಕೌನ್ಸಿಲದಲ್ಲಾದ ಠರಾವುಗಳು

—೦—

೧ ಬಡೋದೆ ರಾಜ್ಯದಲ್ಲಿ ದುಷ್ಕಾಳ ನಿವಾರಣ ಫಂಡು ಸ್ಥಾಪಿಸಬೇಕು. ಸರಕಾರದವರು ಈ ಫಂಡಿಗೆ ತಮ್ಮ ಉತ್ಪನ್ನದಲ್ಲಿ ನೂರಕ್ಕೆ ಒಂದು ರೂಪಾಯಿ ಕೊಡಲೊಪ್ಪಿದ್ದಾರೆ.

೨ ಮದುವೆ ಕಾಲದಲ್ಲಿ ಹುಡುಗರ ವಯಸ್ಸು ೧೮ ಮತ್ತು ಹುಡುಗಿಯರ ವಯಸ್ಸು ೧೪ ಇರಬೇಕು.

೩ ನದಿಗಳ ಬಳಿಯಲ್ಲಿದ್ದಂಥ ಊರುಗಳಿಗೆ ಮಹಾಪೂರದಿಂದ ಹಾನಿ ತಟ್ಟುವದರಿಂದ, ಹೊಸದಾಗಿ ಊರುಗಳನ್ನು ಕಟ್ಟುವದಕ್ಕೆ ಎತ್ತರದ ಸ್ಥಳಗಳನ್ನು ಕೊಡಬೇಕು ದರಬಾರವು ಈ ಠರಾವನ್ನು ವಿರೋಧಿಸಿದ ಪಾಸಾಯಿತು.

ಹೊಟ್ಟೆಗಿಲ್ಲದ್ದಕ್ಕೆ ಆತ್ಮಹತ್ಯ.

—೦—

ತಾಯಿಯು ಮಕ್ಕಳನ್ನು ಬಾವಿಯಲ್ಲಿ ಚಲ್ಲಿ ತಾನೂ ಜೀವ ಕೊಟ್ಟಳು.

—೦—

ತಿರುಪತಿಯ ಹತ್ತರ ಪಾಕಾಲಾವೆಂಬದೊಂದು ರೇಲ್ವೆ ಜಂಕ್ಶನ ಸ್ಟೇಶನವುಂಟು. ಇಲ್ಲಿ ಒಬ್ಬ ಹೆಣ್ಣು ಮಗಳು ಮೂರು ದಿವಸಗಳಿಂದ ಉಪವಾಸ ಬಿದ್ದಳು. ಮಕ್ಕಳಿಗೂ ಅನ್ನವಿರಲಿಲ್ಲ. ಭಿಕ್ಷೆ ಬೇಡುವಂಥ ಸ್ಥಿತಿಯು ಇದ್ದಿಲ್ಲ. ಏಕೆಂದರೆ- ಮನೆತನಸ್ಥಳು. ಹೊಟ್ಟೆಗಿಲ್ಲದೆ, ಬಾಳುವದಕ್ಕಿಂತ ಸಾಯುವದೇ ಲೇಸೆಂದು ನಿರ್ಧರಿಸಿ, ಮೊದಲು ಮೂವರೂ ಮಕ್ಕಳನ್ನು ಬಾವಿಯಲ್ಲಿ ಮುಗಿಸಿ, ತಾನೂ ಹಾರಿಕೊಂಡು ಇಹಲೋಕದ ದಾರಿದ್ರ್ಯದುಃಖದಿಂದ ಮುಕ್ತಳಾದಳು. ಅತ್ಯಂತ ಹೃದಯದ್ರಾವಕ ವರ್ತಮಾನವೇ ಸರಿ.

——

ವಿಲಾಯತಿಯ ಬಟ್ಟೆಗೆ ಬಹಿಷ್ಕಾರ.

—೦—

೨೫ನೆಯ ತಾರೀಖಿನ ದಿವಸ ಬಂಗಾಲದ ದಬ್ಬಾಳಿಕೆಯಲ್ಲಿ ಸಿಕ್ಕ ಜನರ ಸ್ಮರಣೆಗಾಗಿ ಆಗುವ ಚಳವಳಿಯಲ್ಲಿ ವಿಲಾಯತಿಯ ಬಟ್ಟೆಗಳಿಗೆ ಬಹಿಷ್ಕಾರ ಹಾಕಬೇಕೆಂಬ ವಿಚಾರ ಮಾಡುವರು. ಈ ಚಳವಳಿಯಲ್ಲಿ ತಮಗೆ ನೆರವಾಗಬೇಕೆಂದು ಪಂಡಿತ ಮಾಲವೀಯಾ, ಲಾಲಾ ಲಜಪತರಾಯ, ಶ್ರೀ ಶಿವ ಪ್ರಸಾದ ಗುಪ್ತ ಮೊದಲಾದವರಿಗೆ ವಿನ್ನಹ ಪತ್ರಗಳನ್ನು ಬರೆದಿದ್ದಾರೆ. ಶ್ರೀ. ಶ್ರೀನಿವಾಸ ಅಯ್ಯಂಗಾರರು ಮುದ್ದಾಮವಾಗಿ ಕಲಕತ್ತೆಗೆ ಹೋಗಿ. ಚಳವಳಿಗೆ ಪ್ರೋತ್ಸಾಹ ಕೊಡುವರು. ಅಂದಿನ ದಿವಸ ಬಂಗಾಲದ ಪ್ರತಿಯೊಂದು ಗ್ರಾಮದಲ್ಲಿಯ ಜನರು ಉಪವಾಸ ಮಾಡುವರು. ದೇವತಾರಾಧನೆ ಮಾಡುವರು. ಮೆರವಣಿಗೆ ತೆಗೆಯುವರು ಮತ್ತು ಸಾರ್ವಜನಿಕ ಸಭೆಗಳನ್ನು ಕೂಡಿಸಿ ಭಾಷಣ ಮಾಡುವರು.

——

ಮುಸಲಮಾನ ಪತ್ರಗಳ ನೀಲಿಗೆಟ್ಟ ಸುದ್ದಿಯು.

—೦—

ನೇಪಾಳದ ಎಂಟು ನೂರು ಜನರು ಮುಸಲಮಾನರಾದರು. ಸ್ವತಃ ಮಹಾರಾಜಾಧಿರಾಜರು ಮುಸಲಮಾನರಾಗುವರೆಂದು ಉತ್ತರ ಹಿಂದುಸ್ಥಾನದ ಮುಸಲಮಾನ ಪತ್ರಗಳು ಸುದ್ದಿ ಸಾರಿದವು ಈ ಸುದ್ದಿಯು ತೀರ ನಿರಾಧಾರವಾದದ್ದು. ಇವುಗಳಿಗೆ ತಳಬುಡವಿರುವದಿಲ್ಲೆಂದು ಮಹಾರಾಜರ ಪ್ರಾಯಿವ್ಹೇಟ ಸೇಕ್ರೆಟರಿಯವರು ಶ್ರೀ ಸ್ವಾಮಿ ರಾಮಾನಂದರಿಗೆ ತಾರಿನಿಂದ ತಿಳಿಸಿದ್ದಾರೆ.

ರಾಯಲ ಕಮೀಶನದ ವಿಚಾರ.

—೦—

ಲಾರ್ಡ ಅರ್ಯಿನಸಾಹೇಬರು ಉತ್ತರ ಹಿಂದುಸ್ಥಾನದಲ್ಲಿ ಪ್ರವಾಸ ಮಾಡುತ್ತಿದ್ದಾರೆ ಸಂಸ್ಥಾನಗಳಿಗೆ ದರ್ಶನ ಕೊಡುತ್ತಿದ್ದಾರೆ ಸಾಹೇಬರು ಒಮ್ಮಿದೊಮ್ಮೆ ಪ್ರವಾಸದ ಕಾರ್ಯಕ್ರಮವನ್ನು ಬದಲು ಮಾಡಿ, ಸಿಮ್ಲೆಕ್ಕೆ ಪ್ರಯಾಣ ಮಾಡಿದರು. ಈ ಪ್ರಕಾರ ಅಕಸ್ಮಾತ್ತಾಗಿ ಬರುವದರಲ್ಲಿ ಎರಡು ಉದ್ದೇಶಗಳಿರಬೇಕೆಂದು ಹೇಳುತ್ತಾರೆ. ಒಂದು ರಾಯಲ ಕಮೀಶನ. ಇದು ಪಾರ್ಲಮೆಂಟದ ಕಮೀಟಿಯು. ಅದರದೇ ಮೆಂಬರರಾಗುವರು. ಲಿಬರಲ ಪಕ್ಷದ ಒಬ್ಬ ಗೃಹಸ್ಥರು ಚೇರಮನ್ನರಾಗುವರೆಂಬದು. ಎರಡು- ಹಿಂದೂ ಮುಸಲಮಾನ ದಂಗೆ ಮತ್ತು ಕೊಲೆಯ ಸಂಬಂಧವಾದದ್ದು ಎರಡೂ ಜನಾಂಗಗಳ ಪ್ರಮುಖರನ್ನು ಕರಿಸಿಕೊಂಡು ಅವರ ಕೂಡ ಸದ್ಯಃಸ್ಥಿತಿಯ ಬಗ್ಗೆ ವಿಚಾರ ಮಾಡುವರು, ಈ ಜನರನ್ನು ದಿಲ್ಲಿಗೆ ಕರಿಸಿಕೊಂಡು ಅವರ ಕೂಡ ಸಂಭಾಷಣೆ ಮಾಡುವರು.

——

ಹಿಂದೂ ಜನರ ಕೊಲೆಗಳ ಗುಟ್ಟು ಹೊರಬೀಳುವದು.

—೦—

ಲಾಹೋರ ಮತ್ತು ಪಂಜಾಬದ ಬೇರೆ ಬೇರೆ ಪಟ್ಟಣಗಳಲ್ಲಾಗುತ್ತಿರುವ ಹಿಂದೂ ಜನರ ಕೊಲೆಯ ಬುಡದಲ್ಲಿ ಮುಸಲಮಾನರ ಸಂಘ ಇದೆಯೆಂದು ಹೇಳುತ್ತಾ ಬಂದದ್ದು, ತೀರ ನಿರಾಧಾರವಾದದ್ದೆಂದು ಮುಸಲಮಾನ ಪ್ರಮುಖರು ಎದೆ ತಟ್ಟಿ ಹೇಳುತ್ತಾ ಬಂದರು. ಶ್ರೀ. ರಾಜಪಾಲರ ಕೊಲೆ ಮಾಡಲುದ್ಯುಕ್ತನಾಗಿದ್ದ ಖುದಾಬಕ್ಷನು ತನಗೆ ಶಿಕ್ಷೆಯ ಮಾಫಿಯನ್ನು ಕೊಟ್ಟರೆ- ಎಲ್ಲ ಅಂತರಂಗವನ್ನು ಬಹಿರಂಗ ಮಾಡುವೆನೆಂದು ಪ್ರಸಿದ್ಧವಾಗಿತ್ತದೆ.

ಮೇಲಿಂದ ಮೇಲೆ ಆಗುತ್ತಿರುವ ಕೊಲೆಗಳ ಪ್ರತಿಬಂಧದ ದೆಸೆಯಿಂದ ಪಂಜಾಬ ಸರಕಾರದವರು ಆರ್ಡಿನನ್ಸದಂಥ ಉಗ್ರ ಕಾಯದೆಯನ್ನು ಜಾರೀ ಮಾಡುತ್ತಲಿದ್ದಾರೆ.

——

ಧಾರವಾಡ— ಎಕ್ಟಿಂಗ ಕಲೆಕ್ಟರರಾದ ಮಿ. ಮೊರಡೇಕರರು ನಿನ್ನಿನ ದಿವಸ ಇಲ್ಲಿಗೆ ಬಂದರು. ನಾಳಿನ ದಿವಸ ಚಾರ್ಜ ತಕ್ಕೊಳ್ಳುವರು.

ದರ್ಶಿನಿ) ೩ ವ್ಯಾಕರಣ ಚಂದ್ರೋದಯ ೪ ರಚನಾ ಪ್ರಬೋಧ (ಅಧ್ಯಾಪಕ ರಾಮರಕ್ಷ ಜೀ)

೪ನೇ ಪ್ರಶ್ನ ಪತ್ರ-ಭಾಷಾಂತರ ಮತ್ತು ನಿಬಂಧ ಲೇಖನ.

ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಈ ಪರೀಕ್ಷೆಯಲ್ಲಿ ಸೇರಬಹುದು.

೫ ಶ್ರೀ ತುಲಸೀ ರಾಮಾಯಣ ಪರೀಕ್ಷಾ

ಪ್ರಶ್ನ ೧ ಸಂಕ್ಷಿಪ್ತ ತುಲಸೀ ರಾಮಾಯಣ (ಹಿ ಭಾ ಹಿಂ ಪ್ರ. ಸಭ) ೨ ಮಾನಸ ಪ್ರಬೋಧ ೩ ಮಾನಸ ದರ್ಪಣ (ಇಂಡಿಯನ ಪ್ರೆಸ) ೪ ರಾಮಚರಿತ ಮಾನಸಕೀ ಭೂಮಿಕಾ (ಪ್ರೊ. ರಾಮದಾಸ ಗೌ)

ಪ್ರಶ್ನ ಪತ್ರ ೨ ೧ ಗೋಸ್ವಾಮೀ ತುಲಸೀದಾಸ (ಬಾ ಶಿವನಂದನ ಸಹಾಯ) ೨ ತುಲಸೀ ಗ್ರಂಥಾವಲೀ ೩ ಆಲೋಚನ (ಪ್ರೊ. ರಾಮಚಂದ್ರ ಶುಕ್ಲ. ಎಂ. ಎ.)

ಮೊ ಸತ್ಯ ನಾರಾಯಣ.

ಪರೀಕ್ಷಾ ಮಂತ್ರಿ,

ದ. ಭಾ. ಹಿಂ. ಪ್ರ. ಸಭಾ ಮದ್ರಾಸ,

ವಿವಿಧ ವರ್ತಮಾನಗಳು.

ಮುಂಬಯಿಯಲ್ಲಿ ಕಾಂಗ್ರೆಸ ಕಮೀಟಿಗೆ ಸ್ವಂತ ಇಲ್ಲದವೆಂಬ. ಕೆಳಬದಿಯಲ್ಲಿ ಅಂಗಡಿಗಳನ್ನು ಮಾಡಿದ್ದಾರೆ. ವರ್ಷಕ್ಕೆ ಐದು ಸಾವಿರ ರೂಪಾಯಿ ಬಾಡಿಗೆ ಬರುತ್ತದೆ.

ನಿಜಾಮ ಹೈದರಾಬಾದಿನಲ್ಲಿ ವಿದ್ಯಾಖಾತೆಯಲ್ಲಿ ಅಸಿಸ್ಟಂಟ ಡಾಯರೆಕ್ಟರರಾಗಿದ್ದ ಮೌಲ್ವಿ ಅಬಿಮುಲ್ಲಾಖಾನ ಸಾಹೇಬರು ಮದನಪಲ್ಲಿಯಲ್ಲಿ ಪರಲೋಕವಾಸಿಯಾದರು.

ಬಂಗಾಲದಲ್ಲಿರುವ ದಿನಾಜಪೂರ ಮತ್ತು ಖಾಸಿ ಪರ್ವತಾವಳಿಯಲ್ಲಿರುವ ಅನೇಕ ಮುಸಲಮಾನ ಮತ್ತು ಕ್ರಿಶ್ಚನರು ಹಿಂದೂ ಧರ್ಮ ಸ್ವೀಕಾರ ಮಾಡಿದರು. ಈ ಸಂಖ್ಯೆಯು ಎರಡು ನೂರು ಆಗುತ್ತದೆ.

ಇರಾಣದ ದೇಶದ ರಾಜಧಾನಿಯಾದ ತೆಹರಾನಕ್ಕೆ ಈ ವರೆಗೆ ರೇಲ್ವೆ ಇದ್ದಿಲ್ಲ. ಹೋದ ಮಾಸದಲ್ಲಿ ಬಾದಶಹರು ಅಲ್ಲಿ ರೇಲ್ವೇ ಸ್ಟೇಶನ ತೆರೆಯುವ ಸಮಾರಂಭ ಮಾಡಿದರು.

ಇರಾಣ ದೇಶದಲ್ಲಿ ಜನರನ್ನು ಸಕ್ತಿಯಿಂದ ದಂಡಿನಲ್ಲಿ ಸೇರ್ಪಡಿಸುವ ಕಾಯದೆ ಮಾಡಿದ್ದಾರೆ. ಅದನ್ನು ನಿಷೇಧಿಸುವದಕ್ಕಾಗಿ ತೆಹರಾನದ ಪೇಟೆಯು ಮೇಲಿನ ಸಮಾರಂಭ ನಡೆದ ಮರು ದಿವಸ ಒಂದು ಬಂದಾಯಿತು.

ಸರಸ್ವತೀ ಭಾರತ ಭಕ್ತ ಗ್ರಂಥಮಾಲಾ ಧಾರವಾಡ

ಕನ್ನಡ ನಾಡಿಗೊಂದರಿಕೆ

ಈ ಮಾಲೆಯು ಉದಯಕ್ಕೆ ಬಂದು ನಾಲ್ಕು ವರ್ಷಗಳಾದವು, ಇದು ವರೆಗೆ ಕೆಳಗೆ ಕಾಣಿಸಿದ ಕುಸುಮಗಳು ಈ ಮಾಲೆಯಲ್ಲಿಯೇ ಅರಳಿರುವವು. ಇವುಗಳಲ್ಲಿ ಬಹು ಅಂಶವು ಜನತೆಯ ಸಂಪೂರ್ಣ ಆದರಕ್ಕೆ ಪಾತ್ರವಾಗಿದೆ. ಇದಲ್ಲದೆ ಮುಂಬಯಿ ಇಲಾಖಾ ಮತ್ತು ಮೈಸೂರ ಸಂಸ್ಥಾನದ ವಿದ್ಯಾಖಾತೆಯವರಿಂದ ೧೩ನೇ ನಂ. ಪುಸ್ತಕವಾದ ಸರ್ ಜಗದೀಶ ಚಂದ್ರ ಬೋಸರವರ ಚಿಕ್ಕ ಚರಿತ್ರೆಯು ಪ್ರಾಥಮಿಕ-ಮಾಧ್ಯಮಿಕ ಶಾಲೆಗಳಲ್ಲಿ ಇನಾಮಿನ ಪುಸ್ತಕವಾಗಿ ಗೊತ್ತುಪಡಿಸಲ್ಪಟ್ಟಿದೆ. ಧಾರವಾಡ ವಿದ್ಯಾವರ್ಧಕ ಸಂಘದವರಿಂದಲೂ ಶಾಣೆಕೆಯನ್ನು ಹೊಂದಿದೆ. ಸಾಂಗಲಿ ಸಂಸ್ಥಾನದ ವಿದ್ಯಾಖಾತೆಯುವರಂತರೂ ರವೀಂದ್ರನಾಥ ಠಾಕೂರ, ಪಂ. ಮದನಮೋಹನ ಮಾಲವಿಯಾ, ಕೈ|| ಗೋಪಾಳ ಕೃಷ್ಣ ಗೋಖಲೆ ಸರ ಜಗದೀಶ ಚಂದ್ರ ಬೋಸ, ಅಹಲ್ಯಾಬಾಯಿ ಹೋಳಕರ, ಲಕ್ಷ್ಮೀಬಾಯಿ ಝಾಂಸಿ ಈ ಮೊದಲಾದ ಕೆಲವೊಂದು ಪುಸ್ತಕಗಳನ್ನು ಇನಾಮಿನ ಪುಸ್ತಕಗಳಾಗಿ ನಿರ್ಣಯಿಸಿರುವರು ಕೆಲ ಜನ ಸದ್ಗೃಹಸ್ಥರಂತೂ ಈ ಮೊದಲೇ ಇವುಗಳ ಬಗ್ಗೆ ತಮ್ಮ ಸದಭಿಪ್ರಾಯವನ್ನು ಪತ್ರಿಕೆಗಳ ಮುಖಾಂತರ ವ್ಯಕ್ತಗೊಳಿಸಿರುವರು. ಈ ಮೇರೆಗೆ ಸ್ವಲ್ಪಾವಧಿಯಲ್ಲಿಯೇ ಲೋಕಾದರಕ್ಕೆ ಪಾತ್ರವಾದ ಈ ಮಾಲೆಯು ಸ್ಥಿರವಾಗಿ ಉಳಿದು, ತನ್ಮೂಲಕ ತರುಣ ಲೇಖಕರಿಗೆ ಉತ್ತೇಜನ ದೊರಕುವಂತೆ ಮಾತೃಭಾಷಾಭಿಮಾನಿಗಳೆಲ್ಲರೂ ಇದಕ್ಕೆ ನೆರವಾಗಿ ನಮ್ಮಿಂದ ಸೇವೆ ಪಡೆಯಬೇಕಾಗಿ ನಮ್ಮ ಸವಿನಯ ಬೇಡಿಕೆಯು.

ಕುಸುಮಗುಚ್ಛವು.

ಪ್ರತಿಯೊಂದರ ಬೆಲೆ

ರೂ. ಆ. ಪೈ.

೧ ಲೋಕಮಾನ್ಯ ವಿಜಯ	೪	೧೧ ದಾದಾಭಾಯಿ ನವರೋಜೀ	
೨ ಸರೋಜಿನೀ ನಾಯಿಡು,	,,	೧೨ ಕೈ. ಗೋ. ಕೃ. ಗೋಖಲೆ	
೩ ಮಹಾತ್ಮಾ ಗಾಂಧಿ,	,,	೧೩ ಸರ ಜಗದೀಶ ಚಂದ್ರ ಬೋಸ	
೪ ಲಾಲಾ ಲಜಪತರಾಯ	,,	೧೪ ಅಹಲ್ಯಾಬಾಯಿ ಹೋಳಕರ	
೫ ದೇಶಬಂಧು ಸಿ. ಆರ್. ದಾಸ	,,	೧೫ ಲಕ್ಷ್ಮೀಬಾಯಿ ಝಾಂಸಿ	
೬ ರವೀಂದ್ರನಾಥ ಠಾಕೂರ	,,	೧೬ ಜೋಸೆಫ್ ಮ್ಯಾಝಿನಿ	
೭ ಅರವಿಂದ ಘೋಷ	,,	೧೭ ನೆಪೋಲಿಯನ್	
೮ ಪಂ. ಮದನಮೋಹನ ಮಾಲವೀಯ	,,	೧೮ ಟಾಲಸ್ಟಾಯ್	
೯ ಪಂ. ಮೋತೀಲಾಲ ನೆಹರು	,,	೧೯ ನಿಕೋಲಸ್ ಲೆನಿನ್	
೧೦ ವೀರ ಅಲ್ಲೀ ಬಂಧುಗಳು	,,	೨೦ ಟೆರೆನ್ಸ್ ಮ್ಯಾಕ್ಸ್ವಿನಿ	

ಈ ಚರಿತ್ರೆಗಳಲ್ಲಿ ಚರಿತ್ರನಾಯಕರ ಅಂದವಾದ ಬಣ್ಣದ ಭಾವಪಟಗಳುಂಟು; ಮುದ್ದಾದ ಬಾಲಕರಿಗಂತೂ ಬೇಡಿಕೆಯ ಆಭರಣಗಳು! ಜಾಗ್ರತೆಯಾಗಿ ಕೊಂಡುಕೊಳ್ಳಿರಿ!!

ಆರ್ಡರಿನ ಸಂಗಡ ೧/೪ ಹಣವನ್ನು ಮುಂಗಡವಾಗಿ ಕಳುಹಿಕೊಟ್ಟು ಇವುಗಳನ್ನು ವ್ಹೀ. ಪೀ. ಯಿಂದ ಪಡೆದುಕೊಳ್ಳಿರಿ. ವ್ಯಾಪಾರಸ್ಥರಿಗೆ ಧಾರಾಳವಾಗಿ ದಳ್ಳಾಳಿಯು ಸಿಕ್ಕುವದು. ತ್ವರೆ ಮಾಡಿ ಕೆಳಗಿನ ಈ ವಿಳಾಸಕ್ಕೆ ಬರೆಯಿರಿ!

ಮ್ಯಾನೇಜರ

"ವಿಜಯ" ಪ್ರೆಸ್ಸ ಧಾರವಾಡ

ಸೋಶಿಯಲಿಸ್ಟ ಜರಗಳು.

ತಿಂಗಳು ಕಾಲಮಿನ ಹತ್ತು ಪಳಿಗಳಿಗೆ ಒಂದ ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರೆ ಆಣೆ ಇಂಗ್ಲಿಷ ಪತ್ರಿಯೊಂದು ಒಳಿಗೆ ಐದು ಆಣೆ ಸತಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೀತ್ಯಾ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳು ಸಾಲಿಗೆ ಮೂರು ರಾ ... ಇಂದ ಅವರಿಗೆ ಕನ್ನಡದಲ್ಲಿ ಹಾಕುವದಿದ್ದರೆ ... ಒಂದ ಆಣೆ ಕಾಲಮಿನ ಒಳಗಳಿಗೆ ಇಷ್ಟು ... ರೀಯಂ ಜಾಹಿರಾತುಗಳನ್ನು ಕೆಳಗಿನ ... ಪತ್ರ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ... ಕಲ್ಪಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಗುರುವಾರ ತಾರೀಖು ೨೦ ನೇ ಅಕ್ಟೋಬರ ೧೯೨೨ | ಸಂಚಿಕೆ ೨೨೫

ಹಂಗಾಮವು ಮುಗಿಯ ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಜನರಿಗೆ ಕೆಲಸವನ್ನು ಕೊಡುತ್ತವೆ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೆಂದರೆ ಉಕ್ಕಿನ ಕಂಬಿಗಳ [illegible] ಬೀಜಗಳು ಒಡೆಯದಂತೆ ಯಂತ್ರವು [illegible] ನಡೆಯುವದಲ್ಲದೆ [illegible] ಇವುಗಳಿಗೆ ತಗಲುವ [illegible] ವಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ವುಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ಡಿಪಾರ್ಟಮೆಂಟಿನಿಂದ ಮಂಜೂರಾದ

ಕನ್ನಡ ನಿಬಂಧ ರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟಿದ್ದಲ್ಲದೆ ರಿಪೋರ್ಟ, ಅರ್ಜಿ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ:— ೧ ರಾ. ರಾ. ಬಿ. ಜಿ. ದಿವೇಕರ, ಮಾಳಮಡ್ಡಿ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಪ್ಪಾ, ವಾಗ್ಭೂಷಣ ಬುಕ್ ಡಿಪೋ ಹುಬ್ಬಳ್ಳಿ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

೧೯೧೯ ಕೋಆಪರೇಟಿವ್ಹ ಕ್ರೆಡಿಟ ಸೊಸಾಯಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಪ್ರಸಿದ್ಧವಾದ ಸಂಸ್ಥೆ.

ಶೇರ ಬಂಡವಲು [illegible]. ಚೆಕ್ಕಿನ ಮೂಲಕ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ [illegible] ಮೇಲೆ ಕಾಯಮ ಠೇವು ಇಡುವವರಿಗೆ ಹೆಚ್ಚಿಗೆ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಸಭೆ [illegible] ಯವ ರಿಂದ ತಿಳಿಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟು [illegible] ಬಡ್ಡಿಯ ದರವು ಸಾವಕ್ಕೆ ತಿಂಗಳಿಗೆ [illegible] ಆಣೆಯುಂಟಾಗುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೬—೮—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ಹೆಚ್ಚಿನ ಮಾಹಿತಿ ಕಾಗಿ ಬರೆಯಿರಿ

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೩೦ ೧೦-೨೭ ನೇ ಇಸ್ವಿ

ಮುಸಲ್ಮಾನರು ಹಿಂದೂ ಪೈಲವಾನನ ಬಲೀ ತಕ್ಕೊಂಡರು.

—೦—

ಇಂದೂರಿನಲ್ಲಾದ ಹಿಂದೂ-ಮುಸಲ್ಮಾನ ದಂಗೆಯ ವಿಚಾರಣೆಯಲ್ಲಿ ಬಲವಂತನೆಂಬ ಪ್ರಸಿದ್ಧ ಪೈಲವಾನನ ಸಾಕ್ಷಿಯಾಯಿತು ಈತನು ಅಂದಿನ ಗಲಭೆಯಲ್ಲಿ ಹೆಸರಾದವನು. ಸಾಕ್ಷಿಯಲ್ಲಿ ಅನೇಕ ಮುಸಲ್ಮಾನ ಆರೋಪಿಗಳ ಗುರ್ತ ಹಿಡಿದನು ಮುಸಲ್ಮಾನರು ಈ ಕುನ್ನು ಇಟ್ಟುಕೊಂಡು, ಹೋದ ಶನಿವಾರ ಪೂರ್ವರಾತ್ರಿಯಲ್ಲಿ ಮಚ್ಛೀಬಜಾರ ವೆಂಬ ಪೇಟೆಯೊಳಗಿಂದ ಈತನು ಹಾದು ಬರುತ್ತಿದ್ದಾಗ, ಈತನನ್ನು ಹೊಡೆಯುವ ಹಂಚಿಕೆ ಹಾಕಿದರು, ನಾಲ್ವರು ದ್ವಾರಿ ಕಾವಲುಗಾರರಾದರು. ನಾಲ್ವರು ಈತನನ್ನು ಚೂರಿಯಿಂದ ಹೊಡೆದು ಕೊಂದರು. ಇವರಲ್ಲಿ ಇಬ್ಬರನ್ನು ಹಿಡಿದಿದ್ದಾರೆ.

ಕೊಲೆಯ ಸಮಾಚಾರದ ಸುದ್ದಿಯು ಪಟ್ಟಣದ ತುಂಬ ನಿಮಿಷ ಮಾತ್ರದಲ್ಲಿ ಹಬ್ಬಿತು. ಸಾವಿರಾರು ಜನರು ನೆರೆದರು. ಪದ್ಧತಿ ಪ್ರಕಾರ ಪೋಲೀಸ-ಬಂದೋಬಸ್ತಾಗುವದಕ್ಕೆ ಬೆಳಗಾಯಿತು.

ಬಲವಂತನ ಸ್ಮಶಾನ ಯಾತ್ರೆ ಹೊರಟಿತು. ಇಪ್ಪತ್ತು ಸಾವಿರ ಜನರು ಸೇರಿದ್ದರು. ಯಾರೊಬ್ಬರ ಕೈಯಲ್ಲಿಯೂ ಒಂದು ಬಡಿಗೆ ಕೂಡ ಇಲ್ಲವೆಂದು ವೃದ್ಧರು ಹೇಳುವರು. ದಾರಿಯಲ್ಲಿ ಒಂದು ಮಸೀದಿ ಹತ್ತಿತು. ಕೆಲ ಉದ್ಧಟ ಮುಸಲ್ಮಾನರು ಕಲ್ಲೊಗೆದರು. ಕೂಡಲೆ ಮುಯ್ಯಕ್ಕೆ ಮುಯ್ಯವಾಯಿತು. ಒಬ್ಬನು ತಲೆಯೊಡಕೊಂಡು ರಕ್ತ ಸುರಿದನು.

ಹೆಣವನ್ನು ಪೋಲೀಸ ಸ್ಟೇಶನಕ್ಕೆ ತಂದ ಬಳಿಕ, ಯಾವ ದಾರಿಯಿಂದ ರುದ್ರಭೂಮಿಗೆ ಹೋಗಬೇಕೆಂಬ ವಾದ ಹುಟ್ಟಿತು. ಎರಡು ತಾಸು ಅಲ್ಲೇ ನಿಂತಿತು. ಕೊನೆಗೆ ನಿಂತಲ್ಲಿಂದಲೇ ಹಾಯುವದು ಗೊತ್ತಾಯಿತು ಆ ದಿನ ಪೇಟೆಯಲ್ಲಿ ಹಿಂದೂ ಅಂಗಡಿ ತೆರೆಯಲಿಲ್ಲ, ಗಿರಣಿಗಳೂ ಬಂದಾಗಿದ್ದವು. ಈ ಕೊಲೆಯು ದೆಸೆಯಿಂದ ಹಿಂದೂ-ಮುಸಲ್ಮಾನ ಕಲಹವನ್ನು ಬೆಳೆಯುವದಕ್ಕಿಂತ [illegible] ವದೇ ಲೇಸು.

ಅಹಿಂಸಾತ್ಮಕ ಅಸಹಕಾರ ತತ್ವ ಅಸಹಕಾರದಿಂದಲೇ ಸ್ವರಾಜ್ಯ.

ಮಹಾತ್ಮರು ತ್ರಾವಣಕೋರ ಕೊಚಿನ ಸಂಸ್ಥಾನಗಳಿಗೆ ದರ್ಶನ ಕೊಟ್ಟು, ತ್ರಿಚೂರ ಮಾರ್ಗವಾಗಿ ಕೊಯಮುತ್ತೂರಿಗೆ ಬಂದರು. ಅಲ್ಲಿ ಇವರು ಮ್ಯುನಸಿಪಾಲಿಟಿಯ ಮಾನಪತ್ರಕ್ಕೆ ಉತ್ತರ ಕೊಡುವಾಗ, ಅಸಹಕಾರದಲ್ಲಿ ಇಂದಿಗೂ ತಮ್ಮ ನಂಬಿಗೆಯುಂಟೆಂದು ಭಾಷಣ ಮಾಡಿದ್ದಾರೆ. ಅದೇನೆಂದರೆ.

“ ಅಸಹಕಾರದ ಚಳವಳಿಯಲ್ಲಿ ಸತ್ಯವುಂಟೆಂದು ಇಂದಿಗೂ ನನ್ನ ಮನ ನಂಬಿಗೆಯುಂಟು. ಸಹಕಾರವು ಒಂದು ಕರ್ತವ್ಯವಾದರೆ, ಕೆಲವು ವಿಚಾರದಿಂದ ಅಸಹಕಾರವೂ ಒಂದು ಕರ್ತವ್ಯವಾಗಿರುತ್ತದೆ. ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುವೆನು. ಹಿಂದುಸ್ಥಾನವು ಸ್ವಾತಂತ್ರ್ಯ ದೊರಕಿಸಬೇಕಾದರೆ ಒಂದಿಲ್ಲೊಂದು ದಿವಸ ಅಸಹಕಾರದ ಹೊರ್ತು ಮತ್ತೊಂದು ಮಾರ್ಗ ಉಳಿಯಲಾರದು. ”

ಬಂಗಾಲದ ದಬ್ಬಾಳಿಕೆಯಲ್ಲಿ ರಾಜಕೀಯ ಕೈದಿಗಳು ವಿಲಿವಿಲಿಯಾಗಿದ್ದಾರೆ ಕೇವಲ ಅಸ್ತಿಪಂಜರ ಮಾತ್ರ ಉಳಿದಿದೆ. ಇವರ ಮೇಲೆ ಯಾವ ಆರೋಪವಿರದಿದ್ದರೂ, ತುರುಂಗಗಳಲ್ಲಿ ಕೊಳೆಯುತ್ತಿದ್ದಾರೆ. ಕೌನ್ಸಿಲ, ಅಸೆಂಬ್ಲಿ, ಪಾರ್ಲಮೆಂಟ ಮುಂತಾದ ಸಂಸ್ಥೆಗಳ ದೃಷ್ಟಿಯಿಂದ ಕಾಯಿದೆ-ಶಾಯಿದೆ ಎನ್ನುವಂಥ ಎಲ್ಲ ಮಾರ್ಗಗಳು ಪ್ರಯತ್ನಿಸಿ ನಿಷ್ಪ್ರಯೋಜನವಾದವು. ಇವರನ್ನು ಬಿಡಿಸಬೇಕಾದರೆ ಅಸಹಕಾರವೇ ಮೇಲಾದದ್ದು!! ವಿಲಾಯತಿಯ ಬಟ್ಟೆಗಳ ಬಹಿಷ್ಕಾರದ ಮೂಲಕ ಅಸಹಕಾರ ಮಾಡಿ, ಸತ್ಯಾಗ್ರಹಮಾರ್ಗವ ವಿಚಾರವಾಗುವದು ಅವಶ್ಯಕ.

[illegible] ವಕೀಲನ ಕೊಲೆ.

—೧—

ಯುರೋಪದಲ್ಲಿ ಆಲ್ಬೇನಿಯಾದ ವತಿಯಿಂದ ಜಿಗ್ರೇಬದಲ್ಲಿ ವಕೀಲನಾಗಿದ್ದ ಸೇನಾಬೇಗನೆಂಬ ಸಾಹೇಬನನ್ನು ಪ್ರೇಗ ಪಟ್ಟಣದ ರಾಯಭಾರಿಯಾಗಿ ನೇಮಿಸಿದರು. ಈತನು ತನ್ನ ಆಲ್ಬೇನಿಯಾ ಪ್ರಾಂತವನ್ನು ಯುಗೋ-ಸ್ಲಾವ್ಹ ದೇಶಕ್ಕೆ ಮಾರುವ ಸಂಚಲಕ್ಕೆ ಸಹಿ ಸಿರುತ್ತಾನೆಂದು ಆಗವಿಧ ಬೇಬ ಎಂಬವನಿಗೆ ಸಂಶಯ ಬಂತು. ಹೀಗಾಗಬಾರದೆಂದು [illegible] ಸೇನಾಬೇಗನನ್ನು ಗುಂಡು ಹಾಕಿ ಕೊಂದನು.

ಮನುವಿನ ಧರ್ಮಶಾಸ್ತ್ರದ ಪುಸ್ತಕವನ್ನು ಆಹುತಿ ಮಾಡಬೇಕು.

—೦—

ತ್ರಿವೇಂದ್ರಮದಲ್ಲಿ ಆದಿ ದ್ರಾವಿಡರ ಪರಿಷತ್ತು ಕೂಡಿತ್ತು. ಅಸೆಂಬ್ಲಿಯ ಮೆಂಬರರಾದ ವಿ. ರಾಜಾ ಇವರು ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ಎರಡು ಠರಾವುಗಳನ್ನು ಮಾಡಿದರು.

೧ ಮನುವಿನ ಧರ್ಮಶಾಸ್ತ್ರ ಪ್ರಕಾರ ಅಸ್ಪೃಶ್ಯರು ಅಸ್ಪೃಶ್ಯರಾಗಿ ಬಹಿಷ್ಕೃತರಾಗಿದ್ದಾರೆ. ಇದು ಮಾನವಧರ್ಮದ ಕೃತ್ಯವು ಅಲ್ಲದಂಥ ಸರಕಾರದವರು ಈ ಧರ್ಮಶಾಸ್ತ್ರ ಪುಸ್ತಕವನ್ನು [illegible] ಮಾಡಬೇಕು.

೨. ಅಸ್ಪೃಶ್ಯತೆಯು ಪೂರಾ ದೂರ ಸರಿಯದ ಹೊರ್ತು ರಾಷ್ಟ್ರೀಯ ಸಭೆಯವರು ಸ್ವರಾಜ್ಯ ಬೇಡಬಾರದು.

ಸ್ವರಾಜ್ಯ ಸಿಕ್ಕರೇ ಅಸ್ಪೃಶ್ಯತೆಯೂ ಹೋಗುವದು ಮತ್ತು ಈ ಠರಾವವನ್ನು ಮಾಡುವಂಥ ಪ್ರಸಂಗವು ಹೋಗುವದೆಂಬುದನ್ನು ಇವರು ಲಕ್ಷ್ಯಕ್ಕೆ ತರುವದಿಲ್ಲೆಂಬುದು ಆಶ್ಚರ್ಯ!

ಮಂಗಳೂರ ಪೋಲೀಸರ ಕೃತ್ಯದ ನಿಷೇಧ

—೦—

ಮದ್ರಾಸದ ಗವರ್ನರಸಾಹೇಬರು ಮಂಗಳೂರಿಗೆ ಹೋದಾಗ ಪೋಲೀಸರ ಬಂದೋಬಸ್ತಿನಿಂದ ಪ್ರಜೆಗಳಿಗೆ ಎಷ್ಟು ತೊಂದರೆ ತಾಪವಾಯಿತೆಂಬುದನ್ನು ನಿನ್ನಿನ ಸಂಚಿಕೆಯಲ್ಲಿ ಬರೆದಿದ್ದೇವೆ. ಪೋಲೀಸರು ನಿಜವಾಗಿ ಉಂಡ ಮನೆಯ ಗಳ ಎಣಿಸುವವರೇ ಸರಿ. ಏಕೆಂದರೆ ಇವರು ಸ್ವದೇಶ ಸನ್ಮಾನಾರ್ಥ ಪೋಲೀಸ ಆಟಗಳನ್ನಾಡುವದಕ್ಕಾಗಿ ಜಿಲ್ಲೆಯ ತುಂಬ ಕರ-ಪತ್ರಗಳನ್ನು ಹಂಚಿ ಜನರಿಂದ ಪುಷ್ಕಳವಾಗಿ ವರ್ಗಣಿಯನ್ನು ವಸೂಲು ಮಾಡಿದ್ದರು. [illegible] ಜನರನ್ನು ಅದು ಮುಂದೆ ಹೋಗುವದಕ್ಕೆ ಅಡ್ಡ ತರಬಹುದು. ಇವರ ಈ ಕೃತ್ಯವನ್ನು ನಿಷೇಧಿಸುವದಕ್ಕಾಗಿ ಕೌನ್ಸಿಲ ಮೆಂಬರರಾದ ದುಸಗ್ನ ಸಾಹೇಬರು ಮತ್ತು [illegible] ಮಂಗಳೂರಲ್ಲಿ ಜಾಹೀರ ಸಭೆ ಕರೆಯಲು ಸಿದ್ಧರು.

ಸಪ್ಟಂಬರ ತಿಂಗಳ ಮೊದಲಿನ ಎರಡು ವಾರಗಳಲ್ಲಿ ಮುಂಬಯಿಯ ಗವರ್ನರಸಾಹೇಬರು ಈ ಭಾಗದಲ್ಲಿ ಸಂಚಾರ ಮಾಡುವರು. ಮಂಗಳೂರಿನ ಪೋಲೀಸರಂತೆ ಇಲ್ಲಿಯ ಪೋಲೀಸರು ಅವಕಾಶ ಕೊಡದೆ [illegible] ಗುರಿಯಾಗಬಾರದೆಂದು ಸೂಚಿಸುತ್ತೇವೆ.

ನಂಬಿಗೆ ಕಳಕೊಂಡವರು
ಮಂತ್ರಿ ಪದದಲ್ಲುಳಿಯಬೇಕೆ?

—೦—

ಅಸೆಂಬ್ಲಿಯ ಮೆಂಬರರಾದ ಶ್ರೀ. ಟಿ. ಪ್ರಕಾಶಮವು ಮದ್ರಾಸದ ಸ್ವತಂತ್ರ ಪಕ್ಷದ ಮಂತ್ರಿಗಳನ್ನುದ್ದೇಶಿಸಿ, ಮುಂದೆ ಕೊಟ್ಟಂತೆ ಜಾಹೀರ ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ.

ಮಂತ್ರಿಗಳಿಗೆ ರಾಜೀನಾಮೆ ಕೊಡಿರೆಂದು ನಾನು ಸ್ವತಃ ಜನರನ್ನು ಕುರಿತು ಹೇಳಬೇಕೆಂದೇನು. ಪರದೇಶದಲ್ಲಿರುವದರಿಂದ ಹಾಗೆ ಮಾಡಲು ಶಕ್ಯವಾಗಿರುವದಿಲ್ಲ. ಬಹು ಸಂಖ್ಯಾತರಿಂದ ಚುನಾಯಿಸಲ್ಪಟ್ಟ ಮೆಂಬರರ ವಿಶ್ವಾಸ ಕಳಕೊಂಡವರು ದಿವಾನಗಿರಿಯಲ್ಲುಳಿಯಲು ಹಕ್ಕುದಾರರಾಗುವದಿಲ್ಲ. ತಾವು ಕಾಂಗ್ರೆಸದವರೆಂದು ಹೇಳಿಕೊಂಡು ಜನರ ವಿಶ್ವಾಸ ಕಳಕೊಂಡು, ದಿವಾನಗಿರಿಗೆ ಅಂಟಿಕೊಂಡವರನ್ನು ತಳ್ಳಿ ಹಾಕುವದು ಸ್ವರಾಜ್ಯ, ಬ್ರಾಹ್ಮಣೇತರ ಮತ್ತು ನಾಮಿನೇಟೆಡ ಮೆಂಬರರ ಕರ್ತವ್ಯ ಕರ್ಮವಾಗಿರುತ್ತದೆ. ಈ ಪ್ರಕಾರ ಅವರನ್ನು ತಳ್ಳಿ ಹಾಕುವದರಿಂದ ಕರ್ತವ್ಯ ಕರ್ಮ ಮಾಡಿದಂತಾಗುವದಲ್ಲದೆ ಸ್ವಾಭಿಮಾನ ಕಾಯ್ದುಕೊಂಡು, ಸ್ವಪಕ್ಷವನ್ನು ಉಳಿಸಿಕೊಂಡಂತಾಗುತ್ತದೆ

ಮೋಟಾರಿನ ಭಯಂಕರ ಅಪಘಾತ.
ನಾಲ್ಕು ಜನರು ಸತ್ತರು.

—೦—

ಜಬಲಪೂರದಲ್ಲಿ, ಇಬ್ಬರು ಸಾಹೇಬರು ಮೋಟಾರದಲ್ಲಿ ಕುಳಿತು ಹೋಗುವಾಗ, ದಾರಿಯಲ್ಲಿ ಒಂದು ಟಾಂಗಾ ಅಡ್ಡ ಬರಲು ಮೋಟಾರು ಅದಕ್ಕೆ ಹಾಯಿತು. ಟಾಂಗಾದ ಕುದುರೆ ಮತ್ತು ಕೋಚಮನ್ನನು [illegible]. ಸಾಹೇಬರು ಭಯಂಕರ ಗಾಯ ಹೊಂದಿ, ಒಂದು ದಿವಸ ವೇದನೆಪಟ್ಟು ಮರುದಿವಸ ಸತ್ತರು.

ಮೂವರು ಪೋಲೀಸ ಕಾಮದಾರರಿಗೆ ಸಸ್ಪೆಂಡು.

—೦—

ಕೊಲ್ಹಾಪುರ ಸಂಸ್ಥಾನದಲ್ಲಾದ ಪೋಲೀಸ ಗೋಳೀಬಾರಿನ ಪ್ರಕರಣದಲ್ಲಿ ಪೂರ್ಣ ವಿಚಾರಣೆಯಾಗುವ ತನಕ ದಿವಾನ ಲಠ್ಠೆಯವರು ಫಾಯರು ಮಾಡಿದ ಮೂವರು ಪೋಲೀಸ ಕಾಮದಾರರನ್ನು ಸಸ್ಪೆಂಡ ಮಾಡಿದ್ದಾರೆ.

[illegible]ನಲ್ಲಿ ಮುಸಲ್ಮಾನರು [illegible] ವರ್ತಕರನ್ನು ಶ್ರೀ [illegible] ಪತ್ರಿಕೆಯನ್ನು ಸುಡದಂತೆ ಹೊಡೆದಿರು[illegible].

ಸುಬೋಧ ಮಂಜರಿ

ಒಂದು ಕುಲವನ್ನು ರಕ್ಷಿಸುವುದಕ್ಕಾಗಿ ಒಬ್ಬನನ್ನು, ಗ್ರಾಮಕ್ಕಾಗಿ ಕುಲವನ್ನು, ದೇಶಕ್ಕಾಗಿ ಗ್ರಾಮವನ್ನು, ತನ್ನ ಪ್ರಾಣಕ್ಕೋಸ್ಕರ ಭೂಮಿಯನ್ನು ಬಿಡಬೇಕು.

ಪ್ರಜೆಗಳ ಪಾಪವು ಅರಸನನ್ನು, ಅರಸನ ಪಾಪವು ಪುರೋಹಿತನನ್ನು, ಹೆಂಡತಿಯ ಪಾಪವು ಗಂಡನನ್ನು, ಶಿಷ್ಯನ ಪಾಪವು ಗುರುವನ್ನು ಹೊಂದುವುದು.

ಸುರೂಪಿಗಳೂ ಸತ್ಕುಲಪ್ರಸೂತರಾಗಿದ್ದರೂ ವಿದ್ಯಾವಿಹೀನರಾದರೆ ನಿರ್ಗಂಧ ಕುಸುಮಗಳಂತೆ ಶೋಭಿಸರು.

ಅತಿಥಿ, ಬಾಲಕ, ಹೆಂಗಸು, ಅರಸು, ಅಳಿಯ ಈ ಐವರೂ ಮನುಷ್ಯನ ಅನುಪಪತ್ತಿಯನ್ನು ತಿಳಿಯಲಾರರು.

ಅನ್ಯರು ಧರಿಸಿದ ಪಾದರಕ್ಷೆಗಳು, ವಸ್ತ್ರಗಳು, ಹೂವಿನ ಮಾಲೆ, ಯಜ್ಞೋಪವೀತ ಅಲಂಕಾರಾದಿಗಳನ್ನು ಧರಿಸಬಾರದು.

ಸದ್ಗುಣಶೀಲಳಾದ ಭಾರ್ಯೆಯೂ, ಬಾಲಕರ ಮಾತೂ, ರಾಜ ಸನ್ಮಾನವೂ, ಪ್ರೀತಿಯಿಂದ ಇಕ್ಕಿದ ಭೋಜನವೂ, ಮನುಷ್ಯನನ್ನು ಅಮೃತದಂತೆ ಆಪ್ಯಾಯನಗೊಳಿಸುವವು.

ತಿಳಿಯದಿರುವುದೆಷ್ಟೆಂದು ತಿಳಿದವನು ಜ್ಞಾನಿ; ತಿಳಿದಿರುವೆನೆನ್ನುವವನೇ ಅಜ್ಞಾನಿ.

ಮೂರ್ಖನು ತನ್ನ ಮನೆಯಲ್ಲಿ ಮಾತ್ರ ಪೂಜ್ಯನು, ಗ್ರಾಮಾಧಿಕಾರಿಯು ಸ್ವಗ್ರಾಮದಲ್ಲಿ, ಅರಸನು ತನ್ನ ರಾಜ್ಯದಲ್ಲಿ, ಆದರೆ ವಿದ್ವಾಂಸರು ಸರ್ವದೇಶದಲ್ಲೂ ಪೂಜನೀಯರು.

ಅನಾಥ ಸಂರಕ್ಷಣೆಯು ಧರ್ಮಗಳಲ್ಲಿ ಗಣ್ಯವಾದ ಧರ್ಮವು.

ತನಗೆ ನಿಜವಾದ ಆಧಾರವು ತಾನೇ ಎಂದು ತಿಳಿಯದವನು ನಿರಾಧಾರಿಯೇ ಸರಿ.

ನಾವು ಹಿಡಿದ ದಾರಿಯನ್ನು ವಿಧಿಯು ಸಹ ಬದಲಾಯಿಸದಂತಹ ದೃಢತೆಯು ನಮ್ಮಲ್ಲಿರಬೇಕು.

ದಯಾಶೀಲರು ಎಂತಹ [illegible] ಕೆಲಸವನ್ನಾದರೂ ಸಾಧಿಸುವರು.

ದಕ್ಷಿಣ ಭಾರತ ಹಿಂದೀ ಪ್ರಚಾರಕ ಸಭಾ
ಮದ್ರಾಸ.

೧೯೩೮-೧೯೩೯, ಈ ಎರಡು ವರ್ಷಗಳಲ್ಲಿ ಆಗತಕ್ಕ ಪರೀಕ್ಷೆಗಳ ಸಲುವಾಗಿ ನಿಯಮಿಸಲ್ಪಟ್ಟ ಪುಸ್ತಕಗಳು ಕೆಳಗೆ ಕೊಟ್ಟ ಪ್ರಕಾರ ಇರುತ್ತವೆ.

೧ ಪ್ರಾಥಮಿಕ ಪರೀಕ್ಷೆ.

೧ ಹಿಂದೀ ಬಾಲಬೋಧಿನಿ ೨ ಹಿಂದೀ ಪಹಲೀ ಪುಸ್ತಕ, ೩ ದೂಸರೀ ಪುಸ್ತಕ ೪ ಬಾಲಕಥಾ ಕಹಾನೀ ಭಾಗ ೧ ನೆ, ಅನುವಾದ ಮಾಲಾ, ಮೊದಲಿನ ೨೫ ಪಾಠಗಳು.

೨ ಪ್ರವೇಶಿಕಾ.

೧ ಹಿಂದೀಕೀ ಪಹಲೀ ಪುಸ್ತಕ (ಸ್ವಾಮಿ ಸತ್ಯ ದೇವಕೃತ) ೨ ಹಿಂದೀಕೀ ತೀಸರೀ ಪುಸ್ತಕ ೩ [illegible] ಬಾಲಕ ೪ ಅಜಾತಶತ್ರು ನಾಟಕ ೫ ಹಿಂದೀ ಅನುವಾದ ಮಾಲಾ ಸಂಪೂರ್ಣ ಹಿಂದೀ ವ್ಯಾಕರಣದ ಸಾಮಾನ್ಯ ಜ್ಞಾನ.

೩ ರಾಷ್ಟ್ರಭಾಷಾ

೧ ದುರ್ಗಾದಾಸ ನಾಟಕ ೨ ಸಪ್ತಸರೋಜ (ಕಥೆಗಳು) ೩ ಗುರುಗೋವಿಂದ ಸಿಂಹ (ಚರಿತ್ರೆ) ೪ ತಿಲಿಸ್ಮಾತಿ ಮುಂದರಿ ೫ ಪಂಚವಟೀ (ಕಾವ್ಯ) ೬ ಭಾಷಾಭಾಸ್ಕರ ವ್ಯಾಕರಣ.

೪ ಪ್ರಚಾರಕ ಪರೀಕ್ಷಾ.

೧ನೇ ಪ್ರಶ್ನಪತ್ರ- ಪದ್ಯಭಾಗ

೧ ಸಂಕ್ಷಿಪ್ತ ತುಲಸೀ ರಾಮಾಯಣ (ಬಾಲ, ಅಯೋಧ್ಯಾ ಕಾಂಡ) ೨ [illegible] ನವೀನ ಪದ್ಯ ಸಂಗ್ರಹ (ಹಿಂದೀ ಸಾ. ಸಮ್ಮೇಲನ), ಇದರಲ್ಲಿ ಅಲಂಕಾರ, ರಸ ಮತ್ತು ಛಂದಸ್ಸಿನ ಪ್ರಶ್ನೆಗಳೂ ಇರುವವು. ಕೆಳಗೆ ಕಂಡ ಪುಸ್ತಕಗಳಲ್ಲಿ ಅವುಗಳ ಬಗ್ಗೆ ನೋಡಬಹುದು. ೧ ಹಿಂದೀ ಪದ್ಯರಚನಾ ೨ ಅಲಂಕಾರ ಪ್ರಬೋಧ ೩ ಹಿಂದೀ ಸಾಹಿತ್ಯ[illegible] (ಸಮ್ಮೇಲನ)

೨ನೇ ಪ್ರಶ್ನಪತ್ರವು- ಗದ್ಯಭಾಗ.

೧ ಅದ್ಭುತ ಆಲಾಪ, (ಮಹಾವೀರ ಪ್ರಸಾದ ದ್ವಿವೇದಿ) ೨ ಸಾಹಿತ್ಯ ಸುಮನ (ಸ್ವರ್ಗೀಯ ಬಾಲಕೃಷ್ಣ ಭಟ್ಟ) ೩ ಜೀವನ ಸಂಗ್ರಾಮಮೇ ವಿಜಯ ಪ್ರಾಪ್ತಿ ಕೆ ಉಪಾಯ (ಸ್ವ. ಮಾಧವರಾವ ಸಪ್ರೆ) ೪ ನಿಬಂಧ ನವನೀತ (೧ಂ ಪ್ರತಾಪ ನಾರಾಯಣ ಮಿಶ್ರ) ೫ ಮಾಲತೀ ಮಾಧವ ನಾಟಕ (ಸ್ವ. ಸತ್ಯನಾರಾಯಣ) ೬ ಮಹಾರಾಣಾ ಪ್ರತಾಪ ನಾಟಕ (ರಾಧಾ ಕೃಷ್ಣ)

೩ನೇ ಪ್ರಶ್ನ ಪತ್ರ- ಭಾಷಾಕಾ ಇತಿಹಾಸ ಔರ ವ್ಯಾಕರಣ

೧ ಹಿಂದೀಕಾ ಸಂಕ್ಷಿಪ್ತ ಇತಿಹಾಸ (ಸಮ್ಮೇಲನ) ೨ ಹಿಂದೀ ಭಾಷಾ ಕಾ ವಿಕಾಸ (ಶ್ಯಾಮಸುಂ

ನ್ನು ನಿಲ್ಲಿಸುವದಕ್ಕಾಗಿ ತಮ್ಮ ಕೂಡ ಮಾತನಾಡುವದಕ್ಕಾಗಿ ಲಾರ್ಡ ಆಯರ್ವಿನಸಾಹೇಬರು ಪಂಡಿತ ಮಾಲವೀಯ, ಶ್ರೀನಿವಾಸ ಅಯ್ಯಂಗಾರ, ಬ್ಯಾರಿಸ್ಟರ ಜಯಕರ ಮೊದಲಾದವರನ್ನು ಕರಿಸಿಕೊಳ್ಳುವರು.

ಇಂಗ್ಲಂಡದಲ್ಲಾದ ಸ್ವೈಚ್ಛಿಕೆಯು ಉಚ್ಚ ಪ್ರತಿಯ ಪರೀಕ್ಷೆಯಲ್ಲಿ ೧೪ ಜನ ಸ್ತ್ರೀಯರು ಪಾಸಾದರು ಇದರಲ್ಲಿ ಮದ್ರಾಸದ ಕುಮಾರಿ ಮುಲ್ಯಾರ ಒಕ್ಕಲಿಗರೊಬ್ಬರಾಗಿದ್ದಾರೆ.

ಒಸ್ಸಾನಿಯು ಕಲ್ಲಿದ್ದಲಿಯ ಕಣಿಗಳಲ್ಲಿ ಕೆಲಸ ಮಾಡುವ ೭೦ ಸಾವಿರ ಕೂಲಿಕಾರರು ಕೂಲಿಯ ರಸಿಮಿಂ ಸಂಪು ಮಾಡುವರು ಸಂಪಿನಿಂದ ಒಲಿನದ ವಿದ್ಯುತ್ತಿನ ದೀಪಕ್ಕೆ ಧಕ್ಕೆ ಒದೆದು, ಆ ಪಟ್ಟಣದ ವ್ಯಾಪಾರ ವ್ಯವಹಾರ ನಿಂತು ಹೋಗುವದು

ಒಕ್ಕಲಿಗರೂ ಒಕ್ಕಲತನವೂ.

ನಮ್ಮ ಮಾಸ ಪತ್ರಿಕೆಯು ಈಗ ಸುಮಾರು ೧೪ ವರ್ಷಗಳಿಂದ ದೇಶ ಭಿಮಾನಿಗಳ ಸೇವೆಯನ್ನು ಮಾಡಿ ಯಾವತ್ತು ಜನರ ಆದರಕ್ಕೆ ಪಾತ್ರವಾಗಿರುವದು. ಇತ್ತೀಚೆಗೆ ಒಕ್ಕಲತನದ ಬೆಳೆಗಳ ಒಗ್ಗ ಉತ್ತಮ ಚಾರದ ಲೇಖಗಳೂ ಅಂದವಾದ ಮುದ್ರಣವೂ ಇರುವದರಿಂದ ವಾಚಕರ ಮನಸ್ಸನ್ನು ತನ್ನ ಕಡೆಗೆ ಎಳೆದೆ ಎಂದೂ ಬಿಡದು ಶ್ರೀ ಪಿಕರ್ಯಾವೇ ಶ್ರೀಸ್ವಾಮಿಗಳಿಂದು ಸರ್ವ ಸಮ್ಮತವಿರುವದರಿಂದ ಈ ವಿಷಯಕ್ಕೆ ಅನಾದರವನ್ನು ತೋರಿಸದೆ, ಇಂಥ ಮಾಸಪತ್ರಿಕೆಗಳನ್ನು ಆದರಿಸಬೇಕೆಂದು ನಮ್ಮ ಆಗ್ರಹಪೂರ್ವಕ ವಿನಂತಿ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧-೨-೦

ಸಂಪಾದಕ

ಒಕ್ಕಲಿಗರೂ ಒಕ್ಕಲತನವೂ

ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಿಟ್ಟು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಒಟ್ಟು ಮುದತ್ತು ನೂರಕ್ಕೆ ತಿಂಗಳ ಇದ್ದ ರೀತಿ ಬಡ್ಡಿ ಕೊಡಲಾಗುವದು

ಜಿ. ಕೆ ಶೆಟ್ಟಿ

ಮ್ಯಾನೇಜಿಂಗ ಡೈರೆಕ್ಟರ

ಹೊಸ ನಮೂನೆಯ ಮಾಲು | **ಕಡಿಮೆ ನೂಡಿದ ದರ ಒಂದೇ ವಾರ**

ಗ್ರಾಹಕರಿಗೆ ಅಪೂರ್ವ ಸಂಧಿ.

ಸ್ಪೇಶಲ ದೀಪಾವಳಿಯ ಸಲುವಾಗಿ

ಅತ್ಯುತ್ತಮ ಜರದ ಟೊಪ್ಪಿಗೆಗಳು ರೇಶಿಮೆ ವ ಉಣ್ಣೆಯ ಸಣ್ಣ ಹುಡುಗರ ಪ್ಯಾಕಪೀಸ ಕೋಟುಗಳು ಜರದ ಪೀತಾಂಬರ ಪತ್ತಲಗಳು ರೇಶಿಮೆಯ ಶೀರೆ, ಖಣಗಳು ದೀಪಾವಳಿಯ ವಾರದಲ್ಲಿ ನಮ್ಮ ಅಂಗಡಿಯಲ್ಲಿ ಸೋಯಿ ದರದಿಂದ ಮಾರಲಿಕ್ಕೆ ದೊರೆಯುವವು. ಈ ಸುಸಂಧಿಯನ್ನು ಯಾರೂ ಕಳೆದುಕೊಳ್ಳಬಾರದು.

ಮಾರ್ಕೇಟರೋಡ ಧಾರವಾಡ ತಾ॥ ೨೦—೧೦—೨೭ } ಕಡಕೋಳ ಜಮುಖಂಡಿ ಆ್ಯಂಡ ಕಂಪನಿ.

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

—೦—

ಮಂಗಳವಾರ ಪೇಟೆ ಧಾರವಾಡ.

೧೯೦೪ ಕೋಆಪರೇಟಿವ್ಹ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಗಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಕಂಡಿತ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಸಾಕಿಕೀಪು ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕ ಲಿಮಿಟೆಡ ಧಾರವಾಡ

—೦—

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ಆರು ತಿಂಗಳು, ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲಪರ್ಯಂತರ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಆರು ರೂಪಾಯಿ ಮತ್ತು ವರ್ಷಕ್ಕೆ ಆರುವರಿ ರೂಪಾಯಿ ಬಡ್ಡಿ ದೊರೆಯುವದು ಹೆಚ್ಚು ಕಾಲದ ದೆಸೆಯಿಂದ ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನೆಗಳೂ ಒತ್ತೀ ಇಟ್ಟುಕೊಳ್ಳಲ್ಪಡುವವು ಚಕ್ಕ ವ ಹುಂಡಿಯ ವ್ಯವಹಾರ ಮಾಡಲ್ಪಡುವದು

ಮೆಸರ್ಸ ದೇಶಪಾಂಡೆ ಮತ್ತು ಅಗ್ನ್ಯೂಚಾಯರ್ ಕಟ್ಟಿ ಕಂಪನಿ ಮ್ಯಾನೇಜಿಂಗ ಜೇಂಟನ.

ಏಜಂಟ್ಸ

ವಿಜಯ ಪುಸ್ತಕಾಲಯ

೨೦ನೇ ಶತಮಾನದ ಗೊಂದಲ	೧೦ ಆಣೆ,
ವಿಚಿತ್ರ ಸಂತತಿಯು	೫ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಭಕ್ತರ ಸಂದೇಶ	೯ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ

ಧಾರವಾಡ

ಜಾಹೀರಾತಿನ ದರಗಳು.

ಸಿಂಗಲ ಕಾಲಮಿನ ಹತ್ತು ಸಾಲುಗಳಿಗೆ ಒಂದ ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದುವರಿ ಆಣೆ ಇಂಗ್ಲಿಷ ಪತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ನೇಟಿವ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಆಣೆ— ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿಗಳಿಗೆ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಗ್ನ್ಯೂಚಾಯರ್ ಬಾಳಕಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಸತ್ಯ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಶುಕ್ರವಾರ ತಾರೀಖು ೨೧ ನೇ ಅಕ್ಟೋಬರ ೧೯೨೨ | ಸಂಚಿಕೆ ೩೨೬

ಸುಗ್ಗಿಯ ಕಾಲವು ಮುಗಿಯು ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರರ ಶೇಂಗಾ ಯಂತ್ರಗಳು



ಜಲ್ಲಿಗೆ ಕಸವನ್ನು ತೂರುತ್ತಲೇ ಬಗ್ಗೆ ಪ್ರಖ್ಯಾತಿಯುಳ್ಳ ಇವುಗಳ ಸ್ಟೈನ್ಲೆಸ್ ಉಕ್ಕಿನ ಕಂಬಿಗಳ ಬೋಲ್ಟ್ ಹಿಡಿದಿರುವ ಬುಡಗಳು ಇರುವದರಿಂದ ಯಂತ್ರವು ಹಗುರವಾಗಿ ನಡೆಯುವದಲ್ಲದೆ ಮಿಕ್ಕ ಯಂತ್ರಗಳಿಗಿಂತಲೂ ಇವುಗಳಲ್ಲಿ ಕೆಲಸ ಬೇಗ ಆಗುವ ಪ್ರಮಾಣವು ಒಮ್ಮೆಲೆ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಯೋಗ್ಯವಾದವು.

ಈ ವರ್ಷ ಪ್ರಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ಶಿಕ್ಷಣ ಖಾತೆಯಿಂದ ಮಂಜೂರಾದ

ಕನ್ನಡ ನಿಬಂಧ ರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ.

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟಿದ್ದಲ್ಲದೆ ರಿವ್ಯೂ ಪತ್ರ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ನಮೂದೆಗಳನ್ನು ಒದಗಿಸಿದೆ. ಕನ್ನಡ ಕನಿ. ಟ್ರೇ, ಎಸ್., ಇಯತ್ತೆಗಳಿಗೂ, ಸ್ಕೂ. ಫೈ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವಾಗಿದೆ.

ಪ್ರತಿಗಳು ದೊರೆಯುವ ಸ್ಥಳ:— ೧ ರಾ ರಾ ಬಿ ಜಿ ದಿವೇಕರ, ಮಾರ್ಕೆಟ, ಧಾರವಾಡ

೨ ರಾ. ರಾ. ಎ. ಆರ್. ಏವನ್ನೆಪ್ಪಾ ವಾಸ್ಟೆಲಾನ ಬುಕ್ ಡಿಪೋ, ಹುಬ್ಬಳ್ಳಿ

ಜಾಹೀರಾತು.

—೦—

ಗುರುಶಿದ್ದಪ್ಪಾ ಚನ್ನಪ್ಪಾ ಲಕಮನಹಳ್ಳಿ ಸಾ॥ ಧಾರವಾಡ ಪೈಕಿ ಹಾವೇರಿಪೇಟೆ ನಾನು ಈ ನೋಟೀಸ ಮೂಲಕ ಯಾವತ್ತು ಜನರಿಗೆ ತಿಳಿಸುವದೇನಂದರೆ—

ನನ್ನ ತಂದೆಯಾದ ಚನ್ನಪ್ಪಾ ಕರಬಸಪ್ಪಾ ಲಕಮನಹಳ್ಳಿ ಸಾಕೀನ ಧಾರವಾಡ ಪೈಕಿ ಹಾವೇರಿಪೇಟೆ ಇವರಿಗೆ ವಯೋಮಾನಕ್ಕೆ ತಲೆ ಕೆಟ್ಟು ಹೋಗಿ ತನ್ನ ಆಸ್ತಿಯನ್ನು ವಹಿವಾಟ ಮಾಡಲಿಕ್ಕೆ ವ ತನ್ನ ಹಿತವನ್ನು ಕಾಯಲಿಕ್ಕೆ ಬರುವಂತೆ ಇಲ್ಲಾ ಅಸ್ತು ಆದರ ಧಾರವಾಡ ಡಿಸ್ಟ್ರಿಕ್ಟ ಜಡ್ಜರು ಅಧಿಕಾರವು ಕೊಟ್ಟಿರುತ್ತಾರೆ. ಕಾರಣ ಘರಾಣೇದ ಆಸ್ತಿಯನ್ನು ನಾನು ವಹಿವಾಟು ಮಾಡುತ್ತೇನೆ. ಆದ್ದರಿಂದ ನನ್ನ ತಂದೆಯು ಈವರೆಗೆ ಸಾಲ ತೆಗೆದುಕೊಂಡ ಯಾವತ್ತು ಋಣಕೋ ಜನರು ನನ್ನ ತಂದೆಗೆ ಕೊಡಬೇಕಾದ ಹಣವನ್ನು ಇನ್ನು ಮುಂದೆ ನನಗೆ ವಸೂಲು ಕೊಟ್ಟು ನನ್ನಿಂದ ಪಾವತಿ ತಕ್ಕೊಂಡು ಹೋಗಬೇಕು. ಈ ನೋಟೀಸಿನ ತಾರೀಖಿನಿಂದ ಯಾರೂ ನನ್ನ ತಂದೆಯ ಕೂಡ ಯಾವ ತರದ ವ್ಯವಹಾರವನ್ನು ಮಾಡಬಾರದು. ಇದರ ವಿರುದ್ಧ ಯಾರಾದರೂ ಅವರ ಕೂಡ ವ್ಯವಹಾರ ಮಾಡಿದರೆ ನಮ್ಮ ಮೇಲೆ ವ ನಮ್ಮ ಘರಾಣೇದ ಆಸ್ತಿಯ ಮೇಲೆ ಜವಾಬದಾರಿ ಇರುವದಿಲ್ಲ. ತಿಳಿಯುವದು—

ತಾರೀಖು ೨೦—೧೦—೧೯೨೨ ಇಸ್ವಿ

ಸಹಿ— ಗುರುಶಿದ್ದಪ್ಪಾ ಚನ್ನಪ್ಪಾ ಲಕಮನಹಳ್ಳಿ

———

ಚಂದಾದಾರರಿಗೆ ಸೂಚನೆ.

ಅಕ್ಟೋಬರ ತಿಂಗಳ್ಲಿ [illegible] ಚಂದಾ [illegible] ಸಲ್ಲಿಸುವ [illegible]

[illegible]

ಪತ್ರಿಕೆಯ ಕಾರ್ಯಕರ್ತ.

ವಿಜಯ.

ಧಾರವಾಡ ತಾ-೨೧-೧೦-೨೭ ನೇ ಇಸ್ವಿ

ಹಿಂದೀ ಜನರ ಹೊಟ್ಟೆಗೆ ನೀರು ಹಾಕುವ ಕಾಯದೆ.

ದಕ್ಷಿಣ ಆಫ್ರಿಕೆಯಲ್ಲಿ ಹಿಂದೀ ಜನರನ್ನೇ ಅಲ್ಲೆಯ ಬ್ರಿಟಿಶ ಸಾಮ್ರಾಜ್ಯಾಂತರ್ಗತರಾದ ಬೋವರರೂ ಇಂಗ್ಲಿಷರೂ ಒಂದೇ ವಿಚಾರದಿಂದ ಎಷ್ಟು ಅನ್ಯಾಯದಿಂದ ನಡೆಸಿಕೊಳ್ಳುತ್ತಾರೆಂಬದನ್ನು ಬರೆಯುವದೆಂದರೆ ಹನ್ನೆರಡು ವರ್ಷ ರಾಮಾಯಣ ಕೇಳಿ, ರಾಮನಿಗೆ ಸೀತೆ ಏನಾಗಬೇಕೆಂದು ಪ್ರಶ್ನೆ ಮಾಡುವಂತಾಗುತ್ತದೆ. ಈ ಅನ್ಯಾಯದ ಪರಿಮಾರ್ಜನ ಮಾಡುವದಕ್ಕಾಗಿ ಆಫ್ರಿಕ ಮತ್ತು ಹಿಂದುಸ್ಥಾನ ಸರಕಾರಗಳ ನಡುವೆ ಒಂದು ತರದ ಒಡಂಬಡಿಕೆಯಾಗಿ, ನಾಮದಾರ ಶ್ರೀನಿವಾಸಶಾಸ್ತ್ರಿಯವರು ಹಿಂದುಸ್ಥಾನದ ಪತಿಯಿಂದ ಹಾಯ ಕಮಿಶನರರಾಗಿ ಹೋದರು. ಆದರೆ ಇದು ಅರ್ಧ ದಾರಿಯ ಸಾಹೇಬರು ಇಚ್ಛಿಸ್ಸಕ್ಕೆ ಹೋದಂಥ ಹಾಯ ಕಮಿಶನರ ಅಧಿಕಾರದ ಪಾಸಂಗಕ್ಕೆ ಸಹ ಹತ್ತುವದಿಲ್ಲ. ಶ್ರೀರಂ ಆಳುವರು ಕಸಿದಿರುತ್ತದೆ.

ಇಚ್ಛಿಸ್ಸದಂತೆ ತಮ್ಮ ಎದೆಯು ಮೇಲಲ್ಲ; ಈ ಮಧ್ಯದಲ್ಲಿ ಒಪ್ಪ ಪ್ರವಾಸಿಗನಂತಿರುವ ಈ ಹಾಯ ಕಮಿಶನರ ಸಾಹೇಬರ ದಾಕ್ಷಿಣ್ಯವಿದ್ದರೂ, ಬೋವರ ಮತ್ತು ಇಂಗ್ಲಿಷ ಪ್ರಜರು ಸೇರಿ, ಸಾವಿರಾರು ಹಿಂದೀ ಜನರ ಹೊಟ್ಟೆಯ ಮೇಲೆ ಕಾಲು ತರುವಂಥ ಕಾಯದೆ ಮಾಡಲುದ್ಯುಕ್ತರಾಗಿದ್ದಾರೆ. ಅಲ್ಲಿ ಕರೆಯನ್ನು ಮಾಡುವ ಭಟ್ಟ ಮತ್ತು ಮಾಡುವ ಗರಂಗಗಳಲ್ಲಿ ಆಶಿಯಾ ಖಂಡದ ಯಾವ ದೇಶದವನನ್ನೂ ಕೂಲಿಯಾಗಿ ನೇಮಿಸಿಕೊಳ್ಳಬಾರದೆಂದು ಕಾಯದೆ ಮಾಡಕಲ್ಪವರಿದ್ದಾರೆ. ಇದಕ್ಕೆ ಅಪವಾದ ವೆನಿಸುವಂತೆ ನಾಲ್ವರಿಗಿಂತ ಹೆಚ್ಚು ಆಶಿಯಾಟಿಕರನ್ನು ನೇಮಿಸಿಕೊಳ್ಳಗಂಥವರು ವರ್ಷಕ್ಕೆ ಪ್ರತಿಯೊಬ್ಬನ ದಿನಯಿಂದ ೧೫೦ ಪವನ ಕರ ಕೊಡಬೇಕೆಂದು ಒಂದು ಕಲಮು ಹಾಕಿದ್ದಾರೆ. ಈ ಕಲಮು ಜೇಲಬೆಗಾಗುತ್ತದೆಂದು ತಾನಾಗಿ ವಿದಿತವಾಗುವದು. ಹಿಂದೂ ನವಕರನ ದೆಸೆಯಿಂದ ಯಾವ ಕಷ್ಟ ಭೋಗ್ಯ ರಳಮು ಕೇಳಕೊಳ್ಳಮು.

ಈ ಕಾಯದೆ ಪಾಸಾದ ನಂತರ ಒಂದು ವರ್ಷದಲ್ಲಿ ಎಲ್ಲ ಆಶಿಯಾಟಿಕರನ್ನು ಕೆಲಸದಿಂದ ತೆಗೆದು ಹಾಕತಕ್ಕದ್ದು. ಆಶಿಯಾಟಿಕರಲ್ಲಿ ಹಿಂದೀ ಜನರು ಬರುತ್ತಾರೆ. ಇವರ ಸಂಖ್ಯೆಯು ಮೂರು ಸಾವಿರವುಂಟು. ಒಮ್ಮೆಯಲೆ ಮೂರು ಸಾವಿರ ಜನರನ್ನು ಮನೆಗೆ ಕಳಿಸುವದೆಂದರೆ ಅವರು ತಮ್ಮ ದೇಶದಲ್ಲಿಯೇ ಬೇಡೆಂದು ಹೇಳುವಂತಾಗುತ್ತದೆ. ಅಲ್ಲಿ ಪಾಶ್ಚಿಮಾತ್ಯರಷ್ಟು ಶಿಕ್ಷಿತರಾಗಿ ಅಥವಾ ವೆಚ್ಚ ಮಾಡಿ, ವಾಸವಾಗಲಾರದಂಥವರನ್ನು ಮರಳಿ ಅವರ ದೇಶಕ್ಕೆ ಕಳಿಸಬೇಕೆಂಬ ರಾಜಿಯ ಶರ್ತುಗಳಲ್ಲಿ ಒಂದು ಕರಾರವುಂಟು. ಆ ಕರಾರ ಪ್ರಕಾರ ಮೂರು ಸಾವಿರ ಹಿಂದೀ ಕೂಲಿಕಾರರನ್ನು ಹಿಂದುಸ್ಥಾನಕ್ಕೆ ಅಟ್ಟಿ ಹಾಕುವದಕ್ಕಾಗಿ ಈ ಹಂಚಿಕೆ ಮಾಡಿದ್ದಾರೆ. ಈ ಕಾಯದೆಯ ವಿರುದ್ಧ ಹಿಂದೂ ಜನರು ಆ ರಾಜ್ಯದಲ್ಲಿ ಚಳವಳಿ ನಡೆಸಿದ್ದು, ಇದೇ ವಿಷಯವಾಗಿ ಕಾಂಗ್ರೆಸ ಮತ್ತು ಲಾರ್ಡ ಆಯರ್ವಿನ ಸಾಹೇಬರ ಕಡೆಗೆ ಒಂದು ಡೆಪ್ಯುಟೇಶನ ಕಳಿಸುವರು.

ರಶಿಯಾ ರಾಜ್ಯದಲ್ಲಿ ಮಹೋತ್ಸವ.

—೦—

ರಶಿಯಾದಲ್ಲಿ ಝಾರಶಾಹಿಯು ಅಳಿದು, ಕೂಲಿಕಾರರ ಬೊಲ್ಶೆವಿಕ ಸಾಮ್ರಾಜ್ಯವಾಗಿ ಹತ್ತು ವರ್ಷಗಳಾದವು. ಈ ವರ್ಷದ ಉತ್ಸವವು ಬಹು ಸಮಾರಂಭದಿಂದಾಗುವವು. ಜಗತ್ತಿನಲ್ಲಿ ಬೊಲ್ಶೆವಿಕ ಪಂಥಕ್ಕೆ ಸಹಾನುಭೂತಿಯುಳ್ಳಂಥ ಪ್ರಮುಖರಿಗೆ ಆಮಂತ್ರಣವುಂಟು. ಈ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ.

ಬೊಲ್ಶೆವಿಕ ಕ್ರಾಂತಿಯ ಸಾಮ್ರಾಜ್ಯೋತ್ಸವದ ಪೂರ್ವ ಸಿದ್ಧತೆಯು ಈಗಿನಿಂದಲೇ ನಡೆದಿದೆ. ಲೆನಿನಗ್ರಾಡದಲ್ಲಿ ಕೂಲಿಕಾರರ ಪರಿಷತ್ತು ಕೂಡಿದೆ. ಈ ಪರಿಷತ್ತಿನ ದೆಸೆಯಿಂದ ಆ ಪಟ್ಟಣವೆಲ್ಲ ಶೃಂಗಾರವಾಗಿರುವದು. ಝಾರರು ವಾಸವಾಗಿರುತ್ತಿದ್ದಂಥ ಅರಮನೆಯಲ್ಲಿಯೇ ಸಭೆಯು ಕೂಡಿದೆ. ಸಾವಿರಾರು ಜನರು ಅಲ್ಲಿ ಕೂಡಿರುತ್ತಾರೆ.

ಕೂಲಿಕಾರರು ದಿನಾಲು ಎಂಟು ತಾಸುಗಳ ವರೆಗೆ ದುಡಿಯಬೇಕೆಂದು ಆ ದೇಶದ ಕಾಯದೆಯು ಅದನ್ನು ಏಳು ತಾಸು ಮಾಡಿ, ನಿತ್ಯ ತಾಸಿನ ವಿಶ್ರಾಂತಿ ಕೊಡುವರು. ಆದರೆ ಕೂಲಿಯಲ್ಲಿ ಕಡಿಮೆ ಮಾಡುವದಿಲ್ಲ. ಆ ದೇವು ಯಥಾ ಪ್ರಕಾರ ಇರುವದು. ಇದರ ಹೊರತು ಕೂಲಿಕಾರರ ವಾಸಕ್ಕಾಗಿ ಹೊಸದಾಗಿ ಮನೆಗಳನ್ನು ಕಟ್ಟುವದಕ್ಕಾಗಿ ಏನು ಕೋಟಿ ರೂಬಲಗಳನ್ನು ವೆಚ್ಚ ಮಾಡುವರು; ಮತ್ತು ಒಕ್ಕಲಿಗರ ಮೇಲಿನ ಕರ ಜಕಾತಿಯ ಭಾರವನ್ನೂ ಕಡಿಮೆ ಮಾಡುವರು.

ರಾಯಲ ಕಮೀಶನವು ಹಿಂದುಸ್ಥಾನಕ್ಕೆ ಬರುವ ಪೂರ್ವದಲ್ಲಿ ಹಿಂದೀ ಅಸೇಸರರನ್ನು ನೇಮಿಸಿ ರಾಜಕೀಯ ಹಕ್ಕುಗಳ ಸೂತ್ರಗಳನ್ನು ಗೊತ್ತುಮಾಡಬೇಕೆಂದು ಲಾರ್ಡ ಅಯರ್ವಿನಸಾಹೇಬರ ಮತವಾಗಿದೆ. ಇದೇ ರೀತಿಯಾಗಿ ಪೂರ್ವಾಲೋಚನೆ ಮಾಡಲು ಸಾಹೇಬರವರು ನವ್ಹಂಬರ ತಿಂಗಳ ಆರನೆಯ ತಾರೀಖಿನ ದಿವಸ ಪ್ರಮುಖರಾದ ಹಿಂದೂ, ಮುಸಲಮಾನ, ಪಾರಶೀ ಕ್ರಿಶ್ಚನ್ನ ಮೊದಲಾದವರನ್ನು ಕರೆಸಿಕೊಳ್ಳುವರು. ಕಾಂಗ್ರೆಸದ ಅಧ್ಯಕ್ಷರ ಹೆಸರು ಮೊದಲನೆ ಯಾದಿಯಲ್ಲಿತ್ತು. ಅವರು ಆಮಂತ್ರಣವನ್ನು ಅಂಗೀಕರಿಸಲಾರರೆಂದು ಅವರ ಹೆಸರನ್ನು ತೆಗೆದರು. ಈಗ ಪುನಃ ಅವರನ್ನು ಕರೆಸುವಂತೆ ಗೊತ್ತಾಗಿರುತ್ತದೆ. ಆ ದಿವಸ ದಿಲ್ಲಿಗೆ ಎಷ್ಟೇ ಅನಾನುಕೂಲತೆ ಇದ್ದರೂ, ಅಗತ್ಯವಾಗಿ ಬರಬೇಕೆಂದು ಸಾಹೇಬರು ಇವರಿಗೆ ವಿನಂತಿ ಮಾಡಿಕೊಂಡಿದ್ದಾರೆ. ಈ ಅಸೇಸರರು ಕೂಡಿ, ಆಲೋಚನೆ ಮಾಡಿದ ನಂತರ ಆತರದ ಪೂರ್ವ ಸಿದ್ಧತೆಯು ಯೋಗ್ಯವಾಗಿರುತ್ತದೆಂದೆನಿಸಿದ ಕೂಡಲೆ, ಸಾಹೇಬರು ಆಗಿಂದಾಗ ಅಸೇಸರರ ಹೆಸರುಗಳನ್ನು ಜಾಹೀರ ಮಾಡುವರು. ಇವರು ಆ ಕ್ಷಣವೇ ತಮ್ಮ ಕೆಲಸವನ್ನು ಪ್ರಾರಂಭಿಸತಕ್ಕದ್ದು.

ಮಾಂಟೆಗು, ಚೆಮ್ಸಫರ್ಡಸಾಹೇಬರ ಕಮೀಶನದ ವೇಳೆಯಲ್ಲಿ ಅನೇಕರು ಅನೇಕ ತರದಾಗಿ ಸಾಕ್ಷೀ ನುಡಿದರು. ಎಷ್ಟೋ ಜನರು ಆಗಿನ ಮಟ್ಟಿಗೆ ತಮ್ಮ ಸಂಪಾದಿಸಿದ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು, ಅದರ ಪ್ರತಿನಿಧಿಗಳೆಂದು ಎದ್ದು ತದ್ದ ಸಾಕ್ಷೀ ನುಡಿದರು. ಆ ಅಧಿಕ ಪ್ರಸಂಗವನ್ನು ತಪ್ಪಿಸುವದಕ್ಕಾಗಿ ಅಸೇಸರರ ಯೋಜನೆ ಮಾಡಿದ್ದಾರೆ.

ಇಂಗ್ಲೆಂಡದ ಕೂಲಿಕಾರರ ಅದ್ಭುತ ಮೆರವಣಿಗೆ.

— o —

ವೇಲ್ಸ ದೇಶದ ಕಲ್ಲಿದ್ದಲಿಯ ಕೂಲಿಕಾರರು ಹೊಟ್ಟೆಯ ದೆಸೆಯಿಂದ ಲಕ್ಷ ಸಂಖ್ಯೆಯಿಂದ ಸಂಪು ಮಾಡಿದರು. ಸ್ವತಃ ಮಿ. ಮ್ಯಾಕ್ಡೊನಾಲ್ಡ ಮಿ. ಚಾರ್ಲ್ಸ ವಿಲ್ಸನಸಾಹೇಬರು ಮಧ್ಯಸ್ಥಿ ಮಾಡಿ, ಸಂಪು ಮುರಿದರು. ಮುಂದಿನ ತಿಂಗಳಿಗೆ ಪಗಾರ ದೊರೆಯಬೇಕು. ಹೊಟ್ಟೆ ತುಂಬ ಕೂಲಿ ದೊರೆಯಬೇಕೆಂದು ಕೂಲಿಕಾರರ ಬೇಡಿಕೆ ಇತ್ತು. ಇದನ್ನು ಮಂತ್ರಿಮಂಡಲವು ಒಪ್ಪಿದ್ದರು. ಆದರೆ ಇದರ ನುಡಿಯಂತೆ ನಡೆಯಲಿಲ್ಲ. ಮಾಲಕರು ಉಪವಾಸ ಕೆಡಹಿದರು. ಕೂಲಿಕಾರರು ಅಂಹೊಟ್ಟೆಯಿಂ-

ಭಕ್ತಜನರಿಗೆ ಬಿನ್ನಹವು

ಸವದತ್ತಿ ತಾಲೂಕ ಪೈಕಿ ಮುನವಳ್ಳಿ ಗ್ರಾಮದಲ್ಲಿಯ ಶ್ರೀ. ವೆಂಕಟೇಶದೇವರ ಪ್ರತಿಮೆಯನ್ನು ಕಳ್ಳರು ಒಡೆದುಹಾಕಿದ ಬಗ್ಗೆ ಒಳಗಡೆ ಪ್ರಸಿದ್ಧವಾಗಿದ್ದು ವಾಚಕರಿಗೂ ಗೊತ್ತಿದೆಯಷ್ಟೇ. ಈ ದೇವಸ್ಥಾನವು ಬಹಳ ಪ್ರಾಚೀನವಾದದ್ದು. ಈಗಿನ ಪ್ರತಿಮೆಯು ಬಹಳ ಸುಂದರ ಇತ್ತು. ಇದು ಪ್ರತಿಷ್ಠಾಪನೆಯಾಗಿ ಅಜಮಾಸು ೩೦೦—೪೦೦ ವರ್ಷಗಳಾಗಿರಬಹುದು. ಪ್ರತಿ ವರ್ಷ ನವರಾತ್ರಿಯಲ್ಲಿ ನಿತ್ಯ ಪಾಲಖಿ ಉತ್ಸವ ಮತ್ತು ವಿಜಯದಶಮಿಯ ದಿವಸ ರಥೋತ್ಸವವು ಜರುಗುತ್ತದೆ. ಈ ಉತ್ಸವವನ್ನು ಬಹು ವಿಜೃಂಭಣೆಯಿಂದ ಮಾಡುತ್ತಾರೆ. ಇಂಥ ಮೂರ್ತಿಯನ್ನು ಭಿನ್ನ ಮಾಡಿದ್ದರಿಂದ ಅತಿಶಯ ದುಃಖವಾಗಿರುತ್ತದೆ. ಈ ವರ್ಷ ನವರಾತ್ರಿಯ ಉತ್ಸವವನ್ನು ಉತ್ಸವ ಮೂರ್ತಿಯ ಮೇಲೆಯೇ ಸಾಗಿಸಿರುತ್ತದೆ. ಮುಂದಿನ ವರ್ಷ ನವರಾತ್ರಿಯ ಒಳಗೆ ಹೊಸ ಮೂರ್ತಿಯನ್ನು ಮಾಡಿಸಿ ಪ್ರತಿಷ್ಠಾಪನೆ ಮಾಡಬೇಕೆಂದು ಸಂಕಲ್ಪ ಮಾಡಿದ್ದೇವೆ. ಈ ಕಾರ್ಯಕ್ಕೆ ಒಟ್ಟಿಗೆ ಮೂರು ಸಾವಿರ ರೂಪಾಯಿ ವೆಚ್ಚ ಬರುವದು. ಇಷ್ಟು ಖರ್ಚು ಮುನವಳ್ಳಿಯ ಒಂದು ಊರಿನಿಂದ ನೀಗಿಸಲಾರದ್ದಾಗಿದೆ. ಕಾರಣ ಭಕ್ತಮಹಾಶಯರೆಲ್ಲರೂ ಯಥಾಶಕ್ತಿ ಸ್ವಹಸ್ತ ಸಂಹಸ್ತ ದ್ರವ್ಯದ ಅನುಕೂಲ ಮಾಡಿಕೊಟ್ಟು ಪುಣ್ಯ ಸಂಪಾದನ ಮಾಡಬೇಕಾಗಿ ಅಂತಃಕರಣಪೂರ್ವಕ ಬಿನ್ನವಿಸುತ್ತೇವೆ.

ಶ್ರೀ ವೆಂಕಟೇಶದೇವರ ಭಕ್ತಮಂಡಳ ಮುನವಳ್ಳಿ.

...ರುವರು. ಇದನ್ನು ಪ್ರಚಂಡ ಮೆರವಣಿಗೆಯಿಂದ ಇಂಗ್ಲಿಷ ಜನತೆಯ ಮನ ನಂಬಿಗೆ ಮಾಡಿಕೊಡುವದಕ್ಕಾಗಿ ಇಪ್ಪತ್ತು ಸಾವಿರ ಕೂಲಿಕಾರರು ನವ್ಹಂಬರ ತಿಂಗಳ ಮೊದಲನೆಯ ವಾರದಲ್ಲಿ ಲಂಡನಕ್ಕೆ ಒಯ್ಯುವರು. ಇವರಿಗೆ ಸಂಪೂರ್ಣ ಸಹಾಯ ಮಾಡಿ, ಮೆರವಣಿಗೆಗೆ ಅವಶ್ಯಕ ಸ್ವರೂಪ ಕೊಡುವದಕ್ಕಾಗಿ ಲಂಡನದ ಕೂಲಿಕಾರರೂ ತಕ್ಕ ವ್ಯವಸ್ಥೆಗಳನ್ನು ಮಾಡುತ್ತಿದ್ದಾರೆ.

ಹದಿನಾರು ವರ್ಷಕ್ಕೆ ಹುಡುಗಿಯರ ಮದಿವೆ.
ಇಪ್ಪತ್ತೊಂದು ವರ್ಷಕ್ಕೆ ಹುಡುಗರ ಮದಿವೆ.

—೦—

ಈಗ ಎಲ್ಲೆಲ್ಲಾದರೂ ಹುಡುಗ, ಹುಡುಗಿಯರ ಮದಿವೆಯ ವಯಸ್ಸನ್ನು ಗೊತ್ತು ಮಾಡುವ ಸಿಥಿ ಹೀಗುತ್ತಲಿದೆ. ಇಂಥದೊಂದು ಸಿಥಿಯನ್ನು ಮುಂಬಯಿಯಲ್ಲಿ ಸ್ತ್ರೀಯರೇ ಉಪಸಿದ್ದರು. ಹಿಂದೂ ಜನಾಂಗದಲ್ಲಿ ಬಾಲ ವಿವಾಹವಿರುವದು ಒಂದು ಪಾಪವೆಂಬುದು, ಪ್ರೊಫೆಸರ್ ಗೋಖಲೆ ಇವರು ... ಸ್ತ್ರೀಯರು ಠರಾವು ಮಂಡಿಸಿದರು. ಇದೇ ಪ್ರಕಾರ ... ಸಿಂಧಿಯ ಅದನ್ನು ಕಾಯದೆಯಿಂದ ಬಂದು ಮಾಡಬೇಕೆಂದರು. ಒಳಿತ ಹುಡುಗಿಯ ಮದಿವೆಯ ವಯಸ್ಸು ೧೬ ಮತ್ತು ಹುಡುಗರ ವಯಸ್ಸು ೨೧ ಇರಬೇಕೆಂದು ... ನದಿಂದ ಠರಾವು ಪಾಸ ಮಾಡಿದರು.

...ಸ್ತಾನ ಹಿಂದೂ ಧರ್ಮವು ಮುಸ್ಲಿಂ ರಾಜ ... ಒಂದೇ ... ಧರ್ಮದವರು ಅಲ್ಲಿ ಮುಸಲ್ಮಾನ, ಕ್ರಿಶ್ಚನ್ನರೆಂಬ ಭೇದಭಾವ ಮಾಡಬಾರದೆಂದು ಕೆಮಾಲ ಪಾಶಾ ಜಾಹೀರ ಮಾಡಿದ್ದು, ಆ ಪ್ರಕಾರ ಕಾಯದೆಯಾಗಿರುವದು.

...ರಾಜ್ಯದ ಕೆಲ ಪ್ರದೇಶದಲ್ಲಿ ಶ್ರೀಪ್ಸ ವರ್ಗದ ಹತ್ತಿಯ ಬೆಳೆಯುತ್ತಾರೆ. ಇದರಲ್ಲಿ ಲಕ್ಷ್ಯಕೊಡತಕ್ಕ ಹತ್ತಿಯು ಸೇರುವದರಿಂದ ಈ ಭಾಗದಲ್ಲಿ ಸರಕಾರದ ಅಪ್ಪಣೆಯಿಲ್ಲದೆ ... ದ ಹತ್ತಿ ಬೆಳೆಯಬಾರದೆಂದು ಒಂದು ವರ್ಷದ ಮಟ್ಟಿಗೆ ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ನಾಗಪೂರದಲ್ಲಿ ಡಾಕ್ಟರ ಮುಂಜೆಯವರು ಅಂತ್ಯಜರಿಗೆ ಒಂದು ದೇವಾಲಯದಲ್ಲಿ ಹೋಗಗೊಡಲಿಲ್ಲ. ಆದರೆ ಬೇರೆ ಸನಾತನ ಧರ್ಮಾಭಿಮಾನಿಗಳು ಅಡ್ಡ ಬಂದದ್ದರಿಂದ ಪುನಃ ದೇವಾಲಯದಿಂದ ಬರಬೇಕೆಂದು ಇವರು ಪೋಲೀಸರಿಗೆ ... ಬರೆದುಕೊಂಡರು.

ಧಾರವಾಡ

—(೦)—

ಕಳೆದ ... ದಿವಸಗಳಿಂದ ಮಳೆಯಿಲ್ಲ. ಬೇಸಗಿ ಹಾಕಿ, ಬಿಸಿಲು ಕಾಯುತ್ತಿರುವದು. ಮಳೆಯಿಲ್ಲದ್ದರಿಂದ ರೈತರು ಆಕಾಶದ ಕಡೆಗೆ ನೋಡುತ್ತಿದ್ದಾರೆ.

ಇಲ್ಲಿಯ ... ವ ಪ್ರಸಿದ್ಧಾಂತಕೋತ್ಸವದ ಸಭೆಯ ... ಜನರಲ ಕಮಿಟಿಯು ನಿನ್ನಿನ ದಿವಸ ಕೂಡಿ, ಸಭೆಯು ಸುವ್ಯವಸ್ಥಿತವಾಗಿ ನಡೆಯುವಂತೆ ಕೂಡದಾಗಿ ನಿಯಮಗಳನ್ನು ಮಾಡುವದಕ್ಕಾಗಿ ನಾಲ್ವರದೊಂದು ಕಮಿಟಿ ನೇಮಿಸಲ್ಪಟ್ಟಿತು.

ಶ್ರೀಮದುತ್ತರಾದಿ ಮಠದ ಶ್ರೀಪಾದಂಗಳವರು ನಾಳಿನ ದಿವಸ ಹಾವೇರಿಗೆ ಚಿತ್ತೈಸುವರು.

ಇಲ್ಲಿಯ ಮ್ಯುನಿಸಿಪಾಲಿಟಿಯ ಜನರಲ ಇಲೆಕ್ಷನಕ್ಕೆ ಮುಂದೇ ತಿಂಗಳು ಉಳಿಯಿತು. ಮೆಂಬರರಾಗಬೇಕೆಂಬ ಉಮೇದವಾರರು ಹೋಟರರನ್ನು ಪ್ರಸನ್ನ ಮಾಡಿಕೊಳ್ಳುತ್ತಿದ್ದಾರೆ.

ಇವತ್ತಿನ ದಿವಸ ಸಾಯಂಕಾಲದಲ್ಲಿ ಮುನ್ಸಿಪಲ್ಟಿಯಲ್ಲಿ ಸ್ಥಾಪಿಸಲ್ಪಟ್ಟ ಸಂಗೀತ ಪಾಠಶಾಲೆಯ ವಾರ್ಷಿಕ ಸಮಾರಂಭವಿರುತ್ತದೆ.

ಇಲ್ಲಿಯ ಮ್ಯುನಿಸಿಪಾಲಿಟಿಯಲ್ಲಾದ ಹಣದ ಅಪರಾತಫರದಲ್ಲಿ ... ಆಪಾದಿತರಾಗಿದ್ದ ಮಿ. ಬಸನಗೌಡ ... ಸೇಕ್ರೆಟರಿ ಮಿ. ಗಿಲಗಂಚಿ ಇವರ ಮೇಲಿನ ಕ. ಡಿ. ಕಲೆಕ್ಟರರ ಕೋರ್ಟಿನಲ್ಲಿ ... ಯಾಗಿದೆ. ಮಿ. ಬಸನಗೌಡರ ಜಾಮೀನ ... ಪ್ರಕರಣದಲ್ಲಿ ... ಮಿ. ಗಿಲಗಂಚಿಯವರು ಎರಡು ಸಾವಿರದ ಜಾಮೀನ ನೀಡಿದ್ದಾರೆ.

ಇಂದಿನಿಂದ ... ಪೊಲೀಸರು ... ಕೊಂಡ ಆರೋಪದಿಂದ ೭ ಜನ ... ಇಬ್ಬರು ಹಿಂದೂ ಜನರನ್ನು ಹಿಡಿದಿದ್ದಾರೆ.

ದಿ ಸದರ್ನ ಮರಾಠಾ ಅರ್ಬನ ಕೋ. ಆ. ಕ್ರೆ. ಬ್ಯಾಂಕ ಲಿಮಿಟೆಡ್ ಧಾರವಾಡ.

ಶ್ರೀ ಮಹಾಲಕ್ಷ್ಮೀ ಪೂಜೆಯ ಆಮಂತ್ರಣ.

—೦—

ಈ ಬ್ಯಾಂಕಿನ ಸಮಸ್ತ ಶೇರ ಹೋಲ್ಡರರು, ಡಿಪಾಜಿಟರರು ಮತ್ತು ಇದರಲ್ಲಿ ವ್ಯವಹಾರ ಮಾಡುವ ಗೃಹಸ್ಥರು ಮತ್ತು ... ಶ್ರೀ ಮಹಾಲಕ್ಷ್ಮೀಯ ಪೂಜೆಯ ಆಮಂತ್ರಣ ... ಕೊಡಲ್ಪಟ್ಟಿದೆ. ಯಾರಿಗಾದರೂ ... ಇದರಲ್ಲಿ ಅವರು ... ಬಂದು, ತಾಂಬೂಲ ಪ್ರಸಾದ ಸ್ವೀಕರಿಸಬೇಕೆಂಬ ವಿನಂತಿಯು.

ತಮ್ಮ ...
ಡ್ಲಿ ಎಸ್. ಜೋಗ.
ಜಿ. ಎ. ಎಲ್.ಎಲ್. ಬಿ. ...
ಚೇರ ಮನ್.

ತಾ॥ ೨೭-೧೦-೩೭

ಮತ್ತು ಟರ್ಮಿನಲ್ ಟ್ಯಾಕ್ಸ ಶೆಡ್ಯೂಲದಲ್ಲಿ ಕೆಲವು ಹೆಚ್ಚು ಕಡಿಮೆಗಳನ್ನು ಸೂಚಿಸಿ ಕಳುಹಿಸಿದ ಸಬ್ ಕಮಿಟಿಯವರ ರಿಪೋರ್ಟಿನ ಬಗ್ಗೆ ವಿಚಾರ ಮಾಡುವದು.

೮ ಕೆಳಗೆ ಕಾಣಿಸಿದ ಕಾಯಂ ಮತ್ತು ಹಂಗಾಮಿ ನೇಮಣೂಕಿಗಳನ್ನು ಮಾಡುವ ಬಗ್ಗೆ ಚೀಫ ಅಫೀಸರರ ರಿಪೋರ್ಟ ವಿಚಾರ ಮಾಡುವದು.

(೧) ಕಾಯಂ ರಿಕಾರ್ಡ ಮತ್ತು ಸ್ಟೋರ್ ಕೀಪರ

(೨) ಸ್ಟೇಶನ್ ನಾಕೆಗೆ ಒಬ್ಬ ಹೆಚ್ಚಿಗೆ ಹಂಗಾಮಿ ಕಾರಕೂನ

(೩) ಒಬ್ಬ ಹೆಚ್ಚಿಗೆ ಫಿಟರನನ್ನು ನೇಮಿಸುವದು

(೪) ಮನೆಪಟ್ಟಿ ಮುಂತಾದ ಕರಗಳ ವಸೂಲಿ ಕೆಲಸಕ್ಕೆ ೪ ಹಂಗಾಮಿ ಕಾರಕೂನರನ್ನು ೪ ಹಂಗಾಮಿ ಶಿಪಾಯರನ್ನು ನೇಮಿಸುವದು.

(೫) ಒಬ್ಬ ಕಾಯಂ ಸಬ್ ಓವ್ಹರಶೀಯರನನ್ನು ನೇಮಿಸುವದು.

೯ ಬೆಳಗಾವಿಯ ಇಂಡಿಯನ್ ಟೆರಿಟೋರಿಯಲ್ ಫೋರ್ಸ ಕ್ಯಾಂಪಿಗೆ ಕಳಿಯಲಿಕ್ಕೆ ಹೋಗಲಿಕ್ಕೆ ಪೂರ್ಣ ಪಗಾರದ ರಜೆಯ ಮೇಲೆ ಪರವಾನಗಿ ಕೊಡುವ ಬಗ್ಗೆ ಮಿ. ಮಾಳಗಿ ಟಾಯಿಪಿಸ್ಟ ಇವರ ಅರ್ಜಿಯ ಬಗ್ಗೆ ವಿಚಾರ ಮಾಡುವದು.

೧೦ ಧಾರವಾಡ ಮುನಿಸಿಪಲ್ ಇಲೇಕ್ಶನ್ ರೂಲ ೧೩ (೨) ಪ್ರಕಾರ ಇಲೆಕ್ಶನ ಬಗ್ಗೆ ತಾರೀಖು ನೇಮಿಸಿ ಮುನಿಸಿಪಾಲಿಟಿ ಹದ್ದಿನೊಳಗೆ ಲೇಖಿ ನೋಟೀಸುಗಳನ್ನು ಪ್ರಸಿದ್ಧ ಮಾಡತಕ್ಕ ಮುಖ್ಯ ಸ್ಥಳಗಳನ್ನು ಗೊತ್ತುಪಡಿಸಿ ಮಂಜೂರ ಮಾಡುವದು.

೧೧ ಕಮಿಟಿ ಕಾಲಕ್ಕೆ ಮೆ. ಪ್ರಸಿಡೆಂಟ ಸಾಹೇಬರು ತರಬಹುದಾದ ಬೇರೆ ಏನಾದರೂ ವಿಷಯಗಳಿದ್ದರೆ ವಿಚಾರ ಮಾಡುವದು.

Sd/- A. F. I. PATHAN

ಪ್ರೆಸಿಡೆಂಟ ಧಾರವಾಡ ಮ್ಯುನಸಿಪಲ್ ಬರೋ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ಹೆಚ್ಚಿನ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಹೊಸ ನಮೂನೆಯ ಮಾಲು ಕಡಿಮೆ ಮಾಡಿದ ದರ ಒಂದೇ ಸಾರೆ.

ಗ್ರಾಹಕರಿಗೆ ಅಪೂರ್ವ ಸಂಧಿ

ಸ್ಪೇಶಲ ದೀಪಾವಳಿಯ ಸಲುವಾಗಿ

ಅತ್ಯುತ್ತಮ ಜರದ ಟೊಪ್ಪಿಗೆಗಳು ರೇಶಿಮೆ ವ ಉಣ್ಣೆಯ ಸಣ್ಣ ಹುಡುಗರ ಪ್ಯಾಕೆಟೀಟ್ ಸೂಟುಗಳು ಜರದ ಪೀತಾಂಬರ ಪತ್ತಲಗಳು ರೇಶಿಮೆಯ ಶೀರೆ, ಖಣಗಳು ದೀಪಾವಳಿಯ ವಾರ್ಗದಲ್ಲಿ ನಮ್ಮ ಅಂಗಡಿಯಲ್ಲಿ ಸೋಯಿ ದರದಿಂದ ಮಾರಲಿಕ್ಕೆ ದೊರೆಯುವವು. ಈ ಸುಸಂಧಿಯನ್ನು ಯಾರೂ ಕಳೆದುಕೊಳ್ಳಬಾರದು.

ಮಾರ್ಕೇಟರೋಡ ಧಾರವಾಡ ತಾ|| ೨೦—೧೦—೨೭ } ಕಡಕೋಳ ಜಮಖಂಡಿ ಅ್ಯಂಡ ಕಂಪನಿ.

ಧಾರವಾಡ ಕಾಂಗ್ರೆಸ ಕಮಿಟಿಯ ಸಭೆಗಳು.

ಮೊದಲೇ ಠರಾಯಿಸಿದ ಪ್ರಕಾರ ಧಾರವಾಡ ತಾಲೂಕ ಮತ್ತು ಜಿಲ್ಹಾ ಕಾಂಗ್ರೆಸ ಕಮಿಟಿಗಳ ವಾರ್ಷಿಕ ಸಾಧಾರಣ ಸಭೆಗಳು ತಾರೀಖು ೩೦-೧೦-೨೭ನೇ ಇಸ್ವಿ ರವಿವಾರ ದಿವಸ ಮಧ್ಯಾಹ್ನ ೩ ಮತ್ತು ೪ ಘಂಟೆಗೆ ಕ್ರಮವಾಗಿ ಇರುತ್ತವೆ. ತಾರೀಖು ೩೦-೧೦-೨೭ರ ವರೆಗೆ ೪ ಆಣೆ ಕೊಟ್ಟು ಆದ ಕಾಂಗ್ರೆಸ ಮೆಂಬರರೆಲ್ಲರೂ ಅವಶ್ಯ ಸಭೆಗೆ ಬರಬೇಕಾಗಿ ಪ್ರಾರ್ಥನೆ.

ತಾರೀಖು ೨೦-೧೦-೨೭

ಗೋವಿಂದಾಚಾರ್ಯ ಗುತ್ತಲ

ಬಾಳೂರಾವ ಪಟವರ್ಧನ

ತಾಲೂಕ ಮತ್ತು ಜಿ. ಕಾ. ಕ. ಧಾ.

ಜಾಹೀರ ನೋಟೀಸು.

ಕೆಳಗೆ ಸಹಿ ಮಾಡುವವರು ಈ ಜಾಹೀರ ನೋಟೀಸಿನಿಂದ ಯಾವತ್ತೂ ಜನರಿಗೆ ತಿಳಿಯಪಡಿಸುವದೇನಂದರೆ—

ನನ್ನ ಹೆಂಡತಿಯಾದ ಯಲ್ಲು ಕೋಂ ರಾಮಚಂದ್ರಪ್ಪ ಜಾಧವ ಇವಳು ಈಗ ಅಜಮಾಸ ೧೨ ವರ್ಷದ ಹಿಂದೆ ನನ್ನ ಕೂಡ ಪ್ರಪಂಚ ಮಾಡುವದನ್ನು ಬಿಟ್ಟು, ಎಲ್ಲಿಯೋ ಫರಾರಿಯಾಗಿರುತ್ತಾಳೆ. ಅನಂತರ ಆಕೆಯದು ನನ್ನದು ಯಾವ ತರದ ಸಂಬಂಧವೇನೂ ಉಳಿದಿಲ್ಲ. ಕಾರಣ ಈ ಜಾಹೀರ ನೋಟೀಸಿನಿಂದ ಪ್ರಕಟಮಾಡುವದೇನಂದರೆ ಆಕೆಯು ಹೋದ ನಂತರ ಎಲಿ ಕಡಿಗೆ ಆಕೆಯು ಎರಡನೇ ಕಡೆಗೆ ಪ್ರಪಂಚ ಮಾಡತಾಯಿತಾಳೆ ಅಂತಾ ಕೇಳಿಕೆಯಿಲ್ಲದೆ ಕಾರಣ ಈವರೆಗಾ ಆಕೆಗೆ ಸಂತತಿಯಾಗಿದ್ದರೆ ಅಥವಾ ಇನ್ನು ಮುಂದಾದರೆ ಆ ಮುಂದೆ ಆಕೆಯದು ವ ಆಕೆಯ ಸಂತತಿಯದು ನನ್ನ ಸ್ಥಾವರ ಜಂಗಮ ಇಸ್ಟೇಟಿಗೆ ಯಾವತರದಿಂದಲೂ ಮಾಲಿಕಿಯಾಗ ಬಾರದು ತಿಳಿಯುವದು.

ತಾ|| ೨೫—೧೦—೨೭ ನೇ ಇಸ್ವಿ.

ಸಹಿ ರಾಮಚಂದ್ರ ಫಕೀರಪ್ಪಾ ಜಾಧವ

ನೋಟೀಸಿನ ಉತ್ತರವು

ರಾ|| ರಾ|| ಭೀಮಪ್ಪಾ ಪುರದಪ್ಪಾ ನಲ್ಲೂರ ಸಾ|| ಕೊತಬಾಳ ತಾಲ್ಲೂಕ ರೋಣ ಇವರಿಗೆ—

ಕೆಳಗೆ ಸಹಿ ಮಾಡಿದವಳಿಂದ ತಿಳಿಸುವದೇನಂದರೆ— ನೀನು ನನ್ನ ಲಗ್ನದ ಗಂಡನಿದ್ದು ನನಗೆ ನೀತಿ ಜನರ ಛೂಲತಾಪದಿಂದ ಧಾರವಾಡ ವಿಜಯ ಪತ್ರದೀಂದ ಅಬೇ ಸುಳ್ಳ ನೋಟೀಸು ಕೊಟ್ಟಿದ್ದು ತಿಳಿಯಿತು ಆದರೆ ನಾನು ನಿಮ್ಮಲ್ಲಿಯೇ ಇದ್ದು ಒಳ್ಳೆ ರೀತಿಯಿಂದ ಪ್ರಪಂಚ ಮಾಡತಾ ಬರತಿನಷ್ಟೆ ನಂಬು ನಿಮ್ಮಲ್ಲಿ ಬೇಸಾವರಗಿಲ್ಲಾ. ನೀನು ನನ್ನ ತಾಯಿ ತಮ್ಮನಿದ್ದು ಚಿಕ್ಕಂದಿನಿಂದ ನಿನ್ನ ಕರದಿಯು ತೀರಿಕೊಂಡಿದಕ್ಕೆ ನನ್ನ ತಾಯಿನೇ ನಿನ್ನನ್ನು ರಕ್ಷಣಮಾಡಿ ತೆರವು ವಗ್ಯೆರೆ ಏನೂ ತೊಗೊಳ್ಳದೇ ವ ದಾಗಿನೆ ವಗ್ಯೆರೆ ಯಿಡಕಿಕೊಳ್ಳದೇ ಅಕಾರಣದಿಂದ ತಾನೆ ಖರ್ಚುಮಾಡಿ ಲಗ್ನಮಾಡಿ ಕೊಟ್ಟಿರತಾಳೆ ಹೀಗಿದ್ದು ನಿನ್ನ ರೂಪಾಯಿ ವ ದಾಗಿನೆ ವೈದಿಲ್ಲಾ ಇಷ್ಟು ಮಾಲು ಇಡೋ ತಾಬಿತವಾನು ಅಲ್ಲಾ ವ ಮನಿ ಬಿಟ್ಟು ನಾನು ಹೋಗೆ ಇಲ್ಲಾ ನನ್ನ ತಮ್ಮಗೆ ನನ್ನ ಹೊಟ್ಟಿದು ನಿನ್ನ ಮಗಳು ಕೊಡೊದು ಠರಾಯಿತ ಮೂರಫತ ಠರವ್ಹತೊಗೊಂಡು ನೀನು ಗೊತ್ತುಮಾಡಿದ್ದು ಅರಬುಮನುಷ್ಯನಿದ್ದು ೨ ನೆ ಜನರ ಛೂಲತಾಪದಿಂದಾ ಈಗ ಹುಡಿಗಿ ಕೊಡೊದಕ್ಕೆ ಇನಕಾರ ಮಾಡಿದಕ್ಕೆ ನನ್ನ ತಾಯಿಗೆ ನಿನಗೆ ತಕರಾರು ಬಂದು ಮತಲಬಿಯಿಂದ ನನ್ನ ಮೇಲೆ ಸುಳ್ಳ ನೋಟೀಸ ಕೊಟ್ಟಿರತಿ ನೋಟೀಸಿನ ಬಗ್ಗೆ ಮಾತೇ ನಡೆದಿಲ್ಲಾ ನೋಟೀಸ ಕೊಡಲಿಕ್ಕೆ ಕಾರಣವೂ ಇಲ್ಲಾ ಆದರಿಂದ ನೋಟೀಸಿಗೆ ಉತ್ತರ ಕೊಡೊಭಾಗ ಬಿತ್ತು ತಿಳಿಯೋದು.

ತಾ|| ೨೦-೧೦-೨೭ ಇಸ್ವಿ.

ಈ ಎಡಗೈ ಹೆಬ್ಬೆಟ್ಟಿನ ಮುದ್ರೆ ಹನಮವ್ವಾ ಕೋಂ ಭೀಮಪ್ಪಾ ನಲ್ಲೂರ ಸಾ|| ಕೊತಬಾಳ ತಾಲ್ಲೂಕ ರೋಣ ಇವಳದು ಅದೆ

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 14

[illegible] | ಬಿಲಿ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮: ಧಾರವಾಡ ಶನಿವಾರ ತಾರೀಖು ೨೯ ನೇ ಅಕ್ಟೋಬರ ೧೯೨೭ (ಸಂಚಿಕೆ ೩೩೦

ಹಂಗಾಮು ಮುಗಿಯ ಬಂದಿತು ತ್ವರೆ ಮಾಡಿರಿ.
ಕಿರ್ಲೋಸ್ಕರ ಶೇಂಗಾ ಯಂತ್ರಗಳು



ಬನ್ನಾಗಿ ಕೆಲಸವನ್ನು ಕೊಡುತ್ತವೆಂಬ ಬಗ್ಗೆ ಪ್ರಖ್ಯಾತಿಯುಂಟು. ಇವುಗಳ ವೈಶಿಷ್ಟ್ಯವೇನೆಂದರೆ ಉತ್ತಮ ಇಂಬುಗಳ ಬಾಲಬೇರಿಂಗುಗಳು ಇರುವದರಿಂದ ಯಂತ್ರವು ಅತ್ಯಂತ ಹಗುರಾಗಿ ನಡೆಯುವದಲ್ಲದೆ ಬೇರೆ ಯಂತ್ರಗಳಿಗಿಂತಲೂ ಇವುಗಳಲ್ಲಿ ಕಾಳು ಒಡೆಯುವ ಪ್ರಮಾಣವು ಬಹಳವಾಗಿ ಕಡಿಮೆ ಇರುತ್ತದೆ. ಇದರಿಂದ ಬಿತ್ತುವ ಬೀಜದ ಕಾಳುಗಳನ್ನು ಸಂಗ್ರಹಿಸುವವರಿಗೂ ಎಣ್ಣೆಯನ್ನು ತೆಗೆಯುವವರಿಗೂ ನಮ್ಮ ಯಂತ್ರಗಳು ಮೇಲಾದದ್ದು.

ಈ ವರ್ಷ ಧಾರಣೆ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಡಿಪಾರ್ಟಮೆಂಟಿನಿಂದ ಮಂಜೂರಾದ

ಕನ್ನಡ ನಿಬಂಧರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ.

ಈ ಹೊಸ ಆವೃತ್ತಿಯಲ್ಲಿ ನಿಬಂಧದ ಮೂರೂ ಪ್ರಕಾರಗಳ ವಿಷಯಗಳು ಬರೆಯಲ್ಪಟ್ಟದ್ದಲ್ಲದೆ ರಿಪೋರ್ಟು- ಅರ್ಜಿ ಮುಂತಾದ ಪತ್ರವ್ಯವಹಾರದ ಕೆಲವು ಮಹತ್ವದ ಮಾದರಿಗಳನ್ನು ಒದಗಿಸಿ ತೋರಿಸಿದೆ. ಕನ್ನಡ ೫ನೇ, ೬ನೇ, ೭ನೇ, ಇಯತ್ತೆಗಳಿಗೂ, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ ಬಹಳೇ ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ— ೧ ರಾ. ರಾ. ಬಿ. ಜಿ. ದಿವೇಕರ, ಮಾಳಗುಡ್ಡ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಪ್ಪಾ ಸಾಂಗಲೀಕರ ಬುಕ್ ಡಿಪೋ ಹುಬ್ಬಳ್ಳಿ

WANTED.

Wanted Candidates for Telegraph and Station Master's Courses. Railway Fare GRANTED Boarding Seat FREE Prospectus on 2 annas stamp,- Presidency Telegaph College, Royapettah Madras.

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ದಿವಾಣದ ಬಡ್ಡಿ ಕೊಡಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ಸಾದಕ್ಕೆ ತಿಂಗಳಿಗೆ ಕಮ್ಮಿ ದರ ಆಗಿಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಅಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಗಲು ಆರು ಲಕ್ಷದ ಮೇಲುಂಟು. ಬೇರೆ ಕಂಪನಿ ಸಂಘಗಳಿಗೆ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರಗಳು [illegible] ಬಡ್ಡಿಗಳನ್ನು ಹಣವನ್ನಾಗಿ ಬಹಳ ದೊರೆಯುವವು.

ವಿಶೇಷ ಸಂಗತಿಗಳನ್ನು ಸಿಂಗೆ ಖಟೀ ವಿಚಾರಿಸಿ ತಿಳಕೊಳ್ಳಬೇಕು.

ಮಾಧ್ವಪರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೨೯-೧೦-೨೭ ನೇ ಇಸ್ವಿ

ಕಾಬೂಲದ ಮೇಲೆ ರಶಿಯರ ಸುದರ್ಶನ ಚಕ್ರ.

ಹಿಂದುಸ್ಥಾನದ ಮೇಲೆ ರಶಿಯರ ಕಣ್ಣು.

—o—

ಕಾಬೂಲದ ಅಮೀರಸಾಹೇಬರು ಡಿಸೆಂಬರ ತಿಂಗಳಲ್ಲಿ ವಿಲಾಯತಿಯ ಯಾತ್ರೆಗೆ ಹೊರಡುವರು ಜರ್ಮನಿ, ಇಟಲಿ, ಫ್ರಾನ್ಸ, ಇಂಗ್ಲಂಡ, ಅಂಗೋರಾ ಮತ್ತು ರಶಿಯಾ ಸರಕಾರಗಳು ಇವರಿಗೆ ಆಮಂತ್ರಣ ಕಳಿಸಿವೆ. ಮತ್ತು ಇವು ಇವರನ್ನು ಸತ್ಕರಿಸುವವು. ಇಂಥ ಸಮಯದಲ್ಲಿ ರಶಿಯವು ಕಾಬೂಲದ ಸುತ್ತಲು ಸುದರ್ಶನ ಚಕ್ರದಂತಿದ್ದುಕೊಂಡು, ಅಲ್ಲಿ ಅನ್ಯರ ಪ್ರವೇಶವಾಗದಂತೆ ಭೃಷ್ಣ ಕಾರಸ್ಥಾನ ಮಾಡಿರುತ್ತದೆಂದು ವಿಲಾಯತಿಯಿಂದ ತಾರಿನ ವರ್ತಮಾನಗಳು ಬಂದಿರುತ್ತವೆ.

ಝಾರಶಾಹಿಯಿಂದ ಕಾಬೂಲ ಮತ್ತು ಹಿಂದುಸ್ಥಾನದ ಮೇಲೆ ರಶಿಯರ ಕಣ್ಣುಂಟು. ಝಾರಶಾಹಿ ಹೋದರೂ, ಬೋಲ್ಸೆವಿಕಶಾಹಿಯು ಈ ವಿಚಾರ ಬಿಟ್ಟಿಲ್ಲ. ಬೋಲ್ಸೆವಿಕರಿಗೆ ಹಿಂದುಸ್ಥಾನದಲ್ಲಿ ದೊರೆತನ ಮಾಡಬೇಕೆಂಬ ಆಶೆಯಿಲ್ಲ. ತಮ್ಮ ತತ್ವಗಳ ಪ್ರಸಾರವಾಗಿ, ಇಂಗ್ಲಿಷ ಪಾತಶಾಹಿಯು ಉಚ್ಚಾಟನೆಯಾಗಬೇಕೆಂದಿರುತ್ತದೆ. ಹೀಗಾಗಿ ರಶಿಯರ ಭಯವು ಇಂಗ್ಲಂಡಕ್ಕೆ ಬಹುವಾಗಿ ಉಂಟು. ಇವರು ಹುಟ್ಟು ವೈರಿಯಾಗಿರುತ್ತಾರೆಂದು ಇಂಗ್ಲಿಷರ ಭಾವನೆಯು. ಇದಕ್ಕೆ ಏನು ಪುಟ ಹಾಕುವಂಥ ಹಿಂದೀ ಜನರೂ ಇದ್ದಾರೆ. ಬರದ್ವಾನದ ಮಹಾರಾಜಾಧಿರಾಜರು ಈ ದೇಶದಲ್ಲಿ ಬೋಲ್ಸೆವಿಕ ಭೂತವು ಹೊಕ್ಕಿತಲೂ, ಅರಾಜಕರಿಗೆ ರಶಿಯಾದಿಂದ ದ್ರವ್ಯಸಹಾಯ ದೊರೆಯುತ್ತದೆಂದೂ ಹೇಳುತ್ತಿದ್ದಾರೆ.

ರಶಿಯರು ಹಳೇ ಪದ್ಧತಿಯಿಂದ ದಂಡು ಕಳಿಸಿಕೊಂಡು, ಸರಹದ್ದಿನ ಮೇಲೆ ಸಾಹಸಾತವಾಗಿ ಬರುವ ಅಗತ್ಯವಿಲ್ಲ. ಆಧುನಿಕ ಸುಧಾರಣೆಯ ಪ್ರಕಾರ ವಿಮಾನಗಳಿಂದ ಬರುವರು. ಅಲ್ಲಲ್ಲಿ ವಿಮಾನಗಳ ಸ್ಟೇಶನಗಳನ್ನು ಕಟ್ಟಿದ್ದಾರೆ. ಇವುಗಳ ಕಾರಂಗಿ-ವಾಸ್ಕೀ, ಪಾಲ್ಟಾವ, ಟಿಪಲಿಸ, ಬಕೂಲು, ಕ್ರಾಸನೋತಾಕ, ಬಖಾರಾ ತಾಸಖಂದ ಕಾಬೂಲವೇ ಬದಾಗಿ ಮಾರುತಿಯ ಪುಚ್ಛದಂಥ ಹೆಸರು ಕೊಟ್ಟಿದ್ದಾರೆ.

ಕಾಬೂಲದಲ್ಲಿರುವ ರಶಿಯರ ವಿಮಾನ ಖಾತೆ ಮಾತ್ರವಲ್ಲ; ಕಾಬೂಲದ ವಿಮಾನಗಳಲ್ಲಿಯೂ ರಶಿಯರೇ ಕಾರ್ಯದಾರರಾಗಿದ್ದಾರೆ. ಈಗ ಕಾಬೂಲವೆಂದರೆ- ಹಿಂದುಸ್ಥಾನದ ಅಗಸೀ ಬಾಗಿಲವಾಗಿದೆ ಪೇಶಾವರ ಲಂಡಿಕೋಟಲಗಳು ಹಳೇ ಕಾಲದ ಬಾಗಿಲಗಳಾದವು ವಿಮಾನಗಳಲ್ಲಿ ಕೂತು ಎರಡೇ ತಾಸುಗಳಲ್ಲಿ ರಶಿಯರು ಹಿಂದುಸ್ಥಾನದ ಸರಹದ್ದಿಗೆ ಬಂದು, ಇಂಗ್ಲೀಷ ಛಾವಣಿಯ ಮೇಲೆ ಸಾವಿರ ಸಂಖ್ಯೆಯಿಂದ ಬಾಂಬುಗಳನ್ನು ಚಲ್ಲಿ, ತಿರಿಗಿ ಸ್ವಸ್ಥಾನಕ್ಕೆ ಹೋಗಬಹುದಾಗಿದೆ. ಈ ಪ್ರಕಾರ ಕಾಬೂಲದಲ್ಲಿ ಬೆಳೆದಿರುವ ರಶಿಯರ ವರ್ಚಸ್ಸನ್ನು ಕಂಡು, ಇಂಗ್ಲೀಷ ಪತ್ರಗಳ ಹೊಟ್ಟೆಯಲ್ಲಿ ಬೆಂಕಿಬಿದ್ದಂತಾಗಿದೆ. ರಶಿಯರ ಮಹತ್ವವನ್ನು ಕಡಿಮೆ ಮಾಡುವದಕ್ಕಾಗಿ ಇವು ನೀರಿಗೆಟ್ಟ ಸುದ್ದಿಯನ್ನು ಹಬ್ಬಿಸಿವೆ. ಅದೇನಂದರೆ-

“ರಶಿಯರ ಉದ್ದೇಶದ ವಿಷಯವಾಗಿ ಅಮೀರರಿಗೆ ಸಂಶಯ ಬಂದು, ಈ ವರ್ಷ ಕೊನೆಯೊಳಗಾಗಿ ತಮ್ಮ ದೇಶದಿಂದ ಹೊರಬಿದ್ದು ಹೋಗಲಿಕ್ಕೆ ಅವರಿಗೆ ಹೇಳಿದ್ದಾರೆ. ಅಮೀರರಿಗೆ ಕೈ ಕೊಡಬೇಕೆಂದು ರಶಿಯರು ರಶಿಯಾ ಮತ್ತು ಕಾಬೂಲದ ನಡುವಿರುವ ದೇಶಗಳಿಗೆ ಸ್ವಯಂ ನಿರ್ಣಯ ತತ್ವದ ಗುರುಮಂತ್ರವನ್ನು ಹೇಳುತ್ತಲಿದ್ದಾರೆ. ಅಮೀರರು ಇಂಗ್ಲಂಡದ ಮಿತ್ರರಿದ್ದಾರೆ ಅಂದರೆ ಸಾಮ್ರಾಜ್ಯವಾದಿಗಳಾಗಿರುತ್ತಾರೆ. ಕಾರಣ ಅಮೀರರ ಸಂಪರ್ಕ ತಪ್ಪಿಸಿಕೊಳ್ಳಲೆಂದು ಜನರ ಮನಸ್ಸು ಕೆಡಿಸುತ್ತಿದ್ದಾರೆ. ಮತ್ತು ಮುಂದೆ ದಂಡು ತರುವದಕ್ಕೆ ಸುಲಭವಾಗಬೇಕೆಂದು ಕಾಬೂಲದ ಸರಹದ್ದಿನ ತನಕ ರೇಲ್ವೆ ಹಾಕುತ್ತಿದ್ದಾರೆ”

ರಶಿಯರನ್ನು ಹೊರಗೆ ಹಾಕುವಂಥ ಅಮೀರರಿಗೆ ರಶಿಯಾ ಸರಕಾರದವರು ಆಮಂತ್ರಣ ಕೊಡುತ್ತಿದ್ದಿಲ್ಲ. ಮತ್ತು ಅಮೀರರಾದರೂ, ತಮ್ಮ ಪ್ರವಾಸದ ಕಾರ್ಯಕ್ರಮದಲ್ಲಿ ಕಡೆಯ ದೇಶವನ್ನು ರಶಿಯಾ ಮಾಡಿ, ಆ ದೇಶದ ಮಾರ್ಗವಾಗಿಯೇ ತಮ್ಮ ದೇಶಕ್ಕೆ ಹೋಗಲಿರಾರು ರಚನೆ ಮಾಡಬೇಕು ಕೆಲ ಪತ್ರಾದರೂ, ಸಟಿಗಳು ಧಿಟವೆನಿಸುವಂತಿರಬೇಕು.

ಪೂರ್ವ ಚಾಲುಕ್ಯರಾಜ್ಯ ಸ್ಥಾಪನೆಯ ಮೊದಲನೆಯ ಅರಸನಾದ ವಿಷ್ಣುವರ್ಧನ ಹಾಗೂ ಪಶ್ಚಿಮ ಚಾಲುಕ್ಯ ರಾಜ್ಯದ ವಿಕ್ರಮಾದಿತ್ಯನ ಕಾಲದ ನಾಣ್ಯಗಳು ನಿಜಾಮ ರಾಜ್ಯಕ್ಕೆ ಸೇರಿದ ನೆಲಗೊಂಡದಲ್ಲಿ ದೊರೆತಿವೆ ಇವು ೧೨೦೦ ಮತ್ತು ೯೦೦ 'ವರ್ಷಗಳ ಹಿಂದಿನವಾಗಿವೆ.

ಧಾರವಾಡಕ್ಕೆ ನಾಮದಾರ ಗವ್ಹರ್ನರಸಾಹೇಬರು ಬಂದಾಗ ಹಿರಿದಿನ ಕುಸ್ತಿಯು.

—o—

ಗೆದ್ದವನಿಗೂ ಇನಾಮು ಬಿದ್ದವನಿಗೂ ಇನಾಮು.

—o—

ಬರುವ ಶುಕ್ರವಾರದ ದಿವಸ ಸಾಯಂಕಾಲದಲ್ಲಿ ನಾಮದಾರ ಗವ್ಹರ್ನರಸಾಹೇಬರ ಮನರಂಜನೆಗಾಗಿ ಹಿರಿದಿನ ಕುಸ್ತಿಯಾಗುವದು. ಎಲ್ಲಕ್ಕೂ ಮೊದಲು ಜಿಲ್ಹೆಯಲ್ಲಿ ಹೆಸರಾದ ೧೬ ಜಟ್ಟಿಗಳನ್ನು ಆರಿಸುವರು. ಇವರ ಎಂಟು ಜೋಡಿ ಮಾಡಿ, ಬುಧವಾರದ ದಿವಸ ಕುಸ್ತಿಯಾಡಿಸುವರು. ಇದರಲ್ಲಿ ಗೆದ್ದವರಲ್ಲಿ ಪುನಃ ನಾಲ್ಕು ಜೋಡಿ ಮಾಡಿ, ಕುಸ್ತಿಯಾಡಿಸುವರು. ಇದರಲ್ಲಿ ಗೆದ್ದವರಲ್ಲಿ ಎರಡು ಜೋಡಿ ಮಾಡಿ, ಕುಸ್ತೀ ಹಿಡಿಸುವರು. ಇವೆರಡರಲ್ಲಿ ಗೆದ್ದಂಥ ಇಬ್ಬರಿಗೆ ಗವ್ಹರ್ನರಸಾಹೇಬರ ಎದುರಿನಲ್ಲಿ ಕುಸ್ತೀ ಹಿಡಿಸುವರು. ಇದರಲ್ಲಿ ಗೆದ್ದವನಿಗೆ ನೂರು ರೂಪಾಯಿಯ ಬಂಗಾರದ ಖಡೆ ಮತ್ತು ಬಿದ್ದವನಿಗೆ ೫೦ ರೂಪಾಯಿಯ ಬೆಳ್ಳಿಯ ಖಡೆಯು ದೊರೆಯುವದು. ಮೊದಲು ಮೂರು ಸಾರೆ ಗೆದ್ದವರಿಗೂ ಬಿದ್ದವರಿಗೂ ಇನಾಮುಗಳಿರುತ್ತವೆ. ಕಡೆಯ ಕುಸ್ತಿ ಗೆದ್ದವನಿಗೆ ಮೇಲಿನ ಖಡೆಯ ಹೊರ್ತು ೬೦ ಮತ್ತು ಬಿದ್ದವನಿಗೂ ಅರವತ್ತು ರೂಪಾಯಿಗಳ ಇನಾಮು ದೊರೆಯುವದು.

ಶೂದ್ರ ಶಬ್ದವನ್ನು ತೆಗೆದು ಹಾಕಬೇಕು

—o—

ನಾಲ್ಕು ವರ್ಣಗಳಲ್ಲಿ ಕಡೆಯದಾದ ವರ್ಣವು ಶೂದ್ರವಾಗಿರುತ್ತದಷ್ಟೇ; ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಈ ಮೂವರನ್ನು ಬಿಟ್ಟು ಉಳಿದವರೆಲ್ಲರೂ ಶೂದ್ರಕೋಟಿಯಲ್ಲಿ ಸೇರುತ್ತಾರೆ. ಈ ವರೆಗಾದ ಮನುಷ್ಯ ಜಾತಿಯಲ್ಲಿ ಶೂದ್ರವೆಂದು ಬರಕೊಳ್ಳುತ್ತಾ ಬಂದರು ಆದರೆ ಈಗ ಇವರಿಗೆ ಶೂದ್ರವೆಂಬುವದು ಅಪಮಾನವೆನಿಸಿ, ಈ ಶಬ್ದವನ್ನೇ ಜಾತಿಯ ವಿಚಾರದಿಂದ ತೆಗೆಸಿ ಹಾಕಬೇಕೆಂದು ಮದ್ರಾಸ ಇಲಾಖೆಯಲ್ಲಿ ಚಳವಳಿ ನಡೆಸಿದ್ದಾರೆ. ಮದ್ರಾಸ ಪಟ್ಟಣದಲ್ಲಿ ಬ್ರಾಹ್ಮಣೇತರ ತರುಣರ ಸಭೆಯು ಕೂಡಿತ್ತು. ಈ ಸಭೆಯವರು ಶೂದ್ರ ಶಬ್ದವನ್ನು ತೆಗೆದು ಹಾಕಬೇಕೆಂದು ಠರಾವು ಮಾಡಿದ್ದಾರೆ. ಇದೇ ಪ್ರಕಾರ ಕೊಯಮತ್ತೂರ, 'ಸ್ಥಿರುಪ ನಾಯಿಕು ಮೊದ್ಲಿಯಾರ, ಪಿಳ್ಳೆ ಮೊದಲಾದವರೂ ಸಭೆ ಮಾಡಿ, ಠರಾವು ಮಾಡಿದ್ದಾರೆ.

ಮಹತ್ವದ ಸುದ್ದಿಗಳು.

—೦—

ರಾಯಲ ಕಮೀಶನದ ಬಗ್ಗೆ ಆಲೋಚನೆ ಮಾಡುವದಕ್ಕಾಗಿ ಲಾರ್ಡ ಆಯರ್ವಿನಸಾಹೇಬರು ಮಹಾತ್ಮರಿಗೂ, ಡಾಕ್ಟರ ಅನಸಾರಿಯವರಿಗೂ ಆಮಂತ್ರಣ ಕಳಿಸಿದ್ದಾರೆ. ಮಹಾತ್ಮರು ದಕ್ಷಿಣ ದೇಶದ ಪ್ರವಾಸವನ್ನು ನಿಲ್ಲಿಸಿ, ಇಪತ್ತಿನ ದಿವಸ ಹೊರಟು ಮುಂಬಯಿ ಮಾರ್ಗವಾಗಿ ದಿಲ್ಲಿಗೆ ಹೋಗುವರು.

ಹಿಂದುಸ್ಥಾನವು ಒಂದು ಧರ್ಮ ಅಥವಾ ಒಂದು ಭಾಷೆಯಾಡುವ ಒಂದು ದೇಶವಲ್ಲ; ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಟ್ಟು ಸಾರ್ವಭೌಮ ಸರಕಾರವು ಹೊರಬೀಳಲಿ; ಅಂದರೆ ಜನರು ತಂತಮ್ಮೊಳಗೆ ದ್ವೇಷಾಸೂಯದಿಂದ ಹೊಡೆದಾಡುವರು ಮತ್ತು ನಿಕ ರಾಷ್ಟ್ರವೇ ಬರು ಚೂರುಚೂರಾಗುವದು. ಆದ್ದರಿಂದ ಇಂಗ್ಲಿಷರ ಗದೆಯು ಯಾವಾಗಲು ಹಿಂದುಸ್ಥಾನದ ನೆತ್ತಿಯ ಮೇಲೆ ತಿರುಗುತ್ತಿರಬೇಕೆಂದು ನಾಗಪೂರದ ಗವ್ಹರ್ನರರಾಗಿದ್ದ ಸರ ಕೃಷ್ಣಾಕರಸಾಹೇಬರು ಹೇಳುತ್ತಾರೆ.

ದಕ್ಷಿಣ ಆಫ್ರಿಕೆಯಲ್ಲಿಯೇ ಅಲ್ಲ. ಇಂಗ್ಲಂಡದಲ್ಲಿಯೂ ವರ್ಣದ್ವೇಷವುಂಟು. ಅಲ್ಲಿಯ ಎಷ್ಟೋ ಫಲಹಾರದ ಅಂಗಡಿಗಳು ಹಿಂದೀ ವಿದ್ಯಾರ್ಥಿಗಳಿಗೆ ಬರಗೊಡುವದಿಲ್ಲ. ಪಂಡಿತ ಚಿತ್ತರಂಜನ ದಾಸರ ಪತ್ನಿಯು ಸೀರೆ ಉಡುತ್ತಾಳೆಂಬ ನೆವನದಿಂದ ಲಂಡನದಲ್ಲಿ ಆಕೆಗೆ ಹೊಟೇಲದಲ್ಲಿ ಇಳಿಸಿಕೊಂಡಿಲ್ಲ. ಕಾಂಗ್ರೆಸದ ಸೇಕ್ರೇಟರಿಯಾದ ಶ್ರೀ ರಂಗಸ್ವಾಮಿ ಅಯ್ಯಂಗಾರರಿಗೆ ವಾಸವಾಗಲು ಸ್ಥಳದೊರೆಯಲಿಲ್ಲ. ಹಿಂದೂ ಮತ್ತು ಯುರೋಪಿಯನ್ನರ ನಡುವೆ ಕುಲಭೇದ ಮಾಡುವದಿಲ್ಲೆಂದು ಕ್ವೀನ್ ವ್ಹಿಕ್ಟೋರಿಯಾ ಮಹಾರಾಣಿಯವರ ಜಾಹೀರನಾಮೆಯು ಪರಿಪಾಲನವೇ ಸರಿ.

ನಿಜಾಮರ ಹೈದರಾಬಾದಿನಲ್ಲಿ ಮಿ. ಬಲಬಹಾದರ ಜಂಗಬಹಾದ್ದೂರರ ಅಧ್ಯಕ್ಷತೆಯಲ್ಲಿ ಶಿಕ್ಷಣ ಪರಿಷತ್ತು ಕೂಡಿತ್ತು. ಜಂಗಬಹಾದ್ದೂರರು ಸಾರ್ವತ್ರಿಕ ಸಕ್ತಿಯ ಶಿಕ್ಷಣವನ್ನು ಪ್ರಸ್ತಾಪಿಸಿ, ಮುಸಲಮಾನ ಹೆಂಗಸರು ಘೋಷಾವನ್ನು ಬಿಟ್ಟುಕೊಡಬೇಕೆಂದು ಆಗ್ರಹಪೂರ್ವಕವಾಗಿ ವಿನಂತಿ ಮಾಡಿಕೊಂಡರು. ಮುಸಲಮಾನ ದೇಶಗಳಲ್ಲಿಯೇ ಮೋರೆಗೆ ಬುರಕಿ ಹಾಕಿಕೊಳ್ಳುವದಿಲ್ಲ. ಹಿಂದುಸ್ಥಾನದಲ್ಲೇಕೆಂದು ಇವರು ಸವಾಲು ಹಾಕಿದ್ದಾರೆ.

ಕಾಬೂಲದ ಅಮೀರಸಾಹೇಬರು ಕರಾಚಿ ಮಾರ್ಗವಾಗಿ ವಿಲಾಯತಿಗೆ ಹೋಗುವರು. ಇವರ ಕೂಡ ಪತ್ನಿ, ರಾಜಪುತ್ರಿಗಳಾದ ಸುರಾಜ ಮತ್ತು ಬೇಬಿಸುಂದರ ಹಾಗು ಬೇಗರಾದ ಮಹಮದ ಹುಶೇನಜಾನರು ಹೊರಡುವರು. ಅಮೀರಸಾಹೇಬರು ದಿಶಂಬರ ತಿಂಗಳ ೭ ನೇ ದಿವಸ ಕಾಬೂಲದಿಂದ ಹೊರಟು ಕಂದಹಾರ ಮಾರ್ಗವಾಗಿ ಕರಾಚಿಗೆ ಬಂದು, ಅಲ್ಲಿ ಹಡಗವೇರುವರು. ಹಿಂದುಸ್ಥಾನದಲ್ಲಿರುವ ತನಕ ಹಿಂದುಸ್ಥಾನ ಸರಕಾರದ ಅತಿಥಿಗಳಾಗುವರು.

ಧೈರ್ಯ ಸಾಲದೆ ಮುರಿದ ಸಭೆಯು.

—೦—

ಕುರಂದವಾಡದ ಹಿರಿಯ ಸಂಸ್ಥಾನದ ಕಾರಭಾರವನ್ನು ರಾಣಿಯವರು ರೀಜೆಂಟರಾಗಿ ನೋಡಬೇಕೆಂದು ಈ ಮೊದಲು ವರ್ತಮಾನಪತ್ರಗಳಲ್ಲಿ ಚರ್ಚೆಯಾಗಿದೆ. ರಾಣಿಯವರು ರೀಜೆಂಟರಾಗಬಾರದು. ಸರಕಾರದವರು ಒಂದು ಕೌನ್ಸಿಲ ಆಫ ಸ್ಟೇಟವನ್ನು ನೇಮಿಸಬೇಕೆಂದು ಬೇರೆ ಪಕ್ಷ ಹುಟ್ಟಿದೆ. ಈ ಎರಡೂ ಪಕ್ಷಗಳು ತಂತಮ್ಮ ಮತ ಜಾಹೀರ ಮಾಡುವದಕ್ಕಾಗಿ ಕುರಂದವಾಡದಲ್ಲಿ ಜಾಹೀರ ಸಭೆ ಕೂಡಿಸಿದವು. ಆದರೆ ಇಂಥವರು ಅಧ್ಯಕ್ಷರಾಗಬೇಕೆಂದು ಸೂಚಿಸುವದಕ್ಕೆ ಯಾರಿಗೂ ಧೈರ್ಯವಾಗದ್ದರಿಂದ ಸಭೆಗಳು ಮುರಿದವು. ರಾಣಿಯವರು ರೀಜಂಟರಾಗಬೇಕು; ಅವರಿಗೆ ಇಬ್ಬರು ಕೌನ್ಸಿಲರರು ಸಹಾಯವಾಗಬೇಕೆಂದು ಎರಡೂ ಪಕ್ಷಗಳ ನಡುವೆ ಈಗ ಒಪ್ಪಂದಿಕೆಯಾಗುವ ಸಂಭವ ಕಾಣಿಸುತ್ತದೆ.

ಎಪ್ಪತ್ತು ಮಾರವಾಡಿಗಳ ದಸ್ತಗಿರಿಯು.

—೦—

ಕಲಕತ್ತೆಯಲ್ಲಿ ಮಾರವಾಡಿಗಳು ಲಾಟರಿಯ ಕಂಪನಿ ತೆಗೆದರು. ಜನರಿಂದ ಬಂದ ಲಾಟರಿಯ ದ್ರವ್ಯ ತಮಗೇ ಬರುವಂತೆ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಒಂದು ಟಿಕೇಟನ್ನು ಮದ್ರಾಸ ಹಾಯಕೋರ್ಟಿನ ಒಬ್ಬ ಜಡ್ಜರು ಕೊಂಡರು. ಆಗ ಇವರ ಕಪಟ ನಾಟಕ ಹೊರಬಿತ್ತು. ಈ ಅಪರಾಧಕ್ಕಾಗಿ ಪೋಲೀಸರು ಎಪ್ಪತ್ತು ಜನರನ್ನು ಹಿಡಿದಿದ್ದಾರೆ.

ಧಾರವಾಡ—

ವಿದ್ಯಾಖಾತೆಯ ಮಂತ್ರಿಯವರು ವಿಜಾಪೂರ ಮಾರ್ಗವಾಗಿ ಬರುವ ಶನಿವಾರದ ದಿವಸ ಹುಬ್ಬಳ್ಳಿಗೆ ಮತ್ತು ಮರುದಿವಸ ಆದಿತ್ಯವಾರ ಧಾರವಾಡಕ್ಕೆ ಬಂದು, ಮುಂದೆ ಬೆಳಗಾವಿಗೆ ಹೋಗುವರು

ಧಾರವಾಡ ಶಹರ ಮ್ಯುನಿಸಿಪಾಲಿಟಿ

ನೋಟೀಸು.

ಧಾರವಾಡ ಮ್ಯುನಿಸಿಪಲ್ ಆಫೀಸ
ತಾರೀಖು ೨೨-೧೦-೧೯೨೭

ಧಾರವಾಡ ಮ್ಯುನಿಸಿಪಾಲಿಟಿಯ ಕ್ವಾರ್ಟರ್ಲಿ ಜನರಲ್ ಕಮಿಟಿಯು ಸೋಮವಾರ ತಾರೀಖು ೩೧ ಆಕ್ಟೋಬರ ಸನ್ ೧೯೨೭ ಇಸವಿ ದಿವಸ ಸಂಜೆಯ ೬ ಘಂಟೆಗೆ ಕೆಳಗೆ ಕಾಣಿಸಿದ ವಿಷಯಗಳನ್ನು ವಿಚಾರ ಮಾಡುವ ಕುರಿತು ಮ್ಯುನಿಸಿಪಾಲಿಟಿ ಆಫೀಸಿನಲ್ಲಿ ಕೂಡುವದು.

ವಿಷಯಗಳು.

೧ ಹಿಂದಿನ ಕಮಿಟಿಯ ಮಿನಿಟ್ ಓದಿ ಕಾಯಂ ಮಾಡುವದು.

೨ ತಾರೀಖು ೩೦ ಸಪ್ಟಂಬರ ೧೯೨೭ ಇಸವಿ ಕೊನೆಗೆ ಮುಗಿದ ತ್ರೈಮಾಸಿಕದ ಜಾಬತು ಮ್ಯುನಿಸಿಪಾಲಿಟಿಯು ಹಾಗೂ ಸ್ಕೂಲಬೋರ್ಡಿನ ಜಮಾಖರ್ಚಿನ ಲೆಕ್ಕವನ್ನು ಓದಿ ಮಂಜೂರ ಮಾಡುವದು.

೩ ಸದರ ತ್ರೈಮಾಸಿಕದಲ್ಲಿ ಆದ ಸ್ಟ್ಯಾಂಡಿಂಗ ಕಮಿಟಿ ಮತ್ತು ಸ್ಕೂಲಬೋರ್ಡ ಮೆಂಬರ ಜನರ ಹಾಜರಿ ಪತ್ರಕವನ್ನು ಓದಿ ರಿಕಾರ್ಡ ಮಾಡುವದು.

೪ ಸದರ ತ್ರೈಮಾಸಿಕದಲ್ಲಿ ಮ್ಯುನಿಸಿಪಾಲಿಟಿಯ ಪ್ರಾಥಮಿಕ ಶಾಲೆಗಳಲ್ಲಿದ್ದ ವಿದ್ಯಾರ್ಥಿಗಳ ಹಾಜರಿ ಪತ್ರಕವನ್ನು ಓದಿ ರಿಕಾರ್ಡ ಮಾಡುವದು.

೫ ಸಕ್ತಿ ರಜೆಯ ಮೇಲಿದ್ದ ಕಾಯಂ ಸ್ಯಾನಿಟರಿ ಇನ್‌ಸ್ಪೆಕ್ಟರನು ತಿರುಗಿ ಕೆಲಸದ ಮೇಲೆ ಬರುವ ವರೆಗೆ ಒಬ್ಬ ಸಂಗಾಮಿ ಲಾಯಸೆನ್ಸಡ್ ಸ್ಯಾನಿಟರಿ ಇನ್‌ಸ್ಪೆಕ್ಟರನನ್ನು ನೇಮಿಸುವ ಬಗ್ಗೆ ಮೆ. ಅಸಿಸ್ಟಂಟ ಡಾಯರೆಕ್ಟರ ಆಫ್ ಪಬ್ಲಿಕ್ ಹೆಲ್ತ ಇವರ ಪತ್ರ ನಂಬರು ೧೯೮ ತಾರೀಖು ೨೨-೧-೧೯೨೭ನೇದು ಬಂದದ್ದರ ವಿಚಾರ ಮಾಡುವದು.

೬ ಕೆಲಗೇರಿ ವಾಟರ ವರ್ಕ್ಸದ ಎರಡನೇ ಇಂಜಿನ್ ಬಿಡೇರ ಕೆಲಸಕ್ಕೆ ಸಾಕ್ಷ್ಯ ಕ್ರಕಮಿಶ ರೂಪಾಯಿಗಳನ್ನು ಮುಂಗಡವಾಗಿ ಕೊಡತಕ್ಕ ಮೆ. ಸರಕಾರದ ಮೆಕ್ಯಾನಿಕಲ್ ಇಂಜಿನಿಯರಸಾಹೇಬರ ಪತ್ರ ನಂಬರು ೯೩೮ ತಾರೀಖು ೮-೧೦-೧೯೨೭ನೇದು ಬಂದದ್ದರ ವಿಚಾರ ಮಾಡುವದು.

೭ ಗದ್ಯದ ಟರ್ಮಿನಲ್ ಟ್ಯಾಕ್ಸದ ಸಂಬಂಧ

ಧಾರವಾಡ.

ನಾಮದಾರ ಗವ್ಹರ್ನರಸಾಹೇಬರ ಮುಂದೆ ಆಗಸ್ಟ್ ಸಿಂದಿನ ಕುಸ್ತಿಯು ಮೊದಲಿನ ಕುಸ್ತಿಗಳು ಬರುವ ಬುಧವಾರ ಮತ್ತು ಗುರುವಾರದ ದಿವಸ ಹಾಯಸ್ಕೂಲಿನ ಆಟದ ಸ್ಥಳದಲ್ಲಾಗುವವು.

ಶ್ರೀ. ರಾಮಪ್ಪ ಇವರು ಕ್ರಿಮಿನಲ ಟ್ರಾಯ್ಬಲ ಸೆಟಲಮೆಂಟದಲ್ಲಿ ಆಕ್ಟಿಂಗ ಅಸಿಸ್ಟಂಟ ಆಫೀಸರರಾಗಿ ನೇಮಿಸಲ್ಪಟ್ಟಿದ್ದಾರೆ.

ಇಲ್ಲಾಗುವ ಪೋಸ್ಟಖಾತೆಯ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ನಾಮದಾರ ಬೇಳವಿಯವರು ಸ್ವೀಕರಿಸುವರು. ಡೆಲಿಗೇಟರಿಗಾಗಿ ತ್ರೈನಿಂಗ ಕಾಲೇಜವನ್ನು ಗೊತ್ತು ಮಾಡಿದ್ದಾರೆ.

ಇಲ್ಲಿಯ ಕಲೆಕ್ಟರರಾದ ಮಿ. ಮಾಸ್ಟರ ಸಾಹೇಬರು ತಮ್ಮ ರಜೆಯನ್ನು ಮೂರು ತಿಂಗಳು ಹೆಚ್ಚಿಸಿದ್ದಾರೆ.

ಕಳೆದ ಎರಡು ದಿವಸ ಕಲೆಕ್ಟರರಾದ ಮಿ. ಮರ್ಡೇಕರರ ಅಧ್ಯಕ್ಷತೆಯಲ್ಲಿ ಮ್ಯಾಮಲೇದಾರರ ಕಾನಫರನ್ಸ ಕೂಡಿತ್ತು. ಒಂದು ವಾರದಲ್ಲಿ ಮತ್ತೆ ಯಾಗಿದ್ದರೆ- ಮೈಲಸೀಮೆಯಲ್ಲಿ ಪುನಃ ಋಷ್ಯೆಯ ತಹಶೀಲ ಕೊಡಬೇಕಾದೀತೆಂಬ ವಿಚಾರವಾದಂತೆ ವರ್ತಮಾನವುಂಟು.

ಧಾರವಾಡ ಕಾಂಗ್ರೆಸ ಕಮಿಟಿಯ ಸಭೆಗಳು.

—೦—

ಮೊದಲೇ ಠರಾಯಿಸಿದ ಪ್ರಕಾರ ಧಾರವಾಡ ತಾಲೂಕ ಮತ್ತು ಜಿಲ್ಲಾ ಕಾಂಗ್ರೆಸ ಕಮಿಟಿಗಳ ವಾರ್ಷಿಕ ಸಂಘಟನಾ ಸಭೆಗಳು ತಾರೀಖು ೩೦-೧೦-೨೭ನೇ ಇಸ್ವಿ ರವಿವಾರ ದಿವಸ ಮಧ್ಯಾಹ್ನ ೩ ಮತ್ತು ೪ ಘಂಟೆಗೆ ಕ್ರಮವಾಗಿ ಇರುತ್ತವೆ. ತಾರೀಖು ೩೦-೧೦-೨೭ ವರೆಗೆ ೪ ಆಣೆ ಕೊಟ್ಟು ಆದ ಕಾಂಗ್ರೆಸ ಮೆಂಬರರೆಲ್ಲರೂ ಅವಶ್ಯ ಸಭೆಗೆ ಬರಬೇಕಾಗಿ ಪ್ರಾರ್ಥನೆ.

ತಾರೀಖು ೨೦-೧೦-೨೭

ಗೋವಿಂದಾಚಾರ್ಯ ಗುತ್ತಲ
ಬಾಬುರಾವ ಪಟವರ್ಧನ
ಕಾರ್ಯದರ್ಶಿ ಮತ್ತು ಜಿ. ಕಾ. ಕ. ಧಾ.

ಜಾಹೀರ ನೋಟೀಸು

—೦—

ಈ ಜಾಹೀರ ನೋಟೀಸಿನಿಂದ ಕೆಳಗೆ ಹೆಬ್ಬೆಟ್ಟಿನ ಗುರ್ತ ಮಾಡುವ ಹಣಮವ್ವಾ ಕೋಮ ಭೀಮಾ ನಾಮರಗಿ ಸಾ|| ಒಸರಗಿ ತಿಳಿಯು ಈ ಜಾಹೀರ ನೋಟೀಸಿನಿಂದ ಪ್ರಸಿದ್ಧ ಮಾಡುವದೇನಂದರೆ- ನಾನು ಧಾರವಾಡ ವಿಜಯ ಪತ್ರ ತಾರೀಖು ೧೮ ಆಗಸ್ಟ ೧೯೨೭ ನೆಯ ದಿವಸ ನನ್ನ ಗಂಡನಾದ ಭೀಮನ ಮೇಲೆ ನೋಟೀಸು ಮಾಡಿದ್ದೆನು. ಆತನು ಈ ನೋಟೀಸನ್ನು ಇನಕಾರ ಮಾಡಿದ್ದಾನೆ. ಆದ್ದರಿಂದ ಈ ಜಾಹೀರ ನೋಟೀಸು ಕೊಡುವ ಭಾಗ ಬಿತ್ತು ಸದರ ನನ್ನ ಗಂಡನಾದ ಭೀಮಾ ತಂದಿ ಚನ್ನಬಸಪ್ಪಾ ನಾಮರಗಿ ಸಾ|| ಬೆನಕನಕೊಪ್ಪ ತಾಲ್ಲೂಕ ಕುಂದಗೋಳ ಈತನು ಈ ನೋಟೀಸ ಜಾಹೀರಾದ ಎಂಟು ದಿವಸಗಳಲ್ಲಿ ನಾನಿದ್ದಲ್ಲಿಗೆ ಬಂದು, ನನ್ನ ಮೊದಲಿನ ನೋಟೀಸಿನಲ್ಲಿ ಬರೆದ ಮಾತಿನ್ನು ಶರ್ತಗಳನ್ನ ಪೂರ್ಣ ಮಾಡಿ, ನನ್ನನ್ನು ಕರಕೊಂಡು ಹೋಗಿ ನನ್ನ ಕೂಡ ಸರಿಯಾದ ರೀತಿಯಿಂದ ಬಾಳುವೆ ಮಾಡಬೇಕು. ಹೀಗೆ ಮಾಡದೆ ತಪ್ಪಿದರೆ- ನಾನು ಎರಡನೇಯವನನ್ನು ಉಡಿಕೆ ಮಾಡಿಕೊಳ್ಳುವೆನು. ಅನಂತರ ಸದರ ನನ್ನ ಗಂಡ ಭೀಮಾ ಈತನ ಹಕ್ಕು ನಾಲಿಶಿ ನನ್ನ ಮೇಲೆ ಯಾವ ತರದಿಂದಾನು ನಡಿಯಲಾರದು. ನನ್ನ ಉಡಿಕೆ ಗಂಡನಿಗೆ ಭೀಮಾ ಈತನಿಂದ ಯಾವದೇ ತರದ ಧಕ್ಕಿ ಒಡಿಯಬಾರದೆಂದು ಈ ಜಾಹೀರ ನೋಟೀಸು ಪ್ರಸಿದ್ಧ ಮಾಡಿದ್ದೇನೆ.

ತಾರೀಖು ೧೮-೧೦-೧೯೨೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಹಣಮವ್ವಾ ಕೋಮ ಭೀಮಾ ನಾಮರಗಿ ಈಕೆಯದು ಇರುತ್ತದೆ.

ನೋಟೀಸು

—೦—

ಜೀವುಬಾಯಿ ಕೋಮ ಡಾಕಪ್ಪಾ ಚಿಮ್ಮಾಣ ಸಾಕೀನ ಧಾರವಾಡ ಪೈಕಿ ಮೋತೀತಲಾವಗಲ್ಲಿ ಇವರಿಗೆ-

ಕೆಳಗೆ ಸಹಿ ಮಾಡಿದವನ ಕಡೆಯಿಂದ ನೋಟೀಸಿನಿಂದ ತಿಳಿಸುವದೇನಂದರೆ ಸುಮಾರು ೧|| ೨ ವರ್ಷದ ಕೆಳಗೆ ನೀನು ಮ ನಿನ್ನ ಗಂಡ ಕೂಡಿರುವಾಗ್ಗೆ ನಿನ್ನ ಮಗಳಾದ ಸುಂದರಿಯೆಂಬುವಳಿಗೆ ನನಗೆ ಕೊಡುವದನ್ನು ನಿಶ್ಚಯಿಸಿ ದೊಡ್ಡ ವೀಳೆ ಮಾಡುವದರಲ್ಲಿ ಬಂಗಾರ ಆಕಾಲಕ್ಕೆ ನಿನ್ನ ಒಡೆಯ ಮೈವದವರ ಸಮಕ್ಷಮ ಹುಡಿಗೆಯ ಮೈಮೇಲೆ ಇಟ್ಟ ದಾಗೀನ ಬೆಳ್ಳಿ ತೋಡೇದ ಜೋಡು ೧ ಅ| ಕಿ| ೧೮೦ ರೂಪಾಯಿ ಬಂಗಾರದ ಬಳೆಜೋಡು ೧ ಅ| ಕಿ| ೧೦೦ ರೂ. ದ ಬೆಳ್ಳಿ ಪಟ್ಟಿ ಅ| ಕಿ| ೧೨ ರೂಪಾಯಿ ಕಿವಿಯೊಳಗಿನ ಹೂವು ಅ| ಕಿ| ೫ ರೂಪಾಯಿ ಮತ್ತು ವಿಳೇದ ಕಿರಿ ಕುಪ್ಪಸ ಕೂಡಿ ಅ| ಕಿ| ೨೨ ರೂಪಾಯಿ ಮತ್ತು ಖರ್ಚಿನ ಬಾಬತು ನಿನ್ನ ಕೈಯ್ಯಲ್ಲಿ ಕೊಟ್ಟಿದ್ದು ೨೭ ರೂಪಾಯಿ ಅಂತು ೩೬೫ ರೂಪಾಯಿ ಆ ಕಾಲಕ್ಕೆ ದಾಗೀನೆ ಸಹಿತಾ ಆಗತದೆ ಮತ್ತು ಪದ್ಧತಿ ಪ್ರಕಾರ ಒಂದು ಹಬ್ಬಾ ನಿನಗೆ ಕೊಟ್ಟಿದೆ (೧೫ ರೂಪಾಯಿ) ಹೀಗಿದ್ದು ಏನೂ ಕಾರಣವಿಲ್ಲದೆ ನೀನು ನನಗೆ ಕೊಟ್ಟ ಹುಡಿಗಿಯನ್ನು ಎರಡನೆಯವರಿಗೆ ಕೊಡುವ ಬೇತು ನಡಿಸಿರುವಿ ಅಂತಾ ನನಗೆ ತಿಳಿದದೆ ಕಾರಣ ನಿನಗೆ ಈ ನೋಟೀಸು ಕೊಡುವ ಭಾಗ ಬಿತ್ತು ನೀನು ಜರ ಎರಡನೇ ವರಗೆ ಸದರ ಹುಡಿಗಿಯನ್ನು ಕೊಟ್ಟರೆ ನನ್ನ ದಾಗೀನೆ ದೆಯಿ ದ ಮ ಖರ್ಚ ಸದರಿ ದಿನಸಿಂದ ಮತ್ತು ಹುಡಿಗೆಯ ಧನಿಯಿಂದ ರೀತಿಪ್ರಕಾರ ನಿನ್ನ ಮೇಲೆ ಫೌಜದಾರಿ ಮ ದಿವಾಣಿಯಲ್ಲಿ ಯೋಗ್ಯ ಇಲಾಜ ಮಾಡೇನಿ ನಿನಗೆ ಸದರಿ ಹುಡಿಗಿ ಎರಡನೇ ಕಡೆಗೆ ಕೊಡಲಿಕ್ಕೆ ಯಾವದೇ ರೀತಿಯ ಅಧಿಕಾರವಿಲ್ಲ. ನೀನು ಎರಡನೆಯವರ ಮಾತು ಕೇಳಿ ಮ ಮ್ಮ ಮ ನಮಗೆ ಲುಕ್ಸಾನ ಮಾಡುವ ದುರ್ಬುದ್ಧಿಯಿಂದ ಈ ಬೇತು ನಡಿಸಿದಂತೆ ಕಾಣತದೆ ನೀನು ದೈವದವರ ಸಮಕ್ಷಮ ನಿನ್ನ ತಕರಾರು ಇದ್ದಲ್ಲಿ ನಿಕಾಲಿ ಮಾಡಿಕೊಳ್ಳತಕ್ಕದ್ದು ಅಂತಾ ಬರಕೊಂಡ ನೋಟೀಸು.

ತಾ|| ೨೮-೧೦-೧೯೨೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಹನಮಂತ ಬಿನ್ನ ಲಕ್ಷ್ಮಣಪ್ಪಾ ಜೆನಾಳಗವರ ಸಾ|| ಕಲಘಟಗಿ ಹಾಲಿವಸ್ತಿ ಧಾರವಾಡ ಈತನದು ಇರುತ್ತದೆ.

ನೋಟೀಸಿನ ದರಗಳು.

—೦—

ತಿಂಗಳು ಕಾಲದಿನ ಹತ್ತು ಪಣಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಣಿಗೆ ಒಂದುವರಿ ಆಣೆ ಇಂಗ್ಲಿಷ ಪಣಿಯೊಂದು ಒಳಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಗೀಳ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ೧ ಗೆ ಮೂ ರಾ ೯— ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕಬೇಕಾದ್ದರೆ ಎರಡು ಆಣೆ ದಿವಾಣಿಕಾಲದಿನ ಒಳಗಳಿಗೆ ಇಮ್ಮಡಿ ಹೆಚ್ಚಿಗೆ ಕಾರ್ಯ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಪಂಡರಪುರ ಹೊಸರಿತ್ತಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1449

ನಿತ್ಯ ಸತ್ಯ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ರವಿವಾರ ತಾರೀಖು ೩೦ ನೇ ಅಕ್ಟೋಬರ ೧೯೨೭ | ಸಂಚಿಕೆ ೩೩೧

ಸಂಗಾತವು ಮುಗಿಯ ಬಂದಿತು ತ್ವರೆ ಮಾಡಿರಿ.

ಕಿರ್ಲೋಸ್ಕರ ನೇಗಿಲ ಯಂತ್ರಗಳು



[illegible]

ಈ ವರ್ಷ ದರಗಳ ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ದಿಪಾವಳಿ ಮುಂಚಿನಿಂದ ಮಂಜೂರಾದ

ಕನ್ನಡ ನಿಬಂಧರತ್ನಾವಳಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ.

ಈ ಹೊಸ ಆವೃತ್ತಿಯಲ್ಲಿ ನಿಬಂಧದ [illegible] ವಿಷಯಗಳು [illegible] ಕೆಲವು [illegible] ಕನ್ನಡ [illegible] ಇಯತ್ತೆಗಳು, ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೂ [illegible] ಉಪಯುಕ್ತವಿದೆ.

ಪ್ರತಿಗಳು ದೊರೆಯುವ ಸ್ಥಳ — ೧ ರಾ. ರಾ. ಬಿ ಜಿ ವಿವೇಕರ, ಮಾಳಮಡ್ಡಿ, ಧಾರವಾಡ

೨ ರಾ. ರಾ. ಎ. ಆರ್. ಶಿವನಾಗಪ್ಪಾ [illegible] ಬುಕ್ ಡಿಪೋ. ಹುಬ್ಬಳ್ಳಿ

ದಿ ಧಾರವಾಡ ಅರ್ಬನ ಕೋ.
ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible]

[illegible] ತಿಳಿದುಕೊಳ್ಳಬೇಕು.

[illegible]

ಮಾ ನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ [illegible] ತಿಂಗಳ [illegible] ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ [illegible] ಕನ್ನೆರಡು [illegible]

[illegible]

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	೧೩—೮—೦ [illegible]
೬ "	೭—೦—೦ [illegible]
೪ "	೪—೦—೦ [illegible]
ವಾರ ಪತ್ರಿಕೆ ೧ ವರ್ಷಕ್ಕೆ	೩—[illegible]—೦ [illegible]

ಹೆಚ್ಚಿನ ಮಾಹಿತಿ ಕಳಿಸಿರಿ [illegible]

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೩೦ ೧೦ -೨೭ ನೇ ಇಸ್ವಿ

ರೋಮಾನಿಯಾದಲ್ಲಿ ರಾಜ್ಯಕ್ರಾಂತಿಯ ಭಯ.

—(೦)—

ರೋಮಾನಿಯದ ಅರಸನು ಪರಲೋಕವಾಸಿಯಾಗಿ ಮೂರು ತಿಂಗಳಾಯಿತು. ಈತನಿಗೆ ಕರೋಲನೆಂಬ ಹೆಸರಿನ ಹಿರಿಯ ಪುತ್ರನು. ಈತನು ರಾಜಕುಲೋತ್ಪನ್ನಳಲ್ಲದಂಥ ಕುವರಿಯ ಕೂಡ ವಿವಾಹ ಮಾಡಿಕೊಳ್ಳದೆ, ಒಬ್ಬ ನಾಟ್ಯಗಾತಿಯ ಮೋಹಪಾಶದಲ್ಲಿ ಬಿದ್ದು, ಆಕೆಯ ಅಂಗೀಕಾರ ಮಾಡಿದನು. ಈ ಕೃತ್ಯವು ಆ ದೇಶದ ಪ್ರಜೆಗೆ ಅಪಮಾನಕಾರಕವೆನಿಸಿತು. ಈತನು ದೊರೆಯಾಗುವದಕ್ಕೇ ಯೋಗ್ಯನಲ್ಲೆಂದು ಸಂಶಯಗೊಂಡರು. ದೇಶವನ್ನೇ ತನ್ನ ಮೇಲೆ ತಿರುಗಿ ಬಿದ್ದು, ರಾಜ್ಯಪದ ಹೋಗುವದಾದರೂ ಕರೋಲನು ಕಾಮಾಂಧನಾಗಿ, ನಾಟ್ಯಗಾತಿಯ ಬೆನ್ನು ಹತ್ತಿದನು. ಕೆಲವು ದಿವಸಗಳ ನಂತರ ತಾನು ರಾಜ್ಯದ ಮೇಲಿನ ಹಕ್ಕು ಬಿಟ್ಟಂತೆ ಜಾಹೀರ ಮಾಡಿ, ದೇಶಾಂತರವಾಸಿಯಾದನು.

ತಂದೆಯು ತೀರಿಕೊಂಡ ತರುವಾಯದಲ್ಲಿ ಈತನಿಗೆ ಅರಸೊತ್ತಿಗೆಯ ಅಭಿಲಾಷೆ ಹುಟ್ಟಿತು. ಹೇಗಾದರೂ ಮಾಡಿ ರಾಜ್ಯ ದೊರೆತನ ಮಾಡಬೇಕೆಂದು ಪ್ರಯತ್ನಿಸುತ್ತಿದ್ದಾನೆ. ಎಂಥವನಿಗಾದರೂ ಅಭಿಮಾನಿಸುವ ಜನರು ಇರುತ್ತಾರೆ. ಆ ಪ್ರಕಾರ ರಾಜಪುತ್ರನಾದ ಕರೋಲಸಾಹೇಬನ ಅಭಿಮಾನ ಮತ್ತು ಪಕ್ಷಪಾತ ಹಿಡಿಯುವ ಜನರಿರುವದು ಆಶ್ಚರ್ಯವಲ್ಲ. ಮನೋಯುಲೆಸ್ಕು ಎಂಬ ಹೆಸರಿನ ಹಳೇ ಮಂತ್ರಿಯೂ ಒಕ್ಕಲಿಗ ಸಂಘದವರೂ ಈತನ ಅಭಿಮಾನಿಗಳಾಗಿದ್ದಾರೆ. ಕರೋಲನು ಈ ಮಂತ್ರಿಯ ಮುಖಾಂತರ ತನ್ನ ಹಾರ್ದಿಕ ಪತ್ರಗಳನ್ನು ಬೇರೆ ಮಂತ್ರಿಗಳಿಗೂ, ಪ್ರತಿಷ್ಠಿತ ಗೃಹಸ್ಥರಿಗೂ ಕಳಿಸಿದನು. ಇದರಿಂದ ಆ ದೇಶದಲ್ಲಿ ಇತ್ತೀಚೆಗೆ ಬಂಡಾಯವೇಳುವ ದುಶ್ಚಿಹ್ನಗಳು ತೋರಿವೆ.

ರಾಜ್ಯಾಧಿಕಾರ ನಡೆಸುತ್ತಿರುವ ಮಂತ್ರಿಗಳು ಹಳೇ ಮಂತ್ರಿ ಮನೋಯುಲೆಸ್ಕು ಸಾಹೇಬನ ಹಿಡಿದಿದ್ದು, ಆತನ ಮೇಲೆ ಗುಪ್ತದಲ್ಲಿ ರಾಜ ಕಾರಸ್ಥಾನಕ್ಕೆ ಉತ್ತೇಜನ ಕೊಡುವ ಆರೋಪವಿಟ್ಟು, ಅಷ್ಟರಲ್ಲೇ ಕಾಯದೆಯ ಪ್ರಕಾರ ವಿಚಾರ ಮಾಡಿ, ಈತನಿಗೆ ಶಿಕ್ಷೆ ವಿಧಿಸತಕ್ಕವರಿದ್ದಾರೆ. ಈ ಪ್ರಕಾರ ಅಸಿಮಿಸಿ ಎನ್ನುವಂಥ ನ್ಯಾಯ ನಿರ್ಣಯಕ್ಕೆ ಮಂತ್ರಿಗಳು ಉದ್ಯುಕ್ತರಾದದ್ದು, ಬಾವೀ ತೋಡಿ ಬೇತಾಳವನ್ನ ತೆಗೆದಂತಾಗಿರುತ್ತದೆ. ಕರೋಲ ಪಕ್ಷೀಯರಾದ ಒಕ್ಕಲಿಗರ ಸಂಘದವರು ಸಭೆ ಮಾಡಿ, ಈಗಿನ ಆಳರಸರು ರೋಮಾನಿಯವನ್ನು ರಾಜ್ಯಕ್ರಾಂತಿಗೆ ಪ್ರವೃತ್ತ ಮಾಡಿದ್ದಾರೆಂಬ ಠರಾವು ಮಾಡಿದ್ದಾರೆ. ಈ ಚಳವಳಿಯು ಹಬ್ಬಬಾರದೆಂದು ಆಳರಸರು ದಬ್ಬಾಳಿಕೆಯ ಶಸ್ತ್ರ ಹಿಡಿದು, ಆ ದೇಶದ ಯಾವ ಸುದ್ದಿಯೂ ಹೊರಗೆ ಹೋಗದಂತೆ ಬಂದೋಬಸ್ತು ಮಾಡಿದ್ದಾರೆ. ಕರೋಲನು ಈಗ ಪಾರೀಸದಲ್ಲಿದ್ದು, ತನಗೆ ನಿಶ್ಚಯವಾಗಿ ಅರಸೊತ್ತಿಗೆ ದೊರೆಯುವ ಕಾಲ ನಿರೀಕ್ಷಿಸುತ್ತಲಿದ್ದಾನೆ.

ಹಿಂದುಸ್ತಾನಕ್ಕೆ ಡಿ ವ್ಯಾಲೆರಾನ ಸ್ವರಾಜ್ಯ ಸ್ವಾತಂತ್ರ್ಯದ ಸಂದೇಶ.

—೦—

ಕಲಕತ್ತೆಯ ಫಾರವರ್ಡ ಪತ್ರದ ಜನನವಾಗಿ ನಾಲ್ಕು ವರ್ಷವಾಯಿತು. ಅದರ ವಾರ್ಷಿಕೋತ್ಸವವನ್ನು ದೀವಳಿಗೆಯ ಹಬ್ಬದಲ್ಲಿ ಬಹು ಸಡಗರದಿಂದ ನೆರವೇರಿಸಿದರು. ಹಿಂದೂ ಮುಸಲಮಾನ ಪಕ್ಷದ ದೆಸೆಯಿಂದ ಕಲಕತ್ತೆಯಲ್ಲಿ ನೆಲಸಿದ ಪ್ರಮುಖರೆಲ್ಲರೂ ಉತ್ಸವದಲ್ಲಿ ಭಾಗ ತಕ್ಕೊಂಡು ಫಾರವರ್ಡದ ಅಭಿವೃದ್ಧಿ ಚಿಂತನೆ ಮಾಡಿದರು. ಇದಕ್ಕೆ ವಿಲಾಯತಿಯಿಂದಲೂ ತಾರುಗಳು ಬಂದವು. ಇಂಗ್ಲಂಡದಲ್ಲಿ ಸ್ವತಂತ್ರ ಕೂಲಿಕಾರ ಪಕ್ಷದ ಧುರೀಣರಾದ ಮಿ. ಲ್ಯಾನ್ಸಬರಿಯವರು "ಹಿಂದ ಮಾತೆಗೆ ಜಯವಿರಲಿ; ಇಂಗ್ಲಂಡ ಮತ್ತು ಹಿಂದುಸ್ಥಾನದ ನಡುವೆ ಐಕ್ಯಾಭಿವೃದ್ಧಿಯಾಗಿ ಜಯವಾಗಲಿ; ಜಗತ್ತಿನಲ್ಲಿ ಬಂಧು ಪ್ರೀತಿ ಹಬ್ಬಿ ಜಯಜಯಕಾರವಾಗಲೆಂದು" ಸಂದೇಶ ಕಳಿಸಿದ್ದಾರೆ. ಅಲ್ಲಿಯ ವಕೀಲ ಸಂಘದವರು "ಹಿಂದುಸ್ಥಾನವು ರಾಜಕೀಯ ಮತ್ತು ಆರ್ಥಿಕ ದಾಸ್ಯತ್ವದಿಂದ ಮುಕ್ತವಾಗಲೆಂದು" ಫಾರವರ್ಡವನ್ನು ಹರಸಿದ್ದಾರೆ. ಐರ್ಲಂಡಕ್ಕೆ ಸ್ವರಾಜ್ಯ ಸ್ವಾತಂತ್ರ್ಯ ತಂದು ಕೊಟ್ಟಂಥ ಡಿ ವ್ಯಾಲೆರಾ ಸಾಹೇಬನು "ಹಿಂದುಸ್ಥಾನವು ಸ್ವರಾಜ್ಯ ಸ್ವಾತಂತ್ರ್ಯ ಸಂಪಾದನೆ ಮಾಡುವ ಕೃತ್ಯದಲ್ಲಿ ಐರ್ಲಂಡವು ಸಹಾನುಭೂತಿಯಿಂದ ಹಿಂಬಾಲಿಸುವದಿಲ್ಲವೆ, ಆ ಕಾಲವು ಬೇಗ ದೊರೆಯಲೆಂದು ಆಶಿಸುತ್ತದೆ" ಎಂಬ ತಾರನ್ನು ಕಳಿಸಿದ್ದಾರೆ.

ಲಂಡನದಲ್ಲಿ ದೀವಳಿಗೆಯ ಹಬ್ಬ.

—೦—

ಲಂಡನದಲ್ಲಿ ವಾಸವಾಗಿರುವಂಥ ಹಿಂದೀ ಜನರು ದೀವಳಿಗೆಯ ಹಬ್ಬ ಮಾಡಿ, ಹಿಂದೂ ಪಕ್ವಾನ್ನವನ್ನು ಯಥೇಷ್ಟವಾಗಿ ಭುಂಜಿಸಿದರು, ಆಗ ಹಿಂದುಸ್ಥಾನದ ವರ್ತಮಾನ ಪರಿಸ್ಥಿತಿಯನ್ನು ಕುರಿತು ಭಾಷಣ ಮಾಡಿದರು. "ಐರ್ಲಂಡ, ಚೀನ ಮತ್ತು ರಶಿಯವು ಹಳೇ ರಾಜ್ಯ ಪದ್ಧತಿಯನ್ನು ಮುರಿದು, ಪ್ರಜಾ ಪ್ರಭುತ್ವವನ್ನು ಸ್ಥಾಪಿಸಿದವು. ರಾಜ್ಯ ಸ್ವಾತಂತ್ರ್ಯಕ್ಕಾಗಿ ಪ್ರಜರ ಅಂತಃಕರಣದಲ್ಲಿ ಹುರುಪು ಹುಟ್ಟಿಸುವಂಥವರು ಮಹಾತ್ಮರೊಬ್ಬರೇ ಆಗಿದ್ದಾರೆ. ಆದರೆ ಕೂಲಿಕಾರರಿಂದ ತಮ್ಮ ಕಾರ್ಯ ಸಾಧಿಸಿಕೊಳ್ಳಲುದ್ಯುಕ್ತರಾಗದ್ದರಿಂದ ಈ ಕೆಲಸದಲ್ಲಿ ಯಶ ಹೊಂದಲಿಲ್ಲೆಂದು ಮಿ. ಶಕಲಾತವಾಲಾನವರು ಭಾಷಣ ಮಾಡಿದರು. ಮೇಲಿನ ದೇಶಗಳು ಶಸ್ತ್ರಧಾರಿಗಳಾಗಿದ್ದವು. ಆ ಮೇರೆಗೆ ಹಿಂದುಸ್ಥಾನವಿಲ್ಲ. ಕಾರಣ ಸ್ವರಾಜ್ಯ ಸಂಪಾದಿಸಬೇಕಾದರೆ ಅಸಹಕಾರ ಮತ್ತು ಸತ್ಯಾಗ್ರಹಗಳೆರಡೇ ಶಸ್ತ್ರವಾಗಿರುತ್ತವೆಂದು ಶ್ರೀ. ಶಿವಂವೀಕರರು ಮಿ ಶಕಲಾತವಾಲಾನವರಿಗೆ ಪ್ರತ್ಯುತ್ತರ ಕೊಟ್ಟಿದ್ದಾರೆ.

ಮಹಾತ್ಮರ ಸುದ್ದಿಗಳು.

—೦—

ಮಹಾತ್ಮರು ಮಂಗಳವಾರದಲ್ಲಿ [illegible], ಮುಂಬಯಿಗೆ ಬಂದು, ಅಲ್ಲಿಂದ ದಿಲ್ಲಿಗೆ ಹೋಗುವರು. ಇವರ ಸಂಗಡ ಇವರ ಪತ್ನಿಯವರು, ಶ್ರೀ ಗಂಗಾಧರರಾವ ದೇಶಪಾಂಡೆ ಮತ್ತು ಕಾಕಾ ಕಾಲೇಲಕರರು ಇರುವರು. ಮಹಾತ್ಮರ ಪ್ರಕೃತಿಯು ನೆಟ್ಟಗಾಗಿರುವದು ನಿಜ. ಆದರೂ ವಿಷಯ ಮಹತ್ವವನ್ನು ಲಕ್ಷಿಸಿ, ಅನಿವಾರ್ಯವಾಗಿ ಕರಿಸಿಕೊಳ್ಳಬೇಕಾಯಿತೆಂದು ಲಾರ್ಡ ಆಯರ್ವಿನಸಾಹೇಬರು ಇವರಿಗೆ ಬರೆದ ಪತ್ರದಲ್ಲಿ ಬರೆದಿದ್ದಾರೆ. ದಿಲ್ಲಿಯ ಸಂಭಾಷಣೆ ತೀರಿದ ಬಳಿಕ, ಮಹಾತ್ಮರು ಪುನಃ ತಮಿಳನಾಡಿಗೆ ಹೋಗಿ, ಅಲ್ಲಿಂದ ಲಂಕೆಗೆ ಹೋಗುವರು.

ಬೆಂಗಳೂರ ಪೇಟದಲ್ಲಿ ಮಹಾರೋಗಿಗಳ ಮನೆಯಿಂದ [illegible] ಅನಾಥಾಲಯವುಂಟು. ಮೈ ಮತ್ತು ಹಲ್ಲೆಯಲ್ಲಿ ಎಲುಬುಗಳನ್ನು [illegible] ಪುಷ್ಟ ಮಾಡುವ ಗುಣವುಂಟೆಂದು ಕಂಡು ಬಂದಿದೆ. ಆದ್ದರಿಂದ ರೋಗಿಗಳ ಅಕ್ಕಿಯ ಅನ್ನದ ಪ್ರಮಾಣವನ್ನು ಕಡಿಮೆ ಮಾಡಿ, ಬೇಳೆ, ಹಲ್ಲು, ಹಾಲು, [illegible] ಮತ್ತು ತುಪ್ಪವನ್ನು ಹೆಚ್ಚಿಸಿದರು. [illegible] ರೋಗಿಗಳು [illegible] ಮಾಡಿ

ಉಪವಾಸ ಬಿದ್ದರು. ಬೇಕಾದರೆ ಕೊಟ್ಟದ್ದನ್ನು ತಿನ್ನರಿ; ಇಲ್ಲವಾದರೆ- ಹೊರಟು ಹೋಗಿರೆಂದು ವರ್ಚಸ ಜನರಲ್ಲರು ಹೇಳಲು- ನೂರು ಜನರು ಬಿಟ್ಟು ಹೋದರು. ಒಟ್ಟು ೪೩೭ ಜನರಿದ್ದರು.

ಹಿಂದೂ ಮುಸಲಮಾನ ಮಿಶ್ರ ಚುನಾವಣೆ ಬೇಕಾಗಿಲ್ಲವೆಂಬ ತತ್ವವನ್ನು ಬಂಗಾಳದ ಗವ್ಹರ್ನರ ಕೌನ್ಸಿಲ್ದ ಮೆಂಬರ ಗಜನವಿಸಾಹೇಬರು ಒಪ್ಪಿದ್ದಾರೆ. ಚುನಾವಣೆಯಲ್ಲಿ ಎರಡೂ ಜನಾಂಗದವರು ಒಪ್ಪಂದ ಮಾಡಿಕೊಳ್ಳಬೇಕು. ಆದರೆ ಅವರವರ ಸ್ಥಳಗಳ ಸಂಖ್ಯೆಯು ಕಾಯಮವಾಗಬೇಕೆಂಬ ಸಾಹೇಬರ ಮತವು. ಹಿಂದೂ ಜನರಾದರೂ ಹಾಗೇ ಅನ್ನುತ್ತಾರೆ.

ಹಿಂದುಸ್ಥಾನದಲ್ಲಿ ಪ್ರತಿವರ್ಷ ೭೦ ಲಕ್ಷ ಟನ್ನು ಅರಳೆ ಹುಟ್ಟುತ್ತದೆ. ಇವುಗಳ ಬೆಲೆಯು ನೂರು ಕೋಟಿ ರೂಪಾಯಿಯಾಗುತ್ತದೆ. ವರ್ಷ ವರ್ಷಕ್ಕೆ ಹತ್ತಿಯನ್ನು ಬೆಳೆಯುವದು ಹೆಚ್ಚುತ್ತಿರುವದು. ಆದರೂ ಪರದೇಶದಿಂದ ಅರಿವೆ ಬಂದು, ಹಿಂದುಸ್ಥಾನದ ದುಡ್ಡನ್ನು ಸೂರೆ ಮಾಡುತ್ತಿರುವದು. ಪರದೇಶದ ಗಿರಣಿಗಳು ಪುಷ್ಟವಾಗಿ ಹಿಂದುಸ್ಥಾನದ ಗಿರಣಿಗಳು ಸೊರಗುವವು. ಸಮೋದಾಕ್ಷ ದುರ್ಗವು.

ಸುಬ್ರಾಯನ ನಿಲಗೊಂಡೆಯ ಸತ್ಯಾಗ್ರಹದಲ್ಲಿ ಸ್ತ್ರೀಯರೂ ಸೇರಿದ್ದಾರಷ್ಟೇ; ಗೆಳತಿಯ ಅಕ್ರಮದ ಹೆಸ್ರು, ಜನ ಸ್ವಯಂಸೇವಕರು ಸತ್ಯಾಗ್ರಹಕ್ಕಾಗಿ ಹೊರಟಿದ್ದಾರೆ. ಇವರಲ್ಲಿ ಲಕ್ಷ್ಮಣರಾವ ತಿಂಗಳೆಂಬ ೭೦ ವರ್ಷದ ಒಬ್ಬ ಮುದುಕಿಯೂ ಇರುವಳು. ಒಬ್ಬ ಸ್ವಯಂಸೇವಕನು ದೂರದಿಂದ ಒಗೆದ ಮುತ್ತಿಗೆಯಿಂದ, ಗೊಂಬೆಯ ಬಲಗಾಲಿನ ಕೆಳಬದಿಯ ಒಂದು ಭಾಗವು ಒಡೆದು ಭಂಗವಾಯಿತು

ಸ್ವಾಮಿ ಶ್ರದ್ಧಾನಂದರನ್ನು ಕೊಂದ ಆರೋಪಿ ಅಬ್ದುಲ ರಶೀದನು ಪ್ರಿವ್ಹಿ ಕೌನ್ಸಿಲಕ್ಕೆ ಮಾಡಿದ ಅಪೀಲು ನಾಮಂಜೂರಾಯಿತು. ಆತನನ್ನು ದಿಲ್ಲಿಯಲ್ಲಿ ಕಳೆದ ವಾರ ಫಾಶಿಕ್ಕೆ ಹಾಕಿದರು. ದಿಲ್ಲಿ ಮತ್ತು ಪಂಜಾಬ ಪ್ರಾಂತಗಳ ಗಡಿಯಲ್ಲಿರುವ ಯಾವದೊಂದು ಸ್ಥಳದಲ್ಲಿ ನಾಶವಾದ. ಆತನ ಹೆಣವನ್ನು ಮೆರವಣಿಗೆಗೆ ಕೊಡಲಿಲ್ಲ, ಅಲ್ಲಿಯೇ ದಫನ ಮಾಡಿದರು.

ಸಮುದ್ರಯಾನಕ್ಕೆ ಪ್ರಾಯಶ್ಚಿತ್ತ ಉಂಟೋ? ೫೦ ರೂಪಾಯಿ ಬಹುಮಾನ !!

—o—

"ಸಮುದ್ರಯಾನಕ್ಕೆ ಪ್ರಾಯಶ್ಚಿತ್ತವುಂಟೋ" ಎಂಬ ಬಗ್ಗೆ ಬಹಳ ಕಾಲದಿಂದ ವಾದವು ನಡೆದಿದೆ. ಕರ್ನಾಟಕದ ಬ್ರಾಹ್ಮಣರಲ್ಲಿ ಅದರಲ್ಲಿಯೂ ವಿಶೇಷತಃ ವೈಷ್ಣವರಲ್ಲಿ ಈ ವಿಷಯವಾಗಿ ಕಲುಷಿನಿಂದ ಬಡೆದಾಡುವ ಎರಡು ಬಣಗಳಾಗಿವೆ. ಆದ್ದರಿಂದ ಧರ್ಮದ ದೃಷ್ಟಿಯಿಂದಲೂ ವ್ಯವಹಾರದ ದೃಷ್ಟಿಯಿಂದಲೂ ಈ ವಿಷಯವನ್ನು ಕುರಿತು ವಿಚಾರ ಮಾಡಿ, ಸಮುದ್ರಯಾನಕ್ಕೆ ಪ್ರಾಯಶ್ಚಿತ್ತವನ್ನು ಕೊಡುವದು ಸಶಾಸ್ತ್ರವೆಂದು ಸಿದ್ಧಪಡಿಸುವವರಿಗೆ ಮೇಲಿನ ಬಹುಮಾನವು ಕೊಡಲ್ಪಡುವದು. ಹಾಗೆ ಸಿದ್ಧಪಡಿಸುವವರು ಪೂರ್ವಪಕ್ಷ ಉತ್ತರ ಪಕ್ಷಗಳೆರಡನ್ನೂ ಸರಿಯಾಗಿ ಮಂಡಿಸಿ ಫುಲ್‌ಸ್ಕೇಪ ಅರ್ಧ ಹಾಳೆಯ ಮೇಲೆ ೩೦-೩೫ ಪುಟಗಳು ತುಂಬುವಷ್ಟು ಅಚ್ಚುಕಟ್ಟಾದ ನಿಬಂಧವನ್ನು ಕನ್ನಡದಲ್ಲಿಯಾಗಲಿ ಮರಾಠಿಯಲ್ಲಾಗಲಿ ಬರೆದು, ಇದೇ ಬರುವ ನವೆಂಬರ ೩೦ನೇ ತಾರೀಖಿನೊಳಗಾಗಿ ನಮಗೆ ತಲುಪುವಂತೆ ಕಳುಹಿಸಿಕೊಡಬೇಕು. ಬಂದ ನಿಬಂಧಗಳನ್ನು ತಜ್ಞರಾದ ಒಂದು ಮಂಡಲವು ಪರೀಕ್ಷಿಸುವದು. ಮಂಡಲದಲ್ಲಿ ತೇರ್ಗಡೆ ಹೊಂದಿದ ನಿಬಂಧಕ್ಕೆ ಬಹುಮಾನವು ಕೊಡಲ್ಪಡುವದು. ಹೀಗೆ ತೇರ್ಗಡೆ ಹೊಂದಿದ ನಿಬಂಧದ ಎಲ್ಲ ಅಧಿಕಾರವೂ ಮಂಡಲದ್ದಾಗುವದು. ಕಾರಣ ತಜ್ಞರಾದ ಬರಹಗಾರರು ತ್ವರೆ ಮಾಡಬೇಕು.

ಧಾರವಾಡ — ಕಾರ್ಯದರ್ಶಿ "ಕರ್ಮವೀರ"
೨೮-೧೦-೨೭ — ಕಾರ್ಯಾಲಯ.

ವಿಶ್ವಬ್ರಹ್ಮರ ಸಭೆಯೋ! ಬರೇ ಅರ್ಥಶಾಲಿಗಳ ಸಭೆಯೋ!

ಕೆಳಗಿನ ನಾಲ್ಕು ಸಂಕ್ತಿಗಳಿಗೆ ನಿಮ್ಮ ಪತ್ರದಲ್ಲಿ ಸ್ಥಳವು ದೊರಕುವದೆಂದು ನಂಬಿದ್ದೇನೆ.

ನಾನು ವಿಶ್ವಬ್ರಹ್ಮಣ ಸಮಾಜಕ್ಕೆ ಹೊಂದಿದವನಿದ್ದೇನೆ. ಈ ನಮ್ಮ ಸಮಾಜದಲ್ಲಿ ಎಲ್ಲ ತರದ ಶಿಲ್ಪಿಗರು ಅಂದರೆ ಕಮ್ಮಾರಿಕೆ, ಬಡಿಗತನ, ಕಂಚುಗಾರಿಕೆ, ಶಿಲ್ಪಿತನ, ಮತ್ತು ಬೆಳ್ಳಿ ಬಂಗಾರದ ಕೆಲಸ ಮಾಡುವವರು ಹೀಗೆ ಎಲ್ಲರದೂ ಸಮಾವೇಶ ಆಗುತ್ತದೆಂಬುವದು ಸರ್ವಶ್ರುತವು. ಧರ್ಮ ಸಂಸ್ಕಾರವೂ ಅದರಂತೆ ಇದೆ. ಮತ್ತು ವಿಶ್ವಬ್ರಹ್ಮ ಸಮಾಜಕ್ಕೆ ಹೊಂದಿದವರಲ್ಲಿ ಅವರು ಮಾಡುವ ಉದ್ಯೋಗದ ಕೆಲಸದ ಮೇಲಿಂದ ಅವರಲ್ಲಿ ಉಚ್ಚ ನೀಚತನದ ಭೇದವಿಲ್ಲದೆ ಅವರೆಲ್ಲರು ಸಮಾನರೆಂಬ ಶಾಸ್ತ್ರ ಸಮ್ಮತವಾಗಿದೆ. ಈ ಸಮಾಜವು ಇತ್ತೀಚೆಗೆ ಆರ್ಥಿಕ ದೃಷ್ಟಿಯಿಂದ ಬಲಹೀನವಾಗಿ ಅವನತಿಯ ಕೊನೆಗೆ ಬಂದಿದೆ. ಸ್ಥಿತಿಯ ಈ ಸಮಾಜದ ಉದ್ಧಾರಕ್ಕಾಗಿ ಈ ಸಮಾಜದವರು ತಮ್ಮ ಜಾತಿಯ ಸಭೆಗಳನ್ನು ಮಾಡುತ್ತಿರುತ್ತಾರೆ. ಈ ತರದ ಮೊದಲನೆಯ ಸಭೆಯು ಸನ್ ೧೯೨೦ ಇಸ್ವಿಯಲ್ಲಿ ಪುಣೆಯಲ್ಲಿ ಆಯಿತು. ಮತ್ತು ೨ನೇ ಸಭೆಯು ಸನ್ ೧೯೨೧ ಇಸ್ವಿಯಲ್ಲಿ ಕೊಲ್ಹಾಪುರದಲ್ಲಿ ಆಯಿತು. ಈ ಸಭೆಗಳ ಉದ್ದೇಶವೇನೆಂದರೆ- ಸಮಾಜದ ಏಕೀಕರಣವು ಉನ್ನತಿಯು ಅವರಲ್ಲಿಯ ಶೃಂಗಾರಿಕೆಗಳನ್ನು ಬೆಳೆಸುವದು ಇಂಥದ್ದು ಹೊರತು ಸಮಾಜದಲ್ಲಿ ಒಡಕು ಹುಟ್ಟಿಸುವದು, ಸಮಾಜದ ಅವನತಿಯನ್ನುಂಟು ಮಾಡುವದು ಮತ್ತು ಈ ಸಮಾಜದವರಲ್ಲಿ ಇಲ್ಲದ ಉಚ್ಚನೀಚ ಭಾವನೆಗಳನ್ನು ಉತ್ಪನ್ನ ಮಾಡುವದು ಇದ್ದಿಲ್ಲ. ಹೀಗಿದ್ದು ಈ ನಮ್ಮ ಹುಬ್ಬಳ್ಳಿ ಶಹರದಲ್ಲಿಯ ನಮ್ಮ ಸಮಾಜಕ್ಕೆ ಹೊಂದಿದ ಕೆಲವರು ಇದೇ ಸಮಾಜದ ಹೆಸರಿನಿಂದ ಸಭೆಯ ೩ ನೇ ಅಧಿವೇಶನವನ್ನು ಹುಬ್ಬಳ್ಳಿಯಲ್ಲಿ ಮಾಡುತ್ತೇವೆಂತಾ ಜನರಿಗೆ ಕಾಣುವಂತೆ ಬಹಳ ಉಪಕ್ರಮ ನಡಿಸಿದಂತೆ ತಿಳಿಯುತ್ತದೆ. ಆದರೆ ಈ ಅವರ ಪ್ರಯತ್ನವು ನಿಜವಾಗಿ ಸಮಾಜದ ಹಿತಕ್ಕಾಗಿ ಇರದೆ ಸರ್ವ ವಿಶ್ವಬ್ರಹ್ಮಣ ಸಮಾಜದ ಪತಿಯೇದ ವ ಅವರ ಸಮ್ಮತಿಯಿಂದ ನಡೆಯುತ್ತಿರುವದಿಲ್ಲ. ಈ ಪ್ರಯತ್ನವು ಸಮಾಜದ ಹಿತಕ್ಕಾಗಿ ಇರದೆ ಸಮಾಜದಲ್ಲಿ ಒಡಕು ಹುಟ್ಟಿಸಿ ಅದರಲ್ಲಿ ಉಚ್ಚನೀಚ ಭಾವನೆಗಳನ್ನು ಉತ್ಪನ್ನ ಮಾಡುವದಕ್ಕಾಗಿ ನಡೆದಿರುತ್ತದೆ. ಈ ಮಾತು ಈ ಸಭೆಯ ಉದ್ದೇಶ ಪತ್ರಿಕೆಯಲ್ಲಿ ಮಾಡಿದ ವಿಧಾನಗಳಿಂದ ಮತ್ತು ಅವರು ಛಾಪಿಸಿ ಪ್ರಸಿದ್ಧಿಸಿದ ಪಾವತಿ ನಮೂನೆಗಳ ಮೇಲಿಂದ ಸ್ಪಷ್ಟವಾಗಿ ಈ ಸಭೆಯ ಉಪಕ್ರಮ ನಡಿಸಿದವರು ಅದನ್ನು ಕೇವಲ ಜನರನ್ನು ಮೋಸಗೊಳಿಸಿ ಸಮಾಜದಲ್ಲಿಯ ಬಹುಸಂಖ್ಯಾತರನ್ನು ಹೊರಗಿಟ್ಟು ತಮ್ಮ ಶ್ರೇಷ್ಠತನವನ್ನು ಬೆಳೆಸುವ ಮನೋಲೋಚನೆಯಲ್ಲಿ ಇರಬೇಕೆಂಬುವದು ಸ್ಪಷ್ಟವಾಗಿ ತೋರುವಂತೆ ಅದೆ. ಕಾರಣ ವಿಶ್ವಬ್ರಾಹ್ಮಣ ಸಮಾಜದವರಿಗೆಲ್ಲಾ ತಿಳಿಸುವದೇನಂದರೆ ಈ ಸಭೆಯ ಉಪಕ್ರಮಕ್ಕೆ ಎಲ್ಲ ವಿಶ್ವಬ್ರಹ್ಮ ಸಮಾಜದವರೆಲ್ಲರ ಸಮ್ಮತಿ ಇಲ್ಲ. ಮತ್ತು ಇಂಥ ಸಮ್ಮತಿ ಪಡಕೊಳ್ಳುವದರಲ್ಲಿ ಬಂದಿಲ್ಲ. ಅದ್ದರಿಂದ ಇದು ಎಲ್ಲ ವಿಶ್ವಬ್ರಹ್ಮ ಸಮಾಜದವರ ಸಭೆಯಾಗಲಿಕ್ಕಿಲ್ಲ. ಇಷ್ಟೇ ಅಲ್ಲ ಇದು ಇದೇ ವಿಶ್ವಬ್ರಹ್ಮ ಸಮಾಜದ ಹೆಸರಿನ ದುರುಪಯೋಗವಿರುತ್ತದೆ. ಈಗ ಹತ್ತು ಪತ್ರಿಕೆಯನ್ನು ತೆಗೆದಿರುವ ಕಾರ್ಯದರ್ಶಿಗಳಿಗಾಗಲೀ ಸ್ವಾಗತ ಕಮಿಟಿಯವರಿಗಾಗಲೀ ಈ ತರದ ಸಮಾಜದ ಹೆಸರಿನ ದುರುಪಯೋಗ ಮಾಡುವ ಅಧಿಕಾರವಿಲ್ಲ. ಅದ್ದರಿಂದ ಸಮಾಜದವರೆಲ್ಲರೂ ಈ ಸಭೆಯ ವಿಷಯಕ್ಕೆ ವೇದಿಕೆಯಿಂದ ತಕ್ಕ ಜಾಗರೂಕತೆಯುಳ್ಳವರಾಗಿರತಕ್ಕದ್ದು.

ವಿಶ್ವಬ್ರಹ್ಮ ಸಮಾಜ ಸೇವಕ
ತಿಪ್ಪಣ್ಣ ವಿಠ್ಠಪ್ಪ ಗೋಂಧಳೇಕರ,
ಹುಬ್ಬಳ್ಳಿ.

ವಿವಿಧ ವರ್ತಮಾನಗಳು.

—೦—

ಸರ ಸಿ. ಪಿ ರಾಮಸ್ವಾಮಿ ಅಯ್ಯರರು ಜಿನೀವ್ಹಾ ಪಟ್ಟಣದಿಂದ ತಿರುಗಿ ಬಂದರು. ಇವರು ಬೇಗನೆ ಸರಕಾರ ಕೆಲಸದಿಂದ ನಿವೃತ್ತರಾಗಿ ಪುನಃ ವಕೀಲರೂ ರಾಜಕಾರಣಪಟುಗಳೂ ಆಗುವರು.

—

ಸಬ್ಸಾಳಿಕೆಯ ಕಾರಣದಿಂದ [illegible] ಗಳಲ್ಲಿ ಆಳುತ್ತಿರುವ ಗೀತಭಕ್ತರು [illegible] ಕ್ಷಮಾಗಬೇಕಾದರೆ ವಿಲಾಯತಿ [illegible] ಪ್ಕರ ಹಾಕುವದೇಂದೇ ಮದ್ದೆಂದು ಮಹಾತ್ಮಾ ಬಂಗಾಲಿಗಳಿಗೆ ಸಂದೇಶ ಕಳಿಸಿದ್ದಾರೆ.

—

[illegible] ಮಾಣಿಕಚಂದನೆಂಬ ವ್ಯಾಪಾರಿಯನ್ನು ಕಾರಿಗೆ [illegible] ಗಲ್ಲಿನ ಶಿಕ್ಷೆಯಾಯಿತು. [illegible] ಗಳನ್ನು ಮತ್ತು ಅದು [illegible] ಕ್ಷೆ ಮತ್ತು ಮೇಲೆ [illegible] ಕೋಣೆಯ ಪಾಸದ ಶಿಕ್ಷೆಯಾಯಿತು.

—

ಮುಂಬಯಿಯಲ್ಲಿ ಡಾಕ್ಟರ ಅಂಬೇಡಕರ ಅಧ್ಯಕ್ಷತೆಯಲ್ಲಿ ನೂರು ಜನ [illegible] ಗಳು ಅಸ್ಪೃಶ್ಯರನ್ನು ಪಂಕ್ತಿಯಲ್ಲಿ ಕರಕೊಂಡು ಭೋಜನ ಮಾಡಿದರು.

[illegible] ಮತ್ತು ೨೦ ಟನ್ನ ಭಾರವಾಗಿರುವಂಥ ಪ್ರಯಾಣಿಕರ ವಿಮಾನ ಕಟ್ಟಲ್ಪಟ್ಟದೆ. ಇದು ಜಗತ್ತಿನಲ್ಲಿ ಅತಿ ದೊಡ್ಡ ವಿಮಾನವು.

—

[illegible] ಜಾಹೀರ ನೋಟೀಸು

ಈ ಜಾಹೀರ ನೋಟೀಸಿನಿಂದ ಕೆಳಗೆ ಹೆಬ್ಬೆಟ್ಟಿನ ಗುರ್ತು ಮಾಡುವ ಈರವ್ವಾ ಕೋಂ ಕಲ್ಲಪ್ಪಾ ಪಂಚಮಸಾಲಿ ಮುರಗೆಣ್ಣನವರ ಸಾಕೀನ ಮುದೇನಕೊಪ್ಪ ಈಕೆಯು ಪ್ರಸಿದ್ಧ ಮಾಡುವದೇನಂದರೆ-

ನನ್ನ ಗಂಡನಾದ ಕಲ್ಲಪ್ಪಾ ತಂದೆ ಶಿವಪ್ಪಾ ಮುರಗೆಣ್ಣನವರ ಸಾ|| ಮುದೇನಕೊಪ್ಪ ಈತನು ನನ್ನನ್ನು ಬಿಟ್ಟು ಐದಾರು ವರ್ಷವಾಯಿತು. ಎಲ್ಲಿ ಇರುತ್ತಾನೆಂಬ ಪತ್ತೆ ಇಲ್ಲ. ಊರು ಬಿಟ್ಟು ದೇಶಾಂತರ ಹೋಗಿದ್ದಾನೆ. ಆತನು ಇಂದು ಬಂದಾನು, ನಾಳೆ ಬಂದಾನು ದಾರಿ ನೋಡುತ್ತಾ ಸಾಹುಕಾರರಲ್ಲಿ ದೇಣೆ ಮಾಡಿ, ಉಪಜೀವನ ಮಾಡಿಕೊಂಡು ಬಂದೆನು. ನನಗೆ ಹತ್ತಿಪ್ಪತ್ತು ವರ್ಷಗಳಿಗೆ ೨೦೦ ರೂಪಾಯಿ ಸಾಲವಾಗಿದೆ. ಈಗ ಸಾಲಗಾರರ ಕಾಟವಿಯಾಗಿರುತ್ತದೆ. ಮುಂದೆ ಸಾಲ ಹುಟ್ಟುವಲ್ಲದು. ಅದ್ದರಿಂದ ಈ ಜಾಹೀರ ನೋಟೀಸು ಕೊಡಬೇಕಾಯಿತು. ಇದು ಪ್ರಸಿದ್ಧವಾದ [illegible] ದಿವಸಗಳಲ್ಲಿ ಒಳಗೆ ನನ್ನ ಗಂಡನಾದ ಕಲ್ಲಪ್ಪ ಈತನು ತಾನಿಲ್ಲಿದ್ದರೆ ಬಂದು, ನನ್ನ ಸಾಲ ತೀರಿಸಿ, ನನ್ನ ಕೂಡ ಸುಖಕರ ರೀತಿಯಿಂದ ಬಾಳುವೆ ಮಾಡಬೇಕು. ಈ ಮುದ್ದತಿನೊಳಗಾಗಿ ಬರದಿದ್ದರೆ ನಾನು ನನ್ನ ಉಪಜೀವನದ ಗಸೆಯಿಂದ [illegible] ಉಡಿಕೆ ಮಾಡಿಕೊಳ್ಳುವೆನು. ಅನಂತರ [illegible] ಮತ್ತು ನನ್ನನ್ನು ಉಡಿಕೆಯಾಗುವ [illegible] ಮೇಲೆ ಸದರ ಕಲ್ಲಪ್ಪ ಈತನ [illegible] ಬಾಧಕ [illegible] ಈ ನೋಟೀಸು [illegible] ಪತ್ರದ ನೆ [illegible] ಅಂತಾ ಜಾಹೀರ ಮಾಡಿದ್ದು.

ತಾ|| ೯ ೧೦—೧೯೨೭

ಈ [illegible] ಹೆಬ್ಬೆಟ್ಟಿನ ಗುರ್ತು ಈರವ್ವಾ [illegible] ಮುರಗೆಣ್ಣನವರ [illegible] ದು. [illegible]

—

नोटीस.

रा. रा रायजीबा शिंदे व अंतु बाबाजी भोसले व गणपत नारायण दागवे राहणार मिरज यासी.—

खाली सही करणार कडून नोटीस देणेंत येतेकी ता. १७-१०-१९२७ रोजी ज्ञानसागर कोल्हापूर मध्ये दिलेली जाहीर नोटीस पोचली ती नोटीस मतलबी व खोडसाळपणाची आहे.

आनु अज्ञान आहे म्हणून व आपण तीचे जनक बाप आहा म्हणून आपणास नोटीस देणेंत येतेकीं आनूचे लग्नाचे वेळी तीचे अंगावर ठेवलेले व नतर घरी आले वेळी ठेवलेले सर्व दागीनें व कपडालत्ता आपहार कणें बद्दल दिलेली नोटीस खोटी आहे.

ही नोटीस पोचताच दागीने व कपडालत्ता सहीत, आनुस आणून पोचवावें ती अज्ञान आहे सर्व जबाबदारी आपणावर आहे. तीजविषई कांहीं व्येग व वर्तणूक भेर दिसल्यास आपणास जबाबदारी धरू व ही नोटीस पोचताच आणून न पोचविल्यास आपणावर क्रिमिनल् अगर दिवाणी जो योग्य कायदा लागू होईल त्या प्रमाणे ईलाज केला जाईल

नोटीस लिहीणार गणपत नारायण दागवे यांचेवरही आनू अज्ञान असता दिलेली नोटीस बद्दल योग्य ईलाज केला जाईल.

बाबाजी रंगाजी भोसले,
हुबळी शहर.

[illegible] ನೋಟೀಸಿನ ದರಗಳು.

—೦—

[illegible] ಕಾಲಮಿನ ಹತ್ತು ಪಳಿಗಳಿಗೆ ಒಂದೆ [illegible] ಮುಂದೆ ಪ್ರತಿಯೊಂದು ಪಳಿಗೆ ಒಂದಾಣೆ [illegible] ಕಾಗದ [illegible] ಒಳಗೆ ಇದು ಆಣೆ [illegible] ಸಾರ್ವಜನಿಕ ನೋಟೀಸುಗಳಿಗೆ [illegible] [illegible] ಕನ್ನಡದಲ್ಲಿ ಹಾಕುವದಿದ್ದರೆ ಅರು [illegible] ಒಳಗಳಿಗೆ [illegible] [illegible] ಕೊಡುವವರು ಕೆಳಗಿನ [illegible] ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

—

ವಿಜಯ ಪುಸ್ತಕಾಲಯ.

೦—

೨೦೯೯ ಶಿವಮಾನ [illegible]	೧೦ ಆಣೆ.
ವಿಚಿತ್ರ [illegible]	೫ ,,
ದೇಶಬಂಧು ದಾಸರ ಚರಿತ್ರೆ	೨ ,,
ದೇಶಬಂಧು ಸಂದೇಶ	೧ ,,

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ [illegible] ವೆವು. ವ್ಹಿ. ಪಿ. ಖರ್ಚು ಬೇರೆ [illegible]

[illegible] ವಿಜಯ ಪುಸ್ತಕಾಲಯ
ಧಾರವಾಡ

—

ಒಕ್ಕಲಿಗರೂ ಒಕ್ಕಲತನವೂ.

—೦—

ನಮ್ಮ ಮಾಸಪತ್ರಿಕೆಯು ಈಗ ಸುಮಾರು ೧೭ ವರ್ಷಗಳಿಂದ ದೇಶಾಭಿಮಾನಿಗಳ ಸೇವೆಯನ್ನು ಮಾಡಿ ಯಾವತ್ತು ಜನರ ಆದರಕ್ಕೆ ಪಾತ್ರವಾಗಿರುವದು. ಇತ್ತೀಚೆಗೆ ಒಕ್ಕಲತನದ ಬೆಳೆಗಳ ಬಗ್ಗೆ ಉದಾತ್ತ ವಿಚಾರಗಳ ಲೇಖಗಳೂ ಅಂದವಾದ ಮುದ್ರಣವೂ ಇರುವದರಿಂದ ವಾಚಕರ ಮನಸ್ಸನ್ನು ತನ್ನ ಕಡೆಗೆ ಎಳೆಯದೆ ಎಂದೂ ಬಿಡದು. ಕೃಷಿಕವರ್ಗವೇ ಶ್ರೇಷ್ಠವಾದದ್ದೆಂದು ಸರ್ವ ಸಮ್ಮತವಿರುವದರಿಂದ ಈ ವಿಷಯಕ್ಕೆ ಆನಂದವನ್ನು ತೋರಿಸದೆ, ಇಂಥ ಮಾಸಪತ್ರಿಕೆಗಳನ್ನು ಆದರಿಸಬೇಕೆಂದು ನಮ್ಮ ಆಗ್ರಹಪೂರ್ವಕ ವಿನಂತಿ. ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ೧-೨-೦

ಸಂಪಾದಕ
ಒಕ್ಕಲಿಗರೂ ಒಕ್ಕಲತನವೂ,
ಧಾರವಾಡ.

ಈ ಪತ್ರವನ್ನು [illegible] ಧಾರವಾಡದಲ್ಲಿರುವ ನಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 1443

ನಿತ್ಯ ಸತ್ಯ ... ಬೆಲೆ ಅರ್ಧ ಆಣೆ

[illegible]

ವರ್ಷ ೮ [illegible] ಅಕ್ಟೋಬರ ೧೯೨೭ [illegible]

ಹಂಗಾಮವು ಮುಗಿಯುವ ಮೊದಲು ತ್ವರೆ ಮಾಡಿರಿ.

ಕಿರ್ಲೋಸ್ಕರ [illegible] ಯಂತ್ರಗಳು

[illegible] ಯಂತ್ರಗಳು [illegible].

ಈ ವರ್ಷ [illegible] ಬೆಲೆಯಲ್ಲಿ ಕಡಿಮೆ ಮಾಡಿರುವೆವು.

ಹೆಚ್ಚಿನ ಸಂಗತಿ ಬಗ್ಗೆ ಇಂದೇ ಕೇಳಿರಿ [illegible].

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ [illegible]

[illegible]

ಕನ್ನಡ ನಿಬಂಧ ರತ್ನಾವಲಿಯ ಹೊಸ ಆವೃತ್ತಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧೪ ಆಣೆ.

ಈ ಹೊಸ ಆವೃತ್ತಿಯಲ್ಲಿ [illegible] ಕನ್ನಡ [illegible] [illegible].

ಪುಸ್ತಕ ದೊರೆಯುವ ಸ್ಥಳ— ೧ ರಾ [illegible] ದಿವೇಕರ, [illegible] ಧಾರವಾಡ

೨ ರಾ. ರಾ. ಎ. ಆರ್. [illegible] [illegible]

[illegible]

ದಿ ಕರ್ನಾಟಕ ಸೆಂಟ್ರಲ್ ಬ್ಯಾಂಕ ಲಿಮಿಟೆಡ

[illegible] ಧಾರವಾಡ.

[illegible] ಬ್ಯಾಂಕಿನ ವ್ಯವಹಾರದಲ್ಲಿ [illegible].

[illegible] ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible].

[illegible]

ದಿ ಧಾರವಾಡ ಬ್ಯಾಂಕ ಲಿಮಿಟೆಡ ಧಾರವಾಡ.

ಈ ಬ್ಯಾಂಕಿನಲ್ಲಿ [illegible].

ಈ ಬ್ಯಾಂಕಿನಲ್ಲಿ [illegible].

[illegible]

ಮ್ಯಾನೇಜಿಂಗ ಡಾಯರೆಕ್ಟರ

[illegible]

ಪತ್ರಿಕೆ [illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]

[illegible] ಧಾರವಾಡ

ವಿಜಯ.

ಧಾರವಾಡ ತಾ-೫ ೧೦-೨೬ ನೇ ಇಸ್ವಿ

ಕಲಕತ್ತೆಯಲ್ಲಿ
ಹಿಂದೂ ಮುಸಲಮಾನ ಐಕ್ಯ ಸಭೆ.

ಕಲಕತ್ತೆಯಲ್ಲಿ ಕಳೆದ ಮೂರು ದಿವಸಗಳಲ್ಲಿ ಹಿಂದೂ ಮುಸಲಮಾನರ ಐಕ್ಯ ಸಭೆಯು ಕೂಡಿತ್ತು. ಇದಕ್ಕೆ ವರ್ತಮಾನಪತ್ರಗಳ ಪ್ರತಿನಿಧಿಗಳಿಗೆ ಹೋಗಲು ನಿರ್ಬಂಧವಿತ್ತು. ಕಮಿಟಿಯವರೇ ಸಭೆಯಲ್ಲಿ ನಡೆದ ವಿಷಯಗಳ ಟಿಪ್ಪಣಿಯನ್ನು ಪ್ರಸಿದ್ಧ ಮಾಡಿರುತ್ತಾರೆ.

ಕಾಂಗ್ರೆಸದ ಅಧ್ಯಕ್ಷರಾದ ಶ್ರೀ. ಶ್ರೀನಿವಾಸ ಅಯ್ಯಂಗಾರರು ಸಭೆಯನ್ನು ಕರೆದವರು. ಲಾಲಾ ಲಜಪತರಾಯ, ಪಂಡಿತ ಮಾಲವಿಯಾ, ಡಾಕ್ಟರ ಮುಂಜೆಯವರಿಗೂ ಆಮಂತ್ರಣವಿತ್ತು. ಮೇಲಾಗಿ ಈ ಸಭೆಯಲ್ಲಾಗುವ ಗೊತ್ತುವಳಿಗಳು ಇದರ ತರುವಾಯ ಕೂಡಲಿರುವ ಅಖಿಲ ಇಂಡಿಯಾ ಕಾಂಗ್ರೆಸ ಕಮಿಟಿಯಲ್ಲಿಯೂ ಬರತಕ್ಕವಿದ್ದವು. ಆದರೂ ಪಂಡಿತ ಮಾಲವಿಯಾಯವರು ತಮ್ಮಿಂದ ಈ ಕಮಿಟಿಗೆ ಬರಲಿಕ್ಕಾಗುವದಿಲ್ಲೆಂದು ಸ್ಪಷ್ಟವಾಗಿ ಹೇಳಿದರು. ಡಾಕ್ಟರ ಮುಂಜೆಯವರಂತೂ ಮುಂದೆ ಕೊಟ್ಟಂತೆ ತಮ್ಮ ವಿಚಾರದಿಂದ ಕೂಡಿರುವ ಪತ್ರ ಬರೆದಿದ್ದಾರೆ—

"ಮುಸಲಮಾನರು ಹಿಂದೂ ಜನರ ಕಲೆಯೊಡೆದು, ಅವರನ್ನು ಕೊಲ್ಲುತ್ತಿರುವಂಥ ಸಮಯದಲ್ಲಿ ನಿಮ್ಮ ಸಭೆಗೆ ಬರಲಿಕ್ಕಾಗುವದಿಲ್ಲೆಂದು ಬರೆಯಲು ವಿಷಾದಿಸುತ್ತೇನೆ. ಇಂಥ ಪ್ರಸಂಗದಲ್ಲಿ ಹಿಂದೂ ಮುಸಲಮಾನ ಐಕ್ಯದ ಭಾಷಣವು ವ್ಯರ್ಥವಾದದ್ದೇ ಸರಿ. ಈ ಜಗಳವು ಧಾರ್ಮಿಕ ಮತ್ತು ರಾಜಕೀಯ ದೃಷ್ಟಿಯಿಂದ ತೀರತಕ್ಕದ್ದು. ಇದನ್ನು ಹಿಂದೂ ಮಹಾಸಭೆ ಮತ್ತು ಮುಸಲಿಮ್ ಲೀಗ ಸಭೆಯವರು ವಿಚಾರ ಮಾಡತಕ್ಕದ್ದು. ಈ ಸಂಪ್ರತಿ ಕಾಲದಲ್ಲಿ ಕಾಂಗ್ರೆಸ ಸಭೆಯು ನಡುವೆ ಬಾಯಿ ಹಾಕತಕ್ಕದ್ದಲ್ಲ. ಕಾಂಗ್ರೆಸ ಸಭೆಯಲ್ಲಿ ವಾದಗ್ರಸ್ತವಾದಂಥ ವಿಷಯಗಳನ್ನು ತರುವದು ಅಕೃಪೋತ್ಪಾದಕವಾಗುವದು"

ಡಾಕ್ಟರ ಮುಂಜೆ ಪಂಡಿತ ಮಾಲವಿಯಾ ಮೊದಲಾದವರು ಸಭೆಗೆ ಬರದಿದ್ದರೂ, ಸಭೆಯ ಕೆಲಸವು ನಡೆಯಿತು. ಇದಕ್ಕೆ ಬಂದಂಥ ಹಿಂದೂ ಮುಸಲಮಾನರ ಹೆಸರುಗಳು.

ಹಿಂದೂ— ೧ ಶ್ರೀಯುತರಾದ ಶ್ರೀನಿವಾಸ ಅಯ್ಯಂಗಾರ, ೨ ರಂಗಸ್ವಾಮಿ ಅಯ್ಯಂಗಾರ, ೩ ಕುಮಾರ ಗಂಗಾನಂದಸಿಂಗ, ೪ ಆಚಾರ್ಯ ಪ್ರಫುಲ್ಲಚಂದ್ರರಾಯ, ೫ ಸೇನಗುಪ್ತ, ೬ ಸುಭಾಷಚಂದ್ರ ಬೋಸ, ೭ ಚಂದ್ರಾ, ೮ ಗೋಸ್ವಾಮಿ, ೯ ನಿಯೋಗಿ, ೧೦ ಡಾಕ್ಟರ ರಾಯ, ೧೧ ಚಕ್ರವರ್ತಿ, ೧೨ ಸತ್ಯೇಂದ್ರಚಂದ್ರಮಿತ್ರ, ೧೩ ಬಾಬು ಭಗವಾನದಾಸ, ೧೪ ಪ್ರಕಾಶಮ, ೧೫ ನೀಲಕಂಠದಾಸ, ೧೬ ಶಂಕರಲಾಲ, ೧೭ ಗಿಂಧವಾಲಾ, ೧೮ ಉಪೇಂದ್ರನಾಥ ಬ್ಯಾನರ್ಜಿ, ೧೯ ಸತ್ಯರಂಜನ ಬಕ್ಷಿ, ೨೦ ಡಾಕ್ಟರ ದಾಸಗುಪ್ತ. ಮುಸಲಮಾನರು— ೧ ಡಾಕ್ಟರ ಅನಸಾರಿ, ೨ ಮೌಲಾನಾ ಮಹಮದಲಿ ಮತ್ತು ಶೌಕತಲಿ ೪ ಮೌಲ್ವಿ ಮಹಮುದ ರಫಿ ದಾವುದ ೫ ಸಯ್ಯದ ಅಬ್ದುಲ್ಲಾ ೬ ಮುಜೀಬುರ ರಹಿಮಾನ ೭ ಅಕ್ರಾಮಖಾನ ೮ ಸುಹರಾವರ್ದಿ, ೯ ಮೌ. ಅಬ್ದುಲ ಕಲಾಮ ಆಜಾದ

ಈ ಸಭೆಗೆ ಮಿ. ಅಂಡ್ರ್ಯೂಜಸಾಹೇಬರು ದಯಮಾಡಿಸಿದ್ದರು. ಅಧ್ಯಕ್ಷರಾದ ಶ್ರೀ. ಶ್ರೀನಿವಾಸ ಅಯ್ಯಂಗಾರರು ವಿಸ್ತಾರವಿಲ್ಲದ ಚಿಕ್ಕ ಪೂರ್ವಕಥನವನ್ನು ಮಾಡಿ, ನೋಡಲು ಹಾಗೆ ವಾದವಿವಾದ ಮಾಡಬೇಕೆಂದು ಸೂಚಿಸಿದರು. ಮೌಲಾನಾ ಮಹಮದಲಿ, ಶ್ರೀ ಪ್ರಕಾಶಮ ಮತ್ತು ಬಾಬು ಭಗವಾನದಾಸರು ವರ್ತಮಾನ ಪರಿಸ್ಥಿತಿಯನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಹೇಳಿದರು. ತರುವಾಯ ಶ್ರೀ. ಸೇನಗುಪ್ತರು ಕಲಹದ ಪ್ರಶ್ನೆಗಳನ್ನು ಸಭೆಯ ಮುಂದಿಟ್ಟರು.

೧ ಧರ್ಮಾಂತರ- ಪ್ರತಿ ಧರ್ಮಾಂತರ.
೨ ಗೋಹತ್ಯೆ
೩ ಮಸೀದೆಗಳ ಮುಂದೆ ವಾದ್ಯ

ಆ ಬಂ ಯರ್ ಕಾ ಯ ದ ವ ರು ಈ ಸ ಭೆ ಗೆ ಅಂ ಜಿ ಬ ತ್ತ ಬಂ ದಿ ದ್ದ ರು. ಏಕಂದರೆ- ಹಿಂದೆಯಾದ ಸಭೆಗಳ ಅವಸ್ಥೆಯು ಹೆಸಿಕೆಯಲ್ಲಿ ಹುಳಿ ಕೊಳೆತಂತಾಗಿತ್ತು. ಅದರಂತೆ ಈ ಸಭೆಯ ಅವಸ್ಥೆಯೂ ಆಗುವದೆಂದೂ ಸಂಶಯಗೊಂಡಿದ್ದರು. ಆದರೂ ಹಿಂದೂ ಮುಸಲಮಾನರೀರ್ವರೂ ಸಹಕಾರದಿಂದ ಐಕ್ಯವಾಗುವಂಥ ವಿಚಾರವನ್ನೇ ಪ್ರಕಟ ಮಾಡಿದ್ದನ್ನು ಕಂಡು ಸಮಾಧಾನಪಟ್ಟರು. ಡಾಕ್ಟರ ಅನಸಾರಿಯವರೂ ಜಗಳದ ಕಾರಣಗಳನ್ನು ವಿವರಿಸಿದರು. ಬಳಿಕ ಶ್ರೀ. ರಂಗಸ್ವಾಮಿ ಅಯ್ಯಂಗಾರರು ಕೆಳಗಿನ ಠರಾವನ್ನು ತಂದರು.

"ಪ್ರತಿಯೊಂದು ಜಾತಿಯವರು ಅನ್ಯ ಜಾತಿಯವರನ್ನು ಉಪದೇಶ, ಮನವೊಲಿಸುವಿಕೆ ಮತ್ತು ಧರ್ಮ ಚರ್ಚೆಯಿಂದ ತಮ್ಮ ಧರ್ಮದಲ್ಲಿ ತೆಗೆದುಕೊಳ್ಳುವದಕ್ಕೆ ಸ್ವತಂತ್ರರಿರುತ್ತಾರೆ. ಈ ಪ್ರಕಾರ ಧರ್ಮಾಂತರ ಮಾಡುವಾಗ ಮೋಸ, ಬಲಾತ್ಕಾರ ಅಥವಾ ಹೆಣ್ಣು, ಹೊನ್ನು, ಮಣ್ಣು ಮುಂತಾದ್ದರ ಆಶೆ ತೋರಿಸಬಾರದು. ಧರ್ಮಾಂತರವಾಗತಕ್ಕವರು ಪ್ರಬುದ್ಧರಾಗಿ ೧೮ ವರ್ಷ ವಯಸ್ಸಾದವರಿರಬೇಕು. ಒಂದು ಕುಟುಂಬವೇ ಧರ್ಮಾಂತರ ಮಾಡುವಾಗ, ಹುಡುಗರು ಅಪ್ರಬುದ್ಧರು ಇದ್ದರೆ ಅಡ್ಡಿಯಿಲ್ಲ. ಧರ್ಮಾಂತರದ ವಿಷಯವು ಎಷ್ಟು ಮಾತ್ರಕ್ಕೂ ಗುಪ್ತವಿಡಕೂಡದು. ಮತ್ತು ಮತಾಂತರ ಮಾಡುವಾಗ ಆನಂದೋತ್ಸವ ಅಥವಾ ಮೆರವಣಿಗೆಯು ಆಟ ಹೂಡಬಾರದು. ಧರ್ಮಾಂತರದ ಬಗ್ಗೆ ವಾದವೇಳುವಂಥ ಪ್ರಸಂಗದಲ್ಲಿ ಅಲ್ಲಲ್ಲಿಯ ಹಿಂದೂ ಮುಸಲಮಾನ ಕಮಿಟಿಯವರು ನಿರ್ಣಯ ಅಥವಾ ಈ ಬಗ್ಗೆ ಮಾಡುವ ನಿಯಮಗಳ ಪ್ರಕಾರ ನಡೆಯಬೇಕು."

ಈ ಠರಾವು ಎರಡೂ ಜನಾಂಗಗಳಿಗೆ ಒಪ್ಪಿಗೆಯಾಯಿತು. ಬಳಿಕ ಗೋವಧದ ಪ್ರಶ್ನೆ ನಡೆಯಿತು. ಅದನ್ನು ಮುಂದಿನ ಸಂಚಿಕೆಯಲ್ಲಿ ಬರೆಯುವೆವು.

ಜಾತರದವರ ಕಸಬು ನಿಲ್ಲಿಸುವ ಕಾಯದೆ.

— ೦ —

ದೇವದಾಸಿಯರ ಪದ್ಧತಿಯನ್ನು ನಿಷೇಧಿಸಬೇಕೆಂದು ಮದ್ರಾಸ ಇಲಾಖೆಯ ತುಂಬ ಚಳವಳಿ ನಡೆದದ್ದನ್ನು ಈ ಮೊದಲು ಬರೆದಿದ್ದೇವೆ. ಶ್ರೀ. ಸೌ|| ಮುತ್ತುಲಕ್ಷ್ಮಮ್ಮ ನಾಯುಡು ಇವರು ಈ ಚಳವಳಿಯ ಮುಂದಾಳುವಾಗಿದ್ದಾರೆ. ಇವರೇ ಕೌನ್ಸಿಲದಲ್ಲಿ ಒಂದು ಬಿಲ್ಲನ್ನು ತಂದಿದ್ದಾರೆ. ಇದರಂತೆ ದೇವಾಲಯಗಳಲ್ಲಿ ದೇವದಾಸಿಯರಾಗತಕ್ಕಂಥವರ ವತನದ ಮೇಲೆ ಸರಕಾರದ ಹಕ್ಕು ಪೂರ್ಣ ಅಧಿಕಾರ ಕಸಿದು, ಇವರ ಕೀವ ತಪ್ಪಿಸುವರು. ಯಾವಳೊಬ್ಬಳು ಪ್ರಬುದ್ಧಳಾದ ಹೊರತು ದೇವದಾಸಿಯು ಮಾಡ ಜೀವಿಸಲಾರಳು. ಇದು ಈ ಕಾಯದೆಯಿಂದ ಪೂರಾ ನಿಂತು ಹೋಗುವದು. ಅಂದರೆ ಮನೆತನಸ್ಥ ಜಾತರದವರೆಂಬುದೇ ಮಾಯವಾಗಿ ಹೋಗುವದು.

ಜಪಾನದಲ್ಲಾದ ಚುನಾವಣೆಯಲ್ಲಿ ಗಂಡನ ವತಿಯಿಂದ ಹೆಂಡತಿಯು ಮುಖತ್ಯಾರ ಪತ್ರ ಕೊಟ್ಟಿದ್ದಳು. ಆದರೆ ಆಕೆಗೆ ಮತ ಹಾಕಗೊಡಲಿಲ್ಲ. ಇವಳು ಸ್ತ್ರೀಯರಿಗೂ ಹಕ್ಕಿರಬೇಕೆಂಬ ಅರ್ಜಿಯನ್ನು ಬಾಧಕರು ಕೋರ್ಟಿನಲ್ಲಿ ಹೋಗುತ್ತಿರುವಾಗ ಚಲ್ಲಿದಳು. ಇದರಿಂದ ಅಪರಾಧವೆಂದು ಆಕೆಯನ್ನು ಹಿಡಿದಿದ್ದಾರೆ.

ವಿಲಾಯತಿಯಿಂದ ಬಂದ ಆನಿಬಿಝಂಟನ್ನು ತವರ ವಿಚಾರಗಳು.

—o—

ಸ್ವರಾಜ್ಯ ಸಮೀಪಿಸಾಯುವರು.

ಆನಿಬಿಝುಂಟರು ಕೃಷ್ಣಮೂರ್ತಿಯವರೊಂದಿಗೆ ಹೋದ ಗುರುವಾರದ ದಿವಸ ಮುಂಬಯಿಗೆ ಬಂದರು. ಇವರು ವಿಲಾಯತಿ ಮತ್ತು ಹಿಂದುಸ್ಥಾನದ ರಾಜಕಾರಣಗಳನ್ನು ಕುರಿತು ಕೆಳಗೆ ಕೊಟ್ಟಂತೆ ಅಭಿಪ್ರಾಯಪಟ್ಟಿರುತ್ತಾರೆ.

ಮಂತ್ರಿಗಳ ಬದಲಾವಣೆಯು—

ರಾಷ್ಟ್ರ[illegible]ರಾದ ಕಾನ್ಸರವೇಟಿವ್ ಪಕ್ಷದ ದಿವಸಗಳು ಬಂದವೆ. ಬರುವ ಚುನಾವಣೆಯಲ್ಲಿ [illegible] ಪಕ್ಷ [illegible]ಗುವದು. ಕಾಲಿಕರಲ್ಲಿ ಇವರು ಅತಿಶಯ ಅಪ್ರಿಯರಾಗಿದ್ದಾರೆ. ಕಾಲಿಕರ ಪಕ್ಷದವರು ಈ ವರೆಗೆ ಹಿಂದೆ [illegible]ವಂಥ ಬಿಲ್ಲನ್ನು ಪಾರ್ಲಮೆಂಟಿನಲ್ಲಿ ತಂದಿಟ್ಟಿದ್ದಾರೆ. ಆದ್ದರಿಂದ ಇವರಿಗೆ ಹೆಚ್ಚು ಓಟುಗಳು ಬಿದ್ದು, ಇವರೇ ಪ್ರಧಾನಿಗಳಾಗುವರು. ಬಂದರೆ [illegible] ಬರ್ಕನಹೆಡ್ಡ ಸಾಹೇಬರು [illegible] ವ್ಯಕ್ತಿಯಾಗಿದ್ದಾರೆ. ಈ ಸಾಹೇಬರು ತಮ್ಮ [illegible] ಸ್ಥಾನವನ್ನು ದಾಕ್ಷಿಣ್ಯದಿಂದ ಮುಕ್ತ ಮಾಡಿ [illegible] ಹೋಗುತ್ತಾರೆ. ಹಾಗಾದರೆ ಅದೊಂದು ಕೌತುಕವೇ [illegible]. ಪಾರ್ಲಮೆಂಟಿನ್ನ ಕಾಲಿಕರರು ಅಧಿಕಾರಾರೂಢ[illegible] ಮಾಡಿದ [illegible] ಮಾವನೆಬ್ಬ ಕಾಲಿಕರ [illegible] ಬಂಧಿಸಿದ ನನ್ನ ಸ್ವರಾಜ್ಯ ಬಿಲ್ಲನ್ನು ಪಾರ್ಲಮೆಂಟದಲ್ಲಿ [illegible].

ಬಾನೆಲ[illegible] ಕಮೀಶನ.

ಈ ಕಮೀಶನ ಬಗ್ಗೆ ಖಾತ್ರಿಯಾಗಿ ನನಗೇನೂ ತಿಳಿಯದಿಲ್ಲ. ಆದರೆ ಅದು ಈ ವರ್ಷ ಹಿಂದುಸ್ಥಾನಕ್ಕೆ ಬರತಕ್ಕದೆಂಬುದು ಹೆಚ್ಚು ನಿಜ. ಇದರ ವಿಷಯವಾಗಿ ಅನೇಕ ವಿಚಾರಗಳು ಆಕಾಶದಲ್ಲಿ ಭ್ರಮಣ ಮಾಡುತ್ತಿರುವವು. ಹಿಂದೂ ಜನರನ್ನು ಕಮೀಶನದಲ್ಲಿ ಸೇರಿಸಿಕೊಳ್ಳಬಾರದೆಂದು ನನ್ನ ವಿಚಾರವು ನನಗೆ ಸಮ್ಮತವಿಲ್ಲ. ಈ ಪ್ರಕಾರದ ವಿಚಾರವಾದರೆ ಹಿಂದುಸ್ಥಾನವು ಇದನ್ನು ಖಂಡಿತವಾಗಿ ವಿರೋಧಿಸಬಹುದು. ಹಿಂದುಸ್ಥಾನಕ್ಕೆ ನ್ಯಾಯಕೊಡಬೇಕೆಂಬುದೇ ನಿಜವಾದ ಸಂಕಟವಾಗಿರುತ್ತದೆ. ಇಂಗ್ಲಿಷರು ಅಮೇರಿಕೆಯ ವಿಷಯವಾಗಿ ಇದೇ [illegible] ದದ ಅನಾದರತನವನ್ನು ತೋರಿಸಿ, ಅಮೇರಿಕೆಯನ್ನು ಕಳಕೊಂಡರು.

ಹಿಂದೂ ಮುಸಲ್ಮಾನ ಕಲಹ—

ಈ ಕಲಹ ಮತ್ತು ದಂಗೆಗಳು ಪಟ್ಟಣಗಳಲ್ಲಿ ಮಾತ್ರ ಆಗುತ್ತವೆ. ಹಳ್ಳಿಗಳಲ್ಲಾಗುವದಿಲ್ಲ. ಎ[illegible] ಕಾಲವಿವಿ[illegible] ಶಾಂತವಾಗಿಯೂ ಸ್ನೇಹಭಾವದಿಂದಾಗಿಯೂ ಇರುವರು. ಇದು ಮಾತ್ರವಲ್ಲದೆ, ದೇಶೀಯ ಸಂಸ್ಥಾನಗಳಲ್ಲಿಯೂ ಆಗುವದಿಲ್ಲ. ಮಸೀದೆಗಳ ಮುಂದೆ ವಾದ್ಯ ಬಾರಿಸಬಾರದೆಂಬ ಜಗಳವು ಮೂರ್ಖತನದ್ದಾಗಿರುತ್ತದೆ. ಮಸೀದೆಗಳ ಮುಂದೆ ವಾದ್ಯ ಬಾರಿಸತಕ್ಕದ್ದೆಂದು ಹಿಂದೂ ಜನರು ಆಗ್ರಹವೇಕೆ ತೊಡಬೇಕು? ಮುಸಲ್ಮಾನರು ಅದನ್ನೇಕೆ ದುರ್ಲಕ್ಷಿಸಬಾರದು?

ಸ್ವರಾಜ್ಯ.

ವಿಲಾಯತಿಯಲ್ಲಿ ವಿಮಾನಗಳಲ್ಲಿ ಪ್ರವಾಸ ಮಾಡಿ, ಅನೇಕ ವ್ಯಾಖ್ಯಾನಗಳನ್ನು ಕೊಟ್ಟೆನು. ಆದರೆ ಹಿಂದುಸ್ಥಾನದ ವಿಷಯವಾಗಿ ವಿಶೇಷವೇನೂ ಹೇಳಲಿಲ್ಲ. ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆಯಬೇಕಾದರೆ ಅವಶ್ಯ ನಿಜವಾದ ಯೋಗ್ಯತೆ ಬರಲೇಬೇಕೆಂದೂ, ಆ ಪರ್ಯಂತರ ಜರ್ಮನಿ ಮತ್ತು ಅಮೇರಿಕೆಯ [illegible]ಸಂಬಂಧ [illegible]ಗಳನ್ನು ವ್ಯಾಖ್ಯಾನಗಳಲ್ಲಿ ಹೇಳುತ್ತೇನೆ. ಅಮೇರಿಕೆಗೆ ಹೋದಾಗ ಹಿಂದುಸ್ಥಾನದ ಬಗ್ಗೆ ಇಲ್ಲಿಯ ಜನರ ಸಹಾನುಭೂತಿಯನ್ನು ದೊರಕಿಸುತ್ತೇನೆ.

ಕಾಂಗ್ರೆಸ—

ನಾನು ಕಾಂಗ್ರೆಸದ ಜೊತೆಗೆ ನಿಲ್ಲಬೇಕೆಂದಿದ್ದೇನೆ. 'ಅವರೊಂದಿಗೆ ಸೇರಿ ಕೆಲಸ ಮಾಡಬೇಕೆಂ'ದಿದ್ದೇನೆ. ಕಾಂಗ್ರೆಸವು ಹಿಂದುಸ್ಥಾನದ ಪ್ರಮುಖ ಸಭೆಯು ಎಲ್ಲರೂ ತಮ್ಮ ಜಗಳದ ಕಂದ್ಕಗಳ ಹುಗಿದು, ಹಿಂದಿನದನ್ನು ಮರೆತು, ಕಾಂಗ್ರೆಸದಲ್ಲಿ; ಕಾಂಗ್ರೆಸ ಸಭೆಯು ಸ್ವರಾಜ್ಯ ವಿಷಯವಾಗಿ ದೇಶದಿಂದು ಕಾಮನವೆಲ್ತ ಬಿಲ್ಲನ್ನು [illegible] ದಿಸುವರೆ ನಾನು ನನ್ನ ಕಾಮನವೆಲ್ತ ಬಿಲ್ಲನ್ನು ಹಿಂದಕ್ಕೆ ತಕ್ಕೊಳ್ಳುವೆನು. ಸಾಯುವ ದಿವಸಗಳು ಸನಿಯವಾಗಿವೆ. ತೀವ್ರದಲ್ಲಿ ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆತು, ಅದು ಸ್ವತಂತ್ರವಾದದ್ದನ್ನು ಕಂಡು ಸಂತೋಷದಿಂದ ಜೀವ ಬಿಡುವೆನು.

ಬಿಕಾನೇರ ಮತ್ತು ಭಾವನಗರದ ಸಂಸ್ಥಾನಿಕರು ನಕಲಿ ನವಿಗೆ ಪ್ರಚಂಡ ಕಾಲುವೆ ತೋಡಿಸಿ, ರಾಜಪುತಾನದ ಉಸುಕಿನಲ್ಲಿ ನೀರು ಹರಿಸಿ ಅದನ್ನು ನಂದನವನ ಮಾಡುವರು. ಈ ಕಾಲುವೆಗಳನ್ನು ತೆರೆಯುವ ಸಮಾರಂಭಗಳು ನಾಮದಾರ ಲಾರ್ಡ ಆಯರ್ವಿನಸಾಹೇಬರಿಂದ ನೆರವೇರಿಸಲ್ಪಟ್ಟವು. ಬಿಕಾನೇರದವರು ತಮ್ಮ ಕಾಲುವೆಗೆ ಗಂಗಾಸಾಗರವೆಂತಲೂ ಮುಸಲಮಾನರು ಇಸ್ಲಾಮ ಕಾಲುವೆಯೆಂದು ತಂತಮ್ಮ ಧರ್ಮ ತಿಳುವಳಿಕೆಯ ಪ್ರಕಾರ ಹೆಸರಿಟ್ಟಿದ್ದಾರೆ.

ಪಂಡಿತ ಮೋತೀಲಾಲರು ರಶಿಯಾ ಸರಕಾರದ ಆಮಂತ್ರಣ ಸ್ವೀಕರಿಸಿದ್ದಾರೆ. ಇಂಗ್ಲಂಡ ಸರಕಾರದವರು ಪಾಸಪೋರ್ಟ ಕೊಡಬೇಕಲ್ಲವೆ?

ಮುನಸಿಪಲ್ಟಿ ನೌಕರರು ಮತ್ತು ವರ್ಗ ಚ.ದಿದರೂ ನಾಲ್ಕೇ ರೂಪಾಯಿ ಪೆನಶನ.

—o—

ಸರಕಾರದವರು ತಮ್ಮ ಸೇವೆ ಮಾಡಿದವರಿಗೆ ಪೆನಶನ ಕೊಡುವರು. ಆದರೆ ಇದರಲ್ಲಿ ತಾರತಮ್ಯ ಭಾವವುಂಟು. ಸಿವ್ಹಿಲಸರ್ವಂಟರಿಗೆ, ಡೆಪ್ಯೂಟಿ ಕಲೆಕ್ಟರ ಮಾಮಲೇದಾರರಿಗೆ ಬೇರೆ; ಕಾರಕೂನರಿಗೆ ಬೇರೆ; ಮತ್ತು ಸಿಪಾಯಿ ಕಸಗುಡಿಸುವಂಥವರಿಗೆ ಬೇರೆ; ಈ ಪ್ರಕಾರ ತಮ-ತರ ಭಾವವುಂಟು. ಸಿಪಾಯಿ ಮತ್ತು ಝಾಡಮಾಲಿಗಳಿಗೆ ಪೆನಶನದ ವೇಳೆಯಲ್ಲಿ ಪಗಾರದ ಅರ್ಧವನ್ನು ಪೆನಶನ ಕೊಡುವದಿಲ್ಲ. ನಾಲ್ಕೇ ರೂಪಾಯಿ ಕೊಡುವರು [illegible] ರೂಪಾಯಿ ಸಂಬಳವಿದ್ದರೂ ನಾಲ್ಕೇ ರೂಪಾಯಿ; ಹತ್ತು ರೂಪಾಯಿ ಇದ್ದರೂ ಅಷ್ಟೇ; ಒಳ್ಳೊಳ್ಳೆಯ [illegible]ಗಾರರಿಗೆ ಒಂದೇ ಬೆಲೆ ಸರಕಾರದ ಈ ಪ್ರಕಾರದ ವರ್ತನವು ಅನ್ಯಾಯವಾಗಿದ್ದು, ಬೇರೆ ಕಾರಕೂನರಂತೆ ತಮಗೂ ಅರ್ಧ ಪೆನಶನ ದೊರೆಯಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುವದಕ್ಕಾಗಿ ಮುಂಬಯಿಯಲ್ಲಿರುವ ಸಾವಿರಾರು ಜನ ಸಿಪಾಯಿ ಝಾಡಮಾಲಿಗಳು ಸಭೆ ಮಾಡಿದ್ದರು. ಇದೇ ಪ್ರಕಾರ ಬೇರೆ ಊರುಗಳ ಈ ಕನಿಷ್ಠ ದರ್ಜೆಯ ಜನರು ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು.

ಸರಕಾರದ ದಪ್ತರದಲ್ಲಿ ಇವರಿಗೆ ವಿಚಿನ್ನಾಳು ಸರ್ವಂಟ್ಸ ವೆಂಬ ಹೆಸರುಂಟು. ಕೀರ್ತಿಯಿಂದ [illegible] ಗರೆನ್ನುವದು ತಮಗೆ ಅಪಮಾನ ಕರವಾಗುವದರಿಂದ ಸರಕಾರದವರು ಈ ಶಬ್ದವನ್ನು ತೆಗೆದು, ಗೌರವ ಬರುವಂಥ ಶಬ್ದವನ್ನು ಯೋಜಿಸಬೇಕೆಂದೂ ಈ ಸಭೆಯಲ್ಲಿ ಠರಾವ ಪಾಸಾಗಿರುತ್ತದೆ.

ಧಾರವಾಡ—

ಇಲ್ಲಿಯ ಮ್ಯುನಿಸಿಪಾಲಿಟಿಯ ಜನನ ರಜಿಸ್ಟರದ ಪ್ರಕರಣದಲ್ಲಿ ಒಬ್ಬ ಆರೋಪಿಯಾದ ವಿ. [illegible] ವನಗೌಡಾ ಇವರನ್ನು ಜಾಮೀನದ ಮೇಲೆ ಬಿಡಬೇಕೆಂದು ಮೊನ್ನಿನ ದಿವಸ ಮೆ. ಜಡ್ಜಸಾಹೇಬರು ಹುಕುಮು ಮಾಡಿದ್ದಾರೆ.

ದಿನಾಲು ರಾತ್ರಿ [illegible] ಗಂಟೆಗೆ ಇಲ್ಲಿಯ ರೇಲ್ವೆ ಸ್ಟೇಶನದಲ್ಲಿ ಓಡುವ ಬಂಡಿಗಳಲ್ಲಿ ಒಂದನ್ನು ಪ್ಲಾಟಫಾರ್ಮ ಬಿಡಿಸಿ, ಎರಡನೆಯ ಹಳಿಯ ಮೇಲೆ ನಿಲ್ಲಿಸುತ್ತಾರೆ. ಇದರಿಂದ ಪ್ರವಾಸಿಕರಿಗೆ ವಿಶೇಷವಾಗಿ ಮುದುಕರು, ಹುಡುಗರು ಮತ್ತು ಹೆಂಗಸರಿಗೆ ಬಹಳ ತ್ರಾಸ ಮತ್ತು ಅಪಾಯಕಾರಕವಾಗುತ್ತದೆ. ಎರಡೂ ಬಂಡಿಗಳು ಪ್ಲ್ಯಾಟಫಾರ್ಮಿಗೆ ಹತ್ತಿ ನಿಲ್ಲುವಂತೆ ವ್ಯವಸ್ಥೆ ಮಾಡಬೇಕೆಂದು ರೇಲ್ವೆಯವರ ಲಕ್ಷ್ಯ ಸೆಳೆಯುತ್ತೇವೆ.